ರಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿಗೆ ಆರು ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ ಮೂರು ಕಾಸು

ಸಂಪುಟ : ೧೪] SADHVI : SUNDAY 1-1-1956 ಮೈಸೂರು ಭಾನುವಾರ : ೧-೧-೧೯೫೬ [ಸಂಚಿಕೆ ೧-೩೩೩

ಮಂಡ್ಯದಲ್ಲಿ ಮೈಸೂರು ವಿಲೀನ ವಿರುದ್ಧ ಸಮ್ಮೇಳನಾರಂಭ

ಮೈಸೂರು ವಿಲೀನ ವಿರೋಧ ಸಮ್ಮೇಳನ

ಸಂಸ್ಥಾನದ ವಿವಿಧ ಭಾಗಗಳಿಂದ ೨,೦೦೦ ಪ್ರತಿನಿಧಿಗಳ ಆಗಮನ

ತೆರೆದ ಕಾರಿನಲ್ಲಿ ಅಧ್ಯಕ್ಷರ ಮೆರವಣಿಗೆ

(ಸ್ವಂ ಟ ಫೋ) ಮಂಡ್ಯ ೧

ಮೈಸೂರು ವಿಲೀನ ವಿರೋಧ ಸಮ್ಮೇಳನವು ಈ ದಿನ ಇಲ್ಲಿ ಆರಂಭವಾಯಿತು. ಸಂಸ್ಥಾನದ ನಾನಾ ಭಾಗಗಳಿಂದ ೨,೦೦೦ ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿರುವರು.

ಬೆಳಿಗ್ಗೆ ೮-೪೫ ಘಂಟೆಗೆ ಮಾಜಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಧ್ವಜಾರೋಹಣ ಮಾಡಿ, ಧ್ವಜದ ಹಿರಿಮೆಯನ್ನು ವಿವರಿಸಿದರು ಮತ್ತು ಎಲ್ಲ ರಾಷ್ಟ್ರದ ಪ್ರಜೆಗಳಿಗೂ ಸಮಾನವಾದ ಗೌರವವನ್ನು ನೀಡಬೇಕೆಂದು ಸೂಚಿಸಿದರು. ಮೈಸೂರಿನ ವೈಶಿಷ್ಟ್ಯವನ್ನು ಅವರು ತಿಳಿಸಿ ಆಡಳಿತದ ಹಿತ ದೃಷ್ಟಿಯಿಂದ ಮೈಸೂರು ಕರ್ನಾಟಕದಲ್ಲಿ ಐಕ್ಯವಾಗುವುದು ಸರಿಯಲ್ಲವೆಂದು ಸೂಚಿಸಿದರು.

ನಂತರ ೧೧-೩೦ ಘಂಟೆಗೆ ನಗರದ ಬೀದಿಗಳಲ್ಲಿ ಸಮ್ಮೇಳನದ ಅಧ್ಯಕ್ಷ ಶ್ರೀ ಲಕ್ಷ್ಮಣನವರನ್ನು ತೆರೆದ ಕಾರಿನಲ್ಲಿ ಮೆರವಣಿಗೆ ಮಾಡಲಾಯಿತು. ಮಾರ್ಗ ಮಧ್ಯದಲ್ಲಿ ಅನೇಕ ಕಡೆ ಹಾರತುರಾಯಿಗಳನ್ನು ಅರ್ಪಿಸಲಾಯಿತು. ಶ್ರೀಗಳಾದ ಹೆಚ್. ಕೆ. ವೀರಣ್ಣಗೌಡ, ಕೆ. ವಿ. ಶಂಕರೇಗೌಡ ಮುಂತಾದವರು ಮೆರವಣಿಗೆಯ ಮುಂದೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು.

೧೨ ಘಂಟೆಗೆ ಸಂಜಯಾಗಿ ಸಮ್ಮೇಳನದ ಚಪ್ಪರದ ಬಳಿ ಅಧ್ಯಕ್ಷರು ಬಂದಾಗ ಶ್ರೀ ಕೆ. ವಿ. ಶಂಕರೇಗೌಡ ಮುಂತಾದ ನಾಯಕರು ಅವರನ್ನು ಸ್ವಾಗತಿಸಿದರು.

ಸಮ್ಮುಖ ಸೇವಾ ಸಂಗೀತ ಶಾಲೆಯವರಿಂದ ಪ್ರಾರ್ಥನೆಯೊಡನೆ ಸಮ್ಮೇಳನವು ಆರಂಭವಾಯಿತು. ವೇದಿಕೆಯ ಮೇಲೆ ಶ್ರೀಗಳಾದ ಹೆಚ್. ಕೆ. ವೀರಣ್ಣಗೌಡ, ತುಳಸೀದಾಸಪ್ಪ, ಕೆ. ವಿ. ಶಂಕರೇಗೌಡ ಮುಂತಾದ ನಾಯಕರುಗಳು ಕುಳಿತಿದ್ದರು. ನಂತರ ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಕೆ. ವಿ. ಶಂಕರೇಗೌಡರು ಭಾಷಣ ಮಾಡಿ ಮೈಸೂರಿನ ಇತಿಹಾಸದಲ್ಲಿ ಹೊಟ್ಟಮೊದಲನೆ ಬಾರಿಗೆ ಇಂತಹ ಸಮ್ಮೇಳನವು ನಡೆಯುತ್ತಿರುವುದಾಗಿಯೂ, ಇದಕ್ಕೆ ಅನೇಕ ರೀತಿಯ ತೊಂದರೆಗಳನ್ನು ವಿರೋಧಿಗಳು ತಂದೊಡ್ಡಿರುವರೆಂದೂ ತಿಳಿಸಿದರು. ಸಮ್ಮೇಳನದ ಧ್ಯೇಯಗಳನ್ನು ಅವರು ವಿವರಿಸಿ, ಮುಖ್ಯಮಂತ್ರಿಗಳ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಪಕ್ಷಪಾತದಿಂದಾಗಿ ಜನತೆ ತನ್ನ ನಿಜವಾದ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿಲ್ಲವೆಂದು ತಿಳಿಸಿದರು.

ನಗರದಲ್ಲೆಲ್ಲಾ "ಮೈಸೂರನ್ನುಳಿಸಿ" ಎಂಬ ಭಿತ್ತಿಪತ್ರಗಳನ್ನು ಹಚ್ಚಲಾಗಿದೆ. ಬೆಳಗಿನಿಂದ ಸುತ್ತಮುತ್ತಲ ಪ್ರದೇಶಗಳಿಂದ ತಂಡತಂಡವಾಗಿ ರೈತರು ಬರುತ್ತಿರುವರು.

ಪೌರಸಭೆಯ ವಿವಿಧ ಸಮಿತಿಗಳಿಗೆ ಚುನಾವಣೆ

ಮೈಸೂರು ೧

ನಗರದ ಪೌರಸಭಾಧಿವೇಶನದಲ್ಲಿ ಬರುವ ಆರ್ಥಿಕ ವರ್ಷಕ್ಕೆ ವಿವಿಧ ಸಮಿತಿಗಳಿಗೆ ಮೊನ್ನೆ ನಡೆದ ಚುನಾವಣೆಗಳಲ್ಲಿ ಕೆಳಗೆ ಕಂಡವರು ಅವಿರೋಧವಾಗಿ ಆರಿಸಲ್ಪಟ್ಟರು:-

ಆಡಳಿತ ಸಮಿತಿ: ಶ್ರೀಗಳಾದ ಕೆ. ಸಿದ್ದಯ್ಯ, ಎಸ್. ಲಿಂಗಣ್ಣ, ಎಸ್. ವೆಂಕಟರಾಮಯ್ಯ, ಎಂ. ಕೆ. ಲಿಂಗಯ್ಯ, ಸಿ. ಎನ್. ನಾರಾಯಣರಾವ್, ಬಿ. ಕೆ. ಪುಟ್ಟಯ್ಯ, ಎಂ. ಎನ್. ತಿಮ್ಮಯ್ಯ ಮತ್ತು ಆರ್. ಸೀತಾರಾಮ್.

ಕಾಮಗಾರಿ ಸಮಿತಿ: ಶ್ರೀಗಳಾದ ಹೆಚ್. ಎನ್. ಮುದ್ದಯ್ಯ, ಜಿ. ಎಸ್. ರಾಮಕೃಷ್ಣಯ್ಯ, ಸಂಜೀವಯ್ಯ ಮತ್ತು ಡಿ. ಲಿಂಗಯ್ಯ.

ಆರೋಗ್ಯ ಸಮಿತಿ: ಶ್ರೀಗಳಾದ ಬಿ. ಜಿ. ದಾಸ್, ಕುಟ್ಟಿಸ್ವಾಮಿ, ನಾಗಯ್ಯ ಮತ್ತು ಟಿ. ನರಸಿಂಹಯ್ಯಂಗಾರ್.

ಟೌನ್ ಹಾಲ್ ಸಮಿತಿ: ಶ್ರೀಗಳಾದ ಜೋಗಿ ಸಿದ್ದಯ್ಯ, ಕರಿಯಣ್ಣ, ಬಿ. ಎಲ್. ರಾಮಸ್ವಾಮಿಶೆಟ್ಟಿ ಮತ್ತು ವೆಂಕಟಲಿಂಗಯ್ಯ.

ಆರ್ಥಿಕ ಸಮಿತಿ: ಶ್ರೀಗಳಾದ ಎಸ್. ಸಂಜೀವಯ್ಯ (ಅಧ್ಯಕ್ಷರು), ಡಿ. ಲಿಂಗಯ್ಯ ಮತ್ತು ಶ್ರೀಕಂಠಸ್ವಾಮಿ.

ಕಾನೂನು ಸಮಿತಿ: ಶ್ರೀಗಳಾದ ಟಿ. ನರಸಿಂಹಯ್ಯಂಗಾರ್ (ಅಧ್ಯಕ್ಷರು), ಸಿ. ಎನ್. ಕೃಷ್ಣಸ್ವಾಮಿ ಮತ್ತು ಮಿರ್ಜಾ ಅಕ್ಬರ್ ಹುಸೇನ್.

ಪ್ರಾವಿಡೆಂಟ್ ಫಂಡ್ ಸಮಿತಿ: ಶ್ರೀಗಳಾದ ಕೆಂಗೇಗೌಡ, ದೊಡ್ಡ ತಮ್ಮೇಗೌಡ ಮತ್ತು ಬಿ. ಮಾರುದ್ದೀನ್ ಮುಸ್ಸಿಪ್.

ಮೈಸೂರು ಮೃಗಾಲಯಕ್ಕೆ ಶಿವಮೊಗ್ಗ ಜಿಲ್ಲೆಯಿಂದ ಹೊಸ ಹುಲಿ

ಭದ್ರಾವತಿಗೆ ೧೪ ಮೈಲಿ ದೂರವಿರುವ ತರೀಕೆರೆ ತಾಲ್ಲೂಕಿನ ಕಾಡಿನಲ್ಲಿ ಕಳೆದ ವಾರ ಅರಣ್ಯ ಇಲಾಖೆಯವರು ೧೧ ಅಡಿಗಿಂತಲೂ ಉದ್ದವಾದ ಭಾರಿ ಹೆಣ್ಣು ಹುಲಿಯನ್ನು ಹಿಡಿದು ಲಾರಿಯಲ್ಲಿ ಮೈಸೂರಿನ ಮೃಗಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅದಕ್ಕೆ ಆರು ವರ್ಷವೆಂದು ಹೇಳಲಾಗಿದೆ. ಆ ಕಾಡಿನಲ್ಲಿ ಇನ್ನೂ ನಾಲ್ಕು ಹುಲಿಗಳಿಗಾಗಿ ಶೋಧನೆಯಾಗುತ್ತಿದೆ. ಹುಲಿಯನ್ನು ಹಿಡಿಯಲು ಒಂದು ತಿಂಗಳಿಂದಲೂ, ಒಂದು ಕಡೆ ದಿನವೂ ಕೋಣವನ್ನು ಕಟ್ಟಿ ಜಾಲವನ್ನು ಒಡ್ಡಲಾಗುತ್ತಿತ್ತು. ದಿನವೂ ಅಲ್ಲಿಗೆ ಬಂದು ಹಾಗೆಯೇ ಹೋಗುತ್ತಿದ್ದ ಹುಲಿಯು ಅಂದು ಮಧ್ಯದಲ್ಲಿ ಗುಂಡಿಯಿರುವುದನ್ನು ಕಾಣದೆ ಅದರೊಳಗೆ ಬಿದ್ದಿತು. ೮ ದಿನಗಳನಂತರ ಅದನ್ನು ಹಿಡಿದು ಸಾಗಿಸಲಾಯಿತು.

ಮಂಡ್ಯಕ್ಕೆ ಸ್ಪೆಷಲ್ ರೈಲು ರದ್ದು

ಈ ಬೆಳಿಗ್ಗೆ ಮೈಸೂರು ನಗರದಿಂದ ಹೊರಡುವುದೆಂದು ಗೊತ್ತಾಗಿದ್ದ ವಿಶೇಷ ರೈಲು ಸಾಕಷ್ಟು ಪ್ರಯಾಣಿಕರಿಲ್ಲದೆ ರದ್ದಾಯಿತು. ಸುಮಾರು ನೂರು ಜನರು ಬೆಂಗಳೂರು ಸಟಲ್ ರೈಲಿನಲ್ಲಿ ಮಂಡ್ಯಕ್ಕೆ ತೆರಳಿದರು.

ಕಾಶ್ಮೀರದ ಬಗ್ಗೆ ಬ್ರಿಟನ್ ಮತ್ತು ಅಮೆರಿಕಾ ಬೆಂಬಲದ ಯೋಚನೆ

ಪಾಕಿಸ್ತಾನದ ಪ್ರಯತ್ನ

ಕಾಶ್ಮೀರದ ಬಗ್ಗೆ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಬೇಗನೆ ಜಾರಿಗೊಳಿಸುವ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಅಮೆರಿಕ ಮತ್ತು ಬ್ರಿಟನ್ನುಗಳು ಬೆಂಬಲ ನೀಡುತ್ತವೆ ಎಂದು ಸ್ಪಷ್ಟವಾಗಿ ತಿಳಿಸಬೇಕೆಂದು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಹಮೀದ್ ಉಲ್ ಹಕ್ ಚೌಧುರಿಯವರು ಆಗ್ರಹಪಡಿಸಿರುವುದಾಗಿ ವರದಿಯಾಗಿದೆ. ಶ್ರೀನಗರದಲ್ಲಿ ರಷ್ಯಾ ನಾಯಕರು ಮಾಡಿದ ಭಾಷಣಗಳು ಪಕ್ಷಪಾತದ ಮಾತೆಂದು ಪಾಕಿಸ್ತಾನ ವಿದೇಶಾಂಗ ಮಂತ್ರಿಯವರು ಅಭಿಪ್ರಾಯಪಟ್ಟಿರುವುದಾಗಿ ಗೊತ್ತಾಗಿದೆ. ಭದ್ರತಾ ಸಮಿತಿಯವರು ಈ ಸಮಸ್ಯೆ ಬಗ್ಗೆ ಹೊಂದಿರುವ ನೀತಿಗೆ ಬ್ರಿಟನ್ ಮತ್ತು ಅಮೆರಿಕಗಳು ಬೆಂಬಲ ಕೊಟ್ಟ ಮಾತ್ರಕ್ಕೆ ಪಾಕಿಸ್ತಾನವು ತೃಪ್ತಿ ಹೊಂದುವುದಿಲ್ಲವೆಂದು ಹೇಳಲಾಗಿದೆ.

ಚಲನಚಿತ್ರ ತೆಗೆಯಲು ಫ್ರೆಂಚ್ ಯುವತಿಯೊಬ್ಬನ ಕೊಲೆ

ಎರಡು ವಾರದ ಹಿಂದೆ ಫ್ರಾನ್ಸ್ ಮಿರಾಮೊರ್ ನ್ಯೂಸ್ ಸಂಸ್ಥೆಯವರ ಚಲನಚಿತ್ರವನ್ನು ತೆಗೆಯುತ್ತಿದ್ದಾಗ ಫ್ರೆಂಚ್ ಸೈನ್ಯದ ಯುವಕ ಪೋಲೀಸನಿಗೆ ಒಂದು ಕೊಟ್ಟು ನಿಲ್ಲಿಸಲು ಮತ್ತು ನಿರಪರಾಧಿಯಾದ ಒಬ್ಬ ಅಲ್ಜೀರಿಯಾ ವ್ಯಕ್ತಿಯನ್ನು ಗುಂಡಿನಿಂದ ಹೊಡೆದು ಕೊಂದ ಘಟನೆಯ ವರದಿ ಪ್ರಕಟವಾಗಿದೆ. ಈ ಸುದ್ದಿಯನ್ನು ಫ್ರಾನ್ಸಿನ ಮಾಜಿ ಪ್ರಧಾನಿ ಮೆಂಡೆಸ್ ಫ್ರಾನ್ಸ್‌ರವರ ಎಕ್ಸ್‌ಪ್ರೆಸ್ ಪತ್ರಿಕೆಯು ಚಿತ್ರಗಳೊಡನೆ ಪ್ರಕಟಿಸಿದೆ. ಪತ್ರಿಕೆ ಪ್ರಕಟಣೆಯಾದ ಕೂಡಲೇ ಫ್ರಾನ್ಸಿನ ಒಳಾಡಳಿತ ಇಲಾಖಾಧಿಕಾರಿಗಳ ತುರ್ತು ಸಭೆ ನಡೆದು, ಈ ಪ್ರಸಂಗದ ಬಗ್ಗೆ ತನಿಖೆ ನಡೆಸಬೇಕೆಂದು ನಿರ್ಧರಿಸಲಾಯಿತು. ಪೋಲೀಸನನ್ನು ಬಂಧಿಸಿ ಮಿಲಿಟರಿ ವಿಚಾರಣೆಗೆ ಒಳಪಡಿಸಲಾಗಿದೆ. ವಿಚಾರಣಾ ನ್ಯಾಯಾಧೀಶರು ಈ ಸಂಬಂಧದಲ್ಲಿ ಜವಾಬ್ದಾರರಾಗಿರುವವರೆಲ್ಲರ ತನಿಖೆ ನಡೆಸಬೇಕೆಂದು ಸೂಚಿಸಲಾಗಿದೆ.

ಕಥಾ ಕಾಲಕ್ಷೇಪ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ನಾಳೆಯಿಂದ ಒಂದು ತಿಂಗಳ ಪರ್ಯಂತ, ಪ್ರತಿ ದಿನ ಸಂಜೆ ೭ ಘಂಟೆಗೆ ಶಿವಕಥೆ ಮತ್ತು ಪುರಾಣಗಳು ನಡೆಯುತ್ತವೆ. ನಾಳೆ ಭದ್ರಾವತಿಯ ವೆಂಕಟೇಶದಾಸರಿಂದ "ಗುರು ಭಕ್ತ ಭದ್ರಾಯು" ಎಂಬ ಶಿವಕಥೆಯು ಏರ್ಪಾಡಾಗಿದೆ.

ಮಂಡ್ಯದಲ್ಲಿ 'ವಿಶಾಲ ಮೈಸೂರು' ಪತ್ರಿಕೆಗಳು

ಮೈಸೂರು ವಿಲೀನ ವಿರೋಧ ಸಮ್ಮೇಳನದ ವಿರುದ್ಧವಾಗಿ ಮಂಡ್ಯದಲ್ಲಿ ವಿಶಾಲ ಮೈಸೂರು ಆಗಬೇಕೆಂದು ಸೂಚಿಸುವ ಸಾವಿರಾರು ಹಸ್ತ ಪತ್ರಿಕೆಗಳನ್ನು ಅಂಟಿಸಲಾಗಿತ್ತೆಂದು ವರದಿಯಾಗಿದೆ.

ಫಕ್ತೂನರೊಡನೆ ಘರ್ಷಣೆಯಲ್ಲಿ ೨೩ ಪಾಕಿಸ್ತಾನಿಗಳ ಮರಣ

ಕಳೆದ ವಾರ ಪಾಕಿಸ್ತಾನದಲ್ಲಿ ಫಕ್ತೂನಿಸ್ತಾನದ ರಾಷ್ಟ್ರೀಯ ಮುಜಾಹಿದ್ ಸೈನಿಕರಿಗೂ, ಪಾಕಿಸ್ತಾನಿಗಳಿಗೂ ಘರ್ಷಣೆಯಾಗಿ ೨೩ ಮಂದಿ ಪಾಕಿಸ್ತಾನಿ ಮಿಲಿಟರಿ ಸೈನಿಕರು ಸತ್ತರು. ೧೯ ಜನರಿಗೆ ಗಾಯಗಳಾಗಿರುವುದಾಗಿ ವರದಿಯಾಗಿದೆ. ಈ ಸ್ತ್ರೀಯರು ಸೆರೆ ಸಿಕ್ಕಿದರು. ಆ ಜನರಿಗೆ ಬೆಂಕಿ ಹಚ್ಚಲಾಯಿತು. ಈ ಹೋರಾಟದಲ್ಲಿ ಪಾಕಿಸ್ತಾನಿಗಳು ವಿಮಾನ ಮತ್ತು ಟ್ಯಾಂಕುಗಳನ್ನು ಉಪಯೋಗಿಸಿದರೆಂದೂ, ಮುಜಾಹಿದ್ ಪಡೆಯವರು ಹಲವು ಸ್ಥಳಗಳನ್ನು ಆಕ್ರಮಿಸಿದರೆಂದೂ ಹೇಳಲಾಗಿದೆ. ಪಾಕಿಸ್ತಾನ ಸೈನ್ಯದ ನಾನಾ ಡಂಬು ಪ್ರದೇಶದಲ್ಲಿ ಆಶ್ರಯ ಪಡೆದಿರುವರು. ಮುಜಾಹಿದ್ದರ ಕಮಾಂಡರ್ ಗುಲ್ ಜಾನ್ ಮತ್ತು ನಿಯಾಮತ್ ಖಾನರು ಸಾವು ಕಂಡರೆಂದು ಹೇಳಲಾಗಿದೆ. ಪಾಕಿಸ್ತಾನ ಹೊರಗಿನ ಗುಡ್ಡಗಾಡಿನವರು ಅಸಂಖ್ಯಾತರಾಗಿ ಸೇರಿಯವರೆಂದು ಗೊತ್ತಾಗಿದೆ.

ಪಾಕಿಸ್ತಾನದಲ್ಲಿ ಇಸ್ಲಾಂ ಗಣರಾಜ್ಯ ಸ್ಥಾಪನೆಗೆ ನಿರ್ಧಾರ

ಪಾಕಿಸ್ತಾನವನ್ನು ಇಸ್ಲಾಮಿಕ್ ಫೆಡರಲ್ ರಿಪಬ್ಲಿಕ್ ಸ್ಥಾಪಿಸಲು ಅಲ್ಲಿನ ಮುಸ್ಲಿಂ ಲೀಗ್ ಮತ್ತು ಸಂಯುಕ್ತ ರಂಗ ಪಕ್ಷಗಳ ಜಂಟಿ ಕೂಟವು ತಾತ್ಕಾಲಿಕವಾಗಿ ನಿರ್ಧರಿಸಿರುವುದೆಂದು ವರದಿಯಾಗಿದೆ. ಪಕ್ಷದ ಮುಸ್ಲಿಮೇತರ ಸದಸ್ಯರು ಈ ನಿರ್ಧಾರವನ್ನು ವಿರೋಧಿಸುತ್ತಾರೆ. ಕರಾಚಿಯು ರಾಜಧಾನಿಯಾಗಬೇಕೆಂದೂ, ಕೇಂದ್ರದ ಅಧಿಕಾರದಲ್ಲೇ ಇರಬೇಕೆಂದೂ ಜಂಟಿ ಪಕ್ಷವು ತೀರ್ಮಾನಿಸಿದೆ. ಸಂಯುಕ್ತ ರಂಗ ಪಕ್ಷವು ಜಂಟಿ ಮತದಾನ ಪದ್ಧತಿಯು ಇರಬೇಕೆಂದು ಸೂಚಿಸಿದೆ. ಇವರ ಜಂಟಿ ಪಕ್ಷಗಳ ಕೂಟವು ಈ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲವೆಂದು ಹೇಳಲಾಗಿದೆ.

ಕೊಲೆಗಾಗಿ ಹವಲ್ದಾರ್ ಮತ್ತಿಬ್ಬರು ಪೋಲೀಸರಿಗೆ ಫಾಸಿ

ಕಾಲ್ನಡಿಗೆ ಕೊಲೆ ಮಾಡಿದರೆಂಬ ಆಪಾದನೆ ಮೇಲೆ ವಿಚಾರಣೆಗೆ ಗುರಿಯಾಗಿದ್ದ ಪಂಜಾಬ್ ಪೋಲೀಸ್ ಇಲಾಖೆಯ ಮದನಗೋಪಾಲ್ ಎಂಬ ಸಬ್ ಇನ್ಸ್‌ಪೆಕ್ಟರ್ ಮತ್ತು ಧಾರ್‌ಸಿಂಗ್ ಮತ್ತು ಶಿವರಾಸಿಂಗ್ ಎಂಬ ಇಬ್ಬರು ಪೋಲೀಸರಿಗೆ ಮರಣದಂಡನೆಯನ್ನು ವಿಧಿಸಲಾಗಿದೆ. ಅಲಂಸಿಂಗ್ ಎಂಬ ಮತ್ತೊಬ್ಬ ಪೋಲೀಸನನ್ನು ಜೀವಾವಧಿ ಶಿಕ್ಷೆಗೆ ಗುರಿಪಡಿಸಲಾಗಿದೆ. ಇಬ್ಬರು ಕಾನ್ಸ್‌ಟೇಬಲ್ಲುಗಳನ್ನು ಖುಲಾಸೆ ಮಾಡಲಾಗಿದೆ. ಒಬ್ಬನು ತಪ್ಪನ್ನು ಒಪ್ಪಿಕೊಂಡನು. ಮಡಿದವರ ಪೈಕಿ ಒಬ್ಬನಿಗೆ ಚಿತ್ರಹಿಂಸೆ ಕೊಟ್ಟು ಸಾಯಿಸಲಾಯಿತೆಂದು ಹೇಳಲಾಗಿದೆ.

ಎ. ಕೃಷ್ಣಮೂರ್ತಿರಾಯರಿಂದ ಅಧಿಕಾರ ಸ್ವೀಕಾರ

ಶ್ರೀ ಎ. ಕೃಷ್ಣಮೂರ್ತಿರಾಯರು ಈ ಬೆಳಿಗ್ಗೆ ೧೧ ಗಂಟೆಗೆ ನಗರದ ಪೌರಸಭಾಧ್ಯಕ್ಷರಾಗಿ ಶ್ರೀ ಕೆ. ಪುಟ್ಟಸ್ವಾಮಿಯವರಿಂದ ಅಧಿಕಾರ ವಹಿಸಿಕೊಂಡರು.

ವಾರ ಭವಿಷ್ಯ

ತಾ॥ ೧-೧-೫೬ ರಿಂದ ೭-೧-೫೬ ರವರೆಗೆ

ಮೇಷ —ಆರೋಗ್ಯ ಚೆನ್ನಾಗಿರುವದಿಲ್ಲ ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಕಡಿಮೆ ಪತ್ರವ್ಯವಹಾರಕ್ಕೆ ಎಚ್ಚರಿಕೆ ಅಗತ್ಯ ಉದ್ಯೋಗದಲ್ಲಿ ನಿರುತ್ಸಾಹ

ವೃಷಭ —ಆರೋಗ್ಯ ಸಾಧಾರಣ ಆರ್ಥಿಕ ವಿಕ್ಕಟ್ಟು ಹೆಚ್ಚುವುದು ಸ್ವಾರ್ಥ ಪ್ರಯತ್ನ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಅಪಾತ ಸಂಪರ್ಕ ನೌಕರಿಯಲ್ಲಿ ತಿರುಗುಳ

ಮಿಥುನ —ಆರೋಗ್ಯ ಉತ್ತಮವಾಗಿರುವುದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಪ್ರಯಾಣ ಸುಖಕರವಾಗಿರುವುದು

ಕರ್ಕ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ ನೌಕರಿಯಲ್ಲಿ ನಿರುತ್ಸಾಹ

ಸಿಂಹ —ಆರೋಗ್ಯ ಮತ್ತು ಆರ್ಥಿಕ ಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಆಸ್ತಿಪಾಸ್ತಿಗಳ ಬಗ್ಗೆ ವಿವಾದ ಕುಟುಂಬದಲ್ಲಿ ಅಶಾಂತಿ

ಕನ್ಯಾ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ನೌಕರಿಯಲ್ಲಿ ಪ್ರಶಂಸೆ ಶುಭ ಕಾರ್ಯಗಳು ಜರುಗುವವು

ತುಲಾ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಾಧಾರಣ ಶುಭಕಾರ್ಯಗಳು ಜರುಗುವವು ವ್ಯಾಪಾರವ್ಯವಹಾರಗಳಲ್ಲಿ ಆರ್ಥಿಕ ಪರಿಸ್ಥಿತಿ ಇತರರೊಡನೆ ವೈಮನಸ್ಯ

ವೃಶ್ಚಿಕ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಧನು —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಶುಭಕಾರ್ಯಗಳು ಜರುಗುವವು

ಮಕರ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಲಾಭ ನಷ್ಟ ವಿದ್ಯಾರ್ಥಿಗಳ ಪರಿತಾಪ

ಕುಂಭ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಲಾಭ ನೌಕರಿಯಲ್ಲಿ ಪ್ರಶಂಸೆ

ಮೀನ —ಆರೋಗ್ಯ ಉತ್ತಮ ಇರುವುದು ಆರ್ಥಿಕ ಪರಿಸ್ಥಿತಿ ಸಮರ್ಪಕ ಪರಿಶ್ರಮದಿಂದ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ಪ್ರೋತ್ಸಾಹ

ಹನುಮಜ್ಜಯಂತಿ ಸಂಗೀತ ಕಛೇರಿಗಳು

ರಾಜಧಾನಿಯ ಅಗ್ರಹಾರದಲ್ಲಿರುವ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಗುಡಿಯಲ್ಲಿ ಹನುಮಜ್ಜಯಂತಿ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ವಿದುಷಿ ಎಂ. ಎಲ್. ವಸಂತಕುಮಾರಿಯವರ ವೀಣೆ ಮತ್ತು ಸಂಗೀತವು ನಡೆಯುತ್ತದೆ

ಗ॥ ವಿ. ಬಿ. ದೇವೇಂದ್ರಪ್ಪನವರ ಶ್ರೀ ರಾಮಮಂದಿರದಲ್ಲಿ ನಾಳೆ ಮಧ್ಯಾಹ್ನ ೯ ಗಂಟೆಗೆ ಶ್ರೀಮತಿಗಳಾದ ಆರ್ ರತ್ನ, ...ಸುಶೀಲಾ... ಗಾಯನ ಮತ್ತು ಶ್ರೀ ... ಕೃಷ್ಣಪ್ಪನವರ ಸಂಗೀತ ...

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ... ಭಕ್ತಿಗೀತೆಗಳು ... ಮಧ್ಯಾಹ್ನ ... ಜನಪದ ಮತ್ತು ... ಸಂಗೀತ ... ವಾರ್ತೆಗಳು ... ಕನ್ನಡ ಪದ್ಯಗಳು ... ಸಂಜೆ ... ಸಂಗೀತ ... ಮಕ್ಕಳ ಕಾರ್ಯಕ್ರಮ ... ಕರ್ನಾಟಕ ಸಂಗೀತ ... ಸುದ್ದಿ ... ಸಂಗೀತ ...

ಗಡಿ ಪ್ರದೇಶಗಳ ಬಗ್ಗೆ ವಿವಾದ ಬೇಡ

ಪೌರಸಭಾ ಸನ್ಮಾನ ಸಮಾರಂಭದಲ್ಲಿ ಆಂಧ್ರ ಮುಖ್ಯಮಂತ್ರಿಯ ಭಾಷಣ

ಬೆಂಗಳೂರು ೧

ಆಂಧ್ರದ ಮುಖ್ಯ ಮಂತ್ರಿ ಶ್ರೀ ಬಿ. ಗೋಪಾಲರೆಡ್ಡಿಯವರಿಗೆ ಇಲ್ಲಿನ ಕಾರ್ಪೊರೇಷನ್ನಿನವರು ಇಂದು ಸನ್ಮಾನಪತ್ರವನ್ನರ್ಪಿಸಿದರು ಶ್ರೀ ರೆಡ್ಡಿಯವರು ಉತ್ತರವಿತ್ತು, ಎಂತಹ ಸಂಸ್ಥಾನಗಳ ... ಗಡಿ ವಿವಾದಗಳನ್ನು ಬೆಳೆಸುವುದು ಸರಿಯಲ್ಲವೆಂದೂ ಗಡಿ ಸಮಿತಿಯವರು ಈ ವಿಷಯನ್ನು ಪರಿಶೀಲಿಸುವರೆಂದೂ, ಭಾರತದ ಐಕ್ಯತೆಯನ್ನೇ ಮುಖ್ಯವಾಗಿಟ್ಟುಕೊಳ್ಳಬೇಕೆಂದೂ ಸೂಚಿಸಿದರು ವಿಜಯನಗರ ಸಾಮ್ರಾಜ್ಯ ... ಕರ್ನಾಟಕ ಆಂಧ್ರದ ನಡುವೆ ಇದ್ದ ಸಂಗೀತ, ಸಂಸ್ಕೃತಿ, ಸಾಹಿತ್ಯ ಇತ್ಯಾದಿಗಳ ಸಂಬಂಧವಿರುವುದನ್ನು ಅವರು ತಿಳಿಸಿ ಇನ್ನುಮುಂದೆಯೂ ಪರಸ್ಪರ ಸಹಕಾರದ ಬಾಂಧವ್ಯವು ಬೆಳೆಯಬೇಕೆಂದು ತಿಳಿಸಿದರು

ಬರುವ ವರ್ಷ ಹೆಚ್ಚು ಯಂತ್ರ ಸಾಮಗ್ರಿಗಳ ಆಮದು

ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ನಡೆಸುವ ಸಲುವಾಗಿ ಬರುವ ವರ್ಷ ... ಯಂತ್ರ ಸಾಮಗ್ರಿಗಳು ಮತ್ತು ... ಬೇಕಾಗುವ ... ಆಮದು ಮಾಡಿಕೊಳ್ಳಲಾಗುವುದೆಂದು ಗೊತ್ತಾಗಿದೆ

ಚಾಮರಾಜಪುರಂ ಶಿಲ್ಪಾಣದಲ್ಲಿ ಆಸ್ಪತ್ರೆ ವ್ಯವಸ್ಥೆ

ಕೆಲವು ದಿನಗಳ ಹಿಂದೆ ಚಾಮರಾಜಪುರಂ ಶಿಲ್ಪಶಾಲೆಯ ... ಸಾವನ್ನಪ್ಪಿದ ... ಪ್ರಥಮ ಚಿಕಿತ್ಸೆಯನ್ನು ... ಆಸ್ಪತ್ರೆಗೆ ... ವೈದ್ಯರಿಂದ ... ಮಾಡಿಸಲಾಯಿತೆಂದೂ, ... ಆಸ್ಪತ್ರೆಗೆ ಕೊಂಡೊಯ್ಯಲಾಯಿತೆಂದೂ ... ಆಸ್ಪತ್ರೆಗೆ ಸೇರಿಸಲಾಯಿತೆಂದೂ ಗೊತ್ತಾಗಿದೆ

ನೂತನ ವರ್ಷದ ಶುಭಾಶಯಗಳು

ರಾಜಸೇವಾ ಪ್ರಸಕ್ತ ಶ್ರೀ ವೈ. ರಾಮಚಂದ್ರಂರವರು ಮತ್ತು ಇಲ್ಲಿನ ನ್ಯೂಇಂಡಿಯಾ ಅಶ್ಯೂರೆನ್ಸ್ ಕಂಪೆನಿಯ ಶ್ರೀ ಎಂ. ಪಿ. ರಾಜಶೇಖರರವರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸುತ್ತೇವೆ

ರಷ್ಯಾ ದೇಶದ ಮಕ್ಕಳ ವಿದ್ಯಾಭ್ಯಾಸ ಚಲನಚಿತ್ರ

ರಾಜಧಾನಿಯ ಇಂಡೋ ರಷ್ಯಾ ಸಾಂಸ್ಕೃತಿಕ ಸಂಘದವರು ನಿನ್ನೆ ... ಸಾಹಿತ್ಯ ಮಂಡಲಿಯ ... ರಷ್ಯಾ ದೇಶದ ಮಕ್ಕಳ ವಿದ್ಯಾಭ್ಯಾಸ ಎಂಬ ಚಿತ್ರ ಪ್ರದರ್ಶನವನ್ನು ... ವಿದ್ಯಾ ಇಲಾಖಾ ಡೆಪ್ಯುಟಿ ಡೈರೆಕ್ಟರರಾದ ಶ್ರೀ ಟಿ. ವಾಸುದೇವಯ್ಯನವರು ಆರಂಭೋತ್ಸವವನ್ನು ನೆರವೇರಿಸಿದರು ಅವರು ... ರಷ್ಯದಲ್ಲಿ ಮಕ್ಕಳ ಪ್ರೌಢಶಿಕ್ಷಣ ... ವಿವರಿಸಿ, ಮಕ್ಕಳ ... ಮತ್ತು ಬಡವ ಸಮಸ್ತ ವೆಚ್ಚವನ್ನೂ ಸರ್ಕಾರದವರೇ ವಹಿಸಿಕೊಂಡಿರುವುದಾಗಿ ತಿಳಿಸಿದರು ರಷ್ಯದಲ್ಲಿ ವಿದ್ಯಾಭ್ಯಾಸ ಮುಗಿದನಂತರ ಉದ್ಯೋಗಕ್ಕೆ ಪರದಾಡಬೇಕಿಲ್ಲವೆಂದೂ, ಆ ಪರಸರ ... ತಕ್ಕಂತೆ ವಿದ್ಯಾಭ್ಯಾಸವನ್ನು ... ದೊರೆಯುವುದೆಂದೂ ತಿಳಿಸಿ, ... ದೇಶದಲ್ಲೂ ಇದೇರೀತಿ ಸುಧಾರಣೆಯು ಆವಶ್ಯಕವೆಂದು ಅಭಿಪ್ರಾಯಪಟ್ಟರು

ಹೆರಿಗೆ ಆಸ್ಪತ್ರೆ ಶಂಕುಸ್ಥಾಪನೆ

ಬೆಂಗಳೂರು ೧

ಇಲ್ಲಿನ ಸಿವಿಲ್ ಪ್ರದೇಶದಲ್ಲಿ ನಿರ್ಮಿಸಲಾಗುವ ... ಹೆರಿಗೆ ಆಸ್ಪತ್ರೆಯ ಶಂಕುಸ್ಥಾಪನೆ ... ದಿನ ಮುಖ್ಯಮಂತ್ರಿ ಹನುಮಂತಯ್ಯನವರು ನೆರವೇರಿಸಿದರು ... ಕಟ್ಟಡಕ್ಕಾಗಿ ಬೇಕಾಗುವ ... ಲಕ್ಷ ರೂಗಳ ಪೈಕಿ ... ಲಕ್ಷ ರೂ ಗಳನ್ನು ಸರ್ಕಾರದಿಂದ ಸಾಲ ಕೊಡಿಸುವುದಾಗಿ ಅವರು ತಿಳಿಸಿದ್ದು

೧೯೫೬ ವರ್ಷದ ವರೆಗೆ ಖಾಸಗಿ ಉದ್ಯಮಗಳಿಗೆ ತೊಂದರೆ ಇಲ್ಲ

ಕೇಂದ್ರ ವಾಣಿಜ್ಯ ಮಂತ್ರಿಯವರ ಹೇಳಿಕೆ

ಸಮಾಜವಾದಿ ಸಮಾಜದ ಸೃಷ್ಟಿಗಾಗಿ ಕೈಗೊಳ್ಳಲಾಗುತ್ತಿರುವ ಕ್ರಮಗಳ ಪರಿಣಾಮವಾಗಿ ಖಾಸಗಿ ಉದ್ಯಮದವರು ಕೆಲಸ ನಡೆಸಿದರೆ, ಬರುವ ... ವರ್ಷಗಳವರೆಗೂ ಯಾವ ಭಾರಿ ಬದಲಾವಣೆಗೂ ... ಕೇಂದ್ರ ವಾಣಿಜ್ಯ ಮತ್ತು ವ್ಯವಸಾಯ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ತಿಳಿಸುತ್ತಾರೆ ಅವರಿ... ಭರವಸೆಯಿಂದು ... ವಿಚಾರವಾಗಿಯೂ ... ರು ...

ಆಯುರ್ವೇದ ವಿದ್ಯಾ ಸಂಸ್ಥೆಗಳ ರದ್ದಿಗಾಗಿ ಒತ್ತಾಯ

ಮುಂಬಯಿ ... ಆಯುರ್ವೇದ ... ವೈದ್ಯ ... ಪದ್ಧತಿಯು ... ವೈದ್ಯ ... ಮಾಡುವಂಬ ತತ್ವವನ್ನು ಕೇಂದ್ರ ... ಪ್ರಾಂತ ... ಅಂಗೀಕರಿಸಬೇಕೆಂದು ... ನಿರ್ಧಯವನ್ನು ಮಾಡಲಾಯಿತು ಆಯುರ್ವೇದ ಯುನಾನಿ ಮತ್ತು ಹೋಮಿಯೋಪತಿ ವಿದ್ಯಾಭ್ಯಾಸ ಸಂಸ್ಥೆಗಳನ್ನು ರದ್ದುಗೊಳಿಸಬೇಕೆಂದೂ ಒತ್ತಾಯಪಡಿಸಿ ಈ ವಿಷಯಗಳನ್ನೂ ಆಧುನಿಕ ವೈದ್ಯ ವಿದ್ಯಾ ಸಂಸ್ಥೆಗಳಲ್ಲಿ ಕಲಿಸಬೇಕೆಂದೂ ಒತ್ತಾಯ ಮಾಡಲಾಗಿದೆ

ವಿದ್ಯಾ ಶಿಕ್ಷಕ ಉಪಾಧ್ಯಾಯರ ಕಾಲೇಜು ವಿದ್ಯಾರ್ಥಿಗಳ ಭೇಟಿ

ಮೈಸೂರಿನ ಎಜುಕೇಷನ್ ಇನ್‌ಸ್ಟಿಟ್ಯೂಟ್ ಉಪಾಧ್ಯಾಯರ ಕಾಲೇಜಿನ ವಿದ್ಯಾರ್ಥಿಗಳು ಕಳೆದ ... ಪ್ರವಾಸ ... ಭೇಟಿಯಿತ್ತರು ಇಲ್ಲಿನ ಅಧ್ಯಾಪಕ ಶ್ರೀ ವೆಂಕಟರಾಯಪ್ಪನವರು ... ಪರಿಚಯ ಮಾಡಿಕೊಟ್ಟರು ಕಾಲೇಜು ಮತ್ತು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ... ಮುಂತಾದುವನ್ನು ಪ್ರದರ್ಶಿಸಿದರು ಐತಿಹಾಸಿಕ ಸ್ಥಳಗಳಿಗೆ ಕಾಲೇಜು ವಿದ್ಯಾರ್ಥಿಗಳು ಭೇಟಿಯಿತ್ತು ವಿವಿಧ ಕೈಗಾರಿಕೆಗಳನ್ನು ಪರಿಶೀಲಿಸಿದರು

ರಷ್ಯದ ಇಬ್ಬರು ಜಟ್ಟಿಗಳ ವಿ...

ರಷ್ಯದ ಸುಪ್ರೀಂ ಕೋರ್ಟಿನ ನ್ಯಾಯಾಧೀಶ ... ರ ಸುಪ್ರೀಂ ಮತ್ತು ಸುಪ್ರೀಂರವರನ್ನು ... ಕ್ಯಾಲಿಫೋರ್ನಿಯಾ ಮತ್ತು ನ್ಯೂಯಾರ್ಕಿನವರನ್ನು ... ನಗರಗಳಿಗೆ ನೇಮಿಸಲಾಗಿದೆ ... ಗಳನ್ನು ಕೊಡಲಾಗಿಲ್ಲ

ಅಲ್ಯೂಮಿನಿಯಂನ ದೋಣಿಯ ವಿಶ್ವ ಪರ್ಯಟನ

ಜೆ. ಕೆ. ...ಲಿಂಗ್ ಮತ್ತು ಅವರ ಪತ್ನಿ ... ಎಂಬ ಇಬ್ಬರು ಐರೋಪ್ಯರು ... ಅಲ್ಯೂಮಿನಿಯಂ ದೋಣಿಯಲ್ಲಿ ವಿಶ್ವ ಪರ್ಯಟನಕ್ಕಾಗಿ ಕಳೆದ ವರ್ಷ ಆಗಸ್ಟ್ ೧೫ ರಂದು ... ದಿಂದ ಹೊರಟು ಈಗ ಅಲಹಾಬಾದಿಗೆ ... ತ್ತಾರೆ ಅವರ ದೋಣಿಯು ಕಳೆದ ... ದು ಕಠಾರಿ ಬಂದರಿಗೆ ಬಂದಿತ್ತು ... ರೋಟ್, ಗ್ರೀಸ್, ಟರ್ಕಿ ಮತ್ತು ... ಅವರು ಸಂಚರಿಸಿರುವರು ... ದ ಅಗಲವಿರುವ ಈ ದೋಣಿಯಲ್ಲಿ ... ಕುಳಿತುಕೊಳ್ಳಲು ಅವಕಾಶವಿದೆ. ಬಟ್ಟೆ ... ಸಹಾಯದಿಂದ ಇದು ನಡೆಯಬಲ್ಲದು ... ಅಂಗಲೀ, ಯಂತ್ರದ ಸಹಾಯವಾಗಲಿ ... ಲಿಂಗ್‌ರವರು ಫ್ರಾನ್ಸಿನ ... ಹುಟ್ಟಿದವರು ಈಗ ಇಂಜನಿಯರ್ ... ರು ಅವರ ಪತ್ನಿ ಸ್ಪೇನ್ ದೇಶದವರು

ರೇಡಿಯೊ ಪ್ರಸಾರ ಮಂದಿರದ ಆರಂಭೋತ್ಸವ

ರಾಜಧಾನಿಯ ಕನ್ನೇಗೌಡನ ಕೊಪ್ಪಲಿನ ... ನೂತನ ರೇಡಿಯೋ ಪ್ರಸಾರ ಮಂದಿರದ ... ಭೋತ್ಸವವನ್ನು ರೋಡ್ ಟ್ರಾನ್ಸ್‌ಪೋರ್ಟ್ ... ನರಲ್ ಮ್ಯಾನೇಜರ್ ಶ್ರೀ ಎನ್. ಲಕ್ಷ್ಮ... ಯವರು ನೆನ್ನೆ ನೆರವೇರಿಸಿದರು ಶ್ರೀಮತಿ ... ಸ್ವಾಮಿಯವರಿಂದ ಪ್ರಾರ್ಥನೆ, ಸುಂದರಮೂರ್ತಿ ... ತ್ತು ನ್ಯಂದನವರಿಂದ ಸಂಗೀತ ಶ್ರೀಮತಿ ... ತಂಜಮ್ಮನವರಿಂದ ಜನಪದಗೀತೆಗಳು ... ತ್ತು ಪೌರಸಭಾ ಸದಸ್ಯ ಶ್ರೀ ಎನ್. ಶ್ರೀ... ಸನ್ ರವರಿಂದ ಸ್ವಾಗತಗಳಾದನಂತರ ಶ್ರೀ ... ಣರಾಯರು ಪ್ರಸಾರಮಂದಿರದ ಆರಂಭ... ವವನ್ನು ನೆರವೇರಿಸಿ ಭಾಷಣ ಮಾಡಿ ... ಯ ಎಲ್ಲರ ಮನರಂಜನೆಗಾಗಿ ... ರುವ ಈ ಮಂದಿರದಿಂದ ಜನರು ಪ್ರಯೋ... ಪಡೆಯಬೇಕೆಂದೂ, ಇಲ್ಲಿ ಉದ್ಯಾನವನ... ನ್ನು ನಿರ್ಮಿಸುವುದಲ್ಲದೆ ಸುತ್ತಮುತ್ತಲ ಪ್ರದೇ... ಶವನ್ನು ಶೋಭಾಯಮಾನಗೊಳಿಸಬೇಕೆಂದೂ ತಿಳಿಸಿ...

ಕ್ಯಾಲೆಂಡರ್ ಸ್ವೀಕಾರ

ರಾಜಧಾನಿಯ ಶ್ರೀ ಸೀತಾರಾಘವ ... ಲೆಯವರು ಪ್ರಕಟಿಸಿರುವ ಹೊಸ ವರ್ಷದ ... ಲೆಂಡರನ್ನು ಆದರದಿಂದ ಸ್ವೀಕರಿಸಿರುತ್ತೇವೆ

Edited, Printed and Publi[shed]
by A. K. Nagarajan at Sa[dhvi]
Press, D Subbiah Road Mys[ore]

NOTICE

We hereby announce that Messrs BOMBAY ANAND BHAVAN STORES, New Sayaji Square, are no longer the agents for Devidayal Stainless Steel Products in Mysore City and take this opportunity to announce opening a new agency office under the proprietorship of Shree SATYAPALL AGARWAL in Mysore shortly. For your daily requirements, please contact —

DEVIDAYAL STAINLESS STEEL AGENCY,

364 Chikpet Bangalore 2

PHONE 5034 Branch—MALLESWARAM

ಪ್ರಕಟಣೆ

ಮೆಸರ್ಸ್ ಬಾಂಬೆ ಆನಂದ ಭವನ ಸ್ಟೋರ್ಸ್, ನ್ಯೂ ಸಯ್ಯಾಜಿ ಸ್ಕ್ವೇರ್ ಇವರು ಇನ್ನು ಮುಂದೆ ಮೈಸೂರು ನಗರದಲ್ಲಿ ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ ಪದಾರ್ಥಗಳಿಗೆ ಏಜೆಂಟರಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ ಮತ್ತು ಸಧ್ಯದಲ್ಲೇ ಶ್ರೀ ಸತ್ಯಪಾಲ್ ಅಗರ್‌ವಾಲ್‌ರವರ ಮಾಲಿಕತ್ವದಲ್ಲಿ ಏಜೆನ್ಸಿ ಕಛೇರಿಯೊಂದನ್ನು ಮೈಸೂರು ನಗರದಲ್ಲಿ ಆರಂಭಿಸಲಿರುವೆವೆಂದು ತಿಳಿಸಲು ಹರ್ಷಿಸುತ್ತೇವೆ

ನಿಮ್ಮ ದಿನನಿತ್ಯದ ಆವಶ್ಯಕತೆಗಳಿಗೆ ದಯವಿಟ್ಟು ಬರೆಯಿರಿ

ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ ಏಜೆನ್ಸಿ,

364 ಚಿಕ್ಕಪೇಟೆ ಬೆಂಗಳೂರು—2

ಫೋನ್ 5034 ಶಾಖೆ ಮಲ್ಲೇಶ್ವರಂ

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ ೩ ಆಣೆ
ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಕ್ರೇಪ್,
ಆರ್ಟ್, ಪಿಂಟೆಡ್
[illegible]
M. V. ಭೋಜಯ್ಯ
[illegible]
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಪುಟ ೧೪] SADHVI MONDAY 2-1 1956 ಮೈಸೂರು [illegible] [ಸಂಚಿಕೆ : [illegible]

ಬೆಂಗಳೂರಲ್ಲಿ ವಿಶ್ವವಿದ್ಯಾಲಯದ ಶಿಕ್ಷಕರ ಸಮ್ಮೇಳನ

ಕರ್ನಾಟಕದಲ್ಲಿ ಮೈಸೂರು ವಿಲೀನವಾಗಲು ವಿರೋಧ

ರಾಜಪ್ರಮುಖರ ಸ್ಥಾನವನ್ನು ಮುಂದುವರಿಸಲು ಒತ್ತಾಯ

ವಿಲೀನ ವಿರೋಧ ಸಮ್ಮೇಳನದಲ್ಲಿ ನಿರ್ಣಯಗಳು

ಮಂಡ್ಯ ೧

ಕರ್ನಾಟಕ ಪ್ರಾಂತ ರಚನೆ ಬಗ್ಗೆ ಸಂಸ್ಥಾನಗಳ ಪುನರ್ವಿಂಗಡಣಾ ಸಮಿತಿಯವರು ಮಾಡಿರುವ ಶಿಫಾರಸುಗಳಿಗಾಗಿ ಪ್ರತಿಭಟನೆ ಸೂಚಿಸುವ ನಿರ್ಣಯವನ್ನು ನೆನ್ನೆ ಇಲ್ಲಿ ಸೇರಿದ್ದ ಮೈಸೂರು ವಿಲೀನ ವಿರೋಧಿಗಳ ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು. ಕರ್ನಾಟಕ ಪ್ರಾಂತ ರಚನೆಯ [illegible] ಮೈಸೂರಿನ ಜನರಲ್ಲಿ ಅತೃಪ್ತಿ [illegible] ವುದೆಂದು ನಿರ್ಣಯದಲ್ಲಿ ಸೂಚಿಸಲಾಗಿದೆ.

ಮೈಸೂರು ಸಂಸ್ಥಾನ ಮತ್ತು ಕರ್ನಾಟಕ [illegible] ಎರಡು ಕನ್ನಡ ಪ್ರಾಂತಗಳ ರಚನೆಯಿಂದ [illegible] ಪ್ರಯೋಜನವಾಗುವುದೆಂದೂ [illegible] ಸೇರಬೇಕೆಂದು ಇಚ್ಛಿಸಿರುವ ಕೆಲವು [illegible] ಮುಂತಾದ ಪ್ರದೇಶಗಳ [illegible] ವಿಸಲಾಗುವುದೆಂದೂ ತಿಳಿಸುವ [illegible] ಅಂಗೀಕರಿಸಲಾಯಿತು.

ಮೈಸೂರು ರಾಜಪ್ರಮುಖರ ಹುದ್ದೆಯು [illegible] ಇರುವಂತೆ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಒತ್ತಾಯಪಡಿಸಲಾಯಿತು.

ಸಮ್ಮೇಳನದ ನಿರ್ಣಯಗಳನ್ನು ಕಾರ್ಯಗತ [illegible] ಅವರ ಅಧ್ಯಕ್ಷರ ನಾಯಕತ್ವದಲ್ಲಿ [illegible] ಸದಸ್ಯರ ಸ್ಥಾಯೀ ಸಮಿತಿಯನ್ನು ರಚಿಸಲಾಯಿತು.

[illegible] ಸಮಿತಿ ಅಧ್ಯಕ್ಷರಾದ ಶ್ರೀ ಕೆ ವಿ [illegible] ಗೌಡರು ಮಾತನಾಡಿ, ಸಮ್ಮೇಳನಕ್ಕೆ [illegible] ಮಂದಿ ಪ್ರತಿನಿಧಿಗಳೂ, [illegible] ಮಂದಿ [illegible] ಸಮಿತಿ ಸದಸ್ಯರೂ ತಮ್ಮ ಹೆಸರುಗಳ [illegible] ಮಾಡಿಸಿರುವುದಾಗಿ ಸೂಚಿಸಿದರು.

ಅಧ್ಯಕ್ಷ ಶ್ರೀ ಲಕ್ಕಪ್ಪನವರು ತಮ್ಮ ಭಾಷಣದಲ್ಲಿ ಈ ಸಮ್ಮೇಳನದಲ್ಲಿ ಕಾಂಗ್ರೆಸ್ ಪಕ್ಷ ಪ್ರತಿನಿಧಿಯಾಗಿ ಭಾಷಣ ಮಾಡುತ್ತಿಲ್ಲವೆಂದೂ [illegible] ಸಾಮಾನ್ಯ ಪ್ರಜೆಯಾಗಿ ಅಭಿಪ್ರಾಯ ಸೂಚಿಸುತ್ತಿರುವುದಾಗಿಯೂ ಹೇಳಿದರು. [illegible] ಸ್ಥಾನಗಳ ಪುನರ್ವಿಂಗಡಣಾ ಸಮಿತಿ [illegible] ಬಗ್ಗೆ ಅಪಾರ ಭಿನ್ನಾಭಿಪ್ರಾಯವಿದೆಯಲ್ಲದೆ [illegible] ಪರಸ್ಪರ ವಿರಸವಾಗುವ ಸಂಭವವಿರುವುದಾಗಿ [illegible] ಸೂಚಿಸಿ, ಪ್ರಜಾಪ್ರಭುತ್ವದಲ್ಲಿ [illegible] ಸಹಕರಿಸಿ, ಕರ್ತವ್ಯಗಳಿಗೆ ಮುಂತಾ [illegible] ಕಾರ್ಯಗಳಿಗೆ ಎಡೆಗೊಡದೆ ಪ್ರತಿ [illegible] ಸಮರಸ ಭಾವನೆಯಿಂದ [illegible] ಚರ್ಚಿಸಿ, ವಾದದ ಮೂಲಕ [illegible] ಸಿಕೊಳ್ಳಬೇಕೆಂದು ಸೂಚಿಸಿದರು.

[illegible] ದಲ್ಲಿ ಶಾಂತಿಯುತ್ತ ಕಲಹ ಬಂದಾಯ [illegible] ಅಸಹಕಾರದ ಮನೋಭಾವನೆ ಹುಟ್ಟಿ [illegible] ಕೊಂಡುದ್ದೇ ಈ ಸಮ್ಮೇಳನವನ್ನು ಕರೆದಿರು [illegible] ಉದ್ದೇಶವೆಂದು ಹಲಕೆಲವು ಕಾಂಗ್ರೆಸ್ ನಾಯಕರು ತಪ್ಪು ಭಾವನೆ ಹೊಂದಿ ಸಮ್ಮೇಳನದಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸಬಾರದೆಂದು 'ಹೈಕಮಾಂಡಿನಿಂದ ಆದೇಶವನ್ನು ತರಿಸಿ' ಜನತೆಯ ಜನ್ಮಸಿದ್ಧ ಹಕ್ಕಾದ ಸ್ವತಂತ್ರಾಭಿಪ್ರಾಯವನ್ನು ಮೊಟಕು ಮಾಡುವ ಸಾಹಸಕ್ಕೆ ಕೈಹಾಕಿದ್ದಾರೆಂದೂ ಮೈಸೂರು ಕನ್ನಡಿಗರಿಂದ ಅಖಂಡ ಕರ್ನಾಟಕದ ರಚನೆ ಬಗ್ಗೆ ತಮಗಿರುವ [illegible] ಎಲ್ಲ ಕಡೆ ಬರುತ್ತವೆ [illegible] ಯನ್ನು ಅವರಲ್ಲಿ ಮೂಡಿಸುವರೆಂದು ತಿಳಿಸಿದರು.

ಸರ್ವತೋಮುಖ ಪ್ರಗತಿ [illegible] ವ ಮೈಸೂರನ್ನು [illegible] ಕನ್ನಡ ಭಾಗಗಳೊಡನೆ ವಿಲೀನ [illegible] ಮೈಸೂರಿನ [illegible] ಮೈಸೂರಿನವರ ಏತಕ್ಕೆ ಧಕ್ಕೆ ಬರುವುದೆಂದು ಜನರು ಭಾವಿಸುವರೆಂದು [illegible] ಅಭಿಪ್ರಾಯಪಟ್ಟರು.

ಸಂಸ್ಥಾನ ಪುನರ್ವಿಂಗಡಣಾ ಸಮಿತಿಯವರು ಮೈಸೂರಿಗೆ [illegible] ರಣ ನಡೆಯಿತೆಂದೂ ಶಾಸನ ಸಭಾ ಕಾಂಗ್ರೆಸ್ ಪಕ್ಷದವರಾರೂ [illegible] ಸಮಿತಿ [illegible] ಅಭಿಪ್ರಾಯ [illegible] ಸದಸ್ಯರ [illegible] ಆಗ ತಾನೆ ಕಾಂಗ್ರೆಸ್ಸಿನವರು ಸಿಪಾಯಿಗಳಂತೆ ನಡೆದುಕೊಂಡರೆಂದೂ, ಅವರು ಕರ್ನಾಟಕದ ವ್ಯಾಮೋಹಿಗಳು ಈ ಕಟ್ಟಳೆಯನ್ನು ವಿಧಿಸಿ, ಕರ್ನಾಟಕವಾಗಬೇಕೆಂದು ಸಮಿತಿಯವರ ಮುಂದೆ ಅಭಿಪ್ರಾಯ ಸೂಚಿಸಿದರೆಂದೂ ಹೇಳಿದರು. ಇವರ ಅಭಿಪ್ರಾಯವೇ ದೇಶದ ಅಭಿಪ್ರಾಯವೆಂದು ಬಗೆದು ಫಜಲಾಲಿ ಸಮಿತಿಯವರು ಕರ್ನಾಟಕ ಪ್ರಾಂತಕ್ಕೆ ಶಿಫಾರಸು ಮಾಡಿರುವುದಾಗಿ ಹೇಳಿದರು.

ಪ್ರಾದೇಶಿಕ ಕಾಂಗ್ರೆಸ್ ಸಮಿತಿಯು ಸ್ವೀಕರಿಸಿದ ಸ್ವತಂತ್ರ ಅಭಿಪ್ರಾಯ ತಿಳಿಸಲು ಅವಕಾಶವಿದ್ದರೆ ಕರ್ನಾಟಕದ ಬಗ್ಗೆ ನಿರ್ಣಯವು ಬಿದ್ದು ಹೋಗುತ್ತಿತ್ತೆಂದೂ, ಆದಾಗ್ಯೂ ಶಾಸನ ಸಭೆಯ ಮುಂದೂ ಈ ವಿಷಯವು ಬಂದಾಗ ಸ್ವತಂತ್ರ ಕಾಂಗ್ರೆಸ್ ಆದೇಶ ಎಂದು ವಿರೋಧವಾಗಿ ಓಟು ನೀಡಲು ಯಾರಿಗೂ ಅವಕಾಶವಿಲ್ಲವೆಂದು ಅವರು ಹೇಳಿದರು. ಹೀಗೆ ಉದ್ದಕ್ಕೂ ಅಡಚಣೆ ಆತಂಕಗಳನ್ನೊಡ್ಡಿ ನಿಜವಾದ ಜನಾಭಿಪ್ರಾಯಕ್ಕೆ ಅವಕಾಶ ಕೊಡದೆ ಮೈಸೂರಿನ ಬಹುಸಂಖ್ಯಾತ ಜನರ ಅಭಿಪ್ರಾಯವು ಏಕೀಕರಣದ ಕಡೆಯೆಂದು ಹೇಳುವುದು ಸುಳ್ಳೆಂಗಾಗಿ ತಪ್ಪು ತಿಳುವಳಿಕೆಯೆಂದು ಅವರು ಸೂಚಿಸಿ ಈಗ ಈ ಸಂಸ್ಥಾನದ ಬಹು ಸಂಖ್ಯಾತ ಜನರು ಏಕೀಕರಣಕ್ಕೆ ವಿರೋಧವಾಗಿರುವರೆಂಬುದು ತಮ್ಮ ನಂಬಿಕೆಯೆಂದು ತಿಳಿಸಿದರು.

ಪಾರ್ಲಿಮೆಂಟಿನಲ್ಲಿ ಜಂಟಿವಾಗಿ ತೀರ್ಮಾನ ವಾಗುವವರೆಗೆ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಿರಬೇಕೆಂದು ಹೇಳಿ, ಸಮ್ಮೇಳನದಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸಬಾರದೆಂದು ಸೂಚಿಸುವುದು ವಿಹಿತವೇ ಎಂದು ಪ್ರಶ್ನಿಸಿದರು.

ಬಲವಂತದಿಂದ ರಾಜ್ಯಗಳನ್ನು ಒಂದುಗೂಡಿ [illegible]

ಕಾರ್ಮಿಕರು ಹೆಚ್ಚು ಹೆಚ್ಚಾಗಿ ಉತ್ಪತ್ತಿ ಮಾಡಬೇಕು

ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದಲ್ಲಿ ಚೆನ್ನಯ್ಯನವರ ಭಾಷಣ

ಮೈಸೂರು ೧

ರಾಜಧಾನಿಯ ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಸಂಘದ ವಾರ್ಷಿಕೋತ್ಸವವು ನೆನ್ನೆ [illegible] ಲಿನಲ್ಲಿ ನೆರವೇರಿತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚೆನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು.

[illegible] ಸಂಘದ [illegible] ಶ್ರೀ ಕೆ ಪುಟ್ಟಸ್ವಾಮಿಯವರು [illegible] ಮಾಡಿದ ಮೇಲೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು.

ಸಂಘದ [illegible] ಅಧ್ಯಕ್ಷರೂ, ಪೌರಾಡಳಿತ ಮಂತ್ರಿ [illegible] ಶ್ರೀ [illegible] ಅವರು ಭಾಷಣ ಮಾಡಿ ಕೆಲವು ವರ್ಷದಲ್ಲಿ ಭಿನ್ನಾಭಿಪ್ರಾಯ ಹೋಗಬೇಕೆಂದೂ [illegible] ಸಂಘಟನೆಯನ್ನುಳಿದರೆ [illegible] ಪ್ರಯೋಜನ [illegible] ಸಂಸ್ಥೆಗಳ [illegible] ಈ [illegible] ಸಂಘಟನೆ [illegible] ಹೇಳಿದರು.

ಅಧ್ಯಕ್ಷರು [illegible] ಅರ್ಥಶಾಸ್ತ್ರ ಕಾರ್ಮಿಕರ ನಡುವೆ ಸೌಹಾರ್ದ ನೆಲೆಸಬೇಕೆಂದೂ, ಕಾರ್ಮಿಕರ ವಿಷಯದಲ್ಲಿ ಆಡಳಿತವರ್ಗ [illegible] ಕೆಲಸಗಾರರು ಹೆಚ್ಚು ಹೆಚ್ಚಾಗಿ ದುಡಿಯಬೇಕೆಂದೂ [illegible] ಕಾರ್ಮಿಕರು ಹೆಚ್ಚು ಹೆಚ್ಚಾಗಿ ಉತ್ಪತ್ತಿ ಮಾಡುತ್ತಿರುವುದನ್ನು [illegible] ಕೆಲಸಗಾರರ ಗಮನಕ್ಕೆ ತಂದು ಮೈಸೂರು ಸಂಸ್ಥಾನದಲ್ಲಿ [illegible] ಮತ್ತು ಕಾರ್ಮಿಕರು ಇರುವ ಸಂಸ್ಥೆಯು [illegible] ಎಂದೂ, ಅದನ್ನು [illegible] ಶ್ರಮವಹಿಸಬೇಕೆಂದೂ ನುಡಿದರು.

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಉಪನ್ಯಾಸ ಮತ್ತು ಹಾಡಿಕೆ

ರಾಜಧಾನಿಯ ಗೀತಾ ಪ್ರಚಾರಿಣಿ ಸಭೆಯ ಆಶ್ರಯದಲ್ಲಿ ಜಯಂತಿ [illegible] ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಎಂ ಯಾಮುನಾಚಾರ್ಯರಿಂದ ಗೀತೆಯಲ್ಲಿನ ಮನಶ್ಶಾಸ್ತ್ರ ಎಂಬ ವಿಷಯವಾಗಿ ಉಪನ್ಯಾಸವೂ, ನಾಳಿದ್ದು ಸಂಜೆ ೬ ಗಂಟೆಗೆ ಗೀತಾಪ್ರಚಾರಿಣಿ ಸಭೆಯ ಸ್ವಯಂ ಸೇವಕರಿಂದ ಶ್ರೀಕೃಷ್ಣ ದ್ವೈಪಾಯನಾಯನ ಕೃಷ್ಣ ಎಂಬ ನಾಟಕವೂ ನಡೆಯುವುವು.

ಸುಖದು ಬೇಡವೆಂದೂ, ಅವರ ಪ್ರೇಮದಿಂದ ಕೂಡಿದ ಪರಸ್ಪರ ಒಪ್ಪಿಗೆಯ ವಿಲೀನವಾದಂತೆ ಇದು ಸಾಧಿಸಲ್ಪಡಬೇಕೆಂದೂ ಹೇಳಿದರು.

ಸಾಮೂಹಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನವೀಯಬೇಕು

ವಿಶ್ವವಿದ್ಯಾಲಯದ ಅಧ್ಯಾಪಕರ ಸಮ್ಮೇಳನದಲ್ಲಿ ಮುಖ್ಯಮಂತ್ರಿಯವರ ಭಾಷಣ

ಸ್ವಂ ಸು ಫೋ] ಬೆಂಗಳೂರು ೨

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ ಇಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರುಗಳ ಸಮ್ಮೇಳನದ ಉದ್ಘಾಟನೋತ್ಸವವನ್ನು ನೆರವೇರಿಸಿದರು.

ಶ್ರೀ ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ವಿಶ್ವವಿದ್ಯಾಲಯದ ಅಧ್ಯಾಪಕರು ಒಂದು ಸಂಘವನ್ನು ಸ್ಥಾಪಿಸಿಕೊಳ್ಳುವುದು ಒಳ್ಳೆಯದೆಂದೂ, ಅದರ [illegible] ಅವರೂ [illegible] ಹೇಳಬೇಕಾದ್ದೆಂದೂ ಸೂಚಿಸಿದರು. ಸಂಬಳದ ಬಗ್ಗೆ ವಿಶ್ವವಿದ್ಯಾಲಯಗಳ ಗ್ರಾಂಟ್ ಸಮಿತಿಯವರು ಮಾಡಿರುವ ಸಲಹೆಯನ್ನು ಅವರು [illegible] ಅದರಿಂದ ಸಂಸ್ಥಾನ ಸರ್ಕಾರಕ್ಕೆ [illegible] ಈಗ ವಿಶ್ವವಿದ್ಯಾಲಯಕ್ಕೆ [illegible] ಹೆಚ್ಚಾಗಿ [illegible] ಸಮಿತಿಯವರ ಸಲಹೆಯಂತೆ [illegible] ಸರ್ಕಾರದ [illegible] ವಿದ್ಯಾಭ್ಯಾಸಕ್ಕೆ ವಿಶ್ವವಿದ್ಯಾಲಯದವರು ಗಮನವೀಯಬೇಕೆಂದು ತಿಳಿಸಿದರು. ವಿದ್ಯಾಭ್ಯಾಸವು ಸರ್ವ [illegible] ಕ್ರಿಯಾತ್ಮಕವಾಗಿರಬೇಕೆಂದೂ ಸೂಚಿಸಿದರು.

ಬ್ಯಾಂಕ್ ನೌಕರರು ಮುಷ್ಕರ ಹೂಡದಂತೆ ನೆಹರೂ ಸೂಚನೆ

ಬ್ಯಾಂಕ್ ನೌಕರರ ಮುಷ್ಕರವು ಸರಿಯಾದುದಲ್ಲವೆಂದೂ, ನೌಕರರು ಅದರಲ್ಲಿ ಭಾಗವಹಿಸಬಾರದೆಂದೂ ಪ್ರಧಾನಿ ನೆಹರೂರವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರದವರು ಬ್ಯಾಂಕು ನೌಕರರ [illegible] ಪರಿಶೀಲಿಸಿದ್ದು ಮತ್ತಾವ ಕೈಗಾರಿಕಾ ವಿವಾದವನ್ನೂ ಪರಿಶೀಲಿಸಲಿಲ್ಲವೆಂದು ಅವರು ಹೇಳಿ ಜಸ್ಟಿಸ್ ಗಜೇಂದ್ರಗಡಕರ್‌ರವರ ನಿಷ್ಪಕ್ಷಪಾತವಾದ ಮತ್ತು ಪಾಣಿಗ್ರಾಹಿಯ ಶಿಫಾರಸುಗಳನ್ನು ಸರ್ಕಾರದವರು ಒಪ್ಪಿರುವರೆಂದೂ, ಈ ವಿಚಾರದಲ್ಲಿ ಮತ್ತಾವ ಹೆಚ್ಚಿನ ವಿವಾದಕ್ಕೂ ಕಾರಣವಿಲ್ಲವೆಂದು ತಾವು ಭಾವಿಸುವುದಾಗಿಯೂ ತಿಳಿಸುವರು. ಕೈಗಾರಿಕಾ ವಿವಾದಗಳಲ್ಲಿ ನ್ಯಾಯಾಧೀಶರ ತೀರ್ಪಿಗೆ ಬೆಲೆಯು ಸ್ಥಿರವಾಗಿ, ಕೈಗಾರಿಕಾ ಶಾಂತಿಯು ಇರುವುದಿಲ್ಲವೆಂದು ಅವರು ಹೇಳಿದರು.

೬೯ ಮಂದಿ ಸೇಣಬಿನ ಸಟ್ಟಾ ವ್ಯಾಪಾರಿಗಳ ಬಂಧನ

ರಹಸ್ಯವಾದ ಟೆಲಿಫೋನ್ ಎಕ್ಸ್‌ಚೇಂಜುಗಳ ಮೂಲಕ ಸೇಣಬಿನ ಬೆಲೆಯಲ್ಲಿ ಸಟ್ಟಾ ವ್ಯಾಪಾರ ನಡೆಸುತ್ತಿದ್ದ ೬೯ ಮಂದಿ ವರ್ತಕರನ್ನು ಕಲ್ಕತ್ತಾ ಪೋಲೀಸರು ಬಂಧಿಸಿದ್ದಾರೆ. [illegible] ಟೆಲಿಫೋನ್ ಸಾಧನಗಳನ್ನು ವಶಪಡಿಸಿಕೊಳ್ಳಲಾಗಿದೆ. ಹಲವು ವ್ಯಾಪಾರಿಗಳು ಈ ಸಾಧನಗಳನ್ನು ತಾವು ಗುಟ್ಟಾಗಿಟ್ಟುಕೊಳ್ಳುವ ಜಾಗದ ಅರಿವನ್ನೂ ಒಪ್ಪಿಕೊಂಡಿರುವರೆಂದು ತಿಳಿದುಬಂದಿದೆ.

ಪೌರಸಭೆಗೂ ಮಾರ್ಕೆಟ್ ವರ್ತಕರಿಗೂ ಮಧುರ ಬಾಂಧವ್ಯ

ಮಾರ್ಕೆಟ್ ವರ್ತಕರ ಸಂಘದ ಸಮಾರಂಭದಲ್ಲಿ ಪೌರಸಭಾಧ್ಯಕ್ಷರ ಭಾಷಣ

ಮೈಸೂರು ೩

ನಗರದ ಪೌರಸಭಾ ಮಾರ್ಕೆಟ್ ವರ್ತಕರ ಸಂಘದ ಸಭೆಯು ನೆನ್ನೆ ಇಂದ್ರಭವನದಲ್ಲಿ ನಡೆಯಿತು ನೂತನ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಅಭಿನಂದನೆಯನ್ನು ಸ್ವೀಕರಿಸಿದರು. ಮಾಜಿ ಪೌರಸಭಾ ಕಮಿಷನರ್ ಶ್ರೀ ಎಂ ಲಕ್ಷ್ಮಣರಾಯರು ಅಧ್ಯಕ್ಷತೆ ವಹಿಸಿದ್ದರು

ಭೋಜನಾನಂತರ, ಸಂಘದ ಅಧ್ಯಕ್ಷರಾದ ಶ್ರೀ ಎಂ ಗೋಪಾಲರಾಯರು ಸ್ವಾಗತ ಭಾಷಣ ಮಾಡಿದರು

ಶ್ರೀ ಎ. ಕೃಷ್ಣಮೂರ್ತಿರಾಯರು ಭಾಷಣ ಮಾಡಿ, ಉದ್ಯಾನವನಗಳು ನಗರದ ಸೌಂದರ್ಯವನ್ನು ಹೆಚ್ಚಿಸುವಂತೆಯೇ ಮಾರ್ಕೆಟ್ಟುಗಳೂ ಹೆಚ್ಚಿಸುವುವೆಂದು ತಿಳಿಸಿದರು ಮೈಸೂರು ನಗರದ ಪೌರಸಭಾ ಮಾರ್ಕೆಟ್ಟುಗಳು ಉತ್ತಮ ಸ್ಥಿತಿಯಲ್ಲಿರುವುದಾಗಿ ಹೇಳಿ, ಪೌರಸಭೆಗೂ, ಮಾರ್ಕೆಟ್ ವರ್ತಕರಿಗೂ ಯಾವಾಗಲೂ ಮಧುರ ಬಾಂಧವ್ಯವು ಇರುವುದೆಂದೂ, ಎಲ್ಲ ಸಮಸ್ಯೆಗಳನ್ನೂ ಸುಲಭವಾಗಿ ಪರಸ್ಪರ ಸಮಾಲೋಚನೆ ಮೂಲಕ ಪರಿಹರಿಸಿಕೊಳ್ಳಬಹುದೆಂದೂ ಅವರು ಹೇಳಿದರು

ಅಧ್ಯಕ್ಷರು ಭಾಷಣ ಮಾಡಿ ತಾವು ಪೌರಸಭಾ ಕಮಿಷನರಾಗಿ ಕೆಲಸ ನಿರ್ವಹಿಸುತ್ತಿದ್ದಾಗ ತಮಗೆ ಸಹಕಾರವಿತ್ತವರೆಲ್ಲರಿಗೂ ಕೃತಜ್ಞತೆಯನ್ನು ಸೂಚಿಸಿದರು ಮಾರ್ಕೆಟ್ ವರ್ತಕರೂ, ಪೌರಸಭೆಯವರೂ ಭಿನ್ನಭಾವ ತೋರದೆ ಏಕೀಭವಿಸಿ ಕೆಲಸ ಮಾಡಲು ಬೇಕಾದಷ್ಟು ಅವಕಾಶವಿರುವುದೆಂದು ಹೇಳಿದರು

ಮದ್ರಾಸ್ ಬಿರುಗಾಳಿ ಅನಾಹುತದಲ್ಲಿ ನೊಂದವರಿಗೆ ಬಟ್ಟೆ ವರ್ತಕರ ಸಹಾಯ

ನಗರದಲ್ಲಿರುವ ತಮಿಳುನಾಡು ಬಟ್ಟೆ ವರ್ತಕರ ಸಂಘದವರು, ಮದ್ರಾಸಿನಲ್ಲಿ ಇತ್ತೀಚೆಗೆ ಸಂಭವಿಸಿದ ಬಿರುಗಾಳಿ ಅನಾಹುತದಲ್ಲಿ ನೊಂದವರ ಪರಿಹಾರಕ್ಕಾಗಿ ೧೧೧೬ ರೂ ಗಳನ್ನು ಕಳುಹಿಸಿರುತ್ತಾರೆ ನಗರದ ಸಾರ್ವಜನಿಕರು ಬಿಡಾರ ಸಹಾಯ ಮಾಡಬೇಕೆಂದೂ, ಧನ ಸಹಾಯ ಮಾಡುವವರು ಶಿವರಾಂಪೇಟೆಯಲ್ಲಿರುವ ತಮಿಳುನಾಡು ಬಟ್ಟೆ ವರ್ತಕರ ಸಂಘಕ್ಕಾಗಲೀ, ದಿನಮಣಿ ಪರಿಹಾರ ನಿಧಿ, ಮೌಂಟ್ ರೋಡ್, ಮದ್ರಾಸ್-೨ ಈ ವಿಳಾಸಕ್ಕಾಗಲೀ ಕಳುಹಿಸುವಂತೆ ಕೋರಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಜನ ಸೇವೆಯೇ ಜನಾರ್ದನ ಸೇವೆ!

MODERN DAIRY FARM

ಕ್ಷೀರ ಕ್ಷೇತ್ರ

(ರಾಘವೇಂದ್ರಸ್ವಾಮಿಗಳ ಮಠದ ಪಕ್ಕ)

[illegible] ನಾರಾಯಣಶಾಸ್ತ್ರಿ ರೋಡ್, ಮೈಸೂರು

ಮಹನೀಯರೇ, ನಿಮಗೆ ಅಪ್ಪಟ ಪರಿಶುದ್ಧವಾದ, ಸ್ಥಳದಲ್ಲೇ ಕರೆಸಿದ ಹಾಲು ಮತ್ತು ಘಟ್ಟಿ ಕೆನೆ ಮೊಸರು ಮತ್ತು ಬೆಣ್ಣೆ ಬೇಕಾದರೆ ಇಂದೇ ಮೇಲ್ಕಂಡ ಸ್ಥಳಕ್ಕೆ ಭೇಟಿ ಕೊಟ್ಟು ಪರೀಕ್ಷಿಸಬೇಕಾಗಿ ವಿನಂತಿ

ಹಾಲು, ಮೊಸರು, ಬೆಣ್ಣೆ ಇತ್ಯಾದಿಗಳನ್ನು ಚಿಲ್ಲರೆಯಾಗಿಯೂ ಮತ್ತು ಒಟ್ಟಾಗಿಯೂ, ಮದುವೆ ಮೊದಲಾದ ದೊಡ್ಡ ದೊಡ್ಡ ಸಮಾರಂಭಗಳಿಗೆ ಆರ್ಡರ್ ಮೂಲಕ ಒದಗಿಸಲಾಗುತ್ತದೆ

ಹಾಲು ಮತ್ತು ಮೊಸರು ರೂ ೧ ಗೆ ೪½ ಪೌಂಡು

Edited, Printed and Published by A K Nagarajan at Sadhvi Press, D Subbiah Road, Mysore

ಕೇಂದ್ರದಲ್ಲಿ ಸಮಾಜ ಸೇವೆಗಾಗಿ ಪ್ರತ್ಯೇಕ ಮಂತ್ರಿ ಇಲಾಖೆ

ಅ॥ ಭಾ॥ ಸಮ್ಮೇಳನದವರ ಒತ್ತಾಯ

ಬೆಂಗಳೂರು ೧

ಸಮಾಜ ಸೇವೆಗೆ ಸಂಬಂಧಿಸಿದ ೬ನೇ ಭಾರತೀಯ ಸಮ್ಮೇಳನವು ೫ ದಿನಗಳ ಚರ್ಚೆಯ ನಂತರ ಮೊನ್ನೆ ೬೨ ಶಿಫಾರಸಿನ ನಿರ್ಣಯಗಳನ್ನು ಮಾಡಿ ಮುಕ್ತಾಯವಾಯಿತು. ಸಾಮಾಜಿಕ ಕಲ್ಯಾಣ ಕಾರ್ಯಗಳನ್ನು ನಡೆಸಲೂ, ಅಂತಹ ಸಮಸ್ಯೆಗಳ ಬಗ್ಗೆ ಸಂಶೋಧನೆ ನಡೆಸಲೂ ಪ್ರತ್ಯೇಕ ಮಂತ್ರಿ ಇಲಾಖೆಯನ್ನು ಕೇಂದ್ರ ಸರ್ಕಾರದವರು ಏರ್ಪಡಿಸಬೇಕೆಂದು ಒತ್ತಾಯಪಡಿಸಲಾಯಿತು ಭಿಕ್ಷುಕರ ಹಾವಳಿಯನ್ನು ತಪ್ಪಿಸಿ, ಅವರಿಗಾಗಿ ವಸತಿ ಗೃಹಗಳನ್ನು ಏರ್ಪಡಿಸುವುದಕ್ಕಾಗಿ ಪ್ರಾರಂಭಕವಾಗಿ ೧ ಕೋಟಿ ರೂ. ಮಂಜೂರು ಮಾಡುವಂತೆ ಕೋರಲಾಯಿತು ಧರ್ಮದ ಕಟ್ಟಿಗೆ ಸೇರಿದ ನಿತ್ಯ ಯಾತ್ರಿಕರನ್ನು ಬಿಟ್ಟು ಉಳಿದಂತಹ ಎಲ್ಲ ದೃಢಕಾಯರನ್ನೂ ಭಿಕ್ಷುಕರೆಂದು ಪರಿಗಣಿಸಬೇಕೆಂದೂ ಸೂಚಿಸಲಾಯಿತು

ಅಂತರ ಜಾತೀಯ ವಿವಾಹಗಳಾಗಬೇಕೆಂದೂ ಜಾತಿವಾರು ವಿದ್ಯಾರ್ಥಿ ನಿಲಯಗಳಿಗೆ ಅವಕಾಶವೀಯದೆ, ಎಲ್ಲವೂ ಸಾರ್ವಜನಿಕ ವಿದ್ಯಾರ್ಥಿನಿಲಯಗಳಾಗಬೇಕೆಂದೂ ಸಮ್ಮೇಳನವು ಸೂಚಿಸಿತು ಮಕ್ಕಳ ಯೋಗಕ್ಷೇಮಕ್ಕಾಗಿ ಒಂದು ರಾಷ್ಟ್ರೀಯ ಕೋಶವನ್ನು ಏರ್ಪಡಿಸಬೇಕೆಂದೂ ಒತ್ತಾಯ ಮಾಡಲಾಯಿತು

"ಆದರ್ಶ ಸತಿ" ಚಿತ್ರ

ಕರ್ನಾಟಕ ಫಿಲಿಂಸ್ ಸಂಸ್ಥೆಯವರು ಮೊನ್ನೆ ಸಂಜೆ ನಗರದ ಪತ್ರಿಕೋದ್ಯೋಗಿಗಳನ್ನು ಅಶೋಕಾ ಟಾಕೀಸಿನಲ್ಲಿ ಪ್ರದರ್ಶಿಸಲ್ಪಡುತ್ತಿರುವ "ಆದರ್ಶ ಸತಿ" ಚಿತ್ರದ ವೀಕ್ಷಣೆಗಾಗಿ ಆಹ್ವಾನಿಸಿದ್ದರು ಸಂಸ್ಥೆಯ ಪರವಾಗಿ ಮ್ಯಾನೇಜರ್ ಮುಮ್ಮುಡಿಗಪ್ಪನವರು ಪತ್ರಿಕೋದ್ಯೋಗಿಗಳನ್ನು ಸ್ವಾಗತಿಸಿದರು.

ಚಿತ್ರವು ಪೌರಾಣಿಕ ಹಿನ್ನೆಲೆಯ ಕಥೆಯೊಂದರಿಂದ ಕೂಡಿದೆ ಭಕ್ತಿ ವಿಶ್ವಾಸಗಳನ್ನು ಸಂಪಾದಿಸುವುದು ವಿಶ್ವಾಸ ಮತ್ತು ಅನುಗ್ರಹಗಳಿಂದ ಸಾಧ್ಯ ಮತ್ತು ಅಹಂಕಾರ ಹಿಂಸೆಗಳಿಂದಲ್ಲ ಎಂಬುದನ್ನರಿಯದ ಶಿವನ ಪುತ್ರಿ "ಮಾನಸೆ"ಗೂ ಮತ್ತು ಶಿವ ಭಕ್ತಿಯೊಂದಾದ ಪಾತ್ರಕ್ಕೆ ಜೀವಮಾದ ಸ್ಪಷ್ಟಗೊಳಿಸಿದ ರಾಜ"ಚಂದ್ರಧರ"ನಿಗೂ ನಡೆದ ದ್ವಂದ್ವವೇ ಚಿತ್ರದಸಾರಾಂಶ ಈ ಸಮ್ಯ ಚಂದ್ರಧರನ ಸೊಸೆ ಸಾಧ್ವಿ 'ವಿಪುಲೆ' ಯು ತನ್ನ ಪಾತಿವ್ರತ್ಯದಿಂದ ಮೃತನಾದ ಪತಿಯನ್ನು ಮರಳಿ ಪಡೆಯುತ್ತಾಳೆ ಇದಕ್ಕಾಗಿ ಚಿತ್ರಕ್ಕೆ "ಆದರ್ಶ ಸತಿ"ಯ ನಾಮಕರಣವಾಗಿದೆ

ಅಭಿನಯದಲ್ಲಿ ಎಲ್ಲ ನಟನಟಿಯರೂ ಪ್ರಶಂಸೆಗೆ ಅರ್ಹರಾಗಿದ್ದಾರೆ ಇಂಪಾದ ಹಾಡುಗಳು, ಆನಂದಕರ ದೃಶ್ಯ ಮತ್ತು ಎರಡು ನೃತ್ಯಗಳು ಮತ್ತು ಒಳ್ಳೆಯ ಸಂಭಾಷಣೆಗಳಿಂದ ಕೂಡಿ ಚಿತ್ರವು ಇದುವರೆಗೆ ತೆರೆಯ ಮೇಲೆ ಬಂದಿರುವ ಕನ್ನಡದ ಉತ್ತಮ ಕಲಾಕೃತಿಗಳಲ್ಲಿ ಒಂದೆನಿಸಿದೆ

ಮನೆ ಬಾಡಿಗೆಗೆ ದೊರೆಯುತ್ತದೆ

ಫಿಶೇರೀಸ್ ರೋಡ್ 565/1ನೇ ನಂಬರು ಮನೆ ಬಾಡಿಗೆಗೆ ದೊರೆಯುತ್ತದೆ ಇವರಲ್ಲಿ ವಿಚಾರಿಸಿ

ಕೆ. ತಿಮ್ಮಯ್ಯ,
'ವಿಜಯಲಕ್ಷ್ಮಿ ವಿಹಾರ'
ಬಾವಡಿ ರೋಡ್, ಫೋರ್ಟ್ ಮೊಹಲ್ಲಾ, ಮೈಸೂರು

SRI RAMAKRISHNA VIDYA SHALA,
(Residential High & Middle Schools)
P O Vanivilasa Mohalla, Mysore

WANTED

Resident teachers for the Middle School Section for permanent vacancies. Pay at Government scales Apply to

THE PRESIDENT,
Sri Ramakrishna Ashrama,
Vanivilasa Mohalla,
MYSORE

ಮಗಳ ವಿಚಾರವಾಗಿ ರೀಟಾ ಮತ್ತು ಆಲಿಖಾನ್ ಒಪ್ಪಂದ

ಆಗಾಖಾನರ ಮಗ ಆಲಿಖಾನ್ ಮತ್ತು ಅವರ ಮಾಜಿ ಪತ್ನಿಯೂ, ಸಿನಿಮಾ ನಟಿಯೂ ಆದ ರೀಟಾ ಹೇವರ್ತ್‌ಳಿಗೆ ಅವರ ಐದು ವರ್ಷದ ಹೆಣ್ಣು ಮಗಳು ಯಾಸ್ಮಿನ್ನಳ ಸಂಬಂಧವಾಗಿ ಒಡಂಬಡಿಕೆಯಾಗಿದೆ ಮಗಳು ತಾಯಿಯೊಡನೆ ಇರುವಳೆಂದೂ ವಾರಕ್ಕೆ ೩ ಗಂಟೆ ಕಾಲ ಅವಳಿಗೆ ತಂದೆ ವೆಚ್ಚದಲ್ಲಿ ಇಸ್ಲಾಂ ಮತದ ಅಧ್ಯಯನ ಮಾಡಿಸಲಾಗುವುದೆಂದೂ ಗೊತ್ತಾಗಿದೆ ವರ್ಷಕ್ಕೆ ೪ ವಾರ ತಂದೆಯು ಮಗಳನ್ನು ನೋಡಬಹುದು ಹುಡುಗಿಯು ತಂದೆಯ ಜೊತೆಗೆ ಹೋಗಬೇಕಾದರೆ ಅದಕ್ಕೆ ಮುಂಚೆ ತಂದೆಯು ನ್ಯೂಯಾರ್ಕ್ ಬ್ಯಾಂಕಿನಲ್ಲಿ ೧ ಲಕ್ಷ ಡಾಲರ್ ಹಣವನ್ನು ಡಿಪಾಜಿಟ್ ಮಾಡುವಂತೆಯೂ, ಅದನ್ನು ರೀಟಾ ಹೇವರ್ತಳು ಮಗಳನ್ನು ವಾಪಸು ಕರೆತರಲು ಉಪಯೋಗಿಸಬಹುದೆಂದೂ, ಏನಾದರೂ ಹಣವು ಉಳಿದರೆ ಅದು ಮಗಳ ಟ್ರಸ್ಟ್ ನಿಧಿಗೆ ಸೇರಿಸಲ್ಪಡುವುದೆಂದೂ ಗೊತ್ತಾಗಿದೆ. ಅಲ್ಲದೆ ತಂದೆಯು ಮಗಳ ಪಾಲನೆಗಾಗಿ ಪ್ರತಿ ವರ್ಷವೂ ೬,೦೦೦ ಡಾಲರನ್ನು ಕೊಡಬೇಕು

ಹಿನಕಲ್ಲಿನಲ್ಲಿ ಗೀತಾ ಜಯಂತ್ಯುತ್ಸವ

ಕಸಬಾ ಹೋಬಳಿ ಹಿನಕಲ್ ಗ್ರಾಮದಲ್ಲಿ ಕಳೆದ ೩೧ನೇ ತಾ॥ ತಾಲ್ಲೂಕು ಅಮಲ್ದಾರ್ ಶ್ರೀ ಪಿ ರಾಮಪ್ಪನವರ ಅಧ್ಯಕ್ಷತೆಯಲ್ಲಿ ಗೀತಾ ಜಯಂತಿಯು ವಿಜೃಂಭಣೆಯಿಂದ ನೆರವೇರಿತು ದೇವತಾ ಪ್ರಾರ್ಥನೆಯೂ, ವಿ॥ ವಿಷಕಂಠರಾಯರು ಮತ್ತು ಶ್ರೀ ಎಂ. ಕೃಷ್ಣಪ್ಪನವರಿಂದ ಉಪನ್ಯಾಸಗಳೂ ಆದನಂತರ ಶ್ರೀಮತಿ ಗೌರಮ್ಮನವರು ಕೃಷ್ಣನ ಪಾರ್ಥಸಾರಥಿ ಭಾಗದ ಭಾರತ ಪ್ರವಚನ ಮಾಡಿದರು ಸಂಸ್ಕೃತ ಮಹಾ ಪಾಠಶಾಲೆಯ ಶ್ರೀ ಒ ಎಸ್. ವೆಂಕಟರಾಮಯ್ಯನವರು ಗೀತಾಜಯಂತಿ ಮತ್ತು ಗೀತಾಚಾರ್ಯನ ಉಪದೇಶದ ಮಹತ್ವವನ್ನು ವಿವರಿಸಿದರು ಅಧ್ಯಕ್ಷರು ಭಾಷಣ ಮಾಡಿದನಂತರ, ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ರಾಮಸ್ವಾಮಿಯವರಿಂದ ವಂದನಾರ್ಪಣೆಯಾಗಿ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು

ಹನುಮಜ್ಜಯಂತಿ ಸಂಗೀತ

ಗಾ॥ ವಿ॥ ಬಿ ದೇವೇಂದ್ರಪ್ಪನವರ ಶ್ರೀ ಮಾರುತಿ ಮಂದಿರದಲ್ಲಿ ನಾಳೆ ಮಧ್ಯಾಹ್ನ ೪ ಗಂಟೆಗೆ ಗಾನಕೋಕಿಲ ರತ್ನಮ್ಮ ಕೃಷ್ಣಮೂರ್ತಿಯವರ ಸಂಗೀತವೂ, ಸಂಜೆ ೬ ಗಂಟೆಗೆ ಕಾಕಿನಾಡದ ವಿ॥ ಮೂಕಲ ನಾರಾಯಣಶಾಸ್ತ್ರಿಯವರ ಗಾಯನವೂ ಇವೆ

ಆನೆಕರುಹಟ್ಟಿ ಪಕ್ಕದಲ್ಲಿರುವ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ವಿ॥ ಟಿ ಪುಟ್ಟಸ್ವಾಮಯ್ಯನವರ ಸಂಗೀತವು ನಡೆಯುವುದು.

ಗೋವಾ ಬಗ್ಗೆ ಅಮೇರಿಕದ ಪಕ್ಷ ವಹಿಸುತ್ತಿಲ್ಲ

ಭಾರತ ಸರ್ಕಾರಕ್ಕೆ ಅಮೇರಿಕದ [illegible]

ಗೋವಾ ವಿಷಯವಾಗಿ ಡಲ್ಲೆಸ್-[illegible]ರ ಹೇಳಿಕೆ ಬಗ್ಗೆ ಭಾರತ ಸರ್ಕಾರದವರು [illegible]ಣೆಯನ್ನು ಕೋರಿದ್ದರಮೇಲೆ ಅಮೇರಿಕಾ [illegible]ರದವರು ಭಾರತಕ್ಕೆ ಪತ್ರ ಬರೆದು, ಗೋವಾ [illegible]ಯವಾಗಿ ಪಕ್ಷವನ್ನು ವಹಿಸುತ್ತಿಲ್ಲವೆಂದು [illegible]ರುವುದಾಗಿ ಗೊತ್ತಾಗಿದೆ ಗೋವಾವು ಪೋ[illegible]ಗೀಸರ ಒಂದು ಪ್ರಾಂತವೆಂದು ಅಮೇರಿಕ[illegible] ಗಣಿಸಿಲ್ಲವೆಂದೂ ಪತ್ರದಲ್ಲಿ ತಿಳಿಸಿರುವುದಾ[illegible]ತ್ತಾಗಿದೆ

ದ್ವಿತೀಯ ಯೋಜನೆ ಆಯವ್ಯ[illegible]ದಲ್ಲಿ ೧,೨೦೦ ಕೋಟಿ ಕೊ[illegible]

ದ್ವಿತೀಯ ಪಂಚ ವಾರ್ಷಿಕ ಯೋ[illegible] ಆಯವ್ಯಯದಲ್ಲಿ ಒಟ್ಟು ೧,೨೦೦ ಕೋಟಿ [illegible] ಕೊರತಾ ಬರುವ ನಿರೀಕ್ಷೆಯಿರುವುದೆಂದು [illegible]ತ್ತಾಗಿದೆ ಯೋಜನೆಯನ್ನು ಇದೇ ತಿಂಗ[illegible] ಮತ್ತು ೫ನೇ ತಾರೀಕು ಕೇಂದ್ರ ಮಂತ್ರಿ[illegible]ಲವು ಪರಿಶೀಲಿಸುವುದು ಮೊದಲು ಗೊತ್ತು[illegible]ದಕ್ಕಿಂತಲೂ ಈಗ ೨೦೦ ಕೋಟಿ ರೂ [illegible] ಕೊರತಾ ಆಗುವುದೆಂದು ತಿಳಿದುಬಂದಿದೆ

SREE GAYATHRI TALKIES

From 3-1-56 • For 2 Days

Beneath The 12-Mile [illegible]

(CINEMASCOPE)

SREE GANESH TALKIES

From 3-1-56 For 2 Days

DRUMS ACROSS THE RIVER

In outdoor splendour of Technicolor
Starring Audie Murphy, Lyle Bettger & Walter Brennan

From 5-1-56 For 2 Days

ALWAYS A BRIDE

(For Adults Only)

A picture recommended to be seen by two kinds of people-by those who are married and those who are not

FROM 7-1-56

FOOT STEPS IN FO[illegible]

(In Technicolor)

[For Adults Only]

Featuring Stewart Granger and Jean Simmons

NOTICE

We hereby announce that Messrs BOMBAY ANAND BHAVAN STORES, New Statue Square, are no longer the agents for Devidayal Stainless Steel Products in Mysore City and feel pleasure in announcing to open a new agency office under the proprietorship of Shree SATYAPALL AGARWAL in Mysore shortly. For your ready requirements, please contact —

DEVIDAYAL STAINLESS STEEL AGENCY,

364. Chickpet, Bangalore-2

PHONE 5034 .. Branch—MALLESWARAM

ಪ್ರಕಟನೆ

ಮೆಸರ್ಸ್ ಬಾಂಬೆ ಆನಂದ ಭವನ ಸ್ಟೋರ್ಸ್, ನ್ಯೂ ಸ್ಟ್ಯಾಚ್ಯೂ ಸ್ಕ್ವೇರ್ ಇವರು ಇನ್ನು ಮುಂದೆ ಮೈಸೂರು ನಗರದಲ್ಲಿ ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ [illegible] ಗಳಿಗೆ ಏಜೆಂಟರಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇವೆ ಮತ್ತು ಸತ್ಯ[illegible] ಸತ್ಯಪಾಲ್ ಅಗರ್‌ವಾಲರವರ ಮಾಲೀಕತ್ವದಲ್ಲಿ ಏಜೆನ್ಸಿ ಆಫೀಸೊಂದನ್ನು ಮೈಸೂರು ನಗರದಲ್ಲಿ ಆರಂಭಿಸಲಿರುವೆವೆಂದು ತಿಳಿಸಲು ಹರ್ಷಿಸುತ್ತೇವೆ.

ನಿಮ್ಮ ತುರ್ತು ಅವಶ್ಯಕತೆಗಳಿಗೆ ದಯವಿಟ್ಟು ಬರೆಯಿರಿ

ದೇವಿದಯಾಳ್ ಸ್ಟೇನ್‌ಲೆಸ್ ಸ್ಟೀಲ್ ಏಜೆನ್ಸಿ,

364. ಚಿಕ್ಕಪೇಟೆ .. ಬೆಂಗಳೂರು-2

ಫೋನ್ : 5034 .. ಶಾಖೆ : ಮಲ್ಲೇಶ್ವರಂ

ರಿಜಿಸ್ಟರ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಪುಟ ೧೪] SADHVI : TUESDAY 3-1-1956 ಮೈಸೂರು ಮಂಗಳವಾರ : ೩-೧-೧೯೫೬ [ಸಂಚಿಕೆ : ೧೬೪

ಪ್ರಜಾ ಚೀಣದೊಡನೆ ಸಂಧಿಗಾಗಿ ಚಿಯಾಂಗರ ಸನ್ನಾಹ

ಸಮಾನ್ಯ ರಹಿಂ ಭತ್ತ ಕೊಳ್ಳಲು ಸರ್ಕಾರದ ಬೆಲೆ ನಿಗದಿ

ಬೆಂಗಳೂರು ೩.

[illegible] ಮೈಸೂರು ಕಪ್ಪು, ಹಾಸನ ದ ಕೆಂಪು [illegible], ಕಾರು, ಫಾರಂ ಕಪ್ಪು, ಮತ್ತು [illegible] ಭತ್ತವನ್ನು ಸಂಸ್ಥಾನದ ಕೃಷಿ [illegible] ಪಲ್ಲಾಗಕ್ಕೆ ರೂ [illegible] ಕೊಳ್ಳುತ್ತಿದ್ದಾಗಿ ಸರ್ಕಾರದವರು ಪ್ರಕಟಿಸಿದ್ದಾರೆ ಭತ್ತದ ಬೆಲೆಯು ಇಳಿಯದಿರುವಂತೆ ನೋಡಿಕೊಳ್ಳಲು ಈ ಬೆಲೆಯನ್ನು ಗೊತ್ತು ಮಾಡಲಾಗಿದೆ [illegible] ನೀಲ್ದಾಣಗಳಿಗೆ [illegible] ಇವುಗಳಲ್ಲಿ [illegible] ಮೆಚ್ಚುವಷ್ಟು ಮಾತ್ರ [illegible] ಹಾಕಿ ಉಳಿದ ಮೊಬಲಗ [illegible]

[illegible] ಮೈಸೂರು, ಮಂಡ್ಯ, ಹಾಸನ, ಚಿ[illegible], ಶಿವಮೊಗ್ಗ ಮತ್ತು ತುಮಕೂರು [illegible] ಭತ್ತವನ್ನು ಕೊಳ್ಳಲಾಗುವುದು

[illegible] ಕೊಡುವ ಮಾಲು ಕಲ್ಲು, ಮಣ್ಣು [illegible] ಇಲ್ಲದೆ ಶುದ್ಧವಾಗಿರಬೇಕು [illegible] ಮುಸ್ಸುಲು [illegible] ಕೊಡದೆಂದು ತಿಳಿಸಲಾಗಿದೆ [illegible] ಮಾಡಿರುವುದಕ್ಕಿಂತ ಕಡಿಮೆಯಾದ [illegible] ಸಿಕ್ಕಬಾರದೆಂಬ ಉದ್ದೇಶದಿಂ [illegible] ಮೇಲ್ಕಂಡ ದರದಂತೆ ಕೊ[illegible]

[illegible] ಚನ್ನಬಸವಯ್ಯನವರ ಖುಲಾಸೆ

ಭಾರತ ಸೇವಾ ದಳದ ಸಂಘಟನಾ ಕಾರ್ಯ[illegible], ವಿಧಾನ ಪರಿಷತ್ತಿನ ಸದಸ್ಯರೂ ಆ[illegible] ಚನ್ನಬಸವಯ್ಯನವರ ಮೇಲೆ [illegible] ಎಸ್ ಎಸ್ ಸಂಘದ ಕಾರ್ಯದರ್ಶಿಯು [illegible] ಮಾನನಷ್ಟ ಮೊಕದ್ದಮೆಯಲ್ಲಿ [illegible] ನ್ಯಾಯಾಧೀಶರು [illegible] ಸ್ಥಿರಪಡಲಿಲ್ಲವೆಂದು ಅವರನ್ನು ಖು[illegible] ಮಾಡಿದರು [illegible] ಶ್ರೀ ಚನ್ನಬಸವ [illegible] ಮದ್ದೂರು [illegible] ಭಾಷಣ ಮಾಡಿ ಮಹಾತ್ಮಾ ಗಾಂಧಿ [illegible] ಕೊಲೆಗೆ ಬೆಂಗಳೂರಿನ ಆರ್ ಎಸ್. [illegible] ಒಳ ಸಂಚು ನಡೆಯಿತೆಂದು [illegible] ಆಪಾದಿಸಲಾಗಿತ್ತು.

[illegible] ಬಗ್ಗೆ [illegible]

[illegible] ಸಂಸ್ಥಾನವು ಕರ್ನಾಟಕ ಪ್ರಾಂತ [illegible] ಆಗಬೇಕೆಂದು ಅಲ್ಲಿಯ ಶಾಸಕ ಸಭೆ [illegible] ನಿರ್ಧರಿಸಿದ ಪರಿಣಾಮವಾಗಿ, ನೆನ್ನೆ ಮು[illegible] ಮಂತ್ರಿ ಶ್ರೀ ಹನುಮಂತಯ್ಯನವರೊಡನೆ [illegible] ಮುಖ್ಯ ಮಂತ್ರಿ ಶ್ರೀ [illegible] ಮ[illegible] ಮಂತ್ರಿ ಶ್ರೀ ಮಲ್ಲಪ್ಪನವರು ಸಂಭಾ[illegible] ನಡೆಸಿದರೆಂದು ವರದಿಯಾಗಿದೆ.

ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಹನುಮಂತಯ್ಯನವರಿಂದ [illegible]

[illegible] ವರ್ಷದಿಂದ [illegible] ಬೆಂಗ[illegible]ದಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಪಾಠ [illegible] ಕೊಡಲು ಮುಖ್ಯ ಮಂತ್ರಿ ಶ್ರೀ ಹನುಮಂ[illegible]ಯನವರು ನಿರ್ಧರಿಸಿರುವುದಾಗಿ ಗೊತ್ತಾಗಿದೆ [illegible] ಸಂಬಂಧಿಸಿದ ವಿಷಯದಲ್ಲಿ [illegible] ಹೇಳಿಕೊಡಲಿರುವರು

ನಗರದಲ್ಲಿ ಟ್ಯಾಕ್ಸಿಗಳ ಮುಷ್ಕರ

ಮೈಸೂರು ೩.

ಟ್ಯಾಕ್ಸಿಗಳಿಗೆ ಮೀಟರ್ ಹಾಕಬೇಕೆಂಬ [illegible] ಪೋಲೀಸರು [illegible] ಗಳಿಗಾಗಿ ಪ್ರತಿಭಟಿಸಲು ನೆನ್ನೆಯಿಂದ ನಗರದ ಟ್ಯಾಕ್ಸಿ ಮಾಲೀಕರುಗಳು ತಮ್ಮ [illegible] ಓಡಿಸದೆ ನಿಲ್ಲಿಸಿದ್ದಾರೆ [illegible] ದೇ [illegible] ಕಲಹೆಮುತ್ತಿದರು [illegible] ಮುಖ್ಯಮಂತ್ರಿಗಳಿಗೂ, [illegible] ಕಳೆದ ಶನಿವಾರ ಮನವಿ ಪತ್ರಗಳನ್ನು [illegible] ಮೀಟರ್ ಹಾಕುವ ನಿಯಮದ ಬಗ್ಗೆ ವಿನಾಯಿತಿ [illegible] ಕೋರಿದ್ದರು ಹಾಗೆಯೇ ಟ್ಯಾಕ್ಸಿಗಳಿಗೆ [illegible] ಹಾಕುವುದಕ್ಕೂ ವಿನಾಯಿತಿ [illegible] ಮೈಸೂರು ನಗರದ [illegible] ಪ್ರೇಣಿಸಿ, ಸಂಚಾರದ [illegible] ವೂ ಅರಿಕೆ ಮಾಡಲಾಗಿತ್ತು [illegible] ವುದರಿಂದ ಮಾಲೀಕರಿಗೆ [illegible] ವುದೆಂದೂ ತಿಳಿಸಲಾಗಿತ್ತು [illegible] ಯ ಮೇಲೆ ಕಳೆದ [illegible] ಟರ್ ಹಾಕುವ ಬಗ್ಗೆ ಸರ್ಕಾರದ [illegible] ಅವಧಿಯನ್ನು [illegible]

ಅಂತರ್ಜಾತೀಯ ವಿವಾಹಕ್ಕಾಗಿ ವಿದ್ಯಾರ್ಥಿ ವೇತನ

ಬಿಹಾರಿನ ರೆವಿನ್ಯೂ ಮಂತ್ರಿ ಕೃಷ್ಣವಲ್ಲಭ ಸ[illegible] ಹಾಯರಿಗೆ [illegible] ವರ್ಷ ವಯಸ್ಸಾದ ಸಂದರ್ಭದಲ್ಲಿ ಅವರಿಗೆ ಗಿರಿಡಿಹ್ ಎಂಬಲ್ಲಿ ಸಾರ್ವಜನಿಕರು [illegible] ಸಾವಿರ ರೂ ನಿಧಿಯನ್ನು ಅರ್ಪಿಸಿದ್ದರು. ಆ ಪೈಕಿ [illegible] ಸಾವಿರ ರೂ ಗಳನ್ನು ಸ್ಥಳೀಯ ಕಾಲೇಜಿಗೆ ಅವರು ಕೊಟ್ಟು, ಉಳಿದ ಹಣದಲ್ಲಿ ೩,೦೦೦ ರೂ ಗಳನ್ನು ಬಿಹಾರ್ ವಿಶ್ವವಿದ್ಯಾಲಯಕ್ಕೆ ಒಪ್ಪಿಸಿ, ಅದರಲ್ಲಿ ಬ್ರಾಹ್ಮಣ, ಭೂಮಿಹಾರ, ಕಾಯಸ್ಥ, ರಜಪೂತ, [illegible] ಈ ಜಾತಿಗಳ ವಿದ್ಯಾರ್ಥಿಗಳ ಪೈಕಿ ಒಬ್ಬನು ತಮ್ಮ ಸಂಗಡದ ಹೊರಗಿನ ಗುಂಪಿನ ಹಿಂದುಳಿದವರನ್ನು ವಿವಾಹವಾದರೆ ಅವನಿಗೆ ಒಂದು ವೇತನವನ್ನೂ, ಅದೇ ಗುಂಪಿನವರು ಹರಿಜನ ಅಥವಾ ಆದಿವಾಸಿಗಳ ಪೈಕಿ ವಿವಾಹವನ್ನು ಮಾಡಿಕೊಂಡರೆ ಮತ್ತೊಂದು ವೇತನವನ್ನೂ ಕೊಡುವಂತೆ ಕೋರಿರುತ್ತಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

[illegible]ಮದ್ರಾಮಾಯಣ ಕೀರ್ತನ

ಮೈಸೂರು ಹಳೇಸಂತೆಪೇಟೆ ಕ್ರಾಸ್, ಅವ[illegible] ಲಕ್ಷ್ಮಿ ವೆಂಕಟಪ್ಪನವರ ಬೀದಿಯಲ್ಲಿರುವ ಶ್ರೀ ಎ ನಂಜಪ್ಪನವರ ಕಡಲೆ ಭಟ್ಟಿಯಲ್ಲಿ ನೆನ್ನೆಯಿಂದ ಪ್ರತಿನಿತ್ಯ ಸಂಜೆ ೬॥ ಯಿಂದ [illegible] ವರೆಗೆ ವೇ॥ ಬ್ರಂ॥ ಶ್ರೀ ವಿ ನಾರಾಯಣಶಾಸ್ತ್ರಿ ಗಮಕಿಯವರಿಂದ 'ಶ್ರೀಮದ್ರಾಮಾಯಣ ಕೀರ್ತನ' ನಡೆಯಲೇರ್ಪಡಿಸಿದೆ ಸರ್ವರಿಗೂ ಸ್ವಾಗತವಿದೆ

ನಗರದಲ್ಲಿ ಕಳ್ಳತನಗಳು

ಮೈಸೂರು ೩.

ರಾಜಧಾನಿಯ ಜಯನಗರದ ಶ್ರೀ [illegible] ನರಸಿಂಹನ್ ಎಂಬುವರ ಮನೆಯಲ್ಲಿ ನೆನ್ನೆ ಬೀಗ ಮುರಿದು ಸುಮಾರು [illegible] ರೂ ಬೆಲೆ ಬಾಳುವ ಚಿನ್ನ ಬೆಳ್ಳಿ ಸಾಮಾನುಗಳನ್ನು ಯಾರೋ ಕದ್ದು ತೆಗೆದುಕೊಂಡು ಹೋಗಿರುವುದಾಗಿ ದೂರು ಕೊಡಲಾಗಿದೆ

[illegible] ಕಡೆಗೆ ಹೋಗುವ ರಸ್ತೆಯಲ್ಲಿರುವ [illegible] ಅಂಗಡಿಯಲ್ಲಿ [illegible] ರೂ. ಬೆಲೆಯ ವಿದ್ಯುಚ್ಛಕ್ತಿ ಸಾಮಾನುಗಳ ಅಪಹಾರವಾಗಿದೆ

[illegible] ಎಂಬ [illegible] ರೂ ಬೆಲೆ ಬಾಳುವ [illegible] ಪೋಲೀಸರು ದಸ್ತಗಿರಿ ಮಾಡಿದರು

ಇಂದೂರು ಬಳಿ ರೈಲುಗಳ ಡಿಕ್ಕಿಯಿಂದ ಇಬ್ಬರ ಮರಣ

ಇಂದೂರಿಗೆ [illegible] ಮೈಲಿ ದೂರದಲ್ಲಿರುವ [illegible] ಬಾದ್ [illegible] ನಡುವೆ ನೆನ್ನೆ ಎರಡು ಪ್ರಯಾಣಿಕರ ರೈಲುಗಳಿಗೆ ಡಿಕ್ಕಿಯಾಗಿ ಇಬ್ಬರು ಸತ್ತರು, [illegible] ಮಂದಿ ಪ್ರಯಾಣಿಕರಿಗೆ [illegible] ಗಾಯಗಳಾಗಿವೆ. ಆ ಪೈಕಿ ಮೂವರ ಸ್ಥಿತಿಯು ತೀವ್ರವಾಗಿರುವುದೆಂದು ವರದಿಯಾಗಿದೆ ಒಂದು ರೈಲಿನ ಇಂಜನ್ನು ಮತ್ತು [illegible] ಮತ್ತೊಂದರ [illegible] ಗಾಯಗೊಂಡವರಿಗೆ ಚಿಕಿತ್ಸೆ ನಡೆಸಲು [illegible] ವೈದ್ಯರನ್ನು ಕಳುಹಿಸಲಾಗಿದೆ

ಜಗತ್ತಿನ ಒಳನೇ ಯುದ್ಧಕ್ಕೆ ಕಲ್ಲುಗಳೇ ಅಸ್ತ್ರ!

ಜಗತ್ತಿನ ಒಳನೇ ಮಹಾ ಯುದ್ಧದಲ್ಲಿ [illegible] ಗಳನ್ನು ಪ್ರಯೋಗಿಸಲಾಗುವುದೆಂದು [illegible] ಆಲ್ಬರ್ಟ್ ಐನ್‌ಸ್ಟೀನರು ಹೇಳಿದುದಾಗಿ ಗೊತ್ತಾಗಿದೆ ಭಾರತದ [illegible] ಕಾಂಗ್ರೆಸ್ಸಿನಲ್ಲಿ ಉತ್ತರ ಪ್ರದೇಶದ ಗೌರ್ನರ್ ಕೆ. ಎಂ. ಮುನ್ಷಿಯವರು ಮಾತನಾಡಿ, ವಿಶ್ವದ ಮೂರನೇ ಯುದ್ಧದಲ್ಲಿ ಎಂತಹ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಲಾಗುವುದೆಂದು ಐನ್‌ಸ್ಟೀನರನ್ನು ಕೇಳಲಾಗಿತ್ತೆಂದೂ, ಅವರು ಮೂರನೇ ಯುದ್ಧದ ಬಗ್ಗೆ ಏನನ್ನೂ ಹೇಳದೆ, ನಾಲ್ಕನೇ ಯುದ್ಧದ ವಿಷಯವನ್ನು ತಿಳಿಸಿದರೆಂದೂ ಹೇಳಿದರು

ವಿಧಾನ ಸೌಧದ ಮುಂದೆ [illegible] ಪ್ರತಿಮೆ

ವಿಧಾನ ಸೌಧದ ಮುಂದೆ ಸ್ಥಾಪಿಸುವುದಕ್ಕಾಗಿ [illegible] ಒಂದು ದೊಡ್ಡ ಪ್ರತಿಮೆಯನ್ನು ತಾವು ಕೊಡುವುದಾಗಿ [illegible] ಮುಖ್ಯಮಂತ್ರಿ ಶ್ರೀ [illegible]ರವರು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರಿಗೆ ನೆನ್ನೆ ಸೂಚಿಸಿದರು ಉಭಯ ಮಂತ್ರಿಗಳೂ ವಿಧಾನ ಸೌಧ ಕಟ್ಟಡಕ್ಕೆ ಭೇಟಿ ಕೊಟ್ಟ ಕಾಲದಲ್ಲಿ ಈ ವಾಗ್ದಾನವನ್ನು ಮಾಡಲಾಯಿತು ವಿಧಾನ ಸೌಧದಲ್ಲಿ ಮಹಾತ್ಮಾ ಗಾಂಧಿ, ರಾಜೇಂದ್ರ ಬಾಬು, ನೆಹರೂ, ರಾಜಾಜಿ ಮತ್ತು ಸರ್ದಾರ್ ಪಟೇಲರ ಪ್ರತಿಮೆಗಳನ್ನು ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ

ಪ್ರಜಾ ಚೀಣದೊಡನೆ ಸಂಧಿಗಾಗಿ ಚಿಯಾಂಗರ ಅಪೇಕ್ಷೆ

ರಾಷ್ಟ್ರೀಯ ಚೀಣದ ಅಧ್ಯಕ್ಷ ಚಿಯಾಂಗ್ ಕೈಷೇಕರ ರಾಜಕೀಯ ಸಲಹೆಗಾರರಾದ [illegible] ರವರು ಪ್ರಜಾ ಚೀಣದ ರಾಜಧಾನಿ [illegible] ತೆರಳಿರುವರೆಂದೂ, ಅವರನ್ನು ಅಲ್ಲಿಗೆ [illegible] ಯವರು ಆಹ್ವಾನಿಸಿದ್ದರೆಂದೂ ತಿಳಿದುಬಂದಿದೆ ಪ್ರಜಾ ಚೀಣದೊಡನೆ ಒಪ್ಪಂದ ಮಾಡಿಕೊಳ್ಳಲು ಚಿಯಾಂಗರು ಕಾತುರರಾಗಿರುವರೆಂದು ಹೇಳಲಾಗಿದೆ ಅವರ ಆರೋಗ್ಯವು ಕುಸಿಯುತ್ತಿರುವುದೆಂದೂ, ಅಮೆರಿಕದವರು ವಿಶ್ವ ಸಂಸ್ಥೆಯ ಒತ್ತಾಯದ ಪರಿಣಾಮವಾಗಿ ಚಿಯಾಂಗರನ್ನು ಕೈ ಬಿಡಬಹುದೆಂದೂ ಚಿಯಾಂಗರು ಭಾವಿಸಿ, ತಾವು ರಾಜಕೀಯ 'ಆತ್ಮಹತ್ಯೆ' ಮಾಡಿಕೊಳ್ಳುವುದರ ಬದಲು 'ಬಿಳಿಯ ಧ್ವಜವನ್ನು' ತೋರಿಸಿ ಮರ್ಯಾದೆಯಿಂದ ನಿವೃತ್ತರಾಗಲು ಆಶಿಸಿರುವರೆಂದೂ ಹೇಳಲಾಗಿದೆ

ಐಶ್ವರ್ಯದ ಮೇಲೆ ವಾರ್ಷಿಕ ತೆರಿಗೆ

[illegible] ತೆರಿಗೆ ಮತ್ತು ಆಸ್ತಿಯ ಮೇಲಿನ [illegible] ಜೊತೆಗೆ ಒಟ್ಟು ಸಂಪತ್ತಿನ ಮೇಲೂ [illegible] ತೆರಿಗೆಯನ್ನು ವಿಧಿಸಬೇಕೆಂದು ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಕರಡು ಮಸೂದೆಯ [illegible] ಯೋಜನಾ ಮಂಡಲಿಯವರು ಸಲಹೆ ಮಾಡಿರುತ್ತಾರೆಂದು ಗೊತ್ತಾಗಿದೆ. ಸ್ವೀಡ್, ನಾರ್ವೆ ಮತ್ತು ಜಪಾನುಗಳಲ್ಲಿ ಇಂತಹ ತೆರಿಗೆ [illegible] ಭಾರತದಲ್ಲೂ ಇದನ್ನು ವಿಧಿಸಬಹುದೆಂದೂ ಮಂಡಲಿಯವರು ಅಭಿಪ್ರಾಯಪಟ್ಟಿದ್ದಾರೆ ಈ ವಾರದಲ್ಲಿ ಮಂಡಲಿಯ ಮನವಿಯನ್ನು ಕೇಂದ್ರ ಸರ್ಕಾರದ ಮಂತ್ರಿ ಮಂಡಲವೂ, ಪಾರ್ಲಿಮೆಂಟಿನ ಸಲಹಾ ಸಮಿತಿ [illegible] ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯೂ [illegible] ಪರಿಶೀಲಿಸಲಾಗುವುದೆಂದು ಗೊತ್ತಾಗಿದೆ. ಈ ಮನವಿಯನ್ನು ಬರುವ ತಿಂಗಳಲ್ಲಿ ಸಾರ್ವಜನಿಕರ ಪರಿಶೀಲನೆಗಾಗಿ ಪ್ರಕಟಿಸಲಾಗುವುದು

ನವೆಂಬರ್ ೧ರೊಳಗೆ ನೂತನ ಪ್ರಾಂತಗಳ ರಚನೆ

ಈ ವರ್ಷ ನವೆಂಬರ್ ೧ರೊಳಗೆ ಪುನರ್ರಚಿತವಾದ ಸಂಸ್ಥಾನಗಳು ಸ್ಥಾಪಿಸಲ್ಪಡುವುವೆಂದು ಕೇಂದ್ರ ಗೃಹ ಮಂತ್ರಿ ಪಂಡಿತ ಪಂತ್‌ರವರು ತಿಳಿಸಿರುತ್ತಾರೆ. ಆ ಪ್ರಾಂತ್ಯಗಳ ಗಡಿಗಳ ಮುಂತಾದ ಸಂಸ್ಥಾನಗಳ ರಚನೆಯಾದನಂತರವೂ [illegible] ಬಹುದೆಂದೂ ಅವರು ಹೇಳಿ, [illegible] ಸಮಿತಿಯವರ ವರದಿಯನ್ನು ಕಾರ್ಯಗತ ಮಾಡುವವರಿಂದ ಮಹಾ ಜನಾಂಗವೇ ಮುಂದೆ ಹೋಗುವುದಿಲ್ಲವೆಂದು ತಿಳಿಸಿದರು

[illegible]ರಂಗಪಟ್ಟಣದ ವಕೀಲರಿಗೆ ದಂಡ

ಶ್ರೀರಂಗಪಟ್ಟಣದ ಪ್ರಥಮ ದರ್ಜೆ ನ್ಯಾಯಾಧೀಶರ ಕೋರ್ಟಿನಲ್ಲಿ ಸ್ಥಳೀಯ ವಕೀಲರಾದ ಶ್ರೀ ಎಸ್ ನಾರಾಯಣಭಟ್ಟರು ಕೋರ್ಟಿನ ಘನತೆಗೆ ತಕ್ಕಂತೆ ವರ್ತಿಸಲಿಲ್ಲವೆಂದು ನ್ಯಾಯಾಧೀಶರು ಅವರಿಗೆ [illegible] ರೂ ದಂಡ, ತಪ್ಪಿದರೆ [illegible] ದಿನಗಳ ಸಾದಾ ಸಜೆಯನ್ನು ವಿಧಿಸಿರುತ್ತಾರೆ.

ಸುಡಾನಿನಿಂದ ಸ್ವಾತಂತ್ರ್ಯದ ಘೋಷಣೆ

ಕಳೆದ ೫೭ ವರ್ಷಗಳಿಂದ ಈಜಿಪ್ಟ್ ಮತ್ತು ಬ್ರಿಟನ್ನಿನ ಜಂಟಿ ಆಳ್ವಿಕೆಯಲ್ಲಿದ್ದ ಸುಡಾನು ಮೊನ್ನೆ ವಿಮೋಚನೆ ಹೊಂದಿ ಸ್ವತಂತ್ರವಾಯಿತು ಈ ಬಗ್ಗೆ ಮೊನ್ನೆ ಘೋಷಣೆಯೊಂದನ್ನು ಹೊರಡಿಸಿ, ನೂತನ ರಿಪಬ್ಲಿಕ್ಕಿನ ಧ್ವಜವನ್ನು ಹಾರಿಸಲಾಯಿತು ಅದರಲ್ಲಿ ನೈಲ್ ನದಿಯನ್ನು ಸೂಚಿಸುವ ನೀಲಿ ಬಣ್ಣ, ವ್ಯವಸಾಯವನ್ನು ಸೂಚಿಸುವ ಹಸಿರು ಬಣ್ಣ ಮತ್ತು ಮರುಭೂಮಿಯನ್ನು ತೋರಿಸುವ ಹಳದಿ ಬಣ್ಣಗಳಿವೆ ಪ್ರಧಾನಿಯವರು ಈಜಿಪ್ಟ್ ಮತ್ತು ಬ್ರಿಟನ್ನಿನ ಧ್ವಜಗಳನ್ನು ಆಯಾ ರಾಷ್ಟ್ರಗಳ ರಾಯಭಾರಿಗೆ ಒಪ್ಪಿಸಿದರು ಬ್ರಿಟನ್ ಮತ್ತು ಈಜಿಪ್ಟ್ ಹೊಸ ರಾಜ್ಯಕ್ಕೆ ಮನ್ನಣೆ ಕೊಡುವುದಾಗಿ ಬರೆದಿದ್ದ ಪತ್ರಗಳನ್ನು ಓದಲಾಯಿತು ನೂತನ ರಾಜ್ಯದ ಮುಖ್ಯಾಧಿಕಾರಿಯ ಅಧಿಕಾರವನ್ನು ನಿರ್ವಹಿಸಲು ೫ ಜನರ ಸಮಿತಿಯು ಪ್ರಮಾಣ ವಚನ ಸ್ವೀಕರಿಸಿತು

ಸಂಗೀತ ವಾದ್ಯಾಲಯ

ಸಂಗೀತ ವಾದ್ಯಗಳ ತಯಾರಿಕೆಯಲ್ಲಿ ಶಿಕ್ಷಣ ನೀಡಲು ಮದ್ರಾಸಿನ ರಾಜಾ ಅಣ್ಣಾಮಲೈ ಮನ್ರಮ್ಮಿನಲ್ಲಿ ಈ ತಿಂಗಳು ೧೦ನೇ ತಾರೀಕು ಒಂದು ಸಂಗೀತ ವಾದ್ಯಾಲಯವನ್ನು ತೆರೆಯಲಾಗುವುದೆಂದು ಗೊತ್ತಾಗಿದೆ

ರಿಪಬ್ಲಿಕ್ ದಿನದಲ್ಲಿ ಬ್ಯಾಂಡ್ ಬದಲು ನಾದಸ್ವರಕ್ಕಾಗಿ ಬೇಡಿಕೆ

ರಿಪಬ್ಲಿಕ್ ದಿನಾಚರಣೆ ಸಮಯದಲ್ಲಿ ಬ್ಯಾಂಡುಗಳನ್ನು ಬಾರಿಸುವುದರ ಬದಲು ನಾದಸ್ವರವನ್ನು ಬಾರಿಸುವುದಕ್ಕೆ ಏರ್ಪಾಡಾಗಬೇಕೆಂದು ಮದ್ರಾಸಿನಲ್ಲಿ ಸೇರಿದ್ದ ೯ನೇ ನಾಟ್ಯಕಲಾ ಸಮ್ಮೇಳನವು ಕೇಂದ್ರ ಸರ್ಕಾರವನ್ನು ಕೋರಿರುತ್ತದೆ

ಕರೂರು ಶೇಷಾಚಾರ್ಯರಿಗೆ ವಿದ್ಯಾರ್ಣವ ಪ್ರಶಸ್ತಿ

ಅಯೋಧ್ಯೆಯ ಸಂಸ್ಕೃತ ಕಾರ್ಯಾಲಯದ ಸಂಸ್ಕೃತ ವಾರ ಪತ್ರಿಕೆಯ ೬೦ನೇ ವಾರ್ಷಿಕೋತ್ಸವವು ಗೋವರ್ಧನ ಪೀಠಾಧ್ಯಕ್ಷರಾದ ಶ್ರೀ ಶಂಕರಾಚಾರ್ಯ ಯೋಗ ನಂದ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು ಅಲ್ಲಿ ಸೇರಿದ್ದ ಪಂಡಿತ ಮಹಾ ಸಭೆಯಲ್ಲಿ, ಮೈಸೂರು ಅರಮನೆ ಧರ್ಮಾಧಿಕಾರಿಗಳ ಜ್ಯೋತಿಷ್ಯ ರತ್ನಂ ಕರೂರು ಶೇಷಾಚಾರ್ಯರಿಗೆ ವಿದ್ಯಾರ್ಣವ ಎಂಬ ಪ್ರಶಸ್ತಿಯನ್ನು ಕೊಡಲಾಯಿತು

ಗಾಯತ್ರಿಪುರದ ನಾಮಕರಣ

ಮಾಜಿ ಪೌರಸಭಾಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರು ಮಾಜಿ ಸೈನಿಕರ ವಸತಿಕ್ಷೇತ್ರಕ್ಕೆ ಕಳೆದ ಶುಕ್ರವಾರ ತೆರಳಿ ಆ ಪ್ರದೇಶಕ್ಕೆ ಗಾಯತ್ರಿಪುರಂ ಎಂದು ನಾಮಕರಣ ಮಾಡಿದರು ಕ್ಷೇತ್ರಕ್ಕೆ ನೀರಿನ ಸೌಕರ್ಯಗಳನ್ನು ಕಲ್ಪಿಸಿದ ಬಗ್ಗೆ ಅಲ್ಲಿನ ನಿವಾಸಿಗಳು ಪೌರಸಭಾಧಿಕಾರಿಗಳಿಗೂ ನೀರಿನ ಇಲಾಖೆಯವರಿಗೂ ಕೃತಜ್ಞತೆಯನ್ನು ಸೂಚಿಸಿರುತ್ತಾರೆ.

ಚೀನಾ ಸಾಂಸ್ಕೃತಿಕ ನಿಯೋಗದವರ ಸ್ವಾಗತಕ್ಕಾಗಿ ಮನವಿ

ಭಾರತಕ್ಕೆ ಈ ತಿಂಗಳು ಆಗಮಿಸಲಿರುವ ಚೀನಾ ಸಾಂಸ್ಕೃತಿಕ ನಿಯೋಗದವರು ಮೈಸೂರಿಗೆ ಭೇಟಿಯಾಗುವುದರಿಂದ ಅವರಿಗೆ ಇಲ್ಲಿನ ಇಂಡಿಯಾ-ಚೀನಾ ಸ್ನೇಹ ಸಂಘದವರು ಆಹ್ವಾನಿಸುತ್ತಾರೆ ನಿಯೋಗದವರನ್ನು ಸ್ವಾಗತಿಸಲು ನಾಗರಿಕರು ಎಲ್ಲಾ ಸಹಕಾರವನ್ನೂ ನೀಡಬೇಕೆಂದು ಕೋರಲಾಗಿದೆ ಈ ಸಂಬಂಧವಾಗಿ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ ಅದರಲ್ಲಿ ಶ್ರೀಮತಿ ಲೀಲಾವತಿ ಅಂಬಿಸಪ್ಪ, ಸುನಂದಮ್ಮ, ಸುಶೀಲಾಬಾಯಿ, ನಾಗರತ್ನಮ್ಮ, ಕೆ ಸಿ ಸುಬ್ಬಣ್ಣ ಮತ್ತು ಶ್ರೀಗಳಾದ ವಿಷ್ಣು ಗೋಪಾಲ್, ಆರ್ ಸತ್ಯನಾರಾಯಣ, ಎಸ್ ಗೋಪಾಲರಾವ್, ಪಿ ವಿ ಕೆ ಮೂರ್ತಿಯವರುಗಳು ಉಪಾಧ್ಯಕ್ಷರಾಗಿರುವರು ಶ್ರೀಮತಿ ಎ ಕೆ ವೆಂಕಟೇಶ್, ಶ್ರೀಗಳಾದ ಬಿ ಎಸ್ ವಿಶ್ವೇಶ್ವರಯ್ಯ, ಟಿ ಎಸ್ ರಾಮಕೃಷ್ಣಯ್ಯ ಮತ್ತು ಎ ಪಿ ಕೆ ಪಾಪಣ್ಣನವರು ಕಾರ್ಯದರ್ಶಿಗಳಾಗಿರುವರು

ಜಪಾನ್ ದೇವಾಲಯದಲ್ಲಿ ನೂಕುನುಗ್ಗಲಿನಿಂದ ೧೨೫ ಮರಣ

ಜಪಾನಿನ ನಿಗಾಟ ಎಂಬ ಊರಿನ ಬಳಿಇರುವ ಹಿಕೊಯಾಮಾ ದೇವಾಲಯದಲ್ಲಿ ಮೊನ್ನೆ ನೂಕುನುಗ್ಗಲಿನ ಪರಿಣಾಮವಾಗಿ ಭಾರಿ ಅನಾಹುತ ನಡೆದು ೧೨೫ ಮಂದಿ ಮೃತಪಟ್ಟು, ೫೫ ಜನರಿಗೆ ಗಾಯವಾದುದಾಗಿ ಗೊತ್ತಾಗಿದೆ ೩೦ ಸಾವಿರ ಜನರು ವಿಶೇಷ ಪೂಜೆಗಾಗಿ ಅಲ್ಲಿ ಸೇರಿದ್ದರು ಮೆಟ್ಟಿಲುಮೆಟ್ಟಿಲಾಗಿರುವ ಈ ದೇವಾಲಯದಲ್ಲಿ ಸೇರಿದ್ದ ಜನರ ಪೈಕಿ ಮೇಲ್ಭಾಗದಲ್ಲಿ ಇದ್ದ ಒಬ್ಬನು ಕಾಲು ಜಾರಿ ಬೀಳಲು, ನಿಬಿಡಾರ್ಥದಲ್ಲಿ ಹೆಂಗಸರು ಮಕ್ಕಳು ಮತ್ತು ಗಂಡಸರು ಒಬ್ಬರ ಮೇಲೊಬ್ಬರು ಉರುಳಿದರು ಪೂಜೆಗಾಗಿ ಮೇಲೆ ಹತ್ತುವವರು ಮತ್ತು ಪೂಜೆ ಮಾಡಿ ಇಳಿಯುತ್ತಿದ್ದವರು ಇಕ್ಕಟ್ಟಾದ ಪ್ರದೇಶದಲ್ಲಿ ಸೇರಿದಾಗ ಈ ದುರ್ಘಟನೆಯು ಸಂಭವಿಸಿತು

ಸಿಂಹಳದ ಪ್ರಧಾನಿಗೆ ಬ್ರಿಟಿಷ್ ಪ್ರಶಸ್ತಿ

ಸಿಂಹಳದ ಪ್ರಧಾನಿ ಜಾನ್ ಕೋಟೆಲವಲ ಅವರಿಗೆ ಬ್ರಿಟಿಷ್ ರಾಣಿಯವರು ನೂತನ ವರ್ಷದಲ್ಲಿ ಕಂಪಾನಿಯನ್ ಆಫ್ ಆನರ್ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ

ರಜಾ ದಿನ ವ್ಯಾಪಾರ ಮಾಡುತ್ತಿದ್ದುದಕ್ಕೆ ಜುಲ್ಮಾನೆ

ಚಿಕ್ಕಪೇಟೆ ರಸ್ತೆ ೨೦೨ರ ಯೂಸುಫ್ ಸಾಹೇಬ ಎಂಬುವನು ರಜಾ ದಿವಸ ವ್ಯಾಪಾರ ನಡೆಸುತ್ತಿದ್ದುದಕ್ಕಾಗಿಯೂ ಮತ್ತು ನೌಕರರಿಂದ ಕೆಲಸ ಮಾಡಿಸುತ್ತಿದ್ದುದಕ್ಕಾಗಿಯೂ ೨ ಕೇಸುಗಳಲ್ಲಿ ಅವನಿಗೂ ತಲಾ ೫ ರೂ ಜುಲ್ಮಾನೆ ವಿಧಿಸಲಾಗಿದೆ

ವಿವಾಹ ಮಹೋತ್ಸವ

ಕೃಷ್ಣರಾಜಪೇಟೆಯ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ಸಿ ಸುಬ್ರಹ್ಮಣ್ಯಪ್ಪನವರು ತಮ್ಮ ಪುತ್ರಿ ಸೌ॥ ಗಿರಿಜಾಂಬನವನ್ನು ಬೆಂಗಳೂರಿನ ನಿವೃತ್ತ ಪೋಸ್ಟ್ ಮಾಸ್ಟರ್ ಶ್ರೀ ಕೆ. ಎಸ್ ನಂಜುಂಡಯ್ಯನವರ ಪುತ್ರ ಶ್ರೀ ಶಂಕರನಾರಾಯಣರವರಿಗೆ ಕೊಟ್ಟು ಮೊನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಹರಿಕಥೆ ಮತ್ತು ಸಂಗೀತ

ಆನೆಕೆರೆಯಹಳ್ಳಿ ಬಳಿ ಇರುವ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹನುಮಜ್ಜಯಂತಿ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ವಿ॥ ಎಲ್ ಲಕ್ಷ್ಮೀಪತಿಯವರಿಂದ 'ಬಾಣಾಸುರನ ಪರಾಭವ' ಎಂಬ ಹರಿಕಥೆಯೂ, ಮಾರನೇ ದಿನ ಸಂಜೆ ಚೆಳಕವಾಡಿ ರಂಗಸ್ವಾಮಯ್ಯಂಗಾರ್ಯರ ಸಂಗೀತ ಮತ್ತು ಮಂಗಳವೂ ಜರುಗುವುವು

೧೦॥ ವಿ॥ ಬಿ ದೇವೇಂದ್ರಪ್ಪನವರ ಮಾರುತಿ ಮಂದಿರದಲ್ಲಿ ಹನುಮಜ್ಜಯಂತಿ ಪ್ರಯುಕ್ತ ನಾಳೆ ಮಧ್ಯಾಹ್ನ ೪ ಗಂಟೆಗೆ ಬ್ರಹ್ಮಶ್ರೀ ಹರಿಹರಾನಂದ ಭಾರತಿ ಸ್ವಾಮಿಗಳವರಿಂದ ಹರಿಕಥೆಯು ನಡೆಯುವುದು

ಕ್ರಿಕೆಟ್ ಆಟಗಾರರ ಮೇಲಿನ ಪ್ರತಿಬಂಧಕ ರದ್ದು

ಅಧಿಕೃತ ಪಂದ್ಯಗಳಲ್ಲಿ ಆಟವಾಡಕೂಡದೆಂದು ಜಿ ಕಸ್ತೂರಿರಂಗ ಮತ್ತು ಎಲ್ ಟಿ ಆದಿಶೇಷ್‌ರವರ ಮೇಲೆ ಸಂಸ್ಥಾನದ ಕ್ರಿಕೆಟ್ ಸಂಘದವರು ವಿಧಿಸಿದ್ದ ಪ್ರತಿಬಂಧಕವನ್ನು ಈಗ ರದ್ದು ಮಾಡಿರುತ್ತಾರೆ ಬೊಂಬಾಯಿಯಲ್ಲಿ ನಡೆದ ಟೆಸ್ಟ್ ಕ್ರಿಕೆಟ್ ಟ್ರಯಲಿನಲ್ಲಿ ಕಸ್ತೂರಿರಂಗ ಮತ್ತು ಕಳೆದ ವರ್ಷ ರಣಜಿ ಟ್ರೋಫಿ ಆಟದಲ್ಲಿ ಆದಿಶೇಷ್‌ರವರು ಅಸಭ್ಯವಾಗಿ ನಡೆದುಕೊಂಡರೆಂದು ಅವರ ಮೇಲೆ ನಿಷೇಧ ಹಾಕಲಾಗಿತ್ತು

ಮೈಸೂರು ಜೈಲಿನಲ್ಲಿ ಗೀತಾ ಜಯಂತಿ

ಮೈಸೂರು ಜೈಲಿನಲ್ಲಿ ಗೀತಾ ಜಯಂತಿ ಪ್ರಯುಕ್ತ ಭಾಗವತ ಮಹಾ ಪುರಾಣ ಸಪ್ತಾಹವನ್ನು ಜೈಲಿನ ಗೌರವ ಬೋಧಕರಾದ ಎಸ್. ಡಿ. ಹಿರಣ್ಣಯ್ಯನವರು ಕಳೆದ ಏಕಾದಶಿ ದಿನ ಪ್ರಾರಂಭಿಸಿದರು ಕಳೆದ ಬುಧವಾರ ಸಂಸ್ಕೃತಿ ಪ್ರಸಾರದ ಮಾಜಿ ಡೈರೆಕ್ಟರ್ ಶ್ರೀ ಸಿ ಕೆ ವೆಂಕಟರಾಮಯ್ಯನವರು ಉಪನ್ಯಾಸ ಮಾಡಿ, ಬಂದಿಗಳಿಗೆ ಸೂಕ್ತ ಹಿತವಚನಗಳನ್ನು ನುಡಿದರು.

ಮಲಯಾ ಕಮ್ಯೂನಿಸ್ಟರ ವಿರುದ್ಧವಾಗಿ ಮಿಲಿಟರಿ ಕಾರ್ಯಾಚರಣೆ

ಉತ್ತರ ಮಲಯದಲ್ಲಿ ಮೊನ್ನೆ ಕಮ್ಯೂನಿಸ್ಟ್ ದಂಗೆಕೋರರ ವಿರುದ್ಧವಾಗಿ ಮಿಲಿಟರಿ ಕಾರ್ಯಾಚರಣೆಯು ಪುನಃ ಆರಂಭವಾಯಿತು ಆಸ್ಟ್ರೇಲಿಯಾ ಸೈನಿಕರು ಮತ್ತು ಫಿರಂಗಿ ಪಡೆಗಳು ಇದೇ ಮೊದಲಾಗಿ ಅದರಲ್ಲಿ ಭಾಗವಹಿಸಿದ್ದುವು ೧೦ ನಿಮಿಷ ಫಿರಂಗಿಗಳನ್ನು ಹಾರಿಸಿದನಂತರ, ಕಾಡುಗಳಲ್ಲಿ ದಂಗೆಕೋರರಿಗೆ ಊಟವಸತಿ ನೀಡುವವರನ್ನು ಪತ್ತೆ ಮಾಡುವ ಕೆಲಸವು ಪ್ರಾರಂಭಿಸಿದರು

ನೂತನ ಸಂಸ್ಥಾನಗಳ ರಚನೆ ತಡವಾಗಬಹುದು

ಈ ವರ್ಷ ಸಪ್ಟೆಂಬರ್ ೧ರ ಹೊತ್ತಿಗೆ ನೂತನ ಸಂಸ್ಥಾನಗಳ ರಚನೆ ಕಾರ್ಯವು ಪೂರೈಸುವುದಿಲ್ಲವೆಂದೂ, ಆಸ್ತಿಗಳ ಹಂಚಿಕೆ ಕೆಲಸವು ಇನ್ನೂ ಕೆಲವು ಕಾಲ ಹಿಡಿಯುವುದೆಂದೂ ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದವಲ್ಲಭಪಂತರು ತಿಳಿಸಿರುತ್ತಾರೆ ಹೊಸ ಸಂಸ್ಥಾನಗಳ ರಚನೆಯ ಜೊತೆಗೆ ಪ್ರಾದೇಶಿಕ ಮಂಡಲಿಗಳೂ ಸ್ಥಾಪಿಸಲ್ಪಡುವುವೆಂದು ಅವರು ಹೇಳಿರುವರು

ಅಕ್ರಮವಾಗಿ ಮಾಂಸ ಹೊಂದಿದ್ದುದಕ್ಕಾಗಿ ದಂಡ

ಅಷ್ಟರ್ ಪೇಟಿಯ ಮುನೀರ್ ಎಂಬುವನು ರಹದಾರಿ ಇಲ್ಲದೆ ೪೦ ಪೌಂಡು ಮಾಂಸವನ್ನು ಹೊಂದಿದ್ದುದಕ್ಕಾಗಿ ನಗರ ನ್ಯಾಯಾಧೀಶರು ಅವನಿಗೆ ೩೦ ರೂ ದಂಡವನ್ನು ವಿಧಿಸಲಾಯಿತು

ಶುಭಾಶಯಗಳು

ಮಂಡಿ ಮೊಹಲ್ಲೆಯ ಶ್ರೀ ಹೆಚ್ ಸಿ ರಾಜ್‌ರವರು ಕಳುಹಿಸಿರುವ ನೂತನ ವರ್ಷದ ಶುಭಾಶಯಗಳನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ

ವನಿತಾ ಸದನದ ಮಕ್ಕಳಿಗೆ ಬಹುಮಾನ ವಿನಿಯೋಗ

ರಾಜಧಾನಿಯ ವನಿತಾ ಸದನದಲ್ಲಿ ಕಳೆದ ೨೬ನೇ ತಾರೀಕು ಪ್ರಾಥಮಿಕ ತರಗತಿಗಳ ಮಕ್ಕಳಿಗೆ ಬಹುಮಾನ ವಿನಿಯೋಗದ ಸಮಾರಂಭವನ್ನು ವಿದ್ಯಾ ಇಲಾಖಾ ಡೆಪ್ಯೂಟಿ ಡೈರೆಕ್ಟರ್ ಶ್ರೀ ಟಿ ವಾಸುದೇವಯ್ಯನವರು ನೆರವೇರಿಸಿದರು ವಿದ್ಯಾಭ್ಯಾಸವು ಕ್ರಿಯಾತ್ಮಕವಾಗಿರಬೇಕೆಂದೂ, ಹೆಣ್ಣು ಮಕ್ಕಳೂ ಸಹ ಸಂಪಾದನೆ ಮಾಡಬೇಕಾದದ್ದು ಮಾತಾಪಿತೃಗಳಿಗೆ ಹೊರೆಯಾಗುವುದು ತಪ್ಪಬೇಕೆಂದೂ ಅವರು ಹೇಳಿದರು ಮಕ್ಕಳಿಗೂ, ವಯಸ್ಕರಿಗೂ ಪುಸ್ತಕ ಭಂಡಾರದ ಸೌಲಭ್ಯಗಳನ್ನು ಹೆಚ್ಚಿಸಬೇಕೆಂದು ಸೂಚಿಸಿದರು ಪತ್ತೇದಾರಿ ಕಾದಂಬರಿಗಳ ಬದಲು ಪ್ರಪಂಚ ಜ್ಞಾನ ಹುಟ್ಟಿಸುವ ವಿಷಯಗಳುಳ್ಳ ಪುಸ್ತಕಗಳು ಹೆಚ್ಚಾಗಬೇಕೆಂದು ಅವರು ಸೂಚಿಸಿದರು

ಶಾರದಾ ಇಂಗ್ಲಿಷ್-ಕನ್ನಡ ನಿಘಂಟು

ರಾಮಚಂದ್ರ ಅಗ್ರಹಾರದ ೨೦ನೇ ಮನೆಯಲ್ಲಿರುವ ಶಾರದಾಸದನದವರು, ಶ್ರೀ ಗುಂಡಶಾಸ್ತ್ರಿಯವರು ಸಿದ್ಧಪಡಿಸಿರುವ ಇಂಗ್ಲಿಷ್-ಕನ್ನಡ ನಿಘಂಟಿನ ೧ನೇ ಸಂಚಿಕೆಯನ್ನು ಈಗ ಪ್ರಕಟಿಸಿರುವರು ಪೂರ್ತಿ ಪ್ರತಿಗೆ ೩ ರೂ ಬೆಲೆ ಆವಕ್ಕೆ ಶ್ರೀ ತ. ಸು ಶಾಮರಾಯರು ಮುನ್ನುಡಿ ಬರೆದಿರುತ್ತಾರೆ ಐದನೇ ಪ್ರತಿಯೊಂದು ನಮ್ಮ ಹಸ್ತಗತವಾಗಿದೆ

ಮೈಸೂರು ಪೇಟೆ ಧಾರಣೆ

	ರೂ	ಇಂದ		ರೂ.	ವರೆಗೆ	
ಕಡಲೆಕಾಯಿ	೧೪	೨	೦	೧೬	೪	೦
ಹರಳುಬೀಜ	೩೭	೦	೦	೩೮	೨	೦
ಹುಚ್ಚೆಳ್ಳು	೩೭	೨	೦	೪೦	೪	೦
ಹುರುಳಿ	೨೨	೦	೦	೨೭	೪	೦
ಹೆಸರು	೪೩	೨	೦	೪೩	೨	೦
ಅಲಸಂದೆ	೨೯	೦	೦	೪೪	೧೪	೦
ಉದ್ದು	೫೫	೧೨	೦			
ತೊಗರಿ	೩೦	೬	೦	೩೫	೧೦	೦
ಧನಿಯ	೩೬	೦	೦	೪೭	೬	೦
ಕೆಂಪುಬೀಜ	೩೫	೬	೦	೪೪	೧೨	೦
ಹುಣಸೇಹಣ್ಣು	೨	೯	೦	೪	೪	೦
ಮೆಣಸಿನಕಾಯಿ	೬	೪	೦	೧೬	೧೪	೦
ಹತ್ತಿ (೨೨ ಪೌಂಡು)	೯	೧೪	೦			
ತೆಂಗಿನಕಾಯಿ ೧,೧೦೦	೧೨೭	೪	೦	೨೩೦	೪	೦

ಮಂಡ್ಯದ ಸ್ಪೆಷಲ್ ಟ್ರೈನ್ ... ವಿಷಯದಲ್ಲಿ ಭಿನ್ನಾಭಿಪ್ರಾ...

ರಾಜಧಾನಿಯ ಶ್ರೀ ಎಂ ಸಿ ನರಸಿ... ನವರು ಈ ರೀತಿ ಪತ್ರ ಬರೆದಿರುತ್ತಾರೆ:—

ತಾ॥ ೧೧ ೨೬ ನೇ ಭಾನುವಾರ ಮ... ಮ್ಮೇಳನಕ್ಕೆ ಸ್ಪೆಷಲ್ ಟ್ರೈನ್ ಹೊರಡುವ... ರವಲ್ಲಿ ತಾ॥ ೨೧-೧೨-೫೫ ರಲ್ಲಾ ಪತ್ರಿಕೆ... ಪ್ರಕಟಣೆ ಕೊಡಲಾಗಿತ್ತು. ಸ್ಪೆಷಲ್ ಟ್ರೈನ್... ಡಲು ಆರ್ಡರ್ ಆದದ್ದು ೩೦-೧೨-೫೫... ಧ್ಯಾಹ್ನ ೪ ಘಂಟೆಯಲ್ಲಿ ಆರ್ಡರ್ ಆದ... ಅಡ್ವಾನ್ಸ್ ೩೦೦ ರೂಪಾಯಿಗಳನ್ನು ... ಮುನ್ನ ಎರಡು ನೂರ ಐವತ್ತು ಜನರ ಪ್ರ... ಕ್ಕೆ ಸ್ಪೆಷಲ್ ಟ್ರೈನ್ ಚಾರ್ಜ್ ವಿನಾಗು... ದನ್ನು ಆಫೀಸಿನಲ್ಲಿ ವಿಚಾರ ಮಾಡುವಲ್ಲಿ ... ರು ಐದು ನೂರು ರೂಪಾಯಿ, ಚಿಲ್ಲರೆ, ... ದೆಂದು ತಿಳಿಯಬಂದುದರ ಮೇಲೆ ... ಕಟ್ಟಲಾಯಿತು ಚಾರ್ಜ್ ಮೊಬಲಗನ್ನು ... ದಿವಸ ಕಟ್ಟಿ ಎಂಬ ಹೇಳಿಕೆಯ ಮೇಲೆ ... ಮಧ್ಯಾಹ್ನ ಕಟ್ಟಲು ಹೋಗಿದ್ದಾಗ ಲೆಕ್ಕಾ... ದಿ ಹೇಳುತ್ತೇವೆ, ಸಂಜೆ ೬ ಗಂಟೆಗೆ ಬ... ಮ ಅಧಿಕಾರಿಗಳಿಂದ ತಿಳಿಯಬಂತು ... ರೆ ಹೋದಾಗ್ಗೆ ಸುಮಾರು ಸಂಜೆ ೬-೩೦ ... ಯಲ್ಲಿ ಪರಿಶೀಲನೆಯಿಂದ ಒಂದು ಸಾವಿರ... ಮನೂರು ರೂಪಾಯಿ ಕಟ್ಟಬೇಕೆಂದು ... ಬಂದ ಸಬಬು ಸ್ಪೆಷಲ್ ಟ್ರೈನ್ ಆರ... ರಾತ್ರಿ ೮ ಗಂಟೆಯಲ್ಲಿ ಲಿಖಿತ ಮೂಲಕ ... ಡಿಸಲಾಯಿತು.

ನಮ್ಮ ಪ್ರಕಟನೆ ಪ್ರಕಾರ ೧-೧-೫೬ ... ಗ್ಗೆ ೪೦೦-೫೦೦ ಜನರು ರೈಲ್ವೆ ಸ್ಟೇಷನಿ... ಮಾಡಿಸಿದ್ದ ಬಗ್ಗೆ ಮಾಮೂಲ್ ಟ್ರೈ... ಯೂ, ಬಸ್ಸುಗಳ ಮೂಲಕವಾಗಿಯೂ ... ನೂರ ಜನರಿಗೆ ಏಳೀನ ವಿರೋಧ ಸಮ್ಮೇ... ಕ್ಕೆ ಹೋಗಿಬರುವ ಉಚಿತ ಪ್ರಯಾಣದ ... ರ್ಯವನ್ನು ನಗರದ ಕೆಲವು ಮಹನೀಯ... ಹಾಯದಿಂದ ನೀಡಲಾಯಿತು ಸ್ವಂತ ... ನಿಂದ ಬಂದವರೂ ಸೇರಿ ಮಂಡ್ಯದ ಸ್ಟೇಷ... ಇಳಿದವರ ಸಂಖ್ಯೆ ಸುಮಾರು ಸಾವಿರಕ್ಕೆ... ಲಾಗಿತ್ತೆಂದು ಹೇಳಬಹುದಾಗಿದೆ. ... ಹೊರಟ ಬೆಂಗಳೂರ್ ಪ್ಯಾಸೆಂಜರ್ ಟ್ರೈ... ಸೂರಿನ ಗಂಡಭೇರುಂಡದ ಧ್ವಜ, ರಾಷ್ಟ್ರ... ಮೈಸೂರ್ ಸಂಸ್ಥಾನ ಪ್ರತ್ಯೇಕವಾಗಿ ... ಲಿ ಎಂಬ ಪ್ಲಕಾರ್ಡುಗಳು, ಮತ್ತು ತಳಿ... ಅಲಂಕೃತವಾಗಿತ್ತು. ಮೈಸೂರು ಪ್ರತ್ಯೇ... ಉಳಿಯಲಿ, ನಮ್ಮ ಪ್ರಿಯ ರಾಜಪ್ರಮು... ಸ್ಥಾನಮಾನಗಳು ವಂಶಪಾರಂಪರ್ಯವಾಗಿ... ಮುಂದುವರಿಯಲಿ, ಎಂಬ ಹೃದಯ ಭೇದಕ... ಯಘೋಷಗಳು ಆಗುತ್ತಿದ್ದವು. ಹೀಗಿರು... ಲವು ನಗರ ಪತ್ರಿಕೆಗಳಲ್ಲಿ ಜನರು ಸೇರದೆ... ಲ್ ಟ್ರೈನಿನ ಏರ್ಪಾಡು ರದ್ದಾಯಿತೆಂ... ರಾರು ಜನರು ಮಾತ್ರ ಪ್ರಯಾಣ ಬೆಳ... ದೂ ಪ್ರಕಟವಾಗಿರುವುದಕ್ಕಾಗಿ ಸೋದ... ವ್ಯಕ್ತಪಡಿಸಲಾಗಿದೆ

ಪಂಡಿತ ನೆಹರೂರವರು "ಚಲಿಸುವ ವಿಶ್ವವಿದ್ಯಾಲಯ..."

ಭಾರತ ಸರ್ಕಾರದ ವಿದ್ಯಾಭ್ಯಾಸ ... ಸಲಹೆಗಾರರಾದ ಪ್ರೊಫೆಸರ್ ಹುಮಾಯ... ಬೀರ್‌ರವರು ದಾರ್ಶನಿಕರ ವಿಚಾರವನ್ನೆ... ತನಾಡುತ್ತಾ, ಪ್ರಧಾನಿ ನೆಹರೂರವರು ... ವ ವಿಶ್ವವಿದ್ಯಾಲಯವಾಗಿರುವರೆಂದು ... ರು ತಾಳ್ಮೆ ಮತ್ತು ವೈಜ್ಞಾನಿಕ ಮನೋ... ಲ್ಲಿ ಜನರಿಗೆ ಸೂಕ್ತ ತಿಳುವಳಿಕೆ ನೀಡುತ್ತಿ... ರೂರವರು ಏಕ-ವ್ಯಕ್ತಿ ವಿಶ್ವವಿದ್ಯಾಲಯ... ರುವರೆಂದು ಅವರು ಹೇಳಿರುತ್ತಾರೆ

THE PUBLIC LIBRARY, MY...

VACANCY

A Clerk's post is vacan... details see Notice Board.

V PRAPHULLA CHAN...

2.1.1956 Hon. Secre...

Edited, Printed and Publ... by A. R. Nagarajan at S... Press, D.Subbiah Road, M...

ರಿಜಿಸ್ಟರ್ಡ್ ನಂ. 792

ಕಂಪ್ಯಾನಿಯ ವಿಶ್ವತಿನಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ...
ಅಂಚೆ ಮೂಲಕ ತಿಂಗಳಿಗೆ ...
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೪] SADHVI : WEDNESDAY 4-1-1956 ಮೈಸೂರು ಬುಧವಾರ : ೪-೧-೧೯೫೬ [ಸಂಚಿಕೆ : ೧೬೪

ಅಂತರಿಕ್ಷದಲ್ಲಿ ಬ್ರಿಟನ್ನಿನ ಜಲಜನಕ ಬಾಂಬಿನ ಪರೀಕ್ಷೆ?

ವಿದ್ಯಾರ್ಥಿಗಳಿಂದ ಕಡ್ಡಾಯದ ಸಮಾಜ ಸೇವಾ ನಿಬಂಧನೆ

ವಿಶ್ವವಿದ್ಯಾಲಯದ ಅಧ್ಯಾಪಕರ ಸಮ್ಮೇಳನದಲ್ಲಿ ತೀವ್ರ ಟೀಕೆ

ಬೆಂಗಳೂರು ೪

ವಿಶ್ವವಿದ್ಯಾಲಯದ ಪದವಿ ಪ್ರಶಸ್ತಿಗಳನ್ನು ಪಡೆಯುವುದಕ್ಕೆ ಮುಂಚೆ ಗೊತ್ತಾದ ಅವಧಿ ವಿದ್ಯಾರ್ಥಿಗಳು ಸಮಾಜ ಸೇವೆ ನಡೆಸಬೇಕೆಂದು ವಿಧಿಸಲು ಸರ್ಕಾರದವರು ವಿಶ್ವವಿದ್ಯಾಲಯದ ಕರಡು ಮಸೂದೆಯಲ್ಲಿ ಸೂಚಿಸಿರುವ ನಿಬಂಧನೆಯು ನೆನ್ನೆ ವಿಶ್ವವಿದ್ಯಾಲಯದ ಅಧ್ಯಾಪಕರ ಸಮ್ಮೇಳನದಲ್ಲಿ ವಿಶೇಷವಾಗಿ ಚರ್ಚಿಸಲ್ಪಟ್ಟಿತು. ಉಚಿತ ಸಮಾಜ ಸೇವೆಯನ್ನು ಮಾಡುವುದರ ಔಚಿತ್ಯವನ್ನು ಹಲವರು ಪ್ರಶ್ನಿಸಿ, ಪರೀಕ್ಷೆಗಳಲ್ಲಿ ಉತ್ತೀರ್ಣರಾದಕೂಡಲೇ ನೌಕರಿಯನ್ನು ಸೇರಬೇಕೆಂದು ಬಯಸುವ ಬಡ ವಿದ್ಯಾರ್ಥಿಗಳಿಗೆ ಇದರಿಂದ ತೊಂದರೆಯಾಗುವುದೆಂದೂ, ಕಡ್ಡಾಯದ ಸಮಾಜಸೇವೆಯು ಬಲಾತ್ಕಾರದ ಕಾರ್ಯವಾಗುವುದೆಂದೂ ಟೀಕಿಸಲಾಯಿತು. ಸಮಾಜಸೇವಾ ಸಮಿತಿ ಸ್ಥಾಪನೆಯನ್ನು ಪ್ರತಿನಿಧಿಗಳು ಟೀಕಿಸಿ, ವಿಶ್ವವಿದ್ಯಾಲಯವೇ ಸಮಿತಿಯನ್ನು ಸ್ಥಾಪಿಸುವಂತಾಗಬೇಕೆಂದೂ, ಸಮಾಜಸೇವೆಯನ್ನು ಸಲ್ಲಿಸಿದವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಾಗಬೇಕೆಂದೂ ಸಲಹೆ ಮಾಡಲಾಯಿತು. ಸೆಂಟ್ರಲ್ ಕಾಲೇಜು ಪ್ರಿನ್ಸಿಪಾಲ್ ಶ್ರೀ ಎಸ್. ಬಿ. ಬೊಂದಾಡೆಯವರ ಅಧ್ಯಕ್ಷತೆಯಲ್ಲಿ ಸ್ಥಾಯಿ ಸಮಿತಿಯೊಂದನ್ನು ರಚಿಸಿ, ಸಮಿತಿಯು ಕರಡು ಮಸೂದೆ ಬಗ್ಗೆ ಶಾಸನಸಭೆಯ ಚುನಾಯಿತ ಸಮಿತಿಗೆ ವರದಿಯನ್ನು ಒಪ್ಪಿಸತಕ್ಕದ್ದೆಂದು ನಿರ್ಧರಿಸಲಾಯಿತು.

ಎಲ್ಲಾ ಇಂಟರ್ ಕಾಲೇಜುಗಳನ್ನೂ ಮೊದಲನೇ ದರ್ಜೆಗೆ ಬೆಳೆಸುವಂತೆಯೂ ಸಮ್ಮೇಳನ ಕೋರಿತು.

ವಿಶ್ವವಿದ್ಯಾಲಯವು ಸ್ವತಂತ್ರವಾಗಿ ನಡೆಯಬೇಕೆಂಬ ಬಗ್ಗೆ ಸರ್ಕಾರದವರ ಉದ್ದೇಶವನ್ನು ಸ್ವಾಗತಿಸಿ ಈ ಬಗ್ಗೆ ಬೇಗನೆ ಕಾರ್ಯಕ್ರಮ ನಡೆಸುವಂತೆ ಸೂಚಿಸಲಾಯಿತು.

ಸಂಬಳದ ಬಗ್ಗೆ ಗ್ರಾಂಟ್ ಸಮಿತಿಯವರ ಸಲಹೆಗಳನ್ನು ಜಾರಿಗೆ ತರಬೇಕು; ಪುಸ್ತಕ ಮತ್ತು ಪತ್ರಿಕೆಗಳನ್ನು ಕೊಳ್ಳಲು ಉಪಾಧ್ಯಾಯರಿಗೆ ವರ್ಷಕ್ಕೆ ೨೦೦ ರೂ. ಭತ್ಯೆ ಕೊಡಬೇಕು; ನಿವೃತ್ತಿ ವಯಸ್ಸನ್ನು ೬೦ಕ್ಕೆ ಹೆಚ್ಚಿಸಬೇಕು; ಪಾರ್ಟ್ ಟೈಂ ಅಧ್ಯಾಪಕರಿಗೂ ಭತ್ಯವನ್ನು ಪೂರ್ತಿ ಕೊಡಬೇಕು, ೧೯೫೪ನೇ ಮಾರ್ಚಿಗೆ ಮುಂಚೆ ಜಾರಿಯಲ್ಲಿದ್ದ ಎಲ್ಲ ಭತ್ಯೆಗಳನ್ನು ಹಿಂದಿನಿಂದಲೂ ಕೊಡಬೇಕು, ಗ್ರಾಂಟು ಮತ್ತು ಉಪಾಧ್ಯಾಯರು ಸಂಶೋಧನೆ ನಡೆಸಲು ಪ್ರೋತ್ಸಾಹವೀಯಬೇಕು ಇವೇ ಮುಂತಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಈ ಭಾರತಕ್ಕೆ ಶಿವಪ್ರಕಾಶಂರವರ ವರ್ಗ

ರಾಜಧಾನಿಯ ವಿದ್ಯುಚ್ಛಕ್ತಿ ಇಲಾಖೆ ಸೂಪರಿಂಟೆಂಡೆಂಟರಾದ ಶ್ರೀ ಶಿವಪ್ರಕಾಶಂರವರ ಸೇವೆಯನ್ನು ಮಧ್ಯ ಭಾರತ ಸರ್ಕಾರಕ್ಕೆ ೨ ವರ್ಷ ಎರವಲು ಕೊಡಲಾಗಿದೆ. ಅವರು ಈ ದಿನ ಅಲ್ಲಿಗೆ ತೆರಳುವರು.

ವಿಶ್ವವಿದ್ಯಾಲಯದಲ್ಲಿ ಕನ್ನಡ ಮಾಧ್ಯಮ ಬೇಕು

ಅಧ್ಯಾಪಕರ ಸಮ್ಮೇಳನದಲ್ಲಿ ನಿರ್ಣಯ

ಬೆಂಗಳೂರು ೪

ವಿಶ್ವವಿದ್ಯಾಲಯದ ತರಗತಿಗಳಲ್ಲಿ ಕನ್ನಡ ಮಾಧ್ಯಮವನ್ನು ಜಾರಿಗೆ ತರುವಂತೆ ಸೂಚಿಸಿ, ಅಧ್ಯಕ್ಷತೆ ವಹಿಸಿದ್ದ ವೈಸ್ ಛಾನ್ಸಲರು ತಂದಿದ್ದ ನಿರ್ಣಯವನ್ನು ವಿಶ್ವವಿದ್ಯಾಲಯದ ಅಧ್ಯಾಪಕರ ಸಮ್ಮೇಳನವು ನೆನ್ನೆ ೬೦-೩೦ ಓಟುಗಳಿಂದ ಅಂಗೀಕರಿಸಿತು. ಎರಡು ಕಡೆಯ ಬಿರುಸಾದ ಚರ್ಚೆಗಳಾದುವು.

ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಹೆಚ್ಚು ಸಂಬಳ

ವಿಶ್ವವಿದ್ಯಾಲಯದ ಅಧ್ಯಾಪಕರ ಸಂಬಳಗಳನ್ನು ಹೆಚ್ಚಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದೆಂದು ವೈಸ್ ಛಾನ್ಸಲರರು ತಿಳಿಸಿದರು. ಈ ಬಗ್ಗೆ ಅಧ್ಯಾಪಕರ ಸಂಘಕ್ಕೆ ಸರ್ಕಾರದವರು ಪತ್ರ ಬರೆದಿರುವರು. ಸಂಬಳ ಹೆಚ್ಚಿಸುವಂತೆ ಸಂಘವು ಕೋರಿದ್ದಿತು.

ರಾಬರ್ಟ್‌ಸನ್‌ಪೇಟೆಯಲ್ಲಿ ಸಂಸ್ಥಾನದ ಸಹಕಾರ ಸಮ್ಮೇಳನ

ಮೈಸೂರು ಸಂಸ್ಥಾನದ ಆರನೇ ಸಹಕಾರ ಸಮ್ಮೇಳನವು ಇದೇ ೨೧ ಮತ್ತು ೨೨ರಂದು ಕೋಲಾರದ ಚಿನ್ನದ ಗಣಿ ಪ್ರದೇಶದ ರಾಬರ್ಟ್‌ಸನ್‌ಪೇಟೆಯಲ್ಲಿ ಸಮಾವೇಶಗೊಳ್ಳುವುದು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚೆನ್ನಯ್ಯನವರು ಅಧ್ಯಕ್ಷತೆ ವಹಿಸುವರು. ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಆರಂಭೋತ್ಸವವನ್ನು ನೆರವೇರಿಸುವರು.

ಬಳ್ಳಾರಿ ಬಗ್ಗೆ ಆಂಧ್ರ ಸರ್ಕಾರದ ಹೊಸ ಕೋರಿಕೆ

ತುಂಗಭದ್ರಾ ಯೋಜನೆ ಪ್ರದೇಶದ ಬಗ್ಗೆ ಆಂಧ್ರ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಹೊಸ ಕೋರಿಕೆಯನ್ನು ಸಲ್ಲಿಸಿರುತ್ತಾರೆ. ಹಿಂದಿನ ಬೇಡಿಕೆಗೂ ಇದಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಪೂರ್ತಿ ಸಿರುಗುಪ್ಪ ತಾಲ್ಲೂಕು, ಹೈಲೆವೆಲ್ ಕಾಲುವೆ ಆಯಕಟ್ಟಿನೊಳಗೆ ಬರದಿರುವ ೪ ಹಳ್ಳಿಗಳನ್ನು ಬಿಟ್ಟು ಪೂರ್ತಿ ಬಳ್ಳಾರಿ ತಾಲ್ಲೂಕು ಮತ್ತು ೮ ಹಳ್ಳಿಗಳನ್ನು ಬಿಟ್ಟು ಪೂರ್ತಿ ಹೊಸಪೇಟೆ ತಾಲ್ಲೂಕು, ಮಲ್ಲಾಪುರ ಸಬ್ ತಾಲ್ಲೂಕು (ಈ ಪ್ರದೇಶವು ಮುಳುಗಡೆ ಆಗುವ ಪ್ರದೇಶ) ಮತ್ತು ಹೈಲೆವೆಲ್ ಕಾಲುವೆ ಹೋಗುವ ಹೋಸ್ಪೆಟ್ ಫಿರ್ಕಾದ ೪ ಹಳ್ಳಿಗಳನ್ನು ಆಂಧ್ರಕ್ಕೆ ಒಪ್ಪಿಸುವಂತೆ ಆಂಧ್ರ ಸರ್ಕಾರದವರು ಕೇಳಿರುತ್ತಾರೆ. ೧೯೫೧ರ ಜನಗಣತಿಯ ಪ್ರಕಾರ, ಬಳ್ಳಾರಿ ತಾಲ್ಲೂಕಿನಲ್ಲಿ ಶೇಕಡ ೫೦, ಹೊಸಪೇಟೆ ಮತ್ತು ಸಿರುಗುಪ್ಪ ತಾಲ್ಲೂಕುಗಳಲ್ಲಿ ಶೇಕಡ ೬೦ರಷ್ಟು ಆಂಧ್ರರು ಇರುವರೆಂದು ಆಂಧ್ರ ಸರ್ಕಾರದವರು ಸೂಚಿಸಿರುತ್ತಾರೆ.

ಸೆನೆಟ್ ಸಭೆ

ವಿಶ್ವವಿದ್ಯಾಲಯದ ಸೆನೆಟ್ ಸಭೆಯು ಇದೇ ೭ನೇ ತಾರೀಖು ಮಧ್ಯಾಹ್ನ ೧೨ ಗಂಟೆಗೆ ನಗರದ ಕ್ರಾಫರ್ಡ್ ಭವನದಲ್ಲಿ ಸೇರುವುದು.

ಆಕಾಶದಲ್ಲಿ ಜಲಜನಕ ಬಾಂಬಿನ ಪರೀಕ್ಷೆ ?

ಆಸ್ಟ್ರೇಲಿಯಾ ಮತ್ತು ದಕ್ಷಿಣ ಧ್ರುವ ಪ್ರದೇಶದ ನಡುವೆ ಇರುವ, ಮಂಜುಗಡ್ಡೆಯಿಂದ ಆವೃತವಾದ ಸಮುದ್ರ ಪ್ರದೇಶದ ಬಳಿ ಅಂತರಿಕ್ಷದಲ್ಲಿ ಬ್ರಿಟನ್ನು ತನ್ನ ಪ್ರಥಮ ಜಲಜನಕ ಬಾಂಬನ್ನು ಸಿಡಿಸಲು ಏರ್ಪಾಡು ಮಾಡುತ್ತಿರುವುದಾಗಿ ಗೊತ್ತಾಗಿದೆ. ಆ ಸ್ಥಳದಲ್ಲಿ ಪ್ರಯೋಗವು ನಡೆದರೆ, ಅದರ ಪರಿಣಾಮಗಳನ್ನು ಪರೀಕ್ಷೆ ಮಾಡಲು ಸಾಧ್ಯವಾಗುವುದಿಲ್ಲವೆಂದು ಲಂಡನ್ನಿನ ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯು ತಿಳಿಸಿದೆ. ಅಮೇರಿಕವು ಹಿಂದೆ ಪ್ರಯೋಗ ಪರೀಕ್ಷೆ ನಡೆಸಿ ಅದರಿಂದ ಜಪಾನಿನ ಹಲವರಿಗೆ ಸಾವುನೋವು ಸಂಭವಿಸಿದಂತೆ ಆಗದಿರಲೂ ಮತ್ತು ರಷಿಯಾದ ಪ್ರತಿಕ್ರಿಯೆಗಳಿಂದ ಪಾರಾಗಲೂ ಬ್ರಿಟನ್ನು ದಕ್ಷಿಣ ಸಾಗರದ ಬಳಿ ಪ್ರಯೋಗ ನಡೆಸುವುದೆಂದು ಗೊತ್ತಾಗಿದೆ.

ಭಾರತಕ್ಕೆ ಡಲ್ಲೆಸರ ಭೇಟಿ ಸಂಭವ

ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು ಬರುವ ಮಾರ್ಚಿ ತಿಂಗಳಲ್ಲಿ ಭಾರತಕ್ಕೆ ಭೇಟಿ ಕೊಡುವರೆಂದು ವರದಿಯಾಗಿದೆ. ಭಾರತದಲ್ಲಿರುವ ಅಮೆರಿಕನ್ ರಾಯಭಾರಿ ಜಾನ್ ಕೂಪರರು ಅಮೆರಿಕಕ್ಕೆ ಸಧ್ಯದಲ್ಲೇ ಹಿಂದಿರುಗುವರೆಂದೂ, ಆವರೊಡನೆ ಡಲ್ಲೆಸ್ ಭೇಟಿ ವಿಚಾರವನ್ನು ಕುರಿತು ಚರ್ಚೆ ನಡೆಯುವುದೆಂದೂ ಹೇಳಲಾಗಿದೆ. ಮಾರ್ಚಿಯಲ್ಲಿ ಕರಾಚಿಯಲ್ಲಿ ನಡೆಯುವ ಆಗ್ನೇಯ ಏಷ್ಯಾ ರಕ್ಷಣಾ ಒಪ್ಪಂದ ಕೂಟದ ಸಮ್ಮೇಳನದಲ್ಲಿ ಭಾಗವಹಿಸಲು ಡಲ್ಲೆಸರು ಕರಾಚಿಗೆ ಬರುವರು.

ಭಾರತಕ್ಕೆ ಅಮೆರಿಕದ ೪ ರೈಲು ಇಂಜನ್ನು ಬಹುಮಾನ

ಮೈಸೂರು ರಾಜ್ಯಕ್ಕೆ ೬,೦೬,೪೦೦ ರೂ ಗಳು ದೊರೆತಿವೆ. ಈ ಹಣದಲ್ಲಿ ೫,೩೦,೩೯೦ ರೂ ಗಳನ್ನು ರೇಷ್ಮೆ ಸಂಶೋಧನಾ ನಿಲಯದ ಸ್ಥಾಪನೆಗೂ ೧೬,೫೦೦ ರೂ. ಗಳನ್ನು ಕೃಷ್ಣರಾಜಪೇಟೆ ಮತ್ತು ಬಿಳಿಗಿರಿರಂಗನ ಬೆಟ್ಟಗಳಲ್ಲಿ ವಿದೇಶೀ ಜಾತಿಯ ರೇಷ್ಮೆ ಮೊಟ್ಟೆಗಳ ನಿಲಯಗಳ ಸ್ಥಾಪನೆಗೂ ಮತ್ತು ೫೦,೦೦೦ ರೂ ಗಳನ್ನು ರೇಷ್ಮೆ ಮೊಟ್ಟೆಗಳನ್ನು ಉತ್ಪಾದನೆ ಮಾಡುವವರಿಗೆ ರೆಫ್ರಿಜರೇಟರ್‌ಗಳನ್ನು ಒದಗಿಸಲೂ ಕೊಡಲಾಗುವುದು. ರೇಷ್ಮೆ ಹುಳು ಪೋಷಣೆ ಬಗೆಗೆ ಸಂಶೋಧನೆ ಚನ್ನಪಟ್ಟಣದಲ್ಲಿರುವ ರೇಷ್ಮೆ ಹದ (ಕಂಡಿಷನಿಂಗ್) ಮಾಡುವ ಮತ್ತು ಪರೀಕ್ಷಾ ಭವನವನ್ನು ಬೆಂಗಳೂರಿಗೆ ವರ್ಗಾಯಿಸಲು ಮತ್ತು ಕಸಿ ಮಾಡುವ (ಗ್ರಾಫ್ಟ್ ನರ್ಸರಿ) ಯೋಜನೆಯನ್ನು ಪುನಃ ಮುಂದುವರಿಸುವುದಕ್ಕೆ ... ರೂ ಗಳನ್ನು ಕೊಡಲಾಗಿದೆ.

ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿ ಪಶ್ಚಿಮ ಬಂಗಾಳಕ್ಕೆ ೧,೬೬,೫೦೦ ರೂ ಗಳೂ, ಮದ್ರಾಸಿಗೆ ೮೬,೨೦೦ ರೂ ಗಳೂ, ಅಸ್ಸಾಮಿಗೆ ೪೯ ಸಾವಿರ ರೂ ಗಳೂ ಮತ್ತು ಉತ್ತರ ಪ್ರದೇಶಕ್ಕೆ ೨,೫೦೦ ರೂ ಗಳೂ ದೊರೆತಿವೆ.

ಬೊಂಬಾಯಿ ಬಗ್ಗೆ ನಾಳಿದ್ದು ಹೈಕಮಾಂಡಿನ ತೀರ್ಪು

ಬೊಂಬಾಯಿ ಸಂಸ್ಥಾನದ ಬಗ್ಗೆ ಮಹಾರಾಷ್ಟ್ರ ಮತ್ತು ಗುಜರಾತು ಕಾಂಗ್ರೆಸ್ ಮುಖಂಡರಲ್ಲಿ ಒಪ್ಪಂದವಾಗದೇ ಇರುವ ಪ್ರಯುಕ್ತ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಉಪ ಸಮಿತಿಯವರು ತಮ್ಮ ಅಂತಿಮ ನಿರ್ಧಾರವನ್ನು ಜನವರಿ ೯ಕ್ಕೆ ಮುಂದೂಡಿರುತ್ತಾರೆ. ಪಂಜಾಬ್ ಮತ್ತು ತೆಲಂಗಾಣ ಪ್ರಶ್ನೆಗಳೂ ಅಂದು ಪರಿಶೀಲಿಸಲ್ಪಡುವುವು.

ಶಂಕರರಾವ್ ದೇವರಿಂದ ಉಪವಾಸವೇ?

ಸಂಯುಕ್ತ ಮಹಾರಾಷ್ಟ್ರ ಸಂಸ್ಥಾನದ ಸ್ಥಾಪನೆ ಸಂಬಂಧದಲ್ಲಿ ಪ್ರಯತ್ನ ನಡೆಸಿ ವಿಫಲಗೊಂಡಿರುವ ಮಹಾರಾಷ್ಟ್ರ ಪರಿಷತ್ತಿನ ಅಧ್ಯಕ್ಷ ಶಂಕರರಾವ್ ದೇವ್‌ರವರು ಆಮರಣಾಂತ ಉಪವಾಸ ಕೈಗೊಳ್ಳಲು ಆಲೋಚಿಸಿರುವರೆಂದೂ, ಅವರ ಹಲವು ಸ್ನೇಹಿತರು ಅವರನ್ನು ತಡೆಯುತ್ತಿರುವರೆಂದೂ ಗೊತ್ತಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಅಪೂರ್ವ ಕನ್ನಡ ಪದಗಳು ೭ ೩೦ ವಾದ್ಯ ಸಂಗೀತ ೮ ೧೫ ನಾಟಕ "ಬೀಗರ ಒಬ್ಬರು" ಮಧ್ಯಾಹ್ನ ೧೨ ೩೦ ಜನಪದ-ಸಂಗೀತ ೧೨ ೪೦ ವಾದ್ಯ ಸಂಗೀತ ೧ ೪೦ ವಿಚಾರ ೧-೫೦ ಎಂ ಡಿ ರಾಮನಾಥ—ಸಂಗೀತ. ಸಂಜೆ ೫-೪೦ ಮಕ್ಕಳ ... ೬-೪೦ ವಿ ಸಿ ... —ಸಂಗೀತ. ೬-೧೫ ... ನಾಡು ಮತ್ತು ನಮ್ಮವರು ೬ ೪೦ ನೃತ್ಯ ಗೀತೆ ... ಮತ್ತು ೧೦ ವಿ ವಿ ... ಸಂಗೀತ ೯-೪೦ ರಾಷ್ಟ್ರೀಯ ಕಾರ್ಯಕ್ರಮ ಭಾಷಣ. ೮-೪೫ ... ೯-೧೫ ಕನ್ನಡ ಗೀತೆಗಳು

ಸಮೀರ ಬೋಧಕ ವಿದ್ಯಾಲಯ,

ಚಾಮುಂಡಿಪುರಂ, ಮೈಸೂರು

ಈ ಕಾಲೇಜಿನ 1956 ನೇ ಇಸವಿ ತರಗತಿಗಳು ಸರ್ವೋದಯದ ದಿನ (30-1-1956) ರಂದು ಪ್ರಾರಂಭಿಸಲ್ಪಡುತ್ತವೆ. ಕಾಲೇಜಿಗೆ ಸೇರಲು ಅಪೇಕ್ಷಿಸುವವರು ಪ್ರಿನ್ಸಿಪಲ್‌ರವರಿಗೆ ಜನವರಿ 15 ನೇ ತಾರೀಖಿನ ಒಳಗೆ ಬರೆದುಕೊಳ್ಳಬಹುದು. ಪ್ರವೇಶ ಧನ ಮತ್ತು ಅರ್ಜಿ ಫಾರಂಗಾಗಿ ಮೂರು ರೂಪಾಯಿಗಳನ್ನು ಮುಂಗಡವಾಗಿ ಕೊಡಬೇಕು

ಶಾಲೆಗಳಲ್ಲಿ ಯೋಗ ವ್ಯಾಯಾಮ ಮತ್ತು ಪ್ರಾಣಾಯಾಮ ...

ವಿದ್ಯಾರ್ಥಿಗಳ ಆರೋಗ್ಯ... ದಲು ಎಲ್ಲಾ ವಿದ್ಯಾ ಸಂಸ್ಥೆಗಳಲ್ಲಿ... ವ್ಯಾಯಾಮ ಮತ್ತು ಪ್ರಾಣಾಯಾ... ಕಡ್ಡಾಯವಾಗಿ ಕಲಿಸಲು ಸೂಕ್ತ ... ಕೈಗೊಳ್ಳುವಂತೆ ಅಖಿಲ ಭಾರತ ... ಕರ ಸಮ್ಮೇಳನವು ಭಾರತ ಸರ್ಕಾರ... ಒತ್ತಾಯಪಡಿಸುವ ನಿರ್ಣಯವನ್ನು ...

ಪಾಂಡಿಚೆರಿಯಲ್ಲಿ ಚುನಾವಣೆ... ಸರ್ಕಾರದ ರಾಜೀನಾಮೆ

ಕಳೆದ ತಿಂಗಳು ಪಾಂಡಿಚೆರಿಯ ... ನ್ನು ವಿಸರ್ಜಿಸಿದುದು ಅಕ್ರಮವೆಂದು ... ಜ್ಯಾಂಗ ಮಂಡಲಿಯು ಹೇಳಿರುವುದ... ದ್ದಾರೆ. ಮಂತ್ರಿಮಂಡಲವು ಏಪ್ರಿ... ಲ್ ತಿಂಗಳಲ್ಲಿ ನಡೆಸಬೇಕೆಂದು ಗೊತ್ತು... ನಾವಣೆಗಳನ್ನು ರದ್ದುಪಡಿಸಿದೆ. ಶಾಸನ... ವಿಸರ್ಜನೆಯನಂತರ ಸ್ಥಾಪಿತವಾದ ... ಸರ್ಕಾರವು ರಾಜೀನಾಮೆ ಕೊಡಲಿದೆ.

ಭಾರತಕ್ಕೆ ಜರ್ಮನಿಯ ಉಪ ಪ್ರಧಾನಿ ಆಗಮನ

ಜರ್ಮನಿಯ ಫೆಡರಲ್ ರಿಪಬ್ಲಿಕ್... ಪ್ರಧಾನ ಮಂತ್ರಿ ಡಾ|| ಫ್ರಾನ್ಜ್ ಬ್ಲೂ... ರು ಭಾರತಕ್ಕೆ ಇದೇ ೧೦ರಂದು ಬರು... ವರು ರಾಷ್ಟ್ರದಲ್ಲಿ ೧೯ ದಿನಗಳ ಕಾಲ ... ಕೈಗೊಳ್ಳುವರು.

ಬಿರುಗಾಳಿ ಸಂತ್ರಸ್ತರಿಗೆ ಕೇಂದ್ರ ... ಸಂಸ್ಥೆಯಿಂದ ಆಹಾರದ ನೆರವು

ಮದ್ರಾಸಿನಲ್ಲಿ ಇತ್ತೀಚೆಗೆ ಬಿರುಗಾಳಿ ಮಳೆ ಅನಾಹುತದಿಂದ ನೊಂದವರ ... ರ್ಥವಾಗಿ ಇಲ್ಲಿನ ಕೇಂದ್ರ ಆಹಾರ ... ನಾಲಯದವರು ಅಗ್ಗವಾದ ಮತ್ತು ... ದಾನ ೨೦ ಟನ್ನು ಮೈಸೂರು ಹಿಟ್ಟನ್ನು ... ಸಿಕೊಟ್ಟಿರುವರು

"ಫ್ಲೈಯಿಂಗ್ ಟೇಬಲ್" ತಯಾರಿಕೆ

ಅಮೆರಿಕದ ಕಂಪೆನಿಯೊಂದು ಫ್ಲೈ... ಟೇಬಲ್ ಎಂಬ ಹಾರುವ ಉಪಕರಣ... ನ್ನು ತಯಾರಿಸಿರುವುದಾಗಿ ಗೊತ್ತಾಗಿ... ದು ಬೇಕಾದರೂ ೨೦ ನಿಮಿಷಗಳ ಶಿಕ್ಷಣ... ರ ಇದನ್ನು ಹಾರಿಸಬಹುದಾಗಿದೆ. ಅಂ... ಟೇಬಲ್‌ಗಳಿಗೆ ಅಮೆರಿಕಾ ಸೈನ್ಯ... ಯವರು ಆರ್ಡರ್ ಕೊಟ್ಟಿರುವರು

ನಿಜಾಮ ಆದ ಉಪಾಧ್ಯಾಯರ ಆಮರಣಾಂತ ಉಪವಾಸ

ಪ್ರಾದೇಶಿಕ ಭಾಷಾ ಪರೀಕ್ಷೆಯಲ್ಲಿ ... ಣರಾಗದಿದ್ದುದಕ್ಕಾಗಿ ಕೆಲಸದಿಂದ ... ಹೈದರಾಬಾದಿನ ೫೦೦ ಮಂದಿ ... ಶಾಲಾ ಉಪಾಧ್ಯಾಯರುಗಳು ತಮ್ಮ... ದು ವಾರದೊಳಗೆ ಪುನಃ ನೌಕರಿಗೆ ... ದಿದ್ದರೆ ಆಮರಣಾಂತ ಉಪವಾಸ ... ಗಿ ಅಲ್ಲಿನ ಸರ್ಕಾರಕ್ಕೆ ಅಂತಿಮ ... ಟುವರೆಂದು ವರದಿಯಾಗಿದೆ.

ವ್ಯಾಯಾಮದ ಬಗ್ಗೆ ಅಮೆರಿಕದ ... ಪ್ರತಿನಿಧಿ ಭಾಷಣ

ಅಮೆರಿಕದ ವ್ಯಾಯಾಮ ಪ್ರತಿನಿಧಿ... ಯ್ಸ್ ಸಿ ವಿಂಟರ್ ಮತ್ತು ಜಾರ್... ರವರು ನಾಳೆ ಬೆಳಿಗ್ಗೆ ೯ ಘಂಟೆಗೆ ... ರಾಜೇಂದ್ರ ಅರಸು ಬೋರ್ಡಿಂಗ್ ... ವ್ಯಾಯಾಮದ ಬಗ್ಗೆ ಭಾಷಣಗಳನ್ನು ... ವರು. ವ್ಯಾಯಾಮಕ್ಕೆ ಸಂಬಂಧಿಸಿದ ... ಚಿತ್ರಗಳನ್ನೂ ಪ್ರದರ್ಶಿಸಲಾಗುವುದು

ಲಕ್ಷ್ಮೀ ★ 7-1-56 ... 3 ಆಟ...

ಎಂ. ಎ ವಿ. ಪಿಕ್ಚರ್ಸ್‌ರವರ ...

★ ಟ್ರಾಕ್ ಬಸ್...

Edited, Printed and P... by A. K. Nagarajan at ... Press, D.Subbiah Road, ...

ರಿಜಿಸ್ಟರ್ ನಂ. 792

ಸಂಸ್ಥಾನದ ವಿಶ್ವವಿದ್ಯಾಲಯದ ಪ್ರಕಾಶಕರಿಂದ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಅಂದಿನ ಪತ್ರಿಕೆ ೩ ಕಾಸು
ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ: ೧೭] SADHVI : SUNDAY 8-1-1956 ಮೈಸೂರು ಭಾನುವಾರ : ೮-೧-೧೯೫೬ [ಸಂಚಿಕೆ: ೧೭೪

ಕಾಶಿ ಬಳಿ ರೈಲುಗಳಿಗೆ ಢಿಕ್ಕಿಯಾಗಿ ೧೧ ಜನರ ಮರಣ

ಕಾಲೇಜುಗಳಲ್ಲಿ ಶಿಕ್ಷಣ ಶುಲ್ಕ ಹೆಚ್ಚುವ ಸಂಭವ

ಸೆನೆಟ್ ಸಭೆಯಲ್ಲಿ ವೈಸ್ ಚಾನ್ಸಲರ ಸೂಚನೆ

ಮೈಸೂರು ೭

ನೆನ್ನೆ ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ ಟಿ. ಕೆ ನಾರಾಯಣರಾಯರ ಪ್ರಶ್ನೆಗೆ ವೈಸ್ ಚಾನ್ಸಲರು ಉತ್ತರವಿತ್ತು, ವೈದ್ಯಶಾಸ್ತ್ರದಲ್ಲಿ ಎಸ್ ಸಿ ಮತ್ತು ಎಂ. ಡಿ ತರಗತಿಗಳ ಆರಂಭಿಸುವ ವಿಷಯವು ವಿಶ್ವವಿದ್ಯಾಲಯ ಆಡಳಿತ ಸಮಿತಿಯ ಪರಿಶೀಲನೆಯಲ್ಲಿದೆಯೆಂದು ತಿಳಿಸಿದರು

ಪ್ರಕಟಣೆ ಶಾಖೆಯ ಕಾರ್ಯಕ್ರಮದ ಬಗ್ಗೆ ಟೀಕೆಗಳಿಗೆ ಅವರು ಉತ್ತರವಿತ್ತು, ಆ ಪ್ರಕಟಣೆಗೆ ಸೇರಿದ ೫೦ ಸಂಪುಟಗಳಲ್ಲಿ ೫೦೦ ಪುಸ್ತಕಗಳನ್ನು ವಿಶ್ವವಿದ್ಯಾಲಯವು ಕೊಡಿದೆಯೆಂದೂ, ಇವುಗಳನ್ನು ವಿದ್ಯಾಸಂಸ್ಥೆಗಳ ಪುಸ್ತಕಭಂಡಾರಗಳಿಗೆ ಉಚಿತವಾಗಿ ಹಂಚಲು ಬಿಡಲಾಗಿದೆಯೆಂದೂ ಮತ್ತು ಪುಸ್ತಕ ಜನಪ್ರಿಯವಾಗಿದೆಯೆಂದೂ ತಿಳಿಸಿದರು

ಅನಂತರ ಆಯವ್ಯಯದ ಅಂದಾಜನ್ನು ಪರಿಶೀಲಿಸಲಾಯಿತು ಅದನ್ನು ಶ್ರೀ ಎಂ ಪಿ ಎಲ್. ಶಾಸ್ತ್ರಿಗಳು ಮಂಡಿಸುತ್ತಾ, ವಿಶ್ವವಿದ್ಯಾಲಯವು ಕೈಗೊಂಡಿರುವ ನಾನಾ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿದರು ಇತರ ವಿಶ್ವವಿದ್ಯಾಲಯಗಳಿಗೆ ಹೋಲಿಸಿದಲ್ಲಿ ಮೈಸೂರಲ್ಲೂ ಸಹ ೩ ವರ್ಷದ ಬಿ ಎ ತರಗತಿಗಳನ್ನು ತೆರೆಯುವ ವಿಷಯವು ಪರಿಶೀಲನೆಯಲ್ಲಿದೆಯೆಂದೂ, ಅಲ್ಲದೆ ಕನ್ನಡ ಮಾಧ್ಯಮವನ್ನು ಜೂನಿಯರ್ ಇಂಟರ್ ತರಗತಿಗಳ ಕಳೆದ ವರ್ಷ ಜಾರಿಗೆ ತರುವಾಗ ಬೇಕಾಗುವ ಪುಸ್ತಕಗಳ ಅಚ್ಚಿಗಾಗಿ ೧ ಲಕ್ಷ ರೂ ಗಳನ್ನು ಸರ್ಕಾರದಿಂದ ಕೇಳಲಾಗುವುದಾಗಿಯೂ ಅವರು ಮೈಸೂರು ಮಹಾರಾಣಿ ಕಾಲೇಜಿನ ವಿಜ್ಞಾನ ಶಾಖೆಯೊಂದನ್ನು ತೆರೆಯಲು ೫೦ ಸಾವಿರ ಮತ್ತು ಮೈಸೂರು ನಗರದಲ್ಲಿ ಹೊಸ ಕಾಲೇಜನ್ನು ಸ್ಥಾಪಿಸಲು ೫೦ ಸಾವಿರ ರೂ ಗಳನ್ನು ನಿಗದಿ ಮಾಡಲಾಗಿದೆಯೆಂದೂ ಇತರೇ ಬಾಬುಗಳ ಖರ್ಚಿನಲ್ಲಿ ಹೋದ ವರ್ಷಕ್ಕಿಂತ ೬೦ ಸಾವಿರ ರೂ. ಹೆಚ್ಚು ವೆಚ್ಚವನ್ನು ಹಿಡಿಯಲಾಗಿದೆಯೆಂದೂ ತಿಳಿಸಿದರು

ಆಯವ್ಯಯವನ್ನು ಶ್ರೀ ಎ ಆರ್ ಶ್ರೀನಿವಾಸಮೂರ್ತಿಯವರು ಅನುಮೋದಿಸಿ, ಕನ್ನಡದ ಪ್ರಗತಿಗೆ ಕೈಗೊಂಡಿರುವ ಕ್ರಮಕ್ಕಾಗಿ ಸಂತೋಷವನ್ನು ಸೂಚಿಸಿದರು

ಶ್ರೀ ಯು ಎಲ್ ಮಾದಪ್ಪನವರು ಮಾತನಾಡಿ, ಸೆನೆಟ್ ಸಭೆಯ ಅಭಿಪ್ರಾಯವನ್ನು ತಿಳಿಯದೆ ವಿಶ್ವವಿದ್ಯಾಲಯದ ಆಡಳಿತ ಸಮಿತಿಯು ಇಂಟರ್ ತರಗತಿಗಳನ್ನು ರದ್ದುಗೊಳಿಸಲು ತೀರ್ಮಾನಿಸಿರುವುದಕ್ಕಾಗಿ ವಿಷಾದಿಸಿ ಈ ಬಗ್ಗೆ ಸರ್ಕಾರದವರು ತರಲಿರುವ ಮಸೂದೆಯನ್ನು ವಿಧಾನಸಭೆಯ ಅಧಿವೇಶನವೊಂದರಲ್ಲಿ ಚರ್ಚಿಸಬೇಕೆಂದು ಹೇಳಿದರು

ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಈಗಿನ ಸ್ಥಿತಿಯಲ್ಲಿ ಸರ್ಕಾರದವರಿಂದ ಸಹಾಯ ಬರುವುದು ಖಚಿತವೇ ?-ಎಂದು ಪ್ರಶ್ನಿಸಿದರು, ಈಗ ಆಯವ್ಯಯದಲ್ಲಿನ ಯೋಜನೆಗಳೆಲ್ಲವೂ ಸರ್ಕಾರದವರೇ ಅದ್ದರಿಂದ ಅ ದೀನವು ಸಂಸ್ಥೆಯ ಕೈ ಅವಕಾಶವಿಲ್ಲವೆಂದು ಅಧ್ಯಕ್ಷರು ತಿಳಿಸಿದರು

ಕೇಂದ್ರ ಸರ್ಕಾರದಿಂದ ಬರುತ್ತಿರುವ ಸಾಲವನ್ನು ಬಡವಿದ್ಯಾರ್ಥಿ ನಿಲಯಗಳನ್ನು ಕಟ್ಟಬೇಕೆಂದು ಶ್ರೀ ಗಂಜಿ ವೀರಪ್ಪನವರು ಸಲಹೆ ಮಾಡಿದರು

ಶ್ರೀ ನಾಗಪ್ಪನವರು ವಿಶ್ವವಿದ್ಯಾಲಯದ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸಲು ಕೈಗೊಂಡಿರುವ ಕ್ರಮದ ಬಗ್ಗೆಗಳನ್ನು ಕೇಳಿದರು ಅಧ್ಯಕ್ಷರು ಉತ್ತರವಿತ್ತು, ಉಪಾಧ್ಯಾಯರುಗಳ ಸಂಬಳವನ್ನು ಹೆಚ್ಚಿಸಬೇಕೆಂದು ಸರ್ಕಾರದವರು ಇತ್ತೀಚೆಗೆ ತಮ್ಮ ಪತ್ರವೊಂದರಲ್ಲಿ ಸೂಚಿಸಿ ಹಾಗೂ ಮದ್ರಾಸ್ ವಿಶ್ವವಿದ್ಯಾಲಯದ ಮಟ್ಟಕ್ಕೆ ಮೈಸೂರು ವಿಶ್ವವಿದ್ಯಾಲಯದ ಫೀಸನ್ನು ಹೆಚ್ಚಿಸಬೇಕೆಂದು ತಿಳಿಸಿದ್ದಾರೆಂದು ಹೇಳಿದರು

ಶ್ರೀ ಕಾಳೇಗೌಡರು ನಾತನವಾದಿ ಇಂದಿನ ಸ್ಥಿತಿಯಲ್ಲಿ ವಿಶ್ವವಿದ್ಯಾಲಯದ ಆಡಳಿತ ಮತ್ತು ಸೌಲಭ್ಯಗಳು ಮೊದಲೇ ಮುಂದುವರಿಸಿ ಈಗ ವಿನಿಮಯ ಹಿತಕರವಲ್ಲವೆಂದು ವಿಷಾದಿಸಿದರು ಹಾಗೆಯೇ ಸ್ಥಳೀಯ ವಿಶ್ವವಿದ್ಯಾಲಯಕ್ಕೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಹೇಳಿದರು ಕಾಲೇಜು ಸಮಿತಿಗಳು ರದ್ದಾಗಬಾರದೆಂದೂ ಸಹ ನುಡಿದರು

ಶ್ರೀ ನೇರಳೆ ಮಾದಯ್ಯನವರು ನಿನ್ನ ವರ್ಷದವರೆಗೆ ಉಳಿದಿರುವ ಸೌಲಭ್ಯವನ್ನು ಮುಂದುವರಿಸಬೇಕೆಂದು ಕೋರಿದರು

ಶ್ರೀ ಹೆಚ್ ಸಿ ಲಿಂಗಾರೆಡ್ಡಿಯವರು ಕಾಲೇಜುಗಳ ಮಟ್ಟವನ್ನು ಹೆಚ್ಚಿಸುವುದರಲ್ಲಿ ತಾರತಮ್ಯವಿರಬಾರದೆಂದೂ, ಮತ್ತು ಕೋಲಾರ ಬ್ರಿಟಿಷ್ ಕೇಂದ್ರಗಳಿಗೆ ಪುರಸ್ಕಾರ ನೀಡಬೇಕೆಂದೂ ನುಡಿದರು. ಶ್ರೀ ಆರ್ ತಿಮ್ಮಪ್ಪನವರು ಚಿತ್ರದುರ್ಗದ ಕಾಲೇಜುಗಳು ಶೋಚನೀಯ ಸ್ಥಿತಿಯಲ್ಲಿರುವುದನ್ನು ಹೇಳಿದರು.

ಶ್ರೀ ಎಲ್ ಶ್ರೀಕಂಠಯ್ಯನವರು ವಿಶ್ವವಿದ್ಯಾಲಯದ ವಿವಿಧ ಶಾಖೆಗಳಲ್ಲಿ ಪ್ರಗತಿಯೇ ಇಲ್ಲವೆಂದೂ ಪುಸ್ತಕಭಂಡಾರವೂ ಸಹ ಚೆನ್ನಾಗಿಲ್ಲವೆಂದೂ, ಆದ್ದರಿಂದ ಶಿಕ್ಷಣ ಮಟ್ಟವು ಉತ್ತಮವಾಗಿಲ್ಲವೆಂದೂ ಹೇಳಿ, ಪ್ರಕಟಣಾ ವಿಭಾಗಕ್ಕೆ ಇನ್ನೂ ಹೆಚ್ಚಿನ ಹಣ ಒದಗಿಸಬೇಕೆಂದು ಕೋರಿದರು ಶ್ರೀ ಎಸ್ ಎಂ ಜವಳಿಯವರು ಮಹಿಳೆಯರಿಗೆ ಕಾಲೇಜನ್ನು ತೆರೆಯಬೇಕೆಂದು ಹೇಳಿದರು

ಶ್ರೀ ಎಂ ಎಸ್. ರಾಮಸ್ವಾಮಿಯವರು ವಿದ್ಯಾರ್ಥಿ ವೇತನದ ಹಂಚಿಕೆಯ ವಿಷಯದಲ್ಲಿ ಹಲವು ಮಾರ್ಪಾಡುಗಳನ್ನು ಸೂಚಿಸಿದರು ಎಲ್ಲಾ ವಿದ್ಯಾರ್ಥಿಗಳಿಗೂ ಮಿಲಿಟರಿ ಶಿಕ್ಷಣವನ್ನು ಕೊಡಬೇಕೆಂದು ಕೋರಿದರು ಶ್ರೀಮತಿ ಮೇರಿ ಅಂಟಾಯ್ನೆಟ್ ರವರು ಎಂದಿನಂತೆ ಇಂಗ್ಲಿಷ್ ಭಾಷೆಗೆ ಪ್ರೋತ್ಸಾಹ ಬೇಕೆಂದು ಸೂಚಿಸಿದರು

ಶ್ರೀ ಎಂ. ಪಿ ಎಲ್ ಶಾಸ್ತ್ರಿಗಳು ಚರ್ಚೆಗೆ ಉತ್ತರವೀಯುತ್ತಾ, ಸದಸ್ಯರ ಸಲಹೆಗಳನ್ನು ಅಧಿಕಾರಿಗಳು ಪರಿಶೀಲಿಸುವುದಾಗಿ ಭರವಸೆಯಿತ್ತರು ಇತರ ಕಡೆಗಳಂತೆ ಇಲ್ಲಿಯೂ ಪದವಿಗೆ ೩ ವರ್ಷದ ತರಗತಿಗಳನ್ನು ಜಾರಿ ಮಾಡಲು ಯೋಚಿಸಲಾಗಿದೆಯೆಂದೂ, ಈ ಮಟ್ಟಕ್ಕೆ ಏರಲು ಕಾಲೇಜುಗಳ ಮಟ್ಟವನ್ನು ಹೆಚ್ಚಿಸುವುದು ಅವಶ್ಯಕವೆಂದೂ ಹೇಳಿದರು

ಶಿಕ್ಷಣ ಮಟ್ಟವು ಕಡಿಮೆಯಾಗುತ್ತಿದೆಂಬ ಟೀಕೆಗೆ ಉತ್ತರವಿತ್ತು, ಉನ್ನತ ಶಿಕ್ಷಣದ ಗುರಿಯನ್ನು ಮುಟ್ಟುವ ಸಾಧನೆಯಲ್ಲಿ ವಿಶ್ವವಿದ್ಯಾಲಯವು ಮುಂದುವರಿದಿದೆಯೆಂದು ತಿಳಿಸಿದರು ವಿರೋಧವಿಲ್ಲದೆ ಆಯವ್ಯಯವನ್ನು ಸಭೆಯು ಅಂಗೀಕರಿಸಿತು

ನೀರಿನ ಬಗ್ಗೆ ಆಂಧ್ರದ ಆಪಾದನೆಗೆ ಮೈಸೂರಿನ ಪ್ರತಿಭಟನೆ

ಬೆಂಗಳೂರು ೭

ಮೈಸೂರು-ಆಂಧ್ರಗಳ ನಡುವೆ ೧೯೩೩ ರಲ್ಲಿ ಆದ ನದಿ ನೀರಿನ ಒಪ್ಪಂದವನ್ನು ಮುರಿದಿರುವರೆಂದು ಆಂಧ್ರದ ಅಧಿಕಾರಿಗಳು ಮಾಡಿರುವ ಆಪಾದನೆಯನ್ನು ಪ್ರತಿಭಟಿಸಿ ಸಂಸ್ಥಾನ ಸರ್ಕಾರದವರು ಕೇಂದ್ರದವರಿಗೆ ಪತ್ರ ಬರೆಯಲಿರುವರೆಂದು ಗೊತ್ತಾಗಿದೆ ಆಂಧ್ರದವರ ಆಪಾದನೆಯು ನಿರಾಧಾರವಾದುದೆಂದು ಹೇಳಲಾಗಿದೆ ತುಂಗಭದ್ರಾ ಮೇಲ್ದಂಡೆ ಯೋಜನೆಯು ಕ್ಷೇತ್ರದ ಕೆಲ ಭಾಗಕ್ಕೆ ಮೈಸೂರು ಅಡ್ಡಿಪಡಿಸಿಲ್ಲವೆಂದೂ ಈ ಕಾಲುವೆ ಯೋಜನೆಯನ್ನು ೧೯೪೫ರಲ್ಲಿ ಮೈಸೂರು ಸರ್ಕಾರವನ್ನು ಕೇಳದೆ ಸಿದ್ಧಗೊಳಿಸಲಾಯಿತೆಂದೂ, ಈ ಯೋಜನೆ ಮುಂದುವರಿಸುವರ ಮೂಲಕ ಮೈಸೂರು ಸರ್ಕಾರಕ್ಕೆ ಈ ವಿಷಯವು ಗೊತ್ತಾಯಿತೆಂದೂ ಮೈಸೂರು ಅಧಿಕಾರಿಯೊಬ್ಬರು ತಿಳಿಸಿರುವರು ಒಟ್ಟು ೩೨,೦೦೦ ಎಕರೆ ಪ್ರದೇಶವು ವ್ಯವಸಾಯಕ್ಕೆ ಒಳಪಡುವುದೆಂದೂ ಆ ಪೈಕಿ ೨೪,೦೦೦ ಎಕರೆ ಪ್ರದೇಶವು ಕರ್ನಾಟಕದಲ್ಲೂ, ೫,೫೦೦ ಎಕರೆ ಜಮೀನು ಆಂಧ್ರದಲ್ಲೂ ಇರುತ್ತದೆಂದೂ ಗೊತ್ತಾಗಿದೆ

ಆಫ್ಘನ್ ಉಪ ರಾಯಭಾರಿಗೆ ಪಾಕಿಸ್ತಾನದ ಮನ್ನಣೆ ವಾಪಸು

ಕರಾಚಿ ನಗರದಲ್ಲಿರುವ ಆಫ್ಘನ್ ಉಪ ರಾಯಭಾರಿ ಮಹಮ್ಮದ್ ಅಕ್ಬರ್ ಖಾನ್ ರವರು ಪಾಕಿಸ್ತಾನದ ವಿರುದ್ಧ ಚಟುವಟಿಕೆಗಳಿಗಾಗಿ, ಅವರಿಗೆ ಇತ್ತ ರಾಜತಾಂತ್ರಿಕ ಮನ್ನಣೆಯನ್ನು ಪಾಕಿಸ್ತಾನ ಸರ್ಕಾರದವರು ವಾಪಸು ಪಡೆದು ಅವರು ಪುರಸ್ಕಾರಕ್ಕೆ ಪಾತ್ರರಲ್ಲವೆಂದು ಘೋಷಿಸಿರುತ್ತಾರೆ ಅವರು ಪಾಕಿಸ್ತಾನವನ್ನು ಒಂದು ವಾರದಲ್ಲಿ ಬಿಡುವಂತೆ ಸೂಚನೆ ಕೊಡಲಾಗಿತ್ತು ನೆನ್ನೆ ಅವರು ಕಾಬೂಲಿಗೆ ತೆರಳಿದರು

೧೫೦ ಜನ ಬ್ಯಾಂಕ್ ನೌಕರರ ಮೇಲೆ ಮೊಕದ್ದಮೆ

ಕಲ್ಕತ್ತದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ೧೫೦ ನೌಕರರು ಮುಷ್ಕರದಲ್ಲಿ ಭಾಗವಹಿಸಿ, ಬ್ಯಾಂಕಿನಶಿಸ್ತಿಗೆ ವ್ಯತಿರೇಕವಾಗಿ ನಡೆದರೆಂದು ಅವರ ಮೇಲೆ ಮೊಕದ್ದಮೆ ಹೂಡಲಾಗಿದೆ

ಬಳ್ಳಾರಿಯ ಪಾಲಿ ಟೆಕ್ನಿಕ್ ಕಾಲೇಜಲ್ಲಿ ಡಿಪ್ಲೊಮ ತರಗತಿ

ಬಳ್ಳಾರಿಯಲ್ಲಿರುವ ಪಾಲಿ ಟೆಕ್ನಿಕ್ ಕಾಲೇಜಿನಲ್ಲಿ ಇದೇ ತಿಂಗಳು ೩೦ನೇ ತಾರೀಖು ಸೋಮವಾರದ ದಿನದಿಂದ ಡಿಪ್ಲೊಮ ತರಗತಿಯೊಂದನ್ನು ಆರಂಭಿಸಲಾಗುವುದು

ಪ್ರಯಾಣಿಕರ ಮತ್ತು ಗೂಡ್ಸ್ ರೈಲುಗಳಿಗೆ ಢಿಕ್ಕಿ

೧೧ ಜನರ ಮರಣ

ಕಾಶಿಯ ಬಳಿ ಕಾಶಿಹಾರ್-ಸಿಮೂರ್ಬಲಗಳ ನಡುವೆ ನೆನ್ನೆ ಗೂಡ್ಸ್ ರೈಲುಗಾಡಿಗೂ, ಪ್ರಯಾಣಿಕರ ಗಾಡಿಗೂ ಢಿಕ್ಕಿಯಾಗಿ ೧೧ ಜನರು ಮರಣ ಹೊಂದಿದರೆಂದೂ ಮುಂದಿಗೆ ಗಾಯವಾಯಿತೆಂದು ವರದಿಯಾಗಿದೆ ಸ್ಥಳದಲ್ಲೇ ಹತ್ತು ಮಂದಿ ವ್ಯಕ್ತಿಗಳು ಒಬ್ಬನು ಆಸ್ಪತ್ರೆಯಲ್ಲಿ ಸತ್ತನು ೧೨ ಗೂಡ್ಸ್ ವ್ಯಾಗನ್ನುಗಳು ತಲೆಕೆಳಗಾಗಿ ಇಳಿದು ಹಳಿ ತಪ್ಪಿದುವು ಪ್ರಯಾಣಿಕರ ಗಾಡಿಯ ಇಂಜನ್ನಿಗೂ, ಮತ್ತೊಂದು ಇಂಜನ್ನಿಗೂ ಹಾನಿಯಾಗಿದೆ

ಜಾರ್ಡಾನ್ ಪ್ರಧಾನಿಯ ರಾಜೀನಾಮೆ

ಜಾರ್ಡಾನಿನ ಪ್ರಧಾನಿ ಇಬ್ರಾಹಿಂ ಹಾಷಿಂ ರವರು ಅರಸನ ದೊರೆಗೆ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ಒಪ್ಪಿಸಿರುತ್ತಾರೆ ಅವರು ೧೯ ದಿನ ಮಾತ್ರ ಅಧಿಕಾರದಲ್ಲಿದ್ದರು ದೊರೆಯು ಅಕಸ್ಮಾತ್ ಪಾರ್ಲಿಮೆಂಟನ್ನು ರದ್ದು ಮಾಡಿದುದರ ವಿರುದ್ಧವಾಗಿ ರಾಷ್ಟ್ರಾದ್ಯಂತ ನೆನ್ನೆ ಮುಷ್ಕರ ನಡೆಯಿತು.

ಗೋವಾ ಮೇಲೆ ವಿಜಯನಗರದ ರಾಜರ ವಾರಸುದಾರರ ಹಕ್ಕು !

ಉತ್ತರ ಕರ್ನಾಟಕದಲ್ಲಿರುವ ವೀರಭೋಗ ವಸಂತ ರಾಯಲು ಎಂಬುವರು ಗೋವಾ ಪ್ರದೇಶವು ತಮಗೆ ಸಲ್ಲಬೇಕೆಂದು ತಿಳಿಸಿರುತ್ತಾರೆ. ಅವರು ವಿಜಯನಗರದ ರಾಜರ ನೇರವಂಶಜರೆಂದು ಹೇಳಲಾಗಿದೆ ಕ್ರಿಸ್ತಶಕ ೧೫೧೦ ರಲ್ಲಿ ತಮ್ಮ ಪೂರ್ವಜರಿಂದ ಪಡೆದುಕೊಂಡ ರಾಜ್ಯವನ್ನು ತಮಗೆ ವಾಪಸು ಕೊಡುವಂತೆ ಅವರು ಪೋರ್ಚುಗೀಸರನ್ನು ಕೋರಿರುತ್ತಾರೆ ವಿಜಯನಗರದ ರಾಜರು ಗೋವಾವನ್ನು ಪೋರ್ಚುಗೀಸರಿಗೂ, ಪುದುಚೇರಿಯನ್ನು ಫ್ರಾನ್ಸಿಗೂ, ಮದ್ರಾಸು ತೀರವನ್ನು ವ್ಯಾಪಾರಕ್ಕಾಗಿ ಬ್ರಿಟಿಷರಿಗೂ ಕೊಟ್ಟಿದ್ದಾಗಿ ಅವರು ಹೇಳಿರುವರು

ಅಮೆರಿಕದ ಅತ್ಯಂತ ಭಾರಿ ಜಲಜನಕ ಬಾಂಬಿನ ಪರೀಕ್ಷೆ

ಅಮೆರಿಕವು ಈ ವರ್ಷದ ಆದಿ ಭಾಗದಲ್ಲಿ ಶಾಂತ ಸಾಗರದಲ್ಲಿ ಎರಡು ಜಲಜನಕ ಬಾಂಬುಗಳನ್ನು ಸಿಡಿಸಲಿದೆಯೆಂದೂ, ಇದುವರೆಗಿನ ಸಿಡಿತಗಳೆಲ್ಲಕ್ಕಿಂತ ಇದು ಅತ್ಯಂತ ಭಾರಿಯದಾಗುವುದೆಂದೂ ವರದಿಯಾಗಿದೆ

ದ್ವಿತೀಯ ಯೋಜನೆಗೆ ೪,೮೦೦ ಕೋಟಿ ರೂ.

ದ್ವಿತೀಯ ಪಂಚ ವಾರ್ಷಿಕ ಯೋಜನೆಯು ೪,೮೦೦ ಕೋಟಿ ರೂ ಒಟ್ಟು ಅಂದಾಜು ವೆಚ್ಚದಲ್ಲಿ ಭಾರಿ ಯೋಜನಾ ಆಗಬಹುದೆಂದು ರಾಷ್ಟ್ರೀಯ ಅಭಿವೃದ್ಧಿ ಮಂಡಲದ ಸ್ಥಾಯಿ ಸಮಿತಿಯು ನಿರ್ಧರಿಸಿದೆ ಆದಾಯದಲ್ಲಿ ೪೦೦ ಕೋಟಿ ರೂ ಕಡಿಮೆ ಬರುವ ನಿರೀಕ್ಷೆಯ ಬಗ್ಗೆ ಯೋಜನಾ ಯೋಜನೆಯು ಬಂದಿತ್ತು

ವಾ ರ ಭ ವಿ ಷ್ಯ

ತಾ॥ ೮-೧-೫೬ ರಿಂದ ೧೪-೧-೫೬ ರ ವರೆಗೆ

ಮೇಷ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಕೈಗೊಂಡ ಕಾರ್ಯ ವಿಫಲ ವೃಥಾ ವೈಮನಸ್ಯ ಉದ್ಯೋಗದಲ್ಲಿ ತೊಡಕುಗಳ

ವೃಷಭ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಮುಗ್ಗಟ್ಟು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ನಿರುತ್ಸಾಹ ಪ್ರಯಾಣಕ್ಕೆ ಅಡ್ಡಿ

ಮಿಥುನ —ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಕರ್ಕ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವುದು ಶುಭ ಕಾರ್ಯಗಳು ಜರುಗುವುವು ಆಸ್ತಿಪಾಸ್ತಿಗಳ ಬಗ್ಗೆ ವಿವಾದ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಡಿಮೆ

ಸಿಂಹ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವೃಥಾ ಕಲಹ ಸಂಭವ ಉದ್ಯೋಗದಲ್ಲಿ ತೊಡಕುಗಳ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ

ಕನ್ಯಾ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಶತ್ರುಗಳ ಪರಾಜಯ ನೌಕರಿಯಲ್ಲಿ ಪ್ರಶಂಸೆ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ

ತುಲಾ —ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಪರಿಸ್ಥಿತಿ ಸಮರ್ಪಕ ಮಂಗಳ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ನೌಕರಿಯಲ್ಲಿ ಪ್ರೋತ್ಸಾಹ

ವೃಶ್ಚಿಕ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವೃಥಾ ಕಲಹ ಸಂಭವ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಸಂಯಮ ಅಗತ್ಯ

ಧನು —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯವಹಾರಗಳಲ್ಲಿ ಜಯ ಉದ್ಯೋಗದಲ್ಲಿ ಪ್ರಗತಿ ಕುಟುಂಬದ ಸಮಾಧಾನದಲ್ಲಿ ನೆಮ್ಮದಿ

ಮಕರ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಕುಂಭ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಅಸಮರ್ಪಕ ಮಂಗಳ ಕಾರ್ಯಗಳ ಜರುಗುವುವು ಉದ್ಯೋಗದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ಮೀನ —ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಪ್ರಶಂಸೆ

ಭಾರತ ಸ್ಕೌಟ್ ಕಮಿಷನರ್ ಬಾಜಪೈ ನಿಧನ

ಭಾರತ ಸ್ಕೌಟುಗಳು ಮತ್ತು ಗರ್ಲ್‌ಗೈಡುಗಳ ರಾಷ್ಟ್ರೀಯ ಕಮೀಷನರಾದ ಶ್ರೀ ರಾಮ ಬಾಜಪೈಯವರು ಕಳೆದ ಗುರುವಾರ ದೆಹಲಿಯಲ್ಲಿ ನಿಧನರಾದರು ಅವರು ೭೩ ದಿನಗಳಿಂದ ಅಸ್ವಸ್ಥರಾಗಿದ್ದರು

ಸ್ಯಾನಟೋರಿಯಮ್ಮಿನ ಹೊಸ ಆರ್ ಎಂ ಓ

ಎರಡು ವರ್ಷದಿಂದ ಹಿಂದಿನ ಅಸಿಸ್ಟೆಂಟ್ ಸರ್ಜನ್ ಶ್ರೀ ಸಿ ಬಿ ನಾಯ್ಡು ರವರನ್ನು ನಗರದ ಕೃಷ್ಣರಾಜಮ್ಮಣ್ಣಿ ಸ್ಯಾನಟೋರಿಯಮ್ಮಿನ ರೆಸಿಡೆಂಟ್ ಮೆಡಿಕಲ್ ಆಫೀಸರನ್ನಾಗಿ ನೇಮಿಸಲಾಗಿದೆ ಆ ಸ್ಥಾನದಲ್ಲಿದ್ದ ಶ್ರೀ ವಿ ಎಸ್ ಅನಂತರವರು ಪ್ರಥಮ ದರ್ಜೆ ಅಸಿಸ್ಟೆಂಟರಾಗಿ ವರ್ಗವಾಗಿ ಹೋಗುವರು

ಜಮೀನು ಅಡಮಾನ ಬ್ಯಾಂಕಿಗೆ ಕಮ್ಮಿ ಬಡ್ಡಿಯಲ್ಲಿ ಹೆಚ್ಚು ಸಾಲ

ಬೆಂಗಳೂರು —

ಸಂಸ್ಥಾನದ ಜಮೀನು ಅಡಮಾನ ಬ್ಯಾಂಕಿಗೆ ಸರ್ಕಾರದವರು ಕೊಡುತ್ತಿದ್ದ ೩ ರೂ ಬಡ್ಡಿಯ ಹತ್ತು ಲಕ್ಷ ರೂಗಳ ಸಾಲದ ಬದಲು ಶೇಕಡ ೨½ ಬಡ್ಡಿ ಮೇಲೆ ೩೦ ಲಕ್ಷ ರೂ ಕೊಡಲೊಪ್ಪಿರುವುದಾಗಿ ಬ್ಯಾಂಕಿನ ಅಧ್ಯಕ್ಷ ಶ್ರೀ ಆರ್ ಅನಂತರಾಮಯ್ಯರವರು ತಿಳಿಸಿರುತ್ತಾರೆ ಬ್ಯಾಂಕು ಸ್ಥಾಪಿತವಾದಾಗಿನಿಂದ ಈ ಮವರೆಗೆ ೧,೫೦ ಲಕ್ಷ ರೂ ಸಾಲ ಕೊಡಲಾಗಿದೆಯೆಂದು ಅವರು ಹೇಳುವರು

ಮಹಾರಾಜರಿಗೆ ಭದ್ರಾವತಿ ಪೌರಸಭೆಯ ಮಾನಪತ್ರ

ಈ ತಿಂಗಳು ಕಡೆಯ ವಾರದಲ್ಲಿ ಮೈಸೂರಿನ ರಾಜಪ್ರಮುಖರು ಭದ್ರಾವತಿಗೆ ಭೇಟಿ ಕೊಡುವರು ಆಗ ಅವರಿಗೆ ಮಾನಪತ್ರ ಮತ್ತು ಮನವಿ ಪತ್ರಗಳನ್ನು ಕೊಡಲು ಅಲ್ಲಿನ ಪೌರಸಭೆಯವರು ನಿರ್ಧರಿಸಿ ಎತ್ತರಿಕೆ ಮಾನಪತ್ರ ಅರ್ಪಣೆ ಸಮಾರಂಭಕ್ಕಾಗಿ ೭೦೦ ರೂ ವೆಚ್ಚವನ್ನು ಮಂಜೂರು ಮಾಡಲಾಗಿದೆ

ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಹೊಡೆದಾಟ

ಮಧುರೈ ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯು ಬರುವ ಚುನಾವಣೋತ್ಸವ ಸಂದರ್ಭದಲ್ಲಿ ವಸ್ತು ಪ್ರದರ್ಶನವೊಂದನ್ನು ನಡೆಸುವ ಸಂಬಂಧವಾಗಿ ಸಮಿತಿ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಕೆಲವರು ಸಭಾತ್ಯಾಗ ಮಾಡಿದರೆಂದೂ ಪರಸ್ಪರ ಹೊಡೆದಾಟ ಮತ್ತು ಬೈದಾಟ ನಡೆದು ಒಬ್ಬ ಸದಸ್ಯನಿಗೆ ಗಾಯಗಳಾದುವೆಂದೂ ವರದಿಯಾಗಿದೆ

ಭಾರತೀಯ ಕ್ರಿಕೆಟ್ ಆಟಗಾರರಿಂದ ವಿಶ್ವದ ರಿಕಾರ್ಡ್

ನ್ಯೂಜಿಲೆಂಡ್ ಕ್ರಿಕೆಟ್ ಪಂದ್ಯಾವಳಿಯ ಐದನೆಯ ಟೆಸ್ಟ್ ಮ್ಯಾಚಿನಲ್ಲಿ ಭಾರತದ ಪ್ರಥಮ ಕ್ರಿಕೆಟ್ ಪಂದ್ಯಾವಳಿಗೆ ಹಟ್ಟಿ ಮತ್ತು ಉಪ ನ್ಯಾಯಕರ್ತರು ಜಂಟಿಯಾಗಿ ೪೧೩ ರನ್ನುಗಳನ್ನು ಮಾಡಿ ಸ್ಥಾಪಿಸಿದ್ದ ವಿಶ್ವದ ರಿಕಾರ್ಡನ್ನು ನಿನ್ನೆ ಮದ್ರಾಸಿನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಟೀಮುಗಳ ಆಟ ನಡೆದಾಗ ವಿನೂ ಮಂಕಡ್ ಮತ್ತು ಪಂಕಜ್‌ರಾಯ್‌ರವರು ವಿಶ್ವದ ರಿಕಾರ್ಡನ್ನು ಸ್ಥಾಪಿಸಿರುತ್ತಾರೆ ಅವರಿಬ್ಬರೂ ೪೧೩ ರನ್ನು ಮಾಡಿದ್ದರು

ರಷ್ಯಾ-ಚೀನಾ ನಡುವೆ ಹೊಸ ರೈಲು ರಸ್ತೆ

ಮಂಗೋಲಿಯ ಮೂಲಕ ರಷ್ಯಾ ಮತ್ತು ಚೀನಗಳ ನಡುವೆ ೮೦೦ ಮೈಲಿಯ ಹೊಸ ರಸ್ತೆಯನ್ನು ನಿರ್ಮಿಸಲಾಗಿದೆ ಅದು ಗೋಬಿ ಮರುಭೂಮಿಯನ್ನು ಹಾದುಹೋಗುವುದು ಕಳೆದ ವಾರ ಅದರ ಆರಂಭೋತ್ಸವವನ್ನು ಮಂಗೋಲಿಯದ ಪ್ರಧಾನಿಯವರು ನೆರವೇರಿಸಿದರು ಇದರಿಂದ ಪೀಕಿಂಗ್ ಮಾಸ್ಕೋಗಳ ನಡುವೆ ಪ್ರಯಾಣದ ದೂರವು ೬೦೦ ಮೈಲಿಯಷ್ಟು ಕಡಿಮೆಯಾಗಿದೆ

ನಗರದಲ್ಲಿ ಟ್ರ್ಯಾಕ್ಟರ್ ಪ್ರದರ್ಶನ

ಫರ್ಗೂಸನ್ ಟ್ರ್ಯಾಕ್ಟರ್ ಸಂಸ್ಥೆಯವರು ಸಂಜನಗೂಡು ತಾಲ್ಲೂಕು ಹಳ್ಳಿಯಲ್ಲಿ ಮೊನ್ನೆ ಟ್ರ್ಯಾಕ್ಟರ್ ಪ್ರದರ್ಶನವನ್ನು ಏರ್ಪಡಿಸಿದ್ದರು ಸುತ್ತಮುತ್ತಲ ಗ್ರಾಮಗಳಿಂದ ಅನೇಕ ರೈತರು ಆಗಮಿಸಿದ್ದರು ಫರ್ಗೂಸನ್ ಕಂಪೆನಿಯ ಪ್ರತಿನಿಧಿಯಾಗಿ ಸಲಹೆಗಾರರಾದ ಶ್ರೀ ಕೆ ಎಸ್ ಪ್ರಾಣೇಶರವರು ಟ್ರ್ಯಾಕ್ಟರಿನ ಕೆಲಸಕಾರ್ಯಗಳ ವಿವರಗಳನ್ನು ತಿಳಿಸಿದರು ಗ್ರಾಮದ ಸಾಹುಕಾರ್ ಶ್ರೀ ಸಿದ್ದಪ್ಪನವರು ಎಲ್ಲರನ್ನೂ ಸ್ವಾಗತಿಸಿದರು

ಬೊಂಬಾಯಿ ಭವಿಷ್ಯದ ಬಗ್ಗೆ ಕಾಂಗ್ರೆಸ್ಸಿನ ಹೊಸ ಸೂತ್ರ?

ಬೊಂಬಾಯಿ ಸಂಸ್ಥಾನದ ಭವಿಷ್ಯವನ್ನು ಕುರಿತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಚಿಕ್ಕ ಉಪಸಮಿತಿಯು ಹೊಸ ಸೂತ್ರವನ್ನು ರೂಪಿಸುವುದಾಗಿಯೂ ಗುಜರಾತು ಮತ್ತು ಮಹಾರಾಷ್ಟ್ರಗಳ ಎರಡು ಏಕ ಭಾಷಾ ಸಂಸ್ಥಾನಗಳನ್ನು ರಚಿಸಿ, ಬೊಂಬಾಯಿ ನಗರವು ಪ್ರತ್ಯೇಕವಾದ ರಾಜ್ಯವಾಗಿರುವುದೆಂದೂ, ಅದಕ್ಕೆ ಮಹಾರಾಷ್ಟ್ರದ ಒಬ್ಬ ಆಡಳಿತಗಾರರಿರುವರೆಂದೂ ಬೊಂಬಾಯಿ ಪೌರಸಭೆಗೆ ಹೆಚ್ಚಿನ ಅಧಿಕಾರವೀಯಲಾಗುವುದೆಂದೂ ಗೊತ್ತಾಗಿದೆ ಆ ನಗರವನ್ನು ಕೇಂದ್ರದ ಆಡಳಿತಕ್ಕೆ ಒಳಪಡಿಸಲಾಗುವುದೆಂದು ಹೇಳಲಾಗಿದೆ

ಗುಡ್ಡಗಾಡಿನವರಿಂದ ಪಾಕ್-ಅಫ್ಘನ್ ಗಡಿ ಗುಡ್ಡಗಳ ವಶ

ಗಡಿನಾಡಿನ ಚೆಯಿರುವ ಗುತ್ತ ಜನರ ಪ್ರದೇಶದಲ್ಲಿ ಮಹಮಂದ್ ರಾಷ್ಟ್ರೀಯಸಂಸ್ಥೆಯವರು ಪಾಕಿಸ್ಥಾನ ಅಫ್ಘಾನಿಸ್ಥಾನದ ಗಡಿ ಬಳಿ ಇರುವ ಬ್ರಿಯಾರ್ ಗುರ್ ಸಾಹೆಬ್ ಎಂಬ ಗಡಿ ರೇಖೆಯ ಸುತ್ತ ಇರುವ ಎಲ್ಲ ಗುಡ್ಡಗಳನ್ನು ವಶಪಡಿಸಿಕೊಂಡಿರುವುದಾಗಿ ಗೊತ್ತಾಗಿದೆ

ಭಾರತಕ್ಕೆ ಅಮೆರಿಕದ ಅಣು ಸಂಶೋಧನಾ ಪುಸ್ತಕ ಭಂಡಾರ

ಅಮೆರಿಕ ಸರ್ಕಾರದವರು ಅಣು ಸಂಶೋಧನಾ ಪುಸ್ತಕ ಭಂಡಾರವೊಂದನ್ನು ಮೊನ್ನೆ ಭಾರತಕ್ಕೆ ಒಪ್ಪಿಸಿದರು ಅಮೆರಿಕದ ರಾಯಭಾರಿ ಜಾರ್ಜ್ ಅಲೆನ್‌ರವರು ಅದನ್ನು ವಿಜ್ಞಾನ ಸಂಶೋಧನಾ ಡೈರೆಕ್ಟರ್ ಡಾ ಭಾಭಾರವರಿಗೆ ಕೊಟ್ಟರು

Edited Printed and Published by A K Nagarajan at Sadhvi Press D Subbiah Road Mysore

ದ್ವೈಮಾಸೋಯಿಗಳು ತೊಲಗಿ ರಾಜಾಜಿಗೆ ಉತ್ತಮ ಆರೋಗ್ಯ

ತಮ್ಮ ಆರೋಗ್ಯವು ಉತ್ತಮಗೊಳ್ಳುತ್ತಿಲ್ಲದಿರುವುದು ಕಾರಣವಲ್ಲವೆಂದೂ, ಮತ್ತು ಪ್ರಕಾ ಚಿಕಿತ್ಸೆ ... ವು, ಹೀಗಿದ್ದ ಈ ಭಾಗದಲ್ಲಿ ... ಅವರ ಪ್ರಕೃತಿ ... ಸಾಮೂಯಿಯುತ್ತು ... ದರೆ ತಮ್ಮ ಆರೋಗ್ಯವು ಉತ್ತಮಗೊಳ್ಳುವುದೂ ರಾಜಾಜಿಯವರು ತಿಳಿಸಿದ್ದಾರೆ ... ೭೭ನೇ ವರ್ಷದ ... ಸಮಾರಂಭದಲ್ಲಿ ಮದ್ರಾಸಿನ ... ಗವರ್ನರ್ ... ಪಟ್ಟಾಭಿಯವರು ... ತಿ, ರಾಜಾಜಿಯವರ ಆರೋಗ್ಯದ ಬಗ್ಗೆ ... ರವನ್ನು ವ್ಯಕ್ತಪಡಿಸಿ, ಅವರ ದೇಹಸ್ಥಿತಿ ಉತ್ತಮಗೊಳ್ಳಲು ಅವರ ಬುದ್ಧಿಗುಣ ... ಯದ ಕೆಲಸವನ್ನು ಕೈಕರೆಯಿಂದು ... ದ್ದರು

ಚಿಯಾಂಗ್ ಕೈಷೇಕರಿಗೆ ಅಮೆರಿಕದ ಅಣು ಬಾಂಬ್

ಚೀನಾ ಕಮ್ಯೂನಿಸ್ಟರು ... ದ ಮೇಲೆ ಧಾಳಿ ಮಾಡಿದರೆ, ... ಅವರಿಗೆ ಅಣು ಬಾಂಬುಗಳನ್ನು ... ದೆಂದು ಅಮೆರಿಕದ ... ಜನರಲ್ ... ಚೆಂಗಲೂರು ...

[illegible]

Office of the Huzur Secretary to His Highness the Maharaja of Mysore

Notification, Dated 4th January 1956

SALE OF ELEPHANT TUSKS

It is hereby notified for general information that ab[out] 36 Elephant Tusks will be sold by public auction at Pala[ce] Office Mysore on Friday the ?th January 1956, subject [to] the conditions specified below

1) The sale will commence at 11 A M on that day

) The sale will be conducted by the Huzur Secretary [to] His Highness the Maharaja or by an Officer authorised [for] conducting the sale

) The Officer in charge conducting the sale will rese[rve] to himself the right of accepting or rejecting any bid with[out] assigning any reason therefor

4) Intending Bidders must deposit Rs.100 as advance w[ith] the Officer conducting the Auction, before they are permi[tted] to bid Such deposits will be returned to the unsuccessful bid[ders] at the close of the sale

) Full Sale amount shall be paid on the date of sale [in] default the sale will be cancelled and the deposit amount w[ill] be forfeited to Palace

6) Sales Tax at the prescribed rate will be recovered [on] the date of sale on the full sale amount

) The Tusks are open to inspection in the Palace Of[fice] during Working Hours

8) They will be delivered on confirmation of sale w[hich] will be intimated in due course.

For other particulars please apply to the Huzur Secre[tary] to His Highness the Maharaja of Mysore

J B MALLARADHYA,

Huzur Secretary to H H the Maharaja of My[sore]

ಪ್ರಭು ದೇವಾ ಥಿಯೇಟರ್

(ಸದ್ದು ಟಾಕೀಸ್)

13—1—56ರಿಂದ ಮೂರು ಆಟಗಳು : ಆರೋಗ್ಯ ಮ್ಯಾಟಿನಿ

• ಶ್ರೀ ಕೃಷ್ಣ ತುಲಾ ಭಾರಂ •

ರಾಜಕುಮಾರಿ ಫಿಲಂ ಕಂಪೆನಿಯವರ ತೆಲುಗು ಚಿತ್ರ — ಮುಖ್ಯ ಪಾತ್ರದಲ್ಲಿ ಎಸ್ ವರಲಕ್ಷ್ಮಿ, ಜಮುನಾ, ಕಾಂತರಾವ್, ರೇಲಂಗಿ, ಹರನಾಥ ಮುಂತಾದವರು

ರಿಜಿಸ್ಟರ್ ನಂ. 793

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಆಣೆ
ಗ್ರ್ಯಾ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ದಿಂಡಿಗಲ್
ರೇಷ್ಮೆ ಮತ್ತು ಜರತಾರ ಸೀರೆಗಳು
ವಿಧವಿಧವಾದ ನಮೂನೆಗಳಲ್ಲಿ
ಬಂದಿವೆ ಇಂದೇ ಭೇಟಿ ಕೊಡಿ
M.V ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಂಪುಟ ೧೯] SADHVI MONDAY 9-1-1956 ಮೈಸೂರು ಸೋಮವಾರ : ೯-೧-೧೯೫೬ [ಸಂಚಿಕೆ : ೦೯೯

ಜಾರ್ಡಾನಿನಲ್ಲಿ ಪುನಃ ಗಲಭೆ : ಅನಿರ್ದಿಷ್ಟಕಾಲದ ಕರ್ಫ್ಯೂ

ಬಾಗ್ದಾದ್ ಒಪ್ಪಂದ ವಿರುದ್ಧದ ಪ್ರದರ್ಶನ

ಜಾರ್ಡಾನ್ ನಗರಗಳಲ್ಲಿ ಕರ್ಫ್ಯೂ

ಬಾಗ್ದಾದ್ ಒಪ್ಪಂದವನ್ನು ವಿರೋಧಿಸಿ ನೆನ್ನೆ [illegible]ನ ಜಾರ್ಡಾನ್ ದೇಶದಲ್ಲೆಲ್ಲಾ ಅಶಾಂತಿ ಮತ್ತು ಗಲಭೆಗಳಾದುವೆಂದೂ, ಹಳೇ ಜರೂಸಲೆಂ, ರಾಮಲ್ಲಾ ಮತ್ತು ಬೀರಾ ಎಂಬ ಮೂರು ನಗರಗಳಲ್ಲಿ ಅನಿರ್ದಿಷ್ಟಕಾಲದ ಕರ್ಫ್ಯೂವನ್ನು ವಿಧಿಸಲಾಯಿತೆಂದೂ ವರದಿಯಾಗಿದೆ. ಜನರು ಆಹಾರ ವಸ್ತುಗಳನ್ನು ಕೊಳ್ಳುವುದಕ್ಕೆ ಅವಕಾಶವೀಯಲು [illegible] ಗಂಟೆ ಕಾಲ ದಿನವೂ ಕರ್ಫ್ಯೂವನ್ನು ತೆಗೆಯಲಾಗುವುದು. ರಾಜಧಾನಿ ಅಮ್ಮಾನ್‌ನಲ್ಲೂ ಕರ್ಫ್ಯೂ ಇನ್ನೂ ಇದೆ. ನಗರದ ಪ್ರದರ್ಶನಕಾರರನ್ನು ಚದುರಿಸಲು ಅರಬ್ ಸೈನ್ಯವನ್ನು ಕರೆತರಲಾಯಿತು.

ಒಪ್ಪಂದಕ್ಕೆ ಜಾರ್ಡಾನು ಸೇರಕೂಡದೆಂದು [illegible] ಕಡೆಗಳಲ್ಲಿ ಗಲಭೆಗಳಾದುವೆಂದೂ, [illegible] ಮ್ಮಾನ್‌ನಲ್ಲಿರುವ ಅಮೆರಿಕದ ಉಪರಾಯಭಾರಿ [illegible] ಕಟ್ಟಡಕ್ಕೆ ಕಲ್ಲು ಬೀರಿ ಅಮೆರಿಕ ಧ್ವಜವನ್ನು ಕಿತ್ತು ಹರಿದುಹಾಕಲಾಯಿತೆಂದೂ [illegible] ತಿಳಿದಿದೆ.

[illegible] ಹಿಂದಿನ ಪ್ರಧಾನಿ [illegible] ಅವರು ನೂತನ ಮಂತ್ರಿಮಂಡಲ ರಚಿ[illegible] ತವರನ್ನು ಧೊರೆ ಹುಸೇನರು ಆಹ್ವಾನಿಸಿದರು.

[illegible] ಒಪ್ಪಂದಕ್ಕೆ [illegible] ಸೇರುವರೆ ಉತ್ತರ [illegible] ರಾಷ್ಟ್ರದಿಂದ ಪ್ರತ್ಯೇಕವಾ[illegible] ಸೇರುವುದಿಲ್ಲ ಎಂದು [illegible] ಗೊತ್ತಾಗಿದೆ.

[illegible]ಟೊ ಸಭೆಗೆ ಕಾಶ್ಮೀರದ ಪ್ರಶ್ನೆ ?

[illegible]ಯಲ್ಲಿ ಬರುವ ಮಾರ್ಚ್ ೬ನೇ ತಾರೀ[illegible] ನಡೆಯುವ ಆಗ್ನೇಯ ಏಷ್ಯಾ ರಾಷ್ಟ್ರಕೂಟದ [illegible] ಸಭೆಯಲ್ಲಿ ಕಾಶ್ಮೀರ ವಿವಾದವನ್ನು [illegible] ತರುವುದಾಗಿ [illegible] ತಿಳಿಸಿದೆ.

ಗೋವಾ ಸತ್ಯಾಗ್ರಹಕ್ಕೆ ಸ್ವಾಗತ

ನಗರದ ಜನ ಸಂಘ ಶಾಖಾ ಸಮಿತಿಗಳ ಸಭೆ [illegible] ನೆನ್ನೆ ಡಾ॥ ಎಸ್ ಆರ್ [illegible] ಅಧ್ಯಕ್ಷತೆಯಲ್ಲಿ ನಡೆದು, ಗೋವಾ ಸತ್ಯಾಗ್ರಹವನ್ನು ಪುನಃ ಇದೇ [illegible]ನೇ ತಾರೀಖಿ[illegible] ಆರಂಭಿಸಬೇಕೆಂದು ಅಖಿಲ ಭಾರತ ಸಂ[illegible] ಅಧ್ಯಕ್ಷರು ಸೂಚಿಸಿರುವುದನ್ನು ಸ್ವಾಗತಿಸು[illegible] ನಿರ್ಣಯವನ್ನು ಅಂಗೀಕರಿಸಿತು. ಗೋವಾ [illegible] ಸಂಘಟನದಲ್ಲಿರುವ ಅಖಿಲ ಭಾರತ ಜನ ಸಂ[illegible] ಕಾರ್ಯದರ್ಶಿ ಜಗನ್ನಾಥರಾವ್ ಜೋಷಿ[illegible]ವರು ಮತ್ತು ಇತರ ಭಾರತೀಯ ಸತ್ಯಾಗ್ರ[illegible] ಬಿಡುಗಡೆಗಾಗಿ ಭಾರತ ಸರ್ಕಾರದವರು [illegible] ನಡೆಸಿಲ್ಲವೆಂದು ಸೂಚಿಸಿ, ಆ ಬಗ್ಗೆ [illegible]ವನ್ನು ವ್ಯಕ್ತಪಡಿಸಲಾಯಿತು. ನಗರದಲ್ಲಿ [illegible] ಸಂಘದವರ ಸಮ್ಮೇಳನವನ್ನು ಬರುವ ಏಪ್ರಿ[illegible]ಲ್ಲಿ ನಡೆಸಬೇಕೆಂದು ಗೊತ್ತು ಮಾಡಲಾಯಿ[illegible] [illegible]ಯಲ್ಲಿ ಸೇರಿದ್ದ ಕರ್ನಾಟಕ ಪ್ರಾಂ[illegible]ಗಳ ಸಮ್ಮೇಳನದಲ್ಲಿ ಆದ ನಿರ್ಣಯಗಳನ್ನು [illegible] ಸ್ವೀಕರಿಸಿತು.

ಪಾಕಿಸ್ಥಾನವು ಇಸ್ಲಾಂ ರಾಜ್ಯವಾಗುವುದು

ರಾಜ್ಯಾಂಗದ ಕರಡಿನ ವಿವರಗಳು

ಪಾಕಿಸ್ತಾನಕ್ಕೆ ರಾಜ್ಯಾಂಗವನ್ನು [illegible] ಬಗ್ಗೆ ಕರಡು ಪ್ರತಿಯೊಂದು ಪ್ರಕಟವಾಗಿದೆ. ಅದನ್ನು ಈ ದಿನ [illegible] ಮಂಡಿಸಲಾಗುವುದು. [illegible] ಸ್ಥಾನವು ಇಸ್ಲಾಂ [illegible] ಎಂದು [illegible] ದುವುದೆಂದೂ [illegible] ಮುಖ್ಯ [illegible] ಧಿಪತಿಯಾಗಬೇಕು [illegible] ಕೊರಾನ್ ಮತ್ತು [illegible] ಕೆ ಇರುವ [illegible] ಕವಾಗಿರುವ [illegible] ವುದಿಲ್ಲವೆಂದು [illegible] ತಿಳಿಸಿದೆ.

ಅಲ್ಲಿ [illegible] ನಸಭೆಯು [illegible] ಕಿಸ್ತಾನಗ[illegible] ರುವುದು [illegible] ಯ ಸಭೆ ಮತ್ತು [illegible] ಅರಿಸುವರು [illegible] ಉಪಾಧ್ಯಕ್ಷರ[illegible] ಮಾನವೆಲ್ಲಿ [illegible] ತ್ತು ಜಮ್ಮು ಸಂಸ್ಥಾನ[illegible] ಲು ನಿರ್ಧ[illegible] ಅಲ್ಲಿನ ಪ್ರಜೆಗ[illegible] ಪ್ರಕಾರ [illegible] ಲಾಗುವುದೆಂದೂ ಸೂಚಿಸಲಾಗಿದೆ.

ಕಚ್ ಸಂಸ್ಥಾನದಲ್ಲೆಲ್ಲಾ ಪೂರ್ಣ ಪಾನ ನಿರೋಧ

ಕೇಂದ್ರ ಸರ್ಕಾರದ ಆಡಳಿತಕ್ಕೆ [illegible] ವ ಕಚ್ ಸಂಸ್ಥಾನದಲ್ಲೆಲ್ಲಾ ಪೂರ್ಣ ಪಾನ ನಿರೋಧವು ಜಾರಿಗೆ ಬರಲಿದೆ. ಅಲ್ಲಿನ ಕಮಿಷನರ್ ಎಸ್ ಎ ಘಾಟೆಯವರ ಅಧ್ಯಕ್ಷತೆಯಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಈ ಬಗ್ಗೆ ನಿರ್ಧಾರವನ್ನು ಕೈಗೊಳ್ಳಲಾಗಿದೆ. ಇದರಿಂದ ಸಂಸ್ಥಾನದ ಬೊಕ್ಕಸಕ್ಕೆ ೪॥ ಲಕ್ಷ ರೂ. ವರಮಾನವು ಬರುವುದು ನಿಂತುಹೋಗುವುದು.

ಕೃಷ್ಣರಾಜಸಾಗರ ಮುಳುಗಡೆ ಪ್ರದೇಶದಲ್ಲಿ ಗೋಕುಲೇಶ್ವರ ವಿಗ್ರಹ

ಕೃಷ್ಣರಾಜಸಾಗರ ಪ್ರದೇಶದಲ್ಲಿ ಮುಳುಗಡೆ ಆದ ಬಸ್ತಿನಗರದಲ್ಲಿ [illegible] ಅಡಿ ಎತ್ತರದ ಗೋ[illegible]ಮಹೇಶ್ವರ ವಿಗ್ರಹವು ಪತ್ತೆಯಾಗಿದೆ. ಆದು ಶ್ರವಣಬೆಳಗೊಳದಲ್ಲಿರುವ ವಿಗ್ರಹವನ್ನು ಹೋಲುವುದು. ಅಲ್ಲದೆ ಒಂದೇ ಕಲ್ಲಿನಿಂದ [illegible] ಮಾನವಲ್ಲಿ ಕೆತ್ತಲ್ಪಟ್ಟಿದೆಂದೂ ಹೇಳಲಾಗಿದೆ. ಅದರ ಬಳಿ ಹಳೆಗನ್ನಡದಲ್ಲಿ ಬರೆದಿರುವ ಒಂದು ಕಂಭವು ಇದೆ. ವಿಷ್ಣುವರ್ಧನರಾಯನು ಅದನ್ನು ಬರೆಸಿದ್ದನೆಂದು ಹೇಳಲಾಗಿದೆ.

ಹುಣಸೂರಿನಲ್ಲಿ ಬಸ್ ನಿಲ್ದಾಣದ ಪ್ರಾರಂಭೋತ್ಸವ

ಹುಣಸೂರಿನಲ್ಲಿ ಬಸ್ ನಿಲ್ದಾಣದ ಪ್ರಾರಂಭೋತ್ಸವವನ್ನು ನಾಳಿದ್ದು ಸಂಜೆ ೪॥ ಗಂಟೆಗೆ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಟಿ. ಚನ್ನಯ್ಯನವರು ನೆರವೇರಿಸುವರು. ವಿಧಾನ ಸಭಾ ಸದಸ್ಯ[illegible]

ರಾದ ಶ್ರೀ ಡಿ. ದೇವರಾಜ ಅರಸಿನವರು ಅಧ್ಯಕ್ಷತೆ ವಹಿಸುವರು. ಸಚಿವರಿಗೆ [illegible]ಪತ್ರಿಕೆಯನ್ನು ಅರ್ಪಿಸಲಾಗುವುದು.

ಪುರಸಭಾಧ್ಯಕ್ಷ ಎ. ಕೃಷ್ಣಮೂರ್ತಿರಾಯರಿಗೆ ಸನ್ಮಾನ

ಮೈಸೂರು ೯

ನೂತನ ಪುರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರನ್ನು ಅಭಿನಂದಿಸಲು [illegible] ನಾಗರಿಕ ಸಂಘದವರು ನೆನ್ನೆ ಸ[illegible] ಏರ್ಪಡಿಸಿದ್ದರು. ಶಾಸಕ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

[illegible] ನಗರ ಸಭೆ [illegible] ವಿವರಿ[illegible] ಕೃಷ್ಣಮೂರ್ತಿ [illegible] ಮಾಡಿ[illegible] ಸಂಘದ [illegible] ಅತ್ಯುತ್ತಮ [illegible] ತಿಳಿಸಿದರು.

ಶ್ರೀ ಕೃಷ್ಣಮೂರ್ತಿ [illegible] ಉತ್ತರವಿತ್ತು [illegible] ಅಭಿವೃದ್ಧಿ [illegible] ಅಧಿಕಾರವು [illegible] ಕಟ್ಟ[illegible] ವೆಯೆಂದೂ [illegible] ಸನ್ಮಾನಗಳ [illegible] ಮಾಡಿ [illegible] ಕೈಕೊಳ್ಳಬೇಕಾಗಿರುವುದು [illegible] ಕರ್ತವ್ಯ [illegible] ಸಹಕಾರವನ್ನು ಕೋರಿದರು.

ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಮಾತನಾಡಿ ಕೇಂದ್ರ ಸರ್ಕಾರದ ಅಧಿಕಾರ ಕೇಂದ್ರೀಕರಣವನ್ನು ಟೀಕಿಸಿ, ಇದರಿಂದ ಸಂಸ್ಥಾನ[illegible] ಕೇವಲ ಪುರಸಭೆ[illegible] ಮಟ್ಟಕ್ಕೆ [illegible] ದಿವೆಯೆಂದು [illegible] ಸಂಸ್ಥೆಗಳಿಗೆ [illegible] ಸ್ವಾತಂತ್ರ್ಯ ಕೊಡುವುದು ನ್ಯಾಯವೆಂದು ನುಡಿದರು. ಹೊಸ ಕೈಗಾರಿಕೆಗಳ ನಿರ್ಮಾಣದಲ್ಲಿ ಬಂಡವಾಳಗಾರರ ಪ್ರಭಾವವು ವಿಪರೀತವಾಗಿದೆಯೆಂದು ಹೇಳಿದರು.

ದೆಹಲಿಗೆ ಮುಖ್ಯ ಮಂತ್ರಿಯವರ ಭೇಟಿ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ತಿಂಗಳು [illegible]ನೇ ತಾರೀಖು ದೆಹಲಿಗೆ ಭೇಟಿಯಿತ್ತು ಅಲ್ಲಿ ಸೇರುವ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ [illegible] ಭಾಗವಹಿಸುವರು. [illegible]ನೆ ತಾರೀಖು ವಿಮಾನದಲ್ಲಿ ಬೆಂಗಳೂರಿಗೆ ಹಿಂದಿರುಗುವರು. ಅವರು ಮೊನ್ನೆ ವೆಲ್ಲೂರಿಗೆ ಭೇಟಿ ಕೊಟ್ಟು [illegible] ಕ್ರಿಶ್ಚಿಯನ್ ಮಿಷನ್ ಆಸ್ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲ್ಪಟ್ಟಿರುವ ಮೈಸೂರು ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂರವರನ್ನು [illegible]

ಮಂಡ್ಯದಲ್ಲಿ ಭಾಗವಹಿಸಿದ ಕಾಂಗ್ರೆಸ್ಸಿನವರ ಮೇಲೆ ಕ್ರಮ

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಪರಿಶೀಲನೆ

ಸ್ವಂ ಪು ತಂತಿ] ಬೆಂಗಳೂರು ೯

ಮಂಡ್ಯದಲ್ಲಿ ನಡೆದ ಮೈಸೂರು ವಿಲೀನ ವಿರೋಧ ಸಮ್ಮೇಳನದಲ್ಲಿ ಭಾಗವಹಿಸಿದ ಕಾಂಗ್ರೆಸ್ಸಿನವರ ಮೇಲೆ ತೆಗೆದುಕೊಳ್ಳಬೇಕಾದ ಕಾರ್ಯಕ್ರಮವನ್ನು ಪರಿಶೀಲಿಸಲು ಈ ತಿಂಗಳು ೧೬ನೇ ತಾರೀಖು ಮಧ್ಯಾಹ್ನ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸೇರುತ್ತದೆ.

ಶ್ರೀ ಹನುಮಂತಯ್ಯನವರು ಆ ದಿನ ಹೈದರಾಬಾದಿಗೆ ತೆರಳುವರು.

ಪೋರ್ಚುಗೀಸ್ ಉಡುಪಿನಲ್ಲಿ ಗೋವಾಕ್ಕೆ ಭಾರತೀಯರ ಪ್ರವೇಶ

ಪೋರ್ಚುಗೀಸ್ ಸೈನ್ಯ ದಳದವರು ತೊಂದಿರುವ ಸಮವಸ್ತ್ರಗಳಂತೆ ಕಾಣುವ ವಸ್ತ್ರಗಳನ್ನೂ [illegible]ವನ್ನು ಅನೇಕ ಪೋರ್ಚುಗೀಸ್ ಧ್ವಜಗಳನ್ನು [illegible]ಯಲ್ಲಿ ತಯಾರಿಸಲಾಗುತ್ತಿದೆಯೆಂದು ಪೋರ್ಚುಗಲ್ಲಿನ ವಿದೇಶಾಂಗ [illegible] ಪ್ರಕಟಿಸಿದೆಯೆಂದು ತಿಳಿಸಿದೆ. ಪೋರ್ಚುಗೀಸ್ [illegible] ಧರಿಸಿದ ಭಾರತೀಯರು [illegible] ಗಡಿ ಉಲ್ಲಂಘನೆ ಮಾಡಿ[illegible] ಪ್ರೇರೇಪಿಸಲಾಗುತ್ತಿದೆಯೆಂದೂ, [illegible]ಯುತ ನಡೆ ರಾಜ್ಯದಂತೆ [illegible] ಇರುವುದಕ್ಕೆ ಈ ಮೂಲಕ ಅಡ್ಡಿ [illegible] ಪ್ರಯತ್ನವಾಗುತ್ತಿರುವುದೆಂದೂ ಆಪಾದಿಸಲಾಗಿದೆ. [illegible] ಅಧಿಕಾರಿ ವಲಯದಲ್ಲಿ [illegible] ಪೋರ್ಚುಗೀಸರ ಆಪಾದನೆಗಳಿಗೆ [illegible] ಇಲ್ಲವೆಂದು ಹೇಳಲಾಗಿದೆ.

ರೈಲ್ವೆಯಲ್ಲಿ ದಕ್ಷತೆಯನ್ನು ಹೆಚ್ಚಿಸಲು ೩ ಜನರ ಸಮಿತಿ

ರೈಲ್ವೆಯಲ್ಲಿ ಕೆಲಸವು ಉತ್ತಮವಾಗಿ ನಡೆಯಲು ಭಾರತ ಸರ್ಕಾರದವರು ರೈಲ್ವೆ ಬೋರ್ಡಿನ ದಕ್ಷತೆ ಇಲಾಖೆ ಡೈರೆಕ್ಟರ್ ಡಿ. ಜಿ. ಬಾಜಪೈಯವರ ಅಧ್ಯಕ್ಷತೆಯಲ್ಲಿ ೩ ಜನರ ಸಮಿತಿಯೊಂದನ್ನು ರಚಿಸಿರುತ್ತಾರೆ. ಇತರ ದೇಶಗಳಲ್ಲಿ ಆಗುವ ಹೊಸಹೊಸ ವಿಚಾರಗಳನ್ನು ಸಮಿತಿಯವರು ತಿಳಿದುಕೊಳ್ಳುವರು. ದೇಶದಲ್ಲಿ ರೈಲ್ವೆಯ ಹೊಸ ಅಗತ್ಯಗಳೇನೆಂಬುದನ್ನೂ ಅವರು ಪರಿಶೀಲಿಸುವರು.

ತೆಲಂಗಾಣಕ್ಕಾಗಿ ಉಪವಾಸ ಮತ್ತು ಪ್ರತ್ಯುಪವಾಸ ?

ಪ್ರತ್ಯೇಕ ತೆಲಂಗಾಣ ಸಂಸ್ಥಾನವನ್ನು ರಚಿಸದಿದ್ದರೆ ಆಮರಣಾಂತ ಉಪವಾಸ ಮಾಡುವುದಾಗಿ ಹೈದರಾಬಾದಿನ ಶಾಸನ ಸಭೆಯ ಸಮಾಜವಾದಿ ಸದಸ್ಯ ಜಿ. ವೆಂಕಟೇಶ್ವರರವರು ತಿಳಿಸಿರುತ್ತಾರೆ. ಅವರು ತಮ್ಮ ನಿರ್ಧಾರವನ್ನು ಜಾರಿಗೆ ತಂದರೆ ಪ್ರತಿಯಾಗಿ ತಾವು ಉಪವಾಸ ಮಾಡುವುದಾಗಿ ಸಭೆಯ ಕಾಂಗ್ರೆಸ್ ಸದಸ್ಯ ಅಂಬಾದಾಸರಾಯರು ಸೂಚಿಸಿರುವರೆಂದು ಹೇಳಲಾಗಿದೆ.

ಗೋವಾಕ್ಕೆ ರೈಲನ್ನು ನಿಲ್ಲಿಸಿರುವು ದರಿಂದ ಪೋರ್ಚುಗೀಸರಿಗೆ ಸಮಸ್ಯೆ

ಭಾರತ ರೈಲ್ವೆ ಸಮಿತಿಯವರು ಗೋವಾಕ್ಕೆ ರೈಲ್ವೆ ಸೌಲಭ್ಯಗಳನ್ನು ಸ್ಥಗಿತಗೊಳಿಸಿರುವುದರಿಂದ ಪೋರ್ಚುಗೀಸ್ ಸರ್ಕಾರಕ್ಕೆ ಭಾರಿ ತಲೆನೋವುಂಟಾಗಿರುತ್ತದೆ. ಅಲ್ಲಿ ರೈಲುಗಳು ಓಡಾಡುತ್ತಿದ್ದಾಗ ರೈಲ್ವೆಗಳ ಮೂಲಕ ಮೇಲಿನ ಬಡ್ಡಿ ಮತ್ತು ಇತರ ವೆಚ್ಚಗಳಿಗಾಗಿ ಅಲ್ಲಿನ ಸರ್ಕಾರದವರು ಭಾರತಕ್ಕೆ ಪ್ರತಿ ವರ್ಷವೂ ೧೦,೯೫,೦೦೦ ರೂ ಗಳನ್ನು ಕೊಡುವಂತೆ ಒಪ್ಪಂದವಾಗಿತ್ತು. ಈಗ ರೈಲು ಸಂಚಾರವಿಲ್ಲದೆ ವರಮಾನವು ನಿಂತುಹೋಗಿರುವುದರಿಂದ ಈ ಮೊಬಲಗನ್ನು ಕೊಡುವುದು ಅವರಿಗೆ ಒಂದು ಭಾರಿ ಸಮಸ್ಯೆಯಾಗಿ ಪರಿಣಮಿಸಿದೆ

ವಿಳಾಸವಿಲ್ಲದ ಲಕ್ಕೋಟೆಯಂತೆ ಈಗಿನ ವಿದ್ಯಾರ್ಥಿಗಳು

ಭೂಪಾಲ್ ಮುಖ್ಯ ಮಂತ್ರಿ ಡಾ॥ ಶಂಕರ ದಯಾಳ ಶರ್ಮರವರು ಇಂದೂರಿನ ಶಾಲೆಯೊಂದರಲ್ಲಿ ಬಹುಮಾನ ವಿನಿಯೋಗ ಮಾಡುತ್ತಾ ಭಾಷಣ ಮಾಡಿ, ಈಗಿನ ಕಾಲದ ವಿದ್ಯಾರ್ಥಿಗಳು ವಿಳಾಸವಿಲ್ಲದ ಲಕ್ಕೋಟೆಗಳಂತಿರುವರೆಂದು ತಿಳಿಸುತ್ತಾರೆ. [illegible]

ಹಸ್ತಿಳ ಮಾಡುವ ಕೆಲಸಗಾರರ ಸಂಘದ ಬೇಡಿಕೆ

[illegible]

ವಿಜಯನಗರದ ನಾಯಿಂದರಿಗೆ ನಾಯಿ ಬ್ರಾಹ್ಮಣರೆಂಬ ಹೆಸರು

[illegible]

ಗೂಢ ಸಂದೇಶ ವಾಹಕ ಪಾರಿವಾಳದ ಬಂಧನ

[illegible]

ಬೆಂಗಳೂರು ರೇಡಿಯೋ ವಾರ್ತಾ ಕಾರ್ಯಕ್ರಮ

[illegible]

ಸ್ಕೂಲ್ ಫೈನಲ್ ಅವರೂ ಒಂದು ವಾಕ್ಯ ಬರೆಯಲು ಬರುವುದಿಲ್ಲ

ಸ್ಕೂಲ್ ಫೈನಲ್ ಪಾಸಾದವರು ಎವರೊಬ್ಬರು ... ಒಂದು ವಾಕ್ಯವನ್ನು ಸರಿಯಾದ ಇಂಗ್ಲೀಷಿನಲ್ಲಿ ಬರೆಯಲು ಶಕ್ತರಾಗಿಲ್ಲವೆಂದು ಕೇಂದ್ರ ಪಾರ್ಲಿಮೆಂಟಿನ ... ಶ್ರೀ ... ತಿಳಿಸಿದ್ದಾರೆ. ... ಭಾಷೆಯ ಒಂದು ಪರೀಕ್ಷೆಗೆ ಸಂಬಂಧಿಸಿದ ಹಾಗೆ ಅವರು ಮೇಲ್ಕಂಡಂತೆ ತಿಳಿಸಿ, ವಕೀಲ ... ಮಟ್ಟವನ್ನು ಹಾಗೆ ತರಬೇಕೆಂದು ಸಲಹೆ ಮಾಡಿರುತ್ತಾರೆ

ಇಂಡೋನೇಷ್ಯಾ ಅಧ್ಯಕ್ಷರ ಸಂಸಾರ ಕಲಹದಲ್ಲಿ ಸಂಧಾನ

[illegible]

ಸಿನಿಮಾ ನಟಿಯೊಡನೆ ರಾಜಕುಮಾರನ ವಿವಾಹ

[illegible]

ರಾಜಕುಮಾರನನ್ನು ವರಿಸಲು ವಿರೋಧಿಸಿ ಮುಸ್ಲಿಂ ಮತಕ್ಕೆ

[illegible]

ಹೈದರಾಬಾದಿನಲ್ಲಿ ಗೋವಧಾ ನಿರೋಧ ಚಳುವಳಿ

ಹೈದರಾಬಾದು ಸಂಸ್ಥಾನದಲ್ಲಿ ಸಧ್ಯದಲ್ಲೇ ಗೋಹತ್ಯಾ ನಿಷೇಧದ ಬೇಡಿಕೆಯನ್ನು ಒತ್ತಾಯಪಡಿಸಲು ಶಾಂತಿಯುತ ಚಳುವಳಿಯನ್ನು ನಡೆಸಲಾಗುವುದೆಂದು ವರದಿಯಾಗಿದೆ. ಇದರಿಂದ ಮುಸಲ್ಮಾನರ ಹಕ್ಕಿಗೆ ಧಕ್ಕೆ ತಂದಂತಾಗುವುದಿಲ್ಲವೆಂದೂ, ಒಟ್ಟು ೨೮ ಸಂಸ್ಥಾನಗಳ ಪೈಕಿ ೧೨ ರಲ್ಲಿ ಗೋವಧೆಯನ್ನು ನಿಷೇಧಿಸಲಾಗಿದೆಯೆಂದೂ ಅಖಿಲ ಭಾರತ ಗೋಹತ್ಯಾ ನಿರೋಧ ಸಮಿತಿ ಕಾರ್ಯದರ್ಶಿ ಪರದೇವಸಹಾಯ್‌ರವರು ತಿಳಿಸಿರುತ್ತಾರೆ

ಭಾರತಕ್ಕೆ ಅಮೆರಿಕದ ಪ್ರದರ್ಶನ ಕಟ್ಟಡದ ಬಹುಮಾನ

ದೆಹಲಿಯಲ್ಲಿ ಕಳೆದ ೧೧ ತಿಂಗಳಿಂದಲೂ ನಡೆದ ಭಾರತದ ಅಂತರ ರಾಷ್ಟ್ರೀಯ ಕೈಗಾರಿಕಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿದ್ದ ಅಮೆರಿಕದವರು ೧೨೦ ಟನ್ ಉಕ್ಕು, ೪೦೦ ಟನ್ ಸಿಮೆಂಟ್, [illegible]

ಗಂಡನಿರುವಾಗಲೇ ಬೇರೊಂದು ವಿವಾಹವಾದವಳಿಗೆ ಸಜಾ

[illegible]

O ಮಾಜಿ ಪೌರಸಭಾಧ್ಯಕ್ಷ ಶ್ರೀ ಟಿ ವೆಂಕಟರಮಣಯ್ಯನವರನ್ನು [illegible]

ಪೂರ್ವ ಪಾಕಿಸ್ತಾನದ ... ಗಳ ಮುದ್ರಣ ಅಮೆರಿಕ...

[illegible]

ಉಳುವವರಿಗೆ ಜಮೀನಿನ ಒಡೆತನದ ಹಕ್ಕು

[illegible]

ಭೋಜನ ಕೂಟ

[illegible]

ಸಮೀರ ಬೋಧಕ ವಿದ್ಯಾಲಯ

ಯು. ಜಿ. ಟಿ. ಕಾಲೇಜು

ಚಾಮುಂಡಿಪುರಂ, ಮೈಸೂರು

ಈ ಕಾಲೇಜಿನ 1956ನೇ ಇಸವಿ ... ಪ್ರವೇಶದ ದಿನ (30-1-1956) [illegible]

Edited, Printed and Publi[illegible] by A. R. Nagarajan at Sa[illegible] Press, D Subbiah Road, My[illegible]

Office of the Huzur Secretary to His Highness the Maharaja of Mysore

Notification, Dated 4th January 1956

SALE OF ELEPHANT TUSKS

It is hereby notified for general information that abo[illegible] 16 Elephant Tusks will be sold by public auction at Pala[illegible] Office, Mysore, on Friday the 27th January 1956, subject [illegible] the conditions specified below

1) The sale will commence at 11 A.M. on that day

2) The sale will be conducted by the Huzur Secretary [illegible] His Highness the Maharaja or by an Officer authorised [illegible] conducting the sale

3) The Officer in charge conducting the sale will reser[illegible] to himself the right of accepting or rejecting any bid witho[illegible] assigning any reason therefor

4) Intending Bidders must deposit Rs.100 as advance [illegible] the Officer conducting the Auction, before they are permit[illegible] to bid Such deposits will be returned to the unsuccessful bi[illegible] ders at the close of the sale

5) Full Sale amount shall be paid on the date of sale [illegible] default the sale will be cancelled and the deposit amount [illegible] be forfeited to Palace

6) Sales Tax at the prescribed rate will be recovered [illegible] the date of sale on the full sale amount

7) The Tusks are open to inspection in the Palace Off[illegible] during Working Hours

8) They will be delivered on confirmation of sale [illegible] will be intimated in due course.

For other particulars please apply to the Huzur Secreta[illegible] to His Highness the Maharaja of Mysore.

J B MALLARADHYA,

Huzur Secretary to H H the Maharaja of My[illegible]

SREE GANESH TALKIES

FOOT STEPS IN THE FOG

TO DAY LAST DAY

From 10-1-56 For 2 Days

THE NIGHT HOLDS TERROR

Featuring Jack Kelly & Hildy Parks

(A Drama of tense suspense)

From 12-1-56 For 2 Days only

BRING YOUR SMILE ALONG

[In Technicolor]

Starring Frankie Laine

(A Musical Comedy)

ಟೆಲಿಫೋನ್ ನಂ. 793

ಸಂಸ್ಥಾನದ ಪತ್ರಿಕೆಗಳಲ್ಲಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಆಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೯] SADHVI · TUESDAY 10-1-1956 ಮೈಸೂರು ಮಂಗಳವಾರ : ೧೦-೧-೧೯೫೬ [ಸಂಚಿಕೆ : ೮]

ಪಾಕಿಸ್ತಾನ್ ರಾಜ್ಯಾಂಗಕ್ಕೆ ಢಾಕಾದಲ್ಲಿ ವಿರೋಧ ಪ್ರದರ್ಶನ

...ಳ್ಳ ಮಾಲಿನ ಸಮೇತ ಕೇಡಿಯ ಬಂಧನ

ಮೈಸೂರು ೧೦

ತಳ್ಳವಕೇರಿಯಲ್ಲಿರುವ ಶ್ರೀ ಅನಂತರಾಮಯ್ಯ ಎಂಬುವರ ಮನೆಯಲ್ಲಿ ಬೀಗ ಮುರಿದು ಸುಮಾರು ೩೦೦ ರೂ. ಬೆಲೆಬಾಳುವ, ಬೆಳ್ಳಿ ಪಾತ್ರೆಗಳು ಮತ್ತು ಇತರ ಸಾಮಾನುಗಳನ್ನು ಕದ್ದು ಮಾಡಿದ ಮಂಡಿ ಮೊಹಲ್ಲೆಯ ಕೇಡಿ ಅ...ಲ್ ಸತ್ತಾರ್ ಎಂಬುವನನ್ನು ಮಾಲೀಕರು ...ತರದ ಸಹಾಯದೊಡನೆ ಪತ್ತೆಹಚ್ಚಿ ಹಿಡಿದು ಮಾಲು ಸಮೇತ ಪೋಲೀಸರ ವಶಕ್ಕೆ ಒಪ್ಪಿಸಿದರು ಕೇಡಿಗೆ ಹಿಂದೆ ೨೨ ಬಾರಿ ಸಜಾ ಆಗಿತ್ತು ...ರಾಜಾ ರಸ್ತೆಯಲ್ಲಿ ನೆನ್ನೆ ಸಂಜೆ ವೆಂಕಟೇ...ಎಂಬ ಕೇಡಿಯು ಒಂದು ಹೊಸ ಮಣಟೆಯನ್ನು ತೆಗೆದುಕೊಂಡುಹೋಗುತ್ತಿದ್ದಾಗ ಕೃಷ್ಣ...ನ ಪೋಲೀಸರು ಅನುಮಾನದ ಮೇಲೆ ಅವನನ್ನು ಬಂಧಿಸಿದರು

...ದಲ್ಲಿರುವ ಭಾರತದ ರಾಯಭಾರಿಯೊಡನೆ ಮೈಸೂರು ವಿದ್ಯಾರ್ಥಿಗಳ ಭೇಟಿ

ಇಲ್ಲಿನ ಮಹಾರಾಜಾ ಕಾಲೇಜಿನ ರಾಜನೀತಿ ಶಾಸ್ತ್ರ ವಿದ್ಯಾರ್ಥಿಗಳ ತಂಡದವರು ಸಿಂಹಳ ದ್ವೀಪಕ್ಕೆ ತೆರಳಿರುತ್ತಾರೆ ಅಲ್ಲಿ ಅವರು ವಿಶ್ವವಿದ್ಯಾಲಯ, ಕ್ಯಾಂಡಿ ನಗರದ ಬುದ್ಧ ದೇವಾಲಯ, ...ಡೆನಿಯದ ರಾಯಲ್ ಉದ್ಯಾನ ಮತ್ತು ಕೊಲಂಬೋ ನಗರದ ಪಾರ್ಲಿಮೆಂಟ್ ಭವನಗಳನ್ನು ... [illegible] ... ಭಾರತದ ರಾಯಭಾರಿ ... [illegible]

ಹಿಂದಿ ಪ್ರಚಾರಕರ ಸಭೆ

ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ ... ಮತ್ತು ಮೈಸೂರು ಪ್ರಾಂತೀಯ ... ಸಂಚಾಲಕರಾದ ಶ್ರೀ ಶ್ರೀಕಂಠಶಾಸ್ತ್ರಿಯವರು ಈ ದಿನ ಸಂಜೆ ೭ ಘಂಟೆಗೆ ... ಹಿಂದಿ ... ಮೈಸೂರು ನಗರದ ಕಾರ್ಯ ... ಏರ್ಪಡಿಸಲಾಗಿದೆ ... [illegible] ... ಹಿಂದಿ ... ಪ್ರಚಾರಕರು ... ಕೋರಿರುತ್ತಾರೆ.

ಬ್ರಾಹ್ಮಣ ಧರ್ಮ ಸಹಾಯ ಸಭೆ

ನಗರದ ಬ್ರಾಹ್ಮಣ ಧರ್ಮ ಸಹಾಯ ಸಭೆಯ ವಾರ್ಷಿಕ ಅಧಿವೇಶನವು ಮೊನ್ನೆ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ನಡೆದು, ಕಳೆದ ವರ್ಷದ ಜಮಾ ಖರ್ಚು ಮತ್ತು ವರದಿಗಳನ್ನು ಅಂಗೀಕರಿಸಲಾಯಿತು. ಮುಂದಿನ ವರ್ಷಕ್ಕೆ ರಾಜಸೇವಾ ಪ್ರಸಕ್ತ ಶ್ರೀ ಎಂ. ರಾಮಸ್ವಾಮಿಯವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಸಿ. ರಾಮಾನುಜಯ್ಯಂಗಾರ್, ಎಸ್. ಸುಬ್ಬಾರಾವ್ ಮತ್ತು ವೈ. ಚಂದ್ರಶೇಖರಶಾಸ್ತ್ರಿಗಳನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ... ಶ್ರೀಕಂಠಶಾಸ್ತ್ರಿಗಳನ್ನು ಗೌರವ ಕಾರ್ಯದರ್ಶಿಗಳನ್ನಾಗಿಯೂ ಆರಿಸಲಾಯಿತು.

ಕರ್ನಾಟಕದ ಭಾಗಗಳ ವಿಲೀನೀಕರಣಕ್ಕಾಗಿ ಸಮಿತಿ

ಹೈದರಾಬಾದಿನಲ್ಲಿ ಮುಖ್ಯ ಮಂತ್ರಿ ಹನುಮಂತಯ್ಯನವರ ಸೂಚನೆ

ಹೊಸದಾಗಿ ರಚಿತವಾಗಲಿರುವ ಕರ್ನಾಟಕ ... ಪ್ರಾಂತ್ಯಕ್ಕೆ ಸೇರತಕ್ಕ ವಿವಿಧ ಪ್ರದೇಶಗಳನ್ನು ವಿಲೀನಗೊಳಿಸುವ ಕಾರ್ಯವು ಯಶಸ್ವಿಯಾಗಿ ನಡೆಯುವ ಒಂದು ಸಂಘಟಿತ ಮಂಡಲದ ಎಂಬ ಸಮಿತಿಯನ್ನು ರಚಿಸಲು ತಾವು ... [illegible] ... ಯೂ, ವಿವಿಧ ಕರ್ನಾಟಕ ಪ್ರದೇಶಗಳ ... ಮೆಂಟ್ ಮತ್ತು ಶಾಸನ ಸಭಾ ಸದಸ್ಯರುಗಳು ... ಅವರಲ್ಲಿರುವರೆಂದೂ ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಹೈದರಾಬಾದಿನಲ್ಲಿ ತಿಳಿಸಿರುವರು ಮೈಸೂರು ಸಂಸ್ಥಾನದ ಜೊತೆಗೆ ... ನ ಕರ್ನಾಟಕ ಪ್ರದೇಶಗಳ ನಾಯಕರ ಸಮಸ್ಯೆಗಳನ್ನು ಅರಿಯುವ ಸಲುವಾಗಿ ಅವರುಗಳನ್ನು ಭೇಟಿ ಮಾಡಲು ತಾವು ... [illegible] ... ಈ ಉದ್ದೇಶಕ್ಕಾಗಿ ... ಯ ಕನ್ನಡ ಪ್ರದೇಶಗಳಲ್ಲಿ ಪ್ರವಾಸ ಕೈಗೊಳ್ಳುವುದಾಗಿಯೂ ಅವರು ಹೇಳಿರುವರು

ಬಿ. ಸಿ. ಜಿ. ವ್ಯಾಕ್ಸಿನೇಷನ್ ಬಗ್ಗೆ ಅಮೆರಿಕದಲ್ಲಿ ಇನ್ನೂ ಪರಿಶೀಲನೆ

ಅಮೆರಿಕದ ಸಾರ್ವಜನಿಕ ಆರೋಗ್ಯದ ವಿಶೇಷ ಸಲಹೆಗಾರರೂ, ... [illegible] ... ಬಿ. ಸಿ. ಜಿ. ವ್ಯಾಕ್ಸಿನೇಷನ್ ಬಗ್ಗೆ ಅಭಿಪ್ರಾಯವನ್ನು ಸೂಚಿಸಿ, ಅದನ್ನು ಸಾಮೂಹಿಕವಾಗಿ ಪ್ರಯೋಗಿಸಿದರೆ ಕ್ಷಯರೋಗ ನಿವಾರಣೆಯಾಗುತ್ತದೆಂದು ಹೇಳುವುದಕ್ಕೆ ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ ಆದರೆ ಇದರಿಂದ ಯಾವ ಕೆಡುಕೂ ಆಗದೆಂದು ಹೇಳಿದ್ದಾರೆ ಅಮೆರಿಕದ ಆರೋಗ್ಯ ಇಲಾಖೆಯವರು ಇದರ ನಿಜವಾದ ಶಕ್ತಿಯನ್ನು ಇನ್ನೂ ಕಂಡುಹಿಡಿಯುವುದರಲ್ಲಿದ್ದಾರೆಂದೂ, ಇದರಿಂದ ಕ್ಷಯರೋಗವು ಹರಡುವುದಿಲ್ಲವೆಂಬುದು ಇನ್ನೂ ನಿಖರವಾಗಿಲ್ಲವೆಂದೂ ಅವರು ಹೇಳಿರುವರು ತಮ್ಮ ದೇಶದಲ್ಲಿ ಅದನ್ನು ಪ್ರಾಯೋಗಿಕವಾಗಿ ಮಾತ್ರ ಜಾರಿಗೆ ತಂದಿರುವುದಾಗಿಯೂ, ಸಾಮೂಹಿಕವಾಗಿ ತಂದಿಲ್ಲವೆಂದೂ ಅವರು ಸ್ಪಷ್ಟಪಡಿಸಿರುವರು

ಜಾರ್ಡಾನಿನಲ್ಲಿ ಹೊಸ ಸರ್ಕಾರದ ಸ್ಥಾಪನೆ

ಜಾರ್ಡಾನಿನಲ್ಲಿ ನೆನ್ನೆ ಸಮೀರ್ ರಿಫೈರವರ ನೇತೃತ್ವದಲ್ಲಿ ಹೊಸ ಸರ್ಕಾರವೊಂದು ಅಧಿಕಾರ ಸ್ವೀಕರಿಸಿತು ರಾಜಧಾನಿ ಅಮ್ಮಾನ್ ನಗರದಲ್ಲಿ ಶಾಂತಿ ನೆಲೆಸಿರುವುದು ಆದರೂ ರಕ್ಷಣಾ ವ್ಯವಸ್ಥೆ ... ಪ್ರಮುಖ ಕೇಂದ್ರಗಳಲ್ಲಿ ಕಾವಲು ಕಾಯುತ್ತಿರುವರು ಅಲ್ಲಿನ ರಾಜರಾದ ಹುಸೇನ್‌ರವರು, ಪಕ್ಕದ ಅರಬ್ ರಾಷ್ಟ್ರಗಳು ಮತ್ತು ಇತರ ಮೈತ್ರಿಯುತ ದೇಶಗಳೊಡನೆ ಸಹೃದಯ ಬಾಂಧವ್ಯ ಬೆಳೆಸಬೇಕೆಂದು ಹೊಸ ಮಂತ್ರಿಮಂಡಲಕ್ಕೆ ಸೂಚನೆಯಿತ್ತಿರುವರು ರಾಜಧಾನಿಯಲ್ಲಿ ಕರ್ಫ್ಯೂ ಆಜ್ಞೆಯು ಇನ್ನೂ ಜಾರಿಯಲ್ಲಿದೆ

ಕೂಸು ಹುಟ್ಟುವುದಕ್ಕೆ ಮುಂಚೆ ಕುಲಾವಿಯೇ ?

ನೂತನ ಪ್ರಾಂತದ ಹೆಸರಿನ ಬಗ್ಗೆ ಹನುಮಂತಯ್ಯನವರ ಹೇಳಿಕೆ

ಭಾವಿ ಕರ್ನಾಟಕ ಪ್ರಾಂತಕ್ಕೆ "ಕರ್ನಾಟಕ" ... "ವಿಶಾಲ ಮೈಸೂರು" ಎಂಬ ಹೆಸರಿಡ... [illegible] ... ತೀರ್ಮಾನವನ್ನು ತೆಗೆದುಕೊಳ್ಳಲಾಗುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಹೈದರಾಬಾದಿನಲ್ಲಿ ಹೇಳುತ್ತಾ ನೂತನ ಪ್ರಾಂತಕ್ಕೆ ಎಲ್ಲರಿಗೂ ಒಪ್ಪಿಗೆಯಾದ ಹೆಸರನ್ನೇ ಇಡುವುದಾಗಿ ಅವರು ತಿಳಿಸಿರುವರು

ಮೆಕ್ಸಿಕೋವಿನ ತೀರ ನಗರದಲ್ಲಿ ಭೂಕಂಪ

ಮೆಕ್ಸಿಕೋವಿನ ತೀರ ಪಟ್ಟಣವಾದ ಅಕಪುಲ್ಕೋ ಎಂಬಲ್ಲಿ ಮೊನ್ನೆ ಭೂಕಂಪ ಸಂಭವಿಸಿ ಹಲವಾರು ಮನೆಗಳು ಕುಸಿದುಬಿದ್ದ ಪರಿಣಾಮವಾಗಿ ಅನೇಕ ಜನರು ಮಡಿದು ... ಮಂದಿ ಗಾಯಗೊಂಡರೆಂದು ವರದಿಯಾಗಿದೆ

ವೇದನೆಯಿಲ್ಲದ ಪ್ರಸವದ ಚಿಕಿತ್ಸೆಗೆ ಪೋಪರ ಒಪ್ಪಿಗೆ

ವೇದನೆಯಿಲ್ಲದೆ ಪ್ರಸವವಾಗುವಂತಹ ಚಿಕಿತ್ಸಾ ವಿಧಾನಕ್ಕೆ ಕ್ರೈಸ್ತ ಜಗದ್ಗುರು ಪೋಪರು ತಮ್ಮ ನೈತಿಕ ಅಭ್ಯಂತರವೇನೂ ಇಲ್ಲವೆಂದು ತಿಳಿಸಿರುತ್ತಾರೆ ವೈದ್ಯ ಮತ್ತು ದೇಹಗಳಲ್ಲಿ ಸಾವಿರಾರು ಸಂದರ್ಭಗಳಲ್ಲಿ ಈ ವಿಧಾನವನ್ನು ಅನುಸರಿಸಲಾಗಿದೆಯೆಂದೂ, ಪಾಶ್ಚಾತ್ಯ ರಾಷ್ಟ್ರಗಳು ಅದನ್ನು ಇನ್ನೂ ಜಾರಿಗೆ ತಂದಿಲ್ಲವೆಂದೂ ಅವರ ಹೇಳಿ, ಅಂತಹ ವಿಧಾನದಿಂದ ಶೀಘ್ರ ಗರ್ಭದ ... ಸಂದರ್ಭಗಳಲ್ಲಿ ಸುಖ ಪ್ರಸವಗಳಾಗಿರುವುದಾಗಿ ತಿಳಿಸಿರುವರು.

ಬೇಲೂರು ಹಳ್ಳಿ ರಘುನಾಥಾಚಾರ್ಯರಿಗೆ ಆಯುರ್ವೇದ ಪ್ರಶಸ್ತಿ

ಬೆಂಗಳೂರಿನ ಶ್ರೀ ಸರ್ವಜ್ಞ ಸಂದೇಶ ಪತ್ರಿಕೆಯ ಸಂಪಾದಕರಾದ ವೇದಮೂರ್ತಿ ಬೃಹಸ್ಪತಿ ಪಂಡಿತ ಬೇಲೂರುಹಳ್ಳಿ ರಘುನಾಥಾಚಾರ್ಯರಿಗೆ ಶ್ರೀ ಗೋವರ್ಧನ ಪೀಠಾಧೀಶ ಶ್ರೀ ಶಂಕರಾಚಾರ್ಯ ಶ್ರೀ ಯೋಗೀಶ್ವರಾನಂದ ತೀರ್ಥ ಸ್ವಾಮಿಗಳವರು ಸ್ಥಾಪಿಸಿರುವ ಆಯುರ್ವೇದ ಸಂಸ್ಕೃತ ವಿದ್ಯಾಲಯದವರು ಶಾಸ್ತ್ರ ರತ್ನಂ ಎಂಬ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ ಆಚಾರ್ಯರಿಗೆ ಇನ್ನೂ ಅನೇಕ ಪ್ರಶಸ್ತಿಗಳು ಈಗಾಗಲೇ ಬಂದಿವೆ

ಬೆಂಗಳೂರು ರೇಡಿಯೋ ಶಾಲೆ ಕಾರ್ಯಕ್ರಮ

[illegible] ... ಹಿಂದುಸ್ಥಾನಿ ಸಂಗೀತ ... ಹಿಂದಿ ಶಿಕ್ಷಣ ... [illegible] ... ಹಿಂದುಸ್ಥಾನಿ ಸಂಗೀತ ... ರಾತ್ರಿಯ ಕಾರ್ಯಕ್ರಮ ... [illegible] ... ಹವಾಮಾನ-ಕೊಳಲು.

ಪಾಕಿಸ್ತಾನದ ರಾಜ್ಯಾಂಗಕ್ಕೆ ಢಾಕಾದಲ್ಲಿ ವಿರೋಧ

ವಿದ್ಯಾರ್ಥಿಗಳಿಂದ ಕಪ್ಪು ಧ್ವಜ ಪ್ರದರ್ಶನ

ಪೂರ್ವ ಪಾಕಿಸ್ತಾನದ ಶಾಸನಸಭಾ ಭವನದಲ್ಲಿ ಅಲ್ಲಿನ ಪಾರ್ಲಿಮೆಂಟರಿ ಯುನೈಟೆಡ್ ಫ್ರಂಟ್ ಮತ್ತು ಯುನೈಟೆಡ್ ಪ್ರೋಗ್ರೆಸಿವ್ ಪಕ್ಷಗಳವರು ಪಾಕಿಸ್ತಾನದ ಹೊಸ ರಾಜ್ಯಾಂಗದ ಕರಡನ್ನು ಪರಿಶೀಲಿಸುತ್ತಿದ್ದಾಗ ಢಾಕಾ ನಗರದ ವಿದ್ಯಾರ್ಥಿಗಳು ಭವನದ ಮುಂದೆ ಕಪ್ಪು ಬಾವುಟಗಳನ್ನು ಪ್ರದರ್ಶಿಸಿ ನೂತನ ರಾಜ್ಯಾಂಗದ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದರು ಪೂರ್ವ ಬಂಗಾಳಕ್ಕೆ ಪ್ರಾಂತೀಯ ಸ್ವಯಂ ಆಡಳಿತಾಧಿಕಾರವನ್ನು ಕೊಡಬೇಕೆಂದು ಅವರು ಕೂಗುತ್ತಿದ್ದರು

ಯುನೈಟೆಡ್ ಪ್ರೋಗ್ರೆಸಿವ್ ಪಕ್ಷದ ನಾಯಕ ಶ್ರೀ ಧೀರೇನ್‌ದತ್ತರವರು ಹೇಳಿಕೆಯಿತ್ತು, ರಾಜ್ಯಾಂಗದ ಕರಡು ಪ್ರತಿಯನ್ನು ನೋಡಿ ತಮಗೆ ನಿರಾಶೆಯಾಗಿರುವುದೆಂದೂ, ರಾಷ್ಟ್ರದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆಗೆ ನಿಲ್ಲಲು ಮುಸ್ಲಿಮೇತರರಿಗೆ ಹಕ್ಕಿಲ್ಲವೆಂದು ಸೂಚಿಸಿರುವುದರಿಂದ ಮುಸ್ಲಿಮೇತರರು ಕೀಳು ದರ್ಜೆಯ ಪ್ರಜೆಗಳೆಂಬ ಭಾವನೆ ಮೂಡುವುದಕ್ಕೆ ಅವಕಾಶವಿರುತ್ತದೆಂದೂ ತಿಳಿಸಿರುವರು ಪಾಕಿಸ್ತಾನವು ಇಸ್ಲಾಮಿಕ್ ರಿಪಬ್ಲಿಕ್ ಆಗುವುದೆಂದು ಸೂಚಿಸಿರುವ ಬಗ್ಗೆಯೂ ಅವರು ಕಳವಳ ವ್ಯಕ್ತಪಡಿಸಿ, ಈ ಸನ್ನಿವೇಶದಲ್ಲಿ ತಮ್ಮ ಪಕ್ಷದವರು ಸಂಯುಕ್ತ ರಂಗದೊಡನೆ ಸಹಕರಿಸಿ ಮುಂದುವರಿಯಲು ಸಾಧ್ಯವೇ ಎಂಬುದನ್ನು ಪರಿಶೀಲಿಸಬೇಕಾಗುವುದೆಂದು ತಿಳಿಸಿರುವರು

ಭಾಷಾ ಸಮಿತಿಯ ಮುಂದೆ ಕಪ್ಪು ಬಾವುಟ ಪ್ರದರ್ಶನ

ಸರ್ಕಾರೀ ಅಧಿಕೃತ ಭಾಷೆಯ ಬಗ್ಗೆ ಶಿಫಾರಸು ಮಾಡುವುದಕ್ಕಾಗಿ ಶ್ರೀ ಬಿ. ಜಿ. ಖೇರ್ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಮಿತಿಯು ಮದ್ರಾಸಿನಲ್ಲಿ ನೆನ್ನೆ ಕಾರ್ಯಾರಂಭ ಮಾಡಿದ ಸಮಯದಲ್ಲಿ ದ್ರಾವಿಡ ಸಂಘದ ಸುಮಾರು ... ಮಂದಿ ಸ್ವಯಂಸೇವಕರು ಕಪ್ಪು ಧ್ವಜಗಳನ್ನು ಹಿಡಿದು ಕಛೇರಿ ಮುಂದೆ ಪ್ರದರ್ಶನ ನಡೆಸಿ "ಹಿಂದಿ ಭಾಷೆಗೆ ಧಿಕ್ಕಾರ", "ನಮಗೆ ಹಿಂದಿ ಬೇಡ", "ಹಿಂದಿ ಪಾಪಿಗೆ ಧಿಕ್ಕಾರ" ಎಂದು ಕೂಗುತ್ತಾ ಪತ್ರಗಳನ್ನು ಹಂಚಿ ಪ್ರತಿಭಟನೆಯನ್ನು ಸೂಚಿಸಿದರು ಸಮಿತಿಯ ಸಭೆ ವಾಪಸು ಹೋಗಬೇಕೆಂದು ಅವರು ಕೂಗಿದರು ನೆನ್ನೆ ಸಮಿತಿ ಮುಂದೆ ಮುಖ್ಯ ಮಂತ್ರಿ ಕಾಮರಾಜನಾಡರ್ ಮತ್ತು ರಾಜಾಜಿಯವರು ಸಾಕ್ಷ್ಯವಿತ್ತರು ದ್ರಾವಿಡ ಸಂಘದ ನಾಯಕರಾದ ಶ್ರೀ ರಾಮಸ್ವಾಮಿ ನಾಯಕರನ್ನೂ ಸಾಕ್ಷ್ಯ ನೀಡಲು ಆಹ್ವಾನಿಸಲಾಗಿರುವುದೆಂದು ಗೊತ್ತಾಗಿದೆ

ಪಂಜಾಬು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಗಿಯಾನಿ ಗುರುಮುಖ್‌ಸಿಂಗ್ ಮುಸಾಫಿರ್‌ರವರನ್ನು ಬರುವ ತಿಂಗಳು ಅಮೃತಸರದಲ್ಲಿ ಸೇರಲಿರುವ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಚುನಾಯಿಸಲಾಗಿದೆ.

ಟಾಟಾ ಕಂಪೆನಿ ಆಡಳಿತದಲ್ಲಿ ಕಾರ್ಮಿಕರಿಗೆ ಹಕ್ಕು

ಜೆಮ್ಷೆಡ್ಪುರದಲ್ಲಿರುವ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯಲ್ಲಿ ಕೆಲಸ ನಿರ್ವಹಣೆ ಎಲ್ಲ ಶಾಖೆಗಳಲ್ಲೂ, ಕ್ರಮಕ್ರಮವಾಗಿ ಕಾರ್ಮಿಕರ ಸಲಹೆಯನ್ನು ತೆಗೆದುಕೊಳ್ಳುವ ಬಗ್ಗೆ ಕಂಪೆನಿಯ ಆಡಳಿತ ವರ್ಗದವರಿಗೂ ಕಾರ್ಮಿಕರ ಸಂಘದವರಿಗೂ ಒಪ್ಪಂದವಾಗಿರುತ್ತದೆ. ಕಂಪೆನಿಯವರು ೧೧೦ ಕೋಟಿ ರೂ. ಬಂಡವಾಳದಲ್ಲಿ ಹೆಚ್ಚಿನ ಕೆಲಸಗಳನ್ನು ಆರಂಭಿಸುವರು

ಬ್ರಿಟಿಷ್ ಪಾರ್ಲಿಮೆಂಟ್ ಭವನವನ್ನು ಸಿಡಿಸಲು ಪಿತೂರಿ?

ಬ್ರಿಟನ್ನಿನ ಪಾರ್ಲಿಮೆಂಟ್ ಭವನವನ್ನು ಈ ತಿಂಗಳು ಎಂಟರ ರಾತ್ರಿ ಸಿಡಿಸಲು ಸ್ಕಾಟ್ಲೆಂಡಿನ ರಾಷ್ಟ್ರೀಯರು ಪಿತೂರಿ ನಡೆಸಿದ್ದರೆಂಬ ಸುದ್ದಿಯ ಬಗ್ಗೆ ಲಂಡನ್ನಿನ ಸ್ಕಾಟ್ಲೆಂಡ್ ಯಾರ್ಡಿನವರು ತನಿಖೆ ನಡೆಸುತ್ತಿರುವರೆಂದು ವರದಿಯಾಗಿದೆ. ಜನೇವರಿ ೨೫ರಂದು ಸ್ಕಾಟ್ಲೆಂಡಿನ ರಾಷ್ಟ್ರೀಯ ಕವಿ ರಾಬರ್ಟ್ ಬರ್ನ್ಸ್‌ರವರ ಹಬ್ಬವನ್ನು ಅಲ್ಲಿನವರು ಆಚರಿಸುವರು

ಗೃಹಕೃತ್ಯದ ನೋಟೀಸು

ಪಾಂಡವಪುರದ ತಾಲ್ಲೂಕು ಕಸಬಾ ಹೋಬಳಿ ಕೆನ್ನಾಳು ಗ್ರಾಮದಲ್ಲಿರುವ ದೇವಲಿಂಗಪ್ಪ ಉರುಫ್ ಪುಟ್ಟಪ್ಪನ ಹೆಂಡತಿ ದೇವಮ್ಮನು ಸಮಸ್ತರಿಗೂ ತಿಳಿಯಪಡಿಸುವುದೇನೆಂದರೆ —

ನಮ್ಮ ಕುಟುಂಬಕ್ಕೆ ಸೇರಿದ ಷೆಡ್ಯೂಲಿನಲ್ಲಿ ಕಂಡ ಸ್ವತ್ತುಗಳನ್ನು ನನ್ನ ದತ್ತು ಮಗ ಶ್ರೀಕಂಠಪ್ಪ ಎಂಬುವನು ಅಪಮಾರ್ಗಕ್ಕೆ ಬಿದ್ದು ಚರಸ್ವತ್ತುಗಳನ್ನೆಲ್ಲಾ ದುರ್ವ್ಯಯ ಮಾಡಿ ಪರಭಾರೆ ಮಾಡಿರುತ್ತಾನೆ. ಇನ್ನು ಮುಂದೆ ಸ್ಥಿರ ಸ್ವತ್ತುಗಳನ್ನು ಸಹ ಇದೇ ರೀತಿ ಪೋಲು ಮಾಡಲು ತಕ್ಕ ಪ್ರಯತ್ನಗಳನ್ನು ಮಾಡುತ್ತಿರುತ್ತಾನೆ. ಸ್ವತ್ತುಗಳನ್ನು ವಿಕ್ರಯ ಮಾಡಲು ಯಾವ ಹಕ್ಕೂ ಇರುವುದಿಲ್ಲ. ಯಾರಾದರೂ ಆತನಿಂದ ಯಾವ ವಿಧವಾದ ಪರಭಾರೆ ಮಾಡಿಸಿಕೊಂಡಲ್ಲಿ ಅವು ಸಿಂಧುವಾಗುವುದಿಲ್ಲ. ಸದರಿ ವಿಕ್ರಯ ಮಾಡಲು ಆತನಿಗೆ ಯಾವ ಹಕ್ಕೂ ಇರುವುದಿಲ್ಲ. ಸದರಿ ವಿಕ್ರಯಗಳು ನನ್ನನ್ನು ಬದ್ಧಪಡಿಸತಕ್ಕವುಗಳಲ್ಲ

ಪಾಕಿಸ್ತಾನಕ್ಕೆ ಅಮೆರಿಕದಿಂದ ೬೦ ಸಾವಿರ ಟನ್ ಗೋಧಿ

ಅಮೆರಿಕದಲ್ಲಿರುವ ಹೆಚ್ಚುವರಿ ಗೋಧಿಯಲ್ಲಿ ೬೦ ಸಾವಿರ ಟನ್ನಿನಷ್ಟು ಧಾನ್ಯವನ್ನು ಪಾಕಿಸ್ತಾನಕ್ಕೆ ಕೊಡಲಾಗುವುದು. ಅಲ್ಲಿನ ಕ್ಷಾಮ ಪೀಡಿತರಿಗೆ ಈ ಧಾನ್ಯವನ್ನು ಹಂಚಲಾಗುವುದು

ಮೇಲ್ಕಂಡ ಈ ಮೂಲಕ ತಿಳಿಸಿದೆ

— ಷೆಡ್ಯೂಲ್ —

ಪಾಂಡವಪುರದ ತಾಲ್ಲೂಕು ಕೆನ್ನಾಳು ಗ್ರಾಮದ ಸರ್ವೆ 151, 159, 156 ಮತ್ತು ಪೂರ್ವಕ್ಕೆ ಬೀದಿ, ಪಶ್ಚಿಮಕ್ಕೆ ಬೀದಿ, ದಕ್ಷಿಣಕ್ಕೆ ... ಉತ್ತರಕ್ಕೆ ಗಲ್ಲಿ ಮತ್ತು ಗೋವಿಂದೇಗೌಡರ ... ಈ ಮಧ್ಯೆ ಇರುವ 4 ಕಂಬದ ತೊಟ್ಟಿ ಮನೆ

O ಈ ಎಡಗೈ ಹೆಬ್ಬೆಟ್ಟಿನ ಗುರುತು

ದೇವಮ್ಮ ಹಾಕಿದ್ದು

10—1—56
ಕೆನ್ನಾಳು

Edited, Printed and Published by V. R. Nagarajan at Sadhvi Press, D Subbiah Road Mysore

ಮೈಸೂರು ಸರ್ಕಾರದ ವಿಮಾ ಇಲಾಖೆ

(ಸಾರ್ವಜನಿಕ ಶಾಖೆ)

★

ಅಂಕಿಅಂಶಗಳಿಂದಲೇ ವ್ಯಕ್ತವಾಗುತ್ತದೆ!

★

1954-55 ರಲ್ಲಿ ಹೊಸ ವ್ಯವಹಾರವು 1·82 ಕೋಟಿ ರೂ. ಗಳಿಗೂ ಮೀರಿದೆ

ನಿಧಿಯು 4·79 ಕೋಟಿ ರೂ. ಗಳಿಗೂ ಮೀರಿದೆ

ವಿಮೆ ಮಾಡಲ್ಪಟ್ಟ ಮೊಬಲಗು 13·87 ಕೋಟಿ ರೂ.

ವಿಲೆ ಮಾಡಲ್ಪಟ್ಟಿರುವ ಕ್ಲೈಮು ಮೊಬಲಗು 2·45 ಕೋಟಿ ರೂ ಗಳಿಗೆ ಮೀರಿದೆ

ಹಂಚಿರುವ ಬೋನಸ್

(ಹೋಲ್ ಲೈಫ್ ರೂ 20, - ಎಂಡೋಮೆಂಟ್ ರೂ 17)

— ಪ್ರೀಮಿಯಂ ದರದಲ್ಲಿ ಇಳಿತಾಯ

★

ಮೋಟಾರು ವಾಹನಗಳ ವಿಮೆಯನ್ನೂ

ಸುಲಭ ದರಗಳಲ್ಲಿ ಅಂಗೀಕರಿಸಲಾಗುವುದು

ಒಲಂಪಿಯಾ

12-1-56 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಶರತ್‌ಚಂದ್ರ ಚಟರ್ಜಿ ಯವರ ಮಹೋನ್ನತ ಕಥೆ ಇದು

ಬಿಮಲ್‌ರಾಯ್‌ರವರ ಹಿಂದಿ ಚಿತ್ರ

★ ದೇವದಾಸ್ ★

ಪಾತ್ರ - ವೈಜಯಂತಿಮಾಲಾ, ಸುಚಿತ್ರ ಸೇನ್, ದಿಲೀಪ್ ಕುಮಾರ್, ಮೋತಿಲಾಲ್, ಉಷಾನಾಕರ್

ನಿರ್ದೇಶನ ಬಿಮಲ್‌ರಾಯ್ ಸಂಗೀತ ಎಸ್ ಡಿ ಬರ್ಮನ್

ಸೂಚನೆ 12-1-56 ರಿಂದ ಪ್ರತಿದಿನ ಬೆಳಗ್ಗೆ 10 ರಿಂದ 12ರ ವರೆವಿಗೆ ಈ ಕೆಳಗಿನ ದರ ಟಿಕೆಟುಗಳನ್ನು ರಿಸರ್ವ್ ಮಾಡಲಾಗುತ್ತದೆ 1-3-0, 1-10-0, 2-6-0

ವಿಶೇಷ ಸೂಚನೆ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ

ರಾಜಕಮಲ್ ಟಾಕೀಸ್, ಮೈಸೂರು

11-1-56 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

ಗೋಲ್ಡನ್ ಮೂವೀಸ್ ರವರ ಹಿಂದಿ ಚಿತ್ರ ★ ದ ಬಾರ್ಡರ್ ★

ಪಾತ್ರ — ಮಧುಬಾಲಾ, ... ಸುಂದರ್ ಮತ್ತು ಓಂಪ್ರಕಾಶ್

ಕಡೇ ಮೂರು ದಿನಗಳು - ನಲ್ಲತಂಗಾಳ್

SRI GAYATHRI TALKIES

From 10-1-1956 For 3 Days Only

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

13—1—56ನೇ ಶುಕ್ರವಾರದಿಂದ : ಅಮೋಘ ಪ್ರಾರಂಭ

ರಾಜರಾಜೇಶ್ವರಿ ಫಿಲಂ ಕಂಪೆನಿಯವರ ತೆಲುಗು ಚಿತ್ರ

ಎಸ್ ವರಲಕ್ಷ್ಮಿ, ಜಯಮ್ಮ, ... ರಘುರಾಮಯ್ಯ, ರೇಲಂಗಿ, ಸೂರಿಬಾಬು ನಟಿಸಿದ

ಶ್ರೀ ಕೃಷ್ಣ ತುಲಾಭಾರಂ

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರಗಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಅಣೆ

ಚಂದಾ ದರ

ವಿಜಂಟರುಗಳ ಮೂಲಕ
ತಿಂಗಳಿಗೆ ೧ರೂಪಾಯಿ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ ೧೪] SADHVI WEDNESDAY 11-1-1956 ಮೈಸೂರು ಬುಧವಾರ : ೧೧-೧-೧೯೫೬ [ಸಂಚಿಕೆ : ೦೪೬

ಅಧಿಕಾರವನ್ನು ತ್ಯಜಿಸಲು ರಾಜಪ್ರಮುಖರುಗಳ ಒಪ್ಪಿಗೆ

ಅಧಿಕಾರ ಬಿಟ್ಟುಕೊಡಲು ರಾಜಪ್ರಮುಖರುಗಳ ಒಪ್ಪಿಗೆ

...ರಾಬಾದ್, ಪೆಪ್ಸು, ರಾಜಾಸ್ಥಾನ ಮತ್ತು ಮಧ್ಯಭಾರತಗಳ ರಾಜಪ್ರಮುಖರುಗಳು ನೆನ್ನೆ ದೆಹಲಿಯಲ್ಲಿ ಗೃಹ ಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರನ್ನು ಭೇಟಿ ಮಾಡಿ ತಮ್ಮ ಅರಮನೆಗಳ ಆಸ್ತಿ ಮತ್ತು ಕುಟುಂಬಗಳ ನಿಧಿಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿದರೆಂದು ಗೊತ್ತಾಗಿದೆ. ದೇಶದ ಅಭಿವೃದ್ಧಿಗೆ ಅತ್ಯಾವಶ್ಯಕವೆಂಬ ದೃಷ್ಟಿಯಿಂದ, ರಾಜಪ್ರಮುಖರ ಸ್ಥಾನಗಳ ಭವಿಷ್ಯದ ಬಗ್ಗೆ ಕೇಂದ್ರ ಸರ್ಕಾರದ ಕೈಗೊಳ್ಳುವ ನಿರ್ಧಾರಗಳಿಗೆ ರಾಜಪ್ರಮುಖರು ಒಪ್ಪುವುದಾಗಿ ಸೌರಾಷ್ಟ್ರದ ರಾಜಪ್ರಮುಖರಾದ ನವನಗರದ ಜಾಂ ಸಾಹೇಬರು ತಿಳಿಸಿದುದಾಗಿ ವರದಿಯಾಗಿದೆ.

ಮೈಸೂರು ಮತ್ತು ತಿರುವಾಂಕೂರಿನ ರಾಜಪ್ರಮುಖರು ಅನಿವಾರ್ಯದ ನಿಮಿತ್ತ ದೆಹಲಿಗೆ ಹೋಗಲಿಲ್ಲವೆಂದೂ ಅಲ್ಲಿ ಕೈಗೊಳ್ಳುವ ನಿರ್ಧಾರವನ್ನು ತಮಗೆ ತಿಳಿಸುವಂತೆ ಕೋರಿರುವರೆಂದೂ ವರದಿಯಾಗಿದೆ.

ಪುನರ್ವಿಂಗಡಣಾ ಸಮಿತಿಯ ವರದಿಯಲ್ಲಿ ಸೂಚಿಸಿರುವಂತೆ ರಾಜಪ್ರಮುಖರ ಸ್ಥಾನಗಳನ್ನು ರದ್ದು ಮಾಡುವುದರಿಂದ ಉದ್ಭವಿಸುವ ಪ್ರಶ್ನೆಗಳನ್ನು ಪರಿಶೀಲಿಸಲು ರಾಜಸ್ಥಾನದ ಪ್ರಮುಖರು ...ಡಿದ್ದ ಮನವಿಯ ಪ್ರಕಾರ ಈ ಸಭೆಯನ್ನು ಕರೆಯಲಾಗಿದ್ದಿತು

...ನೆಸ್ಲೋವೇಕಿಯದಲ್ಲಿ ಪ್ರವಾಹ; ಕೋಟ್ಯಂತರ ಡಾಲರ್ ನಷ್ಟ

...ಸ್ಲೋವೇಕಿಯ ಪ್ರಾಂತ್ಯದಲ್ಲಿ ನೆನ್ನೆ ವಿಪರೀತ ಹಿಮ ಮತ್ತು ಮಳೆಯ ...ನದಿಗಳಲ್ಲಿ ಪ್ರವಾಹ ಬಂದು ...ರು ಜನರು ಮನೆಮಠಗಳನ್ನು ಕಳೆದುಕೊಂಡರೆಂದೂ, ನೀರು ಮತ್ತು ವಿದ್ಯುಚ್ಛಕ್ತಿ ಸರಬರಾಜು ಕತ್ತರಿಸಲ್ಪಟ್ಟಿವೆಯೆಂದೂ, ಇದರಿಂದ ಕೋಟ್ಯಂತರ ಡಾಲರಿನಷ್ಟು ನಷ್ಟ ಸಂಭವಿಸಿರುವುದೆಂದೂ ವರದಿಯಾಗಿದೆ

ಅಂಗಡಿ ಸಿಬ್ಬಂದಿ ಕಾನೂನು ಉಲ್ಲಂಘನೆಗಾಗಿ ದಂಡ

ನಗರದಲ್ಲಿ ಅಂಗಡಿ ಮತ್ತು ಸಿಬ್ಬಂದಿ ಕಾನೂನುಗಳನ್ನು ಉಲ್ಲಂಘಿಸಿದ, ಕೆಳಗೆ ಕಂಡ ವರ್ತಕರುಗಳಿಗೆ ನೆನ್ನೆ ಈ ರೀತಿಯಲ್ಲಿ ದಂಡವನ್ನು ವಿಧಿಸಲಾಯಿತು — ಗಾಂಧಿ ಚೌಕದ ಬೀಡಿ ಅಂಗಡಿಯ ...ಮ್ಮದ್ ಕಾಸಿಂ ಅವರಿಗೆ ೩ ರೂ., ಅಶೋಕ ರಸ್ತೆಯ ಗಿರವಿ ಅಂಗಡಿ ಮಾಲೀಕ ಶ್ರೀ ...ಮಲ್ ೫ ರೂ., ಶಿವರಾಂಪೇಟೆಯ ದಿನಸಿ ಅಂಗಡಿ ಮಾಲೀಕರು ಶ್ರೀ ಸತ್ಯನಾರಾಯಣಶೆಟ್ಟಿ ... ರೂ., ಸಜ್ಜನ್ ರಾವ್ ಸರ್ಕಲ್ ಬಳಿಯ ಮಿಲಿಟರಿ ಹೋಟೇಲಿನ ಶ್ರೀ ಎಲ್ಲಪ್ಪರವರಿಗೆ ೬ ರೂ. ಮತ್ತು ಕೆ. ... ಅಶೋಕ ರಸ್ತೆಯಲ್ಲಿರುವ ಗಿರವಿ ವ್ಯಾಪಾರದ ... ಶ್ರೀ ಸೋಹನ್ ಲಾಲ್ ಮಹೇಂದ್ರಕುಮಾರ್ ಸಂಸ್ಥೆಯ ಮ್ಯಾನೇಜರ್ ಶ್ರೀ ಸೋಹನ್ ಲಾಲ್ ಮತ್ತು ಅಶೋಕಾ ರಸ್ತೆಯ ೩೦೨ನೇ ನಂಬರು ಮನೆಯ ದಿನಸಿ ಅಂಗಡಿ ಮಾಲೀಕರಾದ ...ಯೂಸುಫ್ ಸಾಹೇಬರವರಿಗೆ ತಲಾ ೧೦ ರೂ

ಭಾರತಕ್ಕೆ ಅಮೆರಿಕದಿಂದ ೫ ಕೋಟಿ ಡಾಲರ್ ಸಹಾಯ

ದ್ವಿತೀಯ ಪಂಚವಾರ್ಷಿಕ ಯೋಜನೆ ಸಂಬಂಧವಾಗಿ ಭಾರತದ ಆರ್ಥಿಕ ಅಭಿವೃದ್ಧಿಗಾಗಿ ಅಮೆರಿಕವು ಒದಗಿಸುವ ಹಣದಲ್ಲಿ ... ಗೆ ೫ ಕೋಟಿ ಡಾಲರುಗಳ ಸಹಾಯ ನೀಡುವುದೆಂದು ದೆಹಲಿಯಲ್ಲಿರುವ ಅಮೆರಿಕದ ರಾಯಭಾರಿ ಜಾನ್ ಷೆರ್ಮನ್ ಕೂಪರ್ ಅವರು ನೆನ್ನೆ ರಾತ್ರಿ ಅಧಿಕೃತ ಪ್ರಕಟಣೆ ಹೊರಡಿಸಿದರು. ಈ ಹಣವು ... ಗಳಿಗೆ ಬೇಕಾಗುವ ಸರಬರಾಜು ... ಗೊಬ್ಬರ, ... ಮತ್ತು ... ಕಾರ್ಯಗಳಿಗಾಗಿ ... ಉಪಯೋಗಿಸಲಾಗುವುದೆಂದು ಹೇಳಲಾಗಿದೆ

ಗೋವಾಕ್ಕೆ ಹೋಗುವ ಹಡಗುಗಳಿಗೆ ಕಾರ್ಮಿಕರ ಬಹಿಷ್ಕಾರ

ಭಾರತದಲ್ಲಿ ಪೋರ್ಚುಗೀಸರ ವಸಾಹತಾದ ಗೋವದೊಡನೆ ... ಸಂಪರ್ಕವಿಟ್ಟುಕೊಂಡಿರುವ ಎಲ್ಲ ಹಡಗುಗಳನ್ನೂ ಬಹಿಷ್ಕರಿಸಬೇಕೆಂದು ... ಕಾರ್ಮಿಕರು ನಿರ್ಧರಿಸಿ ... ನಿನ್ನೆಯಿಂದ ಅದನ್ನು ಜಾರಿಗೆ ತಂದಿರುವರೆಂದು ಗೊತ್ತಾಗಿದೆ

ಶಿವಪ್ರಕಾಶಂರವರನ್ನು ಬೀಳ್ಕೊಡುವ ಸಮಾರಂಭ

ಮಧ್ಯಭಾರತದ ... ವಿದ್ಯುಚ್ಛಕ್ತಿ ... ಯ ಸೂಪರಿಂಟೆಂಡಿಂಗ್ ಇಂಜನಿಯರಾಗಿ ನೇಮಿಸಲ್ಪಟ್ಟಿರುವ ಮೈಸೂರು ಪವರ್ ಅಂಡ್ ಲೈಟ್ ಕಛೇರಿಯ ಸೂಪರಿಂಟೆಂಡೆಂಟ್ ಶ್ರೀ ಶಿವಪ್ರಕಾಶಂರವರನ್ನು ಬೀಳ್ಕೊಡಲು ಮತ್ತು ... ವಿದ್ಯುತ್ಕೇಂದ್ರದ ಸೂಪರಿಂಟೆಂಡೆಂಟರಾಗಿ ಬಡ್ತಿ ಹೊಂದಿ ನೇಮಿಸಲ್ಪಟ್ಟಿರುವ ಶ್ರೀ ಕಲ್ಲೋಳಿಮಠರವರ ಗೌರವಾರ್ಥವಾಗಿಯೂ ಮೈಸೂರು ಜಿಲ್ಲಾ ವಿದ್ಯುಚ್ಛಕ್ತಿ ಕಂಟ್ರಾಕ್ಟರುಗಳ ಸಂಘದವರು ಕಳೆದ ಶನಿವಾರ ಶ್ರೀರಂಗಪಟ್ಟಣದಲ್ಲಿ ಒಂದು ಸಮಾರಂಭವನ್ನು ಏರ್ಪಡಿಸಿದ್ದರು. ಶ್ರೀ ರಂಗನಾಥಸ್ವಾಮಿಯವರಿಗೆ ಪೂಜೆಯೂ, ಅನಂತರ ಭೋಜನ ಕೂಟವೂ ಆಯಿತು. ಸಮಾರಂಭದ ವ್ಯವಸ್ಥಾಪಕರಾದ ಶ್ರೀ ಕೆ ಎಸ್ ರಾಮಚಂದ್ರಯ್ಯನವರು ಮಾತನಾಡಿ, ಶ್ರೀ ಶಿವಪ್ರಕಾಶಂರವರು ಕಂಟ್ರಾಕ್ಟರುಗಳ ಬಗ್ಗೆ ಸಹಾನುಭೂತಿ ಹೊಂದಿದ್ದರೆಂದೂ, ಅವರು ಇಲಾಖೆಯ ಗೌರವವನ್ನು ಎತ್ತಿಹಿಡಿಯುತ್ತಿದ್ದರೆಂದೂ ತಿಳಿಸಿ, ಮಧ್ಯಭಾರತದಲ್ಲೂ ಅವರು ಖ್ಯಾತಿಗಳಿಸುವರೆಂಬ ಮತ್ತು ಮೈಸೂರಿಗೆ ಕೀರ್ತಿ ತರುವರೆಂಬ ಭರವಸೆಯನ್ನು ವ್ಯಕ್ತಪಡಿಸಿದರು

ರೇಷ್ಮೆ ವ್ಯವಸಾಯಗಾರರ ಮತ್ತು ತಯಾರಕರ ಸಮ್ಮೇಳನ

ನಂಜನಗೂಡು ಸಬ್ ಡಿವಿಷನ್ನಿನ ರೇಷ್ಮೆ ವ್ಯವಸಾಯಗಾರರ ಮತ್ತು ತಯಾರಕರ ಸಮ್ಮೇಳನದ ಆರಂಭೋತ್ಸವವನ್ನು ಇದೇ ೧೬ನೇ ತಾರೀಕು ಮಧ್ಯಾಹ್ನ ಗೃಹಸಚಿವ ಸಿದ್ದವೀರಪ್ಪನವರು ಸಂತೆಮರಹಳ್ಳಿಯಲ್ಲಿ ನೆರವೇರಿಸುವರು. ಕೇಂದ್ರ ರೇಷ್ಮೆ ಬೋರ್ಡಿನ ಅಧ್ಯಕ್ಷ ಶ್ರೀ ಬಿ ನಂಜಪ್ಪನವರು ಅಧ್ಯಕ್ಷಸ್ಥಾನ ವಹಿಸುವರು

ಪರೀಕ್ಷೆಗಳನ್ನು ಮುಂದುವರಿಸಲು ವಿದ್ಯಾರ್ಥಿಗಳ ಮುಷ್ಕರ

ಸ್ವಂ ವ. ವರದಿ] ಬೆಂಗಳೂರು ೧೦

ಇಲ್ಲಿನ ಸೆಂಟ್ರಲ್, ಪಾಲಿಟೆಕ್ನಿಕ್ ಮತ್ತು ಎಸ್ ಎಂ ಶ್ರೀನಿವಾಸಯ್ಯ ಇಂಜನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂದು ಈ ದಿನ ತರಗತಿಗಳಿಗೆ ಹೋಗದೆ ಪ್ರದರ್ಶನ ನಡೆಸಿದರು. ಸುಮಾರು ೪೦೦ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಆರ್... ಕಛೇರಿಗೆ ಹೋಗಿ ... ಪ್ರಿನ್ಸಿಪಾಲರನ್ನು ಕಂಡರು

ನೆನ್ನೆ ... ಸರ್ಕಾರಿ ... ಮತ್ತು ಇಂಜನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗದೆ ಮುಷ್ಕರ ನಡೆಸಿದರು. ... ವಿದ್ಯಾರ್ಥಿಗಳು ... ಕಾಲೇಜಿನಲ್ಲಿ ಸಭೆ ಸೇರಿ ... ಮುಂದಾಗಿ ನಡೆಯಲಿರುವ ... ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂದು ಒತ್ತಾಯಪಡಿಸುವ ಮತ್ತು ಇತರ ನಿರ್ಣಯಗಳನ್ನು ಮಾಡಿ, ... ಪ್ರಿನ್ಸಿಪಾಲರಿಗೂ ಮತ್ತು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲರಿಗೂ ಕಳುಹಿಸಿದರು

ಈ ದಿನ ... ವಿದ್ಯಾರ್ಥಿಗಳು ಸೆಂಟ್ರಲ್ ಕಾಲೇಜು, ... ಮತ್ತು ... ಕಾಲೇಜುಗಳ ತರಗತಿ ಕೊಠಡಿಗಳನ್ನು ... ತರಗತಿಗಳಲ್ಲಿ ಹಾಜರಾಗಿದ್ದ ವಿದ್ಯಾರ್ಥಿಗಳನ್ನು ಮುಷ್ಕರಕ್ಕೆ ಸೇರುವಂತೆ ಪ್ರಚೋದಿಸಿದರು

ಪ್ರದರ್ಶನಕಾರರು ಅಶ್ಲೀಲವಾಗಿ ವರ್ತಿಸಿ, ಶಾಲೆಗಳಲ್ಲಿ ಹಾಜರಾಗಿದ್ದ ವಿದ್ಯಾರ್ಥಿಗಳನ್ನು ಬಲಾತ್ಕರಿಸಿ ಹೊರಕ್ಕೆ ಎಳೆಯುತ್ತಿದ್ದರೆಂದೂ, ಅಧ್ಯಾಪಕರುಗಳನ್ನು ಬೈದು ರೇಗಿಸುತ್ತಿದ್ದರೆಂದೂ ವರದಿಯಾಗಿದೆ

○ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ದಿನ ಮಧ್ಯಾಹ್ನ ಹೈದರಾಬಾದಿನಿಂದ ಇಲ್ಲಿಗೆ ಆಗಮಿಸಿದರು

ಬೊಂಬಾಯಿ ಸಮಸ್ಯೆಗೆ ಮಹಾರಾಷ್ಟ್ರದವರ ಸಲಹೆ

ಬೊಂಬಾಯಿ ನಗರದ ಭವಿಷ್ಯದ ನಿರ್ಧಾರದ ಬಗ್ಗೆ ಹೈಕಮ್ಯಾಂಡಿನವರು ಒಪ್ಪಬಹುದಾದ ಸೂತ್ರವೊಂದನ್ನು ಮಹಾರಾಷ್ಟ್ರದ ನಾಯಕರು ಇಂದು ಕಾಂಗ್ರೆಸ್ ಹೈಕಮ್ಯಾಂಡಿನವರ ಮುಂದೆ ಮಂಡಿಸಲಿರುವರೆಂದೂ, ಬೊಂಬಾಯಿ ನಗರವನ್ನು ಕೇಂದ್ರದ ಆಡಳಿತಕ್ಕೊಳಪಡಿಸಲು ಅವರು ಒಪ್ಪಿ ಮಹಾರಾಷ್ಟ್ರದ ರಾಜಧಾನಿಯು ಬೊಂಬಾಯಿ ನಗರದಲ್ಲೇ ಇರಬೇಕೆಂದು ಸೂಚಿಸಿರುವರೆಂದೂ ಗೊತ್ತಾಗಿದೆ. ಮಹಾರಾಷ್ಟ್ರ ಮತ್ತು ಬೊಂಬಾಯಿಗಳ ಭವಿಷ್ಯವನ್ನು ಕುರಿತು ಇಂದು ಚರ್ಚೆ ನಡೆಸಲು ಮಹಾರಾಷ್ಟ್ರದ ನಾಯಕರುಗಳನ್ನು ಕಾಂಗ್ರೆಸ್ ಹೈಕಮಾಂಡಿನವರು ದೆಹಲಿಗೆ ಆಹ್ವಾನಿಸಿದ್ದಾರೆ

ವಿದರ್ಭವನ್ನು ಮಹಾರಾಷ್ಟ್ರದಲ್ಲಿ ಸೇರ್ಪಡೆಗೊಳಿಸುವ ಬಗ್ಗೆ ಅಲ್ಲಿನ ನಾಯಕರನ್ನು ಒಪ್ಪಿಸಲು ಅವರನ್ನೂ ದೆಹಲಿಗೆ ಆಹ್ವಾನಿಸಲಾಗಿದೆ

ಅರುಣಾಚಲ ಅಡಿಗಳ್‌ರವರ ೩೩೬ ಗಂಟೆಗಳ ಭೂ ಸಮಾಧಿ

೧೪ ದಿನಗಳ ಕಾಲ ಭೂಸಮಾಧಿಯಲ್ಲಿದ್ದ ... ದಿಂದ ಅರುಣಾಚಲ ಅಡಿಗಳ್ ಎಂಬ ಯೋಗಿಯು ಕೊಯಮತ್ತೂರಿನಲ್ಲಿ ಸಾರ್ವಜನಿಕರ ಎದುರಿನಲ್ಲಿ ಸಮಾಧಿಯನ್ನು ಪ್ರವೇಶಿಸಿ ನೆನ್ನೆ ಹೊರಬಂದರೆಂದೂ, ಈ ಘಟನೆಯನ್ನು ಅಲ್ಲಿನ ಕಲೆಕ್ಟರ್, ಅಧಿಕಾರಿಗಳೂ, ಇತರ ಮುಖಂಡರೂ ನೋಡಿದರೆಂದೂ ವರದಿಯಾಗಿದೆ. ಯೋಗಿಯು ೩೩೬ ಗಂಟೆ ಕಾಲ ಶ್ವಾಸಬಂಧ ಮಾಡಿ, ಅವರ ಶಿಷ್ಯರೊಬ್ಬರ ಸಹಾಯದಿಂದ ... ಸಮಾಧಿಯಲ್ಲಿ ಅವರು ಒಂದು ತುಂಡು ಬಟ್ಟೆಯನ್ನು ... ಧರಿಸಿದ್ದರೆಂದೂ ಹೇಳಲಾಗಿದೆ. ಯೋಗಿ ಅರುಣಾಚಲ ಅಡಿಗಳ್‌ರವರು ೧೪ ದಿನಗಳ ಕಾಲ ಸಮಾಧಿಯಲ್ಲಿರಲು ಉದ್ದೇಶಿಸಿದ್ದರು. ನೆನ್ನೆ ಅತ್ಯಂತ ಶುಭ ದಿನವಾದುದರಿಂದ ನೆನ್ನೆಯೇ ... ಸಮಾಧಿಯಿಂದ ಮೈಕ್ರೋಫೋನ್ ಮೂಲಕ ಮೊನ್ನೆ ರಾತ್ರಿ ತಿಳಿಸಿದುದರಿಂದ ನೆನ್ನೆ ಸಮಾಧಿಗೆ ಮುಚ್ಚಲಾಗಿದ್ದ ಮಣ್ಣನ್ನು ತೆಗೆದನಂತರ ಅವರು ... ಹೊರಕ್ಕೆ ಬಂದು, ... ಸ್ವೀಕರಿಸಿ ... ಅವರು ನೆನ್ನೆಯಿಂದಲೇ ಮೂರು ದಿನಗಳ ಮೌನವ್ರತವನ್ನು ಆರಂಭಿಸಿದರು

ಮದರಾಸಿನಲ್ಲಿ ೧೦೦ ರೂ. ಗಳ ಮೋಸದ ನೋಟುಗಳ ತಯಾರಿಕೆ

ಮದರಾಸು ಮತ್ತು ಆಂಧ್ರಗಳಲ್ಲಿ ಲಕ್ಷಾಂತರ ರೂ. ... ೧೦೦ ರೂ. ಮೋಸದ ನೋಟುಗಳನ್ನು ತಯಾರಿಸುತ್ತಿರುವವರ ಬಗ್ಗೆ ಶೋಧನೆ ನಡೆಸುತ್ತಿರುವ ನಗರದಲ್ಲಿ ಇದುವರೆಗೆ ಆರು ... ವನ್ನು ... ವಶಪಡಿಸಲಾಗಿರುವುದೆಂದೂ, ಆಂಧ್ರದಲ್ಲಿ, ನೂರು ರೂಪಾಯಿಯ ೬೬೦ ನೋಟುಗಳನ್ನು ವಶಪಡಿಸಿಕೊಳ್ಳಲಾಗಿರುವುದೆಂದೂ ಗೊತ್ತಾಗಿದೆ. ಮದರಾಸಿನಲ್ಲಿ ಒಂದು ಮುದ್ರಣ ಯಂತ್ರ, ... ಚೂರುಗಳು ಮತ್ತು ಇತರ ಉಪಕರಣಗಳನ್ನೂ ವಶಪಡಿಸಿಕೊಳ್ಳಲಾಗಿದೆ

ದೈನಂದಿನ ಪತ್ರಿಕೆಗಳ ಬಗ್ಗೆ ಉಪನ್ಯಾಸ

ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ... ದ ಆಶ್ರಯದಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ ... ರಂಗಯ್ಯನವರು "ದೈನಂದಿನ ಪತ್ರಿಕೆಗಳು" ಎಂಬ ವಿಷಯವಾಗಿ ಕಾಲೇಜಿನ ೩೭ ನೇ ನಂಬರು ಕೊಠಡಿಯಲ್ಲಿ ಉಪನ್ಯಾಸ ಮಾಡುವರು

ಸಂಸ್ಥಾನಕ್ಕೆ ಕೇಂದ್ರ ರೇಷ್ಮೆ ಸಲಹಾ ಮಂಡಲಿ ಅಧ್ಯಕ್ಷರ ಭೇಟಿ

ಸಂಸ್ಥಾನದಲ್ಲಿ ರೇಷ್ಮೆ ವ್ಯವಸಾಯ ಮತ್ತು ಕೈಗಾರಿಕೆಯ ಅಭಿವೃದ್ಧಿಯ ಬಗ್ಗೆ ಪರಿಶೀಲನೆ ನಡೆಸಲು ಈ ತಿಂಗಳ ಕೊನೆಯಲ್ಲಿ ಕೇಂದ್ರ ರೇಷ್ಮೆ ಸಲಹಾ ಮಂಡಲಿಯ ಅಧ್ಯಕ್ಷ ಶ್ರೀ ನಂಜಪ್ಪನವರೂ ಮತ್ತು ಹಲವು ಸದಸ್ಯರೂ ಸಂಸ್ಥಾನಕ್ಕೆ ಭೇಟಿ ಕೊಡುವರೆಂದು ವರದಿಯಾಗಿದೆ.

ವಿವಿಧ ಅಪರಾಧಗಳಿಗಾಗಿ ದಂಡ

ಮೈಸೂರು ೧೦

ದ್ವಿತೀಯ ನಗರ ನ್ಯಾಯಾಧೀಶರು ವಿವಿಧ ಅಪರಾಧಗಳಿಗಾಗಿ ನಿನ್ನೆ ಕೆಳಗೆ ಕಂಡಂತೆ ದಂಡ ವಿಧಿಸಿರುತ್ತಾರೆ.—

ದೀಪವಿಲ್ಲದೆ ಸೈಕಲ್ ಸವಾರಿ ಮಾಡಿದ ವಿಶ್ವನಾಥ, ಎಲ್. ಎಸ್. ವೆಂಕಟಾದ್ರಿ ಮತ್ತು ಮಾಧವರಿಗೆ ತಲಾ ೩ ರೂ

ರಸ್ತೆ ಬಲಗಡೆಯಲ್ಲಿ ಬೈಸಿಕಲ್ ಬಿಟ್ಟಿದಕ್ಕಾಗಿ ಮಿಸ್ರಿಮಲ್ ಮತ್ತು ಇತರ ೭ ಮಂದಿಗೆ ತಲಾ ೩ ರೂ, ವಿಟ್ರಮಾಂ ಥಾಮಸ್ ಎಂಬುವನಿಗೆ ೫ ರೂ.

ಸಂತೆಪೇಟೆಯಲ್ಲಿ ಬಹಳ ಹೊತ್ತು ಗಾಡಿಗಳನ್ನು ಬಿಟ್ಟಿದ್ದ ರಂಗಯ್ಯ ಮತ್ತು ಇತರ ಮೂವರಿಗೆ ತಲಾ ೩ ರೂ

ಸಿನಿಮಾ ಬಳಿ ಟಿಕೆಟ್ ಕೊಳ್ಳುವಾಗ ಕ್ಯೂನಲ್ಲಿ ನಿಂತಿದ್ದವರನ್ನು ಮುಂದಕ್ಕೆ ತಳ್ಳಿ ಗಲಾಟೆ ಮಾಡಿದ ಶಿವಣ್ಣ, ನೀಲಕಂಠ ಮತ್ತು ಶಿವ ಎಂಬುವರಿಗೆ ತಲಾ ೩ ರೂ.

ಮುಷ್ಕರ ನಡೆಯುತ್ತಿದೆಯೆಂದು ಘೋಷಿಸಿದ್ದಕ್ಕಾಗಿ ದಂಡ

ವಜೀರ್ ಮತ್ತು ಸಾಬ್ಜಾನ್ ಎಂಬುವರು ಟ್ಯಾಕ್ಸಿ ಮುಷ್ಕರ ನಡೆಯುತ್ತಿದೆ ಎಂದು ದೊಂಡಾಗಿ ಘೋಷಿಸುತ್ತಾ, ಸಾರ್ವಜನಿಕ ನೆಮ್ಮದಿಗೆ ಭಂಗ ತರುವಂತಹ ರೀತಿಯಲ್ಲಿ ವರ್ತಿಸಿದರೆಂದು ಪೋಲಿಸರು ಹೂಡಿದ್ದ ಮೊಕದ್ದಮೆಯಲ್ಲಿ ನಿನ್ನೆ ಅವರಿಗೆ ಕ್ರಮವಾಗಿ ೧೦ ಮತ್ತು ೫ ರೂ ಗಳ ದಂಡವನ್ನು ವಿಧಿಸಲಾಯಿತು

ಕಾಂಗ್ರೆಸ್ ಸದಸ್ಯತ್ವದ ಪುಸ್ತಕಗಳನ್ನು ವಾಪಸು ಕೊಡಲು ಮನವಿ

ಕಾಂಗ್ರೆಸ್ ಸದಸ್ಯತ್ವದ ಪುಸ್ತಕಗಳನ್ನು ಈ ತಿಂಗಳ ೧೭ ನೇ ತಾರೀಖಿನೊಳಗಾಗಿ ವಾಪಸು ಕೊಡಬೇಕೆಂದೂ, ಅನಂತರ ಬರುವ ಪುಸ್ತಕಗಳನ್ನು ಸ್ವೀಕರಿಸುವುದಿಲ್ಲವೆಂದೂ ನಗರ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಟಿ ವೆಂಕಟರಮಣಯ್ಯನವರು ತಿಳಿಸಿರುತ್ತಾರೆ ಕಾಂಗ್ರೆಸ್ ಕಛೇರಿಯನ್ನು ಪ್ರತಿ ದಿನ ರಾತ್ರಿ ೮ರಿಂದ ೯ರವರೆಗೆ ತೆರೆದಿಡಲಾಗುವುದು.

ಮೈಸೂರು ಪೇಟೆ ಧಾರಣೆ

	ರೂ. ಇಂದ	ರೂ. ವರೆಗೆ
ಕಡಲೆಕಾಯಿ	೧೪ ೩ ೦	೧೪ ೪ ೦
ಎಳ್ಳು	೩೨ ೧೪ ೦	
ಪತಲುಬೀಜ	೨೮ ೦ ೦	೨೯ ೮ ೦
ಹುಚ್ಚೆಳ್ಳು	೩೩ ೧೪ ೦	೭೨ ೪ ೦
ಹುರುಳಿ	೨೧ ೧೨ ೦	೨೪ ೦ ೦
ಹೆಸರು	೪೨ ೪ ೦	೪೫ ೦ ೦
ಹಲಸಂದೆ	೩೯ ೨ ೦	೪೫ ೪ ೦
ಅವರೆ	೫೦ ೩ ೦	
ಉದ್ದು	೫೦ ೦ ೦	೫೦ ೨ ೪
ತೊಗರಿ	೩೧ ೨ ೦	೩೧ ೧೨ ೦
ಕಿರುಬಿನದೀಜ	೩೩ ೦ ೦	೩೩ ೦ ೦
ಧನಿಯ	೩೧ ೦ ೦	೩೪ ೩ ೦
ಹುಣಸೇಹಣ್ಣು	೨ ೬ ೦	೫ ೧೪ ೦
ಸೀಗೆಕಾಯಿ	೩ ೧೨ ೦	
ಮೆಣಸಿನಕಾಯಿ	೭ ೦ ೦	೧೪ ೩ ೦
ತೆಂಗಿನಕಾಯಿ ೧ ೧೦೦	೧೪೬ ೮ ೦	೨೨೮ ೮ ೦

ರಷ್ಯನರಿಗೆ ಯೋಗಾಭ್ಯಾಸದಲ್ಲಿ ಆಸಕ್ತಿ

ರಷ್ಯದ ವಿಜ್ಞಾನಿಗಳಿಗೆ ಭಾರತದ ಯೋಗಾಭ್ಯಾಸದಲ್ಲಿ ಬಹಳ ಆಸಕ್ತಿಯುಂಟಾಗುತ್ತಿರುವುದೆಂದು ಗೊತ್ತಾಗಿದೆ ಇತ್ತೀಚೆಗೆ ಬೊಂಬಾಯಿಗೆ ಆಗಮಿಸಿದ ರಷ್ಯದ ಶಸ್ತ್ರ ವೈದ್ಯರ ನಿಯೋಗದ ನಾಯಕ ಡಾ॥ ಎ ಎ ವಿಷ್ಣವಿಸ್ಕಿಯವರು, ಯೋಗಾಭ್ಯಾಸದ ಮೂಲಕ ಅನೇಕ ವ್ಯಾಧಿಗಳಿಗೆ ಚಿಕಿತ್ಸೆ ನಡೆಸುವ ವಿಧಾನಗಳನ್ನು ತಿಳಿದುಕೊಂಡರೆಂದೂ, ಬೊಂಬಾಯಿನ ಯೋಗ ಶಾಲೆಯ ಸಂಸ್ಥಾಪಕರಾದ ಶ್ರೀ ಯೋಗೇಂದ್ರರವರು ಎಲ್ಲ ಕ್ರಮಗಳನ್ನೂ ಅವರ ನಿಯೋಗದವರಿಗೆ ಎಕ್ಸ್‌ರೇ ಚಿತ್ರಗಳ ಮೂಲಕ ವಿವರಿಸಿದರೆಂದೂ ವರದಿಯಾಗಿದೆ ನಿಯೋಗದವರು ಯೋಗಾಭ್ಯಾಸದ ಬಗ್ಗೆ ಬರೆಯಲಾಗಿದ್ದ ಪುರಾತನ ಓಲೆಗರಿ ಗ್ರಂಥಗಳನ್ನೂ ನೋಡಿದರು

ಅಮೆರಿಕದಿಂದ ಪ್ರಬಲ ಹೈಡ್ರೊಜನ್ ಬಾಂಬ್ ಪರೀಕ್ಷೆ

ಅಮೆರಿಕವು ಹೊಸದಾಗಿ ತಯಾರಿಸಿರುವ ಅತ್ಯಗಾಧವಾದ ಸೂಪರ್ ಹೈಡ್ರೊಜನ್ ಬಾಂಬನ್ನು ಬರುವ ಮೇ ತಿಂಗಳಲ್ಲಿ ಪೆಸಿಫಿಕ್ ಸಾಗರದಲ್ಲಿ ಆಸ್ಫೋಟಿಸಲಾಗುವುದೆಂದೂ. ಈ ಬಗ್ಗೆ ವಿಶ್ವದ ರಾಷ್ಟ್ರಗಳು ಪ್ರತಿಭಟಿಸಿದರೂ ಅದನ್ನು ಲಕ್ಷ್ಯ ಮಾಡಲಾಗುವುದಿಲ್ಲವೆಂದೂ ವರದಿಯಾಗಿದೆ ರಷ್ಯದಲ್ಲಿ ಅಣುಅಸ್ತ್ರಗಳ ತಯಾರಿಕೆಯು ಹೆಗ್ಗಿಲ್ಲದೆ ಇರುವುದರಿಂದ ಆತ್ಮರಕ್ಷಣೆಯ ನಿಮಿತ್ತ ಅಮೆರಿಕವು ವಿಶ್ವದ ರಾಷ್ಟ್ರಗಳ ಅಸಮಾಧಾನವನ್ನು ಎದುರಿಸಬೇಕಾಗಿರುವುದೆಂದೂ ಅಲ್ಲಿನ ಕಾಂಗ್ರೆಸ್ ವಲಯಗಳಲ್ಲಿ ಹೇಳಲಾಗುತ್ತಿದೆ

ಕನ್ನಡ ಶೀಘ್ರಲಿಪಿ ಸಂಸ್ಥಾಪಕ ಎನ್. ದೇವರಾವ್‌ರವರ ನಿಧನ

ಸಂಸ್ಥಾನ ಸರ್ಕಾರದ ಸಹಾಯಕ ಕಾರ್ಯದರ್ಶಿಗಳಾಗಿದ್ದು, ೨೦ ವರ್ಷಗಳ ಹಿಂದೆ ನಿವೃತ್ತರಾದ ಶ್ರೀ ಎನ್ ದೇವರಾವ್‌ರವರು ಕಳೆದ ಭಾನುವಾರ ಬೆಂಗಳೂರಿನ ಮಲ್ಲೇಶ್ವರದಲ್ಲಿ ನಿಧನರಾದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ಅವರಿಗೆ ೮೦ ವರ್ಷ ವಯಸ್ಸಾಗಿತ್ತು

ದಿವಂಗತ ದೇವರಾವ್‌ರವರು ಕನ್ನಡ ಶೀಘ್ರಲಿಪಿಯನ್ನು ಕಂಡುಹಿಡಿದು, ಅವರಲ್ಲಿ ಅನೇಕರಿಗೆ ಶಿಕ್ಷಣ ಕೊಟ್ಟು ತರಪೇತು ಮಾಡಿದ್ದರು ಅವರು ಅನೇಕ ವಿಧಗಳಲ್ಲಿ ಸಾರ್ವಜನಿಕ ಸೇವೆ ಸಲ್ಲಿಸಿದ್ದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಕನ್ನಡ ಗೀತೆಗಳು ೭ ೩೦ ಕೆ ಎಸ್. ಬೆಂಗಳೂರಮ್ಮ ಅವರ ೮ ೧೫ ಕಾವ್ಯ ವಾಚನ ಮಧ್ಯಾಹ್ನ ೧೨ ಮತ್ತು ೨ ೧೫ ಕೆ ಎಸ್. ವೆಂಕಟರಮಣರಾವ್ ಗಾಯನ ೧೨.೩೦ ರೆಕಾರ್ಡುಗಳು ೧ ಮತ್ತು ಸಂಜೆ ೬.೩೦ ರಾಜಮ್ಮ ಸಿ. ಆರ್ ಗಾಯನ ೧.೩೦ ಗೋಟು ವಾದ್ಯ. ೭ ರೆಕಾರ್ಡುಗಳು ಸಂಜೆ ೬.೧೫ ಕನ್ನಡ ಗೀತೆಗಳು. ೬.೩೦ ಗ್ರಾಮಸ್ಥರಿಗಾಗಿ ೭ ೪೦ ಕಾವ್ಯವಾಚನ "ಚಿತ್ರದುರ್ಗದ ಪತನ" ಟಿ ಆರ್ ಸುಬ್ಬರಾಯರ ಕಾದಂಬರಿ ೮ ೪೦ ರೆಕಾರ್ಡ್ ೯-೩೦ ರವರೆಗೆ—ಸಂಸ್ಕೃತ ಕಾರ್ಯಕ್ರಮ ೧೦ ಹಿಮ್ಮ ಹಬ್ಬದ ಗೀತೆಗಳು.

ಪಾಕಿಸ್ತಾನಕ್ಕೆ ಅಫ್ಘಾನಿಸ್ತಾನದ ಪ್ರತಿಕ್ರಿಯೆ

ಪೆಷಾವರದಲ್ಲಿದ್ದ ಅಫ್ಘಾನಿಸ್ತಾನದ ರಾಯಭಾರಿಗೆ ಮನ್ನಣೆಯನ್ನು ರದ್ದುಗೊಳಿಸಿ, ಅವರು ಅಲ್ಲಿರುವುದು ಅಪೇಕ್ಷಣೀಯವಲ್ಲವೆಂದು ಪಾಕಿಸ್ತಾನ ಸರ್ಕಾರದವರು ಘೋಷಿಸಿದ ಬಗ್ಗೆ ಅಫ್ಘಾನ್ ಸರ್ಕಾರದವರು ಪ್ರತಿಕ್ರಿಯೆಯನ್ನು ಕೈಗೊಂಡು ಕಾಬೂಲಿನಲ್ಲಿರುವ ಪಾಕಿಸ್ತಾನದ ವಾಣಿಜ್ಯ ಪ್ರತಿನಿಧಿಗೆ ಎಲ್ಲ ಮನ್ನಣೆಗಳನ್ನೂ ರದ್ದು ಮಾಡಿ, ಅವರು ಅಲ್ಲಿರುವುದು ಅನುಚಿತವೆಂದು ತಿಳಿಸಿ, ಒಂದು ವಾರದೊಳಗೆ ಅವರು ಅಫ್ಘಾನಿಸ್ತಾನವನ್ನು ಬಿಟ್ಟುಹೋಗಬೇಕೆಂದು ಸೂಚಿಸಿರುವುದಾಗಿ ಗೊತ್ತಾಗಿದೆ

ಗೋವಾದಲ್ಲಿ ಜಾತ್ರೆಗಳಿಗೆ ನಿಷೇಧ

ಗೋವಾದಲ್ಲಿ ನಡೆಯುವ ಜಾತ್ರೆಗಳ ಸಮಯದಲ್ಲಿ ಜನರು ಪರಸ್ಪರ ಕಲೆತು, ಅಲ್ಲಿ ಹದಗೆಡುತ್ತಿರುವ ಆಂತರಿಕ ಪರಿಸ್ಥಿತಿಗಳ ಬಗ್ಗೆ ಚರ್ಚೆ ನಡೆಸುವುದನ್ನು ತಪ್ಪಿಸುವ ಉದ್ದೇಶದಿಂದ ಪೋರ್ಚುಗೀಸ್ ಸರ್ಕಾರದವರು ಅಲ್ಲಿ ಈ ವರ್ಷ ಜಾತ್ರೆಗಳನ್ನು ನಡೆಸಕೂಡದೆಂದು ನಿಷೇಧಾಜ್ಞೆ ಹೊರಡಿಸಿರುವರೆಂದು ಗೊತ್ತಾಗಿದೆ

ಗೂಡ್ಸ್ ರೈಲಿನಲ್ಲಿ ಬೆಂಕಿಯಿಂದ ೯ ಜನರ ಮರಣ

ಆಗ್ರಾ ಮತ್ತು ಝಾನ್ಸಿ ವಿಭಾಗದ ಡಾಬ್ರಾ-ಸೋನಾಗಿರ್ ಎಂಬ ನಿಲ್ದಾಣಗಳ ನಡುವೆ ಮೊನ್ನೆ ಗೂಡ್ಸ್ ರೈಲೊಂದರ ವ್ಯಾಗನ್ನಿನಲ್ಲಿ ಬೆಂಕಿಯು ಕಾಣಿಸಿಕೊಂಡು, ಅದರಿಂದ ೯ ಜನರು ಸುಟ್ಟು ಸತ್ತರು, ಎಂಟು ಮಂದಿ ಗಾಯಗೊಂಡರೆಂದೂ, ಅವರ ಪೈಕಿ ಐವರ ಸ್ಥಿತಿಯು ಚಿಂತಾಜನಕವಾಗಿರುವುದೆಂದೂ ವರದಿಯಾಗಿದೆ

O ಭಾರತಕ್ಕೆ ಅಮೆರಿಕದ ನೆರವಿನಲ್ಲಿ ಒಂದು ಕೋಟಿ ಡಾಲರಿನಷ್ಟು ಬೇಕಾದ ಗೋಧಿ ಪಾಕಿಸ್ತಾನಕ್ಕೆ ಮಂಜೂರು ಮಾಡಿರುವ ಎರಡು ಕೋಟಿ ಡಾಲರಿಗೆ ಅನುಗುಣವಾಗಿ ಕೊಡುವುದಿಲ್ಲವೆಂದು ಅಮೆರಿಕದ ಸ್ಟೇಟ್ ಇಲಾಖೆಯ ಅಧಿಕಾರಿಗಳು ಹೇಳಿರುವರು

Edited, Printed and Published by A. R. Nagarajan at Sadhvi Press, D Subbiah Road, Mysore

ಮೈಸೂರಿನಲ್ಲಿ ಪ್ರತಿ ತಿಂಗಳು 17 ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ಕೇಂದ್ರ ಸರ್ಕಾರದ ಕಾರ್ಮಿಕ ಮಂತ್ರಿ ಶ್ರೀ ಆಬಿದ್ ಅಲಿಯವರು ಇದೇ ೨೦ನೇ ತಾರೀಖು [illegible] ನಗರಕ್ಕೆ ಆಗಮಿಸುವರೆಂದೂ, ಐ ಎನ್ ಟಿ ಯು ಸಿ ಗೆ ಸೇರಿರುವ ಎಲ್ಲಾ ಕಾರ್ಮಿಕ ಸಂಘಗಳ ಪ್ರತಿನಿಧಿಗಳೂ ಅವರನ್ನು ಸ್ವಾಗತಿಸಲು ರೈಲ್ವೆ ಸ್ಟೇಷನ್ನಿಗೆ ಬರಬೇಕೆಂದೂ ಐ ಎನ್ ಟಿ ಯು ಸಿ ಕಾರ್ಯದರ್ಶಿ ಶ್ರೀ ಎ ರಾಮಣ್ಣನವರು ಕೋರಿರುತ್ತಾರೆ

ನೂತನ ಕನ್ನಡ ಪ್ರಾಂತದಲ್ಲಿ ರಾಯಚೂರು ಜಿಲ್ಲೆಯ ಆಲಂಪುರ ಮತ್ತು ಗುಲ್ಬರ್ಗಾ ಜಿಲ್ಲೆಯ ತಾಂಡೂರು ಮತ್ತು ಕೊಡಂಗಲ್ ತಾಲ್ಲೂಕುಗಳನ್ನು ಸೇರಿಸುವುದಿಲ್ಲ ಬೀದರ್ ಜಿಲ್ಲೆಯ ಹುಮ್ನಾಬಾದ್, ಬೀದರ್, ಭಾಲ್ಕಿ ಮತ್ತು ಸಂತಪುರ ತಾಲ್ಲೂಕುಗಳನ್ನು ಸೇರಿಸಲಾಗುವುದು.

ಜಲಪುರಿಯಲ್ಲಿ ಸಂಸ್ಕೃತಿ ಪ್ರಸಾರ ಕಾರ್ಯಕ್ರಮ

ಮೈಸೂರು ೧೬

ನಗರದ ವಯಸ್ಕರ ಶಿಕ್ಷಣ ಸಮಿತಿಯವರು ಜಲಪುರಿ ಸಮಾಜ ಶಿಕ್ಷಣ ಕೇಂದ್ರನಲ್ಲಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನೊನ್ನೆ ಸಂಜೆ ಚಾಮುಂಡೇಶ್ವರಿ ಪೂಜೆ ಮತ್ತು ಸಂಸ್ಕೃತಿ ಪ್ರಸಾರ ಕಾರ್ಯಕ್ರಮಗಳನ್ನು ನೆರವೇರಿಸಿದರು

ಸಂಘದ ಅಧ್ಯಕ್ಷ ಶ್ರೀ ಜೋಗಿಸಿದ್ದಯ್ಯನವರು ಸ್ವಾಗತ ಭಾಷಣ ಮಾಡಿದನಂತರ ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ. ಚೆಯ್ಯನವರು ಮಾತನಾಡಿ ಜನತೆಯು ಜಾತಿ ಬೇಧವನ್ನು ತೊರೆಯಬೇಕೆಂದೂ ಹರಿಜನರು ಈಗಿರುವ ಸೌಲಭ್ಯದಿಂದ ಹೆಚ್ಚು ವಿದ್ಯಾವಂತರಾಗಬೇಕೆಂದೂ ಮನವಿ ಮಾಡಿಕೊಂಡರು

ವಯಸ್ಕರ ಶಿಕ್ಷಣ ಸಮಿತಿಯ ಶ್ರೀ ಮುನಿಸ್ವಾಮಿಯವರು ಮಾತನಾಡಿ ಹರಿಜನರು ವಯಸ್ಕರ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನವೀಯಬೇಕೆಂದೂ ಮತ್ತು ಈಗಿನ ಕಾರ್ಯವು ಯಶಸ್ವಿಯಾಗಲು ಅಧಿಕಾರಿಗಳೊಡನೆ ಸಹಕರಿಸಬೇಕೆಂದೂ ಮನವಿ ಮಾಡಿಕೊಂಡರು

ಅಧ್ಯಕ್ಷರು ಮಾತನಾಡಿ ಜನರು ಜಾತಿ ಬೇಧಗಳನ್ನು ತೊರೆದು ಸಹೋದರರಂತೆ ಬಾಳಬೇಕೆಂದು ಹೇಳಿ ಹರಿಜನರ ಏಳಿಗೆಗೆ ತಮ್ಮ ಕೈಲಾಗುವ ಎಲ್ಲ ಸಹಾಯವನ್ನೂ ನೀಡುವುದಾಗಿ ತಿಳಿಸಿದರು ಹರಿಜನರು ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನವೀಯಬೇಕೆಂದು ಕೋರಿದರು

ಶ್ರೀಮತಿ ಕಾಂತರಾಜಮ್ಮಣ್ಣಿಯವರ ಸಂಗೀತವು ಆದನಂತರ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಫುಟ್‌ಬಾಲ್ ಕ್ಲಬ್ಬಿನ ಆರಂಭೋತ್ಸವ

ಜಲಪುರಿಯ ಲಕ್ಷ್ಮಿ ಸ್ಟಾರ್ ಫುಟ್‌ಬಾಲ್ ಕ್ಲಬ್ಬಿನ ಆರಂಭೋತ್ಸವವನ್ನು ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ. ಚೆಯ್ಯನವರು ನೆನ್ನೆ ನೆರವೇರಿಸಿದರು ಈ ಸಂದರ್ಭದಲ್ಲಿ ಕ್ಲಬ್ಬಿನವರಿಂದ ನೃತ್ಯ ಮತ್ತು ಸಂಗೀತಗಳು ನಡೆದುವು ಶ್ರೀ ಚೆಯ್ಯನವರು ತಮ್ಮ ಭಾಷಣದಲ್ಲಿ ಹರಿಜನರು ಸದ್ವರ್ತನೆಯಿಂದ ಕೂಡಿ ರಾಷ್ಟ್ರಾಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸಬೇಕೆಂದು ಕೋರಿದರು

○ ಶ್ರೀ ಬಸವೇಶ್ವರ ಕರ್ನಾಟಕ ನಾಟಕ ಮಂಡಲಿಯವರು ಶ್ರೀ ಚೆಯ್ಯನವರ ಅಧ್ಯಕ್ಷತೆಯಲ್ಲಿ "ಸತಿ ದಮಯಂತಿ" ನಾಟಕವನ್ನು ನೆನ್ನೆ ಆಡಿದರು ಕಲೆಗಳಿಗೆ ಹೆಚ್ಚು ಪ್ರೋತ್ಸಾಹಿಸಲು ಶ್ರೀ ಚೆಯ್ಯನವರು ಸಭಿಕರಿಗೆ ಮನವಿ ಮಾಡಿಕೊಂಡರು

ಭಾವಚಿತ್ರಗಳ ಅನಾವರಣ

ಮೈಸೂರು ೧೬

ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಕೆ ಹೆಚ್ ರಾಮಯ್ಯನವರ ವಿದ್ಯಾರ್ಥಿ ನಿಲಯದಲ್ಲಿ ನೊನ್ನೆ, ದಿವಂಗತ ಕೆ ಹೆಚ್. ರಾಮಯ್ಯ, ಶ್ರೀ ಎಂ ಜಿ ಗುಜ್ಜೇಗೌಡ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚೆನ್ನಯ್ಯ ಮತ್ತು ಕಡಿವಮ್ಮನವರ ಬಸವಯ್ಯನವರ ಭಾವಚಿತ್ರಗಳ ಅನಾವರಣೋತ್ಸವವು ನೆರವೇರಿತು ಶ್ರೀ ಹೆಚ್ ಸಿ ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಪ್ರಾರ್ಥನೆ ಮತ್ತು ಶ್ರೀ ಪಿ ಎಂ ಚಿಕ್ಕಬೋರಯ್ಯನವರಿಂದ ಸ್ವಾಗತ ಭಾಷಣ ಆದನಂತರ ಶ್ರೀ ಹೆಚ್ ಕೆ ವೀರಣ್ಣಗೌಡರು, ಕೆ. ಹೆಚ್ ರಾಮಯ್ಯ ಮತ್ತು ಎ ಜಿ ಗುಜ್ಜೇಗೌಡರ ಭಾವಚಿತ್ರಗಳನ್ನೂ, ಶ್ರೀ ಬಿ ನಾರಾಯಣಸ್ವಾಮಿಯವರು ಶ್ರೀಗಳಾದ ಎಸ್ ಚೆನ್ನಯ್ಯ ಮತ್ತು ಕಡಿವಮ್ಮನವರ ಬಸವಯ್ಯನವರ ಭಾವಚಿತ್ರಗಳನ್ನೂ ಅನಾವರಣ ಮಾಡಿ ಅವರುಗಳ ಗುಣಗಾನ ಮಾಡಿದರು

ಅಧ್ಯಕ್ಷರು ಮಾತನಾಡಿ ವಿದ್ಯಾರ್ಥಿನಿಲಯವು ಇನ್ನುಮುಂದೆ ಒಕ್ಕಲಿಗರಿಗೆ ಮಾತ್ರವಲ್ಲದೆ ಸಕಲ ಕೋಮುಗಳವರಿಗೂ ತೆರೆಯಲ್ಪಡುವುದೆಂದು ಸೂಚಿಸಿ, ಮಹಾಜನರ ಸಹಕಾರವನ್ನು ಕೋರಿದರು ಸಂಗೀತರತ್ನ ಟಿ ಚೌಡಯ್ಯನವರ ಪಿಟೀಲು ವಾದನವು ಸುಶ್ರಾವ್ಯವಾಗಿ ನಡೆಯಿತು

ಲಾರಿ ಮಾಲೀಕರಿಗೆ ದಂಡ

ಆ ತಿಂಗಳಿಂದಲೂ ಸುಮಾರು ೧೭೫೦ ರೂ ವಾಹನ ತೆರಿಗೆಯನ್ನು ಕಟ್ಟದಿದ್ದುದಕ್ಕಾಗಿ ಟ್ರಾಫಿಕ್ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಲಾರಿ ಮಾಲೀಕರಾದ ಶ್ರೀ ಪಿ ನಂಜುಂಡಯ್ಯನವರಿಗೆ ೨೫ ರೂ ದಂಡ, ತಪ್ಪಿದರೆ ೧೫ ದಿನ ಸಾದಾ ಸಜವನ್ನು ವಿಧಿಸಿರುತ್ತಾರೆ

○ ನ್ಯಾಯಾಂಗ ಪತ್ರಿಕೆ ಸಮ್ಮಾ ಜೂ... ಟಿಕ್ಕಾ ಗ ಸಿ ಎ ಅಹಮದ್ ಮತ್ತು ಮಹಮದ್ ಮಸ್ತಾರರವರಿಗೆ ತಲಾ ೧೦ ರೂ ದಂಡ ಬಿದ್ದಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಗೃಹ ಸಚಿವರ ಪ್ರವಾಸ

ಸ್ವಂ ವಾ] ಗುಂಡ್ಲುಪೇಟೆ ೧೬

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಗೃಹ ಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರು ಕಳೆದ ವಾರ ಪ್ರವಾಸ ಕೈಗೊಂಡಿದ್ದರು ಅವರು ಗುಂಡ್ಲುಪೇಟೆ, ಬಂಡಿಪುರ, ಮದ್ದೂರು ಕಾಲೊನಿ, ತೆರಕಣಾಂಬಿ, ದೊಡ್ಡ ತುಪ್ಪೂರು ಮತ್ತು ಹುಂಡಿಪುರಗಳಿಗೆ ಭೇಟಿಯಿತ್ತಿದ್ದರು

೧೧ನೇ ತಾರೀಖು ಗುಂಡ್ಲುಪೇಟೆಯಲ್ಲಿ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯ ಪ್ರಯಾಣಿಕರ ವಿಶ್ರಾಂತಿ ಗೃಹದ ಶಂಕುಸ್ಥಾಪನೆಯನ್ನು ನೆರವೇರಿಸಿ ಬಂಡಿಪುರಕ್ಕೆ ತೆರಳಿದರು

ಮಾರನೇ ದಿನ ಮದ್ದೂರು ಕಾಲೊನಿಗೆ ಭೇಟಿಯಿತ್ತು ಅಲ್ಲಿನ ಪ್ರಗತಿಯನ್ನು ಪರಿಶೀಲಿಸಿದರು. ಅಲ್ಲಿಂದ ತೆರಕಣಾಂಬಿಗೆ ತೆರಳಿ ಅಲ್ಲಿನ ಪಶು ವೈದ್ಯಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು ಅಲ್ಲಿನ ಗ್ರಾಮ ಪಂಚಾಯಿತಿಯವರು ಸಚಿವರಿಗೆ ಬಿನ್ನವತ್ತಳೆಯನ್ನರ್ಪಿಸಿದರು

ಅನಂತರ ದೊಡ್ಡ ತುಪ್ಪೂರು ಗ್ರಾಮಕ್ಕೆ ಬಂದು ಪಟೇಲ್ ಕಾಳಪ್ಪನವರು ಕಟ್ಟಿಸಿಕೊಟ್ಟಿರುವ ಶಾಲಾ ಕಟ್ಟಡದ ಆರಂಭೋತ್ಸವವನ್ನು ನೆರವೇರಿಸಿದರು ಸಚಿವರನ್ನು ಸ್ವಾಗತಿಸಿ ಗ್ರಾಮಸ್ಥರು ಮತ್ತು ದಾನಿಗಳು ಬಿನ್ನವತ್ತಳೆಯನ್ನರ್ಪಿಸಿದರು ಜನರು ಹೆಚ್ಚು ಹೆಚ್ಚಾಗಿ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸಬೇಕೆಂದು ಸಚಿವರು ಕೋರಿದರು

ಅನಂತರ ಅವರು ಹುಂಡಿಪುರಕ್ಕೆ ತೆರಳಿ ಅಲ್ಲಿನ ಆಸ್ಪತ್ರೆಯನ್ನು ಪರಿಶೀಲಿಸಿದರು ಸಚಿವರ ಗೌರವಾರ್ಥ ಶಾಸನಸಭಾ ಸದಸ್ಯ ಶ್ರೀ ಹೆಚ್ ಕೆ ಶಿವರುದ್ರಪ್ಪನವರು ತಮ್ಮ ಮನೆಯಲ್ಲಿ ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಒಂದು ಬಿನ್ನವತ್ತಳೆಯನ್ನರ್ಪಿಸಲಾಯಿತು. ಸಚಿವರು ಉತ್ತರವೀಯುತ್ತಾ ಜನರ ಪ್ರಾರ್ಥನೆಯಂತೆ ಮಂಗಳವಾರದಿಂದಲೂ ಸರ್ಕಾರಿ ಬಸ್ಸನ್ನು ಓಡಿಸಲು ಏರ್ಪಾಡು ಮಾಡುವುದಾಗಿ ಭರವಸೆಯಿತ್ತರು.

ವಿವಿಧ ಅಪರಾಧಗಳಿಗೆ ದಂಡ

ಮೈಸೂರು ೧೬

ನಗರದ ದ್ವಿತೀಯ ನ್ಯಾಯಾಧೀಶರು ಕೆಳಗೆ ಕಂಡವರಿಗೆ ಶಿಕ್ಷೆಯನ್ನು ವಿಧಿಸಿರುತ್ತಾರೆ —

ಹಾಣಾಲು ಜೂಜಾಟಕ್ಕಾಗಿ ನಂಜುಂಡಯ್ಯ ಮತ್ತು ೬ ಜನರಿಗೆ ತಲಾ ೧೦ ರೂ. ದಂಡ, ಸ್ಥಳದಲ್ಲಿ ದೊರೆತ ೧೩-೮-೦ ರೂ ಮುಟ್ಟುಗೋಲು ಮತ್ತು ಪೆಸೂಲಾದ ದಂಡದ ಹಣದಲ್ಲಿ ಪೊಲೀಸರಿಗೆ ೪೦ ರೂ ಬಹುಮಾನ

ಲೈಸೆನ್ಸಿಲ್ಲದೆ ಟೀ ಅಂಗಡಿಗಳನ್ನು ನಡೆಸಿದರೆಂದು ಪುಟ್ಟಮಾದಯ್ಯ, ಸಣ್ಣಪ್ಪ ಮತ್ತು ವೀರಭದ್ರಪ್ಪನವರಿಗೆ ತಲಾ ೫ ರೂ , ಸುಬ್ರಾವ್, ಕೃಷ್ಣಾಜಿರಾವ್ ಮತ್ತು ಪುಟ್ಟಪ್ಪನವರಿಗೆ ತಲಾ ೭ ರೂ , ಮತ್ತು ಪುಟ್ಟಪ್ಪ ಎಂಬುವರಿಗೆ ೮ ರೂ , ಹರಿಭಟ್ಟಿ ನಡೆಸಿದ್ದಕ್ಕೆ ಮಿರ್ ಮಹಮದ್ ಎಂಬಾತನಿಗೆ ೩ ರೂ

ಸ್ಯಾನಿಟೋರಿಯಂ ನೌಕರ ಸಹಕಾರ ಸಂಘದ ದಿನಾಚರಣೆ

ಮೈಸೂರು

ನಗರದ ಪ್ರಿನ್ಸೆಸ್ ಕೃಷ್ಣಾಜಮ್ಮಣ್ಣಿ ಕ್ಷಯರೋಗದ ಆಸ್ಪತ್ರೆಯ ನೌಕರ ವರ್ಗದ ಸಹಕಾರ ಸಂಘದ ೧೦ನೇ ವಾರ್ಷಿಕೋತ್ಸವವು ನೆನ್ನೆ ಪ್ರಾತಃಕಾಲ ಸಂಸ್ಥಾನದ ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಕೆ ಆರ್. ಮರುದೇವೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಆರೋಗ್ಯ ಇಲಾಖಾ ಡೈರೆಕ್ಟರ್ ಡಾ॥ ಟಿ. ವೆಂಕಟರಾಯರು ಭಾಷಣ ಮಾಡಿದರು.

ಪ್ರಾರ್ಥನೆಯಾದನಂತರ ಶ್ರೀಮತಿ ಗಿರಿಜಮ್ಮನವರಿಂದ ಸಂಗೀತವು ನಡೆಯಿತು ಸಂಘದ ಅಧ್ಯಕ್ಷ ಡಾ॥ ಎಸ್. ನಾರಾಯಣಶೆಟ್ಟರು ಸ್ವಾಗತ ಭಾಷಣ ಮಾಡಿದರು. ಡಾ॥ ವೆಂಕಟರಾಯರು ತಮ್ಮ ಭಾಷಣದಲ್ಲಿ ಸಂಘದಿಂದ ಆಸ್ಪತ್ರೆಯ ರೋಗಿಗಳಿಗೆ ಒದಗುತ್ತಿರುವ ಸೌಲಭ್ಯಗಳನ್ನು ಪ್ರಶಂಸಿಸಿದರು ಶ್ರೀ ಮರುದೇವೇಗೌಡರು ಮಾತನಾಡಿ, ಸಂಘದ ಅಭಿವೃದ್ಧಿಯ ಬಗ್ಗೆ ಸಂತೋಷಿಸಿದರು ಹೆಚ್ಚು ಹೆಚ್ಚಾಗಿ ಸಾಲ ಕೇಳುವ ಅಭ್ಯಾಸವನ್ನು ಸಂಘಗಳು ಬಿಡಬೇಕೆಂದು ಸೂಚಿಸಿದರು

ಅನಂತರ ಸಂಘದ ಸಾಮಾನ್ಯ ಕಾರ್ಯಗಳು ನಡೆದು, ಆಸ್ಪತ್ರೆಯ ರೋಗಿಗಳ ಕಾರ್ಯಕ್ಕಾಗಿ ೨೦ ಸಾವಿರ ರೂ. ಗಳ ನಿಧಿ ಎತ್ತಿ ಕೊಡುವ ನಿಶ್ಚಯವಾಯಿತು.

ಮೈಸೂರಿನಲ್ಲಿ ಪ್ರತಿ ತಿಂಗಳು 17 ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ—ಕಲ್ಪ

ವಿವ್ಯೌಷಧವನ್ನು ಕಂಡುಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನ ದಲ್ಲಿ

ಭೇಟಿ ಮಾಡಬಹುದು ರೂಂ ನಂ 59

— ಭೇಟಿಯ ವೇಳೆ —

ಬೆಳಗ್ಗೆ 7-30 ರಿಂದ 12-30 ಮತ್ತು ಮಧ್ಯಾಹ್ನ 4 ರಿಂದ 7 30

ಇವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿಯೇ ವಿಧಾನದಲ್ಲಿ ಸಂಚರಿಸುವರು

ನವರತ್ನ—ಕಲ್ಪ

ಉಪಯೋಗಗಳು

ಎಮ ವಶ್ರ ಕೆಮ್ಮು ಮತ್ತು ದಮ, ಗೋನೋರಿಯ ಶೂಲ, ಪಕ್ಷವಾತ ಮತ್ತು ಕ್ಷಯ, ಹಳೆ ಮುಂತಾದ 9 ಅಮೂಲ್ಯ ಹರಳುಗಳ ಯೋಗದಿಂದ ನರಗಳ ದೌರ್ಬಲ್ಯ ಅತಿ ಸಂಬಂಧ ವ್ಯಾಧಿಗಳು ಬಿಳಿ ಸೆರಗು, ವ್ಯಾಧಿ ನಾಶವೃಣ, ಬಹು ಮೂತ್ರ, ಅಸ್ತಮಾ ಮತ್ತು ನಿಮ್ಮ ಇತರ ಎಲ್ಲಾ ಸಾಮಾನ್ಯ ರೋಗ ಪ್ರವಾದ ವಾದಿಂದೆಗಳೂ ಸಂಪೂರ್ಣವಾಗಿ ಹೋಗುವುವು

ಶಿಕಾರಿಪಟ್ಟಣ, ರಾಜಮಹೇಂದ್ರಿ, ಗುಂಟೂರು, ಬೆಜವಾಡ, ಮದ್ರಾಸು, ಬೆಂಗಳೂರು, ಕಲ್ಕತ್ತ, ಮಧುರೆ, ತಿರುಚನಾಪಳ್ಳಿ, ಸೇಲಂ, ಪಲ್ಲಿಕೋಟೆ, ಎರ್ನಾಕುಲಂ, ತ್ರಿವೇಂದ್ರಂ, ತಿರುನಲ್ವೇಲಿ, ಪಾಂಡಿಚೆರಿ ಹೈದರಾಬಾದುಗಳ ವಿಳಾಸ ಮತ್ತು ಇತರ ಸಾಮಗ್ರಿಗಳಿಗೆ ಬರೆಯಿರಿ —

NAVRATNA KALPA PHARMACY,
Jullundur City (India)
Grams NAVRATNA

ಒಲಿಂಪಿಯಾ ಟಾಕೀಸ್

19.1 56 ರಿಂದ : ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಬಿಮಲ್ರಾಯ್ ರವರ ದೇವದಾಸ್

(ಶರತ್‌ಚಂದ್ರ ಚಟರ್ಜಿ ರವರ ಅಮರ ಕೃತಿ)

ಪಾತ್ರ - ದಿಲೀಪ್‌ಕುಮಾರ್, ವೈಜಯಂತಿಮಾಲಾ, ಸುಚಿತ್ರಾಸೇನ್ ಮತ್ತು ಮೋತಿಲಾಲ್

ಶ್ರೀ ಚಾಮುಂಡೇಶ್ವರಿ ಟಾಕೀಸ್

19—1—56 ರಿಂದ ಅತ್ಯಧಿಕ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿರುವ

ಜೆಮಿನಿಯ 2 ನೇ ವಾರ

ಅಲಿಬಾಬ ಮತ್ತು 40 ಕಳ್ಳರು

ಪಾತ್ರ ಎಂ. ಜಿ ರಾಮಚಂದ್ರನ್, ಪಿ ಭಾನುಮತಿ, ತಂಗವೇಲು, ಶಾರಂಗಪಾಣಿ, ವಿದ್ಯಾ

ನಿರ್ದೇಶಕರು — ಟಿ ಆರ್, ಸುಂದರಂ [Sri Raghavendra Rel

Central Food Technological Research Institute,
MYSORE

TENDER NOTIFICATION

Tenders are invited from Water Supply and Civil Engineering Contractors individually for the execution of works approximately costing Rs 14,000 and Rs 6,000 respectively, connected with the major project viz independent Water Supply Scheme for the Institute

Schedule of quantities in respect of the work could be obtained from the Administrative Officer, Central Food Technological Research Institute, Cheluvamba Mansion, V V. Mohalla P O , Mysore, at any time during working hours of the Institute The tenders will have to reach the undersigned on or before 27-1-1956 5 p m. along with an earnest deposit strictly in cash or by Bank Draft of Rs. 700 in the case of Water Supply Contractors and Rs. 300 in the case of Civil Engineering Contractors.

The acceptance or otherwise of the tender rests fully with the Director of the Institute

A W. de SOUZA,
Administrative Officer

Edited, Printed and Published by A. R Nagarajan at Sadhvi Press, D Subbiah Road, Mysore

ರಿಜಿಸ್ಟರ್ ನಂ. 793

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೯] SADHVI : WEDNESDAY 18-1-1956 ಮೈಸೂರು ಬುಧವಾರ : ೧೮-೧-೧೯೫೬ [ಸಂಚಿಕೆ : ೧೪೪

ಬೆಳಗಾಮಿನಲ್ಲೂ ಗುಂಡಿನ ಪ್ರಕರಣ ; ನಾಲ್ವರ ಮರಣ

[illegible]ಗಳ ಕಡೆಯಲ್ಲಿ ೨೫೦ ಹೊಸ ಪ್ರಾಥಮಿಕ ಶಾಲೆಗಳ ಸ್ಥಾಪನೆ

ಬೆಂಗಳೂರು ೧೮

ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ, ಪ್ರಾಥಮಿಕ ವಿದ್ಯಾಭ್ಯಾಸದ ಬಗ್ಗೆ ರಾಷ್ಟ್ರದ ತತ್ವ ನಿರೂಪಣೆಯ ಅಂಗವಾಗಿ ಈ [illegible] ಸಂಸ್ಥಾನದಲ್ಲಿ ೨೫೦ ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗುವುದೆಂದು ತಿಳಿಸಿದರು. ದ್ವಿತೀಯ ಯೋಜನೆಯಲ್ಲಿ ೨೫೦೦ ಶಾಲೆಗಳನ್ನು ತೆರೆದು [illegible] ಹೆಚ್ಚಿನ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. ೨೦೦೦ [illegible] ಶಿಕ್ಷಣ ಶಾಲೆಗಳನ್ನು ಏರ್ಪಡಿಸಲಾಗುವುದೆಂದೂ ಹೇಳಿದರು.

ಮೈಸೂರಿನಲ್ಲಿರುವ ಗಂಜಾಂ ಟ್ರೈನಿಂಗ್ [illegible]ವನ್ನು ಮೂಲ ಶಿಕ್ಷಣ ಶಾಲೆಯಾಗಿ [illegible] ಭವನಕ್ಕೆ ವರ್ಗಾಯಿಸಲಾಗುವುದೆಂದು ಸೂಚಿಸಿದರು.

ಪ್ರಾಥಮಿಕ ವಿದ್ಯಾಭ್ಯಾಸದ [illegible] ವರ್ಷದ [illegible]ನ್ನು ಐದು ವರ್ಷಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆಯೆಂದೂ ಅವರು ಹೇಳಿದರು. [illegible] ಶಾಲೆಗಳಲ್ಲಿ ಐದನೇ ತರಗತಿಗಳನ್ನು [illegible] ೧,೦೦೦ ಮಂದಿ ಎಸ್.ಎಸ್.ಎಲ್.[illegible]ದವರನ್ನು ತೆಗೆದುಕೊಳ್ಳಲಾಗುವುದೆಂದೂ, [illegible] ಈ ಬಗ್ಗೆ [illegible] ಕರೆಯುವರೆಂದೂ ಹೊರಗೆಡಹಿದರು.

ಪೂನಾ ಸಮಾಜವಾದಿಗಳಿಂದ ಸಾಮೂಹಿಕ ಕಾನೂನು ಭಂಗ

ಬೊಂಬಾಯಿ ನಗರದ ಬಗ್ಗೆ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಲು ಜನೇ ೨೧ ತಾರೀಖಿನಿಂದ ಕೇಂದ್ರ ಆಡಳಿತದ ಲಕ್ಷ್ಯಗಳ [illegible] ಪ್ರದೇಶಗಳಲ್ಲೂ ಸಾಮೂಹಿಕವಾಗಿ [illegible] ಭಂಗವನ್ನು ಆಚರಿಸುವುದಾಗಿ ಭಾರತ ಸಮಾಜವಾದಿ ಪಕ್ಷದ ಪೂನಾ ಶಾಖೆಯವರು [illegible]ಸಿರುತ್ತಾರೆ. ಅದೇ ತಾರೀಖು ರಿಪಬ್ಲಿಕ್ [illegible] ಬಹಿಷ್ಕಾರ ಹಾಕಲೂ, [illegible], ವರಮಾನ ತೆರಿಗೆ ಕಛೇರಿಗಳ [illegible] ಪಿಕೆಟಿಂಗ್ ನಡೆಸಲೂ ಪಕ್ಷದ ಕಾರ್ಯ[illegible]ದವರು ಸೂಚಿಸಿರುವರು.

ಸೋಲಾಪುರದಲ್ಲಿ ಪೂರ್ಣ ಹರತಾಳ

ಸೋಲಾಪುರದಲ್ಲಿರುವ ೬ ಬಟ್ಟೆ ಗಿರಣಿಗಳ [illegible] ಕಾರ್ಮಿಕರು ಸಂಪೂರ್ಣ ಹರತಾಳದ [illegible], ಬೊಂಬಾಯಿಯಲ್ಲಿ ಆದ ದಸ್ತಗಿರಿಗಳು ಮತ್ತು ಆ ನಗರದ ಭವಿಷ್ಯದ ಬಗ್ಗೆ ಕೇಂದ್ರದ ನಿರ್ಧಾರಕ್ಕೆ ಪ್ರತಿಭಟನೆ ಸೂಚಿಸಿದರು.

[illegible]ನಲ್ಲಿರುವ ಪ್ರಾಣಿ ಸಂಗ್ರಹಾಲಯಕ್ಕೆ [illegible] ಎರಡು ಜಿಂಕೆ ಮೃಗಗಳನ್ನು ಕಳುಹಿಸಲಾಗಿ [illegible] ಇಲ್ಲಿನ ರಾಜಪ್ರಮುಖರು ಹೋಗಿ [illegible]ಗಳನ್ನು ಅವರು ನೋಡಿದ್ದರು.

ಬೆಳಗಾಮಿನ ಮೈಸೂರು ವಿರೋಧಿ ಗಲಭೆಗಾರರ ಮೇಲೆ ಗುಂಡು

ನಾಲ್ವರ ಮರಣ ; ನಗರದಲ್ಲಿ ಕರ್ಫ್ಯೂ

ಬೆಳಗಾಂ ನಗರವನ್ನು ಮಹಾರಾಷ್ಟ್ರದಿಂದ ಬೇರ್ಪಡಿಸಿ ಮೈಸೂರಿನೊಡನೆ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರದವರು ಘೋಷಿಸಿರುವ ಘೋಷಣೆಯ ವಿರುದ್ಧವಾಗಿ [illegible] ನಗರದ ಹಲವು ನೆನ್ನೆ ಪ್ರದರ್ಶನಗಳನ್ನು ನಡೆಸಿ, ಗಲಭೆ ಮಾಡಿದರೆಂದೂ, [illegible] ಸಬ್ ಇನ್ಸ್‌ಪೆಕ್ಟರ್ ಮತ್ತು ಹಲವು ಮಂದಿ ಕಾನ್‌ಸ್ಟೇಬಲ್ಲುಗಳಿಗೆ ಕಲ್ಲೇಟು ಬಿದ್ದಿತೆಂದೂ ವರದಿಯಾಗಿದೆ. [illegible] ಮತ್ತು ಸರ್ಕಾರಿ ಬಸ್ಸಿಗೆ ಬೆಂಕಿ ಹಚ್ಚಲಾಯಿತು. ಅನೇಕ ಅಂಗಡಿ ಮತ್ತು [illegible]ಗಳ ಗಾಜುಗಳು ಕಲ್ಲು ಹೊಡೆತ [illegible] ಮುರಿದುವು. ಪ್ರದರ್ಶನಕಾರರು [illegible]ಗಳನ್ನು ಮುತ್ತಿ, [illegible] [illegible] ಕಮ್ಯೂನಿಸ್ಟರ [illegible] ಬಾಗಿಲನ್ನು ಮುರಿದು [illegible] ಗುಂಪಿನವರು [illegible] ಎಕ್ಸ್‌ಪ್ರೆಸ್ ರೈಲಿಗೆ [illegible] ಪ್ರಯಾಣಿಕರಿಗೆ [illegible] ವರದಿಯಾಗಿದೆ.

ಪರಿಸ್ಥಿತಿಯು ಹತೋಟಿ [illegible] ಪೊಲೀಸರು ಎರಡು ಕಡೆ ಗುಂಡು ಹಾರಿಸಿದ ಪರಿಣಾಮವಾಗಿ ನಾಲ್ಕು ಮಂದಿ ಮಡಿದರು. ನಗರದಲ್ಲಿ ಸಂಜೆ ೬ ರಿಂದ ಬೆಳಗ್ಗೆ ೬ ಗಂಟೆ ವರೆಗೆ ಮೂರು ದಿನಗಳ ಕರ್ಫ್ಯೂ ಆಜ್ಞೆ [illegible] ಮಾಡಲಾಗಿದೆ.

ಬೊಂಬಾಯಿ ಮಂತ್ರಿ ಹಿರಿಯವರ ರಾಜೀನಾಮೆ ?

ಬೊಂಬಾಯಿಯ ರೆವಿನ್ಯೂ ಮಂತ್ರಿ ಶ್ರೀ ಬಿ. ಎಸ್. ಹಿರೆಯವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡಲು ನಿರ್ಧರಿಸಿರುವರೆಂದೂ, ಮಹಾರಾಷ್ಟ್ರ ಪ್ರದೇಶದ ಕಾಂಗ್ರೆಸ್ಸಿನ ಸಭೆಯು ನಾಳೆ ಸೇರಿದನಂತರ ಅವರು ತಮ್ಮ ನಿರ್ಧಾರವನ್ನು ತಿಳಿಸುವರೆಂದೂ ವರದಿಯಾಗಿದೆ. ಈ ವಿಷಯವನ್ನು ಅವರು ಮುಖ್ಯ ಮಂತ್ರಿ ಮುರಾರ್ಜಿ ದೇಸಾಯಿಯರಿಗೆ ತಿಳಿಸಲಿದ್ದಾರೆ. ಅವರು ಮಂತ್ರಿಮಂಡಲದ ಹೊರಗೆ ಬಂದಮೇಲೆ ಮಹಾರಾಷ್ಟ್ರದ ಧ್ಯೇಯ ಸಾಧನೆಗಾಗಿ ಕೆಲಸ ಮಾಡುವರೆಂದು ಹೇಳಲಾಗಿದೆ.

ನೆನ್ನೆ ಸರ್ವಪಕ್ಷ ಪ್ರಜಾಸಮಿತಿಯ ಆಶ್ರಯದಲ್ಲಿ ಪ್ರಚಂಡ ಸಭೆಯೊಂದು ನಡೆದು ಬೊಂಬಾಯಿ ಮಂತ್ರಿಮಂಡಲದಲ್ಲಿರುವ ಮಹಾರಾಷ್ಟ್ರದ ಸದಸ್ಯರು ರಾಜೀನಾಮೆ ಕೊಡಬೇಕೆಂದು ಒತ್ತಾಯಪಡಿಸಲಾಯಿತು. ಬೊಂಬಾಯಿ ನಗರವು ರಾಜಧಾನಿಯಾಗುಳ್ಳ ಸಂಯುಕ್ತ ಮಹಾರಾಷ್ಟ್ರದ ಸ್ಥಾಪನೆಗೆ ಹೋರಾಡಲು ನಗರದ ಮತ್ತು ಮಹಾರಾಷ್ಟ್ರದ ಪ್ರಜೆಗಳು ಸಿದ್ಧರಾಗಿರಬೇಕೆಂದೂ ಕೋರಲಾಯಿತು.

O ಆರ್ಥಿಕ [illegible] ಅಂತ [illegible] ರದ್ದುಗೊಳಿಸುವ ವಿಷಯವು ಕೇಂದ್ರ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಗೊತ್ತಾಗಿದೆ.

ಕನ್ನಡ ಪ್ರಾಂತಕ್ಕೆ ಮೈಸೂರಿನ ಹೆಸರಿಗಾಗಿ ಕಾಂಗ್ರೆಸ್ಸಿನ ಹರ್ಷ

ಬೆಂಗಳೂರು ೧೮

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ನಡೆದು [illegible] ಕನ್ನಡ ಪ್ರಾಂತಕ್ಕೆ ಮೈಸೂರು ಸಂಸ್ಥಾನವೆಂದು ಕೇಂದ್ರ ಸರ್ಕಾರದವರು ನಾಮಕರಣ ಮಾಡಿದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಮೈಸೂರಿನ [illegible] ಪರಿಸ್ಥಿತಿಗೆ ಅನುಗುಣವಾಗಿ ಈ ನಿರ್ಧಾರವಾಗಿರುವುದೆಂದು ಸೂಚಿಸಲಾಯಿತು. ವಿಸ್ತೃತವಾದ ಮೈಸೂರು ಸಂಸ್ಥಾನದ ಪ್ರಜೆಗಳು ಭಾರತ ಸರ್ಕಾರದ ನಿರ್ಧಾರವನ್ನು ಒಪ್ಪಿ, ಹೊಸ ಪ್ರಾಂತವು ಸೌಹಾರ್ದ, ಪರಸ್ಪರ ತಿಳುವಳಿಕೆ ಮತ್ತು ಸಹಕಾರದ ವಾತಾವರಣದಲ್ಲಿ ಸ್ಥಾಪನೆಯಾಗಲು ಸಹಾಯಕರಾಗಬೇಕೆಂದು ಕೋರುವ [illegible]ವನ್ನು ಅಂಗೀಕರಿಸಲಾಯಿತು.

ಉಪಾಧ್ಯಾಯರುಗಳ ಸಂಬಳದ ಬಗ್ಗೆ ಪರಿಶೀಲನೆ

ಸಂಬಳ ಸಮಿತಿಯವರ ವರದಿಯು ಈ ತಿಂಗಳು ಮುಗಿಯುವುದರೊಳಗೆ ಬರಲಿರುವುದೆಂದೂ, ಅದು ಬಂದನಂತರ ಉಪಾಧ್ಯಾಯರ ಸಂಬಳಗಳನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದೆಂದೂ ವಿದ್ಯಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ತಿಳಿಸಿದರು. ಮೈಸೂರು ಸಂಸ್ಥಾನವು ವಿಸ್ತೃತವಾಗುವುದರಿಂದ [illegible] ಮುಂದುವರಿಸುವ ಅವಶ್ಯಕತೆಯನ್ನು ಪರಿಶೀಲಿಸುತ್ತಿರುವುದಾಗಿ ಅವರು ಹೇಳಿದರು.

ಬಿಹಾರ್ ಮಂತ್ರಿಮಂಡಲದ ರಾಜೀನಾಮೆ ?

ಬಿಹಾರಿನ ಹಲವು ಭಾಗಗಳನ್ನು ಪಶ್ಚಿಮ ಬಂಗಾಳಕ್ಕೆ ವರ್ಗಾಯಿಸುವ ಬಗ್ಗೆ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸಿ, ಬಿಹಾರಿನ ಮಂತ್ರಿಮಂಡಲವು ರಾಜೀನಾಮೆ [illegible]ದೆಂದು ಅಲ್ಲಿನ ಶಾಸನಸಭಾ ಕಾಂಗ್ರೆಸ್ ಪಕ್ಷದ ಮುಖ್ಯ ವಿಪ್‌ರವರು ಸೂಚಿಸಿರುತ್ತಾರೆ. ಮಂತ್ರಿಮಂಡಲವು ಈಗಾಗಲೇ ರಾಜೀನಾಮೆ ಕೊಟ್ಟಿರಬಹುದೆಂಬ ವರದಿಯ ಮೇಲೆ ಅವರು ವ್ಯಾಖ್ಯಾನ ಮಾಡಲು ನಿರಾಕರಿಸಿರುತ್ತಾರೆ. ಬಿಹಾರಿನ ವಾರ್ತಾ ಮಂತ್ರಿ ಮಹೇಶಪ್ರಸಾದಸಿನ್ಹರವರೂ ಈ ಬಗ್ಗೆ ವ್ಯಾಖ್ಯಾನ ಮಾಡದೆ, ಮಂತ್ರಿಮಂಡಲವು ಸಭೆ ಸೇರುವುದಾಗಿ ಮಾತ್ರ ತಿಳಿಸುತ್ತಾರೆ.

ಸೈಕಲ್ಲಿನಿಂದ ಬಿದ್ದು ಮೂಗು ಕತ್ತರಿಸಿತು

ಹಳೇ ಅಗ್ರಹಾರದಲ್ಲಿರುವ ಶ್ರೀ ಬಿ. ಎಚ್. [illegible] ಎಂಬುವರು ಕಳೆದ ಶನಿವಾರ ಸಂಜೆ [illegible] ರಸ್ತೆಯಲ್ಲಿ ಸೈಕಲ್ ಮೇಲೆ ಬರುತ್ತಿದ್ದಾಗ ಕೆಳಗೆ ಬಿದ್ದು ಅವರ ಮೂಗು ಕತ್ತರಿಸಿತೆಂದೂ, ಚಿಕಿತ್ಸೆಗಾಗಿ ಕೆ. ಆರ್. ಆಸ್ಪತ್ರೆಗೆ ಸೇರಿಸಲ್ಪಟ್ಟಿರುವರೆಂದೂ ವರದಿಯಾಗಿದೆ.

O ಕೈಲಾಸಪುರಂ [illegible] ರಸ್ತೆಯಲ್ಲಿರುವ ಶ್ರೀ ಆದಿಶಂಕರ ಶ್ರೀ ರಾಮ ಮಂದಿರದವರು ಧನುರ್ಮಾಸದ ಅಂಗವಾಗಿ ರಾಮ ಭಜನೆಯನ್ನು ನೆರವೇರಿಸಿ, ಕಳೆದ ಶನಿವಾರ [illegible]ವನ್ನು ಮಾಡಿದರು.

ಬೊಂಬಾಯಿಯಲ್ಲಿ ಮತ್ತೆ ಎಂಟು ಬಾರಿ ಗುಂಡು

ಒಟ್ಟು ೭೫೦ ಮಂದಿಯ ಬಂಧನ

ಮೊನ್ನೆ ದಿನ ಬೊಂಬಾಯಿ ನಗರದಲ್ಲಿ ನಡೆದ ಗಲಭೆಗಳನಂತರ, ಠಾಕೂರ್‌ದ್ವಾರಾ ಪ್ರದೇಶದಲ್ಲಿ ನೆನ್ನೆ ಪ್ರದರ್ಶನಕಾರರು ಅಂಗಡಿಗಳಿಗೆ ಕಲ್ಲು ಹೊಡೆದು, ಬಸ್ಸು ಮತ್ತು ಟ್ರಾಮುಗಳಿಗೆ ಬೆಂಕಿ ಹಚ್ಚಲು ಪ್ರಯತ್ನಿಸಿದರೆಂದೂ, ಗುಂಪನ್ನು ಚದುರಿಸಲು ಪೊಲೀಸರು ಹಲವು ಬಾರಿ ಆಶ್ರುವಾಯು ಪ್ರಹಾರ ಮಾಡಿ ವಿಫಲರಾದುದರಿಂದ ಎಂಟು ಬಾರಿ ಗುಂಡು ಹಾರಿಸಿದರೆಂದೂ, ಪರಿಣಾಮವಾಗಿ ನಾಲ್ವರು ಗಾಯಗೊಂಡರೆಂದೂ ವರದಿಯಾಗಿದೆ. ಇಬ್ಬರು ಪೊಲೀಸ್ ಅಧಿಕಾರಿಗಳು ಮತ್ತು ಮೂವರು ಕಾನ್‌ಸ್ಟೇಬಲ್ಲುಗಳೂ ಸೇರಿ, ಹತ್ತು ಮಂದಿ ಕಲ್ಲಿನ ಏಟಿನಿಂದ ಗಾಯಗೊಂಡರೆಂದು ಗೊತ್ತಾಗಿದೆ. ನೆನ್ನೆ ರಾತ್ರಿ ೮ ಘಂಟೆ ವರೆಗೆ ಪೊಲೀಸರು ೧೧೦ ಮಂದಿಯನ್ನು ದಸ್ತಗಿರಿ ಮಾಡಿರುವರು. ಒಟ್ಟಿನಲ್ಲಿ ೭೫೦ ಜನರ ಬಂಧನವಾಗಿದೆ.

ನಗರದ ೨೦ ಹತ್ತಿ ಗಿರಣಿಗಳು ಮತ್ತು ಹಲವು ಪ್ರಮುಖ ಇಂಜಿನಿಯರಿಂಗ್ ಕಾರ್ಖಾನೆಗಳಲ್ಲಿ ಕೆಲಸ ನಿಂತಿತ್ತು. ೪೦ ಗಿರಣಿಗಳಲ್ಲಿ ಹಲವು ಮಂದಿ ಕಾರ್ಮಿಕರು ಹಾಜರಾಗಿದ್ದರು. ಪ್ರದರ್ಶನಕಾರರು [illegible]ಗಳನ್ನು ತಡೆದು ಅವುಗಳ ಪ್ರಯಾಣಿಕರು [illegible] ಧರಿಸಬೇಕೆಂದು ಒತ್ತಾಯಪಡಿಸುತ್ತಿದ್ದರೆಂದೂ, ಹಲವು ಭವನಗಳ ಮೇಲೆ ಕಪ್ಪು ಧ್ವಜಗಳನ್ನು ಹಾರಿಸಲಾಗಿತ್ತೆಂದೂ ವರದಿಯಾಗಿದೆ.

ದಾನಿ ಸಮಿತಿಗೆ ಆಯುರ್ವೇದ ವಿದ್ಯಾರ್ಥಿಗಳ ತಂತಿ

ಭಾರತದಲ್ಲಿರುವ ಎಲ್ಲಾ ಆಯುರ್ವೇದ ಕಾಲೇಜುಗಳನ್ನೂ ಒಂದೇ ಮಟ್ಟಕ್ಕೆ ತರಲೂ, ದೇಶೀಯ ವೈದ್ಯ ಪದ್ಧತಿಗಳ ಪ್ರಗತಿಗಾಗಿ ಬೋರ್ಡನ್ನೊಂದನ್ನು ಸಿದ್ಧಗೊಳಿಸಲೂ ಏರ್ಪಡಿಸಬೇಕೆಂದು ನಗರದ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಮದ್ರಾಸಿಗೆ ಆಗಮಿಸುವ ದಾನಿ ಸಮಿತಿಯವರಿಗೆ ತಂತಿ ಕಳುಹಿಸಿರುತ್ತಾರೆ. ದೇಶೀ ವೈದ್ಯ ಪದ್ಧತಿಯು ಆಧುನಿಕ ಸ್ಥಿತಿಗೆ ತರಹೊಂದುವಂತಾಗಬೇಕೆಂದು ವಿದ್ಯಾರ್ಥಿಗಳು ಕೋರಿರುತ್ತಾರೆ.

ಆಟೋಸ್ ಬ್ಯಾಂಕಿನಲ್ಲಿ ಹಣದ ದುರ್ವಿನಿಯೋಗದ ಬಗ್ಗೆ ಮೊಕದ್ದಮೆ

ಆಟೋಸ್ ಬ್ಯಾಂಕಿನಲ್ಲಿ [illegible] ವರ್ಷಗಳ ಹಿಂದೆ [illegible] ಸಾವಿರ ರೂ.ಗಳ ದುರುಪಯೋಗದ ಸಂಬಂಧದಲ್ಲಿ ಬೆಂಗಳೂರು ಪೊಲೀಸರು ಬ್ಯಾಂಕಿನ ಮ್ಯಾನೇಜರ್ ಕೆ. ಆರ್. ಶ್ರೀನಿವಾಸ ಅಯ್ಯರ್, ಎಲ್. ಕಲೆಕ್ಟರ್ ಮಾದಯ್ಯ, ಕ್ಯಾಷಿಯರ್ ಎ. ಎಸ್. ಸೀತಾರಾಮಯ್ಯ, ಸ್ಟಾಫ್ [illegible] ಅಶ್ವತ್ಥನಾರಾಯಣರಾವ್, ಗುಮಾಸ್ತೆ ಎ. ಮಹಾಬಲೇಶ್ವರಯ್ಯ ಮತ್ತು ಅಸಿಸ್ಟೆಂಟ್ ಅಕೌಂಟೆಂಟ್ ಕೃಷ್ಣಶಾಸ್ತ್ರಿಯವರುಗಳ ಮೇಲೆ ಮೊಕದ್ದಮೆ ಹೂಡಿರುತ್ತಾರೆ. ಎ. ಎಸ್. ಸೀತಾರಾಮಯ್ಯನವರು ಇನ್ನೂ ಪತ್ತೆಯಿಲ್ಲ.

ರೇಷ್ಮೆ ಬಗ್ಗೆ ಭಾರತವು ಸ್ವಾವಲಂಬಿಯಾಗಲು ಕ್ರಮ

ರೇಷ್ಮೆ ವ್ಯವಸಾಯಗಾರರ ಸಮ್ಮೇಳನದಲ್ಲಿ ಕೇಂದ್ರ ಅಧಿಕಾರಿಗಳಾದ ಸಂಜಪ್ಪನವರ ಭಾಷಣ

ಮೈಸೂರು ೧೭

ಸಂತೆಸುರದಹ್ಳಿಯಲ್ಲಿ ನೆ ಜನಗೂಡು ಸಬ್ ಡಿವಿಜನ್ ರೇಷ್ಮೆ ವ್ಯವಸಾಯಗಾರರ ಮತ್ತು ತಯಾರಕರ ಸಮ್ಮೇಳನವು ನೆನ್ನೆ ಜರುಗಿತು. ಕೇಂದ್ರ ರೇಷ್ಮೆ ಬೋರ್ಡಿನ ಅಧ್ಯಕ್ಷ ಶ್ರೀ ವಿ ಸಂಜಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಂಸ್ಥಾನದ ಗೃಹ ಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರು ಆರಂಭೋತ್ಸವವನ್ನು ನೆರವೇರಿಸಿದರು.

ಪ್ರಾರ್ಥನೆ ಮತ್ತು ಸ್ವಾಗತ ಸಮಿತಿ ಅಧ್ಯಕ್ಷ ಪಟೇಲ್ ಪುಟ್ಟಸ್ವಾಮಪ್ಪನವರಿಂದ ಸ್ವಾಗತ ಭಾಷಣಗಳು ನಡೆದನಂತರ ಮುಖ್ಯ ಅತಿಥಿಗಳಿಗೆ ಸ್ವಾಗತ ಸಮಿತಿ ಮತ್ತು ಜಿಲ್ಲೆಯ ರೇಷ್ಮೆ ವ್ಯವಸಾಯಗಾರರ ಸಂಘಗಳ ಪರವಾಗಿ ಬಿನ್ನವತ್ತಳೆಗಳನ್ನು ಅರ್ಪಿಸಲಾಯಿತು.

ಗೃಹ ಸಚಿವರು ಆರಂಭ ಭಾಷಣ ಮಾಡಿ ಈ ರೀತಿ ನುಡಿದರು –

ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ ೩.೨ ಲಕ್ಷ ರೂ ವೆಚ್ಚದಿ ದ ಭಾರತದ ೨೫೦ ಎಕರೆ ಪ್ರದೇಶದಲ್ಲಿ ಹಿಪ್ಪುನೇರಳೆ ಗಿಡಗಳನ್ನು ಬೆಳೆಸುವ ಕೇಂದ್ರವನ್ನು ಸ್ಥಾಪಿಸಲೂ, ಸಂಸ್ಥಾನದಲ್ಲಿ ಅಂತಹ ೪ ಕೇಂದ್ರಗಳನ್ನು ತೆರೆಯಲೂ ನಿರ್ಧರಿಸಲಾಗಿದೆ. ರೇಷ್ಮೆ ನೂಲನ್ನು ಉತ್ತಮಪಡಿಸುವ ಸಲುವಾಗಿ ಆಧುನಿಕ ರೀತಿಯ ಯಂತ್ರೋಪಕರಣಗಳನ್ನು ಅಗ್ಗವಾಗಿ ಒದಗಿಸಲೂ, ರೇಷ್ಮೆ ಮಾರಾಟ ವ್ಯವಸ್ಥೆಯನ್ನು ಉತ್ತಮಪಡಿಸುವುದಕ್ಕಾಗಿ ಬೆಂಗಳೂರಿನಲ್ಲಿ ಒಂದು ಸಹಕಾರ ಸಂಘವನ್ನು ತೆರೆಯಲು ಉದ್ದೇಶಿಸಲಾಗಿದೆ.

ರೇಷ್ಮೆ ಕೈಗಾರಿಕೆಯ ಬಗ್ಗೆ ಸಂಶೋಧನೆ ನಡೆಸಲು ೨೧ ಲಕ್ಷ ರೂ ಗಳ ವೆಚ್ಚದಲ್ಲಿ ಚನ್ನಪಟ್ಟಣದ ಬಳಿ ಒಂದು ಕೇಂದ್ರವನ್ನು ಸ್ಥಾಪಿಸಲು ಕಟ್ಟಡವು ಸಿದ್ಧವಾಗುತ್ತಿದೆ. ದ್ವಿತೀಯ ಯೋಜನೆಯಲ್ಲಿ ಕೈಗಾರಿಕೆಯ ಅಭಿವೃದ್ಧಿಗಾಗಿ ೬೦,೨೬,೦೦೦ ರೂ ಗಳನ್ನು ಒದಗಿಸಲಾಗುವುದು. ರೇಷ್ಮೆ ವ್ಯವಸಾಯಗಾರರು ಈ ಉದ್ದೇಶದ ಯಶಸ್ಸಿಗಾಗಿ ಸರ್ಕಾರದೊಡನೆ ಸಹಕರಿಸಬೇಕು.

ನಿರ್ಣಯಗಳು

ಅನಂತರ ಸಮ್ಮೇಳನದಲ್ಲಿ ಕೆಳಗಿನ ನಿರ್ಣಯಗಳು ಸರ್ವಾನುಮತದಿಂದ ಅಂಗೀಕೃತವಾದುವು – ಚರಕಾ ರೇಷ್ಮೆ ಮತ್ತು ಗೃಹೋದ್ಯೋಗ ಮಾಲೆ ವಿಧಿಸುವ ಸುಂಕವ ಮತ್ತು ರೇಷ್ಮೆ ವ್ಯವಸಾಯಗಾರರ ಮೇಲಿನ ವ್ಯವಸಾಯದ ತೆರಿಗೆಗಳನ್ನು ಸರ್ಕಾರವು ರದ್ದುಮಾಡಬೇಕು, ರೇಷ್ಮೆ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡುವವರೆಗೆ ರೈತರ ಗೂಡಿಗೆ ಕನಿಷ್ಠ ಬೆಲೆ ಒದಗಿಸಬೇಕು. ಟಿ ನರಸೀಪುರದಲ್ಲಿ ಮುಡುಕುತೊರೆ ಮತ್ತು ತಲಕಾಡು ಜನತೆಗೆ, ಸಂತೆ ಮರಹಳ್ಳಿ ಮತ್ತು ನಂಜನಗೂಡುಗಳಲ್ಲಿ ಅವರ ಶಾಖೆಗಳನ್ನು ತೆರೆಯಬೇಕು,

ರೇಷ್ಮೆ ವ್ಯವಸಾಯ ಇತರ ಗೃಹ ಕೈಗಾರಿಕೆಗಳಂತೆ ಸಹಾಯಧನವನ್ನು ಒಂದು ಪೌಂಡು ಗೂಡಿಗೆ ಸುಮಾರು ಉತ್ತೇಜಕ ಧನ ಮತ್ತು ರೈತರಿಗೆ ಅನುಕೂಲವಾಗುವ ಕೈಗಾರಿಕಾ ಎಸ್ಟೇಟನ್ನು ಈ ಪ್ರಾಂತದಲ್ಲಿ ಏರ್ಪಡಿಸಬೇಕು,

ಹಿಪ್ಪುನೇರಳೆ ವ್ಯವಸಾಯವನ್ನು ಸ್ಥಾಪಿಸಬೇಕು. ರೇಷ್ಮೆ ವ್ಯವಸಾಯಗಾರರಿಗೆ ತಕ್ಕಂತೆ ಕೇಂದ್ರ ಬೋರ್ಡಿನಲ್ಲಿ ವ್ಯವಸಾಯಗಾರರ ಪ್ರಾತಿನಿಧ್ಯವಿರಬೇಕು.

ಅಧ್ಯಕ್ಷರು ಭಾಷಣ ಮಾಡಿ, ರೇಷ್ಮೆ ಕೈಗಾರಿಕೆ ಅಭಿವೃದ್ಧಿಗಾಗಿ ಕೇಂದ್ರ ಬೋರ್ಡು ನಡೆಸುತ್ತಿರುವ ಕ್ರಮಗಳನ್ನು ವಿವರಿಸಿ ತೆರಿಗೆಗಳನ್ನು ರದ್ದು ಮಾಡುವುದು ಅಸಾಧ್ಯವೆಂದು ಹೇಳಿದರು. ಕೈಗಾರಿಕೆಯ ಅಭಿವೃದ್ಧಿಗಾಗಿ ರೈತರು ಸರ್ಕಾರದೊಡನೆ ಸಹಕರಿಸಿ, ಶಾಂತಿಯೂ, ಸತ್ಯಾಗ್ರಹ ಮುಂತಾದ ಕ್ರಮಗಳನ್ನು ನಡೆಸಕೂಡದೆಂದೂ, ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವಂತೆ ಇಲ್ಲಿಯೂ ಸಹಕಾರ ಪದ್ಧತಿ ರೀತಿಯಲ್ಲಿ ನಡೆಸಬೇಕೆಂದೂ ಸೂಚಿಸಿದರು.

ರೇಷ್ಮೆ ಕೈಗಾರಿಕೆಯ ಅಭಿವೃದ್ಧಿಗಾಗಿ ದುಡಿ

ಕಾಸ್ಮೋಪಾಲಿಟನ್ ಕ್ಲಬ್ಬಿನ ಸುವರ್ಣ ಮಹೋತ್ಸವ

ಮೈಸೂರು ೧೭

ನಗರದಲ್ಲಿರುವ ಕಾಸ್ಮಾಪಾಲಿಟನ್ ಕ್ಲಬ್ಬಿನ ಸುವರ್ಣ ಮಹೋತ್ಸವವು ಇದೇ ತಿಂಗಳು ೨೮ ನೇ ತಾರೀಕು ಸಂಜೆ ೫॥ ಗಂಟೆಗೆ ನೆರವೇರುವುದು. ಮೈಸೂರು ರಾಜಪ್ರಮುಖರು ಅಧ್ಯಕ್ಷತೆ ವಹಿಸುವರು. ಸುವರ್ಣ ಮಹೋತ್ಸವ ನೆನಪಿನ ಫಲಕವನ್ನು ಅವರು ತೆರೆಯುವರು ಮತ್ತು ಬಹುಮಾನ ವಿನಿಯೋಗ ಮಾಡುವರು.

ಕನ್ನಡ ಚರ್ಚಾ ಕೂಟ

ಮಹಾರಾಜಾ ಕಾಲೇಜಿನ ವಿಶ್ವವಿದ್ಯಾಲಯ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಎಲ್ ಎಸ್ ಸ್ಮಾರಕ ಅಖಿಲ ಕರ್ನಾಟಕ ಅಂತರ ಕಾಲೇಜು ಕನ್ನಡ ಚರ್ಚಾ ಕೂಟವು ನಡೆಯುವುದು. ಪ್ರಿನ್ಸಿಪಾಲರಾದ ಶ್ರೀ ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸುವರು.

ಪೊಂಗಲ್ ರಂಗೋಲಿ ಸ್ಪರ್ಧೆ

ಒಕ್ಕಲಿಗರೂಡಿನ ಕಸ್ತೂರಬಾ ಸಮಾಜದ ಆಶ್ರಯದಲ್ಲಿ ನಡೆದ ರಂಗೋಲಿ ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಕಳೆದ ಶನಿವಾರ ವಿ ಡಿ ಎಂ ನಾಯ್ಡುರವರ ವ್ಯಾಸಂಗ ವಿ ಶ್ರೀಮತಿ ಸುಶೀಲಾಬಾಯಿ ನಾಗೇಶರಾವ್ ಅಧ್ಯಕ್ಷತೆ ವಹಿಸಿ ವಿತರಿಸಿದರು. ಮೊದಲನೆಯ ಮೂರು ಬಹುಮಾನಗಳನ್ನು ಕ್ರಮವಾಗಿ ಪುಷ್ಪಮ್ಮಾಳ್, ವಿಮಲಾಬಾಯಿ ಮತ್ತು ಕಸ್ತೂರಿಬಾಯಿಯವರಿಗೆ ಕೊಡಲಾಯಿತು. ಕುಮಾರಿ ಚಂಪಕಾರವರ ಇಂಪಾದ ಸಂಗೀತವು ನಡೆಯಿತು.

ಅಖಿಲ ಕರ್ನಾಟಕ ಹಿಂದೀ ಪ್ರಚಾರಕ ಅಧ್ಯಾಪಕ ಸಂಘ

ಮೈಸೂರು ಸಂಸ್ಥಾನದ ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಹಿಂದೀ ಉಪಾಧ್ಯಾಯರ ಸಮಸ್ಯೆಗಳ ಬಗ್ಗೆ ವಿದ್ಯಾಧಿಕಾರಿಗಳಿಗೆ ಒಂದು ಮನವಿಯನ್ನು ಒಪ್ಪಿಸುವ ಉದ್ದೇಶದಿಂದ ಇದೇ ೨೦ ನೆಯ ತಾರೀಕು ಶುಕ್ರವಾರ ಬೆಳಗ್ಗೆ ೮ ಗಂಟೆಗೆ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ಮೇಲ್ಕಂಡ ಉಪಾಧ್ಯಾಯರ ಸಭೆಯು ನಡೆಯುವುದು. ಅಖಿಲ ಕರ್ನಾಟಕ ಹಿಂದೀ ಪ್ರಚಾರಕ ಅಧ್ಯಾಪಕ ಸಂಘದ ಅಧ್ಯಕ್ಷರಾದ ಪ್ರೊ ಎಂ ವೆಂಕಟೇಶ್ವರಯ್ಯನವರು ಅಧ್ಯಕ್ಷತೆ ವಹಿಸುವರು. ಸಂಸ್ಥಾನದ ಮಾಧ್ಯಮಿಕ ಮತ್ತು ಪ್ರೌಢಶಾಲಾ ಹಿಂದೀ ಉಪಾಧ್ಯಾಯರು ಸಭೆಯ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಸಂಘದ ಮೈಸೂರಿನ ಪ್ರತಿನಿಧಿ ಶ್ರೀ ಟಿ ಎಸ್ ಸುದರ್ಶನಾಚಾರ್ಯರು ಕೋರಿರುತ್ತಾರೆ. ಬರಲು ಆಗದ ಕಾಲವಿದ್ದರೆ ಹಿಂದೀ ಉಪಾಧ್ಯಾಯರು ತಮ್ಮ ಸಲಹೆಗಳನ್ನು ಲಿಖಿತ ಮೂಲಕ ಶನೇಶ್ವರಗುಡಿಗಾಗಿ ಶ್ರೀ ಎಂ ರಾಜೇಶ್ವರಯ್ಯ, ಅಧ್ಯಕ್ಷ, ಹಿಂದಿ ಅಧ್ಯಾಪಕರ ಸಂಘ, ೧೧೩ ದಿವಾನ್ಸ್ ರೋಡ್, ಮೈಸೂರು ಇವರಿಗೆ ಕಳುಹಿಸಬೇಕಾಗಿ ಕೋರಲಾಗಿದೆ.

ಮಹಿಳಾ ಸದನ

ಮಹಿಳಾ ಸದನದ ಸಂಸ್ಥಾಪಕರಾದ ಶ್ರೀ ಎಂ ಡಿ ಗೋಪಾಲಾಚಾರ್ಯರ ಜನ್ಮದಿನದ ಪ್ರಯುಕ್ತ ಕಳೆದ ಶನಿವಾರ ಶ್ರೀ ಆಂಡಾಳ್ ದಿನಾಚರಣೆಯನ್ನು ನೆರವೇರಿಸಲಾಯಿತು. ಪ್ರಾರ್ಥನೆ ಮತ್ತು ಸ್ವಾಗತ ಭಾಷಣಾನಂತರ ಶ್ರೀಮತಿ ರುಕ್ಮಿಣಿ ಮತ್ತು ಶ್ರೀಮತಿ ರಾಜಲಕ್ಷ್ಮಿಯವರು 'ತಿರುಪ್ಪಾವೈ' ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಅಧ್ಯಕ್ಷತೆ ವಹಿಸಿದ್ದ ಯಾಮುನಾಚಾರ್ಯರು ಆಳ್ವಾರ್ ಮತ್ತು ಆಂಡಾಳ್‌ರವರ ಮಹತ್ವವನ್ನು ವಿವರಿಸಿ ಶ್ರೀ ಆಂಡಾಳ್‌ರ ಜೀವನ ಚರಿತ್ರೆಯನ್ನೂ, ಅವರ ಅನುಪಮ ಹಾಗೂ ಅದ್ಭುತ ದೈವಭಕ್ತಿಯನ್ನು ಹೃದಯಂಗಮವಾಗಿ ಚಿತ್ರಿಸಿದರು. ಆಂಡಾಳ್‌ರವರು ಹಾಡಿದ ಪದ್ಯಗಳಲ್ಲಿ ಭಾವಾರ್ಥಗಳನ್ನೂ, ಅದರಲ್ಲಿ ಅಡಗಿರುವ ತತ್ವಜ್ಞಾನವನ್ನೂ ತಿಳಿಸಿದರು. ವಂದನಾರ್ಪಣೆ, ರಾಷ್ಟ್ರಗೀತೆಗಳೊಡನೆ ಸಭೆ ಮುಗಿಯಿತು.

ಯಲು ಶ್ರೀ ಕೆ ಬಿ ಶಾಂತಮೂರ್ತಿ ಮತ್ತು ಬಸಪ್ಪನವರ ಸಂಚಾಲಕತ್ವದಲ್ಲಿ ೩೨ ಮಂದಿಯ ಸಮಿತಿಯೊಂದನ್ನು ರಚಿಸಲಾಯಿತು.

ದೆಹಲಿಗೆ ಮೈಸೂರು ದೃಶ್ಯಗಳ ಚಿತ್ರ ಕಲಾಕೃತಿಗಳು

ಎಸ್. ಕಾಳಪ್ಪನವರ ಪ್ರಾತಿಭೆ

ಎಸ್. ಕಾಳಪ್ಪ

ಇದೇ 26 ನೇ ತಾರೀಕು ರಿಪಬ್ಲಿಕ್ ದಿನಾಚರಣೆ ಸಂಬಂಧದಲ್ಲಿ ದೆಹಲಿಯಲ್ಲಿ ನಡೆಯುವ ಕಲಾ ಪ್ರದರ್ಶನದಲ್ಲಿ ಪ್ರದರ್ಶಿಸಲು ನಗರದಿಂದ ಮೈಸೂರಿನ ಹಲವಾರು ದೃಶ್ಯಗಳ ಚಿತ್ರ ಕಲಾಕೃತಿಗಳನ್ನು ತೆಗೆದುಕೊಂಡು ಹೋಗಲಾಗುತ್ತದೆ. ನಗರದ ಫೈನ್ ಆರ್ಟ್ಸ್ ಮತ್ತು ಪಬ್ಲಿಸಿಟಿ ಸಂಸ್ಥೆಯ ಕಲಾವಿದರಾದ ಶ್ರೀ ಎಸ್ ಕಾಳಪ್ಪನವರು ಕೃಷ್ಣರಾಜಸಾಗರದ ಬೃಂದಾವನ, ಮೈಸೂರು ಅರಮನೆ, ಚಿಕ್ಕಾ ಎನ್‌ ಡಿ ಜೇಂಗ್ ಜಲಪಾತ, ಚಾಮುಂಡಿಬೆಟ್ಟದ ಬಸವ, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಮುಂತಾದ ದೃಶ್ಯಗಳ ಚಿತ್ರಗಳನ್ನು ಉತ್ತಮ ರೀತಿಯಲ್ಲಿ ಬರೆದಿರುತ್ತಾರೆ. ಶ್ರೀ ಎಸ್ ಎ ಬಿ ಜುರವರು ಚಾಮುಂಡಿ ಬೆಟ್ಟವನ್ನು ಮಾದರಿಯಲ್ಲಿ ಮಾಡಿರುವುದು ಅಲ್ಲದೆ ಕಾಗದದಲ್ಲಿ ಹಂಸ, ಕೋಣ ಮುಂತಾದುವನ್ನು ತಯಾರಿಸಿದ್ದಾರೆ.

ಇವರುಗಳ ಕಲಾ ಪ್ರತಿಭೆಯನ್ನು ಹಲವಾರು ಅಧಿಕಾರಿಗಳೂ, ನಾಗರೀಕ ಮಹನೀಯರೂ ಮೆಚ್ಚಿದ್ದಾರೆ.

ನಿಧನ

ರಾಜಧಾನಿಯ ಜಯಲಕ್ಷ್ಮಿ ಬ್ಯಾಂಗಲ್ಸ್ ಸ್ಟೋರ್ಸಿನ ಮಾಲೀಕರಾದ ಶ್ರೀ ಎಂ ಎಸ್ ರೇವಣ್ಣ ಮತ್ತು ಎಂ ಎಸ್ ನಾಗರಾಜ್‌ರವರ ತಂದೆ ಶ್ರೀ ಶಿವಪ್ಪನವರು ಈ ದಿನ ಬೆಳಗ್ಗೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೬೦ ವರ್ಷ ವಯಸ್ಸಾಗಿತ್ತು. ೬–೭ ತಿಂಗಳಿಂದಲೂ ಅವರು ರೋಗಪೀಡಿತರಾಗಿದ್ದರು. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಬಂಧುಗಳಿಗೆ ಸಂತಾಪವನ್ನು ಸೂಚಿಸುತ್ತೇವೆ.

ಸಿಟಿ ಮುನಿಸಿಪಲ್ ಆಫೀಸು,

ಮೈಸೂರು, ತಾ|| 10–1–56

R ಎ ಎ 38–17 (55) 56

ಹರಾಜು ನೋಟಿಫಿಕೇಷನ್

ಮೈಸೂರು ಸಿಟಿ ದೇವರಾಜಾ ಮಾರ್ಕೆಟ್ಟಿನಲ್ಲಿ ವ್ಯಾಪಾರಕ್ಕಾಗಿ ತರತಕ್ಕ ತರಕಾರಿ ಗೂಡೆ ಪಕ್ಕೆರಗಳ ಮೇಲೆ ವಿಧಾಯಕವಾದ ದರದಂತೆ 1956–57 ನೇ ಸಾಲಿಗೆ ಡೈಲಿ ಫೀ ವಸೂಲು ಮಾಡುವ ಹಕ್ಕನ್ನು ತಾ|| 27–1–56 ನೇ ದಿವ 10 ಘಂಟೆಗಾದ್ದು ದೇವರಾಜಾ ಮಾರ್ಕೆಟ್ ಆವರಣದಲ್ಲಿ ಬಹಿರಂಗವಾಗಿ ಹರಾಜು ಮೂಲಕ ವಿಲೆಪಡಿಸಲಾಗುತ್ತೆ.

ವಿವರಗಳನ್ನು ಆಫೀಸು ವೇಳೆಯಲ್ಲಿ ರೆವಿನ್ಯೂ ಆಫೀಸರವರಲ್ಲಿ ತಿಳಿಯಬಹುದು.

(ಸಹಿ) ಎ. ವಿಶ್ವನಾಥ್,
ಮುನಿಸಿಪಲ್ ಕಮೀಷನರ್

ಬಳ್ಳಾರಿ ಜಿಲ್ಲೆಯ ಹಸ್ತಾಂತರ ಮತ್ತೆ ಹೋಗಬಾರದು

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿಲುವು

ಬೆಂಗಳೂರು

ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ರಾತ್ರಿ ಸುಮಾರು ೭ ಘಂಟೆವರೆಗೂ ನಡೆದು, ಸಂಸ್ಥಾನದೊಡನೆ ಸೇರಿರುವ ಜಿಲ್ಲೆಯ ಭವಿಷ್ಯದ ಬಗ್ಗೆ ಯಾವ ಬದಲಾವಣೆಯನ್ನೂ ಮಾಡಬಾರದೆಂದು ಒತ್ತಾಯಿಸಿತು. ಬಳ್ಳಾರಿ, ಹೋಸ್ಪೇಟೆ ಮತ್ತು ರೂಪನಗುಡಿ ತಾಲ್ಲೂಕುಗಳನ್ನು ಆಂಧ್ರಕ್ಕೆ ವರ್ಗಾಯಿಸಬೇಕೆಂದು ಆಂಧ್ರರು ಕೇಳಿರುವುದನ್ನು, ಹೈಕಮಾಂಡು ಒಪ್ಪಿದ್ದರೂ, ಅದನ್ನು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಭೆಯು ಅಂಗೀಕರಿಸಿಲ್ಲ. ತುಂಗಭದ್ರಾ ಹೈಲೆವೆಲ್ ಕಾಲುವೆ ವಿವಾದವನ್ನು ಆಂಧ್ರ ಮತ್ತು ಮೈಸೂರು ಸರ್ಕಾರಗಳು ಪರಸ್ಪರ ಒಪ್ಪಂದದ ಇತ್ಯರ್ಥ ಪಡಿಸಿಕೊಳ್ಳಬೇಕೆಂದೂ, ಒಪ್ಪಂದವಾಗದಿದ್ದರೆ ಕೇಂದ್ರ ಸಮಿತಿಯವರು ತೀರ್ಪನ್ನು ನ್ಯಾಯವಾದ ರೀತಿಯಲ್ಲಿ ಬಗೆಹರಿಸಬೇಕೆಂದೂ ತೀರ್ಮಾನಿಸಲಾಯಿತು.

ಕಾಲೇಜು ಪರೀಕ್ಷೆಗಳನ್ನು ೧ ತಿಂಗಳು ಮುಂದೆಹಾಕಲು ಒತ್ತಾಯ

ಅಖಿಲ ಭಾರತೀಯ ವಿದ್ಯಾರ್ಥಿ ಫೆಡರೇಷನ್ ಮೈಸೂರು ಶಾಖೆಯ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ನಡೆದು ವಿಶ್ವವಿದ್ಯಾಲಯದ ಎಲ್ಲಾ ಪರೀಕ್ಷೆಗಳನ್ನೂ ೧ ತಿಂಗಳ ಕಾಲ ಮುಂದೆ ಹಾಕಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ವಿಶೇಷ ತರಗತಿಗಳನ್ನು ನಡೆಸಿ ಪಾಠಗಳನ್ನು ಮುಗಿಸಿ, ಪುಸ್ತಕಗಳನ್ನು ಮನನ ಮಾಡಲು ಹೆಚ್ಚು ಅವಕಾಶ ಕೊಡಬೇಕೆಂದು ಸೂಚಿಸಿ, ವಿದ್ಯಾರ್ಥಿಗಳ ಬೇಡಿಕೆಯನ್ನು ಮನ್ನಿಸುವಂತೆ ಕೋರಲಾಯಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ಕ ಬ ಎಂ ನವಸಂಸ್ಕೃತ ಗೀತ ೭–೩೦ ಮತ್ತು ಸಂಜೆ ೫ ೪೦ ಹಳ್ಳಿ... ಮತ್ತು ಪಾರ್ಟಿ ಸಾದ ಮೇಳ ... ವಾರ್ತೆ ಮಧ್ಯಾಹ್ನ ೧೨ ಮೈಸೂರು ಸಹೋದರರ ಸಂಗೀತ ೧೨ ೪೦ ಮತ್ತು ೨–೧೫ ... ಮುರಳಿ ವಾದ್ಯ ೧ ೪೦ ಮತ್ತು ೧ ... ಕನ್ಸರ್ಟ್ ೨ ರಿಕಾರ್ಡ್ ೬ ೩೫ ... ೭ ೪೦ ಭಕ್ತಿಗೀತೆ ... ಸಂಗೀತ ೯ ೧೫ ಯೋಜನೆ ಬಗ್ಗೆ ಭಾಷಣ ... ಕನ್ನಡ ನಾಟಕ ೧೦ ರಿಕಾರ್ಡ್ ಸಂಗೀತ

೦ಜನ್ನ ಯನಿಯಲ್ಲಿ ಕಳೆದ ಶನಿವಾರ ... ವ ಒಂದು ಮಗುವು ತನ್ನ ಸಂಬಂಧಿಕರ ತೊಡೆಯ ಮೇಲೆ ಕುಳಿತು ಗಾಳಿ ಪಟದ ಸುತ್ತುವುದನ್ನು ನೋಡುತ್ತಿದ್ದಾಗ ಒಂದು ದಾರವು ಮಗುವಿನ ಕತ್ತಿನ ಮೇಲೆ ಹರಿದು ಕತ್ತಿಗೆಯಲ್ಲಿ ಕುಯ್ದು ಗಾಯವಾದ ದೆಸೆಯಿಂದಾಗಿ ಕೂಡಲೇ ಮೃತಪಟ್ಟಿತೆಂದು ವರದಿಯಾಗಿದೆ.

ಸ್ವಲ್ಪ ಬಂಡವಾಳದಲ್ಲೇ ಹೆಚ್ಚು ಲಾಭ ಪಡೆಯಿರಿ !

ಈಗತಾನೆ ಹೊಸದಾಗಿ ಬಳಕೆಗೆ ಸಿದ್ಧವಾಗಿವೆ

'ರೀಟಾ' ಹೊಲಿಯುವ ಯಂತ್ರಗಳು

— ವಿವರಗಳಿಗೆ ಕೆಳಗೆ ಕಂಡವರಲ್ಲಿ ವಿಚಾರಿಸಿ —

ಪಟ್ಟು ಬ್ರದರ್ಸ್,

ಟೌನ್ ಹಾಲ್ ಎದುರು, ಮೈಸೂರು

ಒಲಂಪಿಯಾ 19-1-56 ರಿಂದ : ಅಶೋಕ್ ಪ್ರಾಡಕ್ಷನ್ಸ್
ಪ್ರತಿ ದಿನ 3 ಆಟಗಳು 3 15, 6 30 ಮತ್ತು 9-45

ಶರತ್‌ಚಂದ್ರರ ಬಹುಜನ ಪ್ರಿಯ ಕಥೆ,
ಶರತ್ ಚಂದ್ರ ಚಟರ್ಜಿಯವರ ಅಮರ ಕಲಾಕೃತಿ ದೇವದಾಸ್

ಈ ಚಿತ್ರದ ಪ್ರಮುಖ ಪಾತ್ರಗಳನ್ನು ವಹಿಸುತ್ತಿರುವ ತಾರಾಗಣ ದಿಲೀಪ್ ಕುಮಾರ್, ವೈಜಯಂತಿಮಾಲಾ, ಸುಚಿತ್ರಾಸೇನ್, ಮೋತಿಲಾಲ್

ನಿರ್ದೇಶನ – ಬಿಮಲ್‌ರಾಯ್ ಸಂಗೀತ – ಎಸ್ ಡಿ ಬರ್ಮನ್

19-1-56 ರಿಂದ ಪ್ರತಿ ದಿನ ಬೆಳಗ್ಗೆ 10 ರಿಂದ 12 ಘಂಟೆ ವರೆಗೆ ಮೊದಲಿನ 3 ತರಗತಿ ಟಿಕೆಟ್ಟುಗಳನ್ನು ಮುಂಗಡವಾಗಿ ಕೊಡಲಾಗುತ್ತೆ. ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮೊದಲನೇ 4 ವಾರಗಳಲ್ಲಿ ಮುಕ್ತ ಮಾಡಲಾಗಿದೆ

Edited, Printed and Published by A R Nagarajan at Sadhvi Press, D Subbiah Road, Mysore

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿ 3 ಕಾಸು

ಚಂದಾ ದರ

[illegible] ತಿಂಗಳಿಗೆ [illegible]

[illegible] ತಿಂಗಳಿಗೆ [illegible] ರೂ.

ಬಿಡಿ ಪ್ರತಿ ಮೂರು ಕಾಸು

ಸಂಪುಟ : ೧೪] SADHVI : THURSDAY 19-1-1956 ಮೈಸೂರು ಗುರುವಾರ : ೧೯-೧-೧೯೫೬ [ಸಂಚಿಕೆ : ೧೫೦

- ಮೈಸೂರು-ಬೆಂಗಳೂರು ವಿದ್ಯಾರ್ಥಿಗಳ ಮುಷ್ಕರ -

ಬೆಂಗಳೂರಿನಲ್ಲಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ವಿದ್ಯಾರ್ಥಿನಿಯರು ಭಾಗವಹಿಸಿರಲಿಲ್ಲ

[... ತಂತಿ] ಬೆಂಗಳೂರು ೧೮

ಇಂದು ಇಲ್ಲಿಯ ಅನೇಕ ಕಾಲೇಜು ವಿದ್ಯಾರ್ಥಿಗಳು ಮುಷ್ಕರ ಹೂಡಿದರು. ಅವರು ಮಹಾ[illegible] ಕಾಲೇಜಿನ ಮುಂದೆ ಸೇರಿ, ಘೋಷಣೆಗಳ[illegible] ಕೂಗುತ್ತಿದ್ದರು. ಮುಷ್ಕರದಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿಲ್ಲ. ಪರಿಸ್ಥಿತಿಯು ಶಾಂತವಾ[illegible]ತ್ತು.

ದೆಹಲಿಗೆ ಗೃಹ ಸಚಿವರ ಪ್ರಯಾಣ

ಗೃಹ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು [illegible] ವಿಮಾನದಲ್ಲಿ ದೆಹಲಿಗೆ ತೆರಳಿದ[illegible] ಜನಾರ್ದನ ಸಂಸ್ಥಾನದ ಯೋಜನಾ [illegible] ಕಾರ್ಯದರ್ಶಿಯೂ ತೆರಳಿದರು. [illegible] ವಾಪಸು ಬರುವರು.

ಬೆಳಗಾವಿಯಲ್ಲಿ ಹಗಲಿನಲ್ಲೂ ಕರ್ಫ್ಯೂ

ನೆನ್ನೆ ನಡೆದ ಗಲಭೆಗಳ ಪರಿಣಾಮವಾಗಿ [illegible] ನಲ್ಲಿ ೩ ದಿನಗಳ ಕಾಲ ಸಂಜೆ [illegible] ಯಿಂದ ಬೆಳಗ್ಗೆ [illegible] ವರೆಗೆ ವಿಧಿಸಲಾಗಿ[illegible] ಕರ್ಫ್ಯೂ ಆಜ್ಞೆಯ ಅವಧಿಯನ್ನು ನೆನ್ನೆ ಮ[illegible] ಹಚ್ಚಿಸಿ ಬೆಳಗ್ಗೆ [illegible] ರಿಂದ ಸಂಜೆ [illegible] ಗಂಟೆ[illegible] ಎಲ್ಲರೂ ಮನೆಯಲ್ಲಿರುವುದೆಂದು ಸೂಚಿಸ[illegible] ನೆನ್ನೆಯಿಂದ ೧೫ ದಿನಗಳ ಕಾಲ ಸಭೆ[illegible] ಮೆರವಣಿಗೆಗಳನ್ನು ನಿಷೇಧಿಸಲಾಗಿದೆ.

[illegible]ಗಾಂ ಬಳಿ ಎಕ್ಸ್‌ಪ್ರೆಸ್ ರೈಲು ಅಪಘಾತ

ನೆನ್ನೆ ಬೆಂಗಳೂರಿನಿಂದ ಪೂನಾ ಮಾರ್ಗ[illegible] ಎಕ್ಸ್‌ಪ್ರೆಸ್ ರೈಲು ನೆನ್ನೆ ಬೆಳಗಿನ [illegible] ಗಾಂ ಮತ್ತು ದೇಸೂರು ನಿಲ್ದಾಣ[illegible] ನಡುವೆ ಅಪಘಾತಕ್ಕೀಡಾಗಿ, ಇಂಜನ್ನು ಮ[illegible] ಹಿಂದಿನ ಎರಡು ಬೋಗಿಗಳು ಕಂಬಿ[illegible] ತಪ್ಪಿದುವು ಎಂದು ವರದಿಯಾಗಿದೆ. ಡ್ರೈವರನೂ [illegible] ಇಬ್ಬರೂ ಫೈರ್‌ಮನ್ನರೂ, ಒಬ್ಬ ಪ್ರ[illegible]ಕನೂ ಗಾಯಗೊಂಡು ಬೆಳಗಾವಿಯ ಆ[illegible]ಪತ್ರೆಗೆ ಚಿಕಿತ್ಸೆಗಾಗಿ ಸೇರಿಸಲ್ಪಟ್ಟಿರುವರೆಂದು [illegible]ತ್ತಾಗಿದೆ. ಈ ಅಪಘಾತದ ಕಾರಣವನ್ನು ತ[illegible] ವಹಿಸಲಾಗುತ್ತಿದೆ.

೩,೦೦೦ ರೂ. ಒಡವೆ ಕಳುವು

[illegible]ಮಂಡಿ ಮೊಹಲ್ಲಾ ಈದಿಗಾ ಬಡಾವಣೆಯ[illegible] ಅಲಿ ಬ್ರದರ್ಸ್‌ರವರ ಮನೆಯಲ್ಲಿ ನೆನ್ನೆ [illegible] ಯಾರೋ ೩,೦೦೦ ರೂ ಬೆಲೆಯ ಆಭರ[illegible]ಗಳನ್ನು ಅಪಹರಿಸಿರುವರೆಂದೂ, ಮಂಡಿ ಪೊ[illegible] ಪತ್ತೆ ತನಿಖೆಯನ್ನು ನಡೆಸುತ್ತಿರುವರೆಂದೂ [illegible]ದಿಯಾಗಿದೆ.

ಕಥಾ ಕಾಲಕ್ಷೇಪ

[illegible]ಮಂಡಿ ಮೊಹಲ್ಲಾ ಕಾಳಮ್ಮನ ಗುಡಿಗೇರಿ ಕೊ[illegible] ಸಂದಿಯಲ್ಲಿ ಇರುವ ನೂಲು ವ್ಯಾಪಾರದ ಶ್ರೀ [illegible] ಕೆಂಚಪ್ಪ ಸೆಟ್ಟರವರ ಮನೆ ಮುಂಭಾಗ[illegible] ಪ್ರವೀಣರಾದ ವಿದ್ವಾನ್ ಜಿ ಬಿ ಎಸ್ ಶ್ರೀ[illegible] ದಾಸ್‌ರವರಿಂದ ಈ ರಾತ್ರಿ [illegible] ಘಂಟೆಗೆ [illegible] ಅಕ್ಕಮಹಾದೇವಿ [illegible] ಕಥೆ [illegible]ಯುತ್ತದೆ.

ಬೊಂಬಾಯಿಯಲ್ಲಿ ಹಿಂಸಾ ಕೃತ್ಯಗಳ ಪರಮಾವಧಿ

೧೧೫ ಬಾರಿ ಗುಂಡಿನೇಟು, ೨೧ ಮರಣ, ೩೫೦ ಮಂದಿಗೆ ಗಾಯ

ನಗರದಲ್ಲಿ ಸಾರ್ವತ್ರಿಕ ಮುಷ್ಕರ

ಒಟ್ಟು [illegible] ಜನರ ಬಂಧನ

ಬೊಂಬಾಯಿಯ ಪರಿಸ್ಥಿತಿಯು ನೆನ್ನೆ ಮತ್ತ[illegible] ಬಿಗಡಾಯಿಸಿತು. ಅಸ್ವಸ್ಥ ಗಲಭೆಕಾರರು [illegible] ಕಾಣದಂತಹ ಹಿಂಸೆ, ದೌರ್ಜನ್ಯ ಮತ್ತು ಲೂಟಿ ಕೃತ್ಯಗಳಲ್ಲಿ ತೊಡಗಿದ್ದರು. ನೆನ್ನೆಯ ಘಟನೆಗಳಲ್ಲಿ ಮಧ್ಯ ರಾತ್ರಿಯವರೆಗೆ [illegible] ಜನರು ಮಡಿದು, [illegible] ಮಂದಿ ಗಾಯಗೊಂಡರೆಂದು ವರದಿಯಾಗಿದೆ.

ಬೊಂಬಾಯಿ ನಗರವನ್ನು ಮಹಾರಾಷ್ಟ್ರದಿಂದ ಪ್ರತ್ಯೇಕಿಸುವುದನ್ನು ಪ್ರತಿಭಟಿಸಲು ಸಾರ್ವತ್ರಿಕ ಮುಷ್ಕರ ನಡೆಸುವ [illegible] ನಾಯಕರು ಕರೆ ಕೊಟ್ಟಿದ್ದರ [illegible] ಕಾರ್ಮಿಕ ಸಂಸ್ಥೆಗಳ ಮುಷ್ಕರ [illegible] ನಗರದ ವ್ಯಾಪಾರ ಮತ್ತು ಮುಖ್ಯ ಪ್ರದೇಶಗಳನ್ನು [illegible] ರ ಕಡೆಗಳಲ್ಲೆಲ್ಲಾ ಕೆಲಸವು ಸ್ಥಗಿತ [illegible] ಗಲಭೆ ಪರಿಸ್ಥಿತಿಯು ಹತೋಟಿ ಮೀರಿದಾಗ ಮೇ[illegible] ಪ್ರದೇಶಗಳಲ್ಲಿ ನೆನ್ನೆ [illegible] ಗಂಟೆಯಿಂದ ಸಂಜೆ [illegible] ವರೆಗೆ, ಮತ್ತು [illegible] ದಿನಗಳ ಕಾಲ ಸಂಜೆ [illegible] ವರೆಗೂ ಕರ್ಫ್ಯೂ ಆಜ್ಞೆಯನ್ನು ಜಾರಿ ಮಾಡಲಾಯಿತು.

ರಸ್ತೆ ಮತ್ತು ರೈಲ್ವೆ ಗಿರಣಿಗಳು, ರೈಲ್ವೆ ವ[illegible], [illegible] ಕಾಲೇಜುಗಳೆಲ್ಲವೂ ಮುಚ್ಚಲ್ಪಟ್ಟಿದ್ದುವು. [illegible] ಗಲಭೆಕೋರರು ಮುಷ್ಕರದಲ್ಲಿ ಸೇರದವರ [illegible] ಪೊಲೀಸರಿಗೂ ಮುಷ್ಕರಗಾರರಿಗೂ ಕಾಳಗ [illegible] ನಡೆದು, ಜನರನ್ನು ಚದುರಿಸಲು ಪೊಲೀಸರ ಪ್ರಯತ್ನಗಳೆಲ್ಲಾ ವಿಫಲವಾಗಿ, ಕಡೆಗೆ ಅವರು [illegible] ರಕ್ಷಣೆಗಾಗಿ ಗುಂಡು ಹಾರಿಸಿದರೆಂದೂ, [illegible] ಪರಿಸ್ಥಿತಿಯು ಹತೋಟಿಗೆ ಬರಲಿಲ್ಲವೆಂದೂ ಹೇಳಲಾಗಿದೆ. ಕರ್ಫ್ಯೂ ಉಲ್ಲಂಘಿಸಿದವರ ಮೇಲೆ ನೆನ್ನೆ ಬೆಳಗ್ಗೆ ೧೧ ಘಂಟೆಯಿಂದ ಮಧ್ಯ ರಾತ್ರಿಯವರೆಗೆ ೧೧೫ ಬಾರಿ ಗುಂಡು ಹಾರಿಸಲಾಯಿತೆಂದೂ ಗೊತ್ತಾಗಿದೆ.

ಸಂಜೆಯನಂತರ ಗಲಭೆಯು ಹೆಚ್ಚಾಗಿ ಗುಂಪಿನವರು ಪೊಲೀಸರ ಮೇಲೆ ಕಲ್ಲುಗಳನ್ನೆಸೆದು, ಅಂಗಡಿ ಬಾಗಿಲುಗಳನ್ನು ಮುರಿದು ಲೂಟಿ ಮಾಡಿದರು. ಬೀದಿ ದೀಪಗಳನ್ನು ಒಡೆದರು. [illegible] ಲ್ಲಾ ಮತ್ತು ಪರೇಲ್‌ಗಳಲ್ಲಿ ಪಟ್ಟಿಪ್ರತಿಕ್ರಿಯು ನಿಂತಿತ್ತು.

ಮಹಾರಾಷ್ಟ್ರರು ಅಧಿಕವಾಗಿ ವಾಸಿಸುವ ನಗರದ ಮೇಲೂ ಮತ್ತು ಅವರ [illegible]ಗಳ ಮೇಲೂ ಶೋಕ ಸೂಚಕ ಕಪ್ಪು ಧ್ವಜಗಳನ್ನು ಹಾರಿಸಲಾಗಿತ್ತು. ಗುಂಡಿನ ಏಟಿನಿಂದ ಜನರು ರೋಷಗೊಂಡು ಕಲ್ಲು ಮತ್ತು ಪ್ರಾವಕ ತುಂಬಿದ ಬಲ್ಬುಗಳನ್ನು ಪೊಲೀಸರ ಮೇಲೆ ಪ್ರಯೋಗಿಸಿದರು. [illegible] ಪೊಲೀಸು ಠಾಣೆಗಳು ಮತ್ತು [illegible] ರಿನ ಅಂಗಡಿಗಳಿಗೆ ಬೆಂಕಿ ಹಚ್ಚಲಾಯಿತು.

ನೆನ್ನೆಯ ಗಲಭೆಯಲ್ಲಿ ೫೦೦ ಮಂದಿ [illegible] ಪಟ್ಟಿದ್ದರು. ಒಟ್ಟು [illegible] ಬಂಧನ[illegible]ಯಾಗಿದೆ.

ಕೆ.ಡಿ.ರುಕ್ಮಿಣಿಯಮ್ಮನವರ ನಿಧನ

ಮೈಸೂರು ೧೮

ನಗರದ ಮಹಾರಾಣಿ ಕಾಲೇಜಿನ ನಿವೃತ್ತ ಪ್ರಿನ್ಸಿಪಾಲರೆಂದೆಂಬರೂ, ಇಲ್ಲಿನ ಮಹಿಳಾ ಸಮಾಜದ ಮಾಜಿ ಅಧ್ಯಕ್ಷಿಣಿಯೂ ಆದ ಶ್ರೀಮತಿ ಕೆ. ಡಿ. ರುಕ್ಮಿಣಿಯಮ್ಮನವರು ನೆನ್ನೆ ಮುಂಜಾನೆ [illegible] ತಮ್ಮ ಮನೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. [illegible] ದಕ್ಷಿಣ ಭಾರತದಲ್ಲಿ ಇಂಗ್ಲಿಷ್ ಭಾಷೆಯ [illegible] ಪದವಿ ಪಡೆದ ಮಹಿಳೆಯರಲ್ಲಿ ಮೊದಲನೆ [illegible] ಮಹಾರಾಣಿ ಕಾಲೇಜಿನಲ್ಲಿ ಅನೇಕ ವರ್ಷ ಪ್ರಿನ್ಸಿಪಾಲರಾಗಿದ್ದರು. ಮಹಿಳಾ ಸಮಾಜವನ್ನು [illegible] ವರ್ಷ ಕಾಲ ಅದರ ಅಧ್ಯಕ್ಷಿಣಿಯಾಗಿದ್ದರು. ಸೆನೆಟ್, ಎಕನಾಮಿಕ್ ಕಾನ್ಫರೆನ್ಸ್, ಪ್ರಜಾ ಪ್ರತಿನಿಧಿ ಸಭೆ ಮತ್ತು ಜಿಲ್ಲಾ ಬೋರ್ಡುಗಳ ಸದಸ್ಯರಾಗಿದ್ದರು. [illegible] ಸರ್ಕಾರದಿಂದ ನೇಮಿಸಲ್ಪಟ್ಟ [illegible] ಸುಧಾರಣಾ ಸಮಿತಿಯಲ್ಲೂ ಸದಸ್ಯರಾಗಿದ್ದರು. ಅವರಿಗೆ [illegible] ಕೃಷ್ಣರಾಜ [illegible] ಎಂಬ ಬಿರುದನ್ನು ಕೊಟ್ಟಿದ್ದರು. [illegible] ನಿವೃತ್ತ ಮುಖ್ಯೋಪಾಧ್ಯಾಯಿನಿ ಶ್ರೀಮತಿ [illegible] ಲಕ್ಷ್ಮಮ್ಮನವರು ಮೃತರ ಏಕಮಾತ್ರ ಪುತ್ರಿ. ಮೃತರಿಗೆ [illegible] ಮಂದಿ ಮೊಮ್ಮಕ್ಕಳು [illegible] ಮಂದಿ ಮರಿಮಕ್ಕಳು [illegible] ಮಂದಿ [illegible] ಇರುವರು. ದಿವಂಗತರ ಆತ್ಮಕ್ಕೆ ಶಾಂತಿ [illegible] ಅವರ ಕುಟುಂಬದವರಿಗೆ ಸಂತಾಪವನ್ನು ಸೂಚಿಸುತ್ತೇವೆ. ನೆನ್ನೆ ಮೃತರ ಗೌರವ ಸೂಚನೆಗಾಗಿ ಮಹಾರಾಣಿ ಕಾಲೇಜಿನಲ್ಲಿ ಎರಡು ನಿಮಿಷ ಮೌನವನ್ನು ಆಚರಿಸಲಾಯಿತು.

ಬಿಹಾರಿನ ಮುಖ್ಯ ಮಂತ್ರಿಯ ರಾಜೀನಾಮೆ

ಬಿಹಾರ್ ಮತ್ತು ಬಂಗಾಳಗಳ ಗಡಿ ವಿವಾದದ ಬಗ್ಗೆ ಭಾರತ ಸರ್ಕಾರದವರು ಕೈಗೊಂಡಿರುವ ನಿರ್ಧಾರಕ್ಕಾಗಿ ಪ್ರತಿಭಟನೆ ಸೂಚಿಸಲು, ತಮ್ಮ ಹುದ್ದೆಗೆ ರಾಜೀನಾಮೆ ಕೊಡಲು ಅನುಮತಿ ಕೊಡಬೇಕೆಂದು ಬಿಹಾರಿನ ಮುಖ್ಯ ಮಂತ್ರಿ ಶ್ರೀ ಕೃಷ್ಣ ಸಿನ್ಹಾರವರು ಕಾಂಗ್ರೆಸ್ ಅಧ್ಯಕ್ಷರಾದ ಯು ಎನ್. ಧೇಬರ್‌ರವರಿಗೆ ಪತ್ರವೊಂದನ್ನು ವಿಮಾನದ ಮೂಲಕ ಕಳುಹಿಸಿರುವರೆಂದು ಗೊತ್ತಾಗಿದೆ. ಪೂರ್ಣಿಯ ಜಿಲ್ಲೆಯ ಐದು ಮಂದಿ ಶಾಸನಸಭಾ ಸದಸ್ಯರು ಮೇಲ್ಕಂಡ ಕಾರಣಕ್ಕಾಗಿ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟಿರುವುದಾಗಿ ವರದಿಯಾಗಿದೆ.

ಎಸ್. ಎ. ಡಾಂಗೆಯವರ ಬಂಧನ

ಮಹಾರಾಷ್ಟ್ರ ಕಮ್ಯೂನಿಸ್ಟರ ಮುಖಂಡ ಎಸ್. ಎ. ಡಾಂಗೆಯವರು ನೆನ್ನೆ ದೆಹಲಿಯಿಂದ ಬೊಂಬಾಯಿಗೆ ಆಗಮಿಸಿದ ಒಡನೆಯೇ ಬಂಧಿಸಲ್ಪಟ್ಟರೆಂದು ವರದಿಯಾಗಿದೆ.

○ [illegible] ವ್ಯಕ್ತಿ ಪ್ರಯೋಗ ಶಾಲೆಯಲ್ಲಿರುವ ಶ್ರೀ ಪಿ ಎಸ್ ತಿರುಮಲಯ್ಯನವರನ್ನು ಮೈಸೂರಿನ ಕಾಲೇಜ್ ಆಫ್ [illegible] ವಿಭಾಗದ ಪ್ರಥಮ ದರ್ಜೆ [illegible] ಯಾಗಿ ಖಾಯಂ ಮಾಡಲಾಗಿದೆ.

ನಗರದಲ್ಲಿ ನಾನಾ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಪರೀಕ್ಷೆಗಳನ್ನು ಮುಂದುವರಿಸಲು ಒತ್ತಾಯ

ಮೈಸೂರು ೧೮

ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂದು ಒತ್ತಾಯಪಡಿಸುವ ಸಲುವಾಗಿ ಇಂದು ನಗರದ ಶಾರದಾವಿಲಾಸ ಆರ್ಟ್ಸ್ ಕಾಲೇಜು, ಶಾರದಾವಿಲಾಸ ಕಾಲೇಜಿನ ಸೀನಿಯರ್ ತರಗತಿಗಳು, ಡಿ. ಬನುಮಯ್ಯನವರ ಕಾಮರ್ಸ್ ಕಾಲೇಜು, ಸೆಂಟ್‌ಫಿಲೋಮಿನಾ ಕಾಲೇಜು ಮತ್ತು ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗುಗಳ ಸುಮಾರು ೫೦೦ ಮಂದಿ ವಿದ್ಯಾರ್ಥಿಗಳು ತರಗತಿಗಳನ್ನು ಬಿಟ್ಟು ಹೊರಬಂದರು. ಆ ಕಾಲೇಜು ಮತ್ತು ಫಿಲೊ[illegible] ಕಾಲೇಜುಗಳಲ್ಲಿ ಮುಷ್ಕರವು ಪೂರ್ಣವಾಗಿತ್ತು.

ಮಹಾರಾಜಾ ಕಾಲೇಜು ಮತ್ತು ಯುವರಾಜಾ ಕಾಲೇಜುಗಳಲ್ಲಿ ಅನೇಕ ವಿದ್ಯಾರ್ಥಿಗಳು ಮುಷ್ಕರ ಹೂಡಿದರು.

ಅನಂತರ ವಿದ್ಯಾರ್ಥಿಗಳು ಉಪಕುಲಪತಿಗಳ [illegible] ಗೆ ತೆರಳಿದಾಗ ಶ್ರೀಮತಿ ಡಿಸೋಜರವರು [illegible] ಊರಲ್ಲಿಲ್ಲವೆಂದು ತಿಳಿ[illegible] ವಿದ್ಯಾರ್ಥಿಗಳು [illegible] ಕಾಲೇಜಿನ ಎ[illegible] ಸೇರಿದರು. ಶ್ರೀಗಳಾದ [illegible] ಮ[illegible] ವೆಂಕಟೇಶಶಾಸ್ತ್ರಿ, ಸಿ. ಎಸ್. [illegible] ಮತ್ತು ಡಿ ಎಂ ಅಶ್ವತ್ಥನಾರಾಯಣ [illegible] ಭಾಷಣ ಮಾಡಿ ಪರೀಕ್ಷೆ ಬಗ್ಗೆ ಅಧಿಕಾರಿಗಳು ಭರವಸೆಯಾಯಿದವರವರೆಗೆ ಮುಷ್ಕರವನ್ನು [illegible] ಬೇಕೆಂದು ಸೂಚಿಸಿದರು.

ಪರೀಕ್ಷೆಗಳನ್ನು ಕೊನೆಯಪಕ್ಷ ೧ ತಿಂಗಳಾದರೂ [illegible] ಗಂಟೆಗಳಲ್ಲಿ ಅಧಿಕಾರಿಗಳು ಭರವಸೆ ನೀಡಬೇಕೆಂದು [illegible] ಯನ್ನು ವಿಧಿಸುವ [illegible] ಯವನ್ನು ಪಾಸ್ ಮಾಡಲಾಯಿತು. ಅನಂತರ ವಿದ್ಯಾರ್ಥಿಗಳು [illegible] ಹೌಸ್ [illegible] ಭವನದ ಒಳಗೆ ತೆರಳಿತು.

ಮುಷ್ಕರದಲ್ಲಿ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರು ಭಾಗವಹಿಸಲಿಲ್ಲ.

ಬಳ್ಳಾರಿ ಬಗ್ಗೆ ಆಂಧ್ರ ಮತ್ತು ಮೈಸೂರು ಸಚಿವರ ಮಾತುಕತೆ

ಬಳ್ಳಾರಿ ಬಗ್ಗೆ ಮೈಸೂರು ಮುಖ್ಯ ಮಂತ್ರಿಗಳಿಗೂ, ಆಂಧ್ರದ ಮುಖ್ಯ ಮಂತ್ರಿಗಳಿಗೂ, ದೆಹಲಿಯಲ್ಲಿ ನಾಳೆ ಮಾತುಕತೆಗಳು ನಡೆಯಬೇಕಾಗಿದೆ. ಅವರು ಪರಸ್ಪರ ಮಾತನಾಡಿ, ಕಾಂಗ್ರೆಸ್ಸಿನ ಉತ್ತಮಾಯಕರ [illegible] ಸಮಿತಿಗೆ ವರದಿ ಮಾಡಬೇಕೆಂದೂ ಗೊತ್ತಾಗಿದೆ. [illegible] ಹಣಗಳಿಗೆ ಆಂಧ್ರದ ಮುಖ್ಯ ಮಂತ್ರಿ ಗೋಪಾಲರೆಡ್ಡಿಯವರು ಒಪ್ಪುತ್ತಿಲ್ಲವೆಂದೂ, ವಿವಾದವನ್ನು ನ್ಯಾಯಾಧೀಶರ ತೀರ್ಮಾನಕ್ಕೆ ಬಿಡಬೇಕೆಂದು ಅವರಿಗೆ ಇಚ್ಛೆ ಇತ್ತೆಂದೂ ಹೇಳಲಾಗಿದೆ. ಕಾಂಗ್ರೆಸ್ ನಾಯಕರೇ ವಿವಾದವನ್ನು ಕೂಡಲೇ ತೀರ್ಮಾನಿಸಬೇಕೆಂದು ದೆಹಲಿಯಲ್ಲಿರುವ ಆಂಧ್ರದ ಮುಖ್ಯ ಮಂತ್ರಿ ಗೋಪಾಲರೆಡ್ಡಿಯವರು ಒತ್ತಾಯಪಡಿಸುವರೆಂದೂ ಗೊತ್ತಾಗಿದೆ.

ಮಹಾ ಮಾಘ ವಿಚಾರ

ಕೊಳ್ಳೇಗಾಲದ ಆಸ್ಥಾನ ವಿದ್ವಾನ್ ನಂಕಲಿಸು ಬ್ರಹ್ಮಶಾಸ್ತ್ರಿಯವರು ಈ ರೀತಿ ಬರೆದಿರುತ್ತಾರೆ:—

ಗಜಾರಣ್ಯವೆಂಬ ತಲಕಾಡಿನಲ್ಲಿ, ಮಹಾ ಮಾಘವು ಇರುವ ವರ್ಷದಲ್ಲಿ ಗೋಕರ್ಣ ಸ್ನಾನವು ಮಹಾ ಪುಣ್ಯಪ್ರದವು. ಶ್ಲೋ॥ ಮಕರಸ್ಥೆ ದಿವಾನಾಥೆ-ಸಿಂಹೇತುಗುರುಪಣಾಯತೇ॥ ಮಾಘೆ ಪರ್ವ ಮಘಾಯುಕ್ತೇ ಮಹಾ ಮಾಘಃ ಪ್ರಕೀರ್ತಿತಃ॥ ಏತದ್ದಿನಂ ಮಹಾ ಪುಣ್ಯಂ ಸ್ನಾನದಾನ ವ್ರತಾದಿಷು॥ ಕುಂಭಕೋಣೆ ಗಜಾರಣ್ಯೆ ಸಂಗಮೇ ಚ ಮಹಾ ಸ್ಥಳೆ॥ ಗಂಗಾ ಗೋಕರ್ಣ ಸಂಭೂತೆ ಸಪ್ತಸ್ವಗಂಡ ಸೇವಿತೇ। ತ್ರಿಕಾಲೇಷು ಸಹಸ್ನಾತ್ವಾ ಶಿವ ಸಾಯುಜ್ಯ ಮಾಪ್ನುಯಾತ್॥ ಎಂದು ಹೇಳಲಾಗಿರುತ್ತದೆ

ಈ ಮನ್ಮಥ ಸಂವತ್ಸರದಲ್ಲಿ ಸಿಂಹದಲ್ಲಿ ಗುರುವೆ, ಚಂದ್ರನು ಪೂರ್ಣಿಮಾ ದಿನದಲ್ಲಿ ಇದ್ದರೂ ಮಕರದಲ್ಲಿ ಸೂರ್ಯನಿಲ್ಲದೇ ಇರುವುದರಿಂದ ಮಹಾ ಮಾಘವಿಲ್ಲವೆಂದು ಕೆಲವರು ಹೇಳುತ್ತಾರೆ ಅದು ಸರಿಯಲ್ಲ, ಹೇಗೆಂದರೆ :—

ಮಘಾ ನಕ್ಷತ್ರದಲ್ಲಿ ಚಂದ್ರನು ಇರುವಾಗ ಸಿಂಹ ರಾಶಿಯ ಸ್ಥಿತಿಯು ಚಂದ್ರನಿಗೆ ಬಂದಿದು ಕ್ಷ-ಶ್ಲೋ॥ ಕಮೋಃಉಮಾ ಪೌರ್ಣಮಾಸ್ಯಂತೇ ಭಾರ್ಥೆ ಭಾಗಾದಧಿಷ್ಠನಃ॥ ಅಂದರೆ, ಪೂರ್ಣಿಮಾಂತಕ್ಕೆ ಸೂರ್ಯ ಚಂದ್ರರಿಗೆ ಆರು ರಾಶಿಗಳ ಅಂತರ (೧೮೦)ಡಿಗ್ರಿ ಇದ್ದೇ ಇರುತ್ತದೆ. ಎಂದು ಆರ್ಥರವು ಗಣಿತ ರೀತ್ಯಾ ಬರುವುದರಿಂದ-ಪೂರ್ಣಿಮಾಂತ ಕಾಲಕ್ಕೆ ಮಕರದಲ್ಲಿ ರವಿ ಇದ್ದರೆ ಮಘಾದಲ್ಲಿ ಚಂದ್ರನಿರುವುದೇ ಇಲ್ಲ ಮಘಾ ಚಂದ್ರನಿರಬೇಕೆಂದು ಹೇಳುವುದರಿಂದ ಸೂರ್ಯನು ಕುಂಭದಲ್ಲೇ ಇರಬೇಕಾಯಿತು-ಇದು ಹೇಗೆ ವಚನವು ಹೊಂದಿಕೆಯಾಗುತ್ತದೆ ಎಂದರೆ-ಪೂರ್ಣಿಮಾಂತಕ್ಕೆ ಮಘಾ ನಕ್ಷತ್ರದಲ್ಲಿ ಚಂದ್ರನಿರಬೇಕೆಂದಿರುವುದರಿಂದ (ಮಾಘೆ ಪರ್ವ ಮಘಾಯುಕ್ತೇ) ಸೂರ್ಯನು ಪೌರ್ಣಮಾ ಆದಿಭಾಗದಲ್ಲಿ ಮಕರದಲ್ಲಿದ್ದು ಪೂರ್ಣಿಮಾಂತ್ಯಕ್ಕೆ ಕುಂಭಕ್ಕೆ ಬಂದರೂ ಮಹಾ ಮಾಘವನ್ನು ನಡೆಯಿಸಬಹುದು-ಎಂದು ಹೇಳಿದಂತಾಯಿತು. ಆದುದರಿಂದ ಕುಂಭದಲ್ಲಿ ಸೂರ್ಯನಿದ್ದೇ ಇರಬೇಕೆಂದು ಪೂರ್ಣಿಮಾ-ತಕ್ಕೆ ತಿಳಿಸಿದಂತೆಯೂ ಆಯಿತು ಈ ಕಾರಣಗಳಿಂದ ಈ ಮನ್ಮಥ ಸಂವತ್ಸರದ ಮಾಘ ಶುಕ್ಲ ಪೂರ್ಣಿಮಾ ಮಘಾ ನಕ್ಷತ್ರದಲ್ಲಿ ಪ್ರಾತಃಕಾಲ ತಲಕಾಡಿನಲ್ಲಿ ಕಾಶೀ ವಿಶ್ವೇಶ್ವರನಿಗೆ ಪ್ರತಿಯಾದ ದಕ್ಷಿಣ ಕಾಶೀ ಗಜಾರಣ್ಯ ಕ್ಷೇತ್ರದಲ್ಲಿ ಪಂಚ ಲಿಂಗಗಳಲ್ಲಿ ಮಹಾ ಲಿಂಗ ಸ್ವರೂಪನಾಗಿರುವ-ಶ್ರೀ ವೈದ್ಯೇಶ್ವರ ಸ್ವಾಮಿಯ-ಪಶ್ಚಿಮ ಭಾಗದಿಂದ ಕೂಡಿ ಗೋಕರ್ಣ ಸರೋವರದಲ್ಲಿ ಪುಣ್ಯ ಸ್ನಾನವನ್ನು ಮೈಸೂರು ಸರ್ಕಾರದವರು, ಶ್ರೀ ಆಗಮಿಕರು, ಮಹಾಜನರು ಏರ್ಪಡಿಸಿ ಜನರಿಗೆ ಅನುಕೂಲಗಳನ್ನು ಮಾಡಿಕೊಟ್ಟರೆ ತುಂಬಾ ಕೃತಜ್ಞನಾಗಿರುತ್ತೇನೆ

ನಿರ್ಣಯ ಸಿಂಧು ಮೊದಲಾದ ಗ್ರಂಥಗಳಲ್ಲಿ-ಮಕರದಲ್ಲಿ ಸೂರ್ಯನಿರಬೇಕೆಂದು ಹೇಳಿಲ್ಲ-ಈ ನುಮಾನಕ್ಕೆ ಕಾರಣವಿಲ್ಲ ಖಂಡಿತವಾಗಿಯೂ ಮಹಾ ಮಾಘವುಂಟೆಂದೂ, ಕುಂಭ ಮಾಸವು ಇದ್ದೇ ಇರಬೇಕೆಂಬುದು ಶ್ರೇಷ್ಠವೆಂದೂ ಎಲ್ಲರಲ್ಲೂ ವಿಜ್ಞಾಪಿಸುತ್ತೇನೆ.

ಹೊಸೂರಿನ ಭವಿಷ್ಯದ ನಿರ್ಧಾರಕ್ಕಾಗಿ ಕಾಮರಾಜನಾಡರರಿಗೆ ಆಹ್ವಾನ

ಮದರಾಸ್-ಮೈಸೂರು ಗಡಿ ಪ್ರದೇಶದಲ್ಲಿರುವ, ಮದರಾಸಿಗೆ ಸೇರಿದ ಹೊಸೂರು ತಾಲ್ಲೂಕನ್ನು ಮೈಸೂರಿಗೆ ಸೇರಿಸಿಕೊಳ್ಳುವ ಬಗ್ಗೆ ಮಾತುಕತೆ ನಡೆಸಿ ಸೌಹಾರ್ದಯುತವಾದ ಒಪ್ಪಂದಕ್ಕೆ ಬರುವ ಉದ್ದೇಶದಿಂದ ಮೈಸೂರು ಸರ್ಕಾರದವರು ಮದರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡರ್‌ರವರನ್ನು ಆಹ್ವಾನಿಸಿರುವರೆಂದು ತಿಳಿದು ಬಂದಿದೆ

ಸಂಸ್ಥಾನದ ಚುನಾವಣಾಧಿಕಾರಿಗಳು

ಸಂಸ್ಥಾನ ಸರ್ಕಾರದ ಚುನಾವಣಾ ಇಲಾಖಾ ಜಂಟಿ ಕಾರ್ಯದರ್ಶಿ ಶ್ರೀ ಎಂ. ಕೆ. ವರದರಾಜನ್‌ರವರನ್ನು ಸಂಸ್ಥಾನದ ಮುಖ್ಯ ಚುನಾವಣಾಧಿಕಾರಿಗಳಾಗಿ ಕೇಂದ್ರ ಚುನಾವಣಾ ಕಮಿಷನ್‌ರವರು ನೇಮಿಸಿರುತ್ತಾರೆ.

ವಿಮಾನ ಬಲದ ಅಧಿಕಾರಿಗಳು ಹಿಂದಿ ಕಲಿಯಲು ಸೂಚನೆ

ದೇಶದ ವಿಮಾನ ದಳದಲ್ಲಿರುವ ಎಲ್ಲ ಅಧಿಕಾರಿಗಳೂ ೧೯೫೭ ರ ಡಿಸೆಂಬರ್ ೩೧ ರೊಳಗೆ ಹಿಂದಿ ಪ್ರಾಥಮಿಕ ಪರೀಕ್ಷೆಗಳಲ್ಲಿ ಪರೀಕ್ಷೆ ಮಾಡಿಕೊಂಡಿರಬೇಕೆಂದು ವಿಮಾನ ದಳದ ಕಛೇರಿಯು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಯಿತ್ತಿದೆ ವಿಮಾನ ದಳದಲ್ಲಿ ಈಗಿರುವ ಅಧಿಕಾರಿಗಳ ಪೈಕಿ ಶೇಕಡ ೯೦ ರಷ್ಟು ಮಂದಿ ಈಗಾಗಲೇ ವ್ಯವಹಾರಕ್ಕೆ ಅಗತ್ಯವಾದ ಮಟ್ಟದ ಹಿಂದಿ ಭಾಷೆಯನ್ನು ಕಲಿತಿರುವರೆಂದು ಹೇಳಲಾಗಿದೆ.

ಹೆತ್ತ ಮಕ್ಕಳು ಬದುಕದಿದ್ದುದಕ್ಕಾಗಿ ತಾಯಿಯ ಆತ್ಮಹತ್ಯೆ

ನಾಗರದ ಬಳಿ ಗೌಜಗೇರಿಯಲ್ಲಿ ವಾಸವಾಗಿರುವ ಗುರುಪಾದಪ್ಪನವರ ಪತ್ನಿ ಸರ್ವಮ್ಮ ಎಂಬಾಕೆಯು ಕಳೆದ ೧೩ ನೇ ತಾರೀಖು ರಾತ್ರಿ ತಮ್ಮ ಮನೆ ಮಹಡಿಯ ಮೇಲೆ ಹತ್ತಿ ನೇಣು ಹಾಕಿಕೊಂಡು ಮೃತಪಟ್ಟಿರುವಾಗಿ ವರದಿಯಾಗಿದೆ ಆಕೆಗೆ ಹುಟ್ಟಿದ ಮಕ್ಕಳೆಲ್ಲವೂ ಮೃತಪಟ್ಟು, ಇತ್ತೀಚೆಗೆ ಜನಿಸಿದ ಮಗುವೂ ಸಾಯಲಾಗಿ ಆಕೆಯು ಆತ್ಮಹತ್ಯೆ ಮಾಡಿಕೊಂಡಳೆಂದು ಗೊತ್ತಾಗಿದೆ

ಯುವರಾಜಾ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ಯುವರಾಜಾ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘದ ಸಾಧಾರಣ ಸಭೆಯು ಕಳೆದ ಬುಧವಾರ ನಡೆದು ಸಂಘದ ನಿಯಮ ನಿಬಂಧನೆಗಳನ್ನು ಅಂಗೀಕರಿಸಲಾಯಿತು ಅನಂತರ ಅಧಿಕಾರ ವರ್ಗಕ್ಕೆ ಚುನಾವಣೆ ನಡೆದು, ಡಾ॥ ಎಂ ವೆಂಕಟರಮಣಯ್ಯನವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ಎಸ್. ರಾಮಚಂದ್ರರಾವ್ ಮತ್ತು ದೌಲತ್‌ರಾಂರವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಡಿ. ಎಂ ಜಗನ್ನಾಥನಾರಾಯಣರಾವ್, ಬಿ. ಸುಂದರ, ಎಂ. ಕೆ. ಮಧುರಾನಾಥ್, ಬಿ. ಎಸ್. ಸಿದ್ದೇಗೌಡ ಮತ್ತು ಕಾಲೇಜಿನ ಪ್ರಿನ್ಸಿಪಾಲರು (ಎಕ್ಸ್‌ಅಫಿಷಿಯೊ) ಸದಸ್ಯರಾಗಿಯೂ ಆರಿಸಲ್ಪಟ್ಟರು. ಎಲ್ಲಾ ಹಳೆಯ ವಿದ್ಯಾರ್ಥಿಗಳೂ ವಾರ್ಷಿಕ ಚಂದಾ ೩ ರೂ. ಅನ್ನು ಶ್ರೀ ಎಂ. ಎಸ್. ರಾಮಚಂದ್ರರಾಯರಿಗೆ ತಲುಪಿಸುವಂತೆ ಕೋರಲಾಗಿದೆ

ಕಳುವಿಗಾಗಿ ೨೬ ಬಾರಿ ಶಿಕ್ಷೆಯಾದವನಿಗೆ ೪ ವರ್ಷ ಸಜಾ

ಮಂಡಿಮೊಹಲ್ಲಾ ಅಬ್ದುಲ್ ಸತ್ತಾರ್ ಎಂಬುವನು ಹಳೇ ಅಗ್ರಹಾರದಲ್ಲಿರುವ ಅನಂತರಾಮಯ್ಯನವರ ಮನೆಯಲ್ಲಿ ಬೀಗ ಮುರಿದು ಬೆಲೆಬಾಳುವ ವಸ್ತುಗಳನ್ನು ಅಪಹರಿಸಿದನೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ನೆನ್ನೆ ಅವನಿಗೆ ೪ ವರ್ಷ ಕಠಿಣ ಸಜಾ ವಿಧಿಸಲಾಯಿತು. ಇವನಿಗೆ ಹಿಂದೆ ಕಳವುಗಳಿಗಾಗಿ ೨೬ ಬಾರಿ ಶಿಕ್ಷೆಯಾಗಿತ್ತು.

ಆಯುರ್ವೇದ ವೈದ್ಯ ಸಂಸ್ಥೆಗಳ ಮುಖ್ಯಾಧಿಕಾರಿ

ಸಂಸ್ಥಾನದ ಸ್ಥಳೀಯ ಸಂಸ್ಥೆಗಳ ಶಿವಾಪನರ್‌ರವರನ್ನು ಭಾರತೀಯ ವೈದ್ಯ ಇಲಾಖಾ ಮುಖ್ಯಾಧಿಕಾರಿಯಾಗಿ ನೇಮಿಸಲಾಗಿದೆ. ಅವರು ಎಲ್ಲಾ ಆಯುರ್ವೇದ ಮತ್ತು ಯುನಾನಿ ಸಂಸ್ಥೆಗಳು ಮತ್ತು ಮೈಸೂರಿನ ಆಯುರ್ವೇದ ಕಾಲೇಜು, ಬೆಂಗಳೂರಿನ ಜಯಚಾಮರಾಜೇಂದ್ರ ಆಯುರ್ವೇದ ಶಾಲೆಗಳ ಮೇಲೆ ಹತೋಟಿ ಹೊಂದಿರುವರು.

ಕಾಶ್ಮೀರದಲ್ಲಿ ವಿದ್ಯುಚ್ಛಕ್ತಿ ರೋಪ್ ವೇ

ಕಾಶ್ಮೀರದ ಬೆಟ್ಟಗಳ ನಡುವೆ ಇರುವ ಟಾಂಗಿರ್, ಗುಲ್ಮಾರ್ಗ್ ಮತ್ತು ಖಿಲನ್ಮರ್ಗ್ ಎಂಬ ವಿಹಾರ ಕೇಂದ್ರಗಳಿಗೆ ಮಾರ್ಗಾನುಕೂಲವನ್ನು ಏರ್ಪಡಿಸುವ ಸಂಬಂಧವಾಗಿ ಅಲ್ಲಿನ ಸರ್ಕಾರದವರು ೩೦ ಲಕ್ಷ ರೂ ವೆಚ್ಚದಿಂದ ಬೆಟ್ಟಗಳಿಗೂ ಭೂಮಿಗೂ ನಡುವೆ ವಿದ್ಯುಚ್ಛಕ್ತಿ ರೋಪ್‌ವೇ (ಹಗ್ಗದ ಮಾರ್ಗ) ವನ್ನು ಏರ್ಪಡಿಸುವ ಯೋಜನೆಯನ್ನು ಮಂಜೂರು ಮಾಡಿರುತ್ತಾರೆ. ಇಂತಹ ಯೋಜನೆಯು ಭಾರತದಲ್ಲೇ ಮೊದಲನೆಯದೆಂದು ಹೇಳಲಾಗಿದೆ. ಜಪಾನಿನಲ್ಲಿ ಇಂತಹ ರೋಪ್ ವೇಗಳಿವೆ.

ಕೆಂಪು ಚೀಣಕ್ಕೆ ಕೆನಡಾದಿಂದ ಮನ್ನಣೆಯೇ ?

ಕೆನಡಾ ಸರ್ಕಾರದವರು ಕೆಂಪು ಚೀಣಕ್ಕೆ ಮನ್ನಣೆಯಿತ್ತು ಆ ರಾಷ್ಟ್ರದೊಡನೆ ರಾಜತಾಂತ್ರಿಕ ಸಂಬಂಧವನ್ನು ಬೆಳೆಸುವ ಬಗ್ಗೆ ಪರ್ಯಾಲೋಚಿಸುತ್ತಿರುವರೆಂದು ಕೆನಡಾದ ವಿದೇಶಾಂಗ ವ್ಯವಹಾರ ಖಾತಾ ಸಚಿವ ಲೆಸ್ಟರ್ ಪಿಯರ್ಸನ್ನರು ತಿಳಿಸಿರುವರು

ಮುಸ್ಲಿಮನಿಂದ ಯೋಗ ವ್ಯಾಯಾಮ

ವೆಲ್ಲೂರಿನ ಬಳಿ ಗುಡಿಯಾಟ್ಟಮ್ಮಿನಲ್ಲಿ ಹೈದರಾಲಿ ಎಂಬ ಹೈದರಾಬಾದಿನ ೪೦ ವರ್ಷ ವಯಸ್ಸಿನ ಮುಸ್ಲಿಮನೊಬ್ಬನು ಗುಂಡಿಯೊಂದರಲ್ಲಿ ೬ ೮ ತಾ ಮುಚ್ಚಿ ಯೋಗ ಸಾಧನೆ ಪ್ರದರ್ಶನ ಮಾಡಿರುತ್ತಾನೆ. ಬೆಳಗ್ಗೆ ೧೧ ಗಂಟೆಗೆ ಅವನು ಗುಂಡಿಯೊಳಗೆ ಕುಳಿತು ಸಂಜೆ ೪ ಗಂಟೆಗೆ ಮೇಲಕ್ಕೆ ಬಂದನು. ಊರಿನ ಪ್ರಮುಖರು ಈ ದೃಶ್ಯವನ್ನು ನೋಡಿದರು.

ಸಂಗೀತ ಸ್ಪರ್ಧೆಗಳು

ಮಹಾರಾಜಾ ಕಾಲೇಜಿನ ವಿಶ್ವವಿದ್ಯಾಲಯ ಇತಿಹಾಸ ಸಂಘದವರು ನಾಳೆ ಸಂಜೆ ೫ ಗಂಟೆಗೆ ಕಾಲೇಜಿನಲ್ಲಿ ಅಖಿಲ ಕರ್ನಾಟಕ ಅಂತರ ಕಾಲೇಜು ಸಂಗೀತ ಸ್ಪರ್ಧೆಗಳನ್ನು ಏರ್ಪಡಿಸಿರುತ್ತಾರೆ ಕೇಂದ್ರ ಆಹಾರ ಸಂಶೋಧನಾಲಯದ ಡೈರೆಕ್ಟರ್ ಡಾ॥ ವಿ ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿ, ಸಂಘದ ಸಮಾರೋಪ ಭಾಷಣ ಮಾಡುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಕನ್ನಡ ಗೀತೆಗಳು ೭ ೩೦ ರಿಕಾರ್ಡುಗಳು ೮ ೧೫ ಹಿಂದಿ ಹಾಡು. ಮಧ್ಯಾಹ್ನ ೧೨ ವಾದ್ಯವೃಂದ ೧೨ ೩೦ ಸಂಗೀತ. ೧ ಹನುಮಂತಾಚಾರ್-ಮಹಿಳೆಯರ ಕಾರ್ಯಕ್ರಮ. ೧ ೩೦ ಮತ್ತು ೧-೩೦ ಮಧ್ಯ ವೀಣೆ ೨ ಕರ್ನಾಟಕ ಸಂಗೀತ ಸಂಜೆ ೫-೩೦ ಮತ್ತು ೧೦ ಎಂ ಆರ್ ಶ್ರೀನಿವಾಸಾಚಾರ್ ಸಂಗೀತ ೬ ೧೫ ಭಾವ ಗೀತೆ. ಸಂಜೆ ೭-೩೦ ಸಂಚಾರ ಸೌಲಭ್ಯಗಳ ಬಗ್ಗೆ ಭಾಷಣ. ೮ ಮದ್ರಾಸ ನಿಲಯ-ಎನ್. ಬಾಲಚಂದರ್ ವೀಣೆ ೯.೪೫ ೯.೧೫ ರಿಕಾರ್ಡ್. ೯ ೩೦ ವ್ಯವಸಾಯ ರಂಗ

ರಾಜಕಮಲ್ ಟಾಕೀಸ್

೨೦-೧-೫೬ರಿಂದ : ಪ್ರತಿ ದಿನ 3 ಆಟಗಳು

ಜೋಡಿಜಯವರ ತಮಿಳು ಚಿತ್ರ **ಮಂಜಮ**

ಭೂಮಿಕೆ :- ಕಾಂತರಾವ್, ಸಾವಿತ್ರಿ, ಗಿರಿಜ, ಸುದರ್ಶನ್, ಸಾರಂಗಪಾಣಿ

ಕಡೇ ದಿನ : **ದ ಬಾರ್**

ಹಿಮ ಮಾನವನ ಕೊಲೆ

ಭಾರತ-ಟಿಬೆಟ್ ಗಡಿ ಭಾಗದಲ್ಲಿ ಒಂದು ವೇಶದ ಮೇಲೆ ೧೫ ದಿನಗಳ ಹಿಂದೆ ಗುಕ್ಕ... ನ ಜನರು ಹಿಮಮಾನವನೆಂದು ಶಂಕಿತ... ಪ್ರಾಣಿಯನ್ನು ಕೊಂದರೆಂದು ಗೊತ್ತಾಗಿ... ದು ೧೦ ಅಡಿ ಎತ್ತರವಿದ್ದಿತೆಂದೂ, ಮೈಮೇಲೆ ಸ್ವಲ್ಪವೂ ಕೂದಲು ಇರದೆ, ಕಾಲಿನಂತೆ ... ಇದ್ದುದಾಗಿಯೂ ವರದಿಯಾಗಿದೆ.

ಮಂತ್ರದಿಂದ ಕಾಮಾಲೆ ವ್ಯಾಧಿಯ ನಿವಾರಣೆ

ದೆಹಲಿಯಲ್ಲಿ ಹರಡಿರುವ ಕಾಮಾಲೆ ರೋಗವನ್ನು ಅಲ್ಲಿರುವ ತಿರುವಾಂಕೂರಿನ ಮಹಿಳೆ ವೆಂಕಟಲಕ್ಷ್ಮಿ ಅಮ್ಮಾಳ್ ಎಂಬಾಕೆಯು ಮಂತ್ರೋಚ್ಚಾರಣೆಯಿಂದ ವಾಸಿಮಾಡುತ್ತಿರುವ... ಗಿಯೂ, ಈ ಕ್ರಮದಿಂದ ಈಗಾಗಲೇ ... ಸರ್ಕಾರಿ ಅಧಿಕಾರಿಗಳೂ ಸೇರಿ, ೧೨೦ ಜನ ಗುಣ ಹೊಂದಿರುವರೆಂದೂ ವರದಿಯಾಗಿದೆ ... ಶ್ವೇಶ್ವರನಿಗೆ ಪೂಜೆ ಸಲ್ಲಿಸುತ್ತಾ, ಆಕೆಯು ... ಮಂತ್ರೋಚ್ಚಾರಣೆ ಮಾಡಿದರೆ ೩ ದಿನಗಳಲ್ಲಿ ... ಲೆ ವಾಸಿಯಾಗುವುದು ಅದಕ್ಕಾಗಿ ಆಕೆ... ೧ ತೆಂಗಿನಕಾಯಿ, ಎರಡು ಸೂಜಿ ಮತ್ತು ... ಡು ಪಾತ್ರೆಗಳು-ತಾಮ್ರ ಅಥವಾ ಹಿತ್ತಾಳೆ ... ವನ್ನು ಪೂಜೆಗಾಗಿ ತೆಗೆದುಕೊಳ್ಳುವಳು.

ತಾಯಿಯ ಕೊಲೆ ಮಾಡಿದ ಬಾಲಕನಿಗೆ ಜೀವಾವಧಿ ಶಿಕ್ಷೆ

ಟಾಯೋರಿನಲ್ಲಿ ಯಸಾಷೀಸ್ ಎಂಬ ... ಹದ ವಿದ್ಯಾರ್ಥಿಯೊಬ್ಬನು ತನ್ನ ತಾಯಿಯನ್ನು ಕೊಲೆ ಮಾಡಿದ ಅಪರಾಧಕ್ಕಾಗಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುತ್ತಾನೆ. ಅವನ ತಾಯಿಯು ನಗಗಳು ಮತ್ತು ಬಟ್ಟೆಗಳನ್ನು ಕಳವು ಮಾಡಿದ ಬಗ್ಗೆ ಯಾಸೀದನ ಸಹಪಾಠಿಗಳು "ಕಳ್ಳಿಯ ಮಗನೆಂದು" ಅವನನ್ನು ಹೀಯಾಳಿಸುದುದರಿಂದ ಅವನು ಕೋಪಗೊಂಡು ಮನೆಗೆ ಹೋಗಿ ತಾಯಿಯ ಕೊಲೆ ಮಾಡಿದನೆಂದು ಹೇಳಲಾಗಿದೆ.

ಶಾಲೆಗಳಿಗೆ ರಜಾ ದಿನಗಳು

ಸಂಸ್ಥಾನ ಸರ್ಕಾರದವರು ಈ ಕೆಳಗೆ ಕಂಡಂತೆ ಶಾಲೆಗಳಿಗೆ ರಜಾ ದಿನಗಳನ್ನು ಗೊತ್ತುಮಾಡಿರುತ್ತಾರೆ.—

ಪ್ರಾಥಮಿಕ ಶಾಲೆಗಳು ವಾರ್ಷಿಕ ರಜ ಡಿಸೆಂಬರ್ ೨೪ ರಿಂದ ಜನವರಿ ೭ ; ಏಪ್ರಿಲ್ ೧೪ ರಿಂದ ಮೇ ೧೪, ಮತ್ತು ದಸರಾ-ಕಾಲದ ಅಮಾವಾಸ್ಯೆಯಿಂದ ೧೪ ದಿನ. ಮಾಧ್ಯಮಿಕ ಶಾಲೆಗಳಿಗೆ ಕ್ರಮವಾಗಿ ಡಿಸೆಂಬರ್ ೧೪ ರಿಂದ ಜನವರಿ ೭, ಏಪ್ರಿಲ್ ೧೫ ರಿಂದ ಮೇ ೩೧ ... ತ್ತು ದಸರಾ ರಜಾ ಮೇಲ್ಕಂಡಂತೆ. ಮಲೆನಾಡಿನವಲ್ಲಿ ಆಯಾ ಪ್ರದೇಶಗಳಿಗೆ ತಕ್ಕಂತೆ ... ಗಳ ರಜಾ ಕೊಡಲು ಅಧಿಕಾರವೀಯಲಾಗಿದೆ.

SRI KANTAKAPARAMESWARI CO-OPERATIVE SOCIETY, Ltd.,

Near Prabha Picture House

MYSORE

Sealed Tenders for the Construction of a Building for the Society at an estimated cost of Rs. 40,000 will be received by the undersigned up to 7 P.M. of 4th February 1956. Each tender should be accompanied by an earnest money deposit of Rs. 1,000 in cash or by Bank Draft. Further details regarding Estimate, Plan etc., can be seen in the Office of the Society on all working days between 9-30 to 12 noon & 4-30 and 7-30 P.M. and the Tender form containing specification quantities etc. can be had from the Secretary on payment of Re.1-0-0 per set.

B. RAMASWAMY,

Secretary

ಒಲಂಪಿಯಾ

19.1.56 ರಿಂದ : ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು 3 15, 6 30 ಮತ್ತು 9.45ಕ್ಕೆ

ರಾಷ್ಟ್ರಾಧ್ಯಕ್ಷರ ಬಹುಮಾನ ಪಡೆದ,

ಶರತ್‌ಚಂದ್ರ ಚಟರ್ಜಿಯವರ ಅಮರ ಕಲಾಕೃತಿ **ದೇವದಾಸ್**

ಈ ಚಿತ್ರದ ಪ್ರಮುಖ ಪಾತ್ರಗಳನ್ನು ವಹಿಸುವುದಕ್ಕಾಗಿಯೇ ಹುಟ್ಟಿರುವ ಪ್ರಖ್ಯಾತ

ತಾರಾಗಣ : ದಿಲೀಪ್ ಕುಮಾರ್, ವೈಜಯಂತಿಮಾಲಾ, ಸುಚಿತ್ರಾಸೇನ, ಮೋತಿಲಾಲ್

ನಿರ್ದೇಶನ :- ಬಿಮಲ್ ರಾಯ್ : ಸಂಗೀತ :- ಎಸ್. ಡಿ. ಬರ್ಮನ್

19-1-56ರಿಂದ ಪ್ರತಿ ದಿನ ಬೆಳಗ್ಗೆ 10 ರಿಂದ 12 ಘಂಟೆ ವರೆಗೆ ಮೊದಲನೆ 3 ತರಗತಿಗಳ ಟಿಕೆಟ್ಟುಗಳನ್ನು ಮುಂಗಡವಾಗಿ ಕೊಡಲಾಗುತ್ತೆ. ಪಾಸ್ಪೋರ್ಟ್‌ ಮತ್ತು ಫ್ರೀ ಪಾಸುಗಳನ್ನು ಮೊದಲನೇ 4 ವಾರಗಳಲ್ಲಿ ರದ್ದು ಮಾಡಲಾಗಿದೆ

Edited, Printed and Published by A. R. Nagarajan at Sadhvi Press, D. Subbiah Road, Mysore

ರಿಜಿಸ್ಟರ್ ನಂ. 793

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿಯ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕಳುಹಿ, ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಚಂದಾ ದರ

ಮೈಸೂರಿನ ಹೊರಗೆ ತಿಂಗಳಿಗೆ ರೂ.

ಊರಿನ ಒಳಗೆ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಪುಟ : ೦೪] SADHVI : FRIDAY 20-1-1956 ಮೈಸೂರು ಶುಕ್ರವಾರ : ೨೦-೧-೧೯೫೬ [ಸಂಚಿಕೆ : ೧೫೦

ಬೊಂಬಾಯಿನಲ್ಲಿ ಶಾಂತ ಪರಿಸ್ಥಿತಿ: ಮುಷ್ಕರ ಸಮಾಪ್ತಿ

ಬೊಂಬಾಯಿಯಲ್ಲಿ ನಿನ್ನೆ ೧೧ ಜನರು ಗುಂಡಿಗೆ ಬಲಿ

ನಗರದಲ್ಲಿ ಶಾಂತ ಪರಿಸ್ಥಿತಿ

ರಾಷ್ಟ್ರ ನಾಯಕರ ಪ್ರತಿಮೆಗಳ ದಹನ

ನಾಲ್ಕು ದಿನಗಳಿಂದ ಮಧ್ಯ ಮತ್ತು ಉತ್ತರ ಬೊಂಬಾಯಿಗಳಲ್ಲಿ ಕೇಂದ್ರೀಕೃತವಾಗಿದ್ದ ಗಲಭೆ ಪರಿಸ್ಥಿತಿಯು ನಿನ್ನೆ ಇತರ ಪ್ರದೇಶಗಳಿಗೂ ಸ್ವಲ್ಪ ಮಟ್ಟಿಗೆ ವಿಸ್ತರಿಸಿತು. ಎಲ್ಲಾ ಪ್ರದೇಶಗಳಲ್ಲೂ ಪೊಲೀಸ್ ಉಸ್ತುವಾರಿಯನ್ನು ಹೆಚ್ಚಿಸಲಾಗಿತ್ತು. ನಗರದ ೧೨ ಸಾವಿರ ಪೊಲೀಸರೂ ಕಾರ್ಯನಿರತರಾಗಿದ್ದರು. ಜನರು ಶಾಂತರಾಗಿರಬೇಕೆಂದು ನಾಯಕರುಗಳು ಮನವಿ ಮಾಡಿಕೊಳ್ಳುತ್ತಿರುವರು. ಆದರೂ ಪರಿಸ್ಥಿತಿಯು ಉಲ್ಬಣಿಸಿ ಪೊಲೀಸರು ನಿನ್ನೆಯೂ ಒಟ್ಟು ೬೩ ಬಾರಿ ಗುಂಡು ಹಾರಿಸಲಾಗಿ ೧೧ ಮಂದಿ ಮೃತಪಟ್ಟರು. ಇದುವರೆಗೆ ೬೭ ಮಂದಿ ಗುಂಡೇಟಿನಿಂದ ಸತ್ತರು. ಎಲ್ಲ ಕಾರಣಗಳಿಂದಲೂ ಸುಮಾರು ೩೦೦ ಜನರು ಗಾಯಗೊಂಡಿರುವರು.

ಗಲಭೆಕಾರರು ನಾಡ ಬಾಂಬನ್ನು ಎಸೆದ ಕಾರಣವಾಗಿ ನಿನ್ನೆ ಪೊಲೀಸ್ ಸೂಪರಿಂಟೆಂಡೆಂಟ್‌ರಿಗೆ ಗಾಯವಾಯಿತು. ವ್ಯಾಪಾರದ ಅಂಗಡಿಗಳನ್ನು, ಬಸ್ಸು, ಒಂಟಿ, ಸರ್ಕಾರಿ ಕಟ್ಟಡಗಳಿಗೆ ಬೆಂಕಿ ಹಚ್ಚುವ ಕ್ರಿಯೆ ನಿನ್ನೆ ನೂರು ಕಡೆ ಇದರ ಪ್ರಕರಣ ನಡೆದುವೆಂದು ಗೊತ್ತಾಗಿದೆ.

ಜನರು ಶಾಂತವಾಗಿರಬೇಕೆಂದೂ ಮತ್ತು ಕೇಂದ್ರ ಸರ್ಕಾರದ ನಿರ್ಧಾರವನ್ನು ಅಂಗೀಕರಿಸಬೇಕೆಂದೂ, ಚಳುವಳಿಗಳನ್ನು ನಿಲ್ಲಿಸಬೇಕೆಂದೂ ನಾಯಕರು ಮಾಡಿದ ಮನವಿಗಳು ಗುಂಪಿನವರ ಮೇಲೆ ಯಾವ ವಿಧವಾದ ಪರಿಣಾಮವನ್ನೂ ಉಂಟುಮಾಡಲಿಲ್ಲವೆಂದು ಹೇಳಲಾಗಿದೆ. ಗಲಭೆಕೋರರು ಮುಖ್ಯವಾಗಿ ಪೊಲೀಸರ ಬಗ್ಗೆ ಬಹಳ ರೇಗಿಕೊಂಡು ಅವರಮೇಲೆ ಸೇಡು ತೀರಿಸಿಕೊಳ್ಳುತ್ತಿದ್ದರೆಂದೂ, ಎರಡು ಠಾಣೆಗಳಿಗೆ ಬೆಂಕಿ ಹಚ್ಚಿದ ಬೆಂಕಿ ಬಟ್ಟೆಗಳನ್ನು ಎಸೆಯಲಾಯಿತೆಂದೂ ಗೊತ್ತಾಗಿದೆ.

ಸ್ಥಳಗಳಲ್ಲಿ ರಾಷ್ಟ್ರನಾಯಕರುಗಳ ಭಾವಚಿತ್ರಗಳಿಗೆ ಚಪ್ಪಲಿಗಳ ಹಾರಗಳನ್ನು ಧರಿಸಿ ನೇತು ಹಾಕಲಾಗಿತ್ತು. ನೆಹರೂ ಮತ್ತು ಮೊರಾರ್ಜಿ ದೇಸಾಯಿಯವರ ವಿರುದ್ಧ ಘೋಷಣೆಗಳನ್ನು ಬರೆದ ಫಲಕಗಳನ್ನು ಪ್ರದರ್ಶಿಸಲಾಗಿತ್ತು. ದಾದರ್ ಮತ್ತು ಪರೇಲ್ ಪ್ರದೇಶಗಳಲ್ಲಿ ನಾಯಕರ ಪ್ರತಿಮೆಗಳಿಗೆ ಬೆಂಕಿ ಹಚ್ಚಿ ಸುಡಲಾಯಿತು. ನೂರು ಪರಿಸ್ಥಿತಿಗಾಗಿ ಪೊಲೀಸರ ನೆರವಿಗೆ ಮಿಲಿಟರಿ ಪಡೆಯವರು ಸಜ್ಜಾಗಿ ಸಿದ್ಧವಾಗಿದ್ದರು. ನಿನ್ನೆ ಮುಂಜಾನೆ ೨ ಗಂಟೆ ಹೊತ್ತಿಗೆ ಪರಿಸ್ಥಿತಿ ಹತೋಟಿಗೆ ಬಂದಿದೆಯೆಂದು ವರದಿಯಾಗಿದೆ.

ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿಯು ಎಲ್ಲ ಕಾಂಗ್ರೆಸ್ ಮಂತ್ರಿಗಳು, ಶಾಸನ ಸಭಾ ಮತ್ತು ಪಾರ್ಲಿಮೆಂಟ್ ಸದಸ್ಯರಿಗೂ ರಾಜೀನಾಮೆ ಕೊಡಬೇಕೆಂದು ಸೂಚಿಸಿದುದರಿಂದಲೂ, ವಾಮ ಪಕ್ಷದ ನಾಯಕರು ಹಿಂಸೆ ಮತ್ತು ಬೆಂಕಿ ಪ್ರಕರಣಗಳನ್ನು ಕಂಡು ಸಾರ್ವತ್ರಿಕ ಮುಷ್ಕರವನ್ನು ಹಿಂದಕ್ಕೆ ತೆಗೆದುಕೊಂಡುದರಿಂದಲೂ ಪರಿಸ್ಥಿತಿ ಈಗ ಶಾಂತವಾಗಿದೆ.

ಒರಿಸ್ಸಾ ವಿದ್ಯಾರ್ಥಿಗಳಿಂದ ರೈಲು ಪ್ರಯಾಣಕ್ಕೆ ತಡೆ

ಗಡಿ ನಿರ್ಧಾರದ ಬಗ್ಗೆ ಪ್ರತಿಭಟನಾ ಹರತಾಳ

ಕೇಂದ್ರ ಸರ್ಕಾರದವರು ಗಡಿಗಳ ಸಂಬಂಧವಾಗಿ ಕೈಗೊಂಡ ನಿರ್ಧಾರವನ್ನು ಪ್ರತಿಭಟಿಸಿ ಕಟಕ್ಕಿನ ವಿದ್ಯಾರ್ಥಿಗಳು ನಿನ್ನೆ ಮುಷ್ಕರ ಹೂಡಿ ಕೆಲ ಪ್ರದೇಶದ ರೈಲು ರಸ್ತೆಗಳ ಮೇಲೆ ಕುಳಿತುದರಿಂದ ಅದು ರೈಲುಗಳ ಸಂಚಾರದ ಸಂಪರ್ಕವನ್ನೇ ಕಡಿದಿದೆಯೆಂದು ವರದಿಯಾಗಿದೆ. ರಾಜಧಾನಿ ಭುವನೇಶ್ವರದಲ್ಲೂ ವಿದ್ಯಾರ್ಥಿ ಪ್ರದರ್ಶನಕಾರರು ಸರ್ಕಾರಿ ಕಛೇರಿಗೆ ತೆರಳಿ ಕಾಗದಪತ್ರಗಳ ದಫ್ತರಗಳನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರೆಂದೂ, ಧರ್ಮಶಾಲೆಯನ್ನು ನಿವಾರಿಸುವ ಉದ್ದೇಶದಿಂದ ಪೊಲೀಸ್ ಅಧಿಕಾರಿಗಳು ವಿದ್ಯಾರ್ಥಿಗಳ ಕೋರಿಕೆ ಮೇರೆ ಅವರ ಬಸ್ಸುಗಳನ್ನಿಟ್ಟು, ಕೆಲಸ ನಿಲ್ಲಿಸಿದರೆಂದೂ ಗೊತ್ತಾಗಿದೆ

ಪೂನಾ ಪೌರಸಭಾ ಸದಸ್ಯರಲ್ಲಿರ ರಾಜೀನಾಮೆ

ಬೊಂಬಾಯಿ ನಗರವನ್ನು ಮಹಾರಾಷ್ಟ್ರದಿಂದ ಪ್ರತ್ಯೇಕಿಸಿರುವುದನ್ನು ಪ್ರತಿಭಟಿಸಿ ಪೂನಾ ನಗರದ ಪೌರಸಭೆಯ ಅಧ್ಯಕ್ಷರೂ ಸೇರಿ ೨೦ ಕ್ಕೂ ಮೇಲ್ಪಟ್ಟು ಮಂದಿ ಸದಸ್ಯರು ನಿನ್ನೆ ರಾಜೀನಾಮೆ ಸಲ್ಲಿಸಿದರೆಂದೂ, ಇನ್ನೂ ೧೦ ಮಂದಿಯೂ ಸಧ್ಯದಲ್ಲೇ ರಾಜೀನಾಮೆ ಕೊಡುವರೆಂದೂ ಗೊತ್ತಾಗಿದೆ

ನಗರದಲ್ಲಿ ಸ್ವಾಮಿ ಧ್ರುವಾನಂದಜಿ ಸರಸ್ವತೀಯವರ ಕಾರ್ಯಕ್ರಮ

ಆರ್ಯ ಸಮಾಜದ ಸನ್ಯಾಸಿಗಳಾದ ಪೂಜ್ಯ ಶ್ರೀ ಸ್ವಾಮಿ ಧ್ರುವಾನಂದ ಸರಸ್ವತಿಯವರು ವೈದಿಕ ಧರ್ಮ ಪ್ರಚಾರಕ್ಕಾಗಿ ಈ ದಿನ ನಗರಕ್ಕೆ ಆಗಮಿಸಿ ನಾಳೆ ಮತ್ತು ನಾಳಿದ್ದು ಇಲ್ಲಿ ತಂಗುವರು. ಈ ಸಂಜೆ ೬॥ ಗಂಟೆಗೆ ಹಿಂದಿ ಪ್ರಚಾರ ಸಭೆಯ ಕಟ್ಟಡದಲ್ಲಿ ಅವರು ಪ್ರವಚನ ಮಾಡುವರು. ನಾಳೆ ಬೆಳಿಗ್ಗೆ ೮॥ ಗಂಟೆಗೆ ನಾ॥ ವಿ॥ ವಿ ದೇವೇಂದ್ರಪ್ಪನವರ ಮಾರುತಿ ಮಂದಿರದಲ್ಲಿ ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಗಾಯತ್ರಿ ಮಹಾಯಜ್ಞ ಮತ್ತು ಮಂತ್ರದ ವ್ಯಾಖ್ಯಾನವು ನಡೆಯುವುವು. ಅದೇ ಸ್ಥಳದಲ್ಲಿ ಸಂಜೆ ೪ ಗಂಟೆಗೆ ಸ್ವಾಮಿಜಿಯವರ ಪ್ರವಚನವಿದೆ. ನಾಳಿದ್ದು ಬೆಳಿಗ್ಗೆ ೫॥ಗೆ ದೇವರಾಜ ಮೊಹಲ್ಲಾ ಆರ್ಯ ಸಮಾಜ ಮಂದಿರದಲ್ಲಿ ಯಜ್ಞ, ಸತ್ಸಂಗ ಮತ್ತು ಉಪದೇಶ ಕಾರ್ಯಕ್ರಮಗಳೂ, ಸಂಜೆ ೬॥ಗೆ ಸಂಸ್ಕೃತ ಸಮ್ಮೇಳನ ಮತ್ತು ಸ್ವಾಮಿಜಿಯವರಿಗೆ ಮಾನಪತ್ರದ ಅರ್ಪಣೆಯೂ ನಡೆಯುವುವು. ಕೇಂದ್ರ ಆಹಾರ ಸಂಶೋಧನಾಲಯದ ಡಾ॥ ಗಿರಿಧರಲಾಲಜಿಯವರು ಅಧ್ಯಕ್ಷತೆ ವಹಿಸುವರು.

ಭಾನುವಾರ ಬೆಳಿಗ್ಗೆ ನೀರು ಸರಬರಾಜಿಲ್ಲ

ಇದೇ ಮಾಹೆ ೨೨ನೇ ತಾರೀಖು ಭಾನುವಾರ ನಗರದಲ್ಲಿ ವಿದ್ಯುಚ್ಛಕ್ತಿ ಸರಬರಾಜು ನಿಲ್ಲುವುದರಿಂದ ಆ ದಿನ ಬೆಳಿಗ್ಗೆ ೧೧ ಘಂಟೆಯಿಂದ ಮಧ್ಯಾಹ್ನ ೩ ಗಂಟೆವರೆಗೆ ನಗರದಲ್ಲಿ ನೀರು ಸರಬರಾಜು ಇರುವುದಿಲ್ಲವೆಂದು ಪೌರಸಭಾ ಕಮೀಷನರ್ ಶ್ರೀ ಎ. ವಿಶ್ವನಾಥ್‌ರವರು ತಿಳಿಸಿರುತ್ತಾರೆ.

ಎಂ. ಕೃಷ್ಣಪ್ಪನವರು ಬೆಂಗಳೂರಿನ ನೂತನ ಮೇಯರ್

ಶ್ರೀಮತಿ ಗ್ರೇಸ್ ಟಕ್ಕರ್ ಉಪ ಮೇಯರಾಗಿ ಆಯ್ಕೆ

ಬೆಂಗಳೂರು ೨೦

ಇಲ್ಲಿನ ಪೌರಸಭೆಯ ಮೇಯರ್ ಮತ್ತು ಉಪ ಮೇಯರರ ಚುನಾವಣೆಯು ನಿನ್ನೆ ನಡೆಯಿತು. ಕಾಂಗ್ರೆಸ್ ಸ್ಪರ್ಧಿಗಳಾದ ಶ್ರೀ ಎಂ. ಕೃಷ್ಣಪ್ಪನವರು ಮತ್ತು ಶ್ರೀಮತಿ ಗ್ರೇಸ್ ಟಕ್ಕರ್‌ರವರು ಆ ಸ್ಥಾನಗಳಿಗೆ ಕ್ರಮವಾಗಿ ಆರಿಸಿ ಬಂದರು. ಮೇಯರ್ ಸ್ಥಾನಕ್ಕೆ ಸ್ಪರ್ಧೆ ನಡೆದು ಶ್ರೀ ನಾಗೇಶರಾಯರು ೩೫-೨೫ ಓಟುಗಳಿಂದ ಪರಾಜಿತರಾದರು

ಮಹಾರಾಷ್ಟ್ರದ ಸಚಿವರು ಮತ್ತು ಶಾಸನ ಸಭಾ ಸದಸ್ಯರ ರಾಜೀನಾಮೆ

ಪ್ರದೇಶ ಕಾಂಗ್ರೆಸ್ಸಿನ ನಿರ್ಧಾರ ಮತ್ತು ಕರೆ

ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿ ಸಭೆಯು ನಿನ್ನೆ ರಾತ್ರಿ ಸೇರಿ ಕೇಂದ್ರ ಮತ್ತು ಬೊಂಬಾಯಿ ಮಂತ್ರಿ ಮಂಡಲಗಳ ಮಹಾರಾಷ್ಟ್ರ ಸಚಿವರುಗಳೂ, ಪಾರ್ಲಿಮೆಂಟು ಮತ್ತು ರಾಜ್ಯದ ಸಭೆಗಳ ಎಲ್ಲ ಕಾಂಗ್ರೆಸ್ ಸದಸ್ಯರುಗಳೂ ಕೂಡಲೇ ತಮ್ಮ ಸ್ಥಾನಗಳಿಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಮೂಲಕ ರಾಜೀನಾಮೆಗಳನ್ನು ಸಲ್ಲಿಸಬೇಕೆಂದು ಸೂಚಿಸುವ ನಿರ್ಣಯ ಮಾಡಿತು. ಬೊಂಬಾಯಿ ಪ್ರಾಂತದ ಉಭಯ ಶಾಸನ ಸಭೆಗಳಲ್ಲೂ ಒಟ್ಟು ೧೫೬ ಮಂದಿಯೂ, ಲೋಕ ಸಭೆಯಲ್ಲಿ ೧೭ ಮಂದಿಯೂ ಮತ್ತು ರಾಜ್ಯ ಸಭೆಯಲ್ಲಿ ಐದು ಮಂದಿಯೂ, ಮಹಾರಾಷ್ಟ್ರದ ಕಾಂಗ್ರೆಸ್ ಸದಸ್ಯರುಗಳು. ಕೇಂದ್ರ ಸಚಿವ ಸಂಪುಟದಲ್ಲಿರುವ ಶ್ರೀಗಳಾದ ಸಿ. ಡಿ. ದೇಶಮುಖ್, ಎಚ್. ವಿ. ಪಾಟಸ್ಕರ್ ಮತ್ತು ಜೆ. ಕೆ. ಭೋಸ್ಲೆಯವರು ಮಹಾರಾಷ್ಟ್ರದವರು. ಬೊಂಬಾಯಿ ಸರ್ಕಾರದಲ್ಲಿ ಮಹಾರಾಷ್ಟ್ರದ ೯ ಮಂದಿ ಸಚಿವರುಗಳು. ಶ್ರೀಯುತ ಸಭಾಪತಿ ರಾವ್ ಫೋರ್ಕ್ಷಿ ಯವರು ಮುಖ್ಯ ಮಂತ್ರಿ ಹಾಗೂ ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಿರುವರು

ಬೆಳಗಾಮಿನಲ್ಲಿ ಶಾಂತ ಪರಿಸ್ಥಿತಿ

ಬೆಳಗಾಮನ್ನು ಮೈಸೂರಿನೊಡನೆ ಐಕ್ಯಗೊಳಿಸುವುದರ ವಿರುದ್ಧವಾಗಿ ಅಲ್ಲಿ ನಡೆದ ಪ್ರದರ್ಶನ ಮತ್ತು ಗಲಭೆಗಳು ಈಗ ಹತೋಟಿಗೆ ಬಂದಿರುವುವೆಂದು ಗೊತ್ತಾಗಿದೆ. ಸ್ಥಳದಲ್ಲಿ ಶಾಂತಿ ನೆಲೆಗೊಳ್ಳುವಂತೆ ಮಾಡುವ ಉದ್ದೇಶದಿಂದ ಭೂದಾನ ಕಾರ್ಯಕರ್ತರಾದ ಶ್ರೀ ರಾಮಕೃಷ್ಣಪ್ಪ ಎಂಬುವರು ನಿನ್ನೆಯಿಂದ ಐದು ದಿನಗಳ ಉಪವಾಸ ಸತ್ಯಾಗ್ರಹವನ್ನಾರಂಭಿಸಿರುವರು.

ವಿಮಾ ಸಂಸ್ಥೆಗಳ ರಾಷ್ಟ್ರೀಕರಣ

ದೇಶದಲ್ಲಿರುವ ವಿಮಾ ಸಂಸ್ಥೆಗಳನ್ನು ರಾಷ್ಟ್ರೀಕರಿಸಲು ಕೇಂದ್ರ ಸರ್ಕಾರದವರು ನಿರ್ಧರಿಸಿ, ಈ ಬಗ್ಗೆ ರಾಷ್ಟ್ರಪತಿಯವರು ಆಜ್ಞೆಯನ್ನು ಹೊರಡಿಸಿರುವರು. ಈಗ ಕಂಪೆನಿಗಳ ಆಡಳಿತವನ್ನು ಸರ್ಕಾರದವರೇ ವಹಿಸಿಕೊಳ್ಳುವರು. ಕ್ರಮೇಣ ಸೂಕ್ತ ಪರಿಹಾರ ಕೊಟ್ಟು, ಕಂಪೆನಿಗಳ ಸ್ವಾಮಿತ್ವವನ್ನು ವಹಿಸಿಕೊಳ್ಳುವರು.

ಕೇಂದ್ರ ಕಾರ್ಮಿಕ ಉಪ ಮಂತ್ರಿ ಅಬೀದ್ ಅಲಿಯವರ ಆಗಮನ

ಮೈಸೂರು ೨೦

ಕೇಂದ್ರ ಸರ್ಕಾರದ ಕಾರ್ಮಿಕ ಇಲಾಖಾ ಉಪ ಮಂತ್ರಿ ಅಬೀದ್ ಅಲಿ ಜಾಫರ್‌ಭಾಯ್‌ರವರು ಈ ದಿನ ಬೆಳಿಗ್ಗೆ ಅರಸೀಕೆರೆಯಿಂದ ರೈಲಿನಲ್ಲಿ ಇಲ್ಲಿಗೆ ಆಗಮಿಸಿದರು. ಅವರನ್ನು ನಿಲ್ದಾಣದಲ್ಲಿ ಸ್ಥಳೀಯ ಅಧಿಕಾರಿಗಳೂ, ಕಾರ್ಮಿಕ ಪ್ರತಿನಿಧಿಗಳೂ ಸ್ವಾಗತಿಸಿದರು. ಶ್ರೀ ಎ. ರಾಮಣ್ಣನವರು ಹೂವಿನ ಹಾರವನ್ನು ಅರ್ಪಿಸಿದರು. ಮಂತ್ರಿಗಳು ಪಟ್ಟಣದಲ್ಲಿ ಈ ಸಂಜೆ ೬ ಗಂಟೆಗೆ ಕಾರ್ಮಿಕರ ಸಭೆಯನ್ನು ಉದ್ದೇಶಿಸಿ ಶ್ರೀ ಅಬೀದ್ ಅಲಿಯವರು ಭಾಷಣ ಮಾಡುವರು.

ಎನ್. ಎಸ್. ಸುಬ್ಬರಾವ್ ಸ್ಮಾರಕ ಅಂತರ ಕಾಲೇಜು ಚರ್ಚಾಕೂಟ

ನಗರದ ಮಹಾರಾಜಾ ಕಾಲೇಜಿನ ವಿಶ್ವವಿದ್ಯಾಲಯ ಇತಿಹಾಸ ಸಂಘದ ಆಶ್ರಯದಲ್ಲಿ ಶ್ರೀ ಎನ್. ಎಸ್. ಸುಬ್ಬರಾವ್ ಸ್ಮಾರಕ ಅಖಿಲ ಕರ್ನಾಟಕ ಅಂತರ ಕಾಲೇಜುಗಳ ಕನ್ನಡ ಚರ್ಚಾಕೂಟವು ನಡೆಯಿತು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಶ್ರೀ ಜಿ. ಚನ್ನರಾಜೆ ಅರಸ್‌ರವರಿಂದ ಪ್ರಾರ್ಥನೆಯಾದನಂತರ ಶ್ರೀ ಡಿ. ಎಸ್. ರಾಮಾನುಜನ್ ಸ್ವಾಗತ ಭಾಷಣ ಮಾಡಿದರು. ಪ್ರೊ॥ ಎಂ. ವಿ. ಕೃಷ್ಣರಾಯರು ಶ್ರೀ ಸುಬ್ಬರಾಯರ ಪರಿಚಯ ಮಾಡಿಕೊಟ್ಟರು. "ಸ್ವತಂತ್ರ ಭಾರತದಲ್ಲಿ ಪಾಶ್ಚಿಮಾತ್ಯ ಮಾನಗಳನ್ನು ಕೊಡುವುದು ಭಾರತೀಯರಿಗೆ ಹಿತವೇ ಹೊರತು ಅಹಿತವಲ್ಲ" ಎಂಬ ವಿಷಯದ ಮೇಲೆ ಚರ್ಚೆಯು ನಡೆದು ಕೋಲಾರ ಶ್ರೀಗಳಾದ ಶೇಷ್ ಗಂಗಾಧರ, ಆರ್. ಜಿ. ದಾಬೋಳ್ಕರ್, ಕ್ರಿಶ್ಚಿಯನ್ ಶಾಂತಪ್ಪ ಮತ್ತು ಎಸ್. ಕೆ. ಚಿಟ್ಟಿದೂರುರವರಿಗೆ ಕ್ರಮವಾಗಿ ೪ ಬಹುಮಾನಗಳು ದೊರೆತುವು. ಶ್ರೀಮತಿ ಆರ್. ವತ್ಸಲರವರಿಗೆ ವಿಶೇಷ ಬಹುಮಾನವು ಬಂದಿತು. ಧಾರವಾಡದ ಕರ್ನಾಟಕ ಕಾಲೇಜಿಗೆ ಸಮೂಹಿಕ ಪಾರಿತೋಷಕವು ದೊರೆಯಿತು. ಅಧ್ಯಕ್ಷರ ಭಾಷಣವಾದನಂತರ ಶ್ರೀ ಹೆಚ್. ವಿ. ಶಿವೇಗೌಡರು ವಂದನಾರ್ಪಣೆ ಮಾಡಿದರು.

ನಗರದಲ್ಲಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರ ನಿಂತಿತು

ಮೈಸೂರು ೨೦

ಪರೀಕ್ಷೆಗಳನ್ನು ಮುಂದೆ ಹಾಕಿಸುವ ಸಲುವಾಗಿ ನಿನ್ನೆ ನಾನಾ ಕಾಲೇಜು ವಿದ್ಯಾರ್ಥಿಗಳು ಹೂಡಿದ್ದ ಮುಷ್ಕರವು ಮುಕ್ತಾಯವಾಯಿತು. ಈ ದಿನ ಎಲ್ಲ ಕಾಲೇಜುಗಳಲ್ಲೂ ಮಾಮೂಲಿನಂತೆ ಕೆಲಸ ನಡೆಯುತ್ತಿದೆ. ಅವರ ಶಾರದಾವಿಲಾಸ ಕಾಲೇಜಿನಲ್ಲಿ ಜರುಗುತ್ತಿರುವ ಪ್ರಿಪರೇಟರಿ ಪರೀಕ್ಷೆಯಲ್ಲಿ ಕೆಲವು ಸೀನಿಯರ್ ವಿದ್ಯಾರ್ಥಿಗಳು ಹಾಜರಾಗಿಲ್ಲ.

ತುಮಕೂರಿನಲ್ಲೂ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಪರೀಕ್ಷೆಗಳನ್ನು ಮುಂದಕ್ಕೆ ಹಾಕಬೇಕೆಂಬ ಬೇಡಿಕೆ ಸಲ್ಲಿಸಿ ತುಮಕೂರಿನ ಕಾಲೇಜು ವಿದ್ಯಾರ್ಥಿಗಳೂ ಸಹ ನಿನ್ನೆ ಮುಷ್ಕರ ನಡೆಸಿದರೆಂದು ಗೊತ್ತಾಗಿದೆ.

ಮಂಡ್ಯದಲ್ಲಿ ವಿಶಾಲ ಮೈಸೂರು ಪರ ಸಮ್ಮೇಳನ

ಸ್ವಾಗತ ಸಮಿತಿಯ ರಚನೆ

ವಿಶಾಲ ಮೈಸೂರು ಪ್ರಾಂತ ರಚನೆಯ ಬಗ್ಗೆ ಜನತೆಗೆ ಸೂಕ್ತ ತಿಳುವಳಿಕೆಯನ್ನುಂಟುಮಾಡಲು ಕೈಗೊಳ್ಳಬೇಕಾದ ಕ್ರಮಗಳನ್ನು ರೂಪಿಸುವ ಸಲುವಾಗಿ ನೆನ್ನೆ ಮಧ್ಯಾಹ್ನ ಮಂಡ್ಯದಲ್ಲಿ ಜಿಲ್ಲೆಯ ಸುಮಾರು ೩೦೦ ಮಂದಿ ಪ್ರಮುಖರ ಸಭೆಯು ವಿಧಾನ ಪರಿಷತ್ತಿನ ಸದಸ್ಯ ಶ್ರೀ ಜಿ ದೇವಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು

ಶ್ರೀಗಳಾದ ಕೆ ಚಿಕ್ಕಲಿಂಗಯ್ಯ ಅನಂತರಾಮಭಟ್ಟ, ಮತ್ತು ಎಂ ಆರ್ ಎಂ ಶ್ರೀಕಂಠಯ್ಯನವರು ಈ ಹಿಂದೆ ಸಕಲ ಕನ್ನಡ ಭಾಗಗಳ ವಿಶಾಲವಾದ ಒಂದು ಪ್ರಾಂತ ರಚನೆಯ ಬಗ್ಗೆ ಸಂಶಯ ಬರುವ ರೀತಿಯಲ್ಲಿ ಬಲವರು ಇಲ್ಲಿ ಪ್ರಚಾರ ಮಾಡಿದ್ದರೆಂದೂ, ಆ ಬಗ್ಗೆ ಸರಿಯಾದ ವಿಷಯಗಳನ್ನು ಜನತೆಯ ಮುಂದೆ ಮಂಡಿಸಬೇಕಾದುದು ಅಗತ್ಯವೆಂದೂ ಹೇಳಿದರು

ಅನಂತರ ಸಭೆಯು ವಿಶಾಲ ಕನ್ನಡ ಪ್ರಾಂತಕ್ಕೆ ಮೈಸೂರು ಎಂಬ ಹೆಸರಿಡಲು ನಿರ್ಧರಿಸಿದುದಕ್ಕಾಗಿ ಕೇಂದ್ರ ಸರ್ಕಾರವನ್ನು ಅಭಿನಂದಿಸುವ ನಿರ್ಣಯವೊಂದನ್ನು ಮಾಡಿತು ಜನತೆಗೆ ನೂತನ ಪ್ರಾಂತ ರಚನೆಯ ಬಗ್ಗೆ ಸೂಕ್ತ ತಿಳುವಳಿಕೆಯನ್ನು ನೀಡಲು ಸದ್ಯದಲ್ಲಿಯೇ ಸ್ಥಾನದ ಎಲ್ಲ ಜಿಲ್ಲಾ ಪ್ರತಿನಿಧಿಗಳನ್ನೊಳಗೊಂಡ ಸಮ್ಮೇಳನವೊಂದನ್ನು ಕರೆಯಲು ನಿರ್ಧರಿಸಲಾಯಿತು

ಇದಕ್ಕಾಗಿ ಶ್ರೀ ಜಿ ದೇವಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ಮತ್ತು ಕೆ ಚಿಕ್ಕಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನೂ ರಚಿಸಲಾಯಿತು ಶ್ರೀಗಳಾದ ಅನಂತರಾಮಭಟ್ಟ ಮತ್ತು — ಇವರುಗಳು ಪ್ರಧಾನ ಕಾರ್ಯದರ್ಶಿಗಳನ್ನಾಗಿಯೂ ಮತ್ತು ಶ್ರೀ ಎಂ ಎಲ್ ಲಿಂಗಣ್ಣನವರನ್ನು ಖಜಾಂಚಿಯನ್ನಾಗಿಯೂ ಆರಿಸಲಾಯಿತು

ನಿರುದ್ಯೋಗಿಯೊಬ್ಬನ ಆತ್ಮಹತ್ಯೆ

೪ ತಿಂಗಳಿಂದ ನಿರುದ್ಯೋಗದ ಕಾರಣಕ್ಕಾಗಿ ಮತ್ತು ಸಾಲವನ್ನು ತೀರಿಸಲಾರದೆ ಇದ್ದ ವಿ ಡಿ ಕೃಷ್ಣಮೂರ್ತಿ ಎಂಬ ಯುವಕನೊಬ್ಬನು ಬೆಂಗಳೂರಿನ ಮನೆಯೊಂದರಲ್ಲಿ ನೇಣುಹಾಕಿಕೊಂಡು ಮೃತಪಟ್ಟನು ಎಂದು ವರದಿಯಾಗಿದೆ ಆತನು ಹಲವು ದಿನಗಳ ಹಿಂದೆಯೇ ನೇಣು ಹಾಕಿಕೊಂಡಿರಬೇಕೆಂದು ಊಹಿಸಲಾಗಿದೆ ಮನೆಯಲ್ಲೆಲ್ಲಾ ದುರ್ವಾಸನೆ ಹರಡಿ ಪೊಲೀಸರಿಗೆ ತಿಳಿಸಲಾಯಿತು ಆತನ ಹೆಂಡತಿ ಮತ್ತು ಮಕ್ಕಳು ಕೆಲವು ದಿನಗಳ ಹಿಂದೆ ತಂಜಾವೂರಿನಲ್ಲಿರುವ ತೌರುಮನೆಗೆ ಹೋಗಿದ್ದರು ಮೃತನು ಮೊದಲು ರೈಲ್ವೆಯಲ್ಲಿ, ಬಿನ್ನಿ ಕಂಪೆನಿಯಲ್ಲೂ ಉದ್ಯೋಗದಲ್ಲಿದ್ದನು

ಹಂಪೆ ಜಯಂತಿ

ಇಲ್ಲಿನ ಯುವರಾಜ ಕಾಲೇಜಿನ ಕರ್ನಾಟಕ ಸಂಘದವರು ನಾಳೆ ಮತ್ತು ನಾಡಿದ್ದು ಸಂಜೆ ೫ ಗಂಟೆಗೆ ಹಂಪೆಯಂತಿ ಉತ್ಸವದ ಅಂಗವಾಗಿ ನಾಟಕವನ್ನು ಏರ್ಪಡಿಸಿರುವರು ಸಂಸ್ಥಾನದ ಸಂಸ್ಕೃತಿ ಪ್ರಸಾರ ಡೈರೆಕ್ಟರ್ ಶ್ರೀ ಎ ಎನ್ ಮೂರ್ತಿರಾಯರು ನಾಳೆ ಆರಂಭೋತ್ಸವವನ್ನು ನೆರವೇರಿಸುವರು ನಾಳೆ ಶ್ರೀ ಎಸ್ ವಿ ರಂಗಣ್ಣನವರೂ, ನಾಡಿದ್ದು ಶ್ರೀ ಡಿ ಎಲ್ ನರಸಿಂಹಾಚಾರ್ಯರೂ ಅಧ್ಯಕ್ಷತೆ ವಹಿಸುವರು ಈ ಪಿಲ್ ದೇಶಿಕಾಚಾರ್ಯರ ವೇಣು ವಾದನವು ನಾಳೆಯೂ, ಪಿ ಟಿ ವಿ ಸುಬ್ರಹ್ಮಣ್ಯರಾವ ಅವರ ನಗೆ ಹನಿ ನಾಡಿದ್ದೂ ಇವೆ

ಎಂಟಿಯಲ್ಲಿ ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬ ೫ ಮತ್ತು ೬ ೧೫ ಪ್ರಾದೇಶಿಕ ವಾರ್ತೆಗಳು ವ ಸ್ತವ ೬ ೨೦ ಮತ್ತು ಹಳ ೭ ಮನ್ನ ೭ ಶಿಸ್ತಿನ ಯುಕ್ತಿಗಳು ಮಧ್ಯಾಹ್ನ ೧೨ ೩೦ ರಿಂದ ೧ ಹಾಡು ೧ ಮಕ್ಕಳ ಕಾರ್ಯಕ್ರಮ ೨ ೨೦ ದಿಲ್ಲಿಯಿಂದ ವಚನಗಾನ ೭ ೧೦ ಕನ್ನಡ ಭಾಷಣ ೮ ರಿಂದ ವಾದ್ಯಗೋಷ್ಠಿ ೯ ೯ ೩೦ ನಾಗಸ್ವರ ೯ ೪೦ ರಿಂದ ಪ್ರಾಯೋ ಕಾರ್ಯಕ್ರಮ ರಾತ್ರಿ ಸಮಾರಂಭ

ಮಹಿಸೂರ ಮಹಾ ಭಾಗ್ಯ

ಮೈಸೂರ ಸಂಸ್ಥಾನದ ಜಗದೇಕರಮಣೀಯದೆ ।
ಭಾಸಿಸಂತಿರೆ ನವನ ನೀತಿ ಸಲಹಿತೆ ಕ ಯ ।
ಶಿ ಪಿಂತು ವಾಣಿಸಿಯ ಸಮ್ಮುಖ ಶೀಘ್ರದ
ಮನ್ನಿಸುತಿ ಕೃಪೆದೋರಿದ ॥
ಆ ಸತ್ಯ ಧರ್ಮಪರ ಯದುವಂಶ ಸಂಭವರ ।
ಲೇಸನಿಸಿದಾಳ್ಕೆಯಲಿ ಮಾಪಿಯ ನಾಡೆನಿಸಿ ।
ಮೀಸಲಳಿಯದಯಶದ ಗಳಿಸಿದ ಮೈಸೂರು
ಘನತೆ ಗಣ್ಯತೆಯಾಂತುದು ॥ ೧ ॥
ಭಾರತದ ರಾಷ್ಟ್ರನಾಯಕರ ನಿರ್ಣಯದನಾ ।
ಸ್ತೋರಿಂತೆ ಬಿಸುಲಿಯಲುಲಿದುತೆ ಮತ್ತಮಾ ।
ಚಾರುತರ ವೃತ್ತಪತ್ರಂಗಳಾ ಪ್ರಕಟನೆಯ
ನೋದಿದೆವು ನಲವಾಂತೆವು ॥
ತೋರಿದಾ ಜಗದಂಬೆ ಮೈಸೂರ ಮಕ್ಕಳಲಿ ।
ಕಾರುಣ್ಯವನು ಮುನ್ನಿನಾ ಪಡೆದವರ ಗಂ ।
ಭೀರ ವಾಣಿಗೆ ಬೆಲೆಯು ಬರುವಂತುದೆನ್ನುಯಾ
ಕೆಂ ರೀತಿಯು ಸಫಲವಾಯ್ತು ॥ ೨ ॥
ಪಾತಿವತ ವೈಭವನ್ನಿಷ್ಠದಿಪ ಮೈಸೂರು
ಶ್ರೀಪೀಠ ಮಾತ ಮನ್ನಿಸುವ ಮೈಸೂರು ।
ನೂತನದ ಗಣ ರಾಜ್ಯದಲಿ ಭಾರತದ ಘನತೆ
ಯುನ್ನತದ ಕಲೆಯ ತವರು ॥
ಸ್ವಾತಂತ್ರ್ಯ ಪ್ರಿಯದ ಜಯ ಚಾಮರಾಜೇಂದ್ರ ।
ನೇತೃತ್ವದಲಿ ನಾಡ ವರ್ಧಿಸಲಿ ಮೈಸೂರು
ಕೌತುಕದನುಹ ಸಲಿ ಮುಂದಿಯಾ ಬಾಳಿಸಲಿ
ಮೈಸೂರು ನಾಗವತೇಡು ॥ ೩ ॥
ಮಣಿಸುವಾ ರಾಜೇಂದ್ರರಿಗೆ ನೆಹರು ಮುಖ್ಯರಿಗೆ ।
ಮಣಿಸುವ ಎಧೀ ಮಹಾತ್ಮರಿಗೆ ಧೀರರಿಗೆ ।
ಮಣಿಸುವಾ ನಿಸ್ವಾರ್ಥರಾದೆಲ್ಲ ಹಿರಿಯರಿಗೆ
ಘನೋ ಪದೇಶಕರಿಗೆ ॥
ಮಣಿಸುವೆವು ಸನಾತನಾರ್ಯರಾ ಸಂಸ್ಕೃತಿಗೆ ।
ಮಣಿವೆವು ನವ ಮಂಗಳಯ ಪದಯುಗಳಕ್ಕೆ ।
ಮಣಿಪೆವಿದೆ ಭಾರತ ಮಹೋದಾರಚರಿತರಿಗೆ
ದೇಶಭಕ್ತರಿಗೆ ನಲವಿಂ ॥೪॥

ಮಹಾ ವಿದ್ವಾನ್ ನಂ ಶ್ರೀಕಂಠಶಾಸ್ತ್ರಿ

ಕೇಂದ್ರದ ನಿರ್ಧಾರಕ್ಕೆ ನಿಜಲಿಂಗಪ್ಪನವರ ಸ್ವಾಗತ

Separate Classes for Supplementary and Regular Students
Special Attention for Primary School Teachers
Separate Section for Ladies
COMMENCE VERY SHORTLY
7.30 to 10 A. M and 5.30 to 8-30 P M.

ಡಿಕ್ಲರೇಷನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂಬತ್ತು ಆಣೆ.

ಬಿಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ

ಪ್ರಚಾರವಿರುವ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹಿರಾತುಗಳನ್ನು

ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಸಂ: ೧೯] SADHVI : SATURDAY 25-2-1956 ಮೈಸೂರು ಶನಿವಾರ : ೨೫-೨-೧೯೫೬ [ಸಂಚಿಕೆ : ೧೬೩

ಕರಾಚಿಯಲ್ಲಿ ಶೀಘ್ರವೇ ಪಶ್ಚಿಮ ರಾಷ್ಟ್ರಗಳ ಸಚಿವರ ಸಭೆ

ಕರಾಚಿಯಲ್ಲಿ ಡಲೆಸ್, ಲಾಯ್ಡ್ ಮತ್ತು ಪೀನೂರರ ಸಂಭಾಷಣೆ

...ಅಮೆರಿಕ ಮತ್ತು ಫ್ರಾನ್ಸಿನ ವಿದೇಶ ಮಂತ್ರಿಗಳಾದ ಸೆಲ್ವಿನ್ ಲಾಯ್ಡ್, ಡಲೆಸ್ ಮತ್ತು ಪೀನೂರರವರು ಬರುವ ತಿಂಗಳು ದಿ... ...ಯಲ್ಲಿ ಸೇರಿ ಅಂತರ ರಾಷ್ಟ್ರೀಯ ವಿಷಯಗಳ ಕುರಿತು ಚರ್ಚೆ ನಡೆಸುವರೆಂದು ಗೊತ್ತಾಗಿದೆ

...ಇಂದೂರು ಪೋಲೀಸರ ...ಕಳುವಾದ ಸಾಮಾನು ಪತ್ತೆ

...ಪೋಲೀಸರ ದೇವಾಲಯದಿಂದ ...ಡಿಸೆಂಬರ್ ೧೭ರಲ್ಲಿ ಕಳುವಾದ ೧೭... ...ನ್ನದ ತೊಟ್ಟಿಲು, ಅದರ ಮೂರು ಕೋ... ...ಪೋಲೀಸರಿಂದ ಪತ್ತೆ ಮಾಡಲ್ಪಟ್ಟಿವೆ. ...ಜಗಿರ್ ಎಂಬುವನನ್ನು ಪೋಲೀಸರು ೯ ...ನೇ ತಾರೀಕು ದಸ್ತಗಿರಿ ಮಾಡಿದರು ಆ ...ಸಾಧು ವೇಷ ಧರಿಸಿದ್ದನೆಂದು ಹೇಳಲಾಗಿ... ...ನ್ನದ ಬಿಂಬವನ್ನೂ ಸಹ ಬೊಂಬಾಯಿ–ಅ... ...ಯಲ್ಲಿ ಗುಲ್ಬರ್ಗ ಎಂಬ ಹಳ್ಳಿ ಬಳಿ ನದಿ... ...ಯಲ್ಲಿ ಬಚ್ಚಿಡಲಾಗಿತ್ತೆಂದು ಹೇಳಲಾಗಿದೆ ...ಕಳುವಾದ ಸಾಮಾನುಗಳ ಬೆಲೆ ೧೫ ...

...ಮಂತ್ರಿಗಳಿಂದ ಶಾಲೆಯಲ್ಲಿ ಪಾಠ

...ರದ ವಿದ್ಯಾ ದಾನದ ಯೋಜನೆ ಪ್ರ... ...ಲ್ಲಿ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮ... ...ರಾಯರು ಬೆಂಗಳೂರಿನ ಬಿದ್ಯಾರ್ಥಿಗಳ ಶಿಕ್ಷ... ...ಯಲ್ಲಿ ತಿಂಗಳಿಗೊಮ್ಮೆ ಸಾಂಸ್ಕೃತಿಕ ವಿ... ...ಗಿ ಪಾಠಗಳನ್ನು ಹೇಳಿಕೊಡ... ...ಲಿದ್ದಾರೆ

...ರಾಮುಖಿ ದೇವಸ್ಥಾನದಲ್ಲಿ ಕಳುವಾದ ಸಾಮಾನುಗಳ ಪತ್ತೆ

...ದಲ್ಲಿರುವ ...ರಾಮುಖಿ ದೇವಸ್ಥಾನ ...ಲವು ದಿನಗಳ ಹಿಂದೆ ನಡೆದ ಕಳ್ಳತನದ ...ದಲ್ಲಿ ಪೋಲೀಸರು ರಾಜಮಾಣಿಕ್ಯಂ ...ಮ್ಮನವನೊಬ್ಬನನ್ನು ಶ್ರೀರಂಗಪಟ್ಟ... ...ಬಂಧಿಸಿರುತ್ತಾರೆ ಅವನ ಬಳಿ ಕಳುವು... ...ಗಳು ಪತ್ತೆಯಾಗಿವೆ.

...ದೇಶದ ಚಿತ್ರಪಟಗಳ ಪ್ರದರ್ಶನ

...ದ ಇಂಡಿಯಾ-ಚೀನಾ ಸ್ನೇಹ ಸಂಘ... ...ದಲ್ಲಿ ಇದೇ ೨೭ ನೇ ತಾರೀಕು ಬೆ... ...ಗಂಟೆಗೆ ಗಾಂಧಿ ಬೌಲವರ್ಡಿನಲ್ಲಿರುವ ಸಿ. ಪಿ... ...ದಲ್ಲಿ ಚೀನಾ ದೇಶದ ಚಿತ್ರಪಟಗಳ ...ನನ್ನು ಏರ್ಪಡಿಸಿದೆ. ಪೌರಾಧ್ಯಕ್ಷ... ...ಕೃಷ್ಣಮೂರ್ತಿರಾಯರು ಅದನ್ನು ಉ... ...ರು ಸರ್ವರಿಗೂ ಆಹ್ವಾನವುಂಟು ...ನವು ೪ ನೇ ತಾರೀಖಿನವರೆಗೂ ನಡೆ... ...ಪ್ರವೇಶ ಉಚಿತ ಪ್ರದರ್ಶನ ಕಾಲ ...ರಿಂದ ೧೨ ಮತ್ತು ಸಂಜೆ ೫ ರಿಂದ ೯.

ಸಂತೋಷ ಕೂಟ

...ಸ್ಥಾನೀಯ ಬ್ರಿಟಿಷ್ ವಾಣಿಜ್ಯ ಸಂಸ್ಥೆ... ...ಏರ್ಪಡಿಸಿರುವ ನಾಳೆ ಸಂಜೆ ೫॥ ಗಂಟೆ ...ಬಸವಯ್ಯನವರ ಶಾಲೆಯಲ್ಲಿ ಪೌರಸ... ...ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯ... ...ಲ್ಲಿ ನೆರವೇರುತ್ತದೆ

ವರ್ಷಂಪ್ರತಿ ೪ ವೈದ್ಯರಿಗೆ ವಿದೇಶಗಳಲ್ಲಿ ವಿಶೇಷ ಶಿಕ್ಷಣ

ಹಿರಿಯ ಶಾಸನ ಸಭೆಯಲ್ಲಿ ಆರೋಗ್ಯ ಸಚಿವರ ಹೇಳಿಕೆ

[ಸ್ವಂ ವ ತಂತಿ] ಬೆಂಗಳೂರು ೨೫

ಈ ದಿನ ಹಿರಿಯ ಶಾಸನ ಸಭೆಯಲ್ಲಿ ಶ್ರೀ ಬಿ. ಕೆ. ಪುಟ್ಟರಾಮಯ್ಯನವರ ಪ್ರಶ್ನೆಯ ಬಗ್ಗೆ ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಮಾತನಾಡುತ್ತಾ, ೧೯೪೯ ರಿಂದ ಇದುವರೆಗೆ ವಿದೇಶಗಳಲ್ಲಿ ವಿಶೇಷ ಅಭ್ಯಾಸಕ್ಕಾಗಿ ೬೨ ಮಂದಿ ವೈದ್ಯರನ್ನು ಕಳುಹಲಾಯಿತೆಂದೂ, ದ್ವಿತೀಯ ಯೋಜನೆ ಕಾಲದಲ್ಲಿ ವರ್ಷಕ್ಕೆ ೪ ಜನರನ್ನು ಕಳುಹಲಾಗುವುದೆಂದೂ ಅದಕ್ಕಾಗಿ ೫ ಲಕ್ಷ ರೂ. ವಿನಿಯೋಗಿಸಲಾಗಿದೆಯೆಂದೂ ತಿಳಿಸಿದರು ಹೆಚ್ಚು ಮಂದಿ ವೈದ್ಯರನ್ನು ವಿದೇಶಗಳಿಗೆ ಕಳುಹುವಂತೆ ಸೂಚಕರು ಕೋರಿದ್ದರು

ಬೆಂಗಳೂರು ರಾಜಧಾನಿಯಾಗುಳ್ಳ ದಕ್ಷಿಣ ಪ್ರದೇಶದ ರಚನೆಯನ್ನು ಸ್ವಾಗತಿಸುವ ಬಗ್ಗೆ ಶ್ರೀ ಸಿ. ಜಿ. ದೇವನಾರ್ಥರವರು ಮಂಡಿಸಿದ ನಿರ್ಣಯವು ಚರ್ಚಿಸಲ್ಪಟ್ಟು ಮುಂದುವರಿಸಲ್ಪಟ್ಟಿತು

ಪ್ರಶ್ನೋತ್ತರದ ಸಮಯದಲ್ಲಿ ಮುಖ್ಯ ಮಂತ್ರಿಯವರು ಇದೇ ಜನವರಿ ೩೧ರವರೆಗೆ ವಿಧಾನ ಸೌಧದ ಕಟ್ಟಡಕ್ಕಾಗಿ ೯೩,೨೦,೪೧೯ ರೂ ವೆಚ್ಚವಾಗಿರುವುದೆಂದೂ, ಪೂರ್ಣವಾಗಿ ಕೆಲಸವು ಮುಕ್ತಾಯವಾಗಿ ಒಟ್ಟು ಮೊತ್ತ ೧॥ ಕೋಟಿ ರೂ. ಆಗುವುದೆಂದೂ ತಿಳಿಸಿದರು ಸಭೆಯು ಮಾರ್ಚ್ ತಿಂಗಳಲ್ಲಿ ಪುನಃ ಸೇರಲು ಮುಂದುವರಿಸಲ್ಪಟ್ಟಿತು

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ಬೆಳಿಗ್ಗೆ ಕೋಟೆ ಸ್ಕೂಲಿನಲ್ಲಿ ಯೋಜನೆ ಬಗ್ಗೆ ಪಾಠವನ್ನು ಹೇಳಿಕೊಟ್ಟರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಪಿ. ಆರ್. ರೇಣುಕಾ ಕನ್ನಡ ಗೀತೆಗಳು ೭-೩೦ ರಾಜಾರಾಂ ನಾಗಸ್ವರ, ೮-೧೫ ರೇಡಿಯೋ ನ್ಯೂಸ್ ಅನುಭೋತ್ಸವ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಂದ ಪಿ. ಆರ್. ರೇಣುಕಾ ಕನ್ನಡ ಗೀತೆಗಳು ವಿ. ಮೊತೆ ಸ್ವಾಮಿ ಅಯ್ಯಂಗಾರ್-ವೀಣೆ, ... ಸಂಗೀತ ೧೦ ವಾದ್ಯಗಳ ಕಾರ್ಯಕ್ರಮ ... ಸಂಗೀತ. ... ೩-೩೦ ... ಗೀತೆಗಳು ... ವಿ. ರಾಮರತ್ನಂ ಮತ್ತು ಟಿ. ಆರ್. ... ಸಂಗೀತ ಸಂಜೆ ... ಟಿ. ರಾಮಶಾಸ್ತ್ರಿ ... ಲಕ್ಷ್ಮೀದೇವಮ್ಮ ... ೬-೪೦ ... ಸಂಗೀತ ಮತ್ತು ... ೭ ... ನಾಟಕ ... ಮಕ್ಕಳ ಕಾರ್ಯಕ್ರಮ ... ಕನ್ನಡ ಕಾರ್ಯಕ್ರಮ ... ಐ. ಮೊರಿಸ್ವಾಮಿ ಅಯ್ಯಂಗಾರ್ ವೀಣೆ.

ನಿಧನ

ದಿವಾನರ ರಸ್ತೆಯಲ್ಲಿ ವಾಸವಿರುವ ಅಡ್ವೊಕೇಟ್ ಶ್ರೀ ಜಿ. ನಾರಾಯಣಮೂರ್ತಿಯವರ ಮಾತೃಶ್ರೀಯವರಾದ ಶ್ರೀಮತಿ ಪುಟ್ಟಮ್ಮನವರು ಕಳೆದ ಬುಧವಾರ ತಮ್ಮ ೬೪ ನೇ ವಯಸ್ಸಿನಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ

ಪಶ್ಚಿಮ ಬಂಗಾಳದ ಐಕ್ಯದ ವಿರೋಧವಾಗಿ ಭಾರಿ ಹರತಾಳ

ವಿಮಾನ ಸರ್ವೀಸ್ ಬಿಟ್ಟು ಮಿಕ್ಕೆಲ್ಲ ಸಂಚಾರ ಬಂದ್ ; ೧೬೦೦ ದಸ್ತಗಿರಿಗಳು

ಪಶ್ಚಿಮ ಬಂಗಾಳ ಮತ್ತು ಬಿಹಾರಗಳ ಐಕ್ಯದ ಸೂಚನೆಯನ್ನು ಪ್ರತಿಭಟಿಸಲು ನೆನ್ನೆ ಪಶ್ಚಿಮ ಬಂಗಾಳದ ಅತ್ಯಂತ ಹರತಾಳವು ನಡೆಯಿತು. ಕಲ್ಕತ್ತದಲ್ಲಿ ವಿಮಾನ ಸರ್ವಿಸ್ ಒಂದು ಬಿಟ್ಟು ಮಿಕ್ಕೆಲ್ಲ ಸಂಚಾರ ವ್ಯವಸ್ಥೆಗಳೂ ಪೂರ್ಣವಾಗಿ ನಿಂತವು ಅಂಗಡಿಗಳು ಮುಚ್ಚಿದ್ದುವು ಬೀದಿ ಮಾರಾಟಗಾರರೂ ಸಹ ಇರಲಿಲ್ಲ ಎಲ್ಲಾ ಫ್ಯಾಕ್ಟರಿಗಳೂ ಬಂದಾದುವು ಬ್ಯಾಂಕು ಮತ್ತು ಸರ್ಕಾರಿ ಕಛೇರಿಗಳಲ್ಲಿ ಕೆಲಸ ಸಾಧ್ಯವಾಗಲಿಲ್ಲ. ಜಾಡಮಾಲಿಗಳೂ ಹರತಾಳದಲ್ಲಿ ಸೇರಿದ್ದರಿಂದ ಬೀದಿ ಕಸವನ್ನು ಎತ್ತಲಾಗಲಿಲ್ಲ

ಪೋಲೀಸರು ಮುಂಜಾಗ್ರತೆ ಕ್ರಮವನ್ನು ಅನುಸರಿಸಿ, ೧,೬೦೦ ಜನರನ್ನು ಮುಖ್ಯವಾಗಿ ಸಮಾಜ ವಿರೋಧಿಗಳನ್ನು, ಬಂಧಿಸಿದರು. ೫೦ ಜನ ರಾಜಕೀಯ ಕೆಲಸಗಾರರನ್ನು ಬಂಧಿಸಲಾಯಿತು ಜಿಲ್ಲೆಗಳಲ್ಲೂ ಹಲವರನ್ನು ಬಂಧಿಸಲಾಗಿದೆ. ಎಲ್ಲೂ ಯಾವ ಘಟನೆಯೂ ಆಗಲಿಲ್ಲ. ಹರತಾಳವು ಶಾಂತವಾಗಿತ್ತು

ಕಲ್ಕತ್ತದಲ್ಲಿ ಶಾಸನಸಭೆ ಸೇರಿದ್ದಾಗ ಹೊರಗಡೆ ಪ್ರದರ್ಶನಕಾರರು, ಪೋಲೀಸರ ಕಾವಲನ್ನು ಭೇದಿಸುವ ಪ್ರಯತ್ನ ನಡೆಯಿತು. ನೆನ್ನೆ ಸಭೆಯಲ್ಲಿ ಐಕ್ಯದ ವಿಷಯವನ್ನು ತೆಗೆದುಕೊಳ್ಳಲಿಲ್ಲ. ಪ್ರತಿಬಂಧಕಾಜ್ಞೆ ಮುರಿದ ೪೭ ಜನ ಸ್ವಯಂಸೇವಕರನ್ನು ಬಂಧಿಸಲಾಯಿತು ಶಾಸನ ಸಭೆಯಲ್ಲಿ ವಿರೋಧ ಸದಸ್ಯರಾರೂ ಭಾಗವಹಿಸಲಿಲ್ಲ

ಕಲ್ಕತ್ತಾದಿಂದ ಯಾವ ರೈಲನ್ನೂ ಹೊರಕ್ಕೆ ಬಿಡಲಿಲ್ಲ. ೫೦ ವಿದೇಶೀ ಹಡಗುಗಳಲ್ಲಿ ಕೆಲಸ ನಿಂತಿತ್ತು ೪೦೦ ಟ್ರಾಂಗಳಲ್ಲಿ ಒಂದೂ ಹೊರಕ್ಕೆ ಬರಲಿಲ್ಲ ಸರ್ಕಾರಿ ವಾಹನಗಳ ಸಂಚಾರ ಮಾತ್ರವಿತ್ತು.

ಗುಂಡ್ಲುಪೇಟೆ ತಾಲ್ಲೂಕು ವಿದ್ಯಾರ್ಥಿಗಳ ಸಂತೋಷಕೂಟ

ಗುಂಡ್ಲುಪೇಟೆ ತಾಲ್ಲೂಕು ವಿದ್ಯಾರ್ಥಿಗಳ ವಾರ್ಷಿಕ ಸಂತೋಷ ಕೂಟವು ನಾಳೆ ಸಂಜೆ ೪ ಗಂಟೆಗೆ ಪಾಠಶಾಲೆಯಲ್ಲಿ ನಡೆಯುವುದು ಸಂಬಂಧಪಟ್ಟ ವಿದ್ಯಾರ್ಥಿಗಳು ಸಕಾಲಕ್ಕೆ ಹಾಜರಾಗಿ ದಯಮಾಡಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಮೋದಿಯವರ ಶಿಬಿರಕ್ಕೆ ಸಹಾಯ

ಡಾ॥ ಎಂ. ಸಿ. ಮೋದಿಯವರ ನೇತ್ರ ಚಿಕಿತ್ಸಾ ಶಿಬಿರಕ್ಕಾಗಿ ಶ್ರೀಗಳಾದ ಎಂ. ಆರ್. ಸಿ. ಬಸಪ್ಪ, ಪಾಲಂಜ ಮತ್ತು ಇಂದ್ರಭವನದ ಮಾಲೀಕರಾದ ಶ್ರೀ ಬದ್ರಿಪ್ರಸಾದರು ತಲಾ ೧೦೧ ರೂ. ಗಳನ್ನು ಸಹಾಯ ಮಾಡಿರುತ್ತಾರೆ

ಕಳ್ಳತನಗಳು

ದಸರಾ ವಸ್ತು ಪ್ರದರ್ಶನದ ಕಟ್ಟಡದಲ್ಲಿ ಸುಮಾರು ೨೦೦ ರೂ. ಬೆಲೆ ಬಾಳುವ ತಾಮ್ರದ ತಂತಿಯನ್ನೂ, ಅಗ್ರಹಾರದ ಬೀದಿಯಲ್ಲಿರುವ ಬಿ. ಜಿ. ಪಿ. ಲಾರಿ ಸರ್ವಿಸಿನ ಕಟ್ಟಡದಲ್ಲಿದ್ದ ೨೦೦ ರೂ. ಬೆಲೆಯ ೩ ಟೈರುಗಳನ್ನೂ ಅಪಹರಿಸಲಾಗಿದೆ

ವೈಯಕ್ತಿಕ ಇನಾಂಗಳ ರೈತರಿಗೆ ವಂಶಪಾರಂಪರ್ಯ ಹಕ್ಕು

ವಿಧಾನ ಸಭೆಯಲ್ಲಿ ಶಿಫಾರಸು ಮಸೂದೆಗೆ ಅಂಗೀಕಾರ

ಬೆಂಗಳೂರು ೨೫

ವಿಧಾನ ಸಭೆಯಲ್ಲಿ ನೆನ್ನೆ ವೈಯಕ್ತಿಕ ಇನಾಮುಗಳಿಗೆ ಸಂಬಂಧಿಸಿದ ಶಾಸನದ ಶಿಫಾರಸು ಮಸೂದೆಯು ಅಂಗೀಕೃತವಾಯಿತು. ಈ ವಿಧದ ಇನಾಮುಗಳ ರೈತರಿಗೆ ವಂಶಪಾರಂಪರ್ಯ ಹಕ್ಕನ್ನು ಕೊಡಲು ಉದ್ದೇಶಿಸಲಾಗಿದೆ. ನ್ಯಾಯಾಂಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಮಾತನಾಡಿ, ಇನಾಮುದಾರರಿಗೆ ದ್ವಿತೀಯ ಯೋಜನೆ ಕಾಲದಲ್ಲಿ ಪರಿಹಾರ ಕೊಡಲು ವ್ಯವಸ್ಥೆ ಮಾಡಿಲ್ಲವಾದರೂ, ಅವರುಗಳಿಗೆ ಸರ್ಕಾರಿ ಬಾಂಡುಗಳನ್ನು ಕೊಡಲು ಅಭ್ಯಂತರವಿಲ್ಲವೆಂದು ತಿಳಿಸಿದರು

ಶರಾವತಿ ಯೋಜನೆಯ ಅಧಿಕ ಪರೀಕ್ಷೆಯು ತ್ವರಿತಗತಿಯಿಂದ ಪೂರ್ಣವಾಗಿ ಮುಕ್ತಾಯವಾಯಿತೆಂದೂ, ೨॥ ಕೋಟಿ ರೂ. ಗಳ ಈ ಯೋಜನೆ ಅಂಗವಾಗಿ ೧೭೬ ಕೋಟಿ ಘನ ಅಡಿ ನೀರು ಶೇಖರಣೆಯಾಗುವ ಜಲಾಶಯವನ್ನು ನಿರ್ಮಿಸಲು ಯೋಜನೆಯು ಸಿದ್ಧವಾಗಿರುವುದೆಂದೂ, ಶಿವನ ಸಮುದ್ರಕ್ಕೆ ವಿದ್ಯುಚ್ಛಕ್ತಿ ಉತ್ಪಾದನೆಗೆ ನೀರನ್ನು ಒದಗಿಸಿಕೊಟ್ಟಮೇಲೂ, ೩೦ ಸಾವಿರ ಎಕರೆ ವ್ಯವಸಾಯಕ್ಕೆ ನೀರಾವರಿ ಸೌಲಭ್ಯವನ್ನು ಏರ್ಪಡಿಸಲಾಗುವುದೆಂದೂ ಕೈಗಾರಿಕಾ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ತಿಳಿಸಿರುತ್ತಾರೆ

ತೆಂಗಿನ ಮರಗಳಿಗೆ ತಗಲುವ ಅಣಬೆ ರೋಗವನ್ನು ತಡೆಗಟ್ಟಲು ಯೋಜನೆಯೊಂದು ಪರಿಶೀಲನೆಯಲ್ಲಿರುವುದಾಗಿಯೂ, ಈ ಬಗ್ಗೆ ಸಂಶೋಧನಾ ಕೇಂದ್ರವನ್ನು ಏರ್ಪಡಿಸಲೂ ಯೋಚಿಸಲಾಗುತ್ತಿದೆಯೆಂದೂ ವ್ಯವಸಾಯ ಮಂತ್ರಿ ಡಾ॥ ಆರ್. ನಾಗನಗೌಡರು ತಿಳಿಸಿರುತ್ತಾರೆ.

ದಕ್ಷಿಣ ಪ್ರದೇಶದ ರಚನೆಗೆ ಬೊಂಬಾಯಿ ಕನ್ನಡಿಗರ ವಿರೋಧ

ಬೊಂಬಾಯಿ, ಶಾಸನ ಸಭೆಯ ಕರ್ನಾಟಕ ಸದಸ್ಯರು ದಕ್ಷಿಣ ಪ್ರದೇಶದ ರಚನೆಯನ್ನು ವಿರೋಧಿಸಿ ಪ್ರಧಾನಿಯವರಿಗೆ ಮನವಿಯೊಂದನ್ನು ಒಪ್ಪಿಸಿದ್ದಾರೆ ಕರ್ನಾಟಕ ಸಂಸ್ಥಾನದಲ್ಲಿ ಸೇರಬೇಕಾಗುವ ಎಲ್ಲ ಪ್ರದೇಶಗಳನ್ನೂ ಹೊಂದಿಸಿಕೊಳ್ಳಲು ಕಾಲ ಹಿಡಿಯುವುದೆಂದೂ, ಆದ್ದರಿಂದ ಶೀಘ್ರದ ಹೊಂದಾಣಿಕೆಯುಳ್ಳ ಪ್ರದೇಶಗಳನ್ನು ಸೇರಿಸಿ ದಕ್ಷಿಣ ಪ್ರದೇಶವನ್ನು ಆತುರವಾಗಿ ರಚಿಸುವುದು ಸರಿಯಲ್ಲವೆಂದೂ ಅವರು ತಿಳಿಸಿರುವರು.

ದೊಡ್ಡ ಗುಬ್ಬಮ್ಮನವರ ಸಪ್ತಾಹ

ರಾಜಧಾನಿಯ ವಿದ್ಯಾರಣ್ಯಪುರದ ೩ ನೇ ಕ್ರಾಸಿನಲ್ಲಿರುವ ಶ್ರೀ ದೊಡ್ಡಗುಬ್ಬಮ್ಮನವರ ದೇವಸ್ಥಾನದಲ್ಲಿ ನಾಳೆಯಿಂದ ೧ ವಾರ ದೇವತೆಯ ೪ ನೇ ವಾರ್ಷಿಕ ಸಪ್ತಾಹವು ನಡೆಯುವುದು. ದಿನವೂ ಸಂಜೆ ೬ ರಿಂದ ಬೆಂಗಳೂರಿನ ಶ್ರೀ ಸಿದ್ಧಾಶ್ರಮದ ಸ್ವಾಮಿಗಳವರಿಂದ ಹರಿಕಥೆ, ಉಪನ್ಯಾಸಗಳು ನಡೆಯುವುವು. ೪ ನೇ ತಾರೀಕು ದೊಡ್ಡ ಎಳ್ಳನ್ನು ದೇವರ ಉತ್ಸವವೂ, ವಕೀಲರ ಬಳ್ಳ ಶ್ರೀ ಹೆಚ್. ಎಲ್. ದೇವರಾಜ ಅರಸರ ಭಾವಚಿತ್ರದ ಅನಾವರಣವೂ ಇವೆ

ಕನ್ಯಾಪಹಾರ ಮೊಕದ್ದಮೆಯಲ್ಲಿ ಕಾಲೇಜು ಅಧ್ಯಾಪಕರ ಖುಲಾಸೆ

ಶಿವಮೊಗ್ಗ ಇಂಟರ್ ಕಾಲೇಜಿನ ವಿದ್ಯಾರ್ಥಿನಿ ಜಯಂತಿಬಾಯಿ ಎಂಬಾಕೆಯನ್ನು ಅಪಹರಿಸಿದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತರಾದ ಅಲ್ಲಿನ ಕಾಲೇಜು ಉಪಾಧ್ಯಾಯ ಸರ್ವೋತ್ತಮ ಇಮ್ಯಾನ್ಯುಯಲ್‌ರವರನ್ನು ಶಿವಮೊಗ್ಗಾ ನ್ಯಾಯಾಧೀಶರು ಖುಲಾಸೆ ಮಾಡಿರುತ್ತಾರೆ ಈ ಅಪರಾಧಕ್ಕೆ ಸಹಾಯ ಮಾಡಿದರೆಂದು ಆಪಾದನೆಗೆ ಗುರಿಯಾಗಿದ್ದ ನಾಗರಾಜರಾವ್ ಎಂಬಾತನನ್ನೂ ಖುಲಾಸೆ ಮಾಡಲಾಗಿದೆ

ವಿವಾಹ ಮಹೋತ್ಸವ

ಪೌರಸಭಾ ನಿವೃತ್ತ ಅಕೌಂಟೆಂಟರಾದ ಶ್ರೀ ಜಿ ರಾಮಸ್ವಾಮಯ್ಯನವರ ಕುಮಾರ ಶ್ರೀ ಆರ್ ವೆಂಕಟರಾಮಯ್ಯನವರು ತಮ್ಮ ಜ್ಯೇಷ್ಠ ಪುತ್ರಿ ಸೌ ಯಶೋದಾರವರನ್ನು ಬೆಂಗಳೂರಿನ ಶ್ರೀ ಎ ನಾರಾಯಣಯ್ಯನವರ ಕುಮಾರ ಶ್ರೀ ಎ ಸುಬ್ಬರಾಯರಿಗೆ ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಸಂಗೀತ ಕಲಾಭಿವರ್ಧಿನೀ ಸಭೆಯ ವಾರ್ಷಿಕೋತ್ಸವ

ನಗರದಲ್ಲಿರುವ ಸಂಗೀತ ಕಲಾಭಿವರ್ಧಿನೀ ಸಭೆಯ ತೃತೀಯ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಮಂದಿರದಲ್ಲಿ ನೆರವೇರುವುದು ಅದೇ ಸಂದರ್ಭದಲ್ಲಿ ಶ್ರೀ ತ್ಯಾಗರಾಜರು ಮತ್ತು ಪುರಂದರದಾಸರ ಆರಾಧನೆಗಳನ್ನು ನಡೆಸಲಾಗುವುದು ಮಹಾರಾಜರ ಹುಜೂರು ಕಾರ್ಯದರ್ಶಿ ಶ್ರೀ ಜಿ ಬಿ ಮಲ್ಲಾರಾಧ್ಯರು ಅಧ್ಯಕ್ಷತೆ ವಹಿಸುವರು ಡಾ॥ ಬಿ ಪುಟ್ಟಸ್ವಾಮಯ್ಯ, ಶ್ರೀಮತಿ ಎ ವಿ ಮನೋರಮಾರವರ ಸಂಗೀತವು ನಡೆಯುವುದು

ಮಕ್ಕಳ ಪುಸ್ತಕ ಭಂಡಾರದ ಆರಂಭೋತ್ಸವ

ನಗರದ ರೋಟರಿ ಕ್ಲಬ್ಬಿನ ಸುವರ್ಣ ಮಹೋತ್ಸವ ಸಮಿತಿಯವರು ನಾಳೆ ಬೆಳಗ್ಗೆ ೯ ಗಂಟೆಗೆ ಇಲ್ಲಿನ ಶಿಶು ಕಲ್ಯಾಣ ಕೇಂದ್ರದಲ್ಲಿ ಮಕ್ಕಳ ಪುಸ್ತಕ ಭಂಡಾರವನ್ನು ತೆರೆಯಲಿರುವರು ಅದರ ಆರಂಭೋತ್ಸವವನ್ನು ವಿದ್ಯಾಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್ ರವರು ನೆರವೇರಿಸುವರು

Sarada Tutorial Institute,

Sarada Vilas High School Buildings

MYSORE

Coaching classes for the ensuing S S L C Supplementary examination commence work from 1 3-1956 The classes will *work all the seven days in the* week

K V NARAYAN,
Organiser

ಪಾಟ್ನಾದಲ್ಲಿ ಪ್ರದರ್ಶನ

ಬಿಹಾರ್ ಮತ್ತು ಪಶ್ಚಿಮ ಬಂಗಾಳಗಳ ವಿಲೀನವನ್ನು ಪ್ರತಿಭಟಿಸಲು ನೆನ್ನೆ ಪಾಟ್ನ ನಗರದಲ್ಲಿ ಜನತಾ ಪಕ್ಷದ ಸಾವಿರ ಬೆಂಬಲಿಗರು ಅಲ್ಲಿನ ಶಾಸನ ಸಭಾ ಭವನದ ಮೆಟ್ಟಿಲಿನ ಬಳಿ ಪ್ರದರ್ಶನ ನಡೆಸಿದರು ಅದಕ್ಕೆ ಮುಂಚೆ ಸಭೆ ಮತ್ತು ಮೆರವಣಿಗೆಗಳು ಆದುವು

ಕೋಲಾರ ಜಿಲ್ಲಾ ವಿದ್ಯಾರ್ಥಿಗಳ ಕೂಟ

ಮೈಸೂರಿನ ವಿವಿಧ ಕಾಲೇಜುಗಳಲ್ಲಿರುವ ಕೋಲಾರ ಜಿಲ್ಲೆಯ ವಿದ್ಯಾರ್ಥಿಗಳು ಕಳೆದ ಗುರುವಾರ ಸಂತೋಷ ಕೂಟವೊಂದನ್ನು ಮಹಾರಾಜಾ ಕಾಲೇಜಿನ ಡಾ॥ ರಾಮಕೃಷ್ಣ ರೆಡ್ಡಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಶ್ರೀ ಕೆ ವಿ ಶೇಷಾದ್ರಿಯವರು ಸ್ವಾಗತ ಭಾಷಣ ಮಾಡಿದರು ವಿದ್ಯಾರ್ಥಿಗಳಿಂದ ಸಂಗೀತವಾದ ಮೇಲೆ ಶ್ರೀಗಳಾದ ಚನ್ನಕೇಶವಯ್ಯ, ಚಿಕ್ಕವೆಂಕಟರೆಡ್ಡಿ, ಮುನಿಯಪ್ಪ ಮುಂತಾದವರು ಮಾತನಾಡಿದರು ಪ್ರೊ॥ ಭರತರಾಜಸಿಂಗ್‌ರವರು ವಿದ್ಯಾರ್ಥಿಗಳಿಗೆ ಹಿತೋಕ್ತಿಯನ್ನು ಇತ್ತರು ಅಧ್ಯಕ್ಷರ ಭಾಷಣದನಂತರ ಶ್ರೀ ಕೆ ಎನ್ ಸುಬ್ಬಾರೆಡ್ಡಿಯವರು ವಂದನಾರ್ಪಣೆ ಮಾಡಿದರು

ಗುಂಡ್ಲುಪೇಟೆಯಲ್ಲಿ ಹಿಂದೀ ತರಗತಿಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಇದೇ ಆಗಸ್ಟಿನಲ್ಲಿ ನಡೆಸಲಿರುವ ಹಿಂದೀ ಪರೀಕ್ಷೆಗಳಿಗೆ ಪಾಠಗಳನ್ನು ಬರುವ ೧ ನೇ ತಾರೀಖು ಗುರುವಾರದಿಂದ ಪ್ರಾರಂಭಿಸಲಾಗುತ್ತದೆ ಸರಕಾರೀ ನೌಕರರಿಗೆ ರಾತ್ರಿಯ ವೇಳೆಯಲ್ಲಿ ವಿಶೇಷ ತರಗತಿಯನ್ನೂ, ಮಹಿಳೆಯರಿಗೆ ಮಹಿಳಾ ಸಮಾಜದಲ್ಲಿ ತರಗತಿಯನ್ನೂ ತೆರೆಯಲಾಗುವುದು ಇಷ್ಟವುಳ್ಳವರು ವಿವರಗಳನ್ನು ಪಡೆದು ತರಗತಿಗಳಿಗೆ ಸೇರಿಕೊಳ್ಳಬಹುದು

ಚಿತ್ರ ಮಂದಿರದಲ್ಲಿ ಧೂಮಪಾನಕ್ಕಾಗಿ ದಂಡ

ಪ್ರಭುದೇವಾ ಮತ್ತು ಲಕ್ಷ್ಮಿ ಚಿತ್ರ ಮಂದಿರಗಳಲ್ಲಿ ಬೀರಯ್ಯ ವಗೈರೆ ೭ ಜನರು ಧೂಮಪಾನ ಮಾಡಿದರೆಂದು ಕೃಷ್ಣರಾಜ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ಪ್ರಥಮ ನಗರ ನ್ಯಾಯಾಧೀಶರು ಅವರುಗಳಿಗೆ ತಲಾ ೫ ರೂ ಜುಲ್ಮಾನೆ ವಿಧಿಸಿದರು

Sri Rama Sahaya Sangha,

D Subbiah Road, Mysore

Efficient coaching by able teachers under the guidance of Sri K Krishnaswamy Iyengar Retd D F O for Supplementary S S L C students Classes will commence from 1st March 56 Only a limited number of students will be admitted

JOIN AT ONCE

C N Narayana Rao
Organiser

ಡಾ॥ ನರವಣೆಯವರ ಉಚ್ಚಾಟನೆ

ಬೊಂಬಾಯಿ ಸಂಸ್ಥಾನದ ಪುನರ್ವಿಂಗಡಣೆ ಸಂಬಂಧದಲ್ಲಿ ನಡೆಸಿದ ಚಳುವಳಿಗಾಗಿ ಬೊಂಬಾಯಿನ ಮಾಜಿ ಹಣಕಾಸು ಮಂತ್ರಿ ಡಾ॥ ಟಿ ಆರ್ ನರವಣೆಯವರನ್ನು ೩ ವರ್ಷ ಕಾಲ ಕಾಂಗ್ರೆಸ್ ಸದಸ್ಯರಾಗಿ ತೆಗೆದುಕೊಳ್ಳಬಾರದೆಂದು ಹೈಕಮಾಂಡಿನವರು ನಿರ್ಧರಿಸಿರುತ್ತಾರೆ ಸಂಯುಕ್ತ ಮಹಾರಾಷ್ಟ್ರ ಕಾಂಗ್ರೆಸ್ ಸದಸ್ಯರ ಸಮ್ಮೇಳನದಲ್ಲಿ ಭಾಗವಹಿಸದಂತೆ ಅವರಿಗೆ ಎಚ್ಚರಿಕೆ ಕೊಡಲಾಗಿತ್ತು

ಅಕ್ರಮವಾದ ಅಳತೆ ಮತ್ತು ಬಟ್ಟುಗಳನ್ನು ಉಪಯೋಗಿಸಿದ್ದಕ್ಕೆ ದಂಡ

ಅಶೋಕಪುರದ ಚಿಲ್ಲರೆ ಅಂಗಡಿಯ ಪಕ್ರಮರಿಯಾ ಎಂಬಾತನೂ ಮತ್ತು ಡಿ ಸುಬ್ಬಯ್ಯ ರಸ್ತೆಯ ನರಸಿಂಹ ಸ್ಟೋರ್ಸಿನ ಬಿ ರಾಮಯ್ಯ ಎಂಬುವರೂ ಅಳತೆ ಮತ್ತು ಬಟ್ಟುಗಳನ್ನು ಪರೀಕ್ಷಿಸಿ ಸೀಲು ಮಾಡಿಸದಿದ್ದುದಕ್ಕೂ ಮತ್ತು ಅವುಗಳನ್ನು ಉಪಯೋಗಿಸಿ ವ್ಯಾಪಾರ ಮಾಡಿದ್ದಕ್ಕೂ ಪ್ರಥಮ ನಗರ ನ್ಯಾಯಾಧೀಶರು ಅವರಿಬ್ಬರಿಗೂ ನೆನ್ನೆ ಎರಡು ಅಪರಾಧಗಳಿಗೂ ತಲಾ ೨೫ ರೂ ಜುಲ್ಮಾನೆಯನ್ನು ವಿಧಿಸಿದರು

ಜೇಬುಗಳ್ಳನಿಗೆ ಸಜಾ

ಕಳೆದ ತಿಂಗಳು ೧೫ ನೇ ತಾರೀಖು ಪುಟ್ಟಸ್ವಾಮಿ ಎಂಬುವನು ನಗರದ ಅಪೇರಾ ಚಿತ್ರ ಮಂದಿರದ ಬಳಿ ತಮ್ಮಯ್ಯ ಎಂಬುವರ ಜೇಬಿನಿಂದ ಹಣವನ್ನು ಅಪಹರಿಸಿದ್ದನೆಂದು ಲಷ್ಕರ್ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ಪ್ರಥಮ ನಗರ ನ್ಯಾಯಾಧೀಶರು ಅವನಿಗೆ ೬ ತಿಂಗಳು ಸಜಾವನ್ನು ವಿಧಿಸಿದರು

ಹರಿಕಥೆ

ನಗರದ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಘಂಟೆಗೆ ಶ್ರೀ ಹರಿನಾರಾಯಣದಾಸರಿಂದ ಶ್ರೀ ಕೃಷ್ಣ ಚೈತನ್ಯ ಎಂಬ ಹರಿಕಥೆಯು ನಡೆಯುವುದು

C T C PUBLICATIONS

FOR INTERMEDIATE STUDENTS

ಮೈಸೂರು ಮಾರ್ಕೆಟ್ ಬೆಲೆ

ಮಂಗಳ ಸಾಹಿತ್ಯದ ಪ್ರಶ್ನೋತ್ತರಗಳು	1 8 0
Chemistry (Que & Answers)	3 0 0
Algebra & Calculus (Que & Ans)	2 8 0
Trigonometry & An Geometry	1 10 0
Geometry (Answers with Problems & Theorems)	1 8 0
Metals (a useful guide)	1 2 0
Dynamics with worked examples	0 8 0
Oxidation & Reduction	0 8 0

C T C PUBLICATIONS,
Old Agrahar, Mysore

Stockists — M/s J NANUMAL & SONS

Edited, Printed and Published by A R Nagarajan at Sadhvi Press D Subbiah Road, Mysore

ಎ. ಸಿ. ಜಿ. ಉಪಯೋಗಕ್ಕೆ ಬಾರದೆಂದು ಸಿದ್ಧಾಂತವಾಗಿಲ್ಲ

ರಾಷ್ಟ್ರಾಧ್ಯಕ್ಷರಿಗೆ ಬ್ರಿಟಿಷ್ ವೈದ್ಯರ ಮನವಿ

...ಕ್ಷಯ ರೋಗ ತಡೆಯಲು ಸಾಮೂಹಿಕ ಬಿ ಸಿ ಜಿ ವ್ಯಾಕ್ಸಿನೇಷನ್ ಪ್ರಯೋಗದ ವಿಷಯವಾಗಿ ತಮ್ಮ ಅಭಿಪ್ರಾಯವನ್ನು ಜಾಗರೂಕತೆಯಿಂದ ಪರಿಶೀಲಿಸುವಂತೆ ಬ್ರಿಟನ್ನಿನ ೭೦ ವೈದ್ಯರು ರಾಷ್ಟ್ರಾಧ್ಯಕ್ಷರಿಗೂ, ಪಾರ್ಲಿಮೆಂಟ್ ಸದಸ್ಯರಿಗೂ ಮನವಿ ಮಾಡಿಕೊಂಡಿದ್ದಾರೆ ಬಿ ಸಿ ಜಿ ಇನಾಕ್ಯುಲೇಷನ್ ಪ್ರಯೋಜನದ ಬಗ್ಗೆ ಬಹಳ ಸ್ವಲ್ಪವೇ ಪರಿಜ್ಞಾನವಿರುವುದರಿಂದ ಅದನ್ನು ಭಾರತದಲ್ಲಿ ಜಾರಿಗೆ ತರಲಾಗಿರುವುದೂ, ಈ ಬಗ್ಗೆ ವೈಜ್ಞಾನಿಕ ಪರೀಕ್ಷೆ ನಡೆದಿಲ್ಲವೆಂದೂ, ವ್ಯಾಕ್ಸಿನೇಷನ್ನಿನಿಂದ ಕ್ಷಯ ರೋಗ ತಡೆಯಲ್ಪಟ್ಟಿಲ್ಲವೆಂದೂ, ಬಿ ಸಿ ಜಿ ಇಂಜೆಕ್ಷನ್ನಿನಿಂದ ಆರೋಗ್ಯಕ್ಕೆ ಕೆಡಕಾಗಿ, ಮರಣ ಸಂಭವಿಸಬಹುದಾಗಿರುವುದೆಂದೂ ವೈದ್ಯರು ತಿಳಿಸಿರುವರು

ರಾಮಕೃಷ್ಣ ವಿದ್ಯಾಶಾಲಾ ಸಾಹಿತ್ಯ ಸಂಘದ ಆರಂಭ ಭಾಷಣ

ರಾಜಧಾನಿಯ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಸಾಹಿತ್ಯ ಸಂಘದ ಆರಂಭ ಭಾಷಣವನ್ನು ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಸ್ ವಿ ಪರಮೇಶ್ವರ ಭಟ್ಟರು ನೆನ್ನೆ ನೆರವೇರಿಸಿದರು ಅವರು ಪಂಪ ಭಾರತದ ಹಲವು ಪದ್ಯಗಳನ್ನು ಓದಿ ಕರ್ಣನ ಉದಾತ್ತ ಗುಣಗಳನ್ನು ವಿವರಿಸಿದರು ಕರ್ಣನ ಸತ್ಯ, ತ್ಯಾಗ, ಅಭಿಮಾನ ಮೊದಲಾದ ಗುಣಗಳನ್ನು ವಿದ್ಯಾರ್ಥಿಗಳು ಕಲಿಯಬೇಕೆಂದು ಹೇಳಿದರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಸ್ ಎಂ ಉತ್ತಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುವುವು ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 19..

SREE GANESH TALKIES

From 25 2 56 For 3 Days

LAUGHING ANNE

[In Technicolor]

Featuring — Margaret Lockwood Wendel Corey, Forrest Tucker and Ronald Shiner

A Gripping Romantic Action Picture

Sri Raghavendra Tutorial Institute,

[Estd 1947]

COACHING CLASSES FOR S S L C Sup & Regular (I S passed) 4th or 5th form failed girls can also appear

MADRAS MATRIC For students L S passed or not

HINDI Class Examinations also

Our previous results English 80 per cent, Ele Math 91 per cent, Opt Math 84 per cent, Opt Hist 98 per cent, Ele Science 81 per cent

(Open for inspection)

Consulting hours 32 East Cross, Ashoka Road 3 P M to 10 P M
8th Cross St Mary Road, N R Mohalla 7-30 A M to 12 P M

ರಣಜಿತ್ ★ 24-2-56 ರಿಂದ ಅಮೋಘ ಪ್ರಾರಂಭ

ಹೇಮುಗುಪ್ತರವರ, ಛಿನವಾದ ತತ್ವ ಮತ್ತು ನವ್ಯ ರೀತಿಯ ನಿರೂಪಣೆಯಿಂದ ಕೂಡಿದ ಹಿಂದಿ ಚಿತ್ರ

ಟಕ್‌ಸಾಲ್ ★ TAKSAAL

(ಟಂಕಶಾಲೆ)

ಭೂಮಿಕೆ — ನಿರೂಪರಾಯ್, ಬಾಲರಾಜ್ ಸಹಾನಿ, ಸ್ಮೃತಿಬಿಸ್ವಾಸ್, ರಾಧಾಕಿಷನ್ ಮತ್ತು ಓಂಪ್ರಕಾಶ್ ಕುಮಾರ್ ಸಂಗೀತ :- ರೋಷನ್

ರಾಜಕಮಲ್ ಟಾಕೀಸ್ ★ 25—2—56 ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು

ನ್ಯಾಷನಲ್ ಪ್ರೊಡಕ್ಷನ್ಸ್‌ರವರ ಹಾಸ್ಯಮಯ ತಮಿಳು ಚಿತ್ರ

ಶಿವಾಜಿ ಗಣೇಶನ್, ಪದ್ಮಿನಿ, ರಾಜಸುಲೋಚನ, ಎಸ್ ಎಸ್ ರಾಜೇಂದ್ರನ್, ಎ ಎಸ್ ಕೃಷ್ಣನ್, ಟಿ ಎ ಮಧುರಂ ಮುಂತಾದವರು ಪಾತ್ರವಹಿಸಿರುವ

★ **ರಾ ಜಾ ರಾ ಣಿ** ★

ಕಥೆ ಮತ್ತು ಸಂಭಾಷಣೆ — ಮನೋಹರ ಮತ್ತು ಪರಾಶಕ್ತಿ ಖ್ಯಾತಿ ಮೂ. ಕರುಣಾನಿಧಿ

ವಿಶೇಷ ಆಕರ್ಷಣೆ : ಸಾಕ್ರೆಟೀಸ್ ಮತ್ತು ಚೋಳ ರಾಜನ ನಾಟಕ ದೃಶ್ಯವನ್ನು ನೋಡಲು ಮರೆಯಬೇಡಿ

ದರ 2—0—0, 1—10—0, 1—6—0, 0—14—0, 0—8—0, 0—5—0 [ಶ್ರೀ ರಾಘವೇಂದ್ರ ರಿಲೀಸ್

ಎಲ್ಲಾ ಫ್ರೀ ಮತ್ತು ಕಾಂಪ್ಲಿಮೆಂಟರಿ ಪಾಸುಗಳನ್ನು ನಾಲ್ಕು ವಾರ ಮಟ್ಟಿಗೆ ಮೊಟಕುಗೊಳಿಸಿದೆ

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಚಿಕೆ ೧೯] SADHVI : SUNDAY 26-2-1956 ಮೈಸೂರು ಭಾನುವಾರ : …-…-೧೯೫೬ [ಸಂಪುಟ : …

ಇಂದಿನ ಪತ್ರಿಕೆ ೬ ಕಾಸು

ಲಗ್ನದ ಜವಳಿ

ಗೌಣ ಸಿಲ್ಕ್ ಸೀರೆಗಳು

ಧರ್ಮಾವರಂ, ಪೂನಾ, ಬನಾರಸ್, ಕಾಂಜೀವರಂ

ರೇಷ್ಮೆ ಮತ್ತು ನೂಲಿನ ಸೀರೆಗಳು

ಬಂದಿವೆ ಇಂದೇ ಭೇಟಿ ಕೊಡಿ

M.V. ಭೋಜಯ್ಯ

ಬಿ. ಎ., ಅಂಡ್ ಬ್ರದರ್ಸ್,

ಇಂಡಿಯನ್ ಬ್ಯಾಂಕ್ ಎದುರು,

ಮೈಸೂರು : ಫೋನ್ 446

ಬಳ್ಳಾರಿ ಜಿಲ್ಲೆಯನ್ನು ಮೈಸೂರಿನಲ್ಲೇ ಉಳಿಸಲು ನಿರ್ಧಾರ

ಕೇರಳ-ಮೈಸೂರುಗಳ ಐಕ್ಯದ ಬಗ್ಗೆ ಮಾತುಕತೆ

ಕಾಂಗ್ರೆಸ್ ಕಾರ್ಯದರ್ಶಿ ಮಾಧವನ್ ನಾಯರ್‌ರವರ ವಿವರಣೆ

ಮೈಸೂರು ೨೫

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಕೆ. ಪಿ. ಮಾಧವನ್ ನಾಯರ್‌ರವರು ಮೊನ್ನೆ ಸಂಜೆ ನಗರ… ನಿನ್ನೆ ರಾಜಪ್ರಮುಖರನ್ನು ಸಂದ… ಅವರು ಪ್ರದೇಶ ಕಾಂಗ್ರೆಸ್ ಅಧ್ಯ… ಶ್ರೀ ಎಸ್. ಚನ್ನಯ್ಯ ಮತ್ತು ಕೆಲವು ಪಾ… ಸದಸ್ಯ ಉದಯಭಾನುರವರುಗಳೊ… ಮೈಸೂರು ಕೇರಳಗಳ ಐಕ್ಯದ ವಿಷಯವಾ… ಪ್ರಸ್ತಾಪ ಮಾಡಿದರು. ಪತ್ರಿಕಾ ಪ್ರತಿನಿಧಿಗ… ತನೆ ಮಾತನಾಡುತ್ತಾ—ತಮಿಳುನಾಡು, ಮೈ… ಮತ್ತು ಕೇರಳಗಳು ಸೇರಿ ತ್ರಿಭಾಷಾ ಸಂ… ಸ್ಥೆ ರಚನೆಯು ಸಾಧ್ಯವಿಲ್ಲವೆಂದೂ, ಕೇರಳ… ಐಕ್ಯದಿಂದ ಮೈಸೂರಿಗೇನೂ ನಷ್ಟ… ವಿಲ್ಲವೆಂದೂ, ಕೇರಳದಲ್ಲಿ ಕಮ್ಯೂನಿ… ಪ್ರಾಬಲ್ಯ ಹೆಚ್ಚಾಗಿಲ್ಲವೆಂದೂ ತಿಳಿಸಿದರು… ಮೈಸೂರುಗಳ ಐಕ್ಯದ ಮಾತುಕತೆಗೆ ಹ… ನವಿಲ್ಲವೆಂದೂ ಅವರು ಹೇಳಿದರು… ನಾಯರ್‌ರವರು ನಿನ್ನೆ ಬೆಂಗಳೂರಿನಲ್ಲಿ ಮು… ಮಂತ್ರಿ ಶ್ರೀ ಹನುಮಂತಯ್ಯನವರೊಡನೆ ದೀ… ಸಂಭಾಷಿಸಿದರು. ಇಂದು ಅವರು ದೆ… ಪ್ರಯಾಣ ಮಾಡಿ, ಮೈಸೂರಿಗೆ ವರ… ಮಾಡುವರು.

… ಸಿ. ದೇವರಾಜ ಅರಸಿನವರ ನಿಧನ

… ದ ಪ್ರಮುಖ ನಿವಾಸಿಗಳೂ, ಅನೇಕ ಸಾ… ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದವರೂ ಆದ … ಎಸ್. ದೇವರಾಜ ಅರಸಿನವರು ನಿನ್ನೆ … ತಮ್ಮ ಗೃಹದಲ್ಲಿ ನಿಧನ ಹೊಂದಿದರೆಂದು … ವಿಷಾದಿಸುತ್ತೇವೆ. ಅವರು ಪ್ರಜಾ ಪ್ರ… ಸಭೆ, ಸೆನೆಟ್ ಮತ್ತು ಇತರ ನಾನಾ ಸಂ… ಗಳಲ್ಲಿ ಕೆಲಸ ಮಾಡಿದ್ದರು. ಹಲವು ಕಾಲ ನಗ… ಸಭೆಯ ಉಪಾಧ್ಯಕ್ಷರಾಗಿಯೂ ಇದ್ದರು. … ಮಹಾರಾಜರೊಡನೆ ಯೂರೋಪು ಪ್ರವಾಸ … ದ್ದರು. ಮುಮ್ಮಡಿ ಕೃಷ್ಣರಾಜ ಒಡೆ… ಜಯಂತಿ ಸ್ಥಾಯಿ ಸಮಿತಿ ಕಾರ್ಯದ… ರಾಗಿದ್ದರು. ಅವರಿಗೆ ಪತ್ನಿಯೂ, ಒಬ್ಬರೇ … ಇರುವರು. ಮೃತರ ಆತ್ಮಕ್ಕೆ ಶಾಂತಿ … ಬಂಧುಗಳಿಗೆ ಪ್ರತ್ಯಪೂರ್ವಕ ಅನುತಾಪ … ಸೂಚಿಸುತ್ತೇವೆ.

ಮೈಸೂರು ಬ್ಯಾಂಕಿನ ರಾಷ್ಟ್ರೀಕರಣ ?

… ಸರ್ಕಾರಗಳಿಂದ ಪೋಷಿತವಾಗಿರು… ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಲು … ಸರ್ಕಾರದವರು ಆಲೋಚಿಸುತ್ತಿರುವರೆಂ… ವರದಿಯಾಗಿದೆ. ಮೈಸೂರು, ಹೈದರಾಬಾ… ಪಟಿಯಾಲಾ ಮುಂತಾದ ಬ್ಯಾಂಕುಗಳು ಈಗ … ಬೆಂಬಲದಿಂದ ನಡೆಯುತ್ತಿವೆ. ರಿಸ… ಮತ್ತು ಇಂಪೀರಿಯಲ್ ಬ್ಯಾಂಕುಗಳ … ಕರಣವಾದಮೇಲೆ ಇತರ ರಾಜ್ಯ ಸ್ಟೇ… ಬ್ಯಾಂಕುಗಳಿಗೆ ಅವಕಾಶವಿಲ್ಲವೆಂದು ಹೇಳ…

ಪರಕಾಲ ಮಠದ ಕಳಶದ ಕಳ್ಳರ ಬಂಧನ

ಮೈಸೂರು ೨೫

ಇತ್ತೀಚೆಗೆ ಪರಕಾಲ ಮಠದ ಚಿನ್ನದ ಕಳಶವೊಂದು ಕಳುವಾದುದರ ಸಂಬಂಧದಲ್ಲಿ ನಗರದಲ್ಲಿ ಕ್ರೈಂ ಬ್ರಾಂಚ್ ಪೋಲೀಸರು ಸೀಲಿಮ್ಮ ನ ರಾಜಮಾಣಿಕ್ಯಂ ಮತ್ತು ಕೋಯಮತ್ತೂರಿನ ರಾಮಸ್ವಾಮಿ ಎಂಬ ಇಬ್ಬರು ಕಳ್ಳರನ್ನು ಬಂಧಿಸಿದ್ದಾರೆ. ರಾಜಮಾಣಿಕ್ಯನಿಗೆ ನಾಗಪಟ್ಟಿಯೇ ಇದೇ ರೀತಿಯ ಕಳುವಿಗಾಗಿ … ಬಾರಿ ಶಿಕ್ಷೆಯಾಗಿತ್ತು. ಈತನು ಶ್ರೀರಂಗಪಟ್ಟಣದ ದೇವಾಲಯದ ತೇರಿನ ಕಳಶವನ್ನು ಕದಿಯಲು ಕೆಲವು ದಿನಗಳ ಹಿಂದೆ ಯತ್ನಿಸಿದಾಗ ಸಿಕ್ಕಿಬಿದ್ದನೆಂದೂ ಅನಂತರ ಅವನ ಬಳಿ ಸತ್ಯನಾರಾಯಣ ದೇವಸ್ಥಾನ ಮತ್ತು ಪರಕಾಲಮಠದ ಕಳುವು ಸಾಮಾನುಗಳು ದೊರೆತುವೆಂದೂ ತಿಳಿದುಬಂದಿದೆ. ಮಠದ ಕಳಶದಿಂದ ಕರಗಿಸಿ ಅವನು ಮಾರಾಟ ಮಾಡಿದ್ದ ಚಿನ್ನವನ್ನು ಸಹ ವಶಪಡಿಸಿಕೊಳ್ಳಲಾಗಿದೆಯೆಂದು ಹೇಳಲಾಗಿದೆ. ತನಿಖೆ ಕ್ರಮ ಜರುಗುತ್ತಿದೆ.

ಬಳ್ಳಾರಿ ತಾಲ್ಲೂಕುಗಳು ಮೈಸೂರಿನಲ್ಲೇ ಉಳಿಯುವುವು

ಕೇಂದ್ರ ಸರ್ಕಾರದ ನಿರ್ಧಾರ

ಸಂಸ್ಥಾನ ಪುನರ್ ರಚನಾ ಸಮಿತಿಯವರು ಶಿಫಾರಸು ಮಾಡಿದಂತೆ ಬಳ್ಳಾರಿ, ಸಿರಗುಪ್ಪ, ಹೊಸಪೇಟೆ ತಾಲ್ಲೂಕುಗಳು ಮತ್ತು ಮಲ್ಲಾಪುರ ಸಬ್ ತಾಲ್ಲೂಕನ್ನು ಆಂಧ್ರಕ್ಕೆ ಸೇರಿಸಬೇಕೆಂಬ ಸಲಹೆಯನ್ನು ಕೇಂದ್ರ ಸರ್ಕಾರದವರು ಅಂಗೀಕರಿಸದೆ, ಅವುಗಳು ನೂತನ ವ್ಯವಸ್ಥೆಯ ಮೈಸೂರು ಸಂಸ್ಥಾನದಲ್ಲೇ ಉಳಿಯಬೇಕೆಂದು ನಿರ್ಧರಿಸಿರುವರೆಂದು ವರದಿಯಾಗಿದೆ.

ಪೂರ್ವ ಜರ್ಮನಿಯಲ್ಲಿ ರೈಲು ಅಪಘಾತದಿಂದ … ಮರಣ

ಪೂರ್ವ ಜರ್ಮನಿಯ ಬೋರ್ನ್‌ಡಾರ್ಫ್ ಎಂಬಲ್ಲಿ ಗೂಡ್ಸ್ ಮತ್ತು ಎಕ್ಸ್‌ಪ್ರೆಸ್ ರೈಲುಗಳಿಗೆ ನಿನ್ನೆ ಡಿಕ್ಕಿಯಾಗಿ … ಜನ ಪ್ರಯಾಣಿಕರು ಮೃತಪಟ್ಟು … ಮಂದಿಗೆ ಗಾಯವಾಗಿದೆ.

ವಿಮಾನ ಅಪಘಾತದಿಂದ … ಮರಣಗಳು

ಸಿರಿಯದ ವಿಮಾನ ಬಂದರಿಗೆ ಸೇರಿದ ಡಕೋಟಾ ವಿಮಾನವೊಂದು ಮೊನ್ನೆ ಅಲೆಪ್ಪೊ ಬಳಿ ಅಪಘಾತಕ್ಕೀಡಾದ ಪರಿಣಾಮವಾಗಿ … ಮಂದಿ ಪ್ರಯಾಣಿಕರೂ, ವಿಮಾನದ ಚಾಲಕನೂ ಮೃತಪಟ್ಟರು. ಕೆಟ್ಟ ಹವಾದಿಂದ ಅಪಘಾತವಾಯಿತು.

ಚಾಡ್‌ಬೆಟ್‌ನಿಂದ ಪಾಕಿಸ್ತಾನಿ ಸೈನಿಕರ ನಿರ್ಗಮನ

ಕಚ್ ಬಳಿ ಕಂಜರಕೋಟ್ ಪ್ರದೇಶದ ಚಾಡ್‌ಬೆಟ್ ದ್ವೀಪವನ್ನು ಅಕ್ರಮವಾಗಿ ಪ್ರವೇಶಿಸಿ, ಹಳ್ಳಿಗಳನ್ನು ಕೊಳ್ಳೆ ಹೊಡೆದಿದ್ದ ಪಾಕಿಸ್ತಾನಿ ಸೈನಿಕರು ನಿನ್ನೆ ಆ ಪ್ರದೇಶದಲ್ಲಿ ಭಾರತ ಸೈನ್ಯದ ಬಲವಾದ ಕಾವಲು ಪಡೆಯು ಸಂಚರಿಸಲು ಪ್ರಾರಂಭಿಸಿದುದನ್ನು ಕಂಡ ಕೂಡಲೇ ವಾಪಸಾಗಲು ಆರಂಭಿಸಿದರೆಂದು ಅಧಿಕೃತ ವರದಿಗಳು ಬಂದಿವೆ.

ಸಂಸ್ಥಾನದಲ್ಲಿ ನಾರಿನ ಹುರಿ ತಯಾರಿಕೆಗಾಗಿ … ಲಕ್ಷ ರೂ.

ಕೇಂದ್ರ ಸಮಿತಿ ಅಧ್ಯಕ್ಷರ ಹೇಳಿಕೆ

ಮೈಸೂರು ೨೫

ನಿನ್ನೆ ಇಲ್ಲಿ ಕೇಂದ್ರ ಹುರಿ ಸಮಿತಿ ಸಭೆಯು ಆರಂಭವಾಯಿತು. ಅಧ್ಯಕ್ಷ ಶ್ರೀ ನಾರಾಯಣ ಮೆನನ್ನರು ಭಾಷಣ ಮಾಡಿ, ಮೈಸೂರು ಸಂಸ್ಥಾನದಲ್ಲಿ ಹುರಿ ತಯಾರಿಕೆಗೆ ಉತ್ತಮ ಸಾಧನಗಳನ್ನು ಒದಗಿಸಲು ದ್ವಿತೀಯ ಯೋಜನೆಯಲ್ಲಿ … ಲಕ್ಷ ರೂ. ತೆಗೆದಿಡಲಾಗಿದೆಯೆಂದು ತಿಳಿಸಿದರು. ಸಂಸ್ಥಾನದಲ್ಲಿ … ಲಕ್ಷ ಎಕರೆ ಪ್ರದೇಶದಲ್ಲಿ ತೆಂಗಿನ ಫಸಲು ಬೆಳೆಸಲ್ಪಡುತ್ತಿದ್ದು, … ಕೋಟಿ ತೆಂಗಿನಕಾಯಿಗಳು ಪ್ರತಿ ವರ್ಷ ಉತ್ಪತ್ತಿಯಾಗುತ್ತಿರುವುದಾಗಿಯೂ, ಬರುವ … ವರ್ಷಗಳಲ್ಲಿ ಉತ್ಪನ್ನದಿಂದ … ಕೋಟಿ ರೂ. ಹೆಚ್ಚು ವರಮಾನ ಬರುವ ನಿರೀಕ್ಷೆಯಿದೆಯೆಂದೂ ಅವರು ಹೇಳಿದರು. ದೆಹಲಿಯಲ್ಲಿ ನಡೆದ ಅಂತರರಾಷ್ಟ್ರೀಯ ಕೈಗಾರಿಕಾ ಪ್ರದರ್ಶನದ ಪರಿಣಾಮವಾಗಿ ಹೆಚ್ಚು ವ್ಯಾಪಾರದ ಬಗ್ಗೆ ವಿದೇಶಗಳಿಂದ ಕೇಳಿಕೆಗಳು ಬರುತ್ತಿರುವುದಾಗಿ ತಿಳಿಸಿದರು. ಹುರಿ ಕೈಗಾರಿಕೆಗೆ ಮಾರಾಟ ತೆರಿಗೆ ವಿನಾಯಿತಿಯನ್ನು ಕೋರಲಾಗಿದೆಯೆಂದೂ, ಈ ಬಗ್ಗೆ ಪ್ರಾಂತ ಸರ್ಕಾರಗಳಿಗೆ ಶಿಫಾರಸು ಮಾಡುವ ಮುಂಚೆ, ಕೇಂದ್ರ ಸರ್ಕಾರದವರು ಸಮಿತಿಯವರ ವರದಿಯನ್ನು ಕೇಳಿರುವರೆಂದೂ ಅವರು ತಿಳಿಸಿದರು.

ಬಂಗಾಳದೊಡನೆ ಐಕ್ಯಕ್ಕೆ ಬಿಹಾರ್ ಶಾಸನ ಸಭೆಯ ಒಪ್ಪಿಗೆ

ಬಿಹಾರ್ ಮತ್ತು ಪಶ್ಚಿಮ ಬಂಗಾಳಗಳ ಐಕ್ಯದ ಬಗ್ಗೆ ನಿನ್ನೆ ಬಿಹಾರಿನ ಶಾಸನ ಸಭೆಯು ಮುಖ್ಯಮಂತ್ರಿ ಶ್ರೀ ಕೃಷ್ಣಸಿನ್ಹಾರವರಿಂದ ಮಂಡಿತವಾದ ನಿರ್ಣಯವನ್ನು ಭಾರಿ ಬಹುಮತದಿಂದ ಅಂಗೀಕರಿಸಿತು. … ಮಂದಿ ಪರವಾಗಿಯೂ, … ಜನರು ವಿರೋಧವಾಗಿಯೂ ಓಟು ಕೊಟ್ಟರು. ಪ್ರಜಾ ಸಮಾಜವಾದಿ ಮತ್ತು ಜನತಾ ಪಕ್ಷಗಳವರೂ, ಹಲವು ಸ್ವತಂತ್ರರೂ ವಿರೋಧಿಸಿದರು. ಝಾರ್ಖಂಡ್ ಪಕ್ಷದವರು ತಟಸ್ಥರಾಗಿದ್ದರು. ಪ್ರಜಾ ಸಮಾಜವಾದಿ ಪಕ್ಷದ ಬಸವಸಿಂಗ್‌ರವರು ಐಕ್ಯದ ಬಗ್ಗೆ ಜನಾಭಿಪ್ರಾಯ ಪಡೆಯತಕ್ಕದ್ದೆಂದು ಸೂಚಿಸಿದ್ದ ತಿದ್ದುಪಡಿಯು … ಓಟುಗಳಿಂದ ತಿರಸ್ಕೃತವಾಯಿತು.

ಅಕಾಲಿ ಸಿಕ್ಕರಿಗೂ, ಸರ್ಕಾರಕ್ಕೂ ಮಾತುಕತೆ ವಿಫಲ

ಪಂಜಾಬು ಪ್ರಾಂತ ರಚನೆ ವಿಷಯವಾಗಿ ಭಾರತ ಸರ್ಕಾರದ ಪ್ರತಿನಿಧಿಗಳಿಗೂ, ಅಕಾಲಿ ಸಿಕ್ಕರಿಗೂ ನಡೆಯುತ್ತಿದ್ದ ಮಾತುಕತೆಗಳು ನಿನ್ನೆ ವಿಫಲಗೊಂಡುದಾಗಿ ವರದಿಯಾಗಿದೆ. ಸಿಕ್ಕರ ನಾಯಕ ಮಾಸ್ಟರ್ ತಾರಾಸಿಂಗರು ಮಾತನಾಡಿ, ನಿನ್ನೆಯ ಮಾತುಕತೆಗಳಲ್ಲಿ ಯಾವ ಪ್ರಗತಿಯೂ ಸಾಧನೆಯಾಗಲಿಲ್ಲವೆಂದೂ, ತಮಗೆ ನಿರಾಶೆಯಾಗಿದೆಯೆಂದೂ, ಮುಂದೆ ಮಾತುಕತೆ ನಡೆಯುವ ಸಂಭವವಿಲ್ಲವೆಂದೂ ತಿಳಿಸಿರುತ್ತಾರೆ.

ದ್ವಿತೀಯ ಯೋಜನೆಯಲ್ಲಿ … ಲಕ್ಷ ಮಂದಿಗೆ ಉದ್ಯೋಗ

ಸಂಸ್ಥಾನದಲ್ಲಿ … ಕೋಟಿ ರೂ. ಕಾರ್ಯಕ್ರಮ

ಬೆಂಗಳೂರು ೨೫

… ಕೋಟಿ ರೂ. ವಿನ ಸಂಸ್ಥಾನದ ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಪೂರ್ಣವಾಗಿ ಸಾಧಿಸಿದರೆ ಸಣ್ಣ ಕೈಗಾರಿಕೆ, ಗ್ರಾಮ ಮತ್ತು ಗೃಹ ಕೈಗಾರಿಕೆಗಳಲ್ಲಿ … ಲಕ್ಷ ಮಂದಿಗೆ ಉದ್ಯೋಗ ಲಭಿಸುವುದಲ್ಲದೆ …,… ಜನರಿಗೆ ನೇರ ಉದ್ಯೋಗವು ಲಭ್ಯವಾಗುವುದೆಂದು ತಿಳಿಯಬಂದಿದೆ. ದ್ವಿತೀಯ ಯೋಜನೆ ವಿವರಗಳನ್ನು ಈ ವಾರದಲ್ಲಿ ಶಾಸನಸಭೆಯು ಚರ್ಚಿಸಲಿದೆ. … ಲಕ್ಷ ರೂ. ವೆಚ್ಚದಿಂದ ಕೈಗಾರಿಕಾ ಎಸ್ಟೇಟನ್ನು ಸ್ಥಾಪಿಸಲೂ ಆಲೋಚಿಸಲಾಗಿದೆ. ಅದರಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಅವಕಾಶ ಮತ್ತು ಸಲಕರಣೆಗಳನ್ನು ಒದಗಿಸಲಾಗುವುದು. ಮುಖ್ಯವಾಗಿ ವ್ಯವಸಾಯ, ನೀರಾವರಿ ಮತ್ತು ವಿದ್ಯುಚ್ಛಕ್ತಿ ತಯಾರಿಕೆಗಳಿಗೆ ಗಮನವೀಯಲಾಗಿದೆ. … ಕೋಟಿ ರೂ. ಕೃಷಿ ವ್ಯವಸಾಯ ಮತ್ತು ಸಾಮೂಹಿಕ ಯೋಜನೆಗೆ …-… ಕೋಟಿ, ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ …-… ಕೋಟಿ, ಕೈಗಾರಿಕೆಗೆ …-… ಕೋಟಿ, ಸಂಚಾರ …-… ಕೋಟಿ, ವಿದ್ಯಾಭ್ಯಾಸಕ್ಕೆ …-… ಕೋಟಿ, ಆರೋಗ್ಯಕ್ಕೆ …-… ಕೋಟಿ; ಗೃಹ ವಸತಿಗೆ …-… ಕೋಟಿ ಸಮಾಜ ಸೇವೆಗೆ … ಕೋಟಿ ಮತ್ತು ಇತರ ಬಾಬುಗಳಿಗೆ ಅರ್ಧ ಕೋಟಿ ರೂ. ಒದಗಿಸಲಾಗುವುದು.

ಶಾಸನಸಭಾಧ್ಯಕ್ಷರನ್ನು ಕೆಳಕ್ಕಿಳಿಸಲು ಪ್ರಯತ್ನ

ಬಂಗಾಳಾ ಶಾಸನಸಭೆಯಲ್ಲಿ ಗೊಂದಲ

ಪಶ್ಚಿಮ ಬಂಗಾಳಾ ಶಾಸನ ಸಭೆಯಲ್ಲಿ … ಗಂಟೆ ಕಾಲ ಅವ್ಯವಸ್ಥೆ ಮತ್ತು ಗೊಂದಲಗಳಾಗಿ ತುಂಬಾ ರಾದ್ಧಾಂತವಾಯಿತು. ಕ್ರೋಧಪೂರಿತವಾದ ವಿರೋಧ ಸದಸ್ಯರು ವೇದಿಕೆಯ ಮೇಲೆ ಹೋಗಿ ಸಭಾಧ್ಯಕ್ಷರು ಆಸನದಿಂದ ಇಳಿಯಬೇಕೆಂದು ಒತ್ತಾಯ ಮಾಡಿದರು. ಅಧ್ಯಕ್ಷರು ಮತ್ತು ಅವರ ದಂಡದ ಸುತ್ತಲೂ ಕಾಂಗ್ರೆಸ್ ಸದಸ್ಯರು ರಕ್ಷಣೆ ಕೊಡುವ ರೀತಿಯಲ್ಲಿ ನಿಂತರು. ಸಭೆಯ ಕಾರ್ಯಕಲಾಪಗಳೇನೂ ನಡೆಯಲಿಲ್ಲ. ಹಿಂದಿನ ದಿನ ವಿರೋಧ ಪಂಗಡದ ಸದಸ್ಯರ ಗೈರುಹಾಜರಿಯಲ್ಲಿ ಗೇಟ್ ಮಸೂದೆಯು ಅಂಗೀಕೃತವಾಗಲಾಗಿ, ಆ ಬಗ್ಗೆ ನಿನ್ನೆ ವಿರೋಧ ಗುಂಪಿನವರು ಆಕ್ಷೇಪಿಸಿದರು.

… ಗಂಟೆ ಸತತ ಸೈಕಲ್ ಸವಾರಿ

ಆರ್ಕಾಟ್ ಜಿಲ್ಲೆಯ ತಿರುಪತ್ತೂರಿನ ಶ್ರೀ ಟಿ. ಕೆ. ಸುಬ್ರಹ್ಮಣ್ಯರವರು ಇಲ್ಲಿನ ಜೀವಣ್ಣರಾಯನಕಟ್ಟೆಯಲ್ಲಿ ನಿನ್ನೆ ಬೆಳಗ್ಗೆ … ಗಂಟೆಯಿಂದ … ಗಂಟೆಯ ಸತತ ಸೈಕಲ್ ಸವಾರಿಯನ್ನು ಆರಂಭಿಸಿದ್ದಾರೆ. ಈ ಅವಧಿಯಲ್ಲಿ … ಗಂಟೆ ವಿಶ್ರಮ ಇಲ್ಲದೆ ಸೈಕಲ್ ಬಿಡುವರು.

ವಾ ರ ಭ ವಿ ಷ್ಯ

೨೫-೩-೫೬ ರಿಂದ ೧-೪-೫೬ ರ ವರೆಗೆ

ಮೇಷ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಸ್ಥಿತಿ ಅತೃಪ್ತಿಕರ ವೃಥಾ ಕಲಹ ವ್ಯಾಪಾರವ್ಯವಹಾರಗಳಲ್ಲಿ ಅತ್ಯಂತ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ

ವೃಷಭ — ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ಮಿಥುನ — ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಕಿರುಕುಳ ಪ್ರಯಾಣದಲ್ಲಿ ತೊಂದರೆ

ಕರ್ಕ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಸಿಂಹ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಖರ್ಚು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ಉದ್ಯೋಗದಲ್ಲಿ ಪ್ರೋತ್ಸಾಹ

ಕನ್ಯಾ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನುಕೂಲ ನೌಕರಿಯಲ್ಲಿ ಪ್ರಗತಿ ವಿದ್ಯಾರ್ಥಿಗಳ ಸಂಭವ

ತುಲಾ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ಉದ್ಯೋಗದಲ್ಲಿ ಪ್ರಗತಿ ಸಾಮಾಜಿಕ ಕ್ಷೇತ್ರದಲ್ಲಿ ಅಭ್ಯುದಯ

ವೃಶ್ಚಿಕ — ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ವಿಗಡಾಯಿಸುವುದು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ಕಿರುಕುಳ ವೃಥಾ ವಿವಾದ

ಧನು — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ನೌಕರಿಯಲ್ಲಿ ಪ್ರಶಂಸೆ

ಮಕರ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಸ್ಥಿತಿ ಅತೃಪ್ತಿಕರ ವೃಥಾ ವೈಮನಸ್ಯ ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ ಉದ್ಯೋಗದಲ್ಲಿ ನಿರುತ್ಸಾಹ

ಕುಂಭ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಉತ್ತಮ ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ನೌಕರಿಯಲ್ಲಿ ಪ್ರಶಂಸೆ

ಮೀನ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸುಧಾರಿಸುವುದು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಉತ್ಸಾಹ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ

೩೦ ನಿಮಿಷಗಳಲ್ಲಿ ಅಮೆರಿಕಕ್ಕೆ ಬರಬಲ್ಲ ರಷ್ಯದ ಅಸ್ತ್ರ

ರಷ್ಯವು ಅತ್ಯಂತ ವೇಗವಾಗಿ ಚಲಿಸಬಲ್ಲ ಮತ್ತು ಅತ್ಯಧಿಕ ನಾಶ ಶಕ್ತಿಯುಳ್ಳ ಅಸ್ತ್ರವೊಂದನ್ನು ಹೊಂದಿರುವುದೆಂದು ಅಮೆರಿಕದ ಸ ೧೦ ಕ ರಕ್ಷಣಾ ಸಲಹಾ ಸಮಿತಿಯ ಸದಸ್ಯರಾದ ಡಬ್ಲ್ಯು ಸ್ಟಿಂಗ್ ಫೆಲೊರವರು ತಿಳಿಸಿರುತ್ತಾರೆ ರಷ್ಯದಿಂದ ಬಿಡಲ್ಪಡುವ ಈ ಅಸ್ತ್ರವು ವಾಷಿಂಗ್ಟನ್ ನಗರಕ್ಕೆ ೩೦ ನಿಮಿಷಗಳಲ್ಲಿಯೇ ತಲಪುವುದೆಂದು ವರದಿಯಾಗಿದೆ ಬಾಸ್ಟನ್ ನಗರವನ್ನೂ ಹಾಗೆ ಆ ಪ್ರದೇಶವನ್ನು ಪೂರ್ಣವಾಗಿ ನಾಶಪಡಿಸಬಲ್ಲ ೧,೫೦೦ ವಿಮಾನಗಳು ರಷ್ಯದ ಬಳಿ ಇವೆಯೆಂದೂ ವರದಿಯಾಗಿದೆ

ಹರಿಕಥಾ ಸಪ್ತಾಹ

ನಗರದ ಲಷ್ಕರ್ ಮೊಹಲ್ಲ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗವಿಠ್ಠಲಸ್ವಾಮಿ ದೇವಸ್ಥಾನದಲ್ಲಿ ಪ್ರತಿ ದಿನ ಸಾಯಂಕಾಲ ೬ ೩೦ ಕ್ಕೆ ಶ್ರೀ ಲಕ್ಷ್ಮಣಾಚಾರ್ಯರವರಿಂದ ಮಾರ್ಚಿ ೩೦ ರವರೆಗೆ ಹರಿಕಥೆ ಏರ್ಪಾಡಾಗಿದೆಯೆಂದು ಈ ಕಾರ್ಯಕ್ರಮವು ಇದೇ ೩೦ ನೇ ತಾರೀಖಿನವರೆಗೆ ನಡೆಯುವುದು ಇವರು ಮಾಡುವ ಹರಿಕಥೆ ಮತ್ತು ಸಂಗೀತ ಕಲೆ ಬಹಳ ಸ್ವಾರಸ್ಯವಾಗಿರುವುದರಿಂದ ದಯವಿಟ್ಟು ಎಲ್ಲರೂ ಬಂದು ಭಾಗವಹಿಸಬೇಕೆಂದು ಕೋರಲಾಗಿದೆ

ಕೊಳ್ಳೆ, ಕಾಟ ತಡೆಗಟ್ಟಬೇಕು

ಸರಸ್ವತಿಪುರದಲ್ಲಿ ಕೊಳ್ಳೆ ಕಾಟ ಬಹಳ ಜಾಸ್ತಿಯಾಗಿರುವುದರಿಂದ ಅಲ್ಲಿನ ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೂ ಮತ್ತು ವಾಸ ಮಾಡುವ ಜನಗಳಿಗೂ ತುಂಬ ತೊಂದರೆಯಾಗಿರುವುದೆಂದೂ ಪುರಸಭೆಯವರು ಇವುಗಳಿಗೆ ಶೀಘ್ರ ಒಂದು ವ್ಯವಸ್ಥೆ ಮಾಡಬೇಕೆಂದು ಕೋರಿರುವರು.

ದನಗಳ ಪ್ರದರ್ಶನ

ಚಾಮರಾಜನಗರ ತಾಲ್ಲೂಕು ವ್ಯವಸಾಯ ಸಂಶೋಧನಾ ಸಂಘದವರು ಚಂದಕವಾಡಿ ಗ್ರಾಮದಲ್ಲಿ ಬರುವ ತಿಂಗಳು ೬ನೇ ತಾರೀಖಿನಿಂದ ೮ರ ವರೆಗೆ ಶ್ರೀ ಲಕ್ಷ್ಮೀದೇವಿ ಜಾತ್ರೆಯ ಸಂದರ್ಭದಲ್ಲಿ ದನಗಳ ಪ್ರದರ್ಶನವನ್ನು ಏರ್ಪಡಿಸಿರುತ್ತಾರೆ ಉತ್ತಮ ರಾಸುಗಳಿಗೆ ನೇ ತಾರೀಕು ಬಹುಮಾನಗಳನ್ನು ಹಂಚಲಾಗುವುದು

ವೆಲ್ಲಾಳ ವಿದ್ಯಾರ್ಥಿಗಳಿಗೆ ಗ್ರಂಥಗಳ ಸಹಾಯ

ಚಿಕ್ಕಗಡಿಯಾರದಲ್ಲಿರುವ ವೆಲ್ಲಾಳ ಸಂಘದವರು ಪುಸ್ತಕ ಸಹಾಯವನ್ನಪೇಕ್ಷಿಸುವ ತಮಿಳು ಮಾಧ್ಯಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಗ್ರಂಥಗಳನ್ನು ಒದಗಿಸುವರು ಅದಕ್ಕಾಗಿ ಇದೇ ೩೧ ನೇ ತಾರೀಖಿನೊಳಗೆ ಸಂಘದ ಅರ್ಜಿಗಳನ್ನು ದೇವರಾಜಾ ಮಾರ್ಕೆಟ್ಟಿನ ಇದ್ದಿ ದೈನಂದಿನವರಲ್ಲಿ ಪಡೆದು ಹಾಕಿಕೊಳ್ಳಬಹುದು

ಭಾರತದ ಮೇಲೆ ಪಾಕಿಸ್ತಾನದ ವಿಮಾನಗಳು

ಕಳೆದ ಹಲವು ವರ್ಷಗಳಲ್ಲಿ ಪಾಕಿಸ್ತಾನದ ವಿಮಾನಗಳು ಭಾರತದ ಗಡಿಯನ್ನು ಅನೇಕ ಸಾರಿ ಅತಿಕ್ರಮಿಸಿ ಹಾರಿದ ನಿದರ್ಶನಗಳಿವೆಯೆಂದೂ ಇದು ಅಕಸ್ಮಿಕವೆಂದು ಭಾವಿಸಬಹುದಾದರೂ ಇಂತಹ ಘಟನೆಗಳು ಪದೇಪದೇ ನಡೆದರೆ ಅವನ್ನು ಅದೇ ರೀತಿ ಪರಿಗಣಿಸಲು ಸಾಧ್ಯವಾಗುವುದಿಲ್ಲವೆಂದೂ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ

ವಾಹನ ಸಂಚಾರದಿಂದ ಜನರಿಗೆ ತೊಂದರೆ

ಅಶೋಕಾ ರಸ್ತೆಯ ಪಶ್ಚಿಮ ಕ್ರಾಸು ೨ನೇ ಲೇನ್ ರಸ್ತೆಯಲ್ಲಿ ಬೇಸಿಗೆಯಲ್ಲಿ ಕಾರುಗಳು ಲಾರಿ, ಬಸ್ಸು ಎತ್ತಿನ ಗಾಡಿಗಳು ಎಡೆಬಿಡದೆ ತಿರುಗಾಡುವುದರಿಂದ ಅಕ್ಕಪಕ್ಕದ ಮನೆಗಳ ಒಳಗೂ ಹೊರಗೂ ಬಿದ್ದ ಧೂಳಿನ ಕಣ್ಮಲದಿಂದ ಕೂಡಿ ಅನಾರೋಗ್ಯಕ್ಕೆ ಕಾರಣವಾಗಿರುತ್ತದೆ ಮನೆಗಳನ್ನು ನೋಡಲು ತುಂಬಾ ಅಸಹ್ಯವಾಗಿ ಕಾಣುತ್ತದೆ ಮಳೆಗಾಲದಲ್ಲಿ ರಸ್ತೆ ಎದೆಯಿಂದ ತುಂಬಾ ರಾಡಿಯಾಗಿರುತ್ತದೆ ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯದಲ್ಲಿ ಗಮನ ಕೊಡಬೇಕು ಎಂದು ನೆಮಲ್ಲ ನಿವಾಸಿಗಳು ಅರಿಕೆ ಮಾಡಿಕೊಂಡಿರುತ್ತಾರೆ

ನಾಟಕ ಕಲಾವಿದರ ಸಂಘ

ನಾಟಕ ಕಲಾವಿದರ ಸಂಘಕ್ಕೆ ಕೆಳಗೆ ಕಂಡವರು ನೂತನ ಅಧಿಕಾರಿಗಳಾಗಿ ಚುನಾಯಿತರಾಗಿರುತ್ತಾರೆ ಶ್ರೀ ಪಿ ಸುಬ್ರಹ್ಮಣ್ಯಂ, ಡೈರೆಕ್ಟರ್ ಶ್ರೀ ಪಿ ಎನ್ ಶಿವಶಂಕರ್ ಕಾರ್ಯದರ್ಶಿ ಶ್ರೀ ಎಂ ಎಲ್ ಸ್ವಾಮಿ ಕೋಶಾಧ್ಯಕ್ಷರು ಶ್ರೀಯುತ ರುದ್ರಪ್ಪ ವಿ ಪುಟ್ಟಲಿಂಗಪ್ಪ ಕೆ ಎಲ್ ಪುಟ್ಟಸ್ವಾಮಿ ಎಸ್ ಕೆ ಮೂರ್ತಿ ಮತ್ತು ಎಂ ಎನ್ ನಾಗರಾಜ್ ಇವರು ಕಾರ್ಯಕಾರೀ ಸಮಿತಿಯ ಸದಸ್ಯರುಗಳು

ಸಾಹಿತ್ಯ ಚಳುವಳಿಯ ಮುಕ್ತಾಯ ಸಮಾರಂಭ

ಸೇಂಟ್ ಫಿಲೋಮಿನಾ ಕಾಲೇಜಿನ ಸಮಾಜಸೇವಾ ಸಂಸ್ಥೆಯ ವಿದ್ಯಾರ್ಥಿಗಳ ತಂಡದವರು ಕಳೆದ ೧೭ನೇ ತಾರೀಕು ಗುಡಿಸುವನಹಳ್ಳಿ ಗ್ರಾಮದಲ್ಲಿ ಸಾಹಿತ್ಯ ಚಳುವಳಿಯ ಮುಕ್ತಾಯ ಸಮಾರಂಭವನ್ನು ಏರ್ಪಡಿಸಿದ್ದರು ಪ್ರೊಫೆಸರ್ ಶ್ರೀ ಎ ಕೃಷ್ಣಮೂರ್ತಿರಾಯರು ಭಾಷಣ ಮಾಡಿದರು ಫಾದರ್ ಅಡಿಯೋರವರು ಅಧ್ಯಕ್ಷತೆ ವಹಿಸಿದರು ಕೆ ಎಸ್ ಕೃಷ್ಣಮೂರ್ತಿಯವರಿಂದ ಸ್ವಾಗತ ಮತ್ತು ಶ್ರೀ ಆರ್ ಎಲ್ ಸತ್ಯನಾರಾಯಣರವರಿಂದ ವರದಿಗಳು ಮತ್ತು ಶ್ರೀ ಹೆಚ್ ಎಸ್ ಸೋಮನಾಥರವರು ವಂದನ ಸಮರ್ಪಣ ಮಾಡಿದರು

ಕೊಚ್ಚಿಯಲ್ಲಿ ಸಬ್‌ಮೇರಿನ್ ನೌಕಾ ಶಿಕ್ಷಣ ಶಾಲೆ

ಕೊಚ್ಚಿಯಲ್ಲಿ ಸದ್ಯದಲ್ಲೇ ಸಬ್‌ಮೇರಿನ್ ನ್ನು ನಾಶಪಡಿಸಬಲ್ಲ ಅಸ್ತ್ರ ಪ್ರಯೋಗದ ಶಾಲೆಯೊಂದನ್ನು ತೆರೆಯಲಾಗುತ್ತಿದೆಂದು ... ರಕ್ಷಣಾ ವ್ಯವಸ್ಥಾ ಮಂತ್ರಿ ... ತ್ಯಾಗಿಯವರು ತಿಳಿಸಿರುತ್ತಾರೆ

ಲಂಚ ನಿರೋಧದ ಬಗ್ಗೆ ಪ್ರಶ್ನೋತ್ತರ

ಹಿಂದಿನ ಶಾಸನ ಸಭೆಯಲ್ಲಿ ನಡೆದ ... ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪ ... ಪ್ರಶ್ನೆಗಳಿಗೆ ಉತ್ತರವಿತ್ತು ... ರೋಧ ಇಲಾಖೆಯ ಸ್ಥಾಪನೆಯಾದ ... ಇಲ್ಲಿಯವರೆಗೆ ತಪ್ಪು ಮಾಡಿದ ... ಜನ ... ಡ್ ಅಧಿಕಾರಿಗಳನ್ನು ಇಲಾಖೆಯವರು ... ಚ್ಚಿರುವರೆಂದು ತಿಳಿಸಿದರು ಇಬ್ಬರು ಅಧಿಕಾರಿಗಳನ್ನು ವಜಾ ಮಾಡಿ, ಮತ್ತಿಬ್ಬರನ್ನು ... ಮಾಡಲಾಯಿತೆಂದೂ ತಿಳಿಸಲಾಯಿತು ... ವಿದ್ಯಮಾನಗಳಲ್ಲಿ ಅಧಿಕಾರಿಗಳ ಪರ ವಾದಿ... ವಕೀಲರು ಹಾಜರಾಗುವ ಬಗ್ಗೆ ... ಮಾಡುವ ಅವಶ್ಯಕವಿಲ್ಲವೆಂದು ಸಚಿವರು ... ರು ಐ ಎ ಎಸ್ ಅಧಿಕಾರಿಗಳ ಮೇಲು ... ಲ ಜಯವ್ಯಾಪ್ತಿಯಿರುವುದಾಗಿಯೂ ಅಧಿ... ಗಳ ಬಗ್ಗೆ ಕೈಗೊಳ್ಳಲಾದ ಕ್ರಮದ ವಿರುದ್ಧ ... ಹೈ ಕೋರ್ಟಿನಲ್ಲಿ, ಸುಪ್ರೀಂ ಕೋರ್ಟಿ... ಅವರು ಹೋಗಬಹುದೆಂದೂ ತಿಳಿಸಲಾಯಿ...

ಬೆಂಗಳೂರು ರೇಡಿಯೊ ಶಾಲೆ ಕಾರ್ಯಕ್ರಮ

[illegible]

ಹರಿಕಥೆ

ಹಳೇ ಸಂತೆಪೇಟೆ ಐವಲಕ್ಕಿ ವೆಂಕಟಸ್ವಾ... ರ ಬಳಿ ಶ್ರೀ ಎ ನಂಜಪ್ಪನವರ ಅಧ್ಯಕ್ಷತೆ... ಲ್ಲಿ ಕಳೆದ ಸೋಮವಾರದಿಂದ ಪ್ರತಿದಿನ ... ೭ ೩೦ ಘಂಟೆಗೆ ಶ್ರೀ ಆರ್ ಎಸ್ ... ದ ಸರಿಂದ ಮಹಾಭಾರತ ಕಥೆ ನಡೆಯು... ಸರ್ವರೂ ದಯಮಾಡಿಸಬೇಕಾಗಿ ಕೋ... ಗಿದೆ

ENJOY THE
RADIO WEEK PROGRAMMES
BEST ON A
NATIONAL ECKO RADIO
Designed For Better Listening
★
Author sed Distributors
THE INTERNATIONAL AGENCY,
Radio & Sound Engineers
Old Bank Buildings, Mysore

S. S. L. C. Classes for the Suppl Examination
7 30 A M to 11 30 A M
5 Periods a day
★ Separate classes for Kan & Eng Media
★ Separate classes for Girls
★ Evening classes for School going and Employed persons
CITY TUTORIAL COLLEGE
Old Agrahar Mysore

The National Institute Of Engineering,
MYSORE
NOTIFICATION
Ref Notification No 4440 13 dated 23rd January 1956 from the Director of Technical Education in Mysore Bangalore re admission to First year Diploma in Civil Engineering
The last date for receiving the applications for admission to the First Year Diploma Class is extended up to 29th February 1956
S Ramaswamy,
Principal

The Model Tutorial Instit...
D Banumiah s High School Bu...
MYSORE
Coaching Class for the S S L C Supplementary Exam... to be held in June 19.. starts working as usual from March 1956 Admissions are received during office hours all working days. Total ... for the course is Rs 18 Wor... ing hours 7-30 to 10-30 A ...
S Seshagiri...
Organ...

Sri Raghavendra Tutorial Institute,
[Estd 1947]
COACHING CLASSES FOR S S L C Sup & Regula (L S passed) 4th or 5th form failed girls can also apply
MADRAS MATRIC For students L S passed or not
HINDI Class Examinations also
Our previous results English 80 per cent Ele Math 91 per cent Opt Math 84 per cent Opt Hist 98 per cent, Gle Science 81 per cent
(Open for inspection)
Consulting hours 32 East Cross, Asoka Road 4 P M to 10 P M
8th Cross St Mary Road, N R Mohalla 7-30 A M to 12 P M

NATIONAL LEAGUE
Ananthalaya Buildings, Mysore
Brilliant Coaching for S. S. L. C. Students
Separate Classes for Supplementary and Regular Students
Special Attention for Primary School Teachers
Separate Section for Ladies
COMMENCE VERY SHORTLY
7 30 to 10 A M and 5 30 to 8 30 P M

Edited, Printed and Pub... by A R Nagarajan at Sadhvi Pr... D Subbiah Road Mysore

ಚಂದಾದರ

ಏಜಂಟರುಗಳ ಮೂಲಕ
ಒಂದಕ್ಕೆ ಮೂರು ಕಾಸು

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು



ಲಗ್ನದ ಜವಳಿ
ಗೌರಿ ಸಿಲ್ಕ್ ಸೀರೆಗಳು
ಧರ್ಮಾವರಂ, ಕಂಚಿ,
ಆರ್ಣಿ, ಬೆಂಗಳೂರು
ಸೀರೆ ಮತ್ತು ಜರಿಕ ಸೀರೆಗಳು
ಬಂದಿವೆ ಒಂದು ಕ್ಕ ಬೆಲೆ ಕೊಡಿ
M.V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಂಪುಟ ೧೯] SADHVI : MONDAY 27-2-1956 ಮೈಸೂರು ಸೋಮವಾರ : ೨೭-೨-೧೯೫೬ [ಸಂಚಿಕೆ ೧೦೪೪

ಲೋಕಸಭಾಧ್ಯಕ್ಷ ಜಿ. ವಿ. ಮೌಲಂಕರ್‌ರವರ ನಿಧನ

ಚಾಡ್‌ಬೆಟ್ ಮೇಲೆ ಪಾಕಿಸ್ತಾನದ ಅಧಿಕಾರಾಧಿಕಾರ !

ಪಶ್ಚಿಮ ಪಾಕಿಸ್ತಾನ ಸರ್ಕಾರದ ಹೇಳಿಕೆ

ಪಶ್ಚಿಮ ಪಾಕಿಸ್ತಾನ ಸರ್ಕಾರದವರು ಹೇಳಿಕೆಯೊಂದನ್ನಿತ್ತು ಇತ್ತೀಚೆಗೆ ಭಾರತ ಮತ್ತು ಪಾಕಿಸ್ತಾನ ಸೈನ್ಯ ತಂಡಗಳ ಘರ್ಷಣೆಗೆ ಕಾರಣವಾದ ಚಾಡ್‌ಬೆಟ್ ದ್ವೀಪದ ಮೇಲೆ ತಮ್ಮ ಹಕ್ಕಿನ ವ್ಯಾಪ್ತಿಯಿರುವುದಾಗಿ ತಿಳಿಸಿರುತ್ತಾರೆ. ಭಾರತ ಸರ್ಕಾರದವರ ಹಕ್ಕೊತ್ತಾಯಿಯಲ್ಲಿ ... ಹಿಂದೆ ಯಾವಾಗಲೂ ಇರಲಿಲ್ಲವೆಂ... ಸಿಂಧ್ ಪ್ರಾಂತವಿದ್ದಾಗ ಅದು ಜಿಲ್ಲೆಯಾ ... ಕ್ಕೆ ದ್ವೀಪವು ಸೇರಿತ್ತೆಂದೂ, ಹೇ... ತಿಳಿಸಿ, ದ್ವೀಪದಲ್ಲಿರುವ ಜನ ಮತ್ತು ... ರಕ್ಷಣಾ ಜವಾಬ್ದಾರಿಯನ್ನು ಪಶ್ಚಿಮ ಪಾಕಿಸ್ತಾನವು ನಿರ್ವಹಿಸಬೇಕಿದೆ ವಿಧಿಯಿಲ್ಲವೆಂದು ... ದೆ.

... ಕೆಯನ್ನು ಕರಾಚಿಯಲ್ಲಿರುವ ಭಾರತದ ರಾಯಭಾರಿ ಕಛೇರಿಯು ಅಲ್ಲಗಳೆದು ಹಿಂ... ರಲ್ಲಿ ಬೊಂಬಾಯಿ ಸರ್ಕಾರದ ನಿರ್ಣಯದ ಪ್ರಕಾರ ದ್ವೀಪವು ಕಚ್ ಪ್ರದೇಶಕ್ಕೆ ಸೇರಿತ್ತೆಂದು ತಿಳಿಸಿರುತ್ತದೆ.

ನೇತಾಜಿ ಬೋಸರು ಜೀವಂತರಾಗಿರುವರೇ ?

ನೇತಾಜಿ ಸುಭಾಷ್ ಚಂದ್ರಬೋಸರು ಜೀವಂತರಾಗಿರುವರೆಂದೂ, ಅವರು ಬ್ರಹ್ಮಚಾರಿಯಾಗಿರುವರೆಂದೂ, ಅವರ ಹೆಂಡತಿಯೆಂದು ಹೇಳಿಕೊಳ್ಳುತ್ತಿರುವ ವ್ಯಕ್ತಿಯು ಠಕ್ಕುಗಾತಿಯೆಂದು ... ಭಾರತ ಫಾರ್ವರ್ಡ್ ಬ್ಲಾಕಿನ ಉಪಾಧ್ಯಕ್ಷ ... ಮುತ್ತುರಾಮಲಿಂಗ ತೇವರರು ತಿಳಿಸಿರುತ್ತಾರೆ. ಅಸ್ಸಾಂ ಗಡಿ ಬಳಿ ಟಿಬೇಟಿನ ಸೀಕಾಂ... ನಲ್ಲಿ ಅವರು ಇರುವರೆಂದೂ, ನೆಹರೂರವರಿಗೆ ... ವಿಷಯವು ಗೊತ್ತೆಂದೂ ತೇವರರು ಹೇಳಿರು... ಬೋಸರ ಬಗ್ಗೆ ನಿಜಾಂಶವನ್ನು ಕಂಡು ... ಯಲು ಭಾರತ ಸರ್ಕಾರದವರು ಪ್ರಾಮಾಣಿಕ ಪ್ರಯತ್ನ ನಡೆಸಿಲ್ಲವೆಂದು ಅವರು ಹೇಳಿ, ... ಸಮಿತಿಯನ್ನು ಜಪಾನಿಗೆ ಬದಲು ಟಿಬೇಟಿಗೆ ಕಳುಹಬೇಕಾಗಿತ್ತೆಂದು ಸೂಚಿಸಿರುವರು. ... ಬೋಸರೊಡನೆ ಸಂಪರ್ಕವನ್ನು ಹೊಂದಿದವರಾಗಿಯೂ ಅವರು ಹೇಳುವರು.

ಹರಿಕಥೆ

ನಗರದ ದೇವೀರಮ್ಮಣ್ಣಿ ಅಗ್ರಹಾರದ ಗಣಪತಿ ದೇವಸ್ಥಾನದಲ್ಲಿ ಈ ರಾತ್ರಿ ೮-೩೦ ಗಂಟೆಗೆ ... ಸುಪ್ರಸಿದ್ಧ ಹರಿಕಥಾ ವಿದ್ವಾಂಸರಾದ ಶ್ರೀ ... ರಂಗಾಚಾರ್ಯರು ಯುಗ ಪುರುಷ ಶ್ರೀ ಗು... ಎಂಬ ಹರಿಕಥೆಯನ್ನು ಮಾಡುವರು. ... ವೆಂಕಟಾಚಾರ್‌ರವರು ಅಧ್ಯಕ್ಷತೆ ವಹಿಸುವರು.

ವಸ್ತು ಪ್ರದರ್ಶನ ಕಟ್ಟಡದಲ್ಲಿ ನೇತ್ರ ಚಿಕಿತ್ಸಾ ಶಿಬಿರ

ಡಾ। ಎಂ. ಸಿ. ಮೋದಿಯವರ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವು ನಾಳೆಯಿಂದ ವಸ್ತು ಪ್ರದರ್ಶನ ಕಟ್ಟಡದಲ್ಲಿ ಆರಂಭವಾಗುವುದು. ಅವಶ್ಯವಿರುವವರೆಲ್ಲರೂ ತಮ್ಮೊಡನೆ ಹಾಸಿಗೆ, ಲೋಟ ... ಮತ್ತು ತಟ್ಟೆಗಳನ್ನು ತರುವಂತೆ ಕೋರಲಾಗಿದೆ.

ಅಲ್ಜೀರಿಯದಲ್ಲಿ ೮೩ ಜನ ದಂಗೆಕೋರರ ಸಂಹಾರ

ಫ್ರೆಂಚ್ ಸೈನ್ಯ ಕಾರ್ಯಾಚರಣೆಯಲ್ಲಿ ಅನೇಕರ ಬಂಧನ

ಉತ್ತರ ಆಫ್ರಿಕದ ಅಲ್ಜೀರಿಯ ಪ್ರದೇಶದಲ್ಲಿ ನೆನ್ನೆಯ ವರೆಗೆ ೮೩ ಮಂದಿ ದಂಗೆಕೋರರನ್ನು ಫ್ರೆಂಚ್ ಸೈನಿಕರು ಸಂಹಾರ ಮಾಡಿರುತ್ತಾರೆ. ಬೌಗಿ ಎಂಬಲ್ಲಿ ಆರು ದಿನಗಳಿಂದ ದಂಗೆಕೋರರು ಮುತ್ತಿಗೆ ಹಾಕಿದ್ದವರನ್ನು ಬೇಧಿಸಿ ೪೦ ಮಂದಿಯನ್ನು ಕೊಂದು ೫೦ ಸಂಶಯಗ್ರಸ್ತರನ್ನು ಫ್ರೆಂಚರು ಬಂಧಿಸಿದರು. ಸಿಡಿನಿಚ್ ಎಂಬಲ್ಲಿ ಭೀಕರ ಕಾಳಗದನಂತರ ೨೭ ಜನರು ಕೊಲ್ಲಲ್ಪಟ್ಟು ೪೦ ಮಂದಿ ಕೈ ಸೆರೆಯಾದರು. ಮತ್ತೊಂದು ಕಡೆ ೧೧ ಜನರು ಮೃತಪಟ್ಟು, ೨೫ ಮಂದಿ ಸೆರೆ ಸಿಕ್ಕಿದರು. ಪ್ಯಾರಾಚೂಟ್ ಫ್ರೆಂಚ್ ಸೈನಿಕರು ೮ ಜನ ಕೊಲೆ ಮಾಡಿದವರನ್ನು ಹುಡುಕುತ್ತಿರುವರು. ಕಾನ್‌ಸ್ಟೆಂಟೈನಿನಲ್ಲಿ ಹುತಾತ್ಮರ ಬಗ್ಗೆ ಸ್ಮಾರಕ ಸಮಾರಂಭವನ್ನು ಭಂಗಪಡಿಸಲೆತ್ನಿಸಿದಾಗ ಪೋಲೀಸರು ಅಶ್ರುವಾಯುವನ್ನು ಪ್ರಯೋಗಿಸಿದರು.

ಕುಂಭಕೋಣದಲ್ಲಿ ಮಹಾ ಮಾಘ ಸ್ನಾನ

ಕುಂಭಕೋಣದಲ್ಲಿ ಮೊನ್ನೆ ಮಹಾ ಮಾಘದ ಪ್ರಯುಕ್ತ ೧೦ ಲಕ್ಷ ಹಿಂದೂ ಭಕ್ತರು ಪವಿತ್ರ ಸ್ನಾನ ಮಾಡಿದರು. ದೇಶದ ನಾನಾ ಭಾಗಗಳಿಂದ ಆದಕ್ಕಾಗಿ ಜನರು ಬಂದಿದ್ದರು. ಮೈಸೂರಿನಿಂದಲೂ ಅನೇಕರು ಹೋಗಿದ್ದರು. ಸಿಂಹಳದ ಹಿಂದುಗಳೂ ಬಂದಿದ್ದರು. ಕಲಕಾಡಿನಲ್ಲೂ ಸಹ ಸುಮಾರು ೨೦ ಸಾವಿರ ಜನರು ಸೇರಿ ಗೋಕರ್ಣ ತೀರ್ಥದಲ್ಲಿ ಸ್ನಾನ ಮಾಡಿದರು.

ಸಂಗೀತ ಕಲಾಭಿವರ್ಧಿನೀ ಸಭೆಯ ನೂತನ ಕಾರ್ಯ ಸಮಿತಿ

ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯಲ್ಲಿ ನೆನ್ನೆ ಬೆಳಗ್ಗೆ ಸಂಗೀತ ಕಲಾಭಿವರ್ಧಿನೀ ಸಭೆಯ ವಾರ್ಷಿಕ ಸಭೆಯು ಜರುಗಿ ನೂತನ ಅಧಿಕಾರ ವರ್ಗ ಮತ್ತು ಕಾರ್ಯಕಾರಿ ಸಮಿತಿಯ ಚುನಾವಣೆಗಳು ನಡೆದುವು. ಸಂಗೀತ ರತ್ನ ವಿ ಶಾರದ ಕೆ ವಾಸುದೇವಾಚಾರ್ಯರು ಪಾಯಂ ಅಧ್ಯಕ್ಷರಾಗಿರುವರು. ಶ್ರೀ ಹೆಚ್ ಯೋಗಾನರಸಿಂಹರವರನ್ನು ಉಪಾಧ್ಯಕ್ಷರಾಗಿಯೂ, ಡಿ। ಬಿ ಕೆ ಪದ್ಮನಾಭರಾಯರನ್ನು ಖಜಾಂಚಿಯಾಗಿಯೂ ಸರ್ವಾನುಮತದಿಂದ ಆರಿಸಲಾಯಿತು. ಶ್ರೀಗಳಾದ ಆರ್ ಎನ್ ದೊರೆಸ್ವಾಮಿ, ಎಂ ಎ ನರಸಿಂಹಾಚಾರ್, ಎಸ್ ಸುಬ್ರಹ್ಮಣ್ಯಯ್ಯ, ಬಿ ಆರ್ ಶಾಮಾಚಾರ್, ಎನ್ ಮಹದೇವಪ್ಪ, ಎಂ ಚಲುವರಾಯಸ್ವಾಮಿ, ಎಸ್ ಎನ್ ಮರಿಯಪ್ಪ, ಎಸ್ ಕೃಷ್ಣಯ್ಯಂಗಾರ್, ಬಿ ಶ್ರೀನಿವಾಸಯ್ಯಂಗಾರ್, ವಿ ಎಸ್ ರಾವ್, ಹೆಚ್ ಎ ರಾಮರಾವ್, ಹೆಚ್ ಎ ಬಳಿಗಾರಂಗಾಚಾರ್, ಎಸ್ ಸುಬ್ಬರಾವ್, ಬಿ ಎಸ್ ಕೃಷ್ಣಪ್ಪ ಮತ್ತು ಶ್ರೀಮತಿ ಎ ವಿ ಮನೋರಮಾ ರವರು ಆಡಳಿತ ಸಮಿತಿ ಸದಸ್ಯರುಗಳಾಗಿ ಚುನಾಯಿತರಾಗಿರುವರು.

ರೇಡಿಯೊ ವಾರದ ಆರಂಭ

ಮುಖ್ಯ ಮಂತ್ರಿ ಹನುಮಂತಯ್ಯನವರ ಭಾಷಣ

ಬೆಂಗಳೂರು ೨೬

ರೇಡಿಯೊ ಪ್ರಸಾರವು ಆರಂಭವಾಗಿ ೨೫ ವರ್ಷಗಳಾದ ಸಂದರ್ಭದಲ್ಲಿ ನೆನ್ನೆಯಿಂದ ಸರ್ವಾಧಿಕ ... ರೇಡಿಯೊ ವಾರದ ಆರಂಭೋತ್ಸವವನ್ನು ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆರವೇರಿಸಿದರು. ಅವರು ಭಾಷಣ ಮಾಡಿ, ಸಾಮೂಹಿಕ ಮನೋರಂಜನ ಮತ್ತು ವಿದ್ಯಾಭ್ಯಾಸಕ್ಕೆ ಸಾಧನವಾಗಿರುವ ರೇಡಿಯೊವು ಇದುವರೆಗೆ ಕೇವಲ ಕುಲೀನರೆಂದೆನಿಸಿಕೊಳ್ಳುವವರಿಗೆ ಮೀಸಲಾಗಿದ್ದ ಕಲೆಯನ್ನು ಸಾಮಾನ್ಯ ಮನುಷ್ಯನಿಗೂ ಒದಗಿಸಿ ಕಲಾ ಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಿರುವುದಾಗಿ ತಿಳಿಸಿದರು. ಕಲೆಯ ಸಾಮಾಜೀಕರಣದಿಂದ ಉತ್ತಮ ಕಲಾವಿದರಿಗೆ ಅತ್ಯಂತ ಪಟ್ಟಣ ಮತ್ತು ಶಕ್ತಿಯುತ ಪ್ರೋತ್ಸಾಹವನ್ನು ರೇಡಿಯೊವು ಸಾಧಿಸಿಕೊಟ್ಟಿರುವುದಾಗಿಯೂ ಅವರು ನುಡಿದರು.

ಬೆಂಗಳೂರು ರೇಡಿಯೊ ವಾರ ಕಾರ್ಯಕ್ರಮ

[illegible]

ಚಾಡ್‌ಬೆಟ್ ಪ್ರದೇಶ ಭಾರತ ಸೈನ್ಯಗಳ ವಶಕ್ಕೆ

ಕಚ್ ಸಾರಿಯಲ್ಲಿರುವ ಚಾಡ್‌ಬೆಟ್ ದ್ವೀಪವನ್ನು ಭಾರತದ ಸೈನ್ಯಗಳು ನೆನ್ನೆ ರಾತ್ರಿ ಪೂರ್ಣವಾಗಿ ತಮ್ಮ ವಶಕ್ಕೆ ಶಾಂತಿಯುತವಾಗಿ ತೆಗೆದುಕೊಂಡುವೆಂದು ವರದಿಯಾಗಿದೆ. ಅಲ್ಲಿ ಸೈನ್ಯದ ಠಾಣೆಯೊಂದನ್ನೂ ಸಹ ಏರ್ಪಡಿಸಲಾಗಿದೆ. ಪಾಕಿಸ್ತಾನಿ ಸೈನಿಕರು ಬಲವಾದ ಶಸ್ತ್ರಾಸ್ತ್ರ ಸಹಾಯದಿಂದ ದ್ವೀಪವನ್ನು ಆಕ್ರಮಿಸುವ ಮುಂಚೆ ಭಾರತೀಯ ಸೈನ್ಯದ ಗಸ್ತು ಪಡೆಯು ವಾರ ... ಅಲ್ಲಿಗೆ ಹೋಗಿಬರುತ್ತಿತ್ತೆಂದು ಹೇಳಲಾಗಿದೆ. ಭಾರತೀಯ ಸೈನ್ಯದ ಭಾರಿ ತಂಡವನ್ನು ಕಂಡು ಪಾಕಿಸ್ತಾನಿಗಳು ಪ್ರತಿಭಟನೆಯಿಲ್ಲದೆಯೇ ಹಿಂದಕ್ಕೆ ಹೋದರು.

ಗುಡ್‌ಷೆಪರ್ಡ್ ಕಾನ್ವೆಂಟಿನ ಆರಂಭ

ಭಾಷಣ

ಗುಡ್‌ಷೆಪರ್ಡ್ ಕಾನ್ವೆಂಟಿನ ವಿದ್ಯಾರ್ಥಿ ಸಂಘದಲ್ಲಿ ಕಳೆದ ಶುಕ್ರವಾರ ಶ್ರೀಮತಿ ಲೀಲಾವತಿ ಅಂಜನಪ್ಪನವರು ಆರಂಭ ಭಾಷಣ ಮಾಡಿದರು. ವಿದ್ಯಾರ್ಥಿನಿಯರು ಲೇಖನಗಳನ್ನು ಬರೆಯುವುದು ಮತ್ತು ಭಾಷಣ ಮಾಡುವುದನ್ನು ಕಲಿಯಬೇಕೆಂದು ಸೂಚಿಸಿದರು. ಮಹಿಳೆಯರ ಉನ್ನತಿ...

ಲೋಕಸಭಾಧ್ಯಕ್ಷ ಜಿ. ವಿ. ಮೌಲಂಕರ್‌ರವರ ನಿಧನ

ಶಾಸನ ಸಭೆಯಲ್ಲಿ ಸಂತಾಪ ಸೂಚನೆ

ಸ್ವಂ ಸು ಕಂತಿ] ಬೆಂಗಳೂರು ೨೭

ಲೋಕ ಸಭೆಯ ಅಧ್ಯಕ್ಷರಾದ ಶ್ರೀ ಜಿ. ವಿ. ಮೌಲಂಕರ್‌ರವರು ಈ ದಿನ ಬೆಳಗ್ಗೆ ಅಹಮದಾಬಾದಿನಲ್ಲಿ ನಿಧನ ಹೊಂದಿದರೆಂದು ಇಲ್ಲಿಗೆ ವಾರ್ತೆ ಬಂದಿತು.

ಈ ದಿನ ಶಾಸನ ಸಭೆಯಲ್ಲಿ ಅವರ ನಿಧನಕ್ಕಾಗಿ ಸಂತಾಪ ಸೂಚಿಸಿ, ಮಧ್ಯಾಹ್ನ ೧೨-೪೦ಕ್ಕೆ ಸಭೆಯನ್ನು ಮುಂದೆ ಹಾಕಲಾಯಿತು. ಅವರ ಬಗ್ಗೆ ಪ್ರಶಂಸಾ ಭಾಷಣಗಳನ್ನು ಮಾಡಲಾಯಿತು.

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿ, ದೇಶವು ಹಿರಿಯ ಗಾಂಧಿ ಮತ್ತು ದೇಶಭಕ್ತರನ್ನು ಕಳೆದುಕೊಂಡಿರುವುದಾಗಿ ಹೇಳಿದರು.

ಮುಖ್ಯ ಮಂತ್ರಿಯವರ ಅಭಿಪ್ರಾಯವನ್ನು ಪುರಸ್ಕರಿಸುತ್ತಾ ಅಧ್ಯಕ್ಷ ಶ್ರೀ ಹೆಚ್ ಎಸ್ ರುದ್ರಪ್ಪನವರು ಮಾತನಾಡಿ ಮೌಲಂಕರರು ಲೋಕಸಭಾಧ್ಯಕ್ಷರಾಗಿ ಕೊಟ್ಟ ರೂಲಿಂಗುಗಳು ಎಂದೆಂದಿಗೂ ಮಾದರಿಯಾಗಿ ಉಳಿಯುವುವೆಂದು ತಿಳಿಸಿ ಅವರ ನಿಧನದಿಂದ ತುಂಬಲಾರದ ನಷ್ಟವಾಗಿರುವುದೆಂದು ಹೇಳಿದರು.

ಪಾಕಿಸ್ತಾನದಲ್ಲಿ ಭಾರಿ ಅವ್ಯವಸ್ಥೆಯೇ ?

ಪಾಕಿಸ್ತಾನದಲ್ಲಿ ಭಾರಿ ಅವ್ಯವಸ್ಥೆಯುಂಟು ಮಾಡುವ ರಾಜಕೀಯ ಬಿರುಗಾಳಿಯು ಮುನ್ಸೂಚನೆಯಿರುವುದೆಂದು ಗಡಿನಾಡಿನ ಮುಖಂಡರಾದ ಡಾ। ಅಬ್ದುಲ್ ಗಫಾರ್ ಖಾನರು ತಿಳಿಸಿರುತ್ತಾರೆ. ಅವರಲ್ಲಿ ಮುಸ್ಲಿಂ ಲೀಗು, ಅವಾಮಿ ಲೀಗು ಮತ್ತು ಕೆಂಪು ಅಂಗಿಯವರೂ ಸಿಕ್ಕಿಕೊಳ್ಳುವರೆಂದೂ, ಅಲ್ಲಿ ನಡೆಯುವ ಕ್ರಾಂತಿಯು ಇಡೀ ರಾಷ್ಟ್ರವನ್ನೇ ಆವರಿಸುವುದೆಂದೂ ಅವರು ಎಚ್ಚರಿಸಿರುವರು.

ಮನೆಗಂದಾಯ ಹೆಚ್ಚಿಸುವುದಕ್ಕೆ ವಿರೋಧ

ನಗರದ ಪೌರಸಭೆಯವರು ಏರ್ಪಡಿಸಿರುವ ಮನೆಗಂದಾಯದ ಪುನರ್ವಿಮರ್ಶೆಯಲ್ಲಿ ಕಂದಾಯವನ್ನು ಹೆಚ್ಚಿಸಬಾರದೆಂದೂ, ಪ್ರತಿ ೮ ವರ್ಷಕ್ಕೊಮ್ಮೆ ಕಂದಾಯವನ್ನು ಹೆಚ್ಚಿಸುತ್ತಾ ಹೋದರೆ ಮುಂದೆ ಮನೆಗೂ ಕಡೆಗೆ ೧೦೦ ರೂ. ಗಳ ... ಕಡೆಗೆ ಕೊಡಬೇಕಾಗುವುದೆಂದೂ, ಜನರು ಪ್ರತಿ ವರ್ಷ ಸಾಲಸೋಲಗಳನ್ನು ಮಾಡಿ ಕಡೆಗೆ ಕಟ್ಟುತ್ತಿರುವರೆಂದೂ ಕಂದಾಯ ಹೆಚ್ಚಿಸುವುದರ ಬದಲು ಕಡಿಮೆ ಮಾಡಬೇಕೆಂದೂ ನಗರದ ನಿವಾಸಿಗಳೊಬ್ಬರು ಕೋರಿರುತ್ತಾರೆ.

... ಬಂದವರಿಗೆ ಬೆಂಬಲ ನೀಡುವಂತೆ ಕೋರಿದರು. ಶಾಲಾ ಪ್ರಿನ್ಸಿಪಾಲರು ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ಸರಸ್ವತಿಯವರು ವರದಿಯನ್ನೊಪ್ಪಿಸಿದರು. ಶಾಲೆಯ ಹಳೇ ವಿದ್ಯಾರ್ಥಿನಿ ಶ್ರೀಮತಿ ಫಣೀಂದ್ರ ಕೇಸರಿಯವರಿಂದ ನೃತ್ಯ ಗಾಯನವೂ ಕುಮಾರಿ ಶೈಲಜಾರವರಿಂದ ವೀಣಾವಾದನವೂ ನಡೆದುವು.

ಮುಸ್ಲಿಮರ ಆಕ್ಷೇಪಣೆಗಾಗಿ ಪೈಗಂಬರ್ ವಿಗ್ರಹ ಉಚ್ಚಾಟನೆ

ನ್ಯೂಯಾರ್ಕಿನ ಸುಪ್ರೀಂ ಕೋರ್ಟಿನ ಮೇಲೆ ಇದ್ದ ಮಹಮದ್ ಪೈಗಂಬರ್‌ರವರ ವಿಗ್ರಹವನ್ನು ಮುಸ್ಲಿಮರ ಆಕ್ಷೇಪಣೆಯ ಪರಿಣಾಮವಾಗಿ ಆ ಸ್ಥಳದಿಂದ ತೆಗೆದುಹಾಕಲಾಯಿತು. ಕೋರ್ಟಿನ ಕಟ್ಟಡದ ಮೇಲೆ ವಿಶ್ವದ ೧೦ ಜನ ಧರ್ಮಶಾಸ್ತ್ರ ವೇತ್ತರ ವಿಗ್ರಹಗಳನ್ನು ಈ ಶತಮಾನದ ಆದಿಯಿಂದಲೂ ನೆಡಲಾಗಿತ್ತು. ಆ ಪೈಕಿ ಹಿಂದುಗಳ ಮನು, ಪಾರ್ಸಿಗಳ ಜೋರಾಸ್ಟರ್, ಚೀನಾದ ಕನ್ಫ್ಯೂಷಿಯಸ್, ಯಹೂದ್ಯರ ಮೋಸಸ್ ಮತ್ತು ಮುಸ್ಲಿಮರ ಗುರು ಪೈಗಂಬರರ ವಿಗ್ರಹಗಳೂ ಇದ್ದುವು. ಅನೇಕ ವರ್ಷಗಳಿಂದಲೂ ಮುಸ್ಲಿಮರು ಪೈಗಂಬರರ ವಿಗ್ರಹವನ್ನು ಇಟ್ಟಿರುವುದಕ್ಕೆ ಆಕ್ಷೇಪಿಸುತ್ತಾ ಬಂದಿದ್ದರು. ಮುಸ್ಲಿಮರು ವಿಗ್ರಹಾರಾಧಕರಲ್ಲದಿರುವುದರಿಂದ ತಮ್ಮ ಮತದ ಸಂಸ್ಥಾಪಕರನ್ನು ಪ್ರತಿಮೆ ಅಥವಾ ಚಿತ್ರದ ರೂಪದಲ್ಲಿ ಇಡಲು ಅವರು ಒಪ್ಪುವುದಿ[ಲ್ಲ]

ಮರಳು ಗಾಳಿಯಿಂದ ೬ ಜನರ ಮರಣ

ಅಮೆರಿಕದ ಟೆಕ್ಸಾಸ್‌ನ ಡಲ್ಲಾಸ್ ಎಂಬಲ್ಲಿ ಮರಳು ಗಾಳಿಯು ಬಲವಾಗಿ ಬೀಸಿದ ಪರಿಣಾಮವಾಗಿ ೬ ಜನರು ಮೃತಪಟ್ಟು ಅನೇಕ ಮನೆಗಳು ನೆಲಸಮವಾಗಿವೆ. ಮೆಕ್ಸಿಕೊ ಕೊಲ್ಲಿ ಕಡೆಯಿಂದ ಗಾಳಿಯು ಬೀಸಿ ಮರಳನ್ನು ಊದಿತು

ಮಹಾಜನ ಹೈಸ್ಕೂಲಿನ ಪರೀಕ್ಷಾ ಫಲಿತಾಂಶ

ಮಹಾಜನ ಹೈಸ್ಕೂಲಿನಲ್ಲಿ ಈ ವರ್ಷ ಸಪ್ಲಿಮೆಂಟರಿಗೆ ಕಳುಹಿಸಿದ ೯೯ ಮಂದಿ ಪೈಕಿ ೬೪ ವಿದ್ಯಾರ್ಥಿಗಳಿಗೆ ಎಸ್ ಎಸ್ ಎಲ್ ಸಿ ಮತ್ತು ಅವರಲ್ಲಿ ೩೦ ಜನರಿಗೆ ಪ್ರಥಮ ತರಗತಿ ದೊರೆತಿದೆ. ಶೇಕಡ ೬೫ ರಷ್ಟು ಎಸ್ ಎಸ್ ಎಲ್ ಸಿ ಫಲಿತಾಂಶ ಬಂದಿದೆ

ರೋಗಿಗಳ ಶಿಬಿರಕ್ಕೆ ಸಹಾಯ

ಡಾ. ಮೋದಿಯವರ ನೇತ್ರ ಚಿಕಿತ್ಸಾ ಶಿಬಿರಕ್ಕೆ ... ಅವರು ... ಮತ್ತು ಕೆಳಗೆ ಕಂಡವರು ... ದಿನಸಿ ರೂಪದಲ್ಲಿ ಸಹಾಯ ಮಾಡಿರುತ್ತಾರೆ ... [illegible] ... ಮತ್ತು ಎಸ್ ಎಂ ... ಮೂಟೆ ... ಎಲ್ ಆರ್ ... ಬಿ ... ಅಂಡ್ ಸನ್ಸ್ ಮತ್ತು ಬಿ ಪುಟ್ಟಯ್ಯ ಅಂಡ್ ಸನ್ಸ್ ... ಮೂಟೆ ಅಕ್ಕಿ, ಬಿ ಎಸ್ ಸಂಗಪ್ಪ ... ಮತ್ತು ಮಲ್ಲಪ್ಪ ಅಂಡ್ ನಂಜಪ್ಪ ... ಆಯಿಲ್ ... ವೆಜಿಟಬಲ್ ಆಯಿಲ್ ಕಂಪೆನಿ ಮಾಲೀಕರು ... ಮೂಟೆ ಸಕ್ಕರೆ ... ನಾಡಿಯಪ್ಪ ... ಮೂಟೆ ... ಮತ್ತು ... ಮೂಟೆ ಆಲೂಗೆಡ್ಡೆ ... ಕಂಚಪ್ಪ ಅಂಡ್ ಸನ್ಸ್ ... ಮೂಟೆ ಹಲಸಂದೆ ... ದಾನಶೆಟ್ಟಿ ಮತ್ತು ಬಿ ಕೆ ... ಒಂದೊಂದು ಮೂಟೆ ಮೆಣಸಿನಕಾಯಿ, ... ಧರಣೇಂದ್ರಯ್ಯ ... ಮೂಟೆ ಹೆಸರು

Dalvoy High School,
MYSORE
(COACHING SECTION)
Offers excellent coaching by expert teachers for S S L C Suppl students Classes start from 1 3 56 Enquire between 12 & 6 P M

S N Subbakrishnan,
Secretary

Edited, Printed and Published by A R Nagarajan at Sadhvi Press D Subbaiah Road Mysore

ಮಕ್ಕಳ ಪುಸ್ತಕ ಭಂಡಾರದ ಆರಂಭೋತ್ಸವ

ಮೈಸೂರು ೨೬

ಇಲ್ಲಿನ ರೋಟರಿ ಕ್ಲಬ್ಬಿನವರು ಏರ್ಪಡಿಸಿರುವ ಮಕ್ಕಳ ಪುಸ್ತಕ ಭಂಡಾರದ ಆರಂಭೋತ್ಸವವನ್ನು ನೆನ್ನೆ ಬೆಳಗ್ಗೆ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನೆರವೇರಿಸಿದರು

ಕ್ಲಬ್ಬಿನ ಅಧ್ಯಕ್ಷ ಡಾ। ಬಿ ಎಲ್ ಲಿಂಗರಾಜುರವರಿಂದ ಸ್ವಾಗತವಾದನಂತರ ಸುವರ್ಣೋತ್ಸವ ಸಮಿತಿ ಅಧ್ಯಕ್ಷರಾದ ಶ್ರೀ ಎ ಸಿ ದೇವೇಗೌಡರು ವರದಿಯನ್ನು ಒಪ್ಪಿಸಿ ಈ ಪುಸ್ತಕ ಭಂಡಾರಕ್ಕೆ ... ರೂಗಳ ... ಚಂದಾ ... ಇದುವರೆಗೆ ... ರೂ ಗಳು ... ಸರ್ಕಾರದ ನೆರವನ್ನು ಕೋರಿದರು

ಸಚಿವರು ಪುಸ್ತಕ ಭಂಡಾರದ ಆರಂಭೋತ್ಸವವನ್ನು ನೆರವೇರಿಸಿ ಇಡೀ ಭಾರತದಲ್ಲಿ ಇದು ಮೊಟ್ಟಮೊದಲನೆಯ ಭಂಡಾರವೆಂದೂ ... ಇಂತಹ ಸಂಸ್ಥೆಗಳಿಗೆ ಸಾರ್ವಜನಿಕರ ಪ್ರೋತ್ಸಾಹ ಅಗತ್ಯವೆಂದೂ ಹೇಳಿದರು ... ವಿದ್ಯಾಭ್ಯಾಸದ ... ಇಂತಹ ಸಂಸ್ಥೆ ... ಅವಶ್ಯಕವೆಂದೂ ಪುಸ್ತಕ ಭಂಡಾರದ ... ಪ್ರಚಾರ ಮತ್ತು ವಸ್ತು ಸಂಗ್ರಹ ... ಏರ್ಪಡಿಸಬೇಕೆಂದೂ ಸಚಿವರು ... ಸರ್ಕಾರದಿಂದ ಸಾಧ್ಯವಾದ ನೆರವನ್ನು ಕೊಡುವುದಾಗಿ ಭರವಸೆಯಿತ್ತರು

ಇಂಡಿಯನ್ ... ದಾಸ ... ಸ್ವಾಮಿಯವರಿಂದ ವಂದನಾರ್ಪಣೆಯಾದನಂತರ ಸಮಾರಂಭ ಮುಕ್ತಾಯವಾಯಿತು

ಹರಿಜನರ ಸಭೆ

ಹದುವ ರಹಳ್ಳಿಯ ಹರಿಜನರ ಕೇರಿಯಲ್ಲಿ ಕಳೆದ ... ತಾರೀಕು ರಥಸಪ್ತಮಿ ಪ್ರಯುಕ್ತ ಸಭೆಯೊಂದನ್ನು ಹರಿಜನ ಸೇವಕ ಸಂಘದವರು ... ಕರಿಯಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಶ್ರೀಗಳಾದ ಕೆ ... ಮತ್ತು ... ರವರು ಪುರಾತನಕಾಲದ ರಥಸಪ್ತಮಿಯ ಮಹಿಮೆಯನ್ನು ವಿವರಿಸಿದರು ಮತ್ತು ಹರಿಜನರು ಧರ್ಮದಿಂದ ಜೀವನ ನಡೆಸಬೇಕೆಂದು ಕೋರಿದರು

ಚಾಮರಾಜನಗರದಲ್ಲಿ ಸಂಸ್ಕೃತಿ ಪ್ರಚಾರ

... ಚಾಮರಾಜೇಶ್ವರ ... ಕಳೆದ ಬುಧವಾರ ಸಂಸ್ಕೃತಿ ಪ್ರಚಾರ ಸಭೆಯು ಏರ್ಪಾಡಾಗಿತ್ತು. ಶ್ರೀಮತಿ ಎಂ ಎ ಗಿರಿಜಮ್ಮನವರಿಂದ ಕಾವ್ಯ ವಾಚನವಾಯಿತು. ... ಸಮಿತಿಯವರು ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದರು ... ಗ್ರಾಮದಲ್ಲೂ ಅಂದು ಸಂಸ್ಕೃತಿ ಪ್ರಚಾರವು ನಡೆಯಿತು. ಮಾಳೆಯೂರು ಶ್ರೀ ಎಂ ಸಿ ಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು

C T C PUBLICATIONS
FOR S S L C STUDENTS

Ele Mathematics (Algebra Geometry and Arithmetic with graphs) Public Exam

Qns & Answers	1-12-0
Do ಕನ್ನಡದಲ್ಲಿ	1-12-0
Simplified Grammar	0 6 0
ಕನ್ನಡ ಪದ್ಯ ಮತ್ತು ವ್ಯಾಕರಣದ ಪ್ರಶ್ನೋತ್ತರ	0-10-0
ಬ್ರಿಟಿಷರ ಚರಿತ್ರೆಯ ಪ್ರಶ್ನೋತ್ತರಗಳು	0-14-0
ಇಂಡಿಯಾ ದೇಶದ ಚರಿತ್ರೆಯ ಪ್ರಶ್ನೋತ್ತರ (ಎಲ್ಲಾ ಭಾಗವೂ ಸೇರಿದ)	1-0 0

– For 1956 Suppl Examination –

A Guide to English Prose & Poetry	1-2-0
ಕನ್ನಡ ಗದ್ಯ ಭಾಗದ ಪ್ರಶ್ನೋತ್ತರಗಳು	0-12-0

Other guides will be ready by the 15th April 1956

Agents M/s J Nanumal & Sons

— PUBLISHERS —
C T C PUBLICATIONS,
Old Agrahar, Mysore

ರಾಜಕೀಯ ಸಂತ್ರಸ್ತರ ಕಡೆ ಸರ್ಕಾರ ಗಮನ ಕೊಡಬೇಕು

ಟಿ ನರಸೀಪುರ ೨೬

ಈ ತಾಲ್ಲೂಕಿನ ರಾಜಕೀಯ ಸಂತ್ರಸ್ತರಿಗೆ ನೆರವು ನೀಡಬೇಕೆಂದು ಅನೇಕಾವರ್ತಿ ಸರ್ಕಾರದವರಿಗೆ ಮನವಿ ಮಾಡಿಕೊಂಡಿದ್ದರೂ ಇದುವರೆಗೆ ಅದು ಈಡೇರಿಲ್ಲವೆಂದು ತಿಳಿಸಲು ವಿಷಾದವಾಗುತ್ತದೆ. ಇತರ ತಾಲ್ಲೂಕುಗಳಲ್ಲಿ ಈ ಬಗ್ಗೆ ಈಗಾಗಲೇ ವ್ಯವಸ್ಥೆಯಾಗಿ ಕೆಲವರಿಗೆ ಜಮೀನುಗಳನ್ನು ಕೊಡಲಾಗಿದೆ. ಇಲ್ಲಿನವರ ವಿಚಾರವಾಗಿ ನೇರವಾಗಿಯೂ ಮತ್ತು ಕಾಂಗ್ರೆಸ್ ಸಂಸ್ಥೆಯ ಮೂಲಕವೂ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳಲಾಗಿದ್ದರೂ ಸಹಾ ಇದು ಫಲಕಾರಿಯಾಗಿಲ್ಲ. ಈಗಲಾದರೂ ಈ ವಿಷಯಕ್ಕೆ ಕೂಡಲೇ ಗಮನ ಕೊಟ್ಟು ನೊಂದ ದೇಶಾಭಿಮಾನಿಗಳಿಗೆ ನೆರವು ನೀಡುವರೆಂದು ನಂಬಲಾಗಿದೆ

ಈ ಕೆಳಗೆ ಕಂಡ ಸಂತ್ರಸ್ತರ ಪರವಾಗಿ ಅರ್ಜಿಗಳು ಸರ್ಕಾರಕ್ಕೆ ಕಳುಹಿಸಲ್ಪಟ್ಟಿವೆ — ಶ್ರೀಗಳಾದ ಕೆ ರಾಮಶೆಟ್ಟಿ, ಎಂ ಬಿ ನರಸಿಂಹಸ್ವಾಮಿ, ಪಿ ನಾಗರಾಜ್, ಜಿ ಪಿ ನಂಜುಂಡಸ್ವಾಮಿ, ಎಲ್ ಎಸ್ ಶೇಷಾಚಲಯ್ಯ, ಚೌಡಯ್ಯ, ಟಿ ಎಲ್ ನಾಗರಾಜರಾವ್, ಮೂಸೂರು ಮಂಡಿ ಪುಟ್ಟಪ್ಪ, ಕರಿಯಪ್ಪ, ಬಿ ನಂಜುಂಡಸ್ವಾಮಿ, ವಿ ಕೆ ಚಂದ್ರಶೇಖರಮೂರ್ತಿ, ಎಸ್ ಅಪ್ಪಾಜಿರಾವ್ ಮತ್ತು ಇಬ್ಬರು

ಇರಾನಿನ ಷಹಾರವರಿಗೆ ಅಲಿಘಡ ವಿಶ್ವವಿದ್ಯಾಲಯದ ಪ್ರಶಸ್ತಿ

ಅಲಿಘಡದ ವಿಶ್ವವಿದ್ಯಾಲಯದಲ್ಲಿ ಮೊನ್ನೆ ವಿಶೇಷ ಘಟಿಕೋತ್ಸವವು ನಡೆದು ಇರಾನಿನ ಷಹಾರವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿಯನ್ನು ಅರ್ಪಿಸಲಾಯಿತು. ಷಹಾ ಮತ್ತು ರಾಣಿ ಸುರಯ್ಯರವರಿಗೆ ವಿಶ್ವವಿದ್ಯಾಲಯದ ಪರವಾಗಿ ಸ್ವಾಗತದ ಮಾನಪತ್ರವನ್ನು ಕೊಡಲಾಯಿತು

WANTED

Door to door sales girls & boys capable of preparing bills in English in Mysore city & taluks and Mandya & Hassan districts
Contact –
SHANDRILA COSMETICS,
513 Upstairs
Kalamma Temple Street,
MYSORE

SREE GAYATHRI
TALKIES
TO DAY *LAST DAY*
SOLDIER OF FORTUNE

From 28-2 56 For 2 days
SINNER OF MAGDALA
The story of Jesus Christ and Mary Magdala

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ಅಸಭ್ಯ ಯುವಕರ ಹತೋಟಿಗಾಗಿ ವಿದ್ಯಾರ್ಥಿನಿಯರ ಮುಷ್ಕರ

ಉತ್ತರ ಪ್ರದೇಶದ ರಾಯಪುರದ ... ರು ಮತ್ತು ಸ್ಥಳೀಯ ಅಧಿಕಾರಿಗಳು ರಸ್ತೆ ... ಯವಲ್ಲಿ ನಿರತರಾಗಿರುವ ಯುವಕರನ್ನು ಹತೋಟಿಗೆ ತರಲು ಕೂಡಲೇ ಕ್ರಮ ಕೈಗೊಳ್ಳ... ಒತ್ತಾಯಪಡಿಸಲು ಅಲ್ಲಿನ ಲಕ್ಷ್ಮೀನಾರಾ... ವಿದ್ಯಾ ಮಂದಿರದ ೨,೦೦೦ ವಿದ್ಯಾರ್ಥಿನಿ... ಮೊನ್ನೆ ಮುಷ್ಕರ ಹೂಡಿದ್ದರು. ಅವರು ... ಲ್ಲಿ ಮೆರವಣಿಗೆ ನಡೆಸಿ, ಬಹಿರಂಗ ... ಏರ್ಪಡಿಸಿದ್ದರು. ಅಸಭ್ಯ ವರ್ತನೆ ಮತ್ತು ... ಕಳಿಂದ ವಿದ್ಯಾರ್ಥಿನಿಯರನ್ನು ಪಾರು ... ಡುವಂತೆ ಅಲ್ಲಲ್ಲೇ ಪೊಲೀಸು ಕಾವಲನ್ನು ... ಡಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಯುವಕರ ... ವರ್ತನೆಯ ಬಗ್ಗೆ ಆಕ್ಷೇಪಿಸಿದ ಉಪಾಧ್ಯಾಯಿನಿಯನ್ನು ಕೆಲವು ದಿನಗಳ ಹಿಂದೆ ಯುವಕ ವಿದ್ಯಾರ್ಥಿಗಳು ಹೊಡೆದಿದ್ದರೆಂದೂ ಹೇಳಲಾಗಿದೆ

ಪ್ರಖ್ಯಾತಿ ಹೊಂದಿರುವ ಕನ್ನಾನೂರ್ ಬನೀನುಗಳನ್ನು
ಉಪಯೋಗಿಸಿ
ದಿ ಚಿನೋಲಿ ಹೊಸ್ಯರಿ ಫ್ಯಾಕ್ಟರಿ,
ಕನ್ನಾನೂರು
ಸೂಚನೆ – 27 ವರ್ಷಗಳಿಂದ ನೀವೆ ... ದ ಈ ಬನೀನುಗಳ ಮೇಲೆ ... ಲೇಬಲ್‌ಗಳನ್ನು ಮಹಾಜನರು ಗಮನಿಸಬೇಕಾಗಿ ... ವಂತಿ

Sarada Tutorial Institute,
Sarada Vilas High School Building
MYSORE
Coaching classes for the ensuing S S L C Supplementary examination commence work from 1-3 1956 The classes will work all the seven days in the week
K V NARAYAN...
Organiser

Sri Rama Sahaya Sangha,
D Subbaiah Road, Mysore
Efficient coaching by able teachers under the guidance of K Krishnaswamy Iyengar, Retd D E O for Supplementary S S L C students Classes will commence from 1st March 56 Only a limited number of students will be admitted
JOIN AT ONCE
C N ...
Organiser

SREE GANESH
TALKIES
From 28 2 56 For 2 Days
RIDE THE MAN DOWN
(In True Color)
With Brian Donlevy and Ella Raines

From 1-3-56 For 2 Days
THE STARS ARE SINGING
[In Technicolor]

NATIONAL LEAGUE
Amthalaya Buildings, Mysore
Brilliant Coaching for S. S. L. C. Students
Seventy per cent success in previous Examination
Ninety per cent of the primary school teachers have passed
Seperate Section for Ladies
COMMENCE FROM 1—3—1956
7-30 to 10 A M. and 5.30 to 8-30 P M

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಪು ೦೯] SADHVI : TUESDAY 28-2-1956 ಮೈಸೂರು ಮಂಗಳವಾರ : ೨೮-೨-೧೯೫೬ [ಸಂಚಿಕೆ : ೦೪೪

ಚೀಣಾದ ಅಧ್ಯಕ್ಷ ಮಾವೋತ್ಸೆಟುಂಗರ ಕೊಲೆಗಾಗಿ ಪಿತೂರಿ?

ಸರ್ಕಾರೀ ಕೈಗಾರಿಕೆಗಳ ಆಡಳಿತದಲ್ಲಿ ಕಾರ್ಮಿಕರಿಗೂ ಪಾತ್ರ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಂದ ಸದ್ಯದಲ್ಲೇ ವಿವರಣೆ

ಬೆಂಗಳೂರು ೨೭

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಇಲ್ಲಿನ ವಾಣಿಜ್ಯ ಸಂಸ್ಥೆಯ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ ಭಾಷಣ ಮಾಡುತ್ತಾ ಸರ್ಕಾರದ ಕೈಗಾರಿಕೆಗಳ ಆಡಳಿತ ನಿರ್ವಹಣೆಯಲ್ಲಿ ಕಾರ್ಮಿಕರ ಪಾತ್ರಕ್ಕೆ ಅವಕಾಶ ಮಾಡಿಕೊಡುವ ವಿಷಯವಾಗಿ ಸದ್ಯದಲ್ಲೇ ತಾವು ಮಾಡುವ ಆಯವ್ಯಯದ ಭಾಷಣದಲ್ಲಿ ವಿವರಣೆ ನೀಡುವುದಾಗಿ ತಿಳಿಸುತ್ತಾರೆ. ಕ್ರಾಂತಿಕಾರಕವಾದ ಈ ಬದಲಾವಣೆಯನ್ನು ತಂದು ಮೈಸೂರು ಇತರ ಸಂಸ್ಥಾನಗಳಿಗೆ ಮಾದರಿಯಾಗುವುದೆಂದೂ ಕೇಂದ್ರ ಸರ್ಕಾರದವರಲ್ಲಿ ಈ ವಿಷಯವನ್ನು ಪರ್ಯಾಲೋಚನೆಯ ಸ್ಥಿತಿಯಲ್ಲಿರುವುದೆಂದೂ ಅವರು ಹೇಳಿದರು

ವ್ಯವಸಾಯ ಉಪಕರಣಗಳಿಗಾಗಿ ಪ್ರತಿ ಶಾಲೆಗೂ ೦೫೦ ರೂ.

ಮೈಸೂರು ... ಭೂದಾನ ಚಳುವಳಿ ... ಶಾಲಾ ವಿದ್ಯಾರ್ಥಿಗಳು ನಡೆಸುವ ವ್ಯವಸಾಯ ಕಾರ್ಯಕ್ರಮಕ್ಕಾಗಿ ಉಪಕರಣಗಳನ್ನು ಕೊಳ್ಳಲು ಸರ್ಕಾರದವರು ಪ್ರತಿ ಶಾಲೆಗೂ ೧೫೦ ರೂಗಳನ್ನು ಮಂಜೂರು ಮಾಡಿರುವರೆಂದು ಗೊತ್ತಾಗಿದೆ

ಮೈಸೂರು ರೇಡಿಯೋ ನಾಳೆ ಕಾರ್ಯಕ್ರಮ

... ಸ್ವರ ... ಎಂ ವಿ ... ಕನ್ನಡ ಗೀತೆಗಳು, ೬-೪೦ ಹಿಂದಿ ... ರೆಕಾರ್ಡು ... ಪಾಠ ... ಮಧ್ಯಾಹ್ನ ... ಸಂಗೀತ ... ಚಂದನವಲ್ಲರುವ ಕವಿತೆಗಳ ಗೀತೆ. ... ಸಂಜೆ ೫-೪೦ ಎಂ ... ಮತ್ತು ಕನ್ನಡ ಗೀತೆ ... ಪ್ರಾರ್ಥನಾ ... ೬ ೧೫ ಮತ್ತು ೬-೪೦ ... ಕನ್ನಡ ಗೀತೆ ... ೮ ೪೦ ರಾಷ್ಟ್ರೀಯ ಕಾರ್ಯಕ್ರಮ ... ರೆಕಾರ್ಡು ... ಸಂಸ್ಕೃತದಲ್ಲಿ ವಿವಿಧ ಕಾರ್ಯಕ್ರಮ ... ಗುಪ್ತ ... ಕನ್ನಡ ಕವಿತೆಗಳು— ... ವಾಮನರಾಯರಿಂದ

ಭಾರತ ಸರ್ಕಾರಕ್ಕೆ ಉತ್ಕಲ ಸಮ್ಮೇಳನದವರ ಎಚ್ಚರಿಕೆ ಸೂಚನೆ

... ಬಿಹಾರದಲ್ಲಿ ಸೇರಿರುವ ಸೆರಾಯಿಕೆಲ, ಖಾರ್ಸ್ವಾನ್ ಮತ್ತು ಸಿಂಹಭೂಮಿ—ಧಾಲ್ಭೂಮ್ ಸಬ್ ಡಿವಿಷನ್ ಪ್ರದೇಶಗಳನ್ನು ಒರಿಸ್ಸಾಕ್ಕೆ ಸೇರಿಸುವ ... ಅಭಿಪ್ರಾಯವನ್ನು ... ಕೇಂದ್ರ ಸರ್ಕಾರದವರು ಧಿಕ್ಕರಿಸಿದರೆ, ಬರುವ ಏಪ್ರಿಲ್ ೧೫ರೊಳಗೆ ಈ ಕೇಂದ್ರದ ಪ್ರಕಟಣೆಯಾಗದಿದ್ದರೆ ಒರಿಸ್ಸಾ ... ಪಕ್ಷಪಕ್ಷಗಳನ್ನು ... ಸೂಚನೆ ಕೊಡಬೇಕಾಗಬಹುದೆಂದೂ ... ಸಭೆಯಲ್ಲಿ ಸೇರಿದ್ದ ವಿರೋಧ ಪಕ್ಷಗಳ ... ಸಮ್ಮೇಳನದ ವಿಶೇಷ ಅಧಿವೇಶನವು ... ಯನ್ನು ಅಂಗೀಕರಿಸಿತು

ಮೋದಿಯವರ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರದ ಆರಂಭ

ಮೈಸೂರು ೨೭

ಡಾ॥ ಎಂ ಸಿ ಮೋದಿಯವರ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವು ಈ ಬೆಳಿಗ್ಗೆ ೧೧ ಗಂಟೆಗೆ ಇಲ್ಲಿನ ವಸ್ತು ಪ್ರದರ್ಶನದ ಕಟ್ಟಡದಲ್ಲಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರಿಂದ ಆರಂಭಗೊಳಿಸಲ್ಪಟ್ಟಿತು ಡಾ॥ ಮೋದಿಯವರು ಪ್ರತಿದಿನ ಮಧ್ಯಾಹ್ನ ೩ ಗಂಟೆಯಿಂದ ನಂಜರಾಜ ಬಹದ್ದೂರ್ ಛತ್ರದಲ್ಲಿ ನೇತ್ರ ಪರೀಕ್ಷೆಯನ್ನು ಮಾಡುವರು

ಶಿಬಿರದ ವೆಚ್ಚಕ್ಕಾಗಿ ಡಾ॥ ಮೋದಿಯವರು ಸ್ವತಃ ೧,೫೦೦ ರೂ ಗಳ ಧನ ಸಹಾಯ ಮಾಡಿರುವರು ಈ ದಿನ ಡಾ॥ ಮೋದಿಯವರು ೧೦೩ ಶಸ್ತ್ರ ಚಿಕಿತ್ಸೆಗಳನ್ನು ನಡೆಸಿದರು

ಹಿಂದಿ ಸಂಘದ ಆರಂಭೋತ್ಸವ

ರಾಜಧಾನಿಯ ಹಾರ್ಡ್ವಿಕ್ ಪ್ರೌಢಶಾಲೆಯ ಹಿಂದಿ ಸಂಘದ ಪ್ರಸಕ್ತ ಸಾಲಿನ ಪ್ರಾರಂಭೋತ್ಸವವು ನಾಳೆ ಸಂಜೆ ೪॥ ಗಂಟೆಗೆ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾದ ಶ್ರೀ ತಿ ಜ ... ರವರ ಅಧ್ಯಕ್ಷತೆಯಲ್ಲಿ ನೆರವೇರುವುದು ಮಹಾರಾಜಾ ಕಾಲೇಜಿನ ಶ್ರೀ ಮೇ ರಾಜೇಶ್ವರಯ್ಯನವರು ಭಾಷಣ ಮಾಡುವರು

ಟಿ ಚನ್ನಕೇಶವಯ್ಯನವರ ನಿಧನ

ನಗರದ ಸುಪ್ರಸಿದ್ಧ ವಕೀಲರಾದ ಶ್ರೀ ಟಿ ಚನ್ನಕೇಶವಯ್ಯನವರು ಈ ದಿನ ಬೆಳಗಿನ ಜಾವ ೨ ಘಂಟೆಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ನಗರದ ವಕೀಲರ ಸಂಘದ ಸಭೆಯು ಈ ದಿನ ನಡೆದು ಶ್ರೀಯುತರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಲಾಯಿತು

ಚಿನ್ನವೆಂದು ಹಿತ್ತಾಳೆ ಸರ ಮಾರಲೆತ್ನಿಸಿದವನಿಗೆ ಶಿಕ್ಷೆ

ಮಂಡಿ ಮೊಹಲ್ಲೆಯ ದಾವೂದ್ ಎಂಬುವವನು ಕಳೆದ ೧೯ನೇ ತಾರೀಖು ನಗರದ ರೈಲು ನಿಲ್ದಾಣದಲ್ಲಿ ಅಂಬುಗದ ಗುಂಡಯ್ಯ ಎಂಬುವರಿಗೆ ಹಿತ್ತಾಳೆಯ ಸರವೊಂದನ್ನು ಚಿನ್ನದ್ದೆಂದು ಹೇಳಿ ೫೦ ರೂಪಾಯಿಗೆ ಮಾರುತ್ತಿದ್ದನೆಂದು ಹೂಡಿದ್ದ ಮೊಕದ್ದಮೆಯಲ್ಲಿ ಈ ದಿನ ನಗರದ ಪ್ರಥಮ ನ್ಯಾಯಾಧೀಶರು ಆಪಾದಿತನಿಗೆ ೩ ತಿಂಗಳು ಸಾದಾ ಸಜೆಯನ್ನು ವಿಧಿಸಿದರು

ಪೌರಸಭೆಯ ಅಧಿವೇಶನ ಮುಂದಕ್ಕೆ

ದಿವಂಗತ ಮಾಲಂಕರರ ಗೌರವಾರ್ಥವಾಗಿ ನೆನ್ನೆ ನಗರದ ಪೌರಸಭಾಧಿವೇಶನವನ್ನು ೧ ದಿನ ಮುಂದಕ್ಕೆ ಹಾಕಲಾಯಿತು ಆಚಾರ್ಯ ನರೇಂದ್ರದೇವ್ ಮತ್ತು ಎಚ್ ಸಿ ದೇವರಾಜೆ ಅರಸರ ನಿಧನಕ್ಕಾಗಿಯೂ ಸಂತಾಪ ಸೂಚಿಸಲಾಯಿತು

ಸಟ್ಟಾ ಜೂಜಾಡುತ್ತಿದ್ದವನಿಗೆ ದಂಡ

ನಗರದ ರೈಲು ನಿಲ್ದಾಣದ ಪಾರ್ಸೆಲ್ ಫೋರ್ಮನ್ ಎಲ್ಲ ಎಂಬುವವನು ನೆನ್ನೆ ಸಟ್ಟಾ ಜೂಜಾಡುತ್ತಿದ್ದನೆಂದು ರೈಲ್ವೆ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರದ ದ್ವಿತೀಯ ನ್ಯಾಯಾಧೀಶರು ಈ ದಿನ ಆಪಾದಿತನಿಗೆ ೧೫ ರೂ ಜುಲ್ಮಾನೆಯನ್ನು ವಿಧಿಸಿದರು

ಚೀಣಾ ಅಧ್ಯಕ್ಷ ಮಾವೋತ್ಸೆಟುಂಗ್ ರವರ ಕೊಲೆ ಪಿತೂರಿ?

ಚೀಣಾದ ಅಧ್ಯಕ್ಷ ಮಾವೋತ್ಸೆಟುಂಗ್‌ರವರನ್ನು ಕೊಲೆ ಮಾಡಲು ಪಿತೂರಿಯೊಂದು ನಡೆದಿದ್ದುದಾಗಿ ಹಾಂಕಾಂಗಿನಲ್ಲಿರುವ ಚೀಣಿ ಭಾಷಾ ಪತ್ರಿಕೆ ಟೈಮ್ಸ್ ಎಂಬುದು ತಿಳಿಸಿದೆ ಅದು ಫಾರ್ಮೋಸಾ ರಾಷ್ಟ್ರೀಯ ಚೀಣಾರಿಗೆ ಬೆಂಬಲ ನೀಡುವ ಪತ್ರಿಕೆ ಕಳೆದ ೧೬ ನೇ ತಾರೀಖು ಅಧ್ಯಕ್ಷ ಮಾವೋರವರು ತಮ್ಮ ಸ್ವಂತ ವಿಮಾನದಲ್ಲಿ ಹೋಗುವುದಕ್ಕೆ ಸ್ವಲ್ಪ ಮುಂಚೆ ಅದು ಸಿಡಿಯಿತೆಂದು ಹೇಳಲಾಗಿದೆ ವಿಮಾನದ ಇಂಜನ್ನಿನಲ್ಲಿ ಉದ್ದೇಶಪೂರ್ವಕವಾಗಿ ಮರಳನ್ನು ಹಾಕಲಾಗಿತ್ತೆಂದು ವರದಿಯಾಗಿದೆ

ಗೊಂದಲದ ಮಧ್ಯದಲ್ಲೇ ಒರಿಸ್ಸಾ ಗೌರ್ನರರ ಭಾಷಣ

ಮೇಜುಗಳನ್ನು ಬಡಿದು ಗದ್ದಲ ಮಾಡಿದ ಪ್ರಸಂಗ

ಒರಿಸ್ಸಾ ಶಾಸನ ಸಭೆಯನ್ನು ಉದ್ದೇಶಿಸಿ ಗೌರ್ನರ್ ಪಿ ಎಸ್ ಕುಮಾರಸ್ವಾಮಿ ರಾಜಾರವರು ನೆನ್ನೆ ಆರಂಭ ಭಾಷಣ ಮಾಡಿದಾಗ, ವಿರೋಧ ಪಕ್ಷದವರು ಮೇಜುಗಳನ್ನು ಬಡಿದು ಗದ್ದಲ ಮಾಡಿ ಗೌರ್ನರರ ಭಾಷಣವು ಕೇಳದಂತೆ ಮಾಡಿದರು ಗೌರ್ನರರು ಕಾಲು ಗಂಟೆ ಕಾಲ ಮಾತನಾಡಿದರು ಸಭಾ ಭವನವನ್ನು ಅವರು ಪ್ರವೇಶಿಸಿದಾಗ, ವಿರೋಧ ಪಕ್ಷದ ಸದಸ್ಯರು ಅವರನ್ನು ಲಾಬಿಯಲ್ಲಿ ಭೇಟಿ ಮಾಡಿದರು ಅವರುಗಳ ನಾಯಕ ಪ್ರದ್ಯುಮ್ನ ಕಿಶೋರ್ ರವರು, ಒರಿಸ್ಸಾ ಗಡಿ ಪ್ರದೇಶಗಳನ್ನು ತಮ್ಮ ಪ್ರಾಂತಕ್ಕೆ ಸೇರಿಸಲು ಭಾರತ ಸರ್ಕಾರದವರು ತಿರಸ್ಕರಿಸಿದ ಬಗ್ಗೆ ಪ್ರತಿಭಟನಾರ್ಥವಾಗಿ ಗೌರ್ನರರು ಆ ದಿನ ಭಾಷಣ ಮಾಡಕೂಡದೆಂದು ಮನವಿ ಮಾಡಿದರು ಗೌರ್ನರರು ಅಲ್ಲಿಂದ ಹೊರಟಾಗ ಕಾಂಗ್ರೆಸ್ ಸದಸ್ಯರು ಎದ್ದು ನಿಂತರು ವಿರೋಧಿಗಳು ಏಳಲಿಲ್ಲ

ತಿರುವಾಂಕೂರಿನಲ್ಲಿ ಕಾಂಗ್ರೆಸ್ ಮತ್ತು ಪ್ರಜಾ ಪಕ್ಷದ ಒಕ್ಕೂಟ

ತಿರುವಾಂಕೂರು-ಕೊಚ್ಚಿ ಕಾಂಗ್ರೆಸ್ಸಿನವರು ಅಲ್ಲಿನ ಕಾಂಗ್ರೆಸ್ ಮತ್ತು ಪ್ರಜಾ ಸಮಾಜವಾದಿಗಳ ಸಮ್ಮಿಶ್ರ ಕೂಟದ ರಚನೆಯಾಗಬೇಕೆಂದು ಸಲಹೆ ಮಾಡಿರುವುದಾಗಿ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಪಟ್ಟಂ ತಾಣುಪಿಳ್ಳೆಯವರು ತಿಳಿಸಿ, ಈ ಬಗ್ಗೆ ಪರ್ಯಾಲೋಚನೆ ನಡೆಸಲು ತಮ್ಮ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆದಿರುತ್ತಾರೆ ಕಾಂಗ್ರೆಸ್ಸಿನ ಮಂತ್ರಿಮಂಡಲವು ಉರುಳಿದರೆ ಅಧಿಕಾರವನ್ನು ವಹಿಸಿಕೊಳ್ಳಲು ತಿರುವಾಂಕೂರಿನ ವಾಮ ಪಕ್ಷಗಳು ಸಂಯುಕ್ತ ರಂಗವನ್ನು ಮಾಡಿಕೊಳ್ಳಬೇಕೆಂದು ಅಲ್ಲಿನ ಕಮ್ಯೂನಿಸ್ಟ್ ಪಕ್ಷವು ಕರೆಯಿತ್ತಿದೆ

ವಿಗ್ರಹಗಳ ಪ್ರತಿಷ್ಠಾಪನೆ

ನಜರ್‌ಬಾದ್ ನೆಗಹಳ್ಳಿ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ ಕಳೆದ ಶುಕ್ರವಾರ ಕೋದಂಡರಾಮಸ್ವಾಮಿ ಮತ್ತು ಶ್ರೀ ಸುಗ್ರೀವರುಗಳ ಪ್ರತಿಷ್ಠಾಪನೆ ಮಾಡಲಾಯಿತು ಮಹಾ ಸಂತರ್ಪಣೆಯೂ ನಡೆಯಿತು

ಸಂಸ್ಥಾನದ ಎಲ್ಲೆಡೆಯಲ್ಲಿ ಜನ್ಮದಿನ ಹಾಗೂ ವಿರೋಧದ ಪ್ರದರ್ಶನ

ವಿಧಾನ ಸಭೆಯಲ್ಲಿ ಪ್ರಕಟಣೆ ಬೇಡಿಕೆ

ಸ್ವಂ ಸು ಸಂ] ಬೆಂಗಳೂರು ೨೭

ವಿಧಾನ ಸಭೆಯಲ್ಲಿ ಈ ದಿನ ಪ್ರಶ್ನೆಗಳನ್ನು ಕೇಳಲಾಯಿತು. ... ಮದ್ಯಪಾನ ನಿರೋಧವನ್ನು ಜಾರಿಗೆ ತರುವಂತೆ ಶ್ರೀ ಬಿ ರಾಚಯ್ಯನವರು ... ವಹಿಸಿ ತಂದ ನಿರ್ಣಯದ ಬಗ್ಗೆ ... ಶ್ರೀ ಟಿ ಚನ್ನಯ್ಯನವರು ... ವ್ಯಕ್ತಪಡಿಸಿದರು ಕೇಂದ್ರ ಸರ್ಕಾರದವರು ... ಮದ್ಯಪಾನ ನಿರೋಧವನ್ನು ಜಾರಿಗೆ ತರುವ ಬಗ್ಗೆ ತಗಲುವ ನಷ್ಟವನ್ನು ಕಟ್ಟಿಕೊಡಬೇಕೆಂದು ಕೇಂದ್ರದವರೊಡನೆ ಈ ಸಂಬಂಧವಾಗಿ ವ್ಯವಹಾರ ನಡೆಸುತ್ತಿರುವುದಾಗಿಯೂ ತಿಳಿಸಿದರು ... ಮದ್ಯಪಾನ ನಿರೋಧವಿರುವ ಪರ ಪ್ರಾಂತಗಳಿಗೆ ಸೇರಿದಂತೆ ಸಂಸ್ಥಾನದೊಳಗೆ ... ಮಧ್ಯದ ಅಂಗಡಿಗಳು 'ಪರದಂತೆ' ಮುಚ್ಚಲು ... ಯಾಗಿರುವುದೆಂದೂ ತಿಳಿಸಿದರು. ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ಪ್ರಶ್ನೋತ್ತರ ಕಾಲದಲ್ಲಿ ವಿದ್ಯಾ ಮಂತ್ರಿಗಳು ... ನಾಗನಾಥ, ವಿಶ್ವವಿದ್ಯಾಲಯದವರಿಂದ ಮಿತ್ರಮೇಳ ಪ್ರಕರಣದ ಬಗ್ಗೆ ಸರ್ಕಾರದವರು ವರದಿಯನ್ನು ನಿರೀಕ್ಷಿಸುತ್ತಿರುವುದಾಗಿಯೂ, ಈ ... ವನ್ನು ಪರಿಶೀಲಿಸಲು ಸಮಿತಿಯೊಂದನ್ನು ... ಬೇಕೆಂದೂ ತಿಳಿಸಿದರು

ರಾಜ್ಯ ಸಭೆಗೆ ಮೈಸೂರಿನ ಉಮೇದುವಾರರು

ಭಾರತದ ರಾಜ್ಯ ಸಭೆಗೆ ಮೈಸೂರಿನ ವಿಧಾನ ಮಂಡಲದಿಂದ ಆರಿಸಲ್ಪಡಬೇಕಾದ ಇಬ್ಬರು ಪ್ರತಿನಿಧಿಗಳ ಸ್ಥಾನಗಳಿಗೆ ಹಾಲಿ ಸದಸ್ಯರಾಗಿದ್ದು ನಿವೃತ್ತರಾಗಲಿರುವ ಶ್ರೀಗಳು ಎಸ್. ವಿ. ಕೃಷ್ಣಮೂರ್ತಿರಾವ್ ಮತ್ತು ಎಂ ಗೋವಿಂದರೆಡ್ಡಿಯವರು ಕಾಂಗ್ರೆಸ್ ಪರವಾಗಿ ನಾಮಪತ್ರಗಳನ್ನು ಸಲ್ಲಿಸಿರುತ್ತಾರೆ

ಮಾಲಂಕರರ ಅಂತ್ಯಕ್ರಿಯೆ

ಲೋಕಸಭಾಧ್ಯಕ್ಷ ಜಿ. ವಿ. ಮಾಲಂಕರ್‌ರವರ ಕಳೇಬರದ ಅಂತ್ಯಕ್ರಿಯೆಯು ನೆನ್ನೆ ಸಬರಮತಿ ನದಿಯ ಬಳಿ ಸಹಸ್ರಾರು ಜನರ ಸಮ್ಮುಖದಲ್ಲಿ ನಡೆಯಿತು ಅವರ ಹಿರಿಯ ಮಗ ಬಾಲಕೃಷ್ಣರವರು ಮಂತ್ರ ಘೋಷ ಮತ್ತು ರಾಮನಾಮಗಳಾಗುತ್ತಿದ್ದಾಗ ತಮ್ಮ ತಂದೆಯವರ ದೇಹಕ್ಕೆ ಅಗ್ನಿ ಸಂಸ್ಕಾರ ಮಾಡಿದರು. ೫೦ ಸಹಸ್ರ ಜನರು ನೆರೆದಿದ್ದರು ಕಳೇಬರದ ಮೆರವಣಿಗೆ ಕಾಂಗ್ರೆಸ್ ಕಛೇರಿಯಿಂದ ಹೊರಟಿತು ಬೊಂಬಾಯಿ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯ್, ಮಾಜಿ ಗೌರ್ನರ್ ಪಕ್ವಾಸ, ಮುಂತಾದವರು ಭಾಗವಹಿಸಿದ್ದರು. ಅವರಲ್ಲಿ ೨,೦೦೦ ಮಹಿಳೆಯರೂ ಇದ್ದರು

ರಾಷ್ಟ್ರ ಸಂಸ್ಥೆಯ ಆಶ್ರಯದಲ್ಲಿ ಪಕ್ಕದ ರಾಷ್ಟ್ರಗಳು ಮತ್ತು ಘಟ್ಟದಲ್ಲಿ ಕಾರ್ಯಕ್ರಮಗಳನ್ನು ಮುಂದುವರಿಸಿದರೆ ರಷ್ಯವು ತಾನೂ ಮಧ್ಯ ಪ್ರವೇಶಿಸಲು ಸಿದ್ಧವಾಗಿರುವುದೆಂದು ಸಿರಿಯ ... ರಷ್ಯಾ ರಾಯಭಾರಿಯು ತಿಳಿಸಿದನು

ಸಂಗೀತ ಕಲಾಭಿವರ್ಧಿನೀ ಸಭೆಯ ವಾರ್ಷಿಕೋತ್ಸವ

ಜೆ ಬಿ ಮಲ್ಲಾರಾಧ್ಯರ ಭಾಷಣ

ಮೈಸೂರು ೨೬

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ತೃತೀಯ ವಾರ್ಷಿಕೋತ್ಸವವು ಮಹಾರಾಜರ ಹುಜೂರ್ ಸೆಕ್ರೆಟರಿ ಶ್ರೀ ಜೆ ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಮೊನ್ನೆ ಸಂಜೆ ನೆರವೇರಿತು ಇದೇ ಸಂದರ್ಭದಲ್ಲಿ ಶ್ರೀ ತ್ಯಾಗರಾಜರ ಮತ್ತು ಪುರಂದರದಾಸರ ಆರಾಧನೆಯನ್ನೂ ಸಹ ಆಚರಿಸಲಾಯಿತು

ಶ್ರೀಮತಿ ಸುನಂದರವರಿಂದ ಪ್ರಾರ್ಥನೆಯಾದ ನಂತರ ಸಂಘದ ಉಪಾಧ್ಯಕ್ಷ ಶ್ರೀ ಹೆಚ್ ಯೋಗಾ ನರಸಿಂಹರವರು ಸ್ವಾಗತ ಭಾಷಣ ಮಾಡಿ, ವಾರ್ಷಿಕ ವರದಿಯನ್ನು ಒಪ್ಪಿಸಿದರು ವಿ ಎಸ್ ಕೃಷ್ಣಯ್ಯಂಗಾರ್ಯರು ಶ್ರೀ ತ್ಯಾಗರಾಜರ ವಿಷಯವಾಗಿಯೂ ಮತ್ತು ವಿ ಎಂ ಚಲುವರಾಯಸ್ವಾಮಿಯವರು ಪುರಂದರದಾಸರ ವಿಷಯವಾಗಿಯೂ ಭಾಷಣ ಮಾಡಿ ಅವರುಗಳು ಸಂಗೀತ ಮತ್ತು ಭಕ್ತಿ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಅಪಾರ ಸೇವೆಯನ್ನು ಕೊಂಡಾಡಿದರು

ಅನಂತರ ವಿ ಟಿ ಪುಟ್ಟಸ್ವಾಮಯ್ಯನವರಿಂದಲೂ ಮತ್ತು ಶ್ರೀಮತಿ ಎ ವಿ ಮನೋರಮರವರಿಂದಲೂ ಸುಶ್ರಾವ್ಯವಾದ ಗಾಯನವು ವಿ ಎಸ್ ಮಹದೇವಪ್ಪನವರ ಪಿಟೀಲು ಮತ್ತು ವಿ ಕೆ ಹರಿಶ್ಚಂದ್ರನ್‌ರವರ ಮೃದಂಗದೊಡನೆ ನಡೆಯಿತು

ಸಂಘದವರು ಏರ್ಪಡಿಸಿದ್ದ ಸದಾಶಿವರಾಯರ ಕೃತಿಗಳ ಸ್ಪರ್ಧೆಯಲ್ಲಿ ಜಯಶೀಲರಾದವರಿಗೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು ಅನಂತರ ಅವರು ಭಾಷಣ ಮಾಡಿ ಸಂಗೀತ ಕಲಾಭಿವರ್ಧಿನೀ ಸಭೆಯು ಇಷ್ಟು ಚಿಕ್ಕದಾಗಿದ್ದರೂ ಬಹಳ ಹೆಚ್ಚಿನ ಮತ್ತು ಮಹತ್ವದ ಕಾರ್ಯಗಳನ್ನು ಸಾಧಿಸಿರುವುದಕ್ಕಾಗಿ ಪ್ರಶಂಸಿಸಿದರು

ಹಿಂದೆ ಕಲಾವಿದರ ಆವಾಸಸ್ಥಾನವೂ ಮತ್ತು ಕಲೆಯ ತೌರುಮನೆಯೂ ಆಗಿದ್ದ ಮೈಸೂರು ನಗರದಲ್ಲಿ ಇಂದು ಸಂಗೀತ ಕಲೆಗೆ ಪ್ರೋತ್ಸಾಹವು ಬಹಳ ಕಮ್ಮಿಯಾಗಿರುವುದಕ್ಕಾಗಿ ವಿಷಾದಿಸಿದರು ಕಲೆಗಳಲ್ಲಿ ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕೆಂದೂ, ಈ ಬಗ್ಗೆ ತಮ್ಮ ಕೈಲಾದ ಸಹಾಯ ಮಾಡುವುದಾಗಿಯೂ ನುಡಿದರು

ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆ

ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಕಲ ಸದಸ್ಯರ ಸಭೆಯು ನಾಳೆ ರಾತ್ರಿ ೭ ಗಂಟೆಗೆ ಸಂಘದ ಕಾರ್ಯಾಲಯದಲ್ಲಿ ಶ್ರೀ ಟಿ ಎಸ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ಸೇರುವುದು ಎಲ್ಲಾ ಸದಸ್ಯರೂ ಬರುವಂತೆ ಪ್ರಾರ್ಥಿಸಲಾಗಿದೆ

ಮಾತೃ ಮಂಡಲಿಯ ವಾರ್ಷಿಕೋತ್ಸವ

ಲಂಚಿಕೊಪ್ಪಲಿನಲ್ಲಿರುವ ಮಾತೃ ಮಂಡಲಿಯ ೧೦ನೇ ವಾರ್ಷಿಕೋತ್ಸವವು ಕಳೆದ ಶುಕ್ರವಾರ ಶಾಸನ ಸಭಾ ಸದಸ್ಯೆ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರ ಅಧ್ಯಕ್ಷತೆಯಲ್ಲಿ ನಡೆಯಿತು ಪ್ರಾರ್ಥನೆಯನಂತರ ಮಂಡಲಿಯ ಅಧ್ಯಕ್ಷೆ ಶ್ರೀಮತಿ ಸುನಂದಮ್ಮನವರು ಸ್ವಾಗತ ಭಾಷಣ ಮಾಡಿದರು ಶ್ರೀಮತಿ ಪಾರ್ವತಮ್ಮ ರಾಮಯ್ಯಂಗಾರ್ಯರು ವರದಿಯನ್ನೊಪ್ಪಿಸಿದರು ಸ್ತ್ರೀ ಸನುಸ್ಯೆಗಳು ಎಂಬ ನಾಟಕವನ್ನು ಅಭಿನಯಿಸಲಾಯಿತು, ಅಧ್ಯಕ್ಷರು ಮಾತನಾಡಿ ಮಂಡಲಿಯ ಆಶ್ರಯದಲ್ಲಿ ಅನಾಥಾಶ್ರಮವನ್ನು ಏರ್ಪಡಿಸುವಂತೆ ಸೂಚಿಸಿದರು ಶ್ರೀಮತಿ ಜಯಮ್ಮನವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಕೌಶಿಕ ಸಂಕೇತಿ ಬ್ರಾಹ್ಮಣರ ಸಂಘ

ಮೈಸೂರು ೨೬

ಮೈಸೂರು ಸಂಸ್ಥಾನದ ಕೌಶಿಕ ಸಂಕೇತಿ ಬ್ರಾಹ್ಮಣರ ಸಂಘದ ೬ನೆಯ ವಾರ್ಷಿಕ ಸಭೆಯು ಮೊನ್ನೆ ಜಯನಗರದ ಹಾಸ್ಟಲಿನಲ್ಲಿ ಡಾ॥ ವಿ ಕೆ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಕಾರ್ಯದರ್ಶಿಗಳಾದ ಶ್ರೀ ವೈ ಎಸ್ ಚೆನ್ನಿಗರಾಯರು ವರದಿಯನ್ನೊಪ್ಪಿಸಿದರು ಶ್ರೀ ಕೆ ಅನಂತಸುಬ್ಬರಾಯರು ಸಂಘದ ಕಾರ್ಯಕಲಾಪಗಳನ್ನೂ ದಾನಿಗಳನ್ನೂ ಅಭಿನಂದಿಸಿದರು ಸಂಘದಲ್ಲಿ ಆದಾಯ ಕಡಿಮೆ,ಖರ್ಚು ಹೆಚ್ಚೆಂದೂ, ವೇತನಗಳನ್ನು ಪಾಠಶಾಲೆ ಕಾಲೇಜುಗಳಲ್ಲಿ ಸಂಸ್ಕೃತ ಮತ್ತು ಔದ್ಯೋಗಿಕ ಅಭ್ಯಾಸಿಗಳಿಗೆ ಹೆಚ್ಚಾಗಿ ಕೊಡಬೇಕೆಂದೂ ಹೇಳಿದರು

ವಿದ್ಯಾರ್ಥಿನಿಲಯದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಬೇಕೆಂದೂ, ಪ್ರತಿ ವರ್ಷವೂ ಒಬ್ಬೊಬ್ಬರು ವಿದ್ವಾಂಸರು ಮತ್ತು ದಾನಿಗಳನ್ನು ಸನ್ಮಾನಿಸಿ ಛಾಯಾಚಿತ್ರಗಳನ್ನು ಸ್ಥಾಪಿಸಬೇಕೆಂದೂ, ನಗರಗಳಲ್ಲಿ ಪೌರೋಹಿತ್ಯ ನಡೆಸುವವರಿಗೆ ಸೂಕ್ತ ಸಂಭಾವನೆ ಕೊಡಬೇಕೆಂದೂ, ಸಮಾಜದಲ್ಲಿ ಯಾರೂ ಭಿಕ್ಷಾಟನೆ ಮಾಡದಂತೆ ಸೂಕ್ತ ಸಹಾಯ ಮಾಡಬೇಕೆಂದೂ ಹಲವು ನಿರ್ಣಯಗಳನ್ನು ಸೂಚಿಸಿದರು ಅಧ್ಯಕ್ಷರು ಇವುಗಳನ್ನು ಕಾರ್ಯಕಾರಿ ಸಮಿತಿಯಲ್ಲಿ ಪರಿಶೀಲಿಸುವುದಾಗಿ ಭರವಸೆಯಿತ್ತರು

ಮುಂದಿನ ಸಾಲಿಗೂ ಈಗ ಅಧಿಕಾರ ವರ್ಗದಲ್ಲಿರುವವರನ್ನೇ ಪುನಃ ಚುನಾಯಿಸಲಾಯಿತು ಶ್ರೀ ಎ ಜಿ ಕೇಶವರಾಯರು ಉಪಾಧ್ಯಕ್ಷರಾಗಿ ಚುನಾಯಿತರಾದರು ಸಭಾರಂಭದಲ್ಲಿ,ಸಂಘಕ್ಕೆ ಅಪಾರ ಸೇವೆ ಸಲ್ಲಿಸಿದ ಶ್ರೀಗಳಾದ ಆರ್ ತಿಪ್ಪಯ್ಯನವರು ಕೊಣನೂರು ಪಟ್ಟಾಭಿರಾಮಯ್ಯನವರು, ಶ್ರೀಮತಿ ಶಾರದಾಂಬಾಳ್ ಇವರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು

ಸಭೆಯನಂತರ ಶ್ರೀಮತಿ ಗೌರಮ್ಮನವರಿಂದ ಭರತ ನಾಟ್ಯವೂ ಶ್ರೀ ಸೂರ್ಯನಾರಾಯಣ ಶಾಸ್ತ್ರಿಗಳಿಂದ ಅನುವಾದವು ನಡೆದುವು

ತೆಂಗಿನಕಾಯಿ ವರ್ತಕರ ಸಂಘದ ಹೊಸ ಕಾರ್ಯದರ್ಶಿ

ರಾಜಧಾನಿಯ ತೆಂಗಿನಕಾಯಿ ವರ್ತಕರ ಸಂಘದ ಸಭೆಯು ಮೊನ್ನೆ ಶ್ರೀ ಆರ್ ರಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ದೊಡ್ಡಯ್ಯನವರನ್ನು ಕಾರ್ಯದರ್ಶಿಯಾಗಿಯೂ, ಶ್ರೀ ಕೆ ಎಸ್ ಸಿದ್ದೇಗೌಡರನ್ನು ಸಮಿತಿ ಸದಸ್ಯರಾಗಿಯೂ ತೆಗೆದುಕೊಳ್ಳಲಾಯಿತು

ಕಳ್ಳನ ಬಂಧನ

ಸೇಂಟ್‌ಫಿಲೋಮಿನಾ ಚರ್ಚಿನಲ್ಲಿ ಕಳ್ಳತನ ಮಾಡುತ್ತಿದ್ದ ತಂಜಾವೂರಿನ ಅಂತೋಣಿ ಎಂಬ ಕೇಡಿಯನ್ನು ಮೊನ್ನೆ ಲಷ್ಕರ್ ಪೋಲೀಸರು ಬಂಧಿಸಿರುವರು

The Model Tutorial Institute,

D Banumaiah's High School Buildings

Coaching Class for the S S L.C Supplementary Examination to be held in June 1956 starts working as usual from 1st March 1956 Admissions are received during office hours on all working days Total fee for the course is Rs 18 Working hours 7 30 to 10-30 A M

B Seshagiri Rao,
Organiser

ಯುವಕ ಕಲಾವಿದರಿಗೆ ವಿದ್ಯಾರ್ಥಿ ವೇತನಗಳು

ಲಲಿತ ಕಲೆ, ಸಂಗೀತ ನೃತ್ಯ ನಾಟಕ ಮತ್ತು ಚಲನಚಿತ್ರಗಳಲ್ಲಿ ವಿದ್ಯಾಭ್ಯಾಸ ಹೊಂದಿರುವ ತರುಣ ಕಲಾವಿದರಿಗೆ ಹೆಚ್ಚಿನ ವ್ಯಾಸಂಗಕ್ಕಾಗಿ ಪ್ರೋತ್ಸಾಹವೀಯಲು ಭಾರತ ಸರ್ಕಾರದವರು ಕೆಲವು ವಿದ್ಯಾರ್ಥಿ ವೇತನಗಳನ್ನು ಕೊಡಲಿರುವರು ಅರ್ಜಿದಾರರು ೧೮ ವರ್ಷದಿಂದ ೩೫ ವರ್ಷದ ಒಳಪಟ್ಟಿರಬೇಕು ಮಾಹೆಯಾನಾ ೨೫೦ರೂಗಳಂತೆ ೨ ವರ್ಷಗಳ ಕಾಲ ವೇತನವನ್ನು ಕೊಡಲಾಗುವುದು ಅಪೇಕ್ಷೆಯುಳ್ಳವರು ನವ ದೆಹಲಿಯಲ್ಲಿರುವ ಭಾರತ ಸರ್ಕಾರದ ವಿದ್ಯಾ ಇಲಾಖೆಯ (ಎಸ್ ಡಿವಿಷನ್)ರವರಿಂದ ಅರ್ಜಿ ನಮೂನೆಗಳನ್ನು ತರಿಸಿಕೊಂಡು ಇದೇ ಮಾರ್ಚಿ ೫ನೇ ತಾರೀಖಿನೊಳಗೆ ತಲುಪುವಂತೆ ಅವರಿಗೆ ಕಳುಹಿಸಬೇಕು

ಪ್ರೈವೇಟ್ ಕಾಲೇಜು ವಿದ್ಯಾರ್ಥಿನಿಯರ ಸಂತೋಷ ಕೂಟ

ನಗರದ ಪ್ರೈವೇಟ್ ಕಾಲೇಜ್ ಆಫ್ ಕಾಮರ್ಸ್ ಸಂಸ್ಥೆಯ ವಿದ್ಯಾರ್ಥಿನಿಯರು ಮೊನ್ನೆ ಸಂಜೆ ಬನುಮಯ್ಯನವರ ಶಾಲೆಯಲ್ಲಿ ಸಂತೋಷ ಕೂಟವನ್ನು ಏರ್ಪಡಿಸಿದ್ದರು ಪುರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು ಪ್ರಿನ್ಸಿಪಲ್ ಶ್ರೀ ಕೆ ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿ ಸಂಸ್ಥೆಯ ವಿದ್ಯಾರ್ಥಿನಿಯರ ಪ್ರಗತಿಯನ್ನು ವಿವರಿಸಿದರು ಬ್ಯಾಂಕಿಂಗ್ ಮತ್ತು ಕಾಮರ್ಸ್ ವಿಷಯದಲ್ಲಿ ಸಂಸ್ಥಾನಕ್ಕೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ಶ್ರೀಮತಿ ಸುಮಿತ್ರರವರಿಗೆ ಪಾರಿತೋಷಕವೊಂದನ್ನು ಕೊಡಲಾಯಿತು ಅಧ್ಯಕ್ಷರು ಭಾಷಣ ಮಾಡಿ, ಇಂದಿನ ಯುಗದಲ್ಲಿ ವಿದ್ಯಾರ್ಥಿನಿಯರು ವಿದ್ಯಾರ್ಥಿಗಳೊಡನೆ ಸರಿಸಮನಾಗಿ ಪ್ರಗತಿ ಹೊಂದುತ್ತಿರುವುದನ್ನು ಪ್ರಶಂಸಿಸಿ ಪ್ರೈವೇಟ್ ಶಾಲೆಯ ಅಭಿವೃದ್ಧಿಗಾಗಿ ಸಂತೋಷಿಸಿದರು ಕುಮಾರಿ ವಸಂತಲಕ್ಷ್ಮಿಯಿಂದ ನರ್ತನ, ಕುಮಾರಿ ನಾಗಮಣಿ ಮತ್ತು ಪದ್ಮರವರಿಂದ ಗಾಯನ ಮುಂತಾದ ಮನರಂಜನಾ ಕಾರ್ಯಕ್ರಮಗಳು ಜರುಗಿದುವು ಶ್ರೀಮತಿ ಟಿ ಜಿ ಸರೋಜಮ್ಮನವರಿಂದ ವಂದನಾರ್ಪಣೆಯಾಯಿತು

ಚೆಲುವಾಂಬಾ ಆಸ್ಪತ್ರೆಯ ಹೊಸ ವೈದ್ಯರು

ಮೈಸೂರು ವಾಣಿವಿಲಾಸ ಮೊಹಲ್ಲಾದಲ್ಲಿರುವ ಹೆರಿಗೆ ಆಸ್ಪತ್ರೆಯ ಮಹಿಳಾ ಅಸಿಸ್ಟೆಂಟ್ ಸರ್ಜನ್ ಶ್ರೀಮತಿ ಭಾಗ್ಯರತ್ನರವರನ್ನು ಶ್ರೀಮತಿ ಎಂ ಶಾರದಮ್ಮನವರ ಸ್ಥಾನದಲ್ಲಿ ಚೆಲುವಾಂಬಾ ಆಸ್ಪತ್ರೆಗೆ ವರ್ಗಾಯಿಸಲಾಗಿದೆ

Dalvoy High School,
MYSORE
(COACHING SECTION)

Offers excellent coaching by expert teachers for S S L C Suppl students Classes start from 1 3 56 Enquire between 12 & 6 P M

S R Subbukrishnan,
Secretary

Edited, Printed and Published by A R Nagarajan at Sadhvi Press D Subbiah Road Mysore

ಪದಾರ್ಥಗಳ ಬೆಲೆ ಮಿತಿ... ಏರುತ್ತಿದೆ

ಇತ್ತೀಚೆಗೆ ಪದಾರ್ಥಗಳ ಬೆಲೆಗಳು ಗ... ರಿಯುತ್ತಾ ಏರುತ್ತಿರುವುದನ್ನು ನೋಡಿ ಸಾಮಾನ್ಯ ಜನರಿಗೆ ಗಾಬರಿಯುಂಟಾಗುವ... ಬಂದಿರುತ್ತದೆ ಇನ್ನೂ ಸುಗ್ಗಿಯಾಗಿ ... ತಿಂಗಳಾಗಿಲ್ಲ, ಆಗಲೇ ಈಗ ಒಂದು ... ಳಗೆ ಇದ್ದ ಅಕ್ಕಿ ಬೆಲೆ ೩೦ ರೂಪಾ... ೪೮ ರೂಪಾಯಿಗಳವರೆಗೂ ಏರಿರುತ್ತದೆ ... ೮೦ ರೂ ನಿಂದ ೧೫-೧೬ ರೂಪಾಯಿಗಳ... ಏರಿರುತ್ತ ಇವರಡೇ ಅಲ್ಲದೆ ಎಣ್ಣೆ, ... ಕಾಯಿ, ಹುಣಸೇಹಣ್ಣು ಇವುಗಳ ಬೆಲೆ... ದ ೧೦೦ ರಷ್ಟು ಇತ್ತೀಚೆಗೆ ಏರಿರುತ್ತವೆ... ಮಾನ್ಯ ಜನರಲ್ಲಿ ಇದರಿಂದ ಉದ್ಭವಿಸು... ಳ ಹೇಳಲಸಾಧ್ಯ ವರ್ತಕ ವೃತ್ತಗಳಲ್ಲಿ ... ಸುವಲ್ಲಿ ಸಂಸ್ಥಾನದಿಂದ ಹೊರಗಡೆ ... ರುವುದೇ ಇದಕ್ಕೆಲ್ಲಾ ಕಾರಣವೆಂದು ... ತ್ತಾರೆ ಬ್ಯಾಂಕಿನವರು ದಾಸ್ತಾನು ಮಾ... ರುವವರಿಗೆ ಹೇರಳವಾಗಿ ಸಾಲ ಕೊಡು... ದೇ ಕಾರಣವೆಂದೂ ಇನ್ನು ಕೆಲವರು ... ತ್ತಾರೆ ಏನೇ ಇರಲೀ ಸರ್ಕಾರದವರು ... ಹಿತರಕ್ಷಣೆಯ ಕಡೆಗೆ ಗಮನ ಕೊಡುವು... ಹಳ ಮುಖ್ಯ ಈಗಾಗಲೇ ಕಾಲ ಮಿ... ಗಿದೆ ಇನ್ನಾದರೂ ತಕ್ಷಣ ಸೂಕ್ತ ಕ್ರಮ... ಕೊಂಡು ಸಂಸ್ಥಾನದ ಹೊರಗಡೆ ... ಯೂ, ಬ್ಯಾಂಕಿನವರು ಸಾಲ ಕೊಟ್ಟದ್ದು... ಕೂಡಲೇ ವಾಪಸು ಪಡೆಯುವಂತೆಯೂ ... ಜನಗಳ ಕಷ್ಟವನ್ನು ಪರಿಹರಿಸಲು ಪ್ರ... ಡುವರೆಂದು ಆಶಿಸಿರುತ್ತೇನೆ

ಸಿ ಎನ್ ನಾರಾಯಣ...

ಶ್ರೀರಂಗಪಟ್ಟಣದ ಪುರಸಭಾ ಚು...

ಶ್ರೀರಂಗಪಟ್ಟಣದ ಪುರಸಭೆಗೆ ೬ನೆ... ಳು ೫ನೇ ತಾರೀಖು ಚುನಾವಣೆಗಳು ... ವುವು ಒಟ್ಟು ೨೦ ಬ್ಲಾಕುಗಳ ಪೈಕಿ ... ಬ್ಲಾಕುಗಳಿಂದ ಶ್ರೀಗಳಾದ ಎಂ ಎ... ಯಪ್ಪ ವೈ ಟಿ ವೆಂಕಟಪ್ಪ ಮತ್ತು ಕೆ... ಸ್ವಾಮಯ್ಯನವರು ಅವಿರೋಧವಾಗಿ ಚು... ದಿರುವರು ಉಳಿದ ೧೭ ಸ್ಥಾನಗಳಿಗೆ ... ರು ಸ್ಪರ್ಧಿಸಿರುವರು

○ ಕೈಲ್ಸ್ ಆಡಿಟ್ ಆಫೀಸ್ ಬಳಿ ಎಂ ... ರಾಮಾಶೆಟ್ಟಿ ಎಂಬುವರ ಬೈಸಿಕಲ್ಲು ಮೋ... ಳುವಾಗಿದೆಯೆಂದು ದೂರು ಕೊಡಲಾಗಿ...

ಜಾಯಿಕಾಯಿ ಹಲಗೆಗ...

ಉತ್ತಮವಾದ ಜಾಯಿಕಾಯಿ ಹಲ... ಮತ್ತು ಕಬ್ಬಿಣದ ಬೇಲು ಪಟ್ಟಿಗಳೂ ದೊ... ತ್ತವೆ ಬೇಕಾದವರು ಕೂಡಲೇ ವಿಚಾ...

ಸಾಧ್ವಿ ಆಫೀಸ್, ಮೈಸೂರು

Spectacles Neatly Repaired
A ISMAIL & Co
OPTICIANS
T L Upadhyaya Building
Sayaji Rao Road
MYSORE

ಅತ್ಯಾಧುನಿಕ ಮಾದರಿಯಲ್ಲಿ

ಮೈಸೂರಿನಲ್ಲೆ ಮೊಟ್ಟಮೊದಲನೆಯದಾಗಿ ಸಜ್ಜುಗೊಳಿಸಿರುವ ಷೋರೂಮುಗಳಲ್ಲಿ ಗ್ಯಾರಂಟಿಯಾದ ಚಿನ್ನ, ಬೆಳ್ಳಿ ಮತ್ತು ಕಲ್ಲಿನ ನಗಗಳು ಬೇಕಾದರೆ ನಮ್ಮಲ್ಲಿ ವಿಚಾರಿಸಿ

★

ಶ್ರೀ ಕೃಷ್ಣಾ ಜ್ಯುಯೆಲರಿ ಮಾರ್ಟ್,

ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು [ಫೋನ್ ನಂ 811]

YOUR HOME NEEDS A RADIO

BUY **MURPHY RADIO** TO-DAY

Listen & Enjoy SPECIAL PROGRAMMES From ALL-INDIA RADIO for

RADIO WEEK

Authorised Dealers —

ABID & CO.,

Phone 473 Statue Square Mysore

ಲಂ(ಸ್ಟರ್) No. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೋ|| ಸಿಲ್ಕ್ ಸೀರೆಗಳು
ಧರ್ಮಾವರಂ, ಕುಂಬ(?),
ಅರ್ಣಿ, ಬೆಂಗಳೂರ್
ರೇಷ್ಮೆ ಮತ್ತು ನೂಲಿನ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು. ಫೋನ್ 446

ಸಂಪುಟ ೧೪] SADHVI : WEDNESDAY 29-2-1956 ಮೈಸೂರು ಬುಧವಾರ : ೨೯-೨-೧೯೫೬ [ಸಂಚಿಕೆ : ೦೪೯

ಪಂಜಾಬಿನಲ್ಲಿ ರಾಜಕೀಯ ಬಂದಿಗಳ ಬಿಡುಗಡೆ ನಿರ್ಧಾರ

ನಗರಕ್ಕೆ ನಾಳೆ ಇರಾನ್ ರಾಜದಂಪತಿಗಳ ಆಗಮನ

ಮೈಸೂರು ೨೮

[illegible] ರಾಜದಂಪತಿಗಳು ನಾಳೆ ಮಧ್ಯಾಹ್ನ ನಾಳೆ ನಗರಕ್ಕೆ ಆಗಮಿಸುವರು ಅವರನ್ನು [illegible]ದಲ್ಲಿ ರಾಜಪ್ರಮುಖರು ಸ್ವಾಗತಿಸುವ[ರು] [illegible] ಸಂಜೆ ೪ ಗಂಟೆಗೆ ಮೃಗಾಲಯಕ್ಕೆ [illegible] ನಂತರ [illegible] ಇನ್ಸ್‌ಟಿಟ್ಯೂಟ್ [illegible] ಸಂಜೆ ೫|| ಗಂಟೆಗೆ ಕೃಷ್ಣರಾಜ[ಸಾಗರಕ್ಕೆ] ತೆರಳುವರು ರಾತ್ರಿ [illegible] ಮತ್ತು [illegible] ಅವರು [illegible] ಬೆಂಗಳೂರಿಗೆ ಹಿಂದಿರುಗುವರು [illegible] ನಗರದ [illegible] ಭೇಟಿ [illegible]

ಕೃಷ್ಣರಾಜಸಾಗರಕ್ಕೆ ಹೆಚ್. ಕೆ. ಪಂಡಿತಾರಾಧ್ಯರ ವರ್ಗ

[illegible] ಇಂಜನಿಯರ್ ಶ್ರೀ ಹೆಚ್. ಕೆ. [ಪಂಡ]ತಾರಾಧ್ಯರನ್ನು ಕೃಷ್ಣರಾಜಸಾಗರ [illegible] ಸಬ್‌ಡಿವಿಜನ್ನಿನ ಅಸಿಸ್ಟೆಂಟ್ ಇಂಜನಿಯ[ರ್] ಶ್ರೀ [illegible] ಅವರನ್ನು ಹಾಸನಕ್ಕೆ ವರ್ಗ ಮಾ[ಡ]ಲಾಗಿದೆ

ರಾಮಾಯಣದ ಹರಿಕಥೆ

[illegible] ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾ[ಲಯ]ದಲ್ಲಿ [illegible] ಪ್ರತಿನಿತ್ಯ ಸಂಜೆ [illegible] ಶ್ರೀ ಅಶ್ವತ್ಥನಾರಾಯಣ [illegible] ಸಂಪೂರ್ಣ ರಾಮಾಯಣವನ್ನು ಹರಿಕ[ಥೆ] [illegible] ಹೇಳುವರು [illegible] ಶ್ರೀ ಡಿ. [illegible] ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸು[ವರು] [illegible] ಸರ್ವರೂ ದಯಮಾಡಿಸಬೇಕೆಂದು ಶ್ರೀ [illegible] ತ್ಯಾಗರಾಜ ಸಂಗೀತ ಶಾಲೆಯವರು [illegible]

[illegible] ದಳದವರ ಸಂತೋಷ ಕೂಟ

[illegible] ಕಾಲೇಜಿನ ಎನ್. ಸಿ. ಸಿ. ದ[ಳದವ]ರು ನೆನ್ನೆ ಸಂಜೆ [illegible] ಅಧ್ಯಕ್ಷತೆಯಲ್ಲಿ ಸಂತೋಷಕೂಟವೊಂದನ್ನು [ಏರ್ಪ]ಡಿಸಿದ್ದರು ಡಾ|| ಬಿ. ಆರ್. [illegible] ವೇಣುವಾದನವು ನಡೆಯಿತು [illegible] ಶ್ರೀ ಎಂ. ಎನ್. ರಾಮಸ್ವಾಮಿಯವ[ರು] [illegible] ಭಾಷಣ ಮಾಡಿದರು ಶ್ರೀ [illegible]ವರು ತಮ್ಮ ಭಾಷಣದಲ್ಲಿ, ಅಹಿಂಸಾ ತತ್ತ್ವ[illegible]ದಿಂದ ಕೂಡಿರುವ ಭಾರತದಲ್ಲಿ [illegible], ಪ್ರವಾಹ ಮತ್ತು ಭೂಕಂಪಗಳೇ [illegible] ಪ್ರಾಕೃತಿಕ ಶತ್ರುಗಳನ್ನು ಎದುರಿಸು[ವಲ್ಲಿ] [illegible] ಮತ್ತು ಆರೋಗ್ಯ, ವಿದ್ಯಾಭ್ಯಾಸ [illegible] ಕ್ಷೇತ್ರಗಳಲ್ಲಿ ಅದು [illegible] ಪಾತ್ರವು ಬಹಳ ಅಮೂಲ್ಯವಾದು[ದು] [illegible] ವಿದ್ಯಾರ್ಥಿಗಳು ಅಂತಹ ಸೈನ್ಯ ಶಿಕ್ಷಣ [illegible] ಶಿಸ್ತನ್ನು ಕಲಿತು ತನ್ಮೂಲಕ [illegible] ಸೇವೆಯನ್ನು ಮಾಡಬೇಕೆಂದೂ ನುಡಿ[ದರು] ಶ್ರೀ ನಾಗಭೂಷಣಂರವರು ವಂದನಾರ್ಪ[ಣೆ] [ಮಾ]ಡಿದರು

ನೇತ್ರ ಚಿಕಿತ್ಸಾ ಶಿಬಿರಕ್ಕೆ ಮಹಾರಾಜರ ಭೇಟಿ

ಮೈಸೂರು ೨೮

ಇಲ್ಲಿನ ವಸ್ತು ಪ್ರದರ್ಶನಾಲಯದಲ್ಲಿ ಡಾ|| ಮೋದಿಯವರು ನಡೆಸುತ್ತಿರುವ ಉಚಿತ ನೇತ್ರ ಚಿಕಿತ್ಸಾ ಶಿಬಿರಕ್ಕೆ ಈ ದಿನ ಬೆಳಗ್ಗೆ ಶ್ರೀಮನ್ಮಹಾರಾಜರು ಭೇಟಿಯಿತ್ತು ಅಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳನ್ನು ಪರಿಶೀಲಿಸಿ ಮೆಚ್ಚುಗೆಯನ್ನು ಸೂಚಿಸಿದರು [illegible] ಭಗವ[ಂತನು] [illegible] ಡಾ|| ಮೋದಿಯವರನ್ನು [illegible]

ಡಾ|| ಮೋದಿಯವರು ಶ್ರೀಮನ್ಮಹಾರಾಜರ [illegible]ದಲ್ಲಿ ಎಂಟು [illegible] ಚಿಕಿತ್ಸೆಯನ್ನು ನಡೆಸಿದರು [illegible] ಕಣ್ಣಿನ [illegible] ತೆಗೆದು ಅದಕ್ಕೆ [illegible] ಹಾಕಿದ[ರು] [illegible] ಇನ್ನೊಂದು ಕಣ್ಣಿನ [illegible] ತೆಗೆದುಹಾಕಿದರು [illegible] ಹೋಗಿದ್ದ [illegible] ಸುಲಭ [illegible] ಗುತ್ತಿಯನ್ನು [illegible]

ಶ್ರೀಮನ್ಮಹಾರಾಜರು ಅನಂತರ [illegible] ಹೊಂದಿದ ರೋಗಿಗಳು [illegible] ಭೇಟಿಯಿತ್ತು ಅಲ್ಲಿನ ವ್ಯವಸ್ಥೆಗಳನ್ನು ಪರಿಶೀಲಿಸಿದರು

ಹಿಟ್ಟಿನ ಗಿರಣಿ ಮಾಲೀಕರ ಸಭೆ

ರಾಜಧಾನಿಯಲ್ಲಿರುವ ಹಿಟ್ಟಿನ ಗಿರಣಿಗಳ ಮಾಲೀಕರುಗಳ ಸಂಘದ ಕಾರ್ಯಕಾರಿ ಸಮಿತಿ ಸಭೆಯು ನಾಳೆ ಸಂಜೆ [illegible] ಗಂಟೆಗೆ ಸಂಘದ ಕಛೇರಿಯಲ್ಲಿ ಸೇರುವುದು ಬಹು ಮುಖ್ಯವಾದ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲಾಗುವುದರಿಂದ ಮಾಲೀಕರುಗಳೆಲ್ಲರೂ ಬರುವಂತೆ ಕೋರಲಾಗಿದೆ

ಉಪಾಧ್ಯಾಯಿನಿಯನ್ನು ಹೊಡೆದ ಯುವಕರ ಬಂಧನ

ಉತ್ತರ ಪ್ರದೇಶ ಪ್ರಾಂತದ [illegible]ಪುರ ಜಿಲ್ಲಾಧಿಕಾರಿಗಳು ಅಲ್ಲಿರುವ ಲಕ್ಷ್ಮೀನಾರಾಯಣ ವಿದ್ಯಾ ಮಂದಿರದ ವಿದ್ಯಾರ್ಥಿನಿಯರಿಗೆ [illegible] ಪೋಕರಿಗಳಿಂದ ಕಿರುಕುಳಗಳಾಗದಂತೆ ಕ್ರಮ ಜರುಗಿಸುವುದಾಗಿ ಘೋಷಿಸಿಯುತ್ತಿರುವರು ವಿದ್ಯಾರ್ಥಿನಿಯರು ಯುವಕರ ನಡವಳಿಕೆಯನ್ನು ಪ್ರತಿಭಟಿಸಿ ಮೆರವಣಿಗೆ ನಡೆಸಿದ್ದರು ರಸ್ತೆ ಪ್ರಣಯದಲ್ಲಿ ಉನ್ಮತ್ತರಾದ ಯುವಕರನ್ನು [illegible] ಉಪಾಧ್ಯಾಯನಿಯೊಬ್ಬರನ್ನು ಹೊಡೆದರೆಂದು [illegible] ಮಂದಿ ವಿದ್ಯಾರ್ಥಿಗಳನ್ನು ಬಂಧಿಸಿ ಜಾಮೀನು ಮೇಲೆ ಬಿಡಲಾಗಿದೆ

ಕೊಲಂಬೊದಲ್ಲಿ ನೀರಿನ ಅಭಾವ

ಸಿಂಹಳದ ರಾಜಧಾನಿ ಕೊಲಂಬೊನಲ್ಲಿ ವಿದ್ಯುಚ್ಛಕ್ತಿ [illegible] ನೀರಿನ ಸರಬರಾಜಿಗೆ ತೊಂದರೆಯಾಗಿದೆ ಮೊನ್ನೆ ಅಲ್ಲಿ ನೀರಿನ ಅಭಾವವು ಆರಂಭವಾಯಿತು ಸಿಂಹಳದ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರದಲ್ಲಿ ನೀರಿನ ಸರಬರಾಜು ಕಡಿಮೆಯಾಗಿದೆ

ಪಂಜಾಬಿನಲ್ಲಿ ಬಂಧಿತರೆಲ್ಲರ ಬಿಡುಗಡೆಗೆ ನಿರ್ಧಾರ

ಭಾಷಾವಾರು ಘೋಷಣೆಗಳನ್ನು ಮಾಡಕೂಡದೆಂಬ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಅಮೃತಸರದಲ್ಲಿ ದಸ್ತಗಿರಿಯಾದ ಅಕಾಲಿ ಸಿಖ್ಖರ ಮೇಲಿನ ಮೊಕದ್ದಮೆಗಳನ್ನೆಲ್ಲಾ ವಾಪಸು ತೆಗೆದುಕೊಳ್ಳಲು ಪಂಜಾಬು ಸರ್ಕಾರದವರು ನಿರ್ಧರಿಸುತ್ತಾರೆ ಮಹಾ ಪಂಜಾಬು ರಂಗದ ಮುಖಂಡ [illegible] ಮತ್ತು ಇತರರೆಲ್ಲರನ್ನೂ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ

ಕೋಲಾರದ ಚಿನ್ನದ ಗಣಿ ಆಸ್ತಿ ಬಗ್ಗೆ ಲಂಡನ್ ಕೋರ್ಟಿನಲ್ಲಿ ದಾವೆ

ಮೈಸೂರು ಸರ್ಕಾರದ ಕಾರ್ಯಕ್ರಮ

ಕೋಲಾರ ಚಿನ್ನದ ಗಣಿ ಕಂಪನಿಗೆ ಸೇರಿದ ಸುಮಾರು [illegible] ಲಕ್ಷ ರೂ. ಆಸ್ತಿಯನ್ನು ಪೌಂಡು ಲೆಕ್ಕದಿಂದ ರೂಪಾಯಿ ಲೆಕ್ಕಕ್ಕೆ ಪರಿವರ್ತಿಸಬೇಕೆಂದು [illegible] ಮೈಸೂರು ಸರ್ಕಾರದವರು ಲಂಡನ್ ಕೋರ್ಟಿನಲ್ಲಿ ದಾವೆ ಹೂಡಿರುತ್ತಾರೆ ಈ ಸಂಬಂಧವಾಗಿ [illegible] ಇಂಗ್ಲೆಂಡಿನ [illegible] ಪ್ರತಿನಿಧಿ [illegible] ಕಂಪನಿಗಳ ವಶದಲ್ಲಿರುವ [illegible] ಆಸ್ತಿಗಳನ್ನು [illegible] ಪರಿಶೀಲನೆ ನಡೆಸುತ್ತಿರುವರು

ಭಾರತದ ಬಗ್ಗೆ ಅಮೆರಿಕಾ ನೀತಿಯಲ್ಲಿ ಬದಲಾವಣೆ

ಅಮೆರಿಕಾ ವಿದೇಶಾಂಗ ಮಂತ್ರಿ ಡಲೆಸರ ಹೇಳಿಕೆ

ಬರುವ ತಿಂಗಳು ತಾವು ಕೈಗೊಳ್ಳುವ ಏಷ್ಯಾ ಪ್ರವಾಸದ ಪರಿಣಾಮವಾಗಿ ಭಾರತದ ಬಗ್ಗೆ ಅಮೆರಿಕವು ಹೊಂದಿರುವ ನೀತಿಯಲ್ಲಿ ಸ್ವಲ್ಪಮಟ್ಟಿನ ಬದಲಾವಣೆಗಳನ್ನು ಮಾಡುವಂತೆ ಸಲಹೆ ಮಾಡುವುದಾಗಿ ಅಮೆರಿಕದ ವಿದೇಶಾಂಗ ಮಂತ್ರಿ ಡಲೆಸರು ತಿಳಿಸಿರುತ್ತಾರೆ ಪ್ರಧಾನಿ ನೆಹರೂರವರೊಡನೆ ಭೇಟಿ ನಡೆಸಲು ಅವರು ಕಾತುರರಾಗಿದ್ದಾರೆ ಭಾರತದ ಪ್ರಥಮ ಪಂಚವಾರ್ಷಿಕ ಯೋಜನೆಯ ಸಾಧನೆಗೆ ಅಮೆರಿಕವು ತುಂಬಾ ಸಹಾಯ ಮಾಡಿರುವುದಾಗಿಯೂ, ದ್ವಿತೀಯ ಯೋಜನೆಗೂ ಸಹಾಯ ಮಾಡುವಂತೆ ತಾವು ಸಲಹೆ ಮಾಡಲಿರುವುದಾಗಿಯೂ ಅವರು ಹೇಳಿರುವರು

ಅಗ್ಗದ ಬೆಲೆಗೆ ಪೌಷ್ಟಿಕ ಆಹಾರ

ಕಡಿಮೆ ವೆಚ್ಚದಿಂದ ಹೆಚ್ಚು ಪೌಷ್ಟಿಕವಾದ ಆಹಾರವನ್ನು ತಯಾರಿಸಲು ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದವರು ಸಧ್ಯದಲ್ಲೇ ಕ್ರಮ ಕೈಗೊಳ್ಳಲಿರುವರು ದಿನಕ್ಕೆ ಅಂತಹ [illegible] ಟನ್ ಆಹಾರವನ್ನು ತಯಾರಿಸಲು ಯೋಜನೆಗಳು ಸಿದ್ಧವಾಗಿವೆ [illegible] ಲಕ್ಷ ರೂ. ವೆಚ್ಚದಲ್ಲಿ [illegible] ಯಂತ್ರಗಳನ್ನು ವಿವಿಧ ಕಡೆಗಳಲ್ಲಿ ಸ್ಥಾಪಿಸಲಾಗುವುದು [illegible] ಆಣೆಗೆ [illegible] ಅಥವಾ [illegible] ಆಹಾರವು ದೊರೆಯುವುದೆಂದೂ, ಅದರಲ್ಲಿ ಮನುಷ್ಯನಿಗೆ ಬೇಕಾಗುವ ಪ್ರೋಟೀನ್, ಲೋಹ ಮತ್ತು ವಿಟಮಿನ್ನಿನ ಬಹು ಭಾಗವು ಇರುವುದೆಂದೂ ಹೇಳಲಾಗಿದೆ

ಬೆಂಗಳೂರಿನಲ್ಲಿ ಇರಾನಿನ ಷಾ ಮತ್ತು ರಾಣಿ ಸುರಯ್ಯಾರವರು

ಸ್ವಂ ಸು ತಂತಿ] ಬೆಂಗಳೂರು ೨೮

ಇರಾನಿನ ಷಾ ಮತ್ತು ರಾಣಿ ಸುರಯ್ಯಾರವರು ಈ ಬೆಳಗ್ಗೆ [illegible] ಗಂಟೆಗೆ ಹೈದರಾಬಾದಿನಿಂದ, ಇರಾನಿನಲ್ಲಿ ಭಾರತದ ರಾಯಭಾರಿಯಾಗಿರುವ ಡಾ|| ತಾರಾಚಂದ್ ಮತ್ತು ಉಪವಿದೇಶಾಂಗ ಉಪ ಮಂತ್ರಿ ಭೋಂಸ್ಲೆಯವರೊಡನೆ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು ಅವರನ್ನು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಸ್ವಾಗತಿಸಿ ಹೂವಮಾಲೆಗಳನ್ನು ಅರ್ಪಿಸಿದರು ಇರಾನ್ ಮತ್ತು ಭಾರತದ ರಾಷ್ಟ್ರಗೀತೆಗಳನ್ನು ನುಡಿಸಲಾಯಿತು

ವಿಮಾನ ಬಲದವರು ಗೌರವರಕ್ಷೆಯನ್ನಿತ್ತರು ಶ್ರೀ ಹನುಮಂತಯ್ಯನವರು ಮಂತ್ರಿಗಳು, ಮಿರ್ಜಾ ಇಸ್ಮಾಯಿಲ್, ಸ್ಪೀಕರ್, ಮೇಯರ್, ಡೆಪ್ಯುಟಿ ಸ್ಪೀಕರ್ ಶ್ರೀಮತಿ ಲಕ್ಷ್ಮಮ್ಮ ಮುಂತಾದವರ ಪರಿಚಯ ಮಾಡಿಕೊಟ್ಟರು ಹಿಂದೂಸ್ಥಾನ್ ವಿಮಾನ ಕಾರ್ಖಾನೆಯ ಎಚ್. ಟಿ. [illegible] ವಿಮಾನದ ಪ್ರದರ್ಶನವನ್ನು ಅತಿಥಿಗಳು ವೀಕ್ಷಿಸಿದನಂತರ ಕಾರ್ಖಾನೆಗೂ ಭೇಟಿಯಿತ್ತರು ದಾರಿಯುದ್ದಕ್ಕೂ ಜನರು ರಾಜದಂಪತಿಗಳ ಬಗ್ಗೆ ಹರ್ಷೋದ್ಗಾರ ಮಾಡಿದರು [illegible] ವಿಜ್ಞಾನ ಮಂದಿರವನ್ನೂ ಅವರು ಸಂದರ್ಶಿಸಿದರು

ವಿಶ್ವವಿದ್ಯಾಲಯದ ಅಧ್ಯಾಪಕರಿಗೆ ಹೆಚ್ಚು ಸಂಬಳ

ಸಲಹೆಯನ್ನು ಕಳುಹಿಸುವಂತೆ ವೈಸ್ ಛಾನ್ಸಲರರಿಗೆ ಸರ್ಕಾರದ ಪತ್ರ

ಸ್ವಂ ಸು ತಂತಿ] ಬೆಂಗಳೂರು ೨೮

ವಿಧಾನ ಸಭೆಯಲ್ಲಿ ಇಂದು ವಿದ್ಯಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು, ವಿಶ್ವವಿದ್ಯಾಲಯದ ಅಧ್ಯಾಪಕರುಗಳ ಸಂಬಳದ ದರ್ಜೆಯನ್ನು ಹೆಚ್ಚಿಸುವ ಬಗ್ಗೆ ಪುನರ್ವಿಮರ್ಶಿಸಿ ಸಲಹೆಗಳನ್ನು ಸರ್ಕಾರಕ್ಕೆ ಕಳುಹಿಸುವಂತೆ ವೈಸ್ ಛಾನ್ಸಲರರಿಗೆ ಪತ್ರ ಬರೆಯಲಾಗಿರುವುದೆಂದು ತಿಳಿಸಿದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಗೋಟು ವಾದ್ಯ ಮತ್ತು [illegible] ಎಂ. ವಿ. [illegible] ನೀತಿಗಳು [illegible] ಮತ್ತು ಸಂಜೆ [illegible] ಆರ್. [illegible] ರಾಮಾಯಣ [illegible] ಎಸ್. [illegible] ಸಂಗೀತ ಮಧ್ಯಾಹ್ನ [illegible] ಮತ್ತು [illegible] ಎಸ್. ಕೆ. [illegible] ಸಂಗೀತ [illegible] ಸಂಗೀತ ಕಾರ್ಯಕ್ರಮ [illegible] ಮತ್ತು [illegible] ಎಂ. ವಿ. ಲಕ್ಷ್ಮೀನರಸಿಂಹಯ್ಯ [illegible] ವಿಶ್ವವಿದ್ಯಾಲಯದ [illegible] ಸ್ಪರ್ಧೆ [illegible] ನಂಜನಗೂಡಿನ [illegible] ಮೈಸೂರು ಸರ್ಕಾರಿ ಟ್ರೈನಿಂಗ್ ಕಾಲೇಜಿನ [illegible] ಮಂದಿ ವಿದ್ಯಾರ್ಥಿ ಉಪಾಧ್ಯಾಯರುಗಳಿಗೆ [illegible] ಶಿಕ್ಷಣ [illegible] ಇಂದು ಅದು ಮುಗಿಯುವುದು

ಸೊಳ್ಳೆ ಕಾಟದ ಬಗ್ಗೆ ಪರಿಣತರ ಪರಿಶೀಲನೆ

ಪೌರಸಭೆಯವರಿಂದ ಸಮಿತಿ ಸ್ಥಾಪನೆ

ಮೈಸೂರು —

ನಗರದಲ್ಲಿ ಸೊಳ್ಳೆ ಕಾಟವು ಹೆಚ್ಚಲು ಕಾರಣಗಳನ್ನು ಪರಿಶೀಲಿಸಿ ಮತ್ತು ಅವನ್ನು ನಿವಾರಿಸಲು ಸೂಕ್ತ ಸಲಹೆ ನೀಡುವ ಸಲುವಾಗಿ ಪರಿಣತರ ಸಮಿತಿಯೊಂದನ್ನು ರಚಿಸಲು ನೆನ್ನೆ ಸಂಜೆ ನಡೆದ ಪೌರಸಭೆಯ ಮುಂದುವರಿದ ಅಧಿವೇಶನದಲ್ಲಿ ನಿರ್ಧರಿಸಲಾಯಿತು ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು

ಈ ಬಗ್ಗೆ ಆರೋಗ್ಯಾಧಿಕಾರಿಗಳು ಟಿಪ್ಪಣಿಯೊಂದನ್ನು ಬರೆದು ಸಂಸ್ಥಾನದ ಆರೋಗ್ಯ ಇಲಾಖೆಯ ಡೈರೆಕ್ಟರ್ ಸ್ಯಾನಿಟರಿ ಇಂಜನಿಯರ್ ಮಲೇರಿಯಾಲಜಿ ಸೂಪರಿಂಟೆಂಡೆಂಟರು ಆರೋಗ್ಯಾಧಿಕಾರಿಗಳು ಮತ್ತು ಪೌರಸಭಾಧ್ಯಕ್ಷರು ಇರುವ ಸಮಿತಿಯನ್ನು ರಚಿಸಲು ಸೂಚಿಸಿದ್ದರು

ಛತ್ರ [illegible] ಚೋಳ ಮುಂತಾದವರ ಮೇಲೆ ವ್ಯಕ್ತಿಗಳು ಸ್ವಂತ ಕಾಡದಂತೆ ತಡೆಗಟ್ಟಬೇಕೆಂದು ಸಂಸ್ಥಾನ ಸರಕಾರವನ್ನು ಕೋರುವ ನಿರ್ಣಯವನ್ನು ಶ್ರೀ ಚೌಡಯ್ಯನವರು ಮಂಡಿಸಿದರು

ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಕ್ರಿಯಾಲೋಪವೆತ್ತಿ ಪೌರಸಭೆಯ ವ್ಯಾಪ್ತಿಗೆ ಈ ವಿಷಯವು ಅತೀತವಾಗಿರುವುದರಿಂದ ಅದನ್ನು ಚರ್ಚಿಸಲು ಸಾಧ್ಯವಿಲ್ಲವೆಂದು ಸೂಚಿಸಿದರು ಇದರ ಬಗ್ಗೆ ರೂಲಿಂಗ್ ಕೊಡಲು [illegible] ಅಧ್ಯಕ್ಷರು ಮುಂದೆ ಹಾಕಿದರು

ನಗರದಲ್ಲಿರುವ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವ ಬಗ್ಗೆ ಸರ್ಕಾರದ ನಿರ್ಧಾರಕ್ಕಾಗಿ ವಿಶ್ವಾಸವನ್ನು ಸೂಚಿಸಿ ಸರ್ಕಾರದವರು ತಮ್ಮ ನಿಲುವನ್ನು ಬದಲು ಮಾಡಬೇಕೆಂದು ಒತ್ತಾಯಪಡಿಸುವ [illegible] ನಿರ್ಣಯವನ್ನು ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಮಂಡಿಸಿದರು ಶ್ರೀ ಮಾರ್‌ಸೂರ್ [illegible] ಅನುಮೋದಿಸಿದರು ಅಧ್ಯಕ್ಷರು ಮಾತನಾಡಿ ಈ ವಿಷಯವನ್ನು ಚರ್ಚಿಸಲು ಸಭೆಗೆ [illegible] ಯೇ ಎಂದು ಕೇಳಲಾಗಿ ಇಂತಹ ವಿಚಾರಗಳನ್ನು ಹಿಂದೆ ಚರ್ಚಿಸಿರುವ ಎಷ್ಟೋ ಪ್ರಸಂಗಗಳಿವೆಯೆಂದು ಸೂಚಕರು ತಿಳಿಸಿದರು [illegible] ವು ಪ್ರಾಮುಖ್ಯವಾದುದೆಂದು ಸರ್ಕಾರಕ್ಕೆ [illegible] ನ್ನು ವಿಶೇಷ ಸಭೆಯಲ್ಲಿ ಪರಿಶೀಲಿಸುವಂತೆ ಗೊತ್ತುಪಡಿಸಲಾಯಿತು

[illegible] ವಸೂಲಿ ಕ್ರಮಗಳಲ್ಲಿ ಅಧಿಕಾರಿಗಳ ಲೋಪದ ಕಡೆ ಶ್ರೀ [illegible] ಲಿಂಗಯ್ಯ ಶ್ರೀ ಎಂ [illegible] ಪುಟ್ಟ ಅವರು ಅಧ್ಯಕ್ಷರ ಗಮನವನ್ನು ಸೆಳೆದು ಕೆಲವು ವೇಳೆ ಸುಂಕ ವಸೂಲು ಮಾಡದೆ ತಂಬಿದ [illegible] ಮೊತ್ತವನ್ನು ಬಿಟ್ಟುಬಿಡಲಾಗುತ್ತಿದೆಯೆ

ವಿವಾಹ ಮಹೋತ್ಸವಗಳು

ರಂಗಧಾಮಯ್ಯ [illegible] ಮೆಟ್ರಿಕ್ಯುಲೇಷನ್ ಪ್ರಿನ್ಸಿಪಾಲರಾದ ಶ್ರೀ ಎ ಸುಬ್ಬರಾಯ [illegible] ಶ್ರೀಯವರು ತಮ್ಮ [illegible] ಶ್ರೀ ಎಂ ಎಸ್ ಕಸ್ತೂರಿಯವರ ಹಾಸನದ ಹೈಸ್ಕೂಲು ಉಪಾಧ್ಯಾಯರಾದ ಶ್ರೀ ಎ ಪಿ ಕೃಷ್ಣಪ್ಪನವರ ಮಗಳು ಸೌ ॥ ಕಮಲರವರನ್ನು ತಂದುಕೊಂಡು ಮೊನ್ನೆ ಹಾಸನದಲ್ಲಿ ವಿವಾಹವನ್ನು ನೆರವೇರಿಸಿದರು

ಮೇಲುಕೋಟೆ ಆನಂದಂಪಿಳ್ಳೆ ಕೊಡೆ ಮೊದಲಿಯಾಂಡ [illegible] ಅಯ್ಯಂಗಾರ್ಯರು ತಮ್ಮ ಮಗಳು ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಗಣಿತದ ಪ್ರಾಧ್ಯಾಪಕಿಯೂ ಆದ ಶ್ರೀಮತಿ ಕೆ ಎ ಕಮಲರವರನ್ನು ಹಟ್ಟಿವಳ್ಳಿ ಸ್ವಚ್ಛಂದಂ ಶ್ರೀ ವೇಂಕಟನರಸಿಂಹಾಚಾರ್ಯರ ಪುತ್ರರೂ ಅಸಿಸ್ಟೆಂಟ್ ಜನರಲ್ ಆಫೀಸಿನ ಸೂಪರಿಂಟೆಂಡೆಂಟರೂ ಆದ ಶ್ರೀ ಹೆಚ್ ಎ ಕೃಷ್ಣಸ್ವಾಮಿ ಅಯ್ಯಂಗಾರ್ಯರಿಗೆ ಕೊಟ್ಟು ಕಳೆದ ಶುಕ್ರವಾರ ವಿವಾಹವನ್ನು [illegible] ನೆರವೇರಿಸಿದರು

ಶ್ರೀ ಓ ಎಲ್ ಚಲುವಯ್ಯನವರು ತಮ್ಮ ಕುಮಾರಿ ಸೌ ಮಾಲತಿಯನ್ನು ಹೆಗ್ಗಡದೇವನ ಕೋಟೆ ತಾಲ್ಲೂಕು ಮುಳಿಯ ಶ್ರೀ ಎಂ ಎಲ್ [illegible] ಅವರ ಮಕ್ಕಳು ಶ್ರೀ ಎಂ ಸಿ [illegible] ಯಕ [illegible] ಅವರಿಗೆ ಕೊಟ್ಟು ನಡೆಸಿದ ವಿವಾಹ ಸಂದರ್ಭದಲ್ಲಿ ಮೊನ್ನೆ ಸ್ವಾಗತ ಸಮಾರಂಭವನ್ನು [illegible]

ಬೇಡನ್ ಪೊವೆಲ್ಲರ ವರ್ಧಂತಿ

ಸ್ಕೌಟು [illegible] ಮೂಲಪುರುಷರಾದ ಲಾರ್ಡ್ ಬೇಡನ್ ಪೊವೆಲ್ಲರ [illegible] ನೆ ವರ್ಧಂತಿಯನ್ನು ನಗರದ ಸ್ಕೌಟು ಪಡೆಗಳವರು ಗಿಲ್ವೆಲಿಯ [illegible] ಕಳೆದ [illegible] ನೆರವೇರಿಸಿದರು ಶ್ರೀ ಎಂ ಎ [illegible] ತಿರುಮಲಾಚಾರ್ಯರು ಅಂತರರಾಷ್ಟ್ರೀಯ ಸ್ಕೌಟು ಪ್ರಾರ್ಥನೆಯನ್ನು ಹಾಡಿದರು ಶ್ರೀ ಎಸ್ ಪಿ ರಂಗಣ್ಣನವರು ಧ್ವಜಾರೋಹಣ ಮಾಡಿದರು ಶ್ರೀ ಬಿ ಟಿ ಶ್ರೀನಿವಾಸಯ್ಯಂಗಾರ್ಯರು ಸ್ಕೌಟು ಪ್ರತಿಜ್ಞೆಯನ್ನು ಹೇಳಿದರು ನಂತರ ಶ್ರೀರಂಗಣ್ಣನವರು ಬೇಡನ್ ಪೊವೆಲರ ಬಗ್ಗೆ [illegible] ಸ್ಕೌಟುಗಳು ಉತ್ತಮ ಪ್ರಜೆಗಳಾಗಬೇಕೆಂದೂ, ಸದಾ ನಗೆ ಮುಖದಿಂದ ಇರಬೇಕೆಂದೂ ತಿಳಿಸಿದರು ಸಂಜೆ ನಗರದ ೨೦೦ ಮತ್ತು ೩೦೦ ಸ್ಕೌಟು ಗೈಡುಗಳ ಸಭೆಯು ನಡೆಯಿತು [illegible] ಇದೇ ಕಾರ್ಯಕ್ರಮಗಳು ಜರುಗಿದುವು

[illegible] ಇದರಿಂದ ಪೌರಸಭೆಗೆ ವರಮಾನ ಕಡಿಮೆಯಾಗುವುದೆಂದು ತಿಳಿಸಿದರು ಈ ಬಗ್ಗೆ ತನಿಖೆ ನಡೆಸಲಾಗುವುದೆಂದು ಅಧ್ಯಕ್ಷರು ಸೂಚಿಸಿದರು

ಹೈದರಾಬಾದಿನಲ್ಲಿ ಅಂತರ ಜಾತೀಯ ವಿವಾಹಗಳು

ಹೈದರಾಬಾದಿನ ಅರುಂಧತಿ ಮಹಾ ಸಭೆಯ ಆಶ್ರಯದಲ್ಲಿ ಕಳೆದ ಭಾನುವಾರ ಹಲವಾರು ಅಂತರ್ಜಾತೀಯ ವಿವಾಹಗಳನ್ನು ಹಿಂದುಳಿದ ವರ್ಗಗಳ ಸಂಸ್ಥೆ ಕಾರ್ಯಾಲಯದಲ್ಲಿ ನೆರವೇರಿಸಲಾಯಿತು ವಿವಾಹಗಳನಂತರ ಸಾಮೂಹಿಕ ಭೋಜನವನ್ನು ಏರ್ಪಡಿಸಲಾಗಿತ್ತು ಹೈದರಾಬಾದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ ನರಸಿಂಗರಾಯರು ಅಧ್ಯಕ್ಷತೆ ವಹಿಸಿದ್ದರು

ಮೈಸೂರು ಪೇಟೆ ಧಾರಣೆ

	ರೂ ಆಣೆ	ರೂ ಹರಿಗೆ
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	[illegible]
ಹೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆ	[illegible]	[illegible]
ಅವರೆ	[illegible]	[illegible]
ಹಲಸಂದೆ	[illegible]	[illegible]
ಧನಿಯ	[illegible]	[illegible]
ತೊಗರಿ	[illegible]	
ಸೂರ್ಯಕಾಂತಿ ಬೀಜ	[illegible]	
ಹುಣಸೆಬೀಜ	[illegible]	
ತೆಂಗಿನಕಾಯಿ	[illegible]	[illegible]
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನ ಕಾಯಿ (ಸಾವಿರ)	[illegible]	[illegible]

ಶ್ರೀಪ್ರಸನ್ನ ಸೀತಾರಾಮ ಮಂದಿರದ ಆಶ್ರಯದಲ್ಲಿ

ಅಮೋಘವಾದ ಭರತ ನಾಟ್ಯ

1-3-56 ಭಾನುವಾರ ಸಂಜೆ 6 ಕ್ಕೆ

ಮೈಸೂರು ಟೌನ್‌ಹಾಲಿನಲ್ಲಿ

(ಸುಪ್ರಸಿದ್ಧ ಸಿನಿಮಾ ನಟಿ)

ಶ್ರೀಮತಿ

ಪ್ರೊಲ್ಲಾಚಿ ಕಮಲ

ರವರಿಂದ

ಭರತ ನಾಟ್ಯ

ಮುಂಗಡವಾಗಿ ಟಿಕೆಟ್ ದರ — ರೂ 10 5, 3 2 ಮತ್ತು 1

Dalvoy High School,

MYSORE

(COACHING SECTION)

Offers excellent coaching by expert teachers for S S L C Suppl students Classes start from 1 3 56 Enquire between 12 & 6 P M

S N Subbakrishnan,
Secretary

Edited, Printed and Published by A R Nagarajan at Sadhvi Press D Subbiah Road Mysore

ಸರ್ವೋದಯ ಇಲ್ಲವೇ ಸ...

ಜಗತ್ತಿನ ಶಾಂತಿಗೆ ಸರ್ವೋದಯವೊಂದೇ ಮಾರ್ಗವೆಂದು ಜಯಪ್ರಕಾಶ ನಾರಾಯಣರು ತಿಳಿಸುತ್ತಾರೆ ಸರ್ವೋದಯ ಸಮಾಜ [illegible] ಜನರ ಬಾಂಬು ಬೇಕಿಲ್ಲವೆಂದೂ, [illegible] ಜನರ ಮುಂದೆ ಈಗ ಸರ್ವೋದಯ [illegible] ಸರ್ವನಾಶ ಸಮಸ್ಯೆಗಳು ಮಾತ್ರ [illegible] ವೆಂದೂ ಅವರು ಹೇಳಿರುವರು.

ಒಡೆಯರವರ ಶಿಬಿರಕ್ಕೆ ಸಹಾಯ

ಡಾ॥ ಎಂ ಸಿ ಒಡೆಯರವರ ನೇತ್ರ [illegible] ತ್ಸಾ ಶಿಬಿರಕ್ಕೆ ಕೆಳಗೆ ಕಂಡವರು ಧನ ಸಹಾಯ ಮಾಡಿರುವರು : —ಸಿಂಧಿ [illegible] ಗಳ ಸಂಘ ೫೦೧ ರೂ , ಶ್ರೀ ತಿರುವೇಂ [illegible] ದಲಿಯಾರ್ ೧೦೧ ರೂ , ಶ್ರೀ ಯು [illegible] ಜಾ ೫೦ ರೂ , ಸರಸ್ವತಿ ರೈಸ್‌ಮಿಲ್, [illegible] ಅಕ್ಕಿ, ಶ್ರೀ ಚಾಮುಂಡೇಶ್ವರಿ ರೈಸ್‌ಮಿಲ್ [illegible] ಗೇಶ್ವರ ರೈಸ್‌ಮಿಲ್, ತಂಡರಾಜಪುರದ [illegible] ಲ್, ಗೌರಿ ಶಂಕರ ರೈಸ್‌ಮಿಲ್, ಗ [illegible] ಸ್ ಮಿಲ್ ಮತ್ತು ಶ್ರೀಗಳಾದ ಎ [illegible] ಚೇಗೌಡ, ಗೂಳೀಗೌಡ ಮತ್ತು ಗು [illegible] ರಾಮಣ್ಣ ತಲಾ [illegible] ಮತ್ತು ರತನ್ [illegible] ರ್ ತಲಾ ೧ ಚೀಲ ಅಕ್ಕಿ ಮತ್ತು ರಾಮ [illegible] ಕೃಷ್ಣ ೧ ಚೀಲ ಧನಿಯ

SREE GANESH TALKIES

From 1 3 56 For 2 [illegible]

THE STARS ARE SIN[GING]

(Technicolor)

With Rosemary Clooney and Anna Maria Alberghetti

(A musical Comedy)

GALA RELEASE ON 3 3 [illegible]

DUEL ON THE MISSISIPPI

(Technicolor)

With Lex Parker and Patricia Medina

THE PALACE MYSORE

22nd February, 56

TENDER NOTICE

Sealed Tenders for the supply [of] provisions etc to the Palace [for] the year 1956-57 i e fr[om] 1-4-1956 to 31 3 1957 will [be] received by the undersigned up [to] 3 0 P M on Wednesday the [illegible] March 1956, at the Palace O[ffice] Mysore Particulars of Tend[er] can be had from the Munshi Pa[lace] Mothikhana Department Mys[ore] The flowers contract is split [into] two separate items and tender[s] to be given separately for each [illegible]

J B MALLARADHYA
Huzur Secretary to His Highness the Maharaja of Mysore Mysore

WANTED

Door to door sales girls & boys capable of preparing bills in English in Mysore city & taluks and Mandya & Hassan District

Contact —

SHANDRILA COSMETICS,
543 Upstairs
Kalamma Temple Street
MYSORE

Sri Rama Sahaya Sangha,

D Subbiah Road Mysore

Efficient coaching by able teachers under the guidance of Sri K Krishnaswamy Iyengar Retd D E O to Supplementary S S L C students Classes will commence from 1st March 56 Only a limited number of students will be admitted

JOIN AT ONCE

C N Narayana Rao,
Organiser

THE

CHAMPION METROPOLITAN COLLEGE OF COMMERCE,

(Co operators Home 100 Road, Mysore)

APPLICATIONS FOR FRESH ADMISSIONS are now being received in the mornings and evenings

(Sd) P SUBBARAYA SASTRY
Principal

ನಿಮ್ಮ ಮನೆಗೆ ಒಂದು ರೇಡಿಯೊ ಅಗತ್ಯ !

ಈ ದಿನವೇ **ಮರ್ಫಿ ರೇಡಿಯೊ** ಕೊಳ್ಳಿರಿ

ಆಲ್ ಇಂಡಿಯಾ ರೇಡಿಯೊವಿನ ರೇಡಿಯೊ ನಾಟಕ

ವಿಶೇಷ ಕಾರ್ಯಕ್ರಮವನ್ನು ಕೇಳಿ ಆನಂದಿಸಿರಿ

★

— ಅಧಿಕೃತ ವ್ಯಾಪಾರಿಗಳು —

ಶ್ರೀಬೀಡ್ ಮತ್ತು ಕಂಪೆನಿ,

ಸ್ಟ್ರೀಟ್ ಚೌಕ · ಫೋನ್ 474 · ಮೈಸೂರು

ಚಾಮುಂಡೇಶ್ವರಿ ★ ನಾಳೆ 50ನೇ ಮಹಾ ದಿನ

ಅಲಿಬಾಬ ಮತ್ತು 40 ಮಂದಿ ಕಳ್ಳರು

(ತಮಿಳು)

ಇದುವರೆಗೂ 1 ಲಕ್ಷಕ್ಕೂ ಅಧಿಕ ಮಂದಿ ಚಿತ್ರ ಪ್ರೇಮಿಗಳು ಈ ಚಿತ್ರಕ್ಕೆ ಭೇಟಿಯಿತ್ತು, ನಮ್ಮನ್ನು ಪ್ರೋತ್ಸಾಹಿಸಿದ್ದಕ್ಕಾಗಿ ನಾವು ಕೃತಜ್ಞತೆಯನ್ನರ್ಪಿಸುತ್ತಾ ಮುಂದೆಯೂ ಇದೇ ರೀತಿ ಪ್ರೋತ್ಸಾಹ ಸಹಕಾರಗಳನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇವೆ

[ಶ್ರೀ ಚಾಮುಂಡೇಶ್ವರಿ ಟಾಕೀಸ್]

ರಿಜಿಸ್ಟರ್ ನಂ. 792

ಚಂದಾದರ

ವರ್ಷಕ್ಕೆ [illegible]

ಬಿಡಿ ಪತ್ರಿಕೆ [illegible] ಆಣೆ

ಸಾಧ್ವಿ

ಸಾಧ್ವಿ ದಿನ ಪತ್ರಿಕೆಗೆ [illegible]

ಸಂಪುಟ : ೦೪] SADHVI : THURSDAY 1-3-1956 ಮೈಸೂರು ಗುರುವಾರ : ೧-೩-೧೯೫೬ [ಸಂಚಿಕೆ : ೫೯೦

- ನಗರದಲ್ಲಿ ಇರಾನಿನ ರಾಜದಂಪತಿಗಳಿಗೆ ಸ್ವಾಗತ -

ಕೇಂದ್ರದ ಆಯವ್ಯಯದಲ್ಲಿ ಬರುವ ವರ್ಷ ೪೯೦ ಕೋಟಿ ರೂ ಕೊರತೆ

[illegible]ರುವ ಸಾಲಿನಲ್ಲಿ ೧೦೦ ಕೋಟಿ ಸಾಲ ಮತ್ತು ೮೫ ಕೋಟಿ ವಿದೇಶೀ ಸಹಾಯ

ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ನೆನ್ನೆ ಲೋಕಸಭೆಯಲ್ಲಿ [illegible] ಸಾಲಿನ ಆಯವ್ಯಯ ಪಟ್ಟಿಯನ್ನು ಮಂಡಿಸಿ ಮುಂದಿನ ವರ್ಷ [illegible] ಕೋಟಿ ರೂ ಕೊರತೆ ಬರುವ ನಿರೀಕ್ಷೆಯಿರುವುದಾಗಿ ತಿಳಿಸಿದರು [illegible] ನಾನಾ ವರಮಾನಗಳ ಬಾಬುಗಳಿಂದ [illegible] ಕೋಟಿ ರೂ [illegible] ಕೋಟಿ ರೂ ವೆಚ್ಚವಾಗುವುದೆಂದೂ ಆದರಿಂದ [illegible] ಕೋಟಿ ರೂ ಕೊರತೆ ಆಗುವುದೆಂದೂ ಅವರು ಹೇಳಿದರು

ಎರಡನೆ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಮುಂದಿನ ವರ್ಷದ ಕೆಲಸಗಳಿಗೆ [illegible] ಕೋಟಿ ರೂಗಳನ್ನು ಬಂಡವಾಳ ಹಾಕಲು ಉದ್ದೇಶಿಸಲಾಗಿದೆ ಈ ಬಾಬತು ಹಣವನ್ನು [illegible] ಒದಗಿಸಲು ೧೦೦ ಕೋಟಿ ರೂ ಸಾಲ ಎತ್ತುವುದು, ಸಣ್ಣ ಉಳಿತಾಯದಿಂದ ೬೦ ಕೋಟಿ [illegible]ಪಡೆಯುವುದು, ವಿದೇಶಗಳಿಂದ ೮೫ ಕೋಟಿ [illegible] ಸಹಾಯ ಪಡೆಯುವುದು ಈ ನಿರೀಕ್ಷೆಗಳಿವೆ

ರಕ್ಷಣಾ ಬಾಬಿಗೆ ೨೦೩ [illegible] ಕೋಟಿ ರೂ [illegible]ವಾಗುವುದು ಕಳೆದ ಸಾಲಿಗಿಂತಲೂ ಈ [illegible] ಈ ಬಾಬಿಗೆ [illegible] ಕೋಟಿ ರೂ ಹೆಚ್ಚು ವೆಚ್ಚವಾಗಲಿದೆ

ರೈಲ್ವೇ ಬಾಬಿನ [illegible] ಕೋಟಿ ರೂ ಮತ್ತು [illegible] ಯೋಜನೆಗೆ ಹಾಕಲಾಗುವ [illegible] ಬಂಡವಾಳದಲ್ಲಿ ಉಂಟಾಗುವ ಕೊರತಾ ಎರಡೂ ಸೇರಿ [illegible] ಕೋಟಿ ರೂ ಆಗುವುದು

ಬೆಂಗಳೂರು ರೇಡಿಯೋ ಸ್ಟೇಷನ್ ಕಾರ್ಯಕ್ರಮ

[illegible] ಕನ್ನಡ ಗೀತೆಗಳು [illegible] ಮತ್ತು [illegible] ಮತ್ತು [illegible] ಸಂಗೀತ [illegible] ವಿಚಾರ-ಸುಗಮ ಸಂಗೀತ ಕಾರ್ಯಕ್ರಮ [illegible] ಸಂಜೆ [illegible] ಸಂಗೀತ [illegible] ವಿದ್ಯಾರ್ಥಿನಿಯರಿಗಾಗಿ ಸಂಜೆ [illegible] ಕಾರ್ಯಕ್ರಮದ ಪ್ರಕಾರ [illegible] ಕನ್ನಡ [illegible] ಎಸ್ [illegible] ಕನ್ನಡ ವಾರ್ತೆ [illegible] ಗೀತೆ [illegible] ಗೀತಾವಳಿ

ಇರಾನಿನ ರಾಣಿಗೆ ಆನೆ ಮರಿ ಬಹುಮಾನ

ಇರಾನಿನ ರಾಜರಾದ ಷಹಾರವರಿಗೆ ಸಂಸ್ಥಾನದ ಅರಣ್ಯ ಇಲಾಖೆಯವರು ೧॥ ವರ್ಷದ ಆನೆ ಮರಿಯನ್ನು ಬಹುಮಾನವಾಗಿ ಒಪ್ಪಿಸುವರು [illegible] ಸ್ಟೈಲಿನಲ್ಲಿ ಇಲಾಖೆಯವರು ಸಲಹುತ್ತಿರುವ [illegible] ಹೆಣ್ಣಾನೆ ಕಮಲ ಎಂಬುದರ ಮರಿ ಅದು [illegible] ಹೆಣ್ಣಾನೆ ಸುಂದರಿ ಎಂಬುದನ್ನು, [illegible] ತಿಂಗಳ ಮರಿಯನ್ನು ಶೃಂಗೇರಿ ಮಠಕ್ಕೆ ಒಪ್ಪಿಸಲಾಗುವುದು.

ಡಾ॥ ಸೋದಿಯವರ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರಕ್ಕೆ ಶ್ರೀಮನ್ಮಹಾರಾಜರು ನೆನ್ನೆ ಭೇಟಿಯಿತ್ತಾಗ ತೆಗೆದ ಚಿತ್ರ

ಇರಾನ್ ಷಾ ದಂಪತಿಗಳ ಆಗಮನ

ಲಲಿತಮಹಲ್‌ನಲ್ಲಿ ಮಹಾರಾಜರಿಂದ ಸ್ವಾಗತ

ಮೈಸೂರು ೧

ಇರಾನಿನ ಚಕ್ರವರ್ತಿ ಷಹನ್‌ಷಾರವರೂ ಮತ್ತು ರಾಣಿ ಸುರೈಯ್ಯರವರೂ ಈ ದಿನ ಮಧ್ಯಾಹ್ನ [illegible] ಘಂಟೆಗೆ ಕಾರಿನಲ್ಲಿ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು

ಲಲಿತಮಹಲ್ ಅರಮನೆಯಲ್ಲಿ ಶ್ರೀಮನ್ಮಹಾರಾಜರು ಅವರನ್ನು ಸ್ವಾಗತಿಸಿದರು ಅನಂತರ ಭರತಪುರದ ಮಹಾರಾಜರು ಪುರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾವ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣ, ವಿಧಾನ ಪರಿಷತ್ತಿನ ಉಪಾಧ್ಯಕ್ಷ ಶ್ರೀ ಸಿ ಗೋಪಾಲಕೃಷ್ಣಶೆಟ್ಟಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯ ಹುಜೂರು ಕಾರ್ಯದರ್ಶಿ ಶ್ರೀ ಮಲ್ಲರಾಧ್ಯ, ಜಿಲ್ಲಾಧಿಕಾರಿ ಶ್ರೀ ಎಂ ಎಸ್ ಶಂಕರರಾವ್, ಪುರಸಭಾ ಕಮಿಷನರ್ ಶ್ರೀ ಎ ವಿಶ್ವನಾಥ್ ಮತ್ತು ಸರದಾರರುಗಳನ್ನು ಶ್ರೀಮನ್ಮಹಾರಾಜರು ಷಾ ದಂಪತಿಗಳಿಗೆ ಪರಿಚಯ ಮಾಡಿಕೊಟ್ಟರು

ಪುರಸಭಾಧ್ಯಕ್ಷರೂ ಮತ್ತು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರೂ ಹಾರತುರಾಯಿಗಳನ್ನು ಅರ್ಪಿಸಿದರು

ಷಾ ರವರೊಡನೆ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಪುಟ್ಟರಂಗಸ್ವಾಮಿಯವರೂ ಆಗಮಿಸಿದರು

○ ಬೆಂಗಳೂರು ಮೇಯರ್ ಶ್ರೀ ಎಂ ಕೃಷ್ಣಪ್ಪನವರು ಮೊನ್ನೆ ಅನಿರೀಕ್ಷಿತ ಪರಿಶೀಲನೆ ನಡೆಸಿ, ಕಾರ್ಪೋರೇಷನ್ ಲಾರಿಯಲ್ಲಿ ಅಕ್ರಮವಾಗಿ ರವಾನೆಯಾಗುತ್ತಿದ್ದ ೨೫ ಸಿಮೆಂಟ್ ಮೂಟೆಗಳನ್ನು ಪತ್ತೆ ಮಾಡಿದರೆಂದೂ, ಪೌರಸಭಾ ನೌಕರರಿಬ್ಬರ ಸ್ವಾಧೀನ ಮಾಡಿ, ಇನ್ನಿಬ್ಬರನ್ನು ಸಸ್ಪೆಂಡ್ ಮಾಡಲಾಯಿತೆಂದೂ ವರದಿಯಾಗಿದೆ

ಕಾಲೇಜು ವಿದ್ಯಾರ್ಥಿನಿಯರ ಕ್ರಿಕೆಟ್ ಕ್ರೀಡೆ

ಮೈಸೂರು ೧

ನಗರದ ಕ್ರಿಕೆಟ್ ಕ್ರೀಡೆಯ ಇತಿಹಾಸದಲ್ಲಿ ಇದೇ ಮೊದಲಾಗಿ ನೆನ್ನೆ ಮಹಿಳೆಯರು ಆ ಪಂದ್ಯವನ್ನು ಆಡಿದರು ಪ್ರಖ್ಯಾತ ಕ್ರಿಕೆಟ್ ಆಟಗಾರ ಶ್ರೀ ಎಲ್ ಟಿ ಆದಿಶೇಷರವರಿಗೆ ಸುಖಪ್ರಯಾಣ ಕೋರಲು ನೆನ್ನೆ ಮಹಿಳಾ ಕಾಲೇಜು ಮೈದಾನದಲ್ಲಿ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಕ್ರಿಕೆಟ್ ಪಂದ್ಯವನ್ನಾಡಿದರು ಆದಿಶೇಷ್‌ರವರು ಇಂಗ್ಲೆಂಡಿಗೆ ತೆರಳುವರು

ಭರತಪುರದ ಮಹಾರಾಜರ ಆಗಮನ

ಭರತಪುರದ ಮಹಾರಾಜರು ಮೊನ್ನೆ ನಗರಕ್ಕೆ ಆಗಮಿಸಿದರು

ಪಾಕಿಸ್ತಾನದ ರಾಜ್ಯಾಂಗದ ಅಂಗೀಕಾರ

ಸುಹ್ರಾವರ್ದಿ ಪಕ್ಷದ ಸಭಾತ್ಯಾಗ

ಪಾಕಿಸ್ತಾನದ ರಾಜ್ಯಾಂಗ ಸಭೆಯಲ್ಲಿ ನೆನ್ನೆ ರಾಜ್ಯಾಂಗ ಮಸೂದೆಯು ಅಂಗೀಕಾರವಾಯಿತು ಮುಂಚೆ ರಾಜ್ಯಾಂಗದ ಕರಡು ಮಸೂದೆಗೆ ಪೂರ್ವ ಪಾಕಿಸ್ತಾನದ ಜನರು ಮತ್ತು ಪ್ರತಿನಿಧಿಗಳು ವಿರೋಧವಾಗಿರುವರೆಂದು ಹೆಚ್ ಎಸ್ ಸುಹ್ರಾವರ್ದಿಯವರು ತಿಳಿಸಿ ಸಭಾತ್ಯಾಗ ಮಾಡಿದರು ಅವರೊಡನೆ ಅವರ ಪಕ್ಷದ ಇತರ [illegible] ಸದಸ್ಯರೂ ಹೊರಟುಹೋದರು ಇತರ ಸದಸ್ಯರು ಹರ್ಷ ಧ್ವನಿಗೈದರು

○ ಭಾರತದ ಜಾಂಡ್ ಡಿಟ್ ಧ್ಯೇಯವೂ ಸೇರಿ ಕಾಶ್ಮೀರ ಪ್ರದೇಶದ ಬಗ್ಗೆ ಮಾತುಕತೆ ನಡೆಸಬೇಕೆಂದು ಪಾಕಿಸ್ತಾನವು ಸಲಹೆ ಮಾಡಿತ್ತೆಂದೂ, ಆ ಬಗ್ಗೆ ಚರ್ಚೆ ಅನಾವಶ್ಯಕವೆಂದು ಭಾರತವು ಪಾಕಿಸ್ತಾನಕ್ಕೆ ತಿಳಿಸುವುದಾಗಿಯೂ ವರದಿಯಾಗಿದೆ

ರಿಜಿಸ್ಟರ್ ಮತ್ತು ತಂತಿ ದರ ಹೆಚ್ಚುವುದು

ಪಂಚೆ ಮತ್ತು ಸೀರೆಗಳನ್ನು ಬಿಟ್ಟು ಗಿರಣಿ ಬಟ್ಟೆಗಳ ಮೇಲೆ ಹೆಚ್ಚಿನ ತೆರಿಗೆ

ಭಾರತ ಸರ್ಕಾರದ ಹೊಸ ತೆರಿಗೆಗಳು

ನೆನ್ನೆ ಕೇಂದ್ರ ಮಂತ್ರಿ ಸಿ ಡಿ ದೇಶಮುಖ್‌ರವರು [illegible] ಮಂಡಿಸಿದ ಆಯವ್ಯಯ ಪಟ್ಟಿಯ ಸಂಬಂಧದಲ್ಲಿ ಹೊಸ ತೆರಿಗೆಗಳ ಬಗ್ಗೆ ಸೂಚನೆಯಿತ್ತಿದ್ದಾರೆ ಅವುಗಳಿಂದ [illegible] ಟ್ಟು [illegible] ಕೋಟಿ ರೂ ಹೆಚ್ಚು ಹುಟ್ಟುವಂತೆ ಯಾಗುವ ನಿರೀಕ್ಷೆಯಿದೆ ಹೊಸ ತೆರಿಗೆಗಳು ಈ ರೀತಿ ಇವೆ —

ಪಂಚೆ ಮತ್ತು ಸೀರೆಗಳನ್ನುಳಿದು ಮಿಲ್ಲಿನ ಹತ್ತಿ ಬಟ್ಟೆಗಳ ಮೇಲೆ ಅವರ ಗಜಕ್ಕೆ [illegible] ಪಂಚೆ ಅಧಿಕ ಅಬ್ಕಾರಿ ಸುಂಕ; ಪೋಸ್ಟಿನ ಮೇಲೆ ಎರಡು ಆಣೆ ತೆರಿಗೆ, ಒಳನಾಡಿನ ತಂತಿ (ಸಾಮಾನ್ಯದ್ದಕ್ಕೆ) ೧ ಆಣೆ ಮತ್ತು (ಅರ್ಜೆಂಟು ದ್ದಕ್ಕೆ) ೨ ಆಣೆ ಹೆಚ್ಚು ದರ, ರಿಜಿಸ್ಟ್ರೇಷನ್ನಿಗೆ [illegible] ಆಣೆ ಬದಲು [illegible] ಆಣೆ ಶುಲ್ಕ, ರಿಜಿಸ್ಟರ್ ಆದ ಕಂಪೆನಿಗಳಲ್ಲಿ [illegible] ಸಾವಿರ ರೂ. ವರಮಾನಕ್ಕೆ ರೂ [illegible] ಲಕ್ಷ ರೂ ವರೆಗೆ ೧ ಆಣೆ ಮತ್ತು ಹೆಚ್ಚಿನದಕ್ಕೆ [illegible] ಆಣೆ ತೆರಿಗೆ, ರಿಜಿಸ್ಟರ್ ಆದ ಕಂಪೆನಿ [illegible] ವರಮಾನದ ತೆರಿಗೆಯಲ್ಲಿ ರಿಬೇಟ್ ಉಂಟು, ಆದರೆ ಸೂಪರ್ ಟ್ಯಾಕ್ಸಿಗೆ [illegible] ಮೇಲೆ ಪೌಂಡಿಗೆ [illegible] ತೆರಿಗೆ, [illegible] ಲಕ್ಷ ರೂ. ವರಮಾನ ಬರುವವರ ಮೇಲೆ [illegible] ಸೂಪರ್ ಟ್ಯಾಕ್ಸ್ ಬದಲು [illegible] ರೂ. ತೆರಿಗೆ, [illegible] ಯಂತ್ರಶಕ್ತಿಯಿಂದ ನಡೆಯುವ ಕಾರ್ಖಾನೆಗಳಲ್ಲಿ ಬಳಸುವ (ಅವಶ್ಯಕವಲ್ಲವೆಂದು ಪರಿಗಣಿಸಲಾದ) ವನಸ್ಪತಿ ಎಣ್ಣೆ ಮೇಲೆ ಪೌಂಡಿಗೆ [illegible] ಆಣೆಯ ಹೊಸ ಅಬ್ಕಾರಿ ಸುಂಕ; ಸ್ಟ್ಯಾಪ್ಲ್ ಫೈಬರ್ ಮತ್ತು [illegible] ಫೈಬರ್ ಗಳಿಗೆ [illegible] ತೆರಿಗೆ [illegible] ಸುಂಕ ಹೆಚ್ಚುವುದು, ಗಾಜಿನ ತಯಾರಿಕೆಗೆ ಬೇಕಾದ [illegible] ತೆರಿಗೆ [illegible] ಬದಲು [illegible] ಹೆಚ್ಚು ಸುಂಕ; ಸ್ಪಿರಿಟ್ [illegible] ಎಣ್ಣೆ ಮತ್ತು [illegible] ಎಣ್ಣೆಗೆ ಗ್ಯಾಲನ್ನಿಗೆ [illegible] ಆಣೆ ಅಬ್ಕಾರಿ ಸುಂಕ, [illegible] ಡೀಸೆಲ್ ಎಣ್ಣೆ ಮತ್ತು [illegible] ಎಣ್ಣೆಗೆ ಟನ್ನಿಗೆ [illegible] ಮತ್ತು [illegible] ರೂ ತೆರಿಗೆ; [illegible] ಮಾತ್ರ ಹಾಕುವ ಕಂಪೆನಿಯ [illegible] ಲಾಭದ ಮೇಲೆ [illegible] ಆಣೆಯಿಂದ [illegible] ಆಣೆ ಸೀಮೆಸರ್ ಸೂಪರ್ ಟ್ಯಾಕ್ಸ್

ಭಾರತದ ಕಂಪೆನಿಗಳ ಮೇಲೆ ಸೂಪರ್ ಟ್ಯಾಕ್ಸ್ [illegible] ವಿದೇಶೀ ಕಂಪೆನಿಗಳು [illegible] ರಿಂದ [illegible] ರ ವರೆಗೆ [illegible] ಆಣೆ ಮತ್ತು [illegible] ಹೆಚ್ಚಿನದರ [illegible] ಆಣೆಯಿಂದ ಸೂಪರ್ ಟ್ಯಾಕ್ಸ್ [illegible] ದರ ಯ ಮೇಲಿನ ತೆರಿಗೆ ಪೌಂಡಿಗೆ [illegible] ಆಣೆಯಿಂದ [illegible] ಆಣೆಗೆ ಇಳಿಯುವುದು

ವಿದ್ಯುಚ್ಛಕ್ತಿಯಿಂದ ನಡೆಯುದಿರುವ ಕಾರ್ಖಾನೆಗಳ ಸಾಬೂನಿನ ಮೇಲೆ ಸ್ವಲ್ಪ ಕಡಿಮೆ ಸುಂಕ ಮತ್ತು ಹೆಚ್ಚು ಕಾರ್ಖಾನೆಗಳಿಗೆ ವಿನಾಯಿತಿ ಹಲವು ಕಂಪೆನಿಗಳು [illegible] ಲಾಭದ ಮೇಲೆ ರಿಬೇಟ್ ತಪ್ಪುವುದು

ಮಧ್ಯ ಪ್ರಾಚ್ಯದಲ್ಲಿ ಯುದ್ಧ ಸ್ಥಿತಿಯಿಲ್ಲ

ಮಧ್ಯ ಪ್ರಾಚ್ಯದಲ್ಲಿ ಯುದ್ಧವಾಗುವ ಸನ್ನಿವೇಶವೇನೂ ಒದಗಿಲ್ಲವೆಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಷೀಲ್ಡರು ತಿಳಿಸಿರುತ್ತಾರೆ ಅಲ್ಲಿ ಪೂರ್ಣ ಒಪ್ಪಂದವಾಗುವ ಭರವಸೆಯಿಲ್ಲದಿದ್ದರೂ ಕ್ರಮವರಿತ ಪ್ರಗತಿಯು ಆಗಿ ಸಮಸ್ಯೆಗಳು ನಿವಾರಣೆಯಾಗಲು ಅಡ್ಡಿಯೇನೂ ಇಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರು

ಸಂಸ್ಕೃತ ಸಂಘದ ಮುಕ್ತಾಯ ಸಮಾರಂಭ

ವಿಶ್ವವಿದ್ಯಾಲಯ ಸಂಸ್ಕೃತ ಸಂಘದ ಮುಕ್ತಾಯ ಸಮಾರಂಭವು ಮೊನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಜರುಗಿತು ಪ್ರೊ॥ ಎನ್ ಶಿವರಾಮ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ಪ್ರೇಮರವರಿಂದ ಪ್ರಾರ್ಥನೆಯಾದನಂತರ ಶ್ರೀ ಟಿ ಎಸ್ ಗೋಪಾಲರವರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಸಿ ಹನುಮಂತರಾಯರು ವಾರ್ಷಿಕ ವರದಿಯನ್ನು ಒಪ್ಪಿಸಿದರು ವಿದ್ಯಾರ್ಥಿ ಶ್ರೀ ವೆಂಕಟಾಚಾರ್ಯರಿಂದ ಸಿಟೀಲು ವಾದನವು ನಡೆಯಿತು ಡಾ॥ ಎಸ್ ಶ್ರೀಕಂಠ ಶಾಸ್ತ್ರಿಗಳು ಭಾಷಣ ಮಾಡಿ ಭಾರತದ ಐತಿಹಾಸಿಕ ಹಿರಿಮೆಯನ್ನು ಪ್ರಸ್ತಾಪಿಸಿ ಅದನ್ನು ಅರಿಯಲು ಸಂಸ್ಕೃತ ಭಾಷಾ ಜ್ಞಾನದ ಆವಶ್ಯಕತೆಯನ್ನು ಎತ್ತಿ ಹೇಳಿದರು ಅಧ್ಯಕ್ಷರ ಭಾಷಣವಾದನಂತರ ಕಾರ್ಯದರ್ಶಿಯವರು ವಂದನಾರ್ಪಣೆ ಮಾಡಿದರು

ಬೀದಿ ದೀಪ ಇಲ್ಲದೆ ತೊಂದರೆ

ಚಾಮರಾಜ ಮೊಹಲ್ಲಾ ಡಿ ಸುಬ್ಬಯ್ಯಾ ರಸ್ತೆಯ ಪಕ್ಕಮಕ್ಕೆ ಮತ್ತು ಶ್ರೀ ಪಾಳ್ಯದ ವೆಂಕಟ ಚಲ ಪಂಡಿತರ ಮನೆ ಪಾರ್ಶ್ವಕ್ಕೆ ಮಧ್ಯ ರಸ್ತೆಯಲ್ಲಿ ಬೀದಿ ದೀಪವಿಲ್ಲದೆ ಜನರಿಗೆ ನಾನಾ ವಿಧವಾದ ತೊಂದರೆಯಾಗಿದೆಯೆಂದೂ, ಈ ಪ್ರದೇಶದಲ್ಲಿ ಕಳ್ಳತನಗಳೂ ನಡೆಯುತ್ತಿವೆಯೆಂದೂ ವಾಚಕರೊಬ್ಬರು ತಿಳಿಸಿ, ಪೌರಸಭೆಯವರು ಅಲ್ಲಿಗೆ ಕೂಡಲೇ ದೀಪವನ್ನು ಹಾಕಿಸಬೇಕೆಂದು ಕೋರಿರುತ್ತಾರೆ

WANTED an experienced person to teach History & Geography to S S L C classes (Part-time)

C T C Old Agrahar,
MYSORE

Dalvoy High School,
MYSORE
(COACHING SECTION)

Offers excellent coaching by expert teachers for S S L C Suppl students Classes start from 1 3 56 Enquire between 12 & 6 P M

S N Subbukrishnan,
Secretary

ರಷ್ಯದಲ್ಲಿ ಮುಸ್ಲಿಮರ ದಂಗೆ ?

ಕಳೆದ ವರ್ಷ ರಷ್ಯದ ಮಧ್ಯ ಏಷ್ಯಾ ವಿಭಾಗದಲ್ಲಿರುವ ಮುಸಿಂ ರಾಷ್ಟ್ರೀಯರು ದಂಗೆಯೆದ್ದಿತ್ತೆಂದೂ ಅವರನ್ನು ಕರುಣೆಯಿಲ್ಲದೆ ಸದೆಬಡಿಯಲಾಯಿತೆಂದೂ ಲಂಡನ್ ವಾರ್ತೆಯೊಂದು ತಿಳಿಸಿವೆ ದಂಗೆಯೆದ್ದವರನ್ನು ಕೊಂದುಹಾಕಿದುದಕ್ಕಾಗಿ ಹಲವು ಅಧಿಕಾರಿಗಳಿಗೆ ಪ್ರಶಸ್ತಿಗಳನ್ನು ಕೊಟ್ಟ ವಿಷಯವನ್ನು ರಷ್ಯದ ಪ್ರಾವ್ಡಾ ಪತ್ರಿಕೆಯಲ್ಲಿ ಕಳೆದ ೧೩ನೇ ತಾರೀಕು ಪ್ರಕಟಿಸಿದ ಮೇಲೆ ಜಗತ್ತಿಗೆ ದಂಗೆಯ ವಿಚಾರವು ತಿಳಿಯಿತೆಂದು ಲಂಡನ್ ವಾರ್ತೆಯು ಹೇಳಿದೆ

ಮಂಡ್ಯ ಸಕ್ಕರೆ ಕಾರ್ಮಿಕರ ಮುಷ್ಕರ

ಮಂಡ್ಯ ಸಕ್ಕರೆ ಕಂಪೆನಿಯ ಆಡಳಿತ ವರ್ಗದವರಿಗೂ, ಕಾರ್ಮಿಕರ ಸಂಘದವರಿಗೂ ಹಲವು ಬೇಡಿಕೆಗಳ ಬಗ್ಗೆ ನಡೆಯುತ್ತಿದ್ದ ಮಾತುಕತೆಗಳು ಮುರಿದುಬಿದ್ದುವು ಬರುವ ೧೫ನೇ ತಾರೀಕು ಕೆಲಸಗಾರರು ಮುಷ್ಕರ ಹೂಡಲಿರುವರು

ಆರ್ಯ ಸಮಾಜದವರಿಂದ ಐಂದ್ರ ಮಹಾ ಯಜ್ಞ

ರಾಜಧಾನಿಯ ದೇವರಾಜ ಮೊಹಲ್ಲಾದಲ್ಲಿರುವ ಆರ್ಯ ಸಮಾಜ ಮತ್ತು ಸ್ತ್ರೀ ಸಮಾಜದವರು, ಇದೇ ತಿಂಗಳು ೪ನೇ ತಾರೀಕಿನಿಂದ ೧೧ರ ವರೆಗೆ ಶ್ರೀ ಬಿ ದೇವೇಂದ್ರಪ್ಪನವರ ಮಾರುತೀ ಮಂದಿರದಲ್ಲಿ ಐಂದ್ರ ಮಹಾ ಯಜ್ಞವನ್ನು ನೆರವೇರಿಸುವರು ಆದು ದಿನವೂ ಬೆಳಿಗ್ಗೆ ೮॥ ಗಂಟೆಯಿಂದ ೧೧ ಮತ್ತು ಸಂಜೆ ೬ ರಿಂದ ೭॥ ವರೆಗೆ ಗಣ್ಯ ಮಹನೀಯರ ಅಧ್ಯಕ್ಷತೆಯಲ್ಲಿ ನಡೆಯಲಿದೆ ವೇದ ಮಂತ್ರಗಳ ವ್ಯಾಖ್ಯಾನವನ್ನು ಏರ್ಪಡಿಸಲಾಗಿದೆ ೯ನೇ ತಾರೀಕು ಆರ್ಯ ಸಮಾಜದವರು ಯಜ್ಞವನ್ನು ಮಾಡುವರು ಅಂದು ಮಹಿಳೆಯರೇ ಋತ್ವಿಕ್ಕುಗಳಾಗಿರುವರು. ೧೧ರ ಸಂಜೆ ಯಜ್ಞವು ಮುಗಿದನಂತರ ಮಹಾರಾಜಾ ಕಾಲೇಜಿನ ಶ್ರೀ ಎಂ ಯಾಮುನಾಚಾರ್ಯರ ಅಧ್ಯಕ್ಷತೆಯಲ್ಲಿ ಮಹರ್ಷಿ ದಯಾನಂದರ ಜೀವನ ಮತ್ತು ಸಂದೇಶದ ವಿಚಾರವಾಗಿ ಭಾಷಣಗಳು ನಡೆಯುವುವು

The Model Tutorial Institute,
D Banumiah s High School Buildings

Coaching Class for the S. S L C Supplementary Examination to be held in June 1956 starts working as usual from 1st March 1956 Admissions are received during office hours on all working days. Total fee for the course is Rs 18 Working hours 7-30 to 10-30 A M.

B Seshagiri Rao,
Organiser

Edited, Printed and Published by A R. Nagarajan at Sadhvi Press D Subbiah Road Mysore

ಮದ್ರಾಸಿನಲ್ಲಿ ನಾಲ್ಕು ಹೊಸ ತೆರಿಗೆಗಳು

ಒಟ್ಟು ೧ ಕೋಟಿ ೪೫ ಲಕ್ಷ ರೂ ವರಮಾನ ಬರುವ ನಾಲ್ಕು ಹೊಸ ತೆರಿಗೆಗಳನ್ನು ಬರುವ ಏಪ್ರಿಲ್ಲಿನಿಂದ ವಿಧಿಸುವ ಬಗ್ಗೆ ಮದ್ರಾಸಿನ ಹಣಕಾಸಿನ ಮಂತ್ರಿ ಸಿ ಸುಬ್ರಹ್ಮಣ್ಯಂರವರು ೫೬–೫೭ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮೊನ್ನೆ ಅಲ್ಲಿನ ಶಾಸನ ಸಭೆಯಲ್ಲಿ ಮಂಡಿಸಿದಾಗ ಸೂಚಿಸಿದರು, ಅಲ್ಲಿನ ಆಯವ್ಯಯದಲ್ಲಿ ೩ ಕೋಟಿ ೧೧ ಲಕ್ಷ ರೂ ಕೊರತೆ ಬರುವ ನಿರೀಕ್ಷೆಯಿದೆ. ೧॥ ಆಣೆಯಿಂದ ೮ ಆಣೆ ಟಿಕೆಟ್ ಎಕ್ಸ್ ತೆರಿಗೆ, ಸಕ್ಕರೆ ಮೇಲೆ ರೂ.ಗೆ ೧ ಆಣೆ ಹೆಚ್ಚಿನ ಮಾರಾಟ ತೆರಿಗೆ, ಇನಾಂ ಜಮೀನಿನ ಮೇಲೆ ಕ್ವಿಟ್ ರೆಂಟ್ ಬದಲು ರೈತವಾರಿ ಕಂದಾಯ ಮತ್ತು ವಿದ್ಯುಚ್ಛಕ್ತಿ ದರದ ಏರಿಕೆಗಳನ್ನು ಜಾರಿಗೆ ತರಲಾಗುವುದು

ಮೈಸೂರು ಪೇಟೆ ಧಾರಣೆ

	ರೂ ಆಣೆ	ರೂ. ವರೆಗೆ
ಕಡಲೆಕಾಯಿ	೧೫ ೦ ೦	೫೯ ೧೨ ೦
ಎಳ್ಳು	೬೯ ೪ ೦	
ಹರಳು	೫೯ ೧೮ ೦	೬೭ ೮ ೦
ಹುಚ್ಚೆಳ್ಳು	೩೮ ೦ ೦	೪೬ ೧೦ ೦
ಕೊಂಗಡಲೆ	೫೧ ೧೦ ೦	೫೯ ೧೦ ೦
ಉದ್ದು	೫೫ ೪ ೦	೫೬ ೮ ೦
ಹೆಸರು	೪೮ ೬ ೦	
ಕಡಲೆ	೩೭ ೧೨ ೦	೩೯ ೮ ೦
ತೊಗರಿ	೫೫ ೦ ೦	
ಅವರೆ	೩೯ ೪ ೧	
ಧನಿಯ	೩೫ ೪ ೦	೩೭ ೨ ೦
ಹಿಂಗು	೨೭ ೧೨ ೭	
ಮೆಣಸಿನಕಾಯಿ	೪೪ ೪ ೦	೪೫ ೧೨ ೦
ಹುಣಸೆ	೨ ೧೪ ೦	
ಸೀಗೆಕಾಯಿ	೫ ೦ ೦	೬ ೪ ೦
ಹುಣಸೆಹಣ್ಣು	೨ ೦ ೦	೬ ೦ ೦
ತೆಂಗಿನಕಾಯಿ	೧೭ ೪ ೦	೨೧ ೪ ೦
ತೆಂಗಿನಕಾಯಿ ೧೦೦೦	೧೭೦ ೪ ೦	೨೦೬ ೦ ೦

IN MEMORIUM

In memory of my beloved mother Srimathi Doddathayamma (Mrs R. Mahalingappa) who died on 28-2-1937.

Inserted by her son
M. VISWESWARIAH
RANJIT Talkies Mysore

The National Institute of Engineering,
MYSORE

Ref: Notification issued by the Director of Technical Education, Bangalore

In modification of this office notification dated 25-2-56 the last date of receiving the applications for admission to I year Diploma class is extended up to 5th March 1956

T RAMA RAO,
Principal I/c.

ಫಾರ್ಮೋಸಾ ಮೇಲೆ ಬೇರೊಬ್ಬರ ಹಕ್ಕು !

ಕೆಂಪು ಚೀನಾ ಮತ್ತು ರಾಷ್ಟ್ರೀಯ ಚೀನಾಗಳಿಗೆ ವಿರೋಧವಾಗಿರುವ ಚೀನದ ಗುಂಪಿನವರು ಟೋಕಿಯೋದಲ್ಲಿ "ಫಾರ್ಮೋಸಾದ ರಿಪಬ್ಲಿಕ್" ನ ಹಂಗಾಮಿ ಸರ್ಕಾರ ರಚಿಸಿರುತ್ತಾರೆ ಡಾ॥ ಲಿಯೊಪಂಟಯುವರ ಅಧ್ಯಕ್ಷರು. ಫಾರ್ಮೋಸಾದಲ್ಲಿರುವ ಚೀನಾದವರನ್ನೂ, ಹಾಂಕಾಂಗಿನಲ್ಲಿರುವ ಚೀನಾದವರನ್ನೂ ಹೊಸ ಸರ್ಕಾರವು ಪ್ರತಿನಿಧಿಸುವುದೆಂದು ಹೇಳಲಾಗಿದೆ. ಸರ್ಕಾರವು ಒಂದು ಘೋಷಣೆ ಹೊರಡಿಸಿ ತಾನು ವಿಶ್ವಸಂಸ್ಥೆಯೊಡನೆ ಸಹಕಾರದಿಂದ ನಡೆದುಕೊಳ್ಳುವುದಾಗಿ ಸೂಚಿಸಿದೆ

ರೈಲ್ವೆ ಟಿಕೆಟ್ ಚೆಕಿಂಗ್ ಸಿಬ್ಬಂದಿಯ ಸಂಘ

ಮೈಸೂರು ಸಂಸ್ಥಾನದಲ್ಲಿರುವ ರೈಲ್ವೆ ಟಿಕೆಟ್ ಚೆಕಿಂಗ್ ಸಿಬ್ಬಂದಿಯವರು ಕಳೆದ ೧೯ನೇ ತಾರೀಕು ಶ್ರೀರಂಗಪಟ್ಟಣದಲ್ಲಿ ಸಭೆ ಸೇರಿ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಸಂಘವೊಂದನ್ನು ಸ್ಥಾಪಿಸಿದರು ಅದರ ಕೇಂದ್ರವು ಮೈಸೂರಿನಲ್ಲಿರುವುದು ಶ್ರೀ ಕೆ. ವಿ ಆರ್ ಬಲಿಜರವರು ಹಂಗಾಮಿ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟಿರುವರು

ನಮ್ಮಲ್ಲಿ ಎಲ್ಲಾ ತರಹ ಕನ್ನಡಕಗಳೂ, ಆ ಸಾಮಾನುಗಳೂ ಸುಲಭ ಬೆಲೆಗೆ ದೊರೆಯುತ್ತವೆ

ಎ. ಇಸ್ಮೈಲ್ ಅಂಡ್ ಕೋ,
ಕನ್ನಡಕದ ವ್ಯಾಪಾರಿಗಳು
ಟಿ. ಎಲ್ ಉಪಾಧ್ಯಾಯ ಬಿಲ್ಡಿಂಗ್ಸ್
ಸಯ್ಯಾಜಿರಾವ್ ರಸ್ತೆ ಮೈಸೂರು

ಗೃಹಕೃತ್ಯದ ನೋಟೀಸು

ಪಾಂಡವಪುರ ತಾಲ್ಲೂಕು ಚಿನಕುರಳಿ ಹೋಬಳಿ ಹೊಸ ಕನ್ನಂಬಾಡಿ ಗ್ರಾಮದ ಕೆಂ... ಮರೀಗೌಡ ಮತ್ತು ಶಿವಾನೇಗೌಡ ... ಳು ಈ ಮೂಲಕ ತಿಳಿಯಪಡಿಸುವುದೇನೆಂದರೆ

ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಮಣುಗನಹಳ್ಳಿ ಗ್ರಾಮದಲ್ಲಿರುವ ಬ್ಯಾಟೀ... ಮ ಸರ್ವೆ 31, 52, 53, 54 ನೇ ನಂಬರಿ... ವಾನನ್ನು ಗುತ್ತಿಗೆ ಮಾಡುತ್ತಿದ್ದು, ನಮ್ಮ ... ಯ ಅಣ್ಣನ ತೀರಿಹೋದವರಾಗಿಯ್ಯನಿ... ಗುತ್ತಿಗೆ ಸಂದಾಯ ಮಾಡದಿದ್ದುದರಿಂ... ಗ್ಗೆ ಸುಮಾರು ನಾಲ್ಕು ವರ್ಷದಿಂದ ವ್ಯಾ... ಹೆದು ಹುಣಸೂರು ಮುನ್ಸೀಫ್ ಕೋರ್ಟಿ... ವಿಕ್ರಿಯಾಗಿರುತ್ತೆ. ಆದುದರಿಂದ ಈ ಜ... ಮ್ಮಿ ಕ್ರಯ, ಭೋಗ್ಯ ವಗೈರೆ ಏನಾದರೂ ... ಪಿಸಿಕೊಂಡವರು ಕೋರ್ಟು ಖರ್ಚು ... ನಾಲ್ಕು ವರ್ಷದ ಫಸಲಿನ ನಷ್ಟಕ್ಕೆ ಗು... ಗಬೇಕಾಗುತ್ತದೆ

ನಂಜುಂಡರಮರೀಗೌಡ
ಶಿವಾನೇಗೌಡ

ಪ್ರವಾಸಕ್ಕೆ ಅನುಕೂಲವಾದ ಇಂತಹ ಸುಸಮಯವನ್ನು ಕಳೆದುಕೊಳ್ಳಬೇಡಿ !

ಶ್ರೀ ಸತ್ಯನಾರಾಯಣ ಯಾತ್ರಾ ಕಂಪೆನಿ,
ಮೈಸೂರು

ಕಾರಣಾಂತರದಿಂದ ಅಂದರೆ ರೈಲ್ವೆ ಅನಾನುಕೂಲಗಳಿಂದ, ಮೊದಲಿದ್ದ ಯಾತ್ರಾ ಹೊರಡುವ ತಾರೀಖು 26 2 56ರ ಬದಲು 22 3 56ನೆಯ ಗುರುವಾರಕ್ಕೆ ಬದಲಾಯಿಸಿದೆ ಯಾತ್ರಾ ಸ್ಥಳಗಳಲ್ಲಿ ಈ ಕೆಳಗೆ ಕಂಡಂತೆ ಬದಲಾವಣೆಯಾಗಿರುತ್ತೆ ಮೈಸೂರು ಅರಸೀಕೆರೆ ಮಾರ್ಗವಾಗಿ ಪೂನಾ, ಬೊಂಬಾಯಿ, ನಾಸಿಕರೋಡ್, ಪಂಡರಾಪುರ, ಉಜ್ಜಯಿನಿ ಭೂಪಾಲ್ ಗ್ವಾಲಿಯರ್, ಆಗ್ರಾ, ಮಥುರಾ, ಡೆಲ್ಲಿ, ಕುರುಕ್ಷೇತ್ರ ಹರಿದ್ವಾರ, ಲಕ್ನೋ ಅಯೋಧ್ಯೆ. ಅಲಹಾಬಾದ್, ಕಾಶಿ, ಗಯ ಕಲ್ಕತ್ತ, ಪೂರಿ ಜಗನ್ನಾಥ, ವಾಲ್ಟೇರ್ ಮದರಾಸ್, ಬೆಂಗಳೂರು ಮಾರ್ಗವಾಗಿ ಮೈಸೂರು ಟಿಕೇಟು ದರ 250 ರೂ 10 ವರ್ಷದ ಒಳಗಿರುವವರಿಗೆ 125 ರೂ ಈ ಪ್ರವಾಸದಲ್ಲಿ ರೈಲ್ವೆ ಅಥವಾ ಇತರ ಅನಾನುಕೂಲದಿಂದ ಯಾತ್ರೆ ನಿಂತರೂ ಹಣ ವಾಪಸ್ ಮಾಡಲಾಗುವುದು 8-3-56ರ ಒಳಗೆ ಯಾತ್ರಿಕರು ಸೀಟುಗಳನ್ನು ಅಡ್ವಾನ್ಸ್ ಕೊಟ್ಟು ರಿಸರ್ವ್ ಮಾಡಿಸತಕ್ಕದ್ದು ಊಟ, ತಿಂಡಿ, ಕಾಫಿ ಮುಂತಾದ ಅನುಕೂಲಗಳನ್ನು ಏರ್ಪಡಿಸಿದೆ ಇದಕ್ಕೆ ಅಲಾಯಿದಾ ಛಾರ್ಜ್ ಇಲ್ಲ ಸ್ನಾನ ಮಾಡಲು ಏರ್ಪಡಿಸಲಾಗಿದೆ ಹೆಚ್ಚು ವಿಷಯಗಳಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ

ಡಾ॥ ಎಂ. ಆರ್. ಕೆಂಚಯ್ಯ,
ಶ್ರೀ ಸತ್ಯನಾರಾಯಣ ಯಾತ್ರಾ ಕಂಪೆನಿ,
778 ಕಾಮಾಟಗೇರಿ, ಮಂಡಿ ಮೊಹಲ್ಲಾ, ಮೈಸೂರು

2-3-56 ರಿಂದ ಅಮೋಘ ಪ್ರಾರಂಭ
ದಿನವೂ ಮೂರು ಪ್ರದರ್ಶನಗಳು

ಒಲಿಂಪಿಯಾ ★

ಯೂನಿಟ್ ಪಿಕ್ಚರ್ಸ್‌ರವರ **ಫರಾರ್** ★ **(FARAAR)**

ಪಾತ್ರ — ದೇವಾನಂದ್, ಗೀತಾಬಾಲಿ ಮತ್ತು ಕೃಷ್ಣಕುಮಾರಿ
ನಿರ್ದೇಶನ : ಫಣಿ ಮುಜುಂದಾರ್ : ಸಂಗೀತ : ಅನಿಲ್ ಬಿಸ್ವಾಸ್

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

1 3-56 ನೇ ಗುರುವಾರದಿಂದ : ಅಮೋಘ 2ನೇ ವಾರ

★ **ಹರಿಭಕ್ತ** ★
(ಕನ್ನಡ)

ಪಾತ್ರ — ಪಂಢರೀಬಾಯಿ, ರಾಜಕುಮಾರ್, ನರಸಿಂಹರಾಜು ಮುಂತಾದವರು

ರಿಜಿಸ್ಟ್ರೇಷನ್ ನಂ. 792

ಚಂದಾ ದರ

ಪೋಸ್ಟೇಜ್ ಮೂಲಕ
ತಿಂಗಳಿಗೆ ಎಂಟಾಣೆ

ಏಜೆಂಟ್ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಅಂತಿಮ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌಡ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ,
ಆರ್ಣಿ, ಬಿಂಗಳೂರ್
ಸೀರೆ ಮತ್ತು ಜರಿಯ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೦] SADHVI : FRIDAY 2-3-1956 ಮೈಸೂರು ಶುಕ್ರವಾರ : ೨-೩-೧೯೫೬ [ಸಂಚಿಕೆ : ೫೯೦

- ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ನಿಧನ -

ಇರಾನಿಗೂ, ಭಾರತಕ್ಕೂ ಇರುವ ಸಾಂಸ್ಕೃತಿಕ ಸಂಬಂಧ

ಶ್ರೀಮನ್ಮಹಾರಾಜರ ಔತಣ ಕೂಟದಲ್ಲಿ ಪ್ರಶಂಸೆ

ಮೈಸೂರು ೨

ಇರಾನಿನ ದೊರೆ ಮಹಮದ್ ರೇಜಾ ಷಾ ಪೆಹ್ಲವಿಯವರು ಮತ್ತು ರಾಣಿ ಸುರಯ್ಯರವರ ಗೌರವಾರ್ಥವಾಗಿ ರಾಜಪ್ರಮುಖರು ನೆನ್ನೆ ರಾತ್ರಿ ಲಲಿತಮಹಲಿನಲ್ಲಿ ಔತಣವನ್ನು ಏರ್ಪಡಿಸಿದ್ದರು. ಶ್ರೀಮನ್ಮಹಾರಾಜರು ಭಾಷಣ ಮಾಡಿ ಇರಾನಿನಲ್ಲಿ ಸಾಧಿಸಲ್ಪಟ್ಟಿರುವ ಪ್ರಗತಿಗಾಗಿ ಪ್ರಶಂಸೆ ಮಾಡಿದರು. ೫೦ ವರ್ಷಗಳ ಹಿಂದೆ ಆ ದೇಶಕ್ಕೆ ಪಾರ್ಲಿಮೆಂಟರಿ ಪದ್ಧತಿಯು ಜಾರಿಗೆ ಬಂದುದನ್ನು ಈಗಲೂ ಮುಂದುವರಿಸಲಾಗುತ್ತಿದೆಯೆಂದೂ ಮಹಾರಾಜರು ತಿಳಿಸಿ ಇರಾನಿನ ದೊರೆಗಳು ಜಮೀನಿಲ್ಲದ ತಮ್ಮ ಜನರಿಗೆ ಗಣನೀಯವಾದ ಸ್ವಂತ ಭೂಮಿಯನ್ನು ಹಂಚುತ್ತಿರುವುದನ್ನು ಪ್ರಶಂಸಿಸಿದರು. ಭಾರತದಲ್ಲಿ ಆಚಾರ್ಯ ವಿನೋಬಾರವರು ಭೂದಾನಯಜ್ಞವನ್ನು ಯಶಸ್ವಿಯಾಗಿ ನಡೆಸುತ್ತಿರುವುದನ್ನು ಅವರು ನಿರೂಪಿಸಿದರು.

ಭಾರತ ಮತ್ತು ಇರಾನುಗಳ ನಡುವೆ ಸಂಸ್ಕೃತಿ ಇತಿಹಾಸ ಮತ್ತು ಭಾಷಾ ಸಂಬಂಧವಿದೆಯೆಂದೂ ಆರ್ಯರ ಜೀವನ ಪದ್ಧತಿಯು ಎರಡು ದೇಶಗಳಲ್ಲೂ ನೆಲಸಿದೆಯೆಂದೂ ಅವರು ಹೇಳಿದರು. ಭಾರತದ ಪ್ರಧಾನಿಯವರ ಪಂಚಶೀಲ ತತ್ವದ ವಿದೇಶಾಂಗ ನೀತಿಯಿಂದ, ನಾನಾ ದೇಶಗಳ ಪ್ರತಿನಿಧಿಗಳು ಭಾರತಕ್ಕೆ ಬರುವಂತಾಗಿದೆಯೆಂದು ಅವರು ತಿಳಿಸಿ, ಎರಡು ರಾಷ್ಟ್ರಗಳ ನಡುವೆ ಸ್ನೇಹ ಮತ್ತು ಭ್ರಾತೃಭಾವವು ಬಲಗೊಳ್ಳಲೆಂದು ಹಾರೈಸಿದರು.

ಇರಾನಿನ ದೊರೆಗಳು ಸತ್ಕಾರಕ್ಕಾಗಿ ವಂದನೆಯನ್ನು ಅರ್ಪಿಸಿ, ಸಾವಿರಾರು ವರ್ಷಗಳಿಂದಲೂ ಭಾರತಕ್ಕೂ ಇರಾನಿಗೂ ಇರುವ ಸಾಂಸ್ಕೃತಿಕ ಸಂಬಂಧವು ಮುಂದೆಯೂ ಬೆಳೆದು ಇತರ ದೇಶಗಳಿಗೆ ಮಾದರಿಯಾಗಲೆಂದು ಹಾರೈಸಿದರು. ಭಾರತದಲ್ಲಿ ಆಗಿರುವ ಅಗಾಧವಾದ ಪ್ರಗತಿಯನ್ನು ನೋಡಲು ತಮ್ಮೊಡನೆ ಇರಾನಿನ ವಿದ್ಯಾ ಮತ್ತು ವ್ಯವಸಾಯ ಮಂತ್ರಿಗಳನ್ನು ಕರೆತಂದಿರುವುದಾಗಿಯೂ ಹೇಳಿ ಇಲ್ಲಿನ ಕಾರ್ಯಸಾಧನೆಯಿಂದ ನಮ್ಮ ದೇಶವು ಅನೇಕ ವಿಷಯಗಳನ್ನು ಅರಿಯಬೇಕಾಗಿದೆಯೆಂದು ನುಡಿದರು. ಕಳೆದ ೨೦ ವರ್ಷಗಳಲ್ಲಿ ಮೈಸೂರು ಸಂಸ್ಥಾನವು ಸಾಧಿಸಿರುವ ಪ್ರಗತಿಗಾಗಿ ಮೆಚ್ಚಿಗೆಯನ್ನು ಸೂಚಿಸಿದರು. ಈ ದೇಶದಲ್ಲಿ ನೋಡಬೇಕಾಗಿರುವ ಎಲ್ಲ ಐತಿಹ್ಯ ಸ್ಥಳಗಳನ್ನೂ ಭೇಟಿ ಮಾಡಲು ಇನ್ನೊಂದಾವರ್ತಿ ಇಲ್ಲಿಗೆ ಬರಲು ತಾವು ಬಯಸುವುದಾಗಿ ಅವರು ನುಡಿದು, ಮಹಾರಾಜರಿಗೂ ಸಂಸ್ಥಾನದ ಪ್ರಜೆಗಳಿಗೂ ತಮ್ಮ ಶುಭಾಶಯಗಳನ್ನು ಸೂಚಿಸಿದರು.

ಜೂನಿನಲ್ಲಿ ಸ್ಕೂಲ್ ಫೈನಲ್ ಸಪ್ಲಿಮೆಂಟರಿ ಪರೀಕ್ಷೆ

ಈ ವರ್ಷ ಸಪ್ಲಿಮೆಂಟರಿ ಎಸ್ ಎಸ್ ಎಲ್ ಸಿ ಪರೀಕ್ಷೆಯು ಜೂನ್ ತಿಂಗಳಲ್ಲಿ ನಡೆಯುವುದೆಂದು ಗೊತ್ತಾಗಿದೆ.

ದಿವಂಗತ ರಾಜಸೇವಾ ಪ್ರಸಕ್ತ ಅಂಬಳೆ ಸುಬ್ರಹ್ಮಣ್ಯಯ್ಯರ್‌ರವರು

ನಗರದ ಸಮಾನ್ಯ ಮಹನೀಯರು ಶ್ರದ್ಧಾಂಜಲಿ

ಮೈಸೂರು ೨

ರಾಜಸೇವಾ ಪ್ರಸಕ್ತ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ನೆನ್ನೆ ರಾತ್ರಿ ೧೧ ಗಂಟೆಗೆ ತಮ್ಮ ಗೃಹದಲ್ಲಿ ನಿಧನ ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಅವರು ಸುಮಾರು ೧॥ ತಿಂಗಳಿಂದಲೂ ಕಾಹಿಲೆ ಬಿದ್ದು ನರಳುತ್ತಿದ್ದರು.

ಅವರಿಗೆ ೮೪ ವರ್ಷ ವಯಸ್ಸಾಗಿತ್ತು. ನಾನಾ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡಿ ನಗರಕ್ಕೆ ಚಿರಪರಿಚಿತರಾಗಿದ್ದರು. ದಿವಂಗತ ಎಂ. ವೆಂಕಟಕೃಷ್ಣಯ್ಯನವರ ನಂತರ ಅವರು ಎರಡನೆಯ ತಾತಯ್ಯನವರೆಂತಿದ್ದರು. ಇವರ ನಿಧನದಿಂದ ನಗರದ ಸಾರ್ವಜನಿಕ ಜೀವನದಲ್ಲಿ ದೊಡ್ಡ ಕೊರತೆಯುಂಟಾಗಿದೆ. ಯಾವ ಕೆಲಸವನ್ನು ಹಿಡಿದರೂ ಅತ್ಯಂತ ಶ್ರದ್ಧಾಸಕ್ತಿಗಳಿಂದ ನಡೆಸುವುದು ಅವರಲ್ಲಿದ್ದ ಒಂದು ಹುಟ್ಟುಗುಣ. ಆಗರ್ಭ ಶ್ರೀಮಂತರಾಗಿ ಶ್ರೀ ಅಂಬಳೆ ಅಣ್ಣಯ್ಯ ಪಂಡಿತರಿಗೆ ಏಕಮಾತ್ರ ಪುತ್ರರಾಗಿದ್ದರು.

ನಗರದಲ್ಲಿ ಅವರು ಭಾಗವಹಿಸದೇ ಇದ್ದ ಕಾರ್ಯ ಚಟುವಟಿಕೆಗಳ್ಯಾವುವೂ ಇರಲಿಲ್ಲ.

ಬ್ರಾಹ್ಮಣ ಧರ್ಮ ಸಹಾಯ ಸಭೆ, ವೇದಶಾಸ್ತ್ರ ಪೋಷಕ ಸಭೆ, ಗೀತಾ ಪ್ರಚಾರಿಣೀ ಸಭೆ, ಹಿಂದಿ ಪ್ರಚಾರ ಸಭೆ, ಶಾರದಾವಿಲಾಸ ವಿದ್ಯಾಸಂಸ್ಥೆ, ಕಾಸ್ಮಾಪಾಲಿಟನ್ ಕ್ಲಬ್, ಮಹಾಜನ ಹೈಸ್ಕೂಲು ಚಾಮುಂಡೇಶ್ವರಿ ಆದಿಕರ್ನಾಟಕ ಹಾಸ್ಟಲ್, ಸ್ವದೇಶೀ ವಸ್ತು ಪ್ರದರ್ಶನ ಸಮಿತಿ ಮುಂತಾದುವುಗಳಿಗೆ ಅವರು ಅಧ್ಯಕ್ಷರಾಗಿದ್ದರು.

ನಿವೃತ್ತರಾದ ಮೇಲೆ ಅವರು ಉರ್ದು ಭಾಷೆಯನ್ನು ವ್ಯಾಸಂಗ ಮಾಡುತ್ತಿದ್ದರು. ಟೈಪ್ ಮಾಡುವುದನ್ನೂ ಸಹಾ ಕಲಿತು ತಮ್ಮ ಪತ್ರವ್ಯವಹಾರಗಳನ್ನು ತಾವೇ ಟೈಪ್ ಮಾಡುತ್ತಿದ್ದರು. ನೂರಡಿ ರಸ್ತೆಯಲ್ಲಿರುವ ಅಂಬಳೆ ಅಣ್ಣಯ್ಯ ಪಂಡಿತರ ಛತ್ರವನ್ನು ಪೌರಸಭಾ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ಇತ್ತೀಚೆಗೆ ಒಪ್ಪಿಸಿಕೊಟ್ಟರು. ಆಯುರ್ವೇದ ಆಸ್ಪತ್ರೆ ಸ್ಥಾಪನೆಗೆ ಕಾರಣರಾಗಿದ್ದರು. ಆಯುರ್ವೇದ ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿದ್ದರು. ಧರ್ಮಿಷ್ಠರೂ, ಸತ್ಕರ್ಮನಿರತರೂ, ಪರೋಪಕಾರಿಗಳೂ, ದಾನಶೀಲರೂ ಆಗಿದ್ದರು.

ಅವರು ಸಂಸ್ಥಾನದ ಅಬ್ಕಾರಿ ಕಮಿಷನರಾಗಿ ನಿವೃತ್ತರಾಗಿ ೩೦ ವರ್ಷಗಳಾದುವು. ಅನೇಕ ದಾನಧರ್ಮಗಳನ್ನು ನಡೆಸಿದರು. ಅವರ ದಾನಧರ್ಮಗಳು ನಿರಾಡಂಬರವಾಗಿಯೂ, ರಹಸ್ಯವಾಗಿಯೂ ಇದ್ದುವು. ಅವರ ಸೇವೆಯನ್ನು ಮೆಚ್ಚಿ ಮಹಾರಾಜರು ಅವರಿಗೆ ರಾಜಸೇವಾ ಪ್ರಸಕ್ತ ಎಂಬ ಬಿರುದನ್ನು ಕೊಟ್ಟಿದ್ದರು.

ಜೀವನ ಪರಿಚಯ - ಶ್ರೀಯುತರು ೧೮೭೨ ರಲ್ಲಿ ಮೈಸೂರಿನಲ್ಲಿ ಜನಿಸಿದರು. ಈಗಿನ ಮಹಾರಾಜಾ ಹೈಸ್ಕೂಲಿನಲ್ಲಿ (ಹಿಂದೆ ರಾಜಾ ಸ್ಕೂಲ್) ಓದಿ, ಅನಂತರ ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರು. ಎಲ್ ಎಸ್ ನಿಂದ ಪ್ರತಿಯೊಂದು ಪರೀಕ್ಷೆಯಲ್ಲೂ ಪ್ರಥಮ ದರ್ಜೆಯಲ್ಲೇ ಉತ್ತೀರ್ಣರಾಗಿದ್ದರು. ಎಂ. ಸಿ. ಎಸ್ ಪರೀಕ್ಷೆಗೂ ಕುಳಿತಿದ್ದರು. ಅವರು ಪ್ರಾರಂಭದಲ್ಲಿ ಅಸಿಸ್ಟೆಂಟ್ ಕಮೀಷನರಾಗಿ ನೇಮಿಸಲ್ಪಟ್ಟು ಮುನ್ಸೀಫರಾಗಿ ಕೆಲಸ ಮಾಡಿದರು. ಅವರಿಗೆ ೧೮೯೮ ರಲ್ಲಿ ದಿವಾನ್ ಶೇಷಾದ್ರಿಅಯ್ಯರ್‌ರವರ ಮಗಳನ್ನು ಕೊಟ್ಟು ವಿವಾಹವಾಯಿತು. ನಿಸ್ಪೃಹತೆ ಮತ್ತು ದಕ್ಷತೆಯಿಂದ ಸೇವೆ ಸಲ್ಲಿಸಿ ಪ್ರಭು-ಪ್ರಜೆಗಳ ಪ್ರೀತಿಗೆ ಪಾತ್ರರಾಗಿದ್ದರು.

ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧು ಮಿತ್ರರಿಗೆ ಹೃತ್ಪೂರ್ವಕವಾದ ಸಂತಾಪವನ್ನು ಸೂಚಿಸುತ್ತೇವೆ.

ಇನ್ನು ಮುಂದೆ ಜವಾಹರರ ಕಲೆ

ಮಹಾತ್ಮ ಗಾಂಧಿಯವರು ಸ್ಥಾಪಿಸಿದ ಹರಿಜನ ವಾರ ಪತ್ರಿಕೆಗಳನ್ನು ನಿಲ್ಲಿಸಲಾಗಿರುವ ಸಂಬಂಧವಾದ ಒಂದು ಪ್ರಕಟಣೆಯಲ್ಲಿ ಗಾಂಧಿ ಯುಗದ ಭಾರತದ ಇತಿಹಾಸದಲ್ಲಿ ಈಗ ಜವಹರಲಾಲರ ತಲೆಯು ಆರಂಭವಾಗಿರುವುದೆಂದು ಸಂಪಾದಕರು ತಿಳಿಸಿರುತ್ತಾರೆ. ಜವಾಹರರ ಕಲೆಯು ಆರಂಭವಾಗಿರುವುದರಿಂದ ಗಾಂಧಿ ಯುಗದ ಹರಿಜನ ಮಾಪ್ತಿಯಾಯಿತೆಂದು ಭಾವಿಸಲಾಗಿದೆಂದೂ, ಗಾಂಧೀಜಿಯವರ ಸಂದೇಶವು ಈಗಿನ ಅಥವಾ ಯುಗಕ್ಕೂ ಅನ್ವಯವಾಗುವುದೆಂದೂ ಅವರು ಹೇಳಿರುವರು. ಗಾಂಧಿಜಿಯವರ ಸಂದೇಶ ಪಾಲಿಸಬೇಕಾದರೆ ಹಲವು ಕಲೆಗಳಾಗಬೇಕೆಂತಲೂ ಅದರಲ್ಲಿ ಮೊದಲನೆಯದೇ ಜವಹರರ ಕಲೆಯೆಂದೂ, ಕಾಂಗ್ರೆಸ್ಸು ಅವರ ಸಾಧನವೆಂದೂ ಪತ್ರಿಕೆಗಳು ತಿಳಿಸಿವೆ.

ಲಕ್ನೋ ನಗರದಲ್ಲಿ ಸಹಸ್ರಾರು ರೈತರುಗಳ ಪ್ರದರ್ಶನ

ಜಮೀನು ಹಂಚಿಕೆ, ಕಬ್ಬಿನ ಬೆಲೆಯ ಏರಿಕೆಯ ಪ್ರಮಾಣ, ಕಾರ್ಮಿಕರ ಕೂಲಿ ಹೆಚ್ಚಳ ತಪ್ಪಿಸುವುದು ಇವೇ ಮುಂತಾದ ಬೇಡಿಕೆಗಳನ್ನು ಗೌರ್ನರ್ ಮತ್ತು ಮುಖ್ಯಮಂತ್ರಿಗಳ ಮುಂದೆ ಸಲ್ಲಿಸಲು ನೆನ್ನೆ ಉತ್ತರ ಪ್ರದೇಶದ ನಾನಾ ಜಿಲ್ಲೆಗಳ ಸಹಸ್ರಾರು ರೈತರುಗಳು ಡಾ॥ ರಾಮ ಮನೋಹರ ಲೋಹಿಯಾರವರ ನೇತೃತ್ವದಲ್ಲಿ ಪ್ರದರ್ಶನ ನಡೆಸಿ ಶಾಸನ ಸಭಾ ಭವನಕ್ಕೆ ತೆರಳಿದ್ದರು. ಅನೇಕ ಮಹಿಳೆಯರೂ ಅದರಲ್ಲಿ ಭಾಗವಹಿಸಿದ್ದರು. ನಾನಾ ರೀತಿಯ ಘೋಷಣೆಗಳನ್ನು ಮಾಡಲಾಯಿತು.

ಅಸ್ಸಾಂ ಗಡಿ ಬಳಿ ಪಾಕಿಸ್ತಾನದವರ ಗುಂಡಿನೇಟು

ಅಸ್ಸಾಂ ಗಡಿಯಲ್ಲಿ ಪಾಕಿಸ್ತಾನದ ಸೈನಿಕರು ಮೊನ್ನೆ ಸಂಜೆ ಗುಂಡು ಹಾರಿಸಿ ಅಸ್ಸಾಮಿನ ರಕ್ಷಣಾ ಪಡೆಗೆ ಸೇರಿದ ಒಬ್ಬ ಕಾನ್ಸ್ಟೇಬಲನನ್ನು ಕೊಂದರೆಂದು ವರದಿಯಾಗಿದೆ.

ಭಾರತ ಪಾಠ

ಶ್ರೀ ಬನುಮಯ್ಯನವರ ಹೈಸ್ಕೂಲಿನಲ್ಲಿ ನಾಳೆ ಬೆಳಿಗ್ಗೆ ೯-೧೦ ಗಂಟೆಗೆ ಸಂಸ್ಕೃತ ಪ್ರಚಾರ ಸಭೆ ನಡೆಯುವುದು. ಶಾರದಾವಿಲಾಸ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಎಂ. ಸಿ. ಬೋಳ್ಯಣ್ಣನವರು ಮಹಾಭಾರತದ ಕರ್ಣ-ಕುಂತೀ ಸಂವಾದವನ್ನು ವಾಚನ ಮಾಡುವರು. ಬಳಿಕ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಸೀ. ಎಸ್. ಅನಂತಾಚಾರ್ಯರು ವ್ಯಾಖ್ಯಾನ ಮಾಡುವರು.

ಹಿಂದಿ ಸಂಘದ ಪ್ರಾರಂಭೋತ್ಸವ

ನಗರದ ಹಾರ್ಡಿಂಜ್ ಹೈಸ್ಕೂಲಿನ ಹಿಂದಿ ಸಂಘದ ಪ್ರಾರಂಭೋತ್ಸವವು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಜೆ. ಆ. ಶರ್ಮರವರ ಅಧ್ಯಕ್ಷತೆಯಲ್ಲಿ ಮೊನ್ನೆ ನೆರವೇರಿತು. ಶ್ರೀ ಜಿ ಎಸ್ ವಸಂತಕುಮಾರ್‌ರವರಿಂದ ಪ್ರಾರ್ಥನೆಯಾದನಂತರ ಶ್ರೀ ಎಸ್. ರಾಮಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಜಿ. ಶ್ರೀನಿವಾಸಯ್ಯಂಗಾರ್ಯರು ಸಂಘದ ಪ್ರಸಕ್ತಸಾಲಿನ ಕಾರ್ಯಕ್ರಮವನ್ನು ವಿವರಿಸಿದರು. ನಂತರ ಮೇ. ರಾಜೇಶ್ವರಯ್ಯನವರು ಹಿಂದಿ ಕಲಿಯುವುದರ ಅವಶ್ಯಕತೆ ಬಗ್ಗೆ ಭಾಷಣ ಮಾಡಿದರು. ಶಾಲೆಯ ಉಪಾಧ್ಯಾಯರಾದ ಶ್ರೀ ಎಂ. ರಾಮಸೇಷಯ್ಯಂಗಾರ್ಯರೂ ಸಹ ಹಿಂದಿ ಭಾಷೆಯ ಪ್ರಾಮುಖ್ಯತೆ ವಿಷಯವಾಗಿ ಮಾತನಾಡಿದರು. ಅಧ್ಯಕ್ಷ ಭಾಷಣದನಂತರ, ಸಂಘದ ವಿದ್ಯಾರ್ಥಿ ಕಾರ್ಯದರ್ಶಿ ಟಿ ಆರ್ ರವಿನಾಥ್‌ರವರು ಧನ್ಯವಾದಗಳನ್ನು ಅರ್ಪಿಸಿದರು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

○ ದಕ್ಷಿಣ ಪ್ರದೇಶ ಅಥವಾ ಕರ್ನಾಟಕ ಮತ್ತು ಕೇರಳಗಳ ಐಕ್ಯದ ಬಗ್ಗೆ ಪ್ರತಿಭಟಿಸಲು ಈ ತಿಂಗಳು ೧೧ರಂದು ದಿನಾಚರಣೆ ಮಾಡಬೇಕೆಂದು ಕರ್ನಾಟಕದ ಕಮ್ಯೂನಿಸ್ಟ್ ಪಕ್ಷದವರು ಸೂಚಿಸಿರುವರು.

ಥಾನಾ ಜಿಲ್ಲೆಯಲ್ಲಿ ಕಾಡು ಜನರ ಹಾವಳಿ

ಹಚ್ಚು ಕೂಲಿ ಮತ್ತು ಭೂ ಕಂದಾಯದ [illegible]ಗಳಿಗಾಗಿ ಥಾನಾ ಜಿಲ್ಲೆಯ [illegible] ತಾಲ್ಲೂಕಿನಲ್ಲಿ ಕಾಡು ಜನರು ನಡೆಸುತ್ತಿರುವ ಚಳುವಳಿಯು ಹಿಂಸಾತ್ಮಕ ಸ್ವರೂಪಕ್ಕೆ ತಿರುಗಿ ಅವರುಗಳು ಒಬ್ಬ ಜಮೀನುದಾರನ ಬಂಗಲೆಯನ್ನು ಸುಟ್ಟುಹಾಕಿದರೆಂದೂ, ಹುಲ್ಲು ಮೆದೆ ಮತ್ತು ಮರಮುಟ್ಟುಗಳಿಗೆ ಬೆಂಕಿ ಹಚ್ಚಿಸಲಾಯಿತೆಂದೂ ವರದಿಯಾಗಿದೆ. ಹಲವು ಜಮೀನುದಾರರನ್ನೂ ಅವರು ಹೊಡೆಯುದಾಗಿ ಹೇಳಲಾಗಿದೆ. ಸರ್ಕಾರ ಮತ್ತು ಜಮೀನುದಾರರ ವಿರುದ್ಧ ಹೋರಾಡಲು ಕಾಡುಜನರ ಪ್ರತಿಯೊಂದು ಮನೆತನದವರೂ ಒಬ್ಬೊಬ್ಬರನ್ನು [illegible] ಮತ್ತು ಆಹಾರ ಸಾಮಗ್ರಿ ಸಮೇತ ಚಳುವಳಿಗೆ ಕಳುಹುವಂತೆ ಅವರುಗಳ ಮುಖಂಡರು ಸೂಚನೆಯಿತ್ತಿರುವರೆಂದೂ ಎಲ್ಲರೂ ಒಂದು ಗುಡ್ಡದಲ್ಲಿ ಸೇರುವಂತೆ ಸೂಚಿಸಲ್ಪಟ್ಟಿರುವರೆಂದೂ ವರದಿಯಾಗಿದೆ

ಅಮೆರಿಕಾ ಅಧ್ಯಕ್ಷ ಸ್ಥಾನಕ್ಕೆ ಐಸೆನ್‌ಹೋವರರಿಂದ ಪುನಃ ಸ್ಪರ್ಧೆ

ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಹೊಸದಾಗಿ ನಡೆಯುವ ಚುನಾವಣೆಯಲ್ಲಿ ಈಗ ಅಧ್ಯಕ್ಷರಾಗಿರುವ ಐಸೆನ್‌ಹೋವರರು ರಿಪಬ್ಲಿಕನ್ ಪಕ್ಷದ ಉಮೇದುವಾರರಾಗಿ ಸ್ಪರ್ಧಿಸಲು ನಿರ್ಧರಿಸಿರುವರು

ಮೋಸದಿಂದ ಮಗುವಿನ ಆಭರಣಗಳ ಅಪಹಾರ

[illegible] ಶ್ರೀ [illegible] ವರ್ಷದ ಮಗ[illegible] ವರ್ಷದ ಮಗುವನ್ನು ನಿನ್ನೆ ಎತ್ತಿಕೊಂಡು ವ್ಯಾಪಾರಕ್ಕಾಗಿ [illegible] ಹೋಗುತ್ತಿದ್ದಾಗ ಸುಮಾರು [illegible] ವಯಸ್ಸಿನ ಒಬ್ಬ ಯುವಕ [illegible] ಹುಡುಗಿಯನ್ನು ಒಕ್ಕಿಯ ತಂದೆಯು ಬರ ಹೇಳುವನೆಂದು ತಿಳಿಸಿ [illegible] ಮಗುವನ್ನು ತಾನು ಎತ್ತಿಕೊಂಡು ಅದರ ಕಿವಿಯಲ್ಲಿದ್ದ [illegible] ಚಿನ್ನದ [illegible] ಮತ್ತು ಮಾವಿನಕಾಯಿ [illegible]ಗಳನ್ನು [illegible] ಹುಡುಗಿಯ ಕೈಗೆ [illegible] ಬಿಸ್ಕತ್ತನ್ನು ತೆಗೆದುಕೊಳ್ಳುವಂತೆ ತಿಳಿಸಿ ಅಲ್ಲಿಂದ ಪರಾರಿಯಾದನೆಂದು ವರದಿಯಾಗಿದೆ ಈ ವಿಷಯವನ್ನು ಪೋಲೀಸರಿಗೂ ತಿಳಿಸಲಾಗಿದೆ

ಸಂಯುಕ್ತ ಮಹಾರಾಷ್ಟ್ರ ಸಮಿತಿಯವರ ಸತ್ಯಾಗ್ರಹದ ಕಾರ್ಯಕ್ರಮ

ಸಂಯುಕ್ತ ಮಹಾರಾಷ್ಟ್ರದ ಸ್ಥಾಪನೆಗಾಗಿ [illegible] ನಗರ ಮತ್ತು ಮಹಾರಾಷ್ಟ್ರದಲ್ಲೆಲ್ಲಾ ಇದೇ ತಿಂಗಳು [illegible]ರಿಂದ ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ಸತ್ಯಾಗ್ರಹ ಮತ್ತು [illegible] ಚಳುವಳಿಯನ್ನು ನಡೆಸುವರು ಮೊದಲು [illegible]ನಲ್ಲಿ [illegible] ಆರಂಭವಾಗುವುದು ಸಂಸ್ಥಾನ ಪುನರ್ವಿಂಗಡಣಾ ಮಸೂದೆಯನ್ನು ಬೊಂಬಾಯಿ ಶಾಸನ ಸಭೆಯಲ್ಲಿ ಮಂಡಿಸುವ ದಿನದಿಂದ ಸತ್ಯಾಗ್ರಹ ನಡೆಸಲಾಗುವುದು ಸಾಮೂಹಿಕ ಸತ್ಯಾಗ್ರಹವನ್ನಾಗಲೀ ಸಾರ್ವತ್ರಿಕ [illegible]ಯನ್ನಾಗಲಿ ಮಾಡುವುದಿಲ್ಲ

ಬನುಮಯ್ಯ ಕಾಮರ್ಸ್ ಕಾಲೇಜಿನ ದಿನಾಚರಣೆ

ನಗರದ ಬನುಮಯ್ಯ ಕಾಮರ್ಸ್ ಕಾಲೇಜಿನ ದಿನಾಚರಣೆಯು ಮೊನ್ನೆ ಬನುಮಯ್ಯನವರ [illegible]ಯಲ್ಲಿ ನೆರವೇರಿತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮತಿ [illegible] ಕೆ ಜಯರವರಿಂದ ಪ್ರಾರ್ಥನೆಯಾದನಂತರ ಬನುಮಯ್ಯ ವಿದ್ಯಾಸಂಸ್ಥೆಯ ಪರವಾಗಿ ಶ್ರೀ ಡಿ ಬಿ ವಿಶ್ವಂಭರಯ್ಯನವರು ಸ್ವಾಗತ ಭಾಷಣ ಮಾಡಿದರು ಶ್ರೀಮತಿ ಎ ಎಸ್ ಪದ್ಮರವರಿಂದ ವೀಣಾವಾದನವು ಜರುಗಿತು ಕಾಲೇಜಿನ ಪ್ರಿನ್ಸಿಪಲ್ ಶ್ರೀ ಬಿ ವಿ ಬನುಮಯ್ಯನವರು ವಾರ್ಷಿಕ ವರದಿಯನ್ನು ಓದಿದರು ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿನಿಯೋಗವಾಯಿತು ಕಾಲೇಜಿನ ಮಾದರಿ ವಿದ್ಯಾರ್ಥಿಯೆಂದು ಪರಿಗಣಿಸಲ್ಪಟ್ಟಿರುವ ಶ್ರೀ ಬಿ ರತ್ನಾಕರರವರಿಗೆ ಒಂದು ಪದಕ ಮತ್ತು [illegible] ರೂಗಳ ಬಹುಮಾನವನ್ನೀಯಲಾಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ, ದಿವಂಗತ ಬನುಮಯ್ಯನವರ ಸಭ್ಯತೆ ಮತ್ತು [illegible] ದಾರ್ಯಗಳನ್ನು ಕೊಂಡಾಡಿ, ಯುವಕರು ಅವರ ಕರ್ತವ್ಯಪರತೆ ಮುಂತಾದ ಸದ್ಗುಣಗಳನ್ನು ಕಲಿತು ನಮ್ಮ ಸಂಸ್ಕೃತಿಯ ಹಿರಿಮೆಗಾಗಿ ಶ್ರಮಿಸಬೇಕೆಂದು ಕೋರಿದರು

ಶ್ರೀ ಪಿಚ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ್ಯರು ವಂದನಾರ್ಪಣೆ ಮಾಡಿದರು

Edited, Printed and Published by A R Nagarajan at Sadhvi Press D Subbiah Road Mysore

ದೆಹಲಿ ವಿದ್ಯಾರ್ಥಿ ಕಾಂಗ್ರೆಸ್ಸಿಗೆ ಮೈಸೂರಿನವರು ಅಧ್ಯಕ್ಷರು

ದೆಹಲಿ ಸಂಸ್ಥಾನದ ವಿದ್ಯಾರ್ಥಿ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಅಲ್ಲಿನ ಲಾ ಕಾಲೇಜಿನಲ್ಲಿ ಓದುತ್ತಿರುವ ಮೈಸೂರಿನ ಶ್ರೀ ಎಂ ವಿ ರಾಜಶೇಖರರವರು ಅಧ್ಯಕ್ಷರಾಗಿ ಚುನಾಯಿತರಾಗಿರುವರು

ವಿವಾಹ ಮಹೋತ್ಸವ

ರಾಜಧಾನಿಯ ಶ್ರೀ ಜಿ ನರಸಿಂಹಯ್ಯನವರು ತಮ್ಮ ಕುಮಾರಿ ಸೌ॥ ಪುಷ್ಪರವರನ್ನು ಶ್ರೀ ಜಿ ಸಿ ಗೋವಿಂದಪ್ಪನವರ ಕುಮಾರ ಡಾ॥ ಜಿ ರಾಮುರವರಿಗೆ ಕೊಟ್ಟು ನಿನ್ನೆ ಗಂಜಾಂ ಉಗ್ರಪ್ಪನವರ ಮನೆಯಲ್ಲಿ ವಿವಾಹವನ್ನು ನೆರವೇರಿಸಿದರು ಈ ಸಂಜೆ ಸ್ವಾಗತ ಸಮಾರಂಭವಿದೆ. ಸಂ॥ ರಾ॥ [illegible]ಡಯ್ಯನವರ [illegible] ಏರ್ಪಾಡಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible] ಸರೋದ — ನಾರಾಯಣರಾವ್—ದೇವರ ನಾಮ [illegible] ಮತ್ತು ಮಧ್ಯಾಹ್ನ [illegible] ವರದರಾಜಯ್ಯಂಗಾರ್ ಸಂಗೀತ [illegible] ಗೋವಿಂದದ ಗೀತೆಗಳು [illegible] ಬಾಲಜಗತ್ ಮುಖ್ಯ ಕಾರ್ಯಕ್ರಮ [illegible] ಕಾಲೇಜು ಕನ್ನಡ ಭಾಷಣ ಸ್ಪರ್ಧೆ, ಸಂಜೆ [illegible] ಸಮ್ಮೇಳನ [illegible] ವಚನ ಗಾನ [illegible] ಎಸ್ ಗುರುಸ್ವಾಮಿ ಕನ್ನಡ ಭಾಷಣ [illegible] ಟಕದ ಪಟ್ಟ ಗುರುದಕ್ಷಿಣೆ ನಾಟಕ [illegible] ದೆಹಲಿ ಕಾರ್ಯಕ್ರಮ [illegible] ಗೀತೆಗಳು [illegible] ಕಾರ್ಯಕ್ರಮ ದೆಹಲಿ ಪ್ರಸಾರ[illegible]

ಶ್ರೀ ಪ್ರಸನ್ನ ಸೀತಾರಾಮ ಮಂದಿರದ ಆಶ್ರಯದಲ್ಲಿ

ಅನೋಘವಾದ ಭರತ ನಾಟ್ಯ

4—3—56 ಭಾನುವಾರ ಸಂಜೆ 6 ಕ್ಕೆ

ಮೈಸೂರು ಟೌನ್‌ಹಾಲಿನಲ್ಲಿ

(ಸುಪ್ರಸಿದ್ಧ ಸಿನಿಮಾ ನಟಿ)

ಶ್ರೀಮತಿ

ಪ್ರೊಲ್ಲಾಚಿ ಕಮಲ

ರವರಿಂದ

ಭರತ ನಾಟ್ಯ

ಮುಂಚಿತವಾಗಿ ಟಿಕೆಟ್ ದರ —

ರೂ 10, 5 3 2 ಮತ್ತು 1

SREE GANESHA

TALKIES

GALA RELEASE ON 3 3 56

Daily 3 Shows

DUEL ON THE MISSISIPPI

(Technicolor)

With Lex Barker,

Patricia Madina

The roaring story of a notorious gambling Queen of Mississippi

This Picture Shall Be screened in Wide Angle

ಅಮೆರಿಕಕ್ಕೆ ಭೇಟಿಯಿಯ[illegible] ನೆಹರೂ ಸಮ್ಮತಿ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು [illegible] ಆಹ್ವಾನದಂತೆ ಪ್ರಧಾನಿ ನೆಹರೂರವರು ಅ[illegible]ಕಕ್ಕೆ ಭೇಟಿಯೀಯಲು ಒಪ್ಪಿರುತ್ತಾರೆ. ಅ[illegible]ಕದ ಅಧ್ಯಕ್ಷರನ್ನು ನೆಹರೂರವರು ಭಾರತ[illegible]ಹ್ವಾನಿಸಿರುವರು

ಮೈಸೂರು ಪೇಟೆ ಧಾರಣೆ

	ರೂ ಆಣೆ	ರೂ [illegible]
ಕಡಲೆಕಾಯಿ	[illegible]	[illegible]
ಹರಳು	[illegible]	[illegible]
ಹುಳ್ಳಿಕಾಳು	[illegible]	[illegible]
ತೊಗರಿಬೇಳೆ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	
ಕಡಲೆ	[illegible]	[illegible]
ಅಲಸಂದೆ	[illegible]	[illegible]
ಧನಿಯ	[illegible]	
ತೊಗರಿ	[illegible]	
ಅವರೆ	[illegible]	[illegible]
[illegible]	[illegible]	[illegible]
[illegible]	[illegible]	
[illegible]	[illegible]	[illegible]
ಹುಣಸೇಹಣ್ಣು	[illegible]	[illegible]
[illegible]	[illegible]	[illegible]
ತೆಂಗಿನಕಾಯಿ[illegible]	[illegible]	[illegible]

ಮನೆ ಕ್ರಯಕ್ಕಿದೆ

1) ಮೈಸೂರು ಕೊರಡಿ ರಸ್ತೆ [illegible] ಗಳ ಸಮೇತ ಇರುವ ಭಾರಿ ಮ[illegible] ಮನೆ.

2) 132 [illegible].

3) 2933/1 [illegible] ಕಟ್ಟಡ.

4) 2787. [illegible]

ವಿವರಗಳಿಗೆ —

ಜಯ ಅಂಡ್ ಕಂಪನಿ,

[illegible] ಹಳೆ ಬ್ಯಾಂಕ್ ರಸ್ತೆ, ಮೈಸೂರು ಫೋನ್ 3[illegible]

NATIONAL LEAGU[E]

Ananthalaya Buildings Myso[re]

Biggest Institution in the City

146 Students Had Appeared For Jan 56 Examination

Excellent Coaching for S. S. L. C. Students

70 per cent Success in previous Examination

Separate Section for Ladies

Working hours 7-30 to 10 A M and 5-30 to 8 30 P M

Classes In Full Swing Join At O[nce]

ಅಮೋಘ ಹರಾಜು ಮಾರಾಟ

ತಾ॥ 4—3—56ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ

ಎಂಪೈರ್ ಆಕ್ಷನಿಯರ್ಸ್,

[illegible]81 ಇರ್ವಿನ್ ರಸ್ತೆ ಮೈಸೂರು

ಸುಂದರವಾದ [illegible] ಸೋಫಾ ಸೆಟ್ಟುಗಳು, ಕುರ್ಚಿ, [illegible] ಮತ್ತು [illegible] ಕುರ್ಚಿಗಳು ಮಡಿಸುವ ಮತ್ತು ಚಿತ್ರದ [illegible]ಗಳು [illegible], [illegible] ದೊಡ್ಡ [illegible] ಬೆಲ್ಜಿಯಂ ಕನ್ನಡಿಗಳು, ಫೋಟೋಗಳು, ಗ್ರಾಮೊಫೋನು ಮತ್ತು ರಿಕಾರ್ಡುಗಳು, ಗಡಿಯಾರ ಡಬ್ಬಲ್ ಮತ್ತು ಸಿಂಗಲ್ ಮಂಚಗಳು, [illegible] ಮತ್ತು ಅನೇಕ [illegible] ಉಪಕರಣಗಳು ಮತ್ತು ಗೃಹೋಪಯುಕ್ತ [illegible] ಸಾಮಾನುಗಳು ಇವೆ

Central Food Technological Research Institute,

V V Mohalla P O, Mysore

TENDER NOTICE

SEALED TENDERS on the prescribed forms obtainable from this Institute are invited for the supply of the following items to this Institute during the period from 1-4-1956 to 31-3-1957

1 Fresh fruits
2 Fresh vegetables
3 Dried fruits, Nuts and spices etc
4 Meat, fresh fish and eggs

Tenders duly complete in all respects together with a tender deposit of Rs 5 (refundable) for each of the above items, should reach the Director, Central Food Technological Research Institute, V V Mohalla P O, Mysore not later than 15-3-1956 The Institute is not bound to accept the lowest or any tender

ಒಲಂಪಿಯಾ ★

2 3 56 ರಿಂದ [illegible] ಪ್ರಾರಂಭ

ದಿನವೂ ಮೂರು ಪ್ರದರ್ಶನಗಳು

ಯೂನಿಕ್ ಪಿಕ್ಚರ್ಸ್‌ರವರ ಫರಾರ್ ★ (FARAAR)

ಪಾತ್ರ — ದೇವಾನಂದ್, ಗೀತಾಬಾಲಿ ಮತ್ತು ಕೃಷ್ಣಕುಮಾರಿ

ನಿರ್ದೇಶಕ : ಫಣಿ ಮಜುಂದಾರ್ : ಸಂಗೀತ : ಅನಿಲ್ ಬಿಸ್ವಾಸ್



ಸ್ವಲ್ಪ ಬಂಡವಾಳದಲ್ಲೇ ಹೆಚ್ಚು ಲಾಭ ಪಡೆಯಿ[ರಿ]

[illegible] ಹೊಸದಾಗಿ ಬಳಕೆಗೆ ಸಿದ್ಧವಾಗಿವೆ

ರೀಟಾ

ಹೊಲಿಯುವ ಯಂತ್ರಗಳು

★

ವಿವರಗಳಿಗೆ ಈಗಲೇ ಬಂದಿರಿ

[illegible]

ಪಟ್ಟು ಬ್ರದರ್ಸ್

[illegible] ಎದುರು, ಮೈಸೂ[ರು]

Registered No. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಏಕೈಕ ಕನ್ನಡ
ಪ್ರಭಾತಪತ್ರಿಕೆಯಾದ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ಚಂದಾದಾರರಾಗಿರಿ

ಪುಟ ೦೪] SADHVI : SATURDAY 3-3-1956 ಮೈಸೂರು ಶನಿವಾರ : ೩-೩-೧೯೫೬ [ಸಂಚಿಕೆ ೧ ೪೯೬

ದವೇಜರ್ ಮಹಾರಾಣಿ ಲಕ್ಷ್ಮೀವಿಲಾಸದವರ ನಿಧನ

ದಿವಂಗತ ಲಕ್ಷ್ಮೀವಿಲಾಸ ಸನ್ನಿಧಾನದವರು

ಈ ಮಧ್ಯಾಹ್ನ ೧.೨ ಘಂಟೆಗೆ ಮಧುವನದಲ್ಲಿ ಅಂತ್ಯಸಂಸ್ಕಾರ

ಮೈಸೂರು ೩

ಸಂಸ್ಥಾನದ ದವೇಜರ್ ಮಹಾರಾಣಿಯವರೂ ಶ್ರೀಮನ್ಮಹಾರಾಜರ ದೊಡ್ಡಮ್ಮನವರೂ ಆದ ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದ ಶ್ರೀಮತಿ ಪ್ರತಾಪ ಕುಮಾರಿ ದೇವಿಯವರು ನೆನ್ನೆ ಸಂಜೆ ೭.೧ ಘಂಟೆಗೆ ಬೆಂಗಳೂರಿನ ಅರಮನೆಯಲ್ಲಿ ನಿಧನಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಸುಮಾರು ಒಂದು ವರ್ಷದಿಂದ ಅವರು ಅನಾರೋಗ್ಯದಿಂದಿದ್ದು ಕಳೆದ ೩ ತಿಂಗಳಿಂದ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ೬೫ ವರ್ಷ ವಯಸ್ಸಾಗಿತ್ತು.

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು, ಸಚಿವರುಗಳಾದ ಶ್ರೀ ಸಿದ್ದವೀರಪ್ಪ ಮತ್ತು ...ನಸಗೌಡರೂ ಮಹಾರಾಣಿಯವರ ನಿಧನದ ಸುದ್ದಿ ತಿಳಿದಕೂಡಲೇ ಬೆಂಗಳೂರಿನ ಅರಮನೆಗೆ ತೆರಳಿ ಅಂತ್ಯದರ್ಶನ ಪಡೆದರು. ಈ ದಿನ ಶ್ರೀಮನ್ಮಹಾರಾಣಿಯವರ ಕಳೇಬರವನ್ನು ಅಂತ್ಯ ಸಂಸ್ಕಾರಕ್ಕಾಗಿ ಜೀಪ್ ಕಾರಿನಲ್ಲಿ ಮೈಸೂರಿಗೆ ತರಲಾಯಿತು. ಬೆಳಗ್ಗೆ ೮-೩೦ ಘಂಟೆಗೆ ಕಳೇಬರದ ಮೆರವಣಿಗೆಯು ತೆರೆದ ಮೋಟಾರಿನಲ್ಲಿ ಸಕಲ ರಾಜ ಮರ್ಯಾದೆಗಳೊಡನೆ ಫೌಂಟನ್ ಬಳಿ ಹಳೇ ಉತ್ಸವದಿಂದ ಹೊರಟು ಸಂಟ್ ಫಿಲೊಮಿನಾ ಕಾಲೇಜು ಮುಂದೆ ಹಾದು ಬೆಂಗಳೂರು-ನೀಲಗಿರಿ ರಸ್ತೆಯಲ್ಲಿ ಬಂದು ದಸರೆ ವಸ್ತುಪ್ರದರ್ಶನ ಮೂಲಕ ಹಾರ್ಡಿಂಜ್ ವೃತ್ತವನ್ನು ತಲುಪಿ, ಅರಮನೆ ಕೋಟೆ ಮುಂದೆ ಹಾದು ದೊಡ್ಡಕೆರೆ ಏರಿ ಮೇಲೆ ಮಧುವನದ ಹತ್ತಿರ ತೋಟವನ್ನು ೧೦ ಘಂಟೆಗೆ ತಲುಪಿತು. ಅಲ್ಲಿ ಶ್ರೀಮನ್ಮಹಾರಾಜರು ಗಂಧದ ಮರದಿಂದ ನಿರ್ಮಿಸಲಾಗಿದ್ದ ಚಿತೆಯಮೇಲೆ ಶಾಸ್ತ್ರೋಕ್ತವಾಗಿ ಅಗ್ನಿ ಸಂಸ್ಕಾರವನ್ನು ನೆರವೇರಿಸಿದರು.

ಮೆರವಣಿಗೆಯಲ್ಲಿ ಪೌರಸಭಾಧ್ಯಕ್ಷರು, ಶಾಸಕರು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು, ಅಧಿಕಾರಿಗಳು, ಅರಮನೆಯ ಉನ್ನತಾಧಿಕಾರಿಗಳು, ಅರಸು ಮನೆತನದವರು ಮತ್ತು ನಗರ ಪ್ರಮುಖರು ಭಾಗವಹಿಸಿದ್ದರು. ೮-೩೦ ಘಂಟೆಗೆ ಮೆರವಣಿಗೆಯು ಹೊರಟಕೂಡಲೇ ಅರಮನೆ ಬತೇರಿಯಿಂದ ಶೋಕ ಸೂಚನಾರ್ಥವಾಗಿ ನಿಮಿಷಕ್ಕೊಂದರಂತೆ ೬೫ ಗುಂಡುಗಳನ್ನು ಹಾರಿಸಲಾಯಿತು.

ಕಳೇಬರವನ್ನು ಬೆಂಗಳೂರಿನಿಂದ ತಂದೊಡನೆ ಮೈಸೂರಿನ ಬಳಿ ಶ್ರೀಮನ್ಮಹಾರಾಜರು ಪುಷ್ಪಹಾರವನ್ನು ಅರ್ಪಿಸಿದರು. ಅನಂತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ, ಪುರಸಭಾಧ್ಯಕ್ಷರೂ ಮತ್ತು ಅರಸು ಮನೆತನದವರೂ ಹಾರಗಳನ್ನು ಅರ್ಪಿಸಿದರು. ಮೆರವಣಿಗೆಯು ಹಾದುಹೋದ ದಾರಿಯುದ್ದಕ್ಕೂ ಸಹಸ್ರಾರು ಜನರು ನೆರೆದಿದ್ದು ತಮ್ಮ ಅಂತ್ಯ ಗೌರವವನ್ನು ಸಲ್ಲಿಸಿದರು. ಮೆರವಣಿಗೆಯಲ್ಲಿ ಪೊಲೀಸು

ದಿವಂಗತ ಲಕ್ಷ್ಮೀವಿಲಾಸ ಸನ್ನಿಧಾನ

ಶ್ರೀ ಪ್ರತಾಪಕುಮಾರಿ ದೇವಿಯವರು

ಆನೆಯೂ, ಅನಂತರ ಎರಡು ತುಕಡಿ ಅಶ್ವದಳವೂ, ಅವರ ಹಿಂದೆ ಶೋಕಸೂಚಕ ವಾದ್ಯವನ್ನು ಬಾರಿಸುವ ಬ್ಯಾಂಡಿನವರೂ ತೆರಳಿದರು. ಕಳೇಬರದೊಡನೆ ಕಾರಿನಲ್ಲಿ ದಿವಂಗತರ ಸಹೋದರರಾದ ರಾಣಾ ಲಕ್ಷ್ಮಣಸಿಂಗರು ಕುಳಿತಿದ್ದರು. ಅವರ ಹಿಂದೆ ಮೋಟಾರಿನಲ್ಲಿ ಶ್ರೀಮನ್ಮಹಾರಾಜರು ತೆರಳಿದರು. ಇನ್ನೊಂದು ಕಾರಿನಲ್ಲಿ ಭರತಪುರದ ಮಹಾರಾಜರು ಇದ್ದರು. ಅರಮನೆ ಮತ್ತು ಕೋಟೆಯ ಮೇಲೆ ಧ್ವಜವನ್ನು ಅರ್ಧ ಮಟ್ಟಕ್ಕೆ ಇಳಿಸಲಾಗಿತ್ತು.

ಮೆರವಣಿಗೆಯು ಮಧುವನವನ್ನು ತಲುಪಿದ ಕೂಡಲೇ ಇರಾನಿನ ಷಾರವರ ಮಿಲಿಟರಿ ಕಾರ್ಯದರ್ಶಿಯವರು ಪುಷ್ಪಗುಚ್ಛವನ್ನು ಸಮರ್ಪಿಸಿದರು. ಅನಂತರ ಸರ್ಕಾರದ ಪರವಾಗಿ ಜಿಲ್ಲಾಧಿಕಾರಿಗಳೂ, ಮಿಲಿಟರಿ ದಳದ ಪರವಾಗಿ ಕ್ಯಾಪ್ಟನ್ ಕೃಷ್ಣರವರೂ ಪುಷ್ಪಹಾರಗಳನ್ನು ಸಲ್ಲಿಸಿದರು.

ಚಿತೆಗೆ ಅಗ್ನಿ ಸ್ಪರ್ಶ ಮಾಡಿದಾಗ ಅರಮನೆ ವಾದ್ಯಗೋಷ್ಠಿಯವರು ಕಾಯೌ ಶ್ರೀಗೌರಿ ಗೀತೆಯನ್ನು ನುಡಿಸಿದರು.

ದಿವಂಗತ ಲಕ್ಷ್ಮೀವಿಲಾಸ ಸನ್ನಿಧಾನದವರು ಕಾಥೇವಾಡ ಸಂಸ್ಥಾನದ ವಾನಾ ರಾಜಮನೆತನಕ್ಕೆ ಸೇರಿದ ಝಾಲಾದ ರಾಣಾ ಸಾಹೇಬ್ ಶ್ರೀ ಬನಯಸಿಂಹರವರ ಪುತ್ರಿ. ಅವರು ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರನ್ನು ೧೯೦೦ನೇ ಇಸವಿ ಜೂನ್ ೬ನೇ ತಾರೀಖು ತಮ್ಮ ೧೨ನೇ ವಯಸ್ಸಿನಲ್ಲಿ ವರಿಸಿದರು. ದಿವಂಗತರು ದೈವಭಕ್ತರೂ, ಸದಾಚಾರಸಂಪನ್ನರೂ ಆಗಿದ್ದರು.

ದಿವಂಗತ ನಾಲ್ವಡಿ ಕೃಷ್ಣರಾಜ ಒಡೆಯರವರೂ ಸಹಾ ಇದೇರೀತಿ ಬೆಂಗಳೂರಿನಲ್ಲಿ ಸ್ವರ್ಗಸ್ಥರಾಗಿ ಅವರ ಕಳೇಬರವನ್ನು ಇಲ್ಲಿಗೆ ತಂದು ಸಂಸ್ಕಾರ ಮಾಡಲಾಗಿತ್ತು.

ದಿವಂಗತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲೆಂದು ಪ್ರಾರ್ಥಿಸಿ ರಾಜಮನೆತನದವರಿಗೆ ನಮ್ಮ ಹೃತ್ಪೂರ್ವಕವಾದ ಅನುಕಂಪವನ್ನು ಸೂಚಿಸುತ್ತೇವೆ.

ಇರಾನಿನ ಷಹಾರವರಿಂದ ಭಾರಿ ಸಲಗನ ಶಿಕಾರಿ

ಮೈಸೂರು ೩

ಇರಾನಿನ ಷಾ ರವರು ರಾಜ ಸುರಯ್ಯ, ಮೈಸೂರಿನ ರಾಜಪ್ರಮುಖರು ಮತ್ತು ಅರಣ್ಯಾಧಿಕಾರಿ ಎಂ. ಎ. ಮುತ್ತಣ್ಣನವರೊಡಗೂಡಿ ನೆನ್ನೆ ಶಿಕಾರಿಗಾಗಿ ತೆರಳಿ ಬಿಳಿಗಿರಿರಂಗನ ಬೆಟ್ಟದ ಕ್ಯಾಸಿಂಡೆ ಬಳಿ ಗುಡಿಯ ಬಳಿ ಇದೇ ಪ್ರಪ್ರಥಮವಾಗಿ ೯॥ ಅಡಿ ಎತ್ತರದ ಒಂದು ಸಲಗವನ್ನು ಶಿಕಾರಿ ಮಾಡಿದರು. ಅವಕ್ಕೆ ಒಂದು ಕೊಂಬು ಇತ್ತು. ರಾಣಿ ಸುರಯ್ಯರವರು ಅದನ್ನು ನೋಡಲು ನೋಡಿದರು. ಷಹಾರವರು ಒಂದು ಇಂದುಕೋಣವನ್ನು ಸಹ ಕೊಂದರು. ಅವರು ನೆನ್ನೆ ರಾತ್ರಿಯೇ ಮೈಸೂರಿಗೆ ಹಿಂದಿರುಗಿದರು.

ಪರ್ಷಿಯಾ ಮಕ್ಕಳಿಗೆ ಮೈಸೂರಿನ ಆನೆ ಮರಿ

ಪರ್ಷಿಯದ ಮಕ್ಕಳಿಗೆ ಪ್ರಧಾನಿ ನೆಹರೂರವರ ಪರವಾಗಿ ಮೈಸೂರು ರಾಜಪ್ರಮುಖರು ನೆನ್ನೆ "ಭಾರತಿ" ಎಂಬ ಹೆಸರಿನ ಮರಿಯಾನೆಯೊಂದನ್ನು ಇರಾನಿನ ಷಹಾರವರಿಗೆ ಮೃಗಾಲಯದಲ್ಲಿ ಒಪ್ಪಿಸಿದರು. ಆನೆ ಮರಿಯು ಷಹಾ ಮತ್ತು ರಾಣಿ ಸುರಯ್ಯರವರಿಗೆ ಸಲಾಂ ಮಾಡಿತು. ಮೃಗಾಲಯದಲ್ಲಿ ಇರಾನಿನ ರಾಜದಂಪತಿಗಳು ೧ ಗಂಟೆ ಕಾಲ ಇದ್ದು ನಂತರ ಟೆಕ್ನಿಕಲ್ ಇನ್ಸ್ಟಿಟ್ಯೂಟಿಗೆ ತೆರಳಿ ಅಲ್ಲಿ ಸುಮಾರು ೩,೦೦೦ ರೂ ಬೆಲೆ ವಸ್ತುಗಳನ್ನು ಕೊಂಡರು. ಬೃಂದಾವನಕ್ಕೆ ಹೋಗಿ ಅಲ್ಲಿನ ರಮಣೀಯ ದೃಶ್ಯವನ್ನು ನೋಡಿ ಆನಂದಪಟ್ಟರು.

ಕಾಲೇಜು ವಿದ್ಯಾರ್ಥಿಗಳ ಆಶಿಸ್ತಿನ ಖಂಡನೆ

ಪರೀಕ್ಷೆ ಸಂಬಂಧದ ಚಳುವಳಿ ಬಗ್ಗೆ ವಿಶ್ವವಿದ್ಯಾಲಯ ಕೌನ್ಸಿಲಿನ ಪ್ರಕಟಣೆ

ಸ್ವಂ ಸು ಸಂ] ಬೆಂಗಳೂರು ೩

ವಿಶ್ವವಿದ್ಯಾಲಯದ ಕೌನ್ಸಿಲಿನವರು ಪ್ರಕಟಣೆಯೊಂದನ್ನು ಹೊರಡಿಸಿ, ವಿದ್ಯಾರ್ಥಿಗಳ ಅಶಿಸ್ತನ್ನು ಖಂಡಿಸಿರುತ್ತಾರೆ. ಪರೀಕ್ಷೆಗಳನ್ನು ಮುಂದೆ ಹಾಕಿಸುವ ಸಂಬಂಧದಲ್ಲಿ ವಿದ್ಯಾರ್ಥಿಗಳು ಚಳುವಳಿ, ಮುಷ್ಕರ, ಕಲ್ಲು ಬೀರುವುದು ಮುಂತಾದ ಅನುಚಿತ ಕ್ರಮ ಕೈಗೊಳ್ಳುತ್ತಿರುವುದನ್ನು ಆಕ್ಷೇಪಿಸಲಾಗಿದೆ.

ಲೋಕಸಭಾಧ್ಯಕ್ಷರಾಗಿ ಅನಂತಶಯನಂ ಅಯ್ಯಂಗಾರ್

ಲೋಕಸಭಾಧ್ಯಕ್ಷ ಶ್ರೀ ಜಿ. ವಿ. ಮಾವಲಂಕರರು ನಿಧನ ಹೊಂದಿದ ಪ್ರಯುಕ್ತ ತೆರವಾದ ಸ್ಥಾನಕ್ಕೆ ಇದೇ ೮ನೇ ತಾರೀಖು ಚುನಾವಣೆಯನ್ನು ನಡೆಸುವಂತೆ ಪ್ರಧಾನಿ ನೆಹರೂರವರು ರಾಷ್ಟ್ರಾಧ್ಯಕ್ಷರಿಗೆ ಸಲಹೆ ಮಾಡಿರುವರು. ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ಶೀಘ್ರ ಸೇರಿ ಚುನಾವಣೆಗೆ ಪಕ್ಷದ ಪರವಾಗಿ ಸಭೆಯ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರವರನ್ನು ಉಮೇದುವಾರರನ್ನಾಗಿ ಆರಿಸಲು ನಿರ್ಧರಿಸಲಾಯಿತು. ಶ್ರೀ ಅಯ್ಯಂಗಾರರೇ ಅವಿರೋಧರಾಗಿ ಆರಿಸಲ್ಪಡುವರು.

○ ಆಫ್ರಿಕದಲ್ಲಿ ಫ್ರೆಂಚರ ವಸಾಹತಾಗಿರುವ ಮೊರಾಕೊವಿಗೆ ಪೂರ್ಣ ಸ್ವಾತಂತ್ರ್ಯ ನೀಡಬೇಕೆಂಬ ಫ್ರಾನ್ಸ್ ಮತ್ತು ಮೊರಾಕ್ಕೊ ಸರ್ಕಾರಗಳ ಜಂಟಿ ಘೋಷಣೆಯೊಂದನ್ನು ಹೊರಡಿಸಲಾಗಿದೆ.

ದವೇಜರ್ ಮಹಾರಾಣಿಯವರ ಅಂತ್ಯ ಸಂಸ್ಕಾರಕ್ಕೆ ಮುಂಚೆ ಈ ಮಧ್ಯಾಹ್ನ ಮಧುವನದಲ್ಲಿ ತೆಗೆದ ಚಿತ್ರ

[ಪಡಿಯಚ್ಚು—ಶ್ರೀ ಶಾರದಾ ಪ್ರೆಸ್, ಮೈಸೂರು.

ಕರ್ನಾಟಕ, ಕೇರಳಗಳ ಐಕ್ಯದ ಬಗ್ಗೆ ಪ್ರಮುಖರ ಮಾತುಕತೆ

ಬೆಂಗಳೂರು ೩

ಕರ್ನಾಟಕ ಮತ್ತು ಕೇರಳಗಳ ಐಕ್ಯದ ವಿಷಯವನ್ನು ಕುರಿತು ಸಂಭಾಷಣೆ ನಡೆಸಲು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಮುಖಂಡರ ಸಭೆಯೊಂದನ್ನು ಸಧ್ಯದಲ್ಲೇ ಕರೆಯಲಿರುವರು ಅದರಲ್ಲಿ ಕೇಂದ್ರ ಮಂತ್ರಿ ಕೆ ಸಿ ರೆಡ್ಡಿ ಬೊಂಬಾಯಿ ಮಂತ್ರಿ ಎಂ ಪಿ ಪಾಟೀಲ್ ಪಾರ್ಲಿಮೆಂಟಿನ ಸದಸ್ಯ ಯು ಶ್ರೀನಿವಾಸಮಲ್ಯ, ಕೊಡಗಿನ ಮುಖ್ಯ ಮಂತ್ರಿ ಸಿ ಎಂ ಪೂಣಚ್ಚ ಮುಂತಾದವರು ಭಾಗವಹಿಸುವರು

ಟೆಹರಾನಿನಲ್ಲಿ ಗೂಢಚರ್ಯೆಗಾಗಿ ರಷ್ಯದವನ ಬಂಧನ

ರಷ್ಯದ ರಾಯಭಾರಿ ಕಛೇರಿಯಲ್ಲಿ ಡೆಪ್ಯುಟಿ ಮಿಲಿಟರಿ ಅಟಾಚಿಯಾಗಿರುವ ಕುಜ್ನೆಟ್ಸೋವರನ್ನು ಇರಾನಿನ ಭದ್ರತಾ ದಳದವರು ಬಂಧಿಸಿ, ರಷ್ಯಾ ರಾಯಭಾರಿ ಕಛೇರಿಯ ಪ್ರತಿಭಟನೆಯ ನಂತರ ಬಿಡುಗಡೆ ಮಾಡಿದರು ಅವರು ಗೂಢಚರ್ಯೆ ನಡೆಸುತ್ತಿದ್ದರೆಂದು ಆಪಾದಿಸಲಾಗಿದೆ ಅವರನ್ನು ಇರಾನಿನಿಂದ ಹೊರಕ್ಕೆ ಕಳುಹಲಾಗುವುದು

ಬುದ್ಧದೇವನ ಜನ್ಮೋತ್ಸವಕ್ಕಾಗಿ ೧೫ ಲಕ್ಷ ರೂ

ಬುದ್ಧ ದೇವನ ೨೫ ಸಾವಿರ ವರ್ಷದ ಜಯಂತಿ ಆಚರಣೆಗಾಗಿ ಈ ವರ್ಷ ಭಾರತ ಸರ್ಕಾರದವರು ೧೫ ಲಕ್ಷ ರೂ ಗಳನ್ನು ತೆಗೆದಿಟ್ಟಿರುವರು ಇದೇ ವೈಶಾಖ ಶುದ್ಧ ಪೂರ್ಣಿಮೆಯಂದು ಅವರ ಜನ್ಮ ದಿನ ಅದೇ ತಿಥಿಯಲ್ಲಿ ಅವರು ಜ್ಞಾನ ಸಿದ್ಧಿಯನ್ನು ಪಡೆದರು ಮತ್ತು ನಿರ್ಯಾಣವನ್ನು ಸಹಾ ಹೊಂದಿದರು

ಗಡ್ಡ ಬೆಳೆಸಲು ಸಿಂಹಳದ ಕವಿಗಳ ಪ್ರತಿಜ್ಞೆ

ಸಿಂಹಳ ದ್ವೀಪದಲ್ಲಿ ಆ ದೇಶದ ಭಾಷೆಯನ್ನು ಮಾತ್ರ ಏಕೈಕ ಅಧಿಕಾರಿ ಭಾಷೆಯಾಗಿ ಮಾಡುವಂತೆ ಒತ್ತಾಯಪಡಿಸಲು ದಕ್ಷಿಣ ಸಿಂಹಳದ ಸ್ಥಳೀಯ ಕವಿಗಳು ಗಡ್ಡ ಬೆಳೆಸುವುದಾಗಿ ಪ್ರತಿಜ್ಞೆ ತೊಟ್ಟಿರುತ್ತಾರೆ

O ದಕ್ಷಿಣ ಕೊರಿಯದ ಪೂರ್ವ ತೀರದ ಪರ್ವತ ಪ್ರದೇಶದಲ್ಲಿ ಮಂಜುಗಡ್ಡೆಗಳು ಉರುಳಿ ೭೮ ಜನ ಕೊರಿಯಾ ಸಿಪಾಯಿಗಳು ಮೃತಪಟ್ಟು ೫೪ ಮಂದಿಗೆ ಗಾಯವಾಯಿತೆಂದು ವರದಿಯಾಗಿದೆ ೬೫ ಜನರು ಪತ್ತೆಯಿಲ್ಲ

SRI RAGHAVENDRA TUTORIAL INSTITUTE

8th Cross 4403 St Mary Road, N R Mohalla

32 East Cross, Ashoka Road, Lashkar Mohalla

Near Carlton Hotel Mysore

ಇದುವರೆಗೂ S S L C ಪಿಕ್ಷಾ ತರಗತಿಗೆ ಮಾತ್ರ ಹೆಚ್ಚು ಫೀಜನ್ನು ಹಾಕಿ ಶ್ರೀಮಂತರ ಮಕ್ಕಳಿಗೆ ಅವಕಾಶವಿತ್ತು ಬಡ ವಿದ್ಯಾರ್ಥಿಗಳ ಪ್ರಾರ್ಥನೆಯಂತೆ ಈ ೬.೦ ಮಾಹೆಯಾನಾ ೫ ರೂ ಫೀಜನ್ನು ನಿಗದಿ ಮಾಡಿರುತ್ತೆ



Please Visit —

A ISMAIL & CO,

Opticians T L Upadhyaya Building Sayaji Rao Road Mysore

Edited, Printed and Published by A K Nagarajan at Sadhvi Press D Subbiah Road Mysore

ಆನೆಯಿಂದ ಮಾವುತನ ಕೊಲೆ

ತಿರುಚೂರು ಬಳಿ ದೇಶಮಂಗಲಂ ಮಾನ ಎಂಬಲ್ಲಿ ಕಳೆದ ಶುಕ್ರವಾರ ರಾತ್ರಿ ಆನೆಯೊಂದು ಮಾವುತನನ್ನು ಕೊಂದುಹಾಕಿತು ಹತ್ತಿರದ ದೇವಾಲಯದಲ್ಲಿ ನಡೆದ ಉತ್ಸವಕ್ಕೆ ಅದನ್ನು ಕರೆದುಕೊಂಡುಹೋಗಲಾಗಿತ್ತು ಮೊದಲು ಅದು ಮಾವುತನ ಮೇಲೆ ಧಾಳಿ ಮಾಡಿ ಅವನನ್ನು ತೊರಕಲು ಗುಂಡಿಗೆ ಕೆಡವಿತು ನಂತರ ಅವನನ್ನು ಸೊಂಡಲಿನಿಂದ ಎತ್ತಿ ಮರವೊಂದಕ್ಕೆ ಅಪ್ಪಳಿಸಿತು ಹಳ್ಳಿಗರು ಅದನ್ನು ಒಂದು ಕಾಂಪೌಂಡಿನೊಳಕ್ಕೆ ಓಡಿಸಿದಾಗ ಅಲ್ಲಿದ್ದ ಸಾಮಾನುಗಳನ್ನು ನಾಶಪಡಿಸಿತು ನಂತರ ಪೋಲೀಸರು ಬಂದು ತಹಬಂದಿಗೆ ತಂದರು ಕಳೆದ ವರ್ಷ ಇದೇ ಆನೆಯು ಮತ್ತೊಬ್ಬ ಮಾವುತನನ್ನು ಕೊಂದಿತ್ತು

ಮೈಸೂರಿಗೆ ಅಮೆರಿಕದ ಪಾರಿಭಾಷಿಕ ಸಹಾಯ

ಭಾರತ–ಅಮೆರಿಕಗಳ ನಡುವೆ ಪಾರಿಭಾಷಿಕ ಸಹಕಾರ ಕಾರ್ಯಕ್ರಮದ ಅಂಗವಾಗಿ ಅಮೆರಿಕ ಮತ್ತು ಭಾರತ ಸರ್ಕಾರಗಳಿಗೆ ೫ ಹೊಸ ಒಪ್ಪಂದಗಳಾಗಿವೆ ಅವುಗಳ ಪ್ರಕಾರ ಇದೇ ಜೂನ್ ತಿಂಗಳಿಗೆ ಮುಗಿಯುವ ಅವಧಿಯಲ್ಲಿ ೩ ೬ ಕೋಟಿ ೮ ಲಕ್ಷದ ವೆಚ್ಚದಲ್ಲಿ ಟ್ಯೂಬ್ ಬಾವಿ, ರೈಲ್ವೆ ಪುನರ್ವ್ಯವಸ್ಥೆ, ಮಲೇರಿಯಾ ಹತೋಟಿ ಮತ್ತು ಗ್ರಾಮಾಂತರ ವಿದ್ಯುಚ್ಛಕ್ತಿ ಸರಬರಾಜಿಗೆ ಅಮೆರಿಕವು ಸಹಾಯ ಮಾಡಲಿದೆ ಗ್ರಾಮಾಂತರ ವಿದ್ಯುಚ್ಛಕ್ತಿಯ ನೆರವಿನ ಕಾರ್ಯಕ್ರಮವು ಮೈಸೂರು, ಮದ್ರಾಸು, ಆಂಧ್ರ ತಿರುವಾಂಕೂರು ಮಧ್ಯ ಪ್ರದೇಶ, ಬಿಹಾರ್ ಮತ್ತು ಪಂಜಾಬುಗಳಲ್ಲಿ ನಡೆಯುವುದು

ಆಗ್ನೇಯ ಏಷ್ಯಾ ಕೂಟದಲ್ಲಿ ಕಾಶ್ಮೀರ ಪ್ರಶ್ನೆ ತರಲು ಯತ್ನ

ಕರಾಚಿಯಲ್ಲಿ ಬರುವ ವಾರ ಸೇರಲಿರುವ ಆಗ್ನೇಯ ಏಷ್ಯಾ ರಕ್ಷಣಾ ಕೂಟದ ಸಂಸ್ಥೆಯಲ್ಲಿ ಕಾಶ್ಮೀರ ವಿವಾದವನ್ನು ತಾನು ತರುವುದಾಗಿ ಪಾಕಿಸ್ತಾನವು ಕೂಟಕ್ಕೆ ಸೇರಿರುವ ಸದಸ್ಯ ರಾಷ್ಟ್ರಗಳಿಗೆ ಸೂಚನೆಯಿತ್ತಿದೆಯೆಂದು ವರದಿಯಾಗಿದೆ ಸಮ್ಮೇಳನವು ಸೇರುವ ಸಮಯದಲ್ಲಿ ಭಾರಿ ಸಾಮೂಹಿಕ ಪ್ರದರ್ಶನವನ್ನು ನಡೆಸಲು ಪ್ರಯತ್ನ ನಡೆಯುತ್ತಿದೆ ಸಮ್ಮೇಳನದ ಕಾರ್ಯಕ್ರಮ ಪಟ್ಟಿಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಸೇರಿಸಿಲ್ಲವಾದರೂ, ಈ ವಿಷಯವನ್ನು ಅಲ್ಲಿ ಎತ್ತಲು ಅಭ್ಯಂತರವಿಲ್ಲವೆಂದು ಹೇಳಲಾಗಿದೆ

SREE GANESHA TALKIES

GALA RELEASE ON 3 3 56

Daily 3 Shows

This Picture Shall Be screened in Wide Angle

೧೨,೦೦೦ ರೈಲ್ವೆ ನೌಕರರಿಂದ ಸಂಬಳದ ಸತ್ಯಾಗ್ರಹ

ರೈಲ್ವೆ ನೌಕರರ ಹಲವು ಕುಂದುಕೊರತೆಗಳನ್ನು ಹುಡುಕಿಸಲಿಲ್ಲವೆಂದು ಮೊನ್ನೆ ದೆಹಲಿಯಲ್ಲಿ ೬,೦೦೦ ನೌಕರರು ಸಂಬಳವನ್ನು ೫ನೇ ತಾರೀಖಿನವರೆಗೂ ಪಡೆಯಕೂಡದೆಂಬ ಸತ್ಯಾಗ್ರಹವನ್ನು ಆರಂಭಿಸಿದರು. ಅಲಹಾಬಾದಿನಲ್ಲಿ ೬೦೦ ಮಂದಿ ಇದೇ ರೀತಿ ಸತ್ಯಾಗ್ರಹವನ್ನಾಚರಿಸಿದರು ಪಶ್ಚಿಮ ರೈಲ್ವೆಯ ೬,೦೦೦ ನೌಕರರೂ ಅದೇ ರೀತಿ ಮಾಡಿದರು ಮದ್ರಾಸಿನಲ್ಲಿ ಒಂದು ವಿಭಾಗದವರು ಮಾತ್ರ ಸಂಬಳವನ್ನು ಸ್ವೀಕರಿಸಲಿಲ್ಲ

ಕೇರಳ ಶಾಸನಸಭೆಯಲ್ಲಿ ಮಂತ್ರಿಮಂಡಲಕ್ಕೆ ಬೆಂಬಲ

ತಿರುವಾಂಕೂರು–ಕೊಚ್ಚಿ ಶಾಸನ ಸಭೆಯಲ್ಲಿ ಮೊನ್ನೆ ಕಾಂಗ್ರೆಸ್ ಮಂತ್ರಿಮಂಡಲಕ್ಕೆ ಜಯಲಭಿಸಿ ಸರ್ಕಾರವು ಬಿಕ್ಕಟ್ಟಿನಿಂದ ಪಾರಾಯಿತು ಅಲ್ಲಿನ ರಾಜಪ್ರಮುಖರು ಸಭೆಯನ್ನುದ್ದೇಶಿಸಿ ಮಾಡಿದ ಭಾಷಣಕ್ಕೆ ಅಭಿನಂದನೆ ಸೂಚಿಸುವ ನಿರ್ಣಯಕ್ಕೆ ಕಮ್ಯೂನಿಸ್ಟ್ ಪಕ್ಷದವರು ತಿದ್ದುಪಡಿ ತಂದು ಕರ್ನಾಟಕವನ್ನು ಕೇರಳದಲ್ಲಿ ಐಕ್ಯಗೊಳಿಸುವ ಬಗ್ಗೆ ಸರ್ಕಾರದ ನಿಲುವನ್ನು ನಿರ್ದಿಷ್ಟಗೊಳಿಸದಿರುವುದಕ್ಕಾಗಿ ವಿಷಾದವನ್ನು ಸೂಚಿಸಿದ್ದರು ಅದನ್ನು ಓಟಿಗೆ ಹಾಕಲಾಗಿ ೫೭–೫೪ ಓಟುಗಳಿಂದ ಬಿದ್ದುಹೋಯಿತು ಕಾಂಗ್ರೆಸ್ ಪಕ್ಷದ ೬ ಜನ ಸದಸ್ಯರು ಸಭೆಗೆ ಬಂದಿರಲಿಲ್ಲ ೪ ಜನ ಕಮ್ಯೂನಿಸ್ಟರೂ, ಒಬ್ಬ ಪ್ರಜಾಸಮಾಜವಾದಿ ಸದಸ್ಯರೂ ಹಾಜರಿರಲಿಲ್ಲ ಮೂಲ ನಿರ್ಣಯವು ಅಂಗೀಕೃತವಾಯಿತು

ಪ್ರತಿಭಾ ಸಂಚಿಕೆಯ ಉದ್ಘಾಟನೆ

ಮಹಾರಾಜಾ ಕಾಲೇಜಿನ ಜೂನಿಯರ್ ಬಿ. ಎ ಯ ಐಚ್ಛಿಕ ಕನ್ನಡ ವಿದ್ಯಾರ್ಥಿಗಳು ಹೊರಡಿಸಿರುವ ಕೈ ಬರಹದ "ಪ್ರತಿಭೆ" ಯ ಸಂಚಿಕೆಯನ್ನು ಯುವರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಜಿ ಎಸ್ ಶಿವರುದ್ರಪ್ಪನವರು ಕಳೆದ ೨೫ ಮವಾರ ನೆರವೇರಿಸಿದರು ಉಪಪ್ರಾಧ್ಯಾಪಕ ಶ್ರೀ ಕೆ ವಿ ರಾಘವಾಚಾರ್ಯರವರು ಅಧ್ಯಕ್ಷತೆ ವಹಿಸಿದ್ದರು ಸಂಪಾದಕರಲ್ಲೊಬ್ಬರಾದ ಶ್ರೀ ಚನ್ನಪ್ಪನವರು ಸ್ವಾಗತ ಬಯಸಿದರು ಶ್ರೀಮತಿ ಆರ್ ನಾಗಮಣಿಯವರು ಸಂದೇಶಗಳನ್ನು ಓದಿದರು ಬಹುಮಾನ ವಿನಿಯೋಗ, ಸಂಗೀತವಾದನಂತರ, ಮತ್ತೊಬ್ಬ ಸಂಪಾದಕರಾದ ಶ್ರೀ ನ ಸೊ ಚನ್ನಕೇಶವಯ್ಯನವರು ವಂದನಾರ್ಪಣೆ ಮಾಡಿದರು

ಶ್ರೀ ಪ್ರಸನ್ನ ಸೀತಾರಾಮ ಮಂದಿರದ ಆಶ್ರಯದಲ್ಲಿ

ಅಮೋಘವಾದ ಭರತ ನಾಟ್ಯ

4–3–56 ಭಾನುವಾರ ಸಂಜೆ 6 ಕ್ಕೆ

ಮೈಸೂರು ಟೌನ್‌ಹಾಲಿನಲ್ಲಿ

(ಸುಪ್ರಸಿದ್ಧ ಸಿನಿಮಾ ನಟಿ)

ಶ್ರೀಮತಿ

ಪೊಲ್ಲಾಚಿ ಕಮಲ

ರವರಿಂದ

ಭರತ ನಾಟ್ಯ

ಮುಂಬರಲ್ಲಿಡವರಿಗೆ ಟಿಕೆಟ್ ದರ –

ರೂ 10, 5, 3, 2 ಮತ್ತು 1

ಪ್ರಪಂಚದಲ್ಲೆಲ್ಲಾ ಅತ್ಯಂತ ಹೆಚ್ಚು ಹಾಲು ಕೊಡುವ ಹಸು

ಇಂಗ್ಲೆಂಡಿನ ಲೀಡ್ ಎಂಬಲ್ಲಿ ಒಂದು ಹಸು ೩೬೫ ದಿನಗಳಲ್ಲಿ ೪,೦೩೯ ಗ್ಯಾಲನ್ ಹಾಲು ಕೊಟ್ಟಿರುವುದೆಂದೂ, ಇದು ವಿಶ್ವದ ರಿಕಾರ್ಡೆಂದೂ ಹೇಳಲಾಗಿದೆ ಅದಕ್ಕೆ ೧೧ ವರ್ಷ, ಅದು ದಿನಕ್ಕೆ ಮೂರು ಬಾರಿ ಹಾಲು ಕರೆಯುವುದು.

ರಸ್ತೆಯಲ್ಲಿ ಹೊಡೆದಾಡುತ್ತಿದ್ದುದಕ್ಕಾಗಿ ದಂಡ

ನಗರದ ತ್ಯಾಗರಾಜಾ ರಸ್ತೆಯಲ್ಲಿ ಹೊಡೆದಾಡಿದುದಕ್ಕಾಗಿ ಶಂಕರಲಾಲ್, ಕೆಂಪ, ಜವರ ಎಂಬುವರ ಮೇಲೆ ಕೃಷ್ಣರಾಜಾ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರದ ದ್ವಿತೀಯ ನ್ಯಾಯಾಧೀಶರು ನೆನ್ನೆ ಆಪಾದಿತರಿಗೆ ತಲಾ ... ರೂ ದಂಡ ವಿಧಿಸಿದರು

ಮೈಸೂರು ಪೇಟೆ ಧಾರಣೆ

	ರೂ	ಆಣೆ		ರೂ	ಆ
ಕಡಲೆಕಾಯಿ	೧೬	೦ ೦		[illegible]	[illegible]
ಹರಳು	[illegible]	[illegible]			
ಹುಚ್ಚೆಳ್ಳು	[illegible]	[illegible]		[illegible]	[illegible]
ಹೊಂಗೆಬೀಜ	[illegible]	[illegible]		[illegible]	[illegible]
ಹುರುಳಿ	[illegible]	[illegible]		[illegible]	[illegible]
ಕಡಲೆ	[illegible]	[illegible]		[illegible]	[illegible]
ಹೆಸರು	[illegible]	೦ ೦			
ಹಲಸಂದೆ	[illegible]	೦ ೦		[illegible]	[illegible]
ಉದ್ದು	[illegible]	[illegible]			
ಧನಿಯ	[illegible]	[illegible]		[illegible]	[illegible]
ತೊಗರಿ	[illegible]	[illegible]		[illegible]	[illegible]
ಹುಣಸೆಬೀಜ	[illegible]	[illegible]			
ಸೀಗೆಕಾಯಿ	[illegible]	[illegible]		[illegible]	[illegible]
ಹುಣಸೇಹಣ್ಣು	[illegible]	[illegible]		[illegible]	[illegible]
ಮೆಣಸಿನಕಾಯಿ	[illegible]	[illegible]		[illegible]	[illegible]
ತೆಂಗಿನಕಾಯಿ ೧೦೦೦	[illegible]	೦ ೦		[illegible]	[illegible]

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ

ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ, ಮೈಸೂರು (Estd 1911)

ಮೈಸೂರು ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ

ಮೆಂಬರುಗಳಲ್ಲಿ ವಿನಂತಿ

4-3-56ನೇ ತಾರೀಖು ನಡೆಯುವ ಡೈರೆಕ್ಟರುಗಳ ಚುನಾವಣೆಯಲ್ಲಿ

4 7

ಬಿ. ಆರ್. ಲಕ್ಷ್ಮಣಶೆಟ್ಟಿ

ಏಜೆಂಟ್, ಮೈಸೂರು ಗೌರ್ನಮೆಂಟ್

ಆಫೀಸ್ ...,

ಪ್ರೆಸಿಡೆಂಟ್, ಆಲ್ಕೈ ವರ್ಕರ್ಸ್

ಇವರಿಗೆ ತಮ್ಮ ಅಮೂಲ್ಯವಾದ

ಓಟನ್ನು ಕೊಡಬೇಕಾಗಿ ಪ್ರಾರ್ಥನೆ

ಮನೆ ಕ್ರಯಕ್ಕಿದೆ

1) ಮೈಸೂರು ಹೊರಡಿ ರಸ್ತೆ. ... ಗಳ ಸಮೀಪ ಇರುವ ಭಾರಿ ... ಮನೆ.

2) 132. ಹಳ್ಳದಕೇರಿ.

3) 2933/1 ಸರಸ್ವತಿಪುರ. ... ಕಟ್ಟಡ.

4) 2787. ಒಂಟಿಕೊಪ್ಪಲು.

ವಿವರಗಳಿಗೆ —

ಜಯ ಅಂಡ್ ಕಂಪನಿ

... ಪ್ರೆಸ್ ... ಬಳಿ ... ರಸ್ತೆ, ಮೈಸೂರು. ...

ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ,

ಮೆಂಬರುಗಳಲ್ಲಿ ವಿಜ್ಞಾಪನೆಗಳು

ಡೈರೆಕ್ಟರುಗಳ ಚುನಾವಣೆ

65. ಬಿ ಎಸ್. ಸುಬ್ಬರಾವ್

ರವರಿಗೂ ಓಟು ಕೊಟ್ಟು ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಬೇಕಾಗಿ ಪ್ರಾರ್ಥನೆ

ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ

4–3–56ನೇ ಭಾನುವಾರ ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ

ಮಧ್ಯಾಹ್ನ 3 ರಿಂದ ನಡೆಯುವ ಡೈರೆಕ್ಟರುಗಳ ಚುನಾವಣೆಯಲ್ಲಿ

ನಂ. 15 ಎನ್. ಗೋಪಾಲರಾವ್

ಅಧ್ಯಕ್ಷರು — ಪುರಸಭಾ ಮಾರ್ಕೆಟ್ಟುಗಳ ವರ್ತಕರ ಸಂಘ, ಮೈಸೂರು

ಮಾಲೀಕರು — ಸೌಭಾಗ್ಯ ಸ್ಟೋರ್ಸ್ ದೇವರಾಜಾ ಮಾರ್ಕೆಟ್, ಮೈಸೂರು

ಇವರಿಗೆ ನಿಮ್ಮ ಅಮೂಲ್ಯವಾದ ಓಟನ್ನು ಕೊಡಬೇಕಾಗಿ ವಿನಂತಿ

ಚಂದಾ ದರ

ವಿಶಾಂಟರ್, ...ಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಲಗ್ನದ ಜವಳಿ
ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರ್ಣಿ, ಬೆಂಗಳೂರು
ರೇಷ್ಮೆ ಮತ್ತು ಸಾಧಾರಣ ಸೀರೆಗಳು
ಬಂದಿವೆ ಅಂದ್ರೆ ಭೇಟಿ ಕೊಡಿ
M.V. ಭೋಜಯ್ಯ
ಅಂಡ್ ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು · ಫೋನ್ 446

ಸಂಪುಟ : ೧೪] SADHVI : SUNDAY 4-3-1956 ಮೈಸೂರು ಭಾನುವಾರ : ೪-೩-೧೯೫೬ [ಸಂಚಿಕೆ : ೧೪೪

ಅಸ್ಸಾಂ ಗಡಿ ಬಳಿ ಪುನಃ ಪಾಕಿಸ್ತಾನದವರಿಂದ ಗುಂಡು

ಕಾರ್ಖಾನೆಗಳ ವಿದ್ಯುಚ್ಛಕ್ತಿಗೆ ಹೆಚ್ಚು ದರ

ಇಲಾಖಾಧಿಕಾರಿಗಳ ಸೂಚನೆ

ಬೆಂಗಳೂರು ೪

ಬರುವ ತಿಂಗಳು ೧ರಿಂದ ಸಂಸ್ಥಾನದಲ್ಲಿ ಗೃಹಗಳಲ್ಲಿ ಎಳೆಯುವ ವಿದ್ಯುಚ್ಛಕ್ತಿಯನ್ನು ಬಿಟ್ಟು ಮಿಕ್ಕ ಬಳಕೆಗಳಿಗೆ ಹೆಚ್ಚು ದರವನ್ನು ಕೊಡಬೇಕೆಂದು ವಿದ್ಯುಚ್ಛಕ್ತಿ ಇಲಾಖಾಧಿಕಾರಿಗಳಾದ ಶ್ರೀ ಜಾರ್ಜ್ ಚಾಂಡಿಯವರು ತಿಳಿಸಿರುತ್ತಾರೆ. ಫ್ಯಾಕ್ಟರಿಗಳು ಮತ್ತು ಇತರ ಸಂಸ್ಥೆಗಳು ಹೆಚ್ಚು ವಿದ್ಯುಚ್ಛಕ್ತಿ ಸರಬರಾಜನ್ನು ಕೇಳಿ, ಕಡಿಮೆ ಪ್ರಮಾಣವನ್ನು ಬಳಸುತ್ತಿರುವ ನಿದರ್ಶನಗಳಿವೆ ಎಂದೂ, ಇದರಿಂದ ಇಲಾಖೆಗೆ ನಷ್ಟವಾಗುತ್ತಿದೆಯೆಂದೂ ಅವರು ಹೇಳಿ, ಅಂತಹವರು ಒದಗಿಸಲಾಗುವ ವಿದ್ಯುಚ್ಛಕ್ತಿ ಪ್ರಮಾಣದಲ್ಲಿ ...ಕಡ ...ರಷ್ಟನ್ನಾದರೂ ಉಪಯೋಗಿಸುವ ಬಗ್ಗೆ ಸಂಸ್ಥೆಗಳು ಗ್ಯಾರಂಟಿ ಕೊಡಬೇಕೆಂದು ತಿಳಿಸಿರುವರು.

ನಾಳೆ ದಕ್ಷಿಣ ಪ್ರದೇಶದ ಬಗ್ಗೆ ಕನ್ನಡ ಪ್ರದೇಶ ಪ್ರಮುಖರ ಸಭೆ

ದಕ್ಷಿಣ ಪ್ರದೇಶದ ರಚನೆ ವಿಷಯವನ್ನು ಕುರಿತು ಕನ್ನಡ ಪ್ರದೇಶಗಳ ಪ್ರಮುಖರ ಖಾಸಗಿ ಸಭೆಯು ನಾಳೆ ಬೆಂಗಳೂರಿನಲ್ಲಿ ಸೇರಲಿದೆ. ಅದರಲ್ಲಿ ಕೇಂದ್ರ ಮಂತ್ರಿಗಳಾದ ಡಿ. ಪಿ. ಕರ್ಮಾರ್ಕರ್, ಬಿ. ಎನ್. ದಾತಾರ್, ಚೆನ್ನಬಸಪ್ಪ, ಅಂಬಲಿ ಮುಂತಾದವರು ಭಾಗವಹಿಸುವರು.

ಅಸ್ಸಾಂ ಗಡಿ ಬಳಿ ಪಾಕಿಸ್ತಾನದವರಿಂದ ಮತ್ತೆ ಗುಂಡಿನೇಟು

ಅಸ್ಸಾಮಿನ ಕಾಛಾರ್ ಜಿಲ್ಲೆಯೊಳಗೆ ಪಾಕಿಸ್ತಾನದ ಗಡಿ ಪೋಲೀಸರು ಮತ್ತೆ ಗುಂಡನ್ನು ಹಾರಿಸಿದರೆಂದು ವರದಿಯಾಗಿದೆ. ಸಾವುನೋವುಗಳ ವರದಿ ಬಂದಿಲ್ಲ. ಇದಕ್ಕೆ ಹಿಂದೆ, ಪುನಃ ಅಂತಹ ಘಟನೆಗೆ ಅವಕಾಶ ಕೊಡುವುದಿಲ್ಲವೆಂದು ಪಾಕಿಸ್ತಾನಕ್ಕೆ ಸೇರಿರುವ ಸಿಲ್ಹೆಟ್ ಜಿಲ್ಲಾ ಕಲೆಕ್ಟರರು ಭರವಸೆಯಿತ್ತಿದ್ದರು.

ಕೇಂದ್ರ ಸರ್ಕಾರದ ಆಯವ್ಯಯದ ರಹಸ್ಯ ಬಯಲು?

ಕಳೆದ ವಾರ ಲೋಕಸಭೆಯಲ್ಲಿ ಕೇಂದ್ರ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ಮುಂದಿನ ವರ್ಷದ ಆಯವ್ಯಯ ಅಂದಾಜು ಪಟ್ಟಿಯನ್ನು ಮಂಡಿಸಿದುದಕ್ಕಿಂತ ಮುಂಚೆಯೇ ಅದರ ಸೂಚನೆಗಳು ಬಯಲಾಗಿದ್ದುವೆಂದು ಪತ್ರಿಕೆಗಳಲ್ಲಿ ಬಂದ ವರದಿಯನ್ನು ಕುರಿತು ಪ್ರಧಾನಿ ನೆಹರೂರವರು ತೀವ್ರ ಆತಂಕವನ್ನು ವ್ಯಕ್ತಪಡಿಸಿ ಈ ಬಗ್ಗೆ ತನಿಖೆ ನಡೆಸಿ ಪಾರ್ಲಿಮೆಂಟಿಗೆ ತಿಳಿಸಲಾಗುವುದೆಂದು ಸೂಚಿಸಿರುತ್ತಾರೆ. ಈ ವರ್ಷ ವಿಧಿಸಬೇಕೆಂದಿರುವ ತೆರಿಗೆಗಳ ಬಗ್ಗೆ ರಹಸ್ಯ ಬಯಲಾದರೂ ಅದರಿಂದ ಹೆಚ್ಚು ತೊಂದರೆಯಾಗುವುದಿಲ್ಲವೆಂದು ಅವರು ಹೇಳುವರು. ಆಯವ್ಯಯ ಪಟ್ಟಿಯ ಪ್ರತಿಗಳು ಬೊಂಬಾಯಿನಲ್ಲಿ ಬಹಿರಂಗವಾಗಿ ಮಾರಾಟವಾಗುತ್ತಿದ್ದುವೆಂದು ಹೇಳಲಾಗಿದೆ.

ದಿವಂಗತ ಅಂಬಳೆ ಸುಬ್ರಹ್ಮಣ್ಯ ಅಯ್ಯರ್

ಗೌರ್ನರುಗಳಿಗೆ ವಿಶೇಷಾಧಿಕಾರ

ದೆಹಲಿಯಲ್ಲಿ ಸೇರಿರುವ ಗೌರ್ನರ್ ಮತ್ತು ರಾಜಪ್ರಮುಖರುಗಳ ಸಮ್ಮೇಳನದಲ್ಲಿ ಪಂಡಿತ ಗೋವಿಂದವಲ್ಲಭಪಂತರು ನೆನ್ನೆ ಚರ್ಚೆಯನ್ನು ಆರಂಭಿಸುತ್ತಾ, ಸಂಸ್ಥಾನ ಪುನರ್ವಿಂಗಡಣಾ ಸಮಿತಿ ವರದಿ ಸಂಬಂಧವಾಗಿ ಭಾಷಾವಾರು ಅಲ್ಪಸಂಖ್ಯಾತರ ಹಿತರಕ್ಷಣೆಗಾಗಿ ಸರ್ಕಾರದವರು ಮಾಡಿರುವ ನಿರ್ಧಾರಗಳನ್ನು ಜಾರಿಗೆ ತರಲು ಗೌರ್ನರುಗಳಿಗೆ ಶಾಸನಬದ್ಧವಾದ ಹಲವು ವಿಶೇಷಾಧಿಕಾರಗಳನ್ನೀಯಲಾಗುವುದೆಂದು ತಿಳಿಸಿರುವುದಾಗಿ ವರದಿಯಾಗಿದೆ. ಸಭೆಯಲ್ಲಿ ಎಸ್. ಆರ್. ಸಿ. ವರದಿಗೆ ಸಂಬಂಧಪಟ್ಟಂತೆ ವಿಷಯಗಳು ಚರ್ಚೆಯಾಯಿತು. ಬೊಂಬಾಯಿ ಪಂಜಾಬು, ಮದ್ರಾಸು ಗೌರ್ನರುಗಳೂ ಮಧ್ಯಭಾರತ ಮತ್ತು ಪೆಪ್ಸು ರಾಜಪ್ರಮುಖರೂ, ತಮ್ಮ ಸಂಸ್ಥಾನದ ಪರಿಸ್ಥಿತಿಗಳ ಬಗ್ಗೆ ಸಭೆಗೆ ವಿವರಣೆಯಿತ್ತರು. ಪ್ರಧಾನಿ ನೆಹರೂರವರು ನೂತನವಾದ ಬಂಗಾಳ-ಬಿಹಾರ್ ಐಕ್ಯತೆ ಪ್ರಸ್ತಾಪವನ್ನು ... ವರೆಂದು ಆಶಿಸಿದರು. ನೆನ್ನೆ ಸಮ್ಮೇಳನವು ಮುಕ್ತಾಯವಾಯಿತು.

ಡಾ|| ಮೋದಿಯವರಿಂದ ನಾಳೆಯೂ ಶಸ್ತ್ರ ಚಿಕಿತ್ಸೆ

ಡಾ|| ಮೋದಿಯವರ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಶಸ್ತ್ರ ಚಿಕಿತ್ಸೆಯು ನಾಳೆಯೂ ನಡೆಯುವುದು.

ಬೆಂಗಳೂರಿಗೆ ಇರಾನಿನ ಷಹಾರವರ ಪ್ರಯಾಣ

ಮೈಸೂರು ೪

ಈ ದಿನ ಬೆಳಿಗ್ಗೆ ೧೧ ಗಂಟೆಗೆ ಇರಾನಿನ ಷಹಾರವರು ವಿಮಾನದಲ್ಲಿ ಇಲ್ಲಿಂದ ಬೆಂಗಳೂರಿಗೆ ಪರಿವಾರ ಸಮೇತರಾಗಿ ತೆರಳಿದರು.

ಶ್ರೀಮನ್ಮಹಾರಾಜರ ಪರವಾಗಿ ಭರತಪುರದ ಮಹಾರಾಜರು ಲಲಿತಮಹಲ್ ಭವನದಲ್ಲಿ ಅವರನ್ನು ಬೀಳ್ಕೊಟ್ಟು, ಪುಷ್ಪಹಾರವನ್ನರ್ಪಿಸಿದರು. ಮಹಾರಾಜರ ಉಪ ಕಾರ್ಯದರ್ಶಿ ಶ್ರೀ ಗುರುಮೂರ್ತಿ ಶಾಸ್ತ್ರಿಗಳೂ ಸಹಾ ಬಂದಿದ್ದರು. ವಿಮಾನ ನಿಲ್ದಾಣದಲ್ಲಿ ಚೀಫ್ ಸೆಕ್ರೆಟರಿಯವರು, ಜಿಲ್ಲಾಧಿಕಾರಿಗಳು, ಡಿ. ಐ. ಜಿ. ಯವರು, ಮಹಾರಾಜರ ಆಪ್ತ ಕಾರ್ಯದರ್ಶಿಗಳಾದ ಶ್ರೀ ನಫಿ ದಾರಾಪೂರವರು ಅವರನ್ನು ಬೀಳ್ಕೊಟ್ಟರು.

ಈ ದಿನ ಬೆಳಿಗ್ಗೆ ೮ ಗಂಟೆಗೆ ಇರಾನಿನ ರಾಣಿಯವರು ಮೊಟಾರಿನಲ್ಲಿ ಬೆಂಗಳೂರಿಗೆ ತೆರಳಿದರು. ಷಹಾರವರು ನಗರದ ಸುಪ್ರಸಿದ್ಧ ಶಿಕಾರಿಗಾರರಾದ ವ್ಯಾನ್ ಇಂಗನ್‌ರವರ ನಿಲಯಕ್ಕೆ ಭೇಟಿಯಿತ್ತು ಅಲ್ಲಿ ಅವರು ಸತ್ತ ಪ್ರಾಣಿಗಳು ಜೀವವಿರುವ ಹಾಗೆ ಕಾಣುವಂತೆ ಮಾಡುವ ಮತ್ತು ಚರ್ಮ ಹದ ಮಾಡುವ ವಿಧಾನಗಳನ್ನು ಪರಿಶೀಲಿಸಿ ಮೆಚ್ಚಿಗೆಯನ್ನು ಸೂಚಿಸಿದರು ಮತ್ತು ತಾವು ಇದುವರೆಗೆ ಶಿಕಾರಿ ಮಾಡಿರುವ ಒಂದು ಹುಲಿ, ಒಂದು ಆನೆ ಮತ್ತು ಎರಡು ಕಾಡುಕೋಣಗಳನ್ನು ಸ್ಟಫ್ ಮಾಡಿ ತಮಗೆ ಕಳುಹಿಸುವಂತೆ ಸೂಚಿಸಿದರು.

ಸರ್ಕಾರಿ ನೌಕರರುಗಳ ಕನಿಷ್ಠ ಮತ್ತು ಪರಮಾವಧಿ ಸಂಬಳ

ವೇತನದ ಸಮಿತಿಯ ಶಿಫಾರಸುಗಳು

ಬೆಂಗಳೂರು ೪

ಸರ್ಕಾರಿ ನೌಕರರ ಕನಿಷ್ಠ ಮತ್ತು ಪರಮಾವಧಿ ಸಂಬಳವನ್ನು ಗೊತ್ತುಪಡಿಸುವ ಬಗ್ಗೆ ನೇಮಿಸಲಾಗಿರುವ ಸಮಿತಿಯವರು ಕಟ್ಟಕಡೆಯ ಸರ್ಕಾರಿ ಕನಿಷ್ಠ ಸಂಬಳವು ೪೦ ರೂ ಗೆ ಕಡಿಮೆ ಇರಬಾರದೆಂದು ಸಲಹೆ ಮಾಡಿರುವುದಾಗಿ ಗೊತ್ತಾಗಿದೆ. ಪ್ರಸ್ತುತದಲ್ಲಿ ಪರಮಾವಧಿ ಸಂಬಳವು ೧,೪೦೦ ರೂ ಇರಬೇಕೆಂದೂ, ೧೦೦೦ ರೂ ಗೆ ಅದನ್ನು ಇಳಿಸಲು ಇನ್ನೂ ಕೆಲವು ಕಾಲ ಬೇಕೆಂದೂ, ಹೊಸ ಸ್ಕೇಲನ್ನು ಇದೇ ಜೂನ್ ೧ರಿಂದ ಮಂಜೂರು ಮಾಡಬಂತೆಯೂ ಶಿಫಾರಸು ಮಾಡಲಾಗಿದೆ.

ಎಲ್ಲ ಇಲಾಖೆಗಳಿಗೂ ಸಮನಾದ ಸ್ಕೇಲುಗಳಿರಬೇಕೆಂದೂ, ಮೈಸೂರು ಸಂಸ್ಥಾನವು ವಿಸ್ತೃತವಾದನಂತರ ಮೈಸೂರಿನ ಅಧಿಕಾರಿಗಳ ಸೀನಿಯಾರಿಟಿ ಸ್ಥಾನಮಾನ ಅಥವಾ ಸಂಬಳಗಳ ಬಗ್ಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದೂ ಶಿಫಾರಸು ಮಾಡಲಾಗಿದೆ.

ಗುಮಾಸ್ತರ ದರ್ಜೆಯಲ್ಲಿ ಪದವೀಧರರಿಗೆ ೭೫-೧೫೦ ರೂ ಮತ್ತು ಸ್ಕೂಲ್ ಫೈನಲ್ ಆದವರಿಗೆ ೫೦-೧೨೦ರ ಗ್ರೇಡನ್ನೂ, ಸೆಕ್ರೆಟೇರಿಯಟ್ಟಿನಲ್ಲಿರುವವರಿಗೆ ಇವಕ್ಕಿಂತ ಸ್ವಲ್ಪ ಹೆಚ್ಚಿನ ಸ್ಕೇಲನ್ನೂ ಕೊಡಬೇಕೆಂದು ಸಲಹೆ ಮಾಡಲಾಗಿದೆ.

ತರಪೇತು ಇಲ್ಲದ, ತರಪೇತಾದ ಮತ್ತು ಎಸ್. ಎಸ್. ಎಲ್. ಸಿ. ಉಪಾಧ್ಯಾಯರಿಗೆ ಕ್ರಮವಾಗಿ ೪೦-೬೦, ೪೦-೮೦ ಮತ್ತು ೫೦-೧೨೦ ಗ್ರೇಡು ಮತ್ತು ತರಪೇತಾದವರಿಗೆ ... ರೂ ಸಂಬಳ ಕೊಡಬೇಕು. ಪಂಡಿತರು ಮತ್ತು ಮೌಲ್ವಿಗಳಿಗೆ ಪದವೀಧರರ ಸಂಬಳದ ಸ್ಕೇಲುಗಳು ಇರಬೇಕು.

ವಿಶ್ವವಿದ್ಯಾಲಯದ ಪ್ರೊಫೆಸರುಗಳಿಗೆ ೭೫೦-೧,೦೦೦, ರೀಡರುಗಳಿಗೆ ೪೫೦-೭೦೦, ಅಧ್ಯಾಪಕರುಗಳಿಗೆ ೧೫೦-೪೫೦ ರೂ. ಗ್ರೇಡು. ಅಮಲ್ದಾರರುಗಳಿಗೆ ೨೦೦ರಿಂದ ೪೦೦ ರೂ ಪೋಲೀಸು ಕಾನ್ಸ್ಟೇಬಲ್ಲುಗಳಿಗೆ ೩೦ರಿಂದ ೪೦ ರೂ ಗ್ರೇಡು.

ಗೆಜೆಟೆಡ್ ಹುದ್ದೆಗಳಿಗೆ ಈಗ ಇರುವ ೫೮ ಸ್ಕೇಲುಗಳನ್ನು ೧೯ಕ್ಕೆ ಇಳಿಸುವಂತೆ ಸೂಚಿಸಿದೆ. ೧೧ ಹುದ್ದೆಗಳಿಗೆ ಮಾತ್ರ ೧,೨೦೦ ೧,೪೦೦ ರೂ ಗ್ರೇಡನ್ನು ಗೊತ್ತುಪಡಿಸುವಂತೆ ತಿಳಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ವಾರ ಭವಿಷ್ಯ

ತಾ ೪-೩-೫೬ ರಿಂದ ೧೧-೩-೫೬ರ ವರೆಗೆ

ಮೇಷ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ನೌಕರಿಯಲ್ಲಿ ಪ್ರಶಂಸೆ

ವೃಷಭ —ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ

ಮಿಥುನ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವೃಥಾ ವಿವಾದ ಸಂಭವ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ

ಕರ್ಕ —ಆರೋಗ್ಯ ಸಮರ್ಪಕ ಆರ್ಥಿಕ ಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸ ಸಂಭವ

ಸಿಂಹ —ಆರೋಗ್ಯ ತೃಪ್ತಿಕರ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಕಿರುಕುಳ ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಕನ್ಯಾ —ಆರೋಗ್ಯ ಸಮರ್ಪಕ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಸಂಯಮ ಅಗತ್ಯ

ತುಲಾ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಅಪ್ತರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಸಾಧಾರಣ ಪ್ರಗತಿ

ವೃಶ್ಚಿಕ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಸ್ಥಿತಿ ಬಿಗಡಾಯಿಸುವುದು ಮಿತ್ರರಿಂದ ತೊಂದರೆ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ನಿರುತ್ಸಾಹ

ಧನುಸ್ಸು —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಮಕರ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ ನೂತನ ವಸ್ತುಗಳನ್ನು ಕೊಳ್ಳುವಿಕೆ

ಕುಂಭ —ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ, ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ

ಮೀನ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ನೌಕರಿಯಲ್ಲಿ ಉತ್ಸಾಹ ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಮಂಡ್ಯದ ಸಕ್ಕರೆ ಕಾರ್ಮಿಕರ ಪ್ರದರ್ಶನ

ಮಂಡ್ಯದಲ್ಲಿ ಮೊನ್ನೆ ಸಕ್ಕರೆ ಕಂಪೆನಿ ಕಾರ್ಮಿಕರು ಭಾರಿ ಮೆರವಣಿಗೆ ನಡೆಸಿದರು ಮೆರವಣಿಗೆಯು ೧ ಮೈಲಿ ಉದ್ದವಿದ್ದೆನೂ ಇದ್ದಿತೆಂದು ವರದಿಯಾಗಿದೆ ಶ್ರೀ ಮಾಸ್ತಿಗೌಡರೂ, ರಾಮರಾಯರೂ ಅವರ ನೇತೃತ್ವ ವಹಿಸಿದ್ದರು ೧೫ ನೇ ತಾರೀಕು ಕಾರ್ಮಿಕರು ತಮ್ಮ ಬೇಡಿಕೆಗಳ ಸಂಬಂಧವಾಗಿ ಮುಷ್ಕರ ಹೂಡಲಿರುವರು

ಹೈದರಾಬಾದು ಪೋಲೀಸು ಮುಖ್ಯಾಧಿಕಾರಿ ಕೊಲೆ ಯತ್ನ

ಹೈದರಾಬಾದಿನ ಪೋಲೀಸು ಇಲಾಖೆಯಲ್ಲಿದ್ದು ವಜಾ ಆದ ಒಬ್ಬ ನೌಕರನು ಅಲ್ಲಿನ ಪೋಲೀಸು ಮುಖ್ಯಾಧಿಕಾರಿ ಶಿವಕುಮಾರಲಾಲರನ್ನು ಕೊಲ್ಲುವ ಪ್ರಯತ್ನ ನಡೆಸಿದುದಾಗಿ ಗೊತ್ತಾಗಿದೆ ಹತ್ಯಾಕಾರಿಯು ಒಂದು ದೊಡ್ಡ ಕಲ್ಲನ್ನು ಎತ್ತಿ, ಐ ಜಿ ಪಿ ಯವರು ತಮ್ಮ ಕಾರನ್ನು ಹತ್ತುತ್ತಿದ್ದಾಗ ಎಸೆದು ಅದು ಹಿಂದಿನ ಬಾಗಿಲಿಗೆ ಬಿದ್ದಿತು ಅಪಪಲ್ಲಿ ಕುಳಿತಿದ್ದವರೆಲ್ಲರೂ ಪಾರಾದರು ಅವನನ್ನು ಬಂಧಿಸಲಾಗಿದೆ

ಅಪೀಲಿನಲ್ಲಿ ಉಮೇದುವಾರಿಕೆ ಖಾಯಂ

ನಂಜನಗೂಡು ಪೌರಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದು ವಜಾ ಮಾಡಲ್ಪಟ್ಟ ಶ್ರೀ ಎನ್ ಎಲ್ ಲಿಂಗೇಗೌಡರು ಜಿಲ್ಲಾಧಿಕಾರಿಗಳಲ್ಲಿ ಅಪೀಲು ಮಾಡಲಾಗಿ ಅವರ ಉಮೇದುವಾರಿಕೆಯು ನ್ಯಾಯಬದ್ಧವಾಗಿರುವುದೆಂದು ಜಿಲ್ಲಾಧಿಕಾರಿಗಳು ತೀರ್ಪಿತ್ತಿರುತ್ತಾರೆ

ಮೋದಿಯವರ ಶಿಬಿರಕ್ಕೆ ಸಹಾಯ

ಡಾ॥ ಮೋದಿಯವರ ಶಿಬಿರಕ್ಕೆ ಕೆಳಗೆ ಕಂಡವರಿಂದ ಈ ರೀತಿ ಸಹಾಯ ದೊರೆತಿದೆ - ರಾಜಾ ಸೋಪು ಕಾರ್ಖಾನೆ ಮಾಲೀಕರು ೧೦೦ ರೂ, ಕೈಲ್ಕೆ ಇಲಾಖೆಯ ಶ್ರೀ ಗಂಗಾಧರಪ್ಪನವರು ೫೦ ರೂ, ಶ್ರೀ ಎಂ ಎಲ್ ನಂದಾ ೫೦ ರೂ, ಶ್ರೀ ಎಂ ಎಸ್ ಸಿದ್ಧಲಿಂಗಪ್ಪ ೧ ಪಲ್ಲ ಅಕ್ಕಿ, ಶ್ರೀ ಹೆಚ್ ಎನ್ ಮುದ್ದಯ್ಯನವರು ೧೦೦ ಲೋಟಗಳು

ಕೇಂದ್ರ ಆಹಾರ ಸಂಶೋಧನಾಲಯದ ಬಡಾವಣೆ ಗುದ್ದಲಿ ಪೂಜೆ

ಕೇಂದ್ರ ಆಹಾರ ಸಂಶೋಧನಾಲಯದ ಹೊಸ ಬಡಾವಣೆಯ ಗುದ್ದಲಿ ಪೂಜೆಯನ್ನು ಮೊನ್ನೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ನೆರವೇರಿಸಿದರು ಡೈರೆಕ್ಟರ್ ಡಾ॥ ವಿ ಸುಬ್ರಹ್ಮಣ್ಯಂರವರು ಸ್ವಾಗತ ಭಾಷಣ ಮಾಡಿದರು ಶ್ರೀ ಚನ್ನಯ್ಯನವರು ಕೇಂದ್ರದ ಅಭಿವೃದ್ಧಿಗಾಗಿ ಪ್ರಶಂಸೆ ಮಾಡಿ, ಅಲ್ಲಿ ತಯಾರಾಗುವ ಆಹಾರ ವಸ್ತುಗಳು ಬಡವರಿಗೂ ಸುಲಭವಾಗಿ ಸಿಕ್ಕುವಂತಾಗಲೆಂದು ಹಾರೈಸಿದರು ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಸಂಸ್ಥಾನದವರಿಗೆ ಸೂಕ್ತ ಪ್ರಾತಿನಿಧ್ಯ ದೊರೆಯಬೇಕೆಂದು ಅವರು ಒತ್ತಾಯಪಡಿಸಿದರು

ಸಂಸ್ಥಾನಗಳ ನಡವಳಿಕೆ ಬಗ್ಗೆ ಗೌರ್ನರರುಗಳಿಗೆ ಅರಿವಿಲ್ಲ

ಮುಖ್ಯ ಮಂತ್ರಿಗಳ ಬಗ್ಗೆ ಗವರ್ನರ್ ಪಟ್ಟಾಭಿಯವರ ಆಕ್ಷೇಪಣೆ

ದೆಹಲಿಯಲ್ಲಿ ಮೊನ್ನೆ ಸೇರಿದ್ದ ರಾಜಪ್ರಮುಖರು ಮತ್ತು ಗವರ್ನರುಗಳ ಸಮ್ಮೇಳನದಲ್ಲಿ ಮಧ್ಯಪ್ರದೇಶದ ಗವರ್ನರ್ ಡಾ॥ ಪಟ್ಟಾಭಿಯವರು ಮಾತನಾಡುತ್ತಾ, ಸಂಸ್ಥಾನಗಳಲ್ಲಿ ನಡೆಯುವ ವಿದ್ಯಮಾನಗಳನ್ನು ಅಲ್ಲಿನ ಮುಖ್ಯ ಮಂತ್ರಿಗಳು ಗೌರ್ನರುಗಳಿಗೆ ತಿಳಿಸುತ್ತಲೇ ಇಲ್ಲವೆಂದೂ, ಇದರಿಂದ ಅವರುಗಳಿಗೆ ಏನು ನಡೆಯುತ್ತಿರುವುದೆಂಬುದರ ಅರಿವೇ ಉಂಟಾಗುತ್ತಿಲ್ಲವೆಂದೂ ಆಪಾದಿಸಿದರು ಈ ಕಾರಣದಿಂದ ಸಂಸ್ಥಾನಾಧೀಶರು ತಮ್ಮ ಸಂಸ್ಥಾನಗಳ ಬಗ್ಗೆ ಅಭಿಪ್ರಾಯವನ್ನು ತಿಳಿಸಲು ಆಗುತ್ತಿಲ್ಲವೆಂದು ಅವರು ಹೇಳಿದರು

ಸತ್ಕಾರ ಕೂಟ

ಶ್ರೀರಂಗಪಟ್ಟಣ ೩

ಕಳೆದ ಗುರುವಾರ ದಿವಾನ್ ಕೃಷ್ಣಮೂರ್ತಿಯವರ ಬಂಗಲೆಯಲ್ಲಿ ಪೌರಸಭಾಧ್ಯಕ್ಷ ಶ್ರೀ ಎನ್ ಶ್ರೀಕಂಠಯ್ಯನವರು, ಪೌರಸಭಾ ಸದಸ್ಯರುಗಳ ಗೌರವಾರ್ಥವಾಗಿ ಭೋಜನ ಕೂಟವನ್ನು ಏರ್ಪಡಿಸಿದ್ದರು ಸಂತೋಷ ಕೂಟಕ್ಕೆ ಮಂಡ್ಯ ಜಿಲ್ಲಾ ಡೆಪ್ಯುಟೀ ಕಮಿಷನರ್ ಶ್ರೀ ಬಾಲರಾಜ್ ಮತ್ತು ಇತರ ಅಧಿಕಾರಿ ವರ್ಗದವರನ್ನೂ, ಟೌನಿನ ಕೆಲವು ಮಾನ್ಯರುಗಳನ್ನೂ ಆಹ್ವಾನಿಸಲಾಗಿತ್ತು ನಾಲ್ಕು ವರ್ಷ ತಮ್ಮ ಅಧ್ಯಕ್ಷ ಅಧಿಕಾರಾವಧಿಯಲ್ಲಿ ಕೆಲಸಕಾರ್ಯಗಳು ಸುಗಮವಾಗಿ ನಡೆದು, ಪುರಜನರ ಸೇವೆ ಸಲ್ಲಿಸಲು ಸದಸ್ಯರು ಏಕಮತ್ಯದಿಂದ ತಮ್ಮೊಡನೆ ಸಹಕರಿಸಿದ್ದಕ್ಕಾಗಿ ಅಧ್ಯಕ್ಷರು ಸಂತೋಷವನ್ನು ಸೂಚಿಸಿದರು

೬೦ ವರ್ಷಗಳಿಂದಲೂ ವ್ಯಾಜ್ಯವಿಲ್ಲದ ಗ್ರಾಮ

ಅಹಮದಾಬಾದು ಬಳಿ ಸಾಬರ್‍ಜನ ಮುವಾಡ ಎಂಬ ಹಳ್ಳಿಯಲ್ಲಿ ೬೦ ವರ್ಷಗಳಿಂದಲೂ ಒಂದಾದರೂ ವ್ಯಾಜ್ಯವಾಗಿಲ್ಲವೆಂದೂ ಅಲ್ಲಿನ ನಿವಾಸಿಗಳು ಕೋರ್ಟುಗಳಿಗೆ ಹೋಗಿಲ್ಲವೆಂದೂ, ಹೊರಗಿನವರ ಮಧ್ಯಸ್ಥಿಕೆಯಿಲ್ಲದೆ ಭಿನ್ನಾಭಿಪ್ರಾಯಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿರುವರೆಂದೂ ವರದಿಯಾಗಿದೆ ಅಲ್ಲಿ ೬೫೧ ಜನರು ವಾಸಿಸುತ್ತಿರುವರು ಪಂಚಾಯತಿಯೂ ಸಹಾ ಇರುವುದಿಲ್ಲ ಅವರು ಏಕಮತ್ಯದಿಂದ ವರ್ತಿಸಿ, ಕಳೆದ ಎರಡು ವರ್ಷಗಳಲ್ಲಿ ೩೨,೦೦೦ ರೂ ನಷ್ಟು ಅಭಿವೃದ್ಧಿ ಕಾರ್ಯಗಳನ್ನು ನಡೆಸಿರುತ್ತಾರೆ ಅದರ ಪೈಕಿ ಅವರೇ ೧೨,೦೦೦ ರೂ ಚಂದಾ ಕೊಟ್ಟಿರುವರು

ಮಗುವಿನ ಆಭರಣಗಳ ಕಳುವಿಗಾಗಿ ಸಜಾ

ರಾಮು "ಅಲಿಯಾಸ್ ಸಿದ್ದಯ್ಯ ಅಲಿಯಾಸ್ ರಾಜಯ್ಯ ಎಂಬುವನು ವೀಣೆ ಶೇಷಣ್ಣನವರ ಬೀದಿಯ ಶ್ರೀ ರಾಮರಾಯರ ಸುಕನ್ಯೆ ಎಂಬ ೫ ವರ್ಷದ ಮಗಳನ್ನು ಅದೇ ಬೀದಿಯಲ್ಲಿರುವ ಸಾರ್ವಜನಿಕ ಕಕ್ಕಸ್ಸಿಗೆ ಕರೆದುಕೊಂಡು ಹೋಗಿ ಹುಡುಗಿಯ ಕಿವಿಯಲ್ಲಿದ್ದ ಲೋಲಾಕು ಮತ್ತು ಸ್ವಾರುಗಳನ್ನು ಅಪಹರಿಸುತ್ತಿದ್ದಾಗ ಸಿಕ್ಕಿಬಿದ್ದನು ಕೃಷ್ಣರಾಜಾ ಪೋಲೀಸರು ಅವನ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ಅವನಿಗೆ ಮೊನ್ನೆ ಒಂದು ತಿಂಗಳು ಕಠಿಣ ಸಜಾ ವಿಧಿಸಲಾಯಿತು

ಬುಲುಸು ಸಾಂಬಮೂರ್ತಿಯವರಿಗೆ ನಿಧಿ

ಆಂಧ್ರ ದೇಶದ ಕಾಂಗ್ರೆಸ್ ಮುಂದಾಳು, ಮದ್ರಾಸ್ ಶಾಸನ ಸಭೆಯ ಮಾಜಿ ಸ್ಪೀಕರೂ ಆದ ಬುಲುಸು ಸಾಂಬಮೂರ್ತಿಯವರು ಈ ತಿಂಗಳು ೧೦ನೇ ತಾರೀಕು ೭೦ ವರ್ಷ ತುಂಬುವರು ಅಂದು ಅವರಿಗೆ ೭೧ ಸಾವಿರ ನಿಧಿಯನ್ನು ಅರ್ಪಿಸಲಾಗುವುದು ಶ್ರೀ ಕಾಮರಾಜನಾಡಾರ್, ವಿ ವಿ ಗಿರಿ ಮುಂತಾದವರು ಮನವಿಯೊಂದನ್ನು ಹೊರಡಿಸಿರುತ್ತಾರೆ

೧೫೫ ಗಂಟೆ ಸತತ ಸೈಕಲ್ ಸವಾರಿ; ವಿಶ್ವದ ರಿಕಾರ್ಡು

ಇಂದೂರಿನ ಸೂರತ್ತಿನ ಅಫ್ಸಲ್ ಖಾನ್ ಎಂಬ ೨೩ ವರ್ಷದ ತರುಣನು ೧೫೫ ಗಂಟೆ ಕಾಲ ಸತತ ಸೈಕಲ್ ಸವಾರಿ ಮಾಡಿ ವಿಶ್ವದ ರಿಕಾರ್ಡನ್ನು ಸ್ಥಾಪಿಸಿರುತ್ತಾನೆ

ರಸ್ತೆಗಳಲ್ಲಿ ಮರದ ದಿಮ್ಮಿಗಳಿಂದ ಸಂಚಾರಕ್ಕೆ ಅಡಚಣೆ

ರಾಜಧಾನಿಯ ಮಾನಂದವಾಡಿ ರಸ್ತೆಯಲ್ಲಿರುವ ಹಲವಾರು ಸಾ ಮಿಲ್ಲುಗಳ ಎದುರು ನೂರಾರು ಮರದ ದಿಮ್ಮಿಗಳು ರಸ್ತೆ ಪಕ್ಕದಲ್ಲಿ ಹಾಕಲ್ಪಟ್ಟು ತಿರುಗಾಡುವ ಜನರಿಗೆ ತುಂಬಾ ತೊಂದರೆಯಾಗಿದೆಯೆಂದೂ ... ಬಸ್ಸುಗಳು ಯಥೇಚ್ಛವಾಗಿ ತಿರುಗುವ ಆ ಪ್ರದೇಶದಲ್ಲಿ ಜನರ ಓಡಾಟವೂ ಸಹಾ ಹೆಚ್ಚಾಗಿರುವುದರಿಂದ, ರಸ್ತೆ ಅಪಘಾತಗಳಾಗದಂತೆ ... ಮಿಲ್ಲಿನವರುಗಳು ತಮಗೆ ಸೇರಿದ ತೊಲೆಗಳನ್ನು ತಮ್ಮ ಕಾಂಪೌಂಡಿನಲ್ಲಿಟ್ಟುಕೊಳ್ಳುವ ... ಅಧಿಕಾರಿಗಳು ಮಾಡಬೇಕೆಂದು ಸೂಚಿಸಿ ... ಕರೊಬ್ಬರು ಪತ್ರ ಬರೆದಿರುತ್ತಾರೆ

ಶಾರದಾವಿಲಾಸ ಕಾಲೇಜು ಸ್ಟಡಿ ಸರ್ಕಲ್

ಮೇಲ್ಯಂಡ ಕಾಲೇಜಿನ ಬಿ ಎಲ್ ತರಗತಿಯ ವಿದ್ಯಾರ್ಥಿ ಶ್ರೀ ವಿ ಕೆ ದೊರೆಸ್ವಾಮಿಯವರು ಮೂರು ತಿಂಗಳ ಹಿಂದೆ ಪ್ರಾರಂಭಿಸಿದ 'ಸ್ಟಡಿ ಸರ್ಕಲ್' ಸಮೂಹವು ಕಳೆದ ಗುರುವಾರ ... ಕ್ತಾಯವಾಯಿತು ಚರ್ಚೆಗಳಲ್ಲಿ ಭಾಗವಹಿಸಿದ್ದ ಶ್ರೀ ಎನ್ ಲಕ್ಷ್ಮೀನರಸಿಂಹಯ್ಯ, ಎಂ ಎಲ್ ವಿಶ್ವೇಶ್ವರಯ್ಯ, ಎಸ್ ಕೆಂಪಯ್ಯ ಮತ್ತು ... ಬ್ ಮಹಮದ್ ಹುಸೇನರವರು ಮಾತನಾಡಿ ... ಸಮೂಹವು ಯಶಸ್ವಿಯಾಗಿ ನಡೆಯಲು ಶ್ರೀ ದೊರೆಸ್ವಾಮಿಯವರು ಪಟ್ಟ ಶ್ರಮವನ್ನು ಪ್ರಶಂಸಿಸಿದರು ೧೫೦ ಪ್ರಶ್ನೆಗಳನ್ನೂ ಮತ್ತು ೬೫ ವಿಷಯಗಳನ್ನೂ ಚರ್ಚಿಸಲಾಗಿತ್ತು ಶ್ರೀ ದೊರೆಸ್ವಾಮಿಯವರು ಸೂಕ್ತ ಉತ್ತರವಿತ್ತರು

NATIONAL LEAGUE
Anathalaya Buildings, Mysore
Biggest Institution in the City
146 Students Had Appeared For
Jan 56 Examination
Excellent Coaching for
S. S. L. C. Students
70 per cent Success in present
Examination
Separate Section for Ladies
Working hours 7-30 to 10 A M
and 5-30 to 8-30 P M
Classes In Full Swing, Join At Once

ರಾಜಕಮಲ್ ★ ೩ ೩ ೫೬ರಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿರುವ
ಪ್ರತಿ ದಿನ ಮೂರು ಪ್ರದರ್ಶನಗಳು ಅಮೋಘ ೨ನೇ ವಾರ
ಶಿವಾಜಿ ಗಣೇಶ, ಪದ್ಮಿನಿ ಪಾತ್ರವಹಿಸಿರುವ ತಮಿಳು ಚಿತ್ರ ★ ರಾಜಾರಾಣಿ ★
ಈ ಚಿತ್ರದಲ್ಲಿ ಬರುವ ಚೇರ ರಾಜ ಮತ್ತು ಸಾಕ್ರಟೀಸ್ ನಾಟಕ ನೋಡಲು ತಪ್ಪಬೇಡಿ
ಕಥೆ-ಸಂಭಾಷಣೆ ಕರುಣಾನಿಧಿ [ರಾಘವೇಂದ್ರ ರಿಲೀಸ್

CITY TUTORIAL COLLEGE, V.V Market, Mysore
The Oldest & the Best Coaching Institution
S. S. L. C. CLASSES IN FULL SWING
Separate classes for Kannada & English media
Systematic work by efficient staff
Special attention to discipline and order
Minimum fees and maximum benefit
For best guidance read C T C PUBLICATIONS



ಸ್ವಲ್ಪ ಬಂಡವಾಳದಲ್ಲಿ ಹೆಚ್ಚು ಲಾಭ ಪಡೆಯಿರಿ
ಉಷಾ ಹೊಲಿಗೆ ಯಂತ್ರ
ಪಟ್ಟು ಬ್ರದರ್ಸ್

Edited, Printed and Published by A R Nagarajan at Sadhvi Press D. Subbiah Road Mysore

Telephone No. 792

For Best
Half-tone & Line
BLOCKS
Contact —
Sri Sharada Press,
Hanumantha Rao St
MYSORE

ಬಿಡಿ ಪ್ರತಿ 3 ಕಾಸು

ಲಗ್ನದ ಜವಳಿ
ಗೌ|| ಸಿಲ್ಕ್, ಸೀರೆಗಳು
ಧರ್ಮಾವರಂ, ಪೂನಾ, ಬೆಳಗಾಂ, ಬೆಂಗಳೂರ್
... ಸೀರೆಗಳು
ಬಂದಿವೆ ಬಂದೀ ನೋಡಿ
K.T. ಭೋಜಯ್ಯ
ಬಿ ಎ, ಪ್ರೊಪ್ರೈಟರ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಪುಟ : ೧೪] SADHVI : MONDAY 5-3-1956 ಮೈಸೂರು ಸೋಮವಾರ : ೫-೩-೧೯೫೬ [ಸಂಚಿಕೆ : ೧೯೫

ಫಾರ್ಮೋಸಾ ಬಗ್ಗೆ ಮಾತುಕತೆಗೆ ಅಮೆರಿಕಕ್ಕೆ ಚೀಣಾ ಕರೆ

ಧಾನ್ಯದ ಮೇಲೆ ಡಿ. ಡಿ. ಟಿ. ಪ್ರಯೋಗದಿಂದ ಕೆಡಕು

ಸಧ್ಯದಲ್ಲೇ ನಗರದಲ್ಲಿ ನಿಷೇಧಾಜ್ಞೆ?

ಮೈಸೂರು ೫

ಗೋದಾಮುಗಳಲ್ಲಿ ಶೇಖರಿಸಿರುವ ಆಹಾರ ಧಾನ್ಯದ ಮೇಲೆ ಗೆಮಾಕ್ಸಿನ್, ಡಿ ಡಿ ಟಿ ಮುಂತಾದ ಕ್ರಿಮಿ ನಾಶಕಗಳನ್ನು ಚೆಲ್ಲುವುದರಿಂದ ಸಾರ್ವಜನಿಕ ಆರೋಗ್ಯಕ್ಕೆ ತುಂಬಾ ಕೆಡಕೆಂಬುದನ್ನು ಸ್ಥಳೀಯ ಕೇಂದ್ರ ಆಹಾರ ಸಂಶೋಧನಾಲಯದವರು ಕಂಡುಹಿಡಿದಿರುತ್ತಾರೆ. ಕ್ರಿಮಿಕೀಟಗಳನ್ನು ಕೊಲ್ಲಲು ಇಂತಹ ವಸ್ತುಗಳನ್ನು ಪ್ರಯೋಗಿಸಲಾಗುತ್ತಿದೆ. ಸಂಶೋಧನಾಲಯದವರು ಈ ಬಗ್ಗೆ ಮೈಸೂರು ಮತ್ತು ಬೆಂಗಳೂರು ಪೌರಸಭೆಗಳ ಆರೋಗ್ಯಾಧಿಕಾರಿಗಳೊಡನೆ ಚರ್ಚೆ ನಡೆಸುವ ಕಾರಣ ಬಹುಶಃ ಸಧ್ಯದಲ್ಲೇ ಡಿ ಡಿ ಟಿ ಯನ್ನು ಧಾನ್ಯಗಳ ಮೇಲೆ ಚೆಲ್ಲುವುದನ್ನು ತಪ್ಪಿಸುವ ಬಗ್ಗೆ ನಿಷೇಧಾಜ್ಞೆಯನ್ನು ಹೊರಡಿಸಬಹುದೆಂದು ತಿಳಿದುಬಂದಿದೆ.

ದಶಲಕ್ಷದಲ್ಲಿ ೨೫೦ ಅಥವಾ ೫೦೦ ಭಾಗದಷ್ಟು ಡಿ ಡಿ ಟಿ ಯನ್ನು ವರ್ತಕರು ಪ್ರಯೋಗಿಸುತ್ತಿದ್ದರೂ, ಧಾನ್ಯವನ್ನು ತೊಳೆದು, ಬೇಯಿಸಿದ ಮೇಲೂ ಸಹ ಅದರಲ್ಲಿ ಆರೋಗ್ಯ ಕೆಡುವಷ್ಟು ಡಿ ಡಿ ಟಿ ದ್ರವವು ಉಳಿದಿರುವುದೆಂದು ಹೇಳಲಾಗಿದೆ.

ಗೋವಾ ಸರ್ಕಾರದ ಹುದ್ದೆಗಳಿಗೆ ಹೋಗಲು ರಾಷ್ಟ್ರೀಯರ ತಿರಸ್ಕಾರ

ಗೋವಾ ಸೈನ್ಯದ ವೈದ್ಯಕೀಯ ದಳಕ್ಕೆ ಸೇರಲು ಯಾವ ರಾಷ್ಟ್ರೀಯನೂ ಸಿದ್ಧವಾಗಿಲ್ಲವೆಂದೂ, ಹುದ್ದೆಗಳು ದೊರೆಯುವುವೆಂದು ಜಾಹಿರಾತು ಮಾಡಿದ್ದರೂ ಒಬ್ಬರೂ ಅರ್ಜಿ ಹಾಕಿಲ್ಲವೆಂದೂ ವರದಿಯಾಗಿದೆ.

ಕಾಶ್ಮೀರ್ ಆಕ್ರಮಣದ ಬಗ್ಗೆ ಮಾತುಕತೆಗೆ ನೆಹರೂ ಸಿದ್ಧ

ಕಚ್ ಬಾರಿಯ ಪ್ರದೇಶದಲ್ಲಿ ಪಾಕಿಸ್ತಾನದ ಸೈನ್ಯ ಮತ್ತು ಚಾಡ್‌ಬೆಟ್ ದ್ವೀಪದ ಮೇಲೆ ಪಾಕಿಸ್ತಾನದ ಸೈನಿಕರು ನಡೆಸಿದ ಆಕ್ರಮಣದ ವಿಷಯವನ್ನು ಕುರಿತು ಮಂತ್ರಿಗಳ ದರ್ಜೆಯಲ್ಲಿ ಮಾತುಕತೆ ನಡೆಸಲು ಸಿದ್ಧವಾಗಿರುವುದಾಗಿ ಭಾರತ ಸರ್ಕಾರವು ಪಾಕಿಸ್ತಾನಕ್ಕೆ ಸೂಚಿಸಿರುವುದಾಗಿ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

ನೆಹರೂರವರೊಡನೆ ಬ್ರಿಟಿಷ್ ವಿದೇಶಾಂಗ ಮಂತ್ರಿ ಸಂಭಾಷಣೆ

ಬ್ರಿಟನ್ನಿನ ವಿದೇಶಾಂಗ ಮಂತ್ರಿ, ಸೆಲ್ವಿನ್ ಲಾಯ್ಡ್‌ರವರು ಮೊನ್ನೆ ದೆಹಲಿಯಲ್ಲಿ ಪ್ರಧಾನಿ ನೆಹರೂರವರೊಡನೆ ೨|| ಗಂಟೆಕಾಲ ಚರ್ಚೆ ನಡೆಸಿದರು. ಇಂಡೋಚೀನಾ ಪರಿಸ್ಥಿತಿ ಮತ್ತು ಬಾಗ್ದಾದ್ ಒಪ್ಪಂದಗಳನ್ನು ಕುರಿತು ಪರಿಶೀಲನೆ ಮಾಡಿದರು. ಕರಾಚಿಯಲ್ಲಿ ಸೇರಲಿರುವ ಆಗ್ನೇಯ ಏಷ್ಯಾ ಕೂಟದ ಸಭೆಗೆ ಮುಂಚೆ ನಡೆದಿರುವ ಈ ಮಾತುಕತೆಗೆ ವಿಶೇಷ ಮಹತ್ವವನ್ನೀಯಲಾಗಿದೆ.

ಶ್ರೀಮನ್ಮಹಾರಾಜರು ಡಾ|| ಮೋದಿಯವರ ನೇತ್ರ ಶಸ್ತ್ರ ಚಿಕಿತ್ಸೆಯನ್ನು ಪರಿಶೀಲಿಸುತ್ತಿರುವ ಚಿತ್ರ

ನಗರದಲ್ಲಿ ಕಳ್ಳತನಗಳು

ಮೈಸೂರು ೪

ನಗರದ ನರಸಿಂಹರಾಜ ಮೊಹಲ್ಲೆಯ ಶ್ರೀ ರಾಮಚಂದ್ರರಾಯರ ಮನೆಯ ಬೀಗವನ್ನು ಮುರಿದು ಸನ್ನೆ ಸುಮಾರು ೬೦ ೭೦ ರೂ ಬೆಲೆಯ ಬಟ್ಟೆ, ಫೌಂಟನ್ ಪೆನ್ನು, ಪುಸ್ತಕ ಮತ್ತು ನಗದನ್ನು ಅಪಹರಿಸಲಾಗಿದೆ. ಚಾಮುಂಡಿಪುರದ ಶ್ರೀ ಎಲ್ ಸಿದ್ದಯ್ಯ ಎಂಬುವರ ಮನೆಯಲ್ಲೂ ಇದೇ ರೀತಿ ೨೦೦ ರೂ ಬೆಲೆಯ ಚಿನ್ನ ಬೆಳ್ಳಿ ಪಾತ್ರೆಗಳು ಮತ್ತು ಬಟ್ಟೆಗಳ ಕಳುವಾಗಿವೆ. ಲಕ್ಷ್ಮೀಪುರದ ಅಗ್ರಹಾರದಲ್ಲಿರುವ ಶ್ರೀ ಜಿ ಆರ್ ಜೋಯಿಸ್‌ರವರ ಮನೆಯಲ್ಲೂ ಮೇಲ್ಕಂಡಂತೆ ಕಳ್ಳತನ ನಡೆದು, ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳು ಮತ್ತು ಬಟ್ಟೆಗಳ ಅಪಹಾರವಾಗಿದೆ.

ಮೂರ್ಛೆ ತಪ್ಪಿ ಬಿದ್ದು ಮರಣ

ನಗರದ ಒಂಟಿಕೊಪ್ಪಲಿನಲ್ಲಿರುವ ಡಾ|| ಭಾಸ್ಕರರವರ ಪುತ್ರಿ ೧೭ ವರ್ಷದ ರತ್ನಮ್ಮ ಎಂಬಾಕೆಯು ನೆನ್ನೆ ಸಂಜೆ ಬಚ್ಚಲುಮನೆಯಲ್ಲಿ ಮೂರ್ಛೆ ತಪ್ಪಿ ಬೀಳಲಾಗಿ ಆಕೆಯನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಲ್ಲಿ ಆಕೆಯು ಮೃತಪಟ್ಟಳೆಂದು ಗೊತ್ತಾಗಿದೆ.

ಜೂಜಿಗಾಗಿ ಕೋರ್ಟಿನ ವಿಚಾರಣೆ ಸಜಾ

ಅನೆಪಾಳ್ಯ ರಸ್ತೆಯಲ್ಲಿ ಪುಟ್ಟಸ್ವಾಮಿ, ಮಲ್ಲಯ್ಯ ಮತ್ತು ಇನ್ನಿಬ್ಬರು ಸಟ್ಟಾ ಜೂಜಾಡುತ್ತಿದ್ದುದನ್ನು ಪೊಲೀಸರು ಪತ್ತೆ ಹಚ್ಚಿ ಸ್ಥಳದಲ್ಲಿ ದೊರೆತ ೧೨ ರೂ ಮತ್ತು ಸಟ್ಟಾ ಚೀಟಿಗಳನ್ನು ವಶಪಡಿಸಿಕೊಂಡು ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತರಿಗೆ ಕೋರ್ಟಿನ ವಿಚಾರಣೆ ಸಜಾ ಮತ್ತು ತಲಾ ೧೦ ರೂ ದಂಡ ವಿಧಿಸಲಾಯಿತು.

ಬಸ್ಸಿಗೂ, ಕಾರಿಗೂ ಡಿಕ್ಕಿ

ಮೈಸೂರು ತಾಲ್ಲೂಕು ವರಕಯ್ಯನಹುಂಡಿ ಬಳಿ ನೆನ್ನೆ ಅಶೋಕ ಸರ್ವೀಸಿನ ಬಸ್ಸಿಗೂ ಮತ್ತು ಅಬ್ಕಾರಿ ಕಂಟ್ರಾಕ್ಟರ್ ಶ್ರೀ ತಮ್ಮಣ್ಣಗೌಡರ ಮಗ ಶ್ರೀ ನಾರಾಯಣಸ್ವಾಮಿಯವರ ಕಾರಿಗೂ ಡಿಕ್ಕಿಯಾದುದರಿಂದ ಕೆಲವರಿಗೆ ಅಲ್ಪಸ್ವಲ್ಪ ಗಾಯಗಳಾಗಿ ಆಸ್ಪತ್ರೆಗೆ ಸೇರಿಸಲ್ಪಟ್ಟರು.

ಇರಾನಿನ ಷಹಾರವರಿಗೆ ಬೆಂಗಳೂರು ಪುರಸಭೆಯ ಸನ್ಮಾನ

ಬೆಂಗಳೂರು ೫

ಇರಾನಿನ ಷಹಾರವರಿಗೆ ನೆನ್ನೆ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಪೌರಸಭೆಯವರು ಮಾನಪತ್ರವನ್ನು ಅರ್ಪಿಸಿದರು. ಷಹಾರವರು ಉತ್ತರವಿತ್ತು, ಭಾರತೀಯರು ಇರಾನಿಗೆ ಭೇಟಿ ಕೊಡುವಂತೆ ಕೋರಿದರು. ಎರಡು ರಾಷ್ಟ್ರಗಳ ನಡುವೆ ಸ್ನೇಹ ಮತ್ತು ಭ್ರಾತೃಭಾವ ಏರ್ಪಡಬೇಕೆಂದು ಹೇಳಿದರು. ಮೈಸೂರು ಮಾದರಿ ಸಂಸ್ಥಾನವಾಗಿರುವುದಕ್ಕಾಗಿಯೂ, ಆ ಹೆಸರನ್ನು ಉಳಿಸಿಕೊಳ್ಳಲು ನಡೆಸಲಾಗುತ್ತಿರುವ ಕೆಲಸಗಳಿಗಾಗಿಯೂ ಅವರು ಪ್ರಶಂಸೆ ಮಾಡಿದರು.

ಅರಬ್ ಸೈನ್ಯದ ಬ್ರಿಟಿಷ್ ಅಧಿಕಾರಿ ಗ್ಲಬ್ ಪಾಷಾ ವಜಾ

ಜೋರ್ಡಾನಿನ ದೊರೆ ಹುಸೇನರು ಅರಬ್ ಸೈನ್ಯದ ಪ್ರಧಾನಾಧಿಕಾರಿಗಳಾದ ಬ್ರಿಟನ್ನಿನ ಜಾನ್ ಗ್ಲಬ್ ಪಾಷಾರವರನ್ನು ವಜಾ ಮಾಡಿರುತ್ತಾರೆ. ಇವರು ೧೬ ವರ್ಷ ದಿಂದಲೂ ಅಧಿಕಾರದಲ್ಲಿದ್ದರು. ಇವರ ಸ್ಥಾನಕ್ಕೆ ರಾಡಿ ಇನಾಬ್‌ರವರನ್ನು ನೇಮಿಸಲಾಗಿದೆ.

ಬ್ರೆಜಿಲಿನಲ್ಲಿ ಭೂಪಾತದಿಂದ ೧೦೦ ಜನರ ಮರಣ

ದಕ್ಷಿಣ ಅಮೆರಿಕದ ಬ್ರೆಜಿಲ್ ದೇಶದಲ್ಲಿರುವ ಸ್ಯಾಂಟೋಸ್ ಪ್ರದೇಶದಲ್ಲಿ ಮೊನ್ನೆ ಏಕಾಏಕಿ ಚಂಡಮಾರುತ ಸಂಭವಿಸಿ ಭೂಪಾತದಿಂದ ಸುಮಾರು ೧೦೦ ಜನರು ಮೃತಪಟ್ಟರೆಂದು ವರದಿಯಾಗಿದೆ.

ಡಾ|| ಮೋದಿಯವರಿಂದ ಒಟ್ಟು ೪೦೦ ಶಸ್ತ್ರ ಚಿಕಿತ್ಸೆಗಳು

ಮೈಸೂರು ೫

ಕಳೆದ ೨೧ನೇ ತಾರೀಖಿನಿಂದ ಇಲ್ಲಿನ ವಸ್ತುಪ್ರದರ್ಶನ ಕಟ್ಟಡದಲ್ಲಿ ನಡೆಯುತ್ತಿರುವ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಡಾ|| ಮೋದಿಯವರು ಒಟ್ಟು ೪೦೦ ಜನರಿಗೆ ಶಸ್ತ್ರ ಚಿಕಿತ್ಸೆಗಳನ್ನು ನಡೆಸಿರುವರು. ಇಂದಿಗೆ ಶಸ್ತ್ರ ಚಿಕಿತ್ಸಾ ಕಾರ್ಯಕ್ರಮವು ಮುಕ್ತಾಯಗೊಂಡಿದ್ದು ನಾಳೆಯಿಂದ ನೇತ್ರಗಳ ಪರೀಕ್ಷಾ ಕಾರ್ಯಕ್ರಮವನ್ನು ಇಟ್ಟುಕೊಂಡಿರುವರು.

ವಿದ್ಯಾರ್ಥಿಗಳಿಂದ ಕಂಬಿಗಳ ದಾನ

ಮೈಸೂರು ಬನ್ನಿಮಂಟಪದ ಬಳಿ ಇರುವ ಶ್ರೀ ವೀರಾಂಜನೇಯಸ್ವಾಮಿಯವರ ೧೧ನೇ ವಾರ್ಷಿಕೋತ್ಸವ ಕಾಲದಲ್ಲಿ ಸೇಂಟ್ ಫಿಲೊಮಿನಾ ಕಾಲೇಜ್ ಹಾಸ್ಟೆಲ್ ವಿದ್ಯಾರ್ಥಿಗಳು ತಮ್ಮ ಸ್ವಾರ್ಥವಾಗಿ ಸುಮಾರು ೮೦ ರೂ ಬೆಲೆಯ ಕಂಚಿನ ೨ ದೀಪದ ಕಂಬಗಳನ್ನು ದೇವಸ್ಥಾನಕ್ಕೆ ಉದಾರವಾಗಿ ಕೊಟ್ಟಿರುತ್ತಾರೆ.

○ ಆಮ್ಮಾಯ್ ಬಳಿ ರಾಷ್ಟ್ರೀಯ ಚೀಣರಿಗೆ ಸೇರಿದ ವೈಟ್ ಡಾಗ್ ದ್ವೀಪದ ಕಡೆಯಿಂದ ನೆನ್ನೆ ಹೊರಟಿದ್ದ ೯ ಎಂಬ ಬ್ರಿಟಿಷ್ ವ್ಯಾಪಾರ ಹಡಗಿನ ಮೇಲೆ ಗುಂಡನ್ನು ಹಾರಿಸಲಾಯಿತೆಂದೂ, ನಾವಿಕರೋಪಾದಿಗಳಿಗಾಗಲೀ, ಸಪ್ಪಾಗಲೀ ಆಗಿಲ್ಲವೆಂದೂ ವರದಿಯಾಗಿದೆ. ಹಡಗು ಎಲ್ಲಿಗೆ ಹೋಗುತ್ತಿತ್ತೆಂಬುದು ವ್ಯಕ್ತಪಟ್ಟಿಲ್ಲ.

ಫಾರ್ಮೋಸಾ ವಿವಾದ ಇತ್ಯರ್ಥಕ್ಕಾಗಿ ಸಂಧಾನಕ್ಕೆ ಚೀಣಾ ಕರೆ

ಫಾರ್ಮೋಸಾ ವಿವಾದವನ್ನು ಶಾಂತಿಯುತವಾಗಿ ಇತ್ಯರ್ಥಗೊಳಿಸುವ ದೃಷ್ಟಿಯಿಂದ ಚೀಣಾ ಮತ್ತು ಅಮೆರಿಕಾ ವಿದೇಶಾಂಗ ಮಂತ್ರಿಗಳ ಸಮ್ಮೇಳನವು ನಡೆಯಬೇಕೆಂದು ಕೆಂಪು ಚೀಣಾವು ಕರೆಯಿತ್ತಿದೆ. ಕಳೆದ ಆಗಸ್ಟ್ ೧ ರಿಂದಲೂ ಅಮೆರಿಕಾ–ಚೀಣಾಗಳಿಗೆ ರಾಯಭಾರಿಗಳ ಮಟ್ಟದಲ್ಲಿ ನಡೆಯುತ್ತಿರುವ ಮಾತುಕತೆಗಳು ಇನ್ನೂ ಮುಂದುವರಿಯುತ್ತಿರುವವೆಂದೂ, ಫಾರ್ಮೋಸಾ ಮೇಲೆ ಚೀಣದ ಸಾರ್ವಭೌಮಾಧಿಕಾರ ಚಲಾಯಿಸುವುದನ್ನು ತಡೆಗಟ್ಟಲು ಅಮೆರಿಕವು ಈ ಮಾತುಕತೆಯನ್ನು ಒಂದು ನೆಪವಾಗಿಟ್ಟುಕೊಳ್ಳುವುದನ್ನು ಒಪ್ಪಲಾಗುವುದಿಲ್ಲವೆಂದೂ ಚೀಣವು ತಿಳಿಸಿದೆ.

ಪೂರ್ವ ಬಂಗಾಳದಿಂದ ಹಿಂದುಗಳ ವಲಸೆ ಬಗ್ಗೆ ಆತಂಕ

ಪೂರ್ವ ಪಾಕಿಸ್ತಾನದ ಮುಸ್ಲಿಮೇತರರು ವಲಸೆ ಬರಲು ರಹದಾರಿ ಪತ್ರಗಳನ್ನು ಕೇಳುತ್ತಿರುವುದು ವಿಪರೀತವಾಗಿರುವುದಕ್ಕಾಗಿ ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಆತಂಕವನ್ನು ವ್ಯಕ್ತಪಡಿಸಿರುತ್ತಾರೆ. ಕೇವಲ ಆರ್ಥಿಕ ದುಸ್ಥಿತಿಯಿಂದಲೇ ಹಿಂದುಗಳು ಅಲ್ಲಿಂದ ವಲಸೆ ಬರುತ್ತಿಲ್ಲವೆಂದೂ, ಅಧಿಕವಾದ ಪಕ್ಷಪಾತಕ್ಕೆ ಅವರನ್ನು ಗುರಿ ಮಾಡಿ ಅವರಲ್ಲಿ ಅಭದ್ರತೆಯನ್ನು ಹುಟ್ಟಿಸಲಾಗಿರುವುದೆಂದು ಭಾರತವು ಭಾವಿಸಿದೆ. ಪೂರ್ವ ಪಾಕಿಸ್ತಾನದ ಮುಸ್ಲಿಮೇತರ ಅಲ್ಪಸಂಖ್ಯಾತರ ಪರಿಸ್ಥಿತಿಯನ್ನು ಇನ್ನೂ ಹದಗೆಡಿಸುವುದಾಗಿ ಹೇಳಲಾಗಿದೆ. ಕಳೆದ ಅಕ್ಟೋಬರಿನಲ್ಲಿ ೧೫,೦೦೦ ರಹದಾರಿಗಳನ್ನು ಕೊಡಲಾಗಿತ್ತೆಂದೂ, ಮೂರನೇ ತಿಂಗಳು ಅದು ೧೯,೦೦೦ಕ್ಕೆ ಏರಿದುದಾಗಿಯೂ ಗೊತ್ತಾಗಿದೆ.

ಮನುಷ್ಯನನ್ನು ನುಂಗಿದ್ದ ಮರ

ಫ್ರಾನ್ಸಿನ ಒಂದು ಹಳ್ಳಿಯ ಕೆಲಸಗಾರ ರೋಜರ್ ಬಿಲ್ಲೂ ಎಂಬಾತನು ತನ್ನ ಸಹೋದರನೊಡನೆ ಮೊನ್ನೆ "ವಿಲ್ಲೋ" ಎಂಬ ದೊಡ್ಡ ಶಾಖೆಯ ಮರಗಳ ಗುತ್ತಿಯ ನಡುವೆ ಕೆಲಸ ಮಾಡುತ್ತಿದ್ದಾಗ ಇದ್ದಕ್ಕಿದ್ದಂತೆ ಅದೃಶ್ಯನಾದನೆಂದೂ, ಅದನ್ನು ಕಂಡು ಗಾಬರಿಗೊಂಡ ಅವನ ಸಹೋದರನು ಸುತ್ತಲೂ ನೋಡಿ ಕಡೆಗೆ ಒಂದು ಮರದೊಳಗೆ ಅವನು ಹುದುಗಿಕೊಂಡು ನರಳುತ್ತಿದ್ದುದನ್ನು ಪತ್ತೆ ಮಾಡಿದನೆಂದೂ, ಮರವನ್ನು ಕಡಿದು ಸಹೋದರನನ್ನು ಪಾರು ಮಾಡಲಾಯಿತೆಂದೂ ವರದಿಯಾಗಿದೆ.

ಪ್ರಜಾ ಸಮಾಜವಾದಿ ನಾಯಕ ತ್ರಿಲೋಕಿ ಸಿಂಗರ ಬಂಧನ

ರೇವಾ ಜಿಲ್ಲೆಯಿಂದ ಹೊರಕ್ಕೆ ಹೋಗಬೇಕೆಂದು ವಿಧಿಸಲಾಗಿರುವ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದ್ದುದಕ್ಕಾಗಿ ಭಾರತದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯದರ್ಶಿ ತ್ರಿಲೋಕಿ ಸಿಂಗರವರನ್ನು ನೆನ್ನೆ ಬಂಧಿಸಲಾಯಿತು. ಅಲ್ಲಿ ಆಜ್ಞೆ ವಿರೋಧವಾಗಿ ನಡೆಯುವ ಪ್ರದರ್ಶನದಲ್ಲಿ ಭಾಗವಹಿಸಲು ಅವರು ರೇವಾ ಜಿಲ್ಲೆಗೆ ಬಂದಿದ್ದರು.

ಲಕ್ಷ್ಮೀವಿಲಾಸ ಸನ್ನಿಧಾನದವರ ನಿಧನಕ್ಕಾಗಿ ಶೋಕ ಸಭೆಗಳು

ಮೈಸೂರು ೫

ಬೆಂಗಳೂರು ಪಾಂಚರಾತ್ರಾಗಮ ವಿದ್ಯಾಭಿವರ್ಧಿನೀ ಸಭೆ ಮತ್ತು ಶ್ರೀ ಪಾಂಚರಾತ್ರಾಗಮಿಕ ವಿದ್ಯಾರ್ಥಿ ಸಂಘದವರು ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಅಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯೊಂದನ್ನು ಮೊನ್ನೆ ನಡೆಸಿ, ಡವೇಜರ್ ಮಹಾರಾಣಿಯವರ ನಿಧನಕ್ಕಾಗಿ ಸಂತಾಪ ಸೂಚನೆ ಮಾಡಿದರು ದೇವತಾ ಪ್ರಾರ್ಥನೆಯನಂತರ ಶ್ರೀ ಎಸ್ ಆರ್ ಶ್ರೀನಿವಾಸಭಟ್ಟಾಚಾರ್ಯರು ದಿವಂಗತರ ಗುಣಗಾನ ಮಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ದಿವಂಗತ ಮಹಾರಾಣಿಯವರ ಜೀವನದ ಆದರ್ಶಗಳನ್ನು ವಿವರಿಸಿದರು ಅವರ ನಿಧನದಿಂದುಂಟಾದ ದುಃಖವನ್ನು ಸೈರಿಸಲು ಶ್ರೀಮನ್ಮಹಾರಾಜರಿಗೂ, ರಾಜಕುಟುಂಬಕ್ಕೂ ಮತ್ತು ಪ್ರಜೆಗಳಿಗೂ ಶಕ್ತಿಯನ್ನೂ ಮತ್ತು ದಿವಂಗತರ ಆತ್ಮಕ್ಕೆ ಶಾಂತಿಯನ್ನೂ ಭಗವಂತನು ಕರುಣಿಸಲೆಂದು ಪ್ರಾರ್ಥಿಸಿ, ೨ ನಿಮಿಷಗಳ ಕಾಲ ಮೌನವನ್ನಾಚರಿಸಲಾಯಿತು

ದಕ್ಷಿಣ ರೈಲ್ವೆ ನೌಕರರ ಸಂಘದ ಮೈಸೂರು ಶಾಖೆಯ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಶ್ರೀ ವಿ ವೆಂಕಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು, ಮೃತರ ಬಗ್ಗೆ ಸಂತಾಪವನ್ನು ಸೂಚಿಸಿ, ರಾಜಪ್ರಮುಖರಿಗೂ ಮತ್ತು ರಾಜಮನೆತನದವರಿಗೂ ಅನುತಾಪವನ್ನು ವ್ಯಕ್ತಪಡಿಸಿದರು

ಸದರ್ನ ರೈಲ್ವೆಯ ಮೆಕ್ಯಾನಿಕಲ್ ವರ್ಕ್‌ಷಾಪು ಮತ್ತು ವರ್ಕ್‌ಷಾಪಿನ ಫೆಡರೇಟೆಡ್ ಯೂನಿಯನ್ ಸಂಸ್ಥೆಗಳ ಜಂಟಿ ಸಭೆಯಲ್ಲೂ ಸಂತಾಪ ಸೂಚಿಸಲಾಯಿತು

ಹೊಲಿಯುವ ಅಂಗಡಿ ಆರಂಭ

ರಾಂಪೂರ್ ಟೈಲರ್ಸ್ ಎಂಬ ಹೆಸರಿನಲ್ಲಿ ಬಟ್ಟೆ ಹೊಲಿಯುವ ಅಂಗಡಿಯೊಂದನ್ನು ನ್ಯೂ ಸ್ಟ್ಯಾಚ್ಯು ಚೌಕದಲ್ಲಿ ಶ್ರೀ ಆರ್ ಎಸ್ ಶ್ರೀಧರ್‌ರವರು ಕಳೆದ ಗುರುವಾರ ತೆರೆದು ಇಷ್ಟಮಿತ್ರರನ್ನು ಉಪಾಹಾರದಿಂದ ಸತ್ಕರಿಸಿದರು

ಗೃಹ ಸಹಕಾರ ಸಂಘದ ನೂತನ ಡೈರೆಕ್ಟರುಗಳು

ಗೃಹ ಸಹಕಾರ ಸಂಘದ ಡೈರೆಕ್ಟರುಗಳ ಚುನಾವಣೆಯು ನೆನ್ನೆ ನಡೆದು ಕೆಳಗೆ ಕಂಡವರು ಆರಿಸಿ ಬಂದಿರುತ್ತಾರೆ - ಶ್ರೀಗಳಾದ ಹೆಚ್ ಕೆ ಕುಮಾರಸ್ವಾಮಿ, ಎ ಕೃಷ್ಣಮೂರ್ತಿರಾವ್, ಬಿ ವಿ ಕೃಷ್ಣಮೂರ್ತಿ, ಎಂ ಎಸ್ ನಾರಾಯಣರಾವ್, ಎಂ ಬಿ ಮಹದೇವಯ್ಯ, ವೇದಾಂತಂ ತಿಮ್ಮಿಗೆ, ಶೇಷಗಿರಿರಾವ್, ಕೆ ಸೀತಾರಾಮ್, ಡಾ। ಬಿ. ಜಿ. ದಾಸ್ ಎಂ ಆರ್ ಸಿ ಬಸಪ್ಪ, ಟಿ ಎಂ ಸುಬ್ಬರಾವ್, ಎಂ ಸಿ ಮಹದೇವಸ್ವಾಮಿ, ಬಿ ಆರ್ ನಾಯ್ಡು, ಜಿ ಜಿ ನಾರ್ದನನಾಯ್ಡು ಮತ್ತು ಎಂ ಎಂ ತಿಮ್ಮಯ್ಯನವರು

ಖ್ಯಾತಿ ಹೊಂದಿರುವ

ಕನ್ನಾನೂರ್ ಬನೀನುಗಳನ್ನು

ವಿಚಾರಿಸಿ

ದಿ ಮಿಷೋರಿ ಹೊಸೈರಿ ಫ್ಯಾಕ್ಟರಿ,

ಕನ್ನಾನೂರು

ಸೂಚನೆ - 27 ವರ್ಷಗಳಿಂದ ನೇಯ ಪಡೆದಿರುತ್ತೇವೆ ಈ ಬನೀನುಗಳ ಮೇಲೆ ನೀವು ಬನ್ನಿಯ ಚೀಟು ಗಳನ್ನು ಮಹಾಜನರು ಗಮನಿಸಬೇಕಾಗಿ ವಿನಂತಿ

ಮಹಾರಾಜರಿಗೆ ಇರಾನಿನ ಷಹಾರವರ ಬಹುಮಾನ

ಮೈಸೂರು ೫

ಇರಾನಿನ ಷಹಾರವರು ಮೈಸೂರು ರಾಜಪ್ರಮುಖರಿಗೆ ಉತ್ತಮವಾದ ಪರ್ಷಿಯಾ ಜಮಖಾನೆಯನ್ನೂ ಮತ್ತು ಕೆತ್ತನೆ ಕೆಲಸವುಳ್ಳ ದಂತದ ಕಟ್ಟುಹಾಕಿರುವ ತಮ್ಮ ಚಿತ್ರವನ್ನೂ ಬಹುಮಾನವಾಗಿ ಕೊಟ್ಟಿರುತ್ತಾರೆ ಸಂಸ್ಥಾನದ ಅರಣ್ಯ ಇಲಾಖಾಧಿಕಾರಿಗಳಾದ ಶ್ರೀ ಎಂ ಎ ಮುತ್ತಣ್ಣನವರು ತಮ್ಮ ಶಿಕಾರಿ ಕಾರ್ಯಕ್ರಮದ ಬಗ್ಗೆ ಮಾಡಿದ ಏರ್ಪಾಡಿಗಾಗಿ ಷಹಾರವರು ಅವರಿಗೆ ತಮ್ಮ ದೇಶದಲ್ಲಿ ತಯಾರಾದ ಬಂದೂಕವೊಂದನ್ನಿತ್ತಿರುವರು

ಬ್ಯಾಸ್ಕೆಟ್ ಬಾಲ್ ಆಖೈರು ಪಂದ್ಯ

ಬನುಮಯ್ಯ ಹೈಸ್ಕೂಲ್ ಮೈದಾನದಲ್ಲಿ ನೆನ್ನೆ ನಡೆದ ಶ್ರೀ ಪಾಂಡುರಂಗಶೆಟ್ಟಿ ಸ್ಮಾರಕ ಬ್ಯಾಸ್ಕೆಟ್ ಬಾಲ್ ಆಖೈರು ಪಂದ್ಯದಲ್ಲಿ ಕಲೀಗ್ಸ್ ಟೀಮಿನವರು ಫ್ರೆಂಡ್ಸ್ ಯೂನಿಯನ್ ಟೀಮನ್ನು ೪೧-೨೪ ಪಾಯಿಂಟುಗಳಿಂದ ಸೋಲಿಸಿ ಪಯೋನಿಯ ಪಾರಿತೋಷಕ ಕಪ್ಪನ್ನು ಗಳಿಸಿದರು ವಿಜಯಿಗಳ ಕಡೆ ರಾಜಾರಾಂ ವ್ ಮತ್ತು ರಂಗರಾಜ್‌ರವರು ೧೪ ಮತ್ತು ೧೧ ಪಾಯಿಂಟುಗಳನ್ನೂ ಸೋತವರ ಕಡೆ ಹೆಂಜಾರಪ್ಪನವರು ೯ ಪಾಯಿಂಟುಗಳನ್ನೂ ಮಾಡಿದರು

ಅರಮನೆ ವಾಹನಗಳಿಗೆ ಪೌರ ತೆರಿಗೆ ವಿನಾಯಿತಿ ಇಲ್ಲ

ಪೌರಸಭೆಯ ಮುಂದುವರಿದ ಅಧಿವೇಶನವು ಕಳೆದ ಶುಕ್ರವಾರ ನಡೆದು ಅರಮನೆಗೆ ಸೇರಿದ ವಾಹನಗಳು, ಪ್ರಾಣಿಗಳು ಮತ್ತು ಬ್ಯಾಂಡ್ ಕಂಪೆನಿಗೆ ತೆರಿಗೆ ವಿನಾಯಿತಿ ಕೊಡುವುದಕ್ಕಾಗುವುದಿಲ್ಲವೆಂದು ಆಡಳಿತ ಸಮಿತಿಯವರು ಮಾಡಿದ ಶಿಫಾರಸನ್ನು ಅಂಗೀಕರಿಸಿತು ಇಲವಾಲ ರಸ್ತೆ ಮತ್ತು ವೈಸರಾಯ್ ರಸ್ತೆಗಳು ಕೂಡುವ ಸರ್ಕಲ್ಲಿಗೆ ನಂಜರಾಜ ಬಹದ್ದೂರ್ ಸರ್ಕಲ್ ಎಂದು ಹೆಸರಿಡಲು ನಿರ್ಧರಿಸಲಾಯಿತು ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿ ೨ ನಿಮಿಷ ಮೌನವನ್ನು ಆಚರಿಸಲಾಯಿತು

ಕ್ರಿಕೆಟ್ ಪಂದ್ಯ

ನಗರದ ವಿಕ್ಟರಿ ಕ್ಲಬ್ಬಿನವರಿಗೂ ಎಂ ಪಿ ಸಿ ಟೀಮಿನವರಿಗೂ ಮೊನ್ನೆ ಕ್ರಿಕೆಟ್ ಪಂದ್ಯವು ನಡೆದು ವಿಕ್ಟರಿ ಕ್ಲಬ್ಬಿನವರು ೬ ವಿಕೆಟ್ಟುಗಳಿಂದ ಜಯಗಳಿಸಿದರು

ಹಾವು ಕಡಿತದಿಂದ ಪಾರು

ವಿದ್ಯಾರಣ್ಯಪುರದಲ್ಲಿರುವ ನಿವೃತ್ತ ಪೋಸ್ಟ್ ಮಾಸ್ಟರ್ ಶ್ರೀ ಡಿ ಕೆ ರಾಮಚಂದ್ರಅಯ್ಯರ್‌ರವರು ಮಂಡ್ಯ ತಾಲ್ಲೂಕು ಮಾಯನಪುರದ ಶ್ರೀ ಕಾಳಪ್ಪನವರ ಮಗ ರಾಮೇಗೌಡನಿಗೆ ಹಾವು ಕಡಿದುದಕ್ಕೆ ಮಂತ್ರ ಚಿಕಿತ್ಸೆ ನಡೆಸಿ ಗುಣಪಡಿಸಿರುವುದಾಗಿ ತಿಳಿದುಬಂದಿದೆ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು (Estd 1911)

ಆಹಾರ ಧಾನ್ಯಗಳ ಬೆಲೆಯಲ್ಲಿ ವಿಪರೀತ ಏರಿಕೆ

ಸರ್ಕಾರಕ್ಕೆ ಬಹಿರಂಗ ಪತ್ರ

ರಾಜಧಾನಿಯ ಶ್ರೀ ಎಂ ಸಿ ನರಸಿಂಹಯ್ಯನವರು ಸರ್ಕಾರಕ್ಕೆ ಬಹಿರಂಗ ಪತ್ರವೊಂದನ್ನು ಬರೆದು ಈ ರೀತಿ ತಿಳಿಸಿರುತ್ತಾರೆ - ಆಹಾರ ಧಾನ್ಯದ ಬೆಲೆಯು ಸುಗ್ಗಿ ಕಾಲದ ಬೆಲೆಗೆ ಮೂರರಷ್ಟು ಕೆಲವೇ ದಿನಗಳಲ್ಲಿ ಏರಿದೆ ಕೊಳ್ಳುವವರಿಗೆ ಇದರಿಂದ ಗಾಬರಿಯುಂಟಾಗಿ ಪರಿತಪಿಸುತ್ತಿದ್ದಾರೆ ಹೀಗಿದ್ದರೂ ಆಡಳಿತ ನಡೆಸುತ್ತಿರುವ ಸರ್ಕಾರದವರಾಗಲೀ ಪಕ್ಷಗಳಾಗಲೀ ಉದಾಸೀನದಿಂದಿರುವುದು ದೇಶ ಮತ್ತು ಪ್ರಜಾಹಿತ ದೃಷ್ಟಿಯಿಂದ ವಿಷಾದಕರ ಆಹಾರ ಪದಾರ್ಥಗಳ ಸಾಗಾಣಿಕೆ ಬ್ಯಾಂಕುಗಳು ವರ್ತಕರಿಗೆ ಕೊಡುವ ಸಾಲದ ಸೌಲಭ್ಯ ಇವುಗಳನ್ನು ರದ್ದುಗೊಳಿಸುವುದು ಅತ್ಯಗತ್ಯ ಧಾರಣೆಗಳನ್ನು ಕೂಡಲೇ ಸ್ಥಿಮಿತಕ್ಕೆ ತರಲು ಸರ್ಕಾರದವರು ಪ್ರಯತ್ನ ಪಡಬೇಕು ಬೆಳೆಯುವರ ವಿಷಯದಲ್ಲಿ ತೋರುತ್ತಿರುವ ಅಭಿಮಾನವನ್ನು ಕೊಳ್ಳುವವರ ಮೇಲೂ ಸರ್ಕಾರದವರು ಇಡುವುದಗತ್ಯ

ಐಶ್ವರ್ಯ ಮತ್ತು ವರಮಾನಗಳ ವ್ಯತ್ಯಾಸ ತಗ್ಗಿಸಲು ಕ್ರಮ

ವರಮಾನ ಮತ್ತು ಐಶ್ವರ್ಯಗಳಲ್ಲಿರುವ ಅಂತರಗಳನ್ನು ಕಡಿಮೆ ಮಾಡುವ ತತ್ವವನ್ನು ಭಾರತ ಸರ್ಕಾರದವರು ಅಂಗೀಕರಿಸಿರುವುದಾಗಿಯೂ, ಈ ಗುರಿಯನ್ನು ಸಾಧಿಸಲು ಕಾಲಕಾಲಕ್ಕೆ ಸೂಕ್ತ ಕ್ರಮವನ್ನು ಕೈಗೊಳ್ಳಲಾಗುವುದೆಂದೂ ಕೇಂದ್ರ ಹಣಕಾಸಿನ ಉಪ ಮಂತ್ರಿ ಶ್ರೀ ಬಿ ಆರ್ ಭಗತ್‌ರವರು ತಿಳಿಸಿದ್ದಾರೆ ಈ ಸಂಬಂಧವಾಗಿ ಈಗಾಗಲೇ ವೈಯಕ್ತಿಕ ಆದಾಯದ ಮೇಲೆ ತೆರಿಗೆಯನ್ನು ಹೆಚ್ಚಿಸಲಾಗಿದೆಯೆಂದೂ, ಈ ವರ್ಷವೂ ವರಮಾನ ಗುಂಪುಗಳ ತೆರಿಗೆಯನ್ನು ಹೆಚ್ಚಿಸಲಾಗುವುದೆಂದೂ ಅವರು ತಿಳಿಸಿರುವರು ಈಗಾಗಲೇ ಎಸ್ಟೇಟು ತೆರಿಗೆಯು ಜಾರಿಯಲ್ಲಿದೆಯೆಂದೂ, ವಿಮಾ ರಾಷ್ಟ್ರೀಕರಣವೂ ಸಹ ಇದರ ಅಂಗವಾಗಿರುವುದೆಂದೂ ಅವರು ಸೂಚಿಸಿದರು

ತೆರಿಗೆ ಬೀಳುವ ಎಣ್ಣೆಗಳು

ಕಳೆದ ಬುಧವಾರ ಲೋಕ ಸಭೆಯಲ್ಲಿ ಆಯವ್ಯಯ ಪಟ್ಟಿಯನ್ನು ಮಂಡಿಸುತ್ತಾ, ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಹಲವು ವಿಧದ ಎಣ್ಣೆಗಳ ಮೇಲೆ ಅಬ್ಕಾರಿ ತೆರಿಗೆಯನ್ನು ಹಾಕಲಾಗುವುದೆಂದು ಸೂಚಿಸಿದ್ದರಷ್ಟೆ ಈ ತೆರಿಗೆಯು ಹರಳೆಣ್ಣೆ, ಕಡ್ಲೆಕಾಯಿ ಎಣ್ಣೆ, ಅಗಸೆ ಎಣ್ಣೆ, ಕಾರ್ಡಿ ಎಣ್ಣೆ, ಸಾಸಿವೆ ಎಣ್ಣೆ, ಎಳ್ಳೆಣ್ಣೆ, ಕೊಬ್ಬರಿ ಎಣ್ಣೆಗಳ ಮೇಲೆ ಬೀಳುವುದು ಇದರಿಂದ ೫॥ ಕೋಟಿ ರೂ ವರಮಾನ ಬರಲಿರುವುದಾಗಿ ಗೊತ್ತಾಗಿದೆ

SREE GANESHA
TALKIES

From 6 3 56 For 2 Days

TIGHT SPOT

With Ginger Rogers, Edward G Robinson and Brian Keith

A Surprise Hit of the Year

— NEXT CHANGE —

The Caine Mutiny

(Technicolor)

ಮನೆ ಕ್ರಯಕ್ಕಿದೆ

1) ಮೈಸೂರು ಸೂಡಾ ರಸ್ತೆ ಅಂಗಡಿಗಳ ಸಮೀಪ ಇರುವ ಭಾರಿ ಮಹಡಿ ಮನೆ

2) 132 ಹಳ್ಳದಕೇರಿ

3) 2933/1 ಪರಸ್ಪತಿಪುರ. ಶಾರದ ಚಟ್ಟಿ.

4) 2787. ಒಂಟಿಕೊಪ್ಪಲು.

ವಿವರಗಳಿಗೆ —

ಜಯ ಅಂಡ್ ಕಂಪೆನಿ,

ಸ್ಥಿರ ಸ್ವತ್ತಿನ ವ್ಯವಹಾರದ ಏಜೆಂಟರು,

ಹಳೆ ಬ್ಯಾಂಕ್ ರಸ್ತೆ, ಮೈಸೂರು ಫೋನ್ 520

ಇಂಡೊನೇಷ್ಯಾ ಸರ್ಕಾರದ ರಾಜೀನಾಮೆ

ಇಂಡೊನೇಷ್ಯದ ಪ್ರಧಾನಿ ಬುರ್ಹಾನುದ್ದೀನ್ ಹರಹಪ್‌ರವರ ಮಂತ್ರಿಮಂಡಲವು ರಾಜೀನಾಮೆ ಕೊಟ್ಟಿದೆ ಅಲ್ಲಿನ ಪಾರ್ಲಿಮೆಂಟಿಗೆ ಗ... ಹಿಂದೆ ನಡೆದ ಪ್ರಥಮ ಮಹಾ ಚುನಾವಣೆ... ಎರಡು ಪಕ್ಷಗಳಿಗೆ ಸಮನಾಗಿ ೫೭ ಸ್ಥಾನ... ಲಭ್ಯವಾಗಿವೆ ಮಂತ್ರಿಮಂಡಲದ ರಾಜೀ... ಯನ್ನು ಅಧ್ಯಕ್ಷರು ಒಪ್ಪಿರುತ್ತಾರೆ ಆದರೆ ... ಕ್ಕೆ ಮುಂದುವರಿಯುವಂತೆ ಸೂಚಿಸಿರುವ...

ಸಂಬಳ ವಿಚಾರಣಾ ಸಮಿತಿಯ ಇತರ ಶಿಫಾರಸುಗಳು

ಸಂಸ್ಥಾನದ ಸರ್ಕಾರಿ ನೌಕರರುಗಳ... ಮತ್ತು ಪರಮಾವಧಿ ಸಂಬಳಗಳನ್ನು ಗು... ಡಿಸುವ ಬಗ್ಗೆ ಪರಿಶೀಲನಾ ಸಮಿತಿಯವ... ಡಿರುವ ಶಿಫಾರಸುಗಳು ಈ ರೀತಿಯವು... ಜಿಲ್ಲೆಗಳನ್ನೂ ತಾಲ್ಲೂಕುಗಳನ್ನೂ ದೊಡ್ಡ... ಡಿ ಒಟ್ಟು ವೆಚ್ಚವನ್ನು ತಗ್ಗಿಸಬೇಕು, ಅ... ಮತ್ತು ದೃಢಕಾಯರಾದ ನೌಕರ ಸ... ಯನ್ನು ಜಾಸ್ತಿ ಹೆಚ್ಚಿಸುವ ಔಚಿತ್ಯವನ್ನು... ತ್ತು ನಾನ್ ಗೆಜೆಟೆಡ್ ಅಧಿಕಾರಿಗಳ ಮ... ಪ್ರೌಢಶಾಲೆಗಳಲ್ಲಿ ವಿದ್ಯಾಶುಲ್ಕದಲ್ಲಿ ರಿಯಾ... ತಿ ಕೊಡುವ ವಿಷಯವನ್ನೂ ಪರಿಶೀಲಿಸಬೇ... ಸರ್ಕಾರದ ಎಲ್ಲಾ ಕೈಗಾರಿಕೆ ಮತ್ತು ವ್ಯಾ... ಸಂಸ್ಥೆಗಳಲ್ಲೂ ಒಂದೇ ವಿಧವಾದ ನಿಯಮ... ಯಿರಬೇಕು, ಸರ್ಕಾರಿ ಅಧಿಕಾರಿಗಳು ... ಆಡಳಿತಗಳನ್ನು ಪರಿಶೀಲಿಸಿ, ... ವಾ ಇನ್ನಾವುದೇ ಕೆಲಸಕ್ಕಾಗಿ ನೇಮಿಸಿರ... ಹವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇ...

ಬೆಂಗಳೂರು ರೇಡಿಯೊ ಶಾಖೆ ಕಾರ್ಯಕ್ರಮ

[illegible]

ನಿಮಗೆ ಈಗಲೇ ಸದವಕಾಶ!

★ ಅತ್ಯಂತ ಕಡಿಮೆ ಶುಲ್ಕದಲ್ಲಿ ... ಲಾಗುವುದು, ಪ್ರತ್ಯೇಕ ... ನಮ್ಮ ... ತಯಾರಿಗೆ ಅನುಕೂಲ ...

ಡಾ॥ ರಾಜಾರವರ ...

[illegible]

ರಾಜಾ ಮೆಡಿಕಲ್ ಹಾಲ್,

ಎಸ್ ನಂ 1 745 ... ರಸ್ತೆ, ಮೈ...

(ಮೈಸೂರು ಬ್ಯಾಂಕ್ ... 3 ನೇ ಕಟ್ಟಡ)

CITY TUTORIAL COLLEGE, V.V Market, Mysore

The Oldest & the Best Coaching Institution

S. S. L. C. CLASSES IN FULL SWING

Separate classes for Kannada & English media

Systematic work by efficient staff

Special attention to disc pline and order

Minimum fees and maximum benefit

For best guidance read C. T C PUBLICATIONS

Edited, Printed and Published by A R. Nagarajan at Sadhvi Press D Subbiah Road Mysore

For Best
Half-tone & Line
BLOCKS
Contact —
Sri Sharada Press,
Hanumantha Rao St
MYSORE

ಸಾಧ್ವಿ

ಸಂಪುಟ : ೮೪] SADHVI : TUESDAY 6-3-1956 ಮೈಸೂರು ಮಂಗಳವಾರ : ೬-೩-೧೯೫೬ [ಸಂಚಿಕೆ : ೮೯೬

ಕರ್ನಾಟಕ ಮತ್ತು ಕೇರಳಗಳ ಐಕ್ಯದ ಮಾತುಕತೆ ವಿಫಲ

ಕರ್ನಾಟಕ-ಕೇರಳ ಐಕ್ಯದ ಬಗ್ಗೆ ಕನ್ನಡಿಗರ ಮಾತುಕತೆ ವಿಫಲ

ಬೆಂಗಳೂರು ೬

ಕರ್ನಾಟಕ-ಕೇರಳಗಳ ಐಕ್ಯದ ವಿಷಯವಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಕರೆದಿದ್ದ ಕನ್ನಡಿಗರ ಪ್ರತಿನಿಧಿಗಳ ಸಭೆಯಲ್ಲಿ ನೆನ್ನೆ ಐಕ್ಯದ ವಿಷಯವಾಗಿ ಅನುಕೂಲ ಅಭಿಪ್ರಾಯ ಬರಲಿಲ್ಲವೆಂದು ವರದಿಯಾಗಿದೆ ಆಂಧ್ರ ಮತ್ತು ತಮಿಳುನಾಡುಗಳೊಡನೆ ಐಕ್ಯದ ವಿಷಯವೂ ಚರ್ಚಿಸಲ್ಪಟ್ಟಿತು ಮಾತುಕತೆಗಳಲ್ಲಿ ತೊಡಗಿದ್ದ ಮುಖ್ಯ ಮಂತ್ರಿ ಸಿ ಎಂ ಪೂಣಚ್ಚ, ಅಲ್ಲಿನ ಕಾಂಗ್ರೆಸ್ ಅಧ್ಯಕ್ಷ ಎ ಎಸ್ ಚಿನ್ನಪ್ಪ, ಮದ್ರಾಸ್ ಮಂತ್ರಿ ಎ ಬಿ ಶೆಟ್ಟಿ, ಹೈದರಾಬಾದಿನ ವೀರೇಂದ್ರ ಪಾಟೀಲ್ ಮತ್ತು ಶ್ರೀ ಎಸ್ ನಿಜಲಿಂಗಪ್ಪನವರು ಭಾಗವಹಿಸಿದ್ದರು ಶ್ರೀಗಳಾದ ಕೆ ಸಿ ರೆಡ್ಡಿ, ಬಿ ಎಂ ಪಾಟೀಲ್, ಡಿ ಪಿ. ಕರ್ಮಾರ್‌ಕರ್ ಮುಂತಾದವರು ಬಂದಿರಲಿಲ್ಲ

ಇಸ್ಕಂದರ್ ಮಿರ್ಜಾರವರು ಪಾಕಿಸ್ತಾನದ ಅಧ್ಯಕ್ಷರು

ಪಾಕಿಸ್ತಾನದ ಗೌರ್ನರ್ ಜನರಲ್ ಇಸ್ಕಂದರ್ ಮಿರ್ಜಾರವರನ್ನು ಅಲ್ಲಿನ ರಾಜ್ಯಾಂಗ ಸಭೆಯು ಪಾಕಿಸ್ತಾನದ ಅಧ್ಯಕ್ಷರಾಗಿ ನೆನ್ನೆ ಚುನಾಯಿಸಿತು ಸಭೆಗೆ ಪೂರ್ವ ಬಂಗಾಳದ ವಿರೋಧ ಪಕ್ಷ ಸ್ವತಂತ್ರ ಸದಸ್ಯರು ಬರಲಿಲ್ಲ ಈ ತಿಂಗಳ ೨೩ನೇ ತಾರೀಖು ಮಿರ್ಜಾರವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವರು ನೂತನ ರಾಜ್ಯಾಂಗದ ಪ್ರಕಾರ ನಡೆಯುವ ಮಹಾ ಚುನಾವಣೆಗಳನಂತರ ಹೊಸ ಅಧ್ಯಕ್ಷರು ಆರಿಸಬಡುವವರೆಗೂ ಮಿರ್ಜಾರವರು ಅಧಿಕಾರದಲ್ಲಿರುವರು

ಕರಾಚಿಯಲ್ಲಿ ಡಲೆಸ್ ಮತ್ತು ಸೆಲ್ವಿನ್ ಲಾಯ್ಡ್

ಅಮೆರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲೆಸ್‌ರವರು ನೆನ್ನೆ ಕರಾಚಿಗೆ ಆಗಮಿಸಿದರು ಅವರು ಗೌರ್ನರ್ ಜನರಲ್ ಇಸ್ಕಂದರ್ ಮಿರ್ಜಾ ರವರನ್ನು ಭೇಟಿ ಮಾಡಿದರು ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ನೆನ್ನೆ ದೆಹಲಿಯಿಂದ ಹೊರಟು ಕರಾಚಿಯನ್ನು ತಲುಪಿದರು ಇಂದು ಅಲ್ಲಿ ಆಗ್ನೇಯ ಏಷ್ಯಾ ರಕ್ಷಣಾ ಕೂಟದ ಸಮ್ಮೇಳನವು ಆರಂಭವಾಗುವುದು ಸದಸ್ಯ ರಾಷ್ಟ್ರಗಳ ಸ್ವಾತಂತ್ರ್ಯ ಮತ್ತು ಸ್ವತ್ರತೆಗೆ ಆಕ್ರಮಣದಿಂದ ಧಕ್ಕೆ ಬರದಂತೆ ನೋಡಿಕೊಳ್ಳಲು ಸೀಟೊ ಇದೆಯೆಂದು ಡಲೆಸರು ಹೇಳಿರುವರು

ಬೆಂಗಳೂರು-ತಿರುಪತಿ ಬಸ್ ದರ ಇಳಿತ

ಬೆಂಗಳೂರಿನಿಂದ ತಿರುಪತಿಗೆ ಹೋಗುವ ಬಸ್ ದರವನ್ನು ೬ ರೂ ೫ಂದ ೫। ರೂ ಗೆ ಇಳಿಸಲಾಗುತ್ತದೆಂದು ಹೇಳಲಾಗಿದೆ ಬೆಳಗಿನ ಬಸ್ಸಿನಲ್ಲಿ ಹೋಗುವವರಿಗೆ ಬೆಟ್ಟದ ಮೇಲಕ್ಕೆ ನೇರವಾಗಿ ಹೋಗಲು ಟಿಕೆಟ್ಟು ಕೊಡಲಾಗುವುದು, ಮಧ್ಯಾಹ್ನದಲ್ಲಿ ಹೋಗುವವರಿಗೆ ತಿರುಪತಿಯಲ್ಲಿ ರಾತ್ರಿ ಇರಲು ಒಂದು ಆಶ್ರಯ ಸ್ಥಾನವನ್ನು ನಿರ್ಮಿಸಲಾಗುವುದೆಂದೂ ಗೊತ್ತಾಗಿದೆ

ವಿಧಾನ ಪರಿಷತ್ತಿನ ಚುನಾವಣೆಗೆ ೯ ಮಂದಿ ಸ್ಪರ್ಧಿಗಳು

ಬೆಂಗಳೂರು ೬

ಸಂಸ್ಥಾನದ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಗಳು ಎಸ್ ಶಿವಪ್ಪ (ಪ್ರಜಾ ಸಮಾಜವಾದಿ), ಎಸ್ ವೀರಬಸಪ್ಪ ಎಂ ಶಂಕರಯ್ಯ ಮತ್ತು ಶ್ರೀಮತಿ ಎಂ ಜಿ ಅಕ್ಕಮ್ಮನವರ (ಕಾಂಗ್ರೆಸ್) ಸ್ಥಾನಗಳು ಖಾಲಿಯಾಗುವ ಸಂದರ್ಭದಲ್ಲಿ ಚುನಾವಣಾ ಸಂಗವಾಗಿ ನೆನ್ನೆ ಮಧ್ಯಾಹ್ನದವರೆಗೆ ನಾಮಪತ್ರಗಳನ್ನು ಸ್ವೀಕರಿಸಲು ಅವಧಿಯನ್ನು ಗೊತ್ತುಪಡಿಸಲಾಗಿತ್ತು ಶ್ರೀಮತಿ ವೀರಮ್ಮ ಸಿದ್ದಯ್ಯ, ಎಂ ಎಲ್ ಲಕ್ಷಮ್ಮ ಶ್ರೀಗಳಾದ ಟಿ ಸುಬ್ರಹ್ಮಣ್ಯ ಎಸ್ ಸಿ ಸೂರ್ಯನಾರಾಯಣಶೆಟ್ಟಿ ಮೈಸೂರಿನ ಕೆ ಎಂ ನಂಜುಡಪ್ಪ ಡಿ ಎಸ್ ಶಿವಪ್ಪ (ಕಾಂಗ್ರೆಸ್) ಶ್ರೀಗಳಾದ ಎಸ್ ಶಿವಪ್ಪ (ಸಮಾಜವಾದಿ) ಎಲ್ ಹಿ ಶೇಷಣ್ಣ (ಪ್ರಜಾ ಸಮಾಜವಾದಿ) ತಳಗೂರು ಹೊನ್ನಪ್ಪನವರು ನಾಮಕರಣ ಪತ್ರಗಳನ್ನು ಸಲ್ಲಿಸಿರುವರು ಚುನಾವಣೆಯು ಇದೇ ೨೬ನೇ ತಾರೀಖು ನಡೆಯುವುದು ಶ್ರೀ ಟಿ ಸುಬ್ರಹ್ಮಣ್ಯ ಸೂರ್ಯನಾರಾಯಣಶೆಟ್ಟಿ ಕೆ ಎಂ ನಂಜುಂಡಪ್ಪ ಮತ್ತು ಶ್ರೀಮತಿ ವೀರಮ್ಮ ಸಿದ್ದಯ್ಯನವರನ್ನು ಪ್ರದೇಶ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ಪಕ್ಷದ ಅಭ್ಯರ್ಥಿಗಳನ್ನಾಗಿ ಸೂಚಿಸಿದೆ ವಿಧಾನ ಸಭೆಯು ಚುನಾವಣಾ ಕ್ಷೇತ್ರವಾಗಿದೆ

ಆಯವ್ಯಯ ರಹಸ್ಯದ ಬಯಲಿನ ಬಗ್ಗೆ ದೇಶಮುಖ್ ರಾಜೀನಾಮೆ

೧,೦೦೦ ರೂ. ಗೆ ಪಟ್ಟಿಯ ಮಾರಾಟ

ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಆಯವ್ಯಯ ರಹಸ್ಯದ ಬಯಲಿನ ಸಂಬಂಧವಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿ ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುವುದಾಗಿ ವರದಿಯಾಗಿದೆ

ರಾಜ್ಯ ಪರಿಷತ್ತಿನಲ್ಲಿ ನೆನ್ನೆ ಅವರು ಮಾತನಾಡಿ ಕೇಂದ್ರ ಸರ್ಕಾರದ ರೆವಿನ್ಯೂ ಮತ್ತು ಸಾರ್ವಜನಿಕ ಮಂತ್ರಿ ಎಂ ಸಿ ಷ ರವರು ಬೊಂಬಾಯಿಯಲ್ಲಿ ಕಳೆದ ೨೯ನೇ ತಾರೀಖು ಇದ್ದಾಗ ಭಾಷಣದ ಟೈಪು ಮಾಡಿದ ಪ್ರತಿಯನ್ನು ಅಲ್ಲಿನ ಮುಖ್ಯ ಮಂತ್ರಿ ಮುರಾರ್ಜೀ ದೇಸಾಯಿಯವರಿಗೆ ಇತ್ತುದಾಗಿ ತಿಳಿಸಿದರು ಸಭಾ ಸದಸ್ಯ ಭೂಪೇಶ ಗುಪ್ತರವರು ಈ ವಿಷಯವನ್ನು ಪ್ರಸ್ತಾಪಿಸಿ, ಕಳೆದ ೨೬ನೇ ತಾರೀಖು ೧,೦೦೦ ರೂಗೂ, ೨೮ ರಂದು ೫೦೦ ರೂ ಗೂ, ೨೯ನೇ ತಾರೀಖು ಸಂಜೆ ೫ ಗಂಟೆಗೆ ೫ ರೂ ಗೂ ಆಯವ್ಯಯ ನಕಲನ್ನು ಮಾರಲಾಯಿತೆಂದು ತಿಳಿಸಿದರು ಪೋಲೀಸರು ತನಿಖೆ ನಡೆಸಿ ವರದಿ ಮಾಡಿದನಂತರ ಪಾರ್ಲಿಮೆಂಟು ಈ ಬಗ್ಗೆ ಸೂಕ್ತ ನಿರ್ಧಾರವನ್ನು ಕೈಗೊಳ್ಳಬಹುದೆಂದೂ ದೇಶಮುಖ್‌ರವರು ಹೇಳಿದರು

○ ಕರ್ನಾಟಕದ ಸುಪ್ರಸಿದ್ಧ ಕವಿಗಳಾದ ಶ್ರೀ ಡಿ ಆರ್ ಬೇಂದ್ರೆಯವರಿಗೆ ೬೦ ವರ್ಷ ತುಂಬಿತು ನೆನ್ನೆ ಸೊಲ್ಲಾಪುರದಲ್ಲಿ ಅವರಿಗೆ ೧೨೦೦ ರೂ ನಿಧಿಯನ್ನು ಸಮರ್ಪಿಸಲಾಯಿತು

ಡಾ॥ ಮೋದಿಯವರಿಂದ ಒಟ್ಟು ೮೩೦ ನೇತ್ರ ಶಸ್ತ್ರ ಚಿಕಿತ್ಸೆ

ಮೈಸೂರು ೬

ಡಾ॥ ಮೋದಿಯವರ ನೇತ್ರ ಶಿಬಿರದಲ್ಲಿ ಇದುವರೆಗೆ ಒಟ್ಟು ೮೩೦ ಮಂದಿಗೆ ನೇತ್ರ ಶಸ್ತ್ರ ಚಿಕಿತ್ಸೆಯು ಜರುಗಿರುತ್ತದೆ ಈ ದಿನ ಮೆಳ್ಳಗಣ್ಣು ಮತ್ತು ಕುರುಡುಗಣ್ಣುಗಳ ನೂತನ ಶಸ್ತ್ರ ಚಿಕಿತ್ಸೆಯು ನಡೆಯಿತು ಇದುವರೆಗೆ ಚಿಕಿತ್ಸೆ ಪಡೆದವರ ಪೈಕಿ ಜ್ವರ ತಲೆನೋವು ಮುಂತಾದ ಯಾವ ತೊಂದರೆ ಇಲ್ಲದೆ ಚಿಕಿತ್ಸೆಯು ಪೂರ್ಣ ಯಶಸ್ವಿಯಾಗಿರುತ್ತದೆ ಶಸ್ತ್ರ ಚಿಕಿತ್ಸೆ ಪಡೆದ ಸುಮಾರು ನೂರು ಜನರು ಈಗಾಗಲೇ ಗುಣಹೊಂದಿ ಮನೆಗೆ ತೆರಳಿರುವರು ಶಿಬಿರದಲ್ಲಿ ಇನ್ನೂ ಚಿಕಿತ್ಸೆ ಪಡೆಯುವವರು ಪೂರ್ಣ ಗುಣಹೊಂದುವವರೆಗೆ ಡಾ॥ ಮೋದಿಯವರು ಸುಮಾರು ೬-೧೦ ದಿನಗಳ ಕಾಲ ಇಲ್ಲೇ ಇರುವರು

ಇನ್ನು ಮುಂದೆ ಡಾ॥ ಮೋದಿಯವರು ಇಲ್ಲಿ ಶಸ್ತ್ರ ಚಿಕಿತ್ಸೆಯನ್ನು ನಡೆಸುವುದಿಲ್ಲ ಅವರು ಮಧ್ಯಾಹ್ನದ ವೇಳೆಯಲ್ಲಿ ನೇತ್ರ ಪರೀಕ್ಷೆ ನಡೆಸಿ ಚಿಕಿತ್ಸೆ ಬಗ್ಗೆ ಸಲಹೆಯೀಯುವರು

ಕೊಲೆ ಅಪಾದನೆಯಿಂದ ಖುಲಾಸೆ

ಜಿಲ್ಲಾ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ ಮುನಿನಂಜಯ್ಯನವರು, ಕೊಲೆ ಅಪಾದನೆಗೆ ಗುರಿಯಾಗಿದ್ದ ಪಿರಿಯಾಪಟ್ಟಣದ ನಿವಾಸಿ ಸಯ್ಯದ್ ಗುಲಾಬ್ ಅಹಮದ್ ಎಂಬಾತನನ್ನು ಸರಿಯಾದ ಸಾಕ್ಷ್ಯ ದೊರೆಯಲಿಲ್ಲವೆಂಬ ಕಾರಣದ ಮೇಲೆ ಖುಲಾಸೆ ಮಾಡಿರುತ್ತಾರೆ ಕಳೆದ ಜನವರಿ ೧೬ನೇ ತಾರೀಖು ರಾತ್ರಿ ಪಿರಿಯಾಪಟ್ಟಣದ ಆರೀನಹಳ್ಳಿಯ ಅಬ್ದುಲ್ ಖಾದರ್ ಮತ್ತು ಆತನ ಹೆಂಡತಿಯು ಪ್ರಯಾಣ ಮಾಡುತ್ತಿದ್ದಾಗ ಅಬ್ದುಲ್ ಸಾಬರನ್ನು ಅವನು ಕೊಂದುಹಾಕಿದ್ದನೆಂದು ಅಪಾದಿಸಲಾಗಿತ್ತು

ವಿಶ್ವಧಾಮದ ಮುಂದೆ ಆಯುರ್ವೇದ ವಿದ್ಯಾರ್ಥಿಗಳ ಪ್ರದರ್ಶನ

ರಾಜಧಾನಿಯ ಲ್ಯಾನ್ಸ್‌ಡೌನ್ ಬಜಾರಿನಲ್ಲಿರುವ ಅಶೋಕಾ ಫಾರ್ಮಸಿ ಮುಂದೆ ನೆನ್ನೆ ಇಲ್ಲಿನ ಆಯುರ್ವೇದ ಕಾಲೇಜಿನ ಹಲವು ವಿದ್ಯಾರ್ಥಿಗಳು ಪ್ರದರ್ಶನ ನಡೆಸಿದರು ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕೆಂಬ ಸೂಚನೆಯನ್ನು ಒಪ್ಪಬೇಕೆಂದು ಫಾರ್ಮಸಿಯ ಮಾಲೀಕರಾದ ಶ್ರೀ ಕೆ ಪಿ ಪುರಾಣಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದುದರ ಪ್ರತಿಭಟನಾರ್ಥವಾಗಿ ಪ್ರದರ್ಶನ ನಡೆಯಿತೆಂದು ಹೇಳಲಾಗಿದೆ ಶ್ರೀ ಪುರಾಣಿಕರನ್ನು ವಿದ್ಯಾರ್ಥಿಗಳು ಪ್ರಶ್ನೆ ಮಾಡಿದರೆಂದೂ, ಪೋಲೀಸರು ಅಷ್ಟರಲ್ಲಿ ಬಂದು ಅವರನ್ನು ಚದುರಿಸಿದರೆಂದೂ ಹೇಳಲಾಗಿದೆ

ಸಿಂಗ್ಮನ್ ರೀಯವರ ನಿರ್ಗಮನ

ದಕ್ಷಿಣ ಕೊರಿಯದ ಅಧ್ಯಕ್ಷ ಸ್ಥಾನಕ್ಕೆ ಮತ್ತೆ ತಾವು ಸ್ಪರ್ಧಿಸುವುದಿಲ್ಲವೆಂದು ಸಿಂಗ್ಮನ್ ರೀಯವರು ತಿಳಿಸುತ್ತಾರೆ ಅವರಿಗೆ ೮೦ ವರ್ಷವಾಗಿದೆ ತಾವು ನಿವೃತ್ತರಾಗುವುದೇ ಲೇಸೆಂದು ಅವರು ಭಾವಿಸಿರುವರು ಈಗ ಅವರು ಎರಡನೇ ಬಾರಿ ಅಧ್ಯಕ್ಷ ಪದವಿಯಲ್ಲಿರುವರು

ವಿಶಾಲಾಂಧ್ರದ ರಚನೆಗೆ ಕೇಂದ್ರದ ನಿರ್ಧಾರ

ತೆಲಂಗಾಣ ಮತ್ತು ಆಂಧ್ರಗಳನ್ನೊಳಗೊಂಡ ವಿಶಾಲಾಂಧ್ರ ಪ್ರಾಂತವನ್ನು ರಚಿಸಿ ಎರಡು ಪ್ರದೇಶಗಳ ಜನರ ಹಿತರಕ್ಷಣೆಗಾಗಿ ಎರಡು ಪ್ರಾದೇಶಿಕ ಸಮಿತಿಗಳನ್ನು ನೇಮಿಸುವಂತೆ ನಿರ್ಧರಿಸಲಾಗಿದೆಯೆಂದು ಪ್ರಧಾನಿ ನೆಹರೂರವರು ತಿಳಿಸಿರುವರು ಪ್ರಾದೇಶಿಕ ಸಮಿತಿಗಳು ಎರಡೂ ಪ್ರದೇಶಗಳ ಜನರ ವಿದ್ಯಾಭ್ಯಾಸ ಮತ್ತು ಅಭಿವೃದ್ಧಿಯ ಹಿತಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವವೆಂದೂ, ಸರ್ಕಾರಿ ನೌಕರಿಗಳ ವಿಷಯದಲ್ಲಿಯೂ ಜನರಿಗೆ ರಕ್ಷಣೆ ಕೊಡುವುದೆಂದೂ ಅವರು ಹೇಳಿರುವರು

ವಿಶಾಲಾಂಧ್ರ ವಾದಿಗಳೂ ಮತ್ತು ತೆಲಂಗಾಣ ಪ್ರತ್ಯೇಕ ವಾದಿಗಳೂ ಈ ನಿರ್ಧಾರವನ್ನು ಒಪ್ಪಿ ಅದನ್ನು ಕಾರ್ಯಗತ ಮಾಡಲು ಯತ್ನಿಸುತ್ತಿರುವರೆಂದೂ ನೆಹರೂರವರು ಹೇಳಿದರು

ಫಜಲೂಲ್ ಹಕ್‌ರವರು ಪೂರ್ವ ಪಾಕಿಸ್ತಾನದ ಗೌರ್ನರ್

ಪೂರ್ವ ಪಾಕಿಸ್ತಾನದ ಗೌರ್ನರರನ್ನಾಗಿ ಪಾಕಿಸ್ತಾನದ ಒಳನಾಡಿನ ಮಂತ್ರಿ ಫಜಲೂಲ್ ಹಕ್‌ರವರನ್ನು ನೇಮಿಸಲಾಗಿದೆ

೧೦ ರೂ. ನೋಟನ್ನು ಉಮೇದುವಾರ ನುಂಗಿದ ಪ್ರಕರಣ

ಹಾಸನದ ಪುರಸಭೆಗೆ ನೆನ್ನೆ ಚುನಾವಣೆ ನಡೆದಾಗ ಉಮೇದುವಾರನೊಬ್ಬನು ೧೦ ರೂ ನೋಟನ್ನು ನುಂಗಿದ ವಿಷಯವು ವರದಿಯಾಗಿದೆ ಒಬ್ಬ ಮತದಾರನು ಓಟು ಪತ್ರವನ್ನು ಪೆಟ್ಟಿಗೆಯಲ್ಲಿ ಹಾಕದೆ ಹೊರಗೆ ತಂದನೆಂದೂ, ಅದನ್ನು ೧೦ ರೂ ಕೊಟ್ಟು ಉಮೇದುವಾರನು ಖರೀದಿಗೆ ತೆಗೆದುಕೊಳ್ಳುತ್ತಿದ್ದಾಗ ಸಿಕ್ಕಿಬಿದ್ದನೆಂದೂ, ಆಗ ಉಮೇದುವಾರನು ನೋಟನ್ನು ನುಂಗಿದನೆಂದೂ ಹೇಳಲಾಗಿದೆ ಚುನಾವಣಾಧಿಕಾರಿಗಳು ಓಟು ಪತ್ರವನ್ನು ವಶಪಡಿಸಿಕೊಂಡಿರುವರು

ಸರಾಫ್ ವರ್ತಕರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಸರಾಫ್ ವರ್ತಕರ ಸಂಘದ ೧೬ನೇ ವಾರ್ಷಿಕೋತ್ಸವವು ನೆನ್ನೆ ದೊಡ್ಡ ಬಸವಯ್ಯನವರ ಅತಿಥಿ ಗೃಹದಲ್ಲಿ ನೆರವೇರಿತು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಕೆ ಆರ್ ತಿಮ್ಮರಾಯಶೆಟ್ಟರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆಯಾದನಂತರ, ಕಾರ್ಯದರ್ಶಿಯವರಾದ ಶ್ರೀ ರಾಧಾಕೃಷ್ಣಶೆಟ್ಟರು ಸ್ವಾಗತ ಭಾಷಣ ಮಾಡಿ, ವರದಿಯನ್ನು ಒಪ್ಪಿಸಿದರು ಅಧ್ಯಕ್ಷರು ಭಾಷಣ ಮಾಡಿ, ಸರಾಫ್ ವರ್ತಕರಿಗೆ ಉಪಯುಕ್ತವಾದ ಸಲಹೆಗಳನ್ನಿತ್ತರು ಶ್ರೀಮತಿ ಗಿರಿಜಮ್ಮ ಮತ್ತು ಪಾರ್ಟಿಯವರ ಸಂಗೀತವು ನಡೆಯಿತು ಮತ್ತೊಬ್ಬ ಕಾರ್ಯದರ್ಶಿ ಶ್ರೀ ಚೆನ್ನಪ್ಪಶೆಟ್ಟರು ವಂದನಾರ್ಪಣೆ ಮಾಡಿದನಂತರ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಯೋಗ್ಯತಾ ಪತ್ರಗಳ ವಿನಿಯೋಗ ಸಮಾರಂಭ

ಮೈಸೂರು ೬

ಪ್ರಸಕ್ತ ಇಲಾಖೆಯಲ್ಲಿ ವಯಸ್ಕರ ಶಿಕ್ಷಣ ಪಡೆದ ೫೫ ವಿದ್ಯಾರ್ಥಿಗಳಿಗೆ ಕಳೆದ ಬುಧವಾರ ಆರೋಗ್ಯಪುರದ ದೊಡ್ಡಮ್ಮಾಂಬ ದೇವಸ್ಥಾನದಲ್ಲಿ ಯೋಗ್ಯತಾ ಪತ್ರಗಳನ್ನು ಹಂಚುವ ಸಮಾರಂಭವು ನೆರವೇರಿಸಲಾಯಿತು ಮೈಸೂರು ಪ್ರಾಂತ್ಯಾಧಿಕಾರಿಗಳಾದ ಶ್ರೀ ಕೆ ಎಸ್ ಮುನಿಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು ಡಾ॥ ಎಸ್ ಸಿ ಬೀಗಿರಂಗಯ್ಯನವರು ವಿದ್ಯಾರ್ಥಿಗಳಿಗೆ ಯೋಗ್ಯತಾ ಪತ್ರಗಳನ್ನು ಹಂಚಿದರು

ಪುರಸಭಾ ಸದಸ್ಯರಾದ ಶ್ರೀ ಜಿ ಎಸ್ ರಾಮಕೃಷ್ಣಯ್ಯನವರು ವಯಸ್ಕರ ಶಿಕ್ಷಣ ಸಮಿತಿಯವರ ಸೇವೆಯನ್ನು ಪ್ರಶಂಸಿಸಿದರು ಸ್ಥಳೀಯ ವೈದ್ಯಾಧಿಕಾರಿಗಳಾದ ಡಾ॥ ರಾಮರವರು ಆರೋಗ್ಯದ ಬಗ್ಗೆ ಸೂಕ್ತ ಸಲಹೆಗಳನ್ನಿತ್ತರು ಶ್ರೀ ಕೆ ಸಿದ್ದಯ್ಯನವರ ಭಾಷಣ ಮತ್ತು ವಿದ್ಯಾರ್ಥಿಗಳಿಂದ ಭಜನೆ ಮಾಡಿದನಂತರ ಸೂಪರ್‌ವೈಸರ್ ಶ್ರೀ ಲಿಂಗಪ್ಪನವರು ವರದಿಯನ್ನು ಒಪ್ಪಿಸಿದರು

ಅಧ್ಯಕ್ಷರ ಭಾಷಣಾನಂತರ ನಗರ ವಯಸ್ಕರ ಶಿಕ್ಷಣ ಸಮಿತಿಯ ವ್ಯವಸ್ಥಾಪಕ ಶ್ರೀ ಕೆ ವಿ ಮುನಿಸ್ವಾಮಿಯವರಿಂದ ವಂದನಾರ್ಪಣೆಯಾದ ಮೇಲೆ ಸಮಾರಂಭವು ರಾಷ್ಟ್ರಗೀತೆಯೊಡನೆ ಮುಕ್ತಾಯವಾಯಿತು

ಉ ಪ ನ ಯ ನ

ವಿರುಮಕೂಡಲು ಅಗಸ್ತ್ಯೇಶ್ವರ ದೇವಾಲಯದ ಪಾರುಪತ್ತೇಗಾರರಾದ ಶ್ರೀ ಟಿ ವಿ ನಟರಾಜ ಶಾಸ್ತ್ರಿಗಳವರು ತಮ್ಮ ಕುಮಾರ ಚಿ॥ ಟಿ ಎನ್ ಶ್ರೀನಿವಾಸಶಾಸ್ತ್ರಿಗೆ ಕಳೆದ ಗುರುವಾರ ತಲಕಾಡಿನಲ್ಲಿ ಬ್ರಹ್ಮೋಪದೇಶವನ್ನು ನೆರವೇರಿಸಿದರು

ದೇವಾಲಯದ ಗುದ್ದಲಿ ಪೂಜೆ

ನಗರದ ಹೊಸ ಬನ್ನಿಮಂಟಪದ ರಸ್ತೆಯಲ್ಲಿ ಶ್ರೀ ವೀರಾಂಜನೇಯಸ್ವಾಮಿ ದೇವಾಲಯದ ಗುದ್ದಲಿ ಪೂಜೆಯನ್ನು ನಗರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚೆನ್ನಯ್ಯನವರು ನೆರವೇರಿಸಿದರು ಶ್ರೀ ಕೆ ಪುಟ್ಟಸ್ವಾಮಿಯವರು ಭಾಷಣ ಮಾಡಿ ದೇವಸ್ಥಾನದ ಜೀರ್ಣೋದ್ಧಾರಕ್ಕಾಗಿ ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರು ನೀಡಿದ್ದ ಧನವನ್ನು ವಿವರಿಸಿದರು ಶ್ರೀ ಎಸ್ ನಿಜಲಿಂಗಪ್ಪನವರೂ ಅಧ್ಯಕ್ಷರೂ ಭಾಷಣ ಮಾಡಿ ಜನರಲ್ಲಿ ದೈವಭಕ್ತಿಯು ಹೆಚ್ಚಬೇಕೆಂದು ತಿಳಿಸಿದರು ದೇವಸ್ಥಾನದ ಭಕ್ತಮಂಡಲಿಯ ಕಾರ್ಯದರ್ಶಿ ಶ್ರೀ ಎಂ ಎಲ್ ಶಿವಲಿಂಗಯ್ಯನವರು ಹಲವು ಬೇಡಿಕೆಗಳನ್ನು ಇಟ್ಟು ದೇವಾಲಯದ ಜೀರ್ಣೋದ್ಧಾರಕ್ಕೆ ಹೆಚ್ಚಿನ ಸಹಾಯವನ್ನು ಕೋರಿದರು

ತೋಟಗಾರಿಕೆಯಲ್ಲಿ ಉಚಿತ ಶಿಕ್ಷಣ ತರಗತಿ

ಫಲಪುಷ್ಪಗಳನ್ನು ಬೆಳೆಯುವ ವಿಧಾನದಲ್ಲಿ ತರಬೇತನ್ನು ಕೊಡುವ ತರಗತಿಯು ಇದೇ ೧೮ನೇ ತಾರೀಕು ಭಾನುವಾರದಿಂದ ಆರಂಭವಾಗುವುದೆಂದೂ, ಶಿಕ್ಷಣಾರ್ಥಿಗಳು ಅಂದು ಬೆಳಗ್ಗೆ ೭-೩೦ ಗಂಟೆಗೆ ನಗರದಲ್ಲಿರುವ ಸರ್ಕಾರಿ ಉದ್ಯಾನವನಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟರ ಕಛೇರಿಗೆ ಬರುವಂತೆಯೂ ತಿಳಿಸಲಾಗಿದೆ

ದಿನಕ್ಕೆ ೪೬ ಪೌಂಡು ಹಾಲು ಕೊಡುವ ಎಮ್ಮೆ

ಅಂಬಾಲ ಮಿಲಿಟರಿ ಫಾರಮ್ಮಿನ ಒಂದು ಎಮ್ಮೆಯು ದಿನಕ್ಕೆ ೪೬ ಪೌಂಡು ೧೪ ಔನ್ಸ್ ಹಾಲನ್ನು ಕೊಡುತ್ತಿದೆ ಅದನ್ನು ನಾಗಪುರದಲ್ಲಿ ನಡೆದ ಪಶು ಪ್ರದರ್ಶನಕ್ಕೆ ಕಳಿಸಲಾಗಿತ್ತು

○ ಶಾಂತಿ ಸಾಗರದಲ್ಲಿ ಅಮೆರಿಕದ ಟ್ರಸ್ಟ್‌ಪ್ರದೇಶದಲ್ಲಿರುವ ಹಲವು ದ್ವೀಪಗಳಲ್ಲಿ ನಡೆಸಲು ಉದ್ದೇಶಿಸಿರುವ ಜಲಜನಕ ಬಾಂಬಿನ ಪರೀಕ್ಷೆಯು ವಿರುದ್ಧವಾಗಿ ಭಾರತವು ವಿಶ್ವ ನ್ಯಾಯಾಲಯದ ನಿರ್ಧಾರವನ್ನು ಅಪೇಕ್ಷಿಸಿ ಕೋರ್ಟಿಗೆ ಮನವಿ ಸಲ್ಲಿಸಲು ಆಲೋಚಿಸುತ್ತಿರುವುದಾಗಿ ತಿಳಿದುಬಂದಿದೆ

ಪ್ರಜಾರಂಗದ ವಾರ್ಷಿಕೋತ್ಸವ

ಮೈಸೂರು ೬

ನಗರದಲ್ಲಿ ಕಳೆದ ವರ್ಷ ಸ್ಥಾಪಿತವಾದ ಪ್ರಜಾರಂಗ ಸಂಸ್ಥೆಯ ವಾರ್ಷಿಕೋತ್ಸವವು ಕಳೆದ ಗುರುವಾರ ಇಂದ್ರ ಭವನದಲ್ಲಿ ನೆರವೇರಿತು ವಕೀಲರಾದ ಶ್ರೀ ಎಸ್ ಕೆ ಅನಂತಶೆಟ್ಟರು ಅಧ್ಯಕ್ಷತೆ ವಹಿಸಿದ್ದರು

ಸಂಸ್ಥಾನ ಪುನರ್ವಿಂಗಡಣಾ ಸಮಿತಿಯ ವರದಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿ ಸಮಿತಿಯ ಶಿಫಾರಸುಗಳನ್ನು ಭಾರತ ಸರ್ಕಾರದವರು ಜಾರಿಗೆ ತರಬೇಕೆಂದೂ, ಉತ್ತರ ದಕ್ಷಿಣ ಪ್ರದೇಶಗಳ ಐಕ್ಯ ಇರುವ ವ್ಯಾಮೋಹಕ್ಕೆ ಭಾರತ ಸರ್ಕಾರದವರು ಬೆಂಬಲ ನೀಡಬಾರದೆಂದೂ, ನಿರ್ಣಯವನ್ನು ಅಂಗೀಕರಿಸಲಾಯಿತು ಸ್ವತಂತ್ರ ಭಾರತದಲ್ಲಿ ಅರ್ಹತೆಯ ಮೇಲೆಯೇ ಸರ್ಕಾರಿ ನೌಕರಿಗಳನ್ನು ಕೊಡಬೇಕೆಂದೂ, ಕೋಮುವಾರು ಭಾವನೆಗೆ ಎಡೆಯಕೊಡಬಾರದೆಂದೂ ಕೋಮುವಾರು ಭಾವನೆಯಿಂದ ಆಗುವ ನೇಮಕಗಳು ಲಂಚಗುಳಿತನ ಮತ್ತು ದಕ್ಷತೆಯ ಅಭಾವಕ್ಕೆ ಕಾರಣವಾಗುವುವೆಂದೂ ಸೂಚಿಸಲಾಯಿತು ಪ್ರಥಮ ಪಂಚ ವಾರ್ಷಿಕ ಯೋಜನೆಯಲ್ಲಿ ನಿರುದ್ಯೋಗ ಸಮಸ್ಯೆಯು ಸರಿಯಾಗಿ ಬಿಡಿಸಲ್ಪಟ್ಟಿಲ್ಲವೆಂದೂ, ದ್ವಿತೀಯ ಯೋಜನೆಯಲ್ಲಿ ಈ ಬಗ್ಗೆ ಹೆಚ್ಚಿನ ಉತ್ಸುಕತೆ ತೋರಬೇಕೆಂದೂ ಕೋರಲಾಯಿತು ಪ್ರಜಾರಂಗದ ಚಟುವಟಿಕೆಗಳಿಗಾಗಿ ನಿಧಿ ಕೂಡಿಸಲು ನಿರ್ಧರಿಸಲಾಯಿತು ಶ್ರೀಗಳಾದ ಜಿ ಸ್ವಾಮಿದಾಸ್ ಮತ್ತು ಸಿ ಆರ್ ಕೃಷ್ಣರಾಯರು ಭಾಷಣ ಮಾಡಿದರು

ಕ್ಯಾಲೆಂಡರ್ ಸ್ವೀಕಾರ

ನರಸಿಂಹರಾಜ ಮೊಹಲ್ಲಾ ಕೆಸರೆಯ ೨೨ ನೆಂ ಮನೆಯಲ್ಲಿರುವ ಶಕ್ತಿ ಪ್ರಸ್ ಏಜನ್ಸೀಸ್‌ರವರು ಕಳುಹಿಸಿರುವ ನೂತನ ವರ್ಷದ ಕ್ಯಾಲೆಂಡರನ್ನು ಅವರಿಂದ ಸ್ವೀಕರಿಸಿದ್ದೇವೆ

ಭಾವಿಯಲ್ಲಿ ೨,೦೦೦ ಅಂಚೆ ಕಾಗದಗಳು

ಕೊಪ್ಪಳದ ರೈಲ್ವೆ ನಿಲ್ದಾಣದ ಪೋಸ್ಟಾಫೀಸ್ ಹತ್ತಿರ ಇರುವ ಭಾವಿಯೊಂದರಲ್ಲಿ ಸಿಂಡಿ ಕಟ್ಟಿ ಬಿಸಾಡಿದ್ದ ೨ ಸಾವಿರ ಅಂಚೆ ಕಾಗದಗಳು ಪತ್ತೆಯಾಗಿವೆ ಪೋಲೀಸರು ತನಿಖೆ ನಡೆಸುತ್ತಿರುವರು ಈ ಸಂಬಂಧದಲ್ಲಿ ಒಬ್ಬ ಅಂಚೆ ನೌಕರನನ್ನು ಸಸ್ಪೆಂಡ್ ಮಾಡಲಾಗಿದೆ ಕಳೆದ ಎರಡು ವಾರಗಳಿಂದಲೂ ಅಲ್ಲಿ ಅಂಚೆ ಬಟವಾಡೆ ಸರಿಯಾಗಿ ಆಗುತ್ತಿರಲಿಲ್ಲವೆಂದು ಹೇಳಲಾಗಿದೆ

ಶಸ್ತ್ರ ಸನ್ಯಾಸದ ಬಗ್ಗೆ ಬ್ರಿಟನ್ ಮತ್ತು ಭಾರತಗಳ ಜಂಟಿ ಸೂತ್ರ ?

ಪ್ರಧಾನಿ ನೆಹರೂರವರೊಡನೆ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ಮೊನ್ನೆಯೂ ೩ ಗಂಟೆ ಕಾಲ ಸಂಭಾಷಣೆ ನಡೆಸಿದರು ಶಸ್ತ್ರ ಸನ್ಯಾಸದ ವಿಷಯವನ್ನು ಕುರಿತು ಮಾತುಕತೆ ನಡೆಯಿತೆಂದೂ ಶಸ್ತ್ರಾಸ್ತ್ರಗಳ ಮೇಲೆ ಅಂತರ ರಾಷ್ಟ್ರೀಯ ಹತೋಟಿ ಹೊಂದುವ ಬಗ್ಗೆ ಅಮೆರಿಕ ಮತ್ತು ರಷ್ಯಗಳು ಒಪ್ಪಬಲ್ಲ ವಾಸ್ತವಿಕ ಸೂತ್ರವನ್ನು ಕಂಡುಹಿಡಿಯಲು ಭಾರತ ಮತ್ತು ಬ್ರಿಟನ್ನುಗಳು ಪ್ರಯತ್ನಿಸಬಹುದೆಂದೂ ವರದಿಯಾಗಿದೆ

ಮೈಸೂರು ಪೇಟೆ ಧಾರಣೆ

ಕಡಲೆಕಾಯಿ	೧೫ ೩ ೦	೨೫ ೦ ೦
ಹರಳುಬೀಜ	೩೮ ೦ ೦	೪೨ ೬ ೦
ಮುಚ್ಚೆಳ್ಳು	೩೩ ೦ ೦	೪೩ ೧೪ ೦
ಹೊಂಗೆಬೀಜ	೧೮ ೧೦ ೦	೨೩ ೦ ೦
ರಾಗಿ	೨೫ ೦ ೦	೨೭ ೩ ೦
ಕಡಲೆ	೩೭ ೦ ೦	೩೯ ೧೦ ೦
ಹೆಸರು	೪೯ ೧೩ ೦	೫೧ ೦ ೦
ಹುರುಳಿ	೨೫ ೬ ೦	೫೦ ೧೨ ೦
ಅವರೆ	೩೮ ೪ ೦	೩೮ ೧೦ ೦
ಧನಿಯ	೨೫ ೧೨ ೦	೨೬ ೦ ೦
ಸಿಂಗಾಬೀಜ	೪೫ ೪ ೦	
ಕುಂಬಳಬೀಜ	೩ ೧೦ ೦	
ಸೀಗೆಕಾಯಿ	೬ ೦ ೦	೬ ೯ ೦
ಹುಣಸೆಹಣ್ಣು	೪ ೦ ೦	೬ ೧೦ ೦
ಮೆಣಸಿನಕಾಯಿ	೯ ೦ ೦	೨೩ ೪ ೦
ತೆಂಗಿನಕಾಯಿ ೧೦೦೦	೧೩೦ ೪ ೦	೧೫೦ ೦ ೦

ಪವೇಜರ್ ಮಹಾರಾಣಿಯವರ ಅಂತ್ಯಯಾತ್ರೆಯ ಚಲನಚಿತ್ರ

ಮೈಸೂರು ೬

ಡವೇಜರ್ ಮಹಾರಾಣಿ ಲಕ್ಷ್ಮೀವಿಲಾಸ ಸನ್ನಿಧಾನದವರ ಅಂತ್ಯ ಯಾತ್ರೆಯು ಕಳೆದ ಶನಿವಾರ ನಡೆಯುತ್ತಿದ್ದಾಗ ಅದರ ಫಿಲಂ ಅನ್ನು ಪರ್ಷಿಯದ ಚಿತ್ರಗ್ರಾಹಕರು ತೆಗೆದುಕೊಂಡರು ಅವರು ಇರಾನಿನ ಸರ್ಕಾರದವರೊಡನೆ ಆಗಮಿಸಿದರು ಡವೇಜರ್ ಮಹಾರಾಣಿಯವರ ಅಸ್ಥಿಯನ್ನು ನಂಜನಗೂಡು ಶ್ರೀರಂಗಪಟ್ಟಣ, ಟಿ ನರಸೀಪುರ ಮತ್ತು ಯಡತೊರೆಗಳಲ್ಲಿ ಸಂಚಯನ ಮಾಡಲಾಯಿತು ಪ್ರಯಾಗದ ತ್ರಿವೇಣೀ ಸಂಗಮದಲ್ಲಿ ೧೦ನೇ ದಿನದೊಳಗೆ ಸಂಚಯನ ಮಾಡಲಾಗುವುದು

ಹೆಂಡತಿಯನ್ನು ಪಡೆಯಲು ಮಾವನಮನೆ ಮುಂದೆ ಉಪವಾಸ

ಮಾವನಿಂದ ಬರಬೇಕಾದ ೫,೦೦೦ ರೂ ಕೊಡುವಂತೆಯೂ ಮತ್ತು ತನ್ನ ಹೆಂಡತಿಯನ್ನು ವಾಪಸು ಕಳುಹಿಸುವಂತೆಯೂ ಅಹಮದಾಬಾದಿನಲ್ಲಿ ಒಬ್ಬ ಅಳಿಯನು ಮಾವನ ಮನೆ ಮುಂದೆ ಉಪವಾಸವನ್ನಾರಂಭಿಸಿದ್ದಾನೆ ತನ್ನ ತಂದೆಯು ಕೊಡಬೇಕಾದ ಹಣವನ್ನು ಕೇಳದಂತೆ ಎಷ್ಟು ಒತ್ತಾಯಪಡಿಸಿದರೂ ಗಂಡನು ಕೇಳದೆ ಇದ್ದುದರಿಂದ ಹೆಂಡತಿಯು ಪ್ರತಿಭಟನೆ ಸೂಚಿಸಲು ಗಂಡನ ಮನೆಯನ್ನು ಬಿಟ್ಟು ತಂದೆ ಬಳಿಗೆ ಹೋದಳೆಂದು ಹೇಳಲಾಗಿದೆ ಹೆಂಡತಿಯನ್ನು ವಾಪಸು ಕರೆತರಲು ಗಂಡನು ಮಾಡಿದ ಇತರ ಪ್ರಯತ್ನಗಳು ವಿಫಲವಾದುವು

ಚೀಣಾದಲ್ಲಿ ಜಪಾನ್ ಮಾದರಿ ಭತ್ತ

ಜಪಾನ್ ಮಾದರಿಯಲ್ಲಿ ಭತ್ತ ಬೆಳೆಯುವ ವಿಧಾನವನ್ನು ಚೀಣಾವು ಭಾರತದಿಂದ ಅಭ್ಯಾಸ ಮಾಡಲಿರುವುದಾಗಿ ಗೊತ್ತಾಗಿದೆ ಇದೇ ಆಗಸ್ಟಿನಲ್ಲಿ ಈ ಸಂಬಂಧವಾಗಿ ಭಾರತಕ್ಕೆ ಚೀಣಾದ ನಿಯೋಗವೊಂದು ಬರಲಿದೆ ೧೯೫೫-೫೬ನೇ ಸಾಲಿನಲ್ಲಿ ಭಾರತದಲ್ಲಿ ೧೫ ಲಕ್ಷ ಎಕರೆ ಜಮೀನಿನಲ್ಲಿ ಜಪಾನ್ ಮಾದರಿಯಲ್ಲಿ ಭತ್ತವನ್ನು ಬೆಳೆಯಲಾಗಿತ್ತು

ಚಂದಕವಾಡಿ ದನಗಳ ಪ್ರದರ್ಶನದಲ್ಲಿ ಸಚಿವರಿಂದ ಬಹುಮಾನ ವಿನಿಯೋಗ

ಚಾಮರಾಜನಗರ ತಾಲ್ಲೂಕು ಚಂದಕವಾಡಿಯಲ್ಲಿ ಇದೇ ೯ನೇ ತಾರೀಕು ಸಂಜೆ ೫ ಗಂಟೆಗೆ ದನಗಳ ಪ್ರದರ್ಶನದ ಅಂಗವಾಗಿ ಬಹುಮಾನ ವಿನಿಯೋಗ ಸಮಾರಂಭವನ್ನು ಕೈಗಾರಿಕಾ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ನೆರವೇರಿಸುವರು

SREE GAYATHRI TALKIES
From 6-3-56 For 2 days
R K O s
THE AMERICANO
A Technicolour Picture
Starring Glenn Ford & Ursula Thiess
— NEXT CHANGE —
LONG JOHN SILVER
(Cinemascope-Technicolor)

ಬಾಗ್ದಾದ್ ಒಪ್ಪಂದದ ಬಗ್ಗೆ ಸೆಲ್ವಿನ್ ಲಾಯ್ಡ್‌ರವರ ವಿವರಣೆ

ದೆಹಲಿಯಲ್ಲಿ ಮೊನ್ನೆ ವಿಶ್ವ ವಿಚಾರಗಳ ಪರಿಷತ್ತಿನ ಮಂಡಲದಲ್ಲಿ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ಮಾತನಾಡುತ್ತ ಬಾಗ್ದಾದ್ ಒಪ್ಪಂದದ ದೃಷ್ಟಿಯು [illegible] ಕಡೆಗೆ ಇರುವುದೆಂದೂ, ದಕ್ಷಿಣಕ್ಕಿಲ್ಲವೆಂದೂ [illegible] ಸಿದರು ಬಾಗ್ದಾದ್ ಮತ್ತು ನಾಟೊ ಒಪ್ಪಂದಗಳು ವಿಶ್ವ ಸಂಸ್ಥೆಯ ಪ್ರಣಾಳಿಕೆಯಿಂದ [illegible] ಕರಿಸಲ್ಪಟ್ಟಿರುವುವೆಂದೂ, ಅವು ರಾಜಕೀಯ [illegible] ನ್ನಗೆ ಪಡೆದಿವೆಯೆಂದೂ ತಿಳಿಸಿದರು ಒಪ್ಪಂದಗಳ ಬಗ್ಗೆ ಭಾರತ ಮತ್ತು ಬ್ರಿಟನ್ನುಗಳ [illegible] ಯಲ್ಲಿ ವ್ಯತ್ಯಾಸವಿದ್ದರೂ, ಅವು ವಿಪರೀತ [illegible] ಡುವಂತಹವಲ್ಲವೆಂದೂ ಅವರು ಸೂಚಿಸಿದರು

ಗೋವಾ ಪ್ರಶ್ನೆಯು ವಿವಾದಾತ್ಮಕ [illegible] ಸಮಸ್ಯೆಯೆಂದೂ ಅದನ್ನು ಸಂಬಂಧಪಟ್ಟ [illegible] ದು ನೇರ ಸಂಧಾನದ ಮೂಲಕ ಪರಿಹರಿಸಿಕೊಳ್ಳಬಹುದೆಂದೂ ಅವರು ನುಡಿದರು

ಹರಿಹರದಲ್ಲಿ ಬೆಂಕಿ ಅಪಘಾತದಿಂದ ೨ ಲಕ್ಷ ರೂ. ನಷ್ಟ

ಹರಿಹರದಲ್ಲಿ ನೆನ್ನೆ ಭಾರಿ ಬೆಂಕಿ ಪ್ರಮಾದವುಂಟಾಗಿ ೨೫೦ ಮನೆಗಳು ಸುಟ್ಟು ೨ ಲಕ್ಷ [illegible] ಆಸ್ತಿ ನಷ್ಟವಾಯಿತೆಂದು ವರದಿಯಾಗಿದೆ [illegible] ರ ಧಾನ್ಯ, ಹುಲ್ಲುಬಣವೆ, ಜಾನುವಾರುಗಳು [illegible] ಸ್ಟಿಹೋದವು ಹುಲ್ಲುಮೆದೆಯೊಂದಕ್ಕೆ [illegible] ಬಿದ್ದುದೇ ಪ್ರಮಾದಕ್ಕೆ ಕಾರಣವಾಯಿತು [illegible] ರು ಮೃತಪಟ್ಟ ಬಗ್ಗೆ ವರದಿಯಿಲ್ಲ [illegible] ಬೆಂಗಳೂರು, ಹಾವೇರಿ ಮತ್ತು ಹೊಸಪೇಟೆಗಳಿಂದ ಅಗ್ನಿಶಾಮಕ ದಳವನ್ನು ಅಲ್ಲಿಗೆ ರವಾನಿಸಲಾಯಿತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಕೊಳಲು ವಾದನ ಮತ್ತು [illegible] ಯಮುನಾ ಮತ್ತು ಶಾರದ ವೀಣಾ ವಾದನ [illegible] ವಳೆ ೬ ೪೦ ಹಿಂದಿ ಪಾಠ ಮಧ್ಯಾಹ್ನ [illegible] ಗಣೇಶ ಲಕ್ಷ್ಮಣ ಸಂಗೀತ [illegible] ಗಾನಮಂಜರಿ [illegible] ಕೊಳಲು ವಾದನ [illegible] ರಾಯಚೂರ್ [illegible] ಪ್ರತಿಧ್ವನಿಗಳು [illegible] ಸಂಜೆ ೫ ೪೦ ಮತ್ತು ೮ ಎಂ ಪುಟ್ಟರಾಜು [illegible] ರ [illegible] ಗೀತಾವಳಿ [illegible] ೪೦ ಭಕ್ತಿಗೀತೆ [illegible] ರೈತರಿಗೆ ಕಾರ್ಯಕ್ರಮ [illegible] ಡಿ ಎಸ್ ರಾಜಯ್ಯಂಗಾರ್-ಸಂಗೀತ

THE VIJAYA TELEGRAPH INSTITUTE
604 Narayana Sastry Road
MYSORE
(Affiliated to the Phonetic Commercial Institute Trichur)
Recognised by the Govt
Candidates will be trained in Telegraphy, Asst Station Masters Course Theory & practical work Non Commercial Radio Telegraphy Expert training will be given For prospectus apply with As 4 stamps to the manager
N B Special concession for [illegible] & Scheduled castes Evening classes will be conducted for employees



ಸ್ವಲ್ಪ ಬಂಡವಾಳದಲ್ಲಿ ಹೆಚ್ಚು ಲಾಭ ಪಡೆಯಿರಿ
ಉಗಾಡಿಗೆ ಹೊಸದಾಗಿ ಬಳಕೆಗೆ ಸಿದ್ಧವಾಗಿವೆ
ರೀಟಾ
ಹೊಲಿಯುವ ಯಂತ್ರಗಳು
★
ವಿವರಗಳಿಗೆ ಕೆಳಗೆ ಬರೆಯಿರಿ
ಪಟ್ಟು ಬ್ರದರ್ಸ್
ಟೌನ್‌ಹಾಲ್ ಎದುರು, ಮೈಸೂರು

Edited, Printed and Published by A.R. Nagarajan at Sadhvi Press D Subbiah Road Mysore

ಟೆಲಿಫೋನ್ ನಂ. 792

For Best
Half-tone & Line
BLOCKS
Contact —
Sri Sharada Press,
Hanumantha Rao St.
MYSORE

ಲಗ್ನದ ಜವಳಿ
ಗೌ॥ ಸಿಲ್ಕ್ ಸೀರೆಗಳು
M.V. ಭೋಜಯ್ಯ
ಮೈಸೂರು : ಫೋನ್ 446

ಸಂಪುಟ . ೮೪] SADHVI : WEDNESDAY 7-3-1956 ಮೈಸೂರು ಬುಧವಾರ : ೭-೩-೧೯೫೬ [ಸಂಚಿಕೆ : ೮೯೬

ಕಾಶ್ಮೀರದ ಬಗ್ಗೆ ಸೀಟೋವಿನಲ್ಲಿ ಪಾಕಿಸ್ತಾನದ ಒತ್ತಾಯ

ಕಾಲೇಜು ಶಿಕ್ಷಣಕ್ಕೆ ಮುಂಚೆ ೧ ವರ್ಷದ ತರಗತಿ

ವಿಶ್ವವಿದ್ಯಾಲಯ ಕೌನ್ಸಿಲಿಗೆ ಸಮಿತಿಯ ಶಿಫಾರಸು

ಮೈಸೂರು ೭

ವಿಶ್ವವಿದ್ಯಾಲಯ ವ್ಯಾಸಂಗದ ತರಗತಿಗಳ ವ್ಯವಸ್ಥೆ ಮಾಡಲು ಸೂಕ್ತ ಶಿಫಾರಸು ಮಾಡುವಂತೆ ವಿಶ್ವವಿದ್ಯಾಲಯ ಕೌನ್ಸಿಲಿನವರು ನೇಮಿಸಿರುವ ಸಮಿತಿಯೊಂದು ಕಾಲೇಜು ಶಿಕ್ಷಣ ಪ್ರಾರಂಭಕ್ಕೆ ಮುಂಚಿತವಾಗಿ ೧ ವರ್ಷದ ಪ್ರಿ ಯೂನಿವರ್ಸಿಟಿ ತರಗತಿಯನ್ನು ಏರ್ಪಡಿಸುವಂತೆ ಸಲಹೆ ಮಾಡಿರುವರೆಂದು ವರದಿಯಾಗಿದೆ

ಪ್ರಾಥಮಿಕ ಘಟ್ಟದಲ್ಲಿ ೮ ವರ್ಷ, ಮಾಧ್ಯಮಿಕದಲ್ಲಿ ೪ ಮತ್ತು ಬಿ ಎ, ಬಿ ಎಸ್ ಸಿ ಗಳಲ್ಲಿ ೩ ವರ್ಷದ ವ್ಯಾಸಂಗ ವಿಧಾನವನ್ನು ಸಮಿತಿಯು ಸೂಚಿಸಿದೆ ಪ್ರಿ ಯೂನಿವರ್ಸಿಟಿ ತರಗತಿಯ ಮೇಲ್ವಿಚಾರಣೆಯನ್ನು ಸಂಸ್ಥಾನದ ವಿದ್ಯಾ ಇಲಾಖೆಗೆ ಒಪ್ಪಿಸಲಾಗುವುದೆಂದೂ ಅದು ಹೈಯರ್ ಸೆಕೆಂಡರಿ ತರಗತಿಯೆಂದು ಪರಿಗಣಿಸಲ್ಪಡುವುದೆಂದೂ ತಿಳಿದುಬಂದಿದೆ

ವೈದ್ಯ ಮತ್ತು ಇಂಜನಿಯರಿಂಗ್ ತರಗತಿಗಳಿಗೆ ಸೇರುವ ಮುಂಚೆ ೧ ವರ್ಷ ಪ್ರಿ ಪ್ರೊಫೆಶನಲ್ ತರಗತಿಯನ್ನೂ ಸಹ ಏರ್ಪಡಿಸಬೇಕೆಂದು ಸಲಹೆ ಮಾಡಲಾಗಿದೆ

ಸಮಿತಿಯವರು ಪ್ರಿ ಯೂನಿವರ್ಸಿಟಿ ಮತ್ತು ೩ ವರ್ಷದ ಪದವಿ ತರಗತಿಗಳ ವ್ಯಾಸಂಗ ಮತ್ತು ಪರೀಕ್ಷೆ ವಿಧಾನ ಕ್ರಮವನ್ನು ಸಿದ್ಧಗೊಳಿಸುತ್ತಿರುವರೆಂದು ತಿಳಿದುಬಂದಿದೆ. ಖಚಿತವಾಗಿ ಹೇಳಲಾಗಿದೆ ಬರುವ ವರ್ಷದಿಂದ ಈ ಹೊಸ ವ್ಯವಸ್ಥೆಯು ಜಾರಿಗೆ ಬರಲಿರುವದೆಂದು ನಿರೀಕ್ಷಿಸಲಾಗಿದೆ

ಈ ವರ್ಷ ಕನ್ನಡ ಮಾಧ್ಯಮದಲ್ಲಿ ಜೂನಿಯರ್ ಇಂಟರ್ ಶಿಕ್ಷಣ

ಇದೇ ಸಾಲಿನಲ್ಲಿ ಜೂನಿಯರ್ ಇಂಟರ್ ತರಗತಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ನೀಡುವಂತೆ ಕನ್ನಡ ಮಾಧ್ಯಮ ಸಮಿತಿಯವರು ಶಿಫಾರಸು ಮಾಡಿರುತ್ತಾರೆ. ಭಾಷಾ ಪಾಠಗಳನ್ನು ಬಿಟ್ಟು ಮಿಕ್ಕೆಲ್ಲ ವಿಷಯಗಳನ್ನೂ ಕನ್ನಡದಲ್ಲೇ ಬೋಧಿಸಲಾಗುವುದೆಂದು ಗೊತ್ತಾಗಿದೆ

೧ ಕೋಟಿ ರೂ. ವೆಚ್ಚದಲ್ಲಿ ಕೇಂದ್ರ ಆಹಾರ ಸಂಸ್ಥೆಯ ವಿಸ್ತರಣೆ

ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದ ಕಾರ್ಯ ಚಟುವಟಿಕೆಗಳನ್ನು ದ್ವಿತೀಯ ಯೋಜನೆಯ ಅಂಗವಾಗಿ ೧ ಕೋಟಿ ರೂ ವೆಚ್ಚದಿಂದ ವಿಸ್ತರಿಸಲಾಗುವುದೆಂದು ಗೊತ್ತಾಗಿದೆ ಆಹಾರದ ವಿಶ್ಲೇಷಣೆ ಮಾಡುವುದು, ಪ್ರಾಣಿಜ ಆಹಾರ ಪದಾರ್ಥಗಳನ್ನು ಶೇಖರಿಸುವ ಬಗ್ಗೆ ಪರೀಕ್ಷೆ ಮಾಡುವುದು ಇವೇ ಮುಂತಾದ ಕಾರ್ಯಕ್ರಮಗಳನ್ನು ನಡೆಸಲಾಗುವುದು

ಮೈಸೂರು ಉತ್ತರ ರೇಂಜು ಪೊಲೀಸು ಠಾಣೆಯ ವರ್ಗ

ಮೈಸೂರಿಗೆ ತಾಲ್ಲೂಕು ಕಛೇರಿ ಬಳಿ ಇದ್ದ ಮೈಸೂರು ಉತ್ತರ ರೇಂಜು ಪೊಲೀಸು ಠಾಣೆಯನ್ನು ಹಿನಕಲ್ ಗ್ರಾಮಕ್ಕೆ ವರ್ಗಾಯಿಸಲಾಗಿದೆ ಹೊಸ ಠಾಣೆಯ ಆರಂಭೋತ್ಸವವನ್ನು ಈ ದಿವಸ ಸಂಸ್ಥಾನದ ಐ. ಜಿ ಪಿ ಶ್ರೀ ಬಿ ಪ್ರಕಾಶ ಅರಸಿನವರು ನೆರವೇರಿಸಿದರು

ಅಕ್ರಮ ಕೂಟ ಮತ್ತು ದೊಂಬಿಗಾಗಿ ೬ ಜನರಿಗೆ ಶಿಕ್ಷೆ

೩೧ ಜನರ ಖುಲಾಸೆ, ಸೆಷನ್ಸ್ ನ್ಯಾಯಾಧೀಶರ ತೀರ್ಪು

ಮೈಸೂರು ೭

ಚಾಮರಾಜನಗರದ ತಾಲ್ಲೂಕು ಛತ್ರದ ಹೊಸೂರು ಗ್ರಾಮದ ಚಿಕ್ಕತಾಳಪ್ಪ ಕಂಬಿ ಸುಬ್ಬಪ್ಪ ಮತ್ತು ಇತರ ೩೪ ಜನರು ಅದೇ ಊರಿನ ಮಾಜಿ ಪಟೇಲ್ ಮಾದಪ್ಪ ಎಂಬುವರನ್ನು ಕಳೆದ ೫ನೇ ಜುಲೈನಲ್ಲಿ ದೊಣ್ಣೆಗಳಿಂದ ಹೊಡೆದು ಕೊಂದರೆಂದು ಪೊಲೀಸರು ತಂದಿದ್ದ ಮೊಕದ್ದಮೆಯಲ್ಲಿ ನೆನ್ನೆ ಇಲ್ಲಿನ ಸೆಷನ್ಸ್ ನ್ಯಾಯಾಧೀಶ ಶ್ರೀ ಎಂ ಮುನಿಸ್ವಾಮಯ್ಯನವರು ತೀರ್ಪಿತ್ತು ಚಿಕ್ಕತಾಳಪ್ಪ ಪುಟ್ಟನಂಜಪ್ಪ ರಂಗ, ಮಾದಪ್ಪ ಮಹದೇವಯ್ಯ, ೧೧ನಂಜಮ್ಮನ ಮಾದಪ್ಪ, ಇವರಿಗೆ ದೊಂಬಿ ಅಕ್ರಮ ಕೂಟಕ್ಕಾಗಿ ತಲಾ ೬ ತಿಂಗಳ ಸಾದಾ ಸಜಾ ಮತ್ತು ೧೧೦ ರೂ ದಂಡ, ತಪ್ಪಿದರೆ ಇನ್ನೆರಡು ತಿಂಗಳ ಸಜಾವನ್ನು ವಿಧಿಸಿರುವರು ಉಳಿದ ೩೧ ಜನರನ್ನು ಖುಲಾಸೆ ಮಾಡಲಾಯಿತು ಖುಲಾಸೆಯಾದವರಲ್ಲಿ ಒಬ್ಬನು ಈಗಾಗಲೇ ಮೃತಪಟ್ಟಿರುವನು ಪೊಲೀಸರು ಒಟ್ಟು ೩೭ ಜನರ ಮೇಲೆ ಮೊಕದ್ದಮೆ ಹೂಡಿದ್ದರು ನಂಜನಗೂಡು ಸ್ಪೆಷಲ್ ಮ್ಯಾಜಿಸ್ಟ್ರೇಟರು ೧೦ ಜನರನ್ನು ಖುಲಾಸೆ ಮಾಡಿದ್ದರು

ಆಪಾದಿತರ ಪರ ನಂಜನಗೂಡಿನ ಶ್ರೀ ಎಸ್ ನಾರಾಯಣರಾವ್, ಬ್ಯಾರಿಸ್ಟರ್ ಶ್ರೀ ಶ್ರೀಕಂಠಯ್ಯ ಮತ್ತು ಟಿ ತಿಮ್ಮೇಗೌಡರೂ, ಸರ್ಕಾರದ ಪರ ಶ್ರೀ ಜಿ ಶಂಕರಶೆಟ್ಟರೂ ವಕಾಲತ್ತು ವಹಿಸಿದ್ದರು

ನಗರದಲ್ಲಿ ಕಳ್ಳತನಗಳು

ಚಾಮುಂಡಿಪುರದಲ್ಲಿ ಶ್ರೀ ಸಂದಾರಾಂಸಿಂಗ್ ಎಂಬುವರ ಮನೆಯಲ್ಲಿ ನೆನ್ನೆ ಬೀಗಮುರಿದು ೬೧೦ ರೂ ಬೆಲೆಯ ಚಿನ್ನಬೆಳ್ಳಿ ಸಾಮಾನುಗಳನ್ನು ಅಪಹರಿಸಲಾಗಿದೆ ಅದೇ ಮೊಹಲ್ಲೆಯ ವಕೀಲರಾದ ಶ್ರೀ ಕೆ ಕೆ ದಾಸ್‌ರವರ ಮನೆಯಲ್ಲಿ ದೇವರಾಜ್ ಎಂಬುವನು ಬಟ್ಟೆ ಮುಂತಾದವನ್ನು ಕದಿಯುತ್ತಿದ್ದಾಗ ಲಕ್ಷ್ಮೀಪುರಂ ಪೊಲೀಸರು ಬಂಧಿಸಿರುತ್ತಾರೆ

ದಾವಣಗೆರೆ ಗಿರಣಿ ಬೆಂಕಿಯಿಂದ ೧। ಲಕ್ಷ ರೂ. ಹತ್ತಿ ನಾಶ

ದಾವಣಗೆರೆಯ ಶ್ರೀ ಗಣೇಶ ಹತ್ತಿ ಗಿರಣಿಯ ಗೋಡೌನಿನಲ್ಲಿ ಬೆಂಕಿಯುಂಟಾಗಿ ೧। ಲಕ್ಷ ರೂ ಬೆಲೆಯಷ್ಟು ಹತ್ತಿಯು ನಾಶವಾಗಿರುವುದೆಂದು ವರದಿಯಾಗಿದೆ ಬೆಂಗಳೂರಿನಿಂದ ಹರಿಹರಕ್ಕೆ ರವಾನಿಸಿದ ಅಗ್ನಿ ಶಾಮಕ ಯಂತ್ರಗಳನ್ನು ದಾವಣಗೆರೆಗೆ ಕಳುಹಲಾಯಿತು ಬೆಂಕಿಯನ್ನಾರಿಸಲು ೫ ಸಾವಿರ ಕಾರ್ಮಿಕರೂ, ಸಾರ್ವಜನಿಕರೂ ನೆರವು ನೀಡಿದರು ಕಟ್ಟಡಕ್ಕೆ ಹಾನಿಯಾಗಿಲ್ಲ ಒಟ್ಟು ೧। ಲಕ್ಷ ರೂ ನಷ್ಟವಾಗಿದೆ ಬೆಂಕಿಯ ಕಾರಣವು ತಿಳಿದುಬಂದಿಲ್ಲ ಹರಿಹರದಲ್ಲಿ ಮೊನ್ನೆ ಆದ ಅಗ್ನಿ ಪ್ರಮಾದವನ್ನು ಹತೋಟಿಗೆ ತರಲಾಗಿದೆ

ಔದ್ಯೋಗಿಕ ಕಾಲೇಜುಗಳಲ್ಲಿ ಸ್ಥಾನಗಳ ಹಂಚಿಕೆ ನಿಗದಿ

ಬೆಂಗಳೂರು ೭

ಔದ್ಯೋಗಿಕ ಕಾಲೇಜುಗಳಲ್ಲಿ ಸ್ಥಾನಗಳ ಹಂಚಿಕೆಯನ್ನು ನಿಗದಿ ಮಾಡಿ ಸರ್ಕಾರದವರು ಸೂಚನೆಯೊಂದನ್ನು ಹೊರಡಿಸಿರುತ್ತಾರೆ ಅದರ ಪ್ರಕಾರ ನಿಮ್ನವರ್ಗ ಮತ್ತು ಪಟ್ಟಿ ಮಾಡಿದ ಜನರಿಗೆ ಶೇ ೩೦ ಹಿಂದುಳಿದವರಿಗೆ ೪೫ ಮತ್ತು ಇತರರಿಗೆ ೩೫ ಸ್ಥಾನ ದೊರೆಯುವುವು ಹಿಂದುಳಿದವರಿಗೂ ಮತ್ತು ಇತರರಿಗೂ ಸಮನಾಗಿ ಶೇ ೫೦ ರಂತೆ ಸ್ಥಾನಗಳ ಹಂಚಿಕೆಯಾಗಬೇಕೆಂದು ವಿಶ್ವವಿದ್ಯಾಲಯದವರು ಶಿಫಾರಸು ಮಾಡಿದರು

ಆಗ್ನೇಯ ಏಷ್ಯಾ ಸಮ್ಮೇಳನದ ಆರಂಭ

ವಿದೇಶಾಂಗ ಮಂತ್ರಿಗಳ ಭಾಷಣ

ಕರಾಚಿಯಲ್ಲಿ ನೆನ್ನೆ ಆಗ್ನೇಯ ಏಷ್ಯಾ ರಾಷ್ಟ್ರಗಳ ಕೂಟದ ೩ ದಿನಗಳ ಅಧಿವೇಶನವು ಆರಂಭವಾಯಿತು ಪಾಕಿಸ್ತಾನದ ವಿದೇಶಾಂಗ ಮಂತ್ರಿ ಹಮೀದ್ ಉಲ್ ಹಕ್ ಚೌಧುರಿಯವರು ಅಧ್ಯಕ್ಷತೆ ವಹಿಸಿದ್ದರು ಪಾಕಿಸ್ತಾನದ ಪ್ರಧಾನಿ ಚೌಧರಿ ಮಹಮದ್ ಅಲಿಯವರು ಪ್ರಾರಂಭ ಭಾಷಣ ಮಾಡಿದರು

ಅಮೆರಿಕದ ವಿದೇಶಾಂಗ ಮಂತ್ರಿ ಡಲೆಸ್‌ರವರೂ, ಬ್ರಿಟಿಷ್ ಮಂತ್ರಿ ಸೆಲ್ವಿನ್‌ಲಾಯ್ಡ್‌ರವರೂ ಮಾತನಾಡಿ ಸೀಟೋವಿನ ರಕ್ಷಣಾ ಸ್ವಭಾವದ ಬಗ್ಗೆ ಕಮ್ಯೂನಿಸ್ಟ್ ರಾಷ್ಟ್ರಗಳು ನಡೆಸುತ್ತಿರುವ ಅಪಪ್ರಚಾರವನ್ನು ಖಂಡಿಸಿದರು ೮ ಜನ ವಿದೇಶಾಂಗ ಮಂತ್ರಿಗಳು ಭಾಷಣ ಮಾಡಿ ಕಮ್ಯೂನಿಸ್ಟ್ ಭಾವನೆಯು ಯಾವ ರೂಪದಲ್ಲೇ ಇರಲಿ ಅದನ್ನು ದೃಢವಾಗಿ ವಿರೋಧಿಸಬೇಕೆಂದು ಸೂಚಿಸಿದರು.

ಪಿ. ಟಿ. ಸಿ. ರಾಷ್ಟ್ರೀಕರಣದಿಂದ ಕೆಲಸಗಾರರ ಖೋತಾ ಇಲ್ಲ

ಸ್ವಂ ಸು. ಫೋ॥] ಬೆಂಗಳೂರು ೭

ಸದ್ಯದಲ್ಲೇ ಸರ್ಕಾರದವರು ಪಿ. ಟಿ. ಸಿ ಕಂಪನಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದಕ್ಕೆ ಒಬ್ಬ ಡೈರೆಕ್ಟರನ್ನಾಗಲೀ, ಜನರಲ್ ಮ್ಯಾನೇಜರನ್ನಾಗಲೀ ನೇಮಿಸಲಿರುವರು ಕಂಪನಿ ಆಡಳಿತ ವ್ಯವಸ್ಥೆಯು ಈಗ ಹೇಗಿರುವುದೋ ಹಾಗೆಯೇ ತೆಗೆದುಕೊಳ್ಳಲಾಗುವುದೆಂದೂ, ಯಾವ ಕೆಲಸಗಾರರನ್ನೂ ಖೋತಾ ಮಾಡುವುದಿಲ್ಲವೆಂದೂ ತಿಳಿದುಬಂದಿದೆ

LATEST NEWS

ಮೆಡಿಕಲ್ ಸ್ಕೂಲಿನ ರದ್ದು

ಈ ದಿನ ಸರ್ಕಾರದ ಆಜ್ಞೆ

ಸ್ವಂ ಸು. ಫೋ॥] ಬೆಂಗಳೂರು ೭

ಸರ್ಕಾರದವರು ಈ ದಿನ ಆಜ್ಞೆಯೊಂದನ್ನು ಹೊರಡಿಸಿ, ಇಲ್ಲಿನ ಮೆಡಿಕಲ್ ಸ್ಕೂಲನ್ನು ರದ್ದು ಮಾಡುವಂತೆ ಸೂಚಿಸಿರುತ್ತಾರೆ ವೈದ್ಯಕೀಯ ಶಿಕ್ಷಣವನ್ನು ಅಖಿಲ ಭಾರತ ಮಟ್ಟಕ್ಕೆ ಸರಿಹೊಂದಿಸುವ ದೃಷ್ಟಿಯಿಂದ ಈ ಆಜ್ಞೆಯಾಗಿದೆ ಬರುವ ತಿಂಗಳು ೧ನೇ ತಾ॥ ನಿಂದ ಶಾಲೆಗೆ ಪ್ರವೇಶಗಳನ್ನು ಸ್ವೀಕರಿಸುವುದಿಲ್ಲ

ಕೊಲೆ ಆಪಾದಿತನಿಗೆ ೭ ವರ್ಷ ಸಜಾ

ಮೈಸೂರು ೭

ಗುಂಡ್ಲುಪೇಟೆ ತಾಲ್ಲೂಕು ಕಿರಿಕಾಂಚಿಯ ವ್ಯಾತ ಉರುಫ್ ವೆಂಕಟ ಎಂಬುವನು ಕಳೆದ ಆಗಸ್ಟ್ ೧೪ನೇ ತಾರೀಖು ಅದೇ ಗ್ರಾಮದ ಕೃಷ್ಣ ಎಂಬುವನನ್ನು ಒದೆದು, ಮಚ್ಚಿಯಿಂದ ಹೊಡೆದು ಕೊಲೆ ಮಾಡಿದನೆಂದ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತನು ತಪ್ಪಿತಸ್ಥನೆಂದು ಸಾಬೀತಾಗಿ ಅವನಿಗೆ ೭ ವರ್ಷ ಕಠಿಣ ಸಜಾ ವಿಧಿಸಲಾಯಿತು

ಕಾಶ್ಮೀರದಲ್ಲಿ ಜನಮತಗಣನೆಗೆ ಬೆಂಬಲಕ್ಕಾಗಿ ಯಾಚನೆ

ಸೀಟೊ ರಾಷ್ಟ್ರಗಳ ಮುಂದೆ ಪಾಕಿಸ್ತಾನದ ಮನವಿ

ಕರಾಚಿಯಲ್ಲಿ ಸೇರಿರುವ ಆಗ್ನೇಯ ಏಷ್ಯಾ ಒಪ್ಪಂದ ರಾಷ್ಟ್ರಗಳ ಕೂಟದ ರಹಸ್ಯ ಸಭೆಯಲ್ಲಿ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಹಮೀದ್ ಉಲ್ ಹಕ್ ಚೌಧುರಿಯವರು ಮಾತನಾಡಿ, ಕಾಶ್ಮೀರದಲ್ಲಿ ಜಾಗ್ರತೆ ಜನಮತಗಣನೆ ತೆಗೆದುಕೊಳ್ಳಲು ಕೂಟದ ಮಿತ್ರ ರಾಷ್ಟ್ರಗಳು ಬೆಂಬಲ ನೀಡಬೇಕೆಂದೂ, ಭಾರತಕ್ಕೆ ಕಾಶ್ಮೀರದ ಬಗ್ಗೆ ರಷ್ಯವು ಬೆಂಬಲವಿತ್ತಿರುವುದರಿಂದ ಪಶ್ಚಿಮ ರಾಷ್ಟ್ರಗಳೊಡನೆ ದೃಢ ಸ್ನೇಹ ಹೊಂದಿರುವ ಪಾಕಿಸ್ತಾನಕ್ಕೆ ತನ್ನ ಮಿತ್ರ ರಾಷ್ಟ್ರಗಳು ಬೆಂಬಲ ನೀಡುವುದು ಅಗತ್ಯವೆಂದೂ ತಿಳಿಸಿರುವುದಾಗಿ ವರದಿಯಾಗಿದೆ

ಅಣಾಶಯ ವಿದ್ಯುಚ್ಛಕ್ತಿ ಸಮಿತಿ ಸಮ್ಮೇಳನದ ಆರಂಭ

ಮುಖ್ಯ ಮಂತ್ರಿಗಳ ಭಾಷಣ

ಸ್ವಂ. ಸು. ಫೋ॥] ಬೆಂಗಳೂರು ೭

ಈ ದಿನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರಿಂದ ಏಷ್ಯಾ ಮತ್ತು ದೂರ ಪೂರ್ವ ರಾಷ್ಟ್ರಗಳ ಆರ್ಥಿಕ ಮಂಡಲದ ವಿದ್ಯುಚ್ಛಕ್ತಿ ಸಮಿತಿಯು ಆರಂಭವಾಯಿತು ಶ್ರೀ ಎಂ ಹ ಯಾತ್ ಅವರು ಅಧ್ಯಕ್ಷರಾಗಿದ್ದರು. ಇಲ್ಲಿ ಮುಖ್ಯ ಮಂತ್ರಿಗಳು ಆರಂಭ ಭಾಷಣ ಮಾಡಿ, ಇಷ್ಟರ ಪ್ರದೇಶದಲ್ಲಿ ಪ್ರತಿಯೊಂದು ಗೃಹಕ್ಕೂ ವಿದ್ಯುಚ್ಛಕ್ತಿಯನ್ನು ಒದಗಿಸುವ ಸಾಧನಗಳನ್ನು ಸಮಿತಿಯು ಎಣಿಸಬೇಕೆಂದು ಸೂಚಿಸಿದರು.

ರಷ್ಯಾ ಪ್ರತಿನಿಧಿಯು ಕೇಂದ್ರ ಸೋವಿಯೆಟ್ ಒಕ್ಕೂಟಕ್ಕೆ ತಿಳಿಸಿದ್ದು ದೊರೆಯದಿದ್ದ ಬಗ್ಗೆ ವಿಚಾರಿಸಿ, ಮುಂದಾದರೂ ಆ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ, ಈಗಿರುವ ಪ್ರತಿನಿಧಿಯು ಚೀನಾಂಗದ ಕೂಟದ ವರೆಂದೂ ತಿಳಿಸಿದರು ಚೀನಾ ಪ್ರತಿನಿಧಿಯು ಅದಕ್ಕೆ ಪ್ರತಿಭಟಿಸಿದರು ಸಭೆಯು ನಾಳೆ ಬೆಳಗ್ಗೆ ೯॥ ಗಂಟೆಗೆ ಸೇರಲಿದೆ

ಎ. ಎಸ್ ಪಿ. ಶಂಕರಪ್ಪನವರ ನಿಧನ

ಎ ಎಸ್ ಪಿ. ಶ್ರೀ ಶಂಕರಪ್ಪನವರು ಈ ದಿನ ಬೌರಿಂಗ್ ಆಸ್ಪತ್ರೆಯಲ್ಲಿ ಮೆದುಳು ರಕ್ತ ಸ್ರಾವದಿಂದ ನಿಧನಹೊಂದಿದರು.

ಡವೇಜರ್ ಮಹಾರಾಣಿಯವರ ನಿಧನಕ್ಕಾಗಿ ಪುರಸಭಾ ಸಂತಾಪ

ಮೈಸೂರು ೭

ಪುರಸಭೆಯ ವಿಶೇಷ ಅಧಿವೇಶನವು ಈ ದಿನ ಬೆಳಿಗ್ಗೆ ಸಮಾವೇಶಗೊಂಡು ಡವೇಜರ್ ಮಹಾರಾಣಿ ಲಕ್ಷ್ಮೀವಿಲಾಸ ಸನ್ನಿಧಾನದವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲಾಯಿತು

ಅಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿಯವರು ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿ ದಿವಂಗತರ ಗುಣಕಥನ ಮಾಡಿದನಂತರ ಎರಡು ನಿಮಿಷಗಳ ಮೌನವನ್ನು ಆಚರಿಸಲಾಯಿತು

ಶ್ರೀ ಮಿರ್ಜಾರ್ ಹುಸ್ಸೇನವರು ಮಾತನಾಡಿ, ಡವೇಜರ್ ಮಹಾರಾಣಿಯವರ ನಿಧನಕ್ಕಾಗಿ ಸರ್ಕಾರಿ ಕಛೇರಿಗಳಿಗಾಗಲೀ ಪುರಸಭಾ ಕಛೇರಿಗಾಗಲೀ ರಜಾ ಕೊಡದಿದ್ದುದಕ್ಕಾಗಿ ಆಕ್ಷೇಪಿಸಿದರು

ಮಹಾರಾಣಿಯವರ ನ್ಯೂ ಟೈಪ್ ಮಾಧ್ಯಮಿಕ ಶಾಲೆಯಲ್ಲಿ ಕಳೆದ ಶನಿವಾರ ಸಭೆ ನಡೆದು, ಶ್ರೀ ಲಕ್ಷ್ಮೀವಿಲಾಸ ಸನ್ನಿಧಾನದವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು ದಿವಂಗತರ ಗುಣ ಕಥನ ಮಾಡಿ ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲೆಂದೂ, ರಾಜ ಬಂಧುವರ್ಗದವರಿಗೆ ದುಃಖವನ್ನು ಧರಿಸುವ ಶಕ್ತಿಯನ್ನು ದಯಪಾಲಿಸಲೆಂದೂ, ಪ್ರಾರ್ಥಿಸಿ ೨ ನಿಮಿಷ ಮೌನವನ್ನಾಚರಿಸಲಾಯಿತು

ಎಂ. ಎಸ್. ಗೋಲ್ವಾಲ್ಕರ್‌ರವರ ೫೧ನೇ ಜನ್ಮದಿನೋತ್ಸವ

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘ ಚಾಲಕರಾದ ಗುರೂಜಿ ಎಂ ಎಸ್ ಗೋಲ್ವಾಲ್ಕರ್‌ರವರ ೫೧ನೇ ಜನ್ಮದಿನೋತ್ಸವವು ನಾಳೆ ನಡೆಯುತ್ತದೆ ಅದರ ಅಂಗವಾಗಿ ಉತ್ಸವದ ಸಮಿತಿಯವರು ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಸಾರ್ವಜನಿಕ ಸಮಾರಂಭವನ್ನು ಏರ್ಪಡಿಸುತ್ತಾರೆ ಶ್ರೀ ಜಿ ಆರ್ ಜೋಸ್ಯರ್‌ರವರು ಅಧ್ಯಕ್ಷತೆ ವಹಿಸುವರು ಆರ್ ಎಸ್ ಎಸ್ ಸಂಸ್ಥೆಯ ಕರ್ನಾಟಕ ಪ್ರಾಂತ ಸಂಚಾಲಕ ಶ್ರೀ ಯಾದವರಾವ್ ಜೋಷಿಯವರು ಭಾಷಣ ಮಾಡುವರು

ಹಿಂದಿ ತರಗತಿಗಳು

ರಾಜಧಾನಿಯ ಮಾದರಿ ಶಾಲೆಯ ಸೇವಾ ಸಂಘದವರು ಇದೇ ಆಗಸ್ಟ್ ತಿಂಗಳಿನಲ್ಲಿ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯವರು ನಡೆಸುವ ಪ್ರಾಥಮಿಕದಿಂದ ವಿಶಾರದ ವರೆಗಿನ ಹಿಂದಿ ಪರೀಕ್ಷೆಗಳಿಗೆ ತರಗತಿಗಳನ್ನು ಡಿ ಸುಬ್ಬಯ್ಯ ರಸ್ತೆಯಲ್ಲಿರುವ ಶ್ರೀರಾಮ ಸಹಾಯ ಸಂಘದಲ್ಲಿ ಇಂದಿನಿಂದ ಪ್ರತಿದಿನ ಬೆಳಿಗ್ಗೆ ೮ ಘಂಟೆಗೆ ಏರ್ಪಡಿಸಿರುವರು ವಿದ್ಯಾರ್ಥಿವಿದ್ಯಾರ್ಥಿನಿಯರು ಬೇಗನೆ ಸೇರಬೇಕೆಂದು ಕೋರಲಾಗಿದೆ

ಹರಿಕಥೆ

ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ನಾಳೆ ರಾತ್ರಿ ೮ ಘಂಟೆಗೆ ವಿಲ್ಲಿವಲ್ಲಿಪುರಂ ಶ್ರೀನಿವಾಸ ರಂಗಾಚಾರ್ಯರಿಂದ ಜಯನಾರಿಕಾರ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ ಸರ್ವರಿಗೂ ಸ್ವಾಗತವುಂಟು

ಪಾಕಿಸ್ತಾನದಲ್ಲಿ ಪೋರ್ಚುಗೀಸರ ಕಛೇರಿಗಳು

ಪಾಕಿಸ್ತಾನದ ಲಾಹೋರು ಮತ್ತು ಢಾಕಾಗಳಲ್ಲಿ ಪೋರ್ಚುಗೀಸರು ತೆರೆಯಬೇಕೆಂದಿರುವ ಉಪ ರಾಯಭಾರಿ ಕಛೇರಿಗಳ ಬಗ್ಗೆ ಪಾಕಿಸ್ತಾನ ಸರ್ಕಾರಕ್ಕೆ ಭಾರತ ಸರ್ಕಾರದವರು ಸೂಚಿಸಿದ ಪ್ರತಿಭಟನೆಯನ್ನು ಪಾಕಿಸ್ತಾನದವರು ಗಣನೆಗೆ ತಂದುಕೊಂಡಿಲ್ಲವೆಂದು ಕೇಂದ್ರ ವಿದೇಶಾಂಗ ವ್ಯವಹಾರ ಮಂತ್ರಿ ಎ ಕೆ ಚಂದಾರವರು ತಿಳಿಸಿರುವರು

ಪೌರಸಭಾ ಚುನಾವಣಾ ಫಲಿತಾಂಶ

[ಸ್ವಂ ಪು] ಶ್ರೀರಂಗಪಟ್ಟಣ ೬

ಇಲ್ಲಿನ ಮುನಿಸಿಪಲ್ ಚುನಾವಣೆಯು ೨ನೇ ತಾರೀಕು ನಡೆದು, ಎರಡು ತಾಲ್ಲೂಕು ಆಫೀಸಿನಲ್ಲಿ ಚುನಾವಣಾಧಿಕಾರಿಗಳಾದ ಅಮಲ್ದಾರ್ ಶ್ರೀ ಎಸ್ ವಿ ಶ್ರೀಕಂಠನವರ ಸಮ್ಮುಖದಲ್ಲಿ ಓಟುಗಳನ್ನು ಎಣಿಕೆ ಮಾಡಲಾಗಿ, ಕೆಳಗೆ ಕಂಡವರು ಅತಿ ಹೆಚ್ಚು ವೋಟುಗಳಿಂದ ಚುನಾಯಿತರಾಗಿ ಬಂದಿರುತ್ತಾರೆ —

ಶ್ರೀಗಳಾದ ಕಂ ಸೋಮಶೇಖರಯ್ಯ, ದೊಮ್ಮಲಿಂಗೇಗೌಡ, ಆರ್ ರಂಗಯ್ಯ, ಬಿ ಆರ್ ಸೂರ್ಯನಾರಾಯಣರಾವ್, ಅಡ್ವೊಕೇಟ್ ಎಂ ಶ್ರೀಕಂಠಯ್ಯ, ಕಾಳೇಗೌಡ ಅಜೀಜ್ ಖಾನ್, ಎಸ್ ಸಿ ರಾಜಶೇಖರ್, ಎಸ್ ವಿ ಚಂದ್ರಶೇಖರಯ್ಯ, ಶಿವಸ್ವಾಮಿ, ಎಸ್ ಮಾಯಣ್ಣ, ಮರಿಯಪ್ಪ (ಅವಿರೋಧ), ಸಂಜಾಂ ಡಿ ಐ ಜಾ-ಟಿ ಸೋಮಶೇಖರ್, ಹಫೀಜ್ ಖಾನ್, ಕೋದಂಡರಾಮಯ್ಯ, ವೆಂಕಟಪ್ಪ (ಅವಿರೋಧ) ವೆಂಕಟೇಗೌಡ, ಕೆ ಪುಟ್ಟಸ್ವಾಮಯ್ಯ (ಅವಿರೋಧ) ಜ ಕೆ ಚಿಕ್ಕಯ್ಯ, ಲಾಯರ್ ಬೋರೇಗೌಡ

ಉತ್ತರ ಪ್ರದೇಶದಲ್ಲೂ ಬಿಡ್ದಾ ಕಾರ್ಯಕ್ರಮ

೮೦ ವರ್ಷಗಳ ಹಿಂದೆ ನಡೆಸಲಾಗುತ್ತಿದ್ದ ಬಿಡ್ದಾ ಕಾರ್ಯಕ್ರಮಗಳನ್ನು ಉತ್ತರ ಪ್ರದೇಶದಲ್ಲಿ ಈ ವರ್ಷಾಂತ್ಯದಿಂದ ಆರಂಭಿಸಲಾಗುವುದೆಂದು ಗೊತ್ತಾಗಿದೆ ಬಿಹಾರ್ ಪ್ರದೇಶದಲ್ಲಿ ಅನೇಕಗಳ ಹಾವಳಿ ವಿಪರೀತವಾಗಿ ಅದರಿಂದ ಜನರಿಗೆ ತೊಂದರೆಯಾಗಿದೆ ಒಂದು ಸಾರಿಗೆ ೨೦-೩೦ ಆನೆಗಳನ್ನು ಹಿಡಿಯಬಹುದು

ನೋಡಿಯವರ ಶಿಬಿರಕ್ಕೆ ಸಹಾಯ

ಡಾII ಎಂ ಸಿ ಮೋದಿಯವರ ನೇತ್ರ ಚಿಕಿತ್ಸಾ ಶಿಬಿರಕ್ಕೆ ಕೆಳಗೆ ಕಂಡವರಿಂದ ಈ ರೀತಿ ಸಹಾಯ ಬಂದಿದೆ —ಗಣೇಶ ಬೀಡಿ ಕಾರ್ಖಾನೆಯ ಮಾಲೀಕರಾದ ಶ್ರೀ ಮಹದೇವ ಶೆಟ್ಟಿ ೧೦೧ ವಿ ಎಸ್ ಮನೋಹರ್ ೫೧ ರೂ ಶ್ರೀ ಚಲುವಯ್ಯ ೫೧ ರೂ ಸಂತೆಪೇಟೆ ಶ್ರೀ ಆರ್ಮುಗಂ ಅಂಡ್ ಕಂಪೆನಿ ಕೆ ವೆಂಕಟರಮಣ ಶೆಟ್ಟಿ, ಟಿ ಬಿ ನಾಗಪ್ಪ ಮತ್ತು ಪಿ ಟಿ ಕೆ ಅಂಡ್ ಸನ್ಸ್ ತಲಾ ೫೦ ಸೇರು ಅಕ್ಕಿ, ಹನುಮಂತಯ್ಯ ಅಂಡ್ ಸನ್ಸ್, ಎಂ ಜಿ ಪುಟ್ಟಸ್ವಾಮಿ ಮತ್ತು ಬಿ ಎಸ್ ಬಸವಣ್ಣ ಅಂಡ್ ಸನ್ಸ್ ತಲಾ ೫೦ ಸೇರು ಅಕ್ಕಿ ಭಾರತ್ ಕಾಫಿಯ ವೆಂಕಟನರಸಯ್ಯನವರು ೧ ಪಲ್ಲಾ ಅಕ್ಕಿ, ಪಿ ಮಲ್ಲಣ್ಣ ಅಂಡ್ ಸನ್ಸ್ ೧ ಮೂಟೆ ಗೋಧಿ, ಶ್ರೀನಿವಾಸಯ್ಯಂಗಾರ್, ಕೆ ಕೆಂಚಪ್ಪ ತಲಾ ೧ ಮೂಟೆ ಈರುಳ್ಳಿ ಮತ್ತು ೧ ಮೂಟೆ ಆಲೂಗೆಡ್ಡೆ ಟಿ ಗೋವಿಂದಯ್ಯ ಅಂಡ್ ಸನ್ಸ್ ೧ ಮಣ ಹುಣುಸೇಹಣ್ಣು ಟಿ ಚಂದ್ರಶೇಖರಯ್ಯ ಅಂಡ್ ಸನ್ಸ್ ೧ ಮಣ ಮೆಣಸಿನಕಾಯಿ, ಎಸ್ ಸಿದ್ದಪ್ಪ ೧ ಧಡಿಯ ಜೀರಿಗೆ ಆರ್ ರಾಮಸ್ವಾಮಿ ೧ ಮೂಟೆ ಈರುಳ್ಳಿ ಎ ಎಂ ಕಾಮತ್ ೧ ಮಣ ಸಾರಾ ಪುಡಿ

ಸೀಟೋವಿನಲ್ಲಿ ಕಾಶ್ಮೀರದ ಪ್ರಶ್ನೆ ತರಬಾರದು

ಬ್ರಿಟಿಷ್ ವಿದೇಶಾಂಗ ಮಂತ್ರಿಯ ಅಭಿಪ್ರಾಯ

ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸಲ್ವಿನ್ ಲಾಯ್ಡ್‌ರವರು ದೆಹಲಿಯಲ್ಲಿ ನೆನ್ನೆ ಪತ್ರಿಕಾ ಸಮ್ಮೇಳನದಲ್ಲಿ ಭಾಷಣ ಮಾಡಿ, ಕಾಶ್ಮೀರದ ವಿಷಯವು ಆಗ್ನೇಯ ಏಷ್ಯಾ ರಕ್ಷಣಾ ಕೂಟದ ಸಭೆಯಲ್ಲಿ ಚರ್ಚೆ ಮಾಡತಕ್ಕುದಲ್ಲವೆಂದು ತಿಳಿಸಿದರು ಆದ್ದರಿಂದ ಭಾರತ ಪಾಕಿಸ್ತಾನಗಳೇ ಈ ವಿಷಯವನ್ನು ಇತ್ಯರ್ಥಪಡಿಸಿಕೊಳ್ಳಬಹುದೆಂದು ಅವರು ತಿಳಿಸಿದರು

ಇಸ್ರೇಲ್ ದೋಣಿ ಮೇಲೆ ಸಿರಿಯದವರ ಗುಂಡು

ಸಿರಿಯದ ಸೈನಿಕರು ಮೊನ್ನೆ ಗ್ಯಾಲಿಲಿ ಸಮುದ್ರದ ತೀರದಲ್ಲಿ ಎರಡು ಇಸ್ರೇಲ್ ದೋಣಿಗಳ ಮೇಲೆ ಗುಂಡು ಹಾರಿಸಲಾಗಿ ಇಬ್ಬರು ಇಸ್ರೇಲೀ ಪೋಲೀಸರು ಮೃತಪಟ್ಟಿರುತ್ತಾರೆ ಸಿರಿಯದ ಸೈನಿಕರು ಇಸ್ರೇಲಿನ ವಿಮಾನದ ಮೇಲೆ ಗುಂಡು ಹಾರಿಸಿ ಚಾಲಕನನ್ನು ಗಾಯಗೊಳಿಸಿರುತ್ತಾರೆ

ನವಗ್ರಹ ಪೂರ್ಣಾಹುತಿ

ರಾಜಧಾನಿಯ ನೊಪ್ಪಿನಕೊಳದ ಬೀದಿ ಶ್ರೀ ಪ್ರಸನ್ನ ಪ್ರಾಣದೇವರ ದೇವಸ್ಥಾನದಲ್ಲಿ ಇದೇ ೧೦ನೇ ತಾರೀಕು ಶನಿವಾರ ಶಿವರಾತ್ರಿ ಮತ್ತು ಕೃಷ್ಣರ ಜಯಂತಿಯೂ, ೧೧ನೇ ತಾರೀಕು ಅಮಾವಾಸ್ಯೆ ಪ್ರಯುಕ್ತ, ಸರ್ವ ಗ್ರಹ ಪೀಡಾ ಪರಿಹಾರಾರ್ಥವಾಗಿ ನವಗ್ರಹ ಪೂರ್ಣಾಹುತಿಯೂ ಜಗತ್ಕಲ್ಯಾಣಕ್ಕಾಗಿ ಆಚರಿಸಲ್ಪಡುವುವು

ಮಹದೇಶ್ವರನ ಜಾತ್ರೆಗೆ ಹೋಗುವವರಿಗೆ ಕಾಲರಾ ನಿರೋಧ ಇನಾಕ್ಯುಲೇಷನ್

ಕೊಳ್ಳೇಗಾಲ ತಾಲ್ಲೂಕು ಮಹದೇಶ್ವರನ ಬೆಟ್ಟದಲ್ಲಿ ನಡೆಯುವ ಜಾತ್ರೆಗೆ ಹೋಗುವ ಜನರಿಗೆ ಕಾಲರಾ ನಿರೋಧಕ ಇನಾಕ್ಯುಲೇಷನ್ ಮಾಡಲು ನಗರದ ಪೌರಸಭಾ ಕಛೇರಿಯಲ್ಲಿ ನಿತ್ಯವೂ ೩ ರಿಂದ ಸಂಜೆ ೫ ಗಂಟೆ ವರೆಗೆ ವ್ಯವಸ್ಥೆ ಮಾಡಲಾಗಿದೆ

ಪೋರ್ಚುಗೀಸ್ ಕಡಲ್ಗಳ್ಳರು

ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿರುವ ಸುದರ್ಶನಂ ಅಂಡ್ ಕಂಪೆನಿಯವರು ಕಳುಹಿಸಿರುವ ಮೇಲ್ಕಂಡ ಶಿರೋನಾಮೆಯುಳ್ಳ ಕನ್ನಡ ಗ್ರಂಥವನ್ನು ಆದರದಿಂದ ಸ್ವೀಕರಿಸಿದ್ದೇವೆ ಸೆಂಟ್ರಲ್ ಕಾಲೇಜಿನ ಇಂಗ್ಲಿಷ್ ಪ್ರೊಫೆಸರ್ ಶ್ರೀ ಓ ಕೆ ನಂಬಿಯಾರ್‌ರವರು ಬರೆದ ಇಂಗ್ಲಿಷ್ ಗ್ರಂಥವನ್ನು ಡೆಕ್ಕನ್ ಹೆರಾಲ್ಡ್ ಪತ್ರಿಕಾ ಕಛೇರಿಯಲ್ಲಿರುವ ಶ್ರೀ ವೈ ಕೆ ಕೃಷ್ಣಮೂರ್ತಿಯವರು ಕನ್ನಡಕ್ಕೆ ಭಾಷಾಂತರಿಸಿರುತ್ತಾರೆ ಭಾರತಕ್ಕೂ, ಪೋರ್ಚುಗಲ್ಲಿಗೂ ಹಿಂದೆ ನಡೆದ ಯುದ್ಧಕ್ಕೆ ಸಂಬಂಧಿಸಿದ ಕಥೆಯನ್ನು ಒಳಗೊಂಡಿದೆ ಇತ್ತೀಚೆಗೆ ಗೋವಾ ಸಮಸ್ಯೆಯು ಉಲ್ಬಣಿಸಿರುವಾಗ ಅದರ ಹಿನ್ನೆಲೆಯನ್ನು ಅರಿಯಲು ಈ ಪುಸ್ತಕವು ಸಹಾಯಕವಾಗುವುದು ಬೆಲೆ ೧-೮-೦

ಫುಟ್‌ಬಾಲ್ ಗಾತ್ರದ ಆಲೂಗೆಡ್ಡೆ!

ನವನಾಹ್ ವ್ಯವಸಾಯ ಕೇಂದ್ರದಲ್ಲಿ ಯುತ್ತಿರುವ ಬಿಹಾರ್ ಪ್ರಾಂತದ ವ್ಯ... ಪ್ರದರ್ಶನದಲ್ಲಿ ಇಡಲ್ಪಟ್ಟಿರುವ ಆಲೂಗೆಡ್ಡೆಯು ಫುಟ್‌ಬಾಲಿನ ಗಾತ್ರದ್ದು ... ದು ವರದಿಯಾಗಿದೆ ಒಂದು ಸೋರೆಕಾಯಿ ... ಒಂದು ಮಣದಷ್ಟು ತೂಕವಿದೆ ... ಕೀಸಿದ ಇಬ್ಬರು ರೈತರಿಗೆ ಬಹುಮಾನ ... ಯಲಾಗಿದೆ ಸಾಮಾನ್ಯವಾಗಿ ಆಲೂಗೆಡ್ಡೆ ಟೆನಿಸ್ ಚೆಂಡಿನ ಗಾತ್ರಕ್ಕಿಂತಲೂ ದೊಡ್ಡ... ರುವುದಿಲ್ಲ, ಸೋರೆಕಾಯಿಯು ೬ ಸೇರಿ... ಹೆಚ್ಚು ತೂಗುವುದಿಲ್ಲ

ಮಿರ್ಜಾ ಇಸ್ಕೇಲರಿಗೆ ಪಾಕಿಸ್ತಾನದ ಅಧ್ಯಕ್ಷರ ...

ಮೈಸೂರಿನ ಮಾಜಿ ದಿವಾನರಾದ ... ರ್ಜಾ ಇಸ್ಮಾಯಿಲರು ಕರಾಚಿಗೆ ಭೇಟಿ ... ಕೆಂದು ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ... ರ್ಜಾರವರು ಆಹ್ವಾನಿಸಿರುತ್ತಾರೆ ಮಿರ್ಜಾ... ರು ಇದೇ ೧೧ನೇ ತಾರೀಕು ಅಲ್ಲಿಗೆ ತೆರ... ಅವರು ಖಾನ್ ಸಾಹೇಬರ ಆಹ್ವಾನದ ... ಹಾಬಿಗೂ ಭೇಟಿಯಾಗುವರು

ಬೆಂಗಳೂರು ರೇಡಿಯೋ ಶಾಲೆ ...

[illegible]

ಮೈಸೂರು ಪೇಟೆ ಧಾರಣೆ

	ರೂ	ಬಂದ	...
ಕಡಲೆಕಾಯಿ	[illegible]		
ಹರಳುಬೀಜ	[illegible]		
ಹುಚ್ಚೆಳ್ಳು	[illegible]		
ಹೊಂಗೆಬೀಜ	[illegible]		
ಮಡುಲು	[illegible]		
ಹೆಸರು	[illegible]		
ಹಲಸಂದೆ	[illegible]		
ಕಡಲೆ	[illegible]		
ತೊಗರಿ	[illegible]		
ಅವರೆ	[illegible]		
ಧನಿಯ	[illegible]		
ಸೂರ್ಯಕಾಂತಿ ಬೀಜ	[illegible]		
ಹುಣಸೆಬೀಜ	[illegible]		
ಸೀಗೆಕಾಯಿ	[illegible]		
ಹುಣಸೇಹಣ್ಣು	[illegible]		
ಮೆಣಸಿನಕಾಯಿ	[illegible]		
ತೆಂಗಿನಕಾಯಿ ೧೦೦೦	[illegible]		

CAR FOR SALE

Austin 12, in good running condition Rs 2,000 or nearest offer Contact during 3 and ... P. M

Sri H RAJANNA,
C/o Hindusthan Life Office
New Statue Circle,
MYSORE

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ಪಡೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

SREE GANESHA
TALKIES
From 8 3-56 For 2 Days
THE CAINE MUTINY
(Technicolor)
With Humphrey Bogart, Jose Ferrer, Van Johnson
FROM 10—3—56
The Black Shield of Falworth
(Cinemascope-Technicolor)
With Tony Curtis, Janet Leigh

Edited, Printed and Published by A. R. Nagarajan at Sadhvi Press, D. Subbiah Road, Mysore

ರಣಜಿತ್ ಟಾಕೀಸ್ ★ 8—3—56ನೇ ಗುರುವಾರದಿಂದ : ಅಮೋಘ ಪ್ರಾರಂಭ
ಆಲ್ ಇಂಡಿಯಾ ಪಿಕ್ಚರ್ಸ್‌ರವರ ಪೌರಾಣಿಕ ಹಿಂದಿ ಚಿತ್ರ
ತ್ರಿಲೋಕ್ ಕಪೂರ್, ಮಾಲಾಸಿನ್ಹ, ರತನಕುಮಾರ್, ಪದ್ಮಾ, ಗೋಪ್ ಮತ್ತು ಜೀವನ್ ಪಾತ್ರವಹಿಸಿರುವ
★ ಏಕಾದಶಿ ★ (ಮೋಹಿನಿ-ರುಕ್ಮಾಂಗದ ಕಥೆ)
10-3-56 ನೇ ಶನಿವಾರ ರಾತ್ರಿ 1 ಘಂಟೆಗೆ ವಿಶೇಷ ಪ್ರದರ್ಶನವಿದೆ [G F D. Release

ರಿಜಿಸ್ಟರ್ ನಂ. 792

FOR BEST
Half-tone & Line
BLOCKS
Contact —
Sri Sharada Press,
Hanumantha Rao St.,
MYSORE

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
——
ವಿ.ಪಿ.ಯವರಿಗೆ ಮೂಲಕ
ತಿಂಗಳಿಗೆ ೨ ರೂಪಾಯಿ
ಅಂಚೆ ಮೂಲಕ
ತಿಂಗಳಿಗೆ ೧ ರೂ. ೮ ಆ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೯] SADHVI : THURSDAY 8-3-1956 ಪ್ರಕಟಣೆ ಗುರುವಾರ : ೮-೩-೧೯೫೬ [ಸಂಚಿಕೆ : ೧೯೯

ಭೂ ಮಧ್ಯಪ್ರದೇಶಕ್ಕೆ ಅಮೆರಿಕದ ೧,೫೦೦ ನಾವಿಕರು

ಬಳ್ಳಾರಿ ಮೈಸೂರಿನಲ್ಲೇ ಇರುವುದು

ಆಂಧ್ರ ನಿಯೋಗಕ್ಕೆ ನೆಹರೂರವರ ಉತ್ತರ

ಬಳ್ಳಾರಿ ಮತ್ತು ತುಂಗಭದ್ರಾ ಪ್ರದೇಶವನ್ನು ಮೈಸೂರು ಸಂಸ್ಥಾನದಲ್ಲೇ ಉಳಿಸಬೇಕೆಂದು ಕೇಂದ್ರ ಸರ್ಕಾರದವರು ನಿರ್ಧರಿಸಿರುವುದಾಗಿ ನೆಹರೂರವರು ಸ್ಪಷ್ಟಪಡಿಸಿರುವರು. ಆಂಧ್ರ ಮಂತ್ರಿ ಎ. ಬಿ. ನಾಗೇಶ್ವರರಾಯರ ನೇತೃತ್ವದಲ್ಲಿ ನೆಹರೂರವರ ಬಳಿ ನಿಯೋಗವೊಂದು ಹೋಗಿತ್ತು. ಕೇಂದ್ರ ಸರ್ಕಾರದ ನಿರ್ಧಾರವನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ನಿಯೋಗಕ್ಕೆ ಸೂಚಿಸಲಾಗಿದೆ.

ರೈಲ್ವೆ ಪುಸ್ತಕಾಲಯಗಳಲ್ಲಿ ಲೈಂಗಿಕ ಗ್ರಂಥಗಳಿಗೆ ನಿಷೇಧ

ರೈಲ್ವೆ ಪುಸ್ತಕಾಲಯಗಳಲ್ಲಿ ಲೈಂಗಿಕ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳನ್ನು ನಿಷೇಧಿಸಿ ಆಜ್ಞೆ ಹೊರಡಿಸಿರುವರೆಂದು ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುವರು. ಲೈಂಗಿಕ ವಿಚಾರದ 'ಶಾಸ್ತ್ರೀಯ ವೈಜ್ಞಾನಿಕ' ಗ್ರಂಥಗಳಿಗೂ ಈ ನಿಷೇಧವು ಅನ್ವಯವಾಗಲಿದೆ.

ನಗರದಲ್ಲಿ ಕೈಗಾರಿಕಾ ಕ್ಷೇತ್ರದ ಪರಿಶೀಲನೆ

ನಗರದಲ್ಲಿ ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವ ಬಗ್ಗೆ ಸೂಕ್ತವಾದ ಕ್ಷೇತ್ರವನ್ನು ಆರಿಸುವ ಸಲುವಾಗಿ ಸಂಸ್ಥಾನದ ಗ್ರಾಮ ಕೈಗಾರಿಕೆಗಳ ಡೈರೆಕ್ಟರ್ ಶ್ರೀ ಬಿ. ಬೀರಪ್ಪನವರು ಮುಲಕ್ಷ್ಮಿಪುರ ಮತ್ತು ಯಾದವಗಿರಿಯಲ್ಲಿ ಪರಿಶೀಲನೆ ನಡೆಸಿರುತ್ತಾರೆ. ಹೊಸ ಕೈಗಾರಿಕೆಗಳನ್ನು ಏರ್ಪಡಿಸಲು ಆ ಪ್ರದೇಶದಲ್ಲಿ ಸರ್ಕಾರದವರು ಕೇಂದ್ರವನ್ನು ಸ್ಥಾಪಿಸಿ ಸಲಕರಣೆಗಳನ್ನು ಒದಗಿಸಿ ಕೊಡುವರು.

ಪೋಲೀಸು ಕಾನ್ಸ್ಟೇಬಲ್ಲುಗಳಿಗೆ ವಯಸ್ಕರ ಶಿಕ್ಷಣ

ನಗರದ ನಾನಾ ಪೋಲೀಸು ಠಾಣೆಗಳಲ್ಲಿರುವ ಸುಮಾರು ೧೨೦ ಮಂದಿ ಕಾನ್ಸ್ಟೇಬಲ್ಲುಗಳಿಗೆ ಶಿಕ್ಷಣ ನೀಡಲು ನಗರದ ವಯಸ್ಕರ ಶಿಕ್ಷಣ ಸಮಿತಿಯವರು ವ್ಯವಸ್ಥೆ ಮಾಡಿರುತ್ತಾರೆ. ಅದರ ಆರಂಭೋತ್ಸವವನ್ನು ಇಂದು ರಾತ್ರಿ ೯ ಗಂಟೆಗೆ ಲಷ್ಕರ್ ಪೋಲೀಸು ಠಾಣೆಯಲ್ಲಿ ಕ್ಯಾಪ್ಟನ್ ಕೃಷ್ಣರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಗುವುದು. ಎಸ್. ಪಿ. ಶ್ರೀ ಎಸ್. ಸಿ. ಮಲ್ಲಪ್ಪ, ಶ್ರೀ ಗಣೇಶ ಕೆ. ಎಸ್. ಸೂರ್ಯನಾರಾಯಣರಾವ್, ಶ್ರೀ ಕೆ. ಎಸ್. ಮುನಿಸ್ವಾಮಿಯವರು ಭಾಷಣ ಮಾಡುವರು. ನಾಳೆ ಬೆಳಗ್ಗೆ ೧೧ ಗಂಟೆಗೆ ಜೈಲಿನಲ್ಲಿ ವಯಸ್ಕರ ಶಿಕ್ಷಣ ತರಗತಿಯ ಉದ್ಘಾಟನೋತ್ಸವವು ಶ್ರೀ ಎ. ಶಿವಣ್ಣನವರ ಅಧ್ಯಕ್ಷತೆಯಲ್ಲಿ ನೆರವೇರುವುದು.

...ಗಾಗಿ ಇಟ್ಟುಕೊಂಡಿದ್ದ ಜನರಿಗೆ ಶಿಕ್ಷೆ

ಕನಾಬಗೇರಿಯಲ್ಲಿ ವಧೆಗಾಗಿ ಇಟ್ಟುಕೊಂಡಿದ್ದ ೨೨ ದನಗಳನ್ನು ನೆನ್ನೆ ಲಷ್ಕರ್ ಪೋಲೀಸರು ವಶಪಡಿಸಿಕೊಂಡು ಪಿಂಜ್ರಾಪೋಲಿಗೆ ಕಳುಹಿಸಿದ್ದಾರೆ.

ಕಾಶ್ಮೀರದಲ್ಲಿ ಜನಮತಗಣನೆಗೆ ಸೀಟೋ ರಾಷ್ಟ್ರಗಳ ಬೆಂಬಲ

ಆಗ್ನೇಯ ಏಷ್ಯಾ ಒಪ್ಪಂದ ರಾಷ್ಟ್ರಗಳ ಕೂಟದ ಮಂಡಲವು ಕಾಶ್ಮೀರದ ಬಗ್ಗೆ ಭಾರತ-ಪಾಕಿಸ್ತಾನಗಳ ನಡುವೆ ಇರುವ ವಿವಾದವು ವಿಶ್ವಸಂಸ್ಥೆಯ ನಿರ್ಣಯದ ರೀತ್ಯಾ ಬೇಗನೆ ಜನಮತಗಣನೆಯ ಮೂಲಕ ಇತ್ಯರ್ಥವಾಗಬೇಕೆಂದು ಸರ್ವಾನುಮತದಿಂದ ಒಪ್ಪಿದೆ. ಕಾಶ್ಮೀರದ ಬಗ್ಗೆ ರಷ್ಯಾ ನಾಯಕರು ಮಾಡಿರುವ ಹೇಳಿಕೆಗಳನ್ನು ಖಂಡಿಸುವಂತೆ ಪಾಕಿಸ್ತಾನವು ಮಂಡಲಿಯನ್ನು ಕೋರಿತ್ತೆಂದೂ, ವಿವಾದದ ಇತ್ಯರ್ಥಕ್ಕಾಗಿ ಕೋರಿರಲಿಲ್ಲವೆಂದೂ ವರದಿಯಾಗಿದೆ. ಪಾಕಿಸ್ತಾನದ ಪ್ರಾರ್ಥನೆಯನ್ನು ಮನ್ನಿಸಿ ಮೇಲ್ಕಂಡ ಶಿಫಾರಸನ್ನು ಮಾಡಲಾಯಿತೆಂದೂ ಬೇರೆ ವಿವಾದದ ಬಗ್ಗೆ ಮಂಡಲಿಯು ಚರ್ಚಿಸಲಿಲ್ಲವೆಂದೂ ಹೇಳಲಾಗಿದೆ.

ಸೀಟೋ ಸಭೆಯಲ್ಲಿ ಈ ವಿಚಾರವನ್ನು ಎತ್ತಬಾರದೆಂದು ಬ್ರಿಟನ್ನು ಈಗ ಗರ್ವ ತಿಳಿಸಿರುವುದರಿಂದ ಈ ಬಗ್ಗೆ ಕೂಟದಲ್ಲಿ ಒಡಕುಂಟಾಗಿರುವುದಾಗಿ ಹೇಳಲಾಗಿದೆ. ಬ್ರಿಟನ ಅಭಿಪ್ರಾಯವನ್ನು ಮನ್ನಿಸಿ ಮೇಲ್ಕಂಡ ಶಿಫಾರಸನ್ನು ಮಾಡಲಾಗಿದೆ.

ಪಾಕಿಸ್ತಾನದ ಮುಸ್ಲಿಂ ಲೀಗಿನ ಅವಸಾನ ಕಾಲ

ಪಾಕಿಸ್ತಾನದ ಮುಸ್ಲಿಂಲೀಗಿಗೆ ಅವಸಾನ ಕಾಲವು ಪ್ರಾಪ್ತವಾಗಿರುವುದೆಂದು ಸಂಸ್ಥೆಯ ಅಧ್ಯಕ್ಷ ಸರ್ದಾರ್ ಅಬ್ದುರ್ ರಬ್ ನಿಷ್ತಾರರು ತಿಳಿಸುತ್ತಾರೆ. ಲೀಗಿನ ಮುಖಂಡರು ತಂತ್ರ ಮತ್ತು ಪಿತೂರಿಗಳಲ್ಲಿ ತೊಡಗಿರುವರೆಂದೂ, ಸಂಸ್ಥೆಯು ಜನರ ಸಂಪರ್ಕಗಳನ್ನು ಕಳೆದುಕೊಂಡಿರುವುದೆಂದೂ ಅವರು ಹೇಳುವರು.

ಕುಣಿಗಲ್ ಹೈಸ್ಕೂಲು ಉಪಾಧ್ಯಾಯರ ಮುಷ್ಕರವೇ ?

ಇದೇ ತಿಂಗಳು ೧೨ ನೇ ತಾರೀಕಿನೊಳಗೆ ಸಂಬಳವನ್ನು ಬಟವಾಡೆ ಮಾಡದಿದ್ದರೆ ಅಂದಿನಿಂದ ಮುಷ್ಕರ ನಡೆಸಬೇಕೆಂದು ಕುಣಿಗಲಿನಲ್ಲಿರುವ ಮಹಾತ್ಮಾಗಾಂಧಿ ಹೈಸ್ಕೂಲಿನ ಉಪಾಧ್ಯಾಯರು ನಿರ್ಧರಿಸಿರುತ್ತಾರೆ. ಅವರಿಗೆ ೪ ತಿಂಗಳಿಂದ ಸಂಬಳ ಕೊಟ್ಟಿಲ್ಲವೆಂದು ಹೇಳಲಾಗಿದೆ.

ಕೃಷ್ಣರಾಜನಗರದಲ್ಲಿ ಸಂತಾನ ಸಂಯಮ ಕೇಂದ್ರ

ಕೃಷ್ಣರಾಜನಗರದಲ್ಲಿ ಸಂತಾನ ಸಂಯಮ ಕೇಂದ್ರವೊಂದನ್ನು ಏರ್ಪಡಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದಾಗಿ ವರದಿಯಾಗಿದೆ. ಅದಕ್ಕೆ ಸಾಲಿಯಾನಾ ೯ ಸಾವಿರ ರೂ. ನಂತೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ೪೫,೦೦೦ ರೂ. ಖರ್ಚಾಗುವುದೆಂದು ಗೊತ್ತಾಗಿದೆ. ಮೊದಲ ವರ್ಷಗಳಲ್ಲಿ ಕೇಂದ್ರದವರು ವೆಚ್ಚದ ಪೂರ್ತಿ ಜವಾಬ್ದಾರಿಯನ್ನು ವಹಿಸಿಕೊಳ್ಳಲಿರುವರೆಂದು ಹೇಳಲಾಗಿದೆ. ಈಗ ರಾಮನಗರದಲ್ಲಿ ಇಂತಹ ಕೇಂದ್ರವೊಂದಿದೆ.

○ ಪ್ರಧಾನಿ ನೆಹರೂರವರು ಭಾರತ ಸೇವಕ ಸಮಾಜದ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ.

ಭೂ ಮಧ್ಯ ಸಮುದ್ರ ಪ್ರದೇಶಕ್ಕೆ ಅಮೆರಿಕದ ನಾವಿಕರ ಪಡೆ

ಇನ್ನು ಹಲವು ದಿನಗಳಲ್ಲೇ ಭೂಮಧ್ಯ ಸಮುದ್ರ ಪ್ರದೇಶಕ್ಕೆ ೧,೫೦೦ ಜನ ನಾವಿಕರನ್ನು ಅಮೆರಿಕವು ಕಳುಹಲಿದೆಯೆಂದು ವರದಿಯಾಗಿದೆ. ಇಂತಹ ಮತ್ತೊಂದು ಪಡೆಯನ್ನು ಆ ಪ್ರದೇಶದಿಂದ ವಾಪಸು ಕರೆಸಲಾಗಿತ್ತು. ಮಧ್ಯಪೂರ್ವವೂ ಆ ಪ್ರದೇಶದಲ್ಲಿ ಸೇರಿದೆ. ನಾವಿಕರು ಅಮೆರಿಕದ ೬ನೇ ನೌಕಾ ಪಡೆಯಲ್ಲಿ ಕೆಲಸ ಮಾಡುವರು.

ತ್ರಿಲೋಕಿ ಸಿಂಗರ ಬಿಡುಗಡೆ

ಅಖಿಲ ಭಾರತ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯದರ್ಶಿಯವರಾದ ತ್ರಿಲೋಕಿ ಸಿಂಗ್‌ರವರನ್ನು ಬಿಡುಗಡೆ ಮಾಡಲಾಗಿದೆ. ಅವರನ್ನು ರೇವಾದಿಂದ ಅಲಹಾಬಾದು ರೈಲ್ವೆ ಸ್ಟೇಷನ್ನಿಗೆ ಮೋಟಾರಿನಲ್ಲಿ ಕರೆತಂದು ಬಿಡಲಾಯಿತು. ತ್ರಿಲೋಕಿ ಸಿಂಗರು ಪುನಃ ರೇವಾ ನಗರಕ್ಕೆ ಹೋಗುವುದಿಲ್ಲ. ವಿಂಧ್ಯ ಪ್ರದೇಶದ ಏಕ್ಯವನ್ನು ಪ್ರತಿಭಟಿಸಲು ಏರ್ಪಡಿಸಿದ್ದ ಪ್ರದರ್ಶನ, ಸಭೆಗಳಿಗಾಗಿ ಅವರು ರೇವಾಕ್ಕೆ ಹೋಗಿದ್ದಾಗ ಅವರ ಬಂಧನವಾಗಿತ್ತು.

೧೭ ವರ್ಷಗಳಿಂದಲೂ ನಿದ್ದೆ ಮಾಡುತ್ತಿರುವ ತರುಣಿ

ಚಿಕಾಗೊವಿನಲ್ಲಿರುವ ಇಟಲಿ ದೇಶದ ರೊಬ್ಬರ ೩೫ ವರ್ಷ ವಯಸ್ಸಿನ ಮಗಳು ಎಡ್ವಿನ್ ಎಸ್ಪಿಟೊ ಎಂಬಾಕೆಯು ಕಳೆದ ೧೭ ವರ್ಷಗಳಿಂದಲೂ ನಿದ್ರಾವಸ್ಥೆಯಲ್ಲೇ ಇರುವಳೆಂದು ವರದಿಯಾಗಿದೆ. ಇವಳನ್ನು ಗುಣಪಡಿಸುವುದಕ್ಕಾಗಿ ಅವಳನ್ನು ಫ್ರಾನ್ಸಿಗೆ ಕರೆತರಲಾಗಿದೆ. ೫ನೇ ವರ್ಷದಲ್ಲಿ ಅಪೆಂಡಿಸೈಟಿಸ್ ವ್ಯಾಧಿಗಾಗಿ ಆಕೆಗೆ ಶಸ್ತ್ರಚಿಕಿತ್ಸೆ ನಡೆದಾಗಿನಿಂದಲೂ ಆಕೆಯು ಈ ಸ್ಥಿತಿಯಲ್ಲಿರುವಳು.

ಆರೋಗ್ಯ ಮತ್ತು ವೈದ್ಯ ಇಲಾಖೆಗಳ ಐಕ್ಯ

ಸಂಸ್ಥಾನದ ಆರೋಗ್ಯ ಮತ್ತು ವೈದ್ಯ ಇಲಾಖೆಗಳನ್ನು ಐಕ್ಯಗೊಳಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಈ ಸಂಬಂಧದಲ್ಲಿ ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ಸ್ಥಾಪಿಸಿ, ಎರಡು ಇಲಾಖೆಗಳ ಅಧಿಕಾರಿಗಳ ದರ್ಜೆಯನ್ನೂ ಅವರ ಸೀನಿಯಾರಿಟಿಯನ್ನೂ ಗೊತ್ತುಪಡಿಸುವಂತೆ ಸೂಚಿಸಲಾಗಿದೆ.

ಕಳಲೆಯಲ್ಲಿ ರಥೋತ್ಸವ

ನಂಜನಗೂಡು ತಾಲ್ಲೂಕು ಕಳಲೆ ಶ್ರೀ ಲಕ್ಷ್ಮೀಕಾಂತಸ್ವಾಮಿಯವರ ದೇವಸ್ಥಾನದಲ್ಲಿ ರಥೋತ್ಸವವು ಇದೇ ೨೨ನೇ ತಾರೀಖು ಗುರುವಾರ ನಡೆಯುತ್ತದೆ. ಈ ಸಂಬಂಧದಲ್ಲಿ ಭಕ್ತರು ಮಾಡುವ ಧನಧಾನ್ಯ ಸಹಾಯವನ್ನು ದೇವಸ್ಥಾನಕ್ಕೆ ಖುದ್ದಾಗಿಯಾಗಲೀ, ಮನಿಯಾರ್ಡರ್ ಮೂಲಕವಾಗಿಯಾಗಲೀ, ಅಥವಾ ದೇವಸ್ಥಾನದ ಪಾರುಪತ್ತೇಗಾರರಿಂದ ರಶೀದಿಯನ್ನು ಪಡೆದಾಗಲಿ ಕೊಡಬೇಕೆಂದು ಕೋರಲಾಗಿದೆ.

೧,೦೦೦ ಮಂದಿಯ ನೇತ್ರ ಪರೀಕ್ಷೆ

ನೆನ್ನೆ ಡಾ|| ಎಂ. ಸಿ. ಮೋದಿಯವರು ೧,೦೦೦ ಜನರ ನೇತ್ರ ಪರೀಕ್ಷೆ ನಡೆಸಿದರು.

ನಾಳೆಯಿಂದ ಬೆಳಗಾಮಿನಲ್ಲಿ ಸತ್ಯಾಗ್ರಹ

ಬೊಂಬಾಯಿ ನಗರ, ಬೆಳಗಾಂ ಮತ್ತು ಕಾರವಾರಗಳನ್ನು ಸಂಯುಕ್ತ ಮಹಾರಾಷ್ಟ್ರದಲ್ಲಿ ಐಕ್ಯಗೊಳಿಸಬೇಕೆಂದು ಒತ್ತಾಯಪಡಿಸುವುದಕ್ಕಾಗಿ ನಾಳೆಯಿಂದ ಬೆಳಗಾಮಿನಲ್ಲಿ ಸತ್ಯಾಗ್ರಹವು ಆರಂಭವಾಗುವುದು. ಐದು ಜನರಿಗಿಂತ ಹೆಚ್ಚು ಮಂದಿ ಸಭೆ ಅಥವಾ ಮೆರವಣಿಗೆ ನಡೆಸಬಾರದೆಂದು ವಿಧಿಸಿರುವ ಆಜ್ಞೆಯನ್ನು ಉಲ್ಲಂಘಿಸಿ ನಾಳೆ ಪೂನಾ ನಗರದ "ಕೇಸರಿ" ಪತ್ರಿಕಾ ಸಂಪಾದಕ ಜೆ. ಎಸ್. ತಿಲಕ್‌ರವರು ಮತ್ತು ೧೨ ಮಂದಿ ಸ್ವಯಂಸೇವಕರು ಸತ್ಯಾಗ್ರಹವನ್ನು ಆರಂಭಿಸುವರು.

ಜಯತೀರ್ಥಾಚಾರ್ಯರಿಗೆ ಮೋಟಾರು ಬಹುಮಾನ

ಉಪನ್ಯಾಸ ರತ್ನಾಕರ ವೇ|| ಬ್ರಹ್ಮಶ್ರೀ ಜಯತೀರ್ಥಾಚಾರ್ಯರಿಗೆ ಗದಗಿನ ಚಹಾ ಕಮಿಷನ್‌ದಾರರಾದ ಶ್ರೀ ಭೀಮರಾವ್ ಪಾಂಡುರಂಗರಾವ್ ಹುಬ್ಬಳಿಗೋಳರವರು ಒಂದು ಮೋಟಾರು ಕಾರನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ. ಶ್ರೀ ಆಚಾರ್ಯರು ಅಖಿಲ ಭಾರತ ಪ್ರವಾಸ ಕೈಗೊಳ್ಳಲು ಅನುಕೂಲಪಡಿಸುವುದೇ ಇದರ ಉದ್ದೇಶವಾಗಿದೆ. ಶ್ರೀ ಆಚಾರ್ಯರಿಗೆ ಕೊಡಲಾಗಿರುವ ಮೋಟಾರಿನ ಉಪಯೋಗಕ್ಕಾಗಿ ಬೇಕಾಗುವ ಸಲಕರಣೆಗಳನ್ನು ಒದಗಿಸಿಕೊಡಲೂ ಸಹ ಗದಗಿನ ಮಹಾಜನರು ಮುಂದೆ ಬಂದಿರುತ್ತಾರೆ.

ಶ್ರೀ ಆಚಾರ್ಯರ ಪ್ರತಿಭೆಯನ್ನು ಪ್ರಶಂಸಿಸಲು ಸನ್ಮಾನ ಸಮಾರಂಭವೊಂದು ಜರುಗಿ ಅವರಿಗೆ ಎರಡು ಮಾನಪತ್ರಗಳನ್ನು ಅರ್ಪಿಸಲಾಯಿತು. ಶ್ರೀ ಆಚಾರ್ಯರು ಗದಗಿನಲ್ಲಿ ಭಾಗವತ ಸಪ್ತಾಹವನ್ನು ನಡೆಸಿದರು ಮತ್ತು ಭಗವದ್ಗೀತೆಯ ೧೮ ಅಧ್ಯಾಯಗಳನ್ನೂ ಸಂಗ್ರಹವಾಗಿ ಉಪದೇಶ ಮಾಡಿ ಧರ್ಮರಾಜ ಪಟ್ಟಾಭಿಷೇಕ ಮತ್ತು ರುಕ್ಮಿಣಿ ಕಲ್ಯಾಣವನ್ನು ನೆರವೇರಿಸಿದರು.

ಯೂರೋಪು-ಅಮೆರಿಕಗಳಿಗೆ ವಿದ್ಯುಚ್ಛಕ್ತಿ ಪ್ರವೀಣರ ನಿಯೋಗ

ಆಹಾರ ಸಮಿತಿಯ ಶಿಫಾರಸು

ಪ್ರ. ಟ್ರ. ಸಂಸ್ಥೆ] ಬೆಂಗಳೂರು ೮

ಏಷ್ಯಾ ಮತ್ತು ದೂರಪೂರ್ವ ಆರ್ಥಿಕ ಸಮಿತಿಯ ವಿದ್ಯುಚ್ಛಕ್ತಿ ಮಂಡಲಿಯು ಈ ಏಷ ಆಕಾಶ ಪ್ರದೇಶದಲ್ಲಿರುವ ವಿದ್ಯುಚ್ಛಕ್ತಿ ಪ್ರವೀಣರನ್ನು ಯೂರೋಪು ಮತ್ತು ಅಮೆರಿಕಗಳಲ್ಲಿ ೯ ತಿಂಗಳ ಕಾಲ ಪರಿಶೀಲನೆ ನಡೆಸಲು ಕಳುಹಿಸಬೇಕೆಂದು ನಿರ್ಧರಿಸಿತು. ವಿದ್ಯುಚ್ಛಕ್ತಿ ಸಾಮಗ್ರಿಗಳನ್ನು ಗೊತ್ತಾದ ಮಟ್ಟದಲ್ಲಿ ತಯಾರಿಸುವ ವಿಷಯವನ್ನೂ ಚರ್ಚಿಸಲಾಯಿತು. ವಿದ್ಯುದುತ್ಪಾದನೆಗಾಗಿ ಅಣು ಶಕ್ತಿಯ ಬಳಕೆ ವಿಚಾರವನ್ನು ಸಭೆಯಲ್ಲಿ ಪರಿಶೀಲಿಸಲಾಗುತ್ತಿದೆ.

○ ಬೆಂಗಳೂರಿನಲ್ಲಿ ಸಲವು ಖಾಸಗಿ ಪ್ರಮುಖರು ಸ್ಥಾಪಿಸಿರುವ ಮೆಡಿಕಲ್ ಕಾಲೇಜನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಲು ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿದುಬಂದಿದೆ.

ಕಂಬನಿ

ಘೂರ್ಜರ ದೇಶದಿ ಮೆರೆದ ಮಾನ್ಯವರ।
ರಾಜ ವಿನಯರ ತನಯ ಶುಭಗುಣ।
ರಾಜಕಾಮುಲ ಚರಿತೆ ಸುಜನರ ಪ್ರೇಮ
ವಾರಿಧಿಯು॥

ರಾಜಿಸುವ ಮೈಸೂರು ದೇಶದ।
ರಾಜ ಶ್ರೀ ಕೃಷ್ಣಭೂಪರ।
ರಾಜ್ಞಿ ಎನಿಸುತ ಮೆರೆದಳೀ ಸಕಲ
ಭುವನದರೀ॥೧॥

ಸತ್ಯವಂತೆಯು ಸತ್ಯಶೀಲೆಯು।
ನಿತ್ಯ ವ್ರತವನು ಬಿಡದೆ ನೇಮದ।
ಸತ್ಯದಿಂದಾಚರಿಸಿ ಗಳಿಸಿದಳ್ ಮುಕ್ತಿ
ಮಾರ್ಗವನು

ನಿತ್ಯದಲಿ ಮೈಸೂರು ರಾಜ್ಯದಿ।
ಸತ್ಯ ಶ್ರೀ ಲಕ್ಷ್ಮೀನಾಮಾಭಿಧ।
ಉತ್ತಮೋತ್ತಮ ಮಾತೆಯನು ಕೊಂಡೊ
ಯ್ದುದೇ ವಿಧಿಯು॥೨॥

ಪ್ರೀತಿ ತೋರುತ ಸರ್ವ ಜನರಿಗೆ।
ನೀತಿ ಮಾರ್ಗವ ತೋರಿ ವಿಶ್ವಕೆ।
ಭಕ್ತಿಯಿಂದಲೆ ದೈವ ಬ್ರಾಹ್ಮಣ ಗುರು
ಹಿರಿಯ ಸಾಧುಗಳ॥

ಸತತ ಶ್ರದ್ಧಾಸಕ್ತಿ ವಹಿಸುತ।
ಶಾಂತಿಯಿಂದಲೆ ಸೇವೆ ನಡೆಸಿದ।
ಮಾತೆ ಕಣ್ಮರೆಯಾದುದೆಮ್ಮ
ದುರ್ವಿಧಿಯು॥೩॥

ಸುಗುಣಗಣ ಪರಿಪೂರ್ಣ ಚರಿತೆಯ।
ಅಗಣಿತಾಮಲ ಪುಣ್ಯ ಮೂರ್ತಿಯ
ನಿಗಮ ವೇದಾದಿ ವಿದ್ಯಾ ದಾನ
ನಿಪುಣೆಯನೂ

ಜಗಕೆ 'ಪ್ರತಾಪ ಕುಮಾರಿ' ನಾಮದಿ।
ಬಗೆಯ ಧೈರ್ಯ ವಿವೇಕದಿಂದಲಿ।
ಜಗದಿ 'ಯೋಗಿನಿ'ಯಾಗಿ ಮೆರೆದಳ
ಕೊಂಡೊಯ್ದುದೇ ವಿಧಿಯು॥೪॥

ಶ್ರೀ ಮಹಾಬಲ ಶೈಲ ವಾಸಿನಿ
ಶ್ರೀಮತಿ ಪತಿಯನುತೆ ಗಿರಿಜೆಯ
ಪ್ರೇಮ ಪೂರ್ಣ ಕಟಾಕ್ಷಗಳಿಸಿದ ಮಾನಿನೀ
ಮಣಿಯ

ನಮ್ಮನೀಗಲೆ ಅಗಲಿ ಪೋಪುದು।
ದುಮ್ಮಾನಗೊಂಡಿತು ಸರ್ವ ಜನಗಳ।
ಅಮ್ಮನನು ಕಳೆಕೊಂಡ ನಾಮ್ಮಳು
ಭಾಗ್ಯಹೀನರಲಾ॥೫॥

ಇಂತಿಸೆದಗಲಿದಾವರ।
ರತ್ನಸಾಧ್ವೀಕುಲ ಶಿರೋಮಣಿ।
ಶಾಂತಿ ಪೊಂದಿ 'ಮಹಾತ್ಮ'ಳೆಯಲಿ
ಅತೀವ ಚಿಣವಹೊ॥

ಎಂ. ಎಸ್. ಪಾವನಕಮ್ಮ

ಕಾಫಿಯಲ್ಲಿ ಬೆರಿಕೆ ಕಂಡುಹಿಡಿಯುವ ವಿಧಾನ

ಕಾಫಿಯಲ್ಲಿ ಬೆರಿಕೆಯಾಗಿರುವುದನ್ನು ಪತ್ತೆ ಹಚ್ಚುವ ವಿಧಾನವನ್ನು ಕೇಂದ್ರ ಆಹಾರ ಸಂಶೋಧನಾಲಯದವರು ಕಂಡುಹಿಡಿದಿರುತ್ತಾರೆ ಕಾಫಿಯೊಡನೆ ಹುಣಸೇ ಮತ್ತು ಇತರ ಬೀಜಗಳನ್ನು ಬೆರೆಸಲಾಗುತ್ತಿದೆ ಕಾಫಿಯನ್ನು ಶೋಧಿಸಿದ ಮೇಲೆ ಉಳಿಯುವ ಗಸಿಯೊಡನೆ ಕಾಸ್ಟಿಕ್ ಸೋಡಾವನ್ನು ಬೆರೆಸಿ, ಆಗ ಅದು ವಿವರ್ಣವಾದರೆ ಬೆರಿಕೆಯಾಗಿದೆಯೆಂದು ಗೊತ್ತಾಗುವುದು ಶುದ್ಧವಾದ ಕಾಫಿ ಪುಡಿಯಿದ್ದರೆ ಅದರ ಮೇಲೆ ಕಾಸ್ಟಿಕ್ ಸೋಡದ ಪರಿಣಾಮವೇನೂ ಆಗುವುದಿಲ್ಲ

ಸಂಸ್ಕೃತ ಸಂಘ

ನಗರದಲ್ಲಿರುವ ಮಹಾರಾಜಾ ಹೈ ಸ್ಕೂಲಿನ ಸಂಸ್ಕೃತ ಸಂಘದ ಪ್ರಾರಂಭ ಭಾಷಣವನ್ನು ಕಳೆದ ಸೋಮವಾರ ನಿವೃತ್ತ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಂ ಆರ್ ವೆಂಕಟಸುಬ್ಬಾಶಾಸ್ತ್ರಿಗಳವರು ಮಾಡಿದರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಎಸ್ ರಾಜಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆಯನಂತರ, ಸಂಘದ ಉಪಾಧ್ಯಕ್ಷರಾದ ವಿ ನಂದೀಬಸವಯ್ಯನವರು ಸ್ವಾಗತ ಬಯಸಿದರು ಕೆ ಎಸ್ ವಾಸುದೇವರವರು ಸಂಘದ ರಚನೆ ಮತ್ತು ಉದ್ದೇಶಗಳನ್ನು ವಿವರಿಸಿದರು ಸಂಸ್ಕೃತದ ಹಿರಿಮೆ ವಿಷಯವಾಗಿ ಅತಿಥಿಗಳು ಭಾಷಣ ಮಾಡಿದರು ಅಧ್ಯಕ್ಷರು ಸಂಘಕ್ಕೆ ಯಶಸ್ಸನ್ನು ಕೋರಿ ಹಿತವಚನವನ್ನಿತ್ತರು

ರೇಡಿಯೊ ಪ್ರಸಾರ ಮಂದಿರದ ಆರಂಭ

ರಾಜಧಾನಿಯ ವಿದ್ಯಾರಣ್ಯಪುರದ ಬಳಿ ಹೊಸದಾಗಿ ಏರ್ಪಡಿಸಿರುವ ಪೌರಸಭಾ ರೇಡಿಯೊ ಪ್ರಸಾರ ಮಂದಿರದ ಪ್ರಾರಂಭೋತ್ಸವವನ್ನು ನಾಳೆ ಸಂಜೆ ೬ ಗಂಟೆಗೆ ಪೌರಸಭಾ ಕಮೀಷನರ್ ಶ್ರೀ ಎ ವಿಶ್ವನಾಥ್‌ರವರು ನೆರವೇರಿಸುವರು

ನಂಜನಗೂಡು ಪುರಸಭಾ ಚುನಾವಣೆ

ನಂಜನಗೂಡು ಪುರಸಭೆಗೆ ಚುನಾವಣೆಯು ಮೊನ್ನೆ ನಡೆದು ಈ ಕೆಳಗೆ ಕಂಡವರು ಆರಿಸಲ್ಪಟ್ಟಿರುತ್ತಾರೆ - ಶ್ರೀಗಳಾದ ಬಿ ಎಸ್ ಎಸ್ ಆರಾಧ್ಯ ಎನ್ ನಾಗಪ್ಪ ಕೆ ನರಸೇಗೌಡ ಪಿ ಮಾದೇಗೌಡ ಎಸ್ ಎಸ್ ರಾಜಯ್ಯಂಗಾರ್, ಎಲ್ ಪಿ ನಂಜಪ್ಪ, ವೈ ಕೆ ಎಸ್ ಲಕ್ಷ್ಮಣಶೆಟ್ಟಿ ಕೆ ವೆಂಕಟಸುಬ್ಬ ಮಹಮದ್ ಯಾಕೂಬ್, ಎಸ್ ರಾಚಯ್ಯ ಕಾಳೇಗೌಡ, ಕೃಷ್ಣಪ್ಪ ಕೃಷ್ಣಯ್ಯ, ಕೆ ಕುಮಾರ್, ಬಿ ಶ್ರೀಕಂಠಯ್ಯ, ಬಿ ವಿ ಬಾಲಸುಬ್ರಹ್ಮಣ್ಯಂ, ಎಸ್ ಎ ರಹಿಮಾನ್ ಷರೀಫ್ ಸಿ ಚನ್ನಯ್ಯ, ಮಾರಯ್ಯ ಮತ್ತು ಪುಟ್ಟಸ್ವಾಮಿ

ಬ್ರಿಟನ್ನಿಗೆ ಮಾಲೆಂಕಾವ್ ಭೇಟಿ

ಇದೇ ೧೫ನೆ ತಾರೀಕು ರಷ್ಯದ ವಿಗಜಿ ಪ್ರಧಾನಿ ಮತ್ತು ಉಪ ಪ್ರಧಾನಿ ಜಾರ್ಜ್ ಮಾಲೆಂಕೊವರು ಬ್ರಿಟನ್ನಿಗೆ ಭೇಟಿ ಕೊಡುವರು ಅವರ ನೇತೃತ್ವದಲ್ಲಿ ಆಲ್ಲಿಗೆ ನಿಯೋಗವೊಂದು ಹೋಗಲಿದೆ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೇವರು ಬರುವ ತಿಂಗಳು ೧೮ನೇ ತಾರೀಕು ಬ್ರಿಟನ್ನಿಗೆ ಭೇಟಿಕೊಟ್ಟು ಅಲ್ಲಿ ೧ ವಾರವಿರುವರು

ತಿರುವೆಂಬಾವೈ ತಿರುಪ್ಪಾವೈ-ತಿರುಮುಕೈ ಆರಂಗ ಸಮ್ಮೇಳನ

ಜಗದ್ಗುರು ಶ್ರೀ ಕಂಚಿ ಕಾಮಕೋಟಿ ಪೀಠಾಧಿಪತಿಗಳಾದ ಶ್ರೀ ಶ್ರೀ ಶಂಕರಾಚಾರ್ಯರ ಉತ್ತೇಜನದಿಂದ ನಡೆಯುತ್ತಿರುವ ಮೇಲ್ಕಂಡ ಸಮ್ಮೇಳನದ ತೃತೀಯ ಅಧಿವೇಶನವು ಇದೇ ೧೧ನೇ ತಾರೀಕು ಸಂಜೆ ರಾಜಧಾನಿಯ ಶಂಕರಮಠದಲ್ಲಿ ನೆರವೇರುವುದು ಕೇಂದ್ರ ಆಹಾರ ಸಂಶೋಧನಾಲಯದ ಡೈರೆಕ್ಟರೂ, ತಮಿಳು ಸಂಘದ ಅಧ್ಯಕ್ಷರೂ ಆದ ಡಾ॥ ವಿ ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿ ಬಹುಮಾನಗಳನ್ನು ಹಂಚುವರು ಸಕಲರಿಗೂ ಆಹ್ವಾನವಿದೆ ಮಹಿಳೆಯರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗಿದೆ

ಬ್ಯಾಡ್ಮಿಂಟನ್ ಟೂರ್ನಮೆಂಟ್

ಪಯೊನೀರ್ ಸ್ಪೋರ್ಟ್ಸ್ ಕ್ಲಬ್ಬಿನವರು ಈ ತಿಂಗಳು ೨೮ನೇ ತಾರೀಖಿನಿಂದ ಡಬಲ್ಸ್ ಮತ್ತು ಫೈನಲ್ ಬ್ಯಾಡ್ಮಿಂಟನ್ ಟೂರ್ನಮೆಂಟನ್ನು ಏರ್ಪಡಿಸಿರುತ್ತಾರೆ ಎಲ್ಲಾ ಕ್ಲಬ್ಬುಗಳು, ಶಾಲಾ ಕಾಲೇಜುಗಳು ಮತ್ತು ಇತರ ಸಂಸ್ಥೆಗಳೂ ಅದರಲ್ಲಿ ಭಾಗವಹಿಸಬಹುದು ಈ ತಿಂಗಳು ೧೫ರೊಳಗೆ ಎರಡು ಪಂದ್ಯಗಳಿಗೂ ೩ ಮತ್ತು ೫ ರೂ ಶುಲ್ಕಗಳೊಡನೆ ಅರ್ಜಿಗಳನ್ನು ಕಳುಹಿಸಬಹುದೆಂದು ಕಾರ್ಯದರ್ಶಿಗಳು ಸೂಚಿಸಿರುತ್ತಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ದಿಲ್ಲಿಯಿಂದ ೬ ೧೫ ಎಸ್ ಎಸ್ ನೆ ಟೀಶ್ಯಾರಿ ಪುರಂದರದಾಸರ ದೇವರನಾಮ ೬ ೪೦ ಹಿಂದಿ ಪಾಠ ೮ ೧೫ ರಿಕಾರ್ಡು ಮಧ್ಯಾಹ್ನ ೧೨ ವೀಣೆ ವಾದ್ಯ ಸಂಗ್ರಾಹ ಸಂಗೀತ ೧೨ ೪೦ ವಾದ್ಯವೃಂದ ೧ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ೧ ೫೦ ದಿಲ್ಲಿಯಿಂದ ೨ ವಿಶ್ವಾದ್ಯಗೀತ ೩ ೧೫ ಪ್ರೌಢಶಾಲೆಗಳಿಗಾಗಿ ಸಂಜೆ ೫ ೪೦ ವೀಣೆ ವಾದ್ಯ ೬೦ ಗ್ರಾಮ-ಸಂಗೀತ ೬ ೧೫ ಉರ್ದು ಗೀತ ೭ ೪೦ ಪುಸ್ತಕ ವಿಮರ್ಶೆ ೮ ಮುದ್ರಾಸಿನಂತೆ ಸಂಗೀತ ೯ ೧೫ ತರಂಗ ರಂಗ ಕನ್ನಡದಲ್ಲಿ ವಿವಿಧ ಕಾರ್ಯಕ್ರಮ ೧೦ ರಿಕಾರ್ಡು

Edited, Printed and Published by A R Nagarajan at Sadhvi Press D Subbiah Road Mysore

ಇಂಗ್ಲೆಂಡಿನಲ್ಲಿ ಮತ್ತೊಬ್ಬ ಭಾರತೀಯನ ಕೊಲೆ

ಇಂಗ್ಲೆಂಡಿನ ಕವೆಂಟ್ರಿಯಲ್ಲಿ ಮೊನ್ನೆ ... ಎರ್‌ಸಿಂಗ್ ಎಂಬ ೩೦ ವರ್ಷದ ... ಯನೊಬ್ಬನು ತಿವಿತದ ಗಾಯದ ... ಗ ರಸ್ತೆಯಲ್ಲಿ ಮೃತಪಟ್ಟು ಬಿದ್ದಿದ್ದ ... ತಿಂಗಳ ಹಿಂದೆ ಅಸ್ಸಾಂ ವಿದ್ಯಾರ್ಥಿ ... ಲಂಡನ್ನಿನಲ್ಲಿ ಕೊಲೆ ಮಾಡಲ್ಪಟ್ಟಿದ್ದ

ಮುದುಕುತೊರೆಯಲ್ಲಿ ಸನ್ಮಾನ ಸಮಾರಂಭ

ಮುದುಕುತೊರೆ ಜಾತ್ರೆಯಲ್ಲಿ ಸೇವೆ ... ಕರು ಕಳೆದ ೧ನೇ ತಾರೀಕು ತಲಕಾಡಿನ ... ಮರಾಯರು ಮತ್ತು ಅವರ ಸಹೋದ್ಯೋಗಿ ... ಗೌರವಾರ್ಥವಾಗಿ ಸನ್ಮಾನ ಸಮಾರಂಭ ... ರ್ಪಡಿಸಿದ್ದರು ಗ್ರಾಮದ ಛೇರ್ಮನ್ ಶ್ರೀ ... ನವರು ಅಧ್ಯಕ್ಷತೆ ವಹಿಸಿದ್ದರು ಜಾತ್ರೆಯ ... ಟ್ರಾಕ್ಟರು ದುಬಾರಿ ಕಂದಾಯ ವಿಧಿಸ ... ದೆಗಟ್ಟಿಯದಕ್ಕಾಗಿ ಅತಿಥಿಗಳಿಗೆ ವಂದನ ... ಮೂಲಕ ಕೃತಜ್ಞತೆಯನ್ನು ಸೂಚಿಸಿ, ... ಯೂ ಸದಾ ಈ ವಿಚಾರದಲ್ಲಿ ತಕ್ಕ ... ದಲೇಕೆಂದು ಕೋರಿದರು

ಸಂತಾಪ ಸೂಚನೆ

ರಾಜಧಾನಿಯ ಕೃಷ್ಣರಾಜೇಂದ್ರ ಗಿ... ಮೇಕರ ಸಂಘದ ಕಾರ್ಯಕಾರಿ ಸಮಿತಿ ಸ... ಕಳೆದ ಭಾನುವಾರ ನಡೆದು, ದಿವಂಗತ ... ರಾಣಿ ಲಕ್ಷ್ಮೀವಿಲಾಸ ಸನ್ನಿಧಾನದವ... ಕ್ಕಾಗಿ ಸಂತಾಪವನ್ನೂ, ರಾಜಕುಟುಂಬದ ... ತ್ತು ರಾಜಮನೆತನದವರಿಗೆ ಅನುಕಂಪ ... ಸೂಚಿಸಲಾಯಿತು

ಮೈಸೂರು ಪೇಟೆ ಧಾರಣೆ

	ರೂ	ಮುಂದ	ರೂ
ಕಡಲೆಕಾಯಿ	೧೫ ೧೨ ೦		[illegible]
ಕಡಲೆಬೇಳೆ	೨೭ ೦ ೦		[illegible]
ಮುಚ್ಚೆಳ್ಳು	೪೦ ೦ ೦		[illegible]
ತೊಗರಿಬೇಳೆ	೧೬ ೦ ೦		[illegible]
ಉದ್ದು	೨೪ ೨ ೦		[illegible]
ಹೆಸರು	೪೯ ೦ ೦		[illegible]
ಕಡಲೆ	೩೪ ೧೪ ೦		[illegible]
ಹಲಸಂದೆ	೩೨ ೨ ೦		[illegible]
ಅವರೆ	೩೭ ೮ ೦		[illegible]
ತೊಗರಿ	೨೫ ೪ ೦		
ಧನಿಯ	೩೫ ೪ ೦		
ಹೆಸರುಬೇಳೆ	೩೮ ೦ ೦		[illegible]
ಹುರುಳಿಬೇಳೆ	೭ ೧೦ ೦		[illegible]
ಸೀಗೆಕಾಯಿ	೬ ೨ ೦		[illegible]
ಹುಣಸೇಹಣ್ಣು	೨ ೧೦ ೦		[illegible]
ಕೊಬ್ಬರಿಕಾಯಿ	೪ ೦ ೦		[illegible]
ತೆಂಗಿನಕಾಯಿ ೧೦೦೦	೧೨೦ ೪ ೦		[illegible]

SREE GAYATHRI TALKIES

From 8-3-56 For 3 days
Daily 3 Shows

It's Now the First Pirate Adventure Story ever filmed in Cinemascope and Eastman Color

Twentieth Century's

LONG JOHN SILVER

Starring -Robert Newton and Kit Taylor

DALVOY HIGH SCHOOL
(COACHING SECTION)

Offers efficient coaching for S S L C Spl Students by able teachers Admissions received Classes between 6 & 9 P M Fees for the whole course Rs 17

S N Subbakrishnan, B A, B Com
Secretary

ಒಲಿಂಪಿಯಾ ★

9 3-56 ರಿಂದ ಅಮೋಘ ಪ್ರಾರಂಭ
ದಿನವೂ ಮೂರು ಪ್ರದರ್ಶನಗಳು

ಜೀವನದಲ್ಲಿ ಪಾತ್ರ ವಹಿಸುತ್ತಿರುವ ಕಥೆ ... ಅದಾಲ ಹೃದ್ಯರಾದಿಯಾಗಿ ಪ್ರತಿಯೊಬ್ಬರೂ ...
ಜೀವನದ ಚಿತ್ರ ಜೀವನದ ಪ್ರತಿ ಹೆಜ್ಜೆಯಲ್ಲಿ ಸೋಲನ್ನು ಒಪ್ಪಿದರೂ, ಅದನ್ನು ...
ಸಹಿಸಿಕೊಂಡು ಅದನ್ನೇ ಧೈರ್ಯದಿಂದ ಎದುರಿಸಿದ ಒಬ್ಬ ಹೆಣ್ಣಿನ ಹೃದಯ ಚಿತ್ರಾವಳಿ ...
ಕುಲದೀಪ್ ಎಕ್ಸ್‌ಚೇಂಜ್‌ರವರ ಸುಂದರ ಸಾಮಾಜಿಕ ಚಿತ್ರ

ಸರೋಜ ದಾಯ್, ಬಾಲಸಾಹ ಸಹಾನಿ, ರಮ್ಮಿ ಕಪೂರ್, ಮತ್ತು ಸೋರಿ ನಟಿಸಿರುವ

ಟಾಂಗಾವಾಲಾ

ಮಹಾ ಶಿವರಾತ್ರಿ ಪ್ರಯುಕ್ತ 10 3-56ನೇ ಶನಿವಾರ ರಾತ್ರಿ 1 ಘಂಟೆಗೆ ಸ್ಪೆಷಲ್ ಪ್ರದರ್ಶನ

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

8 3-56ನೇ ಗುರುವಾರದಿಂದ . ಅಮೋಘ 3ನೇ ವಾರ

★ **ಹರಿಭಕ್ತ** ★
(ಕನ್ನಡ)

ಪಾತ್ರ — ಪಂಡರೀಬಾಯಿ, ರಾಜಕುಮಾರ್, ನರಸಿಂಹರಾಜು ಮುಂತಾದವರು

ಮಹಾ ಶಿವರಾತ್ರಿ ಪ್ರಯುಕ್ತ, 10-3-56ನೇ ಶನಿವಾರ 4 ಆಟಗಳು

ಲಕ್ಷ್ಮಿ ★

9—3—56 ರಿಂದ ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ವಿಕ್ರಮ್ ಪ್ರೊಡಕ್ಷನ್ಸ್‌ರವರ ಐತಿಹಾಸಿಕ ತಮಿಳು ಚಿತ್ರ

ಪಿ ಭಾನುಮತಿ, ಜಮುನ ಬಾಲಸರಸ್ವತಿ, ಸಂಧ್ಯಾ, ಶಿವಾಜಿ ಗಣೇಶನ್, ನಾಗಯ್ಯ, ಎನ್ ಟಿ ರಾಮರಾವ್ ಪಾತ್ರವಹಿಸಿರುವ

ತೆನಾಲಿರಾಮ

ಮಹಾ ಶಿವರಾತ್ರಿ ಪ್ರಯುಕ್ತ 10ನೇ ತಾರೀಕು ರಾತ್ರಿ 1 ಗಂಟೆಗೆ ವಿಶೇಷಪ್ರದರ್ಶನವಿದೆ

ರಣಜಿತ್ ಟಾಕೀಸ್ ★

8—3—56ನೇ ಗುರುವಾರದಿಂದ ಅಮೋಘ ಪ್ರಾರಂಭ
ಆಲ್ ಇಂಡಿಯಾ ಪಿಕ್ಚರ್ಸ್‌ರವರ ಪೌರಾಣಿಕ ಹಿಂದಿ ಚಿತ್ರ

ತ್ರಿಲೋಕ್ ಕಪೂರ್, ಮಾಲಾಸಿನ್ಹ, ಶಶಿಕುಮಾರ್, ಪದ್ಮಾ, ಗೋಪ್ ಮತ್ತು ಜೀವನ್ ಪಾತ್ರವಹಿಸಿರುವ

★ **ಏಕಾದಶಿ** ★ (ಮೋಹಿನಿ-ರುಕ್ಮಾಂಗದ ಕಥೆ)

10—3 56 ನೇ ಶನಿವಾರ ರಾತ್ರಿ 1 ಘಂಟೆಗೆ ವಿಶೇಷ ಪ್ರದರ್ಶನವಿದೆ [G F D Release]

ರಿಜಿಸ್ಟರ್ ನಂ. 792

FOR BEST
Half-tone & Line
BLOCKS
Contact —
Sri Sharada Press,
Hanumantha Rao St.
MYSORE

ಸಾಧ್ವಿ

ಲಗ್ನದ ಜವಳಿ
ಗೌನ್ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ,
ಆರ್ಣಿ, ಬೆಂಗಳೂರ್
M.V. ಭೋಜಯ್ಯ
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಂ ೧೪] SADHVI : FRIDAY 9-3-1956 ಮೈಸೂರು ಶುಕ್ರವಾರ : ೯-೩-೧೯೫೬ [ಸಂಚಿಕೆ : ೧೯೯

ಪಾಕಿಸ್ತಾನದ ಸೈನ್ಯಬಲ ಹೆಚ್ಚಿಸಲು ಅಮೆರಿಕದ ನೆರವು

ಪಾಕಿಸ್ತಾನದ ಸೈನ್ಯ ಬಲ ಹೆಚ್ಚಿಸಲು ಅಮೆರಿಕದ ನೆರವು

ಪಾಕಿಸ್ತಾನದ ಮಿಲಿಟರಿ ಬಲವನ್ನು ಹೆಚ್ಚಿಸ ಅಮೆರಿಕವು ಸೈನಿಕ ಸಹಾಯವನ್ನು ಕೊಡ ವಾಗಿ ನೆನ್ನೆ ಆಗ್ನೇಯ ಏಷ್ಯಾ ಒಪ್ಪಂದ ರಕ್ಷಣಾ ಸಭೆಯಲ್ಲಿ ಅಮೆರಿಕದ ವಿದೇ ಮಂತ್ರಿ ಡಲೆಸರು ತಿಳಿಸಿದರೆಂದು ವರ ಗಿದೆ ಅದಕ್ಕೆ ಮುಂಚಿತವಾಗಿ ಸಭೆಯಲ್ಲಿ ಸ್ತಾನದ ಹಣಕಾಸಿನ ಮಂತ್ರಿ ಅಮ್ಜಾದ್ ಯವರು ಮಾತನಾಡಿ, ಮಿಲಿಟರಿ ವ್ಯವಸ್ಥೆಗಾ ಕಿಸ್ತಾನವು ಭಾರಿ ವೆಚ್ಚವನ್ನುವಹಿಸುತ್ತಿರು ಗಿಯೂ, ಆದರೂ ಇತರ ಸೀಟೊರಾಷ್ಟ್ರಗ ಸೈನ್ಯಸಹಾಯ ಬೇಕೆಂದೂ ಕೋರಿದರು ಸ್ತಾನವು ಶೇಕಡ ೬೫ ರಷ್ಟು ವರಮಾನವ ಮಿಲಿಟರಿಗಾಗಿ ಉಪಯೋಗಿಸುತ್ತಿರುವು ದರಿಂದ ರಾಷ್ಟ್ರಾಭಿವೃದ್ಧಿ ಕಾರ್ಯಗ ದೆ ೬೫ ಮಾಡಬೇಕಾಗಿ ಬಂದಿರುವುದೆಂ ಅಮ್ಜಾದ್ ಅಲಿಯವರು ಹೇಳಿ, ಮುಂದೆ ಸಹ ಇದೇ ಮೊಬಲಗನ್ನು ಮಿಲಿಟರಿಗಾ ವ್ಯ ಮಾಡಲಾಗುವುದೆಂದು ತಿಳಿಸಿದರು

ಲೋಕಸಭಾಧ್ಯಕ್ಷರಾಗಿ ಅನಂತಶಯನಂರವರ ಆಯ್ಕೆ

ಲೋಕಸಭೆಯ ಉಪಾಧ್ಯಕ್ಷ ಎಂ ಅನಂತ ಶಯನ ಅಯ್ಯಂಗಾರ್ಯರು ದಿ| ಮೌಲಂಕರರ ಸ್ಥಾನದಲ್ಲಿ ಸಭಾಧ್ಯಕ್ಷರಾಗಿ ನೆನ್ನೆ ಸರ್ವಾನುಮ ತದಿಂದ ಚುನಾಯಿತರಾದರು ಪ್ರಧಾನಿ ನೆಹರೂ ಅವರ ಹೆಸರನ್ನು ಸೂಚಿಸಿದರು ಪಾರ್ಲಿಮೆಂಟ್ ವ್ಯವಹಾರಗಳ ಮಂತ್ರಿ ಸತ್ಯನಾರಾಯಣ ಸಿನ್ಹರವರು ಅನುಮೋದಿಸಿದರು

ಪಾಕಿಸ್ತಾನ ಸರ್ಕಾರದ ಒತ್ತಾಯ ಪ್ರತಿಭಟಿಸಿ ಜಿಲ್ಲರ ರಾಜೀನಾಮೆ

ಪಖ್ತೂನಿಸ್ತಾನದ ಸ್ವಾತಂತ್ರ್ಯ ಪ್ರೇಮಿಗಳ ಹಕ್ಕುಗಳನ್ನು ಹೊರಡಿಸುವಂತೆ ಪಾಕಿಸ್ತಾನ ಸರ್ಕಾರದವರು ತರುತ್ತಿದ್ದ ಒತ್ತಾಯವನ್ನು ಪ್ರತಿಭಟಿಸಿ, ಕ್ವೆಟ್ಟಾ ಸಿಬಿ ಜಿಲ್ಲಾ ಧಿಕಾರಿಯಾದ ಮಹಮದ್ ಅಕ್ಬರ್ ಖಾನ್ ರವರು ರಾಜೀನಾಮೆ ಕೊಟ್ಟಿದ್ದಾರೆ

...ಗಳಿಗೆ ನಗರದ ಬಸ್ ಸರ್ವೀಸ್

...ಯಿಂದ ದೇವರಾಜ ಮಾರ್ಕೆಟ್ ಬಸ್ ...ದಿಂದ ಹಿನಕಲ್ಲಿಗೆ ಸಿಟಿ ಬಸ್ ಸರ್ವೀಸ್ನ ಏರ್ಪಡಿಸಲಾಗುವುದು ಕೃಷ್ಣ ವಿಲಾಸ, ...ರ್ ಮೆಟ್ರೊಪೋಲ್, ಜಲದರ್ಶಿನಿ, ...ತಿ ರಸ್ತೆ, ಆದಿಪಂಪ ರಸ್ತೆ, ಪಡುವಾರಹ ...ಪ್ರೀಮಿಯರ್ ಸ್ಟುಡಿಯೋ ಮಾರ್ಗವಾಗಿ ...ಲ್ಲಿಗೆ ಬಸ್ಸು ಹೋಗಿ ಬರುವುದು.

ಗೋಹತ್ಯೆಗಾಗಿ ಶಿಕ್ಷೆ

...ಸ್ಕರ್ ಮೊಹಲ್ಲ ಕಸಾಬಗೇರಿಯ ಅಹಮ ...ಲಿಂ ಮತ್ತು ನೇಕ್ ಅಬ್ದುಲ್ಲಾ ಎಂಬುವ ...ಗೋಹತ್ಯೆ ಮಾಡುತ್ತಿದ್ದುದಕ್ಕಾಗಿ ನೆನ್ನೆ ನಗ ...ನ್ಯಾಯಾಧೀಶರು ಅವರುಗಳಿಗೆ ತಲಾ ೨೦೦ ...ಜುಲ್ಮಾನೆ, ತಪ್ಪಿದರೆ ೧|| ತಿಂಗಳು ಸಾದಾ ...ವನ್ನು ವಿಧಿಸಿರುತ್ತಾರೆ.

ಕಾಶ್ಮೀರದ ಬಗ್ಗೆ ಸೀಟೊ ನಿರ್ಣಯ ತೀವ್ರ ಸ್ವರೂಪದ್ದು

ಪ್ರಧಾನಿ ನೆಹರೂರವರ ಹೇಳಿಕೆ

ರಾಜ್ಯ ಸಭೆಯಲ್ಲಿ ನೆನ್ನೆ ವಿರೋಧ ಪಂಗಡದ ಸದಸ್ಯರು ಸೀಟೊ ಸಭೆಯಲ್ಲಿ ಕಾಶ್ಮೀರ ವಿಷಯ ವನ್ನು ಪ್ರಸ್ತಾಪಿಸಿರುವ ಬಗ್ಗೆ ತ್ವರಿತ ಚರ್ಚೆ ಯನ್ನು ನಡೆಸುವ ತೆ ಒತ್ತಾಯಪಡಿಸಿದಾಗ ನೆಹರೂರವರು ಸಭಾ ದ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತಾ ಆ ವಿಷಯವು ತೀವ್ರವಾದುದೆಂದು ಹೇಳಿದರು ಸೀಟೊ ಸಭೆಯಲ್ಲಿ ಕಾಶ್ಮೀರದ ವಿಷಯವು ಚರ್ಚಾರ್ಹವಲ್ಲವೆಂದು ಪ್ರತಿಭಟಿಸುವ ಕರಾಚಿಗೆ ಕೊಟ್ಟ ಪ್ರತಿಭಟನೆಯಲ್ಲಿ ಬ್ರಿಟಿಷ್ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡರವರು ಹೇಳಿದ ಮಾತು ಈ ವಿಷಯವನ್ನು ಕಲ್ಪಿಸಿರುವುದರಿಂದ ಆ ಪ್ರತಿಭಟನೆಯ ಕಾಪಿಯನ್ನು ಕಾರ್ಯಾಲಯದಿಂದ ಪಾರ್ಲಿಮೆಂಟ್ ಸದಸ್ಯರು ಅಭಿಪ್ರಾಯಪಟ್ಟು ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಲೆಂದು ಒತ್ತಾಯಪಡಿಸಿರುವರು

ಪಾಕಿಸ್ತಾನ, ಸಯಾಂ ಮತ್ತು ಫಿಲಿಪ್ಪೈನುಗಳಲ್ಲಿ ವಿದೇಶೀ ಸೈನ್ಯ

ಆಗ್ನೇಯ ಏಷ್ಯಾ ರಕ್ಷಣಾ ಒಪ್ಪಂದ ಕೌನ್ಸಿಲ್‌ನ ಏಷ್ಯಾ ಸದಸ್ಯರಾದ ಪಾಕಿಸ್ತಾನ ಥೈಲೆಂಡ್ ಮತ್ತು ಫಿಲಿಪ್ಪೈನುಗಳಲ್ಲಿರುವ ಸ್ಥಳೀಯ ಸೈನ್ಯಗಳ ಬಲವನ್ನು ಅಧಿಕಗೊಳಿಸಬೇಕೆಂದು ಸೀಟೊ ಮಂಡಲವು ನಿರ್ಧರಿಸಿದೆ ಸೀಟೊ ರಾಷ್ಟ್ರಗಳಲ್ಲಿ ಬುಡಮೇಲು ಮಾಡುವಂತಹ ಚಟುವಟಿಕೆಗಳನ್ನು ತಡೆಯಲು ಕೈಗೊಳ್ಳಬೇಕಾದ ಆರ್ಥಿಕ ಕ್ರಮ ಗಳ ಪರಿಶೀಲನೆಗಾಗಿ ಪ್ರವೀಣರ ಸಮಿತಿಯನ್ನು ರಚಿಸಲೂ ನಿರ್ಧರಿಸಲಾಯಿತು

ಭದ್ರಾವತಿಯಲ್ಲಿ ಯಂತ್ರ ಸಹಾಯದಿಂದ ಸಾಗುವಳಿ

ಭದ್ರಾವತಿ ಬಳಿ ಯಂತ್ರಗಳ ಮೂಲಕ ಸಾಗುವಳಿಗಾಗಿ ಸಹಕಾರ ವ್ಯವಸಾಯ ಕ್ಷೇತ್ರವನ್ನು ಏರ್ಪಡಿಸುವುದಕ್ಕೆ ಬೇಕಾಗುವ ಪಾಂಥಿಕ ಮತ್ತು ಇತರ ಸಹಾಯವನ್ನೀಯಲು ವಿದೇಶೀ ಕಂಪೆನಿಯೊಂದು ಮುಂದೆಬಂದಿರುವುದಾಗಿ ಗೊತ್ತಾಗಿದೆ ಅಲ್ಲಿನ ರೈತರ ಸಹಕಾರ ಸಂಘವು ಮೇಲ್ಕಂಡಂತಹ ಕ್ಷೇತ್ರವನ್ನು ನಿರ್ಮಿಸುವಂತೆ ಸರ್ಕಾರವನ್ನು ಒತ್ತಾಯಪಡಿಸಿದೆ ಈ ಏರ್ಪಾಡನ್ನು ಜಾರಿಗೆ ತರಲು ೩೦ ಸಾವಿರ ಎಕರೆ ಜಮೀನು ಮತ್ತು ಪ್ರಾರಂಭಿಕ ವೆಚ್ಚಕ್ಕಾಗಿ ಹಲವಾರು ಲಕ್ಷ ರೂ ಬೇಕಾಗುವುದು

ಸಂ ತಾ ಪ ಸೂ ಚ ನೆ

ನಗರದ ಆಯುರ್ವೇದ ವೈದ್ಯರ ಸಂಘದ ಸಭೆಯು ಕಳೆದ ಸೋಮವಾರ ಡಾ| ಪಿ ಎಸ್ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ, ಆ ವೇಜರ್ ಮಹಾರಾಣಿ ಲಕ್ಷ್ಮೀವಿಲಾಸ ಸನ್ನಿಧಾನದವರು ಮತ್ತು ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ರವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು ಮೃತರ ಆತ್ಮಕ್ಕೆ ಶಾಂತಿ ಕೋರಿ ಬಂಧುಮಿತ್ರರಿಗೆ ಅನುತಾಪವನ್ನು ಸೂಚಿಸಲಾಯಿತು

ಗುರೂಜಿ ಗೋಲ್ವಾಲ್ಕರರ ಜನ್ಮ ದಿನೋತ್ಸವ

೨,೩೨೦ ರೂ ನಿಧಿ ಸಂಗ್ರಹ

ಮೈಸೂರು ೯

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಶ್ರೀ ಎಂ ಎಸ್ ಗೋಲ್ವಾಲ್ಕರರ ೫೧ನೇ ಜನ್ಮ ದಿನೋತ್ಸವದ ಅಂಗವಾಗಿ ನೆನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಭಾರಿ ಸಭೆಯೊಂದನ್ನು ಏರ್ಪಡಿಸಲಾಗಿತ್ತು ಶ್ರೀ ಜಿ ಆರ್ ಜೋಸ್ಯರ್‌ರವರು ಅಧ್ಯಕ್ಷತೆ ವಹಿಸಿದ್ದರು

ಸಂಘದ ಕರ್ನಾಟಕ ಪ್ರಾಂತ ಪ್ರಚಾರಕರಾದ ಶ್ರೀ ಯಾದವರಾವ್ ಜೋಶಿಯವರು ಭಾಷಣ ಮಾಡಿ ಶ್ರೀ ಗೋಲ್ವಾಲ್ಕರರ ರಾಷ್ಟ್ರ ಪ್ರೇಮ, ನಿಸ್ವಾರ್ಥ ಸೇವೆ ಸಂಘಟನಾ ಶಕ್ತಿ ಮುಂತಾದ ವಿಚಾರಗಳನ್ನು ಪ್ರಶಂಸಿಸಿ ಶ್ರೀ ಗೋಲ್ವಾಲ್ಕರರು ಈಗಿನ ಸಂದಿಗ್ಧ ಸಮಯದಲ್ಲಿ ರಾಷ್ಟ್ರಕ್ಕೆ ತಕ್ಕ ಮಾರ್ಗದರ್ಶನವನ್ನು ನೀಡಬಲ್ಲ ಸಮರ್ಥ ಪುರುಷರಾಗಿದ್ದಾರೆ ಎಂದು ನುಡಿದರು ಭಾರತದ ಈಗಿನ ಕಷ್ಟಗಳಿಗೆ ಸರ್ಕಾರದ ದೇಶೀಯ ಮತ್ತು ವಿದೇಶೀಯ ನೀತಿಗಳೇ ಕಾರಣವೆಂದು ಟೀಕಿಸಿದರು

ಶ್ರೀ ಗೋಲ್ವಾಲ್ಕರರ ಸೇವೆಯ ಸಂಸ್ಮರಣೆಗಾಗಿ ಸಮರ್ಪಿಸಲು ಇದುವರೆಗೆ ನಗರದಲ್ಲಿ ೨,೩೨೦ ರೂ ಗಳು ವಸೂಲಾಗಿವೆಯೆಂದೂ, ಅದನ್ನು ಬೆಂಗಳೂರಿಗೆ ಇದೇ ತಿಂಗಳು ೩೦ನೇ ತಾರೀಕು ಶ್ರೀ ಗೋಲ್ವಾಲ್ಕರರು ಬಂದಾಗ ಅವರಿಗೆ ಸಮರ್ಪಿಸಲಾಗುವುದೆಂದೂ ತಿಳಿಸಿದರು

ಅಧ್ಯಕ್ಷರು ಮಾತನಾಡಿ ಗೋಲ್ವಾಲ್ಕರರ ಗುಣ ಶೀಲಗಳನ್ನು ಪ್ರಶಂಸಿಸಿ ಅವರು ದೀರ್ಘ ಕಾಲ ಬಾಳಿ ದೇಶ ಸೇವೆ ಮಾಡಲೆಂದು ಹಾರೈಸಿದರು

ಪ್ರಾರಂಭದಲ್ಲಿ ಶ್ರೀ ಎ ಎಲ್ ಸುಂದರನಾರಾಯಣಶೆಟ್ಟರು ಸ್ವಾಗತಭಾಷಣ ಮಾಡಿದರು ಡಾ: ಬಿ ಆರ್ ಶಾಮಾಚಾರ್ಯರು ಮುಖ್ಯ ಭಾಷಣಕಾರರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು ನಗರದ ನಾನಾ ಸಂಘ ಸಂಸ್ಥೆಗಳ ಪರವಾಗಿ ಶ್ರೀ ಗುರೂಜಿಯವರ ಪಟಕ್ಕೆ ಹಾರಗಳನ್ನರ್ಪಿಸಲಾಯಿತು

ಪಂಚವಾರ್ಷಿಕ ಕಾರ್ಯಕ್ರಮದ ವರ್ಣರಂಜಿತ ಚಿತ್ರ

ಭಾರತ ಸರ್ಕಾರದ ಫಿಲಂ ಶಾಖೆಯವರು ಮೈಸೂರಿನ ಪಂಚವಾರ್ಷಿಕ ಕಾರ್ಯಕ್ರಮಗಳ ವರ್ಣರಂಜಿತ ಚಿತ್ರವನ್ನು ತೆಗೆಯಲಿರುವರು ಕುಂಭಕೋಣದಲ್ಲಿ ಆದ ಮಹಾ ಮಾಘದ ಚಲನಚಿತ್ರವನ್ನೂ ತೆಗೆಯಲಾಗಿದೆ ಬರುವ ವಾರ ಅದನ್ನು ಪ್ರದರ್ಶನಕ್ಕೆ ಕೊಡಲಾಗುವುದು

ಇರಾನ್ ರಾಜರ ನಿರ್ಗಮನ

ಇರಾನಿನ ಷಹಾ ಮತ್ತು ರಾಣಿ ಸುರಯ್ಯಾರವರು ನೆನ್ನೆ ಸ್ವದೇಶಾಭಿಮುಖವಾಗಿ ಬೊಂಬಾಯಿಯಿಂದ ಕರಾಚಿಗೆ ತೆರಳಿದರು ಅವರನ್ನು ಬೊಂಬಾಯಿ ಗೌರ್ನರ್ ಹರೇಕೃಷ್ಣ ಮಹತಾಬ್ ಮುಂತಾದವರು ಬೀಳ್ಕೊಟ್ಟರು ಕರಾಚಿಯಲ್ಲಿ ಅವರನ್ನು ಅಲ್ಲಿನ ಗೌರ್ನರ್ ಜನರಲ್ ಇಸ್ಕಂದರ್ ಮಿರ್ಜಾರವರು ಸ್ವಾಗತಿಸಿದರು

ನೇಪಾಳದಲ್ಲಿ ಶಿವರಾತ್ರಿ ಯಾತ್ರಿಕರಿಗೆ ಆಲಿಕಲ್ಲಿನೇಟು

ಅನೇಕರ ಮರಣ ಮತ್ತು ಸಹಸ್ರಾರು ಜನರಿಗೆ ಗಾಯ

ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿರುವ ಪಶುಪತಿನಾಥ ದೇವಾಲಯಕ್ಕೆ ಶಿವರಾತ್ರಿಗಾಗಿ ಹೊರಟಿದ್ದ ೫೦ ಸಹಸ್ರ ಜನ ಯಾತ್ರಿಕರು ಚಿಸಾಪಾನಿ ಮತ್ತು ಚಿಟ್ಲಾಂಗ್ ನಡುವೆ ಬಲವಾದ ಆಲಿಕಲ್ಲು ಮಳೆಗೆ ಸಿಕ್ಕಿ ಅನೇಕರು ಮಡಿದು, ಸಾವಿರಾರು ಜನರು ಗಾಯಗೊಂಡಿದ್ದಾರೆ ಹಲವರು ಮಾತ್ರ ಮರಗಳ ಕೆಳಗೂ, ಕಲ್ಲು ಬಂಡೆಗಳ ನಡುವೆಯೂ ಆಶ್ರಯ ಪಡೆದರು ಇತರರು ಆಲಿಕಲ್ಲಿನೇಟಿಗೆ ಸಿಕ್ಕಿ ತೊಂದರೆ ಪಟ್ಟರು ಹಲವು ಕಲ್ಲುಗಳು ಕ್ರಿಕೆಟ್ ಚೆಂಡಿನಷ್ಟು ಗಾತ್ರವಾಗಿದ್ದುವು ಯಾತ್ರಿಕರಿಗಾಗಿ ನೇಪಾಳ ಸರ್ಕಾರದವರು ಏರ್ಪಡಿಸಿದ್ದ ವಾಹನ ಸೌಕರ್ಯಗಳು ಸಾಲದೆ, ಜನರು ನಡೆದುಕೊಂಡುಹೋಗಲು ನಿರ್ಧರಿಸಿದರು ಪ್ರತಿ ವರ್ಷವೂ ಶಿವರಾತ್ರಿಗಾಗಿ ೧ ಲಕ್ಷ ಯಾತ್ರಿಕರು ಖಟ್ಮಂಡುವಿಗೆ ಹೋಗಿಬರುವರು

ಆಗ್ನೇಯ ಏಷ್ಯಕ್ಕೆ ಅಮೆರಿಕದ ಸೈನ್ಯ

ಆಗ್ನೇಯ ಏಷ್ಯಾ ರಕ್ಷಣಾ ರಾಷ್ಟ್ರಗಳ ಪ್ರದೇಶದಲ್ಲಿ ಯೋಧಶಕ್ತಿಯು ಕಡಿಮೆಯಾಗುವುದಕ್ಕೆ ಅವಕಾಶವೀಯುವುದಿಲ್ಲವೆಂದು ಅಮೆರಿಕದ ವಿದೇಶಾಂಗ ಮಂತ್ರಿ ಡಲೆಸರು ತಿಳಿಸುತ್ತಾ ಸೀಟೊ ರಕ್ಷಣಾ ವ್ಯವಸ್ಥೆಯ ಹಿನ್ನೆಲೆಯಲ್ಲಿ ಆಕ್ರಮಣವನ್ನು ಎದುರಿಸುವಂತಹ ಬಲವಾದ ಪಡೆಯನ್ನಿಡಬೇಕಾದುದು ಅಗತ್ಯವೆಂದು ಅವರು ನುಡಿದಿರುವರು

ಕಾಶ್ಮೀರ ಯುದ್ಧವು ವಿಶ್ವಕ್ಕೆ ಹಿಡಿಸದು

ಭಾರತದ ಪಾಲಿಸ್ಯ, ನೀತಿ ಬಗ್ಗೆ ವಿಶ್ವಸಂಸ್ಥೆ ಕಾರ್ಯದರ್ಶಿಗಳ ಹೇಳಿಕೆ

ವಿಶ್ವವನ್ನೇ ವಿಭಾಗ ಮಾಡಲು ತೊಡಗಿರುವ ಶಾಶ್ವತ ಘರ್ಷಣೆಯು ಅನೇಕ ಏಷ್ಯಾ ರಾಷ್ಟ್ರಗಳಿಗೆ ಹೊರತಾಗಿದೆಯೆಂದೂ, ಈ ಘರ್ಷಣೆಯು ಪಶ್ಚಿಮ ರಾಷ್ಟ್ರಗಳ ಎರಡು ಭಾರಿ ಕೂಟಕ್ಕೆ ಸಹಾಯ ಮಾಡುತ್ತಿರುವುದೆಂದೂ, ಪೂರ್ವವು ತನ್ನದೇ ಆದ ಪರಂಪರೆಯನ್ನು ಅನುಸರಿಸುತ್ತಿದೆಯೆಂದೂ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ತಿಳಿಸಿರುತ್ತಾರೆ ಭಾರತ ಮತ್ತು ಇತರ ರಾಷ್ಟ್ರಗಳು ಪೂರ್ವ ಪಶ್ಚಿಮಗಳ ನಡುವೆ ಇರುವ ಶಾಶ್ವತ ಯುದ್ಧದಲ್ಲಿ ಸೇರದಿರುವುದು ನ್ಯಾಯವೇ ಎಂಬುದಾಗಿ ಅವರನ್ನು ಪ್ರಶ್ನಿಸಲಾಗಿ, ಅವರು ಮೇಲ್ಕಂಡಂತೆ ನುಡಿದರು ಕಾಶ್ಮೀರದ ವಿವಾದದ ಬಗ್ಗೆ ವಿಶ್ವ ಸಂಸ್ಥೆಯು ಸ್ಪಷ್ಟವಾದ ನಿಲುವನ್ನು ತೋರಿರುವುದೆಂದು ಅವರು ಹೇಳಿರುವರು. ಕಾಶ್ಮೀರವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಪರಿವರ್ತಿಸಿ ಭಾರತ ಪಾಕಿಸ್ತಾನಗಳ ನಡುವಣ ವರ್ಷಗಳಿಂದ ಇರುವ ವಿವಾದವನ್ನು ಮುಕ್ತಾಯ ಮಾಡಬಹುದಲ್ಲವೇ ಎಂದು ಕೇಳಿದುದಕ್ಕೆ ಅವರು ಉತ್ತರವೀಯಲಿಲ್ಲ.

ಕಂಬನಿ

ಭೂರ್ಜ ದೇಶದಿ ಮೆರೆದ ಮಾನ್ಯವರ।
ರಾಜ ವಿನಯರ ತನಯೆ ಶುಭಗುಣ।
ರಾಜಿತಾಮಲ ಚರಿತೆ ಸುಜನರ ಕ್ಷೇಮ
ವಾಂಛಿಯು॥

ರಾಜಿಸುವ ಮೈಸೂರು ದೇಶದ।
ರಾಜ ಶ್ರೀ ಕೃಷ್ಣಭೂಪರ।
ರಾಜ್ಞಿ ಎನಿಸುತ ಮೆರೆದಳೀ ಸಕಲ
ಭುವನದಲೀ ॥೧॥

ಸತ್ಯವಂತೆಯು ಸತ್ಯಶೀಲೆಯು।
ನಿತ್ಯ ವ್ರತವನು ಬಿಡದೆ ನೇಮದ।
ಸತ್ಯದಿಂದಾಚರಿಸಿ ಗಳಿಸಿದಳ್ ಮುಕ್ತಿ
ಮಾರ್ಗವನು॥

ನಿತ್ಯದಲಿ ಮೈಸೂರು ರಾಜ್ಯದಿ।
ಸತ್ಯ ಶ್ರೀ ಲಕ್ಷ್ಮೀನಾಮಾಭಿದ।
ಉತ್ತಮೋತ್ತಮ ಮಾತೆಯನು ಕೊಂಡೊ
ಯ್ದುದೇ ವಿಧಿಯು ॥೨॥

ಪ್ರೀತಿ ತೋರುತ ಸರ್ವ ಜನರಿಗೆ।
ನೀತಿ ಮಾರ್ಗವ ತೋರಿ ವಿಶ್ವಕೆ।
ಭಕ್ತಿಯಿಂದಲೆ ದೈವ ಬ್ರಾಹ್ಮಣ ಗುರು
ಹಿರಿಯ ಸಾಧುಗಳ॥

ಸತತ ಶ್ರದ್ಧಾಶಕ್ತಿ ವಹಿಸುತ।
ಶಾಂತಿಯಿಂದಲೆ ಸೇವೆ ನಡೆಸಿದ।
ಮಾತೆ ಕಣ್ಮರೆಯಾದುದೆಮ್ಮ
ದುರ್ವಿಧಿಯು ॥೩॥

ಸುಗುಣಗಣ ಪರಿಪೂರ್ಣ ಚರಿತೆಯು।
ಅಗಣಿತಾಮಲ ಪುಣ್ಯ ಮೂರ್ತಿಯು।
ನಿಗಮ ವೇದಾದಿ ವಿದ್ಯಾ ದಾನ
ನಿಪುಣೆಯನೂ॥

ಮಿಗೆ 'ಪ್ರಕಾಶ ಕುಮಾರಿ' ನಾಮದಿ।
ಬಗೆಯ ಧೈರ್ಯ ವಿವೇಕದಿಂದಲಿ।
ಜಗದಿ 'ಯೋಗಿನಿ'ಯಾಗಿ ಮೆರೆದಳ
ಕೊಂಡೊಯ್ದುದೇ ವಿಧಿಯು ॥೪॥

ಶ್ರೀ ಮಹಾಬಲ ಶೈಲ ವಾಸಿನಿ।
ಶ್ರೀಮತೀ ಪತಿಯನುಡೆ ಗಿರಿಜೆಯು।
ಪ್ರೇಮ ಪೂರ್ಣ ಕಟಾಕ್ಷಗಳೆಸಿದ ಮಾನಿನೀ
ಮಣಿಯು॥

ನಮ್ಮನೀಗಲೆ ಅಗಲಿ ಪೋದಳು।
ದುಮ್ಮಾನಗೊಂಡಿತು ಸರ್ವ ಜನಗಳ।
ಅಮ್ಮನನು ಕಳೆಕೊಂಡ ನಾವ್ಗಳು
ಭಾಗ್ಯಹೀನರಲಾ ॥೫॥

ಇಂತೆಸೆದಗಲಿದಾವರ।
ರತ್ನ ಸಾಧ್ವೀಕುಲ ಶಿರೋಮಣಿ।
ಶಾಂತಿ ಪೊಂದಿ 'ಮಹಾತ್ಮ'ರೀಯಲಿ
ಆಶೀರ್ವಚನವನೂ॥

ಎಂ. ಎಸ್. ಪಾರ್ವತಮ್ಮ

ಕಾಫಿಯಲ್ಲಿ ಬೆರಿಕೆ ಕಂಡುಹಿಡಿಯುವ ವಿಧಾನ

ಕಾಫಿಯಲ್ಲಿ ಬೆರಿಕೆಯಾಗಿರುವುದನ್ನು ಪತ್ತೆ ಹಚ್ಚುವ ವಿಧಾನವನ್ನು ಕೇಂದ್ರ ಆಹಾರ ಸಂಶೋಧನಾಲಯದವರು ಕಂಡುಹಿಡಿದಿರುತ್ತಾರೆ ಕಾಫಿಯೊಡನೆ ಹುರುಳೀ ಮತ್ತು ಹುಣಸೆ ಬೀಜಗಳನ್ನು ಬೆರೆಸಲಾಗುತ್ತಿದೆ ಕಾಫಿಯನ್ನು ಶೋಧಿಸಿದ ಮೇಲೆ ಉಳಿಯುವ ಗಸಿಯೊಡನೆ ಕಾಸ್ಟಿಕ್ ಸೋಡಾವನ್ನು ಬೆರೆಸಿ, ಆಗ ಅದು ವಿವರ್ಣವಾದರೆ ಬೆರಿಕೆಯಾಗಿದೆಯೆಂದು ಗೊತ್ತಾಗುವುದು ಶುದ್ಧವಾದ ಕಾಫಿ ಪುಡಿಯಿದ್ದರೆ ಅದರ ಮೇಲೆ ಕಾಸ್ಟಿಕ್ ಸೋಡದ ಪರಿಣಾಮವೇನೂ ಆಗುವುದಿಲ್ಲ

ಸಂಸ್ಕೃತ ಸಂಘ

ನಗರದಲ್ಲಿರುವ ಮಹಾರಾಜಾ ಹೈಸ್ಕೂಲಿನ ಸಂಸ್ಕೃತ ಸಂಘದ ಪ್ರಾರಂಭ ಭಾಷಣವನ್ನು ಕಳೆದ ಸೋಮವಾರ ನಿವೃತ್ತ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಂ ಆರ್. ವೆಂಕಟಸುಬ್ಬಾಶಾಸ್ತ್ರಿಗಳವರು ಮಾಡಿದರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಎಸ್ ರಾಜಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸಿದ್ದರು ಪ್ರಾರ್ಥನೆಯನಂತರ, ಸಂಘದ ಉಪಾಧ್ಯಕ್ಷರಾದ ವಿ ನಂದೀಬಸವಯ್ಯನವರು ಸ್ವಾಗತ ಬಯಸಿದರು ಕೆ ಎಸ್ ವಾಸುದೇವರವರು ಸಂಘದ ರಚನೆ ಮತ್ತು ಉದ್ದೇಶಗಳನ್ನು ವಿವರಿಸಿದರು ಸಂಸ್ಕೃತದ ಹಿರಿಮೆ ವಿಷಯವಾಗಿ ಅತಿಥಿಗಳು ಭಾಷಣ ಮಾಡಿದರು ಅಧ್ಯಕ್ಷರು ಸಂಘಕ್ಕೆ ಯಶಸ್ಸನ್ನು ಕೋರಿ ಹಿತವಚನವನ್ನಿತ್ತರು

ರೇಡಿಯೊ ಪ್ರಸಾರ ಮಂದಿರದ ಆರಂಭ

ರಾಜಧಾನಿಯ ವಿದ್ಯಾರಣ್ಯಪುರದ ಬಳಿ ಹೊಸದಾಗಿ ಏರ್ಪಡಿಸಿರುವ ಪೌರಸಭಾ ರೇಡಿಯೊ ಪ್ರಸಾರ ಮಂದಿರದ ಪ್ರಾರಂಭೋತ್ಸವವನ್ನು ನಾಳೆ ಸಂಜೆ ೬॥ ಗಂಟೆಗೆ ಪೌರಸಭಾ ಕಮಿಷನರ್ ಶ್ರೀ ಎ ವಿಶ್ವನಾಥ್‌ರವರು ನೆರವೇರಿಸುವರು

ನಂಜನಗೂಡು ಪುರಸಭಾ ಚುನಾವಣೆ

ನಂಜನಗೂಡು ಪುರಸಭೆಗೆ ಚುನಾವಣೆಯು ಮೊನ್ನೆ ನಡೆದು ಈ ಕೆಳಗೆ ಕಂಡವರು ಆರಿಸಲ್ಪಟ್ಟಿರುತ್ತಾರೆ - ಶ್ರೀಗಳಾದ ಬಿ ಎಸ್ ಎಸ್ ಆರಾಧ್ಯ, ಎಲ್ ನಾಗಪ್ಪ, ಕೆ ನರಸೇಗೌಡ, ಸಿ ಮಾದೇಗೌಡ, ಎಸ್ ಎಸ್ ರಾಜಯ್ಯಂಗಾರ್, ಎಲ್ ಪಿ ನಂಜಪ್ಪ, ವೈ ಕೆ ಎಸ್ ಲಕ್ಷ್ಮಣಶೆಟ್ಟಿ, ಕೆ ವೆಂಕಟಸುಬ್ಬೈ, ಮಹಮದ್ ಯಾಕೂಬ್, ಎಸ್ ರಾಚಯ್ಯ, ಕಾಳೇಗೌಡ, ಕೃಷ್ಣಪ್ಪ, ಕೃಷ್ಣಯ್ಯ, ಕೆ ಕುಮಾರ್, ಬಿ ಶ್ರೀಕಂಠಯ್ಯ, ಬಿ ವಿ ಬಾಲಸುಬ್ರಹ್ಮಣ್ಯಂ, ಎಸ್ ಎ ರಹಿಮಾನ್ ಷರೀಫ್, ಸಿ ಚನ್ನಯ್ಯ, ಮಾರಯ್ಯ ಮತ್ತು ಪುಟ್ಟಸ್ವಾಮಿ

ಬ್ರಿಟನ್ನಿಗೆ ಮಾಲೆಂಕಾವರ ಭೇಟಿ

ಇದೇ ೧೮ನೇ ತಾರೀಖು ರಷ್ಯದ ಈಗಿನ ಪ್ರಧಾನಿ ಮತ್ತು ಉಪ ಪ್ರಧಾನಿ ಜಾರ್ಜ್ ಮಾಲೆಂಕಾವರು ಬ್ರಿಟನ್ನಿಗೆ ಭೇಟಿ ಕೊಡುವರು ಅವರ ನೇತೃತ್ವದಲ್ಲಿ ಅಲ್ಲಿಗೆ ನಿಯೋಗವೊಂದು ಹೋಗಲಿದೆ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೇವರು ಬರುವ ತಿಂಗಳು ೧೮ನೇ ತಾರೀಖು ಬ್ರಿಟನ್ನಿಗೆ ಭೇಟಿಕೊಟ್ಟು ಅಲ್ಲಿ ೧ ವಾರವಿರುವರು

ತಿರುವೆಂಬಾವೈ-ತಿರುಪ್ಪಾವೈ-ತಿರುಮಾರೈ ಅರಂಗ ಸಮ್ಮೇಳನ

ಜಗದ್ಗುರು ಶ್ರೀ ಕಂಚಿ ಕಾಮಕೋಟಿ ಪೀಠಾಧಿಪತಿಗಳಾದ ಶ್ರೀ ಶ್ರೀ ಶಂಕರಾಚಾರ್ಯರ ಉತ್ತೇಜನದಿಂದ ನಡೆಯುತ್ತಿರುವ ಮೇಲ್ಕಂಡ ಸಮ್ಮೇಳನದ ತೃತೀಯ ಅಧಿವೇಶನವು ಇದೇ ೧೧ನೇ ತಾರೀಖು ಸಂಜೆ ರಾಜಧಾನಿಯ ಶಂಕರಮಠದಲ್ಲಿ ನೆರವೇರುವುದು ಕೇಂದ್ರ ಆಹಾರ ಸಂಶೋಧನಾಲಯದ ಡೈರೆಕ್ಟರೂ, ತಮಿಳು ಸಂಘದ ಅಧ್ಯಕ್ಷರೂ ಆದ ಡಾ॥ ವಿ ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸಿ ಬಹುಮಾನಗಳನ್ನು ಹಂಚುವರು ಸಕಲರಿಗೂ ಆಹ್ವಾನವಿದೆ ಮಹಿಳೆಯರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗಿದೆ

ಬ್ಯಾಡ್ಮಿಂಟನ್ ಟೂರ್ನಮೆಂಟ್

ಪಯೋನೀರ್ ಸ್ಪೋರ್ಟ್ಸ್ ಕ್ಲಬ್ಬಿನವರು ಈ ತಿಂಗಳು ೨೮ನೇ ತಾರೀಖಿನಿಂದ ಡಬ್ಬಲ್ಸ್ ಮತ್ತು ಫೈನಲ್ಸ ಬ್ಯಾಡ್ಮಿಂಟನ್ ಟೂರ್ನಮೆಂಟನ್ನು ಏರ್ಪಡಿಸಿರುತ್ತಾರೆ ಎಲ್ಲಾ ಕ್ಲಬ್ಬುಗಳು, ಶಾಲಾ ಕಾಲೇಜುಗಳು ಮತ್ತು ಇತರ ಸಂಸ್ಥೆಗಳೂ ಅದರಲ್ಲಿ ಭಾಗವಹಿಸಬಹುದು ಈ ತಿಂಗಳು ೧೫ರೊಳಗೆ ಎರಡು ಪಂದ್ಯಗಳಿಗೂ ೩ ಮತ್ತು ೫ ರೂ ಶುಲ್ಕದೊಡನೆ ಅರ್ಜಿಗಳನ್ನು ಕಳುಹಿಸಬಹುದೆಂದು ಕಾರ್ಯದರ್ಶಿಗಳು ಸೂಚಿಸಿರುತ್ತಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ದಿಲ್ಲಿಯ ೭ ೧೫ ಎಸ್ ಎಸ್. ಸ ... ಪುರಂದರದಾಸರ ದೇವರನಾಮ ... ಒಂದು ಹಾಡು ... ರಿಕಾರ್ಡ ಮಧ್ಯಾಹ್ನ ... ವೇದಮ್ಮ ಹಿಂದೂಸ್ತಾನಿ ಸಂಗೀತ ... ವಾದ್ಯವೃಂದ ... ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ... ದಿಲ್ಲಿಯ ... ರಿಕಾರ್ಡ್ಸಂಗೀತ ... ಪ್ರಾಥಮಿಕ ಶಾಲೆಗಳಿಗಾಗಿ ಸಂಜೆ ... ವೇದಮ್ಮ ... ಹಿಂದೂಸ್ತಾನಿ-ಸಂಗೀತ ... ಉರ್ದು ಗೀತೆ ... ಪುಸ್ತಕ ವಿಮರ್ಶೆ ... ಮದ್ರಾಸಿನಿಂದ ಸಂಗೀತ ... ತರಂಗ ವಂಗ ಕನ್ನಡದಲ್ಲಿ ವಿವಿಧ ಕಾರ್ಯಕ್ರಮ, ... ರಿಕಾರ್ಡ್

Edited, Printed and Published by A R Nagarajan at Sadhvi Press D Subbiah Road, Mysore

ಇಂಗ್ಲೆಂಡಿನಲ್ಲಿ ಮತ್ತೊಬ್ಬ ಭಾರತೀಯನ ಕೊಲೆ

ಇಂಗ್ಲೆಂಡಿನ ಕವೆಂಟ್ರಿಯಲ್ಲಿ ಮೊನ್ನೆ ...ಪಿರ್‌ಸಿಂಗ್ ಎಂಬ ೩೦ ವರ್ಷದ ಭಾರತೀಯನೊಬ್ಬನು ತಿವಿತದ ಗಾಯದ ಪರಿಣಾಮವಾಗಿ ರಸ್ತೆಯಲ್ಲಿ ಮೃತಪಟ್ಟು ಬಿದ್ದಿದ್ದನು ... ತಿಂಗಳ ಹಿಂದೆ ಅಸ್ಸಾಂ ವಿದ್ಯಾರ್ಥಿಯೊಬ್ಬ ಲಂಡನ್ನಿನಲ್ಲಿ ಕೊಲೆ ಮಾಡಲ್ಪಟ್ಟಿದ್ದನು.

ಮುಡುಕುತೊರೆಯಲ್ಲಿ ಸತ್ಕಾರ ಸಮಾರಂಭ

ಮುಡುಕುತೊರೆ ಜಾತ್ರೆಯಲ್ಲಿ ಸೇರಿದ್ದ ... ಕರು ಕಳೆದ ೧ನೇ ತಾರೀಖು ತಲಕಾಡಿನ ... ಮರಾಯರು ಮತ್ತು ಅವರ ಸಹೋದ್ಯೋಗಿಗಳ ಗೌರವಾರ್ಥವಾಗಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಗ್ರಾಮದ ಛೇರ್ಮನ್ ಶ್ರೀ ... ನವರು ಅಧ್ಯಕ್ಷತೆ ವಹಿಸಿದ್ದರು. ಜಾತ್ರೆಯ ಕಂಟ್ರಾಕ್ಟರು ದುಬಾರಿ ಕಂದಾಯ ವಿಧಿಸ... ತೆಗಟ್ಟಿದುದಕ್ಕಾಗಿ ಅತಿಥಿಗಳಿಗೆ ವರ್ತಕರು ಮೂಲಕ ಕೃತಜ್ಞತೆಯನ್ನು ಸೂಚಿಸಿ, ... ಯೂ ಸಹಾ ಈ ವಿಚಾರದಲ್ಲಿ ಶ್ರಮವಹಿಸಬೇಕೆಂದು ಕೋರಿದರು.

ಸಂತಾಪ ಸೂಚನೆ

ರಾಜಧಾನಿಯ ಕೃಷ್ಣರಾಜೇಂದ್ರ ... ಮಿಲ್ಸ ಸಂಘದ ಕಾರ್ಯಕಾರಿ ಸಮಿತಿ ಸಭೆ ಕಳೆದ ಭಾನುವಾರ ನಡೆದು, ದಿವಂಗತ ಮಹಾರಾಣಿ ಲಕ್ಷ್ಮೀವಿಲಾಸ ಸನ್ನಿಧಾನದವರ ... ಕ್ಕಾಗಿ ಸಂತಾಪವನ್ನೂ, ರಾಜಕುಟುಂಬಕ್ಕೆ ಮತ್ತು ರಾಜಮನೆತನದವರಿಗೆ ಅನುಕಂಪವನ್ನು ಸೂಚಿಸಲಾಯಿತು

ಮೈಸೂರು ಪೇಟೆ ಧಾರಣೆ

	ರೂ	ಆಣೆ	ಪೈ	ರೂ
ಕಡಲೆಕಾಯಿ	[illegible]	[illegible]	೦	[illegible]
ಹರಳುಬೀಜ	[illegible]	೦	೦	[illegible]
ಹುಚ್ಚೆಳ್ಳು	[illegible]	೦	೦	[illegible]
ಹೊಂಗೆಬೀಜ	[illegible]	೦	೦	[illegible]
ಹುರುಳಿ	[illegible]	[illegible]	೦	[illegible]
ಹೆಸರು	[illegible]	೦	೦	[illegible]
ಕಡಲೆ	[illegible]	[illegible]	೦	[illegible]
ಕಡಲೆಬೇಳೆ	[illegible]	[illegible]	೦	[illegible]
ಅವರೆ	[illegible]	[illegible]	[illegible]	[illegible]
ತೊಗರಿ	[illegible]	[illegible]	೦	
ಧನಿಯ	[illegible]	[illegible]	೦	
ಸೋಮಿನದಬೀಜ	[illegible]	೦	೦	[illegible]
ಹುಣಸೇಬೀಜ	[illegible]	[illegible]	೦	[illegible]
ಹಿಂಗೆಕಾಯಿ	[illegible]	[illegible]	೦	[illegible]
ಹುಣಸೇಹಣ್ಣು	[illegible]	[illegible]	೦	[illegible]
ಕೊಬ್ಬರಿಕಾಯಿ	[illegible]	[illegible]	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]	೦	[illegible]

SREE GAYATHRI TALKIES

From 8-3-56 For 3 days
Daily 3 Shows

It's New, the First Pirate Adventure Story ever filmed in Cinemascope and Eastman Color

Twentieth Century's

LONG JOHN SILVER

Starring - Robert Newton and Kit Taylor

DALVOY HIGH SCHOOL
(COACHING SECTION)

Offers efficient coaching for S S L C Supl. Students by able teachers. Admissions received Classes between 6 & 9 P M. Fees for the whole course Rs. 17

S N Subbakrishnan, B A , B Com ,
Secretary

ಒಲಂಪಿಯಾ ★

9 3 56 ರಿಂದ : ಅಮೋಘ ಪ್ರಾರಂಭ
ದಿನವೂ ಮೂರು ಪ್ರದರ್ಶನಗಳು

... ಬೇಕಾದ ಚಿತ್ರ, ಜೀವನದ ಪ್ರತಿ ಹೆಜ್ಜೆಯಲ್ಲಿ ಸೋಲನ್ನು ಅನುಭವಿಸಿದರೂ, ಅದನ್ನು ... ಸಹಿಸಿಕೊಂಡು ಅದನ್ನೇ ಧೈರ್ಯದಿಂದ ಎದುರಿಸಿದ ...

ಕಲಾದೀಪ್ ಪಿಕ್ಚರ್ಸ್‌ರವರ ಸುಂದರ ಸಾಮಾಜಿಕ ಚಿತ್ರ

ನಿರೂಪ ರಾಯ್, ಬಾಲರಾಜ ಸಹಾನಿ, ಶಮ್ಮಿಕಪೂರ್, ಮತ್ತು ಗೋಪ್ ನಟಿಸಿರುವ

ಟಾಂಗಾವಾಲಿ

ಮಹಾ ಶಿವರಾತ್ರಿ ಪ್ರಯುಕ್ತ 10-3-56ನೇ ಶನಿವಾರ ರಾತ್ರಿ 1 ಘಂಟೆಗೆ ಸ್ಪೆಷಲ್ ಪ್ರದರ್ಶನ

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

8-3-56 ನೇ : ಗುರುವಾರದಿಂದ : ಅಮೋಘ 3ನೇ ವಾರ

★ **ಹರಿಭಕ್ತ** ★
(ಕನ್ನಡ)

ಪಾತ್ರ — ಹರಿಣಿಬಾಯಿ, ರಾಜಕುಮಾರ್, ನರಸಿಂಹರಾಜು ಮುಂತಾದವರು

ಮಹಾ ಶಿವರಾತ್ರಿ ಪ್ರಯುಕ್ತ 10-3-56ನೇ ಶನಿವಾರ 4 ಆಟಗಳು

ಲಕ್ಷ್ಮಿ ★

9—3—56 ರಿಂದ . ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಆಟಗಳು
ವಿಕ್ರಮ್ ಪ್ರೊಡಕ್ಷನ್ಸ್‌ರವರ ಐತಿಹಾಸಿಕ ತಮಿಳು ಚಿತ್ರ

ಪಿ ಭಾನುಮತಿ, ಜಮುನ, ಬಾಲಸರಸ್ವತಿ, ಸಂಧ್ಯಾ, ಶಿವಾಜಿ ಗಣೇಶ, ನಾಗಯ್ಯ, ಎನ್ ಟಿ ರಾಮರಾವ್ ಪಾತ್ರವಹಿಸಿರುವ

ತೆನಾಲಿರಾಮನ್

ಮಹಾ ಶಿವರಾತ್ರಿ ಪ್ರಯುಕ್ತ 10ನೇ ತಾರೀಖು ರಾತ್ರಿ 1 ಗಂಟೆಗೆ ವಿಶೇಷ ಪ್ರದರ್ಶನ

ರಣಜಿತ್ ಟಾಕೀಸ್ ★

8 3—56ನೇ : ಗುರುವಾರದಿಂದ : ಅಮೋಘ ಪ್ರಾರಂಭ
ಆಲ್ ಇಂಡಿಯಾ ಪಿಕ್ಚರ್ಸ್‌ರವರ ಪೌರಾಣಿಕ ಹಿಂದಿ ಚಿತ್ರ

ತ್ರಿಲೋಕ್ ಕಪೂರ್, ಮಾಲಾಸಿನ್ಹ, ರತನಕುಮಾರ್, ರಮ್ಯ, ಗೋಪ್ ಮತ್ತು ಜೀವನ್ ಪಾತ್ರವಹಿಸಿರುವ

★ **ಏಕಾದಶಿ** ★ (ಮೋಹಿನಿ-ರುಕ್ಮಾಂಗದ ಕಥೆ)

10—3—56 ನೇ ಶನಿವಾರ ರಾತ್ರಿ 1 ಘಂಟೆಗೆ ವಿಶೇಷ ಪ್ರದರ್ಶನವಿದೆ [G. F. D. Release

ರಿಜಿಸ್ಟರ್ ನಂ. 792

FOR BEST
Half-tone & Line
BLOCKS
Contact —
Sri Sharada Press,
Hanumantha Rao St.,
MYSORE

ಲಗ್ನದ ಜವಳಿ
ಗೌಡ ಸಿಲ್ಕ್ ಸೀರೆಗಳು
M.V. ಭೋಜಯ್ಯ
ಮೈಸೂರು

ಪು. ೧೪] SADHVI : FRIDAY 9-3-1956 ಮೈಸೂರು ಶುಕ್ರವಾರ : ೯-೩-೧೯೫೬ [ಸಂಚಿಕೆ : ೦೯೯

ಪಾಕಿಸ್ತಾನದ ಸೈನ್ಯಬಲ ಹೆಚ್ಚಿಸಲು ಅಮೆರಿಕದ ನೆರವು

ಪಾಕಿಸ್ತಾನದ ಸೈನ್ಯ ಬಲ ಹೆಚ್ಚಿಸಲು ಅಮೆರಿಕದ ನೆರವು

ಪಾಕಿಸ್ತಾನದ ಮಿಲಿಟರಿ ಬಲವನ್ನು ಹೆಚ್ಚಿಸಲು ಅಮೆರಿಕವು ಸೈನಿಕ ಸಹಾಯವನ್ನು ಕೊಡುವುದಾಗಿ ನೆನ್ನೆ ಆಗ್ನೇಯ ಏಷ್ಯಾ ಒಪ್ಪಂದ ರಾಷ್ಟ್ರಗಳ ಸಭೆಯಲ್ಲಿ ಅಮೆರಿಕದ ವಿದೇಶಾಂಗ ಮಂತ್ರಿ ಡಲೆಸರು ತಿಳಿಸಿದರೆಂದು ವರದಿಯಾಗಿದೆ. ಅದಕ್ಕೆ ಮುಂಚಿತವಾಗಿ ಸಭೆಯಲ್ಲಿ ಪಾಕಿಸ್ತಾನದ ಹಣಕಾಸಿನ ಮಂತ್ರಿ ಅಮ್ಜದ್ ಅಲಿಯವರು ಮಾತನಾಡಿ, ಮಿಲಿಟರಿ ವ್ಯವಸ್ಥೆಗಾಗಿ ಪಾಕಿಸ್ತಾನವು ಭಾರಿ ವೆಚ್ಚವನ್ನು ವಹಿಸುತ್ತಿರುವುದರಿಂದ, ಆದರೂ ಇತರ ಸೀಟೊ ರಾಷ್ಟ್ರಗಳ ಸೈನ್ಯಸಹಾಯ ಬೇಕೆಂದೂ ಕೋರಿದರು. ಪಾಕಿಸ್ತಾನವು ರಕ್ಷಣೆಗೆ ೬೫ ರಷ್ಟು ವರಮಾನವನ್ನು ಮಿಲಿಟರಿಗಾಗಿ ಉಪಯೋಗಿಸುತ್ತಿರುವುದರಿಂದ, ಆದರಿಂದ ರಾಷ್ಟ್ರಾಭಿವೃದ್ಧಿ ಕಾರ್ಯಗಳನ್ನು ಕಡಿತ ಮಾಡಬೇಕಾಗಿ ಬಂದಿರುವುದೆಂದು ಅಮ್ಜದ್ ಅಲಿಯವರು ಹೇಳಿ, ಮುಂದೆ ಅಮೆರಿಕ ಇದೇ ಮೊಬಲಗನ್ನು ಮಿಲಿಟರಿಗಾಗಿ ವೆಚ್ಚ ಮಾಡಲಾಗುವುದೆಂದು ತಿಳಿಸಿದರು

ಲೋಕಸಭಾಧ್ಯಕ್ಷರಾಗಿ ಅನಂತಶಯನಂರವರ ಆಯ್ಕೆ

ಲೋಕ ಸಭೆಯ ಉಪಾಧ್ಯಕ್ಷ ಎಂ. ಅನಂತಶಯನಂ ಅಯ್ಯಂಗಾರ್ಯರು ದಿ॥ ಮೌಲಂಕರರ ಸ್ಥಾನದಲ್ಲಿ ಸಭಾಧ್ಯಕ್ಷರಾಗಿ ನೆನ್ನೆ ಸರ್ವಾನುಮತದಿಂದ ಚುನಾಯಿತರಾದರು. ಪ್ರಧಾನಿ ನೆಹರೂ ಅವರು ಅವರ ಹೆಸರನ್ನು ಸೂಚಿಸಿದರು. ಪಾರ್ಲಿಮೆಂಟು ವ್ಯವಹಾರಗಳ ಮಂತ್ರಿ ಸತ್ಯನಾರಾಯಣ ಸಿನ್ಹರವರು ಅನುಮೋದಿಸಿದರು

ಪಾಕಿಸ್ತಾನ ಸರ್ಕಾರದ ಒತ್ತಾಯ ಪ್ರತಿಭಟಿಸಿ ಜಫ್ಲರ ರಾಜೀನಾಮೆ

ಪಖ್ತೂನಿಸ್ತಾನದ ಸ್ವಾತಂತ್ರ್ಯ ಪ್ರೇಮಿಗಳ ಪಕ್ಷಕ್ಕಾಗಿ ಆಫೀಸುಗಳನ್ನು ಹೊರಡಿಸುವಂತೆ ಪಾಕಿಸ್ತಾನ ಸರ್ಕಾರದವರು ತರುತ್ತಿದ್ದ ಒತ್ತಾಯವನ್ನು ಪ್ರತಿಭಟಿಸಿ, ಖೈಬ್ಯಾ ಸರ್ಹದ್ ಪ್ರಾಂತೀಯದ ಮಹಮದ್ ಅಕ್ಬರ್ ಖಾನ್ ರವರು ರಾಜೀನಾಮೆ ಕೊಟ್ಟಿರುತ್ತಾರೆ.

ಹಿನಕಲ್ಲಿಗೆ ಹೊಸದ ಬಸ್ ಸರ್ವೀಸ್

ನಾಳೆಯಿಂದ ದೇವರಾಜ ಮಾರ್ಕೆಟ್ ಬಸ್ ಸ್ಟ್ಯಾಂಡಿನಿಂದ ಹಿನಕಲ್ಲಿಗೆ ಸಿಟಿ ಬಸ್ ಸರ್ವೀಸ್ಸು ಏರ್ಪಡಿಸಲಾಗುವುದು. ಕೃಷ್ಣ ವಿಲಾಸ, ಹೋಟೆಲ್ ಮೆಟ್ರೊಪೋಲ್, ಜಲದರ್ಶಿನಿ, ಹುಣಸೂರು ರಸ್ತೆ, ಆದಿಪಂಪ ರಸ್ತೆ, ಪಡುವಾರಹಳ್ಳಿ, ಪ್ರೀಮಿಯರ್ ಸ್ಟುಡಿಯೋ ಮಾರ್ಗವಾಗಿ ಹಿನಕಲ್ಲಿಗೆ ಬಸ್ಸು ಹೋಗಿ ಬರುವುದು.

ಗೋಹತ್ಯೆಗಾಗಿ ಶಿಕ್ಷೆ

ಶಿಕಾರಿಪುರ ಮೊಹಲ್ಲ ಕಸಾಬಗೇರಿಯ ಅಹಮದ್ ಸಾಬ್ ಮತ್ತು ಷೇಕ್ ಅಬ್ದುಲ್ಲಾ ಎಂಬುವರು ಗೋಹತ್ಯೆ ಮಾಡುತ್ತಿದ್ದುದಕ್ಕಾಗಿ ನೆನ್ನೆ ನಗರದ ಮ್ಯಾಜಿಸ್ಟ್ರೇಟರು ಅವರುಗಳಿಗೆ ತಲಾ ೨೦೦ ರೂಪಾಯಿ ಜುಲ್ಮಾನೆ, ತಪ್ಪಿದರೆ ೧॥ ತಿಂಗಳು ಸಾದಾ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಕಾಶ್ಮೀರದ ಬಗ್ಗೆ ಸೀಟೊ ನಿರ್ಣಯ ತೀವ್ರ ಸ್ವರೂಪದ್ದು

ಪ್ರಧಾನಿ ನೆಹರೂರವರ ಹೇಳಿಕೆ

ರಾಜ್ಯ ಸಭೆಯಲ್ಲಿ ನೆನ್ನೆ ವಿರೋಧ ಪಂಗಡದ ಸದಸ್ಯರು ಸೀಟೊ ಸಭೆಯಲ್ಲಿ ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿದ ಬಗ್ಗೆ ಪ್ರತ್ಯೇಕ ಚರ್ಚೆಯನ್ನು ನಡೆಸುವಂತೆ ಒತ್ತಾಯಪಡಿಸಿದಾಗ ನೆಹರೂರವರು ಸರ್ಕಾರದ ಅಭಿಪ್ರಾಯವನ್ನು ಪ್ರತಿಬಿಂಬಿಸುತ್ತಾ ಆ ವಿಷಯವು ತೀವ್ರವಾದುದೆಂದು ಹೇಳಿದರು. ಸೀಟೊ ಸಭೆಯಲ್ಲಿ ಕಾಶ್ಮೀರದ ವಿಷಯವು ಚರ್ಚಿತವಾಗಿಲ್ಲವೆಂದು, ವರದಿಯಾದ ಕರಾಚಿಗೆ ಹೋಗಿದ್ದ ಪೂರ್ವದಲ್ಲಿ, ಬ್ರಿಟಿಷ್ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್ ರವರು ಹೇಳಿದ ಮೇಲೂ ಈ ವಿಚಾರವು ಅಲ್ಲಿ ಎತ್ತಲ್ಪಟ್ಟಿರುವುದರಿಂದ ಅದು ಅತ್ಯಂತ ಕಾತುರತೆಗೆ ಕಾರಣವಾಗಿದೆಯೆಂದು ಪಾರ್ಲಿಮೆಂಟ್ ಸದಸ್ಯರು ಅಭಿಪ್ರಾಯಪಟ್ಟು ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಬೇಕೆಂದು ಒತ್ತಾಯಪಡಿಸಿದರು

ಪಾಕಿಸ್ತಾನ, ಸಯಾಂ ಮತ್ತು ಫಿಲಿಪ್ಪೈನುಗಳಲ್ಲಿ ವಿದೇಶೀ ಸೈನ್ಯ

ಆಗ್ನೇಯ ಏಷ್ಯಾ ರಕ್ಷಣಾ ಒಪ್ಪಂದ ಕೂಟದ ಏಷ್ಯಾ ನಾಡುಗಳಾದ ಪಾಕಿಸ್ತಾನ, ಥೈಲಾಂಡ್ ಮತ್ತು ಫಿಲಿಪ್ಪೈನುಗಳಲ್ಲಿರುವ ಸ್ಥಳೀಯ ಸೈನ್ಯಗಳ ಬಲವನ್ನು ಅಧಿಕಗೊಳಿಸಬೇಕೆಂದು ಸೀಟೊ ಮಂಡಲವು ನಿರ್ಧರಿಸಿದೆ. ಸೀಟೊ ರಾಷ್ಟ್ರಗಳಲ್ಲಿ ಬುಡಮೇಲು ಮಾಡುವಂತಹ ಚಟುವಟಿಕೆಗಳನ್ನು ತಡೆಯಲು ಕೈಗೊಳ್ಳಬೇಕಾದ ಆರ್ಥಿಕ ಕ್ರಮಗಳ ಪರಿಶೀಲನೆಗಾಗಿ ಪ್ರವಾಸಿ ಸಮಿತಿಯನ್ನು ರಚಿಸಲೂ ನಿರ್ಧರಿಸಲಾಯಿತು

ಭದ್ರಾವತಿಯಲ್ಲಿ ಯಂತ್ರ ಸಹಾಯದಿಂದ ಸಾಗುವಳಿ

ಭದ್ರಾವತಿ ಬಳಿ ಯಂತ್ರಗಳ ಮೂಲಕ ಸಾಗುವಳಿಗಾಗಿ ಸಹಕಾರ ವ್ಯವಸಾಯ ಕ್ಷೇತ್ರವನ್ನು ಏರ್ಪಡಿಸುವುದಕ್ಕೆ ಬೇಕಾಗುವ ಪಾರಿಭಾಷಿಕ ಮತ್ತು ಇತರ ಸಹಾಯವನ್ನೀಯಲು ವಿದೇಶೀ ಕಂಪೆನಿಯೊಂದು ಮುಂದೆಬಂದಿರುವುದಾಗಿ ಗೊತ್ತಾಗಿದೆ. ಅಲ್ಲಿನ ರೈತರ ಸಹಕಾರ ಸಂಘವು ಮೇಲ್ಕಂಡಂತಹ ಕ್ಷೇತ್ರವನ್ನು ನಿರ್ಮಿಸುವಂತೆ ಸರ್ಕಾರವನ್ನು ಒತ್ತಾಯಪಡಿಸಿದೆ. ಈ ಏರ್ಪಾಡನ್ನು ಜಾರಿಗೆ ತರಲು ೩೦ ಸಾವಿರ ಎಕರೆ ಜಮೀನು ಮತ್ತು ಪ್ರಾರಂಭಿಕ ವೆಚ್ಚಕ್ಕಾಗಿ ಹಲವಾರು ಲಕ್ಷ ರೂ ಬೇಕಾಗುವುದು

ಸಂತಾಪ ಸೂಚನೆ

ನಗರದ ಆಯುರ್ವೇದ ವೈದ್ಯರ ಸಂಘದ ಸಭೆಯು ಕಳೆದ ಸೋಮವಾರ ಡಾ॥ ವಿ. ಎಲ್. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ, ಚಿಕ್ಕಮಗಳೂರು ಲಕ್ಷ್ಮೀವಿಲಾಸ ಸನ್ನಿಧಾನದವರು ಮತ್ತು ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಮೃತರ ಆತ್ಮಕ್ಕೆ ಶಾಂತಿ ಕೋರಿ, ಬಂಧುಮಿತ್ರರಿಗೆ ಅನುತಾಪವನ್ನು ಸೂಚಿಸಲಾಯಿತು.

ಗುರೂಜಿ ಗೋಳ್ವಾಲ್ಕರರ ಜನ್ಮ ದಿನೋತ್ಸವ

೨,೨೫೦ ರೂ. ನಿಧಿ ಸಂಗ್ರಹ

ಮೈಸೂರು ೯

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಚಾಲಕರಾದ ಶ್ರೀ ಎಂ. ಎಸ್. ಗೋಳ್ವಾಲ್ಕರರ ೫೧ನೇ ಜನ್ಮ ದಿನೋತ್ಸವದ ಅಂಗವಾಗಿ ನೆನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಭಾರಿ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಶ್ರೀ ಜಿ. ಆರ್. ಜೋಯಿಸ್ಸರ್‌ರವರು ಅಧ್ಯಕ್ಷತೆ ವಹಿಸಿದ್ದರು

ಸಂಘದ ಕರ್ನಾಟಕ ಪ್ರಾಂತ ಪ್ರಚಾರಕರಾದ ಶ್ರೀ ಯಾದವರಾವ್ ಜೋಷಿಯವರು ಭಾಷಣ ಮಾಡಿ, ಶ್ರೀ ಗೋಳ್ವಾಲ್ಕರರ ರಾಷ್ಟ್ರ ಪ್ರೇಮ, ನಿಸ್ವಾರ್ಥ ಸೇವೆ, ಸಂಘಟನಾ ಶಕ್ತಿ ಮುಂತಾದ ಗುಣಗಳನ್ನು ಪ್ರಶಂಸಿಸಿ ಶ್ರೀ ಗೋಳ್ವಾಲ್ಕರರು ಈಗಿನ ಸಂದಿಗ್ಧ ಸಮಯದಲ್ಲಿ ರಾಷ್ಟ್ರಕ್ಕೆ ತಕ್ಕ ಮಾರ್ಗದರ್ಶನವನ್ನು ನೀಡಬಲ್ಲ ಶಕ್ತರಾದ ಪುರುಷರಾಗಿದ್ದಾರೆಂದು ನುಡಿದರು. ಭಾರತದ ಈಗಿನ ಕಷ್ಟಗಳಿಗೆ ಸರ್ಕಾರದ ದೇಶೀಯ ಮತ್ತು ವಿದೇಶೀಯ ನೀತಿಗಳೇ ಕಾರಣವೆಂದು ಟೀಕಿಸಿದರು.

ಶ್ರೀ ಗೋಳ್ವಾಲ್ಕರರ ಸೇವೆಯ ಪ್ರಶಂಸಾರ್ಥವಾಗಿ ಸಮರ್ಪಿಸಲು ಇದುವರೆಗೆ ನಗರದಲ್ಲಿ ೨,೨೫೦ರೂ ಗಳು ವಸೂಲಾಗಿವೆಯೆಂದೂ, ಅದನ್ನು ಬೆಂಗಳೂರಿಗೆ ಇದೇ ತಿಂಗಳು ೩೦ನೇ ತಾರೀಖು ಶ್ರೀ ಗೋಳ್ವಾಲ್ಕರರು ಬಂದಾಗ ಅವರಿಗೆ ಸಮರ್ಪಿಸಲಾಗುವುದೆಂದೂ ತಿಳಿಸಿದರು

ಅಧ್ಯಕ್ಷರು ಮಾತನಾಡಿ ಗೋಳ್ವಾಲ್ಕರರ ಗುಣಾತಿಶಯಗಳನ್ನು ಪ್ರಶಂಸಿಸಿ ಅವರು ದೀರ್ಘಕಾಲ ಬಾಳಿ ದೇಶ ಸೇವೆ ಮಾಡಲೆಂದು ಹಾರೈಸಿದರು

ಪ್ರಾರಂಭದಲ್ಲಿ ಶ್ರೀ ಎ. ಎಲ್. ಸುಂದರನಾರಾಯಣಶೆಟ್ಟರು ಸ್ವಾಗತಭಾಷಣ ಮಾಡಿದರು. ಡಾ॥ ಬಿ. ಆರ್. ವಾಮನಾಚಾರ್ಯರು ಮುಖ್ಯ ಭಾಷಣಕಾರರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು. ನಗರದ ನಾನಾ ಸಂಘ ಸಂಸ್ಥೆಗಳ ಪರವಾಗಿ ಶ್ರೀ ಗುರೂಜಿಯವರ ಪಟಕ್ಕೆ ಹಾರಗಳನ್ನರ್ಪಿಸಲಾಯಿತು

ಶಿಕ್ಷಾ ಕಾರ್ಯಕ್ರಮದ ವರ್ಣರಂಜಿತ ಚಿತ್ರ

ಭಾರತ ಸರ್ಕಾರದ ಫಿಲಂ ಶಾಖೆಯವರು ಮೈಸೂರಿನ ಶಿಕ್ಷಾ ಕಾರ್ಯಕ್ರಮಗಳ ವರ್ಣರಂಜಿತ ಚಿತ್ರವನ್ನು ತೆಗೆಯುತ್ತಿರುವರು. ಕುಂಭಕೋಣದಲ್ಲಿ ಆದ ಮಹಾ ಮಾಘದ ಚಲನಚಿತ್ರವನ್ನೂ ತೆಗೆಯಲಾಗಿದೆ. ಬರುವ ವಾರ ಅದನ್ನು ಪ್ರದರ್ಶನಕ್ಕೆ ಕೊಡಲಾಗುವುದು

ಇರಾನ್ ರಾಜರ ನಿರ್ಗಮನ

ಇರಾನಿನ ಷಹಾ ಮತ್ತು ರಾಣಿ ಸುರಯ್ಯಾರವರು ನೆನ್ನೆ ಸ್ವದೇಶಾಭಿಮುಖವಾಗಿ ಬೊಂಬಾಯಿಯಿಂದ ಕರಾಚಿಗೆ ತೆರಳಿದರು. ಅವರನ್ನು ಬೊಂಬಾಯಿ ಗೌರ್ನರ್ ಮೆಹತಾಬ್ ಮುಂತಾದವರು ಬೀಳ್ಕೊಟ್ಟರು. ಕರಾಚಿಯಲ್ಲಿ ಅವರನ್ನು ಅಲ್ಲಿನ ಗೌರ್ನರ್ ಜನರಲ್ ಇಸ್ಕಂದರ್ ಮಿರ್ಜಾರವರು ಸ್ವಾಗತಿಸಿದರು

ನೇಪಾಳದಲ್ಲಿ ಶಿವರಾತ್ರಿ ಯಾತ್ರಿಕರಿಗೆ ಆಲಿಕಲ್ಲಿನೇಟು

ಅನೇಕರ ಮರಣ ಮತ್ತು ಸಹಸ್ರಾರು ಜನರಿಗೆ ಗಾಯ

ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿರುವ ಪಶುಪತಿನಾಥ ದೇವಾಲಯಕ್ಕೆ ಶಿವರಾತ್ರಿಗಾಗಿ ಹೊರಟಿದ್ದ ೫೦ ಸಹಸ್ರ ಜನ ಯಾತ್ರಿಕರು ಥಾನಕೋಟ ಮತ್ತು ಚಿಟ್ಲಾಂಗ್ ನಡುವೆ ಬಲವಾದ ಆಲಿಕಲ್ಲು ಮಳೆಗೆ ಸಿಕ್ಕಿ ಅನೇಕರು ಮಡಿದು, ಸಾವಿರಾರು ಜನರು ಗಾಯಗೊಂಡಿರುತ್ತಾರೆ. ಹಲವರು ಮಾತ್ರ ಮರಗಳ ಕೆಳಗೂ, ಕಲ್ಲು ಬಂಡೆಗಳ ನಡುವೆಯೂ ಆಶ್ರಯ ಪಡೆದರು. ಇತರರು ಆ ಆಲಿಕಲ್ಲಿನೇಟಿಗೆ ಸಿಕ್ಕಿ ತೊಂದರೆ ಪಟ್ಟರು. ಹಲವು ಕಲ್ಲುಗಳು ಕ್ರಿಕೆಟ್ ಚೆಂಡಿನಷ್ಟು ಗಾತ್ರವಾಗಿದ್ದುವು. ಯಾತ್ರಿಕರಿಗಾಗಿ ನೇಪಾಳ ಸರ್ಕಾರದವರು ಏರ್ಪಡಿಸಿದ್ದ ವಾಹನ ಸೌಕರ್ಯಗಳು ಸಾಲದೆ, ಜನರು ನಡೆದುಕೊಂಡು ಹೋಗಲು ನಿರ್ಧರಿಸಿದರು. ಪ್ರತಿ ವರ್ಷವೂ ಶಿವರಾತ್ರಿಗಾಗಿ ೧ ಲಕ್ಷ ಯಾತ್ರಿಕರು ಖಟ್ಮಂಡುವಿಗೆ ಹೋಗಿಬರುವರು

ಆಗ್ನೇಯ ಏಷ್ಯಕ್ಕೆ ಅಮೆರಿಕದ ಸೈನ್ಯ

ಆಗ್ನೇಯ ಏಷ್ಯಾ ರಕ್ಷಣಾ ರಾಷ್ಟ್ರಗಳ ಪ್ರದೇಶದಲ್ಲಿ ಯೋಧಶಕ್ತಿಯು ಕಡಿಮೆಯಾಗುವುದಕ್ಕೆ ಅವಕಾಶವೀಯುವುದಿಲ್ಲವೆಂದು ಅಮೆರಿಕದ ವಿದೇಶಾಂಗ ಮಂತ್ರಿ ಡಲೆಸರು ಹೇಳುತ್ತಾರೆ. ಸೀಟೊ ರಕ್ಷಣಾ ವ್ಯವಸ್ಥೆಯು ಶೀಘ್ರದಲ್ಲಿ ಆಕ್ರಮಣವನ್ನು ಎದುರಿಸುವಂತಹ ಬಲವಾದ ಪಡೆಯನ್ನಿಡಬೇಕಾದುದು ಅಗತ್ಯವೆಂದು ಅವರು ನುಡಿಯುವರು.

ಕಾಶ್ಮೀರ ಯುದ್ಧವು ಏಷ್ಯಾಕ್ಕೆ ಹಿಡಿಸದು

ಭಾರತದ ಪಾಲಿಸ್ಯ್ ನೀತಿ ಬಗ್ಗೆ ವಿಶ್ವಸಂಸ್ಥೆ ಕಾರ್ಯದರ್ಶಿಗಳ ಹೇಳಿಕೆ

ಏಷ್ಯವನ್ನೇ ವಿಭಾಗ ಮಾಡಲು ಹೊರಟಿರುವ ಕಾಶ್ಮೀರ ಘರ್ಷಣೆಯು ಅನೇಕ ಏಷ್ಯಾ ರಾಷ್ಟ್ರಗಳಿಗೆ ಹೊರತಾಗಿದೆಯೆಂದೂ, ಈ ಘರ್ಷಣೆಯು ಪಶ್ಚಿಮ ರಾಷ್ಟ್ರಗಳ ಎರಡು ಭಾರಿ ಕೂಟಕ್ಕೆ ಸಡೆಯುತ್ತಿರುವುದೆಂದೂ, ಪೂರ್ವವು ತನ್ನದೇ ಆದ ಪರಂಪರೆಯನ್ನು ಅನುಸರಿಸುತ್ತಿದೆಯೆಂದೂ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ತಿಳಿಸುತ್ತಾರೆ. ಭಾರತ ಮತ್ತು ಇತರ ರಾಷ್ಟ್ರಗಳು ಪೂರ್ವ ಪಶ್ಚಿಮಗಳ ನಡುವೆ ಇರುವ ಶೀತಲ ಯುದ್ಧದಲ್ಲಿ ಸೇರದಿರುವುದು ನ್ಯಾಯವೇ ಎಂಬುದಾಗಿ ಅವರನ್ನು ಪ್ರಶ್ನಿಸಲಾಗಿ, ಅವರು ಮೇಲ್ಕಂಡಂತೆ ನುಡಿದರು. ಕಾಶ್ಮೀರದ ವಿವಾದದ ಬಗ್ಗೆ ವಿಶ್ವ ಸಂಸ್ಥೆಯು ಸ್ವತಂತ್ರವಾದ ನಿಲುವನ್ನು ಹೊಂದಿರುವುದೆಂದು ಅವರು ಹೇಳುವರು. ಕಾಶ್ಮೀರವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಘೋಷಿಸಿ ಭಾರತ-ಪಾಕಿಸ್ತಾನಗಳ ನಡುವಣ ವರ್ಷಗಳಿಂದ ಇರುವ ವಿವಾದವನ್ನು ಮುಕ್ತಾಯ ಮಾಡಬಹುದಲ್ಲವೇ ಎಂದು ಕೇಳಿದುದಕ್ಕೆ ಅವರು ಉತ್ತರವೀಯಲಿಲ್ಲ.

ಆಯವ್ಯಯ ರಹಸ್ಯದ ಬಯಲಿನ ಬಗ್ಗೆ ಇಬ್ಬರ ಬಂಧನ

ಕೇಂದ್ರ ಸರ್ಕಾರದ ಆಯವ್ಯಯದ ರಹಸ್ಯವು ಬಯಲಾದ ಸಂದರ್ಭದಲ್ಲಿ [illegible] ಬ್ರಾಂಚ್ ಪೋಲೀಸರು ಮೊದಲು ಪರ್ತಕರ[illegible]ಗಳನ್ನು ಪ್ರಶ್ನಿಸಿ, ಇವರಲ್ಲಿ ಇಬ್ಬರನ್ನು ದಸ್ತಗಿರಿ ಮಾಡಿದ ವರ್ತಮಾನ ವರದಿಯಾಗಿದೆ

ಡಾ|| ಮೋದಿಯವರ ಶಿಬಿರಕ್ಕೆ ಸಹಾಯ

ಡಾ ಮೋದಿಯವರ ನೇತ್ರ ಚಿಕಿತ್ಸಾ [illegible] ಈ ಕೆಳಗೆ ಕಂಡವರು ಸಹಾಯ ಮಾಡಿದ್ದಾರೆ [illegible] ಶ್ರೀ [illegible] ಸ್ವಾಮಿಗಳವರು [illegible] ಮೂರು ತಾಲ್ಲೂಕು ಮಹಾಜನಗಳಿಂದ [illegible] ಸೇರು ಭತ್ತ, ಯಳಂದೂರು ಪುರಸಭಾಧ್ಯಕ್ಷರು [illegible] ಮತ್ತು ಸಿರಿಯಾಪಟ್ಟಣದ ಪುರಸಭಾಧ್ಯಕ್ಷರು [illegible] ರೂ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

[illegible]

ಗಡಿಯಾರಗಳು ಮತ್ತು ಕನ್ನಡಕಗಳು

[illegible]

ಗಡಿಯಾರಗಳು ಮತ್ತು ಕನ್ನಡಕಗಳು ನಮ್ಮಲ್ಲಿ [illegible] ಇವತ್ತೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ ಮೈಸೂರು (L. 11911)

ಅಮೆರಿಕಾ ಮತ್ತು ರಷ್ಯಾ ನಾಯಕರ ಶಾಂತಿ ಸಂದಾನಕ್ಕೆ ಸಿದ್ಧರೆ?

[illegible] ಸ್ಟೀವನ್ ಸನ್ [illegible] ಅಮೆರಿಕನ್ ಅಧ್ಯಕ್ಷ [illegible] ಮತ್ತು ರಷ್ಯದ ನಾಯಕ [illegible] ಶಾಂತಿ ಸಂಧಾನ [illegible] ನಡೆಸಲು [illegible]

ಶಿವಕಥಾ ಕಾಲಕ್ಷೇಪ

[illegible] ಆಗ್ರಹಾರದ ಶ್ರೀ ಕಾಶೀವಿಶ್ವೇಶ್ವರ ದೇವಸ್ಥಾನದಲ್ಲಿ [illegible] ಗಂಟೆಗೆ ಮಹಾ ಶಿವರಾತ್ರಿ ಪ್ರಯುಕ್ತ [illegible] ಶ್ರೀ [illegible] ಅವರಿಂದ ನಡೆಯುವಂತೆ [illegible]

[illegible]

ಟೆಂಡರ್ ನೋಟೀಸ್

[illegible] ಮಹಾ [illegible] ಮತ್ತು [illegible] ತಾರೀಖು ಮಧ್ಯಾಹ್ನ [illegible] ಗಂಟೆ [illegible] ಟೆಂಡರುಗಳನ್ನು [illegible]

(ಸಹಿ) ಡಿ ಸಂಜರಾಜೆ ಅರಸ್,

[illegible]

ಮೈಸೂರು

ಉತ್ತರ ಕರ್ನಾಟಕದಲ್ಲಿ ನೆಹರೂ ಪ್ರವಾಸ

ಬರುವ ಸಾಲಿನಲ್ಲಿ ಒಳ ಚರಂಡಿ ವ್ಯವಸ್ಥೆಗಾಗಿ ಬೋರ್ಡಿನವರು ೧೬ ಲಕ್ಷ ರೂ ಅನ್ನು ವೆಚ್ಚ ಮಾಡುವರು ಅದೇ ಮೊತ್ತವನ್ನು ಹಣವನ್ನು ಪೌರಸಭೆಯವರು ಒದಗಿಸುವರು ೫೬-೫೭ಕ್ಕೆ ಸಿಬ್ಬಂದಿ ಖರ್ಚಿಗಾಗಿ ೧ ಲಕ್ಷ ರೂ ಗ್ರಾಂಟನ್ನು ಕೊಡುವಂತೆ ಸರ್ಕಾರವನ್ನು ಕೋರಲಾಗುವುದು

ಕುರಿ ಪೋಷಕರ ಸಂಘದ ಸಭೆ

ಮೈಸೂರು ಜಿಲ್ಲಾ ಕುರಿ ಪೋಷಕರ ಸಂಘದ ಸಕಲ ಸದಸ್ಯರ ಸಭೆಯು ನಾಳೆ ಮಧ್ಯಾಹ್ನ ೪ ಗಂಟೆಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು

ರಣಜಿತ್ ★ 24-3-56 ರಿಂದ ಪ್ರದರ್ಶನ ಪ್ರಾರಂಭ
ಬಿ ಸರೋಜ ಪ್ರಧಾನ ಪಾತ್ರದಲ್ಲಿ ನಲ್ಲತಂಗಾಳ್
— ಮುಂದಿನ ಬಿಡುಗಡೆ —
★ ಕನಕತಾರ ★ (ತೆಲುಗು)

ನಗರದಲ್ಲಿ ಕೈಗಾರಿಕಾ ಎಸ್ಟೇಟ್ ಸ್ಥಾಪನೆಗೆ ೭ ಲಕ್ಷ ರೂ.

ಬೆಂಗಳೂರು ೨೩

ಮೈಸೂರು ನಗರದಲ್ಲಿ ಕೈಗಾರಿಕಾ ಎಸ್ಟೇಟನ್ನು ಏರ್ಪಡಿಸಲು ಕೇಂದ್ರ ಸರ್ಕಾರದವರು ೭ ಲಕ್ಷ ರೂ ಸಾಲವನ್ನೂ, ನಿವೇಶನಕ್ಕಾಗಿ ೧೦ ಸಾವಿರ ರೂ ಗ್ರಾಂಟನ್ನೂ ಕೊಟ್ಟಿರುತ್ತಾರೆ ಈ ಬಗ್ಗೆ ಮೈಸೂರು ಸರ್ಕಾರದವರು ಕೇಂದ್ರಕ್ಕೆ ಒಂದು ಯೋಜನೆಯನ್ನು ಕೊಟ್ಟಿದ್ದರು

ಅನುಮಾನದ ಮೇಲೆ ಬಂಧನ

ಲಷ್ಕರ್ ಮೊಹಲ್ಲೆಯಲ್ಲಿ ಮೊನ್ನೆ ರಾತ್ರಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಶಿವನೊಗ್ಗದ ರಾಮಲಿಂಗಂ ಎಂಬುವನನ್ನು ಪೋಲೀಸರು ಬಂಧಿಸಿರುವರು

ಪಾಕಿಸ್ತಾನವು ಇಸ್ಲಾಮಿಕ್ ಗಣರಾಜ್ಯವಾಯಿತು

ಪಾಕಿಸ್ತಾನವು ಮೊನ್ನೆ ಇಸ್ಲಾಮಿಕ್ ಗಣರಾಜ್ಯವಾಗಿರುವುದಾಗಿ ಘೋಷಿಸಲ್ಪಟ್ಟಿತು ಈ ಸಂಬಂಧವಾಗಿ ಕರಾಚಿಯಲ್ಲಿ ಸಮಾರಂಭವೊಂದು ನಡೆದು ಗೌರ್ನರ್ ಜನರಲ್ ಇಸ್ಕಂದರ್ ಮಿರ್ಜಾರವರು ಗಣರಾಜ್ಯದ ಅಧ್ಯಕ್ಷರಾಗಿ ಪ್ರಮಾಣ ವಚನವನ್ನು ಸ್ವೀಕರಿಸಿದರು ಆ ವೇಳೆಯಲ್ಲಿ ೩೧ ಕುಶಾಲ ತೋಪುಗಳನ್ನು ಹಾರಿಸಲಾಯಿತು ಪ್ರಮಾಣ ವಚನ ಸ್ವೀಕಾರದನಂತರ ಅಧ್ಯಕ್ಷರು ಪಾಕಿಸ್ತಾನದ ರಕ್ಷಣಾ ಎಲ್ಲಾ ಮೂರು ಪಡೆಗಳಿಂದ ಸಲ್ಯೂಟ್ ಸ್ವೀಕರಿಸಿದರು ವಿವಿಧ ದೇಶಗಳ ರಾಯಭಾರಿಗಳು ತಮ್ಮ ನೂತನ ಪ್ರಶಸ್ತಿ ಪತ್ರಗಳನ್ನು ಅಧ್ಯಕ್ಷರಿಗೆ ಒಪ್ಪಿಸಿದರು ಜಿನ್ನಾರವರ ಗೋರಿಗೆ ಪ್ರಧಾನಿಯವರೂ ಅಧ್ಯಕ್ಷರೂ ಪುಷ್ಪ ಮಾಲಿಕೆಗಳನ್ನು ಅರ್ಪಿಸಿದರು

ಕ್ಯಾಲೆಂಡರ್ ಸ್ವೀಕಾರ

ನಗರದ ಹಾನಿಮಿಯಿನ ಮಾರ್ಕೆಟ್ಟಿನಲ್ಲಿರುವ ಪ್ರಕಾಶ್ ಕಾಫಿ ಸಪ್ಲೈಸ್‌ನವರು ಕಳುಹಿಸಿರುವ ನೂತನ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ

ಕಮ್ಯೂನಿಟಿ ಪ್ರಾಜೆಕ್ಟ್ ಮತ್ತು ಎನ್ ಇ ಎಸ್. ಗಳಿಗೆ ತಕ್ಕ ಹೆಸರಿಗೆ ಬಹುಮಾನ

ಕಮ್ಯೂನಿಟಿ ಪ್ರಾಜೆಕ್ಟ್ ಮತ್ತು ನ್ಯಾಷನಲ್ ಎಕ್ಸ್‌ಟೆನ್‌ಷನ್ ಸರ್ವೀಸ್ ವಲಯಗಳನ್ನು ಭಾರತೀಯ ಭಾಷೆಗಳಲ್ಲಿ ತರ್ಜುಮೆ ಮಾಡುವವರಿಗೆ ಸೂಕ್ತ ಬಹುಮಾನವನ್ನು ಕೊಡುವುದಾಗಿ ಮುಖ್ಯ ಮಂತ್ರಿಯವರು ತಿಳಿಸಿಯುತ್ತಾರೆ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ವಿವಾಹ ಮಹೋತ್ಸವಗಳು

ಚಾಮುಂಡಿ ಬೆಟ್ಟದಲ್ಲಿರುವ ಆ ಸಿ ಸುಬ್ರಹ್ಮಣ್ಯಅಯ್ಯರ್‌ರವರು ತಮ್ಮ ಕಿರಿಯ ಸೋದರ ಶ್ರೀ ಕೃಷ್ಣಪ್ಪನವರ ಕುಮಾರ ಶ್ರೀ ವೆಂಕಟಸುಬ್ರಹ್ಮಣ್ಯಯ್ಯರ್‌ರವರಿಗೆ ನಗರದಲ್ಲಿರುವ ಪೋಸ್ಟ್ ಮಾಸ್ಟರ್ ಶ್ರೀ ಬಿ ಎಸ್ ಶಿವಸುಬ್ರಹ್ಮಣ್ಯಯ್ಯರ್‌ರವರ ಕುಮಾರಿ ಮಂಗಳಂರವರನ್ನು ತಂದುಕೊಂಡು ಕಳೆದ ಬುಧವಾರ ನಾಮುಕ್ತಿಲ್ಲಿನಲ್ಲಿ ವಿವಾಹವನ್ನು ನೆರವೇರಿಸಿದರು

ಮಹಾಂತಾ ಪಿಕ್ಚರ್ಸಿನ ಸಂಗೀತ ನಿರ್ದೇಶಕ ಶ್ರೀ ಪಿ ರಾಮಣ್ಣನವರು ತಮ್ಮ ಕುಮಾರಿ ಸರೋಜಮ್ಮನನ್ನು ಬೆಂಗಳೂರಿನ ಶ್ರೀ ಆರ್ ಹನುಮಂತಯ್ಯನವರ ಮಗ ಶ್ರೀ ಹೆಚ್ ರಾಮಯ್ಯನವರಿಗೂ, ಮತ್ತೊಬ್ಬ ಕುಮಾರಿ ಶಾಂತನನ್ನು ಅಜ್ಜಿಪುರದ ಶ್ರೀ ಚಲುವಯ್ಯನವರ ಮಗ ಶ್ರೀ ಸಿ ಪಾಪಣ್ಣನವರಿಗೂ ಕೊಟ್ಟು ಕಳೆದ ಬುಧವಾರ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಸಂಸ್ಥಾನ ರೈತರುಗಳ ಸಂಘದ ಯಳಂದೂರು ಶಾಖೆ

ಸಂಸ್ಥಾನ ರೈತರ ಸಂಘದ ಯಳಂದೂರು ಶಾಖೆಯು ಬಿಳಿಗಿರಿರಂಗನಬೆಟ್ಟದಲ್ಲಿ ಕಳೆದ ಭಾನುವಾರ ಆರಂಭವಾಯಿತು ಮೈಸೂರಿನ ಶ್ರೀ ಜೆ ಸ್ವಾಮಿದಾಸ್‌ರವರು ಅಧ್ಯಕ್ಷತೆ ವಹಿಸಿದ್ದರು ಕಾರ್ಯದರ್ಶಿಯವರು ರೈತರ ಸಂಘದ ಉದ್ದೇಶವನ್ನು ವಿವರಿಸಿದರು ಯಳಂದೂರು ಶಾಖೆಯ ಸಮಿತಿಯನ್ನು ಆರಿಸಲಾಯಿತು ನೂತನ ಸಂಸ್ಥೆಯನ್ನು ಮೈಸೂರು ಎಂದು ಕರೆಯುವುದಕ್ಕೆ ತೀರ್ಮಾನ ಸೂಚಿಸಲಾಯಿತು ಸೂಕ್ತಯ ಹರಿಜನರು ವಾಸಿಸಲು ಅನುಕೂಲವಾಗುವಂತೆ ಇಬ್ಬರು ಮುಸಲ್ಮಾನರು ೩ ಎಕರೆ ಜಮೀನನ್ನು ಉಚಿತವಾಗಿ ಕೊಟ್ಟಿರುವ ಸಂಬಂಧವಾಗಿ ಸೂಕ್ತ ಕಾರ್ಯವನ್ನು ನಡೆಸಲು ಅಧ್ಯಕ್ಷರಿಗೆ ಅಧಿಕಾರವೀಯಲಾಯಿತು

ರಾಜಧಾನಿಯ ಸೊಪ್ಪಿನಕೇರಿಯ ಬೀದಿಯಲ್ಲಿರುವ ಶ್ರೀ ಪ್ರಸನ್ನ ಮಾರುತಿ ಮಂದಿರದ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಎಂ ಕೃಷ್ಣರಾಯರ ಹಾಡುಗಾರಿಕೆಯನ್ನು ಸೂಕ್ತ ಪಕ್ಕವಾದ್ಯದೊಡನೆ ಏರ್ಪಡಿಸಲಾಗಿದೆ

CITY TUTORIAL COLLEGE, Mysore
EVENING S S L C CLASSES
for school going students and private
unary school teachers for the De
56 Examination
Time - 6 P M to 9 P M
Fees Rs 6 P M
★ All subjects Spl. attention
English & Options
★ Systematic work with the best
Staff & Equipment
Read C T C PUBLICATIONS

Edited, Printed and Published by A R. Nagarajan at Sadhvi Press, D Subbiah Road Mysore

ಒಮ್ಮೆ ಭೇಟಿ ಕೊಡಿ! ನೋಡಿದ್ದೀರಾ!!
ಗೀತಾ ಸ್ಟೋರ್ಸ್
ಶಿವರಾಂಪೇಟೆ (ಮಸೀದಿ ಪಕ್ಕ), ಮೈಸೂರು
ರೆಡಿ ಅಂಗಿಗಳು ಮತ್ತು ಹೋಟೆಲು ಪಾತ್ರೆಗಳಿಗೆ
ನಮ್ಮಲ್ಲಿ ಆಧುನಿಕ ರೀತಿಯ ಸಾಮಾನುಗಳು ಪೆನ್ನುಗಳು ಮತ್ತು ಬಿಸಿ ನೀರಿನ ಫ್ಲಾಸ್ಕುಗಳು, ಸೂಟುಗಳು, ಬಟ್ಟೆಗಳು, ಚಪ್ಪಲಿಯೂ
ಅತಿ ಸುಲಭ ದರದಲ್ಲಿ ದೊರೆಯುತ್ತವೆ
ಈ ಪತ್ರಿಕೆ ತಂದವರಿಗೆ ಪಕ್ಷ 1 ಕ್ಕೆ 2 4 0 ರೂ ಬೆಲೆಯ ಹಿಂದುಸ್ಥಾನ್ 6 ಡಜನ್
ಗಾಡಿ ಬೋಲ್ಟುಗಳನ್ನು 2-1-0 ರೂ.ಗೆ ಕೊಡಲಾಗುತ್ತೆ

JOTHY ELECTRIC LAUNDRY
Nazarbad, Mysore
—0—
OUR CENTRAL OFFICE AT
New Statue Square (Up-stairs, Badami Stores)
Well equipped with latest American Tryplex Dry Cleaning Machine
★
Please pay a visit and witness how dry cleaning is actually done by modern process using special chemicals etc., etc.
★
This is the only 'LAUNDRY' in the city equipped with Modern Electrical Machines for Washing, Ironing and Dry Cleaning etc
★
PUBLIC PATRONAGE SOLICITED

ಟೆಲಿಫೋನ್ ನಂ. 792

ಫೋನ್ 811 ಸ್ಥಾಪಿತ 1933
ಚಿನ್ನದ ಬೆಳ್ಳಿಯ ಪದಾರ್ಥಗಳಿಗೂ ಕಲ್ಲಿನ ನಗಗಳಿಗೆ
ಇಂದೇ ಭೇಟಿ ಕೊಡಿ
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ಸಯ್ಯಾಜಿರಾವ್ ಸರ್ಕಲ್,
ಮೈಸೂರು

ಅಡಿಸಿಪ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೋ॥ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ನಿ, ಸಿಂಥೆಟಿಕ್
ಸೀರೆಗಳು
ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಪುಟ ೧೪] SADHVI : MONDAY 26-3-1956 ಮೈಸೂರು ಸೋಮವಾರ : ೨೬-೩-೧೯೫೬ [ಸಂಚಿಕೆ : ೨೦೭

ಪಾಕಿಸ್ತಾನ ಮತ್ತು ಭಾರತಗಳ ಯುದ್ಧವು ಆತ್ಮನಾಶಕರ

ದಕ್ಷಿಣ ರೈಲ್ವೆ ಕೆಲಸಗಾರರ ಬೇಡಿಕೆಗಳು

ಮೈಸೂರು ಶಾಖೆಯ ಸಮ್ಮೇಳನದಲ್ಲಿ ಒತ್ತಾಯ

ಮೈಸೂರು ೨೫

ದಕ್ಷಿಣ ರೈಲ್ವೆ ಕೆಲಸಗಾರರ ಸಂಘದ ಮೈಸೂರು ಶಾಖೆಯ ಸಮ್ಮೇಳನವು ನೆನ್ನೆ ಟಂಡೆ ಹಾಲ್‌ನಲ್ಲಿ ನಡೆಯಿತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಈ ಸಮಯದಲ್ಲಿ ಸಂಘದವರು ಒಂದು ಮನವಿ ಪತ್ರವನ್ನು ಸಲ್ಲಿಸಿ, ಮಾಜಿ ಮೈಸೂರು ರೈಲ್ವೆ ನೌಕರರ ಕೇಂದ್ರ ಸಂಬಳಗಳಿಗೆ ಸಮಿತಿಯು ಸೂಚಿಸಿದ ಶಿಫಾರಸುಗಳ ಬಗ್ಗೆ ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಬೇಕೆಂದೂ, ಗುಂತಕಲ್ ಬದಲು ಬೆಂಗಳೂರಿನಲ್ಲಿ ಒಂದು ಡಿವಿಷನ್ ತೆರೆಯಬೇಕೆಂದೂ ಮತ್ತು ನಗರದ ರೈಲ್ವೆ ಕಾಲೋನಿಯಲ್ಲಿ ವ್ಯಾಗನ್ನುಗಳ ತಯಾರಿಕೆಯ ಕಾರ್ಖಾನೆ ಸ್ಥಾಪಿಸಬೇಕೆಂದೂ ಪ್ರಾರ್ಥಿಸಿದರು

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಬಿ ಶ್ರೀಕಂಠಯ್ಯನವರು ಸ್ವಾಗತ ಭಾಷಣ ಮಾಡಿದರು. ಸಂಘದ ಪರವಾಗಿ ಶ್ರೀ ವೆಂಕಟೇಶ ಮನವಿಯನ್ನು ಓದಿದರು. ಶ್ರೀಗಳಾದ ಎಸ್ ರಾಮಸ್ವಾಮಿ ಮತ್ತು ರಾಜು ಮೊದಲಾದವರು ಭಾಷಣ ಮಾಡಿ, ಮೈಸೂರು ನೌಕರರ ದುಸ್ಥಿತಿಯನ್ನು ವಿವರಿಸಿದರು [illegible] ಮಹಾಜನರ ಮತ್ತು ಮು [illegible] ಸಹಕಾರವನ್ನು ಕೋರಿದರು

ಪಾರ್ಲಿಮೆಂಟ್ ಸದಸ್ಯ ಶ್ರೀ ಎಚ್ ಸಿದ್ದಯ್ಯ ಅವರು [illegible] ಕೇಂದ್ರದೊಡನೆ ವಿಲೀನವಾದ ನಂತರ ನಿರೀಕ್ಷಿಸಿದ್ದಂತೆ ನೌಕರರ ಸ್ಥಿತಿ ಉತ್ತಮಗೊಳ್ಳದೆ ಇರುವುದಕ್ಕಾಗಿ ವಿಷಾದಿಸಿದರು.

ನಗರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಮಾತನಾಡಿ, ನಗರದಿಂದ ನಾನಾ ಸಂಸ್ಥೆಗಳು ಮತ್ತು ಕಛೇರಿಗಳ ವರ್ಗಾವಣೆಯಿಂದ ಜನಸಂಖ್ಯೆಯು ಕಮ್ಮಿಯಾಗಿ ನಗರದ ಪ್ರಾಮುಖ್ಯತೆಯು ಕ್ಷೀಣಿಸುತ್ತಿರುವುದರಿಂದ ರೈಲ್ವೆ ಕಛೇರಿ ವರ್ಗಾವಣೆಯನ್ನು ವಿರೋಧಿಸಿದರು [illegible] ತಯಾರಿಕೆಗೆ ಸೌಕರ್ಯವಿದ್ದರೂ [illegible] ಆ ಕಾರ್ಯವನ್ನು ಪಡೆಪಡೆ ಬೇರೆ [illegible] ವಹಿಸಿಗಿಯವರೊಬ್ಬರಿಗೆ ಒಪ್ಪಿಸುವುದನ್ನು ಖಂಡಿಸಿದರು.

ಶ್ರೀ ಕೆ ವೆಂಕಟರಮಣಯ್ಯನವರು ಮಾತನಾಡಿ ಸ್ವಾತಂತ್ರ್ಯಾನಂತರ ಜನತೆಯು ಆಸೆಗಳನ್ನಿಟ್ಟಿದ್ದರೆಂದೂ ಪ್ರಜಾ ಮಂತ್ರಿಗಳು ಕೆಲಸವೆಂತೆ ಅಧಿಕಾರ ಮಾಡುತ್ತಿರುವ ಅಧಿಕಾರಿಗಳೇ ಕಾರಣವೆಂದೂ, ಇದರಿಂದಾಗಿ ಜನರಲ್ಲಿ ತಮ್ಮ ಹಿತಗಳನ್ನು ಸರ್ಕಾರ ಕಾಪಾಡಬಹುದೆಂಬ ಸಂದೇಹವುಂಟಾಗಿದೆ ಎಂದು ಹೇಳಿದರು

ಅಧ್ಯಕ್ಷರು ಭಾಷಣ ಮಾಡಿ ಮೈಸೂರಿನ ಸ್ಥಿತಿ [illegible] ಇಳಿಮುಖವಾಗುತ್ತಿರುವುದಕ್ಕಾಗಿ ವಿಷಾದಿಸಿ, ಈ ಬಗ್ಗೆ ಸ್ವಲ್ಪಕಾಲ ತಾಳ್ಮೆಯಿಂದ ಅ [illegible] ಹೋಗಬೇಕೆಂದು ಸಲಹೆಯಿತ್ತರು. ರೈಲ್ವೆ ನೌಕರರು ಒಗ್ಗಟ್ಟಾಗಿರಬೇಕೆಂದು

ವಿದ್ಯುಚ್ಛಕ್ತಿ ನೌಕರರ ಬೇಡಿಕೆಗಳ ಬಗ್ಗೆ ಸಮಿತಿ ಶಿಫಾರಸುಗಳು

ಸರ್ಕಾರದವರು ಅಂಗೀಕರಿಸಿರುವರಾಗಿ ಕೈಗಾರಿಕಾ ಮಂತ್ರಿಗಳ ಹೇಳಿಕೆ

ಬೆಂಗಳೂರು ೨೫

ನೆನ್ನೆ ವಿಧಾನ ಸಭೆಯಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಶ್ರೀ ಎಸ್ ಗೋಪಾಲಗೌಡರ ಪ್ರಶ್ನೆಗೆ ಉತ್ತರವಿತ್ತು ವಿದ್ಯುಚ್ಛಕ್ತಿ ಇಲಾಖೆ ನೌಕರರ ಬೇಡಿಕೆಗಳ ಬಗ್ಗೆ ಸರ್ಕಾರದವರು ನೇಮಿಸಿದ ಸಮಿತಿಯವರು ಮಾಡಿರುವ [illegible] ಶಿಫಾರಸುಗಳನ್ನು ಸರ್ಕಾರದವರು ಒಪ್ಪಿರುವರೆಂದು ತಿಳಿಸಿದರು

ಸಮಿತಿಯವರ ಸಲಹೆಯಂತೆ [illegible] ವೇತನ [illegible] ನೌಕರರ [illegible] ಮಹಾತ್ಮ [illegible] ಅವಧಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚು ವೇತನವನ್ನೇನೂ ಕೊಟ್ಟಿಲ್ಲವೆಂದೂ, ಹೆಚ್ಚು ಕೆಲಸಕ್ಕಾಗಿ ಕೊಡಲಾಯಿತೆ [illegible] ದಿವಸಗಳ ಮುಸ್ಸಂಜೆ ಅವಧಿಯ ವೇತನವನ್ನು [illegible] ಕೆಂದು ಸಲಹೆ ಮಾಡಿದ [illegible] ಕೆಲಸಕ್ಕೆ [illegible] ಗವೆ ಇದ್ದಾಗ ವೇತನ ಕೊಡುವುದು ಸರ್ಕಾರದ ನೀತಿಯಲ್ಲವೆಂದು ಸೂಚಿಸಿದರು

ಸಂಸ್ಥಾನ ಪುನರ್ವಿಂಗಡಣೆ ಮಸೂದೆಯನ್ನು ವಿರೋಧಿಸಲಾಗದು

ಶಾಸನಸಭಾ ಕಾಂಗ್ರೆಸ್ ಸದಸ್ಯರಿಗೆ ಹೈ ಕಮಾಂಡಿನ ಆದೇಶ

ಶಾಸನ ಸಭೆಗಳಲ್ಲಿರುವ ಕಾಂಗ್ರೆಸ್ ಪಕ್ಷದ ನಾಯಕರು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರುಗಳಿಗೆ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಕೆ ಪಿ ಮಾಧವನ್ ನಾಯರ್‌ರವರು ಸೂಚನೆ ಕಳುಹಿಸಿ, ಸಂಸ್ಥಾನ ಪುನರ್ವಿಂಗಡಣೆಗೆ ಸಂಬಂಧಿಸಿದ ಮಸೂದೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಗೆ ಸಲಹೆ ನೀಡಲು ಕಾಂಗ್ರೆಸ್ ಸದಸ್ಯರಿಗೆ ಅವಕಾಶವಿರುವುದಾಗಿ ತಿಳಿಸಿರುತ್ತಾರೆ. ಆದರೆ ಪಕ್ಷದ ನಾಯಕರ ಅನುಮತಿಯಿಲ್ಲದೆ ತಿದ್ದುಪಡಿಗಳನ್ನು ಸೂಚಿಸಬಾರದೆಂದೂ ಮಸೂದೆಯ ಮೂಲ ಶಿಫಾರಸುಗಳಿಗೆ ಬೆಂಬಲ ಕೊಡಬೇಕೆಂದೂ ಸೂಚಿಸಿರುತ್ತಾರೆ

○ಭಾರತದ ಪಶ್ಚಿಮ ಉತ್ತರ [illegible] ಯೋಜನೆಯಂತೆ ಇರುವ ಒಂದು [illegible] ಯೋಜನೆಯನ್ನು ಪಾಕಿಸ್ತಾನದಲ್ಲೂ ನಿರ್ಮಿಸಲು ರಷ್ಯವು ಮುಂದೆ ಬಂದಿರುವುದಾಗಿ ಹೇಳಲಾಗಿದೆ

[illegible] ನಿವಾರಿಸಲು [illegible] ಮುಖ್ಯವಾದದ್ದು ಮಕ್ಕಳಿಗೆ ಯಥೇಷ್ಟ [illegible] ಎಂದು

[illegible] ಗಳನ್ನು ತಯಾರಿಸುವ ಬಗ್ಗೆ ಕೈಗಾರಿಕಾ ಮಂತ್ರಿಗಳೊಡನೆ ಚರ್ಚಿಸುವುದಾಗಿಯೂ ಭರವಸೆಯಿತ್ತರು

ಶ್ರೀ ಬಿ ಎಸ್ ಶ್ರೀಕಂಠಯ್ಯನವರಿಂದ ವಂದನಾರ್ಪಣೆಯಾದನಂತರ [illegible] ಸಭೆ ಮುಕ್ತಾಯವಾಯಿತು

ಸಂಸ್ಕೃತಿ ಪ್ರಚಾರದ ಬಗ್ಗೆ ವಿಧಾನ ಸಭೆಯಲ್ಲಿ ಕಟು ಟೀಕೆ

ಯೋಜನೆ ಕೈ ಬಿಡಲು ಒತ್ತಾಯಕ್ಕಾಗಿ ಸದಸ್ಯರ ರುಜು ಸಂಗ್ರಹಣೆ

ಸ್ವಂತ ವರದಿಗಾರರಿಂದ] ಬೆಂಗಳೂರು ೨೫

ನೆನ್ನೆ ವಿಧಾನ ಸಭೆಯಲ್ಲಿ [illegible] ಬೇಡಿಕೆಗಳ ಬಗ್ಗೆ ಪರಿಶೀಲನೆ ನಡೆದು [illegible] ಬಾಬಿಗಾಗಿ [illegible] ರೂ ಗಳನ್ನು ಮಂಜೂರು ಮಾಡಲಾಯಿತು

ಪ್ರಶ್ನೋತ್ತರ ಕಾಲದಲ್ಲಿ ಸಂಸ್ಕೃತಿ ಪ್ರಚಾರದ [illegible] ಸದಸ್ಯರು ಈ ಯೋಜನೆಯನ್ನು [illegible] ಪ್ರಯೋಜನವಿಲ್ಲವೆಂದೂ, ಈ ಯೋಜನೆಯನ್ನು ಗ್ರಾಮಾಂತರ ಜನಗಳು [illegible], "ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ" ಎಂದು [illegible] ಅದರಿಂದ [illegible] ಈ ಯೋಜನೆಯನ್ನು [illegible] ಸಂಕಲ್ಪ [illegible] ಕೇಳಲಾಗಿ [illegible]

ಈ ಯೋಜನೆಯನ್ನು ಆಯವ್ಯಯ ಪಟ್ಟಿಯಿಂದ [illegible] ಬಗ್ಗೆ [illegible] ಸದಸ್ಯರುಗಳ ರುಜುಗಳನ್ನು ಸಂಗ್ರಹಿಸಲಾಗುತ್ತಿರುವುದೆಂದೂ ತಿಳಿದುಬಂದಿದೆ

ಬಂಡೀಪುರದಲ್ಲಿ ಪ್ರವಾಸಿಗರ ಸೌಕರ್ಯಕ್ಕಾಗಿ ೨ ಲಕ್ಷ ರೂ.

ಬೆಂಗಳೂರು ೨೫

ವಿಧಾನ ಸಭೆಯಲ್ಲಿ ನೆನ್ನೆ ಸಚಿವ ಡಾ॥ ನಾಗನಗೌಡರು ಅರಣ್ಯ ಖಾತೆಯ ಗ್ರಾಂಟು ಚರ್ಚೆ ಬಗ್ಗೆ ಉತ್ತರವಿತ್ತು, ಮೈಸೂರು ಜಿಲ್ಲೆಯ ಬಂಡೀಪುರದ ಶಿಕಾರಿ ವನದಲ್ಲಿ ಪ್ರವಾಸಿಗರಿಗೆ ಸೌಲಭ್ಯಗಳನ್ನು ಏರ್ಪಡಿಸಲು ಭಾರತ ಸರ್ಕಾರದವರು ೨೦ ಲಕ್ಷ ರೂ ಗ್ರಾಂಟನ್ನು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಅಲ್ಲಿ ಪ್ರಥಮ ದರ್ಜೆಯ ಹೋಟೇಲೊಂದನ್ನು ನಿರ್ಮಿಸಲಾಗುವುದೆಂದು ಅವರು ಹೇಳಿದರು. ಭಾರತದಲ್ಲಿರುವ ಕಾಡು ಮೃಗಗಳ ನಿವಾಸ ಸ್ಥಾನಗಳ ಪೈಕಿ ಇದೂ ಒಂದು ಅತ್ಯಂತ ಉತ್ತಮ ಕ್ಷೇತ್ರವೆಂದೂ, ಇದರ ಪಕ್ಕದಲ್ಲಿ ಮದ್ರಾಸ್ ಸಂಸ್ಥಾನದ ಮದುಮಲೆ ಕಾಡು ಮೃಗಗಳ ಆವಾಸ ಸ್ಥಾನವು ಇರುವುದಾಗಿಯೂ ಸಚಿವರು ನುಡಿದರು. ಅರಣ್ಯ ನಿರ್ಮಾಣ, ಪಾಲನೆ ಮುಂತಾದ ಕಾರ್ಯಗಳಿಗೆ ಬರುವ ವರ್ಷ [illegible] ಲಕ್ಷ ರೂ ತೆಗೆದಿರಿಸಲಾಗಿದೆಯೆಂದೂ, ಮೈದಾನ ಪ್ರದೇಶದಲ್ಲಿ ೬೦ ಸಾವಿರ ಮತ್ತು ಮಲೆನಾಡಿನಲ್ಲಿ [illegible] ಸಾವಿರ ಎಕರೆ [illegible] ಯೋಜನೆ ಅವಧಿಯಲ್ಲಿ ಅರಣ್ಯಗಳನ್ನು ಏರ್ಪಡಿಸಲಾಗುವುದೆಂದೂ ಸಚಿವರು ತಿಳಿಸಿದರು

ಶ್ರೀ ಎಚ್ ಪುಟ್ಟಸ್ವಾಮಿಗೌಡರು ಮಾತನಾಡಿ, ವನ ಮಹೋತ್ಸವ ಕಾಲದಲ್ಲಿ ನೆಡಲಾದ ಸಸಿಗಳಲ್ಲಿ ಪೂರ್ತಿ ಬೆಳೆದಿದ್ದರೆ ಇಡೀ ಸಂಸ್ಥಾನವೇ ವೃಕ್ಷಮಯವಾಗುತ್ತಿತ್ತೆಂದು ಹೇಳಿದರು.

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧವು ಆತ್ಮಘಾತಕ

ಪಾಕಿಸ್ತಾನದ ಅಧ್ಯಕ್ಷರ ಭಾಷಣ

ಪಾಕಿಸ್ತಾನದ ಇಸ್ಲಾಮಿಕ್ ರಿಪಬ್ಲಿಕ್ಕಿನ ರಾಷ್ಟ್ರೀಯ ಸಭೆಯನ್ನು ಉದ್ದೇಶಿಸಿ ನೆನ್ನೆ ಅಲ್ಲಿನ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ಭಾಷಣ ಮಾಡಿ, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧವಾದರೆ ಪರಸ್ಪರ ಆತ್ಮಘಾತಕವಾದಂತೆಯೇ ಸರಿ, ಎಂದು ನುಡಿದರು. ಪಾಕಿಸ್ತಾನದ ಕಡೆಯಿಂದ ಭಾರತಕ್ಕೆ ಆಕ್ರಮಣದ ಭೀತಿಯಿಲ್ಲವೆಂದು ಅವರು ಹೇಳಿದರು. ತಮ್ಮ ನೆರೆಯಲ್ಲಿರುವ ಹಿರಿಯ ರಾಷ್ಟ್ರವಾದ ಭಾರತದೊಡನೆ ಅತ್ಯಂತ ಸ್ನೇಹಪೂರಿತ ಸಂಬಂಧ ಹೊಂದಿರಬೇಕೆಂಬುದು ಪಾಕಿಸ್ತಾನದ ಅಭಿಲಾಷೆಯೆಂದೂ, ಆದರೆ ತಮ್ಮ ನಾಡಿನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಸರ್ವ ಪ್ರಯತ್ನವನ್ನೂ ನಡೆಸುವುದಾಗಿಯೂ ಅವರು ಹೇಳಿದರು

ಬೊಂಬಾಯಿಗಾಗಿ ನಾಳೆ ಸತ್ಯಾಗ್ರಹ

ಮಹಾರಾಷ್ಟ್ರ ಸಂಸ್ಥಾನದಲ್ಲಿ ಬೊಂಬಾಯಿ ನಗರವನ್ನು ಸೇರಿಸುವಂತೆ ಒತ್ತಾಯಪಡಿಸಲು ನಾಳೆ ಹಿಂದೂ ಮಹಾಸಭಾ ನಾಯಕ ವಿ ಜಿ ದೇಶಪಾಂಡೆಯವರ ನೇತೃತ್ವದಲ್ಲಿ ಬೊಂಬಾಯಿಯಲ್ಲಿ ಸತ್ಯಾಗ್ರಹವನ್ನು ಹೂಡಲಾಗುವುದೆಂದು ವರದಿಯಾಗಿದೆ

ಸೋಸಲೆ ಸ್ವಾಮಿಗಳವರಿಗೆ ಮಂತ್ರಾಲಯದಲ್ಲಿ ಸ್ವಾಗತ

ಸೋಸಲೆಯ ಶ್ರೀ ವ್ಯಾಸರಾಯ ಮಠಾಧಿಪತಿಗಳಾದ ಶ್ರೀ ಶ್ರೀ ವಿದ್ಯಾ ಪ್ರಸನ್ನತೀರ್ಥ ಶ್ರೀಪಾದಂಗಳವರಿಗೆ ಕಳೆದ ಗುರುವಾರ ಮಂತ್ರಾಲಯದಲ್ಲಿ ವೈಭವದ ಸ್ವಾಗತವನ್ನೀಯಲಾಯಿತು. ಅವರನ್ನು ಆನೆ ದೇವಾಲಯದ ಮುತ್ತಲೂ ಪ್ರದಕ್ಷಿಣೆಯಾಗಿ ಕರೆದುಕೊಂಡು ಹೋಗಲಾಯಿತು. ನಂತರ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳವರನ್ನು ಶ್ರೀ ಶ್ರೀಗಳವರು ಸಂದರ್ಶಿಸಿದ ಮೇಲೆ ಅವರನ್ನು ಅಲಂಕೃತವಾಗಿದ್ದ ಮಂಟಪಕ್ಕೆ ಬಿಜ ಮಾಡಿಸಿದರು. ಅಲ್ಲಿ ಅವರಿಗೆ ರಾಘವೇಂದ್ರ ಮಠದ ಸ್ವಾಮಿಗಳವರು ಸ್ವಾಗತ ಪತ್ರವನ್ನು ಇತ್ತು ಸನ್ಮಾನಿಸಿದರು. ಉಭಯ ಸ್ವಾಮಿಗಳವರೂ ತುಂಗಭದ್ರೆಯಲ್ಲಿ ಮಿಂದು, ದಂಡೋದಕದ ತೀರ್ಥವನ್ನು ನೆರೆದಿದ್ದ ಸಹಸ್ರಾರು ಭಕ್ತರುಗಳ ಮೇಲೆ ಚಿಮುಕಿಸಿದರು. ಸಂಜೆ ವೇದೋಪನಿಷತ್ತುಗಳ ಬಗ್ಗೆ ವಿದ್ವಾನ್ ಹೂಗಾರ ರಂಗನಾಥಾಚಾರ್ಯರು ಮತ್ತು ದೊಡ್ಡಬಳ್ಳಾಪುರದ ವಾಸುದೇವಾಚಾರ್ಯರಿಂದ ಉಪನ್ಯಾಸಗಳಾದುವು. ಬೊಂಬಾಯಿಯ ಸಂಗೀತ ಭೂಷಣ ನಾರಾಯಣರಾಯರ ಸಂಗೀತವೂ ಏರ್ಪಾಡಾಗಿತ್ತು

○ಭಾರತದ ಸಂಗೀತ ನಾಟಕ ಅಕಾಡೆಮಿಯವರು ಕರ್ನಾಟಕ ಸಂಗೀತಕ್ಕಾಗಿ ಎಂ ಎಸ್ ಸುಬ್ಬಲಕ್ಷ್ಮಿಯವರಿಗೂ, ಮೃದಂಗ ಬಾರಿಸುವುದಕ್ಕಾಗಿ ಟಿ ಎಸ್ ಪಳನಿ ಅಯ್ಯರ್‌ರವರಿಗೆ ಕೂಡ ಈ ವರ್ಷ ಪ್ರಶಸ್ತಿಗಳನ್ನು ಕೊಟ್ಟಿರುತ್ತಾರೆ

ಆಹಾರ ಸಂಶೋಧನಾಲಯ ಸಂಘದ ವಾರ್ಷಿಕೋತ್ಸವ

ಮೈಸೂರು, ೨೩

ಕೇಂದ್ರ ಆಹಾರ ಸಂಶೋಧನಾಲಯದ ಜ ಮಖಾನಾ ಸಂಘದ ವಾರ್ಷಿಕೋತ್ಸವವು ಭಾರತ ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆಯ ಡೈರೆಕ್ಟರ್ ಪ್ರೊ|| ಎಂ ಎಸ್ ಥ್ಯಾಕರ್ ರವರ ಅಧ್ಯಕ್ಷತೆಯಲ್ಲಿ ನೆನ್ನೆ ನೆರವೇರಿತು

ಶ್ರೀಮತಿ ನಾಗರತ್ನಮ್ಮನವರ ಪ್ರಾರ್ಥನೆ ಮತ್ತು ಇನ್ಸ್ಟಿಟ್ಯೂಟಿನ ಡೈರೆಕ್ಟರ್ ಡಾ|| ವಿ ಸುಬ್ರಹ್ಮಣ್ಯಂರವರ ಸ್ವಾಗತ ಭಾಷಣವಾದನಂತರ ಶ್ರೀಮತಿ ಸೀತಮ್ಮ ಮತ್ತು ಎಲ್ ಕಮಲರವರುಗಳಿಂದ ಲಘುಗೀತೆಗಳಾದುವು. ಜಮಖಾನ ಕಾರ್ಯದರ್ಶಿ ಶ್ರೀ ಕೆ ಆರ್ ಸೀತಾರಾಮಯ್ಯನವರು ವಾರ್ಷಿಕ ವರದಿಯನ್ನು ಒಪ್ಪಿಸಿದರು ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿನಿಯೋಗವಾಯಿತು

ಅನಂತರ ಅಧ್ಯಕ್ಷರು ಭಾಷಣ ಮಾಡಿ, ವಿಜ್ಞಾನ ಮತ್ತು ಸಂಶೋಧನೆಗಳು ನಿತ್ಯ ಜೀವನದಲ್ಲಿ ವಹಿಸುತ್ತಿರುವ ಪಾತ್ರವನ್ನು ಜನತೆಯು ಇತ್ತೀಚೆಗೆ ಮನಗಂಡಿರುವುದಕ್ಕಾಗಿ ಸಂತೋಷಿಸಿದರು ದಿನವಹಿ ಜೀವನದಲ್ಲಿ ಉದ್ಭವಿಸುವ ಸಮಸ್ಯೆಗಳೂ, ಸಂಶೋಧನಾಲಯಗಳ ಸಮಸ್ಯೆಗಳೂ ಒಂದೇ ಎಂಬುದಾಗಿ ಅವರು ಹೇಳಿ, ಅವುಗಳ ಪರಿಹಾರಕ್ಕಾಗಿ ವಿಜ್ಞಾನಿಗಳು ಒಂದುಗೂಡಿ ಏಕ ಮನಸ್ಸಿನಿಂದ ಶ್ರಮಿಸಬೇಕೆಂದು ಸೂಚಿಸಿದರು

ಸಂಶೋಧನಾಲಯದ ಚಟುವಟಿಕೆಗಳ ಬಗ್ಗೆ ಹೆಚ್ಚುಹೆಚ್ಚು ಅರಿವನ್ನುಂಟುಮಾಡಲು ತಾವು ಪಡೆದ ಸಲಹೆಗಳನ್ನು ಶೀಘ್ರದಲ್ಲಿಯೇ ಕಾರ್ಯಗತ ಮಾಡುವುದಾಗಿ ಭರವಸೆಯಿತ್ತರು

ಮೈಸೂರಿನಿಂದ ಅನೇಕ ಸಂಘಸಂಸ್ಥೆಗಳು ವರ್ಗಾಯಿಸಲ್ಪಡುತ್ತಿರುವ ವಿಷಯವನ್ನು ಪ್ರಸ್ತಾಪಿಸಿ, ಯಾವ ಸಂಘಸಂಸ್ಥೆಗಳು ಹೋದರೂ ಮೈಸೂರು ನಗರವು "ಆಹಾರ ವನ್ನು ಮಾತ್ರ ಪಡೆಯುವುದೆಂದು ವಿನೋದಕರವಾಗಿ ನುಡಿದರು

ಕಾರ್ಯದರ್ಶಿ ಶ್ರೀ ದಾತೆಯವರು ವಂದನಾರ್ಪಣೆ ಮಾಡಿದರು ಅನಂತರ ಕುಮಾರಿ ಲೀಲಾವತಿ ಗಿರಿ ಮತ್ತು ಚಂಚಲ ನಾಗರಾಜ್‌ರವರ ನೃತ್ಯ ಪ್ರದರ್ಶನವೂ, ಮತ್ತಿತರ ಮನರಂಜನಾ ಕಾರ್ಯಕ್ರಮಗಳೂ ನಡೆದುವು

ಇದಕ್ಕೆ ಮುಂಚೆ ಡಾ|| ಥ್ಯಾಕರ್‌ರವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ ಸಂಸ್ಥೆಯವರು ನಡೆಸುತ್ತಿರುವ ಕಾರ್ಯಗಳನ್ನು ವಿವರಿಸಿ ಅವುಗಳಿಗೆ ಸಾರ್ವಜನಿಕರ ನೆರವನ್ನು ಕೋರಿದರು

ಜನತಾ ಸಾಮುದಾಯಕ ಯೋಜನೆಯಲ್ಲಿ ಆಹಾರ ಮತ್ತು ಹಣ್ಣುಗಳನ್ನು ಕೆಡದಂತೆ ಶೇಖರಿಸಿಡುವ ಬಗ್ಗೆ ಪ್ರದರ್ಶನದ ಮೂಲಕ ಗ್ರಾಮಸ್ಥರಿಗೆ ಶಿಕ್ಷಣವೀಯಲು ೫ ಶಿಕ್ಷಕರ ತಂಡಗಳನ್ನು ಕಳುಹಿಸಲಾಗುವುದೆಂದೂ ಇವುಗಳಲ್ಲಿ ಪ್ರಥಮ ತಂಡವು ಗುಂಡ್ಲುಪೇಟೆ, ರಾಮನಗರಗಳಲ್ಲಿ ಶೀಘ್ರದಲ್ಲಿಯೇ ಕೆಲಸವನ್ನಾರಂಭಿಸುವುದೆಂದೂ ಅವರು ತಿಳಿಸಿದರು

ಮೀನಿನ ಶೇಖರಣೆಯ ಬಗ್ಗೆ ಸಂಶೋಧನೆ ನಡೆಸಲು ಪಶ್ಚಿಮ ಕರಾವಳಿಯಲ್ಲಿ ಒಂದು ಉಪಕೇಂದ್ರವನ್ನು ತೆರೆಯಲಾಗುವುದೆಂದೂ ಮತ್ತು ಜನಸಾಮಾನ್ಯರ ತಿಳಿವಳಿಕೆಗಾಗಿ ಕನ್ನಡದಲ್ಲಿಯೇ ಇನ್ನುಮುಂದೆ ಪ್ರಕಟಣೆಗಳನ್ನು ಹೊರಡಿಸಲಾಗುವುದೆಂದೂ ಹೇಳಿದರು ಕೇಂದ್ರದ ಸಂಶೋಧನಾ ವಸ್ತುಗಳ ಪ್ರಚಾರಕ್ಕಾಗಿ ನಗರದಲ್ಲಿ ಅಂಗಡಿಯೊಂದನ್ನು ತೆರೆಯುವುದು ಒಳ್ಳೆಯದೆಂದು ಅಭಿಪ್ರಾಯಪಟ್ಟರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಪಾಕಿಸ್ತಾನದ ಬಗ್ಗೆ ಸರ್ಕಾರದ ನೀತಿ ಇನ್ನೂ ಕಟುವಾಗಬೇಕು

ಜನಸಂಘದ ಕಾರ್ಯದರ್ಶಿ ದೀನದಯಾಳು ಉಪಾಧ್ಯಾಯರ ಭಾಷಣ

ಮೈಸೂರು ೨೫

ಅಖಿಲ ಭಾರತ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನದಯಾಳು ಉಪಾಧ್ಯಾಯರು ನೆನ್ನೆ ಇಲ್ಲಿನ ಟೌನ್‌ಹಾಲ್ ಮೈದಾನದಲ್ಲಿ ಸೇರಿದ್ದ ಬಹಿರಂಗ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿ, ಪಾಕಿಸ್ತಾನ ಮತ್ತು ಭಾರತ ಗಡಿಗಳಲ್ಲಿ ಇತ್ತೀಚೆಗೆ ಆದ ಘರ್ಷಣೆಗಳನ್ನು ಪ್ರಸ್ತಾಪಿಸಿ, ಭಾರತವು ಈ ಬಗ್ಗೆ ಪಾಕಿಸ್ತಾನದೊಡನೆ ಯುದ್ಧ ಮಾಡಲು ಅವಕಾಶವಿಲ್ಲವೆಂದೂ, ಆದರೆ ಭಾರತ ಸರ್ಕಾರದವರು ತಮ್ಮ ನೀತಿಯನ್ನು ಇನ್ನೂ ಕಟುತರವಾಗಿ ಮಾಡಿಕೊಳ್ಳಬೇಕೆಂದೂ ಸೂಚಿಸಿದರು

ರಷ್ಯದ ನಾಯಕರು ಇತ್ತೀಚೆಗೆ ಭಾರತದಲ್ಲಿ ಪ್ರವಾಸ ಮಾಡಿದಾಗ ಕಾಶ್ಮೀರದ ವಿಷಯವಾಗಿ ಅವರು ಆಡಿರುವ ಮಾತುಗಳು ಸತ್ಯವಾದುವೆಂದೂ, ಆದರೆ ಇದರಲ್ಲಿ ರಷ್ಯದವರ ಸ್ವಾರ್ಥವಿರುವುದೆಂದೂ, ಭಾರತೀಯರನ್ನು ತಮ್ಮ ಕಡೆ ಒಲಿಸಿಕೊಳ್ಳುವುದೇ ಅವರ ಮುಖ್ಯ ಉದ್ದೇಶವಾಗಿತ್ತೆಂದೂ ತಿಳಿಸಿ, ರಷ್ಯ ನಾಯಕರ ಭಾಷಣದ ಬಗ್ಗೆ ಭಾರತೀಯರು ಮರುಳಾಗಬಾರದೆಂದು ಹೇಳಿದರು

ಗೋವಾ ವಿಮೋಚನೆಯಾಗುವವರೆಗೂ ದೇಶಕ್ಕೆ ಭದ್ರತೆಯಿಲ್ಲವೆಂದೂ, ಅದರ ವಿಮೋಚನೆಗಾಗಿ ಭಾರತ ಸರ್ಕಾರದವರು ಶೀಘ್ರದಲ್ಲೇ ಕ್ರಮ ಜರುಗಿಸಬೇಕೆಂದೂ, ಅದಕ್ಕೆ ಜನರು ಸಹಾಯ ನೀಡಬೇಕೆಂದೂ ಸೂಚಿಸಿದರು.

ಭಾಷಾವಾರು ಸಂಸ್ಥಾನಗಳು ದೇಶದ ಏಕಮತ್ಯದ ದೃಷ್ಟಿಯಿಂದ ಒಳ್ಳೆಯದಲ್ಲವೆಂದೂ, ಪ್ರಾದೇಶಿಕ ಮಂಡಲಗಳು ಸಲಹಾ ಮಂಡಲಿಗಳಾಗಿರುವ ಆದರಿಂದ ತೊಂದರೆಯೇ ಹೆಚ್ಚಾಗುವುದೆಂದೂ, ಇದರಿಂದ ಅಂತರ ಪ್ರದೇಶ ವಿವಾದಗಳಾಗುವುವೆಂದೂ ತಿಳಿಸಿ, ಭಾರತದಲ್ಲಿ ಏಕ ಶಾಸನ ಪ್ರಭುತ್ವವಿರಬೇಕೆಂದು ಸಲಹೆ ಮಾಡಿದರು

ಭಾರತ ಸರ್ಕಾರದ ಕೈಗಾರಿಕಾ ನೀತಿಯನ್ನು ಕುರಿತು ಮಾತನಾಡಿ, ಸಾರ್ವಜನಿಕ ಮತ್ತು ಖಾಸಗೀ ಕ್ಷೇತ್ರಗಳ ನಿರ್ಮಾಣವು ಸರಿಯಲ್ಲವೆಂದೂ, ಒಂದೇ ವಿಧವಾದ ಜನತಾ ಕ್ಷೇತ್ರವನ್ನಾಗಿ ಅವನ್ನು ಪರಿವರ್ತಿಸಬೇಕೆಂದೂ ನುಡಿದರು

ಜನಸಂಘದ ಗುರಿಯು ಅಖಂಡ ಭಾರತದ ಸಾಧನೆಯೆಂದೂ, ಕೇವಲ ಭೂ ಭಾಗವನ್ನು ಒಂದುಗೂಡಿಸುವುದು ಮಾತ್ರವಲ್ಲದೆ ಸಾಂಸ್ಕೃತಿಕ ಐಕ್ಯತೆಯನ್ನು ಸಾಮರಸ್ಯದಿಂದ ಸಾಧಿಸಬೇಕಾಗಿರುವುದೆಂದೂ ಅವರು ಅಭಿಪ್ರಾಯಪಟ್ಟರು

ಮೈಸೂರು ನಗರದಿಂದ ಕೈಗಾರಿಕೆಗಳನ್ನೂ, ಇತರ ಸಂಸ್ಥೆಗಳನ್ನೂ ಬೆಂಗಳೂರಿಗೆ ವರ್ಗಾಯಿಸುವ ನೀತಿಯನ್ನು ಟೀಕಿಸಿ, ವಿಕೇಂದ್ರೀಕರಣದ ಈ ಕಾಲದಲ್ಲಿ ಸಂಸ್ಥಾನ ಸರ್ಕಾರದವರು ಮಾಡುತ್ತಿರುವ ಕೆಲಸವು ಸರಿಯಲ್ಲವೆಂದು ಅಭಿಪ್ರಾಯಪಟ್ಟರು

ಪ್ರಾರಂಭದಲ್ಲಿ ನಗರ ಶಾಖಾ ಕಾರ್ಯದರ್ಶಿ ಶ್ರೀ ಎಂ ಕೃಷ್ಣಪ್ಪನವರು ಸ್ವಾಗತ ಬಯಸಿದರು ಸ್ಥಳೀಯ ಸಮಿತಿ ಅಧ್ಯಕ್ಷ ಡಾ|| ವೆಂಕಟಾಚಾರ್ಯರು ಅಗ್ರಾಸನವನ್ನು ವಹಿಸಿದ್ದರು ಶ್ರೀ ಎ ಎಲ್ ಸುಂದರನಾರಾಯಣಶೆಟ್ಟರು ವಂದನಾರ್ಪಣೆ ಮಾಡಿದರು

ವಿವಾಹ ಮಹೋತ್ಸವ

ಬೆಂಗಳೂರು ಕಾರ್ಪೊರೇಷನ್ನಿನ ನೌಕರರಾದ ಶ್ರೀ ಎಸ್. ಸುಬ್ಬರಾಯರು ತಮ್ಮ ಸಹೋದರಿ ಸೌ|| ರಾಜಲಕ್ಷ್ಮಿಯನ್ನು ಮಧ್ಯಪ್ರದೇಶದ ಒಳ್ಳಾರಪುರ ಕಾಗದದ ಕಾರ್ಖಾನೆ ಕಾರ್ಯದರ್ಶಿ ಶ್ರೀ ಬಿ ಎಸ್ ನಾರಾಯಣರಾವರ ಸಹೋದರ ಶ್ರೀ ಬಿ ಎಸ್ ರಾಮಚಂದ್ರಯ್ಯನವರಿಗೆ ಕೊಟ್ಟೂ, ಶ್ರೀ ಬಿ ಎಸ್ ನಾರಾಯಣರಾವರ ಸಹೋದರಿ ಸೌ|| ಸುಶೀಲಾರವರನ್ನು ತಮ್ಮ ಸಹೋದರ ಶ್ರೀ ಎಸ್ ನರಸಿಂಹಮೂರ್ತಿಯವರಿಗೆ ತಂದುಕೊಂಡೂ ನೆನ್ನೆ ಮೈಸೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ವಿದ್ಯುಚ್ಛಕ್ತಿ ಯಂತ್ರಗಳನ್ನಿಟ್ಟಿರುವವರಿಗೆ ನೋಟೀಸು ಜಾರಿ

ಸರ್ಕಾರದವರು ವಿದ್ಯುಚ್ಛಕ್ತಿ ಬಳಸುವವರಿಗೆ ಕೊಡುತ್ತಿರುವ ನೋಟೀಸುಗಳು ವಿಚಿತ್ರತರವಾಗಿವೆ ಅವುಗಳು ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರಬಲ್ಲವೆಂಬುದನ್ನೂ ಸಹಾ ಪರಿಗಣಿಸದೆ ಈ ಬಗೆಯ ನೋಟೀಸುಗಳನ್ನು ಕೊಡಲಾಗುತ್ತಿದೆ ಅವುಗಳನ್ನು ಕೊಟ್ಟ ಕೆಲವು ದಿನಗಳ ಮೇಲೆ ವಾಪಸು ತೆಗೆದುಕೊಂಡ ನಿದರ್ಶನವೂ ಇದೆ ಸಂಸ್ಥಾನದಲ್ಲಿ ಮನೆಗಳಿಗೆ ವಿದ್ಯುಚ್ಛಕ್ತಿ ದೀಪಗಳನ್ನು ಹಾಕಿಸಿಕೊಂಡಿರುವವರೆಲ್ಲರೂ ಒಂದು ಗೊತ್ತಾದ ಅವಧಿಯೊಳಗೆ ೨ ರೂ ರುಸುಂ ಕೊಟ್ಟು ಇಲಾಖೆಯವರ ಮೂಲಕವಾಗಲೀ, ಕಂಟ್ರಾಕ್ಟರುಗಳಿಂದಾಗಲೀ ಅವುಗಳನ್ನು ಪರೀಕ್ಷೆ ಮಾಡಿಸಿ ಅವುಗಳು ಸರಿಯಾಗಿರುವ ಬಗ್ಗೆ ಸರ್ಟಿಫಿಕೇಟುಗಳನ್ನೂ ಹೊಂದಬೇಕೆಂಬ ಒಂದು ಸೂಚನೆಯನ್ನು ಕಳೆದ ವರ್ಷ ಇಲಾಖೆಯವರು ಎಲ್ಲರಿಗೂ ಕೊಟ್ಟಿದ್ದರು ಹೀಗೆ ಲಕ್ಷಾಂತರ ಮನೆಗಳಲ್ಲಿ ಪರೀಕ್ಷೆ ಮಾಡಲು ಇಲಾಖೆಗಾಗಲೀ ಕಂಟ್ರಾಕ್ಟರುಗಳಿಗಾಗಲೀ ಅಸಾಧ್ಯವೆಂಬುದನ್ನು ಅವರು ಗಮನಿಸಿಯೇ ಇರಲಿಲ್ಲ ಅನೇಕ ವರ್ಷಗಳಿಂದ ಸರಿಯಾಗಿ ಉರಿಯುತ್ತಿದ್ದ ದೀಪಗಳ ಲೈನುಗಳನ್ನೂ ಹೊಸದಾಗಿ ಹಾಕಿಸಿರುವ ಲೈನುಗಳನ್ನೂ ಈ ರೀತಿ ಪರೀಕ್ಷೆಗೆ ಗುರಿಪಡಿಸುವುದು ಅನುಚಿತವೂ ಮತ್ತು ಕಿರುಕುಳಕರವೂ ಆಗಿರುವುದೆಂದು ಕ್ರಮೇಣ ಸರ್ಕಾರದವರಿಗೆ ಮನವರಿಕೆಯಾಯಿತು ಈ ಮಧ್ಯೆ ಕೆಲಕೆಲವು ಕಂಟ್ರಾಕ್ಟರುಗಳು ಯಾವ ಪರೀಕ್ಷೆಯನ್ನೂ ನಡೆಸದೆ ಕೂತಕಡೆಯೇ ಅಲ್ಪ ಪ್ರತಿಫಲಕ್ಕಾಗಿ ಸರ್ಟಿಫಿಕೇಟುಗಳನ್ನು ಕೊಟ್ಟ ನಿದರ್ಶನಗಳೂ ಕಂಡುಬಂದುವು ಇದರ ಮೇಲೆ ಸರ್ಕಾರದವರು ಸದರಿ ಆಜ್ಞೆಯನ್ನು ವಾಪಸು ತೆಗೆದುಕೊಂಡರು ಸದರಿ ಪರೀಕ್ಷೆಗಳನ್ನು ನಡೆಸದಿದ್ದ ಮಾತ್ರಕ್ಕೆ ಲೈನುಗಳೆಲ್ಲ ಕೆಟ್ಟುಹೋಗಿ ಅನುಪಯುಕ್ತವಾಗಿರುವುವೆಂದು ಯಾರೂ ಹೇಳಲು ಸಾಧ್ಯವಿಲ್ಲ

ಈಗ ಅಂತಹ ಮತ್ತೊಂದು ಆಜ್ಞೆಯನ್ನು ಸರ್ಕಾರದವರು ಹೊರಡಿಸಿರುವರು ವಿದ್ಯುಚ್ಛಕ್ತಿಯನ್ನು ಬಳಸುವವರು ಬರೆದುಕೊಟ್ಟ ಕರಾರಿನಲ್ಲಿ ಸೂಚಿಸಿರುವಂತೆ ಶೇಕಡ ೮೦ ರಷ್ಟು ವಿದ್ಯುಚ್ಛಕ್ತಿಯನ್ನಾದರೂ ಬಳಸಬೇಕೆಂದೂ, ಇಲ್ಲವಾದರೆ ಅದಕ್ಕೆ ಕಿಲೋವಾಟಿಗೆ ಎಂಟಾಣೆಯಂತೆ ದಂಡವನ್ನು ಕೊಡಬೇಕೆಂದೂ ತಿಳಿಸಿರುವರು ಇದಲ್ಲದೆ ಏಪ್ರಿಲ್ ೧ನೇ ತಾರೀಖಿನೊಳಗೆ ಶೇಕಡ ೮೦ ರಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು, ಅಥವಾ ವಿದ್ಯುಚ್ಛಕ್ತಿ ಸರಬರಾಜಿನ ಪ್ರಮಾಣವನ್ನು ಕಡಿಮೆ ಮಾಡಲು ಸಹಾಯಕವಾದ ಒಂದು ಯಂತ್ರೋಪಕರಣವನ್ನು ಜೋಡಿಸಿಕೊಳ್ಳಬೇಕೆಂದು ಸೂಚಿಸಿರುವರು ಸಂಸ್ಥಾನದಲ್ಲಿರುವ ಯಾವ ಕಾರ್ಖಾನೆಯವರಾಗಲೀ, ಇತರ ಉದ್ಯಮಗಳವರಾಗಲೀ ಒಪ್ಪಂದದಲ್ಲಿ ಅಡಕವಾಗಿರುವಷ್ಟು ಪ್ರಮಾಣದ ವಿದ್ಯುಚ್ಛಕ್ತಿಯನ್ನು ಬಳಸುತ್ತಿಲ್ಲ ಆದರೂ ಎಲ್ಲರೂ ಇಲಾಖೆಯವರಿಂದಲೇ ಗೊತ್ತಾಗಿರುವ ಕನಿಷ್ಠ ಪ್ರಮಾಣದ ಮೊಬಲಗನ್ನು ಪಾವತಿ ಮಾಡುತ್ತಿರುವರು

ಮೇಲೆಹೇಳಿದ ಉಪಕರಣವು ಮೈಸೂರು ಸಂಸ್ಥಾನದಲ್ಲಿ ಎಲ್ಲಿಯೂ ದೊರಕುವುದಿಲ್ಲವೆಂದು ಗೊತ್ತಾಗಿದೆ. ಮದರಾಸು, ಬೊಂಬಾಯಿ ಮುಂತಾದ ಕಡೆಗಳಿಂದ ಅವು ಬರಬೇಕು ಅನಂತರ ಇಲಾಖೆಯವರಾಗಲೀ,ಕಂಟ್ರಾಕ್ಟರರಾಗಲೀ ಅವನ್ನು ಜೋಡಿಸಬೇಕು ಹೀಗಿರುವಲ್ಲಿ ಏಪ್ರಿಲ್ ಒಂದನೇ ತಾರೀಖಿನಿಂದ ಇದನ್ನು ಜಾರಿಗೆ ತರಲು ಅಸಾಧ್ಯವೆಂದು ಬೇರೆ ಹೇಳಬೇಕಾಗಿಲ್ಲ ಸರ್ಕಾರದವರೇ ಅವುಗಳನ್ನು ತರಿಸಿ ಸಂಸ್ಥಾನದಲ್ಲಿರುವ ಎಲ್ಲಾ ವಿದ್ಯುಚ್ಛಕ್ತಿ ಯಂತ್ರಗಳಿಗೂ [illegible]ಗಿಸುವವರೆಗೆ ಈ ಸೂಚನೆಯನ್ನು ಮನ್ನಾ [illegible]ಡಬೇಕು

ವಿದ್ಯುಚ್ಛಕ್ತಿಗಾಗಿ ಹೆಚ್ಚಿನ ತೆರಿಗೆ, ಕನಿಷ್ಠ ಪ್ರಮಾಣದ ಕನಿಷ್ಠಾಂಕದ ಮಿತಿ,ಹೆಚ್ಚಿಗೆ [illegible] ಸಿಟ್ಟು, ಹೆಚ್ಚು ಮೀಟರ್ ರುಸುಂ ಇವೇ [illegible]ತಾದ ಹೊರೆಗಳನ್ನು ಹೊರಿಸಲು ಸರ್ಕಾರ[illegible] ತೊಡಗಿರುವ ಈ ಸಮಯದಲ್ಲಿ ಮೇಲ್ಕಂಡ[illegible]ಯ ಮತ್ತೂ ಒಂದು ಭಾರವನ್ನು ಹೊರಿಸು[illegible] ಸರ್ವಥಾ ಸೂಕ್ತವಲ್ಲ ಈ ವಿಷಯಗಳನ್ನು ಸ[illegible]ರದವರು ಪರಿಶೀಲಿಸಿ ತಮ್ಮ ಆಜ್ಞೆಯಲ್ಲಿ [illegible] ಮಾರ್ಪಾಡನ್ನು ಮಾಡುವರೆಂದು ಆಶಿಸಲಾ[illegible]

— ವಿದ್ಯುಚ್ಛಕ್ತಿ ಬಳಕೆಗಾ[illegible]

ಧರ್ಮಾರ್ಥ ಫ್ಲಾಸ್ಕಿನಲ್ಲಿ ಉತ್ತರ[illegible]

ಕಾಂಪೂರು ಬಳಿ ಮ್ಹೌವ್ ಎಂಬಲ್ಲ [illegible] ಕುಳಿತಿದ್ದ ವಿದ್ಯಾರ್ಥಿಯೊಬ್ಬನು ವಾ[illegible] ಹೇಳಿ, ತನಗೆ ಬೇಕಾದ ಸೌಲಭ್ಯಗ[illegible] ಡೆದು ಮೊನ್ನೆ ಕಾಪಿ ಮಾಡಿ ಪ್ರಶ್ನೆ ಪತ್ರ[illegible] ತ್ರರ ಬರೆದ ಸುದ್ದಿ ವರದಿಯಾಗಿದೆ ಅವ[illegible] ಿ ಮುಂತಾದ ಪಾನೀಯಗಳನ್ನು ಫ್ಲಾಸ್ಕಿ[illegible] ರಿಸಿಕೊಳ್ಳುತ್ತಿದ್ದು ಅದನ್ನು ಆಗಾಗ್ಗೆ ತೆಗೆ[illegible] ಡುತ್ತಿದ್ದನೆಂದೂ, ಇದನ್ನು ಕಂಡು ಮೇ[illegible] ಕರಿಗೆ ಸಂಶಯ ಬಂದು ಧರ್ಮಾರ್ಥ ಫ್ಲಾಸ್ಕನ್ನು [illegible]ರಿಶೀಲಿಸಲಾಗಿ, ಅದಕ್ಕೆ ಕಾಗದದ ಪ[illegible]ದ್ದು, ಅದರಲ್ಲಿ ಪ್ರಶ್ನೆಗಳಿಗೆ ಉತ್ತರ ಬರೆ[illegible] ದ್ದುದು ಪತ್ತೆಯಾಯಿತೆಂದೂ ಗೊತ್ತಾಗಿದೆ

ಭಾರತದ ಮೇಲೆ ಪಾಕಿಸ್ತಾ[illegible] ವಿಮಾನಗಳ ಅತಿಕ್ರಮ ಹಾ[illegible]

ಕಳೆದ ೩ನೇ ತಾರೀಕು ರವಿ ನದಿ [illegible] ಕಿಸ್ತಾನದ ೭ ವಿಮಾನಗಳು ಭಾರತದ ಪ್ರ[illegible] ವನ್ನು ಅತಿಕ್ರಮ ಪ್ರವೇಶಿಸಿ ಬಹಳ ಕೆಳ[illegible] ರುತ್ತಾ, ವೇಗವಾಗಿ ಹೋದುವೆಂದು ಹೇ[illegible] ದೆ ಈ ಬಗ್ಗೆ ಪಂಜಾಬು ಸರ್ಕಾರದವರು [illegible] ತ ಸರ್ಕಾರಕ್ಕೆ ಪತ್ರ ಬರೆದು ಪಾಕಿಸ್ತಾನ[illegible] ತಿಭಟನೆ ಸೂಚಿಸಲು ಕೋರಲಿರುವರು

ಪರಾರಿಯಾಗಿದ್ದ ಕೇಡಿಯ ಬಂಧನ

ಪಿರಿಯಾಪಟ್ಟಣದ ಪೋಲೀಸರ ವಶದ[illegible] ತಿಂಗಳ ಹಿಂದೆ ಪರಾರಿಯಾಗಿದ್ದ ವೀರಭದ್ರ[illegible]ರಿ ಎಂಬ ಕೇಡಿಯನ್ನು ಹುಣಸೂರು ಪೋ[illegible]ರು ಕಳೆದ ಗುರುವಾರ ವಶಕ್ಕೆ ತೆಗೆದು[illegible] ನಡೆಸುತ್ತಿರುವರು

ಮಿಕ್ಕೆರೆ ಗ್ರಾಮದಲ್ಲಿ ಭೋಜನ [illegible]

ಕೆರಗಾವಲು ಹೋಬಳಿ ಮಿಕ್ಕೆರೆ ಗ್ರಾಮ[illegible] ೬–೭ ಸಾವಿರ ಜನಗಳಿಗೆ ಭೋಜನವನ್ನು [illegible] ೬ನೇ ತಾರೀಕು ಶ್ರೀ ವೀರಭದ್ರಸ್ವಾಮಿ [illegible] ಸ್ಥಾನದಲ್ಲಿ ಬನ್ನೂರು ಹೋಬಳಿ ಕೆರೆ[illegible] ಗ್ರಾಮದ ಪಟೇಲ್ ಜವರೇಗೌಡರು ಏ[illegible]ದ್ದರು ಅನೇಕ ರೈತ ಮುಖಂಡರುಗಳು [illegible] ವಹಿಸಿದ್ದರು ಶ್ರೀ ಜವರೇಗೌಡರು ಅನೇಕ [illegible] ನಧರ್ಮ ಕಾರ್ಯಗಳನ್ನು ಮಾಡಿ ತಾಲ್ಲೂಕಿ[illegible]ಲ್ಲಾ ಒಳ್ಳೆಯ ಹೆಸರನ್ನು ಗಳಿಸಿದ್ದಾರೆ

ಪ್ರಖ್ಯಾತಿ ಹೊಂದಿರುವ

ಕನ್ನಾನೂರ್ ಬನೀನುಗಳನ್ನು

ದಯವಿಟ್ಟು ಉಪಯೋಗಿಸಿ

ದಿ ಪಿಕೋಲಿ ಹೊಸ್ಯರಿ ಫ್ಯಾಕ್ಟರಿ

ಕನ್ನಾನೂರು

ಸೂಚನೆ:– 27 ವರ್ಷಗಳಿಂದ [illegible] ಈ ಬನೀನುಗಳ ಮೇಲೆ [illegible] ರಗಳನ್ನು ಕೊಂಡುಕೊಳ್ಳುವವರು ಗಮನಿಸಬೇಕಾಗಿ ವಿನಂತಿ

Edited, Printed and Published [illegible]
A. R. Nagarajan at Sadhvi [illegible]
D. Subbiah Road, Mysore

ಜಯಾ ಟ್ರಾವಲ್ ಸರ್ವಿಸ್, ಅನಂತಪುರ

73 ದಿನಗಳ ಬದರಿ, ಕಾಶಿ ಮತ್ತು ಕಾಶ್ಮೀರ ಯಾತ್ರೆ

ಮೈಸೂರಿನಿಂದ ಹೊರಡುವ ದಿನ 15-4-56 — ವಾಪಸು ಬರುವ ದಿನ 1-7-56

ಶ್ರೀ ರಾಮ ನವಮಿಯ ದಿನ ಭದ್ರಾಚಲದಲ್ಲಿ ಇರಲಾಗುತ್ತದೆ

ಒಂದನೇ ತರಗತಿ 700 ರೂ ಮೂರನೇ ತರಗತಿ 425 ರೂ (ರೈಲು, ಬಸ್ಸು, ಚಾರ್ಜು ಸಹ)

ಹೆಚ್ಚು ವಿವರಗಳಿಗೆ ಸ್ಥಳೀಯ ಏಜೆಂಟರನ್ನು ವಿಚಾರಿಸಿ

ಟೂರಿಸ್ಟ್ ಬ್ಯೂರೋ,

ಫೋನ್ 574 ಜಗನ್ಮೋಹನ ಅರಮನೆ ರಸ್ತೆ : ಮೈಸೂರು

ರಿಜಿಸ್ಟರ್ No. 792

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಪತ್ರಿಕೆಗಳಲ್ಲಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ ೧೪] SADHVI : TUESDAY 27-3-1936 ಮೈಸೂರು ಮಂಗಳವಾರ : ೨೭-೩-೧೯೩೬ [ಸಂಚಿಕೆ : ೨೦೬

ಸಂಸ್ಥಾನದ ಯೋಜನೆ ಪ್ರದೇಶದಲ್ಲಿ ಹೆಚ್ಚು ನೀರು ಸರದಿ

ನಗರದ ಪ್ರಾಮುಖ್ಯತೆಯನ್ನು ಉಳಿಸಲು ಒತ್ತಾಯ

ಬಹಿರಂಗ ಸಭೆಯಲ್ಲಿ ನಿರ್ಣಯ

ಮೈಸೂರು ೨೭

ಮೈಸೂರು ನಗರದ ಪ್ರಾಮುಖ್ಯತೆಯು ಕ್ಷೀಣಿಸುತ್ತಿರುವುದೆಂದೂ, ಸರ್ಕಾರದವರು ಅದಕ್ಕೆ ಗಮನಕೊಡದೆ, ನಗರದಲ್ಲಿ ಹೆಚ್ಚು ಕಾರ್ಖಾನೆ [illegible] ಏರ್ಪಡುವಂತೆ ಮಾಡಬೇಕೆಂದೂ ಸಲಹೆ [illegible] ನಿನ್ನೆ ಟೌನ್ ಹಾಲ್ ಮೈದಾನದಲ್ಲಿ ಸರ್ವ ಪಕ್ಷ ಸಮಿತಿಯ ಆಶ್ರಯದಲ್ಲಿ ಬಹಿರಂಗ ಸಭೆ [illegible] ನಡೆಯಿತು. ನಗರ ಕಾಂಗ್ರೆಸ್ ಕಾರ್ಯ[illegible] ಶ್ರೀ ಟಿ ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ನಿನ್ನೆ ಬೆಳಿಗ್ಗೆ ಶ್ರೀಗಳಾದ ವೇದಾಂತ ಹೆಮ್ಮಿಗೆ, [illegible] ಸದಸ್ಯರುಗಳಾದ ಬಿ ಕೆ ಪುಟ್ಟಯ್ಯ, [illegible], ಗೋವಿಂದಯ್ಯ ಮತ್ತು ಅಡ್ವೊಕೇಟ್ ಭೈರಪ್ಪನವರು ನಗರದ ನಾನಾ ಬೀದಿಗಳಲ್ಲಿ ಸಂಚರಿಸಿ ಅಂಗಡಿಗಳನ್ನು ಮುಚ್ಚುವಂತೆ [illegible]. ಇವರ ಪ್ರಾರ್ಥನೆಗೆ ಅಲ್ಪಸ್ವಲ್ಪ ಮನ್ನಣೆ ದೊರೆಯಿತು. ಕೆಲವು ಅಂಗಡಿಗಳು ಮೊದ್ದೂ [illegible] ಇತರ ಕಡೆಗಳಲ್ಲೂ ಮುಚ್ಚಿದ್ದುವೆಂದು ಹೇಳಲಾಗಿದೆ.

[illegible] ಸಭೆಯಲ್ಲಿ ಶ್ರೀ ಭೈರಪ್ಪನವರಿಂದ [illegible] ಭಾಷಣವಾದನಂತರ ಶ್ರೀ ಗ [illegible] ಕಂಠಯ್ಯ, ವಕೀಲರ ಸಂಘದ ಅಧ್ಯಕ್ಷ [illegible] ಸುಬ್ಬರಾವ್, ವೇದಾಂತ ಹೆಮ್ಮಿಗೆ ಶ್ರೀಕಂಠಶರ್ಮ ಮತ್ತು ವಿಶ್ವನಾಥ್‌ರವರು ಭಾಷಣ ಮಾಡಿ, ನಗರವು ಹಿಂದೆ ಬಿದ್ದಿದೆಯೆಂದೂ, ಇಲ್ಲಿ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದೂ, ಸಂಸ್ಥಾನದ ಕೀರ್ತಿಯು ಮೈಸೂರು ನಗರದಿಂದಲೇ ಉಳಿದಿರುವುದೆಂದೂ [illegible] ಯಾವ ಸಂಸ್ಥೆಗಳನ್ನೂ ವರ್ಗ ಮಾಡಬಾರದೆಂದು ಅವರು ಒತ್ತಾಯಪಡಿಸಿದರು.

ಅಧ್ಯಕ್ಷರು ಭಾಷಣ ಮಾಡಿ ಸರ್ಕಾರದವರು [illegible] ನಗರವನ್ನು ಅಲಕ್ಷಿಸಿಲ್ಲವೆಂದು ಹೇಳಿದ [illegible] ಮೈಸೂರು ನಗರದಲ್ಲಿರುವ ಮೃಗಾಲಯವ[ನ್ನು] ಅಭಿವೃದ್ಧಿಗೊಳಿಸಲು ಮೂರು ವರ್ಷಗಳ [illegible] ಮುಖ್ಯ ಮಂತ್ರಿಯವರು ೨೦ ಸಾವಿರ [illegible] ಮಂಜೂರು ಮಾಡಿದ ವಿಷಯವನ್ನು ಅವ[ರು] ತಿಳಿಸಿದರು. ಚಾಮರಾಜನಗರ–ಸತ್ಯಮಂಗ[ಲ] [illegible] ಹಾಕುವ ಬಗ್ಗೆ ರೈಲ್ವೆ ಮಂತ್ರಿ ಲಾಲ್ [ಬಹದ್ದೂ]ರ್ ಶಾಸ್ತ್ರಿಯವರು ಕ್ರಮ ಕೈಗೊಳ್ಳುವ[ರೆಂದೂ] ಹೇಳಿದರು.

ಚಾಮರಾಜನಗರ–ಸತ್ಯಮಂಗಲ ಮತ್ತು [illegible] ಬೆಂಗಳೂರು ರೈಲುರಸ್ತೆಗಳಾಗಬೇಕೆಂದೂ, [illegible] ಸಂಸ್ಥೆಗಳನ್ನೂ ಬೆಂಗಳೂರಿಗೆ ವರ್ಗ ಮಾಡಬಾರದೆಂದೂ, ನಗರದಲ್ಲಿ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದೂ ಸೂಚಿಸುವ ನಿರ್ಣಯಗಳನ್ನು ಸಭೆಯಲ್ಲಿ ಮಾಡಲಾಯಿತು.

ಸಂಗೀತ ಅಕಾಡಮಿ ಅಧ್ಯಕ್ಷತೆಗೆ ಪುಟ್ಟಸ್ವಾಮಿಯವರ ರಾಜೀನಾಮೆ

ಸಂಸ್ಥಾನದ ಸಂಗೀತ ನಾಟಕ ಅಕಾಡೆಮಿಯ [ಅಧ್ಯಕ್ಷ]ರಾದ ಶ್ರೀ ಬಿ. ಎಸ್ ಪುಟ್ಟಸ್ವಾಮಿಯವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವರೆಂದು ತಿಳಿದುಬಂದಿದೆ.

ಇಂಗ್ಲಿಷ್ ಭಾಷೆಯು ಇನ್ನೂ ಕೆಲವು ಕಾಲ ಇರಬೇಕು

ಉಪಾಧ್ಯಾಯರ ಗೋಷ್ಠಿಯಲ್ಲಿ ವಿಶ್ವೇಶ್ವರಯ್ಯನವರ ಭಾಷಣ

ನಂದಿ ಬೆಟ್ಟದಲ್ಲಿ ನಡೆಯುತ್ತಿರುವ ಸಂಸ್ಥಾನದ ನಾನಾ ಶಾಲೆಗಳ ಮುಖ್ಯೋಪಾಧ್ಯಾಯರ ಗೋಷ್ಠಿಯನ್ನು ಉದ್ದೇಶಿಸಿ ಭಾರತ ರತ್ನ ಡಾ॥ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ನಿನ್ನೆ ಭಾಷಣ ಮಾಡಿ, ಕೈಗಾರಿಕೆಗಳು ಉತ್ತಮಗೊಂಡ, ಜನರ ಸಂಪಾದನಾ ಶಕ್ತಿಯು ಹೆಚ್ಚುವವರೆಗೆ ಇಂಗ್ಲಿಷ್ ಭಾಷೆಯು ಇರಬೇಕೆಂದು ತಿಳಿಸಿದರು. [illegible] ಪ್ರಜಾಪ್ರಭುತ್ವ [illegible] ಬಂದ [illegible], [illegible] ಭಾರೀ ಪ್ರಮಾಣದಲ್ಲಿ ನಾನಾ ಉತ್ತೇಜನಕರ ಕಾರ್ಯಕ್ರಮಗಳನ್ನು ಶ್ರದ್ಧೆಯಿಂದ ನಡೆಸಲಾಗುತ್ತಿರುವುದೆಂದೂ, ಆದರೆ [illegible] ಮುಖ್ಯ [illegible] ವರ್ಗದ ಜನರ ಬಗ್ಗೆ ಹೊಸ ಆಡಳಿತ ನೀತಿಯು ಸರಿಯಾಗಿಲ್ಲವೆಂದೂ ಹೇಳಿದರು.

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಡಾ॥ ವಿಶ್ವೇಶ್ವರಯ್ಯನವರು ೧,೨೦೦ ಅಡಿ ಎತ್ತರವಿರುವ ನಂದಿ ಬೆಟ್ಟವನ್ನು ಹತ್ತಿಹೋದರು. ಅವರನ್ನು ಸಾಧನಗಳ ಸಹಾಯದಿಂದ ಮೇಲಕ್ಕೆ ಕರೆದುಕೊಂಡು ಹೋಗುವುದಕ್ಕೆ ಅವರು ಸಮ್ಮತಿಸಲಿಲ್ಲ.

ಜುನಾಘಡವನ್ನು ಪಾಕಿಸ್ತಾನದಲ್ಲಿ ಸೇರಿಸಿದ ಭೂಪಟ

ಸಿಂಗಪುರದಲ್ಲಿರುವ ಪಾಕಿಸ್ತಾನದ ವ್ಯಾಪಾರ ಕಮಿಷನರ ಕಛೇರಿಯವರು ಪ್ರಕಟಿಸುವ ಭಾರತ ಉಪ ಖಂಡದ ಭೂಪಟದಲ್ಲಿ ಜುನಾಘಡವನ್ನು ಪಾಕಿಸ್ತಾನದ ಭಾಗವಾಗಿ ತೋರಿಸಲಾಗಿದೆ. ಪಾಕಿಸ್ತಾನದ ಪ್ರದೇಶವನ್ನು ಅಚ್ಚ ಹಸುರು ಬಣ್ಣದಲ್ಲೂ ಕಾಶ್ಮೀರವನ್ನು ಎಳೆ ಹಸುರಿನಲ್ಲೂ ಮುದ್ರಿಸಲಾಗಿದೆ.

ಸಿಟಿ ಬಸ್ ವೇಗದ ಬಗ್ಗೆ ಆಕ್ಷೇಪಣೆ

ಮೈಸೂರು ಸರ್ಕಾರದವರು ನಗರದಲ್ಲಿ ಓಡಿಸುತ್ತಿರುವ ಬಸ್ಸುಗಳು ವಿಪರೀತ ವೇಗವಾಗಿ ಹೋಗಿ ಜನರಿಗೆ ಮಾರ್ಗದಲ್ಲಿ ತೊಂದರೆಗಳಾಗುತ್ತಿರುವುವೆಂದೂ, ನರಸಿಂಹರಾಜಾ ರಸ್ತೆಯಲ್ಲಿ ಕಳೆದ ೨೦ನೇ ತಾರೀಖು ಸೈಕಲ್ ಸವಾರರೊಬ್ಬರು ಒಂದು ಕಡೆ ತಪ್ಪಿಸಿಕೊಂಡರೂ ಮತ್ತೊಂದು ಕಡೆ ಬಸ್ಸಿಗೆ ಸಿಕ್ಕಿಕೊಂಡರೆಂದೂ, ಆದರೆ ಅವರು ಸ್ವಲ್ಪದರಲ್ಲಿ ಪಾರಾದರಾಗಿಯೂ ಹೇಳಲಾಗಿದೆ. ಈ ಬಗ್ಗೆ ಅವರು ಪತ್ರವೊಂದನ್ನು ಬರೆದು ಡ್ರೈವರುಗಳು ವೇಗವನ್ನು ಕಡಿಮೆ ಮಾಡಬೇಕೆಂದು ಸಲಹೆ ಮಾಡಿರುತ್ತಾರೆ.

ಅಮಾನಾಸದ ಮೇಲೆ ಬಂಧನ

ಸುಮಾರು ೧,೬೦೦ ರೂ ಬೆಲೆಯ ಒಂದು ಚಿನ್ನದ ಡಾಬನ್ನು ಅಮಾನತ್ತಾಗಿ ಎಂಬಾತನು ಬೆಂಗಳೂರಿನಿಂದ ತಂದು ನಗರದ ಶೀಗರಾಜ್ [illegible] ಎಂಬ ಮಾರ್ವಾಡಿ ವರ್ತಕರ ಬಳಿ ೧೨೦ ರೂ ಗ[ಳಿಗೆ] ಅಡವಿಡಲು ನಿನ್ನೆ ಯತ್ನಿಸಿದಾಗ ಅಮಾನತಿಗೆ ಅವರು ಪೊಲೀಸರು ಅವನನ್ನು ಬಂಧಿಸಿ ಠಾಣೆಗೆ [illegible] ತನಿಖೆ ನಡೆಸುತ್ತಿದ್ದಾರೆ.

ಭತ್ತ ಮತ್ತು ವ್ಯಾಪಾರಿ ಬೆಳೆಗೆ ನೀರು ಸರದಿ ಹೆಚ್ಚುವುದು

ವಿಧಾನ ಸಭೆಯಲ್ಲಿ ಕೈಗಾರಿಕಾ ಸಚಿವರ ಹೇಳಿಕೆ

ಬೆಂಗಳೂರು ೨೭

ಕೈಗಾರಿಕಾ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ನಿನ್ನೆ ವಿಧಾನ ಸಭೆಯಲ್ಲಿ ನೀರಾವರಿ ಕಾಲುವೆಗಳ ಬಗ್ಗೆ ಬಂದ ಪ್ರಶ್ನೆಗೆ ಉತ್ತರವಿತ್ತು ಸರ್ಕಾರದವರು ಕೈಗೊಂಡಿರುವ ನೀರಾವರಿ ಯೋಜನೆಗಳಿಂದ ನಡೆಯುತ್ತಿರುವ ಭತ್ತ, ಕಬ್ಬು ಮತ್ತು ವ್ಯಾಪಾರಿ ಬೆಳೆಗಳಿಗೆ ನೀರು ಸರದಿಯನ್ನು ಹೆಚ್ಚಿಸುವ ವಿಷಯವನ್ನು ಪರಿಶೀಲಿಸಲಾಗುವುದೆಂದು ತಿಳಿಸಿದರು. [illegible] ಹೆಚ್ಚು ಹಣವನ್ನು ವೆಚ್ಚಮಾಡಿ ಏರ್ಪಡಿಸಿರುವ ನೀರಾವರಿ ಯೋಜನೆಗಳ ಕೆಳಗಿನ ಜಮೀನುಗಳಿಂದ [illegible] ಮತ್ತು ಅದಕ್ಕೆ ಕಡಿಮೆ [illegible] ಯೋಜನೆಗಳ ಜಮೀನಿನಿಂದ [illegible] ಉತ್ಪತ್ತಿ ಬರುವಂತೆ ಮಾಡಬೇಕೆಂದು ಸಮಿತಿಯೊಂದು ಸರ್ಕಾರಕ್ಕೆ ಶಿಫಾರಸು ಮಾಡಿರುತ್ತದಾಗಿಯೂ, ರೈತರುಗಳಿಂದ [illegible] ರೂಗಳನ್ನು [illegible] ಯೋಜನೆಗಳಿಗಾಗಿಯೂ, [illegible] ರೂ ಸಿಂದ [illegible] ಕಡಿಮೆ ವೆಚ್ಚದ ಯೋಜನೆಗಳಿಗಾಗಿಯೂ ಕಾಂಟ್ರ್ಯಾಕ್ಟ್ ಪದ್ಧತಿಯ ಮೇರೆಗೆ ವಿಧಾರಕು ಮಾಡಲ್ಪಟ್ಟಿರುವುದೆಂದೂ ಸಚಿವರು ನುಡಿದರು. ಕೃಷ್ಣರಾಜಸಾಗರ ಜಲಾಶಯದ ಪ್ರದೇಶದಿಂದ ಸರ್ಕಾರಕ್ಕೆ [illegible] ಉತ್ಪತ್ತಿ ಬರುತ್ತಿರುವುದಾಗಿ ಅವರು ತಿಳಿಸಿದರು.

ಮಕ್ಕಳ ಪುಸ್ತಕ ಭಂಡಾರದಲ್ಲಿ ಓದುವ ವ್ಯವಸ್ಥೆ

ಶ್ರೀ ಲಂ ಕ್ಲಬ್ಬಿನ ಸುವರ್ಣ ಮಹೋತ್ಸವದ ಅಂಗವಾಗಿ ನಗರದ ಕ್ಲಬ್ಬಿನ ಆಶ್ರಯದಲ್ಲಿ ಸ್ಥಾಪಿತವಾಗಿರುವ ಮಕ್ಕಳ ಪುಸ್ತಕ ಭಂಡಾರದಲ್ಲಿ ೬ರಿಂದ ೧೫ ವರ್ಷದೊಳಗಿನ ಬಾಲಕಬಾಲಕಿಯರಿಗೆ ಪುಸ್ತಕಗಳನ್ನು ಓದಲು ಕೊಡುವ ಬಗ್ಗೆ ವ್ಯವಸ್ಥೆಯಾಗಿದೆ. ಸುಂದರ ಚಿತ್ರಗಳನ್ನೊಳಗೊಂಡ ಇಂಗ್ಲಿಷ್ ಮತ್ತು ಕನ್ನಡ ಪುಸ್ತಕಗಳನ್ನೂ, ಮಾಸಿಕ ಮತ್ತು ಸಾಪ್ತಾಹಿಕ ಪತ್ರಿಕೆಗಳನ್ನೂ ಕೊಡಲಾಗುವುದು. ಭಂಡಾರವು ಪ್ರತಿ ದಿನವೂ (ಹಬ್ಬದ ದಿನಗಳೂ ಸೇರಿ), ಬೆಳಿಗ್ಗೆ ೮ ರಿಂದ ೧೧ ಮತ್ತು ಮಧ್ಯಾಹ್ನ ೩ರಿಂದ ೬ರ ವರೆಗೆ, ಶನಿವಾರ ಮಾತ್ರ ಮಧ್ಯಾಹ್ನದ ಹೊತ್ತು ತೆರೆದಿರುವುದು. ಪ್ರವೇಶ ಧನ ೧ ರೂ ಮತ್ತು ಮಾಸಿಯಾನಾ ೪ ಆಣೆಯನ್ನು ಕೊಟ್ಟು ಸದಸ್ಯರಾಗಬಹುದು. ಅವರಿಗೆ ಒಂದು ಬಾರಿಗೆ ಒಂದು ಪುಸ್ತಕವನ್ನು ಕೊಡಲಾಗುವುದು. ಮನೆಗೆ ತೆಗೆದುಕೊಂಡುಹೋಗದೆ ಪುಸ್ತಕ ಭಂಡಾರದಲ್ಲೇ ಓದುವವರು ಹಣ ಕೊಡಬೇಕಾಗಿಲ್ಲ. ಅವರು ಉಚಿತವಾಗಿ ಕೊಡಲ್ಪಡುವ ಕಾರ್ಡೊಂದನ್ನು ಹೊಂದಿರಬೇಕು. ಸದಸ್ಯರು ತಮ್ಮ ಹೆಸರುಗಳನ್ನು ಪುಸ್ತಕ ಭಂಡಾರದಲ್ಲಿ ಪಡೆಯಬಹುದು.

○ ಭಾರತದ ಫುಟ್‌ಬಾಲ್ ಸಂಘದ ಉಪಾಧ್ಯಕ್ಷರಾಗಿ ಮೈಸೂರಿನ ಶ್ರೀ ಹಿ ರಾಮಯ್ಯನವರು ಆರಿಸಲ್ಪಟ್ಟಿರುವರು.

ಮಹಾಜನರು ಕುರಿ ಸಾಕುವುದರಲ್ಲಿ ಆಸಕ್ತಿ ವಹಿಸಬೇಕು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಸಲಹೆ

ಮೈಸೂರು ೨೭

ಮೈಸೂರು ಜಿಲ್ಲಾ ಕುರಿ ಪೋಷಕರ ಸಂಘದ ತೃತೀಯ ವಾರ್ಷಿಕೋತ್ಸವವು ನಿನ್ನೆ ಸಂಜೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಅಧ್ಯಕ್ಷ ಸರ್ದಾರ್ ಎಂ ಪಿ ಸುಬ್ರಹ್ಮಣ್ಯರಾಜೇ ಅರಸರು ಸ್ವಾಗತ ಭಾಷಣ ಮಾಡಿದನಂತರ ಕಾರ್ಯದರ್ಶಿ ಶ್ರೀ ಎ ಮುನಾಶಿಯವರು ವಾರ್ಷಿಕ ವರದಿಯನ್ನು ಒಪ್ಪಿಸಿದರು.

ಅನಂತರ ಸಭೆಯಲ್ಲಿ ಹಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕುರಿ ಪೋಷಣೆಗೆ [illegible] ಯೋಜನೆಯೊಂದನ್ನು ಸಭೆಯು ಒಪ್ಪಿ ಅದಕ್ಕೆ ಕೇಂದ್ರ ಸರ್ಕಾರದ ಧನಸಹಾಯ ಕೋರುವ ನಿರ್ಣಯವೊಂದನ್ನು ಮಾಡಿತು.

ಅನಂತರ ಶ್ರೀ ಚನ್ನಯ್ಯನವರು ಭಾಷಣ ಮಾಡಿ, ಕುರಿಗಳ ಪೋಷಣೆಯಿಂದ ದೇಶದ ಸಂಪತ್ತು ವೃದ್ಧಿಯಾಗುವುದೆಂದು ಹೇಳಿ, ಜನರು ಅದರಲ್ಲೂ ಕಾಂಗ್ರೆಸ್ಸಿಗರು ಕುರಿ ಸಾಕುವುದರಲ್ಲಿ ಹೆಚ್ಚು ಹೆಚ್ಚಾಗಿ ಶ್ರಮಿಸಬೇಕೆಂದು ಮನವಿ ಮಾಡಿಕೊಂಡರು.

ಈ ಉದ್ಯಮದ ವಿದೇಶಗಳಲ್ಲಿ ಬೆಳೆದಿರುವ ಅಂಶವನ್ನು ವಿವರಿಸಿ, ಇದಕ್ಕೆ ಸರ್ಕಾರದ ಸಹಾಯವು ಅವಶ್ಯಕವೆಂದು ಹೇಳಿದರು ಶ್ರೀ ಹೆಚ್. ಕೆ ಎನ್ ರಾವ್‌ರವರು ವಂದನಾರ್ಪಣೆ ಮಾಡಿದರು.

○ ಶ್ರೀ ಬಿ. ಶ್ರೀನಿವಾಸಯ್ಯಂಗಾರ್ಯರನ್ನು ಭಾರತದ ಫುಟ್‌ಬಾಲ್ ಶಿಕ್ಷಣ ಸಮಿತಿಗೆ ಕಾರ್ಯದರ್ಶಿಯಾಗಿ ಪುನಃ ಚುನಾಯಿಸಲಾಗಿದೆ.

ಜೋಡಿ ಮತ್ತು ಇನಾಮುತಿಗಳ ರದ್ದಿಗೆ ೫ ವರ್ಷ ಅವಧಿ

ವಿಧಾನ ಸಭೆಯಲ್ಲಿ ನ್ಯಾಯಾಂಗ ಸಚಿವರ ಉತ್ತರ

ಬೆಂಗಳೂರು ೨೭

ನ್ಯಾಯಾಂಗ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನಿನ್ನೆ ವಿಧಾನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತು ಜೋಡಿ ಮತ್ತು ಇನಾಮುಗಳ ರದ್ದಿಯಾತಿಗೆ ಐದು ವರ್ಷ ಹಿಡಿಯುವುದೆಂದು ತಿಳಿಸಿದರು. ವೈಯಕ್ತಿಕ ಮತ್ತು ಧಾರ್ಮಿಕ ಇನಾಮುಗಳ ರದ್ದಿಯಾತಿ ಶಾಸನಗಳಿಗೆ ರಾಷ್ಟ್ರಾಧ್ಯಕ್ಷರ ಸಮ್ಮತಿ ದೊರೆತಿರುವುದೆಂದೂ ಅವನ್ನು ಇನ್ನೂ ಜಾರಿಗೆ ಕೊಟ್ಟಿಲ್ಲವೆಂದೂ ಸಚಿವರು ನುಡಿದರು.

ಹಿರಿಯ ಶಾಸನಸಭೆ ಚುನಾವಣೆ ಅವಿರೋಧ

ನಗರದ ಪತ್ರಿಕೋದ್ಯಮಿಗಳೂ, ಸೆನೆಟ್ ಸದಸ್ಯರೂ ಆದ ಶ್ರೀ ಎಸ್. ಶ್ರೀನಿವಾಸಮೂರ್ತಿಯವರು ವಿಧಾನಪರಿಷತ್ತಿನ ಖಾಲಿಯಾದ ಒಂದು ಸ್ಥಾನಕ್ಕೆ ಪದವೀಧರರ ಕ್ಷೇತ್ರದಿಂದ ಈ ಏಪ್ರಿಲ್ ಉಮೇದುವಾರಿಕೆ ಪತ್ರವನ್ನು ಸಲ್ಲಿಸಿದರು.

ಮೈಸೂರು ಮತ್ತು ಬೆಂಗಳೂರು ಸಹಕಾರ ಸಂಘಗಳ ವ್ಯವಹಾರ

ವಿಧಾನ ಸಭೆಯಲ್ಲಿ ಸದಸ್ಯರ ಟೀಕೆ

ಬೆಂಗಳೂರು ೨೬

ಮೊನ್ನೆ ವಿಧಾನ ಸಭೆಯಲ್ಲಿ ಸಹಕಾರ ಇಲಾಖೆಯ ಗ್ರಾಂಟಿನ ಚರ್ಚೆ ನಡೆದಾಗ ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಸಹಕಾರ ಸಂಘಗಳಲ್ಲಿನ ನಡವಳಿಕೆಗಳನ್ನು ತೀವ್ರವಾಗಿ ಟೀಕಿಸಲಾಯಿತು

ಶ್ರೀ ಕೆ ಪುಟ್ಟಸ್ವಾಮಿಯವರು ಮಾತನಾಡಿ, ಈ ಎರಡು ಪಟ್ಟಣಗಳಲ್ಲಿರುವ ಸಹಕಾರ ಸಂಸ್ಥೆಗಳ ವ್ಯವಹಾರಗಳು ಬಹಳ ಅಸಹ್ಯಕರವಾಗಿರುವುದೆಂದೂ, ಸಂಘಗಳಲ್ಲಿ ಪಕ್ಷಗಳನ್ನು ಮಾಡಿಕೊಳ್ಳಲಾಗಿರುವುದೆಂದೂ ಹೇಳಿದರು ೧೯೫೦ ರಲ್ಲಿ ಮೈಸೂರಿನಲ್ಲಿ ಚುನಾವಣೆಯನ್ನೇ ನಡೆಸಲಿಲ್ಲವೆಂದೂ, ಚುನಾವಣೆ ಆದರೆ ಕೂಡಲೇ ಅದಕ್ಕೆ ಸ್ಟೇ ಆರ್ಡರುಗಳಾಗಿ ಬಹಳ ದಿವಸವಾದರೂ ಈ ಆರ್ಡರುಗಳು ಉಳಿದಿರುವುವೆಂದೂ ಈ ಕಾರಣದಿಂದ ೨೫-೩೦ ವರ್ಷಗಳಲ್ಲಿದ್ದ ಡೈರೆಕ್ಟರುಗಳೇ ಮುಂದುವರಿಯುತ್ತಿರುವರೆಂದೂ ಅವರು ನುಡಿದರು ಪ್ರತಿ ವರ್ಷವೂ ಒಂದಲ್ಲ ಒಂದು ಸಂಸ್ಥೆಯಲ್ಲಿ ಹಲವರು ಸೇರಿಕೊಂಡು ಅಧಿಕಾರ ಚಲಾಯಿಸುತ್ತಿರುವರೆಂದು ಅವರು ಸೂಚಿಸಿದರು ಇವೆಲ್ಲವೂ ಸರ್ಕಾರದ ನಿರ್ಲಕ್ಷ್ಯ ವರ್ತನೆಯ ಪರಿಣಾಮವೆಂದು ವಿವರಿಸಿ, ಸರ್ಕಾರದವರು ಹೊಸ ಚುನಾವಣೆಗಳು ನಡೆಯುವಂತೆ ಕೂಡಲೇ ಆಜ್ಞೆ ಮಾಡಬೇಕೆಂದೂ, ಅಲ್ಲಿಯವರೆಗೆ ಸಂಘದ ಆಡಳಿತವನ್ನು ಅಧಿಕಾರಿ ಕಾರ್ಯದರ್ಶಿಗೆ ವಹಿಸಬೇಕೆಂದೂ ಒತ್ತಾಯ ಮಾಡಿದರು

ಶ್ರೀ ಎ ಭೀಮಪ್ಪನಾಯಕರು ಮಾತನಾಡಿ, ಹಲವರಿಗೆ ಸಹಕಾರ ಸಂಘಗಳು 'ಮೇವಿನ ಹುಲ್ಲುಗಾವಲುಗಳಾಗಿ'ರುವುವೆಂದು ಅಭಿಪ್ರಾಯಪಟ್ಟರು

ಶ್ರೀ ಟಿ ಮರಿಯಪ್ಪನವರು ಮಾತನಾಡಿ, ಸಹಕಾರ ಸಂಘಗಳಲ್ಲಿ ಪಾರ್ಟಿಗಳು ಸೇರಿಕೊಂಡಿರುವುದಾಗಿಯೂ, ಸಮಾಜ ಘಾತುಕರನ್ನು ಅಲ್ಲಿಂದ ತೆಗೆದುಹಾಕಬೇಕೆಂದೂ, ಅಂತಹವರು ಇರುವ ಕಡೆ ಸಂಘಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು, ಪರಿಸ್ಥಿತಿಯನ್ನು ಉತ್ತಮಪಡಿಸಿ ಖಾಸಗಿ ಜನರಿಗೆ ವಾಪಸು ಕೊಡಬೇಕೆಂದೂ ತಿಳಿಸಿದರು

ಸಚಿವ ಡಾ|| ನಾಗನಗೌಡರು ಉತ್ತರವಿತ್ತು, ಸದಸ್ಯರುಗಳು ಹೇಳುವ ವಿಷಯಗಳನ್ನು ತೀವ್ರವಾಗಿ ಪರಿಶೀಲಿಸಿ, ಕೂಡಲೇ ತಕ್ಕ ಕ್ರಮ ಕೈಗೊಳ್ಳುವುದಾಗಿ ಭರವಸೆಯಿತ್ತರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ದಿಲ್ಲಿಯಿಂದ [illegible] ಹಿಂದಿ [illegible] ಮತ್ತು [illegible] ದಿಲ್ಲಿಯಿಂದ [illegible] ಶಾಸ್ತ್ರೀಯ ಕಾರ್ಯಕ್ರಮ [illegible] ಪ್ರಸಾರ [illegible] ಪಾರ್ಲಿಮೆಂಟಿನಲ್ಲಿ [illegible] ವಿವರ

ಭಾರತಕ್ಕೆ ಅಮೆರಿಕಾ ಅಧ್ಯಕ್ಷರ ಭೇಟಿ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಈ ವರ್ಷಾಂತ್ಯದಲ್ಲಿ ಭಾರತಕ್ಕೆ ಭೇಟಿ ಕೊಡಲು ಆಲೋಚಿಸಿರುವರೆಂದು ಅಲ್ಲಿನ ಸುದ್ದಿ ಸಂಸ್ಥೆಯೊಂದು ತಿಳಿಸಿದೆ ನೆಹರೂರವರು ಜುಲೈನಲ್ಲಿ ವಾಷಿಂಗ್ಟನ್ನಿಗೆ ಭೇಟಿಯಾಗುವ ಸಮಯದಲ್ಲಿ ಈ ವಿಷಯವನ್ನು ಅವರೊಡನೆ ಪ್ರಸ್ತಾಪಿಸುವರು

ಭಾರತ-ಮತ್ತು ಅಮೆರಿಕಾ ಪಾರಿಭಾಷಿಕ ಯೋಜನೆ ಒಪ್ಪಂದ

ಕಳೆದ ಜುಲೈ ೧ರಿಂದ ಈ ವರ್ಷದ ಜೂನ್ ೩೦ರ ವರೆಗಿನ ಸಾಲಿನಲ್ಲಿ ಒಟ್ಟು ೧ ಕೋಟಿ ಡಾಲರ್ ಹಣವನ್ನು ಸಹಾಯವಾಗಿ ನೀಡುವ ಸಂಬಂಧದಲ್ಲಿ ಅಮೆರಿಕ ಮತ್ತು ಭಾರತಗಳಿಗೆ ೧೨ ಪಾರಿಭಾಷಿಕ ಯೋಜನೆಗಳ ಬಗ್ಗೆ ಒಪ್ಪಂದಗಳಾಗಿವೆ ಈ ಯೋಜನೆಗಳಿಗಾಗಿ ೨೫ ಲಕ್ಷ ರೂ ದೊರೆಯುವುವು

ಮದ್ರಾಸ್ ಮಂತ್ರಿಯೊಬ್ಬರ ಮಗ ನೀರಿನ ಪಾಲು

ಮದ್ರಾಸಿನ ರೆವಿನ್ಯೂ ಮಂತ್ರಿ ಮಾಣಿಕ್ಯವೇಲುರವರ ಮೂರನೇ ಮಗ ಸುಮಾರು ೨೮ ವರ್ಷದ ಎಂ ವಿಶ್ವನಾಥ ಮತ್ತು ಇನ್ನೊಬ್ಬರು ಅಡ್ಯಾರ್ ನದಿಯಲ್ಲಿ ದೋಣಿಯಲ್ಲಿ ಕುಳಿತು ಹೋಗುತ್ತಿದ್ದಾಗ ಅದು ತಲೆಕೆಳಗಾಗಿ ಅವರುಗಳು ನೀರಿನಲ್ಲಿ ಮುಳುಗಿ ಮೃತಪಟ್ಟರು

ರಾಮಕೃಷ್ಣ ಪರಮಹಂಸರ ಜನ್ಮ ದಿನಾಚರಣೆ

ರಾಜಧಾನಿಯ ಮಹಿಳಾಸದನದಲ್ಲಿ ಕಳೆದ ಶುಕ್ರವಾರ ಶ್ರೀರಾಮಕೃಷ್ಣ ಪರಮಹಂಸರ ಜನ್ಮದಿನಾಚರಣೆಯನ್ನು ಶ್ರೀಮತಿ ಸಿ ಯು ಶಂಕರದರವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಶ್ರೀಮತಿ ಜಯ ಮತ್ತು ವಸಂತಮಾಲತಿಯವರಿಂದ ಸಂಗೀತವಾದನಂತರ ಅಧ್ಯಕ್ಷರು ಶ್ರೀರಾಮಕೃಷ್ಣ ಪರಮಹಂಸರ ಜೀವನದಲ್ಲಿ ಹಲಕೆಲವು ಘಟನೆಗಳನ್ನು ವಿವರಿಸಿ, ಜನರು ಅವರ ಬೋಧನೆಗಳನ್ನು ಅನುಷ್ಠಾನಕ್ಕೆ ತರಬೇಕೆಂದು ತಿಳಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಸಂಗೀತ ಕಲಾಭಿವರ್ಧಿನೀ ಸಭೆಯವರಿಗೆ ಪ್ರಭುಗಳ ಭೇಟಿ

ಶ್ರೀಮನ್ಮಹಾರಾಜರು ಕಳೆದ ಶುಕ್ರವಾರ ಲೋಕರಂಜನ ಮಹಲಿನಲ್ಲಿ ಅರಮನೆಯಲ್ಲಿ ಮೈಸೂರು ಕಲಾಭಿವರ್ಧಿನೀ ಸಭೆಯ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಭೇಟಿಯನ್ನು ದಯಪಾಲಿಸಿದರು ಸಭೆಯವರು ಹಲವು ಬೇಡಿಕೆಗಳನ್ನೊಳಗೊಂಡ ಮನವಿಪತ್ರವೊಂದನ್ನು ಪ್ರಭುಗಳಿಗೆ ಸಮರ್ಪಿಸಿದರು

ಹಿಂದೀ ತರಗತಿಗಳು

ಬರುವ ಆಗಸ್ಟ್ ತಿಂಗಳಿನಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕೇಂದ್ರ ವಿದ್ಯಾಲಯದಲ್ಲೂ ಮತ್ತು ಇತರ ಮೊಹಲ್ಲಾಗಳಲ್ಲಿರುವ ಸಭೆಯ ಶಾಖೆಗಳಲ್ಲೂ ಹಿಂದಿ ತರಗತಿಗಳು ಪ್ರಾರಂಭವಾಗಿವೆ ಕೇಂದ್ರ ವಿದ್ಯಾಲಯದಲ್ಲಿ ಮಹಿಳೆಯರಿಗೆ ಪ್ರತ್ಯೇಕವಾಗಿ ತರಗತಿಗಳನ್ನು ನಡೆಸಲಾಗುವುದು. ಸೇರಬಿಚ್ಛಿಸುವವರು ಕೂಡಲೇ ತಿಳಿಸಬೇಕೆಂದು ಸೂಚಿಸಲಾಗಿದೆ

ನಟನಟಿಯರಿಂದ ನೇತ್ರ ದಾನ

ದಕ್ಷಿಣ ಭಾರತದ ಸುಪ್ರಸಿದ್ಧ ಸಿನಿಮಾ ನಟಿ ಪದ್ಮಿನಿ, ಎನ್ ಎಸ್ ಕೃಷ್ಣನ್ ಮತ್ತು ಟಿ ಎ ಮಧುರಂರವರು ಮರಣಾನಂತರ ತಮ್ಮ ಕಣ್ಣುಗಳನ್ನು ನೇತ್ರ ಬ್ಯಾಂಕಿಗೆ ದಾನ ಮಾಡಲು ಒಪ್ಪಿರುತ್ತಾರೆ ಕಣ್ಣಿನ ಮಣಿಗಳ್ ಎಂಬ ಚಿತ್ರವನ್ನು ಅವರು ನೋಡಿ ಕುರುಡರ ಬಗ್ಗೆ ವಿಪರೀತ ಕನಿಕರಪಟ್ಟರೆಂದೂ, ತಮ್ಮ ಕಣ್ಣುಗಳನ್ನು ಕುರುಡರಿಗೆ ಕೊಡಲು ಅವರು ಒಪ್ಪಿರುವರೆಂದೂ ಹೇಳಲಾಗಿದೆ

ಮುಟ್ಟಿದರೆ ಕುಣಿಯುವ ಸ್ಟೌ

ಹಾಸನಕ್ಕೆ ಬಂದಿರುವ ಚಿತ್ರದುರ್ಗದ ಪ್ರಸನ್ನ ಎಂಬ ಬಾಲಕನು ಮುಟ್ಟಿದರೆ ಸ್ಟೌ ಒಂದು ಕುಣಿಯುತ್ತದೆಂದೂ ಅದರಲ್ಲಿ ಸಾಯಿಬಾಬನು ಇರುವನೆಂದೂ ಹೇಳಲಾಗಿದೆ ಬಾಲಕನಿಗೆ ಸ್ವಪ್ನದಲ್ಲಿ ಸಾಯಿಬಾಬಾ ದರ್ಶನವಾಗಿ ಆ ಸ್ಟೌವನ್ನು ಹಾಸನಕ್ಕೆ ತೆಗೆದುಕೊಂಡು ಹೋಗುವಂತೆ ಸೂಚಿಸಿತೆಂದೂ, ಅವನು ಹಾಗೆಯೇ ಮಾಡಿದನೆಂದೂ ಹೇಳಲಾಗಿದೆ ಅವನನ್ನು ಕಳೆದ ೨೨ನೇ ತಾರೀಕು ಸ್ಟೌ ಸಮೇತ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು

ಮಕ್ಕಳ ಅಪಹಾರಕ್ಕಾಗಿ ಸಾಧುಗಳ ಬಂಧನ

ಮಗುವೊಂದನ್ನು ಕಳುವು ಮಾಡಲೆತ್ನಿಸಿದರೆಂದು ೩ ಜನ ಸಾಧುಗಳನ್ನು ಜೋಧಪುರದ ಪೋಲೀಸರು ಬಂಧಿಸಿರುತ್ತಾರೆ ಇದುವರೆಗೆ ೩೦ ಜನರನ್ನು ದಸ್ತಗಿರಿ ಮಾಡಲಾಗಿದೆ ಈ ಸಾಧುಗಳು ಅಂತರ ಪ್ರಾಂತೀಯ ಗ್ಯಾಂಗಿಗೆ ಸೇರಿದವರೆಂದೂ, ಅವರಲ್ಲಿ ಅನೇಕರು ಉತ್ತರ ಪ್ರದೇಶದಿಂದ ಬಂದಿರುವವರೆಂದೂ, ಆ ಕಡೆ ಮನುಷ್ಯರನ್ನು ತಿನ್ನುವ ಪದ್ಧತಿಯು ಇನ್ನೂ ಇರುವುದೆಂದೂ ಹೇಳಲಾಗಿದೆ

ಫುಟ್‌ಬಾಲ್ ಪಂದ್ಯ

ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ಪೋರ್ಟ್ಸ್ ಕ್ಲಬ್ಬಿನ ಆಶ್ರಯದಲ್ಲಿ ಬರುವ ತಿಂಗಳು ೧೫ ನೇ ತಾರೀಖಿನಿಂದ ಫುಟ್‌ಬಾಲ್ ಟೋರ್ನಮೆಂಟು ನಡೆಯುವುದು

ಮಕ್ಕಳ ಕ್ರೀಡೆಗಳ ಆರಂಭೋತ್ಸವ

ಜಯನಗರದಲ್ಲಿರುವ ಮಕ್ಕಳ ಪುಸ್ತಕ ಸಮಿತಿಯ ಆಶ್ರಯದಲ್ಲಿ ಏರ್ಪಡಿಸಲಾಗಿರುವ ಬಾಲಕ ಬಾಲಕಿಯರ ಕೇಂದ್ರ ಕ್ರೀಡೆಗಳ ಆರಂಭೋತ್ಸವವನ್ನು ನಾಳೆ ಸಂಜೆ ೬ ಗಂಟೆಗೆ ಕೃಷ್ಣಮೂರ್ತಿಪುರದಲ್ಲಿರುವ ಕ್ರೀಡಾ ತರಪೇತು ಸ್ಥಳದಲ್ಲಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ನೆರವೇರಿಸುವರು

ವಿವಾಹ ಮಹೋತ್ಸವ

ಅರಮನೆಯ ನಿವೃತ್ತ ಶಿರಸ್ತೇದಾರ್ ಶ್ರೀ ಆರ್. ನರಸಿಂಹಯ್ಯಂಗಾರ್ಯರು ತಮ್ಮ ದ್ವಿತೀಯ ಪುತ್ರ ಶ್ರೀ ಎಸ್ ಎನ್ ಶ್ರೀನಿವಾಸನವರಿಗೆ ಬೆಂಗಳೂರು ಕೋಟೆ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಚಕ್ರವರ್ತಿ ರಾಮಸ್ವಾಮಿ ಅಯ್ಯಂಗಾರ್ಯರ ಎರಡನೇ ಮಗಳು ಸೌ|| ವಸುಮತಿಯಮ್ಮನನ್ನು ತಂದುಕೊಂಡು ಬೆಂಗಳೂರಿನಲ್ಲಿ ಕಳೆದ ೧೮ನೇ ತಾರೀಕು ವಿವಾಹವನ್ನು ನೆರವೇರಿಸಿದರು

ವಿದ್ಯಾರ್ಥಿಗಳಿಗೆ ಬೇಸಿಗೆ ರಜ

ಕೋಡಿಹಳ್ಳಿ ಇನಾಂದಾರ್ ಶ್ರೀ ಪಿ ಸ
ಸುಬ್ಬಯ್ಯನವರು ಈ ರೀತಿ ತಿಳಿಸಿರುತ್ತಾರೆ
ಸ್ಕೂಲುಗಳಿಗೆ ಬೇಸಿಗೆ ರಜ ಕೊಡತಕ್ಕ
ಯದಲ್ಲಿ ಈ ದೇಶದ ಹವಾಗುಣ, ಹುಡುಗ
ತಿ, ಇತರ ಸಂದರ್ಭಗಳು ಮುಂತಾದುವನ್ನ
ಯೋಚಿಸಿ ಮಾರ್ಚಿ ೧ ರಿಂದ ೫ ವಾರ ಬೆ
ಹೊತ್ತು ಶಾಲೆಗಳನ್ನು ನಡೆಸುವಂತೆಯೂ,
ಲ್ ೭ ರಿಂದ ೫ ವಾರ ಪೂರ್ತಿ ರಜ ಕೊಡ
ತೆಯೂ ಬಹಳ ಹಿಂದೆಯೇ ಮಾಡಿದ್ದ ಏರ್ಪಾ
ಬಹಳ ಸಮರ್ಪಕವಾಗಿತ್ತು. ಹುಡುಗರಿಗೂ,
ಪಾಧ್ಯಾಯರಿಗೂ ಹೆಚ್ಚು ತೊಂದರೆ ಇ
ಈ ರೀತಿ ೮೦ ವರ್ಷ ಕಾಲ ನಡೆಯುತ್ತ
ಈಗ ಸರ್ಕಾರವು ವಿದ್ಯಾ ಸುಧಾರಣೆ ೨
ದಲ್ಲಿ ಬದಲಾಯಿಸಿ ಸುಗ್ಗಿ ಕಾಲದ ರಜ,
ಯ ಕಾಲದ ರಜ ಎಂದು ಮಾಡಿರುವುದು
ಕರವಲ್ಲ ಇದರಿಂದ ಹುಡುಗರಿಗಾಗಲಿ,
ಹಕರಿಗಾಗಲೀ ಅನುಕೂಲವಿಲ್ಲ ಇದಕ್ಕೆ
ಕಡೆಯೂ ತೀವ್ರ ಪ್ರತಿಭಟನೆಯೂ,
ಮುಂತಾದುವೂ ನಡೆದಮೇಲೆ, ಹೋದ
೧ ತಿಂಗಳ ಕಾಲ ಬೇಸಿಗೆ ರಜ ಕೊಟ್ಟರು

ಈ ವರ್ಷ ಈಗಾಗಲೇ ಬಿಸಿಲಿನ ಧಗೆ
ಲು ಅಸಾಧ್ಯವಾಗಿದೆ ಹುಡುಗರು ಬೇಸಿಗೆ
ಸಹಿಸಲಾರದೆ ಬಳಲಿಹೋಗುತ್ತಿದ್ದಾರೆ
ಹುಡುಗರು ಸ್ಕೂಲಿಗೆ ಬರದೆ ತಪ್ಪಿಸಿಕೊ
ದ್ದಾರೆ. ಮಾರ್ಚಿ ತಿಂಗಳು ಮುಗಿಯುತ್ತಾ ಬ
ಮಾಮೂಲಿನಂತೆ ಬೇಸಿಗೆ ರಜವನ್ನು ಏಪ್ರಿಲ್
ರಿಂದ ೬ ವಾರ ಕೊಡುವುದು ಹುಡುಗರ ಆರೋ
ಗ್ಯ ದೃಷ್ಟಿಯಿಂದಲೂ ಅತ್ಯಾವಶ್ಯಕವಾಗಿ

ವಕೀಲರೂ, ದಯಾಳುಗಳೂ ಆದ ವಿದ್ಯಾ
ಖಾತಾ ಡೈರೆಕ್ಟರ್‌ರವರು ಸಂಪೂರ್ಣ ಸಹಾ
ಭೂತಿಯಿಂದ ಇದನ್ನು ಪರಿಶೀಲಿಸಿ ಏಪ್ರಿಲ್
ರಿಂದ ಮೇ ೧೫ರ ವರೆಗೆ ಬೇಸಿಗೆ ರಜ ಕೊಡ
ಆಜ್ಞೆ ಮಾಡುತ್ತಾರೆಂದು ನಂಬುತ್ತೇನೆ
ಕೋರ್ಟುಗಳಿಗೂ ಸಹಾ ಏಪ್ರಿಲ್ ೧ನೇ
ತಿನಿಂದಲೇ ರಜ ಕೊಡುವುದನ್ನು ಈ
ವಲ್ಲಿ ನೆನಪಿಗೆ ತರತಕ್ಕದ್ದಾಗಿದೆ

○ ಫೋರ್ಜರಿಗಳನ್ನು ಬಹಳ ಬೇಗನೆ ಕಂಡುಹಿಡಿ
ಯುವ ಸಾಧನವೊಂದನ್ನು ಮಾಜಿ ಪೋಲೀಸ
ನು ಕಂಡುಹಿಡಿದಿರುತ್ತಾನೆ ಅದನ್ನು ಕೈಗಾ
ಮತ್ತು ವೈಜ್ಞಾನಿಕ ತನಿಖೆಗಳಲ್ಲಿ ಉಪಯೋ
ಬಹುದು ಅದನ್ನು ಇಂಗ್ಲೆಂಡಿನ ಪ್ರೊಫೆಸ
ಸ್ಟರಿನ ಪೋಲೀಸು ಸಿ ಐ ಡಿ ಇಲಾಖೆಯ
ಬಳಕೆಗೆ ತಂದಿರುತ್ತಾರೆ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ಸಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗ
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆ
ಬಂದು ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಅಯ್ಯ
ಅಂಡ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾ
ಅಶೋಕ ರಸ್ತೆ, ಮೈಸೂರು (Estd 19

Edited, Printed and Published
A. R. Nagarajan at Sadhvi P
D. Subbiah Road, Mysore

ಒಮ್ಮೆ ಭೇಟಿ ಕೊಡಿ! : ಪರೀಕ್ಷಿಸಿ!!

ಗೀತಾ ಸ್ಟೋರ್ಸ್

ಶಿವರಾಂಪೇಟೆ (ಮಸೀದಿ ಪಕ್ಕ), ಮೈಸೂರು
ಬೀಡಿ ಅಂಗಡಿ ಮತ್ತು ಹೋಟೇಲು ಮಾಲೀಕರುಗಳೇ
ನಮ್ಮಲ್ಲಿ ಆಧುನಿಕ ಗಾಜಿನ ಸಾಮಾನುಗಳೂ, ಪೆಪ್ಪರ್‌ಮೆಂಟ್, ಸುಲ್ತಾನ್‌ದಾರ್ ಮತ್ತು
ಬೀಡಿ ಸಿಗರೇಟುಗಳು, ಸೋಪುಗಳು ಒಟ್ಟಾಗಿಯೂ, ಚಿಲ್ಲರೆಯಾಗಿಯೂ
ಅತಿ ಸುಲಭ ದರದಲ್ಲಿ ದೊರೆಯುತ್ತವೆ
ಈ ಪತ್ರಿಕೆ ತರುವವರಿಗೆ ಡಜನ್ 1ಕ್ಕೆ 2-4-0 ರೂ ಬೆಲೆಯ ಹಿಂದೂಸ್ತಾನ್ 6 ಔನ್ಸ್
ಗಾಜಿನ ಲೋಟಗಳನ್ನು 2-1-0 ರೂ ಗೆ ಕೊಡಲಾಗುತ್ತೆ

ಚಾಮುಂಡೇಶ್ವರಿ ಟಾಕೀಸ್ ★ 30—3—56 ರಿಂದ ಅಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಲಲಿತಕಲಾ ಫಿಲಂಸ್‌ರವರ ಕನ್ನಡ ಚಿತ್ರ ★ **ಪಂಚರತ್ನ** ★
ಪಾತ್ರ ಹೊನ್ನಪ್ಪ ಭಾಗವತರ್, ಬಾಲಕೃಷ್ಣ, ಲಲಿತ, ಬಿ ಸರೋಜ, ರಮಾದೇವಿ ಮುಂತಾದವರು
ಮೊದಲನೇ 4 ವಾರ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸು ಮತ್ತು
ರಿಯಾಯಿತಿಗಳನ್ನು ಸಸ್ಪೆಂಡ್ ಮಾಡಲಾಗಿದೆ

ರಾಜಕಮಲ್ ಟಾಕೀಸ್ ● ೨೮—೩—೫೬ರಿಂದ : ಸೃಷ್ಟಿಭವಯುತ ತಿರೀ ಪಾರ
ಜೆಮಿನಿ ಗಣೇಶನ್, ಕೆ ಸಾರಂಗಪಾಣಿ, ಎಂ ಎನ್ ಚಕ್ರಪಾಣಿ, ವಿ ಕೆ ರಾಮಸ್ವಾಮಿ,
ಗಿರಿಜ, ಮುತ್ತುಲಕ್ಷ್ಮಿ, ಇ. ವಿ ಸರೋಜ,
ಸಾವಿತ್ರಿ ನಟಿಸಿರುವ ತಮಿಳು ಚಿತ್ರ
— MORNING SHOWS —
From 30-3.56 For 3 Days
ONE GOOD TURN (Full of Comedy picture)
● **ಪ್ರೇಮ ಪಾಶಂ** ●
[A Chamria Release

ಪೋಸ್ಟಲ್ ರಿ. ನಂ. 793

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌನ್ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ,
ಆರ್ಣಿ, ದಿಂಡಿಗಲ್
ರೇಷ್ಮೆ ಮತ್ತು ಜರಿಯ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು · ಫೋನ್ 446.

ಸಂಪುಟ : ೧೯] SADHVI : WEDNESDAY 28-3-1956 ಮೈಸೂರು ಬುಧವಾರ : ೨೮-೩-೧೯೫೬ [ಸಂಚಿಕೆ : ೨೧೮

ಪಂಜಾಬಿನ ಗಡಿಯಲ್ಲಿ ಪಾಕಿಸ್ತಾನ ಸೈನ್ಯದ ಚಟುವಟಿಕೆ

ಮಹಾ ಚುನಾವಣೆಗಳ ನಂತರ ಜಿಲ್ಲಾ ಬೋರ್ಡುಗಳ ಪುನರ್ವ್ಯವಸ್ಥೆ

ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಚೆನ್ನಯ್ಯನವರ ವಿವರಣೆ

ಬೆಂಗಳೂರು ೨೮

ನೆನ್ನೆ ವಿಧಾನಸಭೆಯಲ್ಲಿ ಶ್ರೀ ಮೂರಿ ಮರಿಯ [illegible]ನವರ ಪ್ರಶ್ನೆಗೆ ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಚೆನ್ನಯ್ಯನವರು ಉತ್ತರವಿತ್ತು, ಮಹಾ ಚುನಾವಣೆಗಳ ನಂತರ ಜಿಲ್ಲಾ ಬೋರ್ಡುಗಳ ಪುನರ್ವ್ಯವಸ್ಥೆ ಮಾಡಲಾಗುವುದೆಂದೂ, ಅಲ್ಲಿ [illegible] ಬೋರ್ಡುಗಳ ಆಡಳಿತ ನಿರ್ವಹಣೆ[illegible] ಸಮಿತಿಗಳನ್ನು ರಚಿಸಲು ಆಲೋಚಿಸಲಾ[illegible]ದೆಯೆಂದೂ ಸೂಚಿಸಿದರು. ಸಂಸ್ಥಾನ ಪು[ನರ್ವಿ]ಂಗಡಣೆಗಳಾದನಂತರ ಈ ಪ್ರಶ್ನೆಯನ್ನು [ಸಂಪೂರ್ಣ]ವಾಗಿ ಬಗೆಹರಿಸಬಹುದೆಂದು ಅವರು [ತಿ]ಳಿಸಿದರು. ಜಿಲ್ಲಾ ಬೋರ್ಡುಗಳ ವಿಸ್ತಾರ [ಮ]ತ್ತು ವ್ಯಾಪ್ತಿಗಳಲ್ಲಿ ಬದಲಾವಣೆಗಳಾಗಬೇ[ಕಾ]ಗುವುದೆಂದೂ ಅವರು ತಿಳಿಸಿದರು.

[ಲಂ]ಚ ನಿರೋಧ ಇಲಾಖೆಯಲ್ಲಿ ಪತ್ತೆದಾರಿ ಉಪ ಶಾಖೆ

[ಕೈ]ಗಾರಿಕಾ ಮಂತ್ರಿ ಶ್ರೀ ಹೆಚ್. ಎಂ. ಚನ್ನ[ಬ]ಸಪ್ಪನವರು ಮಹಾಮತ್ತು ಇಲಾಖಾ [illegible] [ಪ್ರ]ಶ್ನೆ ಒಂದಕ್ಕೆ ಉತ್ತರವಿತ್ತು, ಲಂಚ ನಿರೋಧ ಇಲಾಖೆಯ ಅಂಗವಾಗಿ ಪತ್ತೆದಾರಿ ಉಪ ಶಾಖೆಯೊಂದನ್ನು ಏರ್ಪಡಿಸಿ, ಇತರ ಇಲಾಖೆಗಳಲ್ಲಿ [illegible] ಪ್ರಕರಣಗಳನ್ನು ಕಂಡುಹಿಡಿ[ಯ]ಲು ಸರ್ಕಾರದವರು ಆಲೋಚಿಸುತ್ತಿರುವುದಾ[ಗಿ] [illegible] ಮಹಾಮತ್ತು ಇಲಾಖಾ [illegible] [illegible] ಪತ್ತೆದಾರಿ ಶಸ್ತ್ರತಿಯನ್ನು ಹಾಗೆ ತರ [illegible] ಶಾಸನವನ್ನು ಮಾಡಲಾಗುವುದೆಂದು [illegible] ಸೂಚಿಸಿದರು.

ಅಮೆರಿಕಾ ಅಧ್ಯಕ್ಷರಿಗೆ ವಿಷ ಪ್ರಾಶನ ಮಾಡಿಸಲು ಪಿತೂರಿಯೇ?

ಅಮೆರಿಕದ ಅಧ್ಯಕ್ಷ ಐಸನ್‌ಹೋವರವರು [illegible] [ಜಾರ್ಜ]ಯಾ ಸಂಸ್ಥಾನದ ವೈಟ್ ಸಲ್ಫರ್ [illegible] ನಗರದಿಂದ ವಾಷಿಂಗ್ಟನ್ನಿಗೆ ಹೊರಡು[ವುದ]ಕ್ಕಾಗಿ ಸಿದ್ಧವಾಗಿದ್ದ ಖಾಸಗಿ ರೈಲುಗಾಡಿ[ಯೊ]ಂದರಲ್ಲಿ ಅಧ್ಯಕ್ಷರಿಗಾಗಿ ಇಡಲ್ಪಟ್ಟಿದ್ದ [illegible] [illegible]ಗಳಲ್ಲಿ ವಿಷ ಬೆರೆತಿತ್ತೆಂದು [illegible] [illegible], ಅವರ ಬಗ್ಗೆ ಅಲ್ಲಿನ ಗುಪ್ತ ಪೋಲೀಸ [illegible] ನಡೆಸುತ್ತಿರುವರು. ಅಧ್ಯಕ್ಷರಿಗಾಗಿ [illegible]ಯನ್ನು ಸೇವಿಸಿದ ಒಬ್ಬ ಹೆಂಗಸ[ನ್ನು] [illegible] ಗಂಡಸನ್ನೂ ಆಸ್ಪತ್ರೆಗೆ ಸೇರಿಸಲಾ[ಗಿದೆ]. [illegible] ಬ್ಯಾಳಿಯು ಹಾಸಿಗೆ ಹಿಡಿದಿದ್ದಾಳೆ.

ಜೂಜಾಟದ ಪತ್ತೆ

[illegible] ಮೊಹಲ್ಲಾ ಒಕ್ಕಲಗೇರಿಯಲ್ಲಿ ಪು[illegible] [illegible] ಮತ್ತು ಮೂವರು ಜೂಜಾಟವಾಡು[ತ್ತಿ]ದ್ದನ್ನು ಪೋಲೀಸರು ಪತ್ತೆ ಹಚ್ಚಿ ಅವರ [illegible] ರೂ. ಗಳನ್ನು ವಶಪಡಿಸಿಕೊಂಡಿರು[ವರು].

ಕಳ್ಳ ಬಸಿದ ಸಾರಾಯಿಯ ಪತ್ತೆ

[illegible]ನಗರದ ಚಾಮುಂಡಿ ಎಂಬುವನು ಹಟ[illegible] [illegible]ವನ್ನು ಕದ್ದು ಮಂಡಿ ಮೊಹಲ್ಲೆಯಲ್ಲಿ ಮಾ[ರ]ಮಾಡುತ್ತಿದ್ದಾಗ ಅಲ್ಲಿನ ಪೋಲೀಸರ ಕೈಗೆ [ಸಿ]ಕ್ಕಿದನು.

ಕಾಸರಗೋಡಿನ ಬಗ್ಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಲ್ಲಿ ನಿಯೋಗ

ಮೈಸೂರು ೨೭

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀನಿವಾಸ ಮಲ್ಯ ಮತ್ತು ಇತರ [illegible] ಪ್ರಮುಖರು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚೆನ್ನಯ್ಯನವರ ಬಳಿ ನೆನ್ನೆ ನಿಯೋಗ ಬಂದು ಕಾಸರಗೋಡು ತಾಲ್ಲೂಕಿನ [illegible] ನದಿಯ ಉತ್ತರ ಭಾಗದ ಪ್ರದೇಶವನ್ನು ಕರ್ನಾಟಕದಲ್ಲಿ ಸೇರಿಸಿಕೊಳ್ಳಬೇಕೆಂದು ಒತ್ತಾಯ ಪಡಿಸಿದರು. ತಾಲ್ಲೂಕಿನ [illegible] ಲಕ್ಷ ಜನ[ಸಂಖ್ಯೆ]ಯಲ್ಲಿ [illegible] ಲಕ್ಷ ಕನ್ನಡಿಗರಿರುವ [illegible] ಅನ್ನು ತಪ್ಪಿಸುವಂತೆ [illegible] ಕೇಳಲಾಗಿದೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಕೇಂದ್ರದವರಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಾಗಿಯೂ ನಿಯೋಗದವರ ಅಭಿಪ್ರಾಯವನ್ನು ಇದೇ ತಿಂಗಳು [illegible] ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಮಂಡಿಸುವುದಾಗಿಯೂ ಭರವಸೆಯಿತ್ತರು.

ಹೂವಿನ ಅಡ್ಡ ಪಲ್ಲಕ್ಕಿ ಉತ್ಸವ

ರಾಜಧಾನಿಯ ಸಂತೆಪೇಟೆ ಶ್ರೀ ಪ್ರಸನ್ನ [illegible] ಬುಂಡೇಶ್ವರಸ್ವಾಮಿ ದೇವಾಲಯದಲ್ಲಿ [illegible] [illegible] ಗಂಟೆಗೆ ಹೂವಿನ ಅಡ್ಡ ಪಲ್ಲಕ್ಕಿ ಉತ್ಸವವನ್ನು ಧರ್ಮದರ್ಶಿಗಳ [illegible] ವಿಜೃಂಭಣೆಯಿಂದ ಏರ್ಪಡಿಸಲಾಗಿದೆ.

ಬೊಂಬಾಯಿ ಸತ್ಯಾಗ್ರಹದಲ್ಲಿ ೪೪ ಜನರ ಬಂಧನ

ಬೊಂಬಾಯಿ ನಗರ, ಬೆಳಗಾಂ ಮುಂತಾದು[ವು]ವನ್ನು ಮಹಾರಾಷ್ಟ್ರಕ್ಕೆ ಸೇರಿಸುವಂತೆ ಒತ್ತಾಯ ಪಡಿಸುವುದಕ್ಕಾಗಿ ನೆನ್ನೆ ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ವಿ. ಜಿ. ದೇಶಪಾಂಡೆಯವರ ನೇತೃತ್ವದಲ್ಲಿ ಬೊಂಬಾಯಿಯಲ್ಲಿ ಪ್ರತಿಬಂಧಕಾಜ್ಞೆಯನ್ನುಲ್ಲಂಘಿಸಿ ಸತ್ಯಾಗ್ರಹವು ನಡೆಯಿತು. ಅದಕ್ಕಾಗಿ ೪೪ ಜನ ಸ್ವಯಂಸೇವಕರನ್ನು ಬಂಧಿಸಲಾಯಿತು. ದಸ್ತಗಿರಿಯಾದವರ ಪೈಕಿ ವಿ. ಜಿ. ದೇಶಪಾಂಡೆ, ಬೊಂಬಾಯಿ ಪ್ರದೇಶ ಕಾಂಗ್ರೆಸ್ಸಿನ ಮಾಜಿ ಸದಸ್ಯ [illegible]ರಾವ್ ಗೋಖಲೆ, ಕಿಸಾನ್ ಮತ್ತು ಕಾರ್ಮಿಕ ಪಕ್ಷದ ನಾಯಕ ಲಕ್ಷ್ಮೀಕಾಂತ ರಾವುತ್ ಮತ್ತು ಹಿಂದೂ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಎಲ್. ಜಿ. ಥಟ್ಟೆಯವರು ಇರುವರು. ೩೦ ಜನ ಬಂಧಿತರಿಗೆ ತಲಾ ೨೫ ರೂ. ದಂಡ, ತಪ್ಪಿದರೆ ೧ ವಾರ ಸಾದಾ ಸಜಾ ವಿಧಿಸಲಾಯಿತು. ಅವರೆಲ್ಲರೂ ಜೈಲಿಗೆ ಹೋದರು. ಇತರ ೧೪ ಜನ ಪುಂಡರನ್ನೂ ಬಂಧಿಸಲಾಗಿದೆ.

[illegible]ರವರಿಗೆ ಶಿವಮೊಗ್ಗ ವಕೀಲರಿಂದ ಗ್ರಂಥದ ಅರ್ಪಣೆ

ಪ್ರಧಾನಿ [illegible]ಯವರು ಶಿವಮೊಗ್ಗಕ್ಕೆ ಬರುವ ತಿಂಗಳು ೧೦ನೇ ತಾರೀಖು ಭೇಟಿ ಕೊಡುವಾಗ ಅವರಿಗೆ ಅಲ್ಲಿನ ವಕೀಲರಾದ ಶ್ರೀ [illegible] [illegible]ಯವರು ಮಹಾ ಭಾರತದ ಒಂದು ಭಾಗದ ಇಂಗ್ಲಿಷ್ ಭಾಷಾಂತರದ ಪುಸ್ತಕವನ್ನು ಅರ್ಪಿಸಲಿರುವರು.

ಸಂಸ್ಕೃತಿ ಪ್ರಚಾರ ಯೋಜನೆ ಕೈ ಬಿಡಲು ಚರ್ಚೆ

ಅವಕಾಶಕ್ಕಾಗಿ ವಿಧಾನ ಸಭಾಧ್ಯಕ್ಷರಿಗೆ ೩೮ ಮಂದಿ ಸದಸ್ಯರ ಕೋರಿಕೆ

ಬೆಂಗಳೂರು ೨೮

ವಿಧಾನ ಸಭೆಯ ೩೮ ಜನ ಸದಸ್ಯರು ಅಧ್ಯಕ್ಷರಿಗೆ ಕೊಟ್ಟಿರುವ ಪತ್ರವೊಂದನ್ನು ಕಳುಹಿಸಿ, ೪ ವರ್ಷಗಳಿಂದ ಸರ್ಕಾರದವರು ಕೈಗೊಂಡಿರುವ ಸಂಸ್ಕೃತಿ ಪ್ರಚಾರ ಯೋಜನೆ ವಿಷಯವನ್ನು ಚರ್ಚಿಸಲು ಅವಕಾಶ ಬೇಡಿದ್ದಾರೆ. ಅವರು ತಮ್ಮ ಪತ್ರದಲ್ಲಿ [illegible] ರೂಪದಲ್ಲಿ ತಂದು ಸಂಸ್ಕೃತಿ ಪ್ರಚಾರವನ್ನು ಕೈಬಿಡುವಂತಾಗಬೇಕೆಂದು ಸೂಚಿಸಿದ್ದಾರೆ. [illegible]ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಈ ಯೋಜನೆಗಾಗಿ [illegible] ೪ ಲಕ್ಷ ರೂ. ಹಣವನ್ನು ಬೇರೆ ಕೆಲಸಕ್ಕೆ [illegible] ಸದಸ್ಯರು ತಿಳಿಸಿರು[illegible] [illegible] ಪತ್ರಕ್ಕೆ ಕಾಂಗ್ರೆಸ್ ಮತ್ತು ಇತರ ಪಕ್ಷದವರು ರುಜು ಮಾಡಿರುವರು.

ಸಂಸ್ಕೃತಿ ಪ್ರಚಾರ ಕಾರ್ಯವನ್ನು [illegible] ಅಭಿವೃದ್ಧಿ ಸಮಿತಿಗಳಿಗೆ ಸರ್ಕಾರದವರು ವಹಿಸಿ[ರು]ತ್ತಾರೆ.

ಬೊಂಬಾಯಿ ನಗರವು ಇಡೀ ದೇಶಕ್ಕೆ ಸೇರಿದ್ದು

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಮುರಾರ್ಜಿಯವರ ವಾದ

ಬೊಂಬಾಯಿಯ ಹಿರಿಯ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯಿಯವರು ನೆನ್ನೆ ಸಂಸ್ಥಾನ ಪುನರ್ವಿಂಗಡಣಾ ಮಸೂದೆಯನ್ನು ಮಂಡಿಸಿ, ಬೊಂಬಾಯಿ ನಗರವು ಇಡೀ ರಾಷ್ಟ್ರದ್ದೆಂದೂ, ಅದು ಒಂದೇ ಭಾಷೆಯ ಸಂಸ್ಥಾನಕ್ಕೆ ಸೇರಿದರೆ ಅದರಿಂದ ದೇಶದ ಇತರ ಭಾಗಗಳಿಗೆ ಸಹಾಯವೇನೂ ಆಗುವುದಿಲ್ಲವೆಂದೂ ನುಡಿದರು. ನಗರವು ಭಾರತದ ಬೆಳವಣಿಗೆಗೆ [illegible] [illegible]ಕೊಟ್ಟಿತೆಂದೂ, ಅದು ಇಡೀ ದೇಶದ ಆರ್ಥಿಕ ಭದ್ರತೆಗೆ ಹೊಣೆಯಾಗಿತ್ತೆಂದೂ, ಆದ್ದರಿಂದ ಅದರ ಭವಿಷ್ಯವನ್ನು ವಿಶೇಷ ರೀತಿಯಲ್ಲಿ ಪರಿಶೀಲಿಸುವುದು ಅಗತ್ಯವೆಂದೂ ಅಭಿಪ್ರಾಯಪಟ್ಟರು.

ಪುನರ್ವಿಂಗಡಣೆ ಮಸೂದೆ ವಿರುದ್ಧವಾಗಿ ೨೫ ಕಾಂಗ್ರೆಸ್ಸಿಗರ ಓಟು

ಬೊಂಬಾಯಿ ಶಾಸನ ಸಭೆಯಲ್ಲಿ ಮಂಡಿಸಲಾಗಿರುವ ಸಂಸ್ಥಾನ ಪುನರ್ವಿಂಗಡಣೆ ಮಸೂದೆಯನ್ನು ವಿರೋಧಿಸಿ ಸಭೆಯ ೨೫ ಜನ ಕಾಂಗ್ರೆಸ್ ಸದಸ್ಯರು ಪಕ್ಷದ ಆದೇಶವನ್ನು ಉಲ್ಲಂಘಿಸಿ ಓಟು ನೀಡಲು ನಿರ್ಧರಿಸಿರುವರೆಂದು ವರದಿಯಾಗಿದೆ.

ಹಠಾತ್ತನೆ ಮಳೆ ಬಂದು ೫೦ ಜನರ ಮರಣ

ಬ್ರೆಜಿಲ್ ದೇಶದ ಅತ್ಯಂತ ಭಾರಿ ರೇವಾದ ಸಾಂಟೋಸ್ ಎಂಬಲ್ಲಿ ನೆನ್ನೆ ಇದ್ದಕ್ಕಿದ್ದಂತೆಯೇ ಭಾರಿ ಮಳೆ ಬಂದು ೫೦ ಮಂದಿ ಮೃತಪಟ್ಟಿರುತ್ತಾರೆ. ೧೦೦ ಜನರಿಗೆ ಗಾಯವಾಗಿದೆ.

ಸರ್ಕಾರಿ ನೌಕರರಿಗೆ ಹಿಂದಿ ಪರೀಕ್ಷೆ

ವಿಧಾನ ಸಭೆಯಲ್ಲಿ ವಿದ್ಯಾ ಮಂತ್ರಿಯವರ ಹೇಳಿಕೆ

ಸ್ವಂ. ವ. ಕಂತಿ] ಬೆಂಗಳೂರು ೨೮

ಈ ದಿನ ವಿಧಾನ ಸಭೆಯಲ್ಲಿ ಶ್ರೀ ಬಿ. ಆರ್. [illegible]ರಾಮಯ್ಯನವರ ಪ್ರಶ್ನೆಗೆ ಉತ್ತರವಾಗಿ, ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಎಲ್ಲಾ ನೌಕರರೂ ಹಿಂದಿಯನ್ನು ಕಲಿಯುವುದು ಕಡ್ಡಾಯವಲ್ಲವೆಂದೂ, ಆದರೆ ಹೊಸದಾಗಿ ನೌಕರಿಗೆ ಸೇರುವವರು ಮತ್ತು ನೌಕರಿಗೆ ೧೯೫೫ರ [illegible]ಗಳಿಂದೀಚೆಗೆ ಸೇರಿದವರಿಗಾಗಿ ಸುಲಭ ಹಿಂದಿ ಪರೀಕ್ಷೆಯನ್ನು ಏರ್ಪಡಿಸಲು ನಿರ್ಧರಿಸಲಾಗಿರುವುದೆಂದೂ ತಿಳಿಸಿದರು.

ವಿಶ್ವವಿದ್ಯಾನಿಲಯ ಶಿಕ್ಷಣ ಮಾಧ್ಯಮದ ವಿಚಾರವಾಗಿ ಯಾವ ನಿರ್ದಿಷ್ಟವಾದ ಸೂಚನೆ ಕೊಟ್ಟಿಲ್ಲವಾದರೂ ಹಿಂದಿಯನ್ನೇ ಮಾಧ್ಯಮವಾಗಿಟ್ಟು ಕೊಳ್ಳುವುದು ಸೂಕ್ತವೆಂದು ಸಚಿವರು ಅಭಿಪ್ರಾಯಪಟ್ಟರು.

ಫಿರೋಜಪುರ ಗಡಿ ಬಳಿ ಪಾಕಿಸ್ತಾನದ ಸೈನ್ಯ ಚಟುವಟಿಕೆ

ಫಿರೋಜಪುರ ಜಿಲ್ಲೆಯ ಹುಸೇನಿವಾಲಾ ಬಳಿ ಇರುವ ಗಡಿಯಲ್ಲಿ ಪಾಕಿಸ್ತಾನದ ಹೊಸ ಮಿಲಿಟರಿ ಚಟುವಟಿಕೆಗಳು ಆಗುತ್ತಿರುವುವೆಂದು ವರದಿಯಾಗಿದೆ. ನೀರಾವರಿ ಕಾಲಂಗಾರಿಯನ್ನು ತಡೆಸಲು ವಿರಾಂತ್ಯದಲ್ಲಿ ನೂರಾರು ಮಂದಿ ಕಾಮಗಾರರನ್ನು ಗಡಿ ಬಳಿ ಪಾಕಿಸ್ತಾನದ ಅಧಿಕಾರಿಗಳು ಕೇಂದ್ರೀಕರಿಸಿರುವರೆಂದೂ ಹೇಳಲಾಗಿದೆ. ಪಾಕಿಸ್ತಾನದ ಕಡೆ ಹೆಚ್ಚು ಸೈನ್ಯ ಕೇಂದ್ರೀಕರಣದಿಂದ ಬಿಕ್ಕಟ್ಟು ಹೆಚ್ಚಿದೆ. ಇದರಿಂದ ಹುಸೇನಿವಾಲಾ ಹೆಡ್ ವರ್ಕ್ಸ್‌ನಲ್ಲಿ ಭಾರತದ ಕಡೆ ರಿಪೇರಿ ಕಾರ್ಯ ನಡೆಸಲು ತೊಂದರೆಯಾಗಿದೆ. ಕಳೆದ [illegible]ನೇ ತಾರೀಖು ಇದೇ ಪ್ರದೇಶದಲ್ಲಿ ಭಾರತ ಪಾಕಿಸ್ತಾನ ಪಡೆಗಳ ನಡುವೆ ಘರ್ಷಣೆಗಳಾಗಿದ್ದುವು.

ಸೂರತ್ ಬಳಿ ಗಾಂಧಿ ಭವದ ನಿರ್ಮಾಣ

ಉತ್ತಮ ಜೀವನ ಮತ್ತು ಉದಾತ್ತ ಭಾವನೆಯುಳ್ಳ ಜನರಿರುವ ವಸತಿಯೊಂದನ್ನು ಸೂರತ್ ಬಳಿ ಫೇಮಪುರ ಎಂಬ ಹಳ್ಳಿಯಲ್ಲಿ ಗಾಂಧಿ ಸ್ಮಾರಕ ನಿಧಿಯವರು ಬರುವ [illegible]ನೇ ತಾರೀಖು ತೆರೆಯುವರು. ಅದನ್ನು ಗಾಂಧಿ ಭವವೆಂದು ಕರೆಯಲಾಗುವುದು. ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಅದರ ಆರಂಭೋತ್ಸವವನ್ನು ನೆರವೇರಿಸುವರು. ಗಾಂಧಿ ಭವದ ನಿರ್ಮಾಣಕ್ಕಾಗಿ ಸಮಿತಿಯವರು ೨೦ ಸಾವಿರ ರೂ. ಅನ್ನು ವೆಚ್ಚ ಮಾಡುವರು. ಗ್ರಾಮಸ್ಥರು ಶ್ರಮದಾನದ ಮೂಲಕ [illegible] ಹಣವನ್ನು ಕೊಡುವರು. ಅಲ್ಲಿ ಶಿಕ್ಷಣ ತರಗತಿ, ಆರೋಗ್ಯ ಕೇಂದ್ರ, ಪುಸ್ತಕ ಭಂಡಾರ, ಆಸ್ಪತ್ರೆ, ವಾಚನಾಲಯ, ಬಾಲವಾಡಿ ಮತ್ತು ಗ್ರಾಮ ವಾಸಿಗಳು ಮುಂತಾದ ಕಾರ್ಯಕ್ರಮಗಳು ನಡೆಯುವುವು. ಇಂತಹ ಕೇಂದ್ರ ಭಾರತದಲ್ಲಿ ಆಗುವುದು ಇದೇ ಮೊದಲು.

ಪುರಸಭೆಯ ಆಯವ್ಯಯದ ಅಂದಾಜುಗಳು

ಸದಸ್ಯರ ಟೀಕೆಗಳಿಗೆ ಅಧ್ಯಕ್ಷರ ಸಮಾಧಾನ

ಮೈಸೂರು ೨೮

ಪುರಸಭೆಯ ಆಯವ್ಯಯ ಅಧಿವೇಶನದ ಮುಂದುವರಿದ ಸಭೆಯು ನೆನ್ನೆ ಬೆಳಿಗ್ಗೆ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಅಧ್ಯಕ್ಷರು ಇದುವರೆಗೆ ಆದ ಚರ್ಚೆಗೆ ಉತ್ತರವಿತ್ತು ಸದಸ್ಯರ ಹಲವು ಆಕ್ಷೇಪಣೆಗಳಿಗೆ ಈ ಕೆಳಗೆ ಕಂಡಂತೆ ಸಮಾಧಾನವಿತ್ತರು:–ಖಾಲಿ ಜಾಗ್ ಗ್ಯಾಂಗಿನವರ ಕೆಲಸವನ್ನು ತನಿಖೆ ಮಾಡಲಾಗುತ್ತಿದೆ ಗ್ಯಾಂಗಿನಿಂದ ನಷ್ಟವಾಗುತ್ತಿಲ್ಲ ಪುರಸಭೆಯ ಸಹಾಯ ಪಡೆಯುತ್ತಿರುವ ಸಂಘ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಿ ಸಲಹೆ ಮಾಡಲು ಅಧ್ಯಕ್ಷರು, ಕಮಿಷನರು ಮತ್ತು ಎಸ್ ಲಿಂಗಣ್ಣನವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಗಿದೆ

ಪುರಸಭೆಯವರೇ ಸ್ವತಃ ವರ್ಕ್‌ಷಾಪ್ ಒಂದನ್ನು ನಡೆಸಿದರೆ ಅದಕ್ಕೆ ದಿನವೂ ಕೆಲಸವಿರುವುದಿಲ್ಲವಾದುದರಿಂದ ಆ ಪ್ರಶ್ನೆಯನ್ನು ಕೈ ಬಿಡಲಾಗಿದೆ ನಗರದಲ್ಲಿ ಸ್ಟೇಡಿಯಂ ರಚನೆ ಬಗ್ಗೆ ಪುರಸಭೆಯು ತಡವಮಾಡಿಲ್ಲ. ರೇಸ್ ಕೋರ್ಸನ್ನು ಇದಕ್ಕಾಗಿ ಪಡೆಯಲು ಯತ್ನಿಸಲಾಗುತ್ತಿದೆ

ವಿದ್ಯುಚ್ಛಕ್ತಿ ಇಲಾಖೆಯವರು ಸಾಮಾನುಗಳ ಮೇಲೆ ಸುಂಕ ಮತ್ತು ತಮ್ಮ ಕಟ್ಟಡಗಳ ಮೇಲೆ ಕಂದಾಯ ಕೇಳಿದಾಗ ಅವು ಸರ್ಕಾರದ್ದೆಂದು ನೆಪ ಹೇಳಿ ಜಾರಿಕೊಳ್ಳುತ್ತಿದ್ದಾರೆ ಇದರ ಪೌರಸಭೆಯಿಂದ ಮಾತ್ರ ಹೆಚ್ಚು ದರಗಳನ್ನು ಕೇಳುತ್ತಿದ್ದಾರೆ ಇದನ್ನು ಚರ್ಚಿಸಲು ಸರ್ಕಾರಕ್ಕೆ ಒಂದು ನಿಯೋಗವನ್ನು ಸಂಸ್ಥೆಯು ಕಳುಹಬೇಕು

ಸೊಳ್ಳೆಗಳ ಕಾಟವನ್ನು ತಪ್ಪಿಸಲು ನಿರೋಧದ ಕ್ರಮಗಳನ್ನು ಇನ್ನೂ ಕಠಿಣ ಮತಾರಿಯಾಗಿ ಕೈಗೊಳ್ಳಲಾಗುವುದು. ಗುಡಿಸುವವರ ಕೆಲಸದ ಬಗ್ಗೆ ಇರುವ ಲೋಪಗಳನ್ನು ಆರೋಗ್ಯಾಧಿಕಾರಿಗಳು ತಪ್ಪಿಸಿದ್ದಾರೆ

ಸುಂಕದ ವಸೂಲಿ ಬಗ್ಗೆ ಎಲ್ಲಾ ರೀತಿಯ ಪರಿಣಾಮಕಾರಿ ಕ್ರಮಗಳನ್ನೂ ಕೈಗೊಳ್ಳಲಾಗಿದೆ

ಅನಂತರ ಸಭೆಯು ಆಯವ್ಯಯವನ್ನು ಸುದೀರ್ಘವಾಗಿ ಪರಿಶೀಲಿಸಿ ಹಲವು ಮಾರ್ಪಾಡುಗಳೊಡನೆ ಅಂಗೀಕರಿಸಿತು

ಶ್ರಮದಾನ ಶಿಬಿರದ ಪ್ರಾರಂಭೋತ್ಸವ

ಸದ್ವಿದ್ಯಾ ಪಾಠಶಾಲೆಯ ವೀರ ಸೇವಾ ದಳದವರು ಶಾಲೆಯಲ್ಲಿ ಒಂದು ವಾರ ಕಾಲ ಶ್ರಮದಾನ ಕಾರ್ಯವನ್ನು ಕೈಗೊಂಡಿರುವರು ನಗರ ಸೇವಾ ದಳ ಸಂಚಾಲಕರಾದ ಶ್ರೀ ಎಂ ಗಂಗಾಧರ್‌ರವರು ಕಳೆದ ಬುಧವಾರ ಶಿಬಿರದ ಉದ್ಘಾಟನೆಯನ್ನು ನೆರವೇರಿಸಿದರು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಟಿ ವಿ ಜೋಯಿಸರು ಶ್ರಮದಾನದ ಮಹತ್ವದ ಬಗ್ಗೆ ಭಾಷಣ ಮಾಡಿದರು ಸಂಚಾಲಕರಾದ ಶ್ರೀ ಟಿ ಆರ್ ಕೃಷ್ಣಾಚಾರ್ಯರು ವಂದನಾರ್ಪಣೆ ಮಾಡಿದರು

ಸಂಸ್ಥಾನದಲ್ಲಿ ನಾರು ಹಂಚು ಕೈಗಾರಿಕೆಗೆ ಕೇಂದ್ರದ ಧನ ಸಹಾಯ

ನಾರು ಹಂಚು ಮತ್ತು ಮಡಕೆಗಳ ಕೈಗಾರಿಕೆಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಸಂಬಂಧವಾಗಿ ಕೇಂದ್ರ ಸರ್ಕಾರದವರು ಮೈಸೂರು ಸಂಸ್ಥಾನದಲ್ಲಿ ನಾರು ಹಂಚಿನ ತಯಾರಿಕೆಗಾಗಿ ೬,೦೦೦ ರೂ ಸಾಲ ಮತ್ತು ೪,೭೦೦ ರೂ ಧನ ಸಹಾಯವನ್ನು ಮಂಜೂರು ಮಾಡಿರುವರೆಂದು ಗೊತ್ತಾಗಿದೆ

ಹಣಕಾಸಿನ ಬಗ್ಗೆ ಆಂಧ್ರ ಸರ್ಕಾರಕ್ಕೆ ಕೇಂದ್ರದವರ ಎಚ್ಚರಿಕೆ

ಆಂಧ್ರ ಸರ್ಕಾರದವರು ನಿಗದಿಯಾಗಿರುವುದಕ್ಕಿಂತಲೂ ಹೆಚ್ಚು ಹಣವನ್ನು ವೆಚ್ಚ ಮಾಡುತ್ತಿರುವ ಬಗ್ಗೆ ಕೇಂದ್ರ ಸರ್ಕಾರದವರು ತೀವ್ರವಾಗಿ ಆಕ್ಷೇಪಿಸಿರುವರೆಂದೂ, ಇದೇ ರೀತಿ ವೆಚ್ಚವು ಮುಂದುವರಿದರೆ ಸಂಸ್ಥಾನ ಸರ್ಕಾರದ ಬಿಲ್ಲುಗಳನ್ನು ರಿಸರ್ವ್ ಬ್ಯಾಂಕು ವಾಪಸು ಕಳುಹಿಸಬೇಕಾಗುವುದೆಂದೂ ಎಚ್ಚರಿಕೆಯಾಯಲಾಗಿದೆಯೆಂದೂ ಗೊತ್ತಾಗಿದೆ ಎರಡು ವರ್ಷಗಳಲ್ಲಿ ಆಂಧ್ರದ ಆಯವ್ಯಯದಲ್ಲಿ ೧೧ ಕೋಟಿ ರೂ ಖೋತಾ ಬಂದಿರುವುದು ಸರ್ಕಾರದ ಸ್ಥಾಪನೆಯಾದಾಗ ಕೇಂದ್ರದವರು ಅದಕ್ಕೆ ೩೦ ಕೋಟಿ ರೂ ಸಾಲ ಕೊಟ್ಟಿದ್ದರು ಈಚೆಗೆ ೪೦ ಕೋಟಿ ರೂ ಸಾಲವನ್ನು ತೆಗೆಯಲಾಗಿದೆ

ಚಾಡ್‌ಬೆಟ್ ಪಾಕಿಸ್ತಾನದ್ದೆಂದು ವಿದೇಶಾಂಗ ಮಂತ್ರಿ ವಾದ

ಕಚ್ ಖಾರಿಯಲ್ಲಿರುವ ಚಾಡ್‌ಬೆಟ್ ದ್ವೀಪವು ಪಾಕಿಸ್ತಾನಕ್ಕೆ ಸೇರಿದುದೆಂದು ಅಲ್ಲಿನ ವಿದೇಶಾಂಗ ಮಂತ್ರಿ ಹಮೀದುಲ್ ಹಕ್ ಚೌಧರಿಯವರು ಅಲ್ಲಿನ ರಾಷ್ಟ್ರೀಯ ಸಭೆಯಲ್ಲಿ ತಿಳಿಸಿರುತ್ತಾರೆ ಭಾರತ ಮತ್ತು ಪಾಕಿಸ್ತಾನಗಳ ವಿಭಜನೆಯಾಗುವುದಕ್ಕೆ ಮುಂಚೆನಿಂದಲೂ, ಅನಂತರವೂ ಇದು ಸಿಂಧ್ ಪ್ರಾಂತದ ಥಾರ್‌ಪರ್ಕರ್ ಜಿಲ್ಲೆಗೆ ಸೇರಿರುವುದೆಂದೂ ಅವರು ಹೇಳಿರುವರು

ಹರಿಜನ ಕಾಲೊನಿಯಲ್ಲಿ ಸೇವಾ ದಳ ಶಿಬಿರ

ಮೈಸೂರಿನ ಜಲಪುರಿಯಲ್ಲಿರುವ ಹರಿಜನ ಕಾಲೋನಿಯಲ್ಲಿ ಭಾರತ ಸೇವಾ ದಳ ಶ್ರಮದಾನ ಶಿಬಿರದ ಪ್ರಾರಂಭೋತ್ಸವವನ್ನು ಕಳೆದ ಭಾನುವಾರ ಸಾರ್ವಜನಿಕ ವಿದ್ಯಾರ್ಥಿ ನಿಲಯದ ಸಂಸ್ಥಾಪಕರಾದ ಶ್ರೀ ಟಿ ಎಸ್ ಸುಬ್ಬಣ್ಣನವರು ನೆರವೇರಿಸಿದರು ಗ್ರಾಮದ ಯಜಮಾನ ಶ್ರೀ ರಂಗಪ್ಪನವರು ಅಧ್ಯಕ್ಷತೆ ವಹಿಸಿದ್ದರು ಇಲಾಖೆಯ ಮುಖಂಡರಾದ ಶ್ರೀ ಬಿ. ಬಾಲಯ್ಯನವರು ಮತ್ತು ನಗರ ಸೇವಾ ದಳ ಸಂಚಾಲಕರಾದ ಶ್ರೀ ಎಂ ಗಂಗಾಧರ್‌ರವರು ಭಾಷಣ ಮಾಡಿದರು

ರೇಣುಕ ಜಯಂತಿ ಮಹೋತ್ಸವ

ಮೈಸೂರು ಕೃಷ್ಣರಾಜ ಮೊಹಲ್ಲಾ ಬಸವೇಶ್ವರ ರಸ್ತೆಯಲ್ಲಿರುವ ಶ್ರೀ ಮಹಾಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ರೇಣುಕ ಜಯಂತಿ ಉತ್ಸವವು ನಡೆಯಿತು ಹಿಮಾಲಯದಿಂದ ಆಗಮಿಸಿರುವ ಹಿಮವತ್ಕೇದಾರ ಪೀಠಾಧಿಪತಿಗಳಾದ ಶ್ರೀ ಶ್ರೀ ಶಿವಯೋಗಿ ಸಿದ್ಧರಾದ ಯೋಗಿರಾಜ ಶ್ರೀ ಕೈಲಾಸಲಿಂಗ ಶಿವಾಚಾರ್ಯರವರ ನೇತೃತ್ವದಲ್ಲಿ ಕಳೆದ ಶನಿವಾರ ರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾ ಮಂಗಳಾರತಿ, ಪ್ರಸಾದ ವಿನಿಯೋಗಗಳೂ, ಸಾಯಂಕಾಲ ಶ್ರೀ ಶ್ರೀಗಳವರಿಂದ ರೇಣುಕರು ಮತ್ತು ರೇವಣಸಿದ್ಧರ ವಿಷಯವಾಗಿ ಉಪನ್ಯಾಸವೂ ನಡೆದುವು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೫ ಪಿಟೀಲು ೭.೧೫ ಸೌಂದರ ಕೃಷ್ಣಮೂರ್ತಿ ದೇವರ ನಾಮಗಳು. ೭.೪೦ ಮತ್ತು ೮.೧೫ ಎಂ ರಾಘವೇಂದ್ರರಾವ್ ವಾದ್ಯ ವಾದನ ಮಧ್ಯಾಹ್ನ ೧೨ ಎಲ್. ಎಸ್ ರಾಮಾ ಸಂಗೀತ ೧೨-೪೦ ಮತ್ತು ರಾತ್ರಿ ೧೦ ಎಸ್. ವೆಂಕಟರಮಣಯ್ಯ ಪಿಟೀಲು ೧ ವಿದ್ವಾಂಸರ ಸಂದರ್ಶನ ೨೦ ವನಿತಾ ಸಂಗೀತ ೧ ೩೦ ಪಿಟೀಲು ಮತ್ತು ಕೊಳಲು ೨ ಕರ್ನಾಟಕ ಸಂಗೀತ, ೨.೧೫ ಪ್ರೌಢ ಶಾಲೆಗಳಿಗಾಗಿ ೫-೪೦ ಹಿಂದೂಸ್ಥಾನಿ ಸಂಗೀತ ೬-೧೫ ಜನಪದ ಗೀತೆಗಳು. ೭.೪೦ ಭಕ್ತಿ ಗೀತೆ ೮ ನಿಮ್ಮ ಮೆಚ್ಚಿನ ಗೀತೆ ೮-೪೦ ದರ್ಬಾರ್, ೯.೧೫ ಶ್ರೀಮತಿ ವಿಶಾಲೆ ೯.೪೦ ಕನ್ನಡ ನಾಟಕ

ಬಳ್ಳಾರಿಯನ್ನು ಮೈಸೂರಿನಲ್ಲೇ ಉಳಿಸದುದಕ್ಕೆ ರಾಜೀನಾಮೆ

ಬಳ್ಳಾರಿ, ಸಿರುಗುಪ್ಪ ಮತ್ತು ಹೊಸಪೇಟೆಗಳನ್ನು ಆಂಧ್ರಕ್ಕೆ ಸೇರಿಸದೆ ಮೈಸೂರು ಸಂಸ್ಥಾನದಲ್ಲೇ ಉಳಿಸಿರುವ ಬಗ್ಗೆ ಕೇಂದ್ರ ಸರ್ಕಾರದ ನಿರ್ಧಾರದ ವಿರೋಧವಾಗಿ ಸಂಸ್ಥಾನ ಶಾಸನ ಸಭೆಯ ಬಳ್ಳಾರಿ ಸದಸ್ಯರಾದ ಮುಂಡ್ಲೂರು ಗಂಗಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ

ಹೋಳಿ ಹಬ್ಬದ ಘರ್ಷಣೆಯಲ್ಲಿ ೩ ಜನರ ಮರಣ

ಕಲ್ಕತ್ತದ ಒಂದು ಪ್ರದೇಶದಲ್ಲಿ ನೆನ್ನೆ ರಾತ್ರಿ ಹೋಳಿ ಹಬ್ಬದ ಸಮಾರಂಭದಲ್ಲಿ ಎರಡು ಗುಂಪುಗಳಿಗೆ ಘರ್ಷಣೆಯಾಗಿ ಮೂವರು ಮೃತಪಟ್ಟು, ೮ ಜನರಿಗೆ ಗಾಯಗಳಾಗಿವೆ. ಪಟಾಕಿಗಳು ಸಿಡಿದು ಗಾಯವಾಯಿತು ಪೊಲೀಸರು ೮೦ ಜನರನ್ನು ಬಂಧಿಸಿರುತ್ತಾರೆ

ಕಾಂಗ್ರೆಸ್ ಇರುವವರೆಗೆ ಮುಸ್ಲಿಂ ಲೀಗೂ ಇರುವುದು

ಭಾರತದಲ್ಲಿರುವ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಮಹಮದ್ ಇಸ್ಮಾಯಿಲರು ಹೇಳಿಕೆಯೊಂದನ್ನಿತ್ತು ದೇಶದಲ್ಲಿರುವ ೪॥ ಕೋಟಿ ಮುಸಲ್ಮಾನರ ಹಿತರಕ್ಷಣೆಗಾಗಿ ಮುಸ್ಲಿಂ ಲೀಗು ಇರಬೇಕೆಂದು ತಿಳಿಸಿರುತ್ತಾರೆ ೧೯೦೬ ರಲ್ಲಿ ಸ್ಥಾಪಿತವಾದ ಲೀಗ್ ಸಂಸ್ಥೆಯು ಕಾಂಗ್ರೆಸ್ ಇರುವವರೆಗೆ ಇರುವುದು ಅಗತ್ಯವೆಂದೂ ಲೀಗು ಇರಬಾರದೆಂದು ಹೇಳುವುದಾದರೆ, ಸ್ವಾತಂತ್ರ್ಯ ಬಂದನಂತರ ಕಾಂಗ್ರೆಸ್ಸು ಸಹ ಇರಲು ಅವಕಾಶವಿಲ್ಲವೆಂದೂ ಅವರು ಹೇಳಿರುತ್ತಾರೆ

ಮೈಸೂರು ಪೇಟೆ ಧಾರಣೆ

	ರೂ ಯಿಂದ			ರೂ ವರೆಗೆ		
ಕಡಲೆಕಾಯಿ	೧೭	೨	೦	೨೧	೮	೦
ಹರಳುಬೀಜ	೨೯	೦	೦	೩೪	೨	೦
ಹುಚ್ಚೆಳ್ಳು	೪೩	೦	೦			
ಹೊಂಗೆಬೀಜ	೧೭	೦	೦	೨೩	೨	೦
ಹುಣಸೆಬೀಜ	೪	೦	೦	[illegible]	೧೦	೦
ಹುರುಳಿ	೨೬	೬	೦	೨೮	೨	೦
ಹೆಸರು	೪೭	೪	೦			
ಹಲಸಂದೆ	೩೩	೦	೦	೩೨	೧೦	೦
ಧನಿಯ	೩೭	೨	೦			
ಕಡಲೆ	೩೬	೨	೦	೪೧	೮	೦
ಹುಣಸೇಹಣ್ಣು	೨	೧೨	೦	೬	೪	೦
ಸೀಗೆಕಾಯಿ	೭	೬	೦	೭	೪	೦
ಮೆಣಸಿನಕಾಯಿ	೧೦	೧೪	೦	೨೩	೬	೦
ತೆಂಗಿನಕಾಯಿ ೧೧೦೦	೧೪೧	೦	೦	೧೭೫	೮	೦

ರಣಜಿತ್ ★ 28-3 56 ರಿಂದ 3 ದಿನಗಳು ಮಾತ್ರ

ಶಿವಾಜಿ ಗಣೇಶ ನಟಿಸಿರುವ

ಅಂದನಾಳ್

31—3 56 ರಿಂದ ಅಪೋಘ ಪ್ರಾರಂಭ

ಎಸ್. ವರಲಕ್ಷ್ಮಿ ನಟಿಸಿರುವ ತೆಲುಗು ಚಿತ್ರ

★ ಕನಕತಾರ ★

ತಿರುವನಂತಪುರಕ್ಕೆ ಪಿ. ಎಸ್. ರಾಯರ ಆಗಮನ

ತಿರುವಾಂಕೂರು-ಕೊಚ್ಚಿ ರಾಜಪ್ರಮುಖರ ಸಲಹೆಗಾರರಾದ ಪಿ. ಎಸ್. ರಾಯರು ಮಂಗಳವಾರ ತಿರುವನಂತಪುರಕ್ಕೆ ವಿಮಾನದಲ್ಲಿ ಆಗಮಿಸಿದರು. ಅವರನ್ನು ರಾಜಪ್ರಮುಖರ ಆಪ್ತ ಕಾರ್ಯದರ್ಶಿಗಳು, ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳು ಮುಂತಾದವರು ಸ್ವಾಗತಿಸಿದರು. ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ, ಸಾಮಾನ್ಯ ಮನುಷ್ಯನ ಅಭಿವೃದ್ಧಿಗೆ ತಮ್ಮ ಕೈಲಾದುದನ್ನೆಲ್ಲಾ ಅಧಿಕಾರಿಗಳು ಮಾಡಬೇಕೆಂದೂ ತಾವು ಹಿಂದಿರುಗುವ ಮುಂಚೆ ಸಂಸ್ಥಾನವನ್ನು ಉತ್ತಮ ಸ್ಥಿತಿಗೆ ಬರುವಂತಾಗಬೇಕೆಂದೂ ತಿಳಿಸಿದರು ವಿದ್ಯಾವಂತರ ನಿರುದ್ಯೋಗವು ಸಂಸ್ಥಾನದಲ್ಲಿ ವಿಪರೀತವಾಗಿರುವುದೆಂದೂ, ಅದನ್ನು ನಿವಾರಿಸುವುದೇ ತಮ್ಮ ಪ್ರಥಮ ಕರ್ತವ್ಯವೆಂದೂ ಹೇಳಿದರು. ನಿಲ್ದಾಣದಲ್ಲಿ ಕಮ್ಯೂನಿಸ್ಟ್ ವಾದಿ ಪಕ್ಷೀಯರು ಕಪ್ಪು ಧ್ವಜಗಳನ್ನು ಪ್ರದರ್ಶಿಸಿ, 'ರಾಷ್ಟ್ರಾಧ್ಯಕ್ಷರ ಆಡಳಿತವು ಕೊನೆಗೊಳ್ಳಲಿ, ರಾಯರೇ ವಾಪಸು ಹೋಗಿ" ಎಂದು ಕೂಗಿದರು.

ನೆಹರೂರವರೊಡನೆ ರಷ್ಯದ ಉಪ ಪ್ರಧಾನಿಯವರ ಭೇಟಿ

ರಷ್ಯದ ಪ್ರಥಮ ಉಪ ಪ್ರಧಾನಿ ಅನಸ್ತಾಸ್ ಮಿಕೊಯಾನ್‌ರವರು ನೆನ್ನೆ ಕರಾಚಿಯಿಂದ ದೆಹಲಿಗೆ ಆಗಮಿಸಿದರು ರಷ್ಯದಲ್ಲಿ ಇತ್ತೀಚೆಗೆ ನಡೆದ ಕಮ್ಯೂನಿಸ್ಟರ ಕಾಂಗ್ರೆಸ್ಸಿನನಂತರ ತಮ್ಮ ದೇಶದಲ್ಲಿ ಆದ ಘಟನೆಗಳನ್ನು ಕುರಿತು ಮಿಕೊಯಾನ್‌ರವರು ನೆಹರೂರವರಿಗೆ ವಿವರಗಳನ್ನು ಇತ್ತರೆಂದು ಗೊತ್ತಾಗಿದೆ ನೆಹರೂರವರು ಇತ್ತೀಚೆಗೆ ಪಶ್ಚಿಮ ರಾಷ್ಟ್ರಗಳ ವಿದೇಶಾಂಗ ಮಂತ್ರಿಗಳೊಡನೆ ನಡೆಸಿದ ಮಾತುಕತೆಗಳ ಸಾರಾಂಶವನ್ನು ಅವರಿಗೆ ತಿಳಿಸಿದುದಾಗಿ ಹೇಳಲಾಗಿದೆ

ಚಾಮುಂಡೇಶ್ವರಿ ಟಾಕೀಸ್

ಅಲಿಬಾಬ ಮತ್ತು 40 ಕಳ್ಳರು

ನಾಳೆ ಕಡೇ ದಿನ

ಹುಂಡಿಗಳ ಮೂಲಕ ಸಾಲದ ವ್ಯವಸ್ಥೆ

ಹುಂಡಿಗಳ ಮೂಲಕ ಸಾಲದ ಸೌಲಭ್ಯವನ್ನು ಪಡೆದು ವ್ಯಾಪಾರೋದ್ಯಮಗಳನ್ನು ಸ್ಥಿರಪಡಿಸಿಕೊಳ್ಳಿರಿ. ಆಯಾ ಶಾಖೆಗಳಲ್ಲಿ ಈ ಸೌಲಭ್ಯವನ್ನು ಪಡೆಯಬಹುದು ವಿವರಗಳಿಗೆ ಶಾಖಾ ವ್ಯವಸ್ಥಾಪಕರನ್ನು ಕಾಣಿರಿ.–

ಯುನೈಟೆಡ್ ಕ್ರೆಡಿಟ್ ಕಂಪೆನಿ

ಭೂಪಾಳ್‌ವಾಲಾ, ಹರಿದ್ವಾರ್

Edited, Printed and Published by A. R. Nagarajan at Sadhvi Press, D. Subbiah Road, Mysore

CITY TUTORIAL COLLEGE, V. V. Market, Mysore

EVENING CLASSES – 6 to 9 P. M. Daily

★ MADRAS MATRICULATION CLASSES – For persons above 18 years No minimum qualification

★ MYSORE S S L C – Dec 1956 — All Subjects 6 to 9 P. M.

CLASSES IN FULL SWING : JOIN BEFORE IT IS TOO LATE

C. T. C. is the Oldest and the Best Institution with permanent STAFF, BUILDING, EQUIPMENT, LABORATORY, LIBRARY & R. R. Facilities

For Best Guidance Read C. T. C. PUBLICATIONS

ಚಾಮುಂಡೇಶ್ವರಿ ಟಾಕೀಸ್ ★ 30—3—56 ರಿಂದ : ಅಪೋಘ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

ಪದ್ಮಿನಿ ಪಿಕ್ಚರ್ಸ್‌ರವರ ಶ್ರೇಷ್ಠ ಕಾಣಿಕೆ

ಹೊನ್ನಪ್ಪಭಾಗವತರ್, ಬಾಲಕೃಷ್ಣ, ಲಲಿತ, ಬಿ ಸರೋಜ ರಮಾದೇವಿ ಮುಂತಾದವರು ಪಾತ್ರವಹಿಸಿರುವ

★ ಪಂಚರತ್ನ ★

(ಕನ್ನಡ ಚಿತ್ರ)

ಮೊದಲನೇ ನಾಲ್ಕು ವಾರ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸು ಮತ್ತು ರಿಯಾಯಿತಿಗಳನ್ನೂ ಮಣ್ಣ ಮಾಡಲಾಗಿದೆ

ರಿಜಿಸ್ಟರ್ಡ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೯] SADHVI : THURSDAY 29-3-1956 ಮೈಸೂರು ಗುರುವಾರ : ೨೯-೩-೧೯೫೬ [ಸಂಚಿಕೆ : [illegible]

ಕಾಶ್ಮೀರದ ಆಕ್ರಮಣ ವಿರುದ್ಧವಾಗಿ ಕಟ್ಜುರವರ ಎಚ್ಚರಿಕೆ

ರಾಜ ಮನೆತನದವರ ವಿರಾಮ ವೇತನ ಕ್ರಮಕ್ರಮವಾಗಿ ರದ್ದು

ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿಯವರ ವಿವರಣೆ

ಬೆಂಗಳೂರು ೨೮

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ವಿಧಾನ ಸಭೆಯಲ್ಲಿ ಪ್ರಾದೇಶಿಕ ಮುಖ್ಯ ರಾಜಕೀಯ ವಿರಾಮ ವೇತನಗಳ ಬಗ್ಗೆ ನಡೆದ ಚರ್ಚೆಗೆ ಉತ್ತರವಿತ್ತು, ಮೈಸೂರಿನ ಅರಮನೆ ಮನೆತನದವರ ವೇತನಗಳನ್ನು ಕ್ರಮಕ್ರಮವಾಗಿ ನಿಲ್ಲಿಸುವುದೇ ಮೈಸೂರು ಮತ್ತು ಕೇಂದ್ರ ಸರ್ಕಾರಗಳ ನೀತಿಯೆಂದು ತಿಳಿಸಿದರು. ರಾಜಕೀಯ ವಿರಾಮ ವೇತನಗಳು ಸಮಾಜದ ದಿಕ್ಕಿನ ಕಾಲದ ತತ್ವಕ್ಕೆ ವಿರೋಧವೆಂದು ಸೂಚಿಸಿದರು. ಈ ಬಗ್ಗೆ ಅನೇಕ ಸದಸ್ಯರ ಅಭಿಪ್ರಾಯಗಳನ್ನು ಮುಖ್ಯ ಮಂತ್ರಿಯವರು ಪುಷ್ಟೀಕರಿಸಿದರು.

ಮಹಾರಾಜರ ಮೂವರು ಸಹೋದರಿಯರಿಗೂ, ಇತರ ಸಂಬಂಧಿಕರಿಗೂ ವೇತನಗಳು ದೊರಕುತ್ತಿವೆಯೆಂದೂ, ಅವರುಗಳೊಡನೆ ಸಂಧಾನ ನಡೆಸಿದಾಗ, ರಾಜಕೀಯ ವಿರಾಮ ವೇತನವನ್ನು ಬಿಟ್ಟುಕೊಡಲು ಅವರುಗಳು ಸಮ್ಮತಿಸಲಿಲ್ಲವೆಂದೂ ಮುಖ್ಯ ಮಂತ್ರಿಯವರು ನುಡಿದರು.

ಮೈಸೂರು ಸಂಸ್ಥಾನವು ಭಾರತದಲ್ಲಿ ವಿಲೀನವಾದಾಗ ಆಗಿನ ಗೌರ್ನರ್ ಜನರಲ್ಲರಿಗೂ, ಮಹಾರಾಜರಿಗೂ ಆದ ಒಪ್ಪಂದದಂತೆ, ವಿರಾಮ ವೇತನಗಳನ್ನು ಪಡೆಯುತ್ತಿರುವವರ ಜೀವಿತ ಕಾಲದವರೆಗೂ ಅದನ್ನು ಕೊಡಬೇಕೆಂದು ಗೊತ್ತಾಗಿತ್ತು. ಅದರಂತೆ ಭವಿಷ್ಯದ ಮಹಾರಾಣಿಯವರ ನಿಧನದನಂತರ ಅವರಿಗೆ ಸಲ್ಲುತ್ತಿದ್ದ ವೇತನವನ್ನು ನಿಲ್ಲಿಸಲಾಯಿತು. ಈ ವಿಷಯಗಳಲ್ಲಿ ಮೈಸೂರು ಸರ್ಕಾರದವರು ಕಾನೂನು ಕ್ರಮ ಜರುಗಿಸಲು ಸಾಧ್ಯವಿಲ್ಲ. ಅದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಅವಶ್ಯಕ.

ಮೈಸೂರು ಮಹಾರಾಜರಿಗೆ ರಾಜಪ್ರಮುಖ ಸ್ಥಾನವು ಅನುವಂಶಿಕವಾಗಿ ಬಂದಿದೆ. ಮಹಾರಾಜರವಂಶಜರನ್ನು ರಾಜಪ್ರಮುಖರೆಂದು ಕರೆಯಲಾಗುವುದು. ಅವರ ಸಂಸ್ಥಾನ ಪುನರ್ವಿಂಗಡನೆ ಮಸೂದೆಯು ಬೇರೆ ಅಭಿಪ್ರಾಯವನ್ನು ಸೂಚಿಸಿದೆ. ಇವೆಲ್ಲವನ್ನೂ ಪರಿಶೀಲಿಸಬೇಕಾಗಿದೆ. ಆದ್ದರಿಂದ ಮುಂದೆ, ಅವು ಯಾವ ರೂಪ ತಾಳುವುದೆಂಬುದನ್ನು ಕಾದು ನೋಡಬೇಕಾಗಿದೆಯೆಂದು ಮುಖ್ಯ ಮಂತ್ರಿಯವರು ತಿಳಿಸಿದರು.

ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನರ ವಂಶದವರಿಗೆ, ಸರ್ಕಾರದ ಖಜಾನೆಯಿಂದ ವಿರಾಮ ವೇತನಗಳು ದೊರೆಯುತ್ತಿರುವುದಾಗಿಯೂ ... ನಿಗದಿಯಾದ ಗುಂಬಜ್ ವೇತನವನ್ನು ನಿಲ್ಲಿಸಬೇಕಾಗಿದೆಯೆಂದೂ ಅವರು ಹೇಳಿದರು.

ಹೈದ್ರಾಬಾದ್ ಸಂದರ್ಭಗಳಲ್ಲೂ ಆಯಾ ಸಂಸ್ಥಾನಗಳ ವಿಲೀನವಾದಮೇಲೆ ವೇತನಗಳನ್ನು ನಿಲ್ಲಿಸಲಾಗಿದೆ. ರಾಜಬಂಧುಗಳಿಗೆ ೧,೮೫,೦೦೦ ರೂಪಾಯಿಗಳನ್ನೂ, ಟಿಪ್ಪು ಮತ್ತು ಹೈದರ್ ಅವರ ವಂಶದವರಿಗೆ ೩,೫೦೦ ರೂ ಅಷ್ಟು ಕೊಡಲಾಗುತ್ತಿದೆಯೆಂದು ಅವರು ತಿಳಿಸಿದರು.

ಸೈಕಲ್ ಕದಿಯುತ್ತಿದ್ದ ವಿದ್ಯಾರ್ಥಿಯ ಬಂಧನ

ಮೈಸೂರು ೨೮

ನಗರದ ಸೇಂಟ್ ಫಿಲೋಮಿನಾ ಕಾಲೇಜಿನ ಇಂಟರ್‌ಮೀಡಿಯಟ್ ವಿದ್ಯಾರ್ಥಿ ಎಂ ಆರ್ ರಾಜಗೋಪಾಲ್ ಎಂಬಾತನು ನೆನ್ನೆ ಕೆನರಾ ಬ್ಯಾಂಕಿನ ಸಿಂಡಿಕೇಟಿನ ಎಳೆ ಬೈಸಿಕಲ್ಲನ್ನು ಕದಿಯುತ್ತಿದ್ದಾಗ ಪೊಲೀಸ ಸಬ್ ಇನ್ಸ್‌ಪೆಕ್ಟರ್ ... ಪೊಲೀಸರು ಆತನನ್ನು ಹಿಡಿದು ... ರಾಜಗೋಪಾಲ್ ಮತ್ತು ಎಸ್ ... ಬಂಧಿಸಿ ಇವರಿಂದ ಸೈಕಲ್ಲುಗಳನ್ನು ವಶಪಡಿಸಿಕೊಂಡರು.

ಡಿ. ಎಂ. ಸಿ ಮತ್ತು ಡಿ ಪಿ ಎಂ. ಪರೀಕ್ಷಾ ಫಲಿತಾಂಶ

ಕಳೆದ ಜನವರಿಯಲ್ಲಿ ನಡೆದ ಮೆಡಿಕಲ್ ಪರೀಕ್ಷೆಗಳ ಫಲಿತಾಂಶಗಳು ಈ ರೀತಿ ಇವೆ — ಡಿ ಎಂ ಸಿ-೧, ೨ ೩, ೪, ೫ ಮತ್ತು ೬ ನೆಯ ನಂಬರಿನವರು ಪ್ರಶಸ್ತಿ ಪಡೆದಿರುವರು. ಡಿ ಪಿ ಎಂ-೧, ೨, ೫, ೬ ಮತ್ತು ೭.

ವಿಶ್ವವಿದ್ಯಾಲಯದ ವಿಶೇಷ ಉಪನ್ಯಾಸ

ಡಾ॥ ಡಬ್ಲ್ಯು ಎಸ್ ವೊಯ್ಸ್‌ಟಿನ್ಸ್ಕಿಯವರು ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿಶ್ವವಿದ್ಯಾಲಯದ ವಿಶೇಷೋಪನ್ಯಾಸಗಳ ಅಂಗವಾಗಿ "ಪೇಜಸ್ ಎಕನಾಮಿಕ್ಸ್ ಆಫ್ ದಿ ವರ್ಲ್ಡ್" ಎಂಬ ವಿಷಯವಾಗಿ ಭಾಷಣ ಮಾಡುವರು. ಕಾಲೇಜಿನ ಅರ್ಥಶಾಸ್ತ್ರ ಪ್ರೊಫೆಸರ್ ಡಾ॥ ಎಂ ಹೆಚ್ ಗೋಪಾಲ್‌ರವರು ಅಧ್ಯಕ್ಷತೆ ವಹಿಸುವರು. ಸಕಲರಿಗೂ ಆಹ್ವಾನವಿದೆ.

ಚೌದ್ರಿ ಕೃಷ್ಣಯ್ಯ ಶೆಟ್ಟರ ನಿಧನ

ಮೈಸೂರು ಅಶೋಕ ರಸ್ತೆಯಲ್ಲಿ ಸಂಸ್ಥಾಪಕರಾಗಿದ್ದ ಶ್ರೀ ಚೌದ್ರಿ ಕೃಷ್ಣಯ್ಯಶೆಟ್ಟರು ಸುಮಾರು ೬ ತಿಂಗಳಿಂದಲೂ ಪ್ರಾಣ ರೋಗದಿಂದ ನರಳುತ್ತಿದ್ದು ನೆನ್ನೆ ಬೆಳಗ್ಗೆ ತಮ್ಮ ೭೦ನೇ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಪಡುತ್ತೇವೆ. ಇವರು ದೈವಭಕ್ತರಾಗಿದ್ದು ಅನೇಕ ದಾನಧರ್ಮಗಳನ್ನು ಮಾಡಿಸುವರು. ಸುಬ್ರಹ್ಮಣ್ಯದಲ್ಲಿ ಒಂದು ಛತ್ರವನ್ನೂ ಸಹ ಕಟ್ಟಿಸಿರುವರು. ಅವರಿಗೆ ಐದು ಪುತ್ರರೂ, ಇಬ್ಬರು ಪುತ್ರಿಯರೂ ಇರುವರು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ, ಬಂಧುವರ್ಗದವರಿಗೆ ಅನುತಾಪವನ್ನು ಸೂಚಿಸುತ್ತೇವೆ.

ಅನೆಸಾರೋಟು ಬೀದಿಯಲ್ಲಿ ದೇವಯ್ಯ ಎಂಬಾತನು ಸುಣ್ಣ ಅಡುತ್ತಿದ್ದುದನ್ನು ಪತ್ತೆ ಹಚ್ಚಿ ರೂ. ೯-೩-೦ ಅನ್ನು ವಶಪಡಿಸಿಕೊಳ್ಳಲಾಗಿದೆ.

ಬೊಂಬಾಯಿಯಲ್ಲಿ ಪುನಃ ೪೧ ಜನರ ಬಂಧನ

ಬೊಂಬಾಯಿಯಲ್ಲಿ ಸಂಯುಕ್ತ ಮಹಾರಾಷ್ಟ್ರ ಪರಿಷತ್ತು ಮತ್ತು ಸಂಯುಕ್ತ ಮಹಾರಾಷ್ಟ್ರದ ಪರ ಇರುವ ಕಾಂಗ್ರೆಸ್ಸಿನವರ ಸಮ್ಮೇಳನದ ೪೧ ಜನ ಸ್ವಯಂಸೇವಕರನ್ನು ಬಂಧಿಸಲಾಯಿತು. ಅವರುಗಳು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರೆಂಬುದೇ ದಸ್ತಗಿರಿಗೆ ಕಾರಣ.

ಕಾಶ್ಮೀರದ ಮೇಲೆ ಧಾಳಿಯಾದರೆ ಬಲವಾಗಿ ಎದುರಿಸಲು ಸಿದ್ಧ

ಕೇಂದ್ರ ರಕ್ಷಣಾ ಮಂತ್ರಿ ಕಟ್ಜುರವರ ಘೋಷಣೆ

ನೆನ್ನೆ ಅಲಹಾಬಾದಿನ ಸಾರ್ವಜನಿಕ ಸಭೆಯೊಂದರಲ್ಲಿ ಕೇಂದ್ರ ರಕ್ಷಣಾ ಮಂತ್ರಿ ಕೈಲಾಸನಾಥ ಕಟ್ಜುರವರು ಭಾಷಣ ಮಾಡಿ, ಪಾಕಿಸ್ತಾನದ ಮೇಲೆ ಭಾರತವು ಆಕ್ರಮಣದ ಉದ್ದೇಶವನ್ನೇನೂ ಹೊಂದಿಲ್ಲವೆಂದೂ, ಭಾರತದ ಯಾವ ಭಾಗದ ಮೇಲೆ ಆಗಲಿ ಧಾಳಿ ನಡೆದರೆ ನಮ್ಮಲ್ಲಿ ಕಡೆಯ ತೊಟ್ಟು ರಕ್ತವಿರುವವರೆಗೂ ನಮ್ಮ ದೇಶವನ್ನು ನಾವು ರಕ್ಷಿಸುವೆವೆಂದೂ ತಿಳಿಸಿದರು. ಕಾಶ್ಮೀರದ ಬಗ್ಗೆ ಪಾಕಿಸ್ತಾನದ ಹಕ್ಕು ಸ್ಥಾಪನೆ ವಿಷಯವನ್ನು ಪ್ರಸ್ತಾಪಿಸಿ, ಕಾಶ್ಮೀರವು ಭಾರತದ ಭಾಗವೆಂಬುದಾಗಿ ಭಾರತದ ರಾಜ್ಯಾಂಗವು ತಿಳಿಸುತ್ತದೆಂದು ಸಾರಿದರು. ಕಾಶ್ಮೀರದ ಪ್ರಧಾನಿ ಬಕ್ಷಿ ಗುಲಾಂ ಮಹಮದ್‌ರವರೂ ಸಹ ಅದೇ ವಿಷಯವನ್ನೇ ಹೇಳಿರುವುದಾಗಿಯೂ ತಿಳಿಸಿದರು. ಯಾರೇ ಆಗಲಿ ಕಾಶ್ಮೀರದ ಯಾವ ಭಾಗದ ಮೇಲಾದರೂ ಧಾಳಿ ನಡೆಸಿದರೆ ಭಾರತದ ಮೇಲೆ ಧಾಳಿಯಾದಂತೆ ಭಾವಿಸಿ, ಎಲ್ಲ ಶಕ್ತಿಯನ್ನೂ ಉಪಯೋಗಿಸಿ ಹೋರಾಡಲು ಸಿದ್ಧವಿರುವುದಾಗಿ ಅವರು ಸ್ಪಷ್ಟಪಡಿಸಿದರು.

ಹೋಳಿಹಬ್ಬದ ಪುಂಡಾಟಿಕೆಯಲ್ಲಿ ಮಕ್ಕಳಿಬ್ಬರ ಮರಣ

ಮೊರಾದಾಬಾದು ಬಳಿ ಇರುವ ... ಎಂಬಲ್ಲಿನ ತರಕಾರಿ ಅಂಗಡಿ ಸಾಲಿನಲ್ಲಿ ಹೋಳಿಹಬ್ಬದ ಸಮಾರಂಭ ನಡೆಯುತ್ತಿದ್ದಾಗ, ಹಲವು ಪುಂಡರು ಬೆಂಕಿ ಹಚ್ಚಿದ ಪರಿಣಾಮವಾಗಿ ಸುಮಾರು ಅಂಗಡಿಗಳು ಮತ್ತು ಮೂರು ತರಕಾರಿ ಸ್ಟಾಲುಗಳು ಸುಟ್ಟುಹೋಗಿರುವುದಲ್ಲದೆ, ಇಬ್ಬರು ಬಾಲರು ಉಸಿರು ಸಿಕ್ಕಿಕೊಂಡು ಮೃತಪಟ್ಟಿರುತ್ತಾರೆ.

ಮುನ್ಸಿಪಲ್ ಹರಿಂದ ಬಸ್ ಓವರ್‌ಲೋಡ್ ಪತ್ತೆ

ನಗರದ ದ್ವಿತೀಯ ಮುನ್ಸೀಫರಾದ ಶ್ರೀ ನಾಗರಾಜರಾಯರು ನೆನ್ನೆ ಟಿ ನರಸೀಪುರಕ್ಕೆ ಅನಿರೀಕ್ಷಿತ ಭೇಟಿಯಿತ್ತು, ಬಸ್ಸು ಓವರ್‌ಲೋಡಿನ ಬಗ್ಗೆ ಪರಿಶೀಲನ ನಡೆಸಿದರು. ಹದಿನೆಂಟು ಜನ ಕೂರುವ ಬಸ್ಸಿನಲ್ಲಿ ೪೦ ಜನ ಪ್ರಯಾಣಿಕರಿದ್ದರೆಂದೂ, ಆ ಪೈಕಿ ಆರು ಮಂದಿ ಪೊಲೀಸು ಕಾನ್ಸ್‌ಟೇಬಲ್ಲುಗಳೆಂದೂ ಗೊತ್ತಾಗಿದೆ.

ವಿಧಾನ ಪರಿಷತ್ತಿಗೆ ಪದವೀಧರರ ಕ್ಷೇತ್ರದ ಚುನಾವಣಾ ಅಭ್ಯರ್ಥಿಗಳು

ಸಂಸ್ಥಾನದ ವಿಧಾನ ಪರಿಷತ್ತಿನಲ್ಲಿ ತೆರವಾಗಿರುವ ಪದವೀಧರರ ಕ್ಷೇತ್ರದ ಒಂದು ಸ್ಥಾನಕ್ಕೆ ನಡೆಯಲಿರುವ ಚುನಾವಣೆಗೆ ಶ್ರೀಗಳಾದ ಎನ್ ಶ್ರೀನಿವಾಸಮೂರ್ತಿ, ಎಂ ಎಲ್. ಶ್ರೀಕಂಠಯ್ಯ ಮತ್ತು ಕೆ. ಲಕ್ಷ್ಮೀಧರರವರುಗಳು ನಾಮಪತ್ರ ಸಲ್ಲಿಸಿದ್ದಾರೆ. ನಾಳೆ ದಿನ ಅವುಗಳ ಪರಿಶೀಲನೆಯಿದೆ. ನಾಮಪತ್ರಗಳ ವಾಪಸಿಗೆ ಏಪ್ರಿಲ್ ೨ನೇ ತಾರೀಖು ಕೊನೆಯ ದಿನವಾಗಿದೆ. ಮೇ ೨ನೇ ತಾರೀಖು ಸಂಜೆ ೫ ಗಂಟೆವರೆಗೆ ಚುನಾವಣೆ ನಡೆಯುವುದು.

ಸಂಸ್ಥಾನಾದ್ಯಂತ ಬಸ್ ರಾಷ್ಟ್ರೀಕರಣಕ್ಕೆ ೬ ಕೋಟಿ ರೂ.

ಪೂರ್ಣ ರಾಷ್ಟ್ರೀಕರಣದ ಅವಧಿ ತಿಳಿಸಲು ಸಾಧ್ಯವಿಲ್ಲವೆಂದು ಸಚಿವರ ಹೇಳಿಕೆ

(ಸ್ವಂತ ವರದಿಗಾರ) ಬೆಂಗಳೂರು ೨೮

ಈ ದಿನ ವಿಧಾನ ಸಭೆಯ ಪ್ರಶ್ನೋತ್ತರ ಕಾಲದಲ್ಲಿ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಮಾತನಾಡಿ, ಸಂಸ್ಥಾನಾದ್ಯಂತ ಬಸ್ಸುಗಳನ್ನು ರಾಷ್ಟ್ರೀಕರಣ ಮಾಡುವುದಕ್ಕೆ ೬ ಕೋಟಿ ರೂ ಬೇಕಾಗುವುವೆಂದೂ, ಅಲ್ಲದೆ ಯಾವಾಗ ರಾಷ್ಟ್ರೀಕರಣವನ್ನು ಸಂಪೂರ್ಣವಾಗಿ ಮಾಡಲಾಗುವುದೆಂದು ತಿಳಿಸಲು ಸಾಧ್ಯವಿಲ್ಲವೆಂದೂ ಹೇಳಿದರು.

ಕೈಗಾರಿಕಾ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಮತ್ತೊಂದು ಪ್ರಶ್ನೆಗೆ ಉತ್ತರವಿತ್ತು, ಹೊನ್ನೆಮರದ ಯೋಜನೆಯು ಕಾರ್ಯಗತವಾಗುವಾಗ, ಮುಳುಗಡೆ ಆಗುವ ಪ್ರದೇಶದ ಜನರಿಗೆ ಪರಿಹಾರ ಒದಗಿಸುವ ಬಗ್ಗೆ ಪರಿಶೀಲನೆ ನಡೆಸಲು ಸಮಿತಿಯೊಂದನ್ನು ರಚಿಸಲಾಗುವುದೆಂದು ತಿಳಿಸಿದರು.

ವಿಶ್ವವಿದ್ಯಾಲಯದ ಮಸೂದೆಯನ್ನು ಸಾಧ್ಯವಾದರೆ ಇದೇ ಅಧಿವೇಶನದಲ್ಲಿ ಮಂಡಿಸಲಾಗುವುದೆಂದೂ, ಇಲ್ಲದಿದ್ದರೆ ಮೇ ತಿಂಗಳಲ್ಲಿ ಅಧಿವೇಶನವನ್ನು ಕರೆಯಲಾಗುವುದೆಂದೂ, ವಿದ್ಯಾ ಸಚಿವರು ನುಡಿದರು.

ಸಂಸ್ಕೃತಿ ಪ್ರಚಾರ ಯೋಜನೆಯನ್ನು ಕೈ ಬಿಡಬೇಕೆಂದು ಸೂಚಿಸಿ ಬಂದಿರುವ ವಿಶೇಷ ನಿರ್ಣಯವನ್ನು ಬರುವ ತಿಂಗಳು ೫ನೇ ತಾರೀಖು ಚರ್ಚೆಗೆ ತೆಗೆದುಕೊಳ್ಳಲಾಗುವುದೆಂದು ಅಧ್ಯಕ್ಷರು ಸೂಚಿಸಿದರು.

ಅಪೆಕ್ಸ್ ಬ್ಯಾಂಕಿಗೆ ೨೦ ಲಕ್ಷ ರೂ. ಸಾಲ

ರಿಸರ್ವ್ ಬ್ಯಾಂಕಿನಿಂದ ಮಧ್ಯಮ ಅವಧಿಯ ಸಾಲವಾಗಿ ೨೫ ಲಕ್ಷ ರೂ ಗಳನ್ನು ಈ ವರ್ಷ ಪಡೆದುಕೊಳ್ಳಲಾಗುವುದೆಂದೂ, ೫೬-೫೭ ರಲ್ಲಿ ೧ ಕೋಟಿ ರೂ. ಅಲ್ಪಾವಧಿ ಸಾಲ ಮತ್ತು ೨೫ ಲಕ್ಷ ರೂ ಮಧ್ಯಮ ಅವಧಿ ಸಾಲವನ್ನು ಪಡೆಯಲಾಗುವುದೆಂದೂ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷ ಶ್ರೀ ಹೆಚ್ ಎಸ್. ಸೀತಾರಾಂರವರು ತಿಳಿಸಿರುತ್ತಾರೆ.

ಮೈಸೂರು ಕರುಬರಿಗೆ ಬಿಜಾಪುರದಲ್ಲಿ ಗೃಹ ಕೈಗಾರಿಕೆ ಶಿಕ್ಷಣ

ಗೃಹ ಮತ್ತು ಸಣ್ಣ ಕೈಗಾರಿಕೆಗಳಲ್ಲಿ ತರಬೇತಿ ಪಡೆಯಲು ಬಿಜಾಪುರಕ್ಕೆ ಹಲವರನ್ನು ಸಂಸ್ಥಾನದಿಂದ ಕಳುಹಲಾಗುವುದೆಂದು ಕೈಗಾರಿಕಾ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ತಿಳಿಸುತ್ತಾರೆ. ಸಣ್ಣ ಉದ್ಯಮಗಳನ್ನು ನಡೆಸಲು ಉತ್ಸಾಹಶಾಲಿಗಳಾದವರಿಗೆ ಸಹಾಯವನ್ನು ನೀಡಲಾಗುವುದೆಂದೂ ಅವರು ಹೇಳುತ್ತಾರೆ.

ವಿಳ ಕೊಂಬಲದಲ್ಲಿ ಪತಿಪತ್ನಿಯರ ಮರಣ

ಕಾಶರಗೋಡಿನಲ್ಲಿ ಕಳೆದ ೨೦ನೇ ತಾರೀಖು ಶ್ರೀಮತಿ ... ಎಂಬಾಕೆಯು ಮೃತರಾದರೆಂದೂ, ಮರುಕ್ಷಣದಲ್ಲೇ ಅವರ ಪತಿಯು ನಿಧನ ಹೊಂದಿದರೆಂದೂ ವರದಿಯಾಗಿದೆ.

ನಾಗಾ ದಂಗೆ ಅಡಗಿಸಲು ಭಾರತ ಸೈನ್ಯದ ಉಗ್ರ ಕ್ರಮ

ಅಸ್ಸಾಮಿನ ನಾಗಾ ಬೆಟ್ಟಗಳಲ್ಲಿ ದಂಗೆಕೋರರನ್ನು ಅಡಗಿಸಲು ಇದೇ ಮೊದಲಿಗೆ ಭಾರತದ ಸೈನ್ಯವು ಕಾರ್ಯಾಚರಣೆಯಲ್ಲಿ ತೊಡಗಿರುತ್ತದೆಂದು ವರದಿಯಾಗಿದೆ. ಆ ಪ್ರದೇಶದಲ್ಲಿ ಪ್ರತಿಬಂಧಕಾಜ್ಞೆಯನ್ನೂ, ರಾತ್ರಿ ಹೊತ್ತು ಕರ್ಫ್ಯೂವನ್ನೂ ವಿಧಿಸಲಾಗಿದೆ. ಅಸ್ಸಾಂ ಸೈನ್ಯ ಮತ್ತು ಪೊಲೀಸರಿಗೆ ಸಹಾಯ ಮಾಡಲು ಭಾರತದ ಸೈನ್ಯಗಳು ಅಲ್ಲಿಗೆ ಹೋಗಿವೆ.

ದೆಹಲಿ ಕರ್ನಾಟಕ ಸಂಘದಲ್ಲಿ ನಾಟಕ ಪ್ರದರ್ಶನ

ದೆಹಲಿಯಲ್ಲಿರುವ ಕರ್ನಾಟಕ ಸಂಘದ ಸದಸ್ಯರು ಕಳೆದ ಗುರುವಾರ ತಾರೀಕು ಶ್ರೀ ದಾಶರಥಿ ದೀಕ್ಷಿತರ "ಅಳಿಯ ದೇವರು" ಮತ್ತು ಶ್ರೀ ಗುಂಡು ಮತ್ತು ಶ್ರೀ ಭಗವಾನ್‌ರವರ "ಪುಂಗನೂರು ಶಾಮಯ್ಯನವರ ಪೀಕಲಾಟ" ಎಂಬ ನಾಟಕಗಳನ್ನು ಉತ್ತಮವಾಗಿ ಪ್ರದರ್ಶಿಸಿದರು. ದೆಹಲಿಯಲ್ಲಿರುವ ಅನೇಕ ಕನ್ನಡಿಗರು ಸೇರಿದ್ದರು.

ಶನೇಶ್ವರ ಮತ್ತು ಶ್ರೀರಾಮ ಮಂದಿರದ ಆರಂಭ

ಹಿನಕಲ್ ಗ್ರಾಮದಲ್ಲಿ ನೂತನವಾಗಿ ಕಟ್ಟಿರುವ ಶ್ರೀ ಶನೇಶ್ವರ ಮತ್ತು ಶ್ರೀ ರಾಮ ಮಂದಿರದ ಆರಂಭೋತ್ಸವವನ್ನು ನಾಳೆ ಸಂಜೆ ೫ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಶಂಕರರಾಯರು ನೆರವೇರಿಸುವರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ಸಿಕ್ಸಾಪಟ್ಟಿ ಗಾಡಿ ಹೊಡೆದು ದೀಪದ ಕಂಭಕ್ಕೆ ಜಖಂ ಮಾಡಿದ್ದಕ್ಕೆ ದಂಡ

ಸಿಂಗ್ರಿ ಎಂಬುವನು ನೆನ್ನೆ ಇರ್ವಿನ್ ರಸ್ತೆಯಲ್ಲಿ ಎತ್ತಿನ ಗಾಡಿಯನ್ನು ಸಿಕ್ಸಾಪಟ್ಟಿ ಬಿಟ್ಟು ದೀಪದ ಕಂಭಕ್ಕೆ ಡಿಕ್ಕಿ ಹೊಡಿಸಿ, ಅದು ನುಚ್ಚು ನೂರಾಯಿತೆಂದು ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ದ್ವಿತೀಯ ನಗರ ನ್ಯಾಯಾಧೀಶರು ನೆನ್ನೆ ಅಪರಾಧಿಗೆ ೧೦ ರೂ ದಂಡ ವಿಧಿಸಿದರು.

○ ಪುಟ್ಟಸ್ವಾಮಿ ಲಾರಿ ಸರ್ವಿಸ್ಸಿನ ಡ್ರೈವರ್ ಪುಟ್ಟಸ್ವಾಮಿ ಎಂಬಾತನು ಅಶೋಕಾ ರಸ್ತೆಯಲ್ಲಿ ಬಹಳ ಹೊತ್ತು ಲಾರಿಯನ್ನು ನಿಲ್ಲಿಸಿ ಸಂಚಾರಕ್ಕೆ ಅಡಚಣೆ ಮಾಡಿದುದಕ್ಕಾಗಿ ಆತನಿಗೆ ನೆನ್ನೆ ೧೦ ರೂ ದಂಡ ಬಿದ್ದಿತು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ೫೬೫ ರೂ. ನಿಧಿ

ಕೃಷ್ಣರಾಜನಗರ ೨೮

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರ ಗೌರವಾರ್ಥವಾಗಿ ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕೃಷ್ಣರಾಜನಗರದ ಪೌರಸಭೆಯವರು ಮೊನ್ನೆ ಭಾರಿ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಹೆಣ್ಣು ಮಕ್ಕಳಿಂದ ದೇವತಾ ಪ್ರಾರ್ಥನೆಯಾದಕೂಡಲೆ ಶ್ರೀ ಗಮಕ ವಿದ್ವಾನ್ ಸಿ ಕೆ ಪುಟ್ಟಣ್ಣಯ್ಯನವರು ಪದ್ಯಮಾಲಿಕೆಯನ್ನು ಹಾಡಿದರು. ಶ್ರೀಮತಿ ಗೌರಮ್ಮನವರಿಂದ ಭಾರತವಾಚನವಾಯಿತು. ಪೌರಸಭಾಧ್ಯಕ್ಷ ಶ್ರೀ ಹೆಚ್ ಎಂ ಹಿರಣ್ಣಯ್ಯನವರು ಚನ್ನಯ್ಯನವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು. ಇದೇ ಸಂದರ್ಭದಲ್ಲಿ ಕಾಂಗ್ರೆಸ್ ನಿಧಿಗಾಗಿ ೫೬೫ ರೂ ಗಳನ್ನು ಅರ್ಪಿಸಲಾಯಿತು. ಕಾಂಗ್ರೆಸ್ ಅಧ್ಯಕ್ಷರು ಭಾಷಣ ಮಾಡಿದ ಮೇಲೆ ವಂದನಾರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು.

ನೆಹರೂ ಮೇಲೆ ಹೋಳಿ ಹಬ್ಬದ ರಂಗು

ಮೊನ್ನೆ ಹೋಳಿಹಬ್ಬದ ಪ್ರಯುಕ್ತ ಪ್ರಧಾನಿ ನೆಹರೂರವರು ರಾಷ್ಟ್ರಪತಿ ಭವನಕ್ಕೆ ತೆರಳಿ ರಾಷ್ಟ್ರಾಧ್ಯಕ್ಷರ ಹಣೆ ಮತ್ತು ಮುಖದಮೇಲೆ ಗುಲಾಲನ್ನು ಬಳಿದರು. ನಂತರ ಅದೇ ಭವನದಲ್ಲಿದ್ದ ರಷ್ಯದ ಉಪ ಪ್ರಧಾನಿ ಮಿಕೊಯನ್ನರ ಹಣೆ ಮೇಲೂ ಗುಲಾಲನ್ನು ಇಟ್ಟರು. ಆದಾದಮೇಲೆ ಅವರು ತಮ್ಮ ಭವನಕ್ಕೆ ಹಿಂದಿರುಗಿದಾಗ ಅವರ ಆಪ್ತ ಕಾರ್ಯದರ್ಶಿಯವರಿಂದ ಜವಾನರವರೆಗೆ ಎಲ್ಲರೂ ನೆಹರೂರವರ ಮುಖ ಮತ್ತು ಬಟ್ಟೆಗೆ ರಂಗನ್ನು ಹಾಕಿ ನಲಿದಾಡಿದರು.

ರಷ್ಯದಿಂದ ಭಾರತಕ್ಕೆ ತಾಂತ್ರಿಕ ಸಹಾಯಕ್ಕಾಗಿ ಕೋರಿಕೆ

ರಷ್ಯದ ಉಪ ಪ್ರಧಾನಿ ಮಿಕೊಯನ್‌ರವರು ನೆನ್ನೆ ಕೇಂದ್ರ ಕೈಗಾರಿಕೆ ಮತ್ತು ವಾಣಿಜ್ಯ ಮಂತ್ರಿ ಟಿ ಟಿ ಕೃಷ್ಣಮಾಚಾರಿ ಮತ್ತು ಪ್ರಕೃತಿ ಸಂಪತ್ತಿನ ಮಂತ್ರಿ ಕೆ ಡಿ ಮಾಳವೀಯರೊಡನೆ ಉಭಯ ರಾಷ್ಟ್ರಗಳ ನಡುವೆ ವ್ಯಾಪಾರ ಹೆಚ್ಚಿಸುವುದು, ತಾಂತ್ರಿಕ ಸಹಕಾರ ಮುಂತಾದುವುಗಳ ಬಗ್ಗೆ ಚರ್ಚೆ ನಡೆಸಿದರು. ಯಂತ್ರ ನಿರ್ಮಾಣ, ನಾಗರಿಕ ವಿಮಾನ ಹಾರಾಟವನ್ನು ಅಭಿವೃದ್ಧಿಗೊಳಿಸುವುದು, ಕೃತಕ ರಬ್ಬರ್ ತಯಾರಿ ಮುಂತಾದುವುಗಳ ಬಗ್ಗೆ ಭಾರತದ ಪ್ರತಿನಿಧಿಗಳು ರಷ್ಯದ ಸಹಾಯವನ್ನು ಕೇಳಿದುದಾಗಿ ಗೊತ್ತಾಗಿದೆ.

ಮೈಸೂರು ಪೇಟೆ ಧಾರಣೆ

	ರೂ. ಮುಂತ	ರೂ. ಜರಿಗೆ
ಕಡಲೆಕಾಯಿ	[illegible]	[illegible]
ಹರಳುಬೀಜ	[illegible]	
ಹುಚ್ಚೆಳ್ಳು	[illegible]	
ಹೊಂಗೆಬೀಜ	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆ	[illegible]	
ಅವರೆ	[illegible]	[illegible]
ತೊಗರಿ	[illegible]	
ಧನಿಯ	[illegible]	
ಹಿಪ್ಪೆಬೀಜ	[illegible]	
ಹುಣಸೇಬೀಜ	[illegible]	[illegible]
ಬೆಳ್ಳುಳ್ಳಿ	[illegible]	[illegible]
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

Edited, Printed and Published by A R Nagarajan at Sadhvi Press O Subbiah Road, Mysore

[illegible]

SREE GANESH TALKIES
From 29-3-56 For 2 days
HIT PARADE OF 1951
Starring—Estelita of "Fabulous Senorita" fame
Gala Release on 31-3-56
Paramount's
THE COUNTRY GIRL
With—Bing Crosby, Grace Kelly & William Holden

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ತರಹದ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುವುವು
ಒಂದು ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911)

ಮೋತಿಲಾಲ್ ಟಾಕೀಸ್
30-3-56ನೇ ಶುಕ್ರವಾರದಿಂದ
ಅಮೋಘ ಪ್ರಾರಂಭ
ಹರಿಭಕ್ತ
(ಕನ್ನಡ)
ಪಾತ್ರ - ಪಂಡರಿಬಾಯಿ, ರಾಜಕುಮಾರ್, ನರಸಿಂಹರಾಜು
ಮೈನಾವತಿ

ವಿಶ್ವ ವಿಖ್ಯಾತ ಸೋವಿಯೆಟ್ ರಷ್ಯದ ಅಂಗಸಾಧನಾ ಪ್ರವೀಣರ ಪ್ರದರ್ಶನ
ತಾರೀಖು 7—4—56 ನೇ ಶನಿವಾರ
ಸಂಜೆ 5 ರಿಂದ 8 ಗಂಟೆವರೆಗೆ
ಸೋವಿಯೆಟ್ ಅಂಗಸಾಧನಾ ಪ್ರವೀಣರಿಂದ
ದೊಡ್ಡಕೆರೆ ಮೈದಾನದಲ್ಲಿ ಪ್ರದರ್ಶನವನ್ನು ಏರ್ಪಡಿಸಿದೆ
★
ಪ್ಯಾರಲಲ್ ಬಾರ್ — ಫ್ಲೋರ್ ವರ್ಕ್ಸ್
ರೋಮನ್ ರಿಂಗ್ಸ್ — ಸಾಮೂಹಿಕ ಸಾಧನೆಗಳು
★
ಇನ್ನೂ ಮುಂತಾದ ವ್ಯಾಯಾಮ ಪ್ರದರ್ಶನಗಳನ್ನು ವಿದ್ಯುದ್ದೀಪ ಸಜ್ಜಿತ ಆವರಣದಲ್ಲಿ ಪ್ರದರ್ಶಿಸಲಾಗುವುದು
★
ಇದರಲ್ಲಿ 10 ಜನ ಗಂಡಸರೂ ಮತ್ತು 6 ಜನ ಹೆಂಗಸರೂ ಭಾಗವಹಿಸುತ್ತಾರೆ
★
ಮೈಸೂರಿನ ಮಹಾ ಜನಗಳು ಮತ್ತು ಕ್ರೀಡಾಭಿಮಾನಿಗಳು ಸಹಸ್ರಾರು ಸಂಖ್ಯೆಯಲ್ಲಿ ಹಾಜರಾಗಿ ಸೋವಿಯೆಟ್ ಅತಿಥಿಗಳಿಗೆ ಅಭೂತಪೂರ್ವ ಸ್ವಾಗತ ನೀಡಬೇಕೆಂದು ಕೋರಿದೆ. ಈಗಾಗಲೇ ಹಿಂದೂಸ್ತಾನದ ಪ್ರಧಾನ ನಗರಗಳಲ್ಲಿ ಇವರ ಅದ್ಭುತ ಪ್ರದರ್ಶನಗಳನ್ನು ಲಕ್ಷಾಂತರ ಜನ ನೋಡಿ ಮೆಚ್ಚಿದ್ದಾರೆ.
ಟಿಕೆಟು ದರ :— ರೂ. 5, 3, 2, 1, ಮತ್ತು 8 ಆಣೆ

ಜಯಾ ಟ್ರಾವೆಲ್ ಸರ್ವಿಸ್, ಅನಂತಪುರ
78 ದಿನಗಳ ಬದರಿ, ಕಾಶಿ ಮತ್ತು ಕಾಶ್ಮೀರ ಯಾತ್ರೆ
ಮೈಸೂರಿನಿಂದ ಹೊರಡುವ ದಿನ 15-4-56 — ವಾಪಸು ಬರುವ ದಿನ 1-7-56
ಶ್ರೀ ರಾಮ ನವಮಿಯ ದಿನ ಭದ್ರಾಚಲದಲ್ಲಿ ಇರಲಾಗುತ್ತದೆ
ಒಂದನೇ ತರಗತಿ 700 ರೂ ಮೂರನೇ ತರಗತಿ 425 ರೂ (ಊಟ ಬಸ್ಸು ಚಾರ್ಜು ಸೇರಿ)
ಹೆಚ್ಚು ವಿವರಗಳಿಗೆ ಸ್ಥಳೀಯ ಏಜೆಂಟರನ್ನು ವಿಚಾರಿಸಿ
ಟೂರಿಸ್ಟ್ ಬ್ಯೂರೋ,
ಫೋನ್ 574 ಜಗನ್ಮೋಹನ ಅರಮನೆ ರಸ್ತೆ ಮೈಸೂರು

ಒಮ್ಮೆ ಭೇಟಿ ಕೊಡಿ! : ಖಂಡಿತ !!
ಗೀತಾ ಸ್ಟೋರ್ಸ್
ಶಿವರಾಂಪೇಟೆ (ಮಸೀದಿ ಹತ್ತಿರ), ಮೈಸೂರು
ರೇಡಿಯೋ ಅಂಗಡಿ ಮತ್ತು ಹೊಲಿಯುವ ಮಿಷಿನುಗಳು
ನಮ್ಮಲ್ಲಿ ಆಧುನಿಕ ಗಾಯನ ಸಾಮಾನುಗಳು, ಹಾರ್ಮೋನಿಯಂ, ಗ್ರಾಮಫೋನ್ ಮತ್ತು ರೇಡಿಯೋ ರಿಪೇರಿಗಳು, [illegible] ಒಬ್ಬಾಗಿಯೂ, ಚಿಲ್ಲರೆಯಾಗಿಯೂ
ಅತಿ ಸುಲಭ ದರದಲ್ಲಿ ದೊರೆಯುತ್ತವೆ
[illegible] 1¼ 3 4 0 ರೂ [illegible] 6 [illegible]
ಗಾಯನ ರೆಕಾರ್ಡುಗಳನ್ನು 2-1-0 ರೂ ಗೆ ಕೊಡಲಾಗುತ್ತದೆ

ಚಾಮುಂಡೇಶ್ವರಿ ಟಾಕೀಸ್ ★
30—3—56 ರಿಂದ : ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು
ಆದಿಕಲಾ ಫಿಲಂಸ್‌ರವರ ಶ್ರೇಷ್ಠ ಕಾಣಿಕೆ
ಹೊನ್ನಪ್ಪಭಾಗವತರ್, ಬಾಲಕೃಷ್ಣ, ಲಲಿತ, ಬಿ ಸರೋಜಾ
ರಮಾದೇವಿ, ಡಿಕ್ಕಿ ಮಾಧವರಾವ್ ಮುಂತಾದವರು ಪಾತ್ರವಹಿಸಿರುವ
★ ಪಂಚರತ್ನ ★
(ಕನ್ನಡ ಚಿತ್ರ)
ಮೊದಲನೇ ನಾಲ್ಕು ವಾರ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸು ಮತ್ತು ರಿಯಾಯತಿಗಳನ್ನೂ ಮನ್ನಾ ಮಾಡಲಾಗಿದೆ

ಲಗ್ನದ ಜವಳಿ
ಸಿಲ್ಕ್ ಸೀರೆಗಳು
[illegible]
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಫೋನ್ 811
[illegible]
ಶ್ರೀ ಕೃಷ್ಣಾ [illegible]
ಮೈಸೂರು

[ಸಂಪುಟ : ೮೪] SADHVI : FRIDAY 30-3-1956 ಮೈಸೂರು ಶುಕ್ರವಾರ : ೩೦-೩-೧೯೫೬ [ಸಂಚಿಕೆ : ೨೨೦

- ಕಾಶ್ಮೀರದ ಬಗ್ಗೆ ಜನಮತಗಣನೆಗೆ ಅವಕಾಶವಿಲ್ಲ -

ಆಯುರ್ವೇದ ಕಾಲೇಜಿನ ವರ್ಗಾವಣೆಯು ಸಧ್ಯಕ್ಕಿಲ್ಲ

ಸ್ವತಂತ್ರ ಅಧಿಕಾರಿಯನ್ನು ನೇಮಿಸುವುದಾಗಿ ಮುಖ್ಯ ಮಂತ್ರಿಯವರ ಹೇಳಿಕೆ

[ನಮ್ಮ ವರದಿಗಾರ] ಬೆಂಗಳೂರು ೨೦

ಈ ದಿನ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮಾತನಾಡಿ ಆಯುರ್ವೇದ ಕಾಲೇಜನ್ನು ಮೈಸೂರಿನಿಂದ [illegible] ವರ್ಗಾಯಿಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಗಿರುವುದಾದರೂ, ಅದನ್ನು ಸಧ್ಯಕ್ಕೆ ಕಾರ್ಯಗತ ಮಾಡದೆ ಆ ವಿಷಯವನ್ನು ಒಬ್ಬ ನಿಷ್ಪಕ್ಷಪಾತ ಅಧಿಕಾರಿಗೆ ವಹಿಸುವುದಾಗಿಯೂ [illegible] ಈ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸುವರೆಂಬ ಭರವಸೆ ತಮಗಿರುವುದೆಂದೂ [illegible]

ಅಧಿಕಾರಿ ಭಾಷೆ

ಹಿಂದಿಯನ್ನು ಅಧಿಕಾರಿ ಭಾಷೆಯಾಗಿ ಬಳಸುವ ವಿಷಯದಲ್ಲಿ ಮುಖ್ಯ ಮಂತ್ರಿಯವರು ಮಾತನಾಡಿ ಇಂಗ್ಲಿಷ್ ಭಾಷೆಯಿಂದ ಬಹಳ ಮಟ್ಟಿಗೆ ಪ್ರಯೋಜನವಾಗಿರುವುದೆಂದೂ, ಅದನ್ನು ಹಠಾತ್ತನೆ ಬಿಟ್ಟು ಹಿಂದಿಯನ್ನು ಹೇರುವುದು [illegible] ತಾವು ಕೇಂದ್ರದವರಿಗೆ [illegible] ನುಡಿದರು.

[illegible] ಗಣಿ ಕಾರ್ಮಿಕರೊಡನೆ ಮಾತುಕತೆ

[illegible]

[illegible]

[illegible]

ಕಾಶ್ಮೀರದಲ್ಲಿ ಜನಮತಗಣನೆಗೆ ಅವಕಾಶವಿಲ್ಲ

ಲೋಕಸಭೆಯಲ್ಲಿ ಪ್ರಧಾನಿ ನೆಹರೂರವರ ಸ್ಪಷ್ಟೋಕ್ತಿ

ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ಕಾಶ್ಮೀರದ ವಿಷಯವಾಗಿ ಪತ್ತು ನುಡಿಯ ಮಾತುಗಳನ್ನಾಡಿ [illegible] ಪಾಕಿಸ್ತಾನವು [illegible] ಅಲ್ಲಿ ಜನಮತಗಣನೆ ಬಗ್ಗೆ [illegible]

[illegible]

ಪೂರ್ವ ಪಾಕಿಸ್ತಾನದಿಂದ ಹಿಂದುಗಳ ವಾಪಸು

[illegible]

[illegible]

[illegible]

ಸಂಸ್ಕೃತ ಪ್ರಚಾರದ ಬಗ್ಗೆ ಠರಾವು ಕಳುಹಿಸಿರುವುದು ಅತಿಸ್ತುತ್ಯಾರ್ಹ

ಕಾಂಗ್ರೆಸ್ ಸದಸ್ಯರಿಗೆ ಮುಖ್ಯಮಂತ್ರಿಯವರ ಹಿತನುಡಿ

ಬೆಂಗಳೂರು ೨೦

ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನೆನ್ನೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಸ್ಕೃತ ಪ್ರಚಾರ [illegible] ಶ್ರೀ ಹನುಮಂತಯ್ಯನವರು ಮಾತನಾಡಿ, [illegible]

[illegible]

ನೆಹರೂ ಭಾಷಣದ ಬಗ್ಗೆ ಪಾಕಿಸ್ತಾನಕ್ಕೆ ದಂಗು ಬಡಿದಿದೆ

[illegible]

[illegible]

ಮೈಸೂರು ೩೦

[illegible]

" ಯುದ್ಧ ಬೇಡ " ಸಲಹೆಗೆ ಪಾಕಿಸ್ತಾನದ ಉತ್ತರವಿಲ್ಲ

ಭಾರತ-ಪಾಕಿಸ್ತಾನಗಳ [illegible] " ಯುದ್ಧ ಬೇಡ " ಎಂಬ ಘೋಷಣೆ [illegible] ಪ್ರಧಾನಿ ನೆಹರೂರವರು [illegible] ಪಾಕಿಸ್ತಾನದ ಪ್ರಧಾನಿಯವರಿಗೆ [illegible]

[illegible]

[illegible]

[illegible]

[illegible]

ಪುತ್ತಿಗೆ ಮಠಾಧೀಶರ ಶತಮಾನೋತ್ಸವ

೬,೯೧೮ ತೊಲ ಬೆಳ್ಳಿಯ ತುಲಾಭಾರ

ಉಡುಪಿಯಲ್ಲಿ ಶ್ರೀ ಪುತ್ತಿಗೆ ಮಠದ ಶ್ರೀ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರ ಶತಮಾನೋತ್ಸವವು ಕಳೆದ ೨೪ ನೇ ತಾರೀಕು ಅತ್ಯಂತ ವೈಭವದಿಂದ ನೆರವೇರಿತು. ಕರ್ನಾಟಕದ ನಾನಾ ಭಾಗಗಳ ೧೦ ಸಹಸ್ರ ಜನರು ಅದರಲ್ಲಿ ಭಾಗವಹಿಸಿದ್ದರು. ಮಠಾಧೀಶರನ್ನು ನಗರದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಕರೆದುಕೊಂಡು ಹೋಗಲಾಯಿತು. ಆದಕ್ಕೆ ಮುಂಚೆ ೧೦ ನಿಮಿಷ ಸಣ್ಣ ಮಳೆ ಬಂದಿತು.

ಅಂದು ಬೆಳಗ್ಗೆ ವಿಶೇಷ ಪೂಜೆ, ಆರಾಧನೆ, ಪ್ರಾರ್ಥನೆ ಮತ್ತು ಭಜನೆಗಳು ಶ್ರೀ ಕೃಷ್ಣದೇವರ ಗುಡಿಯಲ್ಲಿ ಜರುಗಿದುವು. ಶ್ರೀ ಪುತ್ತಿಗೆ ಸ್ವಾಮಿಯವರ ತುಲಾಭಾರವಾಯಿತು. ೬,೯೧೮ ತೊಲ ಬೆಳ್ಳಿಯನ್ನು ಅವರು ತೂಗಿದರು. ಅದನ್ನು ದೇವರ ಬೆಳ್ಳಿ ರಥದ ನಿರ್ಮಾಣಕ್ಕೆ ವಿನಿಯೋಗಿಸಲಾಗುವುದು.

ನಂತರ ವಸಂತಮಹಲಿನಲ್ಲಿ ಶ್ರೀ [illegible] ರಾಮಯ್ಯನವರು ಮತ್ತು ಸಹೋದರರು ತಮ್ಮ ಮಾತೋಶ್ರೀಯವರ ನೆನಪಿಗಾಗಿ ಸ್ವಾಮಿಗಳವರಿಗೆ ಕನಕಾಭಿಷೇಕವನ್ನು ಮಾಡಿಸಿದರು. ೧೨೦ ಮಂದಿ ಪಂಡಿತರು ಮತ್ತು ವಿದ್ಯಾರ್ಥಿಗಳಿಗೆ ಶಾಲುಗಳನ್ನೂ ನಾಣ್ಯಗಳನ್ನೂ, ಬೆಳ್ಳಿಯ ಬಟ್ಟಲುಗಳನ್ನು ವಿನಿಯೋಗಿಸಲಾಯಿತು.

ಅನಂತರ ಬಯಲು ರಂಗ ಸಭೆಯೂ ರಥದ ಬೀದಿಯಲ್ಲಿ ನಡೆಯಿತು. ಪರ್ಯಾಯ ಸ್ವಾಮಿಗಳಾದ ಶ್ರೀ ವಿಭುದೇಶತೀರ್ಥ ಶ್ರೀಪಾದಂಗಳವರು ಅಧ್ಯಕ್ಷತೆ ವಹಿಸಿದ್ದರು. ಶಿರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರು ಉಪದೇಶ ಭಾಷಣ ಮಾಡಿ ಪುತ್ತಿಗೆ ಸ್ವಾಮಿಗಳವರ ಜೀವನ ಮತ್ತು ಸಾಧನೆಗಳನ್ನು ವಿವರಿಸಿದರು. ನಂತರ ಅಖಿಲ ಭಾರತ ಮಾಧ್ವ ಮಂಡಲಿ, ಉಡುಪಿ ಪೌರಸಭೆ, ಸಂಸ್ಕೃತ ಕಾಲೇಜು ಮುಂತಾದ ಸಂಸ್ಥೆಗಳು ಬಿನ್ನವತ್ತಳೆಗಳನ್ನು ಶ್ರೀ ಸ್ವಾಮಿಯವರಿಗೆ ಅರ್ಪಿಸಿದುವು. ಶ್ರೀಮತ್ ಸುಜ್ಞಾನೇಂದ್ರತೀರ್ಥ ಸ್ವಾಮಿಗಳು ಮತ್ತು ಪೇಜಾವರ ಸ್ವಾಮಿಗಳವರು ಭಾಷಣ ಮಾಡಿದರು.

ಶ್ರೀ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರು ಬಿನ್ನವತ್ತಳೆಗಳಿಗೆ ಉತ್ತರವಿತ್ತು, ಎಲ್ಲರೂ ಏಕಚಿತ್ತದಿಂದ ದೇವರನ್ನು ಧ್ಯಾನಿಸಬೇಕೆಂದೂ, ಎಲ್ಲರೂ ದೈವಾಧೀನವೆಂದೂ ತಿಳಿಸಿದರು. ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕಾಲಗಿ [illegible]ಚಾರ್ಯರು ವಂದನಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ಅನ್ನದಾನವನ್ನೂ ನಡೆಸಲಾಯಿತು.

ರೈಲು ನಿಲ್ಲಿಸಿ ಪರೀಕ್ಷಾಧಿಕಾರಿಗಳ ಮೇಲೆ ವಿದ್ಯಾರ್ಥಿಗಳ ಧಾಳಿ

ಕಡಪಾ ಬಳಿ ನಂದಲೂರು ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳು ಎಸ್ ಎಸ್ ಎಲ್ ಸಿ. ಪರೀಕ್ಷೆಯಲ್ಲಿ ಕಾಪಿ ಹೊಡೆಯಲು ಸಾಧ್ಯವಾಗದೆ ತಮ್ಮ ಸೇಡನ್ನು ತೀರಿಸಿಕೊಳ್ಳಲು ಪರೀಕ್ಷಾ ಮೇಲ್ವಿಚಾರಕರ ಮೇಲೆ ಕೈಮಾಡಿದರೆಂದು ವರದಿಯಾಗಿದೆ. ಅವರ್ಕ್ಯಾಗಿ ಅವರು ಮದ್ರಾಸ್ ಎಕ್ಸ್‌ಪ್ರೆಸ್ ರೈಲನ್ನು ಹತ್ತಿ ಸರಪಳಿ ಎಳೆದು ರೈಲನ್ನು ನಿಲ್ಲಿಸಿ ಅದರಲ್ಲಿ ಪ್ರಯಾಣ ಮಾಡುತ್ತಿದ್ದ ಮೂವರು ವಿದ್ಯಾ ಇಲಾಖಾಧಿಕಾರಿಗಳನ್ನು ಹೊಡೆದರೆಂದೂ, ಒಬ್ಬರ ಉತ್ತರೀಯವನ್ನು ಕಿತ್ತುಕೊಂಡರೆಂದೂ, ಮತ್ತೊಬ್ಬರ ಕನ್ನಡಕವನ್ನು ತೆಗೆದುಕೊಂಡರೆಂದೂ, ಇನ್ನೊಬ್ಬ ಉಪಾಧ್ಯಾಯರನ್ನು ಹೊರಕ್ಕೆ ಎಳೆಯಲಾಕಿದರೆಂದೂ ಹೇಳಲಾಗಿದೆ. ಇತರ ವಿದ್ಯಾರ್ಥಿಗಳು ರೈಲಿಗೆ ಕಲ್ಲು ಬೀರಿ ಗಾಜುಗಳನ್ನು ಒಡೆದರೆಂದು ತಿಳಿದುಬಂದಿದೆ. ರೈಲ್ವೆ ಪೋಲೀಸರು ಬಂದೊಡನೆ ಅವರೆಲ್ಲರೂ ಪರಾರಿಯಾದರು.

ಕಾಲರಾ ನಿರೋಧದ ಸುಲಭ ಚಿಕಿತ್ಸೆ

(ಬರೆದು ಬಂದುದು)

ರಾತ್ರಿ ಊಟವಾದನಂತರ ಸ್ವಲ್ಪ ಈರುಳ್ಳಿಯನ್ನು ಕುಟ್ಟಿ ರಸ ತೆಗೆದುಕೊಂಡು ಅದರಲ್ಲಿ ಕಡಲೆ ಕಾಳಿನಷ್ಟು ಇಂಗು, ಎರಡು ಚಿಕ್ಕ ತೂಕದ ಸೋಂಪು (ಪನ್ಸಾರಿ ಅಂಗಡಿಯಲ್ಲಿ ಸಿಗುತ್ತದೆ), ಎರಡಾಣೆ ತೂಕದಷ್ಟು ಕೊತ್ತಂಬರಿ ಬೀಜ ಇವುಗಳನ್ನು ಚೂರ್ಣ ಮಾಡಿ ಇಟ್ಟುಕೊಂಡು ನಿತ್ಯವೂ ಸೇವಿಸುತ್ತಾ ಬಂದರೆ ಕಾಲರಾ ರೋಗವು ಖಂಡಿತವಾಗಿಯೂ ತಗಲುವುದೇ ಇಲ್ಲ.

ಉಪನಯನ ಮಹೋತ್ಸವ

ಮೈಸೂರಿನ ನಿವೃತ್ತ ಡೆಪ್ಯುಟಿ ಕಂಟ್ರೋಲರಾದ ಶ್ರೀ ಎಸ್ ರಾಘವಾಚಾರ್ಯರು ತಮ್ಮ ಪುತ್ರ ಚಿ॥ ವಾಸುದೇವನಿಗೆ ಬ್ರಹ್ಮೋಪದೇಶವನ್ನು ನೆನ್ನೆ ನಾಗಪುರದಲ್ಲಿ ನೆರವೇರಿಸಿದರು.

ಕೊಪ್ಪದ ಅಸಿಸ್ಟೆಂಟ್ ಹೆಲ್ತ್ ಆಫೀಸರ್ ಶ್ರೀ ಹೆಚ್ ಆರ್ ಕೃಷ್ಣಮೂರ್ತಿಯವರು ತಮ್ಮ ಕುಮಾರ ಶ್ರೀ ಹೆಚ್ ಕೆ ನಾಗರಾಜ್‌ರವರಿಗೆ ಮೊನ್ನೆ ರಾಜಧಾನಿಯಲ್ಲಿ ಉಪನಯನವನ್ನು ನೆರವೇರಿಸಿದರು.

ರಾಜಧಾನಿಯ ಕೋ-ಆಪರೇಟಿವ್ ಬ್ಯಾಂಕಿನ ನೌಕರರಾದ ಶ್ರೀ ಆರ್ ಸೀತಾರಾಮಯ್ಯನವರು ತಮ್ಮ ದ್ವಿತೀಯ ಪುತ್ರ ಚಿ॥ ಸ॥ ಕೃಷ್ಣಸ್ವಾಮಿಗೆ ಮೊನ್ನೆ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ಭಾರತ-ಪಾಕಿಸ್ತಾನಗಳ ನಡುವೆ ಗಡಿ ವ್ಯಾಜ್ಯದ ಮಾತುಕತೆ

ಭಾರತ ಮತ್ತು ಪಾಕಿಸ್ತಾನಗಳ ನಡುವೆ ಗಡಿ ವ್ಯಾಜ್ಯದ ಘಟನೆಗಳ ಸಂಬಂಧವಾಗಿ ಮೊದಲು ಅಧಿಕಾರಿಗಳ ನಡುವೆಯೂ, ನಂತರ ಅವಶ್ಯಬಿದ್ದರೆ ಹೆಚ್ಚಿನ ದರ್ಜೆಯಲ್ಲೂ ಮಾತುಕತೆಗಳನ್ನು ನಡೆಸುವ ಆಲೋಚನೆಯಿರುವುದಾಗಿ ಪ್ರಧಾನಿ ನೆಹರೂರವರು ಲೋಕಸಭೆಯಲ್ಲಿ ತಿಳಿಸಿರುತ್ತಾರೆ.

ವಿವಾಹ ಮಹೋತ್ಸವ

ರಾಜಧಾನಿಯ ಸಂತೆಪೇಟೆ ಮಂಡಿ ವ್ಯಾಪಾರಿಗಳೂ, ಪೌರಸಭಾ ಸದಸ್ಯರೂ ಆದ ಶ್ರೀ ಚೌಡಯ್ಯನವರು ತಮ್ಮ ಕುಮಾರ ಶ್ರೀ ಈರಣ್ಣನವರಿಗೆ ನಗರದ ಶ್ರೀ ಹೆಚ್ ಉಗ್ರಪ್ಪನವರ ಕುಮಾರಿ ಸೌ॥ ಹನುಮಕ್ಕನನ್ನು ತಂದುಕೊಂಡು ನೆನ್ನೆ ವಿವಾಹವನ್ನು ನೆರವೇರಿಸಿದರು.

ಮೈಸೂರು ಪೇಟೆ ಧಾರಣೆ

	ರೂ. ಯಿಂದ			ರೂ ವರೆಗೆ		
ಕಡಲೆಕಾಯಿ	[illegible]	೦	೦	[illegible]	[illegible]	[illegible]
ಹರಳುಬೀಜ	೪೦	೦	೦			
ಹುಚ್ಚೆಳ್ಳು	[illegible]	೦	೦	[illegible]	[illegible]	೦
ಹೊಂಗೆಬೀಜ	[illegible]	೦	೦	[illegible]	[illegible]	[illegible]
ಹುಣಸೇಬೀಜ	[illegible]	[illegible]	೦	[illegible]	[illegible]	೦
ಹುರುಳಿ	[illegible]	[illegible]	೦	[illegible]	[illegible]	೦
ಹೆಸರು	[illegible]	[illegible]	೦			
ಕಡಲೆ	[illegible]	೦	೦	[illegible]	[illegible]	೦
ಹಲಸಂದೆ	[illegible]	[illegible]	೦	[illegible]	[illegible]	೦
ಉಪ್ಪು	[illegible]	೦	೦			
ಅವರೆ	[illegible]	೦	೦	[illegible]	[illegible]	೦
ಸೀಗೆಕಾಯಿ	[illegible]	[illegible]	೦	[illegible]	[illegible]	೦
ಹುಣಸೇಹಣ್ಣು	[illegible]	[illegible]	೦	[illegible]	[illegible]	೦
ಮೆಣಸಿನಕಾಯಿ	[illegible]	[illegible]	೦	[illegible]	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]	೦	[illegible]	೦	೦

ಫ್ಲೋರ್ ಮಿಲ್ ಮಾಲೀಕರಿಗೆ ಸುಸಮಯ

ಫ್ಲೋರ್ ಮಿಲ್ ಪ್ಲೇಟ್ ಸ್ಟೀಲ್ ರೀ-ಗ್ರೈಂಡಿಂಗ್ ಚಾರ್ಜು ರೂ 2-4 0 ಕಲ್ಲು ಕಾರದ ರೀತಿಯಲ್ಲಿ ಸ್ಟೀಲು ಜೋಡಿಸುವ ಬಗ್ಗೆ ಕರೆದೇಟು ಕೊಡಲಾಗುವುದು ವಿಚಾರಿಸಿ ಎ ಸುಬ್ಬಯ್ಯ, 809 ಗಾಂಧಿ ಸ್ಕ್ವೇರ್, ಮೈಸೂರು

NOTICE

One Receipt Bk. No 94 relating to National Savings certificates, containing seven used counter foils bearing Nos 931–937, and three receipt forms of Rs 100 denomination bearing Nos 938–940 has been lost by the undersigned

It is requested that the said Receipt Bk whenever found by anyone may kindly be handed over to the undersigned

Smt A. T LAKSHAMMA,
Hon Secretary,
Mysore State Women's Conference, Mysore Branch,
C/o No. C I/1574. Mahila Samaj
Viceroy Road, Mysore

ಕಾಂಬೋಡಿಯಾ ಸರ್ಕಾರ[illegible] ರಾಜೀನಾಮೆ

ಕಾಂಬೋಡಿಯಾ ಜನರು ಕಂದಾಯ[illegible]ಲು ನಿರಾಕರಿಸುತ್ತಿರುವುದರಿಂದಲೂ, ಶತ್ರುದ[illegible] ಮತ್ತು ದಕ್ಷಿಣ ವಿಯಟ್ನಾಂಗಳು ಗಡಿ ಮುತ್ತ[illegible]ದರಿಂದಲೂ ರಾಜಕುಮಾರ ನರೋತ್ತಮ[illegible]ನೌಕರು ತಮ್ಮ ಮಂತ್ರಿಮಂಡಲದ ರಾಜೀ[illegible]ಯನ್ನು ದೊರೆ ಸುರಮರುತ್‌ರವರಿಗೆ [illegible]ದ್ದಾರೆ.

ಕೆನರಾ ಬ್ಯಾಂಕಿನ ಹೊಸ ಬಿಡಾರ[illegible]

ನಗರದಲ್ಲಿರುವ ಕೆನರಾ ಬ್ಯಾಂಕು [illegible]ನ್ನು ಹೊಸ ಸ್ವಾಮ್ಯ ಚೌಕದಲ್ಲಿರುವ ಸ್ವ[illegible]ಸ್ವಂತ ಕಟ್ಟಡಕ್ಕೆ ಬದಲಾವಣೆ ಮಾಡಿದ[illegible]ಧವಾಗಿ ಮೊನ್ನೆ ಸಂಜೆ ಸ್ವಾಗತ ಸಮಾರಂಭ[illegible] ಏರ್ಪಡಿಸಲಾಗಿತ್ತು. ಮ್ಯಾನೇಜರ್ ಶ್ರೀ [illegible]ಹರಿ ಕಣ್ಣೂರರವರು ಇಷ್ಟಮಿತ್ರರನ್ನು ಆತ್ಮೀಯವಾಗಿ ಸತ್ಕರಿಸಿದರು.

ರಾಜಧಾನಿಯ ತ್ಯಾಗರಾಜಾ ರಸ್ತೆಯಲ್ಲಿ[illegible] ಶ್ರೀ ಸಾಯಿಬಾಬಾ ಮಂದಿರದ ಕಟ್ಟಡಕ್ಕಾಗಿ[illegible] ಏರ್ಪಡಿಸಲಾಗಿದ್ದ ಲಾಟರಿಯ ಫಲಿತಾಂಶ[illegible] ಬರುವ ತಿಂಗಳು ೮ನೇ ತಾರೀಕು ಸಂಜೆ[illegible]ಯಕ ಮಂದಿರದಲ್ಲಿ ಗೊತ್ತುಮಾಡಲಾಗು[illegible]

ಒಲಂಪಿಯಾ ಟಾಕೀಸ್

30-3-56 ರಿಂದ ಜನಭರಿತ 2ನೇ ವಾರ
ದಲೀಪ್ ಕುಮಾರ್ ಮೀನಾ ಕುಮಾರಿ ನಟಿಸಿರುವ **ಆಜಾದ್**

— ಬೆಳಗಿನ ಪ್ರದರ್ಶನ —
ಮಿಸ್ಟರ್ ಅಂಡ್ ಮಿಸೆಸ್ 55

Edited, Printed and Published by A R Nagarajan at Sadhvi Press D Subbiah Road Mysore

SREE GAYATHRI TALKIES

From 30-3-56 For 5 days
Walt Disney's
THE LIVING DESERT
(Brings to Screen the Story of Nature's Wonder Land)

Morning Shows on 31st March & 1st April
WAY OF GAUCHO
(Technicolor)

SREE GANESH TALKIES

From 31 3-56 For 3 days
Paramount's
THE COUNTRY GIRL
With--Bing Crosby, Grace Kelly & William Holden
(A Picture which you will remember for all the years to come)

From 3-4 56 For 2 days
MARSHMALLOW MOON
(Technicolor)

SRI RAGHAVENDRA TECHNICAL INSTITUTE

(S R Telegraph Training School)
Chamaraja Road, Mysore Estd 19[illegible]

Technical Section

1) Expert training in Telegraph Technique, A S M's course Hindi Special Concession Term fees Rs 35 & Admission fee Rs 5 Separate section for Ladies. Recognised certificates awarded
2) Wireless Telegraphy

★

Typewriting job works neatly executed
Hours of Business 8 A M to 12 noon and 3 to 6 P M

★

Tutorial Section
S. S. L C Coaching Classes begin from 2nd April 1956 for Supplementary E x a m [illegible] Term fee Rs. 12, plus admission fee Re. 1. All subjects taught success guaranteed

ಪ್ರಭಾ ★

ಇಂದಿನಿಂದ ಜಯೋತ್ಸವ ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು
ತಂಡವನ್ನು ಒಪ್ಪಿಕೊಳ್ಳಲು ತಿರಸ್ಕರಿಸಿದ ಮಗನೋರ್ವನ ಕಥೆ
ಬಿ ಆರ್ ಛೋಪ್ರಾರವರ ಹಿಂದಿ ಚಿತ್ರ

ಅಶೋಕಕುಮಾರ್, ವೈಜಯಂತಿಮಾಲಾ, ಸುನಿಲ್‌ದತ್, ರಾಧಾಕೃಷ್ಣ ಮತ್ತು ರಾಜ (ದೇಸಿ ಇರಾನಿ) ನಟಿಸಿರುವ **ಏಕ್-ಹಿ-ರಾಸ್ತ**

ನಿರ್ದೇಶನ ಬಿ ಆರ್ ಛೋಪ್ರಾ — ಸಂಗೀತ : ಹೇಮಂತ್ ಕುಮಾರ್

ಬೆಳಗಿನ ಪ್ರದರ್ಶನ 30–3–56 ರಿಂದ ಮೂರು ದಿನಗಳು ಮಾತ್ರ
ಅಭಿಭಟ್ಟಾಚಾರ್ಯ, ಅಸುದಗುಪ್ತ ನಟಿಸಿರುವ ★ ರಕ್ತ ದೀಪ್ ★

CITY TUTORIAL COLLEGE, V V Market, Mysore

EVENING CLASSES - 6 to 9 P M. Daily

★ MADRAS MATRICULATION CLASSES - For persons above 1[illegible] years No minimum qualification

★ MYSORE S S L C - Dec 1956 — All Subjects Rs. 6 P.M

CLASSES IN FULL SWING : JOIN BEFORE IT IS TOO LATE

C. T. C. is the Oldest and the Best Institution with permanent STAFF, BUILDING, EQUIPMENT, LABORATORY, LIBRARY & R R Facilities

For Best Guidance Read C. T. C. PUBLICATIONS

ರಣಜಿತ್ ಟಾಕೀಸ್ ★

31—3—56 ರಿಂದ : [illegible] : [illegible]
[illegible]

★ ಕನಕತಾರ ★ KANAKATARA ★

[illegible] — ತಾರಾಗಣ - ಎಸ್ ವರಲಕ್ಷ್ಮಿ, [illegible], [illegible], [illegible] ಮತ್ತು ಇತರ [illegible]

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಅಂಚಿನ ಪತ್ರಿಕೆ 3 ಕಾಸು

ಸಂಸ್ಥಾನದ ಪತ್ರಿಕೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಪುಟ : ೦೪] SADHVI : SATURDAY 31-3-1956 ಮೈಸೂರು ಶನಿವಾರ : ೩೧-೩-೧೯೫೬ [ಸಂಚಿಕೆ : ೨೨೦

ಪುನಃ ವಿಶ್ವಸಂಸ್ಥೆಗೆ ಕಾಶ್ಮೀರದ ಪ್ರಶ್ನೆ ಒಪ್ಪಿಸಲು ಹವಣಿಕೆ

[illegible] ಎಸ್. ಗೋಲ್ವಾಲ್ಕರರಿಗೆ ೬೩ ಸಾವಿರ ರೂ. ನಿಧಿ

೫೧ ನೇ ಜನ್ಮ ದಿನೋತ್ಸವದಲ್ಲಿ ಸಮಾರಂಭ

ಬೆಂಗಳೂರು ೩೦

[illegible] ರಾಷ್ಟ್ರೀಯ ಸ್ವಯಂಸೇವಕರ ಸಂಘದ ಸರ ಸಂಚಾಲಕರಾದ ಗುರೂಜಿ ಎಂ. ಎಸ್. ಗೋಲ್ವಾಲ್ಕರ್‌ರವರ ೫೧ನೇ ವರ್ಷ ವರ್ಧಂತಿ [illegible] ನಿನ್ನೆ ಇಲ್ಲಿ ಅವರ ಗೌರವಾರ್ಥವಾಗಿ [illegible] ಸಮಾರಂಭವೊಂದನ್ನು ಏರ್ಪಡಿಸ [illegible] ಕರ್ನಾಟಕದ ಪ್ರತಿಗಳ ಭಕ್ತಿ [illegible] ರೂ. ನಿಧಿಯನ್ನು ಸಂಘದ [illegible] ಪ್ರಮುಖ [illegible] ಶ್ರೀ [illegible] ಜಗನ್ನಾಥರಾಯರು ಅರ್ಪಿಸಿದರು.

[illegible] ಕರ್ನಾಟಕದ ಜನರಿಗೆ ಕೃತಜ್ಞತೆಯನ್ನು ಸೂಚಿಸಿ ಭಾಷಣ ಮಾಡಿ, ಭಾರ [illegible] ವ್ಯವಸ್ಥಿತ ರಾಷ್ಟ್ರವಾಗಿ ಮಾಡು [illegible] ರಾಷ್ಟ್ರೀಯ ಸ್ವಯಂಸೇವಕ ಸಂಘದ [illegible] ತಿಳಿಸಿದರು. ಈ ದೇಶದಲ್ಲಿರುವ [illegible] ಕ್ರಿಸ್ತರು ಮುಂತಾದವರೂ ಭಾ [illegible] ಮಕ್ಕಳೆಂದೂ, ಹಿಂದೆ ಅವರು [illegible] ರಕ್ತ ಮತ್ತು ಸಂಸ್ಕೃತಿ [illegible] ಹೊಂದಿರುವರೆಂದೂ ತಿಳಿಸಿದರು [illegible] ಮತಕ್ಕೆ ಸೇರಿದ ಜನರು ಹಿಂದೂ ಮತಕ್ಕೆ [illegible] ಬರುವಂತೆ ಅವರು ಕರೆಯಿತ್ತು, ಅವರ [illegible] ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮ [illegible] ಒಂದಾಗಿ ಪ್ರವರ್ಧಮಾನ [illegible] ಸೂಚಿಸಿದರು.

[illegible] ಸಮಿತಿ ಅಧ್ಯಕ್ಷರಾದ ಶ್ರೀ ಪಿ [illegible] ಸ್ವಾಗತ ಭಾಷಣ ಮಾಡಿ, [illegible] ಅತ್ಯಂತ ಉತ್ತಮ ಪುತ್ರರ ಪೈಕಿ ಗೋ [illegible] ಒಬ್ಬರೆಂದು ತಿಳಿಸಿದರು.

[illegible] ಕಾರ್ಯದರ್ಶಿ ಶ್ರೀ ಕೆ ಸೂರ್ಯ [illegible] ಶುಭ ಸಂದೇಶಗಳನ್ನು ಓದಿ, [illegible] ಸ್ವಯಂಸೇವಕರುಗಳು ಕರ್ನಾಟಕದಲ್ಲಿ [illegible] ಜನರನ್ನು ಸಂ [illegible] ಸಂಗ್ರಹಿಸಿದರೆಂದು ತಿಳಿಸಿದರು.

ಎಂ ಟಿ ಪಿ ಯವರ ಪರ ರಿಟ್ ಅರ್ಜಿ

[illegible] ಆರ್ ಎಂ ಟಿ ಪಿ ಯ [illegible] ಸಲ್ಲಿಸಲಾದ ರಿಟ್ ಅರ್ಜಿಯೊಂ [illegible] ನಿನ್ನೆ ಹೈಕೋರ್ಟಿನಲ್ಲಿ ನ್ಯಾಯಾಧೀಶರು [illegible] ಶ್ರೀ [illegible] ಶ್ರೀನಿವಾಸರಾವ್ ಮ [illegible] ತೊಂಬೇಗೌಡರು ಪರಿಶೀಲಿಸಿದರು [illegible] ಲಾಟಿಂ ಮತ್ತು ಬಹುಮಾನ ಸ್ಪ [illegible] ಪ್ರಕಾರ ಲಕ್ಷದಾರಿಯನ್ನು [illegible] ಸೂಕ್ತ ಆಜ್ಞೆ ಹೊರಡಿಸುವಂತೆ [illegible] ಕೋರಲಾಗಿತ್ತು. ಭಾರತ ಸರ್ಕಾರ [illegible] ಚಕ್ರಬಂಧ ಸ್ಪರ್ಧೆ ಶಾಸನದ [illegible] ಗೊತ್ತುಪಡಿಸಿಲ್ಲವಾದ ಪ್ರಯು [illegible] ದಿನ ಶಾಸನ ಜಾರಿಗೆ ಬರುವುದೆಂ [illegible] ಸೂಚನೆಯಾಗದಿದ್ದರೆ ಸರ್ಕಾರದ [illegible] ಕೊಡುವ ಬಗ್ಗೆ ಆಜ್ಞೆ ಮಾಡ [illegible] ತಿಳಿಸಿದರು. ಆದರ ಮೇಲೆ ಅರ್ಜಿ [illegible] ಸರ್ಕಾರದ ಪರವಾಗಿ ಸಲ್ಲಿಸಿದ್ದ ಮನವಿ [illegible] ವಾಪಸು ಪಡೆಯಲಾಯಿತು.

[illegible]

ಗುರೂಜಿ ಗೋಲ್ವಾಲ್ಕರ್

ಇಂಡೋಚೈನಾದಿಂದ ಫ್ರೆಂಚ್ ಸೈನ್ಯದ ವಾಪಸಾತಿಗೆ ಒಪ್ಪಂದ

ಇಂಡೋಚೈನಾದಲ್ಲಿರುವ ಫ್ರೆಂಚ್ ಸೈನ್ಯವನ್ನು ವಾಪಸು ಕರೆಸುವ [illegible] ಫ್ರೆಂಚ್ [illegible] ವಿಯಟ್ನಾಂ ಪ್ರತಿನಿಧಿಗಳ ಒಪ್ಪಂದ [illegible] ನಿನ್ನೆ [illegible] ಫ್ರೆಂಚ್ [illegible] ಅಧ್ಯಕ್ಷ [illegible] ಭೇಟಿ ಮಾಡಿ, ಫ್ರೆಂಚ್ ಸೈನ್ಯಗಳು ವಾಪಸಾದರೆ [illegible] ತೀವ್ರವಾಗುವುದೆಂದು ಎಚ್ಚರಿಸಿರುತ್ತಾರೆ.

ಭಕ್ರಾ ಅಣೆಕಟ್ಟಿನ ಮೈಸೂರು ಇಂಜನಿಯರರ ಮರಣ

ಭಕ್ರಾ ಅಣೆಕಟ್ಟಿನ [illegible] ಕೆಲಸ ಮಾಡುತ್ತಿದ್ದ ಮೈಸೂರಿನ ಎಸ್ ಎ ಕೃಷ್ಣಸ್ವಾಮಿಯವರು [illegible] ಎತ್ತರದ [illegible] ಕೆಳಗೆ ಬಿದ್ದ ಪರಿಣಾಮವಾಗಿ ಮೃತಪಟ್ಟರು. [illegible] ಕಾರ್ಮಿಕರಿಗೆ [illegible] ಕಾಲು ತಪ್ಪಿ ಕೆಳಗೆ ಮಗುಚಿಕೊಂಡು [illegible] ವಿಪರೀತ ಗಾಯಗೊಂಡು ಮರಣಹೊಂದಿದರು.

ಹರಿಕಥೆ

ಒಪ್ಪಲ್ ಮೊಹಲ್ಲಾ ವೀರಭದ್ರ [illegible] ಬಸವಯ್ಯನವರ ದೊಡ್ಡ [illegible] ರಾತ್ರಿ [illegible] ಗಂಟೆಗೆ ಶ್ರೀ ಎಸ್ [illegible] ಶಾಸ್ತ್ರಿಗಳವರು ಮಾಂಧಾತ ಚಕ್ರವರ್ತಿ ಎಂಬ ವಿಷಯವಾಗಿ ಹರಿಕಥೆ ನಡೆಸುವರು.

ನಾಳೆ ನೀರು ಸರಬರಾಜು ನಿಲ್ಲುವುದು

ನಾಳೆ ನಗರಕ್ಕೆ ವಿದ್ಯುಚ್ಛಕ್ತಿ ಸರಬರಾಜು [illegible] ಪ್ರಯುಕ್ತ, ಆ ದಿನ ಬೆಳಗ್ಗೆ ೧೧ ಗಂಟೆಯಿಂದ ಮಧ್ಯಾಹ್ನ [illegible] ಘಂಟೆ ವರೆಗೆ ನಗರದಲ್ಲಿ ನೀರು ಸರಬರಾಜು ಇರುತ್ತದಿಲ್ಲವೆಂದು [illegible] ಕಮೀಷನರರು ತಿಳಿಯಪಡಿಸುತ್ತಾರೆ.

ಕಾಶ್ಮೀರದ ಪ್ರಶ್ನೆ ಪುನಃ ಭದ್ರತಾ ಸಮಿತಿಗೆ

ನೆಹರೂ ಹೇಳಿಕೆ ಬಗ್ಗೆ ಪಾಕಿಸ್ತಾನದ ವಿದೇಶಾಂಗ ಮಂತ್ರಿಯ ಪ್ರತಿಕ್ರಿಯೆ

ಪಾಕಿಸ್ತಾನವು ಕಾಶ್ಮೀರದ ವಿವಾದವನ್ನು ಪುನಃ ಭದ್ರತಾ ಸಮಿತಿಗೆ ಕೊಂಡೊಯ್ಯುತ್ತದೆಂದು [illegible] ಮಂತ್ರಿ [illegible] ತಿಳಿಸಿರುತ್ತಾರೆ. ಆಕ್ರಮಿತ ಪ್ರದೇಶದಿಂದ [illegible] ಸೈನ್ಯಗಳನ್ನು ಹಿಂದಕ್ಕೆ ಕರೆಸಿಕೊಂಡು ಕಾಶ್ಮೀರದಲ್ಲಿ ಜನಮತ [illegible] ಅವಶ್ಯಕವೆಂದು ಪ್ರಧಾನಿ ನೆಹರೂ [illegible] ಒಪ್ಪಿಕೊಂಡ [illegible] ಪತ್ರಗಳ ಪಾಲನೆ [illegible] ಸಂಘಟಿತವಾಗುತ್ತಿದೆಯೆಂದೂ, ಅಂತರ [illegible] ಶಪಥಗಳನ್ನು ನೆಹರೂರವರು [illegible] ಮರೆಯುತ್ತಿದ್ದಾರೆಂದೂ ತಿಳಿಸಿದರು. ಈ [illegible] ಭಾರತವು ಪಾಕಿಸ್ತಾನಕ್ಕೆ [illegible] ಪಕ್ಷ ಸಂಸ್ಥೆಗೂ ಕೊಟ್ಟಿದ್ದ [illegible] ಕಾಶ್ಮೀರಿಗಳು ಸ್ವಯಂ ನಿರ್ಧಾರ [illegible] ಪಡೆಯಲು [illegible] ಪ್ರಮುಖತನವನ್ನು [illegible] ತಿಳಿಸಿದ [illegible] ಭಾರತವು ನೆಹರೂರವರ ಘೋಷಣೆಯನ್ನು [illegible] ಅವಶ್ಯಕತೆಯುಂಟಾಗ [illegible] ಹೇಳಿದರು. ಭಾರತವು ಕಾಶ್ಮೀರದ [illegible] ವನ್ನು ಪಂಚಾಯಿತಿಗೆ ಬಿಡಲು [illegible] ನಿಷ್ಪಕ್ಷಪಾತ ಪಂಚಾಯಿತಿದಾರನು ಭಾರತದ ವಿರುದ್ಧವಾಗಿ ತೀರ್ಪು ಕೊಡುವನೆಂದೂ ಅವರು ತಿಳಿಸಿರುವರು.

ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ನೆಹರೂರವರ ಹೇಳಿಕೆ ಬಗ್ಗೆ ತಮ್ಮ ಪ್ರತಿಕ್ರಿಯೆ [illegible] ಸೂಚಿಸಿ, ಭಾರತವು ಸಂಸ್ಥಾನದ [illegible] ಪಂಚಾಯಿತಿಗೆ ಒಪ್ಪದಿರುವುದರಿಂದ ಬಾಂಡುಂಗ್ ಸಮ್ಮೇಳನದ ನಿರ್ಣಯಕ್ಕೆ ಬೆಲೆಯಿಲ್ಲವಾಗಿದೆಯೆಂದು ತಿಳಿಸಿರುವರು. ಭಾರತವೇ ಪಾಕಿಸ್ತಾನವನ್ನು ಸುತ್ತುಗಟ್ಟುತ್ತಿರುವುದೆಂದೂ ಅವರು ಹೇಳಿದರು.

ಮೈಸೂರಿನಲ್ಲಿ ಹಿಂದಿ ಟ್ರೈನಿಂಗ್ ಕಾಲೇಜು

ಶಾಸನಸಭೆಯಲ್ಲಿ ವಿದ್ಯಾ ಮಂತ್ರಿಗಳ ಸೂಚನೆ

ಸ್ವಂ ಸು ಪ್ರೋ] ಬೆಂಗಳೂರು ೩೦

ಈ ದಿನ ವಿಧಾನ ಪರಿಷತ್ತಿನಲ್ಲಿ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಮಾತನಾಡಿ, ಮೈಸೂರು ನಗರದಲ್ಲಿ ಹಿಂದಿ ಉಪಾಧ್ಯಾಯರುಗಳ ಶಿಕ್ಷಣ ಕಾಲೇಜನ್ನು ತೆರೆಯಲು ಸರ್ಕಾರದವರು ಆಲೋಚಿಸುತ್ತಿರುವರೆಂದು ತಿಳಿಸಿದರು.

ಬಳ್ಳಾರಿ ಜಿಲ್ಲೆಯ ಕಂಪ್ಲಿಯಲ್ಲಿ ಸ್ಥಾಪಿಸಲಾಗುವ ಸಕ್ಕರೆ ಕಾರ್ಖಾನೆಗೆ ಸರ್ಕಾರದವರು [illegible] ಲಕ್ಷ ರೂ. ಸಾಲವನ್ನು ಮಂಜೂರು ಮಾಡಿರುತ್ತಾರೆ. ಇದಲ್ಲದೆ [illegible] ಲಕ್ಷ ರೂ. ಬಂಡವಾಳ ಹಾಕುವರು. ಕಾರ್ಖಾನೆಗೆ ಒಟ್ಟು [illegible] ಲಕ್ಷ ರೂ. ಆಗುವುದು. ಅಲ್ಲಿ ದಿನವಹಿ ೬೦೦ ರಿಂದ ೮೦೦ ಟನ್ ಕಬ್ಬನ್ನು ಅರೆಯಬಹುದು.

ಸಂಸ್ಥಾನ ಪುನರ್ವಿಂಗಡಣಾ ಮಸೂದೆಯ ಮಂಡನೆ

ಶಾಸನಸಭೆಯಲ್ಲಿ ಮುಖ್ಯ ಮಂತ್ರಿಯವರ ಟೀಕಾ ಭಾಷಣ

ಸ್ವಂ ಸು ಪ್ರೋ] ಬೆಂಗಳೂರು ೩೦

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಈ ದಿನ [illegible] ಶಾಸನ ಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರದಿಂದ ಬಂದಿರುವ ಕರಡು ಮಸೂದೆಯನ್ನು ಮಂಡಿಸಿದರು. ಅವರು ಟೀಕಾ ಭಾಷಣ ಮಾಡಿ, ಮೈಸೂರಿನವರು ಕೋರಿದ್ದಂತೆ ಸಂಸ್ಥಾನವನ್ನು ವಿಸ್ತರಿಸುವುದು, [illegible] ಮೈಸೂರಿನಲ್ಲೇ [illegible] ಮತ್ತು ಹೊಸ ಸಂಸ್ಥಾನವನ್ನು ಮೈಸೂರೆಂದೇ ಕರೆಯುವುದು ಈ ಮೂರು [illegible] ಗಳನ್ನು ಕೇಂದ್ರ ಸರ್ಕಾರದವರು ನೆರವೇರಿಸಿಕೊಟ್ಟಿರುವರೆಂದು ತಿಳಿಸಿದರು.

ಪ್ರದೇಶ ಮಂಡಲಗಳಿಗೆ ಗಡಿ ವಿವಾದವನ್ನು ಚರ್ಚಿಸಲು ಅವಕಾಶವಿರಬಾರದೆಂದೂ, ಪ್ರಾದೇಶಿಕ ಸಮಿತಿಗಳಿಗೆ ಹೆಚ್ಚಿನ ಅವಕಾಶವಿರಬೇಕಾಗಿತ್ತೆಂದೂ ಅವರು ತಿಳಿಸಿ, ಕೇಂದ್ರ ಸರ್ಕಾರದವರು ಈ ಬಗ್ಗೆ ಬಹಳ ಅಲಕ್ಷ್ಯದಿಂದ ನಡೆದುಕೊಳ್ಳುತ್ತಿರುವರೆಂದೂ, ದಕ್ಷಿಣದ ರಾಜ್ಯಗಳ [illegible] ಮತ್ತಾವ ಸರ್ಕಾರದಲ್ಲೂ ಇಲ್ಲವೆಂದೂ ಅಭಿಪ್ರಾಯಪಟ್ಟರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ನಾಗಸ್ವರ [illegible] ಕನ್ನಡ ವಾರ್ತೆಗಳು [illegible] ಸಣ್ಣ [illegible] ಗಗನಮುಕ್ತ [illegible] ವಾಚಕ [illegible] ಶ್ರೀನಿವಾಸಯ್ಯಂಗಾರ್. [illegible] ಬಾಲ ಜಗತ್-ಮಕ್ಕಳ ಕಾರ್ಯಕ್ರಮ. [illegible] ಮತ್ತು [illegible] ಸಂಗೀತ [illegible] ಹಾಡು [illegible] ಸಂಜೆ [illegible] ಸಂಗೀತ [illegible] ಮತ್ತು [illegible] ರಾಮಚಂದ್ರರ್-ಸಂಗೀತ [illegible] ಪತ್ರಿಕೋಕ್ತಿ [illegible] ವಿಚಾರ [illegible] ಸಂಗೀತ [illegible] ಸಂಗೀತ ಕಛೇರಿ.

ಸೊಸೈಟಿ ಚುನಾವಣೆ ರದ್ದಾಯಿತು

ಮೈಸೂರು ಶ್ರೀ ಕನ್ಯಕಾ ಪರಮೇಶ್ವರೀ ಕೋಆಪರೇಟಿವ್ ಸೊಸೈಟಿಯ ಡೈರೆಕ್ಟರುಗಳ ಸ್ಥಾನಗಳಿಗೆ ಕಳೆದ ಅಕ್ಟೋಬರಿನಲ್ಲಿ ನಡೆದ ಚುನಾವಣೆಯಲ್ಲಿ ಕಾನೂನು ವಿರುದ್ಧವಾದ ನಡವಳಿಗಳು ನಡೆದಿರುವುದೆಂಬ ಕಾರಣ, ಚುನಾವಣೆಯನ್ನು ರದ್ದುಗೊಳಿಸಿ ಹೊಸ ಚುನಾವಣೆ ನಡೆಸುವಂತೆ ಆಜ್ಞೆ ಮಾಡಬೇಕೆಂದು [illegible] ಉಪಾಧ್ಯಕ್ಷರೂ, [illegible] ಒಬ್ಬರೂ ಆದ ಶ್ರೀ [illegible] ಎಸ್ ನಾರಾಯಣಸ್ವಾಮಿಯವರು [illegible] ರಿಜಿಸ್ಟ್ರಾರ್‌ರವರ ನ್ಯಾಯಾಲಯದಲ್ಲಿ ಹಾಕಿರುವ ಅರ್ಜಿ ಸಲ್ಲಿಸಿದ್ದುದನ್ನು ವಾಪಸು ಪಡೆದಿರುತ್ತಾರೆ.

ಬಹಿರಂಗ ಸಭೆ

ಆಹಾರ ಧಾನ್ಯಗಳ ಬೆಲೆ ವಿಪರೀತ ಏರುತ್ತಿರುವುದನ್ನು ತಡೆಗಟ್ಟುವಂತೆ ಸರ್ಕಾರವನ್ನು [illegible] ಮಾಡುವುದಕ್ಕಾಗಿ ನಗರದ ಪ್ರಜಾ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ [illegible] ಗಂಟೆಗೆ ಬಹಿರಂಗ ಸಭೆಯೊಂದನ್ನು ಕರೆಯಲಾಗಿದೆ.

ಮೈಸೂರು ಮತ್ತು ಕರ್ನಾಟಕ ಪ್ರದೇಶ ಕಾಂ|| ಸಮಿತಿಗಳ ಐಕ್ಯ

ಬರುವ ಅಕ್ಟೋಬರ್ ೧ನೇ ತಾರೀಖು ಸಂಸ್ಥಾನ ಪುನರ್ವಿಂಗಡಣೆಯಾಗುವ ಮುಂಚೆಯೇ ಒಟ್ಟುಗೂಡುವ ಸಂಸ್ಥಾನಗಳಲ್ಲಿ ಭಿನ್ನಭಿನ್ನ ಪ್ರದೇಶ ಕಾಂಗ್ರೆಸ್ ಸಮಿತಿಗಳ ಐಕ್ಯವಾಗುವುದೆಂದೂ, ಅದರಂತೆಯೇ ಮೈಸೂರು ಮತ್ತು ಕರ್ನಾಟಕ ಪ್ರದೇಶ ಸಮಿತಿಗಳೂ ಸಮ್ಮಿಳಿತವಾಗುವುವೆಂದೂ ವರದಿಯಾಗಿದೆ

ದ್ವಿತೀಯ ಯೋಜನೆಯಲ್ಲಿ ೧೦ ಸಾವಿರ ಹಳ್ಳಿಗಳಿಗೆ ದೀಪ

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಭಾರತಾದ್ಯಂತ ೧೦ ಸಾವಿರ ಹಳ್ಳಿಗಳಲ್ಲೂ, ಸುಮಾರು ೫೦೦ ಸಣ್ಣ ಪಟ್ಟಣಗಳಲ್ಲೂ ವಿದ್ಯುದ್ದೀಪಗಳನ್ನು ಹಾಕಲಾಗುವುದೆಂದು ಗೊತ್ತಾಗಿದೆ ಈ ಯೋಜನೆಗಾಗಿ ಸಂಸ್ಥಾನಗಳು ಒಟ್ಟು ೮೦ ಕೋಟಿ ರೂ ವೆಚ್ಚ ಮಾಡಲಿವೆ

ಕರಿಮುದ್ದನ ಹಳ್ಳಿಯಲ್ಲಿ ಗದ್ದಿಗೆ ಜಾತ್ರೆ

ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಕರಿಮುದ್ದನ ಹಳ್ಳಿ ಗ್ರಾಮಕ್ಕೆ ಸೇರಿದ ಶ್ರೀ ಕೆಂಪಗಣ್ಣ ಸ್ವಾಮಿಗಳವರ ಗದ್ದಿಗೆ ಜಾತ್ರೆಯು ಇದೇ ಸೋಮವಾರ ಮತ್ತು ಮಂಗಳವಾರ ನಡೆಯುವುದು ಮಹಾರಾಜರು ಕೊಟ್ಟಿರುವ ಬೆಳ್ಳಿ ಪ್ರತಿಯನ್ನು ಈ ಸಂದರ್ಭದಲ್ಲಿ ಪ್ರದರ್ಶಿಸಲಾಗುತ್ತದೆ ಮಂಗಳವಾರ ಬೆಳಿಗ್ಗೆ ಮೈಸೂರು ನಗರದ ಹೆಸರುವಾಸಿಯಾದ ಪೈಲ್ವಾನರುಗಳಿಂದ ೨ ಜೊತೆ ಕುಸ್ತಿಗಳಾಗುವುವು. ಭಕ್ತಾದಿಗಳು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಗ್ರಾಮದ ಮುಖಂಡರುಗಳು ಕೋರಿರುತ್ತಾರೆ

ಕರ್ನಾಟಕ ಸಂಗೀತ ಮಹಾ ಪುರುಷರ ಪುಣ್ಯ ದಿನಾಚರಣೆ

ಮಂಡ್ಯದ ಶ್ರೀ ಸದ್ಗುರು ಸಂಗೀತ ಪಾಠಶಾಲೆಯ ಪೋಷಕ ಬೋಧಕ ಸಂಘದ ಆಶ್ರಯದಲ್ಲಿ ಈ ದಿನ ಮತ್ತು ನಾಳೆ ತ್ಯಾಗರಾಜರು, ಪುರಂದರದಾಸರು ಮತ್ತು ಶ್ಯಾಮಶಾಸ್ತ್ರಿಗಳ ಪುಣ್ಯ ದಿನಾಚರಣೆ ಮತ್ತು ಸಂಸ್ಕೃತಿ ಪ್ರಚಾರ ಕಾರ್ಯಕ್ರಮವನ್ನು ನಡೆಸಲಾಗುವುದು ಮೈಸೂರು,ಬೆಂಗಳೂರುಗಳ ಸಂಗೀತ ವಿದ್ವಾಂಸರೂ, ಕೀರ್ತನಕಾರರೂ ಅದರಲ್ಲಿ ಭಾಗವಹಿಸುವರು ಮಹಾಜನರ ಉದಾರ ಸಹಾಯವನ್ನು ಕೋರಲಾಗಿದೆ ನಾಳೆ ಸಂಜೆ ಗೌರಿ ಕುಪ್ಪುಸ್ವಾಮಿಯವರ ಸಂಗೀತವೂ, ನಂತರ ವಿ|| ಹೆಚ್ ಟಿ. ಶಾಮಣ್ಣನವರಿಂದ ಹರಿಕಥೆಯೂ ಇವೆ ಶ್ರೀ ಕೆ ವಿ ಶಂಕರಗೌಡರು ಅಧ್ಯಕ್ಷತೆ ವಹಿಸುವರು

ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್

ಕೆನರಾ ಬ್ಯಾಂಕಿಂಗ್ ಕಾರ್ಪೊರೇಷನ್ನಿನ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ನೆನ್ನೆ ಬ್ಯಾಂಕಿನ ಮೈಸೂರು ಶಾಖೆಯ ಏಜೆಂಟರಾದ ಶ್ರೀ ಕೆ ಎಸ್ ಶೆಣೆಯವರು ಶಾ ಖಾ ಕಟ್ಟಡದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಅಮೆರಿಕಾ ಕಮ್ಯೂನಿಸ್ಟ್ ಪಕ್ಷದ ಕಛೇರಿಗೆ ಬೀಗ ಮುದ್ರೆ

ತೆರಿಗೆಗಳನ್ನು ಕೊಡದೆ ಬಾಕಿ ಉಳಿಸಿಕೊಂಡುದಕ್ಕಾಗಿ ಅಮೆರಿಕದಲ್ಲಿರುವ ಕಮ್ಯೂನಿಸ್ಟ್ ಪಕ್ಷದ ಕಟ್ಟಡಗಳು ಮತ್ತು ಆಸ್ತಿಗಳನ್ನು ಅಲ್ಲಿನ ಸರ್ಕಾರದವರು ವಶಪಡಿಸಿಕೊಂಡು ಬೀಗ ಮುದ್ರೆ ಹಾಕಿರುತ್ತಾರೆ

ಹನುಮಂತಯ್ಯನವರಿಂದ ಕೊಡಗು ಪ್ರದರ್ಶನಾರಂಭ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಮುಂದಿನ ತಿಂಗಳು ೨೩ನೇ ತಾರೀಖು ಮಡಕೇರಿಯಲ್ಲಿ ಅಖಿಲ ಕೊಡಗು ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನವನ್ನು ಆರಂಭಗೊಳಿಸುವರು

ಮಂಡ್ಯದಲ್ಲಿ ಮೋದಿಯವರ ಕಾರ್ಯಕ್ರಮ

ಮಂಡ್ಯ ಜಿಲ್ಲೆಯಲ್ಲಿ ಡಾ|| ಎಂ ಸಿ ಮೋದಿಯವರ ನೇತ್ರ ಪರೀಕ್ಷಾ ಪ್ರವಾಸ ಕಾರ್ಯಕ್ರಮವು ಈ ರೀತಿ ಇದೆ.—

೧ ನೇ ತಾರೀಖು ಭಾನುವಾರ ಬೆಳಿಗ್ಗೆ ಶ್ರೀರಂಗಪಟ್ಟಣ, ಮಧ್ಯಾಹ್ನ ೧ ಪಾಂಡವಪುರ ಮತ್ತು ಸಂಜೆ ೫ ಕೃಷ್ಣರಾಜಪೇಟೆ, ೨ ನೇ ತಾರೀಖು ಬೆಳಿಗ್ಗೆ ಕಿಕ್ಕೇರಿ ಮಧ್ಯಾಹ್ನ ೧ ನಾಗಮಂಗಲ ೩ನೇ ತಾರೀಖು ಬೆಳಿಗ್ಗೆ ೮ಕ್ಕೆ ಮದ್ದೂರು, ಮಧ್ಯಾಹ್ನ ಮಳವಳ್ಳಿ, ೪ರಂದು ಬೆಳಿಗ್ಗೆ ೯ ಮಂಡ್ಯ ಮಂಡ್ಯದಲ್ಲಿ ೫ನೇ ತಾರೀಖು ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ಶಿಬಿರದ ಆರಂಭ

ಸ್ವಾಗತ ಸಮಾರಂಭ

ಕೃಷ್ಣರಾಜ ಮೊಹಲ್ಲಾ ವಾಣಿವಿಲಾಸ ರಸ್ತೆಯಲ್ಲಿರುವ ವರ್ತಕರಾದ ಶ್ರೀ ಬಿ ನಾಗಪ್ಪನವರು ತಮ್ಮ ಕುಮಾರ ಶ್ರೀ ಶಿವಶಂಕರರಿಗೆ ಕೊಳ್ಳೇಗಾಲದ ಶ್ರೀ ಜಿ ಸಿ ಪರಶಿವಯ್ಯನವರ ಕುಮಾರಿ ಸೌ|| ನೀಲಾಂಬರವರನ್ನು ತಂದುಕೊಂಡು ವಿವಾಹ ನಡೆಸಿದ ಸಂಬಂಧವಾಗಿ ನೊನ್ನೆ ಸಂಜೆ ಸ್ವಾಗತಸಮಾರಂಭವನ್ನು ಏರ್ಪಡಿಸಿದ್ದರು

ಮೈಸೂರು ಪೇಟೆ ಧಾರಣೆ

	ರೂ	ಯಿಂದ		ರೂ	ವರೆಗೆ	
ಕಡಲೆಕಾಯಿ	೧೯	೪	೦	೨೪	೦	೦
ಹರಳುಬೀಜ	೩೧	೪	೦	೩೩	೦	೦
ಉಚ್ಚೆಳ್ಳು	೪೭	೦	೦	೫೧	೮	೦
ಹೊಂಗೆಬೀಜ	೨೪	೧೦	೦	೨೫	೧೨	೦
ಮೆಣಸು	೨೭	೨	೦	೨೮	೪	೦
ಹೆಸರು	೫೧	೪	೦	೫೨	೧೪	೦
ಹಲಸಂದೆ	೫೩	೦	೦	೫೬	೨	೦
ತೊಗರಿ	೬೦	೮	೦			
ಧನಿಯ	೬೫	೪	೦			
ಕಡಲೆ	೪೦	೦	೦	೪೧	೨	೦
ಅವರೆ	೩೩	೦	೦	೩೫	೦	೦
ಹುರುಳಿಬೀಜ	೩	೧೪	೦	೫	೦	೦
[illegible]	೫೦	೦	೦	೫೦	೮	೦
ಹುಣಸೇಹಣ್ಣು	೨	೫	೦	೬	೧೦	೦
ಸೀಗೆಕಾಯಿ	೭	೧೧	೦	೮	೧	೦
ಮೆಣಸಿನಕಾಯಿ	೧೬	೧೦	೦	೨೨	೦	೦
ತೆಂಗಿನಕಾಯಿ ೧೦೦೦	೧೨೫	೮	೦	೨೨೫	೮	೦

ಬಸ್ಸುಗಳಿಗೆ ನಗರದ ಡ್ರೈವರ್-ಕಂಡಕ್ಟರುಗಳನ್ನೇ ನೇಮಿಸಬೇಕು

ನಗರದಲ್ಲಿ ಓಡಾಡುತ್ತಿರುವ ಬಸ್ಸುಗಳಿಗೆಲ್ಲಾ ಸ್ಥಳೀಯ ಡ್ರೈವರ್ ಮತ್ತು ಕಂಡಕ್ಟರುಗಳನ್ನೇ ನೇಮಿಸುವ ಆವಶ್ಯಕತೆಯು ದಿನೇದಿನೇ ಹೆಚ್ಚು ಹೆಚ್ಚಾಗಿ ಕಂಡುಬರುತ್ತಿದೆ. ಈಗ ಈ ಕೆಲಸಕ್ಕಾಗಿ ಬಂದಿರುವವರೆಲ್ಲರೂ ವಿಶೇಷವಾಗಿ ಬೆಂಗಳೂರಿನವರೇ, ಅವರಿಗೆ ಇಷ್ಟು ದಿನವಾದರೂ ಇನ್ನೂ ಮೈಸೂರಿನ ಬೀದಿಗಳೇ ಸರಿಯಾಗಿ ಪರಿಚಯವಾಗಿಲ್ಲ ಮತ್ತು ಬಸ್ಸುಗಳು ಎಲ್ಲೆಲ್ಲಿ ನಿಲ್ಲಬೇಕೆಂಬ ಅರಿವೂ ಸಹ ಚೆನ್ನಾಗಿ ಆಗಿಲ್ಲ. ಟಿಕೇಟುಗಳನ್ನು ಕೊಡುವಾಗ ಅವರು ಇನ್ನೂ ತಬ್ಬಿಬ್ಬಾಗುತ್ತಲೇ ಇದ್ದಾರೆ ಕೆಲವರಿಗೆ ಕನ್ನಡ ಭಾಷೆಯೂ ಸಹ ಸರಿಯಾಗಿ ತಿಳಿಯದೆ ತೊಡಕುಗಳುಂಟಾಗುತ್ತಿವೆ ಬೆಂಗಳೂರು ನಗರದಲ್ಲಿ ಅವರು ಎಷ್ಟು ದಕ್ಷತೆಯಿಂದ ಕೆಲಸ ಮಾಡಿರಬಹುದಾದರೂ ಇಲ್ಲಿ ಅವರು ಇನ್ನೂ ಪಳಗಿಲ್ಲ

ಇಷ್ಟೇ ಅಲ್ಲದೆ ನಗರದ ಬಸ್ಸುಗಳನ್ನು ಸರ್ಕಾರದವರು ವಹಿಸಿಕೊಂಡಂದಿನಿಂದ ಇಲ್ಲಿಗೆ ಬಂದಿರುವ ಸುಮಾರು ಒಂದು ನೂರು ಜನ ಡ್ರೈವರ್ ಕಂಡಕ್ಟರ್ ಮತ್ತು ಇತರ ಸಿಬ್ಬಂದಿಯವರು ಇನ್ನೂ ತಾತ್ಕಾಲಿಕವಾಗಿಯೇ ಕೆಲಸ ಮಾಡುತ್ತಿದ್ದಾರೆ ಈ ಕಾರಣದಿಂದ [illegible] ಊರಿನಲ್ಲಿ ಮನೆಮಠಗಳನ್ನು [illegible] ಸಂಸಾರಗಳನ್ನು ಹೂಡುವ ಸ್ಥಿತಿಯಲ್ಲಿಲ್ಲ. ಯಾವಾಗ ಬೇಕಾದರೂ ಅವರನ್ನು ಬೇರೆ ಕಡೆಗೆ ವರ್ಗಾಯಿಸಬಹುದು ಹೀಗಾಗಿ ಅವರುಗಳೂ ಸಹ ಸಂದಿಗ್ಧ ಪರಿಸ್ಥಿತಿಯಲ್ಲಿ ಕೆಲಸ ಮಾಡುತ್ತಿದ್ದಾರೆ

ನಗರದಲ್ಲಿ ಸರ್ಕಾರದವರು ಬಸ್ ಸರ್ವೀಸನ್ನು ಆರಂಭಿಸುವಾಗ ಇಲ್ಲಿನ ನಿರುದ್ಯೋಗಿಗಳಾದ ಜನರಿಗೇ ನೌಕರಿಯನ್ನು ಕೊಡಬೇಕೆಂದು ಪೌರಸಭಾಧ್ಯಕ್ಷರು ಒತ್ತಾಯ ಮಾಡಿದ್ದರು ಹಾಗೆ ಮಾಡಲಾಗುವುದೆಂಬ ನಿರೀಕ್ಷಣೆಯೂ ಇತ್ತು. ಆದರೆ ಇದುವರೆಗೆ ಆ ರೀತಿ ಆಗಿಲ್ಲ. ನಗರದ ಬಸ್ಸುಗಳ ರಾಷ್ಟ್ರೀಕರಣದಿಂದ ಇಲ್ಲಿನ ತರುಣರ ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ಸ್ವಲ್ಪವೂ ಸಹಾಯವಾಗಿಲ್ಲ

ಪ್ರಸ್ತುತದಲ್ಲಿ ಬೆಂಗಳೂರು ನಗರದ ಬಸ್ಸುಗಳ ರಾಷ್ಟ್ರೀಕರಣವು ಆಗಲಿದೆಯಷ್ಟೆ ಈಗ ಬೆಂಗಳೂರಿನಿಂದ ಮೈಸೂರು ನಗರಕ್ಕೆ ಬಂದಿರುವ ನೌಕರರುಗಳನ್ನು ಸದರಿ ಕೆಲಸಕ್ಕೆ ನೇಮಿಸಿಕೊಂಡು ಅವರಿಗೆ ಅಲ್ಲಿ ಸೌಲಭ್ಯವನ್ನು ಕಲ್ಪಿಸಿಕೊಟ್ಟು ಮೈಸೂರು ನಗರದ ಬಸ್ಸುಗಳಿಗೆ ಇಲ್ಲಿನ ಕೆಲಸಗಾರರನ್ನೇ ನೇಮಿಸಿಕೊಂಡು ಸ್ಥಳೀಯ ಜನರಿಗೆ ಉತ್ತೇಜನವೀಯುವುದಲ್ಲದೆ ಬಸ್ಸುಗಳ ಸಂಚಾರ ವ್ಯವಸ್ಥೆಯೂ ಹೆಚ್ಚು ಸಮರ್ಪಕವಾಗುವಂತೆ ಸರ್ಕಾರದವರು ಮಾಡುವರೆಂದು ಆಶಿಸಲಾಗಿದೆ

— ಒಬ್ಬ ಪೌರರ ಇಚ್ಛೆ

ಚಾಮರಾಜನಗರದ ಪೌರ[...] ಚುನಾವಣಾ ಫಲಿತಾಂ[...]

ಚಾಮರಾಜನ[...]

ಇಲ್ಲಿನ ಪೌರಸಭೆಯ ಚುನಾವಣೆ[...] ನಡೆದು ಈ ದಿನ ಎಣಿಕೆಯು ಆಯ[...] ಳಾದ ಸಿ. ಆರ್ ತಿಮ್ಮಶೆಟ್ಟಿ, ಸಿ ವಿ [...] ಸಿ. ಎಸ್ ಶ್ರೀಕಂಠಯ್ಯ, ಮಹಮದ್[...] ಪೀರ್, ಎಸ್. ನಾಗರಾಜ್, ಮಾದಶೆಟ್ಟಿ[...] ಸಶೆಟ್ಟಿ, ನಿಂಗಯ್ಯ, ಎ. ರೇವಣ್ಣ, ಆರ್[...] ಬಂಗಾರಶೆಟ್ಟಿ, ಆರ್ ಮಾದಯ್ಯ, ಎಸ್[...] ಬುಂಡಯ್ಯ, ಮತ್ತು ರಾಮನಾಯಕರು[...] ರಾಗಿ ಆರಿಸಲ್ಪಟ್ಟರು

ವಿವಾಹ ಮಹೋತ್ಸವ[...]

ನಜರ್ ಬಾದಿನಲ್ಲಿರುವ ಶ್ರೀ ಕೆ ಎಲ್[...] ಸಿಂಗ್ ರವರು ತಮ್ಮ ಸಹೋದರ ಶ್ರೀ ಎಲ್[...] ಪೂಸಿಂಗ್ ರವರ ಕುಮಾರಿ ಸೌ|| ಸರೋ[...] ಯಿಯನ್ನು ಮಂಡ್ಯದಲ್ಲಿರುವ ಅಬ್ಕಾರಿ[...] ಕ್ಟರ್ ಶ್ರೀ ಬಿ. ಲಕ್ಷ್ಮಣಸಿಂಗ್ ರವರ [...] ಶ್ರೀ ಕೆ. ಎಲ್. ನರಸಿಂಗ್ ರವರಿಗೆ ಕೊ[...] ದ ೨೭ನೇ ತಾರೀಖು, ತಮ್ಮ ಕುಮಾ[...] ನರಸಿಂಗರಾವರವರಿಗೆ ಶ್ರೀ ಲಕ್ಷ್ಮಣಸಿಂ[...] ಮಗಳು ಸೌ|| ಗೌರಾಬಾಯಿಯನ್ನು [...] ಕೊಂಡು ನೆನ್ನೆಯೂ ವಿವಾಹ ಮಹೋತ್[...] ನ್ನು ನೆರವೇರಿಸಿದರು

ಕೃಷ್ಣಾಪುರದ ದೇವಾಲಯ[...] ಜೀರ್ಣೋದ್ಧಾರ

ಟಿ. ನರಸೀಪುರದ ತಾಲ್ಲೂಕು ಕೃಷ್ಣಾ[...] ಶ್ರೀ ಸಂತಾನ ಗೋಪಾಲಕೃಷ್ಣಸ್ವಾಮಿ[...] ದೇವಸ್ಥಾನದ ನವರಂಗ ಮಂಟಪದ [...] ಕೆಲಸವು ನಡೆಯದೆ ಅರ್ಧಾಂತರವಾಗಿ [...] ರ್ಷದಿಂದಲೂ ಹಾಗೆಯೇ ಉಳಿದಿದೆ ಒಂದು ತಿಂಗಳಲ್ಲಿ ರಥೋತ್ಸವವು ನಡೆ[...] ಕಾಗಿದೆ ಆದ ಪ್ರಯುಕ್ತ ಈಗಲಾದರು [...] ರಿ ಕೆಲಸವನ್ನು ಜರೂರಾಗಿ ನಡೆಸುವುದು[...] ಎಂಬುದಾಗಿ ಕೃಷ್ಣಾಪುರದ ದೈವಭಕ್ತರು[...] ತಿಳಿಸಿರುತ್ತಾರೆ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆ[...] ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕ[...] ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆ[...] ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ[...]

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾ[...] ಅಶೋಕ ರಸ್ತೆ, ಮೈಸೂರು (Estd [...]

Edited, Printed and Publish[...] A. R. Nagarajan at Sadhvi [...] D. Subbiah Road, Mysore

ಒಮ್ಮೆ ಭೇಟಿ ಕೊಡಿ! ಪರೀಕ್ಷಿಸಿ!!

ಗೀತಾ ಸ್ಟೋರ್ಸ್

ಶಿವರಾಂಪೇಟೆ (ಮಸೀದಿ ಪಕ್ಕ), ಮೈಸೂರು

ಬೀಡಿ ಅಂಗಡಿ ಮತ್ತು ಹೋಟೇಲು ಮಾಲೀಕರುಗಳೇ!

ನಮ್ಮಲ್ಲಿ ಆಧುನಿಕ ಗಾಜಿನ ಸಾಮಾನುಗಳೂ, ಸಿಲ್ವರ್ ಮೆಂಟ್, ಬಿಲ್ವಾಪೌಡರ್ ಮತ್ತು ಬೀಡಿ ಸಿಗರೇಟುಗಳು, ಸೋಪುಗಳು ಒಟ್ಟಾಗಿಯೂ, ಚಿಲ್ಲರೆಯಾಗಿಯೂ ಅತಿ ಸುಲಭ ದರದಲ್ಲಿ ದೊರೆಯುತ್ತವೆ

ಈ ಪತ್ರಿಕೆ ಓದುವವರಿಗೆ, ಡಜನ್ 1ಕ್ಕೆ 2-4-0 ರೂ ಬೆಲೆಯ ಹಿಂದೂಸ್ತಾನ್ 6 ಔನ್ಸ್ ಗಾಜಿನ ಲೋಟಗಳನ್ನು 2-1-0 ರೂ ಗೆ ಕೊಡಲಾಗುತ್ತೆ

ರಣಜಿತ್ ★

31-3-56 ರಿಂದ : ಅಶೋಕ್ ಪ್ರಾ[...] ಪ್ರತಿ ದಿನ ಮೂರು ಪ್ರದರ್ಶನಗಳು [illegible] ಹೊಸ ತೆಲುಗು [...]

★ ಕನಕತಾರ[...]

ತಾರಾಗಣ:— ಎಸ್ ವರಲಕ್ಷ್ಮಿ, ರಂಗಾ[...] ಕುಚಲಕುಮಾರಿ, ಗುಮ್ಮಡಿ, ಮಾಸ್ಟರ್ [...] ಮತ್ತು ಬೇಬಿ ಸುಭದ್ರ, ಮುಂತಾದವರು

ನಿರ್ದೇಶಕ — ರಜನಿಕಾಂತ್

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

31—3—56ರ : [illegible] : ಅಶೋಕ 2ನೇ [...]

ರೋಹಿಣಿಯವರ ಕನ್ನಡ ಚಿತ್ರ

ಆರ್ ನಾಗೇಂದ್ರರಾವ್, ಪಂಡರಿಬಾಯಿ, ನರಸಿಂಹರಾಜು, ಲಕ್ಷ್ಮಿ, ಕೌಶಿಕ್, ಜಯಲಕ್ಷ್ಮಿ, ಕಮಲ, ಬೇಬಿ ಉಮಾ ಪಾತ್ರವಹಿಸಿರುವ

★ ಶ್ರೀ ರೇಣುಕಾ ಮಹಾತ್ಮೆ

(ಎಲ್ಲಮ್ಮನ ಕಥಾ)

೪ ವಾರಗಳ ಕಾಲ ಎಲ್ಲ ವಿಧವಾದ ಫ್ರೀ ಪಾಸ್ಸು ಕಾಂಪ್ಲಿಮೆಂಟರಿ ಪಾಸುಗಳನ್ನು ರದ್ದು ಮಾಡಲಾಗಿದೆ

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಲಗ್ನದ ಜವಳಿ
ಗಾ|| ಸಿಲ್ಕ್ ಸೀರೆಗಳು
ಧರ್ಮಾವರಂ, ಘೂಟಾ, ಆರ್ಣಿ, ದಿಂಡಿಗಲ್
ರೇಶ್ಮೆ ಮತ್ತು ಜರಿಗಳ ಸೀರೆಗಳು
ಬಂದಿವೆ ಬಂದು ಕೊಳ್ಳಿ ಸಿಕ್ಕಿ
M.V. ಭೋಜಯ್ಯ
ಬಿ ಎ., & ಬ್ರದರ್ಸ್,
ಇಂಪೀರಿಯಲ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : SUNDAY 1-4-1956 ಮೈಸೂರು ಭಾನುವಾರ : ೧-೪-೧೯೫೬ [ಸಂಚಿಕೆ : ೨೨೨

ಸಚಿವ ಹೆಚ್. ಎಂ. ಚನ್ನಬಸಪ್ಪನವರ ಚುನಾವಣೆ ರದ್ದು

ಸಚಿವ ಹೆಚ್. ಎಂ. ಚನ್ನಬಸಪ್ಪನವರ ಚುನಾವಣೆ ರದ್ದು

ನ್ಯಾಯಮಂಡಲದ ತೀರ್ಪು

ಬೆಂಗಳೂರು ೧

ಕೈಗಾರಿಕಾ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ವಿಧಾನ ಸಭೆಗೆ ಪಿರಿಯಾಪಟ್ಟಣ ಕ್ಷೇತ್ರದಿಂದ ಸದಸ್ಯರಾಗಿ ಚುನಾಯಿತರಾಗಿ ಒಂದಿರುವುದನ್ನು ರದ್ದುಗೊಳಿಸಿ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಟಿ. ಗುರುನಂಜಯ್ಯ, ಎನ್. ಆರ್. ... ರಾವ್ ಮತ್ತು ವಕೀಲರಾದ ಶ್ರೀ ... ಕನಕ ... ಸದಸ್ಯರುಳ್ಳ ಚುನಾವಣಾ ನ್ಯಾಯಮಂಡಲವು ಆಜ್ಞೆ ಮಾಡಿರುತ್ತಾರೆ.

ಎರಡು ವರ್ಷಗಳ ಹಿಂದೆ ನಡೆದ ಉಪಚುನಾವಣೆಯಲ್ಲಿ ಶ್ರೀ ಚನ್ನಬಸಪ್ಪನವರೊಡನೆ ಶ್ರೀ ಕೆ. ... ಕರಿಯಪ್ಪ ಎಂಬುವರು ಸ್ಪರ್ಧಿಸಿ, ಅವರ ನಾಮಪತ್ರವನ್ನು ಚುನಾವಣಾಧಿಕಾರಿಗಳು ತಿರಸ್ಕರಿಸಿದ್ದ ಸಂದರ್ಭದಲ್ಲಿ ಮೊದಲು ಶ್ರೀ ಕರಿಯಪ್ಪನವರ ತಕರಾರು ಅರ್ಜಿಯನ್ನು ನ್ಯಾಯಮಂಡಲದಲ್ಲಿ ಸಲ್ಲಿಸಿ, ಸ್ವಲ್ಪ ಕಾಲಾನಂತರ ಅದನ್ನು ವಾಪಸು ಪಡೆದಿದ್ದರು.

ಆದರೆ ಆ ಕ್ಷೇತ್ರದ ಮತದಾರರಾದ ಪಟೇಲ್ ... ವೆಂಕಟೇಶಗೌಡ, ಟಿ. ವೆಂಕಟರಮಣೇಗೌಡ, ... ಗೌಡ ಮತ್ತು ದೊಡ್ಡೇಗೌಡರವರು ಅದನ್ನು ವಾದಿಯರಾಗಿ ತೆಗೆದುಕೊಳ್ಳುವಂತೆ ಅರ್ಜಿ ಸಲ್ಲಿಸಿದ್ದರು. ಅದನ್ನು ಅಂಗೀಕರಿಸಿ ನ್ಯಾಯಮಂಡಲದವರು ತೀರ್ಪಿತ್ತು, ಶ್ರೀ ಕೆ. ಸಿ. ಕರಿಯಪ್ಪನವರ ನಾಮಪತ್ರವನ್ನು ತಿರಸ್ಕರಿಸಿರುವುದು ನ್ಯಾಯಬದ್ಧವಲ್ಲವೆಂದು ಸೂಚಿಸಿರುತ್ತಾರೆ. ... ಚುನಾವಣೆಯ ಫಲಿತಾಂಶದ ಮೇಲೆ ... ಪರಿಣಾಮವಾಗಿರುವುದೆಂದು ಸೂಚಿಸಿರುವರು. ಶ್ರೀ ಕರಿಯಪ್ಪನವರು ತಮ್ಮ ತಕರಾರು ... ವಾಪಸು ಪಡೆದುದರಿಂದ ಅವರ ನಾಮಪತ್ರ ತಿರಸ್ಕಾರದ ನ್ಯಾಯಬದ್ಧತೆಯ ವಿಷಯ ... ಪ್ರಸ್ತಾಪಿಸತಕ್ಕದ್ದಲ್ಲವೆಂದು ಹೇಳಲು ಸಾಧ್ಯವಿಲ್ಲವೆಂದೂ ಅಭಿಪ್ರಾಯಪಡಲಾಗಿದೆ.

ಶ್ರೀ ಚನ್ನಬಸಪ್ಪನವರ ಚುನಾವಣೆಯು ಸಂಪೂರ್ಣವಾಗಿ ಅಸಿಂಧುವಾದುದೆಂದು ನ್ಯಾಯಮಂಡಲದವರು ಹೇಳಿರುವರು.

ಪೂನಾದಲ್ಲಿ ಬೆಂಕಿಯಿಂದ ೧೦ ಲಕ್ಷ ರೂ. ಆಸ್ತಿ ನಷ್ಟ

... ನ ಭವಾನಿಪೇಟೆ ಮತ್ತು ರವಿವಾರ ಪೇಟೆಗಳಲ್ಲಿ ಇರುವ ಇಕ್ಕಟ್ಟಾದ ವ್ಯಾಪಾರ ... ದಲ್ಲಿ ನಿನ್ನೆ ಬಹಳ ಭಾರಿ ಬೆಂಕಿಯುಂಟಾಗಿ ... ಲಕ್ಷ ರೂ. ಆಸ್ತಿ ನಷ್ಟವಾಯಿತು. ಯಾರೂ ಪ್ರಾಣಾಪಾಯವಾಗಲಿಲ್ಲ. ಮೂರು ಜನರಿಗೆ ಪೆಟ್ಟು ಗಾಯಗಳಾದುವು. ೭೦ ಮನೆಗಳು ಸುಟ್ಟುಹೋದುವು. ಮಿಲಿಟರಿಯವರು ಬೆಂಕಿಯನ್ನು ಆರಿಸಿದರು.

ಕೇಡಿಯ ಬಂಧನ

ಮೈಸೂರು ಮತ್ತು ನಂಜನಗೂಡು ತಾಲ್ಲೂಕಿನಲ್ಲಿ ಕಳ್ಳತನ ನಡೆಸಿದ ಕೇಡಿ ಬಸವ ... ಹಿಂದೆ ಎಂಬುವನನ್ನು ವಶ್ಪಗಿರಿ ಮಾಡಲಾಗಿದೆ. ಇವನು ... ಕೋರಿ, ಪೋಲೀಸರನ್ನು ... ತಲೆಮರೆಸಿಕೊಂಡು ಪರಾರಿಯಾಗಿದ್ದನೆಂದು ಹೇಳಲಾಗಿದೆ.

ದ್ವಿಭಾಷಾ ಸಂಸ್ಥಾನಕ್ಕಾಗಿ ವಿಲೀನ ವಿರೋಧಿಗಳ ಕರೆ

ಬೆಂಗಳೂರು ೩೧

ಮೈಸೂರು ಒಂದು ಭಾಗವಾಗುವ ದ್ವಿಭಾಷಾ ... ಸಂಸ್ಥಾನವನ್ನು ರಚಿಸುವುದಕ್ಕೆ ಅನುಕೂಲವಾಗುವಂತೆ ಸಂಸ್ಥಾನ ಪುನರ್ವಿಂಗಡಣಾ ಮಸೂದೆಯಲ್ಲಿ ತಿದ್ದುಪಡಿ ... ಕಾಂಗ್ರೆಸ್ ... ಸಮಿತಿಯವರು ... ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ... ಮತ್ತು ದ್ವಿಭಾಷಾ ... ಅದನ್ನು ಕರಡು ಮಸೂದೆಯಲ್ಲಿ ... ಸಮಿತಿಯು ... ರವರು ಮತ್ತು ... ಮೈಸೂರನ್ನು ಳಗೊಂಡ ... ಸಂಸ್ಥಾನವನ್ನು ಸ್ಥಾಪಿಸಲು ... ಕರೆ ಕೊಡಲಾಗಿದೆ.

ಕೇವಲ ಬಿಲ್ಲೆಂಚ್ ಡುಗಳು ಸರ್ಕಾರದ ವಶಕ್ಕೆ

ಸಂಸ್ಥಾನದಲ್ಲಿರುವ ... ಸರಿಯಾಗಿ ಕೆಲಸ ನಡೆಯುವಂತೆ ಎಲ್ಲ ದಿನಗಳು ... ಗಳನ್ನು ವಶಪಡಿಸಿಕೊಳ್ಳಲು ಸರ್ಕಾರದವರು ಆಲೋಚಿಸುತ್ತಿರುವುದಾಗಿ ಗೊತ್ತಾಗಿದೆ.

ನಾಲಿಗೆಯನ್ನು ಕುಯ್ದು ದೇವಿಗೆ ಒಪ್ಪಿಸಿದ ವಿದ್ಯಾರ್ಥಿ

ಕಾಶಿಯಲ್ಲಿರುವ ಅನ್ನಪೂರ್ಣಾ ದೇವಿಯ ಗುಡಿಯಲ್ಲಿ ಮೊನ್ನೆ ... ಸಂಸ್ಕೃತ ಕಾಲೇಜಿನ ವಿದ್ಯಾರ್ಥಿಯೊಬ್ಬನು ದೇವಿಯ ... ತನ್ನ ನಾಲಿಗೆಯನ್ನು ಕತ್ತರಿಸಿ ಒಪ್ಪಿಸಿದನೆಂದು ವರದಿಯಾಗಿದೆ. ಅವನ ಆಸ್ಪತ್ರೆಗೆ ಸೇರಿಸಲ್ಪಟ್ಟು ಗುಣಮುಖನಾಗುತ್ತಿರುವನು. ಅನ್ನಪೂರ್ಣೆಯು ತನ್ನ ಭಕ್ತರ ಅಭೀಷ್ಟವನ್ನು ಸಲ್ಲಿಸುವಳೆಂದು ಆತನು ಗ್ರಂಥಗಳಲ್ಲಿ ಓದಿ ಹೀಗೆ ಮಾಡಿದನು.

ಹಿಮದಲ್ಲಿ ೧,೦೦೦ ಮರಣ

ಜನವರಿ ... ರಿಂದ ... ನೇ ತಾರೀಕಿನ ವರೆಗೆ ಲಂಡನ್ನಿನಲ್ಲಿ ಬಿದ್ದ ಹಿಮದಿಂದ ೧,೦೦೦ ಜನರು ಮೃತಪಟ್ಟಿರುವರೆಂದು ಗೊತ್ತಾಗಿದೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ... ಕ್ಲಾರಿಯೊನೆಟ್, ... ಪ್ರಭುಪ್ರಸಾದ್-ಕನ್ನಡ ಗೀತೆಗಳು ... ನಾನ ವಿಚಾರ ... ಮಧ್ಯಾಹ್ನ ... ಹೆಚ್. ವಿ. ವೆಂಕಟರಮಣಯ್ಯ-ಸಂಗೀತ ... ಮತ್ತು ಸಂಜೆ ... ಫಾಗೀರಥಿ ... ಸಿಂಪ್ಲ ವೀಣೆ ... ಕ್ಲಾರಿಯೊನೆಟ್ ... ಪ್ರಾದೇಶಿಕ ... ಜನಪದ ಗೀತೆ ... ಹಿಂದಿ ಗೀತೆ ... ಭಜನೆ ... ವಾರದ ಕ್ರೀಡಾ ವಿಮರ್ಶೆ ... ಪಂಚವಾರ್ಷಿಕ ಯೋಜನೆ ವರದಿ ... ಸಂಗೀತ ... ಈ ದಿನ ಪಾರ್ಲಿಮೆಂಟಿನಲ್ಲಿ ... ಬೇಲೂರು ಮತ್ತು ಹಳೇಬೀಡು-ಇಂಗ್ಲಿಷ್ ಭಾಷಣ ... ತರುಣ ಕಾರ್ಯಕ್ರಮ-ಸಂಗೀತದ ಪಟ್ಟು.

ಕಾಶ್ಮೀರದ ಬಗ್ಗೆ ನೇರ ಸಂಧಾನಕ್ಕೆ ಅವಕಾಶ ತಪ್ಪಿದೆ.

ನೆಹರೂರವರ ಭಾಷಣದ ಮೇಲೆ ಪಾಕಿಸ್ತಾನದ ಪ್ರಧಾನಿಯವರ ಟೀಕೆ

ಪಾಕಿಸ್ತಾನದ ರಾಷ್ಟ್ರೀಯ ಸಭೆಯಲ್ಲಿ ನಿನ್ನೆ ಪಾಕಿಸ್ತಾನ ಪ್ರಧಾನಿ ಚೌಧುರಿ ಮಹಮದ್ ಅಲಿಯವರು ಮಾತನಾಡುತ್ತ ಕಾಶ್ಮೀರದ ಬಗ್ಗೆ ಇತ್ತೀಚೆಗೆ ಭಾರತದ ಪ್ರಧಾನಿಯು ಕೊಟ್ಟ ಹೇಳಿಕೆಯನ್ನು ಪರಿಶೀಲಿಸಿದರೆ ಈ ವಿಚಾರದಲ್ಲಿ ಎರಡು ರಾಷ್ಟ್ರಗಳ ನಡುವೆ ನೇರವಾದ ಮಾತುಕತೆಗೆ ಅವಕಾಶವಿಲ್ಲವೆಂದು ಗೊತ್ತಾಗುವುದಾಗಿ ತಿಳಿಸಿದರು. ಈ ವಿಚಾರವನ್ನು ವಿಶ್ವವೇ ಗಮನಿಸಿ ತೀರ್ಪು ಕೊಡಬೇಕೆಂದು ಅವರು ಕೋರುತ್ತಾರೆ. ಕಾಶ್ಮೀರದಲ್ಲಿ ನ್ಯಾಯವಾದ ಮತ್ತು ನಿಷ್ಪಕ್ಷಪಾತವಾದ ಜನಮತಗಣನೆಗೆ ಪಾಕಿಸ್ತಾನವು ಒಪ್ಪಿಕೊಂಡಿದೆ, ಅದಕ್ಕಾಗಿ ಹೋರಾಡುವುದಾಗಿ ಅವರು ಸೂಚಿಸುತ್ತಾರೆ. ಭಾರತದೊಡನೆ ಸಹಕರಿಸಲು ತಮಗೆ ಇಷ್ಟವಿದ್ದರೂ ಕಾಶ್ಮೀರದ ಬಗ್ಗೆ ಭಾರತವು ... ಮನೋಭಾವದಿಂದ ... ಅಡ್ಡಿಯಾಗಿದೆಯೆಂದೂ ಅವರು ತಿಳಿಸಿ, ಈ ಸಮಸ್ಯೆಯು ... ಅಂತರರಾಷ್ಟ್ರೀಯ ... ಶಾಂತಿಗೆ ಭೀತಿಯುಂಟುಮಾಡುತ್ತದೆಂದು ಹೇಳಿದರು.

ರಾಜಾ ಲಕ್ಷ್ಮಣಸಿಂಗರ ಮನೆಯಲ್ಲಿ ಕಳುವಿಗಾಗಿ ಒಬ್ಬನಿಗೆ ಶಿಕ್ಷೆ

ನಜರ್‌ಬಾದಿನಲ್ಲಿರುವ ರಾಜಾ ಲಕ್ಷ್ಮಣಸಿಂಗರ ಮನೆಯಲ್ಲಿ ಕೆಲವು ತಿಂಗಳ ಹಿಂದೆ ಕಳುವು ಮಾಡಿದನೆಂಬ ಆಪಾದನೆಗೆ ಗುರಿಯಾಗಿದ್ದ ಸಿದ್ದ ಎಂಬುವನಿಗೆ ... ಮೊಕದ್ದಮೆಗಳಲ್ಲಿ ತಲಾ ... ತಿಂಗಳ ... ಸಜವನ್ನು ವಿಧಿಸಲಾಗಿದೆ. ... ಎರಡು ಮೊಕದ್ದಮೆಗಳಲ್ಲಿ ಖುಲಾಸೆ ಮಾಡಲಾಗಿದೆ. ಕಳುವು ಮಾಲು ಸ್ವೀಕರಿಸಿದರೆಂಬ ಆಪಾದನೆಗಾಗಿ ರಾಧಾಕೃಷ್ಣಶೆಟ್ಟಿ ಮತ್ತು ಪುಟ್ಟನಂಜುಂಡಸ್ವಾಮಿಶೆಟ್ಟರನ್ನು ... ಮೊಕದ್ದಮೆಗಳಲ್ಲೂ ಖುಲಾಸೆ ಮಾಡಲಾಗಿದೆ.

ಸರ್ಕಾರದ ಕಾರ್ಯದರ್ಶಿ ಮೇಲೆ ಶಾಸನಸಭಾ ಸದಸ್ಯರ ದೂರು

ವಿಂಧ್ಯ ಪ್ರದೇಶ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಕೆ. ಕೆ. ವರ್ಮಾರವರ ವಿರುದ್ಧವಾಗಿ ಅಲ್ಲಿನ ಶಾಸನ ಸಭೆಯ ಸಮಾಜವಾದಿ ಸದಸ್ಯರೊಬ್ಬರು ಕೊಟ್ಟ ದೂರನ್ನು ಶಾಸನ ಸಭಾಧ್ಯಕ್ಷರು ಹಕ್ಕು ಬಾಧ್ಯತಾ ಸಮಿತಿಯ ಪರಿಶೀಲನೆಗೆ ಒಪ್ಪಿಸಿರುತ್ತಾರೆ. ಶ್ರೇಷ್ಠ ಕಾರ್ಯದರ್ಶಿಯವರು ಸದರಿ ಸದಸ್ಯರನ್ನು ಹೆದರಿಸಿ, ಬೆದರಿಸಿ, ಅವಮಾನ ಮಾಡಿರುವುದಾಗಿ ಅವರು ಆಪಾದಿಸುತ್ತಾರೆ. ಯುವಸಮಾಜ ಭವನದ ಮಾರಾಟದ ವಿಷಯವಾಗಿ ಆ ಸದಸ್ಯರು ಶಾಸನ ಸಭೆಯಲ್ಲಿ ತಮ್ಮ ಭಾಷಣಕ್ಕಾಗಿ ಈ ಶ್ರೇಷ್ಠ ಕಾರ್ಯದರ್ಶಿಯವರು ಆಕ್ಷೇಪಿಸಿದ್ದರೆಂದು ಹೇಳಲಾಗಿದೆ.

ವಿಷದ ಬಿಸ್ಕತ್ತು ಕೊಟ್ಟಿದ್ದಕ್ಕೆ ೬ ತಿಂಗಳ ಸಜಾ

ರೈಲ್ವೆ ಪೋರ್ಟರ್ ಬಳಿ ಸುಬ್ಬಪ್ಪ, ಪೋಲೀಸ್ ಕಾನ್‌ಸ್ಟೇಬಲ್ ಪುಟ್ಟಸ್ವಾಮಿ, ಕೆಂಪಮ್ಮ, ಲಕ್ಕಮ್ಮ ಎಂಬುವರಿಗೆ ವಿಷ ಬೆರೆತ ಬಿಸ್ಕತ್ತನ್ನು ಕೊಟ್ಟು ... ಸ್ವಾಮಿ ಎಂಬುವನಿಗೆ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರು ೬ ತಿಂಗಳ ಕಠಿಣ ಸಜಾ ವಿಧಿಸಿರುವರು.

ನರಸಿಂಹರಾಜ ಮೊಹಲ್ಲೆಯಲ್ಲಿ ಪೋಲೀಸ್ ಠಾಣೆ

ಸಾರ್ವಜನಿಕರ ಅಪೇಕ್ಷೆಗೆ ಅನುಸಾರವಾಗಿ ಈ ದಿನ ಬೆಳಗ್ಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ... ರವರು ನರಸಿಂಹರಾಜ ಮೊಹಲ್ಲೆಯ ... ಸ್ಥಾನದ ಬೀದಿಯಲ್ಲಿ ಒಂದು ಹೊಸ ಪೋಲೀಸ್ ಠಾಣೆಯನ್ನು ಆರಂಭಗೊಳಿಸಿದರು. ಡಿ. ಐ. ಜಿ. ಯವರಾದ ಶ್ರೀ ಮುಕ್ತ್ಯಾರಾವ್ ಸಿಂಧ್ಯರವರು ಲಷ್ಕರ್ ಮತ್ತು ಮಂಡಿ ಸ್ಟೇಷನ್ನುಗಳಿಗೆ ಹಠಾತ್ತನೆ ಭೇಟಿ ಕೊಟ್ಟು ಪರಿಶೀಲನೆ ಮಾಡಿದರು.

ಕೊಯಮುತ್ತೂರು ಜಿಲ್ಲೆಯಲ್ಲಿರುವ ಕೆಳ ಭವಾನಿ ಅಣೆಕಟ್ಟು



ಕಟ್ಟೆಯ ಮೇಲೆ ಹಾಯುಹೋಗುವ ರಸ್ತೆಯ ದೃಶ್ಯ. ಬಲ್ಲಿ ಮುಂದು ಮತ್ತು ಗುಡಿ. ಕೆಲವರಿಂದಲೇ ಭಾರತದಲ್ಲಿ ಕಟ್ಟಲಾಗಿರುವ ಪ್ರಪ್ರಥಮ ... ಅಣೆಕಟ್ಟು

ವಾರ ಭವಿಷ್ಯ

ತಾ|| ೧-೪-೫೬ರಿಂದ ೭-೪-೫೬ರ ವರೆಗೆ

ಮೇಷ :— ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ತೃಪ್ತಿಕರ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ ಅಪ್ತರಿಂದ ವಂಚನೆ ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ ಕಮ್ಮಿ, ನೌಕರಿಯಲ್ಲಿ ನಿರುತ್ಸಾಹ

ವೃಷಭ:—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಶುಭ ಕಾರ್ಯಗಳು ಜರುಗುವುವು, ನೌಕರಿಯಲ್ಲಿ ಪ್ರಶಂಸೆ ವೃಥಾ ವೈಮನಸ್ಯ

ಮಿಥುನ — ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಸಮರ್ಪಕ ಮಂಗಳ ಕಾರ್ಯಗಳು ಜರುಗುವುವು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ

ಕರ್ಕ —ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಉತ್ತಮ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ

ಸಿಂಹ — ಆರೋಗ್ಯ ಪಿನ್ನಾಗಿರಲಾರದು ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಸಾಮಾಜಿಕ ಕ್ಷೇತ್ರದಲ್ಲಿ ಅಪಯಶ ನೌಕರಿಯಲ್ಲಿ ಕಿರುಕುಳ

ಕನ್ಯಾ . ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಸಾಧಾರಣ ಪ್ರವಾಸ ಸಂಭವ ವ್ಯಾಪಾರವ್ಯವಹಾರಗಳಲ್ಲಿ ತೃಪ್ತಿದಾಯಕ ಪರಿಸ್ಥಿತಿ ನೌಕರಿಯಲ್ಲಿ ಪ್ರಗತಿ ಕಮ್ಮಿ

ತುಲಾ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಕೈಗೊಂಡ ಕಾರ್ಯ ಸಿದ್ಧಿ ವ್ಯಾಪಾರವ್ಯವಹಾರಗಳಲ್ಲಿ ಜಯ. ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸಂಭವ

ವೃಶ್ಚಿಕ ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಸಾಧಾರಣ ಆಪ್ತರಿಂದ ವಂಚನೆ ವೃಥಾ ವಿವಾದ ನೌಕರಿಯಲ್ಲಿ ನಿರುತ್ಸಾಹ ವ್ಯವಹಾರಗಳಲ್ಲಿ ಅಡ್ಡಿ

ಧನು —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರೋತ್ಸಾಹ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಮಕರ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಮಿತ್ರರಿಂದ ನೆರವು ಉದ್ಯೋಗದಲ್ಲಿ ಪ್ರಶಂಸೆ ವ್ಯವಹಾರಗಳಲ್ಲಿ ತಡಯಿಕೆ

ಕುಂಭ ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಸಮರ್ಪಕ ಶುಭ ಕಾರ್ಯಗಳು ಜರುಗುವುವು ಉದ್ಯೋಗದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಉತ್ತಮ ಫಲಗಳು

ಮೀನ ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಉತ್ತಮ ಮಂಗಳ ಕಾರ್ಯಗಳು ನೆರವೇರುವುವು ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ನೌಕರಿಯಲ್ಲಿ ಪ್ರಗತಿ

ಮೆಕ್ಸಿಕೊ ಹಡಗು ಮುಳುಗಿ ೫೦ ಜನರ ಮರಣ

ಮೆಕ್ಸಿಕೊ ಬಳಿಯಲ್ಲಿ ಮೊನ್ನೆ ಮಾಟುಲ್ ಎಂಬ ಹಡಗು ಮುಳುಗಿ ೫೦ ಮಂದಿ ಪ್ರಯಾಣಿಕರು ಮೃತಪಟ್ಟರೆಂದು ವರದಿಯಾಗಿದೆ

ಗಡಿ ಟೋಲುಗೇಟುಗಳ ವಜಾ

ಸಂಸ್ಥಾನದ ಎಲ್ಲಾ ಗಡಿ ಟೋಲುಗೇಟುಗಳನ್ನೂ ಸರ್ಕಾರದವರು ಇಂದಿನಿಂದ ರದ್ದುಗೊಳಿಸಿರುತ್ತಾರೆ

ರಣಜಿತ್ 1-4-56 ರಿಂದ ಪ್ರಾರಂಭ

ಪ್ರತಿ ದಿನ ಮೂರು ಆಟಗಳು

ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಗೋಕುಲ್‌ರವರ ಹೊಸ ತೆಲುಗು ಚಿತ್ರ

★ ಕನಕತಾರ ★

ತಾರಾಗಣ – ಎಸ್ ವರಲಕ್ಷ್ಮಿ, ರಂಗರಾವ್ ಕುಮಾರಿ ಸಪ್ತಮಿ, ಮಾಸ್ಟರ್ ವಿಠ್ಠಲ್ ಮತ್ತು ಪೇಟ ಸಾವಿತ್ರಿ ಮುಂತಾದವರು

ನಿರ್ದೇಶನ ರಮಣಿಕಾಂತ್

Edited, Printed and Published by A R Nagarajan at Sadhvi Press D Subbiah Road Mysore

ಸರ್ಕಾರ ಮತ್ತು ನಗರ ಪೌರಸಭೆ ಮೇಲಿನ ಮೊಕದ್ದಮೆಗಳು

ಎಲ್ಲವನ್ನೂ ವಾಪಸು ಪಡೆಯುವುದಾಗಿ "ರಾಜ್ಯಾಂಗ ರಕ್ಷಣಾ ಸಮಿತಿಯವರ ಹೇಳಿಕೆ

ಮೈಸೂರು ೧

ನಗರದಲ್ಲಿರುವ ರಾಜ್ಯಾಂಗ ರಕ್ಷಣಾ ಸಮಿತಿ ಸದಸ್ಯರುಗಳಾದ ಶ್ರೀ ಎ ಎಸ್ ರಾಮಯ್ಯ ಮತ್ತು ಶ್ರೀ ತಗಡೂರು ರಾಮಚಂದ್ರರಾಯರು ಪ್ರಕಟಣೆಯೊಂದನ್ನು ಹೊರಡಿಸಿ, ಮೈಸೂರು ಸರ್ಕಾರ ಮತ್ತು ಪೌರಸಭೆಗಳ ಮೇಲೆ ತಾವು ಹೂಡಿದ್ದ ವಿವಿಧ ಮೊಕದ್ದಮೆಗಳನ್ನು ವಾಪಸು ಪಡೆಯುವುದಾಗಿ ತಿಳಿಸಿರುತ್ತಾರೆ

ಮಾರಾಟ ತೆರಿಗೆ ಶಾಸನದ ೩ನೇ ನಿಬಂಧನೆಗೆ ಬಿ ಕಲಮು ರಾಜ್ಯಾಂಗ ವಿರುದ್ಧವೆಂದು ಸುಪ್ರೀಂ ಕೋರ್ಟು ಹೇಳಿರುವುದೆಂದೂ, ಅಂತರ ಪ್ರಾಂತೀಯ ವ್ಯಾಪಾರದ ಮೇಲೆ ತೆರಿಗೆ ವಿಧಿಸುವುದು ರಾಜ್ಯಾಂಗ ವಿರುದ್ಧವೆಂದು ತೀರ್ಮಾನಿಸಿರುವುದಾಗಿಯೂ, ರಹದಾರಿ ಶುಲ್ಕವು ತೆರಿಗೆಯಲ್ಲವೆಂದು ಕೋರ್ಟು ತೀರ್ಮಾನ ಕೊಟ್ಟಿರುವುದಾಗಿಯೂ ಅವರು ಹೇಳಿರುತ್ತಾರೆ

ಪೌರಸಭೆಗಳು ಬಾಡಿಗೆ ಹಕೋಟೆ ಶಾಸನದ ಪ್ರಕಾರ ಕಾನೂನುರೀತ್ಯಾ ವಿಧಿಸುವಂತೆ ಕೇಂದ್ರ ತೆರಿಗೆ ಪರಿಶೀಲನಾ ಸಮಿತಿಯವರು ತಮ್ಮ ಶಿಫಾರಸಿನಲ್ಲಿ ತಿಳಿಸಿರುವುದಾಗಿ ಅವರು ಹೇಳಿ, ತಾವು ಹೂಡಿರುವ ಮೊಕದ್ದಮೆಗಳು ಮೇಲ್ಕಂಡ ತೀರ್ಪು

ಹೋಟೇಲು ನಡೆಸುವ ಬಗ್ಗೆ ವಿದೇಶಗಳಲ್ಲಿ ತರಬೇತು

ಹೋಟೇಲು ಕೆಲಸದಲ್ಲಿ ವಿದ್ಯಾರ್ಥಿಗಳಿಗೆ ... ಎಂಬುದಕ್ಕಾಗಿ ಭಾರತ ಸರ್ಕಾರ ... ದೇಶಗಳಿಗೆ ಹಲವರನ್ನು ಕಳುಹಿಸಿಕೊಡುತ್ತಿರುತ್ತಾರೆ ಭಾರತದಲ್ಲೂ ಈ ಬಗ್ಗೆ ... ಶಾಲೆಯೊಂದನ್ನು ತೆರೆಯಲು ಆಲೋಚಿಸಲಾಗಿದೆ ವಿದೇಶೀ ಪ್ರವೀಣರೊಬ್ಬರನ್ನು ... ಹ್ವಾನಿಸಿ, ಅವರಿಂದ ಶಿಕ್ಷಣ ಕೊಡಿಸಲಾಗು...

ವೇಣುಗೋಪಾಲದಾಸರಿಗೆ ಪ್ರಶಸ್ತಿ

ಹರಿದಾಸ ಭೂಷಣ ಶ್ರೀ ಟಿ ... ವೇಣು ಗೋಪಾಲದಾಸರಿಗೆ ಹೊಸಳೆ ಮಠಾಧಿಪತಿಗಳಾದ ಶ್ರೀ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಹರಿಕಥಾ ಶಿರೋಮಣಿ ಎಂಬ ಪ್ರಶಸ್ತಿಯನ್ನು ದಯಪಾಲಿಸಿರುತ್ತಾರೆ

ಮತ್ತು ಶಿಫಾರಸುಗಳಿಗೆ ಅನುಗುಣವಾಗಿರುವುದಾಗಿ ಹೇಳಿರುತ್ತಾರೆ

ಕೇಂದ್ರ ಸರ್ಕಾರದವರು ರಚಿಸಿರುವ ... ವಿಚಾರಣೆ ನವರು ಪ್ರಶ್ನಾವಳಿಯೊಂದನ್ನು ... ಗೊಳಿಸಿರುವರೆಂದೂ, ಅದರಲ್ಲಿರುವ ಪ್ರಶ್ನೆ ... ತಮ್ಮ ತೀರ್ಮಾನಕ್ಕೂ ವ್ಯತ್ಯಾಸವಿಲ್ಲ... ಅವರು ಹೇಳಿರುತ್ತಾರೆ ಪ್ರಜಾ ... ನ್ಯಾಯ ಕೊಡಲು ಕೋರ್ಟುಗಳು ಶಕ್ತ... ಗಿರುವುದರಿಂದ ತಾವು ಮೊಕದ್ದಮೆ ... ಸು ಪಡೆಯುತ್ತಿರುವುದಾಗಿ ಅವರು ಸೂಚಿಸಿ...

ಸಾಧನಾರವರ 'ಸರಿಬಾದಿ ಸಲ್ಸ'

ಟ್ರೇಡ್ ಮಾರ್ಕ್ ಅತಿಕ್ರಮದ ಅಪಾದನೆ

ಶಕ್ತಿ ಔಷಧಾಲಯಕ್ಕೆ ತಡೆ ಅಜ್ಞೆ ನೀಡಲಾಗಿದೆ

ವಾದಿಯಾದ ಸಾಧನಾ ಔಷಧಾಲಯ ಲಿಮಿಟೆಡ್, ಢಕ್ಕಾ, ಇವರ ಅರ್ಜಿಯಂತೆ —

ಪ್ರತಿವಾದಿಯಾದ ಶಕ್ತಿ ಔಷಧಾಲಯ ಲಿಮಿಟೆಡ್, ಢಕ್ಕಾ, ಇವರಿಗೆ ವಾದಿಯ ಟ್ರೇಡ್ ಮಾರ್ಕ್ ಸರಿಬಾದಿ ಸಲ್ಸ ವನ್ನು ವಾದಿಯ ಅರ್ಜಿ ಮೇಲೆ ಪ್ರತಿವಾದಿಯ ತಕರಾರುಗಳ ಪರಿಶೀಲಿಸಿ ತೀರ್ಮಾನಿಸುವವರೆಗೆ ಉಪಯೋಗಿಸಕೂಡದೆಂಬ ತಡೆಯಾಜ್ಞೆಯನ್ನು ಡಿಸ್ಟ್ರಿಕ್ಟ್ ಜಡ್ಜ್‌ರವರು ಜಾರಿ ಮಾಡಿರುತ್ತಾರೆ

ಢಕ್ಕಾದ ಸಾಧನಾ ಔಷಧಾಲಯ ಲಿಮಿಟೆಡ್‌ನವರು ... ದವಾಗಿ ಜಿಲ್ಲಾ ನ್ಯಾಯಾಧೀಶರ ಕೋರ್ಟಿನಲ್ಲಿ, ಢಕ್ಕಾದ ಶಕ್ತಿ ಔಷಧಾಲಯ ಲಿಮಿಟೆಡ್‌ರವರೂ ಅವರ ನೌಕರರುಗಳೂ ಮತ್ತು ಏಜೆಂಟರುಗಳೂ ಸಹ ವಾದಿಯ ಟ್ರೇಡ್ ಮಾರ್ಕ್ "ಸರಿಬಾದಿ ಸಲ್ಸ"ದ ಅತಿಕ್ರಮ ಮಾಡುತ್ತಿರುವುದನ್ನು ತಡೆಗಟ್ಟಬೇಕೆಂದು ಅವರಿಗೆ ತಾತ್ಕಾಲಿಕ ತಡೆಯಾಜ್ಞೆಗಾಗಿ ಅರ್ಜಿಯೊಂದನ್ನು ಸಲ್ಲಿಸಲಾಗಿದೆ

ಸಾಧನಾ ಔಷಧಾಲಯದ ಮಾಲೀಕರು ಪ್ರಸಿದ್ಧ ವಿಜ್ಞಾನಿಗಳು ಇರುವುದಾಗಿಯೂ ಮತ್ತು ಸುಮಾರು 42 ವರ್ಷಗಳಿಂದಲೂ ಆಯುರ್ವೇದ ಔಷಧಗಳನ್ನು ತಯಾರಿಸುತ್ತಿರುವುದಾಗಿಯೂ ಅರ್ಜಿಯಲ್ಲಿ ನಮೂದಿಸಲಾಗಿದೆ 1914 ಅಥವಾ ಅದೇ ವರ್ಷ ತಾವು ಹೊಸದಾಗಿ ಕಂಡುಹಿಡಿದ, ತಯಾರಿಸಿದ ಇತರ ಔಷಧಗಳ ಜೊತೆಗೆ ಬಹು ಪರಿಣಾಮಕಾರಿ ಗುಣ ಕೊಡುವ ಒಂದು ಔಷಧವನ್ನು "ಸರಿಬಾದಿ ಸಲ್ಸ" ಎಂಬ ಹೆಸರಿನಲ್ಲಿ ಮಾರಾಟ ಮಾಡಲಾಯ್ತು. ಅರ್ಜಿಯಲ್ಲಿ ಮುಂದುವರಿಯುತ್ತಾ "ಸರಿಬಾದಿ ಸಲ್ಸ"ವು ಪಾಕಿಸ್ತಾನ ಮತ್ತು ಭಾರತಾದ್ಯಂತ ಬಹು ಪ್ರಸಿದ್ಧಿ ಪಡೆದುದಲ್ಲದೆ "ಸರಿಬಾದಿಸಲ್ಸ" ಎಂದರೆ ಸಾಧನಾ ಔಷಧಾಲಯ ತಯಾರಿಸಿದ ಪ್ರಸಿದ್ಧ ಆಯುರ್ವೇದ ಔಷಧಿ ಎಂದೂ "ಸರಿಬಾದಿ ಸಲ್ಸ"ವು 1940 ನೇ ಟ್ರೇಡ್‌ಮಾರ್ಕ್ ಕಾಯಿದೆಯಂತೆ ರಿಜಿಸ್ಟರಾಗಿದೆ ಮತ್ತು ಸಿಗದಿ ಮಾಡಲ್ಪಟ್ಟ ಕಾಲಮೊಳಗೆ ಆ ಟ್ರೇಡ್‌ಮಾರ್ಕನ್ನು ರಿನ್ಯೂ ಮಾಡಿಸಲಾಗುತ್ತದೆ ಎಂದೂ ನಿಜಾ ತಿಳಿಸುತ್ತದೆ.

ಅರ್ಜಿಯಲ್ಲಿ ಮುಂದುವರಿಯುತ್ತಾ, ಪ್ರತಿವಾದಿಯ ಕಂಪನಿಯಲ್ಲಿ ಬಹು ಕಾಲಾ ನಂತರ "ಸರಿಬಾದ್ಯಾರಿಷ್ಟ" ವೆಂಬ ಔಷಧಿಯನ್ನು ತಯಾರಿಸಿ ಮಾರಾಟ ಮಾಡುತ್ತಿದ್ದಾರೆ. ಮತ್ತು ವಾದಿಯ ಔಷಧ "ಸರಿಬಾದಿ ಸಲ್ಸ"ದ ಪ್ರಖ್ಯಾತಿಯನ್ನು ಕುಂದಿಸಬೇಕೆಂಬ ಉದ್ದೇಶದಿಂದಲೂ, "ಸರಿಬಾದಿ ಸಲ್ಸ" ಕೊಳ್ಳುವವರಿಗೆ ಮೋಸವನ್ನುಂಟುಮಾಡುವ ಸಲುವಾಗಿಯೂ, "ಸರಿಬಾದಿಸಲ್ಸ"ದ ಹೆಸರನ್ನು ಪ್ರಮುಖ ವಿಕಲ್ಪವಾಗಿಯೂ, ಮೋಸದಿಂದಲೂ, ತಮ್ಮ "ಸರಿಬಾದ್ಯಾರಿಷ್ಟ"ದ ಜೊತೆಯಲ್ಲಿ ಬಳಸುತ್ತಿರುವುದಾಗಿ ಅಪಾದಿಸಲಾಗಿದೆ ಈ ಮೇಲ್ಕಂಡ ವಾದಿಯ ರಿಜಿಸ್ಟರ್ಡ್ ಟ್ರೇಡ್ ಮಾರ್ಕನ್ನು ಅತಿಕ್ರಮಿಸಿ ಉಪಯೋಗಿಸಿಕೊಳ್ಳುತ್ತಿರುವುದಕ್ಕೆ ಮೇಲೆ ತಿಳಿಸಿರುವ ಕಾರಣಗಳ ಆಧಾರದ ಮೇಲೆ ಕೇಸಿನ ತೀರ್ಮಾನವಾಗುವವರೆಗೆ ಪ್ರತಿವಾದಿಗೆ ತಾತ್ಕಾಲಿಕ ತಡೆಯಾಜ್ಞೆಯೊಂದನ್ನು ಕೊಡಬೇಕಾಗಿ ಪ್ರಾರ್ಥಿಸಿದರು.

ಅರ್ಜಿಯು ಹಿಯರಿಂಗ್‌ಗಾಗಿ ಬಂದಾಗ ಢಕ್ಕಾದ ಶಕ್ತಿ ಔಷಧಾಲಯ ಲಿ ರವರು ತಕರಾರನ್ನು ದಾಖಲ್ ಮಾಡಲು ತಮಗೆ 3 ವಾರಗಳ ಕಾಲಾವಕಾಶ ಬೇಕೆಂದೂ ಈ ಸಂಬಂಧದಲ್ಲಿ ಬಾಗದ ಪತ್ರಗಳೂ ಕಲ್ಕತ್ತಾದಲ್ಲಿರುವುದಾಗಿಯೂ, ವಾದಿಗೆ ತಾತ್ಕಾಲಿಕ ತಡೆಯಾಜ್ಞೆಯನ್ನು ಕೊಡುವುದನ್ನು ಮುಂದುವರಿಸಿದಲ್ಲಿ ವಾದಿಗೆ ಯಾವ ತೊಂದರೆಯೂ ಆಗುವುದಿಲ್ಲವೆಂದೂ ... ದೂ ಅದಲ್ಲಿ ಪ್ರತಿವಾದಿಯಿಂದ ನಷ್ಟ ಪರಿಹಾರ ಮಾಡಿದ ಕೌಲಷ್ಟು ಪಾದಿಗಿದೆಯೆಂದೂ ... ಸಲ್ಲಿಸಿದರು

ವಾದಿಯಾದ ಸಾಧನಾ ಔಷಧಾಲಯದ ... ರವರು ಪ್ರತಿವಾದಿಯು ಕೊಟ್ಟಿದ್ದ ಕಾಲಾವಕಾಶದ ಅರ್ಜಿಯನ್ನು ವಿರೋಧಿಸುತ್ತಾ ತಡೆಯಾಜ್ಞೆ ... ನಾವದೂ ವಿಧಾಯಿಸಿದಲ್ಲಿ ಈಗ ದಾಖಲ್ಗೆ ... ಸಿನ ಉದ್ದೇಶವೇ ವಿಫಲಗೊಳ್ಳುವುದೆಂದು ... ದರು

ಪ್ರತಿಭಾವಂತ ಜಿಲ್ಲಾ ನ್ಯಾಯಾಧೀಶರು ... ರ್ಜಿನಲ್ಲಿ ಅರ್ಜಿದಾರರು ಕೊಟ್ಟ ಕಾರಣ ... ಎತ್ತಿ ಹಿಡಿಯುತ್ತಾ, ಈ ವಿಚಾರವು ಬಹು ... ಯಾಗಬೇಕಾದುದೆಂದು ಅವರು ಭಾವಿಸಿ... ಯೂ, ವಿಧಾನ ಮೂಡಿದಲ್ಲಿ ಅರ್ಜಿದಾರ... ನಾ ಔಷಧಾಲಯ ಲಿಮಿಟೆಡ್‌ರವರಿಗೆ ... ಷ್ಟ ಸಂಭವಿಸುವುದಾಗಿ ಭಾವಿಸುವುದಾಗಿ... ಮ್ತು ಪ್ರತಿವಾದಿಗೆ ಸಾಕಷ್ಟು ಕಾಲಾವಕಾಶ ... ದು ದೊಡ್ಡ ಪ್ರಮಾಣದಲ್ಲಿ ಔಷಧ ತಯಾ... ನ್ನು ವಾದಿಗೆ ಕಳಿಸಬಹುದೆಂದೂ ಮತ್ತು ... ಯನ್ನು ಈ ಕಾರ್ಯದಲ್ಲಿ ತಡೆಯುವುದು ... ವೆಂದೂ ತಾವು ಭಾವಿಸುವುದಾಗಿ ...

ಪ್ರತಿಭಾವಂತ ಜಿಲ್ಲಾ ನ್ಯಾಯಾಧೀಶರು ... ರಿಕಾಲವನ್ನಾಗಿ ಪ್ರತಿವಾದಿಯ ತಕರಾರು ... ರ್ಮಾನಿಸುವವರೆಗೆ ತಡೆಯಾಜ್ಞೆಯೊಂದನ್ನು ... ಬೇಕೆಂದು ಅಪ್ಪಣೆ ಮಾಡಿ ತಾತ್ಕಾಲಿಕ ... ಯನ್ನು ಜಾರಿ ಮಾಡಿದರು.

ಢಕ್ಕಾದ ಬಂಗಾಳದ ಅಡ್ವೊಕೇಟ್ ... ಪ ಶ್ರೀ ಎ ಕೆ. ಎಂ ಬಾಕರ್ ಬಾರ್-ಅಟ್... ಶ್ರೀ ದಿಪಿನ್ ಚಂದ್ರ ಅಡ್ವೊಕೇಟ್ ... ಅಮೂಲ್ಯ ಕುಮಾರ್ ಬೋಸ್, ಪ್ಲೀಡರ್... ಗಳು ವಾದಿ ಪರವಾಗಿ ವಾದಿಸಿದರು

ಒಲಂಪಿಯಾ ★ 6-4-56 ರಿಂದ ಅವೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಸುಸ್ತಿ ಆರ್ಟ್ ಪ್ರೊಡಕ್ಷನ್ಸ್ ರವರ ಹಿಂದಿ ಚಿತ್ರ ★ ಉಡನ್ ಕಟೋಲಿ

ಪಾತ್ರ — ದಿಲೀಪ್‌ಕುಮಾರ್, ನಿಮ್ಮಿ, ಜೀವನ್ ಮತ್ತು ಸೂರ್ಯಕುಮಾರಿ

ನಿರ್ದೇಶನ ಎಸ್ ಯು ಸುನ್ನಿ ಸಂಗೀತ ನೌಷದ್

ಸಾಹಸಮಯ ಅಂಗಸಾಧನಾ ಪ್ರದರ್ಶನ ! ರೋಮಾಂಚಕಾರಿ ಸಾಹಸಗಳು !

ಸೋವಿಯೆಟ್ ರಷ್ಯದ ವಿಶ್ವವಿಖ್ಯಾತ

10 ಜನ ಗಂಡಸರು ಮತ್ತು 6 ಜನ ಹೆಂಗಸರಿಂದ

ತಾ|| 7—4 –1956 ನೇ ಶನಿವಾರ ಸಂಜೆ 5 ರಿಂದ 8 ಗಂಟೆಯವರೆಗೆ

ದೊಡ್ಡಕೆರೆ ಮೈದಾನದಲ್ಲಿ

★

ವಿಶೇಷ ವಿದ್ಯುದ್ದೀಪೋತ್ಸವದಿಂದ ಬೆಳಗುವ ಆವರಣದಲ್ಲಿ, ರಾಜಕುಮಾರಿ ಅಮೃತಕೌರ್ ತರಪೇತು ಯೋಜನೆಯ ಅಂಗವಾಗಿ ಭಾರತಕ್ಕೆ ಬಂದಿರುವ ರಷ್ಯದ ವಿಶ್ವವಿಖ್ಯಾತ ಅಂಗಸಾಧನಾ ಪ್ರವೀಣರ ಅದ್ಭುತ ಪ್ರದರ್ಶನಗಳನ್ನು ನೋಡಲು ಎಂದಿಗೂ ತಪ್ಪಬೇಡಿ

★

ಪ್ಯಾರಲಲ್ ಬಾರ್ — ಹೊರಿಜಾಂಟಲ್ ಬಾರ್ಸ್

ರೋಮನ್ ರಿಂಗ್ಸ್ — ಸಾಮೂಹಿಕ ಸಾಧನೆಗಳು

ಮತ್ತು ಇನ್ನೂ ಅನೇಕ ಅದ್ಭುತ ಸಾಹಸಗಳು

★

ದೆಹಲಿ, ಬೊಂಬಾಯಿ, ಪೂನಾ, ಪಾಟ್ನಾ ಮುಂತಾದ ಭಾರತದ ವಿವಿಧ ನಗರಗಳಲ್ಲಿ ಇವರ ಪ್ರದರ್ಶನವು ಲಕ್ಷಾಂತರ ಜನರನ್ನು ಬೆರಗುಗೊಳಿಸಿದೆ

ದೆಹಲಿಯಲ್ಲಿ ನಡೆದ ಇವರ ಮೊದಲ ಪ್ರದರ್ಶನವನ್ನು ವೀಕ್ಷಿಸಿದ ಪ್ರಧಾನಿ ಪಂಡಿತ ನೆಹರೂರವರು ವಿಶೇಷ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ

★

ಟಿಕೇಟು ದರ — ರೂ 3, 2, 1, ಮತ್ತು 8 ಆ

ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

— ವ್ಯವಸ್ಥಾಪಕರು —

ಇಂಡೋ-ಸೋವಿಯಟ್ ಸಾಂಸ್ಕೃತಿಕ ಸಂಘ, ಮೈಸೂರು

ಟೆಲಿಫೋನ್ ನಂ. 792

ಫೋನ್ 811 ಸ್ಥಾಪಿತ 1932
ಗ್ಯಾರಂಟಿ ಯಾದ ಚಿನ್ನ, ಬೆಳ್ಳಿ ಮತ್ತು ಕಲ್ಲಿನ ನಗಗಳಿಗೆ ಇಂದೇ ಭೇಟಿ ಕೊಡಿ
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು

ಸಾಧ್ವಿ

ಲಗ್ನದ ಜವಳಿ
ಗೌ॥ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಅರ್ಣಿ, ಬಿಂಗಳೂರು
ರೇಷ್ಮೆ ಮತ್ತು ಜರಿಯ ಸೀರೆಗಳು
ಖರೀದಿಗೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

[ಸಂಪುಟ · ೨೪] SADHVI : MONDAY 2-4-1956 ಮೈಸೂರು ಸೋಮವಾರ : ೨-೪-೧೯೫೬ [ಸಂಚಿಕೆ : ೨೨೬

ಶಾಸನ ಸಭೆಯಲ್ಲಿ ಚನ್ನಬಸಪ್ಪನವರ ಹಾಜರಿ ಬಗ್ಗೆ ಟೀಕೆ

[illegible] ತಿಂಗಳವರೆಗೆ ೧೦ ಗಂಟೆ ಕಾಲ ಮಾತ್ರ ಬೀದಿ ದೀಪ

ವಿದ್ಯುತ್ ದರಗಳು ಹೆಚ್ಚಿದ ಸಂದರ್ಭದಲ್ಲಿ ಪೌರಸಭೆಯ ನಿರ್ಧಾರ

ಮೈಸೂರು ೧

ಹಿರಿಯ ಶಾಸನ ಸಭೆಯಲ್ಲಿ [illegible] ಅವರು [illegible] ಮಂತ್ರಿಗೆ ಸಲಹೆ [illegible] ಒಂದು ಸಮಿತಿಯನ್ನು ಸ್ಥಾಪಿಸುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿರುವರೆಂದು ನುಡಿದರು.

ಕಾಶ್ಮೀರದ ಸೀಸ್‌ಫೈರ್ ಪ್ರದೇಶಕ್ಕೆ ಇಸ್ಕಂದರ್ ಮಿರ್ಜಾ ಭೇಟಿ

ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ನೆನ್ನೆ ಅಲ್ಲಿನ ಸೈನ್ಯದ ಪ್ರಧಾನಾಧಿಕಾರಿ ಜನರಲ್ ಅಯೂಬ್ ಖಾನರೊಡನೆ ಕಾಶ್ಮೀರದ ಸೀಸ್‌ಫೈರ್ ಪ್ರದೇಶಕ್ಕೆ ಭೇಟಿಯಿತ್ತರು. ಕಾಶ್ಮೀರದ ಬಗ್ಗೆ ಭಾರತದ ನಿಲುವು ವಿಶ್ವದ ಶಾಂತಿಗೆ ಹಾನಿಕರವಾಗಿರುವುದೆಂದು ಅವರು ತಿಳಿಸಿರುತ್ತಾರೆ.

ಗೋವಾ ಮೇಲೆ ಪಾಕಿಸ್ತಾನಕ್ಕೆ ಅಪೇಕ್ಷೆಯಿಲ್ಲ

ಪಾಕಿಸ್ತಾನದ ವಿದೇಶಾಂಗ ಕಾರ್ಯದರ್ಶಿ ಹೇಳಿಕೆ

ಗೋವಾವು ತನಗೆ ಸೇರಿದ್ದೆಂದು ಹೇಳುವ ಉದ್ದೇಶವು ಪಾಕಿಸ್ತಾನಕ್ಕಿಲ್ಲವೆಂದು ಅಲ್ಲಿನ ವಿದೇಶಾಂಗ ಕಾರ್ಯದರ್ಶಿ ಎಸ್ ಎ ಬೇಗ್‌ರವರು ತಿಳಿಸಿರುತ್ತಾರೆ "ಪೋರ್ಚುಗೀಸ್ ಪಾಕಿಸ್ತಾನ" ವೆಂದು ಸೂಚಿಸಲಾಗಿದ್ದ ಪ್ರಕಟಣೆಯೊಂದರ ಬಗ್ಗೆ ಅವರು ಆಶ್ಚರ್ಯವನ್ನು ಸೂಚಿಸಿದ್ದಾರೆ ಈ ರಹಸ್ಯದ ಬಗ್ಗೆ ತಾವು ತನಿಖೆ ನಡೆಸಬೇಕಾಗಿರುವುದೆಂದೂ, ಪ್ರಾಯಶಃ ನೆಹರೂರವರೇ ಅದನ್ನು ಕಲ್ಪಿಸಿದ್ದರೂ ಇರಬಹುದೆಂದೂ ಅವರು ಟೀಕೆ ಮಾಡಿದ್ದಾರೆ.

ಅಮೆರಿಕಕ್ಕೆ ರಾಯಭಾರಿ ಷೆರ್ಮನ್ ಕೂಪರ್ ಭೇಟಿ

ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಷೆರ್ಮನ್ ಕೂಪರ್‌ರವರು ವಾಷಿಂಗ್ಟನ್ನಿಗೆ ಹೋಗಲಿರುವರು ಭಾರತಕ್ಕೆ ಅಮೆರಿಕದ ದೀರ್ಘಾವಧಿ ಆರ್ಥಿಕ ಸಹಾಯವನ್ನು ಕೊಡುವ ಬಗ್ಗೆ ಕಾಂಗ್ರೆಸ್ಸಿನ ಒಪ್ಪಿಗೆ ಪಡೆಯುವುದರಲ್ಲಿ ಅವರ ನೆರವನ್ನು ಅಲ್ಲಿನ ಸರ್ಕಾರವು ಅಪೇಕ್ಷಿಸಿದೆ

ಹ್ಯಾಮರ್‌ಷೀಲ್ಡರಿಂದ ಪಶ್ಚಿಮ ಏಷ್ಯದ ಪರಿಸ್ಥಿತಿ ಪರಿಶೀಲನೆ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಷೀಲ್ಡರು ಪಶ್ಚಿಮ ಏಷ್ಯ (ಮಧ್ಯಪೂರ್ವ) ದಲ್ಲಿ ಪ್ರವಾಸ ಕೈಗೊಳ್ಳಲೆಂದು ಸಂಸ್ಥೆಯ ವಿವಿಧ ಸದಸ್ಯರು ಕೋರಿದ್ದಾರೆ ಇಸ್ರೇಲ್ ಮತ್ತು ಅರಬ್ ರಾಜ್ಯಗಳು ಏಳು ವರ್ಷಗಳ ಹಿಂದೆ ಒಪ್ಪಿರುವ, ಯುದ್ಧ ನಿಲುಗಡೆ ಒಪ್ಪಂದ ಷರತ್ತನ್ನು ಪಾಲಿಸುವ ಬಗ್ಗೆಯೂ, ಷರತ್ತುಗಳನ್ನು ಜಾರಿಗೆ ಕೊಡುವಂತೆ ವ್ಯವಸ್ಥೆ ಮಾಡಲು ಹ್ಯಾಮರ್ ಷೀಲ್ಡರು ಸ್ಥಳ ಪರಿಶೀಲನೆ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ

ಸ್ಪೇನ್ ರಾಜಕುಮಾರನ ದುರಂತ

ಸ್ಪೇನ್ ಸಿಂಹಾಸನಕ್ಕೆ ಹಕ್ಕುದಾರನೆಂದು ಹೇಳಿಕೊಳ್ಳುತ್ತಿರುವ ಡಾನ್ ಜುವಾನ್‌ರವರ ಎರಡನೇ ಮಗ ೧೪ ವರ್ಷದ ಡಾನ್ ಅಲ್ಫೋನ್ಸೊ ಎಂಬುವನು ತನ್ನ ಅಣ್ಣನೊಡನೆ ಜಾರು ಮಾಡಿದ ಬಂದೂಕವನ್ನು ಉಜ್ಜುತ್ತಿದ್ದಾಗ ಆಕಸ್ಮಾತ್ ಗುಂಡು ಹಾರಿ ಅವನ ತಲೆಗೆ ಬಡಿದು ಮೃತಪಟ್ಟನೆಂದಾಗಿ ವರದಿಯಾಗಿದೆ ಅವನು ಗಾಲ್ಫ್ ಆಟದ ಚಾಂಪಿಯನ್‌ಷಿಪ್ ಪಂದ್ಯದ ಅಖೈರು ಆಟದಲ್ಲಿ ಭಾಗವಹಿಸಬೇಕಾಗಿತ್ತು ಅವನ ನಿಧನದಿಂದ ಸ್ಪೇನಿನ ರಾಜಪ್ರಭುತ್ವವಾದಿಗಳಿಗೆ ವ್ಯಾಕುಲವಾಗಿದೆ

೧೫,೦೦೦ ಮದ್ದುಗುಂಡು ಕೆಲಸಗಾರರ ಮುಷ್ಕರ

ಪೂನಾ ಬಳಿ ಕಿರ್ಕಿಯಲ್ಲಿರುವ ಮದ್ದುಗುಂಡು ಕಾರ್ಖಾನೆಯ ಹದಿನೈದು ಸಾವಿರ ಕೆಲಸಗಾರರು ಮೊನ್ನೆ ಹಠಾತ್ತನೆ ಮುಷ್ಕರ ಹೂಡಿದರು ೩೦೦ ಜನ ಕೆಲಸಗಾರರ ಬರ್ತಾ ಬಗ್ಗೆ ನೋಟೀಸು ಕೊಟ್ಟುದೇ ಅದಕ್ಕೆ ಕಾರಣ

ಹೊಮ್ಮದ ಒಳಗೆರೆ ಜಮೀನು ವಿಲೇವಾರಿ ಬಗ್ಗೆ ಆಕ್ಷೇಪಣೆ

ಚಾಮರಾಜನಗರ ೫

ಚಾಮರಾಜನಗರ ತಾಲ್ಲೂಕು ಹೊಮ್ಮ ಗ್ರಾಮಕ್ಕೆ ಸೇರಿದ ಕೆರೆಯ ಒಳಾಂಗಣವನ್ನು ದರಖಾಸ್ತು ಮೂಲಕ ಪಡೆಯಲು ಈ ತಾಲ್ಲೂಕಿನ ಕಾಂಗ್ರೆಸ್ ಮುಖಂಡರೊಬ್ಬರು ಅರ್ಜಿ ಕೊಟ್ಟಿರುತ್ತಾರೆ ಅವರು ಸಂಬಂಧಪಟ್ಟ ಸಬ್ ಡಿವಿಜನ್ ಅಧಿಕಾರಿಗಳೊಡನೆ ಸ್ಥಳ ಪರಿಶೀಲನೆಗೆ ಹೋಗಿದ್ದರು ಕೆರೆಯ ಅಚ್ಚುಕಟ್ಟಿನಲ್ಲಿ ಕೋಟಂಬಳ್ಳಿ, ಹೊಮ್ಮ, ಕಣ್ಣೇಗಾಲ ಮುಂತಾದ ಗ್ರಾಮಗಳ ದನಗಳು ಮೇಯಲಿಕ್ಕೆ ಬರುತ್ತಿವೆ ಇದು ಖಾಲಿ ಜಾಗ ಇನ್ನು ಎಲ್ಲೂ ಸುತ್ತಮುತ್ತ ದನಗಳು ನಿಲ್ಲಲು ಸ್ಥಳವಿಲ್ಲ ಹಿಂದೆ ಇದೇ ಮುಖಂಡರು ಅರ್ಜಿ ಕೊಟ್ಟಿದ್ದರು ಆದರೆ ಟೌನಿನ ಸಮಸ್ತ ಜನರಿಂದ ಪ್ರತಿಭಟನೆಯಾಗಿ ಅವರ ಅರ್ಜಿ ವಜಾ ಆಗಿತ್ತು ಸದರಿ ಜಮೀನನ್ನು ಆಲೂರು ಮಿಡಲ್ ಸ್ಕೂಲ್ ಮತ್ತು ಪ್ರಾಥಮಿಕ ಶಾಲೆಗೆ ಕೊಡುವಂತೆ ಅಲ್ಲಿನ ಉಪಾಧ್ಯಾಯರು ಕೇಳುತ್ತಾರೆ ಈ ಜಮೀನು ಎಕರೆಗೆ ೩,೦೦೦ ರೂ ಬೆಲೆ ಬಾಳತಕ್ಕದ್ದಾಗಿದೆ ವ್ಯವಸಾಯಕ್ಕೆ ಕೊಟ್ಟಲ್ಲಿ ದನಗಳಿಗೆ ನಿಲ್ಲಲು ಸ್ಥಳವಿಲ್ಲದಂತಾಗುತ್ತದೆ ಅಲ್ಲದೆ ವ್ಯವಸಾಯದಿಂದ ಕೆರೆಯೂ ಹೂತುಹೋಗುವುದು ಸರ್ಕಾರದವರು ಜಮೀನನ್ನು ಕೊಡದೆ ಕೆರೆಗಿಯೇ ಉಳಿಸಿಕೊಳ್ಳುವುದು ಅಗತ್ಯ ಹಾಗೆ ಆಗದಿದ್ದರೆ ಗ್ರಾಮದಲ್ಲಿ ಪಾರ್ಟಿ ಆಗಿ ಇಲ್ಲದ ಅಂತಃಕಲಹಗಳಿಗೆ ಕಾರಣವಾಗುವುದು ಎಂಬುದಾಗಿ ಶ್ರೀಗಳಾದ ಎ ಸುಂದರಪ್ಪ ಮತ್ತು ಎ ರಂಗಸ್ವಾಮಿಯವರು ಪತ್ರ ಬರೆದಿರುತ್ತಾರೆ

ಪ್ರಖ್ಯಾತ ಸಂಗೀತಗಾರರೊಬ್ಬರ ಮರಣ

ಹಿಂದೂಸ್ತಾನಿ ಸಂಗೀತದಲ್ಲಿ ಪ್ರಖ್ಯಾತರಾದ ರಾಜಾಭಯ್ಯಾ ಪೂಂಛ್‌ವಾಲೆರವರು ಕಳೆದ ಸೋಮವಾರ ತಮ್ಮ ೬೫ನೇ ವಯಸ್ಸಿನಲ್ಲಿ ಗ್ವಾಲಿಯರಿನಲ್ಲಿ ಮೃತಪಟ್ಟರು ಅವರಿಗೆ ಈ ವರ್ಷ ರಾಷ್ಟ್ರಾಧ್ಯಕ್ಷರ ಪ್ರಶಸ್ತಿಯು ದೊರೆತಿತ್ತು

ಅಮೃತಸರದಲ್ಲಿ ಹರತಾಳ

ಅಮೃತಸರದಲ್ಲಿ ಹಿಂದೂ ವ್ಯಾಪಾರ ಸಂಸ್ಥೆಗಳು ಮೊನ್ನೆ ಹರತಾಳವನ್ನು ಆಚರಿಸಿ, ಮಹಾ ಪಂಜಾಬು ಸಮಿತಿಯ ಸಂಚಾಲಕ ಬಲರಾಮಜಿದಾಸ್ ಟಂಡನ್‌ರವರ ಉಪವಾಸ ಮುಷ್ಕರಕ್ಕೆ ಸಹಾನುಭೂತಿಯನ್ನು ತೋರಿಸಿದವು ಪಂಜಾಬಿನ ಬಗ್ಗೆ ಸರ್ಕಾರ-ಅಕಾಲಿಗಳ ರಾಜೀಸೂತ್ರದ ಅಧಿಕೃತ ನಕಲು ಬೇಕೆಂದು ಟಂಡನ್‌ರವರು ಕಳೆದ ಬುಧವಾರದಿಂದ ಉಪವಾಸ ಮಾಡುತ್ತಿರುವರು

ರಷ್ಯದಲ್ಲಿ ಮತ್ತೊಂದು ಅಣು ಬಾಂಬಿನ ಪ್ರಯೋಗ ಪರೀಕ್ಷೆ

ರಷ್ಯವು ಮತ್ತೊಂದು ಅಣುಬಾಂಬಿನ ಪ್ರಯೋಗ ಪರೀಕ್ಷೆಯನ್ನು ನಡೆಸಿರುವುದಾಗಿ ವರದಿಯಾಗಿದೆ ಕಳೆದ ೮ ತಿಂಗಳಲ್ಲಿ ಅದವುಗಳ ಪೈಕಿ ಇದು ೪ನೇ ಪ್ರಯೋಗ ಪರೀಕ್ಷೆಯೆಂದು ಹೇಳಲಾಗಿದೆ

ಸ್ಕೌಟು ಶಿಬಿರದ ಮುಕ್ತಾಯ ಸಮಾರಂಭ

ಮೈಸೂರು ೫

ಕಳೆದ ಭಾನುವಾರ ನಂಜನಗೂಡಿನಲ್ಲಿ ಸೂರು ನಗರದ ಸ್ಕೌಟುಗಳ ಶಿಕ್ಷಣ ಶಿಬಿರದ ಬಹುಮಾನ ವಿನಿಯೋಗ ಸಮಾರಂಭವು ಸಂಸ್ಥಾನದ ಚೀಫ್ ಸ್ಕೌಟ್ ಕಮಿಷನರ್ ಶ್ರೀ ಬಿ ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು ನಗರದ ನಾನಾ ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ೩೦ ಬಾಲಕರು ಶಿಬಿರದಲ್ಲಿ ತರಪೇತು ಹೊಂದಿರುತ್ತಾರೆ ಭಾನುವಾರ ೨೫ ಮಹಿಳಾ ಕಬ್ ಮಾಸ್ಟರುಗಳೂ ಭಾಗವಹಿಸಿದ್ದರು

ಅಧ್ಯಕ್ಷರು ಪ್ರಶಸ್ತಿ ಪತ್ರಗಳನ್ನು ವಿನಿಯೋಗಿಸಿ ಭಾಷಣ ಮಾಡಿ ಸ್ಕೌಟು ಶಿಬಿರಗಳಿಂದ ಉದಾತ್ತ ಜ್ಞಾನಾರ್ಜನೆ ಮತ್ತು ಸಾಮಾಜಿಕ ಜೀವನಕ್ಕೆ ಅವಕಾಶವಾಗುವುದೆಂದು ಹೇಳಿದರು ಗುಣಾಢ್ಯರಾಗಲೂ ಮತ್ತು ನಾಗರೀಕತ್ವದಲ್ಲಿ ಶಿಕ್ಷಣ ಪಡೆಯಲೂ ಅವಕಾಶವಿರುವ ಉತ್ತಮ ಧ್ಯೇಯದಿಂದ ಕೂಡಿರುವ ಅಂತರ ರಾಷ್ಟ್ರೀಯ ಸಂಸ್ಥೆಯೆಂದರೆ ಸ್ಕೌಟು ಚಳುವಳಿಯೆಂದು ಅವರು ತಿಳಿಸಿದರು ಕಷ್ಟ ಕಾಲಗಳಲ್ಲೂ ಸಹ ಸ್ಕೌಟುಗಳು ಧೃತಿಗೆಡದೆ ತಮ್ಮ ಧ್ಯೇಯ ಸಾಧನೆ ಮಾಡಬೇಕೆಂದು ಅವರು ಹೇಳಿದರು

ಶ್ರೀ ಎಂ ರಾಮಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು ನಂತರ ತುಮಕೂರಿನಲ್ಲಿ ಸೇರುವ ಜಾಂಬೂರಿ ವಿಷಯವನ್ನು ಜಿಲ್ಲಾ ಕಮಿಷನರುಗಳ ಸಭೆಯಲ್ಲಿ ಪರಿಶೀಲಿಸಲಾಯಿತು

ಮೈಸೂರು ಪೇಟೆ ಧಾರಣೆ

	ರೂ ದಿಂದ	ರೂ ವರೆಗೆ
ಕಡಲೆಕಾಯಿ	೧೮ ೧೪ ೦	೨೨ ೧೪ ೦
ಕಡಲೆಕಾಯಿಬೀಜ	೩೭ ೦ ೦	
ಹುಚ್ಚೆಳ್ಳು	೪೯ ೨ ೦	
ಹರಳುಬೀಜ	೨೧ ೧೪ ೦	೩೨ ೦ ೦
ಹೊಂಗೆಬೀಜ	೨೫ ೦ ೦	೨೬ ೧೦ ೦
ಹುಣಸೇಬೀಜ	೫ ೬ ೦	೫ ೧೨ ೦
ಹುರುಳಿ	೨೭ ೧೪ ೦	೩೦ ೧೪ ೦
ಹೆಸರು	೫೧ ೪ ೦	
ಹಲಸಂದೆ	೩೯ ೨ ೦	
ಉದ್ದು	೬೪ ೧೨ ೦	
ಧನಿಯ	೩೬ ೧೦ ೦	
ಸೀಗೆಕಾಯಿ	೭ ೮ ೦	
ಹುಣಸೇಹಣ್ಣು	೪ ೩ ೦	೬ ೧೪ ೦
ಮೆಣಸಿನಕಾಯಿ	೧೨ ೧೪ ೦	೨೨ ೬ ೦
ತೆಂಗಿನಕಾಯಿ ೧೦೦೦	೧೩೦ ೦ ೦	೨೨೦ ೦ ೦

Edited, Printed and Published by A R Nagarajan at Sadhvi Press D Subbiah Road Mysore

ದಕ್ಷಿಣ ಭಾರತದಲ್ಲಿ ಸಣ್ಣ ಸಂಸ್ಥಾನಗಳು ಬೇಡ

ರಾಜಾಜಿಯವರ ಹೇಳಿಕೆ

ಮದ್ರಾಸಿನ ಹಿರಿಯ ಶಾಸನ ಸಭೆಯಲ್ಲಿ ಚಕ್ರವರ್ತಿ ರಾಜಗೋಪಾಲಾಚಾರಿಯವರು ಭಾಷಣ ಮಾಡುತ್ತಾ ದಕ್ಷಿಣ ಭಾರತದಲ್ಲಿ ಸಣ್ಣ ಸಂಸ್ಥಾನಗಳ ರಚನೆಯಾಗುವುದನ್ನು ಟೀಕಿಸಿರುತ್ತಾರೆ ಭಾಷಾವಾರು ಸಂಸ್ಥಾನಗಳ ರಚನೆ ತತ್ವವನ್ನು ಅವರು ಪುನಃ ವಿರೋಧಿಸಿರುತ್ತಾರೆ ಸಣ್ಣ ಸಂಸ್ಥಾನಗಳನ್ನು ಮಾಡಿ ಭಾರತವನ್ನು ಬಾಲ್ಕನ್ ರಾಜ್ಯಸ್ಥಿತಿಗೆ ಇಳಿಸುವುದು ತರವಲ್ಲವೆಂದು ಅವರು ಹೇಳಿ, ಮದ್ರಾಸು ಮತ್ತು ತಿರುವಾಂಕೂರು ಕೊಚ್ಚಿ ಸಂಸ್ಥಾನವನ್ನು ಐಕ್ಯಗೊಳಿಸಬೇಕೆಂದು ಸಲಹೆ ಮಾಡಿರುತ್ತಾರೆ

ನಿಮಗೆ ಈಗಲೇ ಸದವಕಾಶ!

★ ಅಶಕ್ತರನ್ನು ಶಕ್ತಿಯುತರಾಗಿ ಮಾಡಲಾಗುವುದು, ವೃದ್ಧರಿಗೆ ಕಾಯಕಲ್ಪವನ್ನು ತಂದುಕೊಡಲಾಗುತ್ತದೆ ತರುಣರಿಗೆ ಅಸದೃಶ ಶಕ್ತಿ ಬರುತ್ತದೆ

ವಿಶ್ವವಿಖ್ಯಾತ ಮತ್ತು ವಿಶೇಷ ಅನುಭವ ಪಡೆದ ವೈದ್ಯರಾದ

ಡಾ॥ ರಾಣಾ ರವರನ್ನು

ಮುದ್ದಾಗಿ ಕಂಡು ಮಾತನಾಡಿ

ಅವರು ಗಂಡಸರ ಮತ್ತು ಹೆಂಗಸರ ಗುಪ್ತ ರೋಗಗಳ ನಿವಾರಣಾ ಪ್ರವೀಣರು ಧಾತುಕ್ಷಯ, ದೌರ್ಬಲ್ಯ, ಧಾತು ಕ್ಷಯ, ಸ್ವಪ್ನಸ್ಖಲನ, ಸುಜಾಕು, ಸಿಫಿಲಿಸ್ ಮುಂತಾದ ಮೇಹ ರೋಗ, ಮೂಲವ್ಯಾಧಿ, ನರಗಳ ಶಕ್ತಿ, ಭಗಂದರ ಮತ್ತು ಮಹಿಳೆಯರ ಮುಟ್ಟಿನ ಸಂಬಂಧದ ತೊಂದರೆಗಳು, ಮುಟ್ಟು ಕಡಿಮೆಯಾಗುವುದು, ಬಿಳುಪು ಮುಂತಾದ ರೋಗಗಳನ್ನು ಶಸ್ತ್ರ ಚಿಕಿತ್ಸೆಯಿಲ್ಲದೆ ಗುಣಪಡಿಸುವರು ಶೇಕಡ 100 ರಷ್ಟು ಗ್ಯಾರಂಟಿ ಮತ್ತು ಅಸಮಾನವಾದ ಚಿಕಿತ್ಸೆ ಕೂಡಲೇ ಪರಿಣಾಮವು ಕಾಣಬರುವುದು

ಸೂಚನೆ ನರಗಳ ದೌರ್ಬಲ್ಯಕ್ಕೆ ಔಷಧಿ ಕೊಡುವುದಲ್ಲದೆ ವಿದ್ಯುಚ್ಛಕ್ತಿ ಯಂತ್ರಗಳ ಸಹಾಯದಿಂದಲೂ ಚಿಕಿತ್ಸೆ ಮಾಡಲಾಗುವುದು ಏಳು ದಿನಗಳಲ್ಲೇ ಅದರ ಪರಿಣಾಮವು ವ್ಯಕ್ತವಾಗುವುದು ಅರಕ್ತರು ತಮ್ಮ ಭವಿಷ್ಯವನ್ನು ಉತ್ತಮಪಡಿಸಿಕೊಳ್ಳಲು ಸುವರ್ಣಾವಕಾಶ

ಭೇಟಿಯ ಕಾಲ ಬೆಳಿಗ್ಗೆ 8 ರಿಂದ ಮಧ್ಯಾಹ್ನ 2 ಮತ್ತು 4 ರಿಂದ 8

ರಾಣಾ ಮೆಡಿಕಲ್ ಹಾಲ್,

ಎಲ್ ನಂ 1-745 ಅಶೋಕಾ ರಸ್ತೆ, ಮೈಸೂರು (ಮೈಸೂರು ಬ್ಯಾಂಕ್ ಬಳಿ ಬಾರಿ ಕಾಂಪೌಂಡ್ ಹತ್ತಿರ)

ಒಲಂಪಿಯಾ ★ 6-4-56 ರಿಂದ : ಆನೋಳಿಕ್ಕಾರಂಭ

ಪ್ರತಿದಿನ 3 ಆಟಗಳು 3 15, 6 30, 9 45

ಮೆಹಬೂಬ್ ಪ್ರೊಡಕ್ಷನ್ಸ್‌ರವರ, ಮನಸೆಳೆಯುವ ಕಥೆಯುಳ್ಳ ಉತ್ತಮ ಹಿಂದಿ ಚಿತ್ರ

ನಿರ್ದೇಶಕ ಮೆಹಬೂಬ್ - ## ಉಡನ್ ಖಟೋಲ - ಸಂಗೀತ ನೌಷದ್

ಪಾತ್ರ ದಿಲೀಪ್ ಕುಮಾರ್, ನಿಮ್ಮಿ, ಜೀವನ್, ಸೂರ್ಯಕುಮಾರಿ, ಟುನ್‌ಟುನ್ ಮತ್ತು ಆಗಾ

6-4-56ರಿಂದ ಪ್ರತಿ ದಿನ ಬೆಳಿಗ್ಗೆ 10 ರಿಂದ 12 ಘಂಟೆ ವರೆಗೆ ಮೊದಲನೇ 3 ತರಗತಿಗಳ ಟಿಕೆಟ್ಟುಗಳನ್ನು ಮುಂಗಡವಾಗಿ ಕೊಡಲಾಗುತ್ತದೆ

ಜಯಾ ಟ್ರಾವೆಲ್ ಸರ್ವಿಸ್, ಅನಂತಪುರ

78 ದಿನಗಳ ಬದರಿ, ಕಾಶಿ ಮತ್ತು ಕಾಶ್ಮೀರಯಾತ್ರೆ

ಮೈಸೂರಿನಿಂದ ಹೊರಡುವ ದಿನ 13-4-56 — ವಾಪಸು ಬರುವ ದಿನ 1-7-56

ಊಟದ ಏರ್ಪಾಡು ಕೂಡ ಇರುತ್ತದೆ

ಒಂದನೇ ತರಗತಿ 700 ರೂ ಮೂರನೇ ತರಗತಿ 425 ರೂ (ಊಟ, ಬಸ್ಸು ಚಾರ್ಜು ಸೇರಿ)

ಹೆಚ್ಚು ವಿವರಗಳಿಗೆ ಸ್ಥಳೀಯ ಏಜೆಂಟರನ್ನು ವಿಚಾರಿಸಿ

ಟೂರಿಸ್ಟ್ ಬ್ಯೂರೋ,

ಫೋನ್ 574 ಜಗನ್ಮೋಹನ ಅರಮನೆ ರಸ್ತೆ ಮೈಸೂರು

ಸಾಹಸಮಯ ಅಂಗಸಾಧನಾ ಪ್ರದರ್ಶನ ' ರೋಮಾಂಚಕಾರಿ ಸಾಹಸಗಳು!

ಸೋವಿಯಟ್ ರಷ್ಯದ ವಿಶ್ವವಿಖ್ಯಾತ

10 ಜನ ಗಂಡಸರು ಮತ್ತು 6 ಜನ ಹೆಂಗಸರಿಂದ

ತಾ॥ 7—4—1956 ನೇ ಶನಿವಾರ ಸಂಜೆ 5 ರಿಂದ 8 ಗಂಟೆಯವರೆಗೆ

ದೊಡ್ಡಕೆರೆ ಮೈದಾನದಲ್ಲಿ

★

ವಿಶೇಷ ವಿದ್ಯುದ್ದೀಪೋತ್ಸವದಿಂದ ಬೆಳಗುವ ಆಕಾಶದಲ್ಲಿ, ರಾಜಕುಮಾರಿ ಅಮೃತಕೌರ್ ತರಪೇತು ಯೋಜನೆಯ ಅಂಗವಾಗಿ ಭಾರತಕ್ಕೆ ಬಂದಿರುವ ರಷ್ಯದ ವಿಶ್ವವಿಖ್ಯಾತ ಅಂಗಸಾಧನಾ ಪ್ರವೀಣರ ಅದ್ಭುತ ಪ್ರದರ್ಶನಗಳನ್ನು ನೋಡಲು ಎಂದಿಗೂ ತಪ್ಪಬೇಡಿ

★

ಪ್ಯಾರಲಲ್ ಬಾರ್ — ಪೊಮೆಲ್ ಹಾರ್ಸ್

ರೋಮನ್ ರಿಂಗ್ಸ್ — ಸಾಮೂಹಿಕ ಸಾಧನೆಗಳು

ಮತ್ತು ಇನ್ನೂ ಅನೇಕ ಅದ್ಭುತ ಸಾಹಸಗಳು

★

ದೆಹಲಿ, ಬೊಂಬಾಯಿ, ಪೂನಾ, ಪಾಟ್ನಾ ಮುಂತಾದ ಭಾರತದ ವಿವಿಧ ನಗರಗಳ ಇವರ ಪ್ರದರ್ಶನವು ಲಕ್ಷಾಂತರ ಜನರನ್ನು ಬೆರಗುಗೊಳಿಸಿದೆ ದೆಹಲಿಯಲ್ಲಿ ನಡೆದ ಇವರ ಮೊದಲ ಪ್ರದರ್ಶನವನ್ನು ವೀಕ್ಷಿಸಿದ ಪ್ರಧಾನಿ ಪಂಡಿತ ನೆಹರೂರವರು ವಿಶೇಷ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ

★

ಟಿಕೇಟು ದರ — ರೂ 5, 3, 2, 1, ಮತ್ತು 8 ಆಣೆ

ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

— ವ್ಯವಸ್ಥಾಪಕರು —

ಇಂಡೋ-ಸೋವಿಯಟ್ ಸಾಂಸ್ಕೃತಿಕ ಸಂಘ, ಮೈಸೂರು

ರಿಜಿಸ್ಟರ್ ನಂ. 792

ಲಗ್ನದ ಜವಳಿ
ನಾ|| ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ದಿಂಡಿಗಲ್
[illegible]
M V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು · ಫೋನ್ 446

ಕರ್ನಾಟಕ ಜ್ಯುವೆಲರಿ ವರ್ಕ್ಸ್
[illegible]
ಶ್ರೀ ಕೃಷ್ಣಾ ಜ್ಯುಯಲರಿ ವರ್ಕ್ಸ್,
[illegible]

ಪುಟ : ೦೪] SADHVI : FRIDAY 6-4-1956 ಮೈಸೂರು ಶುಕ್ರವಾರ : ೬-೪-೧೯೫೬ [ಸಂಚಿಕೆ : ೨೨೭

ಹೈಕೋರ್ಟಿನಲ್ಲಿ ಸಚಿವ ಚನ್ನಬಸಪ್ಪನವರ ರಿಟ್ ಅರ್ಜಿ

ಆಜಾದ್ ಕಾಶ್ಮೀರದ ವಿಮೋಚನೆಗಾಗಿ ಬಲಪ್ರಯೋಗವಿಲ್ಲ

ಪ್ರಧಾನಿ ನೆಹರೂರವರ ಹೇಳಿಕೆ

ಪಾಕಿಸ್ತಾನವು ಆಕ್ರಮಿಸಿರುವ ಕಾಶ್ಮೀರವನ್ನು ವಿಮೋಚನೆಗೊಳಿಸುವುದಕ್ಕಾಗಿ ಬಲಪ್ರಯೋಗ ಮಾಡಲು ಭಾರತಕ್ಕೆ ಇಚ್ಛೆಯಿಲ್ಲವೆಂದು ಪ್ರಧಾನಿ ನೆಹರೂರವರು ನೆನ್ನೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಸೀಸ್‌ಫೈರ್ ಪ್ರದೇಶದ ಎರಡು ಪಾರ್ಶ್ವಗಳಲ್ಲಿಯೂ ಸೇನೆಗಳು ಇರುವುದಾಗಿಯೂ ಅವರು ಹೇಳಿದರು. [illegible] ವಿಶೇಷ ಸಂಖ್ಯೆಯಲ್ಲಿ [illegible] ಸೈನ್ಯ ಬಲಗಳು ಒಪ್ಪುವುದಿಲ್ಲ [illegible] ಭಾರತದ ಕಡೆಗೆ ಬರುವ ಜನ [illegible] ಸ್ಪಷ್ಟಪಡಿಸಿ [illegible] ಪ್ರತಿನಿಧಿಯೊಬ್ಬರ ಪ್ರಶ್ನೆಗೆ ಉತ್ತರವಿತ್ತು ಪಾಕಿಸ್ತಾನವು ಧಾಳಿಯನ್ನಾರಂಭಿಸಿದರೆ [illegible] ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗಿದೆಯೆಂದೂ ಅವರು ನುಡಿದರು. [illegible] ಪ್ರಧಾನಿಯೊಡನೆ ತಮ್ಮ ಭೇಟಿ [illegible] ಎಂದೂ ಅವರು ಹೇಳಿದರು.

ಮಣಿಲಾಲ್ ಗಾಂಧಿಯವರ ನಿಧನ

ಮಹಾತ್ಮಾ ಗಾಂಧಿಯವರ ದ್ವಿತೀಯ ಪುತ್ರ ಮಣಿಲಾಲ್ ಗಾಂಧಿಯವರು ನೆನ್ನೆ ದಕ್ಷಿಣ ಆಫ್ರಿಕಾದ ನಟಾಲ್ ಪ್ರಾಂತದ ಫೀನಿಕ್ಸ್ ನಗರದಲ್ಲಿ ನಿಧನರಾದರು. ಅವರು ಕೆಲವಾರು ತಿಂಗಳಿಂದ [illegible] ಸಂಬಂಧವಾದ ರೋಗದಿಂದ ನರಳುತ್ತಿದ್ದರು. ಅವರು ಮಹಾತ್ಮಾ ಗಾಂಧಿಯವರ [illegible] ಭಾರತಕ್ಕೆ ಬಂದಿದ್ದರು. [illegible] ಅವರನ್ನು ದಕ್ಷಿಣ ಆಫ್ರಿಕಕ್ಕೆ ಕಳುಹಿಸಿದರು. ಗಾಂಧೀಜಿಯವರು [illegible] ಅವರು [illegible] ಇಂಡಿಯನ್ ಒಪಿನಿಯನ್ ಪತ್ರಿಕೆಯನ್ನು ನಡೆಸುತ್ತಿದ್ದರು.

ಸಂಗೀತ ನಾಟಕ ಅಕಾಡೆಮಿಯ ನೂತನ ಅಧ್ಯಕ್ಷರು

[illegible] ಪುಟ್ಟಸ್ವಾಮಿಯವರ ಸ್ಥಾನದಲ್ಲಿ [illegible] ವಿದ್ಯಾ ಶಾಖಾಧಿಕಾರಿಗಳನ್ನು [illegible] ನಾಟಕ ಅಕಾಡೆಮಿಯ ಅಧ್ಯಕ್ಷರಾಗಿ ನೇಮಿಸಲಾಗಿದೆ.

[illegible] ಹೊಂದಿಕೊಳ್ಳಬೇಕು

[illegible] ಮೊಹಲ್ಲಾ [illegible] ಒಪ್ಪಿಕೊಂಡಿದ್ದ [illegible] ತಿಳಿದ [illegible] ದವನ್ನು ವಿಧಿಸಲಾಯಿತು.

[illegible] ಕಾರ್ಖಾನೆ ವಿಸ್ತರಣೆ

[illegible] ಸಿಲ್ಕ್ ಕಾರ್ಖಾನೆ [illegible] ವಿಸ್ತರಿಸಲು ಮೈಸೂರು [illegible] ಆಲೋಚಿಸುತ್ತಿರುವರೆಂದು [illegible] ಮಂತ್ರಿ ಕೆ. ಸಿ. ರೆಡ್ಡಿಯವರು ಲೋಕ [illegible] ತಿಳಿಸಿರುತ್ತಾರೆ.

ನಗರದ ಸಂಸ್ಕೃತ ಕಾಲೇಜು ಪರೀಕ್ಷೆ ಬಗ್ಗೆ ಪ್ರಶ್ನೆ

ಶಾಸನ ಸಭೆಯಲ್ಲಿ ವಿದ್ಯಾ ಮಂತ್ರಿಯವರ ವಿವರಣೆ

ಬೆಂಗಳೂರು ೬

ಮೈಸೂರು ನಗರದಲ್ಲಿರುವ ಶ್ರೀ ಚಾಮರಾಜ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ [illegible] ಅಕ್ರಮಗಳ ಬಗ್ಗೆ [illegible] ಪರೀಕ್ಷಾ ಸಮಿತಿಯು [illegible] ಮುಖ್ಯ ಮಂತ್ರಿಗಳು ಶ್ರೀ [illegible] ಪ್ರಶ್ನೆಗೆ ಉತ್ತರ [illegible]

ಸಂಸ್ಕೃತಿ ಪ್ರಚಾರದ ಬಗ್ಗೆ ಮುಖ್ಯ ಮಂತ್ರಿಯವರ ವಿವರಣೆ

ನೆನ್ನೆ ವಿಧಾನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಸಂಸ್ಕೃತಿ ಪ್ರಚಾರಕ್ಕೆ ಸಂಬಂಧಿಸಿದಂತೆ [illegible] ಸಂಸ್ಕೃತಿ ಪ್ರಚಾರಕ್ಕಾಗಿ [illegible] ಲಕ್ಷ ರೂ. [illegible] ರೂ. [illegible] ಸಂಸ್ಕೃತಿ ಪ್ರಚಾರ [illegible] ಗಾಂಧೀಜಿಯವರ ಸಾಹಿತ್ಯವನ್ನು [illegible] ಭಾರತ, ಕೈಮಗ್ಗ ಭಾರತ [illegible] ಆಧುನಿಕ ಸಾಹಿತ್ಯವನ್ನು ಪ್ರಕಟಿಸಲು [illegible] ಸಂಸ್ಕೃತಿ ಪ್ರಚಾರ [illegible] ಅವರಿಗೆ [illegible] ಪುಸ್ತಕಗಳನ್ನು [illegible] ಅವರು ಹೇಳಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಹೈಕೋರ್ಟಿನಲ್ಲಿ ಸಚಿವ ಚನ್ನಬಸಪ್ಪನವರ ರಿಟ್ ಅರ್ಜಿ

ಚುನಾವಣಾ ನ್ಯಾಯಮಂಡಲದ ತೀರ್ಪಿನ ಪ್ರತಿಕ್ರಿಯೆ

(ಸ್ವಂ ಸು ಪ್ರ ರಿ) ಬೆಂಗಳೂರು ೬

ವ್ಯಾಪಾರ ಮಂತ್ರಿ ಶ್ರೀ ಜಿ. ಎಂ. ಚನ್ನಬಸಪ್ಪನವರು ಈ ದಿನ ಹೈಕೋರ್ಟಿನಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಿ ಚುನಾವಣಾ ನ್ಯಾಯಮಂಡಲಿಯವರು ತಮ್ಮ ಚುನಾವಣೆಯನ್ನು ರದ್ದುಗೊಳಿಸಿ ಮಾಡಿರುವ ಆಜ್ಞೆಯನ್ನು ವಜಾ ಮಾಡುವಂತೆ ಕೋರಿದ್ದಾರೆ. ಚುನಾವಣಾ ನ್ಯಾಯಮಂಡಲವು ತೀರ್ಪಿನ ವಿವರವನ್ನು ಚುನಾವಣಾ ಕಮಿಷನ್ನಿಗೆ ಕಳುಹಿಸದಂತೆಯೂ ಚುನಾವಣಾ ಕಮಿಷನ್ನಿನವರು ಈ ಬಗ್ಗೆ ಮೈಸೂರು ವಿಧಾನ ಸಭಾಧ್ಯಕ್ಷರಿಗೆ ಸೂಚನೆ ಕಳುಹದಂತೆಯೂ ಚುನಾವಣೆ ರದ್ದಾದ ವಿಷಯವನ್ನು ಗೆಜೆಟ್ಟಿನಲ್ಲಿ ಪ್ರಕಟಿಸದಂತೆಯೂ ಸಚಿವರು ಸಂವಿಧಾನದ ೨೨೬ನೇ ವಿಧಿ ಪ್ರಕಾರ ರಿಟ್ ಅರ್ಜಿ ಅನ್ನು ಕೊಟ್ಟಿರುವರು.

ಸಂಸ್ಥಾನದಲ್ಲಿ ಟೋಲ್ ಗೇಟ್‌ಗಳು

ಪ್ರಯಾಣಿಕರಿಗೆ [illegible] ಅನುಕೂಲವಾಗುವಂತೆ ಮಾಡಲು ಅವಶ್ಯವಿದ್ದ ಪ್ರದೇಶಗಳಲ್ಲಿ ಹೊಸದಾಗಿ ಟೋಲ್ ಗೇಟ್‌ಗಳನ್ನು ತೆಗೆಯಲು ಏರ್ಪಾಡು ಮಾಡಲಾಗುವುದೆಂದು ಕೈಗಾರಿಕಾ ಮಂತ್ರಿಯವರು ಈ ದಿನ ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ರಾಜೀನಾಮೆ ಕೊಡುವಂತೆ ಅಮ್ಮತ ಕೌರ್‌ರವರಿಗೆ ಒತ್ತಾಯ

ಲೋಕ ಸಭೆಯಲ್ಲಿ [illegible] ಭಾಷಣ ಮಾಡಿ, ದೇಶೀಯ ವೈದ್ಯ ಪದ್ಧತಿ ಬಗ್ಗೆ ಆರೋಗ್ಯ ಮಂತ್ರಿ ಅಮೃತ ಕೌರ್‌ರವರು ತಮ್ಮ ನೀತಿಯನ್ನು ಬದಲಾಯಿಸಬೇಕೆಂದೂ, ಇಲ್ಲದಿದ್ದರೆ ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕೆಂದೂ ಸೂಚಿಸಿದರು. ಮೊನ್ನೆ ಅಮೃತಕೌರ್‌ರವರು ಮಾತನಾಡಿ, ತಮಗೆ ಯಾವ ವೈದ್ಯ ಪದ್ಧತಿಯ ಮೇಲೂ ದ್ವೇಷವಿಲ್ಲವೆಂದು ತಿಳಿಸಿದರು.

ಸಿಂಹಳದ ಚುನಾವಣೆಯಲ್ಲಿ ೩ ಜನ ಮಂತ್ರಿಗಳ ಪರಾಜಯ

ಸಿಂಹಳದಲ್ಲಿ ನಡೆಯುತ್ತಿರುವ ಸಾರ್ವತ್ರಿಕ ಚುನಾವಣೆಯಲ್ಲಿ ವಿರೋಧ ಪಕ್ಷದ ನಾಯಕ ಭಂಡಾರನಾಯಕೆಯವರ ಪಕ್ಷಕ್ಕೆ [illegible] ಸ್ಥಾನಗಳು, ಪ್ರಧಾನಿ ಕೊಟೆಲಾವಲರವರ ಪಕ್ಷಕ್ಕೆ [illegible] ಸ್ಥಾನಗಳು, ಲಂಕಾ ಸಮಸಮಾಜ ಪಕ್ಷಕ್ಕೆ [illegible] ಮತ್ತು ಸ್ವತಂತ್ರರಿಗೆ [illegible] ಸ್ಥಾನವೂ ಲಭ್ಯವಾಗಿವೆ. ಕೊಟೆಲಾವಲರವರು ಆರಿಸಿಬಂದಿದ್ದಾರೆ. ಆದರೆ ಎ. ರತ್ನನಾಯಕೆ, ಎ. ಎಫ್. [illegible] ಮತ್ತು [illegible] ಎಂಬ ಮೂವರು ಮಂತ್ರಿಗಳೂ ಸಿ. ಆರ್. [illegible] ಮತ್ತು [illegible] ಎಂಬ ಇಬ್ಬರು ಪಾರ್ಲಿಮೆಂಟರಿ ಕಾರ್ಯದರ್ಶಿಗಳೂ ಪರಾಜಿತರಾಗಿರುವರು. ಇಲ್ಲಿ ಒಟ್ಟು ೯೫ ಚುನಾವಣಾ ಕ್ಷೇತ್ರಗಳಿವೆ.

ಸಂಸ್ಥಾನ ಪುನರ್ವಿಂಗಡಣೆ ಮಸೂದೆಗೆ ಅಂಗೀಕಾರ

ಬೆಂಗಳೂರು ೬

ವಿಧಾನ ಸಭೆಯು ನೆನ್ನೆ ಸಂಸ್ಥಾನ ಪುನರ್ವಿಂಗಡಣೆಗೆ ಸಂಬಂಧಿಸಿದ ಮಸೂದೆಯನ್ನು ಸರ್ವಾನುಮತದಿಂದ ಅಂಗೀಕರಿಸಿತು. ಮಸೂದೆಗೆ ಕೆಲವಾರು ತಿದ್ದುಪಡಿಗಳು ಸೂಚಿಸಲ್ಪಟ್ಟು ಅವು ಅಂಗೀಕೃತವಾದುವು. ಮಸೂದೆಯು ಪ್ರಕಾರ ನೂತನ ಮೈಸೂರು ಅಕ್ಟೋಬರ್ ೧ ರಿಂದು ಜಾರಿಗೆ ಬರುವುದು.

ನೌಕರರ ಸಂಬಳದ ಬಗ್ಗೆ ವಿಧಾನ ಸಭೆಯ ಶಿಫಾರಸ್

ನೂತನ ಮೈಸೂರು ಸಂಸ್ಥಾನ ರಚನೆ ನಂತರ ನೌಕರರ ಸಂಬಳ ಸಾರಿಗೆಗಳನ್ನು ದೇಶದ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ನಿರ್ಧರಿಸಲು ಸಂಸ್ಥಾನಕ್ಕೆ ಅವಕಾಶವಿರಬೇಕೆಂದು ಮುಖ್ಯ ಮಂತ್ರಿಯವರು ಸಂಸ್ಥಾನ ಪುನರ್ವಿಂಗಡಣಾ ಮಸೂದೆಗೆ ಸೂಚಿಸಿದ್ದ ತಿದ್ದುಪಡಿಯನ್ನು ಸಭೆಯು ಅಂಗೀಕರಿಸಿತು.

ವೈ. ಎಸ್. ರಾಮಸ್ವಾಮಿಯವರ ನಿಧನ

ಮೈಸೂರು ಸಂಸ್ಥಾನದ ಸುಪ್ರಸಿದ್ಧ ಕ್ರಿಕೆಟ್ ಆಟಗಾರರಾದ ವೈ. ಎಸ್. ರಾಮಸ್ವಾಮಿಯವರು ನೆನ್ನೆ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರು ಮಹಾರಾಜಾ ಕಾಲೇಜಿನಲ್ಲಿ ವ್ಯಾಯಾಮ ಶಿಕ್ಷಣದ ಅಸಿಸ್ಟೆಂಟ್ ಡೈರೆಕ್ಟರ್ ಆಗಿದ್ದರು. ಅವರಿಗೆ ವೃದ್ಧ ತಾಯಿಯೂ, ಸಹೋದರಿಯರೂ ಮತ್ತು ಸಹೋದರರೂ ಇರುವರು.

ಕೈ ಕಾಲಿಲ್ಲದ ಬಾಲಕನಿಗೆ ತರಗತಿಯಲ್ಲಿ ಪ್ರಥಮ ಸ್ಥಾನ

ಮಲಯದ ಒಂದು ಹಳ್ಳಿ ಶಾಲೆಯಲ್ಲಿ ಕೈಕಾಲಿಲ್ಲದ ೧೦ ವರ್ಷದ ಮಹಮದ್ ಜಾಫರ್ ಎಂಬ ಬಾಲಕನೊಬ್ಬನು ಬಹಳ ಶ್ರಾಂತಿಯಿಂದ ತರಗತಿಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾನೆ. ಅವನು ಹಲ್ಲಿನಲ್ಲಿ ಲೇಖನಿಯನ್ನು ಕಚ್ಚಿಕೊಂಡು ಬರೆಯುತ್ತಾನೆ. ಅವನನ್ನು ಅವನ ಸಹೋದರಿಯು ಶಾಲೆಗೆ ಕರೆತಂದು ಅವನ ಸ್ಥಳದಲ್ಲಿ ಕೂಡಿಸುವಳು. ಅವನಿಗೆ ಕೃತಕ ಕೈಕಾಲುಗಳನ್ನು ಕೊಡಿಸಲು ಅಧಿಕಾರಿಗಳು ಆಲೋಚಿಸಿದ್ದಾರೆ.

ಸತ್ಯಾಗ್ರಹಿಗಳಿಗಾಗಿ ಶಿಕ್ಷೆ

ಕುಂದಿಯ ಶ್ರೀಕಂಠ ಮತ್ತು ನಾರಾಯಣ ಎಂಬುವರು ಸತ್ಯಾಗ್ರಹ ನಡೆಸಿದರೆಂದು ಅವರುಗಳಿಗೆ ಶಿಕ್ಷೆ [illegible] ದಂಡ ವಿಧಿಸಲಾಗಿದೆ.

ರಾಷ್ಟ್ರೀಯ ವಿಸ್ತರಣೆ ಯೋಜನೆಯ ಪ್ರಾರಂಭೋತ್ಸವ

ಶಿವರಾಜನಗರದ ತಾಲ್ಲೂಕಿನಲ್ಲಿ ರಾಷ್ಟ್ರೀಯ ವಿಸ್ತರಣೆ ಯೋಜನೆಯನ್ನು ಜಾರಿಗೆ ತರುವ ಸಂಬಂಧವಾಗಿ ನಾಳೆ ಮಧ್ಯಾಹ್ನ ೩ ಗಂಟೆಗೆ ಶಿವರಾಜನಗರದಲ್ಲಿ ಸಮಾರಂಭವೊಂದನ್ನು ಏರ್ಪಡಿಸಲಾಗಿದೆ. ಕೈಗಾರಿಕಾ ಮಂತ್ರಿಯವರಾದ ಶ್ರೀ ಜಿ. ಎಂ. ಚನ್ನಬಸಪ್ಪನವರು ಆರಂಭೋತ್ಸವವನ್ನು ನೆರವೇರಿಸುವರು.

ವಿಶ್ವ ಆರೋಗ್ಯ ಸಂಸ್ಥೆ

ದಿನಾಚರಣೆ

ಮೈಸೂರು ೬

ನಗರದ ಪೌರಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ವಿಶ್ವ ಆರೋಗ್ಯ ಸಂಸ್ಥೆ ದಿನಾಚರಣೆ ಸಂಬಂಧವಾಗಿ ಬಹಿರಂಗ ಸಮಾರೋಪವನ್ನು ಏರ್ಪಡಿಸಲಾಗಿದೆ. [illegible] ನಾಗರೀಕರು ಭಾಷಣ ಮಾಡುವರು. [illegible] ಚಲನಚಿತ್ರವನ್ನು ಪ್ರದರ್ಶಿಸಲಿರುವರು

ಶ್ರೀ ರಾಮೋತ್ಸವ

ನೆನ್ನೆ ರಾತ್ರಿ ವಿಶ್ವೇಶ್ವರ[illegible] ಶ್ರೀ ರಾಮ ಸೇವಾ ಸಮಿತಿಯ ಸಭೆಯು [illegible] ಅಧ್ಯಕ್ಷತೆಯಲ್ಲಿ ನಡೆದು, [illegible] ಶ್ರೀ ರಾಮೋತ್ಸವ [illegible] ಕಾರ್ಯಕ್ರಮಗಳನ್ನು ನಡೆಸುವಂತೆ [illegible] ಶ್ರೀ ಎಂ. ಸಿ. [illegible] [illegible]

ಸಿ. ಎಸ್. ಪಿ. ನಾಯಕರ ಪ್ರವಾಸ

ಈ ತಿಂಗಳು [illegible] ಸಿ. ಎಸ್. ಪಿ. ನಾಯಕರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿ ಮತ್ತು ಇತರರು [illegible] ಮತ್ತು [illegible] ಪ್ರವಾಸ ಮಾಡುವರು

ವಯಸ್ಕರ ಶಿಕ್ಷಣ ಪರಿಷತ್

ಮೈಸೂರು ಜಿಲ್ಲಾ ಸಾಹಿತ್ಯ [illegible] ಶ್ರೀ ಸಿ. ಎಸ್. [illegible] ಮೈಸೂರು ಡಿವಿಜನಲ್ ಆಫೀಸರಾದ ಶ್ರೀ [illegible] ವಯಸ್ಕರ ಶಿಕ್ಷಣ [illegible] ನೆನ್ನೆ ಸಂಜೆ ತೆರೆದರು. [illegible]

ವಿನೋದ ಸಮಾರೋಪಗಳು

ಮಹಾರಾಜಾ ಕಾಲೇಜಿನ [illegible] ಅಧ್ಯಾಪಕರಾದ ಶ್ರೀ ಟಿ. ಎಸ್. [illegible] ಶ್ರೀ ಸಿ. ಎಸ್. [illegible] ಶ್ರೀ ಟಿ. ಎಸ್. [illegible] ನೆರವೇರಿಸಲಾಯಿತು

ನಗರದ [illegible] ಶ್ರೀ [illegible] ರವರು ತಮ್ಮ ಕುಮಾರಿ [illegible] ನೆರವೇರಿಸಿದರು

[illegible] ಶ್ರೀ [illegible] ತಮ್ಮ ಕುಮಾರ [illegible] ಜರುಗಿಸಿದರು

[illegible] ಶ್ರೀ [illegible] ಜರುಗಿಸಿದರು

ನೃಸಿಂಹ ಭಾರತಿ ಸ್ವಾಮಿಗಳ ಜಯಂತಿ

[illegible] ಶ್ರೀ ಗುರು ನೃಸಿಂಹ ಭಾರತಿ ಸ್ವಾಮಿಗಳವರ ಜಯಂತಿ ಮಹೋತ್ಸವ [illegible] ನಡೆಯಿತು. [illegible] ಜರುಗಿಸಿದರು

ಗುರುಭಕ್ತ ತಿಲಕ

ಎಸ್. ತ್ರಿಕಂಠಯ್ಯನವರ ನಿಧನ

[illegible] ಗುರುಭಕ್ತ ತಿಲಕ ಎಸ್. ತ್ರಿಕಂಠಯ್ಯನವರು [illegible] ವಯಸ್ಸಿನ [illegible] ವಿಧಿವಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಅಖಿಲ ಭಾರತ [illegible] ಶ್ರೀ [illegible] ಗುರುಭಕ್ತ ತಿಲಕ ಎಂಬ ಪ್ರಶಸ್ತಿಯನ್ನು ಕೊಟ್ಟಿದ್ದರು

ಕುಸ್ತಿ ವ್ಯವಸ್ಥೆಯಲ್ಲಿ

ತಾರತಮ್ಯ ವಿರಬಾರದು

ನಗರದಲ್ಲಿ [illegible] ನಡೆಯುತ್ತಿರುವ ಕುಸ್ತಿ [illegible] ತಾರತಮ್ಯ [illegible] ಕುಸ್ತಿ [illegible]

ಬೊಂಬಾಯಿ ನಗರಕ್ಕೆ

ಎಂ. ಸಿ. ಚಾಗ್ಲಾ ಗೌರ್ನರ್

ಬೊಂಬಾಯಿ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾಗಿರುವ ಎಂ. ಸಿ. ಚಾಗ್ಲಾರವರು ಹೊಸ ಬೊಂಬಾಯಿ ನಗರ ಪ್ರಾಂತದ [illegible] ರಾಗಿ ನೇಮಿಸಲಾಗುವುದೆಂದು ಹೇಳಲಾ[illegible]

ಪಂಚಾಂಗ ಸ್ವೀಕಾರ

ಸಿದ್ಧಾಂತಿ ಎ. ಸಚ್ಚಿದಾನಂದ ಜೋಯಿಸರ ಮಕ್ಕಳು ಶ್ರೀ ಸಿದ್ಧಾಂತಿ ಎಂ. ಎಸ್. [illegible] ಮುದ್ರಿಸಲ್ಪಟ್ಟು [illegible] ಸಂವತ್ಸರದ ವೈ[illegible] ಪಂಚಾಂಗವನ್ನು ಆದರದಿಂದ ಸ್ವೀಕರಿಸಿದ್ದೇವೆ

ತರೀ ಜಮೀನು ಮಾರಾಟಕ್ಕೆ

ಮೈಸೂರು ನಂಜನಗೂಡು ಹೈರೋಡ್ [illegible] ತಾಂಡವಪುರ ಗ್ರಾಮಕ್ಕೆ ಸೇರಿರುವ, [illegible] ವ್ಯಾಲಿ ಪೇಪರ್ ಮಿಲ್ ಬಳಿ ಇರುವ, [illegible] ತರೀ ಜಮೀನುಗಳು ಕ್ರಯಕ್ಕಿವೆ.

ವಿಸ್ತೀರ್ಣ 2 ಎಕರೆ 30 ಗುಂಟೆ [illegible] 10 ಪಲ್ಲ ಉತ್ಪನ್ನ ಒಂದು ತಾಕು. ಮತ್ತು [illegible] 2 ಎಕರೆ 22 ಗುಂಟೆ, ಗುತ್ತಿಗೆ 30 [illegible] ಒಂದು ತಾಕು. ಕೂಡಲೇ ಜಮೀನು ಸ್ವಾಧೀನ ಕೊಡಲಾಗುತ್ತೆ. ವಿವರಗಳಿಗೆ:—

ಜಯ ಅಂಡ್ ಕಂಪೆನಿ,

ಮನೆ, ಜಮೀನುಗಳ ಏಜಂಟರು

ಹಳೇ ಮೈಸೂರು ಬ್ಯಾಂಕ್ ಕಟ್ಟಡ,

ಮೈಸೂರು   ಫೋನ್ [illegible]

SREE GANESHA TALKIES

GALA RELEASE ON 7-4-56

Daily 3 Shows



Featuring — Victor Mature, Guy Madison & Robert Preston

SREE GAYATHRI TALKIES

From 6-4-56   For 3 days

A MAN CALLED PETER

(In Technicolor Cinemascope)

Starring — Richard Todd

Jean Peters

Morning Shows on Saturday & Sunday

TIME BOMB

Edited, Printed and Published by A. K. Nagarajan at Sadhvi Press, D. Subbiah Road, Mysore

ಒಲಂಪಿಯಾ ★

6—4—56 ರಿಂದ . ಅಮೋಘ ಪ್ರದರ್ಶನ

ಪ್ರತಿದಿನ 3 ಆಟಗಳು 3 15, 6 30, 9 15

[illegible] ಉತ್ತಮ ಹಿಂದಿ ಚಿತ್ರ

ನಿರ್ದೇಶನ ಮೆಹಬೂಬ್ — ಉಡನ್ ಖಟೋಲ — ಸಂಗೀತ ನೌಶಾದ್

ಪಾತ್ರ: ದಿಲೀಪ್ ಕುಮಾರ್, ನಿಮ್ಮಿ, ಜೀವನ್, ಸೂರ್ಯಕುಮಾರಿ,

ಟೂಣ್‌ಟೂಣ್ ಮತ್ತು [illegible]

6—4—56 [illegible] 10 ರಿಂದ 12 [illegible]

[illegible]

REMEMBER ABIDS GRAND AUCTION

On Sunday 8th : at SHOW-ROOMS at 10 A M

Electric TABLE FANS brand new LEITH MACHINE, H. M. V. Portable gramophone SEWING MACHINE, [illegible] machines, Coffee grinder, Table Time piece in working order. A very good collection of Furniture consisting of Rose wood Sofa set, [illegible] table, Cradle on Stand, [illegible] WANDA [illegible] Wooden Cots, T. W. & R. W. Almirahs, Baby [illegible] and many other useful articles worth buying.

INSPECTION Saturday 7th between 4 & 6 P. M.

★

— Authorised Dealers —

MURPHY RADIOS

Phone 173   Statue Square   MYSORE

ನಾವಿಸನೂಯ ಅಂಗಸಾಧನಾ ಪ್ರದರ್ಶನ! ರೋಮಾಂಚಕಾರಿ ಸಾಹಸಗಳು!

ಸೋವಿಯೆಟ್ ರಷ್ಯದ ವಿಶ್ವವಿಖ್ಯಾತ

10 ಜನ ಗಂಡಸರು ಮತ್ತು 6 ಜನ ಹೆಂಗಸರಿಂದ

ತಾ|| 7—4—1956 ನೇ ಶನಿವಾರ ಸಂಜೆ 5 ರಿಂದ 8 ಗಂಟೆಯವರೆಗೆ

ದೊಡ್ಡಕೆರೆ ಮೈದಾನದಲ್ಲಿ

★

ವಿಶೇಷ ದೀಪಾಲಂಕಾರದಿಂದ ಬೆಳಗುವ [illegible], ರಾಜಕುಮಾರಿ ಅಮೃತಕೌರ್ [illegible] ಯೋಜನೆಯ ಅಂಗವಾಗಿ ಭಾರತಕ್ಕೆ ಬಂದಿರುವ ರಷ್ಯದ ವಿಶ್ವವಿಖ್ಯಾತ ಅಂಗಸಾಧನಾ ಪ್ರವೀಣರ ಅದ್ಭುತ ಪ್ರದರ್ಶನಗಳನ್ನು

ನೋಡಲು ಎಂದಿಗೂ ತಪ್ಪದಿರಿ

★

ಪ್ಯಾರಲಲ್ ಬಾರ್ — ಪೊಮೆಲ್ಡ್ ಹಾರ್ಸ್

ರೋಮನ್ ರಿಂಗ್ಸ್ — ಸಾಮೂಹಿಕ ಸಾಧನೆಗಳು

ಮತ್ತು ಇನ್ನೂ ಅನೇಕ ಅದ್ಭುತ ಸಾಹಸಗಳು

★

ದೆಹಲಿ, ಬೊಂಬಾಯಿ, ಪೂನಾ, [illegible] ಮುಂತಾದ ಭಾರತದ ವಿವಿಧ ನಗರಗಳಲ್ಲಿ ಇವರ ಪ್ರದರ್ಶನವು ಲಕ್ಷಾಂತರ ಜನರನ್ನು ಬೆರಗುಗೊಳಿಸಿದೆ

ದೆಹಲಿಯಲ್ಲಿ [illegible] ಪ್ರದರ್ಶನವನ್ನು [illegible] ಪ್ರಧಾನ ಮಂತ್ರಿ ನೆಹರೂರವರು ವಿಶೇಷ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ

★

ಟಿಕೆಟು ದರ — ರೂ. 5, 3, 2, 1, ಮತ್ತು 8 ಆಣೆ

ಮಹಿಳೆಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

— ವ್ಯವಸ್ಥಾಪಕರು —

ಇಂಡೋ ಸೋವಿಯಟ್ ಸಾಂಸ್ಕೃತಿಕ ಸಂಘ, ಮೈಸೂರು

ರಿಜಿಸ್ಟ್ರೇಷನ್ ನಂ. 793

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ೩೦ ಪೈಸೆ

ಅಂಚೆ ಮೂಲಕ
ತಿಂಗಳಿಗೆ ೫೦ ನ. ಪೈ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಸ್ಥಾನದ ಏಕೈಕ ದಿನ ಪತ್ರಿಕೆ

ಸಾಧ್ವಿ ದಿನ ಪತ್ರಿಕೆಗೆ

ಜಾಹಿರಾತುಗಳನ್ನು

ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಪುಸ್ತಕ : ೧೪] SADHVI : SATURDAY 7-4-1956 ಮೈಸೂರು ಶನಿವಾರ : ೭-೪ ೧೯೫೬ [ಸಂಚಿಕೆ : ೨೨೦

ಕಾಶ್ಮೀರದ ಬಗ್ಗೆ ಧರ್ಮಯುದ್ಧಕ್ಕಾಗಿ ಪಾಕಿಸ್ಥಾನ್ ಲೀಗ್ ಕರೆ

ಕಾಶ್ಮೀರದ ಬಗ್ಗೆ ಧರ್ಮ ಯುದ್ಧಕ್ಕೆ ಕೂಗು

ಪಾಕಿಸ್ತಾನದ ಶಾಸನ ಸಭೆಯಲ್ಲಿ ಲೀಗ್ ಸದಸ್ಯರ ಉಗ್ರ ಭಾಷಣ

ಪಾಕಿಸ್ತಾನದ ಪ್ರಧಾನಿ ಚೌಧುರಿ ಮಹಮ್ಮದ್ ಅಲಿಯವರು ನೆನ್ನೆ ಮಾತನಾಡಿ, ಕಾಶ್ಮೀರ ಪ್ರಶ್ನೆಯು ಭದ್ರತಾ ಸಮಿತಿಗೆ ಪುನಃ ಹಾಕಬೇಕಾಗಬಹುದೆಂದು ತಿಳಿಸಿದರು. ಸಭೆಯಲ್ಲಿ ಈ ಪ್ರಶ್ನೆ ಬಗ್ಗೆ ಚರ್ಚೆಯಾದಾಗ, ಮುಸ್ಲಿಂ ಲೀಗ್ ಸದಸ್ಯ ... ಪಾಕಿಸ್ತಾನವು ಧರ್ಮ ಯುದ್ಧಕ್ಕೆ ಸಿದ್ಧವಾಗಬೇಕು ... ಈ ಪ್ರಶ್ನೆಯು ಬಗೆಹರಿಯಬೇಕೆಂದು ... ಅವರು ಸರ್ ಫಿರೋಜ್ ಖಾನ್ ನೂನ್ ... ಪಾಕಿಸ್ತಾನವು ... ಕಾಶ್ಮೀರವು ಪಾಕಿಸ್ತಾನಕ್ಕೆ ಸೇರಬೇಕೆಂದೂ, ವಿಶ್ವ ಸಂಸ್ಥೆಯು ಈ ವಿಷಯದಲ್ಲಿ ನ್ಯಾಯವಾಗಿ ನಡೆದಿಲ್ಲವೆಂದೂ, ಪಾಕಿಸ್ತಾನವು ತನ್ನನ್ನು ಮತ್ತು ದೇವರನ್ನು ಬಿಟ್ಟು ಈ ಬಗ್ಗೆ ಇನ್ನಾರನ್ನೂ ನಂಬಕೂಡದೆಂದೂ ಹೇಳಿದರು. ಮಿಯಾನ್ ಜಾಫರ್ ಷಾ ಎಂಬ ಮತ್ತೊಬ್ಬ ಲೀಗ್ ಸದಸ್ಯರು ಮಾತನಾಡಿ ಪ್ರಧಾನಿ ನೆಹರೂರವರು 'ಬಾಕು ... ಭಾಷೆ'ಯನ್ನು ... ನೆಹರೂರವರ ನಿಜವಾದ ಬಣ್ಣ ಬಯಲಾಯಿತೆಂದೂ, ಅವರು ಪ್ರಜಾಪ್ರಭುತ್ವವಾದಿಗಳಾಗಿರದೆ ಸಾಮ್ರಾಜ್ಯ ಶಾಹಿ ... ಎಂದು ಮತ್ತೊಬ್ಬರು ಹೇಳಿದರು.

ಪ್ರಧಾನಿ ಮಹಮದ್ ಅಲಿಯವರು ಉತ್ತರ ಕೊಟ್ಟು, ನೇರ ಸಂಧಾನದಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲವೆಂದು ತಿಳಿಸಿ, ಪಶ್ಚಿಮ ಮತ್ತು ಪೂರ್ವ ಪಾಕಿಸ್ತಾನದ ಗಡಿ ಬಳಿ ಭಾರತವು ಸೇನೆಗಳನ್ನು ಜಮಾಯಿಸುತ್ತಿರುವುದೆಂದೂ, ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರ ಕೊಳ್ಳುತ್ತಿದೆಯೆಂದೂ ತಿಳಿಸಿದರು.

ಬಸ್ಸು ಕುಲುಕಿದುದರಿಂದ ಬಿದ್ದ ಪ್ರಯಾಣಿಕನ ಮರಣ

ತುಮಕೂರು ಜಿಲ್ಲೆಯ ... ನಿನ್ನೆ ಬುಧವಾರ ಹೋಗುತ್ತಿದ್ದ ಕೆ. ವಿ. ಮೋಟಾರ್ ಬಸ್ಸು ಕುಲುಕಿ, ಹಿಂಭಾಗದಲ್ಲಿ ಕುಳಿತಿದ್ದ ... ಎಂಬ ಯುವಕನು ಕೆಳಕ್ಕೆ ಬಿದ್ದು ಮೃತಪಟ್ಟನೆಂದು ವರದಿಯಾಗಿದೆ.

ವಿಧಾನ ಪರಿಷತ್ತಿನಲ್ಲೂ ಸಂಸ್ಥಾನ ಪುನರ್ವಿಂಗಡಣೆ ಮಸೂದೆ ಒಪ್ಪಿಗೆ

ನೆನ್ನೆ ವಿಧಾನ ಪರಿಷತ್ತು ಸಂಸ್ಥಾನ ಪುನರ್ವಿಂಗಡಣೆ ಮಸೂದೆಯನ್ನು ಅಂಗೀಕರಿಸಿತು. ... ವಿವಾದವನ್ನು ಪ್ರಾದೇಶಿಕ ಮಂಡಲಿಯು ... ಎಂದು ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ... ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

ಪ ಠ ಣ ಕ

ರಾಜಧಾನಿಯ ಸೀತಾವಿಲಾಸ ಅಗ್ರಹಾರದ ... ಶ್ರೀ ಪ್ರಸನ್ನ ರಾಮದೇವರ ಗುಡಿಯಲ್ಲಿ ಈ ... ಗಂಟೆಗೆ ಮಿ॥ ಎಸ್. ಕೃಷ್ಣಯ್ಯಂಗಾರವರು ಪ್ರಹ್ಲಾದ ಚರಿತ್ರೆ ಎಂಬ ಪಠಣ ಮಾಡುವರು.

ಪಶ್ಚಿಮ ಪಾಕಿಸ್ತಾನದ ಮಂತ್ರಿ ಮಂಡಲದ ವಿಸ್ತರಣೆ

ಪಶ್ಚಿಮ ಪಾಕಿಸ್ತಾನದ ಮುಖ್ಯ ಮಂತ್ರಿ ಡಾ॥ ಖಾನ್ ಸಾಹೇಬರ ಸಲಹೆಯ ಪ್ರಕಾರ ಮಹಮ್ಮದ್ ಹಸನ್, ರಾಜ ಘಜನ್‌ಫರ್ ಅಲಿ ಖಾನ್, ಸೈಯದ್ ... ಅಬ್ದುಲ್ ... ಮತ್ತು ... ಗವರ್ನರ್ ... ಹೊಸ ಮಂತ್ರಿಗಳಾಗಿ ನೇಮಿಸಿದ್ದಾರೆ. ಪಶ್ಚಿಮ ಪಾಕಿಸ್ತಾನದ ಮುಸ್ಲಿಂ ಲೀಗ್ ... ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ಮದ್ರಾಸಿನಲ್ಲಿ ಏಕ ಘಟ್ಟದ ಪಾನನಿಷೇಧ ತೆರಿಗೆ

ಮದ್ರಾಸಿನಲ್ಲಿ ಏಕ ಘಟ್ಟದ ... ತೆರಿಗೆಯನ್ನು ಜಾರಿಗೆ ತರುವ ವಿಷಯವು ... ಆಲೋಚನೆಯಲ್ಲಿರುವುದಾಗಿ ಅಲ್ಲಿನ ಮುಖ್ಯ ಮಂತ್ರಿ ಕಾಮರಾಜರು ತಿಳಿಸಿದ್ದಾರೆ.

ನಾಗಾ ದಂಗೆಕೋರರಿಂದ ನಿಷ್ಠಾವಂತರ ಶಿರಚ್ಛೇದನ

ಕೊಹಿಮಾ ನಗರದ ಪೂರ್ವದಲ್ಲಿ ನಾಗಾ ದಂಗೆಕೋರರು ಏಳು ಮಂದಿ ನಿಷ್ಠಾವಂತ ನಾಗಾ ಮುಖಂಡರನ್ನು ಅಪಹರಿಸಿ ಅವರ ಪೈಕಿ ನಾಲ್ವರನ್ನು ಶಿರಚ್ಛೇದನ ಮಾಡಿರುವರೆಂದು ವರದಿಯಾಗಿದೆ. ಆ ಪೈಕಿ ಒಬ್ಬನು ... ತಪ್ಪಿಸಿಕೊಂಡಿದ್ದಾನೆ.

ಬಳ್ಳಾರಿ ಬಗ್ಗೆ ಜನಮತಗಣನೆಗಾಗಿ ಆಂಧ್ರರ ಒತ್ತಾಯ

ಆಂಧ್ರ ಶಾಸನ ಸಭೆಯ ... ಜನ ಸದಸ್ಯರು ಪ್ರಧಾನಿ ನೆಹರೂರವರಿಗೆ ಮನವಿಯೊಂದನ್ನು ಕಳುಹಿಸಿ ಬಳ್ಳಾರಿಯ ಭವಿಷ್ಯವನ್ನು ಜನಮತಗಣನೆ ಮೂಲಕ ನಿರ್ಧರಿಸಬೇಕೆಂದು ಒತ್ತಾಯ ಮಾಡಿದ್ದಾರೆ. ಅಲ್ಲಿನ ಶಾಸನ ಸಭಾ ಉಪಚುನಾವಣೆಯಲ್ಲಿ ... ಮೈಸೂರು ವಿಧಾನ ಸಭೆಗೆ ಎಂ. ಗಂಗಪ್ಪನವರು ರಾಜೀನಾಮೆ ಕೊಟ್ಟಿರುವುದರಿಂದ, ಅವರ ಸ್ಥಾನಕ್ಕೆ ನಡೆಯುವ ಉಪಚುನಾವಣೆಯನ್ನು ಜನಮತಗಣನೆಯೆಂದು ಭಾವಿಸಬಹುದೆಂದು ಮನವಿದಾರರು ತಿಳಿಸಿರುತ್ತಾರೆ.

ಶ್ರಮದಾನ ಶಿಬಿರದ ಮುಕ್ತಾಯ ಸಮಾರಂಭ

ರಾಜಧಾನಿಯ ಜಲಪುರಿ ಬಳಿ ... ಶ್ರಮದಾನ ಶಿಬಿರದ ಮುಕ್ತಾಯ ಸಮಾರಂಭವು ನಾಳೆ ಸಂಜೆ ೭ ಗಂಟೆಗೆ ... ಕೈಗಾರಿಕಾ ಮಂತ್ರಿ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರುವುದು.

ಸಾಯಿಬಾಬಾ ಮಂದಿರದ ಲಾಟರಿ

ರಾಜಧಾನಿಯ ಸಾಯಿಬಾಬಾ ಮಂದಿರದ ... ಲಾಟರಿಯನ್ನು ನಾಳೆ ಬೆಳಗ್ಗೆ ೧೦॥ ಗಂಟೆಗೆ ಮಂದಿರದಲ್ಲಿ ಎತ್ತಲಾಗುವುದು.

ವಾಲ್ಟರ್ ಪಿ. ರೂಥರ್

ಅಮೆರಿಕದ ಕೈಗಾರಿಕಾ ಸಂಸ್ಥೆಗಳ ಕಾಂಗ್ರೆಸ್ ಮತ್ತು ಕಾರ್ಮಿಕ ಸಂಘಗಳ ಅಧ್ಯಕ್ಷರು. ಇವರು ಭಾರತಕ್ಕೆ ಆಗಮಿಸಿರುತ್ತಾರೆ. ಇವರು ಗೋವಾ ಬಗ್ಗೆ ಅಮೆರಿಕದ ವಿದೇಶಾಂಗ ನೀತಿಯನ್ನು ತೀವ್ರವಾಗಿ ಪ್ರತಿಭಟಿಸುತ್ತಿದ್ದಾರೆ.

ಸಿಂಹಳದ ಚುನಾವಣೆಯಲ್ಲಿ ಸರ್ಕಾರಿ ಪಕ್ಷಕ್ಕೆ ಭಾರಿ ಅಪಜಯ

ಸಿಂಹಳದ ಪಾರ್ಲಿಮೆಂಟಿಗೆ ನಡೆದ ಮಹಾ ಚುನಾವಣೆಯಲ್ಲಿ, ಅಧಿಕಾರ ನಡೆಸುತ್ತಿರುವ ಪ್ರಧಾನಿ ಕೊಟಲಾವಲರವರ ಪಕ್ಷಕ್ಕೆ ಭಾರಿ ಅಪಜಯವಾಗಿದೆ. ವಿರೋಧ ಪಂಗಡವಾದ ಭಂಡಾರನಾಯಕೆ ಪಕ್ಷಕ್ಕೆ ..., ಆಡಳಿತ ಪಕ್ಷಕ್ಕೆ ..., ನವ ಲಂಕಾ ಸಮ ಸಮಾಜ ಪಕ್ಷಕ್ಕೆ ..., ಕಮ್ಯೂನಿಸ್ಟ್ ಮತ್ತು ಸ್ವತಂತ್ರರಿಗೆ ಕೆಲವು ಸ್ಥಾನಗಳು ದೊರಕಿವೆ. ಭಂಡಾರನಾಯಕೆಯವರು ಹೊಸ ರಾಷ್ಟ್ರಗಳ ಕೂಟದ ರಾಜಕೀಯಕ್ಕೆ ಸಿಂಹಳವು ಸೇರಬಾರದೆಂದು ಹೇಳುತ್ತಾರೆ. ... ಜನ ಮಂತ್ರಿಗಳೂ ಸೋತಿದ್ದಾರೆ.

ಸಟ್ಟಾ ಜೂಜಿಗಾಗಿ ದಂಡ

ನಗರದ ನಜರ್‌ಬಾದಿನ ಬಜಾರ್ ರಸ್ತೆಯಲ್ಲಿ ನೆನ್ನೆ ಮಾದಯ್ಯನ ಮಗ ತಿಂಮಯ್ಯ ಎಂಬುವನು ಸಟ್ಟಾ ಜೂಜು ಚೀಟಿ ಬರೆಯುತ್ತಿದ್ದುದನ್ನು 'ಎ' ಡಿವಿಜನ್ ಇನ್ಸ್‌ಪೆಕ್ಟರರು ಪತ್ತೆ ಹಚ್ಚಿ ಮೊಕದ್ದಮೆ ಹೂಡಿದ್ದರು. ದ್ವಿತೀಯ ನಗರ ನ್ಯಾಯಾಧೀಶರು ನೆನ್ನೆ ಅಪರಾಧಿಗೆ ೧೦ ರೂ. ದಂಡ ವಿಧಿಸಿದರು.

ವಿದ್ಯುಚ್ಛಕ್ತಿ ತಂತಿ ಬಿದ್ದು ಒಬ್ಬನ ಮರಣ

ಬೆಂಗಳೂರಿನಲ್ಲಿ ನೆನ್ನೆ ಭಾರಿ ಗಾಳಿಮಳೆಯಾದ ಸಂದರ್ಭದಲ್ಲಿ ಒಬ್ಬನು ಮಡಿದು, ಮತ್ತೊಬ್ಬನು ಆಸ್ಪತ್ರೆಗೆ ಸೇರಿದ್ದಾನೆ. ಸಿಟಿ ಮಾರ್ಕೆಟ್ ಪ್ರದೇಶದಲ್ಲಿ ಗಾಳಿ ಬೀಸಿದುದರಿಂದ ವಿದ್ಯುಚ್ಛಕ್ತಿ ತಂತಿಗಳು ಮುರಿದಿದ್ದು, ಎಂಬಾತನ ತಲೆ ಮೇಲೆ ಬಿದ್ದು ಅವನು ಕ್ಷಣಮಾತ್ರದಲ್ಲಿ ಮೃತಪಟ್ಟನು. ಅದೇ ಸಂದರ್ಭದಲ್ಲಿ ಮತ್ತೊಬ್ಬನು ಅಲ್ಲಿಗೆ ಬಂದಾಗ, ತಂತಿ ಕಾಲಿನ ಮೇಲೆ ಹಾದು ಕೆಳಗೆ ಬಿದ್ದನೆಂದೂ ಅವನನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ಹೇಳಲಾಗಿದೆ.

ಮುಖ್ಯ ಮಂತ್ರಿಯವರ ಸಹೋದರರ ಜಮೀನಿಗಾಗಿ ಪರಿಹಾರ

ಜಿಲ್ಲಾ ಕೋರ್ಟಿನ ತೀರ್ಪು ಮೇಲೆ ಹೈಕೋರ್ಟಿಗೆ ಅಪೀಲು

(ಸ್ವಂತ ಫೋನ್) ಬೆಂಗಳೂರು ೬

ಸಂಸ್ಥಾನದ ಉಭಯ ಶಾಸನ ಸಭೆಗಳ ಅಧಿವೇಶನವು ಈ ದಿನ ಬೆಳಗ್ಗೆ ಸೇರಿ ... ಮುಖ್ಯ ಮಂತ್ರಿಯವರ ಸಹೋದರರಾದ ಶ್ರೀ ಪಿ. ನಂಜಪ್ಪನವರಿಗೆ ಮಾಗಡಿ ಜಮೀನಿನ ಪ್ರಕರಣದಲ್ಲಿ ಜಿಲ್ಲಾ ಕೋರ್ಟಿನವರು ಲಕ್ಷ ... ರೂ. ಪರಿಹಾರ ಕೊಡಬೇಕೆಂದು ತೀರ್ಪು ಕೊಟ್ಟಿರುವ ವಿಷಯವಾಗಿ ಉಭಯ ಸಭೆಗಳಲ್ಲೂ ಪ್ರಶ್ನೆಗಳ ಮೂಲಕ ... ಕಾನೂನು ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಉತ್ತರವಿತ್ತು ಹೈಕೋರ್ಟಿಗೆ ಅಪೀಲು ಹೋಗಿರುವರೆಂದು ತಿಳಿಸಿದರು.

ದ್ವಿತೀಯ ಪಂಚ ವಾರ್ಷಿಕ ಯೋಜನೆ ಕಾರ್ಯಗಳಿಗಾಗಿ ಮುಂಬೂರ ... ಕೋಟಿ ... ಲಕ್ಷ ರೂ.ಗಳು ಸಾಲದೆಂದೂ, ಅದನ್ನು ಜಾಸ್ತಿ ಮಾಡಬೇಕೆಂದೂ, ಸಂಸ್ಥಾನದಲ್ಲಿ ಪ್ರಮುಖ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದೂ ಮತ್ತು ಭದ್ರಾವತಿ ಕಬ್ಬಿಣದ ಕಾರ್ಖಾನೆಯನ್ನು ಅಭಿವೃದ್ಧಿಪಡಿಸಬೇಕೆಂದೂ ಕೋರುವ ನಿರ್ಣಯಗಳನ್ನು ... ಸಭೆಯಲ್ಲಿ ಅಂಗೀಕರಿಸಲಾಯಿತು.

ಗೃಹ ನಿರ್ಮಾಣ ಯೋಜನೆಯನ್ನು ಸಂಸ್ಥಾನದ ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಲು ಆಲೋಚಿಸಲಾಗುತ್ತಿದೆಯೆಂದು ಇಂದು ಶಾಸನ ಸಭೆಯಲ್ಲಿ ಸಚಿವ ಶ್ರೀ ಎಚ್. ಎಂ. ಚೆನ್ನಬಸಪ್ಪನವರು ತಿಳಿಸಿದರು.

ದಕ್ಷಿಣ ವಿಯಟ್ನಾಮು ಮಿಲಿಟರಿ ಕೂಟಕ್ಕೆ ಸೇರದು

ಜಿನೀವಾ ಒಪ್ಪಂದವಂತೆ, ಉತ್ತರ ಮತ್ತು ದಕ್ಷಿಣ ವಿಯಟ್ನಾಂಗಳ ... ಚುನಾವಣೆ ... ದಕ್ಷಿಣ ವಿಯಟ್ನಾಂ ಸರ್ಕಾರವು ನೆನ್ನೆ ಪ್ರತಿಜ್ಞೆಯನ್ನು ಸ್ವೀಕರಿಸಿತು. ... ಮಿಲಿಟರಿ ಕೂಟಗಳಿಗೆ ಸೇರುವುದಿಲ್ಲವೆಂದೂ, ಮಿಲಿಟರಿ ನೆಲೆಗಳನ್ನು ವಿದೇಶೀಯರಿಗೆ ಬಿಡುವುದಿಲ್ಲವೆಂದೂ ಅದು ಭಾಷೆ ಕೊಟ್ಟಿತು. ವಿಯಟ್ನಾಮಿನಿಂದ ಫ್ರೆಂಚ್ ಸೈನ್ಯವು ವಾಪಸಾಗುವ ಸಂಬಂಧದಲ್ಲಿ ಈ ಘೋಷಣೆಯನ್ನು ಮಾಡಲಾಯಿತು. ಜಿನೀವಾ ಒಪ್ಪಂದವನ್ನು ಅಂಗೀಕರಿಸದಿದ್ದರೂ ಅಂತರ ರಾಷ್ಟ್ರೀಯ ಶಾಂತಿ ಸಮಿತಿಯೊಡನೆ ಸಹಕರಿಸುವುದಾಗಿ ವಿಯಟ್ನಾಂ ಸರ್ಕಾರವು ತಿಳಿಸಿದೆ.

ಪೌರಸಭಾಧ್ಯಕ್ಷರಿಗೆ ಸರಸ್ವತಿಪುರದ ರೆಸಿಡೆಂಟ್ಸ್ ಸಂಘದ ಸನ್ಮಾನ

ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರ ಗೌರವಾರ್ಥವಾಗಿ ಸರಸ್ವತಿಪುರದ ರೆಸಿಡೆಂಟುದಾರರುಗಳ ಸಂಘದವರು ನಾಳೆ ಸಂಜೆ ೬॥ ಗಂಟೆಗೆ, ಡಾ॥ ವೈದ್ಯರಾದ ಶ್ರೀ ... ರಘುನಾಥರಾಯರ ಮನೆಯಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸಿದ್ದಾರೆ. ರೆಸಿಡೆಂಟುದಾರರು ಕುಂದುಕೊರತೆಗಳನ್ನು ಅಧ್ಯಕ್ಷರಿಗೆ ಅಂದು ನಿವೇದಿಸಿಕೊಳ್ಳಲಾಗುವುದು.

ವಿದ್ಯುಚ್ಛಕ್ತಿ ತೆರಿಗೆ ಕಟ್ಟುವವರಿಗೆ ಸೌಲಭ್ಯ ಕಲ್ಪಿಸಬೇಕು

ವಿದ್ಯುಚ್ಛಕ್ತಿ ಇಲಾಖೆಯವರು ಜನರಿಂದ ... ಪಡೆಯಬೇಕಾದ ಹಣವನ್ನು ವಸೂಲುಮಾಡುವುದರಲ್ಲಿ ವಹಿಸಿರುವ ಶ್ರದ್ಧೆಯನ್ನು ಹಣ ಕಟ್ಟುವವರಿಗೆ ಸೌಲಭ್ಯಗಳನ್ನು ಕಲ್ಪಿಸುವುದರಲ್ಲಿಯೂ ತೋರುವುದು ಅಗತ್ಯವಾಗಿದೆ. ಪ್ರತಿ ತಿಂಗಳ ಮೊಬಲಗನ್ನು ಗೊತ್ತಾದ ದಿನದೊಳಗೆ ಪಾವತಿ ಮಾಡದಿದ್ದರೆ ವಿದ್ಯುಚ್ಛಕ್ತಿಯನ್ನು ನಿಲ್ಲಿಸುವುದಲ್ಲದೆ ಒಂದು ರೂಪಾಯಿ ದಂಡವನ್ನೂ ಸಹಾ ವಸೂಲು ಮಾಡಲಾಗುತ್ತಿದೆಯಷ್ಟೆ? ಈ ಕಾರಣದಿಂದ ಸಾರ್ವಜನಿಕರು ಗೊತ್ತಾದ ಕಾಲದೊಳಗೆ ಹಣವನ್ನು ಸಲ್ಲಿಸಲು ಆಸಕ್ತರಾಗಿರುವುದು ಸಹಜವೇ ಆಗಿರುತ್ತದೆ.

ಆದರೆ ಹೀಗೆ ಬರುವ ಹಣವನ್ನು ತೆಗೆದುಕೊಂಡು ರಶೀತಿ ಕೊಟ್ಟು ... ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸುವುದರಲ್ಲಿ ಇಲಾಖೆಯವರು ಸ್ವಲ್ಪವೂ ಮುತುವರ್ಜಿ ವಹಿಸಿಲ್ಲವೆಂದೇ ಹೇಳಬೇಕು. ತಿಂಗಳ ಆದಿಭಾಗದಲ್ಲಂತೂ ವಿದ್ಯುಚ್ಛಕ್ತಿ ಕಛೇರಿಯಲ್ಲಿ ಹಣವನ್ನು ಪಾವತಿ ಮಾಡಲು ... [illegible]

—ತಿರುಗಿದಾಖಲ ಚಿಕ್ಕ

ಇನ್ಸ್ಪೆಕ್ಟರ್ ಮತ್ತಿತರರಿಗೂ ಈಜಿಪ್ಟಿನವರಿಗೂ ಘರ್ಷಣೆ

[illegible]

ಕೋರ್ಟಿನ ಆವರಣದಲ್ಲಿ ಬೀದಿ ಜಗಳ

[illegible]

ಮಲೇರಿಯಾ ನಿವಾರಣೆ ಬಗ್ಗೆ ಡಿ. ಡಿ. ಟಿ. ಪ್ರಯೋಗ

(ಸರ್ಕಾರದ ವಾರ್ತಾ ಶಾಖೆಯಿಂದ)

ಭಾರತದಲ್ಲಿ ಹರಡಿರುವ ರೋಗಗಳ ಪೈಕಿ ಮಲೇರಿಯಾ ಜ್ವರವು ಅತ್ಯಂತ ಭಯಂಕರವಾದುದು. ಇದರಿಂದ ೧೦ ಕೋಟಿ ಜನರು ನರಳುತ್ತಿರುವರು. ವರ್ಷಕ್ಕೆ ಸುಮಾರು ೧೦ ಲಕ್ಷ ಜನರು ಇದಕ್ಕೆ ಬಲಿಯಾಗುತ್ತಿದ್ದಾರೆ.

ಮಲೇರಿಯಕ್ಕೆ ಕಾರಣ ಅನಾಫಲೀಸ್ ಎಂಬ ಜಾತಿಯ ಸೊಳ್ಳೆ ... [illegible]

ಮೈಸೂರು ಪೇಟೆ ಧಾರಣೆ

	ಈ ವಾರದ			ಈ ವರೆಗೆ		
[illegible]	[illegible]	೦	[illegible]	[illegible]	೦	೦
[illegible]	[illegible]	೩	೦			
[illegible]	[illegible]	೦	೦	[illegible]	೨	೦
[illegible]	[illegible]	೩	೦	[illegible]	೪	೦
[illegible]	[illegible]	[illegible]	[illegible]	[illegible]	[illegible]	೦
[illegible]	[illegible]	೩	೦	[illegible]	[illegible]	೦
[illegible]	[illegible]	[illegible]	[illegible]			
[illegible]	[illegible]	[illegible]		[illegible]	[illegible]	೦
[illegible]	[illegible]	[illegible]	೦	[illegible]	೨	೦
[illegible]	[illegible]	[illegible]	೦	[illegible]	[illegible]	೦
[illegible]	[illegible]	೩		[illegible]	[illegible]	೦
[illegible]	[illegible]	[illegible]	[illegible]	[illegible]	೦	[illegible]

ಶ್ರೀ ದೇವಾಲಯಕ್ಕೆ ಹರಿಜನ ಪ್ರವೇಶದ ವಿರುದ್ಧ ಅರ್ಜಿ

[illegible]

"ಭೂ ದಾನ" ಇಂಗ್ಲಿಷ್ ವಾರ ಪತ್ರಿಕೆ

[illegible]

ಸಂಗೀತ ಕಛೇರಿ

[illegible]

ಮದ್ರಾಸು ಶಾಸನಸಭಾ ಕಾಂಗ್ರೆಸ್ ಪಕ್ಷಕ್ಕೆ ರಾಜಾಜಿ ರಾಜೀನಾಮೆ

[illegible]

ಬೆಂಗಳೂರು ರೇಡಿಯೊ ... ಕಾರ್ಯಕ್ರಮ

[illegible]

ಬಿನ್ನಿ ಬಟ್ಟೆ

ಮೂರ್ತಿ ಮರ್ಚೆಂಟ್ಸ್

ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು

ರಣಜಿತ್ ★

★ ಪೆನ್ ★

Edited, Printed and Published by A. Nagarajan at Sadhvi Press, D. Subbiah Road, Mysore

S. R. T. INSTITUTE,

(Estd 1934) 575 D. Subbiah Road, Mysore

(Affiliated to Royal Telegraph & Wireless Institute, Madras. Recognised by Government)

TECHNICAL SECTION — (I) Expert training in Telegraphy Telugu ... S. M's Course & Hindi

(II) Wireless Telegraphy

TUTORIAL SECTION — S. S. L. C. Coaching Classes All Subjects taught & success guaranteed

For details and application form please write to the Secretary with 4 As. postage stamps

ಪ್ರಭು ದೇವಾ ಥಿಯೇಟರ್
(ಸದ್ಯಾ ಟಾಕೀಸ್)

7-4-56ನೇ ಶನಿವಾರದಿಂದ — ಅನೋಖ ಚಿತ್ರ

ಶ್ರೀ ರೇಣುಕಾ ಮಹಾತ್ಮೆ
(ಎಲ್ಲಮ್ಮನ ಕಥಾ)

ಪಾತ್ರ: ಆರ್. ನಾಗೇಂದ್ರರಾವ್, ಸಂಧ್ಯಾ, ನರಸಿಂಹರಾಜು, ಲಕ್ಷ್ಮಿ, ... ಜಯಲಕ್ಷ್ಮಿ, ಕಮಲ, ಬೇಬಿ ಉಮಾ

SREE GANESHA TALKIES

GALA RELEASE TO-DAY FOR 4 DAYS ONLY

THE LAST FRONTIER

(In Technicolor—Cinemascope.)

Featuring—Victor Mature, Guy Madison & Robert Preston

FROM 11-4-56 FOR 3 DAYS ONLY

NEW YEAR SPECIAL ATTRACTION

JUNGLE MOON MEN

Starring :- Johnny Weissmuller

(To enhance the entertainment of this picture, it will be screened in Wide Angle)

ಸಂಪುಟ : ೧೨] SADHVI : SUNDAY 5-4-1996 ಮೈಸೂರು ಭಾನುವಾರ : ೮-೪-೧೯೭೬ [ಸಂಚಿಕೆ : ೩೩೭

- ಸಚಿವ ಪದವಿಗೆ ಚನ್ನಬಸಪ್ಪನವರ ರಾಜೀನಾಮೆ -

ಸಚಿವ ಪದವಿಗೆ ಚನ್ನಬಸಪ್ಪನವರ ರಾಜೀನಾಮೆ

ಬೆಂಗಳೂರು ೮

ಕೈಗಾರಿಕಾ ಮಂತ್ರಿ ಶ್ರೀ ಕೆ. ಎಂ. ಚನ್ನಬಸಪ್ಪನವರು ತಮ್ಮ ಪದವಿಗೆ ರಾಜೀನಾಮೆ ಸಲ್ಲಿಸುವರೆಂದು ತಿಳಿದುಬಂದಿದೆ. [illegible] ... ಮುಖ್ಯಮಂತ್ರಿ ... ಅದನ್ನು ... [illegible]

ಬೆಂಗಳೂರಿನಲ್ಲಿ ಟ್ಯಾಕ್ಸಿ ಮತ್ತು ಆಟೋ ರಿಕ್ಷಾಗಳ ಮುಷ್ಕರ

[illegible] ... ನಿನ್ನೆ ಬೆಂಗಳೂರಿನಲ್ಲಿ ಟ್ಯಾಕ್ಸಿಗಳು, ಆಟೋ ರಿಕ್ಷಾಗಳು ... [illegible]

ಭೂಪಾಲಿನಲ್ಲಿ ಗುಂಡಿನ ಪ್ರಕರಣ

[illegible] ಬಗ್ಗೆ [illegible]

ಭೋಪಾಲ್ ನಗರದಲ್ಲಿ ... [illegible]

[illegible] ಕಾರ್ಮಿಕರಿಗೆ [illegible]

[illegible]

ತಿರುಪತಿ ಛತ್ರದಲ್ಲಿ ಸಂತರ್ಪಣೆ ಬಗ್ಗೆ ಭೇದ ತಪ್ಪುವುದು

ವಿಧಾನ ಸಭೆಯಲ್ಲಿ ನ್ಯಾಯಾಂಗ ಸಚಿವರ ಹೇಳಿಕೆ

ಬೆಂಗಳೂರು ೬

ನೆನ್ನೆ ವಿಧಾನ ಸಭೆಯಲ್ಲಿ ನ್ಯಾಯಾಂಗ ಮಂತ್ರಿ ಶ್ರೀ ಎ. ಪಿ. ರಾಮಚಂದ್ರರಾಯರು ... [illegible]

[illegible] ಗಾಗಿ ದೆಹಲಿಗೆ ಭೇಟಿ

[illegible] ... ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ... [illegible]

[illegible] ವಿದ್ಯುಚ್ಛಕ್ತಿ ದರದ ಏರಿಕೆ ವಿರುದ್ಧ ಪ್ರದರ್ಶನ

[illegible] ಮಂತ್ರಿಯ [illegible]

[illegible]

ಹೈಕೋರ್ಟಿನಲ್ಲಿ ಚನ್ನಬಸಪ್ಪನವರ ರಿಟ್ ಅರ್ಜಿಯ ಸ್ವೀಕಾರ

[illegible]

ಬೆಂಗಳೂರು ೮

ಹೈಕೋರ್ಟಿನಲ್ಲಿ ಕೈಗಾರಿಕಾ ಮಂತ್ರಿ ಶ್ರೀ ಚನ್ನಬಸಪ್ಪನವರ ... ರಿಟ್ ಅರ್ಜಿಯನ್ನು ... [illegible]

ಗೋವಾಕ್ಕೆ ಹೋಗುವ ವಿಮಾನಗಳಿಗೆ ಭಾರತದ ಪ್ರತಿಬಂಧಕ

[illegible]

ಬೆಂಗಳೂರು [illegible] ಕಾರ್ಯಕ್ರಮ

[illegible]

ರಸ್ತೆಯ ಕ್ರೀಡಾ ನಿಪುಣರ ಪ್ರದರ್ಶನ

ಮೈಸೂರು ೮

ನಗರದ ಭಾರತ-ರಷ್ಯ ಸಾಂಸ್ಕೃತಿಕ ... [illegible] ... ಶ್ರೀ ಬಿ. ಕೃಷ್ಣಮೂರ್ತಿಯವರು ... [illegible]

ನಗರಕ್ಕೆ ಅಮೆರಿಕಾ ಕಾರ್ಮಿಕ ನಾಯಕರ ಭೇಟಿ

[illegible]

[illegible] ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ

ಮೈಸೂರು ೮

[illegible] ... ಶ್ರೀ ಎ. ಕೃಷ್ಣಮೂರ್ತಿರಾಯರು ಬಹುಮಾನಗಳನ್ನು ... [illegible]

ವಾರ ಭವಿಷ್ಯ

[illegible]

ಮೇಷ — [illegible] ಸ್ಥಿತಿ [illegible] ಯಲ್ಲಿ ಪ್ರಶಂಸೆ

ವೃಷಭ — [illegible] ವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು [illegible]

ಮಿಥುನ — ಆರೋಗ್ಯ ಉತ್ತಮ [illegible] ಪರಿಸ್ಥಿತಿ ತೃಪ್ತಿಕರ [illegible] ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ [illegible] ಪ್ರಶಂಸೆ

ಕರ್ಕ — ಆರೋಗ್ಯ ತೃಪ್ತಿಕರ [illegible]

ಸಿಂಹ — ಆರೋಗ್ಯ [illegible]

ಕನ್ಯ — [illegible]

ತುಲಾ — ಆರೋಗ್ಯ [illegible]

ವೃಶ್ಚಿಕ — ಆರೋಗ್ಯದ [illegible]

ಧನು — [illegible]

ಮಕರ — ಆರೋಗ್ಯದ [illegible]

ಕುಂಭ — ಆರೋಗ್ಯ [illegible]

ಮೀನ — ಆರೋಗ್ಯ ಉತ್ತಮ [illegible]

ಹೈದರಾಬಾದಿನಲ್ಲಿ [illegible]

[illegible]

ನಾಗಾಲೋಂದ ಇಬ್ಬರು [illegible] ಪರಿಹಾರ

[illegible]

ಬಸ್ಸು, ಎಕ್ಸ್‌ಪ್ರೆಸ್ ಮುಂತಾದುವುಗಳ ಸಂಚಾರದ ಪುನರ್ನಿರ್ಮಾಣ

[illegible]

ಸಪ್ಲಿಮೆಂಟರಿ ಪರೀಕ್ಷೆ ವಿದ್ಯಾರ್ಥಿಗಳಿಗೆ ಆದ ತೊಂದರೆ

[illegible]

೧೦ ಸಾವಿರ ಟಂಬರ ಚೇರಿಯಾ ನಿರ್ಮಾಣ

[illegible]

ಮೈಸೂರು ಪೇಟೆ ಧಾರಣೆ

[illegible]	[illegible]	[illegible]

[illegible] ಪ್ರಕಟಣೆ

[illegible]

ಆಯುರ್ವೇದ ಕಾಲೇಜಿನ ಹೆಸರಿನಲ್ಲಿ [illegible]

[illegible] ಆಯುರ್ವೇದ [illegible] ಹೆಸರನ್ನು [illegible] ಗೃಹಮಂತ್ರಿ [illegible] ಚನ್ನಯ್ಯ [illegible] ವಿಧಾನ ಪರಿಷತ್ತಿನ ವಿಶೇಷ [illegible] ಯಲ್ಲಿ ತಿಳಿಸಿದರು [illegible] ಸಂಬಂಧಪಟ್ಟಂತೆ ಪ್ರತ್ಯೇಕ [illegible] ನೇಮಕಗೊಳ್ಳುವುದೆಂದು [illegible]

ಮಹಾರಾಜರೊಡನೆ ಮುಖ್ಯಮಂತ್ರಿಯವರ ಭೇಟಿ

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಈ ದಿನ [illegible] ಶ್ರೀಮನ್ಮಹಾರಾಜರನ್ನು ಭೇಟಿಮಾಡಿದರೆಂದು ತಿಳಿದುಬಂದಿದೆ.

[illegible]

ರಣಜಿತ್ ಟಾಕೀಸ್

8 4 56ರಿಂದ 4 ದಿನಗಳು ಮಾತ್ರ

ಎ ವಿ ಎಂ ರವರ ಮನೋಜ್ಞ ತಮಿಳು ಚಿತ್ರ

★ ಪೆಣ್ ★

[illegible] ವೈಜಯಂತಿಮಾಲಾ [illegible]

ಶಾಂತಾ [illegible] ರೀಜನಲ್ ರಿಜಿಸ್ಟರ್ಡ್

ವಿಜಯಲಕ್ಷ್ಮಿ [illegible]

ಶಾಸ್ತ್ರೀಯ ಸಂಗೀತ — ನೃತ್ಯ ಸ್ಪರ್ಧೆಗೆ

ಅರ್ಜಿಗಳನ್ನು ಕಳುಹಿಸಲು ಕಡೆಯ ದಿನ — ಏಪ್ರಿಲ್ 15

[illegible] 10 11 [illegible] 6 ರಿಂದ 8

ಲಕ್ಷ್ಮಿ ಚಿತ್ರ ★ 12 4 56 ರಿಂದ [illegible] ಪ್ರಾರಂಭ

ಪ್ರತಿ ದಿನ [illegible]

[illegible] ತಮಿಳು ಚಿತ್ರ

★ ಮದುರೈ ವೀರನ್ ★

ತಾರೆಗಳು — [illegible] ಬಿ ಎಸ್ ಬಾಲಯ್ಯ, ಎ. ಎಸ್ ಕೃಷ್ಣನ್, ಟಿ ಎ ಮಧುರಂ, ಪಿ ಭಾನುಮತಿ, ಲಲಿತ, ಪದ್ಮಿನಿ, [illegible] ಮುಂತಾದವರು

[illegible]

ಈಗ ನಡೆಯುತ್ತಿದೆ ★ ಪಾತಾಳ ಭೈರವಿ ★ (ತಮಿಳು)

Edited Printed and Published by A. R. Nagarajan at Sadhvi Press D. Subbiah Road Mysore

ಟೆಲಿಫೋನ್ ನಂ 792

ಕೂರ್ಗ್ ಮ್ಯಾರ್ಷ್
ಸ್ಥಾಪನೆ 1932 ಫೋನ್ 811
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ಸ್ಯಾಸ್ಯಾಜಿ ರೋಡ್,
ಮೈಸೂರು
[illegible] ಕವರ್ ಬಣ್ಣದಿಂದ ತಯಾರಾದ ಪೋಷಾಕುಗಳು ಬಳೆಗಳು ಮತ್ತು ನವೀನ ರೀತಿಯ ಕಲ್ಲಿನ ಒಡವೆಗಳು ಸಹ ದೊರೆಯುತ್ತವೆ

ಸಾಧ್ವಿ

ಇಂದಿನ ಪತ್ರಿಕೆ 3 ಆಣೆ

ಲಗ್ನದ ಜವಳಿ
ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರ್ಣಿ, ಬೆಂಗಳೂರ್
ರೇಷ್ಮೆ ಮತ್ತು ನೂಲಿನ ಸೀರೆಗಳು
[illegible]
ಕೆ.ವಿ ಭೋಜಯ್ಯ
ಬಿ. ಎ. & ಬ್ರದರ್ಸ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಂಪುಟ ೧೯] SADHVI : MONDAY 9 4-1956 ಮೈಸೂರು ಸೋಮವಾರ : ೯ ೪ ೧೯೫೬ [ಸಂಚಿಕೆ : ೨೬೦

ಚನ್ನಬಸಪ್ಪನವರ ರಾಜೀನಾಮೆ ಬಗ್ಗೆ ೨ ದಿನದಲ್ಲಿ ನಿರ್ಧಾರ

ವಿಶ್ವ ಆರೋಗ್ಯ ದಿನಾಚರಣೆ

ಮೈಸೂರು ೯

ನಗರದ ಪೌರಸಭೆಯ ಆಶ್ರಯದಲ್ಲಿ ಮೊನ್ನೆ ೭ ರ ವಿಶ್ವ ಆರೋಗ್ಯ ದಿನಾಚರಣೆಯನ್ನು ನೆರವೇರಿಸಲಾಯಿತು. ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು. [illegible] ರ ಆರೋಗ್ಯಾಧಿಕಾರಿಗಳು ಸ್ವಾಗತ ಭಾಷಣ ಮಾಡಿದರು. ಪೌರಸಭಾ ಸದಸ್ಯರಾದ [illegible] ಮತ್ತು ಸರ್ಕಾರಿ ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಜಿ. ಎ. ಶಿವ[illegible]ಯ್ಯನವರು ಭಾಷಣ ಮಾಡಿ ದಿನಾಚರಣೆಯ ಮಹತ್ವವನ್ನು ವಿವರಿಸಿದರು. ಆರೋಗ್ಯ [illegible] ಮಾಡುವ ಬಗ್ಗೆ ಜನರಿಗೆ ಹಲವು ಸೂಕ್ತ ಸಲಹೆಯನ್ನಿತ್ತರು. ಅಧ್ಯಕ್ಷರ ಭಾಷಣ ನಂತರ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಸಾಯಿಬಾಬಾ ಮಂದಿರದ ಲಾಟರಿ ಫಲಿತಾಂಶ

ಸಾಯಿಬಾಬಾ ಮಂದಿರದ ಲಾಟರಿಯ [illegible]ವನ್ನು ನೆನ್ನೆ ಎತ್ತಲಾಯಿತು. ಬೆಂಗಳೂರಿನ [illegible] (೧೦೬೫) ರವರು, ಮೈಸೂರಿನ [illegible] (೧೦೦), ಮತ್ತು ಕೊಡಗಿನ [illegible] (೩೫) ರವರುಗಳಿಗೆ ಕ್ರಮವಾಗಿ ೨೦೦, ೫೦ ಮತ್ತು [illegible] ಬಹುಮಾನಗಳು ಬಂದಿವೆ.

ಲೋಕ ಸಭೆಗೆ ಮಾಲಂಕರರ ಪತ್ನಿಯವರ ಉಮೇದುವಾರಿಕೆ

ಅಹಮದಾಬಾದು ಕ್ಷೇತ್ರದಿಂದ ಲೋಕ ಸಭೆಗೆ ಮಾಲಂಕರರ ಸ್ಥಾನದಲ್ಲಿ ನಡೆಯುವ ಚುನಾವಣೆಗೆ ಅವರ ಪತ್ನಿ [illegible] ಉಮೇದುವಾರಿಕೆ ಪತ್ರವನ್ನು ಸಲ್ಲಿಸಿರುವರು. ಅವರಿಗೆ ಒಂದೇ ನಾಮಪತ್ರವು ಬಂದಿದೆ.

ಭೋಪಾಲ್ ಘರ್ಷಣೆಗೆ ಪಾಕಿಸ್ತಾನಿಗಳು ಕಾರಣ

೧೦೫ ಜನರ ಬಂಧನ

ಭೋಪಾಲಿನಲ್ಲಿ ಮೊನ್ನೆ ನಡೆದ ಕೋಮುವಾರು ಘರ್ಷಣೆ ಸಂಬಂಧದಲ್ಲಿ ಪೋಲೀಸರು ೧೦೫ ಜನರನ್ನು ಬಂಧಿಸಿರುತ್ತಾರೆ. ದಸ್ತಗಿರಿಯಾದವರಲ್ಲಿ ಐದು ಜನರು ಪಾಕಿಸ್ತಾನದವರೆಂದೂ ಪಾಕಿಸ್ತಾನಿ ರಹದಾರಿ ಪಡೆದು ಅವರು ಭಾರತಕ್ಕೆ ಆಗಮಿಸಿದ್ದರೆಂದೂ ಗಲಭೆಗೆ ಅವರೆ ಪ್ರಚೋದನೆ ಮಾಡಿದವರೆಂದೂ ಹೇಳಲಾಗಿದೆ. ಮೊನ್ನೆಯ ಘಟನೆಗಳಲ್ಲಿ ೫೦ ಜನರಿಗೆ ಗಾಯಗಳಾಗಿವೆ. ಪರಿಸ್ಥಿತಿಯು ಈಗ ಹತೋಟಿಗೆ ಬಂದಿದೆ.

ಸೀಟೊ ಸೇರಲು ಕಾಂಬೋಡಿಯಕ್ಕೆ ಅಮೆರಿಕದ ಒತ್ತಾಯ

ಆಗ್ನೇಯ ಏಷ್ಯಾ ರಕ್ಷಣಾ ಕೂಟಕ್ಕೆ ಕಾಂಬೋಡಿಯವು ಸೇರುವಂತೆ ಅಮೆರಿಕವು ಸಯಾಂ ಮತ್ತು ದಕ್ಷಿಣ ವಿಯಟ್ನಾಂ ಮೂಲಕ ಒತ್ತಾಯ ತರುತ್ತಿರುವುದಾಗಿ ಉತ್ತರ ವಿಯಟ್ನಾಂ ನ್ಯೂಸ್ ಸಂಸ್ಥೆಯು ತಿಳಿಸಿದೆ. [illegible] ಸಿಹನೌಕರವರ ರಾಜೀನಾಮೆಗೆ ಈ [illegible] ಕಾರಣವೆಂದು ಉತ್ತರ ವಿಯಟ್ನಾಂ ರೇಡಿಯೊವು ಹೇಳಿದೆ.

ಪೌರಸಭೆ ಮೇಲೆ ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆ ಅಧಿಕಾರ

ಪುನಃ ಜಾರಿಗೆ ತರಲು ಪೌರಸಭಾ ಮಾರ್ಕೆಟ್ ವರ್ತಕರ ಒತ್ತಾಯ

ಮೈಸೂರು ೯

ನಗರದ [illegible] ಮಾರ್ಕೆಟ್ ವರ್ತಕರ ಸಭೆಯು ನೆನ್ನೆ ಶ್ರೀ [illegible] ಯವರ ಅಧ್ಯಕ್ಷತೆಯಲ್ಲಿ ನಡೆಯಿತು. [illegible] ಸಭೆಗಳ [illegible] ಜಿಲ್ಲಾಧಿಕಾರಿ [illegible] ಪೌರಸಭೆಗಳ ಮೇಲೆ [illegible] ಅಧಿಕಾರ [illegible] ಯಿತು [illegible] ಯುವನ್ನು [illegible]

ಭಾರತದ ಮೇಲೆ ಪಾಕಿಸ್ತಾನದ ಆಕ್ರಮಣ ಇಲ್ಲ

ಪಾಕಿಸ್ತಾನದ ಅಧಿಕಾರಿಯ ಹೇಳಿಕೆ

[illegible] ರ ಮೇಲೆ [illegible] ಸದೀಕ [illegible] ಬಳಿ ಇಂದ ಪಾಕಿಸ್ತಾನವು ಆಗ್ನೇಯ [illegible] ರಕ್ಷಣಾ [illegible] ಮತ್ತು ಬಾಗ್ದಾದ್ ಒಪ್ಪಂದಕ್ಕೆ ಸೇರಿದ್ದರೆಂದು ಪಾಕಿಸ್ತಾನದ ವಿದೇಶ [illegible] ಅಧಿಕಾರಿಯೊಬ್ಬರು [illegible] ಈ ಎರಡು ರಕ್ಷಣಾ [illegible] ರಕ್ತಿಯುತವಾಗಿದ್ದರೂ, ಅವಕ್ಕೆ ಸೇರಿದ ರಾಷ್ಟ್ರಗಳಿಗೆ ಭದ್ರತೆಯನ್ನುಂಟು ಮಾಡಿರುವುದೆಂದು ಅವರು ಹೇಳಿದರು. ಭಾರತಕ್ಕೆ ಭಯಪಡಬೇಕಾದ [illegible] ಪಾಕಿಸ್ತಾನವು [illegible] ದು [illegible] ವೆಂದೂ ಅವರು ಹೇಳಿದರು.

ಮದ್ರಾಸಿನಲ್ಲಿ ಹಠಾತ್ತನೆ ಭಾಷಣಕಾರರ ಮರಣ

ಮದ್ರಾಸಿನಲ್ಲಿ ಮೊನ್ನೆ ಉಪಾಧ್ಯಾಯರುಗಳ ಸಮ್ಮೇಳನದಲ್ಲಿ ಭಾಷಣ ಮಾಡುತ್ತಿದ್ದ ಡಾ. ಪರಮೇಶ್ವರನ್ ಎಂಬ ಅಲ್ಲಿನ ವಿಧಾನ ಪರಿಷತ್ತಿನ ಸದಸ್ಯರು ಇದ್ದಕ್ಕಿದ್ದಂತೆಯೇ ಕುಸಿದುಬಿದ್ದು ಮೃತಪಟ್ಟರು. ಅವರೂ ಒಬ್ಬ ಉಪಾಧ್ಯಾಯರು. ನೆನ್ನೆ ಒಂದು ಕ್ರಿಶ್ಚಿಯನ್ ಸಭೆಯಲ್ಲಿ ಮಾತನಾಡುತ್ತಿದ್ದ ಹೃದಯ ರೋಗ ಪ್ರವೀಣರಾದ ಡಾ. ಎ. ಎಸ್. ಮಾಸಿಲಾಮಣಿಯವರೂ ಸಹ ಅದೇ ರೀತಿ ಮೃತಪಟ್ಟರು. ಇಬ್ಬರ ಮರಣಕ್ಕೂ ಹೃದಯ ವೈಫಲ್ಯವೇ ಕಾರಣ.

ರಷ್ಯಾದಿಂದ ಬ್ರಿಟನ್ನಿಗೆ ಭಾರಿ ಪ್ರಮಾಣದ ಚಿನ್ನದ ಸಾಲವೇ?

ರಷ್ಯಾ ಮತ್ತು ಬ್ರಿಟನ್ನಿಗಳ ನಡುವೆ ವಾಣಿಜ್ಯ ಒಪ್ಪಂದವೊಂದರ ಅಂಗವಾಗಿ ರಷ್ಯವು ಬ್ರಿಟನ್ನಿಗೆ ಭಾರಿ ಪ್ರಮಾಣದ ಚಿನ್ನವನ್ನು ಸಾಲವಾಗಿ ಕೊಡುವುದಾಗಿ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕ್ರುಶ್ಚೇವರು ಬ್ರಿಟನ್ನಿಗೆ ಸಧ್ಯದಲ್ಲೇ ಭೇಟಿ ಕೊಡುವಾಗ ಸೂಚಿಸಲಿರುವರೆಂದು ವರದಿಯಾಗಿದೆ.

ಕರ್ನಾಟಕದಲ್ಲಿ ನೆಹರೂರವರ ಪ್ರವಾಸದ ಆರಂಭ

ಪ್ರತ್ಯೇಕತಾ ಭಾವನೆಯ ಖಂಡನೆ

ಕರ್ನಾಟಕದಲ್ಲಿ ಎರಡು ದಿನಗಳ ಪ್ರವಾಸ ಕೈಗೊಂಡಿರುವ ಪ್ರಧಾನಿ ನೆಹರೂರವರು ನೆನ್ನೆ ಗೋಕಾಕದಲ್ಲಿ ಹತ್ತು ಸಹಸ್ರ ಜನರ ಎದುರಿಗೆ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತ [illegible] ಭಾರತ [illegible] ಪ್ರತ್ಯೇಕತಾ [illegible] ಭಾರತ [illegible] [illegible] ರಕ್ಷಣೆ [illegible] ಭಾಷಾ [illegible] ಭಾರತದ ಪರಮ ರಕ್ಷಣೆಯೆಂದೂ ಅದನ್ನು ತೆಗೆದು ಹಾಕಿ ಪ್ರಗತಿ ಸಾಧ್ಯವಿಲ್ಲವೆಂದೂ ತಿಳಿಸಿದರು. [illegible]

ಬಿಜಾಪುರದಲ್ಲಿ ೫೦ ಸಾವಿರ ಜನರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಭಾಷಾವಾರು ಚಳುವಳಿಗಳನ್ನು ಖಂಡಿಸಿ, ಅವುಗಳಿಂದ [illegible] ರಾಷ್ಟ್ರದ ಅಸ್ತಿತ್ವಕ್ಕೆ ಧಕ್ಕೆ ತಗಲುವುದೆಂದು ತಿಳಿಸಿದರು.

ಪತ್ರಿ ವ್ಯವಸಾಯಗಾರರ ಸಮ್ಮೇಳನ

ನಂಜನಗೂಡು ೯

ಮೊನ್ನೆ ಇಲ್ಲಿನ ಕನಕದಾಸ ವಿದ್ಯಾರ್ಥಿ ನಿಲಯದ ಆವರಣದಲ್ಲಿ ಜಿಲ್ಲಾ ಪತ್ರಿ ವ್ಯವಸಾಯಗಾರರ ಸಮ್ಮೇಳನವು ವ್ಯವಸಾಯ [illegible] ಮಂತ್ರಿ ಡಾ|| ಆರ್. ನಾಗನಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅದರ ಆರಂಭೋತ್ಸವವನ್ನು ನೆರವೇರಿಸಿದರು.

ಪ್ರಾರ್ಥನೆಯ ನಂತರ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಹೆಜ್ಜಿಗೆ ಲಿಂಗಣ್ಣನವರು ಸ್ವಾಗತ ಬಯಸಿದರು. ಸಂಗೀತವಾದ ನಂತರ ಶ್ರೀ ಚನ್ನಯ್ಯ ಮತ್ತು ಡಾ|| ನಾಗನಗೌಡರಿಗೆ ಎನ್ನವರ್ತ್ಯ [illegible] ನ್ನು ಅರ್ಪಿಸಲಾಯಿತು. [illegible] ಕಾಣಿಕೆಯನ್ನೊಪ್ಪಿಸಲಾಯಿತು. ಶ್ರೀ ಚನ್ನಯ್ಯನವರು ಭಾಷಣ ಮಾಡಿ ಪತ್ರಿ [illegible] ರಂಗೆ ಸೂಕ್ತ ಹಿತೋಪದೇಶಗಳನ್ನು ಹೇಳಿದರು.

ಪತ್ರಿ ವ್ಯವಸಾಯಗಾರರ ಸಹಕಾರ ಸಂಘವನ್ನು ಸ್ಥಾಪಿಸಬೇಕೆಂದು ನಿರ್ಣಯ ಮಾಡಲಾಯಿತು. ರಿಜಿಸ್ಟ್ರಾರ್ ಶ್ರೀ [illegible] [illegible] ಅಧ್ಯಕ್ಷರ ಭಾಷಣಾನಂತರ ವಂದನಾರ್ಪಣೆ [illegible] ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಸಚಿವ ಹೆಚ್. ಎಂ. ಚನ್ನಬಸಪ್ಪನವರ ರಾಜೀನಾಮೆ

೨-೩ ದಿನಗಳಲ್ಲಿ ನಿರ್ಧಾರ ಮಾಡುವುದಾಗಿ ಮುಖ್ಯ ಮಂತ್ರಿಯವರ ಹೇಳಿಕೆ

ಸ್ವಂ ವ ಫೋ] ಬೆಂಗಳೂರು ೯

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ದಿನ ಹಲವು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಕೈಗಾರಿಕಾ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು [illegible] ಸಲ್ಲಿಸಿರುವರೆಂದೂ ಅವರ ರಾಜೀನಾಮೆಯನ್ನು ಒಪ್ಪುವ ವಿಷಯವನ್ನು [illegible] ಅಥವಾ ಬೇರೆ ವಿಧಿ [illegible] ಆಧಾರದ ಮೇಲೆ ಪರಿಶೀಲಿಸಬೇಕಾಗಿರುವುದೆಂದೂ ೨-೩ ದಿನಗಳಲ್ಲಿ ಈ ಬಗ್ಗೆ ನಿರ್ಧಾರಕ್ಕೆ ಬರುವುದಾಗಿಯೂ ತಿಳಿಸಿದರು.

ಚಿನ್ನದ ಗಣಿಯ ರಾಷ್ಟ್ರೀಕರಣ

ಕೋಲಾರದ ಚಿನ್ನದ ಗಣಿ ರಾಷ್ಟ್ರೀಕರಣದ ವಿಷಯವನ್ನು ಕುರಿತು ತಮ್ಮ ಪತ್ರಿಕೆಗೆ [illegible] [illegible] ಕೇವಲ ಅಲ್ಲಿ ಪ್ರಶ್ನೆ [illegible] ಕಂಪೆನಿಯ ಮಂತ್ರಿಯವರೊಡನೆ ಚರ್ಚೆ ನಡೆಯುವುದಾಗಿ ಅವರು ಹೇಳಿದರು. ಚಿನ್ನದ ಗಣಿ ಕಂಪೆನಿಯವರು [illegible] ಕರಾರಿನ ತತ್ವವನ್ನು ಒಪ್ಪಿರುವರೆಂದೂ ಆದರೆ ಪರಿಹಾರ ದ್ರವ್ಯವನ್ನು [illegible] ಕೊಡಬೇಕೆಂದು ಕಂಪೆನಿಯವರು [illegible] ನವರು ಮಾರ್ಕೆಟ್ ದರದಂತೆ ಕೊಡುವುದಾಗಿ ಸರ್ಕಾರದವರು ಅಭಿಪ್ರಾಯಪಡುತ್ತಿರುವುದಾಗಿ [illegible] ಅವರು ನುಡಿದರು.

ಬೊಂಬಾಯಿ ಘಟನೆ ಬಗ್ಗೆ ತನಿಖೆಗೆ ನಿರಾಕರಣೆ

ಮುಂಬಾಯಿ ವಿಧಾನ ಸಭೆಯಲ್ಲಿ ಮೊನ್ನೆ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯಿಯವರು ಮಾತನಾಡಿ ರಾಜ್ಯಗಳ ಪುನರ್ವಿಂಗಡಣಾ ವರದಿಯ ಸಂಬಂಧದಲ್ಲಿ ಇತ್ತೀಚೆಗೆ ಬೊಂಬಾಯಿ ನಗರದಲ್ಲಿ ಆದ ಘಟನೆಗಳ ಬಗ್ಗೆ ತನಿಖೆ ನಡೆಸುವುದಿಲ್ಲವೆಂದು ತಿಳಿಸುತ್ತಾರೆ. ಘಟನೆಗಳ ಕಾಲದಲ್ಲಿ ಜನರು [illegible] ವರ್ತನೆಗಳನ್ನು [illegible] ವಿಕೃತಿ [illegible] ಪ್ರಸಂಗ ನಡೆದಿರುವುದಾಗಿಯೂ [illegible] ಹೇಳುತ್ತಾರೆ.

ಗ್ವಾಲಿಯರ್ ಬಳಿ ಸಹಗಮನದ ಪ್ರಕರಣ

ಗ್ವಾಲಿಯರ್ ಬಳಿ ಶಿವಪುರ [illegible] ಯಲ್ಲಿ ಸೂ[illegible] ಎಂಬ ತನ್ನ [illegible] ಮೃತಪಟ್ಟನೆಂದೂ ಆತನ ಪತ್ನಿ ಕಮಲಾ ಎಂಬಾಕೆಯು ಗಂಡನ ಚಿತೆಯನ್ನೇರಿ ಸಹಗಮನ ಮಾಡಿದಳೆಂದೂ ವರದಿಯಾಗಿದೆ. ಸುದ್ದಿಯು ತಿಳಿದಕೂಡಲೇ ಸಬ್ ಡಿವಿಷನ್ [illegible] ಧಿಕಾರಿಗಳು ಸಿಬ್ಬಂದಿಯೊಡನೆ ಸ್ಥಳಕ್ಕೆ ಹೋದರು. ಅಷ್ಟು ಹೊತ್ತಿಗೆ ಆಕೆಯು ಮೃತಪಟ್ಟಿದ್ದಳು. ಸಹಗಮನಕ್ಕೆ ಸಹಾಯಕರಾದವರ [illegible] ಅಧಿಕಾರಿಗಳು ಕ್ರಮ ಜರುಗಿಸಲಿರುವರೆಂದು [illegible] [illegible] ಪ್ರಕರಣ [illegible] ನಡೆದಿತು.

ನೆಹ್ರೂರವರ ವಿದೇಶಾಂಗ ನೀತಿಗೆ ಸಿಂಹಳದ ಮುಖಂಡರ ಬೆಂಬಲ

ಪ್ರಧಾನಿ ನೆಹರೂರವರ ವಿದೇಶಾಂಗ ನೀತಿಯನ್ನು ತಾವು ಸಾಮಾನ್ಯವಾಗಿ ಒಪ್ಪುವುದಾಗಿ ಸಿಂಹಳದ ಸಂಯುಕ್ತ ರಂಗದ ಮುಖಂಡ ಭಂಡಾರನಾಯಕೆಯವರು ತಿಳಿಸಿರುತ್ತಾರೆ. ತಾವು ಪ್ರಧಾನಿಯ ಅಧಿಕಾರಕ್ಕೆ ಬಂದಲ್ಲಿ ತಮಗೂ ಪ್ರಧಾನಿ ನೆಹರೂರವರಿಗೂ ಉತ್ತಮ ಸಂಬಂಧ ಮತ್ತು ನಿಕಟ ಸಹಕಾರವಿರುವುದೆಂದೂ ಅವರು ಆಶಿಸಿರುತ್ತಾರೆ. ಸಿಂಹಳವು ರಿಪಬ್ಲಿಕ್ ಆಗಬೇಕೆಂಬುದೇ ತಮ್ಮ ಪಕ್ಷದ ಅಭಿಲಾಷೆಯೆಂದೂ ಅವರು ಹೇಳಿರುವರು. ಸಿಂಹಳದ ಭಾರತೀಯರ ಪ್ರಶ್ನೆಯು ಸುಗಮವಾಗಿ ಪರಿಹಾರವಾಗುವುದೆಂದು ಅವರು ಭಾವಿಸಿರುವರು.

ರಾಜಾಸ್ಥಾನದಲ್ಲಿ ೨೮೬೦ ಜನ ಜಮೀನ್ದಾರರ ಬಂಧನ

ರಾಜಾಸ್ಥಾನದಲ್ಲಿ ಜಮೀನುದಾರಿ ಪದ್ಧತಿಯನ್ನು ರದ್ದುಗೊಳಿಸುವ ಬಗ್ಗೆ ಪ್ರತಿಭಟನೆ ಮಾಡುತ್ತಿರುವ ಅಲ್ಲಿನ ಅನೇಕ ಭೂಸ್ವಾಮಿಗಳು (ಜಮೀನುದಾರರು) ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರು. ಅವರ್ಲ್ಲಿ ೨೮೬೦ ಜನರನ್ನು ಬಂಧಿಸಲಾಗಿದೆ. ಇಬ್ಬರನ್ನು ಸ್ಥಾನಬದ್ಧತಾ ಶಾಸನದ ಪ್ರಕಾರ ದಸ್ತಗಿರಿ ಮಾಡಲಾಗಿದೆ.

ಮೋಟಾರು ರೇಸಿನಲ್ಲಿ ಜಾರ್ಡಾನ್ ದೊರೆಯ ಪಾತ್ರ

ಜಾರ್ಡಾನಿನ ರಾಜಧಾನಿ ಅಮ್ಮಾನ್ ನಗರದಲ್ಲಿ ಮೊನ್ನೆ ನಡೆದ ಮೋಟಾರು ರೇಸಿನಲ್ಲಿ ಅಲ್ಲಿನ ದೊರೆ ಹುಸೇನರು ಭಾಗವಹಿಸಿ ೩೬೦೦ ಗಜ ದೂರವನ್ನು ೧ ನಿಮಿಷ ೫೭ ಸೆಕೆಂಡುಗಳಲ್ಲಿ ಓಡಿಸಿ ಗೆದ್ದರು.

ಜಿಲ್ಲಾ ಮುದ್ರಣ ಸಹಕಾರ ಸಂಘ

ಮೈಸೂರು ಜಿಲ್ಲಾ ಮುದ್ರಣಕಾರರ ಸಹಕಾರ ಸಂಘದ ಸಭೆಯು ನೆನ್ನೆ ನಗರದಲ್ಲಿ ಶ್ರೀ ಟಿ ಆರ್ ಬಿ ನಾಯ್ಡುರವರ ಅಧ್ಯಕ್ಷತೆಯಲ್ಲಿ ನಡೆಯಿತು. ಪಾಲಕ ವರ್ಗ ಮತ್ತು ಕಾರ್ಯಕಾರಿ ಸಮಿತಿ ಚುನಾವಣೆಯಾಗಿ, ಶ್ರೀ ಎಂ ಎನ್ ತಿಮ್ಮಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಕೆ ಎಂ ಆರ್ ವಿ ಶಾಸ್ತ್ರಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಟಿ ಆರ್ ಬಿ ನಾಯ್ಡುರವರು ಖಜಾಂಚಿಯಾಗಿಯೂ ಮತ್ತು ಹಿ ಕಾ ಸುಬ್ಬರಾಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಎನ್ ನಾರಾಯಣರಾಜು, ಎಂ ಎಸ್ ಚಂದ್ರಶೇಖರ ಜೋಯಿಸ್, ಕೆ ನರಸಯ್ಯ, ಟಿ ನಾರಾಯಣ ಮತ್ತು ಜಿ ಎಲ್ ದಾಸಪ್ಪನವರನ್ನು ಕಾರ್ಯ ಸಮಿತಿ ಸದಸ್ಯರಾಗಿಯೂ ಚುನಾಯಿಸಲಾಯಿತು. ಸಂಘದ ಹಣಕಾಸಿನ ಲೆಕ್ಕವನ್ನು ನಗರದಲ್ಲಿರುವ ಇಂಡಿಯನ್ ಬ್ಯಾಂಕಿನ ಶಾಖೆಯಲ್ಲಿ ತೆರೆಯಬೇಕೆಂದು ಗೊತ್ತುಪಡಿಸಲಾಯಿತು. ಸಂಘವು ರಿಜಿಸ್ಟರಾದುದಕ್ಕೆ ಸಂಬಂಧಪಟ್ಟ ನಿಯಮಾವಳಿಯನ್ನು ಓದಲಾಯಿತು.

ವಿವಾಹ ಮಹೋತ್ಸವ

ಗರ್ಗೇಶ್ವರಿಯ ಜಮೀನುದಾರರೂ, ಪಂಚಾಯಿತಿ ಅಧ್ಯಕ್ಷರೂ ಆದ ಜನಾಬ್ ಬಿ ಅಬ್ದುಲ್ ಘನಿಯವರು ತಮ್ಮ ಕುಮಾರ ಜ॥ ಬಿ ಇಲಿಯಾಸ್ ಅಹಮದ್‌ರವರಿಗೆ ಅದೇ ಊರಿನ ಬಟ್ಟೆ ವರ್ತಕರೂ, ಜಮೀನುದಾರರೂ ಆದ ಜ॥ ವಿ ಮಹಮದ್ ಖಲೀಲ್ ಸಾಹೇಬರ ಮಗಳನ್ನು ತಂದುಕೊಂಡು ನೆನ್ನೆ ಗರ್ಗೇಶ್ವರಿಯಲ್ಲಿ ವಿವಾಹವನ್ನು ನೆರವೇರಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಬೊಂಬಾಯಿ ಶಾಸನ ಸಭೆಯಲ್ಲಿ ರಾಜ್ಯಗಳ ಮರುಹೊಂದಿಕೆ ಅಂಗೀಕೃತ

ಬೊಂಬಾಯಿ ಶಾಸನ ಸಭೆಯು ನೆನ್ನೆ ಸಂಸ್ಥಾನ ಪುನರ್ವಿಂಗಡಣಾ ಮಸೂದೆಯನ್ನು ೧೪೫ ಓಟುಗಳಿಂದ ಅಂಗೀಕರಿಸಿತು. ಮಂತ್ರಿಮಂಡಲದಲ್ಲಿರುವ ಮಹಾರಾಷ್ಟ್ರ ಸಚಿವರುಗಳೂ ಸೇರಿ ೬೦ ಮಂದಿ ಮಹಾರಾಷ್ಟ್ರ ಶಾಸನ ಸಭಾಸದಸ್ಯರು ಗೈರುಹಾಜರಾಗಿದ್ದರು. ವಿರೋಧವಾಗಿ ಓಟು ಮಾಡಿದವರಲ್ಲಿ ೨೩ ಮಂದಿ ಕಾಂಗ್ರೆಸ್ ಪಕ್ಷದವರು. ಸಭೆಯ ಒಟ್ಟು ೩೦೫ ಜನ ಸದಸ್ಯರ ಪೈಕಿ ೩೨ ಮಂದಿ ಪುನರ್ವಿಂಗಡಣೆ ಸಂಬಂಧವಾಗಿ ರಾಜೀನಾಮೆ ಕೊಟ್ಟಿರುವರು.

ಸತ್ಯಾಗ್ರಹ ಮುಂದುವರಿಸಲು ಮಹಾರಾಷ್ಟ್ರ ಸಮಿತಿ ನಿರ್ಧಾರ

ಬೊಂಬಾಯಿ ನಗರವು ರಾಜಧಾನಿಯಾಗುಳ್ಳ ಸಂಯುಕ್ತ ಮಹಾರಾಷ್ಟ್ರ ಪ್ರಾಂತವನ್ನು ಸ್ಥಾಪಿಸುವವರೆಗೂ ಸತ್ಯಾಗ್ರಹವನ್ನು ನಡೆಸಬೇಕೆಂದು ಸಂಯುಕ್ತ ಮಹಾರಾಷ್ಟ್ರ ಸಮಿತಿಯು ನಿರ್ಧರಿಸಿದೆ. ಅಲ್ಲಿನ ಶಾಸನಸಭಾಧಿವೇಶನವು ಮುಗಿದ ನಂತರ ಬೊಂಬಾಯಿ ನಗರದ ನಾನಾ ಭಾಗಗಳಲ್ಲಿ ಸತ್ಯಾಗ್ರಹವು ಮುಂದುವರಿಯುವುದೆಂದು ಹೇಳಲಾಗಿದೆ.

ಸೇಲಮ್ಮಿನಲ್ಲಿ ಅಲ್ಯೂಮಿನಂ ಕಾರ್ಖಾನೆ

ಸೇಲಮ್ಮಿನಲ್ಲಿ ವರ್ಷಕ್ಕೆ ೧೦ ಸಾವಿರ ಟನ್ ಅಲ್ಯೂಮಿನಂ ಉತ್ಪಾದಿಸುವ ಕಾರ್ಖಾನೆಯನ್ನು ಸ್ಥಾಪಿಸುವ ಆಲೋಚನೆಯಿರುವುದಾಗಿ ಕೇಂದ್ರ ಮಂತ್ರಿ ಕೆ ಸಿ ರೆಡ್ಡಿಯವರು ತಿಳಿಸಿರುತ್ತಾರೆ. ದಕ್ಷಿಣ ಭಾರತದಲ್ಲಿ ದೊಡ್ಡ ಉಕ್ಕು ಮತ್ತು ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸುವ ಸಾಧ್ಯತೆಯಿರುವುದೆಂದೂ ಅವರು ಹೇಳಿರುವರು.

ದೀನರಿಗೂ ಭೇಟಿ ಕೊಡಲು ನೆಹರೂ ಸಿದ್ಧ

ದೀನರಲ್ಲಿ ಅತಿ ದೀನನಾದವನೂ ಸಹ ತಮ್ಮೊಡನೆ ಭೇಟಿ ಮಾಡಲು ಅವಕಾಶವಿದೆಯೆಂದೂ ಯಾರಿಗೂ ತಾವು ಭೇಟಿಯನ್ನು ನಿರಾಕರಿಸಿಲ್ಲವೆಂದೂ ಆದರೆ ಕಾರ್ಯಗೌರವದ ನಿಮಿತ್ತ ಹಲವು ಉನ್ನತಾಧಿಕಾರಿಗಳಿಗೆ ಭೇಟಿ ನಿರಾಕರಿಸಿರುವುದಾಗಿಯೂ ನೆಹರೂರವರು ತಿಳಿಸಿರುತ್ತಾರೆ. ಸಾಮಾನ್ಯ ಜನರೊಡನೆ ವ್ಯವಹರಿಸುವಾಗ ಅಧಿಕಾರಿಗಳು ವಿನಯ ಮತ್ತು ಗೌರವದಿಂದ ನಡೆದುಕೊಳ್ಳಬೇಕೆಂದು ಅವರು ಹೇಳಿರುವರು.

ಸ್ಕೌಟ್ ಜಾಂಬೂರಿ ಬಗ್ಗೆ ಉಪಾಧ್ಯಾಯರ ಸಭೆ

ನಗರದ ನಾನಾ ವಿದ್ಯಾ ಸಂಸ್ಥೆಗಳ ಮುಖ್ಯೋಪಾಧ್ಯಾಯ ಮುಖ್ಯೋಪಾಧ್ಯಾಯಿನಿಯರು ಮತ್ತು ಗೈಡು ಸಂಸ್ಥೆಯ ಅಧಿಕಾರಿಗಳು, ಸ್ಕೌಟು ಅಧಿಕಾರಿಗಳು ಕಳೆದ ಮಂಗಳವಾರ ಸಭೆ ಸೇರಿ ತುಮಕೂರಿನಲ್ಲಿ ಬರುವ ತಿಂಗಳು ಸೇರಲಿರುವ ಜಾಂಬೂರಿಗೆ ಸಂಬಂಧಪಟ್ಟ ವಿಷಯವನ್ನು ಚರ್ಚಿಸಿದರು. ಜಾಂಬೂರಿಯಲ್ಲಿ ಜಿಲ್ಲೆಯಿಂದ ೪೦೦ ಜನರು ಭಾಗವಹಿಸುವರೆಂದು ವ್ಯಕ್ತವಾಯಿತು. ೧೬ ವರ್ಷಗಳಿಂದಲೂ ಜಾಂಬೂರಿಯು ನಡೆದಿರಲಿಲ್ಲವೆಂದೂ, ಸಂಸ್ಥಾನಾದ್ಯಂತ ಒಟ್ಟು ೫,೦೦೦ ಮಂದಿ ಭಾಗವಹಿಸುವರೆಂದೂ ಸ್ಕೌಟ್ ಸ್ಪರ್ಧೆ ಮತ್ತು ಇತರ ಚಟುವಟಿಕೆಗಳನ್ನು ನಡೆಸಲಾಗುವುದೆಂದೂ ಅಸಿಸ್ಟೆಂಟ್ ಸ್ಟೇಟ್ ಕಮೀಷನರ್ ಶ್ರೀ ಎಂ ರಾಮಸ್ವಾಮಿ ಮತ್ತು ಜಿಲ್ಲಾ ಕಮೀಷನರ್ ಶ್ರೀ ಬಿ ಟಿ ಶ್ರೀನಿವಾಸಯ್ಯಂಗಾರ್ಯರು ತಿಳಿಸಿದರು. ಸಾಮೂಹಿಕ ಪ್ರದರ್ಶನ, ಸ್ಕೌಟು ಸಮ್ಮೇಳನ, ಪ್ರದರ್ಶನ ಇತ್ಯಾದಿಗಳು ಜಾಂಬೂರಿ ಅಂಗವಾಗಿ ನಡೆಯಲಿವೆ. ಜಾಂಬೂರಿಯಲ್ಲಿ ಪ್ರತಿಯೊಂದು ಸ್ಕೌಟು ಅಥವಾ ಗರ್ಲ್ ಗೈಡು ದಳವೂ ತನಗೆ ವಹಿಸತಕ್ಕ ಕೆಲಸವನ್ನು ಮುತುವರ್ಜಿಯಿಂದ ನಿರ್ವಹಿಸಿ, ಭಾಗವಹಿಸಬೇಕೆಂದು ಆಶಿಸಲಾಯಿತು. ಜನವರಿ ೧೫ರಲ್ಲಿ ಕುಕ್ಕರಹಳ್ಳಿ ಕೆರೆ ಪ್ರದೇಶದಲ್ಲಿ ವನಮಹೋತ್ಸವ ಮತ್ತು ಶ್ರಮದಾನ ಶಿಬಿರವನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು.

ಸ್ಪೇನ್ ಅಧೀನದ ಮೊರಾಕೊ ವಿಗೂ ಸ್ವಾತಂತ್ರ್ಯ

ಸ್ಪೇನಿನ ರಕ್ಷಣಾ ರಾಜ್ಯವಾಗಿರುವ ಮೊರಾಕೋವಿಗೂ ಸ್ವಾತಂತ್ರ್ಯವನ್ನು ಕೊಟ್ಟು ೪೪ ವರ್ಷಗಳಿಂದ ಇರುವ ಪ್ರಭುತ್ವವನ್ನು ಮುಕ್ತಾಯ ಮಾಡುವುದಕ್ಕೆ ಸಾಧಕವಾಗುವ ತಹ ಘೋಷಣೆಗೆ ಮೊನ್ನೆ ಸ್ಪೇನ್ ಮತ್ತು ಮೊರಾಕೊ ಮುಖಂಡರು ರುಜು ಮಾಡಿದರು. ಮೊರಾಕೊ ಸುಲ್ತಾನರ ಮುಂದೆ ಸ್ಪೇನಿನ ವಿದೇಶಾಂಗ ಮಂತ್ರಿ ಮಾರ್ಟಿನ್ ಆರ್ಟಾಜೊ ಮತ್ತು ಮೊರಾಕೊ ಮುಖ್ಯಮಂತ್ರಿ ಸಿ ಬೆಕ್ಕಾಯವರು ಘೋಷಣೆಗೆ ರುಜು ಮಾಡಿದರು. ಇದರಿಂದ ಮೊರಾಕೊವು ಸ್ವತಂತ್ರ ರಾಜತಂತ್ರ ವ್ಯವಹಾರಗಳನ್ನೂ, ಸ್ವಂತ ಸೈನ್ಯಗಳನ್ನು ಹೊಂದಲು ಸ್ಪೇನು ಒಪ್ಪಿದಂತಾಗಿದೆ.

ಆಂಧ್ರಕ್ಕೆ ಬಳ್ಳಾರಿ ಸೇರಿಸುವಂತೆ ಆಂಧ್ರ ಶಾಸನ ಸಭೆ ಕರೆ

ಆಂಧ್ರ ಶಾಸನ ಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣೆ ಮಸೂದೆಯನ್ನು ಎರಡು ತಿದ್ದುಪಡಿಗಳೊಡನೆ ಅಂಗೀಕರಿಸಲಾಯಿತು. ಮೈಸೂರಿನ ಬಳ್ಳಾರಿ ಮತ್ತು ಒರಿಸ್ಸಾದ ಪರ್ಲಾಕಿಮಿಡಿ ಪ್ರದೇಶಗಳನ್ನು ಆಂಧ್ರಕ್ಕೆ ಸೇರಿಸಬೇಕೆಂದು ತಿದ್ದುಪಡಿಗಳು ಬಂದು ಅವು ಅಂಗೀಕೃತವಾದುವು.

ಮಧ್ಯ ಪ್ರೂರ್ವಕ್ಕೆ ಹ್ಯಾಮರ್‌ಷೀಲ್ಡರ ಪ್ರಯಾಣ

ಮಧ್ಯ ಪೂರ್ವದಲ್ಲಿ ಶಾಂತಿ ಪ್ರವಾಸಕ್ಕಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಷೀಲ್ಡರು ಪ್ರಯಾಣ ಬೆಳೆಸಿರುತ್ತಾರೆ. [illegible] ಮಧ್ಯ ಪೂರ್ವದಲ್ಲಿರುವ ಘರ್ಷಣ ಪರಿಸ್ಥಿತಿಯು ಉತ್ತಮವಾಗಿರುವುದೆಂದು ಅವರು ತಿಳಿಸಿರುತ್ತಾರೆ.

ಮದರಾಸಿನಲ್ಲಿ ಇಂಟರ್ ಪರೀಕ್ಷೆ ರದ್ದು

ಮದರಾಸಿನಲ್ಲಿ ಬರುವ ವರ್ಷದಿಂದ ಇಂಟರ್ ಮೀಡಿಯೇಟ್ ಪರೀಕ್ಷೆಯನ್ನು ರದ್ದುಮಾಡಲು ನಿರ್ಧರಿಸಲಾಗಿರುವುದೆಂದು ತಿಳಿದುಬಂದಿದೆ.

ವಿಕ್ಟರಿ ಕ್ರಿಕೆಟ್ ಕ್ಲಬ್ಬಿಗೆ ಜಯ

ನೆನ್ನೆ ಓವಲ್ಸಿನಲ್ಲಿ ನಡೆದ ಕ್ರಿಕೆಟ್ ಪಂದ್ಯದಲ್ಲಿ ವಿಕ್ಟರಿ ಕ್ಲಬ್ಬಿನವರು ಸ್ಥಳೀಯ ಮಾಡರ್ನ್ ಕ್ರಿಕೆಟ್ ಟೀಮನ್ನು ೭ ವಿಕೆಟ್ಟುಗಳಿಂದ ಸೋಲಿಸಿದರು. ಸತ್ಯನಾರಾಯಣ್ ಮತ್ತು ನರಸಿಂಹದೇವರ ಆಟವು ಉತ್ತಮವಾಗಿತ್ತು.

ಧರ್ಮಸ್ಥಳದ ಹೆಗ್ಗಡೆಯವರಿಗೆ ಶೃಂಗೇರಿ ಗುರುಗಳಿಂದ ಉಡುಗೊರೆ

ದಕ್ಷಿಣ ದೇಶದ ಪ್ರವಾಸ ಕೈಗೊಂಡಿರುವ ಶೃಂಗೇರಿಯ ಜಗದ್ಗುರುಗಳವರು ಧರ್ಮಸ್ಥಳಕ್ಕೆ ಕಳೆದ ತಿಂಗಳು ೨೭ನೇ ತಾರೀಕು ಭೇಟಿಯಿತ್ತಾಗ ಅಲ್ಲಿನ ಮಂಜುನಾಥಸ್ವಾಮಿ ದೇವಾಲಯದ ಧರ್ಮದರ್ಶಿಗಳಾದ ಶ್ರೀ ರತ್ನವರ್ಮ ರಾಜ ಹೆಗ್ಗಡೆಯವರು ನಾಗರಿಕರ ಪರವಾಗಿ ಜಗದ್ಗುರುಗಳಿಗೆ ಸಂಸ್ಕೃತ ಮತ್ತು ಕನ್ನಡದಲ್ಲಿ ವಿಜ್ಞಾಪನ ಪತ್ರವನ್ನು ಬೆಳ್ಳಿಯ ಕರಂಡದಲ್ಲಿಟ್ಟು ಅರ್ಪಿಸಿದರು. ಜಗದ್ಗುರುಗಳು ಶ್ರೀ ಹೆಗ್ಗಡೆಯವರಿಗೆ ಜರತಾರಿ ಶಾಲನ್ನು ಉಡುಗೊರೆಯಾಗಿ ಕೊಟ್ಟರು. ಈ ಹಿಂದೆ ಜಗದ್ಗುರುಗಳು ಮೈಸೂರಿನ ರಾಜಪ್ರಮುಖರು ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರರವರಿಗೆ ಇದೇ ರೀತಿ ಉಡುಗೊರೆಯನ್ನು ಕೊಟ್ಟಿದ್ದರು.

ಪ್ರಖ್ಯಾತಿ ಹೊಂದಿರುವ

ಕನ್ನಾನೂರ್ ಬನೀನುಗಳನ್ನು

ದಯವಿಟ್ಟು ಉಪಯೋಗಿಸಿರಿ

ದಿ ಟಿನೋಲಿ ಹೊಸ್ಯರಿ ಫ್ಯಾಕ್ಟರಿ,

ಕನ್ನಾನೂರು

ಸುಮಾರು 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಬನೀನುಗಳ ಮೇಲೆ ಸೀಲಿ ಬದ್ದದ ಲೇಬಲ್‌ಗಳನ್ನು ಕಾಣಬಹುದು. ಗಮನಿಸಬೇಕಾಗಿ ವಿನಂತಿ

Edited, Printed and Published by A R Nagrajan at Sadhvi Press D Subbiah Road Mysore

ಬಾಗ್ದಾದ್ ರಾಷ್ಟ್ರಗಳಿಗೆ ಅಮೆರಿಕದ ಸಹಾಯ

ಬಾಗ್ದಾದ್ ಒಪ್ಪಂದ ರಾಷ್ಟ್ರಗಳಿಗೆ ಆರ್ಥಿಕ ಮತ್ತು ಸಾಂಕೇತಿಕ ಸಹಾಯ ನೀಡಲು ಅಮೆರಿಕವು ಆಲೋಚಿಸಿ ನಿರ್ಧರಿಸಿದೆ. ಈ ವಿಷಯವನ್ನು ಆ ರಾಷ್ಟ್ರಗಳಿಗೆ ತಿಳಿಸಲಿರುವುದಾಗಿ ಗೊತ್ತಾಗಿದೆ. ಟೆಹರಾನಿನಲ್ಲಿ ಇದೇ ೧೬ನೇ ತಾರೀಕು ಆರಂಭವಾಗುವ ಬಾಗ್ದಾದ್ ಒಪ್ಪಂದ ರಾಷ್ಟ್ರಗಳ ಸಭೆಯಲ್ಲಿ ಈ ವಿಷಯವನ್ನು ಅಮೆರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು [illegible] ಸಲಿರುವರು. [illegible] ಭಾಗಗಳಲ್ಲಿರುವ [illegible] ಯೋಜನೆಗಳಿಗೆ ಈ ಸಹಾಯವು ಅನ್ವಯಿಸುವುದೆಂದು ಗೊತ್ತಾಗಿದೆ.

ರಷ್ಯದ ಪ್ರಧಾನ ನೌಕಾಧಿಕಾರಿಯ ಉಚ್ಚಾಟನೆ

ರಷ್ಯದ ಪ್ರಧಾನ ನೌಕಾಧಿಕಾರಿ ನಿಕೊಲಾಯ್ ಜಿ ಕುಜ್ನೆಟ್ಸಾವ್‌ರನ್ನು ವಜಾ ಮಾಡಲಾಗಿದೆ. ಅವರ ಸ್ಥಾನಕ್ಕೆ ಅವರ ಕೈಕೆಳಗಿನ ಅಧಿಕಾರಿ ಅಡ್ಮಿರಲ್ ಎಸ್ ಜಿ ಗೋರ್ಷ್‌ಕೋವ್‌ರು ಬಂದಿರುವರು. ೫೭ನೇ ವಯಸ್ಸಿನಲ್ಲೇ [illegible] ಟ್ಸಾವ್‌ರವರು ರಷ್ಯದ ಪ್ರಧಾನ ನೌಕಾಧಿಕಾರಿಯಾಗಿದ್ದರು. ಸ್ಟಾಲಿನ್ನರು ಸತ್ತಮೇಲೆ [illegible] ಪ್ರಧಾನವು ಕಡಿಮೆಯಾಯಿತು.

ಚೀಣಕ್ಕೆ ರಷ್ಯದಿಂದ ೨೫೦ ಕೋಟಿ ರೂಬಲ್ ಸಹಾಯ

ರಷ್ಯಾ ಮತ್ತು ಚೀಣಗಳ ನೆನ್ನೆ ಆದ ಒಪ್ಪಂದದ ಪ್ರಕಾರ ರಷ್ಯವು ಚೀಣಕ್ಕೆ ೨೫೦ ಕೋಟಿ ರೂಬಲ್ (೬೨ ೭ ಕೋಟಿ ಪೌಂಡು) ಸಹಾಯವನ್ನು ಕೊಡಲಿರುವುದಾಗಿ ವರದಿಯಾಗಿದೆ. ಚೀಣದಲ್ಲಿ ಹೊಸದಾಗಿ ಏರ್ಪಡಿಸುವ ೫೫ ಕೈಗಾರಿಕೋದ್ಯಮಗಳಿಗೆ ರಷ್ಯವು ಯಂತ್ರ ಸಾಮಗ್ರಿ, ಎಂಜಿನಿಯರುಗಳು ಮತ್ತು ಪ್ರವೀಣರನ್ನು ಒದಗಿಸುವುದು. ನೆನ್ನೆ ಈ ಒಪ್ಪಂದಕ್ಕೆ ರಷ್ಯದ ಉಪಪ್ರಧಾನಿ ಅನಸ್ತಾಸ್ ಮಿಕೋಯನ್ ಮತ್ತು ಚೀಣದ ಉಪಪ್ರಧಾನಿ ಲಿ ಫು ಚುನ್‌ರವರು ರುಜು ಮಾಡಿದರು.

ತಾಮ್ರದ ತಂತಿ ಕಳ್ಳತನ ಮತ್ತು ಸಾಗಾಣಿಕೆಗೆ ೨ ವರ್ಷ ಸಜಾ

ತಾಮ್ರದ ತಂತಿಯನ್ನು ಕತ್ತರಿಸಿ ಕಳ್ಳತನದಲ್ಲಿ ಸಾಗಿಸುತ್ತಿದ್ದ ಸಾಬ್ಜಾನ್, ಸಾಬ್ ಜಾನ್ ಮತ್ತು ಇಸ್ಮೈಲ್ ಎಂಬುವರ ಮೇಲೆ ಮೈಸೂರು ರೈಲ್ವೆ ಪೊಲೀಸರು ಹಾಕಿದ್ದ ಕೇಸಿನಲ್ಲಿ ಪ್ರಾಸಿಕ್ಯೂಟರ ಸಹಾಯದೊಡನೆ ಶ್ರೀರಂಗಪಟ್ಟಣದ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಆಪಾದಿತರ ಪೈಕಿ ಮೊದಲನೆಯವನಿಗೆ ೨ ವಿಷಯಗಳಲ್ಲೂ ೨ ವರ್ಷ ಕಠಿಣ ಸಜಾ ವಿಧಿಸಲಾಗಿದೆ. ಉಳಿದ ಇಬ್ಬರ ಖುಲಾಸೆಯಾಗಿದೆ.

ತಾತಾ ವಿಜ್ಞಾನ ಮಂದಿರಕ್ಕೆ ಸದಸ್ಯತ್ವ

ಬೆಂಗಳೂರಿನ ತಾತಾ ವಿಜ್ಞಾನ ಮಂದಿರದ ಸದಸ್ಯತ್ವವು ವಿಶ್ವವಿದ್ಯಾನಿಲಯದ [illegible] ದೊರೆಯಬೇಕೆಂದು ಭಾರತ ಸರ್ಕಾರವು ಸೂಚಿಸಿರುತ್ತಾರೆ.

ತರೀ ಜಮೀನು ಮಾರಾಟಕ್ಕೆ

ಮೈಸೂರು ನಂಜನಗೂಡು ತಾಲ್ಲೂಕು [illegible] ಚಾಂಡವಪುರ ಗ್ರಾಮಕ್ಕೆ ಸೇರಿರುವ, [illegible] ವಾಲಿ ಶುಗರ್ ಮಿಲ್ ಬಳಿ ಇರುವ, [illegible] ವಾದ ತರೀ ಜಮೀನುಗಳು ಕ್ರಯಕ್ಕಿವೆ. ಎಸ್ಟ್ರಿಯ [illegible] ಎಕರೆ 30 ಗುಂಟೆ [illegible] 40 ಪಲ್ಲಾ ಉಳ್ಳ ಒಂದು ತಾಕು ಮತ್ತು [illegible] 2 ಎಕರೆ 22 ಗುಂಟೆ, ಗುತ್ತಿಗೆ 30 [illegible] ಉಳ್ಳ ಒಂದು ತಾಕು. ಕೂಡಲೇ ಜಮೀನು ಸ್ವಾಧೀನ ಕೊಡಲಾಗುತ್ತೆ. ವಿವರಗಳಿಗೆ:–

ಜಯ ಅಂಡ್ ಕಂಪೆನಿ,

ಮನೆ, ಜಮೀನುಗಳ ಏಜೆಂಟರು,

ಹಳೇ ಮೈಸೂರು ಬ್ಯಾಂಕ್ ಕಟ್ಟಡ,

ಮೈಸೂರು ಫೋ [illegible]

ರಿಜಿಸ್ಟರ್ ನಂ. ೭೯೩

ಕರ್ನಾಟಕದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ



ಬಿಡಿ ಪತ್ರಿಕೆ ೩ ಕಾಸು

ಚಂದಾ ದರ

ಪಟ್ಟಣಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೪] SADHVI : TUESDAY 10-4-1956 ಮೈಸೂರು ಮಂಗಳವಾರ : ೧೦-೪-೧೯೫೬ [ಸಂಚಿಕೆ : ೨೮೦

ಭಾರತ ಸರ್ಕಾರದಿಂದ ೨೦ ಲಕ್ಷ ಟನ್ ಧಾನ್ಯ ಶೇಖರಣೆ

ಹೆಚ್. ಎಂ. ಚನ್ನಬಸಪ್ಪನವರ ರಾಜೀನಾಮೆ ಪ್ರಶ್ನೆ

ನೆಹರೂರವರೊಡನೆ ಹನುಮಂತಯ್ಯನವರ ಮಾತುಕತೆ

ಬೆಂಗಳೂರು ೧೦

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಧಾನಿ ನೆಹರೂರವರನ್ನು ಸ್ವಾಗತಿಸಲು ನನ್ನ ಹಂಪೆಗೆ ಪ್ರಯಾಣ ಮಾಡಿದರು. ಅಲ್ಲಿಗೆ ಭೇಟಿ ಕೊಡಲಿರುವ ನೆಹರೂ ಮತ್ತು ಆಂಧ್ರದ ಮುಖ್ಯ ಮಂತ್ರಿ ಶ್ರೀ ಸಂಜೀವ ರೆಡ್ಡಿಯವರನ್ನು ಸಂಧಿಸಿ, ಶ್ರೀ ಹೆಚ್. ಎಂ. ಚನ್ನಬಸಪ್ಪನವರ ರಾಜೀನಾಮೆಯ ವಿಷಯವನ್ನು ಚರ್ಚಿಸುವರೆಂದು ಹೇಳಲಾಗಿದೆ. ಜವರಿ ೨೭ ರಂದು ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಸಮಿತಿ ಸದಸ್ಯರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ ಸಲಹೆ ನೀಡುವ ಬಗ್ಗೆ ಸ್ಪಷ್ಟ ತೀರ್ಮಾನವನ್ನು ಬೆಳೆಸಬೇಕೆಂಬ ಉದ್ದೇಶದಿಂದ ಅವರನ್ನು ಭೇಟಿ ಮಾಡುವುದಾಗಿ ಶ್ರೀ ಹನುಮಂತಯ್ಯನವರು ತಿಳಿಸಿದ್ದಾರೆ. ಕಾಂಗ್ರೆಸ್ ಪಕ್ಷದ ಅಂಗವಾಗಿಯೇ ಉಳಿದಿರುವ ಯಾರನ್ನಾದರೂ ಶಾಸನಸಭಾ ಸದಸ್ಯರಲ್ಲದಿದ್ದರೂ ಆರು ತಿಂಗಳ ಕಾಲ ಮಂತ್ರಿಯಾಗಿ ನೇಮಿಸಿಕೊಳ್ಳಲು ಅವಕಾಶವಿದೆ. ಮಧ್ಯ ಭಾರತದ ಮಂತ್ರಿಯೊಬ್ಬರನ್ನು ಅನರ್ಹಗೊಳಿಸಿರುವ ವಿಷಯವನ್ನು ಪ್ರಸ್ತಾಪಿಸಿ, ಶ್ರೀ ಚನ್ನಬಸಪ್ಪನವರ ವಿಷಯದಲ್ಲೂ ಅದಕ್ಕೆ ಸಂಬಂಧವಿಲ್ಲವೆಂದೂ ನ್ಯಾಯಾಲಯದ ತೀರ್ಮಾನದ ವಿಷಯವೇ ಇಲ್ಲಿ ಉದ್ಭವಿಸುವುದಿಲ್ಲವೆಂದೂ ಶ್ರೀ ಹನುಮಂತಯ್ಯನವರು ತಿಳಿಸಿದ್ದಾರೆ.

ಆರ್. ಎಂ. ಡಿ. ಸಿ. ಪರವಾಗಿ ಸುಪ್ರೀಂ ಕೋರ್ಟಿನಲ್ಲಿ ರಿಟ್ ಅರ್ಜಿ

ಬೆಂಗಳೂರಿನಲ್ಲಿರುವ ಆರ್. ಎಂ. ಡಿ. ಸಿ. ಸಂಸ್ಥೆಯವರು ಸುಪ್ರೀಂ ಕೋರ್ಟಿನಲ್ಲಿ ರಿಟ್ ಅರ್ಜಿಯೊಂದನ್ನು ಸಲ್ಲಿಸಿ, ಕೇಂದ್ರ ಬಹುಮಾನ ಸ್ಪರ್ಧೆ ಶಾಸನದ ಕ್ರಮಬದ್ಧತೆಯನ್ನು ಪ್ರಶ್ನಿಸಿದ್ದಾರೆ. ಸಂಸ್ಥೆಯವರು ನಡೆಸುತ್ತಿರುವ ಸ್ಪರ್ಧೆಗಳನ್ನು ತಪ್ಪಿಸದಂತೆ ತಾತ್ಕಾಲಿಕ ತಡೆ ಆಜ್ಞೆ ನೀಡಬೇಕೆಂದೂ ಕೋರಲಾಗಿದೆ.

ಬ್ರಿಟನ್ನಿನಿಂದ ಸಣ್ಣ ಸಣ್ಣ ಜಲಜನಕ ಬಾಂಬುಗಳ ಸಿದ್ಧತೆ

ಬ್ರಿಟನ್ನು ತಯಾರಿಸಿರುವ ಸಣ್ಣ ಸಣ್ಣ ಜಲಜನಕ ಬಾಂಬುಗಳನ್ನು ಆಸ್ಫೋಟಿಸುವ ಮಾಂಟೆಬೆಲ್ಲೊ ದ್ವೀಪದಲ್ಲಿ ಬರುವ ತಿಂಗಳು ಸಿಡಿಸಲಿದೆ ಎಂದು ವರದಿಯಾಗಿದೆ.

ಹಾಸನ-ನೆಲಮಂಗಲ ರಸ್ತೆ ಅಭಿವೃದ್ಧಿಗೆ ೪೧ ಲಕ್ಷ ರೂ.

ಬೆಂಗಳೂರು-ಮಂಗಳೂರು ರಸ್ತೆಯ ಭಾಗವಾದ ನೆಲಮಂಗಲ-ಕುಣಿಗಲ್-ಹಾಸನ ರಸ್ತೆಯನ್ನು ಉತ್ತಮಪಡಿಸುವ ಸಲುವಾಗಿ ಕೇಂದ್ರ ಸರ್ಕಾರದವರು ೪೧,೬೭,೦೦೦ ರೂ. ವೆಚ್ಚವನ್ನು ಮಂಜೂರು ಮಾಡಿದ್ದಾರೆ. ಪ್ರಸ್ತುತ ವರ್ಷ ಸರ್ಕಾರದವರು ೬,೯೮,೦೦೦ ರೂ. ಗಳನ್ನು ಒದಗಿಸುವರು. ಉಳಿದ ಹಣವನ್ನು ಸಂಸ್ಥಾನ ಸರ್ಕಾರದವರು ಕೊಡಬೇಕಾಗುವುದು.

ಮೈಸೂರು ಸರ್ಕಾರದ ಷೇರು ಹಣ ವಾಪಸಿಲ್ಲ

ಬೆಂಗಳೂರಿನಲ್ಲಿರುವ ಹಿಂದೂಸ್ಥಾನ್ ಏರ್‌ಕ್ರಾಫ್ಟ್ ಮತ್ತು ಹಿಂದೂಸ್ಥಾನ ವಿಮಾನ ಕಾರ್ಖಾನೆಗಳಲ್ಲಿ ತಾವು ಹಾಕಿರುವ ಷೇರು ಬಂಡವಾಳವನ್ನು ವಾಪಸು ಕೊಡುವಂತೆ ಮೈಸೂರು ಸರ್ಕಾರದವರು ಮಾಡಿದ ಪ್ರಾರ್ಥನೆಯನ್ನು ಕೇಂದ್ರ ಸರ್ಕಾರದವರು ನಿರಾಕರಿಸಿರುವುದಾಗಿ ವರದಿಯಾಗಿದೆ. ಈ ಹಣವನ್ನು ಕರ್ನಾಟಕ ಪ್ರಾಂತ್ಯವು ರಚನೆಯಾದ ನಂತರ ನಿರ್ಧರಿಸಲಾಗುವುದೆಂದು ಕೇಂದ್ರ ಸರ್ಕಾರದವರು ತಿಳಿಸಿದ್ದಾರೆ.

ರಾಷ್ಟ್ರಾಧ್ಯಕ್ಷರಿಗೆ ನೋಟುಗಳ ಹಾರ

ಹರಿಜನ ಸೇವಾ ಸಂಘದ ವ್ಯಾಪಕ ಸಭೆಯಲ್ಲಿ ರಾಜೇಂದ್ರ ಪ್ರಸಾದರು ನಿನ್ನೆ ಆಗಮಿಸಿದ ಹರಿಜನ ಕಲ್ಯಾಣ ಫೀಲ್ಡಿಯಲ್ಲಿ ನಡೆಸಿದ ಹರಿಜನರು ಒಟ್ಟಿಗೆ ಸೇರಿ ಪುಷ್ಪಹಾರವನ್ನು, ೫೦೦ ರೂ. ಗಳ ನೋಟುಗಳ ಹಾರವನ್ನು ಹಾಕಿ ನೋಟುಗಳನ್ನು ದೇವಾಲಯದ ನಿಧಿಗೆ ಕೊಡುವಂತೆ ರಾಷ್ಟ್ರಾಧ್ಯಕ್ಷರಿಗೆ ಅರ್ಪಿಸಿದರು.

ಭೋಪಾಲಿನಲ್ಲಿ ೧೬೭ ಜನರ ಬಂಧನ

ಭೋಪಾಲ್ ಗಲಭೆಯಲ್ಲಿ ಇದುವರೆಗೆ ೧೬೭ ಜನರನ್ನು ಬಂಧಿಸಲಾಗಿದೆ. ೩ ದಿನಗಳಿಂದ ಜಾರಿ ಮಾಡಲಾಗಿದ್ದ ಕರ್ಫ್ಯೂ ಅವಧಿಯನ್ನು ನಿನ್ನೆ ಸ್ವಲ್ಪ ಕಡಿಮೆ ಮಾಡಲಾಯಿತು. ಅಕ್ಷೀಂ ಮಹಾಸಭೆ ಮತ್ತು ಜನಸಂಘ ಇವುಗಳ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಕರ್ಫ್ಯೂ ಉಲ್ಲಂಘನೆಗಾಗಿಯೇ ನಿನ್ನೆ ೪೮ ಜನರು ಬಂಧಿಸಲ್ಪಟ್ಟರು.

ಪಾಕಿಸ್ತಾನಕ್ಕೆ ಅಮೆರಿಕದ ಹೊಸ ಜೆಟ್ ವಿಮಾನಗಳು

ಪಾಕಿಸ್ತಾನಕ್ಕೆ ಅತಿ ವೇಗದ ಅತ್ಯಾಧುನಿಕವಾದ ಜೆಟ್ ವಿಮಾನಗಳನ್ನು ಕೊಡಲಿರುವುದಲ್ಲದೆ ಮಿಲಿಟರಿ ಸಹಾಯವನ್ನು ಹೆಚ್ಚಿಸಲಾಗುವುದೆಂದೂ ವರದಿಯಾಗಿದೆ.

ರಾಮ ನವರಾತ್ರ್ಯುತ್ಸವ

ಗೀತಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಬಾಲ ಸೀತಾರಾಮ ಮಂದಿರದ ಭಕ್ತ ಮಂಡಲಿಯವರು ಇದೇ ತಿಂಗಳು ಶ್ರೀ ರಾಮ ನವಮಿ ಉತ್ಸವವನ್ನು ಏರ್ಪಡಿಸಿದ್ದಾರೆ. ನಿತ್ಯವೂ ಬೆಳಿಗ್ಗೆ ಪಾರಾಯಣ, ಸಹಸ್ರನಾಮಾರ್ಚನೆ, ಸಂಜೆ ಭಜನೆ, ಗೀತಾ ಪ್ರವಚನ, ಹರಿಕಥೆ, ಭಜನೆ ಮೊದಲಾದುವು ನಡೆಯುತ್ತವೆ. ಶ್ರೀರಾಮ ಪಟ್ಟಾಭಿಷೇಕ ಮತ್ತು ಉತ್ಸವ ಕಾರ್ಯಕ್ರಮಗಳನ್ನು ನೆರವೇರಿಸಲಾಗುವುದು. ಆಸ್ತಿಕ ಮಹಾಶಯರು ಈ ಧರ್ಮ ಕಾರ್ಯಕ್ಕಾಗಿ ಉದಾರ ಸಹಾಯ ಮಾಡಬೇಕೆಂದು ಕೋರಲಾಗಿದೆ.

೨೦ ಲಕ್ಷ ಟನ್ ಅಕ್ಕಿ ಮತ್ತು ಗೋಧಿಯ ಶೇಖರಣೆ

ದ್ವಿತೀಯ ಯೋಜನೆ ಅವಧಿಯಲ್ಲಿ ಆಹಾರ ಪರಿಸ್ಥಿತಿ ಎದುರಿಸುವುದಕ್ಕಾಗಿಯೂ ಮತ್ತು ಬೆಲೆ ಪರಿಸ್ಥಿತಿಗಳನ್ನು ಎದುರಿಸಲೂ ಭಾರತ ಸರ್ಕಾರದವರು ೧೦ ಲಕ್ಷ ಟನ್ ಅಕ್ಕಿ ಮತ್ತು ೧೦ ಲಕ್ಷ ಟನ್ ಗೋಧಿಯನ್ನು ಶೇಖರಿಸಲು ನಿರ್ಧರಿಸಿರುವುದಾಗಿ ಕೇಂದ್ರ ಆಹಾರ ಮಂತ್ರಿ ಶ್ರೀ ಅಜಿತ ಪ್ರಸಾದ ಜೈನರವರು ಲೋಕಸಭೆಯಲ್ಲಿ ತಿಳಿಸಿದ್ದಾರೆ. ಆಹಾರದ ಬೆಲೆಗಳನ್ನು ಸಮತೂಕದಲ್ಲಿ ಇಡುವುದು ಈ ಧಾನ್ಯ ಶೇಖರಣೆಯ ಉದ್ದೇಶವಾಗಿರುವುದೆಂದ ಅವರು ಹೇಳಿ, ಬರಗಾಲದ ಸಮಯದಲ್ಲಿ ಧಾನ್ಯವನ್ನು ಕೊಳ್ಳುವುದಿಲ್ಲವೆಂದೂ ಆ ಧಾನ್ಯವನ್ನು ಮಾರಿಕಟ್ಟೆಯಿಂದಲೂ ತರಿಸಿಕೊಳ್ಳಲಾಗುವುದೆಂದೂ, ಈ ಬಗ್ಗೆ ಸಂಧಾನಗಳು ನಡೆಯುತ್ತಿವೆಯೆಂದೂ ಅವರು ತಿಳಿಸುತ್ತಾರೆ.

ಸೈನ್ಯ ವಾಪಸಾತಿಗಾಗಿ ಭಾರತಕ್ಕೆ ಪಾಕಿಸ್ತಾನದ ಕರೆ

Edited, Printed and Published by A. R. Nagarajan at Sadhvi Press O Subbiah Road Mysore

ಬೊಂಬಾಯಿ ನೌಕಾ ಸಿಬ್ಬಂದಿಯವರ ಮುಷ್ಕರ

ಬೊಂಬಾಯಿಯ ನೌಕಾ ಸಿಬ್ಬಂದಿ ... ಸಿವಿಲಿಯನ್ ನೌಕರರ ... ಕಳೆದ ಮಂಗಳವಾರ ಮುಷ್ಕರವನ್ನು ... ತಮಗೂ, ನೌಕಾ ಅಧಿಕಾರಿಗಳಿಗೂ ... ಅವನ್ನು ಬಗೆಹರಿಸಲು ... ವಿಷಯದ ಬಗ್ಗೆ ... ಮುಷ್ಕರವನ್ನು ಅವರು ... ಗೊಂಡಿದ್ದಾರೆ

ಕೈ ನೂಲಿನಿಂದ ಮಸ್ಲಿನ್ ಸೀರೆ ತಯಾರಿಗೆ ಏರ್ಪಾಡು

ಪುರಾತನ ಕಳೆಯಾದ ಮಸ್ಲಿನ್ ಸೀರೆ ... ಯನ್ನು ಪುನಃ ಏರ್ಪಾಡು ಮಾಡಲು ... ಭಾರತ ಖಾದಿ ಬೋರ್ಡಿನವರು ... ಗ್ವಾಲಿಯರ್ ಬಳಿ ... ಎಂಬ ಜನರು ಈ ಕಲೆಯಲ್ಲಿ ... ಈಗ ಅವರ ... ಕಾಡು ... ಹೇಳಲಾಗಿದೆ ... ರಿಂದ ... ಕೌಂಟಿನಷ್ಟು ... ಶತಮಾನದಲ್ಲಿ ಬ್ರಿಟಿಷ್ ... ಪ್ರೋತ್ಸಾಹದಿಂದ ಈ ಕಲೆಗಾರರ ... ಗಳನ್ನು ... ಗಿದೆ

SREE GANESH

TALKIES

Gala Release on 21-4-56

For 4 Days Only

Columbia's latest Cinemascope picture in technicolor From start to finish Thrills and Actions

COCKLESHELL HEROES

With Jose Ferrar and Trevor Howard

ನಿಮಗೆ ಈಗಲೇ ಸದವಕಾಶ!

★ ಅಶಕ್ತರನ್ನು ಶಕ್ತಿಯುತರಾಗಿ ಮಾಡಲಾಗುವುದು; ವೃದ್ಧರಿಗೆ ... ವನ್ನು ತಂದುಕೊಡಲಾಗುವುದು ತರುಣರಿಗೆ ಅಸದೃಶ ಶಕ್ತಿ ಬರುವುದು

ವಿಶ್ವವಿಖ್ಯಾತ ಮತ್ತು ವಿಶೇಷ ಅನುಭವ ಪಡೆದ ವೈದ್ಯರಾದ

ಡಾ॥ ರಾ ಣಾ ರ ವ ರ ನ್ನು

[illegible]

ರಾಣಾ ಮೆಡಿಕಲ್ ಹಾಲ್,

ಎಲ್ ನಂ. 1-745 ಅಶೋಕಾ ರಸ್ತೆ ಮೈಸೂರು

(ಮೈಸೂರು ಬ್ಯಾಂಕ್ ಬಳಿ ... 3ನೇ ಅಡ್ಡರಸ್ತೆ)

ಲೆಜಿಸ್ಲೇಟಿವ್ ಕೌನ್ಸಿಲ್ ಮರುಚುನಾವಣೆ

ಪದವೀಧರರ ಕ್ಷೇತ್ರದ ಓಟರುಗಳಲ್ಲಿ ವಿನಂತಿ

ಪದವೀಧರರ ಕ್ಷೇತ್ರದಿಂದ ಮೈಸೂರು ಲೆಜಿಸ್ಲೇಟಿವ್ ಕೌನ್ಸಿಲ್ಲಿನ ಒಂದು ಸ್ಥಾನಕ್ಕೆ ಈಗ ನಡೆಯಲಿರುವ ಮರು ಚುನಾವಣೆಗೆ ನಾನು ಉಮೇದುವಾರನಾಗಿ ಸ್ಪರ್ಧಿಸಿದ್ದೇನೆ. ದಯವಿಟ್ಟು ತಾವು ನನಗೆ ತಮ್ಮ ಮೊದಲನೆಯ ಓಟನ್ನು ಕೊಟ್ಟು ಬೆಂಬಲ ನೀಡಬೇಕಾಗಿ ಪ್ರಾರ್ಥಿಸುತ್ತೇನೆ

ಎಂ ಶ್ರೀ ಕಂಠ ಶಾಸ್ತ್ರಿ,

ರಾಯಭಾರಿ ಪ್ರತಿನಿಧಿ, ಮೈಸೂರು, ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಅಕಡೆಮಿಕ್ ಕೌನ್ಸಿಲ್ ಸದಸ್ಯ, ಮೈಸೂರು

ಲಕ್ಷ್ಮಿ ★ 19—4—56 ರಿಂದ : ಅನೇಕ್ಷಿತವಾದ 2 ನೇ ವಾರ : ಪ್ರತಿ ದಿನ 3 ಪ್ರದರ್ಶನಗಳು

ಕೃಷ್ಣ ಪಿಕ್ಚರ್ಸ್‌ರವರ ಅತ್ಯುತ್ತಮ ತಮಿಳು ಚಿತ್ರ

[illegible]

★ ಮಧುರೈ ವೀರನ್ ★

ರಿಜಿಸ್ಟ್ರೇಷನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೩೭] SADHVI : SATURDAY 21-4-1956 ಮೈಸೂರು ಶನಿವಾರ : ೨೧-೪-೧೯೫೬ [ಸಂಚಿಕೆ : ೨೪೦

ಬಾಗ್ದಾದ್ ಒಪ್ಪಂದ ರಾಷ್ಟ್ರಗಳಿಗೆ ಭಾರತದ ಪ್ರತಿಭಟನೆ

ಕುಕ್ಕರಹಳ್ಳಿ ಕೆರೆಯಲ್ಲಿ ಬಿದ್ದು ಯುವಕನ ಮರಣ

ಮೈಸೂರು ೨೧

ಪಾಪಥ್ವಾಶಿಯ ಚಾಮರಾಜಪುರದಲ್ಲಿರುವ ನಿವೃತ್ತ ಮರಾಮತ್ತು ಇಲಾಖೆ ಸೂಪರ್‌ವೈಸರ್ ಶ್ರೀ ರಾಮಸ್ವಾಮಿ ಅಯ್ಯಂಗಾರ್ ಅವರ ನಾಲ್ಕನೇ ಮಗ [illegible] ವರ್ಷದ ಕೃಷ್ಣಮೂರ್ತಿ ಎಂಬಾತನು ಕುಕ್ಕರಹಳ್ಳಿ ಕೆರೆಯಲ್ಲಿ ಬಿದ್ದು ಮರಣ ಹೊಂದಿರುವ ವಿಷಯ ಗೊತ್ತಾಗಿದೆ. ಮೃತನು ನೆನ್ನೆ ಮಧ್ಯಾಹ್ನ [illegible] ಗಂಟೆಗೆ ಮನೆಯನ್ನು ಬಿಟ್ಟು ಹೋದವನು ಪತ್ತೆಯಾಗಲಿಲ್ಲವೆಂದೂ, ಈ ದಿನ ಬೆಳಿಗ್ಗೆ ಶವವನ್ನು ಕೆರೆಯಿಂದ ತೆಗೆಯಲಾಯಿತೆಂದೂ ವರದಿಯಾಗಿದೆ. ಮೃತನಿಗೆ ಮೂರ್ಛೆ ರೋಗವು ಬರುತ್ತಿತ್ತೆಂದು ಗೊತ್ತಾಗಿದೆ.

ರಾಮೋತ್ಸವ ಸಂಗೀತ ಕಛೇರಿಗಳು

[illegible] ಮಂದಿರದಲ್ಲಿ ಈ ರಾತ್ರಿ ೮-೩೦ ಗಂಟೆಗೆ ವಿದ್ವಾನ್ ವೆಂಕಟಪ್ಪನವರ ಸಂಗೀತವು [illegible] ಪಿಟೀಲು ಮತ್ತು [illegible] ಮೃದಂಗದೊಡನೆ ಏರ್ಪಾಡಾಗಿದೆ. [illegible] ಗೋಪಾಲಸ್ವಾಮಿ [illegible] ಗಾಯನವು [illegible] ನಡೆಯುವುದು.

[illegible] ಅಗ್ರಹಾರದಲ್ಲಿರುವ ಶ್ರೀ [illegible] ಸಭೆಯ ಆಶ್ರಯದಲ್ಲಿ ಈ ರಾತ್ರಿ [illegible] ಗಂಟೆಗೆ ವಿದ್ವಾಂಸರು [illegible] ಗಾಯನವು [illegible] ಏರ್ಪಾಡಾಗಿದೆ. [illegible] ನಾರಾಯಣರಾವ್ [illegible] ನಡೆಸುವರು.

ಫಜಲಾಲಿಯವರು ಅಸ್ಸಾಂ ಗವರ್ನರ್

ಅಸ್ಸಾಮಿನ ಗವರ್ನರರಾದ ಶ್ರೀ ಜೈರಾಂದಾಸ್ ದೌಲತ್‌ರಾಂರವರು ಬರುವ ತಿಂಗಳು [illegible] ದಲ್ಲಿ ಅಧಿಕಾರದಿಂದ ನಿವೃತ್ತಿ ಹೊಂದಲಿರುವುದರಿಂದ ಅವರ ಸ್ಥಾನಕ್ಕೆ ಸುಪ್ರೀಂ ಕೋರ್ಟಿನ ನ್ಯಾಯಮೂರ್ತಿ ಫಜಲ್ ಅಲಿಯವರನ್ನು ನೇಮಿಸಲಾಗಿದೆ. ಬರುವ ತಿಂಗಳು ಇವರು ಅಧಿಕಾರ ಸ್ವೀಕರಿಸುವರು.

ಕಮ್ಯೂನಿಸ್ಟ್ ಮತ್ತು ರಾಷ್ಟ್ರೀಯ ಚೀಣಾಗೆ ನೌಕಾ ಕಾಳಗ

ಕಮ್ಯೂನಿಸ್ಟ್ ಮತ್ತು ರಾಷ್ಟ್ರೀಯ ಚೀಣಾ [illegible] ದೋಣಿಗಳಿಗೆ ನೆನ್ನೆ ಬೆಳಿಗ್ಗೆ ಮಾಟ್ಸು [illegible] ಬಳಿ ಕದನ ನಡೆದು ಕಮ್ಯೂನಿಸ್ಟರ [illegible] ದೊಡ್ಡ ಫಿರಂಗಿ ದೋಣಿಯನ್ನು ರಾಷ್ಟ್ರೀಯರು ಮುಳುಗಿಸಿದರೆಂದೂ, ಕಾಳಗವು ೩೦ ನಿಮಿಷ ಕಾಲ ನಡೆಯಿತೆಂದೂ ವರದಿಯಾಗಿದೆ.

ಯುದ್ಧ ಸ್ತಂಭನಕ್ಕೆ ಈಜಿಪ್ಟ್ ಮತ್ತು ಇಸ್ರೇಲುಗಳ ಒಪ್ಪಿಗೆ

ಈಜಿಪ್ಟ್ ಮತ್ತು ಇಸ್ರೇಲುಗಳು ಪರಿಪೂರ್ಣ ಯುದ್ಧಸ್ತಂಭನಕ್ಕೆ ಒಪ್ಪಿಗೆ ಕೊಟ್ಟಿರುತ್ತವೆ ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹಾಮರ್‌ಸ್ಕೋಲ್ಡರು ತಿಳಿಸಿರುತ್ತಾರೆ.

ಬಾಗ್ದಾದ್ ಕೌಲು ರಾಷ್ಟ್ರಗಳಿಗೆ ಭಾರತದ ಪ್ರತಿಭಟನೆ

ಟೆಹರಾನಿನಲ್ಲಿ ಸೇರಿದ್ದ ಬಾಗ್ದಾದ್ ಕೌಲು ರಾಷ್ಟ್ರಗಳ ಸಮ್ಮೇಳನದವರು ಕಾಶ್ಮೀರ ಮತ್ತು ಪಖ್ತೂನಿಸ್ತಾನ ಸಮಸ್ಯೆಗಳು ಇತ್ಯರ್ಥವಾಗುವುದು ಅಗತ್ಯವೆಂದು ತಿಳಿಸಿರುವ ಬಗ್ಗೆ ಭಾರತ ಸರ್ಕಾರದವರು ಸಂಬಂಧಪಟ್ಟ ರಾಷ್ಟ್ರಗಳಿಗೆ ಪ್ರತಿಭಟನೆಯನ್ನು ಸಲ್ಲಿಸಿರುವರೆಂದು ವರದಿಯಾಗಿದೆ. [illegible] ಸಮಸ್ಯೆಯ [illegible] ಪ್ರಸ್ತಾಪಿಸಿದ್ದಾರೆ [illegible] ಭಾರತವು [illegible] ವ್ಯಕ್ತಪಡಿಸಿದೆ.

ಬಾಗ್ದಾದ್ ಕೌಲು ರಾಷ್ಟ್ರಗಳ ಸಮ್ಮೇಳನದಲ್ಲಿ ಕಾಶ್ಮೀರದ ಪ್ರಶ್ನೆಯನ್ನು [illegible] ಸಲಹೆಯನ್ನು [illegible] ಸ್ವಾತಂತ್ರ್ಯ [illegible] ರಾಷ್ಟ್ರಗಳ [illegible] ನಿರೂಪಿಸಲಾಗಿದೆ.

ರಾಜಸ್ಥಾನದಲ್ಲಿ ಮತ್ತೆ ಜಹಗೀರ್ದಾರರ ಚಳುವಳಿ

ನೆನ್ನೆ ೮೨ ಜನರ ಬಂಧನ

ರಾಜಸ್ಥಾನದಲ್ಲಿ ಜಹಗೀರ್ದಾರಿ ರದ್ದಿನ ಸಂಬಂಧದಲ್ಲಿ ಸೂಕ್ತ ಪರಿಹಾರದ ಹಣವನ್ನು ಮತ್ತು ಜಹಗೀರ್ದಾರರುಗಳ ಪುನರ್ವಸತಿ ಬಗ್ಗೆ ಅಲ್ಲಿನ ಜಹಗೀರ್ದಾರರು ನಡೆಸುತ್ತಿದ್ದ ಚಳುವಳಿಯು, ಸರ್ಕಾರದೊಡನೆ ಸಂಧಾನಕ್ಕೆ ಅವಕಾಶ ಕಲ್ಪಿಸಲು [illegible] ಪ್ರಯತ್ನ ನಡೆಸಿದ ಪರಿಣಾಮವಾಗಿ ಕೆಲವು ದಿನಗಳವರೆಗೆ ನಿಂತಿದ್ದಿತು. ಜಹಗೀರ್ದಾರರು ನೆನ್ನೆ ಮತ್ತೆ ಚಳುವಳಿಯನ್ನಾರಂಭಿಸಿ ನಿಷೇಧಾಜ್ಞೆಗಳನ್ನು ಉಲ್ಲಂಘಿಸಿದುದರಿಂದ ೮೨ ಜನರನ್ನು ದಸ್ತಗಿರಿ ಮಾಡಲಾಯಿತು.

ಕೈಗಾರಿಕೆ ಮೂಲಗಳ ವರಮಾನ ಮಿತಿಗೊಳಿಸಲು ಸಾಧ್ಯವಿಲ್ಲ

ಕೇಂದ್ರ ಅರ್ಥ ಸಚಿವ ದೇಶಮುಖ್‌ರವರ ಹೇಳಿಕೆ

ದ್ವಿತೀಯ ಪಂಚ ವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ವಿಶಾಲ ವ್ಯಾಪಕ [illegible] ಮತ್ತು ಸರ್ವರಿಗೂ ಅನ್ವಯಿಸುವ ರೀತಿಯಲ್ಲಿ ತೆರಿಗೆಯನ್ನು ವಿಧಿಸುವುದು ಅಗತ್ಯವೆಂದೂ, ಕೈಗಾರಿಕಾ ಮೂಲಗಳಿಂದ ಬರುವ ವರಮಾನದ ಮಟ್ಟವನ್ನು ಮಿತಿಗೊಳಿಸುವುದು ಸಾಧ್ಯವಿಲ್ಲವೆಂದೂ ಕೇಂದ್ರ ಸರ್ಕಾರದ ಅರ್ಥ ಸಚಿವ ದೇಶಮುಖ್‌ರವರು ನೆನ್ನೆ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯಲ್ಲಿ ತಿಳಿಸಿದರು. ಆದಾಯದ [illegible] ಧಿಕ ವರಮಾನದಲ್ಲಿ ತಾವು ಸೂಚಿಸಿದ ತೆರಿಗೆಗಳನ್ನು ಜಾರಿಗೆ ತರಲಾಗುವುದೆಂದೂ ಜವಳಿ ಸಕ್ಕರೆ [illegible] ಅವಶ್ಯ ವಸ್ತುಗಳು ಮತ್ತು ವಿದ್ಯುಚ್ಛಕ್ತಿ ಮುಂತಾದವುಗಳ ಮೇಲೆ ಹೊಸದಾಗಿ ವಿಧಿಸಲಾಗಿರುವ ತೆರಿಗೆಯನ್ನು ವಜಾ ಮಾಡಬೇಕು, ಇಲ್ಲವೇ ಕಡಿಮೆ ಮಾಡಬೇಕೆಂದು ಸಭೆಯಲ್ಲಿ ಹಲವು ಸದಸ್ಯರು ಸೂಚಿಸಿದುದಾಗಿ ಗೊತ್ತಾಗಿದೆ.

ಬ್ರಿಟನ್ ಮತ್ತು ರಷ್ಯಗಳಿಂದ ವಿಶ್ವದ ಬಿಕ್ಕಟ್ಟು ಸಡಿಲ

ಲಂಡನ್ ಸತ್ಕಾರ ಸಮಾರಂಭದಲ್ಲಿ ಬುಲ್ಗಾನಿನ್ನರ ಹೇಳಿಕೆ

ಬ್ರಿಟನ್ನಿಗೆ ಭೇಟಿಯಿತ್ತಿರುವ ರಷ್ಯದ ಪ್ರಧಾನಿ ಬುಲ್ಗಾನಿನ್ನರು ಲಂಡನ್ನಿನ ಸತ್ಕಾರ ಸಮಾರಂಭವೊಂದರಲ್ಲಿ ನೆನ್ನೆ ಮಾತನಾಡುತ್ತಾ ಅಂತರ ರಾಷ್ಟ್ರೀಯ ಬಿಕ್ಕಟ್ಟು ಈಗ ಸಡಿಲವಾಗಿರುವುದರ ಬಗ್ಗೆ ಬಹಳಷ್ಟು ಬ್ರಿಟನ್ ಮತ್ತು ರಷ್ಯಾಗಳ ಪರಿಶ್ರಮವಿದೆ ಎಂದೂ, ಆ ಎರಡು ರಾಷ್ಟ್ರಗಳು [illegible] ವ್ಯಾಪಾರಿಕ ಮತ್ತು [illegible] ಸಂಪರ್ಕವನ್ನು ಬೆಳೆಸಲು ಬ್ರಿಟನ್ ಪ್ರಮುಖರೊಡನೆ ನೇರವಾಗಿ ವ್ಯವಹರಿಸುವ ಉದ್ದೇಶದಿಂದ ತಾವು ಲಂಡನ್ನಿಗೆ ಬಂದಿರುವುದಾಗಿ ನುಡಿದರು. ಬ್ರಿಟನ್ನಿನೊಡನೆ ತಾವು ವ್ಯಾಪಾರ [illegible] ಬಯಸುವುದಾಗಿ [illegible] ತಮ್ಮ ಈ ಭೇಟಿ [illegible] ಬ್ರಿಟನ್ ಮತ್ತು ರಷ್ಯಾಗಳ ಸ್ನೇಹ ಮತ್ತು ಸಹಕಾರಗಳು [illegible] ಸಹಜೀವನ ತತ್ವದ ಆಧಾರ ಮತ್ತು ಸುಭದ್ರ [illegible] ನೆಲೆಯಲ್ಲಿ [illegible] ಬುಲ್ಗಾನಿನ್‌ರವರು [illegible] ಪ್ರತಿನಿಧಿಗಳ [illegible] ಭೇಟಿ ಕೊಟ್ಟುದಾಗಿಯೂ, ಈ ಎರಡು ರಾಷ್ಟ್ರಗಳ ಬಾಂಧವ್ಯ [illegible] ಉತ್ತಮಗೊಳ್ಳುವುದೆಂದೂ ಬುಲ್ಗಾನಿನ್‌ರವರು ಭರವಸೆಯನ್ನು ವ್ಯಕ್ತಪಡಿಸಿದರು.

ರಷ್ಯದ ನಾಯಕರು ಲಂಡನ್ನಿನಲ್ಲಿ ಮಧ್ಯಪ್ರಾಚ್ಯದ ಸಮಸ್ಯೆಗಳು ಮತ್ತು ನಿಶ್ಶಸ್ತ್ರೀಕರಣದ ವಿಷಯವಾಗಿ ವಿಚಾರ ವಿನಿಮಯ ಮಾಡುವರೆಂದು ಗೊತ್ತಾಗಿದೆ.

ಅಣು ಶಸ್ತ್ರ ಪರೀಕ್ಷೆ ಬಗ್ಗೆ ಅಮೆರಿಕಕ್ಕೆ ರಷ್ಯದ ಪ್ರತಿಭಟನೆ

ಪೆಸಿಫಿಕ್ ಸಾಗರದ ಪ್ರದೇಶದಲ್ಲಿ ಅಮೆರಿಕದ ಅಣು ಶಸ್ತ್ರ ಪ್ರಯೋಗ ಪರೀಕ್ಷೆ ನಡೆಸುತ್ತಿರುವ ಬಗ್ಗೆ ರಷ್ಯವು ಅಮೆರಿಕಕ್ಕೆ ಪ್ರತಿಭಟನೆಯನ್ನು ಸಲ್ಲಿಸಿ ಈ ಕ್ರಮಗಳು ವಿಶ್ವ ಸಂಸ್ಥೆಯ ಧರ್ಮದರ್ಶಿ ಸಮಿತಿಯ ನಿರ್ಧಾರಕ್ಕೆ ವಿರೋಧವಾಗಿರುವವೆಂದೂ ಮತ್ತು ಅಂತರ ರಾಷ್ಟ್ರೀಯ ಸಂಬಂಧ ತತ್ವಗಳಿಗೆ ವ್ಯತಿರಿಕ್ತವಾಗಿರುವುವೆಂದೂ ತಿಳಿಸಿರುವುದಾಗಿ ಗೊತ್ತಾಗಿದೆ.

ಪೂರ್ವ ಪಾಕಿಸ್ತಾನದ ಸರ್ಕಾರೀ ಜವಾನರಿಂದ ಭಿಕ್ಷಾಟನೆ

ಪೂರ್ವ ಪಾಕಿಸ್ತಾನದ ಸರ್ಕಾರೀ ಕಛೇರಿಗಳಲ್ಲಿರುವ ಜವಾನರು ಹೆಚ್ಚು ಸಂಬಳ ಕೊಡಬೇಕು ಮತ್ತು ಅಧಿಕಾರಿಗಳ ಮನೆ ಕೆಲಸಗಳನ್ನು ಮಾಡುವುದನ್ನು ತಪ್ಪಿಸಬೇಕು ಎಂದು ಸರ್ಕಾರದವರಿಗೆ ಸಲ್ಲಿಸಿದ ಬೇಡಿಕೆಗಳು ವಿಫಲವಾದುದರಿಂದ ಅವರುಗಳು ಈಗ ಕಛೇರಿ ಕೆಲಸಗಳು ಮುಗಿದನಂತರ ಢಾಕ್ಕಾ ನಗರದ ಬೀದಿಗಳಲ್ಲಿ ಭಿಕ್ಷೆಯೆತ್ತಲು ಆರಂಭಿಸಿರುವರೆಂದು ವರದಿಯಾಗಿದೆ.

ವಿದ್ಯುಚ್ಛಕ್ತಿ ದರದ ಪುನರ್ಪರಿಶೀಲನೆ

ಬೆಂಗಳೂರು ೨೧

ಸಂಸ್ಥಾನದಲ್ಲಿ ಇತ್ತೀಚಿಗೆ ಜಾರಿಗೆ ತರಲಾದ ವಿದ್ಯುಚ್ಛಕ್ತಿ ದರಗಳು ಬಹಳ ದುಬಾರಿಯಾಗಿರುವವೆಂದೂ, ಅವನ್ನು ಪುನರ್ವಿಮರ್ಶಿಸಬೇಕೆಂದೂ ಶಾಸನ ಸಭೆಯಲ್ಲಿ ಸೂಚಿಸಲಾದ ಸಂಬಂಧವಾಗಿ ಸರ್ಕಾರದವರು ಅವನ್ನು ಪುನರ್ಪರಿಶೀಲಿಸಿ ಆಜ್ಞೆಯಿತ್ತಿರುವರು. ಬೆಂಗಳೂರು ಮತ್ತು ಮೈಸೂರು ನಗರಗಳನ್ನು ಬಿಟ್ಟು, ಉಳಿದ ಸ್ಥಳಗಳಲ್ಲಿ ಹಿಟ್ಟಿನ ಗಿರಣಿಗಳಿಗೆ ಹಾರ್ಸ್ ಪವರ್ ಶುಲ್ಕವನ್ನು ೭೨ ಯೂನಿಟ್ ಬದಲು ೬೦ ಯೂನಿಟ್‌ಗಳೆಂದು ಗಣನೆಸಿ, ಅದರ ಮೇಲೆ ಕನಿಷ್ಠ ಶುಲ್ಕವನ್ನು ವಿಧಿಸಲಾಗುವುದು. [illegible] ಸಂಘಗಳಿಗೆ ಕನಿಷ್ಠ ಶುಲ್ಕವನ್ನು ಹಾರ್ಸ್‌ಪವರ್ ಒಂದಕ್ಕೆ [illegible] ಇಳಿಸಲಾಗಿದೆ ಮತ್ತು ನಂತರದ [illegible] ಯೂನಿಟ್‌ಗಳಿಗೆ [illegible] ವಿಧಿಸಲಾಗುವುದೆಂದೂ, ಅದಕ್ಕೆ ಹೆಚ್ಚಾದ ಪ್ರತಿಯೊಂದು ಯೂನಿಟ್ಟಿಗೆ ಆರು ಕಾಸಿನಂತೆಯೂ ದರವನ್ನು ಗೊತ್ತುಮಾಡಲಾಗಿದೆ.

ಶಕ್ತಿ ರಾಷ್ಟ್ರ ಕೂಟಕ್ಕೆ ಸಿಂಹಳ ಸೇರುವುದಿಲ್ಲ

ಗವರ್ನರ್ ಜನರಲ್ಲರ ಘೋಷಣೆ

ಸಿಂಹಳದ ನೂತನ ಪಾರ್ಲಿಮೆಂಟ್ ಅಧಿವೇಶನದ ಆರಂಭೋತ್ಸವವನ್ನು ಗವರ್ನರ್ ಜನರಲ್ ಗುಣತಿಲಕೆಯವರು ನೆನ್ನೆ ನೆರವೇರಿಸುತ್ತಾ, ಅಂತರ ರಾಷ್ಟ್ರೀಯ ವ್ಯವಹಾರದಲ್ಲಿ ಸಿಂಹಳವು ಯಾವ ಶಕ್ತಿ ರಾಷ್ಟ್ರಗಳ ಕೂಟಕ್ಕೂ ಸೇರುವುದಿಲ್ಲವೆಂದು ಘೋಷಿಸಿದರು. ನೂತನ ಸರ್ಕಾರವು ಸಿಂಹಳದಲ್ಲಿ ಬ್ರಿಟಿಷ್ ಸೈನ್ಯ ನೆಲೆಗಳ ವಿಷಯವನ್ನು ಪರಿಶೀಲಿಸುವುದೆಂದೂ ಮತ್ತು ಸಿಂಹಳದಲ್ಲಿ ಗಣರಾಜ್ಯದ ಸ್ಥಾಪನೆಗೆ ಗಮನ ಕೊಡುವುದೆಂದೂ ಅವರು ತಿಳಿಸಿದರು. ಸಮಾಜವಾದೀ ನೀತಿಯನ್ನು ಮುಂದುವರಿಸುವ ದೃಷ್ಟಿಯಿಂದ ಸರ್ಕಾರವು ಸಂಚಾರ ವ್ಯವಸ್ಥೆಯನ್ನು ರಾಷ್ಟ್ರೀಕರಿಸುವುದೇ ಮುಂತಾದ ಹಲವು ಅವಶ್ಯ ಕಾರ್ಯಗಳಿಗೆ ಗಮನ ಕೊಡುವುದೆಂದೂ, ಸಿಂಹಳಿಯನ್ನು ಅಧಿಕಾರಿ ಭಾಷೆಯನ್ನಾಗಿ ಮಾಡುವ ಬಗ್ಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ ಅವರು ಹೇಳಿದರು.

ಮಗುವಿನ ವಾರಸಿನ ಬಗ್ಗೆ ತಂದೆತಾಯಿಗಳಲ್ಲಿ ವಿವಾದ

ನ್ಯಾಯಾಲಯದಲ್ಲಿ ಮಗುವಿನಿಂದಲೇ ಮೊಕದ್ದಮೆಯ ತೀರ್ಮಾನ

ಅಹಮದಾಬಾದು ನ್ಯಾಯಾಲಯದಲ್ಲಿ, ಒಂದು ಮಗುವಿನ ವಾರಸಿನ ಬಗ್ಗೆ ತಂದೆತಾಯಿಗಳ ನಡುವೆ ಉಂಟಾದ ವಿವಾದವನ್ನು ಪರಿಹರಿಸುವ ಸಂಬಂಧದಲ್ಲಿ ನ್ಯಾಯಾಧೀಶರಿಗೆ ಸಮಸ್ಯೆ ಉಂಟಾಗಿ, ಕಡೆಗೆ ಅವರು ಮಗುವನ್ನು ಕರೆಸಿ ನೀನು ಯಾರಲ್ಲಿಗೆ ಹೋಗುವೆ ? ಎಂದು ಕೇಳಲಾಗಿ ಅದು ತಾಯಿಯ ಬಳಿಗೆ ಓಡಿಹೋಯಿತು. ಮಗುವು ಅದುವರೆಗೂ ತಂದೆಯ ಬಳಿಯೇ ಇದ್ದಿತು. ಅದನ್ನು ನೋಡಿ ನ್ಯಾಯಾಧೀಶರು ತಾಯಿಯ ಬಳಿಯೇ ಮಗು ಇರತಕ್ಕದ್ದೆಂದು ತೀರ್ಪಿತ್ತರು.

ವಿವಿಧ ಅಪರಾಧಗಳಿಗೆ ಶಿಕ್ಷೆ

ಮೈಸೂರು ೨೧

ಎಸ್ ಕೆ ರಾಜು, ನಂಜಪ್ಪ, ಸಿದ್ದನ ರಾಮಯ್ಯ, ಮಹಮದ್ ಹುಸೇನ್ ಎಂಬುವರುಗಳು ಬೀಗ ಹಾಕಿದ್ದ ಸೈಕಲ್ಲುಗಳನ್ನು ಬಿಚ್ಚಿಕೊಂಡು ಹೋದ ಆಪಾದನೆ [illegible] ಅವರುಗಳಿಗೆ ತಲಾ ೫ ರೂ ದಂಡವನ್ನು ದ್ವಿತೀಯ ನಗರ ನ್ಯಾಯಾಧೀಶರು ನೆನ್ನೆ ವಿಧಿಸಿದರು

ಶಿವರಾಂಪೇಟೆಯಲ್ಲಿ ಸುರೇಶ್ ಎಂಬುವನು ಅನಂತಸ್ವಾಮಿ ಎಂಬುವರ ಮೇಲೆ ಸೈಕಲ್ ಬಿಟ್ಟು [illegible] ಅವನಿಗೆ ೧೦ ರೂ ದಂಡ ಬಿತ್ತು

[illegible] ಮಹಮದ್ [illegible] ಅವರಿಗೆ ತಲಾ ೧೦ ರೂ ಜುಲ್ಮಾನೆ [illegible]

ಅಮೆರಿಕಾ ಪ್ರವಾಸದಿಂದ ವಾಪಸು

[illegible] ಶ್ರೀ ಟಿ ಆರ್ [illegible] ಮುದ್ರಣ ಯು ಎಸ್ ಐ ಎಸ್ ಪುಸ್ತಕ ಭಂಡಾರದ [illegible] ಶ್ರೀ ಎಂ [illegible] ಫುಲ್ ಬ್ರೈಟ್ ಪ್ರವಾಸಿ ವೇತನ ಪಡೆದು ಅಮೆರಿಕಕ್ಕೆ ಒಂದು ವರ್ಷದ ಹಿಂದೆ ಹೋಗಿದ್ದರು [illegible] ಯಶಸ್ವಿಯಾಗಿ ಮುಗಿಸಿಕೊಂಡು [illegible] ಬಂದರು

ಮೈಸೂರಿನಲ್ಲಿ ಸಕ್ಕರೆ ಉತ್ಪನ್ನವನ್ನು ದ್ವಿಗುಣಗೊಳಿಸುವ ಯೋಜನೆ

ಮೈಸೂರು ಸಂಸ್ಥಾನದಲ್ಲಿ ಸಕ್ಕರೆ ಉತ್ಪನ್ನವನ್ನು ದ್ವಿಗುಣಗೊಳಿಸಲು ಕಬ್ಬಿನ [illegible] ಪ್ರದೇಶವನ್ನು ಹೆಚ್ಚಿಸುವ ಬಗ್ಗೆ ಸಂಸ್ಥಾನ ಸರ್ಕಾರದವರು ಮಂಡಿಸಿರುವ ಯೋಜನೆಯನ್ನು ಕೇಂದ್ರ ಸರ್ಕಾರದವರು ಅಂಗೀಕರಿಸಿರುವರೆಂದು ಗೊತ್ತಾಗಿದೆ

ಮಹಾವೀರ ಜಯಂತಿ

ಮೈಸೂರು ಜೈನ ಸಂಘದವರು [illegible] ಶ್ರೀ ಮಹಾವೀರರ ಜಯಂತ್ಯುತ್ಸವವನ್ನು [illegible] ಸಭೆಯೊಂದು [illegible] ಶ್ರೀ [illegible] ಲಕ್ಷ್ಮಣಶೆಟ್ಟಿ [illegible] ಶ್ರೀ [illegible] ಸ್ವಾಮಿ [illegible] ಭಾಷಣ ಮಾಡುವರು

ವಿವಾಹಕ್ಕಾಗಿ ಹೊರಟ ವಧುವಿಗೆ ವಿಷಾದಾಂತ

[illegible] ತನ್ನ ವಿವಾಹಕ್ಕಾಗಿ ಮೋಟಾರ್ ಸೈಕಲ್ಲಿನಲ್ಲಿ ಹೊರಟ [illegible] ತುಂಗಭದ್ರಾ ನದಿಗೆ [illegible] ಬಿದ್ದ [illegible] ಆಸ್ಪತ್ರೆಗೆ [illegible] ಪ್ರಥಮ ಚಿಕಿತ್ಸೆ ನಡೆಸಲಾಯಿತು

೫ ಲಕ್ಷ ರೂ. ಐಶ್ವರ್ಯದ ಮೇಲೆ ಶೇಕಡ ೧೫ ರಂತೆ ತೆರಿಗೆ

೫ ಲಕ್ಷಕ್ಕೆ ಹೆಚ್ಚಿರುವ ಆಸ್ತಿ ಮೇಲೆ [illegible] ಶೇಕಡ ೧೫ ರಂತೆ ತೆರಿಗೆಯನ್ನು [illegible] ಭಾರತದ ಹಣಕಾಸಿನ ಮಂತ್ರಿ [illegible] ಬ್ರಿಟಿಷ್ ಆರ್ಥಿಕ ಪ್ರವೀಣ [illegible] [illegible] ೭,೦೦೦ ರೂ [illegible] ತೆರಿಗೆ [illegible]

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಭಾವಚಿತ್ರಗಳ ಅನಾವರಣ

ನಂಜನಗೂಡು ೨೧

ಇಲ್ಲಿನ ಪುರಸಭೆಯ ಮಾಜಿ ಅಧ್ಯಕ್ಷರುಗಳಾದ ಶ್ರೀಗಳು ಕೆ ವಿಶ್ವೇಶ್ವರಗೌಡ, ಎ ವಿ ಕೃಷ್ಣ [illegible] ಎಲ್ ಸಿ ಸಂಪತ್, ಎಸ್ ಕೆ ಮರಿತೋಂಟದಪ್ಪ ಮತ್ತು ಉಪಾಧ್ಯಕ್ಷರಾದ ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರ ಭಾವಚಿತ್ರಗಳ ಅನಾವರಣವನ್ನು [illegible] ಶ್ರೀ ಎಂ ಕೆ ಅಪ್ಪಾಜಪ್ಪನವರು ನೆನ್ನೆ ಸಂಜೆ [illegible] ಅಧ್ಯಕ್ಷತೆ ವಹಿಸಿದ್ದರು [illegible] ಕಾರ್ಯಾಲಯದಲ್ಲಿ [illegible]

[illegible] ಶ್ರೀ ಎಸ್ ಕೆ [illegible] ಸ್ವಾಗತ [illegible] ನಗರದ ಅಭಿವೃದ್ಧಿಗೆ [illegible]

ಶ್ರೀ ಎಂ ಕೆ ಅಪ್ಪಾಜಪ್ಪನವರು [illegible]

ಉಪಾಧ್ಯಕ್ಷರಾದ ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರಿಂದ ವಂದನಾರ್ಪಣೆಯಾದನಂತರ [illegible] ಸಮಾರಂಭವು ಮುಕ್ತಾಯವಾಯಿತು

ಪೋರ್ಚುಗೀಸ್ ಮಂತ್ರಿಯೊಡನೆ ಸುಹ್ರಾವರ್ದಿ ಭೇಟಿ

ಪಾಕಿಸ್ತಾನದ [illegible] ನಾಯಕರಾದ ಹೆಚ್ ಎಸ್ ಸುಹ್ರಾವರ್ದಿಯವರು [illegible] ಭೇಟಿ ಮಾಡಿ [illegible] ವರದಿಯಾಗಿದೆ

" ಅವರ್ಸ್ ಈಸ್ ಎ ಫ್ಯಾಮಿಲಿ " ಪುಸ್ತಕ

ಭಾರತದ ಕೃಷಿಯ [illegible] ೧೦ ಲಕ್ಷ ಕೃಷಿ [illegible] ಕುಟುಂಬವರಿಂದ [illegible] ಕೃಷಿ [illegible] ೧೦ ಲಕ್ಷ [illegible] ಗ್ರಂಥಗಳನ್ನು [illegible] ಭಾರತದ ಕೃಷಿಯು [illegible]

ರಾಮೋತ್ಸವದ ಕಾರ್ಯಕ್ರಮಗಳು

[illegible] ದೇವಸ್ಥಾನದಲ್ಲಿ [illegible] ಗಂಟೆಗೆ [illegible] ಪ್ರಭಾಕರ್‌ರವರ [illegible] ಸುಬ್ರಹ್ಮಣ್ಯದೇವರ್‌ರವರ [illegible] ದಂಗದೊಡನೆ ನಡೆಯುತ್ತವೆ

[illegible] ಶ್ರೀ ರಾಮ [illegible] ಸಂಗೀತವು [illegible] ಚಂದ್ರಶೇಖರಪ್ಪನವರ ಮೃದಂಗ ಮತ್ತು [illegible] ಪಿಟೀಲಿನೊಡನೆ ಏರ್ಪಾಡಾಗಿದೆ

ಹಳೇ ಅಗ್ರಹಾರದ ಶ್ರೀ [illegible] ಬೀದಿಯಲ್ಲಿರುವ ಶ್ರೀ [illegible] ರಾಮ ಮಂದಿರದಲ್ಲಿ ಈ ದಿನ [illegible] ಶ್ರೀ ಬಿ ವೆಂಕ [illegible] "ಶ್ರೀ ರಾಮ ಮಹಿಮೆ" ಎಂಬ ವಿಷಯದ [illegible] ಏರ್ಪಡಿಸಲಾಗಿದೆ

[illegible] ಶ್ರೀ ಸಿ ಜಿ ಶ್ರೀಕಂಠಯ್ಯನವರ ಮನೆಯಲ್ಲಿ [illegible] ಮೊನ್ನೆಯಿಂದ [illegible]

ಎಸ್ಟೆ ಸಂಶೋಧನಾ ಕಾರ್ಯಕ್ಕಾಗಿ ೩೦ ಕೋಟಿ ರೂ.

ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ [illegible] ಉತ್ತರ ಪ್ರದೇಶ ಮತ್ತು [illegible] ಎಸ್ಟೆ ಸಂಶೋಧನಾ ಕಾರ್ಯಕ್ಕಾಗಿ ೩೦ ಕೋಟಿ ರೂ [illegible] ಮಂಜೂರು ಮಾಡಲು [illegible] ತೀರ್ಮಾನಿಸಿರುವರೆಂದು ಗೊತ್ತಾಗಿದೆ

ಕಲ್ಕತ್ತಾ ರೇವಿನಲ್ಲಿ ಜರೂರು ಪರಿಸ್ಥಿತಿ

ಕಲ್ಕತ್ತದ ರೇವಿನಲ್ಲಿರುವ ೧೬,೦೦೦ ಕಾರ್ಮಿಕರ [illegible] ಮುಷ್ಕರ ಹೂಡಿರುವ [illegible] ಆ ಪ್ರದೇಶದಲ್ಲಿ ಜರೂರು ಪರಿಸ್ಥಿತಿಯನ್ನು ಘೋಷಿಸಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮನೆ ಬಿಕರಿಗಿದೆ

ನರಸಿಂಹರಾಜ ಮೊಹಲ್ಲೆಯ [illegible] ರೋಡ್ 5ನೇ ಕ್ರಾಸಿನಲ್ಲಿ 4563ನೇ ನಂ ಮನೆ ಇದರಲ್ಲಿ 5 ರೂಮುಗಳೂ, 12 ದೀಪಗಳೂ [illegible] ಇದೆ [illegible]

ಶಿವಪ್ಪ, [illegible]

ಫ್ರಾನ್ಸ್-ಯುಗೊಸ್ಲೇವಿಯಗಳಿಗೆ ನೆಹರೂ ಭೇಟಿ

ಪ್ರಧಾನಿ ನೆಹರೂರವರು ಬರುವ ಜುಲೈ [illegible] ಗಳು ೭ನೇ ತಾರೀಖು ಫ್ರಾನ್ಸಿಗೂ, ಅದೇ [illegible] ಯುಗೊಸ್ಲಾವಿಯಕ್ಕೂ ಭೇಟಿ ಕೊಡುವರೆಂದು ವರದಿಯಾಗಿದೆ

ಅಜರ್‌ಬೈಜಾನಿನಲ್ಲಿ ಭಾರತೀಯ ದೇವಾಲಯ

ರಷ್ಯದ ಅಜರ್‌ಬೈಜಾನಿನ ರಾಜಧಾನಿ [illegible] ಅರಣ್ಯದಲ್ಲಿ ಭಾರತೀಯ ದೇವಾಲಯವಿರುವುದೆಂಬ ಬಗ್ಗೆ ಭಾರತ [illegible] ನೆಹರೂರವರು ತಿಳಿಸಿರುತ್ತಾರೆ

ಭಾರತದಲ್ಲಿ ಕೃತಕ ವಿದ್ಯುತ್ ಗಾಡಿಗಳ ತಯಾರಿಕೆ

ಭಾರತ ಮತ್ತು ಜಪಾನಿನ [illegible] ಆಶ್ರಯದಲ್ಲಿ ಜಪಾನಿನ ಸಂಸ್ಥೆಯೊಂದು ಭಾರತದಲ್ಲಿ ವಿದ್ಯುಚ್ಛಕ್ತಿಯ ರೈಲು ಗಾಡಿಗಳನ್ನು ತಯಾರಿಸಲು ಮುಂದೆ ಬಂದಿರುವುದಾಗಿ ವರದಿಯಾಗಿದೆ

ವಿವಾಹ ಮಹೋತ್ಸವಗಳು

ಜಿಲ್ಲಾ [illegible] ಶ್ರೀ ಎಂ ಎಸ್ [illegible] ಶ್ರೀ ಎಂ ಆರ್ ಸುಂದರರಾಜ [illegible] ಎಂ ಎಸ್ ವಾಸುದೇವ [illegible] ಬೆಂಗಳೂರು ವ್ಯವಸಾಯ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ ಎಸ್ ವೆಂಕಟರಾವ್ [illegible] ಪ್ರಭಾಮಣಿಯನ್ನು [illegible] ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು [illegible]

ಹಾಸನದ ಶ್ರೀ ಎಸ್ ಎಂ. [illegible] ಪ್ರಥಮ ಕುಮಾರ ಶ್ರೀ [illegible] ಆರ್ [illegible] ಶೃಂಗೇರಿಯ ಕೊಟೆ [illegible] ದ್ವಿತೀಯ [illegible] ಗಿರಿಜಾದೇವಿಯನ್ನು [illegible] ವಿವಾಹವನ್ನು ಜರುಗಿಸಿದರು

ಮೈಸೂರು ಪೇಟೆ ಧಾರಣೆ

	[illegible]	[illegible]	[illegible]
[illegible]	[illegible]		[illegible]
[illegible]	[illegible]		[illegible]
[illegible]	[illegible]		[illegible]
[illegible]	[illegible]		[illegible]
[illegible]	[illegible]		
ಅವರೆ	[illegible]		[illegible]
[illegible]	[illegible]		
[illegible]	[illegible]		
[illegible]	[illegible]		[illegible]
[illegible]	[illegible]		[illegible]
[illegible]	[illegible]		[illegible]
[illegible]	[illegible]		[illegible]
ತೆಂಗಿನಕಾಯಿ	[illegible]		[illegible]

ರಣಜಿತ್ ★ 22 4-56

ಮಿಸ್ ಮಾ[illegible]

Edited, Printed and Publishe[d by]
A. R. Nagarajan at Sadhvi [illegible]
D. Subbiah Road, Mysore

ಶಂಕರ್ ಬ್ರದರ್ಸ್ ಸ್ಟುಡಿಯೋ

([illegible])

ಧನ್ವಂತರಿ ರಸ್ತೆ, ಮೈಸೂರು

22-4-56 ನೇ ಭಾನುವಾರದಿಂದ ಆರಂಭ

[illegible] 6 ಘಂಟೆಯ ಒಳ 8 ಘಂಟೆವರೆಗೆ [illegible]

ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಅನೋಘ ಸಂಗೀತ ಕಛೇರಿ

2-4-1956 ನೇ ಭಾನುವಾರ ಸಂಜೆ 6 ಘಂಟೆಗೆ [illegible]

ಟಿಕೆಟ್ ದರ: ರೂ 2-0 0

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

21-4-56ರಿಂದ : ಅನೋಘ 5ನೇ ವಾರ : ಪ್ರತಿ ದಿನ 3 ಆಟಗ[ಳು]

ಶ್ರೀ ರೇಣುಕಾ ಮಹಾ[ತ್ಮೆ]

(ಎಲ್ಲಮ್ಮನ ಕಥಾ)

ಪಾತ್ರ :- ಆರ್ ನಾಗೇಂದ್ರರಾವ್, ಪಂಡರಿಬಾಯಿ, ನರಸಿಂಹರಾಜು, ಲಕ್ಷ್ಮಿ, ಕಾಶಿನಾಥ್, ಜಯಲಕ್ಷ್ಮಿ, [illegible], ಬೇಬಿ ಉಮಾ

ರಿಜಿಸ್ಟರ್ಡ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಪುಟ : ೧೯] SADHVI : SUNDAY 22-4-1956 ಮೈಸೂರು ಭಾನುವಾರ : ೨೨-೪-೧೯೫೬ [ಸಂಚಿಕೆ : ೨೪೦

ಅಂದಿನ ಪತ್ರಿಕೆ ಕಾಸು

ಲಗ್ನದ ಜವಳಿ
ಗ್ಯಾರಂಟಿ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರ್ಣಿ, ಬೆಂಗಳೂರ್
ರೇಷ್ಮೆ ಮತ್ತು ಜರಿ ಸೀರೆಗಳು
ಬಂದಿವೆ ಬಂದು ನೋಡಿ
M.V. ಭೋಜಯ್ಯ
ಅಂಡ್ ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಜಪಾನಿನ ಪಾರ್ಲಿಮೆಂಟ್ ಸದಸ್ಯರುಗಳಲ್ಲಿ ಹೊಡೆದಾಟ

ಪ್ರೌಢಶಾಲೆಗಳಲ್ಲಿ ಪ್ರತಿನಿತ್ಯ ೧½ ಘಂಟೆ ಕವಾಯತು

ರಾಜ್ಯ ಸರ್ಕಾರಗಳಿಗೆ ಪ್ರೌಢಶಾಲಾ ಶಿಕ್ಷಣ ವಿಚಾರ ಗೋಷ್ಠಿಯ ಸಲಹೆ

ಮೈಸೂರು ೨೨

ಪ್ರೌಢಶಾಲೆಗಳ ಒಳ ಕಲಿಕೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಶೀಲಿಸಲು ಇಲ್ಲಿನ ಟೀಚರ್ಸ್ ಕಾಲೇಜಿನ ವಿಸ್ತರಣಾ ಸೇವಾ ವಿಭಾಗವು ಏರ್ಪಡಿಸಿ ನಡೆಸುತ್ತಿರುವ ವಿಚಾರ ಗೋಷ್ಠಿಯವರು ಪ್ರೌಢಶಾಲೆಗಳಲ್ಲಿ ಕಲಿಯುವ ಹುಡುಗರು ದಿನವೂ ಒಂದು ಘಂಟೆ ಕಾಲ ವ್ಯಾಯಾಮಗಳನ್ನು ಮತ್ತು ಪ್ರತಿನಿತ್ಯವೂ ಅರ್ಧ ಘಂಟೆ ಕವಾಯತನ್ನು ನಡೆಸಬೇಕೆಂದು ರಾಜ್ಯ ಸರ್ಕಾರಗಳಿಗೆ ಸಲಹೆ ಮಾಡಿರುವರು.

ಪ್ರೌಢಶಾಲೆಗಳು ಪ್ರತಿನಿತ್ಯ ಬೆಳಿಗ್ಗೆ ೧೦-೩೦ಕ್ಕೆ ಆರಂಭವಾಗಿ ೧೦ ನಿಮಿಷಗಳ ಸಾಮೂಹಿಕ ಸಮಾವೇಶ ಮತ್ತು ಪ್ರಾರ್ಥನೆಗಳನ್ನು ನಡೆಸಬೇಕೆಂದೂ, ಶಿಕ್ಷಕರಿಗೆ ವಾರಕ್ಕೆ ೩೦ ಪೀರಿಯಡ್ಡುಗಳಿಗಿಂತ ಹೆಚ್ಚು ಕೆಲಸವಿರಕೂಡದೆಂದೂ ಒಂದೊಂದು ತರಗತಿಯಲ್ಲಿ ೪೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರಬಾರದೆಂದೂ ಸಲಹೆ ಮಾಡಲಾಗಿದೆ. ಗೋಷ್ಠಿಯು ಇದೇ ೨೫ರಂದು ಮುಕ್ತಾಯವಾಗುವುದು.

ಹನುಮಂತೋತ್ಸವ-ಹರಿಕಥೆ

ಗೀತಾ ರಸ್ತೆಯಲ್ಲಿರುವ ಶ್ರೀ ಕೃಷ್ಣ ನಿಕೇತನ ನ್ಯಾಯ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಬಾಲಕ ಸೀತಾರಾಮ ಮಂದಿರದ ಆಶ್ರಯದಲ್ಲಿ ಇಂದಿನ ಸಂಜೆ ೭ ಘಂಟೆಗೆ ಹನುಮಂತೋತ್ಸವದ ಪ್ರಯುಕ್ತ ಮಿ॥ ಎಸ್. ಟಿ. ರಾಮಣ್ಣನವರಿಂದ [illegible] ಹರಿಕಥೆಯು ನಡೆಯುವುದು.

ಸಂಗೀತ ಕಛೇರಿ

ಸಂತೆಪೇಟೆ ಕುಂಬಾರಗೇರಿ ಶ್ರೀ ರಾಮ ಮಂದಿರದಲ್ಲಿ ಇಂದು ಸಂಜೆ ೬-೩೦ಕ್ಕೆ ಮಿ॥ ವಿ॥ [illegible] ಅವರ ಸಂಗೀತವು ಮಿ॥ ವಿ॥ [illegible] ಪಿಟೀಲು ಮತ್ತು ಮಿ॥ ವಿ॥ [illegible] ಮೃದಂಗದೊಡನೆ ಏರ್ಪಾಡಾಗಿದೆ.

[illegible] ಉಪನ್ಯಾಸ

ವಿದ್ಯೋದ್ಯಾನದ [illegible] ಶ್ರೀ ರಾಮ ಮಂದಿರದಲ್ಲಿ ಇಂದು ರಾತ್ರಿ ೮-೩೦ ಘಂಟೆಗೆ [illegible] ಶ್ರೀ [illegible] ಉಪನ್ಯಾಸವನ್ನೇರ್ಪಡಿಸಿದೆ.

ಅಮೇರಿಕದವರಿಗೆ ಲುಂಗಿ ಪಂಚೆ ಉಡುವ ವ್ಯಾಮೋಹ

ದಕ್ಷಿಣ ಭಾರತದಲ್ಲಿ ತಯಾರಾಗುವ ಕೈಮಗ್ಗ [illegible] ಗಳ ಬಗ್ಗೆ ಅಮೇರಿಕದ ಜನರಿಗೆ ಬಹಳ ವ್ಯಾಮೋಹವುಂಟಾಗಿ ಅಲ್ಲಿ ಅದಕ್ಕೆ ಹೆಚ್ಚಿನ ಗಿರಾಕಿ ಬರುತ್ತಿದ್ದಾಗಿಯೂ, ಈ ಸಾಲಿನಲ್ಲಿ [illegible] ಗಜ ಲುಂಗಿ ಬಟ್ಟೆಯನ್ನು ಅಮೇರಿಕದ [illegible] ಕೊಳ್ಳುವುದೆಂದೂ ಗೊತ್ತಾಗಿದೆ. [illegible] ೧॥ ಲಕ್ಷ ಗಜ ಲುಂಗಿ ಬಟ್ಟೆಗೆ ಆರ್ಡರ್ ಕೊಡಲಾಗಿರುವುದೆಂದೂ ವರದಿಯಾಗಿದೆ.

ಜಪಾನ್ ಪಾರ್ಲಿಮೆಂಟ್ ಸದಸ್ಯರಲ್ಲಿ ಹೊಡೆದಾಟ

ಶಿಕ್ಷಣ ಕಾನೂನಿನ ಬಗ್ಗೆ ಜಪಾನ್ ಪಾರ್ಲಿಮೆಂಟ್ ಸದಸ್ಯರಲ್ಲಿ ವಿವಾದವೆದ್ದು ಸದಸ್ಯರುಗಳು ಹೊಡೆದಾಡಿದರೆಂದು ವರದಿಯಾಗಿದೆ. ಹೊಡೆದಾಟ [illegible] ವಾಗ್ವಾದದ ಆರಂಭದ [illegible] ಸೋಷಲಿಸ್ಟರು [illegible] ಮಾಡಿ [illegible] ಸೋಷಲಿಸ್ಟರು [illegible] ಗಳನ್ನು [illegible] ಪಾರ್ಲಿಮೆಂಟಿನ [illegible] ಕ್ಕಾಗಿದೆ.

ಬಂಗಾಳ ಬಿಹಾರಗಳ ವಿಲೀನದ ಪ್ರತಿಭಟನೆಗೆ ಪಾದಯಾತ್ರೆ

ಬಿಹಾರ ಮತ್ತು ಪಶ್ಚಿಮ ಬಂಗಾಳಗಳ ವಿಲೀನವನ್ನು ವಿರೋಧಿಸುವ ಸಲುವಾಗಿ ಮಾನ್‌ಭೂಮ್ ಲೋಕ ಸೇವಕ ಸಂಘದ [illegible] ಸ್ವಯಂಸೇವಕರು ಏಪ್ರಿಲ್ ೨೦ರಂದು ಕಲ್ಕತ್ತಾಕ್ಕೆ ಕಾಲು ನಡಿಗೆಯಲ್ಲಿ ಹೊರಟು ಪಶ್ಚಿಮ ಬಂಗಾಳದ ಗಡಿಯನ್ನು [illegible] ಪ್ರವೇಶಿಸಿದರೆಂದು ವರದಿಯಾಗಿದೆ. ಅವರು ಬರುವ ತಿಂಗಳು ೬ನೇ ತಾರೀಖು ಕಲ್ಕತ್ತಾವನ್ನು ತಲುಪಿ ಅಲ್ಲಿ ಪ್ರತಿಭಟನಾ ಪ್ರದರ್ಶನ ನಡೆಸುವರೆಂದು ಹೇಳಲಾಗಿದೆ.

ಅಮೇರಿಕದ ಜಲಜನಕ ಬಾಂಬ್ ಪರೀಕ್ಷೆ ಮುಂದಕ್ಕೆ

ಬರುವ ತಿಂಗಳು ೧ನೇ ತಾರೀಖು ಅಮೇರಿಕದವರು ಶಾಂತ ಸಾಗರದಲ್ಲಿ ನಡೆಸಲು ಏರ್ಪಡಿಸಿರುವ ಜಲಜನಕ ಬಾಂಬ್ ಪ್ರಯೋಗ ಪರೀಕ್ಷೆಯನ್ನು ಒಂದು ವಾರ ಕಾಲ ಮುಂದುವರಿಸಲಾಗಿರುವುದೆಂದೂ, ಪ್ರಯೋಗಕ್ಕೆ ಬೇಕಾದ ಹವಾ [illegible] ವ್ಯವಸ್ಥೆಗಳು ಸಜ್ಜಾಗುತ್ತಿರುವ ತಡವೇ ಇದಕ್ಕೆ ಕಾರಣವೆಂದೂ ಗೊತ್ತಾಗಿದೆ.

ಭದ್ರಾಚಲದಲ್ಲಿ ಉಷ್ಣಾಧಿಕ್ಯದಿಂದ ೪ ಮರಣ

ಕಳೆದ ೬ ಘಂಟೆ ಭದ್ರಾಚಲದಲ್ಲಿ ಉಷ್ಣಾಂಶ [illegible] ಡಿಗ್ರಿಗಳಷ್ಟಿದ್ದು ವಿಪರೀತ ಬಿಸಿಲಿನ [illegible] ವಾಗಿ ೪ ಜನರು ಮಡಿದರೆಂದು ವರದಿಯಾಗಿದೆ.

ವಿಶ್ವಸಂಸ್ಥೆಯಲ್ಲಿ ವೀಟೋ ಪ್ರಯೋಗದ ನಿಷೇಧಕ್ಕೆ ಸಲಹೆ

ವಿಶ್ವಸಂಸ್ಥೆಗೆ ಹೊಸ ಸದಸ್ಯರನ್ನು ಸೇರಿಸಿಕೊಳ್ಳುವಾಗಲೂ ಮತ್ತು ವ್ಯವಹಾರಗಳನ್ನು ಶಾಂತಿಯುತವಾಗಿ ಇತ್ಯರ್ಥ ಪಡಿಸುವಾಗಲೂ ಭದ್ರತಾ ಸಮಿತಿಯಲ್ಲಿ ವೀಟೋ ಅಧಿಕಾರ ಚಲಾಯಿಸುವುದನ್ನು ರದ್ದು ಮಾಡಬೇಕೆಂದು ಅಮೇರಿಕದ ಸೆನೆಟ್ಟಿನ ಉಪ ಸಮಿತಿಯೊಂದು ಶಿಫಾರಸು ಮಾಡಿರುವುದಾಗಿ ಗೊತ್ತಾಗಿದೆ. ಪ್ರಜಾ ಚೀನಕ್ಕೆ ವಿಶ್ವಸಂಸ್ಥೆಯ ಸದಸ್ಯತ್ವ ಕೊಡುವ ಬಗ್ಗೆ ಮೇಲ್ಕಂಡ ಉಪ ಸಮಿತಿಯು ತೀವ್ರವಾಗಿ ಆಕ್ಷೇಪಿಸಿದೆ.

ಚಿನ್ನದ ಗಣಿ ಕಂಪನಿಗೆ ೮೦ ಲಕ್ಷ ರೂ. ಪರಿಹಾರ

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಸಂಬಂಧದಲ್ಲಿ ಮೈಸೂರು ಸರ್ಕಾರದವರು ಕಂಪೆನಿಯವರಿಗೆ ೮೦ ಲಕ್ಷ ರೂ ಗಳ ಪರಿಹಾರ ಕೊಡಲು ಮುಂದೆ ಬಂದಿರುವರೆಂದು ಗೊತ್ತಾಗಿದೆ. ಕಂಪೆನಿಯ ಡೈರೆಕ್ಟರುಗಳು [illegible] ಪರಿಹಾರ ಕೇಳಿದ್ದು ಈಗ ಅದನ್ನು ಎರಡು ಕೋಟಿಗೆ ಇಳಿಸಿರುವರೆಂದೂ, ಕೇಂದ್ರ ಸರ್ಕಾರದವರು ಸಂಸ್ಥಾನದ ಮುಖ್ಯಮಂತ್ರಿಯವರೊಡನೆ [illegible] ಮಾತುಕತೆ [illegible] ಪರಿಹಾರ ಕೊಡುವ ಬಗ್ಗೆ [illegible] ಕಲಾಗಿದೆ.

ಸಿಂಹಳದ ರಿಪಬ್ಲಿಕ್ ಸ್ಥಾಪನೆಗೆ ನೆಹರೂರೊಡನೆ ಮಾತುಕತೆ

ಸಿಂಹಳದ ನೂತನ ಪ್ರಧಾನಿ ಬಂಡಾರನಾಯಕೆಯವರು ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನಕ್ಕಾಗಿ ಬ್ರಿಟನ್ನಿಗೆ ಹೋಗುವ ಮೊದಲು, ಸಿಂಹಳದಲ್ಲಿ ಬ್ರಿಟಿಷ್ ವಿಮಾನ ನೆಲೆಗಳ ವಿಷಯವನ್ನು ಪ್ರಸ್ತಾಪಿಸುವರೆಂದೂ, ಅದೇ ಸಮಯದಲ್ಲಿ ಭಾರತದ ಪ್ರಧಾನಿ ನೆಹರೂರವರನ್ನೂ ಭೇಟಿ ಮಾಡಿ ಸಿಂಹಳದ ಡೊಮಿನಿಯನ್ ಸ್ಥಾನವನ್ನು ರಿಪಬ್ಲಿಕ್ಕಾಗಿ ಪರಿವರ್ತಿಸುವ ಬಗ್ಗೆ ಅವರೊಡನೆ ವಿಚಾರ ವಿನಿಮಯ ಮಾಡುವರೆಂದೂ ಗೊತ್ತಾಗಿದೆ.

ಕೊಡಲಿಯಿಂದ ಹೊಡೆದು ಏಕಕಾಲದಲ್ಲಿ ೩ ಹುಲಿಗಳ ಕೊಲೆ

ಮಾಯಕೊಂಡದ ಎಲ್. ಬಾವಿಹಾಳು ಗ್ರಾಮದ ಮಲ್ಲಪ್ಪ ಎಂಬಾತನು ತೋಟದ ಹಾಳುಗುಡ್ಡದಲ್ಲಿ ಹುಲಿಯ ಬಾಯಿಗೆ ತುತ್ತಾದ ಹಸುವೊಂದನ್ನು ಪರೀಕ್ಷಿಸುತ್ತಿದ್ದಾಗ ನಾಲ್ಕು ಅಡಿ ಎತ್ತರದ ಹುಲಿಯೊಂದು ಅವನ ಮೇಲೆ ಬೀಳಲು ನೋಡಲೇ ಅವನು ತನ್ನ ಕೈಯಲ್ಲಿದ್ದ ಕೊಡಲಿಯಿಂದ ಹುಲಿಯ ತಲೆ ಮತ್ತು ಮೈಮೇಲೆ ಹೊಡೆದು ಅದು ಕೆಳಗೆ ಬಿದ್ದಿತೆಂದೂ, ಇಷ್ಟರಲ್ಲಿ ಪಕ್ಕದ ಪೊದೆಯಿಂದ ಇನ್ನೆರಡು ಹುಲಿಗಳು ಅವನ ಮೇಲೆ ಹಾರಿದಾಗ ಅವುಗಳನ್ನೂ ಅವನು ಕೈಯಲ್ಲಿದ್ದ ಕೊಡಲಿಯಿಂದಲೇ ಕೊಂದನೆಂದೂ, ಗ್ರಾಮಸ್ಥರು ಅವನ ನೆರವಿಗೆ ಬಂದರೆಂದೂ ವರದಿಯಾಗಿದೆ. ಅನಂತರ ಮಲ್ಲಪ್ಪನನ್ನು ಸತ್ತ ಹುಲಿಗಳ ಸಮೇತ ಮಾಯಕೊಂಡ ಮತ್ತು ಬಾವಿಹಾಳು ಗ್ರಾಮಗಳಲ್ಲಿ ಮೆರವಣಿಗೆ ಮಾಡಲಾಯಿತು.

ವೆಚ್ಚದ ಮೇಲೂ ತೆರಿಗೆ ವಿಧಿಸಲು ಆಲೋಚನೆ

ಭಾರತದ ದ್ವಿತೀಯ ಪಂಚ ವಾರ್ಷಿಕ ಯೋಜನೆಗಳನ್ನು ಕಾರ್ಯಗತ ಮಾಡಲು ದೇಶದಲ್ಲಿ ವೆಚ್ಚದ ಮೇಲೂ ತೆರಿಗೆಯನ್ನು ವಿಧಿಸುವ ವಿಷಯವನ್ನು ಪರಿಶೀಲಿಸಲಾಗುವುದೆಂದು ಅರ್ಥ ಸಚಿವ ದೇಶಮುಖ್‌ರವರು [illegible] ೧೯೫೬-೫೭ನೇ ಸಾಲಿನ ತೆರಿಗೆ ಸಲಹೆಗಳಿಂದ ಕೂಡಿದ ಹಣಕಾಸಿನ ಮಸೂದೆಯನ್ನು ನೆನ್ನೆ ಲೋಕಸಭೆಯು ಅಂಗೀಕರಿಸಿತು.

ಈಜಿಪ್ಟ್, ಸೌದಿ ಅರೇಬಿಯಾ, ಯೆಮೆನ್‌ಗಳ ಮಿಲಿಟರಿ ಒಪ್ಪಂದ

ಅರಬ್ ರಾಷ್ಟ್ರಗಳಾದ ಈಜಿಪ್ಟ್, ಸೌದಿ ಅರೇಬಿಯಾ ಮತ್ತು ಯೆಮೆನ್‌ಗಳು ಜಂಟಿ ಮಿಲಿಟರಿ ಒಪ್ಪಂದವನ್ನು ಮಾಡಿಕೊಂಡಿವೆಯೆಂದೂ, ಸೌದಿ ಅರೇಬಿಯದ ದೊರೆ ಇಬ್ನ್ ಸೌದ್, ಯೆಮೆನ್ ದೊರೆ ಇಮಾಂ ಅಹಮದ್ ಮತ್ತು ಈಜಿಪ್ಟಿನ ಪ್ರಧಾನಿ ನಾಸರ್‌ರವರು ಅದಕ್ಕೆ ರುಜು ಹಾಕಿರುವರೆಂದೂ ವರದಿಯಾಗಿದೆ. ಈಜಿಪ್ಟ್, ಸಿರಿಯಾ ಮತ್ತು ಸೌದಿ ಅರೇಬಿಯಾಗಳು ಈಗಾಗಲೇ ಪ್ರತ್ಯೇಕ ಪ್ರತ್ಯೇಕವಾದ ಪರಸ್ಪರ ರಕ್ಷಣಾ ಒಪ್ಪಂದಗಳನ್ನು ಮಾಡಿಕೊಂಡಿರುತ್ತವೆ.

ಅಲ್ಜೀರಿಯದಲ್ಲಿ ಮತ್ತೆ ೧೪೯ ಜನರ ಕೊಲೆ

ಅಲ್ಜೀರಿಯದ ಈಶಾನ್ಯ ಭಾಗದ ಅನೇಕ ಪ್ರದೇಶಗಳಲ್ಲಿ ನೆನ್ನೆ ಮೂರು ಸಲ ಫ್ರೆಂಚ್ ಸೈನ್ಯಗಳಿಗೂ, ದಂಗೆಕೋರರಿಗೂ ಪ್ರಬಲವಾದ ಕಾಳಗಗಳು ನಡೆದು, ಸುಮಾರು ೧೪೯ ಮಂದಿ ದಂಗೆಕೋರರು ಮಡಿದಿರುವರೆಂದು ಊಹಿಸಲಾಗಿದೆ.

೩೬೦ ಗಂಟೆ ಭೂ ಸಮಾಧಿಗಾಗಿ ಫ್ರೆಂಚ್ ಫಕೀರನ ಪ್ರಯತ್ನ

ಈಗಿರುವ ವಿಶ್ವ ರಿಕಾರ್ಡನ್ನು ಮುರಿಯುವುದಕ್ಕಾಗಿ ೩೬೦ ಗಂಟೆಗಳ ಸಜೀವ ಸಮಾಧಿಯಲ್ಲಿರಲು ಫ್ರಾನ್ಸಿನ ಫಕೀರನಾದ ಯುವಾನ್ ವೈಜಾವಲು ಕಳೆದ ಗುರುವಾರ ಸಂಜೆ ಭೂಮಿಯೊಳಕ್ಕೆ ಪ್ರವೇಶಿಸಿದನು. ಮರದ ಪೆಟ್ಟಿಗೆಯೊಂದರಲ್ಲಿ ಅವನು ಮಲಗಿದನಂತರ ಅದನ್ನು ಭೂಮಿಯೊಳಗಿರಿಸಿ ಮಣ್ಣು ಮುಚ್ಚಲಾಯಿತು.

ಗೋವಾ ವಿದ್ಯಾರ್ಥಿಗಳಿಗೆ ಕರಾಚಿ ವಿದ್ಯಾ ಇಲಾಖೆ ಪರೀಕ್ಷೆ

ಗೋವಾದ ವಿದ್ಯಾರ್ಥಿಗಳಿಗಾಗಿ ಕರಾಚಿಯು ಎಸ್. ಎಸ್. ಸಿ. ಬೋರ್ಡ್ ಪರೀಕ್ಷೆಗಳನ್ನು ಗೋವಾದಲ್ಲಿ ಶೀಘ್ರದಲ್ಲೇ ನಡೆಸಲಿದೆಯೆಂದು ಗೊತ್ತಾಗಿದೆ. ಪರೀಕ್ಷೆಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ೪೦ ರೂ ಗಳನ್ನು ಖರ್ಚು ಮಾಡಬೇಕಾಗುವುದು.

ಬೊಂಬಾಯಿ ರೇವು ಕಾರ್ಮಿಕರ ಮುಷ್ಕರದ ಮುಕ್ತಾಯ

ಬೊಂಬಾಯಿ ಬಂದರು ಕೆಲಸಗಾರರು ತಮ್ಮ ಸಂಬಳ ಮತ್ತು ರಜಾ ನಿಯಮಗಳ ಸಂಬಂಧವಾಗಿ ಹತ್ತು ದಿನಗಳಿಂದ ಹೂಡಿದ್ದ ಮುಷ್ಕರವನ್ನು ನೆನ್ನೆ ಮುಕ್ತಾಯಗೊಳಿಸಿದರೆಂದು ಗೊತ್ತಾಗಿದೆ. ಬಂದರು ಕೆಲಸಗಾರರ ಬೇಡಿಕೆ ಬಗ್ಗೆ ಸರ್ಕಾರದೊಡನೆ ಸಂಧಾನ ನಡೆಸಲು ತಮಗೆ ಅವಕಾಶ ಮಾಡಿಕೊಡಲು ಮುಷ್ಕರವನ್ನು ಮುಕ್ತಾಯ ಮಾಡಬೇಕೆಂದು ಅಖಿಲ ಭಾರತ ರಕ್ಷಣಾ ಇಲಾಖೆ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್. ಎಂ. ಜೋಷಿಯವರು ಸೂಚಿಸಿದ ಮೇರೆಗೆ ೩,೦೦೦ ಮಂದಿ ನೌಕರರೂ [illegible] ಕೆಲಸಕ್ಕೆ ಹಿಂತಿರುಗಿದರು.

ವಾರ ಭವಿಷ್ಯ

ತಾ|| ೨೨-೪-೫೬ರಿಂದ ೨೮-೪-೫೬ರ ವರೆಗೆ

ಮೇಷ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಪ್ರಗತಿ ಕಮ್ಮಿ

ವೃಷಭ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಅನುಕೂಲಕ ಪ್ರವಾಸ ಯೋಗ ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ

ಮಿಥುನ — ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಅನುಕೂಲಕ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಕರ್ಕ — ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ

ಸಿಂಹ — ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ ಉದ್ಯೋಗದಲ್ಲಿ ಕಿರುಕುಳ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ಕನ್ಯಾ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ತುಲಾ — ಆರೋಗ್ಯ ಚಿಂತಾಜನಕ ಆರ್ಥಿಕ ಸ್ಥಿತಿ ಅನುಕೂಲಕ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ಉತ್ಸಾಹ ಪ್ರವಾಸ ಸುಖಕರ ಗಿರುವುದು

ವೃಶ್ಚಿಕ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಮುನ್ನಡೆ ಮನರಂಜನೆ

ಧನು — ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಚಿಂತಾಜನಕ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ಮಕರ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಪ್ರವಾಸ ಯೋಗ ಶುಭ ಕಾರ್ಯಗಳು ಜರುಗುವುವು

ಕುಂಭ — ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಅನುಕೂಲಕ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ಕಿರುಕುಳ ಅಧಿಕಾರಿಗಳ ಕಳವಳಿಕೆ ಸಂಭವ ಅಧಿಕ ಖರ್ಚು

ಮೀನ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ವಿದ್ವಜ್ಜನರ ಪರಿಚಯ

ಲೋಕಸಭಾಧ್ಯಕ್ಷರ ಪೀಠದ ಬಳಿ ಸದಸ್ಯರು ಹೋಗಕೂಡದು

ಲೋಕಸಭೆಯ ವಿರೋಧ ಪಕ್ಷದ ಸದಸ್ಯರೊಬ್ಬರು ಮೊನ್ನೆ ಸಭೆಯಲ್ಲಿ ಅಧ್ಯಕ್ಷ ಅನಂತಶಯನಂ ಅಯ್ಯಂಗಾರ್ಯರಿಂದ ಕೆಲವು ವಿಷಯಗಳನ್ನು ತಿಳಿಸಲು ಅವರ ಆಸನದ ಬಳಿ ಹೋದಾಗ ಅಧ್ಯಕ್ಷರು ಅವರ ಮಾತನ್ನು ಕೇಳಲು ನಿರಾಕರಿಸಿ ಸಭೆಯು ನಡೆಯುವಾಗ ಯಾರೂ ತಮ್ಮ ಬಳಿ ಬಂದು ಏನನ್ನು ಹೇಳಲೂ ಕಾವು ಅವರ ಕೊಡುವುದಿಲ್ಲವೆಂದೂ, ಅಂತಹ ಪದ್ಧತಿಯಿಂದ ತಮ್ಮ ಕೆಲಸಕ್ಕೆ ಅಡಚಣೆಯಾಗುವುದೆಂದೂ ತಿಳಿಸಿದರು ಸದಸ್ಯರು ಹಿಂದಿರುಗಿದರು

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ವರ್ಗಾವಣೆ

ಬೆಂಗಳೂರು ದಂಡಿನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಟಿ ಗುರುನಂಜಯ್ಯನವರನ್ನು ಬಳ್ಳಾರಿಗೂ ಮತ್ತು ಅಲ್ಲಿರುವ ಶ್ರೀ ಕೆ ಗಾಬ್ರಿಯಲ್‌ರವರನ್ನು ಬೆಂಗಳೂರು ದಂಡಿಗೂ ವರ್ಗಾಯಿಸಲಾಗಿದೆ

ಅಲ್ಜೀರಿಯಾದಲ್ಲಿ ಪ್ರಬಲ ಕಾಳಗ

೨೪ ಘಂಟೆಗಳಲ್ಲಿ ೩೦೦ ಜನರ ಮರಣ

ಅಲ್ಜೀರಿಯದಲ್ಲಿ ಮೊನ್ನೆ ಫ್ರೆಂಚ್ ಸೈನ್ಯಗಳಿಗೂ ಮತ್ತು ದಂಗೆಕಾರರಿಗೂ ಬಹಳ ತೀವ್ರವಾದ ಕಾಳಗ ನಡೆದು, ೨೪ ಘಂಟೆಗಳ ಅವಧಿಯಲ್ಲಿ ಸುಮಾರು ೩೦೦ ಜನರು ಮೃತಪಟ್ಟರೆಂದು ತಿಳಿದುಬಂದಿದೆ ಪಶ್ಚಿಮ ಅಲ್ಜೀರಿಯಾ ಪ್ರದೇಶದಲ್ಲಿ ದಂಗೆಕೋರರು ಫ್ರೆಂಚ್ ಸೈನ್ಯದ ಒಂದು ತಂಡವನ್ನು ಮುತ್ತಿಗೆ ಹಾಕಿದರೆಂದೂ, ತೀವ್ರ ಕದನ ನಡೆದು ದಂಗೆಕೋರರು ಓಡಿಹೋದರೆಂದೂ ವರದಿಯಾಗಿದೆ

ಏಕ ಕಾಲದಲ್ಲಿ ನಾಲ್ಕು ಮಕ್ಕಳ ಜನನ

ಮಂಗಳೂರಿನ ಲೇಡಿ ಗೋಷನ್ ಆಸ್ಪತ್ರೆಯಲ್ಲಿ ಮೊನ್ನೆ ದಿನ ಲಿಂಗಮ್ಮ ಎಂಬಾಕೆಯು ಏಕ ಕಾಲದಲ್ಲಿ ನಾಲ್ಕು ಮಕ್ಕಳಿಗೆ ಜನ್ಮವಿತ್ತಳೆಂದೂ, ಅವುಗಳಲ್ಲಿ ಎರಡು ಮೃತಪಟ್ಟು, ಇನ್ನೆರಡು ಜೀವಂತವಾಗಿವೆಯೆಂದೂ ವರದಿಯಾಗಿದೆ ಹುಟ್ಟಿದ ಎರಡು ಗಂಟೆಗಳನಂತರ ಇನ್ನೊಂದು ಮಗುವು ಸತ್ತಿತು

ಕಮ್ಯೂನಿಸ್ಟರ ನೆರವು ಪಡೆಯುವ ರಾಷ್ಟ್ರಗಳಿಗೆ ಅಮೆರಿಕದ ಸಹಾಯವಿಲ್ಲ

ಕಮ್ಯೂನಿಸ್ಟ್ ರಾಷ್ಟ್ರಗಳಿಂದ ಸಹಾಯವನ್ನು ಅಂಗೀಕರಿಸುವ ಮಧ್ಯ ಪ್ರಾಚ್ಯ ಮತ್ತು ಇತರ ರಾಷ್ಟ್ರಗಳಿಗೆ, ಅಮೆರಿಕದ ಸಹಾಯ ದೊರೆಯದಂತೆ ಮಾಡುವುದನ್ನು ಅಧ್ಯಕ್ಷ ಐಸೆನ್‌ಹೋವರರು ಪರಿಶೀಲಿಸುತ್ತಿರುವರೆಂದು ಹೇಳಲಾಗಿದೆ

ಅರಸೀಕೆರೆ ಬಳಿ ಹಳ್ಳಿಯಲ್ಲಿ ಬೆಂಕಿ

ಅರಸೀಕೆರೆ ತಾಲ್ಲೂಕಿನ ಪುರದ ರಹಟ್ಟಿ ಎಂಬ ಗ್ರಾಮದಲ್ಲಿ ಕಳೆದ ಮಂಗಳವಾರ ಆಕಸ್ಮಾತ್ ಬೆಂಕಿ ಪ್ರಕರಣವು ಸಂಭವಿಸಿ ೨೫ ಗುಡಿಸಲುಗಳು ಸುಟ್ಟುಹೋದುವೆಂದೂ, ಧಾನ್ಯಗಳು ಮತ್ತು ಇತರ ವಸ್ತುಗಳು ಸೇರಿ, ಹತ್ತುಸಾವಿರ ರೂ ನಷ್ಟವು ಸಂಭವಿಸಿರುವುದೆಂದೂ ಗೊತ್ತಾಗಿದೆ ಒಂದು ಮಗುವು ಮೃತಪಟ್ಟಿತು

ಪಾಂಡವಪುರದ ಸಕ್ಕರೆ ಕಾರ್ಖಾನೆಗೆ ರಹದಾರಿ

ಪಾಂಡವಪುರದ ಸಹಕಾರ ಸಕ್ಕರೆ ಕಾರ್ಖಾನೆ ಲಿಮಿಟೆಡ್ ಸಂಸ್ಥೆಗೆ ಸಕ್ಕರೆ ಕಾರ್ಖಾನೆ ಸ್ಥಾಪನೆ ಬಗ್ಗೆ ಕೇಂದ್ರ ಸರ್ಕಾರದವರು ಕಳೆದ ವಾರ ರಹದಾರಿಯನ್ನು ಕೊಟ್ಟಿರುವರೆಂದು ಗೊತ್ತಾಗಿದೆ

ಮಾಧ್ಯಮಿಕ ಶಿಕ್ಷಣ ಶಿಬಿರದ ಪ್ರಾರಂಭ

ನಂಜನಗೂಡಿನ ಸರ್ಕಾರಿ ಹೈಸ್ಕೂಲಿನಲ್ಲಿ ಭಾರತ ಸ್ಕೌಟ್ ಗೈಡ್ಸ್ ಮಾಧ್ಯಮಿಕ ಶಿಕ್ಷಣ ಶಿಬಿರವು ಕಳೆದ ಗುರುವಾರ ಪ್ರಾರಂಭವಾಯಿತು. ಶ್ರೀ ವಿಶ್ವೇಶ್ವರಗೌಡರ ಅಧ್ಯಕ್ಷತೆ ವಹಿಸಿದ್ದರು ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಶ್ರೀ ಜೆ ಬಿ ಲಿಂಗಣ್ಣನವರು ಉದ್ಘಾಟನಾ ಭಾಷಣ ಮಾಡಿದರು ಮಂಡ್ಯ, ಮೈಸೂರು ಜಿಲ್ಲೆ ಮತ್ತು ಮೈಸೂರು ನಗರಗಳ ಒಟ್ಟು ೬೦ ಮಂದಿಗೆ ಶಿಕ್ಷಣ ಕೊಡಲಾಗುವುದು ಹಾಲಿ ಶಿಬಿರಕ್ಕೆ ಮೈಸೂರು ಜಿಲ್ಲೆಯಿಂದ ೩೪, ಮಂಡ್ಯ ಜಿಲ್ಲೆಯಿಂದ ೧೧ ಮತ್ತು ಮೈಸೂರು ನಗರದಿಂದ ೯ ಜನರು ಬಂದಿದ್ದಾರೆ ಶಿಬಿರಾಧಿಪತಿಯಾಗಿ ಶ್ರೀ ಸಿದ್ದಬಸವಣ್ಣನವರೂ, ಸಹಾಯಕರಾಗಿ ಶ್ರೀ ಪಾಪಣ್ಣನವರೂ, ಕಾರ್ಯದರ್ಶಿಗಳಾಗಿ ಶ್ರೀ ಕೃಷ್ಣಶೆಟ್ಟರೂ ಶಿಕ್ಷಕರಾಗಿ ಶ್ರೀ ಕೆ ನಾಗರಾಜ್‌ರವರೂ ಕೆಲಸ ಮಾಡುತ್ತಿದ್ದಾರೆ

ಬೆಂಗಳೂರು ಕೇಡಿಯ ಪಾಠ ಕಾರ್ಯಕ್ರಮ

[illegible]

ಗ್ರಾಮ ಧಾನ್ಯ ಭಂಡಾರದ ಪ್ರಾರಂಭೋತ್ಸವ

ಗುಂಡ್ಲುಪೇಟೆ ೫-೪

ಮೈಸೂರು ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಬೆಳ್ಳಾಳು ಗ್ರಾಮದಲ್ಲಿ ಕಳೆದ ಮಂಗಳವಾರ ಶಿಕ್ಷಣ ಸಮಿತಿಯ ಪ್ರಧಾನ ಧಿಕಾರಿ ಶ್ರೀ ಎಲ್ ತಿಮ್ಮಯ್ಯನವರಿಂದ ಗ್ರಾಮ ಧಾನ್ಯ ಭಂಡಾರದ ಪ್ರಾರಂಭೋತ್ಸವವು ನೆರವೇರಿತು.

ತಾಲ್ಲೂಕು ರಾಷ್ಟ್ರೀಯ ವಿಸ್ತರಣ ಯೋಜನೆಯ ಅಧಿಕಾರಿ ಶ್ರೀ ಕೆ ಕೃಷ್ಣಪ್ಪನವರು ಅಧ್ಯಕ್ಷತೆ ವಹಿಸಿದ್ದರು ಪ್ರಾರಂಭದಲ್ಲಿ ಶ್ರೀ ರಾಚಾಚಾರ್ ರು ಅತಿಥಿಗಳನ್ನು ಸ್ವಾಗತಿಸಿದನಂತರ ಶ್ರೀ ತಿಮ್ಮಯ್ಯನವರು ಗ್ರಾಮಾಂತರಗಳಲ್ಲಿ ಧಾನ್ಯ ಭಂಡಾರದ ಅವಶ್ಯಕತೆಯನ್ನು ವಿವರಿಸಿದರು ಅಧ್ಯಕ್ಷರ ಭಾಷಣದಲ್ಲಿ ಗ್ರಾಮಾಂತರಗಳಲ್ಲಿ ಇಂತಹ ಸಂಸ್ಥೆಗಳ ಮೂಲಕ ಗ್ರಾಮಾಭಿವೃದ್ಧಿಯೂ ಉಂಟಾಗಬೇಕೆಂದೂ ತಿಳಿಸಿದರು ಅದೇ ಸಂದರ್ಭದಲ್ಲಿ ರಾಷ್ಟ್ರೀಯ ವಿಸ್ತರಣ ಯೋಜನೆಯವರು ಚಲನಚಿತ್ರ ಪ್ರದರ್ಶನವನ್ನು ನಡೆಸಿದರು.

ಪಟ್ಟಾನದಿಂದ ಪಾಕಿಸ್ತಾನ ವಿಮಾನದ ನಾಶ

ಪಾಕಿಸ್ತಾನದ ವಿಮಾನಗಳು ೩ ದಿನಗಳ ಹಿಂದೆ ಪಖ್ತೂನಿಸ್ತಾನದ ಪ್ರದೇಶದಲ್ಲಿ ಹಾರಾಡುತ್ತಿದ್ದಾಗ ಅಲ್ಲಿನ ಜನರು ಗುಂಡು ಹಾರಿಸಿ ಒಂದು ವಿಮಾನವನ್ನು ಉರುಳಿಸಿದರೆಂದೂ, ಅದರಲ್ಲಿದ್ದ ಸಿಬ್ಬಂದಿ ಮೃತಪಟ್ಟರೆಂದೂ ವರದಿಯಾಗಿದೆ ಪಖ್ತೂನಿಸ್ತಾನದ ಜನರು ಪಾಕಿಸ್ತಾನದ ಒಂದು ಠಾಣೆಯಮೇಲೆ ದಾಳಿ ನಡೆಸಿ, ಹಲವು ಬಂದೂಕುಗಳನ್ನು ವಶಪಡಿಸಿಕೊಂಡರೆಂದು ಗೊತ್ತಾಗಿದೆ

ಸ್ವತಂತ್ರ ನಾಗಾ ಸಂಸ್ಥಾನಕ್ಕೆ ಮನ್ನಣೆ ಪಡೆಯಲು ಪ್ರಯತ್ನ

ಅಸ್ಸಾಮಿನ ಬಳಿ ಇರುವ ನಾಗಾ ಗುಡ್ಡಗಳ ಪ್ರದೇಶವನ್ನು ಸ್ವತಂತ್ರ ರಾಷ್ಟ್ರವೆಂದು ಘೋಷಿಸಿ ಕಾಡು ಜನರು ಕಳೆದ ತಿಂಗಳು ಪಾಕಿಸ್ತಾನ, ಬರ್ಮಾ, ಸಿಂಹಳ ಮತ್ತು ಇತರ ರಾಷ್ಟ್ರಗಳ ಮನ್ನಣೆ ಪಡೆಯಲು ಈಗ ಪ್ರಯತ್ನ ಪಡುತ್ತಿರುವರೆಂದು ಗೊತ್ತಾಗಿದೆ ಇದಕ್ಕಾಗಿ ಕಾಡು ಜನರ ನಾಯಕ ಎ ಜೆಡ್. ಫಿಜೋ ಎಂಬುವನ ನಾಯಕತ್ವದಲ್ಲಿ ಸಭೆ ಸೇರಿ ಸೌಹಾರ್ದ ಯೋಜನೆಯೊಂದು ಇದ್ದು ವಿದೇಶ ನಿಯೋಗ ಕಳುಹಿಸಿರುವರೆಂದೂ ವರದಿಯಾಗಿದೆ

ಆಯುರ್ವೇದ ಮತ್ತು ಯುನಾನಿ ಪದವೀಧರರ ಸಮ್ಮೇಳನದ ಅಧ್ಯಕ್ಷತೆಗೆ ಸ್ಪರ್ಧೆ

ಬರುವ ತಿಂಗಳು ಹಾಸನದಲ್ಲಿ ನಡೆಯಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ಸಮ್ಮೇಳನದ ಅಧ್ಯಕ್ಷತೆಗೆ ಶ್ರೀಗಳಾದ ಬಿ ಎ ದಾಸ್, ಎಸ್ ಗುಂಡಪ್ಪ, ಟಿ ಸಿ ಕೃಷ್ಣಮೂರ್ತಿ, ಎಸ್ ಆರ್ ನಾರಾಯಣಶಾಸ್ತ್ರಿ, ಟಿ ಕೆ ರಾಮಶಾಸ್ತ್ರಿ, ಕೆ ಆರ್ ಸೀತಾರಾಮನ್ ಸ್ಪರ್ಧಿಸಿದ್ದಾರೆ

ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ

ಅನೋಘ ಸಂಗೀತ ಕಛೇರಿ

೨-೫-೧೯೫೬ ನೇ ಬುಧವಾರ ಸಂಜೆ ೬ ಘಂಟೆಗೆ ವಿ॥ ಆರ್ ಕೆ ರಾಮನಾಥನ್‌ರವರ ಗಾಯನ
ಪ್ರವೇಶ ದರ ರೂ 1-0-0

ರಣಜಿತ್ ★ 22-4-56 ರಿಂದ

ಮೈಸೂರು ಒಲಂಪಿಯಾ ಚಿತ್ರಮಂದಿರದಲ್ಲಿ

ಮಿಸ್ ಮಾಲಾ

ಜಯಶ್ರೀ — ಕಿಶೋರ್‌ಕುಮಾರ್

Edited, Printed and Published by A. R. Nagarajan at Sadhvi Press D. Subbiah Road, Mysore.

ರಾಮೋತ್ಸವ ಕಾರ್ಯಕ್ರಮಗಳು

ಮೈಸೂರು

ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೯-೩೦ ಗಂಟೆಗೆ ವಿದುಷಿ ಗೌರಿ ಕುಪ್ಪಸ್ವಾಮಿಯವರ ಗಾಯನ ವಿ॥ ಮಹದೇವಪ್ಪನವರ ಪಿಟೀಲು ಮತ್ತು ವಿ॥ ರಾಜಣ್ಣನವರ ಮೃದಂಗದೊಡನೆ ನಡೆಯುವುದು

ಶಿವರಾಂಪೇಟೆ ಬೊಂಬಾಯಿ ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನದಲ್ಲಿ ರಾಮೋತ್ಸವ ಏರ್ಪಾಡಾಗಿದೆ. ಗಾನ ಕಛೇರಿ, ಹರಿಕಥೆ, ಗಾನ ವಿದ್ಯಾ ವಿನೋದ ಈ ರಾಮೋತ್ಸವವು ಮುಂದುವರಿಯುತ್ತಿದೆ

ಸಿವಿಲ್ ಪೊಲೀಸ್ ಹೆಡ್ ಕ್ವಾರ್ಟರ್ಸ್ ವಠಾರದಲ್ಲಿ ರಾಮೋತ್ಸವದ ಪ್ರಯುಕ್ತ ಈ ರಾತ್ರಿ ೭ ಗಂಟೆಗೆ ವಿ॥ ಚಿಕ್ಕಸ್ವಾಮಿ ಮತ್ತು ಶಿಷ್ಯರಿಂದ ಸಂಗೀತವೂ, ಶ್ರೀಮತಿ ವಿದ್ಯಾ ಮತ್ತು ಸಂಗಡಿಗರಿಂದ ನೃತ್ಯವೂ, ಶ್ರೀಮತಿ ಕೃಷ್ಣಮ್ಮನವರಿಂದ ಭಾರತ ಹಾಗೂ ನಾಟಕವೂ ನಡೆಯಲಿದೆ ಸರ್ವರಿಗೂ ಸ್ವಾಗತವಿರುತ್ತದೆ

ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಈ ರಾತ್ರಿ ೯-೩೦ ಗಂಟೆಗೆ ಸಿ॥ ವಿ॥ ಶ್ರೀಮತಿ ವಿ ಶಾರದಾರವರ ಗಾಯನವು ವಿ॥ ವೆಂಕಟಾಚಾರ್ಯರ ಪಿಟೀಲು ವಿ॥ ಸುಬ್ರಹ್ಮಣ್ಯರವರ ಮೃದಂಗದೊಡನೆ ನಡೆಯುವುದು ರಾತ್ರಿ ೯ ಘಂಟೆಗೆ ಮಾ॥ ಶ್ರೀನಿವಾಸ್ ಮತ್ತು ಮಾ॥ ಶಿವರಾಮ್‌ರವರ ಕೊಳಲು ವಾದನ ವಿ॥ ಎಸ್ ನಾರಾಯಣ್‌ರವರ ಘಟಂ, ಮಾ॥ ವಿ ಎನ್ ಪರಮೇಶ್ವರನ್‌ರವರ ಪಿಟೀಲು ಮತ್ತು ಮಾ॥ ಕೃಷ್ಣರವರ ಮೃದಂಗದೊಡನೆ ನಡೆಯುವುದು

ಚಾಮರಾಜ ಅಗ್ರಹಾರದಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೮ ಘಂಟೆಗೆ ವಿದುಷಿ ಕಂಗಾಮ್ಮನವರ ಹಾಡುಗಾರಿಕೆ ವಿ॥ ವೆಂಕಟಾಚಾರ್ಯ ಪಿಟೀಲು ಮತ್ತು ವಿ॥ ನಂಜುಂಡಸ್ವಾಮಿ ಮೃದಂಗದೊಡನೆ ನಡೆಯುತ್ತದೆ

ಟಾನಿಕ್ಕಿನ ಅವಶ್ಯಕತೆ ಯಾರಿಗಿದೆ?

* ಯಾರು ಆರೋಗ್ಯವಾಗಿದ್ದಾಗ್ಯೂ ... ಕುಂಠಿತರಾಗಿರುವರೋ ಅವರಿಗೆ
* ಯಾರು ರೋಗಗ್ರಸ್ತರಾಗಿ ... ಮತ್ತು ... ಅವರಿಗೆ
...

ನವರತ್ನ-ಕಲ್ಪ

...

ಪುರುಷರ ಮುಖ್ಯ ದೇಹಶಕ್ತಿಯ ಚಿಕಿತ್ಸೆ ಕಲ್ಪ

ದುರ್ಗಾದತ್ತ ಶರ್ಮ,
ವೈದ್ಯ ಶಾಸ್ತ್ರಿ.

NAVRATNA KALPA PHARMACY
Jullundur City (India)
Grams NAVRATNA

ರಿಜಿಸ್ಟರ್ಡ್ ನಂ. 793

ಕೋರ್ಟ್ ಮಾರ್ಕೆಟ್
ಸ್ಥಾಪಿತ 1932 : ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸಕಲ ಚಿನ್ನದಿಂದ ತಯಾರಾದ ಆಭರಣಗಳೂ ಬೆಳ್ಳಿ ಸಾಮಾನುಗಳೂ ಮತ್ತು ವಜ್ರದ ಒಡವೆಗಳೂ ದೊರೆಯುತ್ತವೆ

ಲಗ್ನದ ಜವಳಿ
ಗೌಡ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರ್ಣಿ, ಬೆಂಗಳೂರು
ರೇಷ್ಮೆ ಮತ್ತು ಜರತಾರಿ ಸೀರೆಗಳು ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., ಪ್ರೊಪ್ರೈಟರ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೩೪] SADHVI : MONDAY 23-4-1956 ಮೈಸೂರು ಸೋಮವಾರ : ೨೩-೪-೧೯೫೬ [ಸಂಚಿಕೆ : ೨೦೨

ರಷ್ಯಾ ನಾಯಕರ ವಿರುದ್ಧ ಲಂಡನ್ನಿನಲ್ಲಿ ಭಾರಿ ಪ್ರದರ್ಶನ

ರಷ್ಯದ ನಾಯಕರ ವಿರುದ್ಧವಾಗಿ ೨೫ ಸಾವಿರ ಮಂದಿ ಪ್ರದರ್ಶನ

ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಮತ್ತು ಅನಂತರವೂ ಕಮ್ಯೂನಿಸ್ಟರ ಹಿಡಿತದಿಂದ ತಪ್ಪಿಸಿಕೊಳ್ಳಲು ಹಂಗೇರಿ, ಜೆಕೊಸ್ಲೊವೇಕಿಯ, ಲಿಥ್ವೇನಿಯ ಮುಂತಾದ ರಾಷ್ಟ್ರಗಳಿಂದ ಬಂದು ಬ್ರಿಟನ್ನಿನಲ್ಲಿ ಆಶ್ರಯ ಪಡೆದಿರುವ ಸುಮಾರು ೨೫ ಸಾವಿರ ಜನರು ನೆನ್ನೆ ಲಂಡನ್ನಿನ ವೈಟ್ ಹಾಲ್‌ನಲ್ಲಿ ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೇವರ ವಿರುದ್ಧವಾಗಿ ಪ್ರದರ್ಶನ ನಡೆಸಿದರು. ಯುದ್ಧ ಕಾಲದಲ್ಲಿ ಪೋಲೆಂಡಿನ ಸೈನ್ಯದ ಸೈನಿಕರ ಗತಿ ಏನಾಯಿತು ಮತ್ತು ಕಾಟಿನ್ ಕಾಡ್ ಎಂಬಲ್ಲಿ ೧೫,೦೦೦ ಪೋಲೆಂಡಿನವರ ಕೊಲೆಗೆ ಕ್ರುಶ್ಚೇವರೇ ಕಾರಣರೆಂದೂ, ರಷ್ಯನರು ಪೋಲೆಂಡಿನಿಂದ ಹೊರಕ್ಕೆ ಹೋಗಬೇಕೆಂದೂ ಬರೆದಿರುವ ಪತ್ರಿಕೆಗಳನ್ನು ಪ್ರದರ್ಶನಕಾರರು ಹಿಡಿದಿದ್ದರು. ಪೋಲೆಂಡಿನ ರಾಜಧಾನಿಯನ್ನು ನಾಶಪಡಿಸಲು ಬುಲ್ಗಾನಿನ್ನರು ಜರ್ಮನರಿಗೆ ಸಹಾಯ ಮಾಡಿಕೊಟ್ಟರೆಂದೂ ಕೆಲವರಲ್ಲಿ ಆಪಾದಿಸಲಾಗಿತ್ತು.

ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನಿ ಪಟ್ಟ ಯಾರೊಬ್ಬರಿಗೂ ಮೀಸಲಲ್ಲ

ಪ್ರಧಾನಿ ನೆಹರೂರವರು ಏಪ್ರಿಲ್ ಸಂಜೆ ಮಾಡಿದ ಭಾಷಣದಲ್ಲಿ ಭಾರತದ ಸಂವಿಧಾನದಲ್ಲಿ ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನಿ ಪಟ್ಟಗಳು ಯಾವುದೇ ಒಬ್ಬ ವ್ಯಕ್ತಿಗೂ ಮೀಸಲಾದ ಸ್ಥಾನಗಳಲ್ಲವೆಂದೂ, ಭಾರತದ ಪ್ರತಿಯೊಬ್ಬರೂ ಅಂತಹ ಸ್ಥಾನಗಳಿಗೆ ಬರಲು ಪ್ರಯತ್ನಿಸಬೇಕಾಗುವುದು ಅವಶ್ಯಕವೆಂದೂ ನುಡಿದರು.

ಪೋಲೆಂಡಿನ ಮಂತ್ರಿಗಳ ವಜಾ

ಪೋಲೆಂಡ್ ರಾಜ್ಯ ಸಮಿತಿಯು ಅಲ್ಲಿನ ನ್ಯಾಯಾಂಗ ಮಂತ್ರಿ ಹೆನ್ರಿಕ್ ಸ್ವಿಯಾಟ್ಕೊವಿಸ್ಕಿ ಮತ್ತು ಸಾಂಸ್ಕೃತಿಕ ಮಂತ್ರಿ ವ್ಲೊಡ್ಜಿಮಿರ್ ಸೊಕೊರ್ಸ್ಕಿಯವರನ್ನು ನೆನ್ನೆ ವಜಾ ಮಾಡಿತೆಂದು ವರದಿಯಾಗಿದೆ. ಕಳೆದ ವಾರ ಇತರ ನಾಲ್ವರು ಹಿರಿಯರನ್ನು ವಜಾ ಮಾಡಲಾಗಿದ್ದಿತು.

ಕೊಲೆಗೆ ಸಿಕ್ಕ ಕ್ರಿಕೆಟ್ ಆಟಗಾರನ ಆತ್ಮಹತ್ಯೆ

ಮಿದುಳಿನ ರೋಗಕ್ಕಾಗಿ ಎರಡು ವರ್ಷದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಲಂಡನ್ನಿನ ಕ್ರಿಕೆಟ್ ಆಟಗಾರ ಆರ್ಥರ್ ರಾಬರ್ಟ್ ವಿಲ್ಸನ್ ೩೨ ವರ್ಷದ ತರುಣನು ತನ್ನ ವ್ಯಾಧಿಯು ಗುಣವಾಗುತ್ತಿಲ್ಲವೆಂದು ತಿಳಿದು, ತನಗೆ ಅತ್ಯಂತ ಪ್ರಿಯವಾದ ಕ್ರಿಕೆಟ್ ಚೆಂಡನ್ನಾಡಲು ಸಾಧ್ಯವಾಗದುದಕ್ಕಾಗಿ ವ್ಯಥೆಪಟ್ಟು ಕೈಗೆ ಸಿಕ್ಕ ಆಸ್ತ್ರದಿಂದ ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ.

ಕಾಂಗ್ರೆಸ್ಸಿಗೆ ಕಾಣಿಕೆ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿನ ಚಾಮುಂಡೇಶ್ವರಿ ಹಾಲ್ ಮಾಲೀಕರಾದ ಶ್ರೀ ನಂಜಪ್ಪನವರು ತಮ್ಮ ಪುತ್ರಿಯ ವಿವಾಹ ಸಂದರ್ಭದಲ್ಲಿ ಕಾಂಗ್ರೆಸ್ ಸಂಸ್ಥೆಗೆ ೧೦೧ ರೂ.ಗಳ ಕಾಣಿಕೆಯನ್ನು ಕೊಟ್ಟಿರುವರು.

ಭಾರತವು ಸದಾ ಪಾಕಿಸ್ತಾನದ ಸ್ನೇಹವನ್ನು ಬಯಸುವುದು

ಇಂಡಿಯ ಕಡೆಗಳಿಗೆ ಪಾಕಿಸ್ತಾನದ ನಾಯಕರೇ ಕಾರಣರೆಂದು ನೆಹರೂರವರ ಆಪಾದನೆ

ಪ್ರಧಾನಿ ನೆಹರೂರವರು ದೆಹಲಿಯಲ್ಲಿ ಭಾಷಣ ಮಾಡಿ ಭಾರತವು ಪಾಕಿಸ್ತಾನದೊಡನೆ ಸದಾ ಸ್ನೇಹ ಬಯಸುವುದೆಂದೂ, ಕಾಶ್ಮೀರದ ವಿಷಯವಾಗಿ ಭಾರತ ಪಾಕಿಸ್ತಾನಗಳ ಬಾಂಧವ್ಯದಲ್ಲಿ ತೊಡಕುಂಟಾಗಿರುವುದು ವಿಷಾದಕರವೆಂದೂ ತಿಳಿಸಿದರು. ಪಾಕಿಸ್ತಾನದ ನಾಯಕರು ಭಾರತದ ವಿರುದ್ಧ ಪ್ರಚಾರ ನಡೆಸುತ್ತಿರುವುದು ದುರದೃಷ್ಟಕರ. ಪಾಕಿಸ್ತಾನದ ನಾಯಕರುಗಳು ಭಾರತವನ್ನು ಟೀಕಿಸುವುದು ಹೆಚ್ಚಾಗುತ್ತಿದೆ. ಹಿಂದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ ಮಾಡಿದ ಗಫಾರ್ ಖಾನ್ ಅವರಂಥ ದೇಶಸೇವಕರನ್ನು ಸೆರೆಯಲ್ಲಿಟ್ಟಿರುವುದು ಶೋಚನೀಯ. ಭಾರತ ಮತ್ತು ಪಾಕಿಸ್ತಾನಗಳ ಜನತೆಯಿಂದ ಉಭಯ ರಾಷ್ಟ್ರಗಳೂ ಲಾಭ ಪಡೆಯುವುವು. ನಮ್ಮ ನೆರೆ ರಾಷ್ಟ್ರವಾದ ಪಾಕಿಸ್ತಾನಕ್ಕೆ ನಾವು ಸದಾ ಸ್ನೇಹ ಹಸ್ತವನ್ನು ನೀಡುವೆವೆಂದು ನುಡಿದರು.

ಕರ್ನಾಟಕದಲ್ಲಿ ಅನೇಕ ಕೈಗಾರಿಕೆಗಳ ಸ್ಥಾಪನೆ

ಕರ್ನಾಟಕದಲ್ಲಿ ದೊರೆಯುವ ವಿದ್ಯುಚ್ಛಕ್ತಿ ಮತ್ತು ಜನಶಕ್ತಿಯನ್ನುಪಯೋಗಿಸಿ ಅನೇಕ ದೊಡ್ಡ ಹಾಗೂ ಸಣ್ಣ ಕೈಗಾರಿಕೆಗಳನ್ನು ಈ ಪ್ರದೇಶದಲ್ಲಿ ಸ್ಥಾಪಿಸಬಹುದೆಂದು ಕೇಂದ್ರ ಕೈಗಾರಿಕಾ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ಹೇಳಿರುವರು. ಎರಡನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡುವುದರಲ್ಲಿ ಕರ್ನಾಟಕವು ಪ್ರಧಾನವಾದ ಪಾತ್ರವನ್ನು ವಹಿಸಲಿದೆಯೆಂದೂ ಅವರು ಹೇಳಿರುವರು. ಉತ್ತರ ಕರ್ನಾಟಕವು ಫಲವತ್ತಾದ ಪ್ರದೇಶವಾದ್ದರಿಂದ ಅಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ಕೈಗಾರಿಕೆಗಳನ್ನು ಸ್ಥಾಪಿಸಲು ಅನುಕೂಲವಾಗುವಂತೆ ತಾಂತ್ರಿಕ ಸಂಸ್ಥೆಯೊಂದನ್ನು ಏರ್ಪಡಿಸಲಾಗುವುದೆಂದೂ ಅವರು ನುಡಿದಿರುವರು.

ಎ. ಐ. ಸಿ. ಸಿ. ಪ್ರತಿನಿಧಿ ಭೇಟಿ

ಮಂಡ್ಯ ೨೨

ಎ. ಐ. ಸಿ. ಸಿ. ದಕ್ಷಿಣ ಪ್ರದೇಶದ ಪ್ರತಿನಿಧಿಗಳಾದ ಶ್ರೀ ಕೆ. ಕೆ. ಚಲ್ಲಪ್ಪ ಪಿಳ್ಳೆಯವರು ನೆನ್ನೆ ಇಲ್ಲಿಗೆ ಆಗಮಿಸಿ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಭೇಟಿಯಿತ್ತು ಅಲ್ಲಿನ ಕಾರ್ಯಕಲಾಪಗಳನ್ನು ಪರಿಶೀಲಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶ್ರೀಯುತರು ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡಿ ಮಹಾತ್ಮ ಗಾಂಧಿಯವರ ತತ್ವಗಳನ್ನು ಅನುಷ್ಠಾನಕ್ಕೆ ತರಬೇಕೆಂದು ತಿಳಿಸಿದರು.

ಪಿರಿಯಾಪಟ್ಟಣ ಕ್ಷೇತ್ರದಿಂದ ಉಪ ಚುನಾವಣೆ

ಮೈಸೂರು ೨೨

ವಿಧಾನ ಸಭೆಯಲ್ಲಿ ಶ್ರೀ ಚನ್ನಬಸಪ್ಪನವರ ಸ್ಥಾನವು ಖಾಲಿಯಾದ ಸಂಬಂಧವಾಗಿ ಪಿರಿಯಾಪಟ್ಟಣದ ಕ್ಷೇತ್ರದಿಂದ ಬರುವ ಜೂನ್ ತಿಂಗಳು ೧೦ನೇ ತಾರೀಕು ಉಪ ಚುನಾವಣೆ ನಡೆಸಲು ಸರ್ಕಾರದ ಸರ್ಕಾರದವರು ಚುನಾವಣಾ ಕಮೀಷನ್ನಿಗೆ ಶಿಫಾರಸು ಮಾಡಿರುವರೆಂದು ಗೊತ್ತಾಗಿದೆ.

ವೀಣಾ ವಾದನ

ಚಾಮರಾಜಪೇಟೆ ಅಗ್ರಹಾರ ರಸ್ತೆಯ ನಂ. ೬ರ ಶ್ರೀ ರಾಮ ಮಂದಿರದಲ್ಲಿ ಈ ದಿನ ರಾತ್ರಿ ೭ ಗಂಟೆಗೆ ವಿ. ಎ. ಎಸ್. ಪದ್ಮನಾಭರವರ ವೀಣಾವಾದನವು ವಿದ್ವಾನ್ ರಾಮಚಂದ್ರರವರ ಮೃದಂಗದೊಡನೆ ನಡೆಯುತ್ತದೆ.

ಭಾರತದಲ್ಲಿ ವರ್ಷಕ್ಕೆ ೯,೦೦೦ ಕೊಲೆಗಳು

ಭಾರತದಲ್ಲಿ ಸರಾಸರಿ ವರ್ಷಕ್ಕೆ ೯,೦೦೦ ಕೊಲೆಗಳು ನಡೆಯುತ್ತಿವೆಯೆಂದೂ, ಇಂತಹ ಪರಿಸ್ಥಿತಿಯಲ್ಲಿ ಮರಣದಂಡನೆಯನ್ನು ರದ್ದು ಮಾಡುವುದು ಉಚಿತವಲ್ಲವೆಂದೂ ಕೇಂದ್ರ ಮಂತ್ರಿ ಬಿ. ಎನ್. ದಾತಾರವರು ತಿಳಿಸಿರುವರು.

ಜಲಜನಕ ಬಾಂಬ್ ಪರೀಕ್ಷೆ ನಿಲ್ಲಿಸಲು ಐಸೆನ್‌ಹೋವರರಿಗೆ ಕರೆ

ಅಮೆರಿಕದ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಅಡ್ಲೈ ಸ್ಟೀವನ್ಸನ್ನರು ಅಧ್ಯಕ್ಷ ಐಸೆನ್‌ಹೋವರರ ವಿದೇಶ ನೀತಿಯನ್ನು ಖಂಡಿಸಿ ಅಮೆರಿಕವು ಶಾಂತ ಸಾಗರದಲ್ಲಿ ಬರುವ ತಿಂಗಳು ನಡೆಸಲಿರುವ ಜಲಜನಕ ಬಾಂಬಿನ ಪ್ರಯೋಗ ಪರೀಕ್ಷೆಯನ್ನು ರದ್ದು ಮಾಡಿ ವಿಶ್ವ ನಿಶ್ಶಸ್ತ್ರೀಕರಣದಲ್ಲಿ ಮೊದಲ ಹೆಜ್ಜೆಯಿಡಬೇಕೆಂದು ಕರೆ ಕೊಟ್ಟಿರುವರು.

ಪ್ರಪಂಚದ ಕೋಟ್ಯಂತರ ಜನರು ಜಲಜನಕ ಬಾಂಬಿನ ಆಸ್ಫೋಟನೆಯನ್ನು ಖಂಡಿಸಿದ್ದಾರೆ. ಪ್ರಯೋಗಾರ್ಥವಾಗಿಯೂ ಈ ಆಸ್ಫೋಟನೆಗಳನ್ನು ನಡೆಸುವುದರಿಂದ ಮಾರ್ಷಲ್ ದ್ವೀಪಗಳ ಜನರೂ ಸಹಾ ಇದರ ಪರಿಣಾಮಕ್ಕೆ ಗುರಿಯಾಗಿದ್ದಾರೆ. ಆದ್ದರಿಂದ ಮುಂದಿನ ತಿಂಗಳು ನಡೆಸಲಿರುವ ಜಲಜನಕ ಬಾಂಬಿನ ಆಸ್ಫೋಟನೆಯನ್ನು ನಡೆಸಬಾರದು—ಎಂದು ಅಮೆರಿಕದ ಮಹಿಳೆಯರ ಅಂತಾರಾಷ್ಟ್ರೀಯ ಲೀಗಿನವರು ಅಧ್ಯಕ್ಷ ಐಸೆನ್‌ಹೋವರರಿಗೆ ಮನವಿ ಮಾಡಿಕೊಂಡಿದ್ದಾರೆ.

ರಷ್ಯದ ನಾಯಕರಿಗೆ ಸಂದೇಹಾಸ್ಪದವಾದ ಭಾಂಗಿ

ಲಂಡನ್ನಿಗೆ ಬಂದಿರುವ ರಷ್ಯದ ಪ್ರಧಾನಿ ಬುಲ್ಗಾನಿನ್ನರಿಗೆ ಬಂದ ಒಂದು ಭಾಂಗಿಯು ಇದ್ದಕ್ಕಿದ್ದಂತೆಯೇ 'ಟಿಕ್, ಟಿಕ್' ಎಂದು ಶಬ್ದ ಮಾಡಲಾರಂಭಿಸಿದುದರಿಂದ ಪೋಲೀಸರು ಬಂದು ಅದನ್ನು ತಮ್ಮ ವಶಕ್ಕೆ ತೆಗೆದುಕೊಂಡು ನೀರಿನಲ್ಲಿ ಮುಳುಗಿಸಿಟ್ಟು ನಂತರ ಬಿಚ್ಚಿ ನೋಡಲಾಗಿ ಅದರಲ್ಲಿ ಒಂದು ಹಳೇ ಅಲಾರಂ ಗಡಿಯಾರವಿತ್ತೆಂದು ತಿಳಿದುಬಂದಿದೆ.

ಸುಂಕದವರು ಮರಿಯಪ್ಪ ಮತ್ತು ಇತರರು ಸೆಷನ್ಸ್ ವಿಚಾರಣೆಗೆ

ಕಳುವಾದ ಬಳ್ಳಿ ಕೇಸಿನ ಮೇಲೆ ಆಪಾದನೆ

ಮೈಸೂರು ೨೨

ಸರ್ಕಾರಿ ಆಫೀಸಿನಲ್ಲಿ ಕಳುವಾದ ಬಳ್ಳಿ ಕೇಸಿನ ಮೊಕದ್ದಮೆಯನ್ನು ನಡೆಸುತ್ತಿದ್ದರೆಂದು ಪಿರಿಯಾಪಟ್ಟಣದ ಪೋಲೀಸರು ಶ್ರೀಗಳಾದ ಎಸ್. ಎಂ. ಮರಿಯಪ್ಪ, ಜೋಗಿಗೌಡ, ಬಾಲಕೃಷ್ಣಾಚಾರಿ, ಕೃಷ್ಣಯ್ಯ, ಟಿ. ವಿ. ಗೌಡ, ನಾಗಪ್ಪ ಮತ್ತು ಮಾದಯ್ಯ ಎಂಬುವರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನಗರದ ಎರಡನೆ ಮುನ್ಸಿಫ್ ಮ್ಯಾಜಿಸ್ಟ್ರೇಟ್ ಶ್ರೀ ಆರ್. ನಾಗರಾಜ್‌ರವರು ಈ ದಿನ ಪ್ರಾಥಮಿಕ ವಿಚಾರಣೆ ನಡೆಸಿ ಅಪರಾಧ ನಡೆದಿರುವುದನ್ನು ಖಚಿತಪಡಿಸಿ ಆರೋಪಿಗಳನ್ನು ಸೆಷನ್ಸಿಗೆ ಒಪ್ಪಿಸಿದ್ದಾರೆ.

ಪರೀಕ್ಷೆ

ಪೋಲೀಸು ಸಿವಿಲ್ ಲೈನಿನಲ್ಲಿ ಈ ಸಂಜೆ ೬-೩೦ಕ್ಕೆ ಡಾ॥ ಶ್ರೀ ಅಣ್ಣಾಜಿರಾಯರಿಂದ ಸ್ಕೌಟ್ ಸಂಘಟನೆ ಎಂಬ ಪರೀಕ್ಷೆಯು ನಡೆಯುತ್ತದೆ.

ಭಾರತದ ಮೇಲೆ ಧರ್ಮಯುದ್ಧಕ್ಕೆ ಮುಸ್ಲಿಂ ಲೀಗಿನ ಕರೆ

ಪಾಕಿಸ್ತಾನದ ಗಡಿಯನ್ನು ಉಲ್ಲಂಘಿಸುವವರ ಮೇಲೆ 'ಜಿಹಾದ್' ಧರ್ಮ ಯುದ್ಧವನ್ನು ಸಾರಬೇಕೆಂದು ಕರಾಚಿಯಲ್ಲಿ ನೆನ್ನೆ ರಾತ್ರಿ ಕೂಡಿಸಲಾದ ಮುಸ್ಲಿಂ ಲೀಗಿನ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಲೀಗಿನ ಕಾರ್ಯಕಾರಿ ಸಮಿತಿಯು ನಡೆಸಿದ ಘೋಷಣೆಯು ಅಂಶಗಳನ್ನು ಸಂಸ್ಥೆಗೆ ಸಂಬಂಧಪಟ್ಟ ಇತರ ವಿಷಯಗಳನ್ನು ಆಂತರಿಕ ಮತ್ತು ವಿದೇಶೀ ವ್ಯವಹಾರಗಳ ವಿಷಯವನ್ನೂ ಪರಿಶೀಲಿಸುವುದು. ಪ್ರತ್ಯೇಕ ಚುನಾವಣಾ ಪದ್ಧತಿ, ಇಸ್ಲಾಂ ವಿಚಾರಗಳಿಗಾಗಿ ಪ್ರತ್ಯೇಕ ಮಂತ್ರಿ ಸ್ಥಾನ, ಇಂಗ್ಲಿಷ್ ಭಾಷೆಯನ್ನು ಶಿಕ್ಷಣದಲ್ಲಿ ಉಪಯೋಗಿಸುವುದು, ಪ್ರಮುಖ ಮತ್ತು ಭಾರಿ ಕೈಗಾರಿಕೆಗಳ ರಾಷ್ಟ್ರೀಕರಣ, ಸ್ವಾಮ್ಯವಿಲ್ಲದ ಪರಿಹಾರ ಕೊಟ್ಟು ದೊಡ್ಡ ಜಮೀನ್ದಾರಿಗಳನ್ನು ವಶಪಡಿಸಿಕೊಳ್ಳುವುದು ಮತ್ತು ಕಟ್ಟಡ ಮತ್ತು ವ್ಯವಹಾರಗಳನ್ನು ನಿಷೇಧಿಸುವುದು—ಈ ವಿಷಯಗಳು ನೆನ್ನೆ ಹೊರಟ ಘೋಷಣೆಯಲ್ಲಿ ಅಡಕವಾಗಿರುವುವೆಂದು ಗೊತ್ತಾಗಿದೆ. ಕಾಶ್ಮೀರ, ಜುನಾಘಡ ಮತ್ತು ಮಾನವದರ ರಾಜ್ಯಗಳನ್ನು ಭಾರತವು ಬಲಾತ್ಕಾರದಿಂದ ಆಕ್ರಮಿಸಿಕೊಂಡಿರುವುದೆಂದು ತಿಳಿಸಿ, ಅದಕ್ಕಾಗಿ ಭಾರತದ ಮೇಲೆ ಧರ್ಮ ಯುದ್ಧ ಹೂಡಬೇಕೆಂದೂ ಘೋಷಿಸಲಾಗಿದೆ.

ತ್ರಿವಳಿ ಮಕ್ಕಳ ಮಾತೆಗೆ ಸರ್ಕಾರದಿಂದ ಬಹುಮಾನ

ಮುಕೋದ ಎಂಬ ಹೈದರಾಬಾದಿನ ೨೩ ವರ್ಷದ ತರುಣಿಯು ಕಳೆದ ತಿಂಗಳು ೩ನೇ ತಾರೀಕು ಏಕಕಾಲದಲ್ಲಿ ಮೂರು ಮಕ್ಕಳಿಗೆ ಜನ್ಮವಿತ್ತಳು. ಆಕೆಯು ತನ್ನ ಮಕ್ಕಳ ಪೋಷಣೆಗಾಗಿ ಸಹಾಯವನ್ನು ಕೋರಲು ಅಲ್ಲಿನ ಸರ್ಕಾರದವರು ೧೦೦ ರೂ.ಗಳ ಬಹುಮಾನವನ್ನು [illegible]

ಶ್ರೀ ಅಶ್ವತ್ಥನಾರಾಯಣನ ಮಹಿಮೆ

ಶ್ರೀ ಎಂ. ಎಲ್. ಸುಬ್ರಹ್ಮಣ್ಯರಾಜ ಅರಸಿನವರು ಈ ರೀತಿ ಬರೆದಿರುತ್ತಾರೆ —

ಮೂಲತೋ ಬ್ರಹ್ಮರೂಪಾಯ।
ಮಧ್ಯತೋ ವಿಷ್ಣುರೂಪಿಣೇ।
ಅಗ್ರತಶ್ಶಿವರೂಪಾಯ।
ವೃಕ್ಷರಾಜಾಯತೇ ನಮಃ॥

ಆಯಾಸವಿಲ್ಲದೆ, ಸುಲಭವಾಗಿ ಮನಸ್ಸಿನ ಅಭೀಷ್ಟಗಳನ್ನು ಪಡೆಯಬೇಕೆಂದರೆ, ಮಾನವನು ಯಾರನ್ನು, ಹೇಗೆ ಭಜಿಸಬೇಕೆಂದು ನಾರದರು ಪ್ರಶ್ನೆಯನ್ನು ಪ್ರಶ್ನಿಸಿದರು. ಆಗ ಬ್ರಹ್ಮದೇವನು ಹೇಳಿದನು — ಅಶ್ವತ್ಥನಾದ ನಾರದನೇ, ನೀನು ಕೇಳಿದ ಅಂಶವು ಮಹತ್ವಪೂರ್ಣ ವೃಕ್ಷವೊಂದಿದೆ. ಅದರಲ್ಲಿ ಎಲ್ಲ ದೇವತೆಗಳೂ ಇರುವರು. ಭಕ್ತಿಯಿಂದ ಪ್ರದಕ್ಷಿಣೆ ಮಾಡಿದ ಮಾತ್ರದಿಂದಲೇ ಮಾನವರಿಗೆ ಸಮಸ್ತವಾದ ಮನಸ್ಸಿನ ಅಭೀಷ್ಟಗಳನ್ನು ಕೊಡತಕ್ಕ ದೈವವೇ ಅದೇ—ಅಶ್ವತ್ಥ ವೃಕ್ಷವು. ಅದರ ಮಹತ್ವವನ್ನು ತಿಳಿಸುತ್ತೇನೆ —

[illegible]

ಔಷಧಿಗಳ ಮೇಲೆ ಆಕ್ಟ್ರಾಯ್ ಸುಂಕ ತೆಗೆಯಲು ಮನವಿ

ಸಂಸ್ಥಾನದ ಔಷಧಿ ವ್ಯಾಪಾರಿಗಳ ಸಭೆಯ ನಿರ್ಣಯ

ಮೈಸೂರು ೨೨

ಮೈಸೂರು ಸಂಸ್ಥಾನದ ಔಷಧಿ ವ್ಯಾಪಾರಿಗಳ ಸಂಘದ ವಾರ್ಷಿಕ ಸಭೆಯು ನೆನ್ನೆ ಶ್ರೀರಂಗಪಟ್ಟಣದಲ್ಲಿ ನಡೆದು ಸಾರ್ವಜನಿಕರಿಗೆ ಅತ್ಯಗತ್ಯವಾಗಿರುವ ಔಷಧ ಸಾಮಗ್ರಿಗಳ ಮೇಲೆ ಮೈಸೂರು ಪೌರಸಭೆಯವರು ವಿಧಿಸುತ್ತಿರುವ ಆಕ್ಟ್ರಾಯ್ ಸುಂಕವನ್ನು ರದ್ದು ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸತಕ್ಕದ್ದೆಂದು ನಿರ್ಣಯ ಮಾಡಲಾಯಿತು. ಬೇರೆ ಯಾವ ಪೌರಸಭೆಯಲ್ಲಿಯೂ ಈ ತೆರಿಗೆಯನ್ನು ಹಾಕುತ್ತಿಲ್ಲವೆಂದು ಸಹ ಸೂಚಿಸಲಾಯಿತು. ಸಂಘದ ಸದಸ್ಯರು [illegible]

[illegible]

ನೇಪಾಳದ ದೊರೆಯ ಪಟ್ಟಾಭಿಷೇಕಕ್ಕಾಗಿ ಸಪ್ತಸಮುದ್ರದ ನೀರು

ಬರುವ ತಿಂಗಳು ನಡೆಯಲಿರುವ ನೇಪಾಳದ ದೊರೆ ಮಹೇಂದ್ರರ ಪಟ್ಟಾಭಿಷೇಕಕ್ಕಾಗಿ ಸಪ್ತಸಮುದ್ರಗಳ ನೀರನ್ನೂ ಮತ್ತು ಭಾರತ ಮತ್ತು ನೇಪಾಳಗಳ ಎಲ್ಲಾ ಪವಿತ್ರ ನದಿಗಳ ನೀರನ್ನೂ ತರಿಸಲಾಗಿದೆ. ದೊರೆಯು [illegible] ವಿಧದ ವ್ಯಕ್ತಿಗಳಲ್ಲಿ ಹಲವನ್ನು ಪರ್ವತ ಶಿಖರಗಳಿಂದ ತರಿಸಲಾಗಿದೆ. ಪಟ್ಟಾಭಿಷೇಕದ ಗುರುತಾಗಿ ಬಡವರಿಗೆ ಅನ್ನದಾನ ಮಾಡಲಾಗುವುದು.

ಕರ್ನೂಲ್ ನಗರದ ಅಭಿವೃದ್ಧಿಗಾಗಿ ೨೪೦ ಲಕ್ಷ ರೂ.

ಆಂಧ್ರದ ರಾಜಧಾನಿಯನ್ನು ಕರ್ನೂಲಿನಲ್ಲಿ ನಿರ್ಮಿಸಲು ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ೨೪೦ ಲಕ್ಷ ರೂಗಳ ವೆಚ್ಚವನ್ನು [illegible]

ವಿವಾಹ ಮಹೋತ್ಸವಗಳು

[illegible]

ಮುಂದಿನ ವೇಣುಪುಲ್ಲದ ಸ್ಟೆಷನ್ ಶ್ರೀ ವರಕೇರಿ ರಂಗಯ್ಯನವರು ತಮ್ಮ ಕುಮಾರ ಶ್ರೀ ರಾಮಚಂದ್ರಮೂರ್ತಿಯವರಿಗೆ ಚೌಡೇಶ್ವರಿ ಹಾಲ್ ಮಾಲೀಕರಾದ ಶ್ರೀ ಎಸ್. ನಂಜಪ್ಪನವರ ಪುತ್ರಿ ಸೌ॥ ಶಾಂತಾಮಣಿಯನ್ನು ತಂದುಕೊಂಡು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಉಪನಯನ

ಮಹಾರಾಜಾ ಕಾಲೇಜಿನ ಉಪಪ್ರಾಧ್ಯಾಪಕ ಶ್ರೀ ಎಂ. ಯಾಮುನಾಚಾರ್ಯರು ತಮ್ಮ ಪುತ್ರ ಚಿ॥ ಕೃಷ್ಣಪ್ರಸಾದನಿಗೆ ಬ್ರಹ್ಮೋಪದೇಶವನ್ನು ನೆನ್ನೆ ತಿರುಪತಿಯಲ್ಲಿ ನಡೆಸಿದರು

ಕಾರ್ಮಿಕ ಸಂಘಟನೆ ಯತ್ನ ವಿಫಲವಾದುದಕ್ಕಾಗಿ ಆತ್ಮಹತ್ಯೆ

[illegible]

ಮಹಿಳಾ ಪೊಲೀಸರ ಅರ್ಹತೆ

[illegible]

ದುವರು ಮಹಿಳೆಯರಿಗೆ ಉದ್ಯೋಗ ಮತ್ತು ಓದು ಬರಹ ಬರಬೇಕೆಂದೂ ಸಚಿವರು ತಿಳಿಸಿರುವರು. ಪುರುಷರಿಗೆ ಕನಿಷ್ಠ ವಯಸ್ಸು ೧೮. ಅವರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿರಬೇಕು. ಪುರುಷರಿಗೂ ಮಹಿಳೆಯರಿಗೂ ಸಂಬಳದಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ

ವರುತ್ತಾ, ಮನಸ್ಸಿನಲ್ಲಿ ಧ್ಯಾನಿಸುತ್ತಾ ಶ್ರೀ ಅಶ್ವತ್ಥ ವೃಕ್ಷವನ್ನು ಸುತ್ತುಗಟ್ಟುವಿಕೆಯೋ ಪ್ರದಕ್ಷಿಣೆಯನ್ನು ಕೊಳ್ಳುವುದು ಯಾರು ಒಂದು ವಾರ, ೨೦ ದಿನ ಅಥವಾ ೪೦ ದಿನ ಭಕ್ತಿಯಿಂದ ಪ್ರದಕ್ಷಿಣೆ ಮಾಡುತ್ತಾರೋ ಅಂತಹವರಿಗೆ ಶ್ರೀಮನ್ನಾರಾಯಣನು ಅವರವರ ಇಷ್ಟಾರ್ಥಗಳನ್ನು ನೆರವೇರಿಸುತ್ತಾನೆ

ರಾಮೋತ್ಸವ ಕಾರ್ಯಕ್ರಮಗಳು

[illegible] ಶ್ರೀ ರಾಮ ಮಂದಿರದಲ್ಲಿ [illegible] ಗುರುರಾಜಪ್ಪ [illegible] ಪಿಟೀಲು ವಾದನವು [illegible] ಮೃದಂಗದೊಡನೆ ನಡೆಯುತ್ತದೆ.

ರಾಜಾರಾಮ ಅಗ್ರಹಾರದ ಶ್ರೀ ರಾಮ ಸೇವಾ ಸಮಿತಿ ಆಶ್ರಯದಲ್ಲಿ ಈ ರಾತ್ರಿ [illegible] ರವರ ಸಂಗೀತವು [illegible] ಪಿಟೀಲು ಮತ್ತು [illegible] ಮೃದಂಗದೊಡನೆ ಏರ್ಪಾಡಾಗಿದೆ.

[illegible] ಶ್ರೀ ಕೃಷ್ಣ [illegible] ಶ್ರೀ ರಾಮೋತ್ಸವವನ್ನು ನೆರವೇರಿಸಲಾಯಿತು.

ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ಹೆಚ್ಚು ಮುಸ್ಲಿಮರ ವಲಸೆ

[illegible]

ಚಲನ ಚಿತ್ರ ತಾರೆ ನಳಿನಿ ಜಯವಂತಳ ಮೇಲೆ ಮೊಕದ್ದಮೆ

[illegible]

ಸಕೆಂಡರಿ ವಿದ್ಯಾಭ್ಯಾಸ ವಿಚಾರ ಗೋಷ್ಠಿ

[illegible]

ಸ್ಟುಡಿಯೋ ಆರಂಭೋತ್ಸವ

[illegible]

ಪುಂಗನೂರು ರೇಡಿಯೋ ಶಾಲೆ ಕಾರ್ಯಕ್ರಮ

[illegible]

ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಅಮೋಘ ಸಂಗೀತ ಕಛೇರಿ

24-4-1956ನೇ ಮಂಗಳವಾರ ಸಂಜೆ 6 ಘಂಟೆಗೆ ವಿ॥ ತಂಜಾವೂರು ಲಕ್ಷ್ಮೀನಾರಾಯಣ ಭಾಗವತರ ಗಾಯನ

ವಿ॥ [illegible] — ಪಿಟೀಲು
ವಿ॥ [illegible] ಕೃಷ್ಣಯ್ಯಂಗಾರ್ಯರ — ಮೃದಂಗ
ವಿ॥ [illegible] — ಘಟ

ಟಿಕೆಟ್ ದರ ರೂ 1-0-0

ಪ್ರಖ್ಯಾತಿ ಹೊಂದಿರುವ ಕನ್ನಾನೂರ್ ಬನೀನುಗಳನ್ನು

ಉಪಯೋಗಿಸಿ

ದಿ ಕನ್ನಾನೂರು ಹೊಸೈರಿ ಫ್ಯಾಕ್ಟರಿ, ಕನ್ನಾನೂರು

[illegible]

ಗಡಿಯಾರಗಳು ಮತ್ತು ಕನ್ನಡಕಗಳು

[illegible]

ಗಡಿಯಾರಗಳು ಮತ್ತು ಕನ್ನಡಕಗಳು [illegible]

ಕೆ. ಎಸ್. ಲಕ್ಷ್ಮಣ ಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು [illegible], ಮೈಸೂರು [Estd. 1911]

D. BANUMIAH'S COLLEGE OF COMMERCE, MYSORE

(Affiliated to the Mysore University)

The College re-opens 25th May 1956. The last d[illegible] for receipt of applications admission to the Colleg[illegible] 20th May 1956. Applic[illegible] forms and the prospectus be had from the College payment of Rs 2-2-0 (inc[illegible]ing postage).

[illegible]dited, Printed and Published [illegible] R. Nagarajan at Sadhvi P[illegible] D Subbiah Road, Mysore

ಟೆಲಿಫೋನ್ ನಂ. 793

ಸಂಸ್ಥಾನದ ಪತ್ರಿಕೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿಯ ಪತ್ರಿಕೆ 3 ಕಾಸು

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೮] SADHVI : TUESDAY 24-4-1956 ಮೈಸೂರು ಮಂಗಳವಾರ : ೨೪-೪-೧೯೫೬ [ಸಂಚಿಕೆ : ೨೪೩

ಬೊಂಬಾಯಿ ನಗರದ ಬಗ್ಗೆ ದೇಶಮುಖರ ರಾಜಿನಾಮೆ?

ಆಹಾರ ಧಾನ್ಯದ ಬೆಲೆ ಶೇಕಡ ೧೦ರಷ್ಟು ಹೆಚ್ಚಿದೆ

ಬೆಂಗಳೂರು ೧೮

ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸುತ್ತ, ಸಂಸ್ಥಾನದಲ್ಲಿ ಆಹಾರ ಧಾನ್ಯಗಳ ಬೆಲೆಯು ಈ ವರ್ಷ ಶೇಕಡ ೫೦ ರಿಂದ ೧೦೦ ರಷ್ಟು ಹೆಚ್ಚಿರುವುದಾಗಿ ತಿಳಿಸಿದರು. ಪರಿಸ್ಥಿತಿಯನ್ನು ಸರ್ಕಾರದವರು ಜಾಗರೂಕತೆಯಿಂದ ಪರಿಶೀಲಿಸುತ್ತಿರುವರೆಂದೂ, ಅವಶ್ಯಕತೆ ಒದಗಿದರೆ ತಕ್ಕ ಕ್ರಮಗಳನ್ನು ಜರುಗಿಸಲಾಗುವುದೆಂದೂ ಅವರು ಹೇಳಿದರು. ವರ್ತಕರಿಗೆ ಬ್ಯಾಂಕುಗಳು ಕೊಟ್ಟಿರುವ ಸೌಲಭ್ಯವು ಎಷ್ಟರಮಟ್ಟಿಗೆ ಬೆಲೆ ಏರಿಕೆಗೆ ಕಾರಣವಾಯಿತೆಂಬುದನ್ನು ಕೇಂದ್ರ ಸರ್ಕಾರದವರು ಪರಿಶೀಲಿಸುತ್ತಿರುವುದಾಗಿ ಅವರು ಹೇಳಿ, ಬೆಲೆಯು ಹೆಚ್ಚದಿರಲು ಕೇಂದ್ರದವರು ತಮ್ಮ ಬಳಿಯಿರುವ ಹೆಚ್ಚಿನ ಧಾನ್ಯವನ್ನು ಮಾರಾಟಕ್ಕೆ ಬಿಡುವುದೆಂದು ತಿಳಿಸಿದರು. ಈಚೆಗೆ ಬೆಲೆಯು ಸ್ವಲ್ಪ ಕಡಿಮೆಯಾಗಿರುವುದೆಂದೂ ಸಹ ಸಚಿವರು ತಿಳಿಸಿದರು

ಭಾಷಾ ಸಂಶೋಧನಾ ಗೋಷ್ಠಿಗೆ ಮೈಸೂರಿನ ಪ್ರತಿನಿಧಿಗಳು

ಪೂನಾ ನಗರದಲ್ಲಿ ಇದೇ ೩೦ನೇ ತಾರೀಖಿನಿಂದ ಜೂನ್ ೨೫ನೇ ತಾರೀಖಿನವರೆಗೆ ಕೇಂದ್ರ ಸರ್ಕಾರದವರು ಏರ್ಪಡಿಸಿರುವ ಭಾಷಾ ಸಂಶೋಧನಾ ವಿಚಾರ ಗೋಷ್ಠಿಯಲ್ಲಿ ಭಾಗವಹಿಸಲು ಮೈಸೂರು ವಿಶ್ವವಿದ್ಯಾನಿಲಯದವರು ಕಾಲೇಜು ಉಪಪ್ರಾಧ್ಯಾಪಕರಾದ ಶ್ರೀ ಕೆ ಸುಬ್ರಹ್ಮಣ್ಯ ಮತ್ತು ಕನ್ನಡ ಅಧ್ಯಾಪಕರುಗಳಾದ ಎಸ್ ಸಂಪತ್ ಮತ್ತು ಶ್ರೀಮತಿ ಎಸ್ [illegible] ರನ್ನು ಆರಿಸಿರುತ್ತಾರೆ

ಅಮೇರಿಕವು ಇನ್ನೂ ಜಲಜನಕ ಬಾಂಬನ್ನು ಸಿಡಿಸಿಲ್ಲ

ರಷ್ಯದ ನಾಯಕ ಕ್ರುಶ್ಚೇವ್ ಹೇಳಿಕೆ

ವಿಮಾನದಿಂದ ಜಲಜನಕಬಾಂಬಿನ ಪ್ರಯೋಗ ಪರೀಕ್ಷೆಯನ್ನು ರಷ್ಯವೊಂದೇ ನಡೆಸಿರುವುದಾಗಿ ಬರ್ಮಿಂಗ್ಹ್ಯಾಂ ನಗರದಲ್ಲಿ ನೆನ್ನೆ ರಷ್ಯದ ಕಮ್ಯೂನಿಸ್ಟ್ ನಾಯಕ ಕ್ರುಶ್ಚೇವರು ತಿಳಿಸಿದರು. ಅಮೇರಿಕದವರು ಹಾಗೆ ಮಾಡಲು ಆಲೋಚಿಸುತ್ತಿರುವರೆಂದೂ, ಹಿಂದೆ ಅವರು ನಡೆಸಿದ ಸ್ಫೋಟನ ಜಲಜನಕಬಾಂಬಿನ ಸಿಡಿತವಲ್ಲವೆಂದೂ, ಜಲಜನಕ ಯಂತ್ರದ ಸಿಡಿತವೆಂದೂ ಕ್ರುಶ್ಚೇವ್ ಹೇಳಿದರು. ಅತಿ ಮುಖ್ಯವಾದ ವಸ್ತುಗಳನ್ನು ರಷ್ಯಕ್ಕೆ ಒದಗಿಸಲು ಪಶ್ಚಿಮ ರಾಷ್ಟ್ರಗಳು ನಿರ್ಬಂಧ ಹಾಕಿರುವುದನ್ನು ಅವರು ಟೀಕಿಸಿದರು. ಈಗ ಕ್ಷಿಪ್ರದ ಮೂಲಕ ಹಾರುವ ಅಸ್ತ್ರಗಳ (ಗೈಡೆಡ್ ಮಿಸ್ಸೈಲ್) ವಿಷಯದಲ್ಲಿ ಹೆಚ್ಚಿನ ಪ್ರಾಮುಖ್ಯ ಬಂದಿರುವುದೆಂದೂ, ಆ ವಿಷಯದಲ್ಲೂ ರಷ್ಯ ಹಿಂದೆ ಬೀಳದೆ, ಜಲಜನಕಬಾಂಬು ಮುಂದಾಗವಲ್ಲಿರುವ ಅಂತಹ ಅಸ್ತ್ರವನ್ನು ಹೊಂದಿದೆಯೆಂದೂ, ಅದನ್ನು ವಿಶ್ವದ ಯಾವ ಸ್ಥಳದ ಮೇಲಾದರೂ ಹಾಕಬಹುದೆಂದೂ ಅವರು ನುಡಿದರು

ಚಿನ್ನದ ಗಣಿ ಕೆಲಸ ನಡೆಸಲು ಪ್ರತ್ಯೇಕ ಸಂಸ್ಥೆ

ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರ ವಿವರಣೆ

ಬೆಂಗಳೂರು ೨೪

ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಕೋಲಾರದ ಚಿನ್ನದ ಗಣಿ ರಾಷ್ಟ್ರೀಕರಣದ ಸಂಬಂಧವಾಗಿ ಸಂಸ್ಥಾನದ ವಿಧಾನ ಸಭೆಯಲ್ಲಿ ಶಾಸನವನ್ನು ತರಲಾಗುವುದೆಂದೂ, ಅಥವಾ ಅದಕ್ಕಾಗಿಯೇ ವಿಶೇಷ ಶಾಸನವನ್ನು [illegible] ಎಂದೂ ವ್ಯಕ್ತಪಡಿಸಿದರು. ಚಿನ್ನದ ಗಣಿ ಕೆಲಸವನ್ನು ಮುಂದುವರಿಸಲು ಸ್ವತಂತ್ರ ಸಂಸ್ಥೆಯೊಂದನ್ನು ಸ್ಥಾಪಿಸುವ ಸಂಭವವಿದೆಯೆಂದೂ ಅವರು ತಿಳಿಸಿದರು

ಪುದುಚೇರಿ ಶಾಸನ ಸಭಾಧ್ಯಕ್ಷರ ಸಭಾತ್ಯಾಗ

ಅಧ್ಯಕ್ಷರಲ್ಲಿ ಅವಿಶ್ವಾಸ ನಿರ್ಣಯ

ಪುದುಚೇರಿಯ ಶಾಸನ ಸಭೆಯಲ್ಲಿ ನೆನ್ನೆ ಗೊಂದಲವಾಗಿ ಶಾಸನ ಸಭಾಧ್ಯಕ್ಷ ಆರ್ ಎಲ್ ಪುರುಷೋತ್ತಮ ರೆಡ್ಡಿಯಾರ್‌ರವರು ಸಭೆಯನ್ನು ಮುಂದೆ ಹಾಕಿ, ತಾವು ಇತರ ನಾಲ್ವರು ಸದಸ್ಯರೊಡನೆ ಸಭೆಯನ್ನು ಬಿಟ್ಟು ಹೋದರು. ದಿವಂಗತ ಶಕೀರಿಸ್ವಾಮಿ ಪಿಳ್ಳೆಯವರ ಸ್ಥಾನದಲ್ಲಿ ಪುದುಚೇರಿಯ ಕೌನ್ಸಿಲರ್ ಸ್ಥಾನಕ್ಕೆ ನಡೆಸಬೇಕಾದ ಚುನಾವಣೆ ಸಂಬಂಧದಲ್ಲಿ ಚೀಫ್ ಕಮಿಷನರು ಕಳುಹಿಸಿದ್ದ ಪತ್ರವನ್ನು ಚರ್ಚಿಸುತ್ತಿದ್ದಾಗ ಸಭೆಯಲ್ಲಿ ಬಿಸಿ ವಾತಾವರಣವುಂಟಾಯಿತು. ವಿಷಯವನ್ನು ಮುಂದುವರಿಸುವಂತೆ ಅಧ್ಯಕ್ಷರು ಸಲಹೆ ಮಾಡಿದರು. ಅದಕ್ಕೆ ಕಾಂಗ್ರೆಸ್ ಪಕ್ಷದ ನಾಯಕ ಎಡ್ವರ್ಡ್ ಗೌಬರ್ಟ್‌ರವರು ವಿರೋಧಿಸಿ ಸಭೆಯನ್ನು ಅಧ್ಯಕ್ಷರು ಮುಂದುವರಿಸಿದರೆ ಅವರ ಮೇಲೆ ಅವಿಶ್ವಾಸ ನಿರ್ಣಯವನ್ನು ಸೂಚಿಸುವುದಾಗಿ ತಿಳಿಸಿದರು. ತಮಗೆ ಬೆದರಿಕೆ ಹಾಕಲಾಗಿದೆಯೆಂದು ಅಧ್ಯಕ್ಷರು ತಿಳಿಸಿ ಸಭೆಯನ್ನು ಮುಂದುವರಿಸಿ ತಾವು ಸಭೆಯನ್ನು ಬಿಟ್ಟು ಹೋದರು. ಆದರೆ ಬಹು ಮಂದಿ ಅಲ್ಲೇ ಕುಳಿತು ಅಧ್ಯಕ್ಷರಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಮಾಡಿದರು. ಅಧ್ಯಕ್ಷರು ಮತ್ತು ಇತರ ನಾಲ್ವರು ಸದಸ್ಯರು ಈ ಮೊದಲು ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ಕೊಟ್ಟು ವಿರೋಧ ಗುಂಪನ್ನು ಸೇರಿದ್ದರು

ಕೃಷ್ಣಾ ನದಿ ಕಾಲುವೆಯಲ್ಲಿ ಮುಳುಗಿ ಮೂವರ ಮರಣ

ವಿಜಯವಾಡದ ಬಳಿ ಕೃಷ್ಣಾ ನದಿಯ ಎಡದಂಡೆ ಕಾಲುವೆಯಲ್ಲಿ ಮುಳುಗಿ ಕಳೆದ ಶನಿವಾರ ಮೂವರು ಮಡಿದರೆಂದು ವರದಿಯಾಗಿದೆ. ಆಂಧ್ರ ಸಿಮೆಂಟ್ ಕಂಪೆನಿಯ ಫೋರ್‌ಮನ್ ತಕ್ಕೆಲ್ಲ ಪನಕಲು ಎಂಬಾತನು ಸ್ನಾನ ಮಾಡುತ್ತಿದ್ದಾಗ ಕಾಲು ಜಾರಿ ಕೆಳಗೆ ಬಿದ್ದುದರಿಂದಲೂ, ಗೋವಿಂದು ಮತ್ತು ವೀರಯ್ಯ ಎಂಬುವರು ಸ್ನಾನ ಮಾಡುತ್ತಿದ್ದಾಗಲೂ ನೀರಿನಲ್ಲಿ ಮುಳುಗಿ ಮಡಿದರೆಂದು ಗೊತ್ತಾಗಿದೆ

ಬೊಂಬಾಯಿ ಭವಿಷ್ಯದ ಬಗ್ಗೆ ದೇಶ್‌ಮುಖ್‌ರವರ ರಾಜೀನಾಮೆ

ಬೊಂಬಾಯಿ ನಗರದ ಭವಿಷ್ಯದ ಬಗ್ಗೆ ನೆನ್ನೆ ಮತ್ತೆ ವಿವಾದಗಳುಂಟಾದವೆಂದು ಗೊತ್ತಾಗಿದೆ. ಲೋಕಸಭೆಯಲ್ಲಿ ರಾಜ್ಯ ವಿಂಗಡಣಾ ಮಸೂದೆಯು ಚರ್ಚೆಯಾಗುತ್ತಿದ್ದಾಗ ಮಹಾರಾಷ್ಟ್ರದ ಕಾಂಗ್ರೆಸ್ ಸದಸ್ಯರುಗಳು ಪ್ರಧಾನಿಯವರಿಗೆ ಮನವಿಯೊಂದನ್ನು ಒಪ್ಪಿಸಿ ಬೊಂಬಾಯಿ ನಗರವನ್ನು ಮಹಾರಾಷ್ಟ್ರದಲ್ಲೇ ಉಳಿಸುವಂತೆ ಕೋರಿದರು. ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಕಾರ್ಯಕಾರಿ ಸಮಿತಿಯ ತುರ್ತು ಸಭೆಯೊಂದು ನೆನ್ನೆ ಸೇರಿ ಈ ವಿಷಯವನ್ನು ಚರ್ಚಿಸಿತೆಂದೂ ವಿಶೇಷ ಆಹ್ವಾನದ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಕೇಂದ್ರ ಅರ್ಥ ಸಚಿವ ಶ್ರೀ ಸಿ ಡಿ ದೇಶ್‌ಮುಖ್‌ರವರು ತಾವು ಬೊಂಬಾಯಿ ಭವಿಷ್ಯದ ಬಗ್ಗೆ ಮಸೂದೆಯನ್ನು ಲೋಕಸಭೆಯಲ್ಲಿ ವಿರೋಧಿಸುವುದಾಗಿ ತಿಳಿಸಿದರೆಂದೂ ಹೇಳಲಾಗಿದೆ. ಈ ವಿಷಯದಲ್ಲಿ ತಾವು ಸಚಿವ ಪದವಿಗೆ ರಾಜೀನಾಮೆ ಕೊಡಲೂ ಸಹಾ ಸಿದ್ಧವಿರುವುದಾಗಿ ದೇಶ್‌ಮುಖ್‌ರವರು ಹೇಳಿರುವರೆಂದೂ ಗೊತ್ತಾಗಿದೆ

ಅಫ್ಘನರಿಂದ ೮ ಜನ ಪಾಕಿಸ್ತಾನ ಸೈನಿಕರ ಕೊಲೆ

ಪಾಕಿಸ್ತಾನದ ಗಡಿ ಬಳಿ ಇರುವ ಫ್ರಾಂಟಿಯರ್ ಕಾಂಡಿಮಸ್ ಪ್ರದೇಶದಲ್ಲಿ ಅಫ್ಘನ್ ಬುಡಕಟ್ಟಿನವರು ಕಳೆದ ಗುರುವಾರ ಗಡಿಯನ್ನು ದಾಟಿಬಂದು ಪಾಕಿಸ್ತಾನಿ ಕಾವಲು ದಳದವರೊಡನೆ ಹೋರಾಟ ನಡೆಸಿ ೮ ಜನರನ್ನು ಕೊಂದು ೫ ಜನರನ್ನು ಗಾಯಗೊಳಿಸಿದರೆಂದು ವರದಿಯಾಗಿದೆ. ಅಫ್ಘನ್ ಅಧಿಕಾರಿಗಳ ಸೂಚನೆಯಂತೆ ಈ ಕೃತ್ಯ ನಡೆಯಿತೆಂದು ಹೇಳಲಾಗಿದೆ

ರಾಮೋತ್ಸವದ ಕಾರ್ಯಕ್ರಮಗಳು

ಈ ಸಂಜೆ ೬ ಗಂಟೆಗೆ ಸಿವಿಲ್ ಪೊಲೀಸ್ ಹೆಡ್‌ಕ್ವಾರ್ಟರ್ಸ್ ಆವರಣದಲ್ಲಿ ರಾಮೋತ್ಸವದ ಪ್ರಯುಕ್ತ, ಶ್ರೀಮತಿ ಎಂ ಕೆ ಯಶೋಧಮ್ಮನವರಿಂದ "ರುಕ್ಮಿಣಿ ಕಲ್ಯಾಣ" ಎಂಬ ಹರಿಕಥೆಯೂ, ಶ್ರೀಮತಿ ಎಂ ಕೆ ಸೀತಮ್ಮನವರಿಂದ ಹಾರ್ಮೋನಿಯಂ ವಾದ್ಯವೂ ಏರ್ಪಾಟಾಗಿವೆ

ಈ ದಿನ ಸಂಜೆ ೭ ಗಂಟೆಗೆ ಕಾಲೇಜು ರಸ್ತೆಯಲ್ಲಿರುವ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ಶ್ರೀಮತಿ ಟಿ ಜಿ ಸರೋಜಮ್ಮನವರ ಗಾಯನವು ವಿ॥ ವೆಂಕಟಾಚಾರ್‌ರವರ ಪಿಟೀಲು, ವಿ॥ ಹೆಚ್ ಟಿ ನಾಗಣ್ಣನವರ ಮೃದಂಗದೊಡನೆ ನಡೆಯುತ್ತದೆ

ಚಲುವಾಂಬ ಅಗ್ರಹಾರದ ಬಾಲಕರ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ಶ್ರೀಮತಿ ಪಿ ಕೆ ಲೀಲಾರವರ ಹಾಡುಗಾರಿಕೆಯು ವಿ॥ ವೆಂಕಟಾಚಾರ್‌ರವರ ಪಿಟೀಲು ಮತ್ತು ವಿ॥ ರಾಮಚಂದ್ರರವರ ಮೃದಂಗದೊಡನೆ ನಡೆಯುವುದು

ಕೊತ್ತವಾಲ ರಾಮಯ್ಯನವರ ಬೀದಿ ಆರ್ಯ ವೈಶ್ಯ ಬಾಲಕ ಭಕ್ತ ಮಂಡಲಿಯವರು ತಮ್ಮ ರಾಮ ಮಂದಿರದಲ್ಲಿ ಈ ಸಂಜೆ ೬ ಗಂಟೆಗೆ ವಿ॥ ಗಿರಿಜಮ್ಮ ಮತ್ತು ನಾಟ್ಯಯವರಿಂದ ಸಂಗೀತವನ್ನು ಏರ್ಪಡಿಸಿರುತ್ತಾರೆ

ಅಕ್ಟೋಬರ್ ಹೊತ್ತಿಗೆ ಸಂಸ್ಥಾನಗಳ ಪುನರ್ರಚನೆ

ಪಾರ್ಲಿಮೆಂಟಿನ ಸಹಕಾರಕ್ಕಾಗಿ ಗೃಹ ಮಂತ್ರಿ ಪಂತರ ಕರೆ

ನೆನ್ನೆ ಲೋಕಸಭೆಯಲ್ಲಿ ಗೃಹ ಮಂತ್ರಿ ಪಂಡಿತ್ ಪಂತ್‌ರವರು ಮಾತನಾಡಿ, ಬರುವ ಅಕ್ಟೋಬರ್ ಹೊತ್ತಿಗೆ ನೂತನ ಸಂಸ್ಥಾನಗಳ ರಚನೆಗಾಗಿ ಇಟ್ಟುಕೊಳ್ಳಲಾಗಿರುವ ಕಾರ್ಯಕ್ರಮವು ಜಾರಿಗೆ ಬರುವುದಕ್ಕೆ ಸಭೆಯ ಸಹಕಾರವನ್ನು ಕೋರಿದರು. ದೇಶದಲ್ಲಿ ನೆಮ್ಮದಿ, ಪರಸ್ಪರ ನಂಬಿಕೆ ಮತ್ತು ವಿಶ್ವಾಸಗಳು ಮೂಡಬೇಕೆಂದೂ, ಹೊರಗಡೆ ಧರ್ಮಯುದ್ಧದ ಕೂಗುಗಳು ಏಳುತ್ತಿರುವುದರಿಂದ ಏಕಮತ್ಯವು ಅವಶ್ಯಕವೆಂದೂ ಅವರು ಹೇಳಿದರು

ಬಳ್ಳಾರಿಯ ಪ್ರಶ್ನೆಯನ್ನು ಅವರು ಪ್ರಸ್ತಾಪಿಸಿ, ಮೈಸೂರು ಸರ್ಕಾರದವರು ತುಂಗಭದ್ರಾ ಯೋಜನೆ ಬಗ್ಗೆ ಕೇಂದ್ರಕ್ಕೆ ಭರವಸೆಯಿತ್ತಿರುವರೆಂದೂ, ಅದರ ಮೇಲ್ವಿಚಾರಣೆ ಜವಾಬ್ದಾರಿಯನ್ನು ಕೇಂದ್ರದವರೇ ವಹಿಸಿಕೊಂಡಿರುವರೆಂದೂ ಅದರಿಂದ ಬರುವ ಪೂರ್ಣ ಫಲವನ್ನು ಆಂಧ್ರದವರು ಅನುಭವಿಸಲು ಯಾರೂ ಅಡ್ಡಿ ಬರಲಾರರೆಂದೂ ತಿಳಿಸಿದರು

ಅಮೇರಿಕದ ಬಸ್ಸುಗಳಲ್ಲಿ ವರ್ಣ ಭೇದ ಮಾಡುವುದು ಅಕ್ರಮ

ಅಮೇರಿಕದ ಬಸ್ಸುಗಳಲ್ಲಿ ಪ್ರಯಾಣ ಮಾಡುವಾಗ ವರ್ಣಭೇದ ಮಾಡುವುದನ್ನು ಇತರ ರಾಷ್ಟ್ರದ ೪೮ ಪ್ರಾಂತಗಳಲ್ಲಿಯ ಕಾನೂನು ಬಾಹಿರವನ್ನಾಗಿಮಾಡಿ ಸುಪ್ರೀಂ ಕೋರ್ಟಿನವರು ಆಜ್ಞೆ ಮಾಡಿರುತ್ತಾರೆ. ೧೨ ವರ್ಷಗಳ ಹಿಂದೆ ಒಂದು ಪ್ರಾಂತದಿಂದ ಮತ್ತೊಂದಕ್ಕೆ ಹೋಗುವಾಗ ವರ್ಣಭೇದವನ್ನು ರದ್ದುಮಾಡಲಾಗಿತ್ತು

ತುಮಕೂರಿನ ಕೆ. ಎಸ್. ಪಟ್ಲರಿಂದ ೩೦೦ ಎಕರೆ ಭೂದಾನ

ತುಮಕೂರು ಜಿಲ್ಲಾ ಪಾವಗಡ ತಾಲ್ಲೂಕಿನ ರಂಗಸಮುದ್ರದ ಶ್ರೀ ಕೆ ಎಸ್ ಪಟ್ಲರ್‌ರವರು ೩೦೦ ಎಕರೆ ಜಮೀನನ್ನು ಭೂದಾನ ಕೊಟ್ಟಿರುತ್ತಾರೆ. ಈ ಸಂಬಂಧದಲ್ಲಿ ಇದೇ ೨೯ನೇ ತಾ॥ ರಂಗಸಮುದ್ರದಲ್ಲಿ ಸಮಾರಂಭವೊಂದು ಶ್ರೀ ಟಿ ಸುಬ್ರಹ್ಮಣ್ಯರ ಅಧ್ಯಕ್ಷತೆಯಲ್ಲಿ ನಡೆದು, ಭೂಮಿಯನ್ನು ರೈತರುಗಳಿಗೆ ವಿನಿಯೋಗಿಸಲಾಗುವುದು. ವಿಧಾನಸಭಾ ಸದಸ್ಯರಾದ ಶ್ರೀ ಕೆ ಪಟ್ಟಾಭಿರಾಮರವರು ಭೂದಾನ ಸಂದೇಶದ ಬಗ್ಗೆ ಭಾಷಣ ಮಾಡುವರು

ಅನೀತಿ ವ್ಯಾಪಾರಕ್ಕಾಗಿ ಶಿಕ್ಷೆ

ಒಂಟಿಕೊಪ್ಪಲು ನಿವಾಸಿ ಕಾರ್ತಿಯಾಣಿ ಎಂಬುವನು ಲಕ್ಷ್ಮಿ ವೆಂಕಟಲಕ್ಷ್ಮಿ, ಚಿಕ್ಕಬೋರನ ಸೆರು ಪಾರ್ವತಿ ಎಂಬುವರನ್ನು ಕರೆದುಕೊಂಡು ಹೋಗಿ ದೇವಮ್ಮ ಎಂಬಾಕೆಯ ಮನೆಯಲ್ಲಿ ಅನೀತಿ ವ್ಯಾಪಾರ ನಡೆಸುತ್ತಿದ್ದನೆಂದು ಒಂಟಿಕೊಪ್ಪಲು ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ಈ ದಿನ ನಾರಾಯಣನಿಗೆ ೫೦ ರೂ ಮತ್ತು ಪಾರ್ವತಿಗೆ ೨೦ ರೂ. ಜುಲ್ಮಾನೆಯನ್ನು ವಿಧಿಸಿದರು

ನಗರಾಭಿವೃದ್ಧಿ ಸಮಿತಿಯನ್ನು ರದ್ದು ಮಾಡಲು ಮನವಿ

ಮೈಸೂರು, ಏ.

ನಗರಾಭಿವೃದ್ಧಿ ಕಾನೂನಿನ [illegible] ವಿಧಿಯ ಪ್ರಕಾರ ಮೈಸೂರು ನಗರಾಭಿವೃದ್ಧಿ ಸಮಿತಿಯನ್ನು ರದ್ದು ಮಾಡಿ [illegible] ಸ್ಥಳೀಯ ಅಧ್ಯಕ್ಷರಾಗಿ [illegible] ನಗರಾಭಿವೃದ್ಧಿ ಸಮಿತಿಯ ಕಾರ್ಯ [illegible] ವಹಿಸುವ ತೀರ್ಮಾನವನ್ನು ಪ್ರಾರ್ಥಿಸುವ ನಿರ್ಣಯವೊಂದನ್ನು ಇದೇ [illegible] ನಡೆಯಲಿರುವ ಪೌರಸಭೆ [illegible] ಡಾ॥ ಬಿ. ಜಿ. [illegible] ಮಂಡಿಸುತ್ತಾರೆ.

ಎಸ್. ಎಸ್. ಎಲ್. ಸಿ. ವರೆಗೆ ಉಚಿತ ವಿದ್ಯಾಭ್ಯಾಸ [illegible] ಕೋರುವ ಇನ್ನೊಂದು ನಿರ್ಣಯವನ್ನು ಶ್ರೀ ಎ. ನ. [illegible] ಮಂಡಿಸುವರು.

ಜೀವಾ ನಿಯೋಗದ ಸ್ವಾಗತ ಸಮಿತಿಯ ಅಧ್ಯಕ್ಷ [illegible]

[illegible] ಸಾಂಸ್ಕೃತಿಕ [illegible] ದ ಭೇಟಿಯ ಸಂಬಂಧದಲ್ಲಿ ಇಂಡಿಯಾ [illegible] ದ ಆಶ್ರಯದಲ್ಲಿ ಏರ್ಪಟ್ಟಿರುವ ಸ್ವಾಗತ ಸಮಿತಿಯ ಸಭೆಯು [illegible]

[illegible]

ಪ್ರಾಂತೀಯತೆ ತೊರೆಯುವಂತೆ ನೆಹರೂರವರ ಕರೆ

[illegible] ಪ್ರಾಂತೀಯ ಭಾವನೆಯನ್ನು ತ್ಯಜಿಸಿ [illegible] ಕುಟುಂಬಕ್ಕೆ ಸೇರಿದವರು ಎಂಬ ಭಾವನೆಯನ್ನು ಬೆಳೆಸಿಕೊಳ್ಳಬೇಕೆಂದೂ ಭಾರತವು [illegible] ಮತ್ತು ಕೈಗಾರಿಕಾ [illegible] ನಡೆಯುತ್ತಿರುವಾಗ ಜನರು [illegible] ಬಗ್ಗೆ ಉದ್ರೇಕಗೊಳ್ಳುವುದು ದರ್ [illegible] ಎಂದು ತಮಗೆ ಅರ್ಥವಾಗುತ್ತಿಲ್ಲ [illegible] ನೆಹರೂರವರು ತಿಳಿಸಿರುವರು [illegible] ಬೇಡಿಕೆಗಳು [illegible] ಗೃಹ ಮತ್ತು [illegible] ಕೂಗುವುದನ್ನು [illegible] ಪ್ರಭುತ್ವಕ್ಕೆ [illegible] ಅನುಸರಿಸಿ ತಮ್ಮ ಅಭಿಪ್ರಾಯಗಳನ್ನು ನೆರವೇರಿಸಿಕೊಳ್ಳಬೇಕೆಂದು ಅವರು ಹೇಳಿರುವರು

ಕಾಶ್ಮೀರದ ವಿಮೋಚನೆಗೆ ಪಾಕ್ ಮುಸ್ಲಿಂ ಲೀಗಿನ ಬೆಂಬಲ

[illegible] ವಿಮೋಚನೆ [illegible]

[illegible]

ಒತ್ತದ ಹೊಟ್ಟೆನಿಂದ ಇಟ್ಟಿಗೆ

[illegible]

ಬ್ರಿಟಿಷ್ ರಾಣಿಯವರಿಗೆ ರಕ್ತದ ಪ್ರಧಾನಿಯ ಉಡುಗೊರೆ

ಬ್ರಿಟಿಷ್ ರಾಣಿ ಎಲಿಜಬೆತ್‌ರವರ [illegible] ರಕ್ತದ ಪ್ರಧಾನಿ [illegible] ಕ್ರುಶ್ಚೇವರು [illegible] ಕೊಟ್ಟಿರುವ [illegible]

ಸಂಗೀತೋದು ರೀಡಿಯೊ ಸಾಪ್ತಿ ಕಾರ್ಯಕ್ರಮ

[illegible]

ಶ್ರೀ ಪ್ರಸನ್ನ ಸೀತಾ ರಾಮ ಮಂದಿರದ

ಅನ್ನೋಸ್ ಸಂಗೀತ ಕಚೇರಿ

25 - 1956 [illegible]

[illegible]

ಉಪಾಧ್ಯಾಯ ಮತ್ತು ಉಪಾಧ್ಯಾಯಿನಿಯರಿಗೆ ಸೇವಾದಳ ಶಿಕ್ಷಣ

[illegible] ಪ್ರಾಥಮಿಕ ಮಾಧ್ಯಮಿಕ [illegible]

ಬಳ್ಳಾರಿ ಉಪ ಚುನಾವಣೆ ನೇಲ್ ಪಟ್ಟಿ

[illegible] ವಿಧಾನ ಸಭಾ ಸದಸ್ಯ [illegible] ನಾಮಪತ್ರ [illegible] ತಾರೀಖು ಅರ್ಜಿ [illegible] ದಿನ

ಗಾಯತ್ರೀ ಟಾಕೀಸ್

ಹೆಲೆನ್ ಆಫ್ ಟ್ರಾಯ್

26-4-56 ರಿಂದ

ಕ್ರೇಂಚ್ ಲೇಡಿ ಇನ್ ಟೌನ್

ರಾಮೋತ್ಸವ ಕಾರ್ಯಕ್ರಮಗಳು

ಉತ್ತರಾದಿಮಠದ ಬೀದಿಯಲ್ಲಿರುವ ರಾಮ ಮಂದಿರದಲ್ಲಿ ಈ ರಾತ್ರಿ [illegible] ಗಂಟೆಗೆ [illegible] ರತ್ನಾಕರ ಪೇ. ಬೃಹ. ಶ್ರೀ ಜಯತೀರ್ಥಾಚಾರ್ಯರಿಂದ ಗಜೇಂದ್ರ ಮೋಕ್ಷ ಎಂಬ ಕಥೆ ಮತ್ತು [illegible] ಗಂಟೆಗೆ ಶ್ರೀಮತಿ [illegible] ವಿ॥ ಶಿವರಾಮಯ್ಯನವರ ಪಿಟೀಲು ಮತ್ತು ವಿ॥ ರಾಜಣ್ಣನವರ ಮೃದಂಗದೊಡನೆ ನಡೆಯುವುದು

ಸಂತೆಪೇಟೆ ಕುಂಬಾರಗೇರಿ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ [illegible] ಗಂಟೆಗೆ ವಿ॥ ವಿ॥ [illegible] ಕೃಷ್ಣಯ್ಯಂಗಾರ್ಯರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು

ರಾಜಾರಾಂ ಅಗ್ರಹಾರದ ಶ್ರೀ ರಾಮ ಸೇವಾ ಸಮಿತಿ ಆಶ್ರಯದಲ್ಲಿ ಈ ರಾತ್ರಿ ವಿ॥ ಎ. [illegible] ಕೃಷ್ಣನವರ ವೀಣಾ ವಾದನವು ವಿ॥ ವಿ॥ [illegible] ಕೇಶವನವರ ಮೃದಂಗದೊಡನೆಯೂ ನಾಳೆ ರಾತ್ರಿ ವಿ॥ ವಿ॥ ಎಸ್. ಎ. ಮರಿಯಪ್ಪನವರ [illegible] ವಿ॥ ವಿ॥ ಎಸ್. ಶಿವರಾಮಯ್ಯನವರ ಪಿಟೀಲು ಮತ್ತು [illegible] ಜಗೋಪಾಲ್‌ರವರ ಮೃದಂಗದೊಡನೆಯೂ ಏರ್ಪಾಡಾಗಿದೆ

ನಗರದ ತಳೂರು ಮಠದ ಬೀದಿಯಲ್ಲಿರುವ [illegible] ರಾಮ ಮಂದಿರದಲ್ಲಿ [illegible] ಶ್ರೀ ನೆ [illegible] ಸಂಗೀತವು [illegible] ಅಧ್ಯಕ್ಷ ಶ್ರೀ ವಿ. ಕೃಷ್ಣಮೂರ್ತಿರಾಯರು [illegible]

ಅಭಿನವ ಶಂಕರಾಲಯದಲ್ಲಿ ವೇದಾಂತ ಪಾಠ

ರಾಜಧಾನಿಯ ಅಭಿನವ ಶಂಕರಾಲಯದಲ್ಲಿ [illegible] ವರ್ಷಗಳಿಂದಲೂ ವೇದಾಂತ ಪಾಠವನ್ನು [illegible] ನಡೆಸುತ್ತಿದ್ದರು [illegible] ಅಧ್ಯಾಪಕರಾಗಿದ್ದ ವೇ॥ ಬ್ರ॥ ಶ್ರೀ [illegible] ನಾರಾಯಣಶಾಸ್ತ್ರಿಗಳು [illegible] ನಗರದಲ್ಲಿರುವ ಇತರ ಎಲ್ಲಾ [illegible] ಪುರಾಣ ಶ್ರವಣ [illegible] ಮಠದವರು ಇದನ್ನು [illegible] ಪುನಃ ಪ್ರಾರಂಭಿಸಿ [illegible] ಇತರ ಶಾಸ್ತ್ರಾಭ್ಯಾಸಿಗಳನ್ನು ಏರ್ಪಡಿಸುವರೆಂದು ಆಶಿಸುತ್ತೇನೆ - ಎಂಬುದಾಗಿ ಸಂಚಕರೊಬ್ಬರು ಪತ್ರ ಬರೆದು ಕೋರಿರುತ್ತಾರೆ

ಮೈಸೂರು ಪೇಟೆ ಧಾರಣೆ

	ರೂ ಖಂಡ			ರೂ ಖಂಡಿ		
ಕಡಲೇ ಕಾಯಿ	೧೯	೦	೦	೨೪	೦	೦
ಹುರುಳಿ	೪೩	೯೪	೦			
ತೊಗರಿಬೇಳೆ	೨೩	೧೦	೦	೨೩	೧೪	೦
ಕಡಲೆಬೇಳೆ	೨೦	೨	೦	೨೮	೨	೦
ಹುರುಳಿ	೨೭	೦	೦	೨೮	೧೦	೦
ಹಲಸಂದೆ	೨೨	೨	೦			
ಹುರಳೀಕಾಳು	೮	೨	೦	೮	೪	೦
ಬೆಳ್ಳುಳ್ಳಿ	೬	೧೨	೦	೬	೧೪	೦
ಹುಣಸೇಹಣ್ಣು	೪	೮	೦	೬	೪	೦
ಮೆಣಸಿನಕಾಯಿ	೧೦	೪	೦	೨೦	೬	೦
ತೆಂಗಿನಕಾಯಿ ೧೦೦೦	೧೧೨	೮	೦	೨೪	೦	೦

D BANUMIAH'S COLLEGE OF COMMERCE

MYSORE

(Affiliated to the Mysore University)

The College re opens on 20th May 1956 The last date for receipt of applications for admission to the College is 24th May 1956 Application forms and the prospectus can be had from the College on payment of Rs 1-2-0 (including postage)

ಲೋಕಸಭಾ ಸದಸ್ಯ ಕಾಮತ್ ಮೇಲೆ ಅಧ್ಯಕ್ಷರ ಕ್ರಮ

ನೆನ್ನೆ ಲೋಕಸಭೆಯಲ್ಲಿ ಅಧ್ಯಕ್ಷ [illegible] ಶಯನಂ ಅಯ್ಯಂಗಾರ್ಯರು ಸಭಾಸದಸ್ಯ [illegible] ವಿ. ಕಾಮತ್‌ರವರಿಗೆ ಒಂದು ದಿನದ ಮಟ್ಟಿಗೆ ಸಭೆಯಿಂದ ಆಚೆಗೆ ಹೋಗುವಂತೆ ಸೂಚಿಸಿದರು. ಸಭಾ ನಡವಳಿಕೆ ಸಂಬಂಧದಲ್ಲಿ ಕಾಮತ್‌ರವರು [illegible] ಪಡಿಯೊಂದನ್ನು ಕಂಡಾಗ, ಸಭಾಧ್ಯಕ್ಷರು ಈ ಬಗ್ಗೆ ಮೊದಲು ನೋಟೀಸು ಕೊಡಬೇಕಾಗಿತ್ತೆಂದು ತಿಳಿಸಿ, ಮುಂದೆ ಛಾಪುವಾರಗಳಲ್ಲಿ [illegible] ಗಳನ್ನು ಬರೆದು ಕಳುಹಿಸುವುದಕ್ಕೆ [illegible] ಕಲ್ಪಿಸುವುದಾಗಿ ಹೇಳಿದಾಗ, ಸದಸ್ಯರು ಹಾಗೆ ಮಾಡಿದರೆ "ಉಭಯರಿಗೂ" ಸೌಕರ್ಯವಾಗುವುದೆಂದು ತಿಳಿಸಿದರು. ಸಭೆಯು ಇದನ್ನು [illegible] ಸಕ್ಕತು ಸಭಾಸದಸ್ಯರು [illegible] ಯಲ್ಲಿ ಮಾತನಾಡಕೂಡದೆಂದೂ, ತಾವು [illegible] ದ ಮಾತನ್ನು ವಾಪಸು ಪಡೆಯಬೇಕೆಂದೂ [illegible] ವಾದರೆ ಹೊರಗೆ ಹೋಗಬೇಕೆಂದೂ ಅಧ್ಯಕ್ಷರು [illegible] ಳಿಸಿದರು. ಕಾಮತ್‌ರವರು ಹೊರಟುಹೋದರು.

ವಿವಾಹ ಮಹೋತ್ಸವಗಳು

ರಾಜಧಾನಿಯ ವಕೀಲರಾದ ಶ್ರೀ ಎಂ. ಆರ್. ನರಸಿಂಹಮೂರ್ತಿಯವರು ತಮ್ಮ ಪುತ್ರಿ [illegible] ಕನ್ಯೆಯನ್ನು ಯೋಗಾನರಸಿಂಹ [illegible] ಮಾರ್ಕೆಟಿಂಗ್ ಶ್ರೀ ಕೆ. ನಾರಾಯಣರಾಯರ ಮಕ್ಕಳು ಶ್ರೀ ಕೆ. ಆರ್. [illegible] ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ರಾಜಧಾನಿಯಲ್ಲಿರುವ [illegible] ಟ್ ಶ್ರೀ ಎಸ್. ಎ. ಸಂಜೀವನವರು ತಮ್ಮ ಪುತ್ರ ಶ್ರೀ ಎಸ್. ಎ. ಶಿವರಾಂರವರಿಗೆ ಶ್ರೀ [illegible] ಎ. ಸುಬ್ಬಣ್ಣನವರ ಪುತ್ರಿ ಸೌ॥ [illegible] ದೇವಿಯನ್ನು ತಂದುಕೊಂಡು ನೆನ್ನೆ ನಗರದಲ್ಲಿ ವಿವಾಹವನ್ನು ನಡೆಸಿದರು

ಕೃಷ್ಣರಾಜ ಮೊಹಲ್ಲಾ ಸೀತಾರಾಮಶೆಟ್ಟಿ [illegible] ಯಲ್ಲಿರುವ ನಿವೃತ್ತ ಪೋಲೀಸು ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ವಿ. ಕೆ. ರಾಮರಾಯರು ತಮ್ಮ ಪುತ್ರಿ ಸೌ॥ ಕಾವೇರಮ್ಮನನ್ನು [illegible] ರ್ ಮಾಸ್ಟರ್ ಶ್ರೀ ಕೆ. ನರಸಿಂಹಮೂರ್ತಿಯವರ ಪುತ್ರ ಶ್ರೀ ಸತ್ಯನಾರಾಯಣರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ನಿಮಗೆ ಈಗಲೇ ಸದವಕಾಶ !

★ ಅಶಕ್ತರನ್ನು ಶಕ್ತಿಯುತರಾಗಿ ಮಾಡಲಾಗುವುದು, ವೃದ್ಧರಿಗೆ ತಾರುಣ್ಯವನ್ನು ತಂದುಕೊಡಲಾಗುವುದು ತರುಣರಿಗೆ ಅನನ್ಯ ಶಕ್ತಿ ಬರುವುದು

ವಿಖ್ಯಾತ ಮತ್ತು ವಿಶೇಷ ಅನುಭವ ಪಡೆದ ಪಂಡಿತರಾದ

ಡಾ॥ ರಾ ಜಾ ರವರನ್ನು

ಮುದ್ದಾಗಿ ಕಂಡು ಮಾತನಾಡಿ

ಅವರು ಗಂಡಸರ ಮತ್ತು ಹೆಂಗಸರ ಬೇರೆ ಬೇರೆ ಗುಪ್ತ ರೋಗಗಳನ್ನು [illegible] ಕೊಡುವರು. ಮಕ್ಕಳಾಗದ ಹೆಂಗಸರಿಗೆ [illegible] ಮೊಲವ್ಯಾಧಿ, ನರಗಳ ದೌರ್ಬಲ್ಯ, [illegible] ಮಹಿಳೆಯರ ಮುಟ್ಟಿನ ಸಂಬಂಧದ ತೊಂದರೆಗಳು ಮುಟ್ಟು ಸರಿಯಾಗುವುದು, ಉಳಿದ್ಯಾವುದೇ ಗುಪ್ತ ರೋಗಗಳನ್ನು ಶಸ್ತ್ರ ಚಿಕಿತ್ಸೆಯಿಲ್ಲದೆ ಗುಣಪಡಿಸುವರು ಶೇಕಡ 100 ರಷ್ಟು ಗ್ಯಾರಂಟಿಯೊಡನೆ ಮತ್ತು ಅನಮಾನವಾದ ಚಿಕಿತ್ಸೆ [illegible] ಕಾಣಬರುವುದು

ಸೂಚನೆ - ನರಗಳ ದೌರ್ಬಲ್ಯಕ್ಕೆ ಔಷಧಿ [illegible] ವಿದ್ಯುಚ್ಛಕ್ತಿ ಯಂತ್ರಗಳ ಸಹಾಯದಿಂದಲೂ ಚಿಕಿತ್ಸೆ ಮಾಡಲಾಗುವುದು. [illegible] ಅದರ ಪರಿಣಾಮವು ಶೀಘ್ರವಾಗುವುದು ಆದ್ದರಿಂದ ತಮ್ಮ ಭವಿಷ್ಯವನ್ನು ಉತ್ತಮಗೊಳಿಸಿಕೊಳ್ಳಲು ಸುವರ್ಣಾವಕಾಶ

ಭೇಟಿಯ ಕಾಲ ಬೆಳಿಗ್ಗೆ 8 ರಿಂದ ಮಧ್ಯಾಹ್ನ 2 ಮತ್ತು 4 ರಿಂದ ರಾತ್ರಿ 8

ರಾಜಾ ಮೆಡಿಕಲ್ ಹಾಲ್,

ಎಸ್. ನಂ. 1745 [illegible]

(ಮೈಸೂರು ಬ್ಯಾಂಕ್ [illegible] 3ನೇ ಕಟ್ಟಡ)

Edited Printed and Published by A R Nagarajan at Sadhvi Press D Subbiah Road Mysore

ಟೆಲಿಫೋನ್ ನಂ.

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ,
ಬನಾರಸ್, ಬಿಂಡಿಗೆಲ್
ರೇಷ್ಮೆ ಪಂಚೆ, ಜರತಾರಿ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ. ಎ., ಪ್ರೊಪ್ರೈಟರ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಂಪುಟ : ೧೪] SADHVI : WEDNESDAY 25-4-1956 ಮೈಸೂರು ಬುಧವಾರ : ೨೫ ೪ ೧೯೫೬ [ಸಂಚಿಕೆ : ೨೪೪

ಬಿಳಿಗಿರಿ ರಂಗನ ಬೆಟ್ಟದ ರಥಕ್ಕೆ ಸಿಕ್ಕಿ ಮೂವರ ಮರಣ

ರಥೋತ್ಸವದ ದುರ್ಘಟನೆಯಲ್ಲಿ ಮೂವರ ಮರಣ

ಬಿಳಿಗಿರಿ ರಂಗನ ಬೆಟ್ಟದ ಜಾತ್ರೆಯಲ್ಲಿ ನಡೆದ ದುರಂತ

ಮೈಸೂರು ೨೪

ಬಿಳಿಗಿರಿರಂಗನ ಬೆಟ್ಟದಲ್ಲಿ ನೆನ್ನೆ ರಥೋತ್ಸವದ ಸಂಬಂಧವಾಗಿ ತೇರನ್ನು ಎಳೆಯುತ್ತಿದ್ದಾಗ ಘಟಿಸಿದ ದುರ್ಘಟನೆಯಲ್ಲಿ ಕಮ್ಮಾರನೊಬ್ಬನು ಚಕ್ರಕ್ಕೆ ಸಿಕ್ಕಿ ಮೃತಪಟ್ಟನು. ರಥದ ಮೇಲೆ ನಿಂತಿದ್ದ ಮೈಸೂರಿನ ನಿವೃತ್ತ ಸಬ್ ರಿಜಿಸ್ಟ್ರಾರ್ ಶ್ರೀ ಟಿ. ಶಿವಶಂಕರರವರು, ತೇರಿಗೆ ಗೊನಮನನ್ನು ಕಟ್ಟಿದ ತೇರಿನ ಅಲುಗಾಟದಿಂದ ಕೆಳಕ್ಕೆ ಬಿದ್ದು ಜನಸಂದಣಿಯಿಂದ ತುಳಿಯಲ್ಪಟ್ಟು ಅವರಿಗೆ ತೀವ್ರ ಪೆಟ್ಟು ಬಿದ್ದುದರಿಂದ ಪ್ರಜ್ಞೆ ತಪ್ಪಿ ಸ್ವಲ್ಪ ಹೊತ್ತಿನನಂತರ ಅಲ್ಲಿಯೇ ಮೃತಪಟ್ಟರು.

ರಥದ ಕಡೆ ಎಸೆಯಲಾಗುತ್ತಿದ್ದ ಬಾಳೆಹಣ್ಣುಗಳನ್ನು ಆಯ್ದುಕೊಳ್ಳುವ ಗೊಂದಲದಲ್ಲಿ ಮೂವರು ಚಕ್ರಕ್ಕೆ ಸಿಕ್ಕಿ ಒಬ್ಬನ ಮಂಡಿ ಬಳಿ ಮೂಳೆಯು ಮುರಿದು, ಮೊಣಕಾಲಿನ ಮಾಂಸವು ಕಿತ್ತು ರಕ್ತವು ಧಾರಾಕಾರವಾಗಿ ಸುರಿಯಿತು. ಇನ್ನಿಬ್ಬರಿಗೂ ತೀವ್ರ ಪೆಟ್ಟುಬಿದ್ದಿದೆ. ಸ್ಥಳದ ಚಿಕಿತ್ಸೆಯನಂತರ ಅವರುಗಳನ್ನು ರಾಜಧಾನಿಯ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಕರೆತರಲಾಯಿತು. ಅವರ ಪೈಕಿ ಒಬ್ಬನು ನೆನ್ನೆ ರಾತ್ರಿ ಇಲ್ಲಿ ಮೃತಪಟ್ಟನು.

ತೇರನ್ನು ಎಳೆಯುವ ಮಾರ್ಗದಲ್ಲಿ ಸರಪಳಿಗಳ ಮಧ್ಯೆ ಜನರ ಕೂಟವು ಬಹಳವಾಗಿ ಸೇರಿದ್ದನ್ನು ತಡೆಯದಿದ್ದುದೇ ದುರ್ಘಟನೆಗೆ ಕಾರಣವೆಂದು ಹೇಳಲಾಗುತ್ತಿತ್ತು. ರಥವು ಸುಮಾರು ೧೦ ಮಾರಿನಷ್ಟು ದೂರ ಹೋಗಿದ್ದಾಗ ಈ ದುರಂತವು ಸಂಭವಿಸಿ, ಉತ್ಸವಗಳು ಅಷ್ಟಕ್ಕೇ ತಟಸ್ಥವಾಯಿತು. ರಥೋತ್ಸವಕ್ಕೆ ಜನಸಂದಣಿಯು ಹೆಚ್ಚಾಗಿ ಸೇರಿರಲಿಲ್ಲ.

ನೆನ್ನೆ ರಾತ್ರಿ ಇಲ್ಲಿನ ಆಸ್ಪತ್ರೆಯಲ್ಲಿ ಮೃತಪಟ್ಟವನು ಕಂದಹಳ್ಳಿಯ ಶ್ರೀ ಮಲ್ಲಪ್ಪನವರ ಮಗ ಬಸವದೇವರು ಎಂಬ ೨೦ ವರ್ಷದ ಯುವಕ. ದುರಂಗಬಳ್ಳಿಯ ಮಲ್ಲನಾಯಕ ಎಂಬುವನ ಸ್ಥಿತಿ ಚಿಂತಾಜನಕವಾಗಿದೆ. ಬೆಟ್ಟದ ದೇವಸ್ಥಾನದ ನೌಕರ ನಂಜೇಗೌಡನು ಚೇತರಿಸಿಕೊಳ್ಳುತ್ತಿರುವನೆಂದು ಗೊತ್ತಾಗಿದೆ.

ಬ್ರಿಟೀ-ರಷ್ಯಾ ಮಾತುಕತೆಗಳು ವಿಫಲವೇ?

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ನಾಯಕ ಕ್ರುಶ್ಚೇವರು ಬ್ರಿಟನ್ನಿನ ಪ್ರಧಾನ ಮಂತ್ರಿಗಳೊಡನೆ ನಡೆಸುತ್ತಿರುವ ಮಾತುಕತೆಗಳು ಮುಕ್ತಾಯವಾಗುವ ಘಟ್ಟಕ್ಕೆ ಬಂದಿವೆಯೆಂದು ವರದಿಯಾಗಿದೆ. ಬ್ರಿಟೀ ರಷ್ಯ ವ್ಯಾಪಾರದ ವಿಸ್ತರಣವನ್ನೂ ಸಾಂಸ್ಕೃತಿಕ ವಿನಿಮಯ ಮತ್ತು ಕೆಲವು ಪ್ರಾದೇಶಿಕ ಸಮಸ್ಯೆಗಳನ್ನೂ ಪರಿಶೀಲಿಸಲಾಯಿತೆಂದು ಮಾತ್ರ ಪ್ರಕಟಣೆಯೊಂದು ತಿಳಿಸಿತು. ಅಧಿಕ ಮತ್ತೊಂದು ಭೇಟಿಯು ನಡೆಯುವುದಿದೆ. ಮಾತುಕತೆಗಳು ಅಷ್ಟು ಫಲಕಾರಿಯಾಗಿಲ್ಲವೆಂದು ಹೇಳಲಾಗಿದೆ.

ರಿಯರ್ ಅಡ್ಮಿರಲ್ ಕಟಾರಿ

ಭಾರತದ ಪ್ರಥಮ ರಿಯರ್ ಅಡ್ಮಿರಲ್ ಆದ ಶ್ರೀ ಡಿ. ಆರ್. ಡಿ. ಕಟಾರಿಯವರು ಶೀಘ್ರದಲ್ಲಿಯೇ ಭಾರತ ನೌಕಾ ಬಲದ ಫ್ಲಾಗ್ ಆಫೀಸರ್ ಆಗಲಿರುವರು.

ತಿರುವಾಂಕೂರು ಕೊಚ್ಚಿಯ ಮಾಜಿ ಮಂತ್ರಿಗಳ ಆಸ್ತಿ ತನಿಖೆ

ಮಾಜಿ ಮಂತ್ರಿಯೊಬ್ಬರ ಒತ್ತಾಯ

ಕೊಚ್ಚಿ ಸಂಸ್ಥಾನದ ಮಾಜಿ ಮಂತ್ರಿ ಡಾ|| ಎ. ಆರ್. ಮೆನನ್ನರು ಎರ್ನಾಕುಲದಲ್ಲಿ ಮೊನ್ನೆ ಭಾಷಣ ಮಾಡಿ ತಿರುವಾಂಕೂರು ಕೊಚ್ಚಿ ಸಂಸ್ಥಾನದ ಮಾಜಿ ಮಂತ್ರಿಗಳ ಆಸ್ತಿ ಬಗ್ಗೆ ತನಿಖೆ ನಡೆಸಬೇಕೆಂದು ಸೂಚಿಸಿದರು. ಕಳೆದ ೮ ವರ್ಷಗಳಿಂದ ಆಡಳಿತ ನಡೆಸಿದ ೩೫ ಜನ ಮಂತ್ರಿಗಳ ಪೈಕಿ ಒಬ್ಬಿಬ್ಬರು ಮಾತ್ರ ಲಂಚದಿಂದ ದೂರವಿರುವರೆಂದೂ ಇತರರ ಮೇಲೆ ಬಲವಾದ ಆಪಾದನೆಗಳಿರುವುದಾಗಿಯೂ ಅವರು ಹೇಳಿ ಕಾಂಗ್ರೆಸ್ ಸಂಸ್ಥೆಯ ಅವನತಿಗೆ ಕಾಂಗ್ರೆಸ್ ಮಂತ್ರಿಗಳೂ ಮತ್ತು ಹಲವು ಮುಖಂಡರೂ ಕಾರಣರೆಂದು ತಿಳಿಸಿದರು.

ಪಾರ್ಲಿಮೆಂಟ್ ಭವನದ ಮುಂದೆ ಮಹಾರಾಷ್ಟ್ರ ಪ್ರದರ್ಶನ

ದೆಹಲಿಯಲ್ಲಿ ನೆನ್ನೆ ಪಾರ್ಲಿಮೆಂಟ್ ಭವನದ ಎದುರು ಸಂಯುಕ್ತ ಮಹಾರಾಷ್ಟ್ರ ವಾದಿಗಳು ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನ ನಡೆಸಿದರು. ೪೫ ಜನರನ್ನು ಈ ಸಂಬಂಧವಾಗಿ ದಸ್ತಗಿರಿ ಮಾಡಲಾಯಿತು.

ರಷ್ಯದ ಭಯಂಕರ ಜಲಜನಕ ಬಾಂಬ್

ಕಳೆದ ತಿಂಗಳು ರಷ್ಯದಲ್ಲಿ ಸಿಡಿಸಲಾದ ಜಲಜನಕ ಬಾಂಬು ಅತ್ಯಂತ ಭಾರಿ ಶಕ್ತಿಯುಕ್ತವೆಂದು ಜಪಾನಿನ ಪ್ರವೀಣನೊಬ್ಬನು ತಿಳಿಸುತ್ತಾ ಅದರಲ್ಲಿ ಯುರೇನಿಯಂ ಧಾತುವಿನ ಅತ್ಯಂತ ತೀಕ್ಷ್ಣವಾದ ಪ್ರೋಟಿಯಂ ಧಾತುವು ಇದ್ದುದಾಗಿ ಹೇಳಿರುವನು. ಜಲಜನಕ ಬಾಂಬಿನ ಸ್ಫೋಟದ ಪರಿಣಾಮವಾಗಿ ಜಪಾನಿನಲ್ಲಿ ಬಿದ್ದ ರೇಡಿಯೊ ಚಲನದ ಮಳೆಯನ್ನು ಅವನು ಪರೀಕ್ಷಿಸಿ ಬಾಂಬಿನ ಪ್ರಭಾವವನ್ನು ವರ್ಣಿಸಿರುವನು.

ಮೈಸೂರಿನ ಮುಖ್ಯ ಮಂತ್ರಿ ಒಬ್ಬ "ಗಾರುಡಿಗರು"

ಲೋಕಸಭೆಯಲ್ಲಿ ಸದಸ್ಯರೊಬ್ಬರ ವರ್ಣನೆ

ಲೋಕಸಭೆಯಲ್ಲಿ ನೆನ್ನೆ ಪ್ರಜಾ ಸಮಾಜವಾದಿ ಪಕ್ಷದ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಭಾಷಣ ಮಾಡಿ ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿಯವರು "ಗಾರುಡಿಗರೂ ಒಗಟ ಶಕ್ತಿ ಪಡೆದವರೂ" ಆಗಿರುವುದಾಗಿ ತಿಳಿಸಿದರು. ಇವರಿಂದ ಪ್ರಜಾಪ್ರಭುತ್ವಕ್ಕೆ ಅಪಾಯವಿದೆಂದೂ ಮುಖ್ಯ ಮಂತ್ರಿಗಳ ವ್ಯಕ್ತಿತ್ವವನ್ನು ಖಂಡಿಸಿ ಅವರ ಆಡಳಿತವನ್ನು ವಿಚಾರಿಸಬೇಕೆಂದೂ ಸಭೆಯು ಪ್ರಸ್ತಾಪ ಮಾಡಬೇಕೆಂದು ತಿಳಿಸಿದರು. ಮೈಸೂರು ವಿಧಾನ ಸಭೆಯ ಬಗ್ಗೆ ತನಿಖೆ ಮಾಡಬೇಕೆಂದೂ ಅವರು ಸೂಚಿಸಿದರು.

ಸಿ. ಡಿ. ದೇಶಮುಖ್‌ರವರ ರಾಜೀನಾಮೆ

ಕೇಂದ್ರ ಹಣಕಾಸು ಮಂತ್ರಿ ಸಿ. ಡಿ. ದೇಶಮುಖ್‌ರವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿರುವುದಾಗಿ ಅವರು ಈ ಬಗ್ಗೆ ಪ್ರಧಾನಿಯವರಿಗೆ ವಿಧಿವತ್ತಾಗಿ ಪತ್ರ ಬರೆದು ತಿಳಿಸಿರುವುದಾಗಿ ಬೊಂಬಾಯಿ ನಗರವನ್ನು ಮಹಾರಾಷ್ಟ್ರದಲ್ಲಿ ಸೇರಿಸದೆ ಇರುವುದಕ್ಕಾಗಿ ರಾಜೀನಾಮೆ ಕೊಡಲಾಗಿದೆಯೆಂದು ಹೇಳಲಾಗಿದೆ. ತಮ್ಮ ಚುನಾವಣಾ ಕ್ಷೇತ್ರದ ಅಪೇಕ್ಷೆಯನ್ನು ಪಾಲಿಸಬೇಕಾಗಿರುವುದೆಂದು ಸಿ. ಡಿ. ದೇಶ್‌ಮುಖ್‌ರವರು ಪ್ರಧಾನಿಯವರಿಗೆ ತಿಳಿಸಿರುವರು.

ರೈಲು ಕಂಬಿ ತಪ್ಪಿ ೧೪ ಜನರಿಗೆ ಗಾಯ

ಬೊಂಬಾಯಿಯಿಂದ ಕಲ್ಕತ್ತಾಕ್ಕೆ ಹೊರಟಿದ್ದ ಮೇಲ್ ರೈಲು ಗಾಡಿಯು ನಾಗಪುರಕ್ಕೆ ೨೦ ಮೈಲಿ ದೂರದಲ್ಲಿ ನೆನ್ನೆ ಕಂಬಿ ತಪ್ಪಿತೆಂದೂ, ಅದರಿಂದ ೧೪ ಜನರಿಗೆ ಗಾಯಗಳಾದುದಾಗಿಯೂ ವರದಿಯಾಗಿದೆ. ಇಂಜನ್ನು ಮತ್ತು ಹಿಂದಿನ ಗಾಡಿಗಳು ಉರುಳಿದುವು. ಬೋಗಿಗಳು ಕಂಬಿ ತಪ್ಪಿದುದಕ್ಕೆ ಕಾರಣವು ಗೊತ್ತಾಗಿಲ್ಲ. ತೀವ್ರ ಗಾಯವಾದ ಇಬ್ಬರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ೩ ತಿಂಗಳ ಹಿಂದೆ ಅದೇ ದಿನ ಅದೇ ಸ್ಥಳ ಮತ್ತು ಕಾಲದಲ್ಲಿ ಬೊಂಬಾಯಿ ಕಲ್ಕತ್ತಾ ಮೇಲ್ ಗಾಡಿ ಕಂಬಿ ತಪ್ಪಿದ ಆಶ್ಚರ್ಯಕರ ವಿಷಯವನ್ನು ಜನರು ನೆನಸಿಕೊಳ್ಳುತ್ತಿರುವರು. ಅದೇ ಮೇಲ್ ಬೋಗಿಯು ಮುಂದುಬಿದ್ದು ಗಾಡಿಗಳು ಕಂಬಿ ತಪ್ಪಿ ಆರ್. ಎಂ. ಎಸ್. ಸಾರ್ಟರ್ ಒಬ್ಬನು ಮೃತಪಟ್ಟನು. ೧೬ ಮಂದಿಗೆ ಗಾಯವಾಗಿತ್ತು.

ರಾಮೋತ್ಸವ ಸಂಗೀತ

ಚಲುವಾಂಬಾ ಅಗ್ರಹಾರದಲ್ಲಿರುವ ಬಾಲಕ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ವಿ|| ಟಿ. ಪಿ. ವೆಂಕಟರಾಮಯ್ಯನವರ ಸಂಗೀತವು ವಿ|| ಗುರುರಾಜಪ್ಪನವರ ಪಿಟೀಲು ಮತ್ತು ಸಂಗೀತರತ್ನ ವಿ|| ಟಿ. ಎಂ. ಪುಟ್ಟಸ್ವಾಮಯ್ಯನವರ ಮೃದಂಗದೊಡನೆ ಏರ್ಪಾಡಾಗಿರುತ್ತದೆ.

ಸಂಸ್ಥಾನದಲ್ಲಿ ವರ್ತಕರುಗಳ ರಾಜಕೀಯ ಪಕ್ಷ

ಬೆಂಗಳೂರು ೨೪

ಇಲ್ಲಿನ ಚೇಂಬರ್ಸ್ ಸಂಘದ ನಿವೃತ್ತ ಮಾಸ್ಟರ್ ಆದ ಶ್ರೀ ಡಿ. ಎಸ್. ಹೊಸಕೋಟೆಯವರು ನೆನ್ನೆ ಮಾತನಾಡಿ, ಗಾಂಧೀಜಿಯವರ ಕಲ್ಪನೆಯ ಹೊಸ ಪಕ್ಷವೊಂದನ್ನು ಸ್ಥಾಪಿಸುವ ಸೂಚನೆಯನ್ನು ಇತ್ತರು. ಪೂ. ಗಾಂಧೀಜಿಯವರ ಉಪದೇಶಗಳ ನೆಲೆ ತತ್ವಗಳನ್ನು ಒಳಗೊಂಡ ಪಕ್ಷವು ಕಾಂಗ್ರೆಸ್ಸಿನ ನೀತಿಯನ್ನು ಸಾಮಾನ್ಯವಾಗಿ ಒಪ್ಪುತ್ತದೆಂದೂ ಒಮ್ಮೆ ಅದರ ತೀವ್ರವಾದಿ ಭಾವನೆಯನ್ನು ಸಂಸ್ಥೆಯು ಅಂಗೀಕರಿಸುವುದಿಲ್ಲವೆಂದೂ ಅವರು ಹೇಳುತ್ತಾರೆ. ಇತ್ತೀಚೆಗೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ವಾಣಿಜ್ಯ ಸಭೆಯಲ್ಲಿ ಮಾತನಾಡಿ ವರ್ತಕರು ಬೇಕಾದರೆ ತಮ್ಮ ಪಕ್ಷವನ್ನೇ ರಚಿಸಿಕೊಂಡು ಚುನಾವಣೆಗಳಲ್ಲಿ ಭಾಗವಹಿಸಬಹುದೆಂದು ಸೂಚಿಸಿದ್ದ ವಿಷಯವನ್ನು ಅವರು ಪ್ರಸ್ತಾಪಿಸಿ, ಅವರ ಸಲಹೆಯನ್ನು ಅಂಗೀಕರಿಸಲಾಗಿದೆಯೆಂದು ಹೇಳಿದರು. ಹೊಸ ಪಕ್ಷದ ಸೃಷ್ಟಿಗಾಗಿ ಅವರು ಶೀಘ್ರದಲ್ಲೇ ಕರ್ನಾಟಕದ ವರ್ತಕರುಗಳ ಕೂಟವನ್ನು ಕರೆಯಲಿರುವರು.

ಎಸ್. ವಿ. ಕೃಷ್ಣಮೂರ್ತಿರಾಯರೇ ರಾಜ್ಯಸಭೆಯ ಉಪಾಧ್ಯಕ್ಷರು

ದೆಹಲಿಯ ರಾಜ್ಯ ಸಭೆಯ ಉಪಾಧ್ಯಕ್ಷತೆಗೆ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರೊಬ್ಬರ ನಾಮಪತ್ರವು ಮಾತ್ರ ಬಂದಿದೆ. ಶ್ರೀ ಕೃಷ್ಣಮೂರ್ತಿರಾಯರು ನಿವೃತ್ತರಾದುದರಿಂದ ಪುನಃ ಚುನಾವಣೆಯನ್ನು ನಡೆಸಬೇಕಾಯಿತು.

ಹಣದ ಕೊಪ್ಪರಿಗೆ ತೋರಿಸುವುದಾಗಿ ಮಾಂತ್ರಿಕನ ಮೋಸ

ಕಾಂಚೀಪುರದ ಬಳಿ ಒಂದು ಹಳ್ಳಿಯ ವ್ಯಾಪಾರಿಯೊಬ್ಬನ ಮನೆಗೆ ಒಬ್ಬ ಮಂತ್ರವಾದಿಯು ಬಂದು ಮನೆಯಲ್ಲಿ ಚಿನ್ನದ ಗಟ್ಟಿಗಳಿರುವ ಹಣದ ಕೊಪ್ಪರಿಗೆಯನ್ನು ಪತ್ತೆಮಾಡಿಕೊಡುವುದಾಗಿ ಹೇಳಿ ಮನೆಯ ಯಜಮಾನನ್ನು ನಂಬಿಸಿ ಕೊಪ್ಪರಿಗೆಯನ್ನು ಕಾಯುವ ದೇವತೆಯ ಪೂಜೆಗಾಗಿ ಅವನ ವಿವಾಹಿತ ಮಗಳನ್ನು ಕರೆತರುವಂತೆ ಹೇಳಿದನೆಂದೂ, ವ್ಯಾಪಾರಿಯು ಅವನ ಹೆಂಡತಿಯೊಡನೆ ಮಗಳನ್ನು ಕರೆತರಲು ಹೋದಾಗ ಮಾಂತ್ರಿಕನು ಮನೆಯ ಬಾಗಿಲನ್ನು ಒಡೆದು ಒಳಕ್ಕೆ ಪ್ರವೇಶಿಸಿ ಹಲವು ವಸ್ತುಗಳನ್ನು ದೋಚಿಕೊಂಡು ಹೊರಟುಹೋದನೆಂದು ತಿಳಿದುಬಂದಿದೆ. ಅವನ ಮೇಲೆ ಮೊಕದ್ದಮೆ ದಾಖಲು ಮಾಡಿಕೊಳ್ಳಲಾಗಿದೆ.

ಪಂಜಾಬಿನ ಮಂತ್ರಿ ಮಂಡಲಕ್ಕೆ ಇನ್ನಿಬ್ಬರು ಸದಸ್ಯರು

ಪಂಜಾಬಿನ ಮಂತ್ರಿಮಂಡಲದ ಸದಸ್ಯರಾಗಿ ಮಾಸ್ಟರ್ ಗುರುಬಂತ ಸಿಂಗ್ ಮತ್ತು ಮೂಲ್ ಚಂದ್ ಜೈನರನ್ನು ತೆಗೆದುಕೊಳ್ಳಲಾಗಿದೆ. ಈಗ ಒಟ್ಟು ೬ ಜನ ಮಂತ್ರಿಗಳಿದ್ದಾರೆ. ಮೂವರು ಉಪಮಂತ್ರಿಗಳನ್ನೂ ಒಬ್ಬ ಪಾರ್ಲಿಮೆಂಟರಿ ಕಾರ್ಯದರ್ಶಿಯನ್ನೂ ನೇಮಿಸಲಾಗಿದೆ.

ಖಾನ್ ಸಾಹೇಬ್ ಮಂತ್ರಿ ಮಂಡಲದ ಲೀಗ್ ಸದಸ್ಯರ ಉಚ್ಚಾಟನೆ

ಪಶ್ಚಿಮ ಪಾಕಿಸ್ತಾನದ ಮುಖ್ಯಮಂತ್ರಿ ಡಾ॥ ಖಾನ್ ಸಾಹೇಬರ ಮಂತ್ರಿಮಂಡಲದಲ್ಲಿರುವ [illegible] ಜನ ಮುಸ್ಲಿಂ ಲೀಗ್ ಸದಸ್ಯರನ್ನೂ ಪಾಕಿಸ್ತಾನದ ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿಯು ಸದಸ್ಯತ್ವದಿಂದ ವಜಾ ಮಾಡಿದೆ ಎಂದು [illegible] ದೊಳಗೆ ಮಂತ್ರಿಗಳು ರಾಜೀನಾಮೆ ಕೊಟ್ಟರೆ ಅವರ ಮೇಲಿನ ಕ್ರಮವನ್ನು ರದ್ದುಗೊಳಿಸಲು [illegible] ಅವಕಾಶ ಕೊಡಲಾಗಿದೆ

೧೦೦ ವರ್ಷ ವಯಸ್ಸಿನ ಪಣಕಾಸಿನ ಪ್ರವೀಣ

ನ್ಯೂಯಾರ್ಕಿನ ಟೆಲಿವಿಷನ್ ಕಾರ್ಯಕ್ರಮದಲ್ಲಿ ಕ್ಯಾಲಿಫೋರ್ನಿಯದ ೧೦೦ ವರ್ಷದ [illegible] ಎಂಬ ಬಾಲಕನು ಹಣಕಾಸು ವಿಷಯದಲ್ಲಿ ತನ್ನ ಅದ್ವಿತೀಯ ಪಾಂಡಿತ್ಯವನ್ನು ತೋರಿ ೧ ಲಕ್ಷ ಡಾಲರಿನ ಬಹುಮಾನವನ್ನು ಪಡೆದಿರುತ್ತಾನೆ ಬಹಳ ಕ್ಲಿಷ್ಟವಾದ ೫ ಪಣಕಾಸಿನ ಪ್ರಶ್ನೆಗಳಿಗೆ ಕರಾರುವಾಕ್ಕಾದ ಉತ್ತರವನ್ನು ಅವನು ಕೊಟ್ಟನು ೧ ಲಕ್ಷ ಡಾಲರಿನ ಬಹುಮಾನದ [illegible] ೧೦೦ ಡಾಲರಿನ [illegible] ಕೊಡಲಾಗುವುದು

ಸುಡಾನಿನ "ಅರಣ್ಯ ಬಾಲಿಕೆ"ಯ ಮತ್ತೊಂದು ವಿವಾಹ

[illegible]

ಪೋನಾದಲ್ಲಿ ಬ್ರಿಸ್ಟರ್ ಪರೀಕ್ಷಾ ಕೇಂದ್ರ

[illegible] ಪಾಲ್ [illegible] ಭಾರತ ಸರ್ಕಾರದ [illegible] ದಲ್ಲಿ ಸಮ್ಮರ್ಸ್ ಬ್ರಿಸ್ಟರ್ ಪರೀಕ್ಷಾ ಕೇಂದ್ರವನ್ನು [illegible] ಗುಂಗಿದೆ [illegible] ರತದಲ್ಲಿ ಇಂತಹ ಕೇಂದ್ರವು ಸ್ಥಾಪನೆಯಾಗುವುದು ಇದೇ ಪ್ರಥಮವೆಂದು ವರದಿಯಾಗಿದೆ

ಪೋಲೆಂಡಿನಲ್ಲಿ ೩೦ ಸಾವಿರ ಖೈದಿಗಳ ಖುಲಾಸೆ

ಪೋಲೆಂಡಿನಲ್ಲಿ ರಾಜಕ್ಷಮೆಯು [illegible] ಸಾವಿರ ಖೈದಿಗಳನ್ನು ಖುಲಾಸೆ ಮಾಡಲಾಗುವುದೆಂದೂ ೭೦ ಸಾವಿರ ಮಂದಿಯ ಕಾರಾಗೃಹ ವಾಸದ ಶಿಕ್ಷೆಯನ್ನು ಕಡಿಮೆ ಮಾಡಲಾಗುವುದೆಂದೂ ವರದಿಯಾಗಿದೆ ಅದಕ್ಕಾಗಿ ಶಾಸನವನ್ನು ಅಂಗೀಕರಿಸಲಾಗುತ್ತಿದೆ ಯುದ್ಧವಾದಂದಿನಿಂದ ಈಚೆಗೆ ಈಗಲೇ ರಾಜಕೀಯ ಖೈದಿಗಳಿಗೆ ಕ್ಷಮೆ ತೋರುವ ಪ್ರಯತ್ನ ನಡೆದಿದೆ

೩೭॥ ರೂ ಗಳಲ್ಲಿ ೩೦ ವಿವಾಹಗಳು

ಒಂದೂವರೆ ರೂ ವೆಚ್ಚದಲ್ಲಿ ಒಂದೊಂದು ಮದ್ರಾಸಿನಲ್ಲಿ ಕಳೆದ ಭಾನುವಾರ [illegible] ಜರುಗಿದುವು ಹರಿಜನ ಮತ್ತು ಇತರ ಬಡವರಲ್ಲಿ ಈ ಮದುವೆಗಳು ಆದುವು ಮದ್ರಾಸ್ ನಗರದ ಮೇಯರರು ಅವರಲ್ಲಿ ಭಾಗವಹಿಸಿದರು ಸಂಸ್ಥಾನದ ಹರಿಜನ ಯೋಗಕ್ಷೇಮ ಶಾಖಾಧಿಕಾರಿಗಳು ವಧುಗಳಿಗೆ [illegible] ಸೀರೆಗಳನ್ನೂ ಪೌರಸಭಾ ಸದಸ್ಯರೊಬ್ಬರು ವರಗಳಿಗೆ ಧೋತ್ರಗಳನ್ನೂ ಬಹುಮಾನವಾಗಿ ಕೊಟ್ಟರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಇನ್ನೂ ೫೦ ವರ್ಷದ ವರೆಗೆ ಚಿನ್ನ ತೆಗೆಯಬಹುದು

ಗೃಹ ಮಂತ್ರಿ ಸಿದ್ದವೀರಪ್ಪನವರ ಹೇಳಿಕೆ

ಕೋಲಾರದ ಚಿನ್ನದ ಗಣಿ ಪೈಕಿ ಒಂದಾದ ನಂದಿದುರ್ಗ ಗಣಿಯಲ್ಲಿ ಇನ್ನೂ ೫೦ ವರ್ಷಗಳವರೆಗೂ ಚಿನ್ನವನ್ನು ತೆಗೆಯಬಹುದೆಂದು ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಕೋಲಾರ ಚಿನ್ನದ ಗಣಿಗಳನ್ನು ನಡೆಸಲು ಸೂಕ್ತ ವ್ಯವಸ್ಥೆಯನ್ನು ಸರ್ಕಾರವವರೇ ಮಾಡುವುದಾಗಿಯೂ ಅವರು ಹೇಳುವರು

ದೆಹಲಿಯಲ್ಲಿ ಮುಖ್ಯ ಮಂತ್ರಿಗಳ ಸಭೆ

ಆಹಾರ ಧಾನ್ಯಗಳ ಬೆಲೆಯು ಹೆಚ್ಚಿರುವ ವಿಷಯವನ್ನು ಕುರಿತು ಇದೇ ಮೇ ತಿಂಗಳು ೧ನೇ ತಾರೀಖು ದೆಹಲಿಯಲ್ಲಿ ನಾನಾ ಸಂಸ್ಥಾನಗಳ ಮುಖ್ಯ ಮಂತ್ರಿಗಳು ಚರ್ಚೆ ನಡೆಸುವರೆಂದು ಮದ್ರಾಸ ಪಣಕಾಸಿನ ಮಂತ್ರಿ ಸಿ ಸುಬ್ರಹ್ಮಣ್ಯಂರವರು ತಿಳಿಸಿರುತ್ತಾರೆ ಮದ್ರಾಸು ನಗರದಲ್ಲಿ [illegible] ದ್ವಿದಳ ಧಾನ್ಯ ಎಣ್ಣೆ ಮತ್ತು ಮೆಣಸಿನ [illegible] ಗಳ ಧಾರಣೆ ಸಿಂಯು ವಿಪರೀತವಾಗಿದೆ

ಬೊಂಬಾಯಿ ಗೌರ್ನರರ ವಿರುದ್ಧ ಕಪ್ಪು ಬಾವುಟ

ಬೊಂಬಾಯಿ ಗೌರ್ನರ್ ಹರೆಕೃಷ್ಣ ಮೆಹತಾಬರು ಪೆಸ್ಸಿ ಎಂಬ ಊರಿನಲ್ಲಿ ಅಣ್ಣಾಸಾಹೇಬ ಪಟವರ್ಧನರ ಸ್ಮಾರಕ ಭವನವನ್ನು ತೆರೆದಾಗ ಹೊರಗಡೆ ೫೦ ಮಂದಿ ಮಹಾರಾಷ್ಟ್ರ ಪರವಾದಿಗಳು ಕಪ್ಪು ಬಾವುಟಗಳನ್ನು ಪ್ರದರ್ಶಿಸಿ ಘೋಷಣೆಗಳನ್ನು ಕೂಗಿದರು ಅವರುಗಳು ಸಮಾರಂಭಕ್ಕೆ ಬರದಂತೆ ಪೋಲೀಸರು ತಡದಿದ್ದರು ಆ ಊರಿನಲ್ಲೆಲ್ಲಾ ಪರಿಶಾಂತವಾಯಿತು ಬೊಂಬಾಯಿ ನಗರವನ್ನು ಮಹಾರಾಷ್ಟ್ರಕ್ಕೆ [illegible] ಪ್ರದರ್ಶನಕ್ಕೆ ಕಾರಣ

ರಾಜಕುಮಾರರ ವರ್ಧಂತಿ ಕಪ್ ಫುಟ್‌ಬಾಲ್ ಪಂದ್ಯ

ಮೈಸೂರು ಸಂಸ್ಥಾನದ ಫುಟ್‌ಬಾಲ್ ಸಂಘದ ಪ್ರಯತ್ನದಲ್ಲಿ ಇಂದಿನಿಂದ ಪ್ರತಿದಿನ ಸಂಜೆ [illegible] ದೊಡ್ಡಕೆರೆ ಮೈದಾನ ರಾಜಕುಮಾರರ ವರ್ಧಂತಿ ಕಪ್ ಫುಟ್‌ಬಾಲ್ ಪಂದ್ಯಗಳು ನಡೆಯುವುವು ಮೈಸೂರು ಮತ್ತು ಬೆಂಗಳೂರಿನ [illegible] ಭಾಗವಹಿಸಿವೆ

ಹೆಬ್ಬಳ್ಳ ಕಾಂಗಾರಿ ಪ್ರದೇಶಕ್ಕೆ ಎಸ್ ವಿ ರಾಮಮೂರ್ತಿಯವರ ಭೇಟಿ

ಮಂಡ್ಯದ ಬಳಿ ಹೆಬ್ಬಳ್ಳದ [illegible] ಕಾಂಗಾರಿಯನ್ನು ಕೇಂದ್ರ ಯೋಜನಾ ಮಂಡಲಿಯ ಸಲಹೆಗಾರರಾದ ಶ್ರೀ ಎಸ್ ವಿ ರಾಮಮೂರ್ತಿಯವರು ಕಾವೇರಿ ಸರ್ಕಲ್ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಎನ್ ನರಸಿಂಹಯ್ಯಂಗಾರರೊಡನೆ ಪರಿಶೀಲನೆ ನಡೆಸಿದರು ವ್ಯರ್ಥವಾದ ನೀರನ್ನು ಶೇಖರಿಸಿ ಅದನ್ನು ಮಳವಳ್ಳಿ ಮತ್ತು ಹುಣಸೂರು ತಾಲ್ಲೂಕುಗಳ [illegible] ಎಕರೆ ಜಮೀನಿನಲ್ಲಿ ನೀರಾವರಿಗಾಗಿ ಉಪಯೋಗಿಸುತ್ತಿರುವುದರ ಬಗ್ಗೆ ಅವರು ಪ್ರಶಂಸಿಸಿದರು [illegible] ಕಾರಿಯನ್ನು ಇನ್ನೂ ಹೆಚ್ಚಾಗಿ ಕೈಗೊಳ್ಳಲು ೧೦ ಲಕ್ಷ ರೂ ಗಳನ್ನು ಮಂಜೂರು ಮಾಡಬೇಕೆಂದು [illegible]

ಮೈಸೂರು ಪೇಟೆ ಧಾರಣೆ

	[illegible]			[illegible]		
[illegible]	[illegible]	[illegible]	[illegible]	[illegible]	[illegible]	[illegible]
ಎಳ್ಳು	[illegible]	[illegible]	[illegible]			
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]			
[illegible]	[illegible]	[illegible]	[illegible]			
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]

ರಾಮೋತ್ಸವದ ಕಾರ್ಯಕ್ರಮಗಳು

ಮೈಸೂರು [illegible]

ರಾಜಧಾನಿಯ ಸಂತೆಪೇಟೆ ಕುಂಬಾರಗೇರಿಯ ಶ್ರೀ ರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ಆ॥ ವಿ॥ ವಿ ದೇಶಿಕಾಚಾರ್ಯರ ಕೊಳಲು ವಾದನವು ಆ॥ ವಿ॥ ಹೆಚ್ ರಾಮರಾಯರ ಪಿಟೀಲು ಮತ್ತು ಆ॥ ವಿ॥ ಶೇಷಪ್ಪನವರ ಮೃದಂಗದೊಡನೆ ಏರ್ಪಾಡಾಗಿದೆ

ರಾಜಾರಾಂ ಅಗ್ರಹಾರದ ಶ್ರೀ ರಾಮ ಸೇವಾ ಸಮಿತಿಯ ಆಶ್ರಯದಲ್ಲಿ ಉತ್ಸವದ ಅಂಗವಾಗಿ ನಾಳೆ ಸಂಜೆ ವಿ॥ ಚಿಕ್ಕಸ್ವಾಮಿಯವರ ಗಾಯನವು ವಿ॥ ಮುತ್ತಣ್ಣನವರ ಪಿಟೀಲು ಮತ್ತು ವಿ॥ ಜಿ ಆರ್ ರಾಜಗೋಪಾಲ್‌ರವರ ಮೃದಂಗದೊಡನೆ ನಡೆಯುವುದು

ಉತ್ತರಾದಿಮಠದ ಬೀದಿಯಲ್ಲಿರುವ ರಾಜಾರಾಮ ಮಂದಿರದಲ್ಲಿ ಈ ರಾತ್ರಿ [illegible] ಉಪನ್ಯಾಸ ರತ್ನಾಕರ ವೇ॥ ಬ್ರ॥ ಶ್ರೀ ಜಯತೀರ್ಥಾಚಾರ್ಯರಿಂದ ವಾಮನಾವತಾರ ಎಂಬ ಕಥೆ ನಡೆಯುವುದು

ಸೊಸ್ಸೆಗಳೊಡನೆ ವಿವಾಹಕ್ಕೆ ಹೈಕೋರ್ಟಿನ ಮನ್ನಣೆ ಇಲ್ಲ

ದಾವೆಯೊಂದರಲ್ಲಿ ತೀರ್ಪು

ತಿರುನನಲ್ವೇಲಿ ಜಿಲ್ಲೆಯ ರೆಡ್ಡಿಯಾರ್ ಕೋಮಿನ ಪೈಕಿ ಹಲವರಲ್ಲಿ ಜಾರಿಯಲ್ಲಿರುವುದೆಂದು ಹೇಳಲಾದ ಪದ್ಧತಿಯಂತೆ ಒಬ್ಬನು ತನ್ನ ಮಗಳ ಮಗಳನ್ನು ವಿವಾಹವಾದ ಕ್ರಮಬದ್ಧತೆ ಸಂಬಂಧವಾಗಿ ಬಂದಿದ್ದ ತಾಲ್ಲೂಕಿನ ದಾವೆಯಲ್ಲಿ ಮದ್ರಾಸ್ ಹೈಕೋರ್ಟಿನ ಡಿವಿಷನ್ ಬೆಂಚು ತೀರ್ಪಿತ್ತು ಆ ವಿವಾಹವು ಅಕ್ರಮವಾಗಿದೆಯೆಂದು ಸೂಚಿಸಿರುತ್ತದೆ ಸಭ್ಯತೆ ಮತ್ತು ನೀತಿಗೆ ವಿರುದ್ಧವಾದ ಯಾವ ಪದ್ಧತಿಯೇ ಆಗಲಿ, ಅದು ಬಹು ಕಾಲದಿಂದಲೂ ನಡೆದು ಬಂದಿದ್ದರೂ–ಕೋರ್ಟಿನ ನ್ಯಾಯದ ಮೂಲಕ ಸಮರ್ಥಿಸಲ್ಪಡತಕ್ಕದ್ದಲ್ಲವೆಂದು ನ್ಯಾಯಾಧೀಶರುಗಳು ತಿಳಿಸಿರುತ್ತಾರೆ ಪವಿತ್ರ ಗ್ರಂಥಗಳ ಉಕ್ತಿಗೆ ವ್ಯತಿರೇಕವಾದ ಪದ್ಧತಿಯನ್ನು ಕೋರ್ಟು ಅನುಮೋದಿಸುವುದಿಲ್ಲವೆಂದೂ, ಸಮಾಜ ಬಂಧು ಗಮನ ಮತ್ತು ಅನೈತಿಕತೆಯನ್ನು ಕೋರ್ಟು ಅಂಗೀಕರಿಸುವುದಿಲ್ಲವೆಂದೂ ನ್ಯಾಯಾಧೀಶರು ಹೇಳಿರುವರು

ಪ್ರವಾಹದಲ್ಲಿ ೧೦೦ ಜನ ಆಫ್ಘನ್ನರ ಮರಣ

ಆಫ್ಘಾನಿಸ್ತಾನದ ಹೆಲ್ಮಂಡ್ ನದಿಯಲ್ಲಿ ಅನಿರೀಕ್ಷಿತ ಪ್ರವಾಹ ಬಂದು ೧೦೦ ಜನರು ಮೃತಪಟ್ಟಿರುವುದಾಗಿ ವರದಿಯಾಗಿದೆ ಸಹಸ್ರಾರು ಮಂದಿ ಮನೆಮಠಗಳನ್ನು ಕಳೆದುಕೊಂಡಿರುತ್ತಾರೆ ಆಫ್ಘಾನಿಸ್ತಾನದಲ್ಲಿ ಇಂತಹ ದುರ್ಘಟನೆಯು ಹಿಂದೆ ಆಗಿರಲಿಲ್ಲವೆಂದು ಕಾಬೂಲ್ ರೇಡಿಯೊ ತಿಳಿಸಿದೆ ಇರಾನ್ ದೇಶದವರೇ ಈ ಆಕಸ್ಮಿಕ ಪ್ರವಾಹಕ್ಕೆ ಕಾರಣರೆಂದು ಆಪಾದಿಸಲಾಗಿದೆ

ಬೆಂಗಳೂರಿನಲ್ಲಿ ಗುರುಕುಲದ ಸ್ಥಾಪನೆ

ಉಡುಪಿಯ ಭಂಡಾರಕೇರಿ ಮಠಾಧೀಶರಾದ ಶ್ರೀ ಶ್ರೀ ವಿಬುಧಮಾನ್ಯ ತೀರ್ಥ ಶ್ರೀ ಪಾದಂಗಳವರು ಬೆಂಗಳೂರಿನಲ್ಲಿ ಮೊನ್ನೆ ಉಪದೇಶ ಭಾಷಣ ಮಾಡಿ, ಜನತೆಯು ನಿರೀಶ್ವರ ವಾದಿಗಳ ಪ್ರಚಾರವನ್ನು ತಡೆಗಟ್ಟಬೇಕೆಂದು ಸೂಚಿಸಿದರು ಶಾಸ್ತ್ರಗಳಲ್ಲಿ ಸಂಶೋಧನೆ ನಡೆಸಲು ಬೆಂಗಳೂರಿನಲ್ಲಿ ಗುರುಕುಲವೊಂದನ್ನು ಸ್ಥಾಪಿಸಲಾಗುವುದೆಂದು ಅವರು ಹೇಳಿದರು ಗುರುಕುಲವು ಶಿಕ್ಷಣ ಪಡೆದವರಿಗೆ ಉದ್ಯೋಗ ಕಲ್ಪನೆ ಮಾಡುವುದೆಂದೂ ಸ್ವಾಮಿಗಳವರು ಅಪ್ಪಣೆ ಕೊಡಿಸಿದರು ದಕ್ಷಿಣ ಕನ್ನಡ ದ್ರಾವಿಡ ಬ್ರಾಹ್ಮಣರ ಸಂಘದ ವಿದ್ಯಾರ್ಥಿ ವೇತನಕ್ಕಾಗಿ ಸ್ವಾಮಿಗಳವರು ೧೦೦ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ

ರಣಜಿತ್ ★ 20–4 56 ರಿಂದ ಅಮೋಘ ಪ್ರಾರಂಭ

ಚಿತ್ರ, ಮಹೀಪಾಲ್ ನಟಿಸಿರುವ ರೋಮಾಂಚಕ ಹಿಂದಿ ಚಿತ್ರ

ಅಲ್ಲಾದೀನ್-ಕ-ಬೇಟಿ

Edited, Printed an' Published by A R Nagarama at Sadhvi Press D Subl iah R ad Mysore

ಅಮಲ್ದಾರರ ಮೇಲೆ ಕೈ ಮಾ[illegible] ದ್ದಕ್ಕೆ ರೆವಿನ್ಯೂ ಇನ್ಸ್‌ಪೆಕ್ಟರ ಬಂಧ[illegible]

ಶಿವಪುರ ತಾಲ್ಲೂಕಿನ ಅಮಲ್ದಾರ್ ಶ್ರೀ [illegible] ಹೆಚ್ ಗೋಪಾಲರಾಯರು ಕಳೆದ ಗುರು[illegible] ರೀಖು ತಮ್ಮ ಕಛೇರಿಯಲ್ಲಿ ಕೆಲಸ ಮಾಡು[illegible] ದ್ದಾಗ ಅವರ ಮೇಲೆ ಕೈ ಮಾಡಿದನೆಂದು [illegible] ನ್ಯೂ ಇನ್ಸ್‌ಪೆಕ್ಟರ್ ಎನ್ ಮುನಿಸ್ವಾಮಿ ಎಂ[illegible] ತನನ್ನು ಪೋಲೀಸರು ಬಂಧಿಸಿ ಜಾಮೀನಿನ ಮೇ[illegible] ಲೆ ಬಿಟ್ಟಿರುತ್ತಾರೆ ಬಲಪ್ರಯೋಗಕ್ಕಾಗಿ ಪ್ರ[illegible] ಕ್ರಮೆಯನ್ನು ಇನ್ಸ್‌ಪೆಕ್ಟರ ಮೇಲೆ ರಿಜಿಸ್ಟರ್ ಮಾ[illegible] ಡಿಕೊಳ್ಳಲಾಗಿದೆ

ಪೌರಸಭೆಗೆ ಕೊಡುವ ಹಣ[illegible] ರಸೀತಿ ಕೊಡುವುದಿಲ್ಲವೇ ?

ಬೈಸಿಕಲ್ ತೆರಿಗೆಯ ಬಾಬ್ತು ೩ ರೂ [illegible] ತ್ತು ಅದರ ಮೇಲೆ ಆರೋಗ್ಯ ತೆರಿಗೆ ೩ ಆಣೆ[illegible] ನ್ನು ಪೌರಸಭೆಯವರು ವಸೂಲ್ಮಾಡುತ್ತಿರು[illegible] ವೈ ? ಬೈಸಿಕಲ್ಲುಗಳಿಗೆ ಬಿಲ್ಲೆಗಳನ್ನು ಮಾತ್ರ [illegible] ವರು ಕೊಡುತ್ತಿದ್ದಾರೆ ಅದರ ಜೊತೆಗೆ [illegible] ಲೀ ಆರೋಗ್ಯ ತೆರಿಗೆಗಾಗಿ ವಸೂಲ್ಮಾಡುವ ಮ[illegible] ರಾತೆಗಾಗಲೀ ರಸೀತಿ ಕೊಡದೆ ದಬಾಯಿ[illegible] ಕಳುಹಿಸುತ್ತಿದ್ದಾರೆ

ಕಳೆದ ಸಾಲಿನಲ್ಲಿ ಈ ಅಕ್ರಮ ನಡವಳಿ[illegible] ನ್ನು ಕಮಿಷನರರ ಗಮನಕ್ಕೆ ತಂದಾಗ ರಸೀ[illegible] ಗಳನ್ನು ಕೊಡಲು ಏರ್ಪಡಿಸಲಾಗುವುದೆಂದು[illegible] ವರು ಭರವಸೆ ನೀಡಿದ್ದರು. ಆದರೆ ಈ ಸಾ[illegible] ಮವರೆಗೆ ಈ ವ್ಯವಸ್ಥೆ ಆಗಿರುವುದಿಲ್ಲ

ಕೊಟ್ಟ ಹಣಕ್ಕೆ ದಾಖಲೆ ಇರುವುದು ಈ[illegible] ವ್ಯವಹಾರ ಪ್ರಪಂಚದಲ್ಲಿ ಅತ್ಯವಶ್ಯಕ [illegible] ಕೊಡತಕ್ಕವರಲ್ಲಿ ಸಾರ್ವಜನಿಕರಲ್ಲದೆ ಅನೇ[illegible] ಸಂಸ್ಥೆಗಳವರೂ ಕಛೇರಿಗಳವರೂ ಇರುವರು[illegible] ಇವರುಗಳು ತಮ್ಮ ಲೆಕ್ಕಾಚಾರಗಳನ್ನು ಕ್ರಮ[illegible] ವಾಗಿ ಇಟ್ಟುಕೊಳ್ಳಲು ರಸೀತಿಯು ಅಗತ್ಯ

ಹೀಗಿರುವಲ್ಲಿ ಪೌರಸಭೆಯವರು ತೆಗೆದುಕೊ[illegible] ಡ ಹಣಕ್ಕೆ ದಾಖಲೆಗಳನ್ನು ಕೊಡದೇ ಇರು[illegible] ದು ಸರಿಯಲ್ಲ ಬೈಸಿಕಲ್ ಮೇಲಿನ ಆರೋ[illegible] ತೆರಿಗೆಯು ಸರ್ಕಾರಕ್ಕೆ ಹೋಗುವುದೆಂಬ ಕಾ[illegible] ರಣದ ಮೇಲೆ ರಸೀತಿಯನ್ನು ನಿರಾಕರಿಸಲಾಗು[illegible] ತ್ತಿದೆಯೆಂದು ಹೇಳಲಾಗಿದೆ

ಪೌರ ಸಭೆಯ ಇತರ ಕಂದಾಯಗಳ ಮೇ[illegible] ವಸೂಲಾಗುತ್ತಿರುವ ಆರೋಗ್ಯ ತೆರಿಗೆ, ವಿದ್ಯಾ[illegible] ಭ್ಯಾಸ ತೆರಿಗೆ ಮುಂತಾದುವು ಸರ್ಕಾರಕ್ಕೆ ಹೋ[illegible] ಗುತ್ತಿವೆ ಇವುಗಳಿಗೆ ದಾಖಲೆ ರಸೀತಿಗಳ[illegible] ಕೊಡುತ್ತಿಲ್ಲವೇ? ಅದರಂತೆಯೇ ಬೈಸಿಕಲ್ ಮೇ[illegible] ಲಿನ ಆರೋಗ್ಯ ತೆರಿಗೆಗೂ ಮತ್ತು ಬೈಸಿಕಲ್ [illegible] ಹದಾರಿ ಶುಲ್ಕಕ್ಕೂ ಪ್ರತ್ಯೇಕ ರಸೀತಿಗಳ[illegible] ಕೊಡುವುದು ಅತ್ಯಗತ್ಯ ಕೆಲವು ವರ್ಷಗಳ ಹಿ[illegible] ದೆ ಬೈಸಿಕಲ್ಲುಗಳ ಕಂದಾಯಕ್ಕೆ ರಸೀತಿಯನ್ನ[illegible] ಮತ್ತು ಬಿಲ್ಲೆಗಳನ್ನೂ ಸಹಾ ಕೊಡಲಾಗುತ್ತಿತ್ತು[illegible] ಈಗಲೂ ಸಹಾ ಅದರಂತೆ ಅಧಿಕಾರಿಗಳು ಏರ್[illegible] ಡಿಸಬೇಕೆಂದು ಕೋರಲಾಗಿದೆ

— ಬೈಸಿಕಲ್ ಮಾಲೀ[illegible]

ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ

ಅಮೋಘ ಸಂಗೀತ ಕಛೇರಿ

26 4 1956ನೇ ಗುರುವಾರ ಸಂಜೆ 6 ಘಂಟೆ[illegible]

ಗಾಯಕ ಸಾಮ್ರಾಟ್

ವಿ॥ ಮಣಿಕ್ಕಾಲ್ ರಂಗರಾಜರವರ ಗಾಯನ

ವಿ॥ ಆರ್ ಆರ್ ಕೇಶವಮೂರ್ತಿಗಳವರ [illegible]

ವಿ॥ ತಂಜಾವೂರು ಟಿ ಕೆ ಮೂರ್ತಿಯವರ ಮೃದಂ[illegible]

ಟಿಕೆಟ್ ದರ ರೂ 1-0-0

SREE GANES[illegible]

TALKISS

From 25 4 56 For 3 da[illegible]

THE CROOKED WEB

With – Frank Lovejoy and Mary Blaocbard

From 28 4 56 For 3 da[illegible]

FAR HORIZON

(In Vistavision Techmcolo)

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ [illegible]

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ ೦೪] SADHVI : THURSDAY 26-4-1956 ಮೈಸೂರು ಗುರುವಾರ [illegible] [ಸಂಚಿಕೆ : [illegible]

ಚಿನ್ನದ ಗಣಿಗೆ ೮ ಕೋಟಿ ರೂ. ಪರಿಹಾರಕ್ಕಾಗಿ ಒತ್ತಾಯ

ಚಿನ್ನದ ಗಣಿಗಳಿಗೆ ೮ ಕೋಟಿ ರೂ. ಪರಿಹಾರ ಬೇಕು

ಗಣಿ ಕಂಪೆನಿ ಡೈರೆಕ್ಟರ್ ಟೈಲರ್‌ರವರ ವಿವರಣೆ

[illegible]

ತಿಂಗಳಲ್ಲಿ ಜೆಟ್ ವಿಮಾನ ತಯಾರಿಕೆ

[illegible]

ಸುಚೇತಾ ಕೃಪಲಾನಿಯವರ ಚುನಾವಣೆ ಅಕ್ರಮ

[illegible]

ಢಾಕಾದಲ್ಲಿ ೫ ಸಾವಿರ ಸರ್ಕಾರಿ ಜವಾನರ ಮುಷ್ಕರ

[illegible] ೫,೦೦೦ ಜವಾನರು ನೆನ್ನೆ [illegible] ಮುಷ್ಕರವನ್ನು ಆರಂಭಿಸಿದರು. ಅವರನ್ನು [illegible] ಮಾಡಿ, ಅವರ ಮೇಲೆ ಕ್ರಮ ಜರುಗಿಸ[illegible] [illegible] ಮುಖ್ಯ ಮಂತ್ರಿ [illegible] ತಿಳಿಸಿರುತ್ತಾರೆ.

ಕತ್ತೆಗಳನ್ನು ಸ್ವೇಚ್ಛೆಯಾಗಿ ಬಿಟ್ಟಿದ್ದುದಕ್ಕಾಗಿ ಶಿಕ್ಷೆ

[illegible]

ಅಂಬರ್ ಚರಕಾ ಪ್ರಶಸ್ತಿ ದಾನ

[illegible]

ಪೂರ್ವ ಮತ್ತು ಪಶ್ಚಿಮ ಬರ್ಲಿನ್‌ಗಳ ನಡುವೆ ಸುರಂಗ ಮಾರ್ಗ

[illegible]

ಆಯುರ್ವೇದಕ್ಕೆ ತಕ್ಕ ಪ್ರಾಮುಖ್ಯತೆ ಕೊಡಬೇಕು

[illegible]

ನೂತನ ಪ್ರಾಂತಕ್ಕೆ ಕರ್ನಾಟಕ ಎಂಬ ಹೆಸರಿಗಾಗಿ ಒತ್ತಾಯ

[illegible]

ಅಣು ಶಕ್ತಿಯ ಶಾಂತಿ ಬಳಕೆಗಾಗಿ ೧೨ ರಾಷ್ಟ್ರಗಳ ನಿಬಂಧನೆ

[illegible]

ರಷ್ಯಾ ಮತ್ತು ಬ್ರಿಟಿಷ್ ನಾಯಕರ ಮಾತುಕತೆ ಮುಕ್ತಾಯ

[illegible]

ಅಟ್ಲಾಂಟಿಕ್ ಒಪ್ಪಂದ ಕೂಟದ ಮೂಲಕ ಮಧ್ಯ ಪೂರ್ವಕ್ಕೆ ನೆರವು

[illegible]

ಬೊಂಬಾಯಿ ಬಗ್ಗೆ ಹೊಸ ಸೂತ್ರ

[illegible]

ಅಸಭ್ಯ ಚಲನಚಿತ್ರದ ಪ್ರದರ್ಶನಕ್ಕಾಗಿ ಬಂಧನ

[illegible]

ಕೇಂದ್ರಕ್ಕೆ ಮದ್ರಾಸ್ ಮಂತ್ರಿ ಸಿ. ಸುಬ್ರಹ್ಮಣ್ಯಂ?

[illegible]

ಸದ್ಯಕ್ಕೆ ದೇಶಮುಖ್‌ರವರ ರಾಜೀನಾಮೆಯ ಒತ್ತಾಯವಿಲ್ಲ

[illegible]

ಪೊಲೀಸರೊಡನೆ ಜನಸಂಘದವರ ಘರ್ಷಣೆ

ಅಮೃತಸರದಲ್ಲಿ ನಿನ್ನೆ [illegible] ಜನಸಂಘದವರು [illegible] ಬಂದ ಪ್ರದರ್ಶನಕಾರರನ್ನು [illegible] ಜನಸಂಘದವರು ಪ್ರದರ್ಶನ ನಡೆಸಿದರೆಂದೂ, ಪೊಲೀಸರು [illegible] ಅಶ್ರುವಾಯು ಷೆಲ್ಲುಗಳನ್ನು ಹಾರಿಸಿ ಚದುರಿಸಿದರೆಂದೂ [illegible] ಜನ ಪ್ರದರ್ಶನಕಾರರು ಮತ್ತು ಹಲವು ಪೊಲೀಸರು [illegible]ಗಳಾದುವೆಂದೂ ವರದಿಯಾಗಿದೆ

ಪೊಲೀಸ್ ಇನ್ಸ್‌ಪೆಕ್ಟರರ ೩,೦೦೦ ರೂ. ಅಪಹಾರ

ಸೈಜಾಮಾಬಾದ್-ಹೈದರಾಬಾದು ನಡುವೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ [illegible] ಅಲಿಯವರು ತಮ್ಮ ಬಳಿ ಇಟ್ಟುಕೊಂಡಿದ್ದ ೩,೦೦೦ ರೂಗಳ ಪರ್ಸನ್ನು ಅಪಹರಿಸಲಾಗಿದೆಯೆಂದು ವರದಿಯಾಗಿದೆ ಅವರು ನಿಜಾಮಾಬಾದಿನಿಂದ ಪ್ರಯಾಣ ಮಾಡುತ್ತಿದ್ದರೆಂದೂ, ಪರ್ಸನ್ನು ಒಂದು ಸೂಟ್ ಕೇಸಿನಲ್ಲಿಟ್ಟು ಅದನ್ನು [illegible] ಇರಿಸಿದ್ದರೆಂದು ಹೇಳಲಾಗಿದೆ ಮನೆಗೆ ಬಂದು ಅವರು ನೋಡಿದಾಗ ಸೂಟ್ ಕೇಸು ಕತ್ತರಿಸಲ್ಪಟ್ಟು ದುಡ್ಡಿದ್ದ ಪರ್ಸು ಮಾಯವಾಗಿದ್ದುದು ಪತ್ತೆಯಾಯಿತು. [illegible] ಇದ್ದ ಹಾಗೇ ಇತ್ತು

ಟ್ರ್ಯಾಕ್ಟರ್ ಸುಂಕ ಕಡಿಮೆ

ಟ್ರ್ಯಾಕ್ಟರುಗಳ [illegible] ಮೇಲಿನ ಸುಂಕವನ್ನು [illegible] ರೂ.ನಿಂದ [illegible] ರೂ.ಗೆ ಇಳಿಸಲು [illegible] ನಿರ್ಧರಿಸುತ್ತದೆ

ನೆಲ್ಲೂರಿನಲ್ಲಿ ಡಾ॥ ಮೋದಿಯವರ ಶಿಬಿರ

ಡಾ॥ ಎಂ. ಸಿ. ಮೋದಿಯವರು ನೆಲ್ಲೂರಿನಲ್ಲಿ [illegible] ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು [illegible] ಜನರು ಕಣ್ಣುಗಳ ಪರೀಕ್ಷೆ ಮತ್ತು ಚಿಕಿತ್ಸೆಗಾಗಿ ತಮ್ಮ ಹೆಸರುಗಳನ್ನು ಕೊಟ್ಟಿದ್ದಾರೆ

ಹಳ್ಳಿ ಸ್ವಾಜ್ಯದಲ್ಲಿ ೧೨ ಜನರು ಸುಟ್ಟು ಭಸ್ಮ

ಧಾರವಾಡ ಬಳಿ [illegible] ಕಳೆದ ಶನಿವಾರ ರಾತ್ರಿ ಒಂದು ಮನೆಗೆ ಬೆಂಕಿಯಿಟ್ಟ ಪ್ರಕರಣದಲ್ಲಿ ೧೨ ಜನರು ಸುಟ್ಟು ಭಸ್ಮವಾದ ವಿಷಯವು ವರದಿಯಾಗಿದೆ ಸತ್ತವರಲ್ಲಿ [illegible] ಹೆಂಗಸರೂ ಒಂದು ಮಗುವೂ ಇರುವರು ಮನೆಯಾತನ ಸಂಬಂಧಿಕನೊಬ್ಬನು ತಮ್ಮ [illegible] ಇರಿದ ಸೇಡಿಗಾಗಿ ಮತ್ತೊಂದು ಪಕ್ಷದವರು ಬೆಂಕಿ ಹತ್ತಿಸಿದರೆಂದು ಹೇಳಲಾಗಿದೆ ಅಲ್ಲಿನ ಮುಸ್ಲಿಂ ಕೋಮಿನ ಎರಡು ಪಕ್ಷಗಳಲ್ಲಿ ಎಂಟು ತಿಂಗಳಿಂದಲೂ ವೈಷಮ್ಯವಿದ್ದಿತು [illegible]ನೆ ಸಂಬಂಧವಾಗಿ ಪೊಲೀಸರು ೧೦ ಜನರನ್ನು ಬಂಧಿಸಿದ್ದಾರೆ

೪,೦೦೦ ರೂ. ಗೆ ೧ ಮೋಟಾರು

ಜಪಾನಿನ ಮೋಟಾರು ತಯಾರಕರು ಜನತಾ ಮೋಟಾರನ್ನು ತಯಾರಿಸಿ ಮಾರಾಟಕ್ಕೆ ಕೊಡಲಿರುವರೆಂದು ವರದಿಯಾಗಿದೆ ಒಂದು ಕಾರಿಗೆ ೪,೦೦೦ರೂ ಬೆಲೆಯಾಗುವುದೆಂದು ಹೇಳಲಾಗಿದೆ ಟೋಕಿಯೋದಿನಲ್ಲಿ ನಡೆಯುತ್ತಿರುವ ಮೋಟಾರು ಪ್ರದರ್ಶನದಲ್ಲಿ ಗಂಟೆಗೆ [illegible] ಮೈಲಿ ಓಡಬಲ್ಲ ಒಂದು ಮೋಟಾರನ್ನು ಪ್ರದರ್ಶಿಸಲಾಗಿದೆ ಜಪಾನಿನಂದೇ ಮೋಟಾರನ್ನು [illegible] ತಯಾರಿಸುತ್ತಿರುವ ಏಷ್ಯಾ ರಾಷ್ಟ್ರ

ಮೈಸೂರು ಪೇಟೆ ಧಾರಣೆ

	[illegible]	[illegible]
ಕಡಲೆಕಾಯಿ	೭ ೦ ೦	೨೨ ೦ ೦
[illegible]	೮ ೦ ೦	೫ ೪ ೦
ಹುರುಳಿ	೩೪ ೮ ೦	೩೮ ೧೪ ೦
ಕಡಲೆ	೪೬ ೧ ೦	
ಧನಿಯ	೩೫ ೧೪ ೦	
[illegible]	೨ ೧ ೦	೫ ೧೪ ೦
[illegible]	೧೦ ೦ ೦	೧೯ ೪ ೦
ತೆಂಗಿನಕಾಯಿ ೧೦೦೦	೧ ೪ ೦ ೦	೩೦೬ ೦ ೦

ಈಡನ್ನರಿಗೆ ರಷ್ಯದ ಆಹ್ವಾನ

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕ್ರುಶ್ಚೇವರು ಬ್ರಿಟಿಷ್ ಪ್ರಧಾನಿಯವರನ್ನು ಈ ವರ್ಷ ರಷ್ಯ ಭೇಟಿ ಕೊಡ ನಂತೆ ಆಹ್ವಾನಿಸಿರುವರೆಂದು ಗೊತ್ತಾಗಿದೆ

ಆಲ್ಜೀರಿಯ ದಂಗೆಕೋರರಿಂದ ಮೂರು ಹಳ್ಳಿಗಳಿಗೆ ಬೆಂಕಿ

ಆಲ್ಜೀರಿಯದ ದಂಗೆಕೋರರು ಮೂರು ಹಳ್ಳಿಗಳಿಗೆ ಕಳೆದ ವಾರ [illegible]ದಲ್ಲಿ ಬೆಂಕಿ ಹತ್ತಿಸಿದರೆಂದೂ, ೧೨೦ ಮಂದಿ ಫ್ರೆಂಚ್ ಪರ ಸಿಪಾಯಿಗಳನ್ನು ಕೊಂದುಹಾಕಿರುವರೆಂದು ವರದಿಯಾಗಿದೆ ಫ್ರೆಂಚರ ಕಡೆ ಸೇರಿದ ಆಲ್ಜೀರಿಯದವರ ಮೇಲೆ ದಂಗೆಕೋರರು ಪ್ರತೀಕಾರ ಮಾಡಲು ಪ್ರಾರಂಭಿಸಿ ಕೈಗೊಳ್ಳಲು ತೊಡಗಿರುವರು ಆ ಪ್ರದೇಶದಲ್ಲಿ ಈಗ ಫ್ರೆಂಚ್ ಸೈನಿಕರು ಬಲವಾದ ಕಾರ್ಯಾಚರಣೆ ನಡೆಸುತ್ತಿರುವರು

ಪೌರಸಭೆ ಮುಂದೆ ಕೊಡಗಳನ್ನು ಹೊತ್ತ ಮಹಿಳೆಯರು

ಕೊಯಮುತ್ತೂರಿನಲ್ಲಿ ಕಳೆದ ಗುರುವಾರ ಪೌರಸಭಾಧಿವೇಶನವು ನಡೆಯುತ್ತಿದ್ದಾಗ ಸುಮಾರು ೧೦೦ ಮಂದಿ ಮಹಿಳೆಯರು ಕೊಡಗಳನ್ನು ಹಿಡಿದು ನಲ್ಲಿಗಳಲ್ಲಿ ನೀರು ಬರುತ್ತಿಲ್ಲವೆಂದು ಪೌರಸಭಾಧ್ಯಕ್ಷರಿಗೆ ದೂರು ಮಾಡಿದರು ನೀರಿನ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವುದಾಗಿ ಅಧ್ಯಕ್ಷರು ಭರವಸೆಯಿತ್ತರು [illegible] ನೀರನ್ನು ಹಂಚಲು ಏರ್ಪಾಡಾಗಿದೆ

ಜೈನ ಶಾಸ್ತ್ರ ಸಂಶೋಧನಾ ಶಾಲೆಯ ಶಂಕುಸ್ಥಾಪನೆ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದರು ವೈಶಾಲಿಯಲ್ಲಿ [illegible] ಲಕ್ಷ ರೂ ನಿಂದ ನಿರ್ಮಿಸಲ್ಪಡುವ ಜೈನ ಶಾಸ್ತ್ರ ಪ್ರಾಕೃತ ಮತ್ತು ಅಹಿಂಸೆಗಳ ಸಂಶೋಧನೆ ಮತ್ತು ಪದವೀಧರೋತ್ತರ [illegible] ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿದರು

ಹಾವುಗಳ ನಡುವೆ ೬೩ ದಿನಗಳ ಉಪವಾಸಕ್ಕಾಗಿ ಪ್ರಯತ್ನ

ಫ್ರಾನ್ಸಿನ ಬರ್ನ್ಸ್ ಎಂಬ [illegible] ಕಳೆದ ಶನಿವಾರ ಒಂದು ಗಾಜಿನ ಪೆಟ್ಟಿಗೆಯನ್ನು ಹೊಕ್ಕು [illegible] ದಿನಗಳ ಉಪವಾಸ ವ್ರತ ಮಾಡಲು ನಿಶ್ಚಯಿಸಿರುತ್ತಾನೆ ಅವನು ಪೆಟ್ಟಿಗೆಯೊಳಗೆ ೫೦ ವಿಷದ ಹಾವುಗಳನ್ನೂ, ಒಡೆದ ಗಾಜಿನ ಚೂರುಗಳನ್ನೂ ಇಟ್ಟುಕೊಂಡಿರುವನು ಗಾಜಿನ ಚೂರುಗಳು ಅವನಿಗೆ ಹಾಸಿಗೆಯಂತಿವೆ [illegible] ಪ್ಯಾಕೆಟ್ ಹೊಗೆಸೊಪ್ಪು, ಮೈ ಮುಚ್ಚಿಕೊಳ್ಳುವ ಸಾಧನಗಳು, ಬೆಳೆಯುವ ಗಡ್ಡವನ್ನು ಕತ್ತರಿಸಲು ಒಂದು ಕತ್ತರಿಯನ್ನು ಅವನು ಇಟ್ಟುಕೊಂಡಿರುವನು ದಿನಕ್ಕೆ [illegible] ಪಿಂಟ್ (೨॥ ಸೇರು) ಉಪ್ಪು ನೀರನ್ನು ಸೇವಿಸುವನು ವಿಶ್ವದ ರಿಕಾರ್ಡನ್ನು ಸ್ಥಾಪಿಸುವುದೇ ಅವನ ಉದ್ದೇಶ ಹಿಂದೆ ಅವನು [illegible] ದಿನಗಳವರೆಗೆ ಉಪವಾಸ ಮಾಡಿದ್ದನು ಮತ್ತೊಬ್ಬನು ೧೦೫ ದಿನಗಳ ಉಪವಾಸ ಮಾಡಿದ ಮೇಲೆ ಅವನನ್ನು ವಿರಾಮಿಸಲು ಈತನು ಈಗ ಪ್ರಾರಂಭಿಕ ಉಪವಾಸವನ್ನು ಕೈಗೊಂಡಿರುವನು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಶ್ರೀ [illegible] ಮಂಟಪದಲ್ಲಿ

ಅನ್ನೋನ್ಯ ಸಂಗೀತ ಕಛೇರಿ

27-4-1956ನೇ ಶುಕ್ರವಾರ ಸಂಜೆ 6 ಘಂಟೆಗೆ

[illegible] ವೀಣೆ

[illegible] ಪಿಟೀಲು

[illegible] ಮೃದಂಗ

[illegible] 1-0-0

ನೆಹ್ರೂ-ವಿನೋಬಾ ಭಾವೆ ಭೇಟಿ

ಪ್ರಧಾನಿ ನೆಹರೂರವರು ಕೆಲವು ದಿನಗಳ ಹಿಂದೆ ಮೆಹಬೂಬ್‌ನಗರ ಜಿಲ್ಲೆಯ [illegible] ರಾಯನಪಲ್ಲಿ ಎಂಬಲ್ಲಿ ಆಚಾರ್ಯ ವಿನೋಬಾ ಭಾವೆಯವರನ್ನು ಭೇಟಿ ಮಾಡಿ ೪೦ ನಿಮಿಷ ಕಾಲ ಮಾತುಕತೆ ನಡೆಸಿದರು ಆಚಾರ್ಯ ಭಾವೆಯವರು ಕಳೆದ ೫ ವರ್ಷಗಳಿಂದ [illegible] ಮೈಲಿಯಷ್ಟು ಪಾದಯಾತ್ರೆ ನಡೆಸಿ, [illegible] ಲಕ್ಷ ಎಕರೆ ಜಮೀನನ್ನು ದಾನವಾಗಿ ಪಡೆದಿದ್ದಾರೆ ಇದಲ್ಲದೆ [illegible] ಇಡೀ ಊರುಗಳನ್ನು ಗ್ರಾಮದಾನವಾಗಿ ಸ್ವೀಕರಿಸಿರುತ್ತಾರೆ

ಮೈಸೂರಿನವರಿಗೆ ವಿಶ್ವಸಂಸ್ಥೆ ಸಮಿತಿ ಉದ್ಯೋಗ

ಮಂಡ್ಯದ ವ್ಯವಸಾಯ ಸಂಶೋಧನಾ ಕೇಂದ್ರದಲ್ಲಿರುವ ಗ್ರಾಮ ಸೇವಕರ ತರಬೇತು ಶಾಲೆಯ ಪ್ರಿನ್ಸಿಪಾಲರಾದ ಶ್ರೀ ಪಿ. ರುದ್ರಮೂರ್ತಿಯವರು ಆಫ್ರಿಕದ ಲೈಬೀರಿಯಕ್ಕೆ ಗ್ರಾಮಾಂತರ ಕಾರ್ಯಕರ್ತರ ಶಿಕ್ಷಕರಾಗಿ ಹೋಗುವರು ವಿಶ್ವಸಂಸ್ಥೆಯ ಯುನೆಸ್ಕೊ ಅಧಿಕಾರಿಗಳಾಗಿ ಅವರು ಹೋಗುವರು

ಬಾಲಕನಿಂದ ಮಾತಾ ಪಿತೃಗಳ ಕೊಲೆ

ಅಮೆರಿಕದ ಕನೆಕ್ಟಿಕಟ್ ಸಂಸ್ಥಾನದ [illegible] ಸ್ಟೀಲ್ಡಿನಲ್ಲಿ [illegible] ಎಂಬ ೧೫ ವರ್ಷದ ಬಾಲಕನು ತನ್ನ ತಂದೆ, ತಾಯಿ ಮತ್ತು ಸಹೋದರರನ್ನು ಗುಂಡು ಹೊಡೆದು ಕೊಂದಿರುವನೆಂದೂ, ಅವನನ್ನು ಹುಚ್ಚರ ಆಸ್ಪತ್ರೆಗೆ ಸಾಗಿಸಲಾಗಿದೆಯೆಂದೂ ವರದಿಯಾಗಿದೆ ಕಳೆದ ರವಿವಾರ ರಾತ್ರಿ ಅವನು ಅವರು ನಾಲ್ವರನ್ನು ಕೊಂದು ಅವರ ಮೇಲೆ ಹೊದಿಕೆಗಳನ್ನು ಹಾಕಿ ತಾನೂ ಅವರ ಬಳಿ ಸುಖವಾಗಿ ಮಲಗಿ ನಿದ್ರಿಸಿದನೆಂದೂ, ಮಾರನೇ ದಿನ ತನ್ನ ಕೃತ್ಯದ ಬಗ್ಗೆ ನೆರೆಯವನೊಬ್ಬನಿಗೆ ಸಮಾಚಾರವಿತ್ತನೆಂದೂ ಹೇಳಲಾಗಿದೆ ಒಂದು ವಾರದ ಹಿಂದೆ ಅವನ ತಂದೆಯು ಮಲಗುವ ಮುಂಚೆ ದೀಪವನ್ನಾರಿಸಬಿಟ್ಟುದೇ ಸೇಡಿಗೆ ಕಾರಣವೆಂದು ಹೇಳಲಾಗಿದೆ

ಮಾದರಿ ಶಾಲಾ ಹಿಂದಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ

ರಾಜಧಾನಿಯ ಮಾದರೀ ಶಾಲೆಯಲ್ಲಿರುವ ಭಾರತೀ ಹಿಂದಿ ವಿದ್ಯಾಲಯದ ಪರವಾಗಿ ಪರೀಕ್ಷೆಗೆ ಕುಳಿತಿದ್ದ ವಿದ್ಯಾರ್ಥಿಗಳ ಫಲಿತಾಂಶವು ಈ ರೀತಿ ಇದೆ — ವಿಶಾರದ ಉತ್ತರಾರ್ಧಕ್ಕೆ ಕುಳಿತ ಒಬ್ಬರು, ಪ್ರವೇಶಿಕದಲ್ಲಿ ಇಬ್ಬರ ಪೈಕಿ ಒಬ್ಬರು, ರಾಷ್ಟ್ರ ಭಾಷೆಗೆ ಕುಳಿತ ೫ ಜನರು, ಮಧ್ಯಮದಲ್ಲಿ [illegible] ರ ಪೈಕಿ ೧೧, ಪ್ರಾಥಮಿಕದಲ್ಲಿ [illegible]ರಲ್ಲಿ ೧೧ ಜನರು ಉತ್ತೀರ್ಣರಾಗಿರುವರು ರಾಷ್ಟ್ರ ಭಾಷೆಯಲ್ಲಿ ಒಬ್ಬನೂ, ಪ್ರಾಥಮಿಕದಲ್ಲಿ ಇಬ್ಬರೂ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಿರುತ್ತಾರೆ ಆಗಸ್ಟ್ ಪರೀಕ್ಷೆಗಳಿಗಾಗಿ ಸೇರುವವರು ಮೇ ೧ನೇ ತಾರೀಕಿನೊಳಗೆ ತಿಳಿಸುವಂತೆ ಕೋರಲಾಗಿದೆ ಅಲ್ಲಿ ವಿಶಾರದ ವಿದ್ಯಾಲಯವೂ ಸಹ ನಡೆಯುವುದು

ರಾಮೋತ್ಸವ ಕಾರ್ಯಕ್ರಮಗಳು

ಮೈಸೂರು [illegible]

ರಾಜಧಾನಿಯ ಸಂತೆಪೇಟೆ ಕಂಟಿಟಿಗರ [illegible] ರಾಮ ಮಂದಿರದಲ್ಲಿ ರಾಮೋತ್ಸವದ ಪ್ರಯುಕ್ತ ನಾಳೆ ಸಂಜೆ [illegible] ಗಂಟೆಗೆ ವಿ॥ ಚೊಕ್ಕಪ್ಪನವರ ಗಾಯನವೂ ವಿ॥ ಪಚ್ [illegible] ಕೃಷ್ಣಯ್ಯರ ಪಿಟೀಲು ಮತ್ತು ವಿ॥ [illegible] ನವರ ಮೃದಂಗದೊಡನೆ ನಡೆಯುವುದು

[illegible] ಅಗ್ರಹಾರದ ಶ್ರೀ ರಾಮ ಸೇವಾ ಮಂಡಲಿಯ ಆಶ್ರಯದಲ್ಲಿ ನಾಳೆ ಸಂಜೆ [illegible] ಎಸ್ ಕೆ ಎಲ್ ಭಾಗವತರಿಂದ ಶ್ರೀ ರಾಮ [illegible] ಪಟ್ಟಾಭಿಷೇಕ ಎಂಬ ಹರಿಕಥೆಯು [illegible] ಪಾಡಾಗಿದೆ

ಕೂಡಲಿ ಸ್ವಾಮಿಗಳವರ ವಾರ್ಷಿಕಾರಾಧನೆ

ಕೂಡಲಿ ಶೃಂಗೇರಿ ಸಂಸ್ಥಾನದ ಬ್ರಹ್ಮೀಭೂತರಾದ ವಿದ್ಯಾಶಂಕರ ಭಾರತೀ ಸ್ವಾಮಿಗಳ [illegible] ವಾರ್ಷಿಕಾರಾಧನೋತ್ಸವವು ನಾಳೆ, [illegible] ಮತ್ತು [illegible] ಸಂಸ್ಕೃತ ಮಹಾ ಪಾಠಶಾಲೆಯಲ್ಲಿರುವ ಮಂದಿರದಲ್ಲಿ ನಡೆಯುವುದು [illegible] ದರ ಅಂಗವಾಗಿ ನಾಳೆ ಬೆಳಗ್ಗೆ ಪೂರ್ವಾರಾಧನೆಯೂ, ನಾಳಿದ್ದು ಬೆಳಗ್ಗೆ ಮುಖ್ಯಾರಾಧನೆಯು ಜರುಗುವುವು ಸಂಜೆ [illegible] ಗಂಟೆಗೆ ರುದ್ರ ಕ್ರಮಾರ್ಚನೆಯೂ ನಂತರ ಉತ್ತರಾರಾಧನೆ ನಡೆಯುವುದು ಪ್ರತಿ ಸಂಜೆ ಮಂಗಳಾರತಿ ಮತ್ತು ರಾಜಾಶೀರ್ವಾದಗಳು ಇವೆ

ಪೋರ್ಟರನಿಂದ ಗುಡಿಸುವವನಿಗೆ ಏಟು

ನಗರದ ಚಾಮರಾಜಪುರಂ ರೈಲು ನಿಲ್ದಾಣದ ಪೋರ್ಟರ್ ಚಾಮಯ್ಯ ಎಂಬುವನು [illegible] ನಗಾಡು ಎಂಬ ಕಸ ಗುಡಿಸುವವನನ್ನು ನೆನ್ನೆ [illegible] ಮುಖದ ಮೇಲೆ ಹೊಡೆದು ಗಾಯಗೊಳಿಸಿದನೆಂದು ರೈಲ್ವೆ ಪೊಲೀಸಿಗೆ ದೂರು ಕೊಡಲಾಗಿದೆ

ಆಫ್ಘನ್ ದೊರೆಯೊಡನೆ ಪಾಕಿಸ್ತಾನದ ಅಧ್ಯಕ್ಷರ ಭೇಟಿ

ಆಫ್ಘಾನಿಸ್ತಾನದ ದೊರೆ ಜಾಹಿರ್ ಷಾ [illegible]ನ್ನು ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾರವರು ಭೇಟಿ ಮಾಡುವುದರ ಬಗ್ಗೆ ಆಲೋಚನೆ ನಡೆಸಲಾಗುತ್ತಿರುವುದೆಂದು ಪಾಕಿಸ್ತಾನದ ವಿದೇಶಾಂಗ ಇಲಾಖಾಧಿಕಾರಿಯೊಬ್ಬರು ತಿಳಿಸುತ್ತಾರೆ ಸ್ಥಳ ಮತ್ತು ಕಾಲವಿನ್ನೂ ನಿರ್ಧರಿಸಿಲ್ಲ ಉಭಯ ರಾಷ್ಟ್ರಗಳ ನಡುವೆ ವ್ಯವಹಾರವು ಕೆಟ್ಟು, ರಾಜತಾಂತ್ರಿಕ ಸಂಬಂಧವೂ ಕಡಿದುಹೋಗಿದೆ

ರಣಜಿತ್ ★ 26-4-56 ರಿಂದ ಅಮೋಘ ಪ್ರಾರಂಭ

ಚಿತ್ರ, ಮಹೀಪಾಲ್ ನಟಿಸಿರುವ ರೋಮಾಂಚಕ ಹಿಂದಿ ಚಿತ್ರ

ಅಲ್ಲಾದೀನ್-ಕ-ಬೇಟ

Edited, Printed and Published by A. R Nagarajan at Sadhvi Press D Subbiah Road, Mysore

ಲಕ್ಷ್ಮಿ ★ 26-4-56 ರಿಂದ ಅಮೋಘ [illegible]

ಮಧುರೈ ವೀರನ್ (ತಮಿಳು)

ಪಾತ್ರ:—ಎಂ ಜಿ ರಾಮಚಂದ್ರನ್, ಟಿ ಎ ಬಾಲಯ್ಯ, ಭಾನುಮತಿ, ಲಲಿತ ಪದ್ಮಿನಿ ರವರು

ಎನ್ ಎಸ್ ಕೃಷ್ಣನ್-ಟಿ ಎ. ಮಧುರಂ ಮುಂತಾದವರು

ಟೆಲಿಫೋನ್ ನಂ. 792

ಕೂರ್ಗ್ ಮ್ಯಾಗಜೀನ್
ಸ್ಥಾಪಿತ 1932 · ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ
ಮಾರ್ಟ್,
ನ್ಯೂ ಸ್ಟಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾ
ರಾದ ನೆಕ್ಲೇಸ್‌ಗಳೂ, ಬಳೆ
ಗಳೂ ಮತ್ತು ನವೀನ ರೀತಿಯ
ಕಲ್ಲಿನ ಒಡವೆಗಳೂ ಸದಾ
ದೊರೆಯುತ್ತವೆ

ಲಗ್ನದ ಜವಳಿ
ಗೋಲ್ಡ್ ಸಿಲ್ಕ್ ಸೀರೆಗಳು
M.V. ಭೋಜಯ್ಯ
ಮೈಸೂರು : ಫೋನ್

SADHVI : FRIDAY 27-4-1956 ಮೈಸೂರು ಶುಕ್ರವಾರ

ಬ್ರಿಟನ್ ಮತ್ತು ರಷ್ಯಾ ಪ್ರಧಾನಿಗಳ ಸಂಧಾನ ಮುಕ್ತಾಯ

ಬ್ರಿಟನ್ ಮತ್ತು ರಷ್ಯಾಗಳ ಸಂಧಾನದ ಮುಕ್ತಾಯ

೧೦೦ ಕೋಟಿ ಪೌಂಡ್ ಬ್ರಿಟಿಷ್ ಸರಕು ಕೊಳ್ಳಲು ರಷ್ಯದ ಆಶಯ

ಬ್ರಿಟನ್ ಮತ್ತು ರಷ್ಯಾ ಪ್ರಧಾನಿಗಳ ನಡುವೆ ನಡೆದ ಮಾತುಕತೆಯಲ್ಲಿ ಯಾವ ಮುಖ್ಯ ವಿಷಯದ ಬಗ್ಗೆಯೂ ಒಡಂಬಡಿಕೆಯಾಗಲಿಲ್ಲವೆಂದು ಅಧಿಕೃತ ಪ್ರಕಟಣೆಯಿಂದ ವ್ಯಕ್ತವಾಗಿದೆ. ನಾನಾ ಸಮಸ್ಯೆಗಳ ಬಗ್ಗೆ ಪರಸ್ಪರ ನಿಲುವನ್ನು ಉಭಯರೂ ಅರ್ಥ ಮಾಡಿಕೊಂಡುದಾಗಿಯೂ, ಮುಂದೆ ಎರಡು ರಾಷ್ಟ್ರಗಳೂ ಕೈಗೊಳ್ಳಬಹುದಾದ ಕಾರ್ಯಗಳ ಮೇಲೆ ಅದರ ಪ್ರಭಾವವು ಬೀಳಬಹುದೆಂದೂ ವರದಿಯಾಗಿದೆ.

ಬ್ರಿಟನ್ನು ಸರಕುಗಳ ಮಾರಾಟದ ಮೇಲಿನ ನಿರ್ಬಂಧಗಳನ್ನು ತಾಳದಿದ್ದರೆ, ತಾನು ಎರಡು ವರ್ಷಗಳಲ್ಲಿ ಅಲ್ಲಿಂದ ೧೦೦ ಕೋಟಿ ಪೌಂಡಿನ ಪದಾರ್ಥಗಳನ್ನು ಕೊಳ್ಳಲು ಸಿದ್ಧವಿರುವುದಾಗಿ ರಷ್ಯವು ಸೂಚಿಸಿದೆ. ಕಮ್ಯೂನಿಸ್ಟ್ ರಾಷ್ಟ್ರಗಳಿಗೆ ಕಳುಹಿಸಬಾರದೆಂದು ಸೂಚಿಸಲ್ಪಟ್ಟಿರುವ ಸರಕುಗಳ ಪಟ್ಟಿಯಲ್ಲಿಲ್ಲದ ಅನೇಕ ಮಾಲುಗಳನ್ನು ಕೊಳ್ಳುವುದಾಗಿ ರಷ್ಯವು ಹೇಳಿದೆ.

ಹತ್ತಿರ ಮತ್ತು ಮಧ್ಯ ಪ್ರಾಚ್ಯದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಲು ಕೈಲಾದ ಪ್ರಯತ್ನವನ್ನು ನಡೆಸುವುದಾಗಿ ಎರಡು ರಾಷ್ಟ್ರಗಳೂ ತಮ್ಮ ದೃಢ ಮನೋಗತವನ್ನು ಸೂಚಿಸಿವೆ. ಅದಕ್ಕಾಗಿ ಪ್ಯಾಲಸ್ಟೈನ್ ಪ್ರದೇಶದಲ್ಲಿ ವಿಶ್ವಸಂಸ್ಥೆಯು ಕೈಗೊಳ್ಳಬಹುದಾದ ಎಲ್ಲ ಕ್ರಮಗಳಿಗೂ, ಭದ್ರತಾ ಸಮಿತಿಯ ನಿರ್ಧಾರಗಳಿಗೂ ಎರಡು ರಾಷ್ಟ್ರಗಳೂ ಬೆಂಬಲ ನೀಡಲಿವೆ. ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳ ನಡುವೆ ಪರಸ್ಪರ ಒಪ್ಪಿಗೆಯಾಗುವ ಶಾಂತಿ ಸಂಧಾನಕ್ಕೆ ಎರಡು ರಾಷ್ಟ್ರಗಳೂ ಬೆಂಬಲ ಸೂಚಿಸುವುವೆಂದು ಹೇಳಲಾಗಿದೆ.

ವಿಶ್ವದ ಯಾವ ಭಾಗದಲ್ಲಾದರೂ ಶಸ್ತ್ರಾಸ್ತ್ರ ನಿಯಂತ್ರಣೆಯನ್ನು ತಡೆಗಟ್ಟಲು ಎರಡು ಸರ್ಕಾರಗಳೂ ತಮ್ಮ ಶಕ್ತಿಯನ್ನೆಲ್ಲಾ ವಿನಿಯೋಗಿಸುವುದಾಗಿ ಪ್ರಕಟಣೆಯು ಸೂಚಿಸಿದೆ.

ರಷ್ಯಾ ಮತ್ತು ಬ್ರಿಟನ್‌ಗಳ ನಡುವೆ ಸಾಂಸ್ಕೃತಿಕ ಮತ್ತು ವ್ಯಾಪಾರಿ ಸಂಬಂಧದಲ್ಲಿ ಪ್ರಗತಿಯಾಗಿರುವುದು ಶುಭಲಕ್ಷಣವೆಂದು ಎರಡು ರಾಷ್ಟ್ರಗಳೂ ಅಭಿಪ್ರಾಯಪಟ್ಟಿವೆ.

ಪುರಾಣ ಪ್ರವಚನ

ರಾಜಧಾನಿಯ ತಗಡೂರು ಮಠದ ಬೀದಿಯಲ್ಲಿರುವ ೧೧೧೫ನೇ ನಂಬರ್ ಮನೆ ಮುಂಭಾಗದಲ್ಲಿರುವ ಚಪ್ಪರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ವೇ|| ಬ್ರಹ್ಮಶ್ರೀ ಜಯತೀರ್ಥಾಚಾರ್ಯರು ಧ್ರುವ ಚರಿತ್ರೆ ಎಂಬ ಪುರಾಣವನ್ನು ಹೇಳುವರು.

ಹರಿಕಥೆ ಮತ್ತು ಸಂಗೀತ

ರಾಜಧಾನಿಯ ವಿದ್ಯಾರಣ್ಯಪುರದ ಬಾಲಕರ ಶ್ರೀರಾಮ ಮಂದಿರದಲ್ಲಿ ನಾಳೆ ಸಂಜೆ ೬|| ಗಂಟೆಗೆ ಆದುಕವಿ ರತ್ನಂ ಟಿ. ಆರ್. ವೆಂಕಟಸುಬ್ಬಯ್ಯ ಭಾಗವತಿಯವರಿಂದ ಸಂತ ಏಕನಾಥ್ ಎಂಬ ಹರಿಕಥೆಯೂ, ರಾತ್ರಿ ೯ ಗಂಟೆಗೆ ಆ|| ವಿ|| ಪಿ. ಸುಬ್ಬಣ್ಣನವರ ಸಂಗೀತವೂ ಸೂಕ್ತ ಪಕ್ಕವಾದ್ಯ ಸಹಿತ ಏರ್ಪಾಡಾಗಿವೆ.

ದೀಪವಿಲ್ಲದೆ ಓಡುತ್ತಿದ್ದ ಲಾರಿಯಲ್ಲಿ ಶವದ ಪತ್ತೆ

ಬೆಂಗಳೂರು ೨೭

ದೀಪವಿಲ್ಲದೆ ಲಾರಿ ನಡೆಸುತ್ತಿದ್ದ ಡ್ರೈವರನನ್ನು ಹಿಡಿದು ಅವನ ಮೇಲೆ ಮೊಕದ್ದಮೆ ಹೂಡಲು ಉದ್ದೇಶಿಸಿ ಇಲ್ಲಿನ ಟ್ರಾಫಿಕ್ ಪೋಲೀಸರು ಮೊನ್ನೆ ರಾತ್ರಿ ಠಾಣೆಗೆ ಕರೆದೊಯ್ಯುತ್ತಿದ್ದ ಲಾರಿಯೊಂದನ್ನು ಪರೀಕ್ಷಿಸಿದಲ್ಲಿ ಬೆನ್ನಟ್ಟಿದಾಗ ಲಾರಿಯಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಕಂಡುಬಂದ ಮೃತ ದೇಹವಿದ್ದುದು ಗೊತ್ತಾಯಿತೆಂದು ವರದಿಯಾಗಿದೆ. ಲಾರಿಯನ್ನು ತಡೆಯುವ ಮುಂಚೆ ಡ್ರೈವರನು ಪರಾರಿಯಾಗಿದ್ದನೆಂದು ಹೇಳಲಾಗಿದೆ. ಅವನ್ನು ಶೋಧಿಸಲಾಗಿ ಗೋಣಿ ಚೀಲದಲ್ಲಿ ತುಂಬಿ ಕ್ರೈವರ್ ಸೀಟಿನ ಬಳಿ ಇಟ್ಟಿದ್ದ ಶವವು ಸಿಕ್ಕಿತು. ಅದು ಲಾರಿ ಕ್ಲೀನರನದೆಂದೂ, ಸುಮಾರು ೨೨ ವರ್ಷದ ಯುವಕನ ಶವವೆಂದು ಪತ್ತೆ ಹಚ್ಚಲಾಗಿದೆ. ಲಾರಿಯು ಕನಕಪುರದ ಯೋಗಿ ಸಿದ್ದೇಗೌಡರದು.

ನೆಹರೂರವರಿಂದ ನ್ಯೂಸ್ ಪ್ರಿಂಟ್ ಕಾರ್ಖಾನೆ ಆರಂಭ

ಮಧ್ಯ ಪ್ರದೇಶದ ನೇಪಾ ನಗರದಲ್ಲಿ ಭಾರತದ ಪ್ರಥಮ ನ್ಯೂಸ್ ಪ್ರಿಂಟ್ ಕಾಗದದ ಕಾರ್ಖಾನೆಯ ಆರಂಭೋತ್ಸವವನ್ನು ಪ್ರಧಾನಿ ನೆಹರೂರವರು ನೆನ್ನೆ ನೆರವೇರಿಸಿದರು. ಭಾರತವು ಭಾರಿ ಕೈಗಾರಿಕಾ ಕ್ರಾಂತಿಯ ಸನ್ನಿವೇಶದಲ್ಲಿ ತೊಡಗಿದೆಯೆಂದೂ, ಸಮಾಜವಾದಿ ಸಮಾಜ ಸೃಷ್ಟಿಗಾಗಿ ಜನರು ಕಷ್ಟಪಡಬೇಕೆಂದೂ ಅವರು ತಿಳಿಸಿದರು. ಒಂದೆರಡು ದಿನಗಳಲ್ಲಿ ಭಾರತ ಸರ್ಕಾರದವರು ತಮ್ಮ ಕೈಗಾರಿಕಾ ನೀತಿಯ ಬಗ್ಗೆ ವಿವರವಾದ ಹೇಳಿಕೆಯನ್ನೀಯುವುದಾಗಿ ಅವರು ತಿಳಿಸಿದರು.

ಪೋಲೆಂಡಿನ ಮಾಜಿ ಮಂತ್ರಿಯ ಬಂಧನ

ಪೋಲೆಂಡಿನ ಮಾಜಿ ಸಾರ್ವಜನಿಕ ಭದ್ರತಾ ಉಪ ಮಂತ್ರಿ ರೋಮನ್ ರಾಡ್ಕಿವಿಸ್ಕಿಯವರನ್ನು ಬಂಧಿಸಲಾಗಿರುವುದೆಂದು ವಾರ್ಸಾ ರೇಡಿಯೋ ತಿಳಿಸಿದೆ. ಇದಕ್ಕೆ ಮುಂಚೆ ೩ ಜನ ಮಂತ್ರಿಗಳನ್ನೂ, ಸರ್ಕಾರಿ ಮುಖ್ಯ ಪಬ್ಲಿಕ್ ಪ್ರಾಸಿಕ್ಯೂಟರ್ ಜನರಲ್ಲರನ್ನೂ ವಜಾ ಮಾಡಲಾಗಿದ್ದಿತು.

ಹೆಂಗಸಿನ ಬಗ್ಗೆ ಅಸಭ್ಯ ವರ್ತನೆಗಾಗಿ ಘರ್ಷಣೆ

ಹುಬ್ಬಳ್ಳಿಯಲ್ಲಿ ಕಳೆದ ಭಾನುವಾರ ಪರಸ್ಪರ ಕಲ್ಲು ತೂರುತ್ತಿದ್ದ ಎರಡು ಗುಂಪುಗಳ ಪೈಕಿ ೧೮ ಜನರನ್ನು ಪೋಲೀಸರು ಬಂಧಿಸಿದರು. ೩೦೦ ಜನರ ಗುಂಪು ಘರ್ಷಣೆಯಲ್ಲಿ ಸೇರಿದ್ದಿತೆಂದೂ, ೬ ಜನರಿಗೆ ಗಾಯವಾಯಿತೆಂದೂ ಹೇಳಲಾಗಿದೆ. ೩ ಗುಡಿಸಲುಗಳಿಗೆ ಬೆಂಕಿ ಹಚ್ಚಲಾಯಿತು. ಪಕ್ಕದ ಭಾವಿಯಿಂದ ಹಿಂದಿರುಗುತ್ತಿದ್ದ ಓರ್ವ ಹೆಂಗಸಿನ ಬಗ್ಗೆ ಒಬ್ಬ ಗಂಡಸು ಅಸಭ್ಯ ರೀತಿಯ ಸಂಜ್ಞೆ ಮಾಡಿದುದೇ ಘರ್ಷಣೆಗೆ ಕಾರಣವಾಯಿತು. ಆ ಪ್ರದೇಶದಲ್ಲಿ ಈಗ ಪೋಲೀಸರ ಗಸ್ತನ್ನು ಹಾಕಲಾಗಿದೆ.

ಕಾಶ್ಮೀರದ ಬಗ್ಗೆ ನೆಹರೂ ನಿಲುವಿಗೆ ಕಮ್ಯೂನಿಸ್ಟರ ಬೆಂಬಲ

ಕಾಶ್ಮೀರದ ವಿಂಗಡನೆಯನ್ನು ಈಗಿನ ಯುದ್ಧಸ್ತಂಭನ ರೇಖೆಯ ಆಧಾರದ ಮೇಲೆ ಸರಿಯಾಗಿ ಗೊತ್ತುಪಡಿಸಲು ಪ್ರಧಾನಿ ನೆಹರೂರವರು ಕೊಟ್ಟಿರುವ ಸಲಹೆಗೆ ಭಾರತದ ಕಮ್ಯೂನಿಸ್ಟ್ ಪಕ್ಷದ ಕಾಂಗ್ರೆಸ್ ಅಧಿವೇಶನವು ಬೆಂಬಲವಿತ್ತಿದೆ. ಆ ರೀತಿ ಮಾಡಿ ಉಭಯ ರಾಷ್ಟ್ರಗಳ ನಡುವೆ ಶಾಂತಿ ಸಂಬಂಧವನ್ನು ಬೆಳೆಸಿ, ಪರಂಪರಾಗತವಾಗಿ ಬಂದಿರುವ ವ್ಯಾಪಾರ ಮತ್ತು ಆರ್ಥಿಕ ವ್ಯವಹಾರಗಳನ್ನು ಪುನಃ ಏರ್ಪಡಿಸಿಕೊಳ್ಳಬೇಕೆಂದು ಕಾಂಗ್ರೆಸ್ಸು ಸೂಚಿಸಿದೆ. ಪಾಕಿಸ್ತಾನ ಮತ್ತು ಭಾರತಗಳ ನಡುವೆ ಕಾಶ್ಮೀರದ ವಿಷಯವಾಗಿ ಜಗಳವನ್ನು ತಂದಿಡಲು ಸಾಮ್ರಾಜ್ಯಶಾಹಿಗಳ ಪ್ರಯತ್ನದ ಬಗ್ಗೆ ಜನತೆಯು ಎಚ್ಚರಿಕೆಯಿಂದ ಇರಬೇಕೆಂದು ಅದು ತಿಳಿಸಿದೆ.

ಏಷ್ಯಾ ರಾಷ್ಟ್ರಗಳಿಗೆ ರಷ್ಯದ ಆರ್ಥಿಕ ಸಹಾಯ

ಏಷ್ಯಾ ರಾಷ್ಟ್ರಗಳಿಗೆ ರಷ್ಯವು ೨,೫೦೦ ಕೋಟಿ ರೂ ನಷ್ಟು ಆರ್ಥಿಕ ಸಹಾಯವನ್ನು ಕೊಡಲಿದೆಯೆಂದು ಗೊತ್ತಾಗಿದೆ. ಏಷ್ಯಾ ರಾಷ್ಟ್ರಗಳಲ್ಲಿ ಕೈಗಾರಿಕಾಭಿವೃದ್ಧಿಗಾಗಿ ಮೇಲ್ಕಂಡ ಹಣವನ್ನು ಸಾಲವಾಗಿ ಕೊಡಲಾಗುವುದು.

ಈಚೆಗೆ ಆರು ಬಾರಿ ಪಾಕಿಸ್ತಾನದಿಂದ ಗಡಿ ಉಲ್ಲಂಘನೆ

ಕರಾಚಿಯಲ್ಲಿ ಮಾರ್ಚ್ ತಿಂಗಳು ನಡೆದ ಆಗ್ನೇಯ ಏಷ್ಯಾ ರಾಷ್ಟ್ರಗಳ ಸಮ್ಮೇಳನದ ನಂತರ ಪಾಕಿಸ್ತಾನವು ಆರು ಬಾರಿ ಭಾರತದ ಗಡಿಯನ್ನು ಉಲ್ಲಂಘಿಸಿ ಧಾಳಿ ಮಾಡಿರುವುದಾಗಿ ಲೋಕಸಭೆಯಲ್ಲಿ ಕೇಂದ್ರ ರಕ್ಷಣಾ ಸಚಿವರು ತಿಳಿಸಿದ್ದಾರೆ.

ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಲು ಒತ್ತಾಯದ ಉಪವಾಸ

ರಾಜಲಕ್ಷ್ಮಿ ಪತಿ ಎಂಬ ವಿಜಯವಾಡದ ಯುವಕನೊಬ್ಬನು ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದೂ, ತ್ರಿಭಾಷಾ ಪ್ರಾಂತ ರಚಿಸಬೇಕೆಂದೂ ಒತ್ತಾಯಪಡಿಸಿ ಕಳೆದ ೧೯ ರಿಂದ ಉಪವಾಸವನ್ನು ಬಳ್ಳಾರಿಯಲ್ಲಿ ಆರಂಭಿಸಿದ್ದಾನೆ.

ರಷ್ಯದಿಂದ ಜಲಜನಕ ಬಾಂಬಿನ ಶಕ್ತಿಯ ಶಾಂತಿ ಬಳಕೆ

ಜಲಜನಕ ಬಾಂಬಿನಲ್ಲಿ ಅಡಗಿರುವ ಶಕ್ತಿಯನ್ನು ಶಾಂತಿ ಕಾರ್ಯಗಳಿಗಾಗಿ ಬಳಸುವ ಬಗ್ಗೆ ಅದರ ಹತೋಟಿ ಹೊಂದುವ ಸ್ಥಿತಿಯಲ್ಲಿ ರಷ್ಯವಿರುವುದೆಂದು ಬ್ರಿಟನ್ನಿನಲ್ಲಿ ಪ್ರವಾಸ ಕೈಗೊಂಡಿರುವ ರಷ್ಯದ ಅಣುಶಕ್ತಿ ಸಂಸ್ಥೆ ಅಧಿಕಾರಿ ಡಾ|| ಇವಾನ್ ಕುರ್ಚಟೋವ್‌ರವರು ತಿಳಿಸಿರುತ್ತಾರೆ. ಅವರನ್ನು ಕೇಳಿದ ಬ್ರಿಟಿಷ್ ವಿಜ್ಞಾನಿಗಳು ಆಶ್ಚರ್ಯ ಚಕಿತರಾದರು. ಅವರು ಬ್ರಿಟನ್ನಿನ ಹಾರ್ವೆಲ್ ಅಣುಶಕ್ತಿ ಸಂಶೋಧನಾ ಕೇಂದ್ರದ ೩೦೦ ಅಣು ವಿಜ್ಞಾನಿಗಳನ್ನು ಉದ್ದೇಶಿಸಿ ರಷ್ಯದ ಕಾರ್ಯಸಾಧನೆ ಬಗ್ಗೆ ವಿವರವಾಗಿಯೂ, ಬಹಳ ಮನಸ್ಸಿಟ್ಟಿಂತಲೂ ಭಾಷಣ ಮಾಡಿರುವರು.

ಸತ್ಯಪ್ರೇಮಿಗಳ ಸಮ್ಮೇಳನ ಆರಂಭ

ರಾಜಗೋಪಾಲಾಚಾರಿಯವರ ಭಾಷಣ

ಸ್ವಂ ವಿ ಫೋ|] ಬೆಂಗಳೂರು ೨೭

ಇಲ್ಲಿನ ಟೌನ್‌ಹಾಲಿನಲ್ಲಿ ಇಂದು ಸತ್ಯಪ್ರೇಮಿಗಳ ಸಮ್ಮೇಳನವು ಸೇರಿತು. ಮದರಾಸಿನ ಮಾಜಿ ಮುಖ್ಯ ಮಂತ್ರಿ ಸಿ. ರಾಜಗೋಪಾಲಾಚಾರಿಯವರು ಅದರ ಆರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ, ಇಂತಹ ಸಮ್ಮೇಳನದಲ್ಲಿ ಸೇರುವ ನಾನಾ ಮತಗಳವರು ತಮ್ಮ ಮತದ ಪ್ರಭಾವವನ್ನು ಇತರರ ಮೇಲೆ ಬೀರಬಾರದೆಂದು ತಿಳಿಸಿದರು. ಹಿಂದೂ ಧರ್ಮವು ದೊಡ್ಡದೆಂದೂ, ಅದರಲ್ಲಿ ಎಲ್ಲ ಉದಾತ್ತ ತತ್ವಗಳೂ ಅಡಕವಾಗಿರುವುವೆಂದೂ ಅವರು ಹೇಳಿದರು. ಸತ್ಯಪ್ರೇಮಿಗಳ ಸಂಸ್ಥೆಯು ಮತಾಂತರಗೊಳಿಸುವ ಸಂಸ್ಥೆಯಾಗಬಾರದೆಂದು ಸೂಚಿಸಿದರು.

ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತ ಭಾಷಣ ಮಾಡಿ, ಸಂಸ್ಥೆಯ ಉದ್ದೇಶವನ್ನು ವಿವರಿಸಿದರು. ವಿಶ್ವದಲ್ಲಿ ಶಾಂತಿ ಸ್ಥಾಪನೆ ಮಾಡಲು ಜನರಲ್ಲಿ ಆಧ್ಯಾತ್ಮಿಕ ಸ್ಫೂರ್ತಿಯುಂಟುಮಾಡುವುದೇ ಸಂಸ್ಥೆಯ ಉದ್ದೇಶವೆಂದು ಅವರು ಹೇಳಿದರು.

ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಜಿ. ರಾಮಚಂದ್ರರವರು ಪ್ರತಿನಿಧಿಗಳನ್ನು ಸ್ವಾಗತಿಸಿದರು.

ಡಾ|| ರಾಧಾಕೃಷ್ಣನ್, ಮೈಸೂರು ರಾಜಪ್ರಮುಖರು, ಮುಖ್ಯ ಮಂತ್ರಿಯವರೇ ಮುಂತಾದವರಿಂದ ಶುಭ ಸಂದೇಶಗಳು ಬಂದಿದ್ದುವು.

ಹಿಂದೂ ದೇವಾಲಯಗಳ ಹಣ ಪಂಚವಾರ್ಷಿಕ ಯೋಜನೆಗೆ

ಹಿಂದೂ ದೇವಾಲಯಗಳು ಮತ್ತು ಮಠಗಳ ಧರ್ಮದತ್ತಿಗಳಿಗೆ ಬರುವ ಹಣವನ್ನು ಪಂಚವಾರ್ಷಿಕ ಯೋಜನೆ ಕಾರ್ಯಗಳಿಗಾಗಿ ಉಪಯೋಗಿಸುವ ವಿಷಯವು ಕೇಂದ್ರ ಸರ್ಕಾರದ ಯೋಜನಾ ಇಲಾಖೆಯ ಪರಿಶೀಲನೆಯಲ್ಲಿರುವುದೆಂದು ವರದಿಯಾಗಿದೆ. ಈ ಬಗ್ಗೆ ಮಸೂದೆಯೊಂದನ್ನು ತರುವುದಕ್ಕೆ ಮುಂಚಿತವಾಗಿ ಅದರ ಬಗ್ಗೆ ಒಲಿಸಿಕೊಳ್ಳಲು ಸಾಧುಸಂತರ ಸಹಕಾರವನ್ನು ಕೇಳಿಕೊಳ್ಳಲಾಗುವುದೆಂದು ವರದಿಯಾಗಿದೆ. ಈ ಸಂಬಂಧದಲ್ಲಿ ಕೇಂದ್ರ ಯೋಜನಾ ಮಂತ್ರಿ ಗುಲ್ಜಾರಿಲಾಲ್ ನಂದಾರವರು ಭಾರತ ಸಾಧು ಸಮಾಜ ಎಂಬ ಸಂಸ್ಥೆಯೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡಿರುತ್ತಾರೆ.

ಕಾಶಿ ದೇವಾಲಯಕ್ಕೆ ಹರಿಜನರ ಪ್ರವೇಶ ಪ್ರಯತ್ನದಲ್ಲಿ ಪೆಟ್ಟು

ಕಾಶಿ ವಿಶ್ವನಾಥ ದೇವಾಲಯಕ್ಕೆ ಕಳೆದ ಮಂಗಳವಾರ ಪ್ರವೇಶಿಸಲೆತ್ನಿಸಿದ ೧೫೦ ಮಂದಿ ಹರಿಜನರನ್ನು ಧರ್ಮ ಸಂಘದ ಬೆಂಬಲಿಗರಾದ ಕೆಲವರು ತಡೆದು ಹೊಡೆದರೆಂದು ವರದಿಯಾಗಿದೆ. ಪೋಲೀಸರು ಎರಡು ಗುಂಪುಗಳನ್ನೂ ಚದುರಿಸಲು ಲಾಠಿ ಪ್ರಹಾರ ಮಾಡಿದರು. ಪೆಟ್ಟು ತಿಂದವರಲ್ಲಿ ಹಲವು ಶಾಸಕರೂ ಸದಸ್ಯರೂ ಇರುವರು.

ರಾಮೋತ್ಸವ ಕಾರ್ಯಕ್ರಮಗಳು

ಮೈಸೂರು ೨೬

ಸಂತೆಪೇಟೆ ಕುಂಬಾರಗೇರಿ ಶ್ರೀ ರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ವಿ। ಚೊಕ್ಕಮ್ಮನವರ ವೀಣಾವಾದನವು ಆ ವಿ॥ ಹೆಚ್ ವಿ ಕೃಷ್ಣರಾಯರ ಪಿಟೀಲು ಮತ್ತು ಆ ವಿ॥ ಡಿ ದೇಶಪ್ಪನವರ ಮೃದಂಗದೊಡನೆ ನಡೆಯುವುದು

ರಾಜಾರಾಂ ಅಗ್ರಹಾರದ ಶ್ರೀ ರಾಮ ಸೇವಾ ಸಮಿತಿಯ ಆಶ್ರಯದಲ್ಲಿ ಉತ್ಸವದ ಅಂಗವಾಗಿ ನಾಳೆ ವಿ॥ ಬೆಳಕವಾಡಿ ರಂಗಸ್ವಾಮಿ ಅಯ್ಯಂಗಾರ್ಯರ ಸಂಗೀತವು ವಿ॥ ಹೆಚ್ ವಿ ಕೃಷ್ಣರಾಯರ ಪಿಟೀಲು ಮತ್ತು ವಿ ನಾಗಭೂಷಣಾಚಾರ್ಯರ ಮೃದಂಗದೊಡನೆ ಏರ್ಪಾಡಾಗಿದೆ

ಕಾಲೇಜ್ ರಸ್ತೆಯ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೮॥ ಗಂಟೆಗೆ ವಿದುಷಿಯರಾದ ಇಂದಿರಾ ಮತ್ತು ಲೀಲಾವತಿಯವರುಗಳ ಸಂಗೀತವು ವಿ॥ ಕೃಷ್ಣಮೂರ್ತಿಯವರ ಪಿಟೀಲು ವಿ॥ ಹೆಚ್ ಟಿ ನಾಗಣ್ಣನವರ ಮೃದಂಗದೊಡನೆ ನಡೆಯುತ್ತದೆ

ಚಾಮುಂಡಿಪುರದ ಹಳೇ ಪೋಸ್ಟ್ ಆಫೀಸ್ ರಸ್ತೆಯಲ್ಲಿರುವ ಬಾಲಕರ ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೬ ಘಂಟೆಗೆ ವರ್ಗ ಟೈಟ್ ಪಾರ್ಟಿಯವರ ವಾದ್ಯಗೋಷ್ಠಿಯೂ ನಾಳೆ ಬೆಳಿಗ್ಗೆ ಪಟ್ಟಾಭಿಷೇಕವೂ, ಸಂಜೆ ಹನುಮಂತೋತ್ಸವವೂ ಏರ್ಪಾಡಾಗಿದೆ

ನಗರದಲ್ಲಿ ದಕ್ಷಿಣ ಪ್ರದೇಶ ವನಮೃಗ ರಕ್ಷಣಾ ಸಮಿತಿ ಸಭೆ

ಒದುವ [illegible] ನೇ ತಾರೀಕು ನಗರದಲ್ಲಿ ಭಾರತದ ವನಮೃಗ ರಕ್ಷಣಾ ಸಮಿತಿಯ ದಕ್ಷಿಣ ಪ್ರದೇಶದ ಪ್ರಥಮ ಸಮ್ಮೇಳನವು ನಡೆಯುವುದು ಅದರಲ್ಲಿ [illegible] ಮತ್ತು [illegible] ಸಾಗರ ಯೋಜನೆ [illegible] ಉದ್ಯಾನವನ್ನು ನಿರ್ಮಿಸುವ ವಿಷಯವನ್ನು [illegible] ಭಾರತದ ವನಮೃಗ ಸಮಿತಿಯ ಮೃಗಾಲಯ ವಿಭಾಗದ ಸಭೆ [illegible] ನಗರದಲ್ಲಿ ನಡೆವುದು

ಸ್ವಾಗತ ಸಮಾರಂಭ

ಕೃಷ್ಣರಾಜ ಮೊಹಲ್ಲಾದ [illegible] ಗಳಿಂದ ನ್ಯಾಸ [illegible] ಬಸಪ್ಪನವರು ಶ್ರೀ ಮಲ್ಲಿಕಾರ್ಜುನಪ್ಪ ಮತ್ತು ಸೌ ಸರ್ವಮಂಗಳರವರ ವಿವಾಹದ ಅಂಗವಾಗಿ ನೆನ್ನೆ ಸಂಜೆ ತಮ್ಮ ಮನೆಯಲ್ಲಿ ಆರತಿ ಅಕ್ಷತೆಯನ್ನು ಏರ್ಪಡಿಸಿದ್ದರು ನಾರಣಿ ಆ [illegible] ಗೋಷ್ಠಿಯು ಜರುಗಿತು

ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಮಿಠಾಯಿ ಸಂಶೋಧನೆ

ನಗರದಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದವರು ಮಿಠಾಯಿ ಆಹಾರದ ಸಂಶೋಧನೆ ನಡೆಸಲು ಆಲೋಚಿಸುತ್ತಾರೆ ಮಿಠಾಯಿಗಳನ್ನು ಪಟ್ಟಿಗೊಳಿಸುವುದನ್ನು ಅಲ್ಲಿ ಪ್ರಾರಂಭಿಸಲಾಗುವುದು ಅದಕ್ಕಾಗಿ ಒಂದು ಪ್ರತ್ಯೇಕ ಉಪ ಕೇಂದ್ರವನ್ನು ತೆರೆಯಲಾಗುವುದು

ಎರಡಾನೆ ಕಳುವಿಗೆ ೧೮ ತಿಂಗಳ ಸಜಾ

ಮದ್ರಾಸಿನ ಸೆಂಟ್ರಲ್ ಸ್ಟೇಷನ್ನಿನ ಬಸ್ ಸ್ಟಾಪ್ ಬಳಿ ಒಬ್ಬನ ಜೇಬಿನಿಂದ ೨ ಆಣೆಯನ್ನು ಕದ್ದ ಪರ್ಸನ್ನು ಕಳುವು ಮಾಡಿದ ಸಂಬಂಧ ನಾಯಕನ್ ಎಂಬುವನಿಗೆ ೧೮ ತಿಂಗಳ ಕಠಿಣ ಸಜಾ ವಿಧಿಸಲಾಗಿದೆ

****

ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ

ಅನೋನ್ಸು ಸಂಗೀತ ಕಛೇರಿ

28 4 1956ನೇ ಶನಿವಾರ ಸಂಜೆ 6 ಘಂಟೆಗೆ

[illegible] ಅವರ ಹಾಡುಗಾರಿಕೆ

ಆರಕೆರೆ [illegible] ಸಹೋದರರ [illegible] ಯವರ

[illegible]

ಟಿ ಚೌಡಯ್ಯನವರ ಪಿಟೀಲು

[illegible]

[illegible] ಅಯ್ಯಂಗಾರರವರ ಮೃದಂಗ

ಟಿಕೇಟ್ ದರ ರೂ 2-00

****

ಕನ್ಯಕಾಪರಮೇಶ್ವರಿ ದೇವಸ್ಥಾನದ ಶತಮಾನೋತ್ಸವ

ರಾಜಧಾನಿಯ ಶ್ರೀರಾಮಪೇಟೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ದೇವಸ್ಥಾನದ ಶತಮಾನೋತ್ಸವವು ಬರುವ ತಿಂಗಳು ೨ನೇ ತಾರೀಕಿನಿಂದ ೧೩ರವರೆಗೆ ನೆರವೇರುವುದು ೧ನೇ ತಾರೀಕು ಶ್ರೀ ಎ ತ ಸುಬ್ಬಯ್ಯಶೆಟ್ಟಿ ಮತ್ತು ಸನ್ಸ್‌ರವರಿಂದ ನಿರ್ಮಿತವಾದ ಶ್ರೀ ವಾಸವೀ ನಿಲಯ ಛತ್ರದ ಗೃಹ ಪ್ರವೇಶೋತ್ಸವವು ಇದೆ ೨ನೇ ತಾರೀಕು ಬೆಳಿಗ್ಗೆ ಏಕಾದಶವಾರ ರುದ್ರಾಭಿಷೇಕವೂ, ೩ನೆ ತಾರೀಖಿನಿಂದ ಒಂಭತ್ತು ದಿನಗಳ ವರೆಗೆ ಏಕವಾರ ರುದ್ರಾಭಿಷೇಕವೂ ನಡೆಯುವುವು ಪ್ರತಿದಿನ ಅಲ್ಲಿರುವ ದೇವರುಗಳಿಗೆ ಪಂಚಾಮೃತ ಅಭಿಷೇಕವಿರುವುದು ಸೂರ್ಯ ನಮಸ್ಕಾರ ಗಣಪತಿ, ದುರ್ಗ ನವಗ್ರಹ ಮೃತ್ಯುಂಜಯ ಜಪ ರಾಮಾಯಣ ಏಕಾದಶವಾರ ರುದ್ರ ವೇದ ಪಾರಾಯಣಗಳು ವಿಷ್ಣು, ಲಕ್ಷ್ಮಿ ಮತ್ತು ಶಿವ ಮತ್ತು ಲಲಿತ ಸಹಸ್ರ ನಾಮಗಳೂ ಜರುಗುವುವು ೧೧ನೇ ತಾರೀಕು ಆಯುಷ್ಯ ಹೋಮ ರುದ್ರ ಹೋಮ ಮತ್ತು ಪೂರ್ಣಾಹುತಿಗಳವೆ ೧೨ನೇ ತಾರೀಕು ಶ್ರೀನಿವಾಸ ದೇವರಿಗೆ ಸಹಸ್ರ ಕಲಶಾಭಿಷೇಕವಿದೆ ೨ನೇ ತಾರೀಕು ರಾತ್ರಿ ಕನ್ಯಕಾಪರಮೇಶ್ವರಿ ಅಮ್ಮನವರ ಉತ್ಸವವೂ ಉಳಿದ ದಿನಗಳಲ್ಲಿ ರಾತ್ರಿ ಹರಿಕಥೆ, ಸಂಗೀತ ಮತ್ತು ಪುರಾಣಗಳೂ ನಡೆಯುವುವು ೬ನೇ ತಾರೀಕಿನಿಂದ ೧೦ರ ವರೆಗೆ ಪ್ರತಿದಿನ ಮಧ್ಯಾಹ್ನ ೩ ಗಂಟೆಗೆ ಬೆಂಗಳೂರಿನ ಶ್ರೀಮತಿ ಕುಸುಮ ಮಾಣಿಕ್ಯಮ್ಮನವರಿಂದ ಉಪನ್ಯಾಸ ಕಾರ್ಯಕ್ರಮವಿದೆ

ಹಿಂದೂಸ್ಥಾನ್ ಕಾರ್ಖಾನೆಯಲ್ಲಿ ವಿಶೇಷ ರೈಲು ಗಾಡಿ ತಯಾರಿಕೆ

ಹಿಂದೂಸ್ಥಾನ್ ವಿಮಾನ ಕಾರ್ಖಾನೆಯವರು ವಿಶೇಷ ಮಾದರಿಯ ಇಂಟಿಗ್ರಲ್ ರೈಲು ಗಾಡಿಗಳನ್ನು ತಯಾರಿಸಲು ಭಾರತ ಸರ್ಕಾರದವರು ಸೂಚಿಸಿರುವರೆಂದು ವರದಿಯಾಗಿದೆ ವರ್ಷಕ್ಕೆ [illegible] ರಂತೆ ಇಂಟಿಗ್ರಲ್ ಗಾಡಿಗಳನ್ನು ತಯಾರಿಸಲು ಒಪ್ಪಲಾಗಿದೆ [illegible] ವಿದೇಶೀ ಕಂಪನಿಗಳೊಡನೆ ಈ ಬಗ್ಗೆ ವ್ಯವಹಾರವು ನಡೆಯುತ್ತಿದೆ

ರಥೋತ್ಸವದಲ್ಲಿ ಗಾಯಗೊಂಡ ಮುತ್ತೊಬ್ಬನ ಮರಣ

ಬೀಗನಿರಂಗನ ಬೆಟ್ಟದಲ್ಲಿ ಕಳೆದ ಮಂಗಳವಾರ ರಥದ ಚಕ್ರಕ್ಕೆ ಸಿಕ್ಕಿ ಗಾಯಗೊಂಡವರ ಪೈಕಿ ಯರಗಂಬಳ್ಳಿಯ ಮಲ್ಲನಾಯಕ ಎಂಬಾತನು ನೆನ್ನೆ ಮುಂಜಾನೆ ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತಪಟ್ಟನು

ನಂಜನಗೂಡು ಪೌರಸಭಾಧ್ಯಕ್ಷ ಸ್ಥಾನಕ್ಕೆ ಚುನಾವಣೆ

ನಂಜನಗೂಡಿನ ಪೌರಸಭಾಧ್ಯಕ್ಷ ಸ್ಥಾನಕ್ಕೆ ಬರುವ ತಿಂಗಳು ೧೧ ನೇ ತಾರೀಕು ಚುನಾವಣೆಯು ನಡೆಯಲಿದೆ ನಾಮಪತ್ರಗಳನ್ನು ಕಳುಹಿಸಲು ಮೇ ೫ ನೇ ತಾರೀಕು ಕಡೆಯ ದಿನ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ

ಇಂದೇ ಭೇಟಿ ಕೊಡಿ

ಕೆ ಎಸ್ ಲಕ್ಷ್ಮಣ ಅಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ ಮೈಸೂರು [Estd 1911]

ಚಾರ್ಲಿ ಚಾಪ್ಲಿನ್ನರ ಬಗ್ಗೆ ಕ್ರುಶ್ಚೇವರ ಪ್ರಶಂಸೆ

ಔತಣ ಸಮಾರಂಭದಲ್ಲಿ ಕ್ಯೂ ನಿಂತು ನಾಯಕರ ಪ್ರವೇಶ

ಬ್ರಿಟನ್ನಿನ ಹಾಸ್ಯ ಚಲನಚಿತ್ರ ನಟರಾದ ಚಾರ್ಲಿ ಚಾಪ್ಲಿನ್ನರನ್ನು ರಷ್ಯದ ಕಮ್ಯೂನಿಸ್ಟ್ ನಾಯಕ ಕ್ರುಶ್ಚೇವರು ತುಂಬಾ ಪ್ರಶಂಸಿಸಿರುತ್ತಾರೆ ಅವರು ಒಂದು ಸಮಾರಂಭದಲ್ಲಿ ಭಾಗವಹಿಸಿದ್ದಾಗ ಮಂತ್ರಿಗಳು ಮತ್ತು ರಾಯಭಾರಿಗಳನ್ನು ಮಾತನಾಡಿಸದೆ ನೇರವಾಗಿ ಚಾಪ್ಲಿನ್ನರ ಬಳಿ ಹೋಗಿ ಅವರ ಕೈ ಕುಲುಕಿ, ಅವರ ಅನೇಕ ಚಿತ್ರಗಳನ್ನು ತಾವು ವೀಕ್ಷಿಸಿರುವುದಾಗಿ ತಿಳಿಸಿದರು

ಲಂಡನ್ನಿನಲ್ಲಿರುವ ರಷ್ಯಾ ರಾಯಭಾರಿ ಕಛೇರಿಯ ಔತಣ ಸಮಾರಂಭದಲ್ಲಿ ವಿಪರೀತ ಜನಸಂದಣಿ ಉಂಟಾಗಿ ಉನ್ನತ ಆಹ್ವಾನಿತರನೇಕರು ಸಮಾರಂಭ ನಡೆಯುತ್ತಿದ್ದ ಹೋಟೇಲಿನೊಳಕ್ಕೆ ಹೋಗಲು ಬಹಳ ಹೊತ್ತು ಕಾಯಬೇಕಾಯಿತು ಲೇಬರ್ ಪಕ್ಷದ ಕಾರ್ಯದರ್ಶಿ ಮಾರ್ಗನ್ ಫಿಲಿಪ್ಸ್‌ರವರು ಗುಂಪು ಜಾಸ್ತಿಯಿದ್ದುದರಿಂದ ಹಾಗೆಯೇ ಹಿಂದಿರುಗಿದರು ಗೃಹ ಮಂತ್ರಿ ಗ್ವಿಲಿಮ್ ಲಾಯ್ಡ್ ಮತ್ತು ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ಬೇರೆ ಬಾಗಿಲಿನಿಂದ ಹೋಟೇಲಿನೊಳಕ್ಕೆ ಹೋಗಬೇಕಾಯಿತು ಸಮಾರಂಭವು ಆರಂಭವಾಗಿ ಒಂದು ಘಂಟೆಯಾದರೂ ಆಹ್ವಾನಿತರನೇಕರು ಒಳಗೆ ಹೋಗಲಾಗದೇ ಹೊರಗೇ ನಿಂತಿದ್ದರು ಅತಿಥಿಗಳನೇಕರು ಸಮಾರಂಭ ಮುಗಿಸಿಕೊಂಡು ಹೊರಕ್ಕೆ ಬರುತ್ತಿದ್ದಾಗ ಲೇಬರ್ ಪಕ್ಷದ ಮುಖಂಡ ಬೆವಾನರವರು ಒಳಗೆ ಹೋಗುವ ಕ್ಯೂ ನಲ್ಲಿ ನಿಂತಿದ್ದರು

ಒಂದು ಗ್ಯಾಲನ್ ನೀರಿಗೆ ೮ ಆಣೆ

ಉತ್ತರ ಭಾರತದ ಧನಬಾದ್ ನಗರದಲ್ಲಿ ಗ್ಯಾಲನ್ ನೀರಿಗೆ ೮ ಆಣೆ ಬೆಲೆ ಕೊಡಬೇಕಾಗಿದೆ ಅಲ್ಲಿ ಅನೇಕ ಭಾವಿಗಳು ಬತ್ತಿಹೋಗಿವೆ ಬಿಸಿಲು ತಾಪವು ೧೧೦ ಡಿಗ್ರಿಯಷ್ಟಿದೆ

O ವೈದ್ಯ ಇಲಾಖೆಯ ಅಸಿಸ್ಟೆಂಟ್ ಸರ್ಜನ್ ಡಾ ಎಂ. ಎಸ್ ನಾರಾಯಣರಾಯರನ್ನು ನಗರದ ಮೆಡಿಕಲ್ ಕಾಲೇಜಿನ ಫಾರ್ಮಕಾಲಜಿ ವಿಭಾಗದ ಅಸಿಸ್ಟೆಂಟ್ ಪ್ರೊಫೆಸರರಾಗಿ ೩ ವರ್ಷ ಅವಧಿಗೆ ನೇಮಿಸಲಾಗಿದೆ

ಮೈಸೂರು ಪೇಟೆ ಧಾರಣೆ

	ರೂ ಮುಂದ	ರೂ ವರೆಗೆ
ಕಡಲೆಕಾಯಿ	[illegible]	
ಹುಳ್ಳಿಳ್ಳು	[illegible]	[illegible]
ಹೊಂಗೆಬೀಜ	[illegible]	
ಹುಣಸೆಬೀಜ	[illegible]	[illegible]
ಮೆಣಸು	[illegible]	[illegible]
ಧನಿಯ	[illegible]	
ಸೀಗೆಕಾಯಿ	[illegible]	[illegible]
ಹುಣಸೇಹಣ್ಣು	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

ಚಾಮುಂಡೇಶ್ವರಿ

ಟಾಕೀಸ್

27 4 56 ರಿಂದ ಜನಭರಿತ 3ನೇ ವಾರ

ನಟೇಶ್ ಆರ್ಟ್ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಆಶೈ ★

ಪಾತ್ರ ಜೆಮಿನಿ ಗಣೇಶ್, ವಿ ನಾಗಯ್ಯ, ಪದ್ಮಿನಿ ಎನ್ ಎಸ್ ಕೃಷ್ಣನ್, ಟಿ ಎ ಮಧುರಂ

Edited, Printed and Published by A R Nagarajan at Sadhvi Press D Subbiah Road Mysore

ರೈಲು ನಿಧಾನವಾಗುವುದಕ್ಕಾಗಿ ರಸ್ತೆ ಮೇಲೆ ಸತ್ಯಾಗ್ರಹ

ಅಸ್ಸೇಂ ರೈಲ್ವೆಯ [illegible] ರಾಗದ ಸ್ಥಳೀಯ ಮತ್ತು ದೂರದ ರೈಲು ಓಡಾಟವು ನೆನ್ನೆ ದಿನ ೮ ಗಂಟೆ ಕಾಲ [illegible] ಹೋ [illegible] ಸ್ಥಳೀಯ ರೈಲಿನ ಪ್ರಯಾ[illegible] ರು [illegible] ಮೈಲಿ ದೂರದಲ್ಲಿ [illegible] ಕಡೆ ಕಂಬಿ ಮೇಲೆ ಕುಳಿತುದೇ ಇದಕ್ಕೆ ಕಾ[illegible] ರೈಲು ನಿತ್ಯವೂ ನಿಧಾನವಾಗುತ್ತಿದ್ದುದ[illegible] ಪ್ರತಿಭಟಿಸಲು ಪ್ರಯಾಣಿಕರು ಆ ರೀತಿ ಮಾ[illegible] ದರೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಗೋಟುವಾದ್ಯ [illegible] ಎಸ್ ಕೃಷ್ಣಮೂರ್ತಿ [illegible] ನಾಗಸ್ವರ [illegible] ನಾಗರತ್ನಾಬಾಯಿ—ಸಂಗೀತ [illegible] ೧-೩೦ ಗೋಟುವಾದ್ಯ. ಸಂಜೆ [illegible] ರಾಮೋತ್ಸವದ ಕಾರ್ಯಕ್ರಮ [illegible] ವಿಶ್ವ ವಾರ್ತಾವಲೋಕನ ಕನ್ನಡದಲ್ಲಿ [illegible] ರಾಮೋತ್ಸವ ಕಾರ್ಯಕ್ರಮ [illegible] ರೇಡಿಯೋ ನ್ಯೂಸ್ ರೀಲ್ [illegible] ಕನ್ನಡದಲ್ಲಿ ವಾರ್ತೆ [illegible] ಕ್ರಮ ಅಕೋಲೆಯ ಲಕ್ಷ್ಮಿಬಾಯಿ [illegible] ಸಂಗೀತ ಮತ್ತು [illegible] ರ ವಾದನ [illegible]

City Municipal Offices, Myso[re]

Dated 24-4 1956

NOTIFICATION

No C2 P R. 22,56-[illegible]

Notice is hereby given to th[e] inhabitants of the Municipalit[y] of Mysore that the Municipa[l] Council desires to amend th[e] Octroi Bye-Laws so as to pro[-] vide for exemption of article[s] received for free distributio[n] as detailed below

Any inhabitant of the Muni[-] cipality who objects to the pro[-] posed amendment may withi[n] one month from the date o[f] this notice send his objectio[n] in writing to the Municipa[l] Council

Schedule of Exemptions

36 "Articles mentioned un[-] der items 5, 6, 8 & 23 (c) and [of] of schedule of dutiable article[s] sent through or by the Centra[l] Government to any of the loca[l] charitable institutions for fre[e] distribution amongst the poo[r] and the needy without conside[-] ration of caste, colour or cree[d] provided that the institution[s] undertake to submit to th[e] Municipal Commissioner a lis[t] showing the allotment of dis[-] tribution made, within a mont[h] from the date of receipt of th[e] articles "

But if the Commissioner is o[f] opinion that in any case th[e] purpose of the import of articl[es] is not bonafide purpose he may refuse the grant o[f] exemption

Against this decision a[n] appeal will lie to the Managin[g] Committee and then to th[e] Council

A VISWANATH

Municipal Commissioner

ಪ್ರಭಾ ★ ಅನೇಕಾ ಪ್ರಾರಂಭ : 27—4—56 ರಿಂದ

ದಿನವೂ ಮೂರು ಪ್ರದರ್ಶನಗಳು

ಹಿಂದುಸ್ಥಾನದ ನರ್ಗಿಸ್ ಎಂದು ಪ್ರಖ್ಯಾತವಾದ ಮತ್ತು ಸಾಹಸ ನಟಿಗಳ ಕೆಯ್ಯಾರಾವ್ ಹಿಂದಾದ ಸಂಗೀತದಿಂದ ಕೂಡಿದ ಅತ್ಯುತ್ತಮ ಹಿಂದಿ ಚಿತ್ರ

✱ ಸಸ್ಸಿ ✱

ಪಾತ್ರ ನಲಿನ ಸುಧೀರ್, ಶಾನವಾಜ್, ಗುಲಾಂ ಮಹಮದ್ ದಿಗ್ದರ್ಶಕ [illegible]

ಬೆಳಿಗ್ಗೆ ಪ್ರದರ್ಶನ 27 4 56 ರಿಂದ 3 ದಿನಗಳು ಮಾತ್ರ

ನೇರವ ರಂಜಾಕಪುರ ನಟಿಸಿರುವ ★ ಆತಿ ಮೂತ ★

ಟೆಲಿಫೋನ್ ನಂ. 792

ಚಂದಾ ದರ
ವಿಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೮೪] SADHVI : SATURDAY 28-4-1956 ಮೈಸೂರು ಶನಿವಾರ : ೨೮-೪-೧೯೫೬ [ಸಂಚಿಕೆ : ೨೯೬

ಅಮೆರಿಕದೊಡನೆ ಉತ್ತಮ ಬಾಂಧವ್ಯಕ್ಕೆ ರಷ್ಯದ ಆಸಕ್ತಿ

ಶಾಲೆಗಳಲ್ಲಿ ಶಿಸ್ತು ಬೆಳೆಯಲು ಜಂಟಿ ಪ್ರಾರ್ಥನೆ

ಉಪಾಧ್ಯಾಯರ ಕಾಲೇಜು ಗೋಷ್ಠಿಯ ಸಲಹೆ

ಮೈಸೂರು ೨೭

ಪ್ರಾಥಶಾಲೆಗಳ ಒಳವ್ಯವಸ್ಥೆಗೆ ಸಂಬಂಧಿಸಿದ ಗೋಷ್ಠಿಯು ಕಳೆದ ಬುಧವಾರ ಮುಕ್ತಾಯವಾಯಿತು ಶಾಲೆಗಳಲ್ಲಿ ಶಿಸ್ತನ್ನು ಹೆಚ್ಚಿಸಿ, ಸಾಮೂಹಿಕ ಭಾವನೆ ಮೂಡುವಂತೆ ಮಾಡಲು ನಿತ್ಯವೂ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಒಟ್ಟಿಗೆ ಪ್ರಾರ್ಥನೆ ನಡೆಸಬೇಕೆಂದು ಗೋಷ್ಠಿಯು ಸಲಹೆ ಮಾಡಿರುತ್ತದೆ ಆಗಾಗ್ಗೆ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಪರಸ್ಪರ ಸಂಭಾಷಣೆ ನಡೆಸಲೂ ಸಲಹೆ ಮಾಡಲಾಗಿದೆ

ವಿದ್ಯಾ ಮತ್ತು ಕ್ರೀಡಾ ಶುಲ್ಕವು ಹೀಗಿಯೇ ಇರಬೇಕೆಂದೂ, ರೀಡಿಂಗ್ ರೂಂ ಉಪಯೋಗವನ್ನು ಆ ಆಣೆಯನ್ನು ಹೆಚ್ಚಿಸಬೇಕೆಂದೂ ಗೋಷ್ಠಿಯವರು ತಿಳಿಸಿರುತ್ತಾರೆ ಪ್ರತಿ ಶಾಲೆಯಲ್ಲೂ ಒಂದೊಂದು ಸ್ಕೂಲ್ ಕೌನ್ಸಿಲ್ ಇರಬೇಕೆಂದೂ, ಹುಡುಗಿಯರ ಪ್ರಜಾಸತ್ತಾತ್ಮಕ ರೀತಿಯಲ್ಲಿ ಏರ್ಪಟ್ಟ ವಿದ್ಯಾರ್ಥಿಗಳ ಸಂಘವಿರಬೇಕೆಂದೂ ಸೂಚಿಸಲಾಗಿದೆ ವಿದ್ಯಾರ್ಥಿಗಳು ತರಗತಿಗಳಲ್ಲಿ ಅಧ್ಯಯನದ ವಿಷಯಗಳನ್ನು ಆರಿಸುವಲ್ಲಿ ಉಪಾಧ್ಯಾಯರನ್ನು ಸಲಹೆಗಾರರನ್ನಾಗಿ ಮಾಡುವುದು ಒಳ್ಳೆಯದೆಂದೂ, ಅವರು ವಿದ್ಯಾರ್ಥಿಗಳ ಮಾತಾಪಿತೃಗಳಿಗೆ ಈ ಬಗ್ಗೆ ಸಲಹೆ ನೀಡುವುದೆಂದೂ ತಿಳಿಸಲಾಗಿದೆ

ಪಶ್ಚಿಮ ಪಾಕಿಸ್ತಾನದ ಮುಖ್ಯ ಮಂತ್ರಿಯ ರಾಜೀನಾಮೆ

ಪಶ್ಚಿಮ ಪಾಕಿಸ್ತಾನದ ಆರೋಗ್ಯ ಮಂತ್ರಿ ಆರ್ಜಾದ್ ನೂರ್ ಮಹಮದ್ ಖಾನರವರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿರುತ್ತಾರೆ ಡಾ|| ಖಾನ್ ಸಾಹೇಬ್ ಮಂತ್ರಿಮಂಡಲದಲ್ಲಿರುವ ಮುಸ್ಲಿಂ ಲೀಗ್ ಸದಸ್ಯರು ರಾಜೀನಾಮೆ ಕೊಡಬೇಕೆಂದು ಪಾಕಿಸ್ತಾನದ ಮುಸ್ಲಿಂ ಲೀಗ್ ಕಾರ್ಯಕಾರಿ ಸಮಿತಿಯು ಕೊಟ್ಟ ಸೂಚನೆ ಪ್ರಕಾರ ಇವರು ನಡೆದುಕೊಂಡಿರುತ್ತಾರೆ

ಸಟ್ಟಾ ಜೂಜು ಪತ್ತೆ

ನಗರದ ಬಸ್ ಸ್ಟ್ಯಾಂಡ್ ಬಳಿ ಸಟ್ಟಾ ಜೂಜಾಡುತ್ತಿದ್ದ ಅಮೀರ್ ಜಾನ್ ಮತ್ತು ಗೇಬ್ರಿಯಲ್‌ರವರನ್ನು ಪೊಲೀಸರು ಬಂಧಿಸಿ ಅವರ ಮೇಲೆ ಮೊಕದ್ದಮೆ ಹೂಡಿರುತ್ತಾರೆ ಅವರ ಬಳಿ ಇದ್ದ ರೂ ೩-೬-೬ ಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕೊಳಲು ೭-೩೦ ಸರ್ವಧರ್ಮ ಪ್ರಾರ್ಥನೆ [illegible] ಕನ್ನಡ ಪದಗಳು ೮-೩೦ ವಾರ್ತೆ [illegible] ಮಧ್ಯಾಹ್ನ [illegible] ಕಾರ್ಯಕ್ರಮ [illegible] ಸಂಗೀತ [illegible]

ಅಮೆರಿಕದೊಡನೆ ಉತ್ತಮ ಬಾಂಧವ್ಯಕ್ಕಾಗಿ ರಷ್ಯಾ ಆಶಯ

ಲಂಡನ್ನಿನ ಪತ್ರಿಕಾ ಗೋಷ್ಠಿಯಲ್ಲಿ ಬುಲ್ಗಾನಿನ್ನರ ಹೇಳಿಕೆ

ರಷ್ಯದ ಪ್ರಧಾನಿ ನಿಕೊಲಾಯ್ ಬುಲ್ಗಾನಿನ್‌ರವರು ನೆನ್ನೆ ಲಂಡನ್ನಿನ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ, ಬ್ರಿಟನ್ನಿನೊಡನೆ ರಷ್ಯಾ ನಾಯಕರು ಹೊಂದಿದ ಸಂಪರ್ಕದ ಪರಿಣಾಮವಾಗಿ ವಿಶ್ವದ ಬಿಕ್ಕಟ್ಟು ಕಡಿಮೆಯಾಗುವುದೆಂದೂ, ಉಭಯ ರಾಷ್ಟ್ರಗಳ ನಡುವೆ ಉತ್ತಮ ಬಾಂಧವ್ಯವು ಬೆಳೆಯುವುದೆಂದೂ ಹೇಳಿದರು ಅಮೆರಿಕದೊಡನೆ ರಷ್ಯದ ಸಂಬಂಧವು ಸಮರ್ಪಕವಾಗಿಲ್ಲವೆಂದೂ ಅದಕ್ಕಾಗಿ ವಿಷಾದಿಸಬೇಕಾಗಿದೆಯೆಂದೂ ಅವರು ಹೇಳಿ ರಷ್ಯಾ ಅಮೆರಿಕ ಸಂಬಂಧವು ಉತ್ತಮಗೊಳ್ಳಲು ರಷ್ಯವು ತನ್ನ ಕೈಲಾದ ಎಲ್ಲಾ ಪ್ರಯತ್ನಗಳನ್ನು ಮಾಡುವುದಾಗಿ ಸೂಚಿಸಿದರು

ಬ್ರಿಟಿಷ್ ರಾಜಕಾರಣಿಗಳೊಡನೆ ನಡೆಸಿದ ಸಂಭಾಷಣೆಯನ್ನು ಅವರು ವಿವರಿಸಿ ಅದು ಸುಮುಖವಾಗಿ ನಡೆದದ್ದರಿಂದ ತಮಗೆ ಆಶ್ಚರ್ಯವಾಗುತ್ತಿತ್ತೆಂದೂ, ಇವು ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಯಿತೆಂದೂ ತಿಳಿಸಿದರು

ಬುಲ್ಗಾನಿನ್ ಮತ್ತು ಕ್ರುಶ್ಚೇವರು ನೆನ್ನೆ ರಷ್ಯದ ನೌಕೆಯನ್ನು ಹತ್ತಿ ಸ್ವದೇಶಾಭಿಮುಖವಾಗಿ ತೆರಳಿದರು ಹಡಗು ಹೊರಟಾಗ ಕ್ರುಶ್ಚೇವರು ಜನರನ್ನು ಕುರಿತು ದೂರದಿಂದಲೇ ಮಾತನಾಡಿ, ತಮ್ಮಿಬ್ಬರ ನಡುವೆ ಭೌತಿಕವಾಗಿ ಅಂತರವು ಹೆಚ್ಚುವುದಾದರೂ ಆಧ್ಯಾತ್ಮಿಕವಾಗಿ ಅಂತರವು ಹೆಚ್ಚಾಗಿಲ್ಲವೆಂದು ಹೇಳಿದರು

ಬ್ರಿಟಿಷ್‌ಗಯಾನ ಮುಖಂಡರಿಗೆ ಉಚ್ಚಾಟನೆ?

ಬ್ರಿಟಿಷ್ ಗಯಾನದ ಪ್ರಮುಖ ರಾಜಕೀಯ ಪಕ್ಷದ ತೀವ್ರವಾದಿ ಮುಖಂಡರಾದ ಮಾಜಿ ಪ್ರಧಾನಿ ಚೆಡ್ಡಿ ಜಗನ್, ಅವರ ಪತ್ನಿ ಜೇನೆಟ್ ಜಗನ್ ಮತ್ತು ಸಿಡ್ನಿ ಕಿಂಗ್‌ರವರನ್ನು ಆ ದೇಶದಿಂದ ಗಡೀಪಾರು ಮಾಡಲಾಗುವುದೆಂದು ವರದಿಯಾಗಿದೆ ಅವರ ಪಕ್ಷದ ಪ್ರಮುಖರಾದ ಫೋರ್ಬ್ಸ್ ಬರ್ನ್ಹಾಂ ಮತ್ತು ಜೈ ನಾರಾಯಣರವರ ಚಲನವಲನದ ಮೇಲೆ ಹಾಕಿದ ನಿರ್ಬಂಧಗಳನ್ನು ತೆಗೆಯಲಾಗಿದೆ

ಮೇ ೧ನೇ ತಾರೀಖು ಕಾರ್ಮಿಕರಿಗೆ ರಜಾ

ಮೇ ದಿನಾಚರಣೆ ಪ್ರಯುಕ್ತ ಬರುವ ತಿಂಗಳು ೧ನೇ ತಾರೀಖು ಸಂಸ್ಥಾನ ಸರ್ಕಾರದ ಎಲ್ಲಾ ಕೈಗಾರಿಕಾ ಸಂಸ್ಥೆಗಳಿಗೂ, ನೌಕರರು ಕಾರ್ಮಿಕರು ಅಪೇಕ್ಷಿಸಿದರೆ, ರಜಾ ಕೊಡಲಾಗುವುದೆಂದೂ, ಅವರು ಬೇರೊಂದು ರಜಾ ದಿನ ಬದಲಿ ಕೆಲಸ ಮಾಡಬೇಕೆಂದೂ ಸರ್ಕಾರದವರು ಸೂಚಿಸಿರುತ್ತಾರೆ ಖಾಸಗೀ ಕಾರ್ಖಾನೆಯವರೂ ಅದೇ ರೀತಿ ಮಾಡಬಹುದೆಂದು ತಿಳಿಸಲಾಗಿದೆ

೧ಮಂದಿ ಮಹಿಳೆಯರು ಉಪ್ಪಿನಕೇರಿಯಲ್ಲಿ ಮೊನ್ನೆ ಚೋರಿ ಮತ್ತು ಹನುಮಿ ಎಂಬುವರು ಅನೀತಿ ವ್ಯಾಪಾರ ನಡೆಸಿದರೆಂದು ಅವರಿಗೆ ನಗರದ ೧ನೇ ನ್ಯಾಯಾಧೀಶರು ನೆನ್ನೆ ತಲಾ ೧೦ ರೂ ದಂಡವನ್ನು ವಿಧಿಸಿದರು

ಹಂಗಾಮಿ ಉಪಾಧ್ಯಾಯರುಗಳ ಖಾಯಂ ಬಗ್ಗೆ ಇಲಾಖೆ ಸೂಚನೆ

ಬೆಂಗಳೂರು ೨೭

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಉಪಾಧ್ಯಾಯರು ಮತ್ತು ಜವಾನರುಗಳಲ್ಲಿ ಖಾಯಂ ಆಗದೇ ಇರುವವರ ಪ್ರಶ್ನೆಯನ್ನು ಬೇಗನೆ ಬಗೆಹರಿಸುವಂತೆ ಸಂಸ್ಥಾನದ ವಿದ್ಯಾ ಇಲಾಖೆಯ ಅಧಿಕಾರಿಗಳು ಸೂಚನೆಯಿತ್ತಿರುತ್ತಾರೆ ೫೦೦೦ ಜನರ ಪೈಕಿ ಕಳೆದ ಮಾರ್ಚ್ ವರೆಗೆ ೩,೦೦೦ ಜನವನ್ನು ಖಾಯಂ ಮಾಡಲಾಗಿರುವುದೆಂದೂ, ಉಳಿದವರ ವಿಷಯವನ್ನು ಬರುವ ತಿಂಗಳ ಅಂತ್ಯದೊಳಗಾಗಿ ಇತ್ಯರ್ಥಪಡಿಸಬೇಕೆಂದೂ ತಿಳಿಸಲಾಗಿದೆ

ವಿಯಟ್ನಾಮಿನಲ್ಲಿ ಫ್ರೆಂಚರ ಆಳ್ವಿಕೆ ಮುಕ್ತಾಯ

ವಿಯಟ್ನಾಮಿನಲ್ಲಿ ಫ್ರೆಂಚರು ೭೫ ವರ್ಷಗಳಿಂದ ನಡೆಸುತ್ತಿದ್ದ ಆಳ್ವಿಕೆಯು ಇಂದು ವಿಧಿವತ್ತಾಗಿ ಮುಕ್ತಾಯವಾಗುವುದು ಅವರ ಗುರುತಾಗಿ ಉಳಿದಿದ್ದ ಫ್ರೆಂಚ್ ಪ್ರಧಾನ ಸೇನಾನಿ ಜನರಲ್ ಪಿಯರಿ ಜಾಕ್ವೆಯವರು ಸೈಗಾನ್ ನಗರವನ್ನು ಬಿಟ್ಟು ತಮ್ಮ ದೇಶಕ್ಕೆ ಹಿಂದಿರುಗಲು ಹಡಗನ್ನು ಹತ್ತಿರುವರು

ಗಾಡ್ಗಿಲ್ಲರ ಪತ್ನಿಯಿಂದ ಶಾಸನದ ಉಲ್ಲಂಘನೆ

ಸಂಯುಕ್ತ ಮಹಾರಾಷ್ಟ್ರ ಪ್ರಾಂತದಲ್ಲ ಬೊಂಬಾಯಿ ನಗರ, ಬೆಳಗಾಂ ನಿಪಾಣಿ ಮತ್ತು ಕಾರವಾರಗಳನ್ನು ಸೇರಿಸಬೇಕೆಂದು ಹೂಡಲಾಗಿರುವ ಸತ್ಯಾಗ್ರಹದಲ್ಲಿ ಕೇಂದ್ರ ಸರ್ಕಾರದ ಮಾಜಿ ಮಂತ್ರಿ ಎನ್ ವಿ ಗಾಡ್ಗಿಲ್ಲರ ಪತ್ನಿ ಅನುಸೂಯಬಾಯಿಯವರು ಮೊನ್ನೆ ಭಾಗವಹಿಸಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದರು ಅದಕ್ಕಾಗಿ ಅವರನ್ನು ಬಂಧಿಸಲಾಯಿತು

ಹುಡುಗ ಸಿಕ್ಕಿದ್ದಾನೆ

ಪಶ್ಚಿಮವಾಹಿನಿಯಲ್ಲಿ ನೆನ್ನೆ ದಿನ ಕೃಷ್ಣ ಎಂಬ ಸಣ್ಣ ಬಾಲಕನು ಸಿಕ್ಕಿದ್ದಾನೆ. ಕ್ರಾಪು ಬಿಟ್ಟಿದ್ದಾನೆ ತನ್ನ ಊರು ಮೈಸೂರು ಎಂತಲೂ, ಶ್ರೀರಂಗಪಟ್ಟಣ ಎಂದೂ ಅವನು ಹೇಳುತ್ತಾನೆ ತಂದೆಯ ಹೆಸರು ಮರಿಗೌಡರೆಂದೂ ಹೇಳುವನು ವಾರಸುದಾರರು ಅವನನ್ನು ಮೈಸೂರು ಡಿ ಸುಬ್ಬಯ್ಯಾ ರಸ್ತೆಯ ೫೭ನೇ ನಂಬರ್ ಮನೆಯಲ್ಲಿ ನೋಡಬಹುದು

ಐದಾಣೆ ಕೋರ್ಟು ಫೀ ಸ್ಟಾಂಪಿಗೆ ನಿಷೇಧ

ಶ್ರೀ ಕೃಷ್ಣರಾಜ ಒಡೆಯರ ಚಿತ್ರವಿರುವ ಐದಾಣೆ ಕೋರ್ಟು ಫೀ ಸ್ಟಾಂಪಿಗೆ ಮೇ ೧ನೇ ತಾರೀಖಿನಿಂದ ನಿಷೇಧ ಹಾಕಲಾಗಿದೆಯೆಂದೂ, ಅದನ್ನು ಬರುವ ೬ ತಿಂಗಳವರೆಗೂ ವಾಪಸು ಪಡೆದು ಹೊಸ ಸ್ಟಾಂಪನ್ನು ಕೊಡಲಾಗುವುದೆಂದೂ ಸರ್ಕಾರದ ಪ್ರಕಟಣೆಯೊಂದು ತಿಳಿಸಿರುತ್ತದೆ ಹೊಸ ಸ್ಟಾಂಪಿನಲ್ಲಿ ಅಶೋಕ ಚಕ್ರದ ಗುರುತು ಇದೆ ಅದರ ಮೇಲೆ ಮೈಸೂರು ಎಂದು ಮುದ್ರಿಸಲಾಗಿದೆ ಎಲ್ಲ ಖಜಾನೆಗಳಲ್ಲೂ ಹೊಸ ಸ್ಟಾಂಪು ದೊರೆಯುವುದು

ಬೊಂಬಾಯಿಯಲ್ಲಿ ತಾತ್ಕಾಲಿಕವಾಗಿ ಕೇಂದ್ರದ ಆಡಳಿತ

ಮಹಾರಾಷ್ಟ್ರ ಪ್ರತಿನಿಧಿಗಳಿಗೆ ನೆಹರೂರವರ ಭರವಸೆ

ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯ ಮಹಾರಾಷ್ಟ್ರ ಸದಸ್ಯರೊಡನೆ ಬೊಂಬಾಯಿ ನಗರದ ಭವಿಷ್ಯದ ಬಗ್ಗೆ ಮಾತುಕತೆ ನಡೆಸಿ ಆ ನಗರವು ಆರಂಭದಲ್ಲಿ ಕೇಂದ್ರದ ಆಡಳಿತಕ್ಕೆ ಒಳಪಟ್ಟಿರುವುದೆಂದೂ, ಅದರ ಭವಿಷ್ಯವು ಮುಂದೆ ಅಲ್ಲಿನ ಪ್ರಜಾಭಿಪ್ರಾಯದಂತೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ರೂಪಿಸಲ್ಪಡುವುದೆಂದೂ ಸೂಚಿಸಿದರೆಂದು ಹೇಳಲಾಗಿದೆ ಬೊಂಬಾಯಿಯ ಬಗ್ಗೆ ಕೇಂದ್ರ ಸರ್ಕಾರದ ನಿರ್ಧಾರವು ಅಂತಿಮವಲ್ಲವೆಂದೂ, ಅಲ್ಲಿನ ಪರಿಸ್ಥಿತಿಯು ಉತ್ತಮಗೊಂಡ ನಂತರ ಆ ಸಮಸ್ಯೆಯನ್ನು ಪುನಃ ಪರಿಶೀಲಿಸಬಹುದೆಂದೂ ಅವರು ತಿಳಿಸಿದರು ಈಗಿನ ಕಹಿ ವಾತಾವರಣವು ಹೋಗುವವರೆಗೆ ಯಾವ ನಿರ್ದಿಷ್ಟ ಕ್ರಮವನ್ನೂ ತೆಗೆದುಕೊಳ್ಳಲಾಗುವುದಿಲ್ಲವೆಂದು ಹೇಳಲಾಗಿದೆ

ಬಿಸಿಲಿನ ತಾಪ ತಾಳಲಾರದೆ ವೃದ್ಧೆಯ ಮರಣ

ಕಡಪಾದಿಂದ ಕರ್ನೂಲಿಗೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ೬೦ ವರ್ಷದ ವೃದ್ಧೆಯೊಬ್ಬಳು ಬಿಸಿಲಿನ ತಾಪವನ್ನು ತಡೆಯಲಾರದೆ ಕುಂಬಾಯಾಸವಾಗಿ ಕಡೆಗೆ ಆಸ್ಪತ್ರೆಯಲ್ಲಿ ಮೃತಪಟ್ಟಳಾಗಿ ವರದಿಯಾಗಿದೆ ಕರ್ನೂಲು ಮತ್ತು ಸುತ್ತಮುತ್ತಲೂ ಬಿಸಿಲಿನ ತಾಪವು ಹೆಚ್ಚಿ, ನೆನ್ನೆ ೧೧೨ ಡಿಗ್ರಿಯಷ್ಟು ಉಷ್ಣಾಂಶವು ಇದ್ದಿತು ಕಳೆದ ಎರಡು ವರ್ಷಗಳಲ್ಲಿ ಇದು ರಿಕಾರ್ಡು

ಬೆಕ್ಕಿನ ಕೊಲೆಗಾಗಿ ೩೦ ರೂ. ದಂಡ

ಬೊಂಬಾಯಿಯಲ್ಲಿ ಜಾನ್ ಬ್ಯಾಪ್ಟಿಸ್ಟ್ ಫರ್ನಾಂಡಿಸ್ ಎಂಬುವನು ಬೆಕ್ಕೊಂದನ್ನು ಕೊಲೆ ಮಾಡಿದನೆಂದು ಅವನಿಗೆ ಪ್ರಾಣಿ ಹಿಂಸಾ ಕಾನೂನಿನ ಪ್ರಕಾರ ೩೦ ರೂ ದಂಡ, ತಪ್ಪಿದರೆ ೧ ತಿಂಗಳ ಕಠಿಣ ಸಜಾ ವಿಧಿಸಲಾಯಿತು. ಬೆಕ್ಕು ಆಹಾರವನ್ನು ಕದ್ದು ತಿಂದುದಕ್ಕಾಗಿ ಅದನ್ನು ಆತನು ಹೊಡೆದು ಕೊಂದಿದ್ದನೆಂದು ಹೇಳಲಾಗಿದೆ

ರಾಮೋತ್ಸವ ಕಾರ್ಯಕ್ರಮ

ನಗರದ ಸಿವಿಲ್ ಪೊಲೀಸ್ ಲೈನ್ಸಿನಲ್ಲಿ ರಾಮೋತ್ಸವದ ಪ್ರಯುಕ್ತ ಈ ಸಂಜೆ ೭ ಗಂಟೆಗೆ ವೇ|| ಬ್ರಹ್ಮಶ್ರೀ ಸುಬ್ಬರಾಯದಾಸರಿಂದ ಶ್ರೀ ಕೃಷ್ಣ ಗಾರುಡಿ ಮತ್ತು ನಾಳೆ ಸಂಜೆ ೭ಕ್ಕೆ ಮುರಬಾಗಿಲು ಶ್ರೀ ನಾರಾಯಣದಾಸರಿಂದ ಭದ್ರಾಚಲ ರಾಮದಾಸ್ ಎಂಬ ಹರಿಕಥೆಗಳು ಜರುಗುವುವು

ಲಾಲ್‌ಬಾಗ್ ಶತಮಾನೋತ್ಸವ

ಬೆಂಗಳೂರಿನಲ್ಲಿರುವ ಲಾಲ್‌ಬಾಗಿನ ಶತಮಾನೋತ್ಸವವು ಇದೇ ಆಗಸ್ಟ್ ತಿಂಗಳಲ್ಲಿ ನೆರವೇರುವುದು ೧ನೇ ತಾರೀಖು ಆರಂಭವಾಗಿ ೧೫ರ ವರೆಗೆ ಅದು ನಡೆಯಲಿದೆ ರಾಜಪ್ರಮುಖರು ಆರಂಭೋತ್ಸವವನ್ನು ನೆರವೇರಿಸುವರು ಮುಖ್ಯ ಮಂತ್ರಿಯವರು ಅಲ್ಲಿ ಶತಮಾನೋತ್ಸವದ ನೆನಪಿಗಾಗಿ ಒಂದು ಉದ್ಯಾನವನ್ನು ತೆರೆಯುವರು

ವಿವಿಧ ಅಪರಾಧಗಳಿಗೆ ದಂಡ

ಮೈಸೂರು ೨೮

ನಗರದ ಪ್ರಥಮ ನ್ಯಾಯಾಧೀಶರು ವಿವಿಧ ಮೊಕದ್ದಮೆಗಳಲ್ಲಿ ಕೆಳಗೆ ಕಂಡಂತೆ ನೆನ್ನೆ ಶಿಕ್ಷೆ ವಿಧಿಸಿದರು:—

ಸಿದ್ದಯ್ಯ, ಸುಧಾಕರರವರು ನೆನ್ನೆ ಬೆಳಿಗ್ಗೆ ರೈಲ್ವೆ ನಿಲ್ದಾಣದಲ್ಲಿ ಜಗಳವಾಡಿದುದಕ್ಕೆ ತಲಾ ೧೦ ರೂ. ದಂಡ.

ಕುಕ್ಕರಹಳ್ಳಿಕೆರೆ ಬಳಿ ಇರುವ ರಾಮಮಂದಿರದ ಹತ್ತಿರ ಜಗಳವಾಡಿ ಸಾರ್ವಜನಿಕ ಶಾಂತಿಗೆ ಭಂಗ ತಂದರೆಂದು ಹಣ್ಣಮುರಿ, ದಾಸಿ, ಮಂಚಯ್ಯ, ಚಾಮಯ್ಯ, ಮರಿ, ಮಾಲಯ್ಯ ಮತ್ತು ರಾಮಯ್ಯ ಎಂಬುವರಿಗೆ ತಲಾ ೧೦ ರೂ. ದಂಡ.

೨೬೬೭ ನೇ ನಂಬರ್ ಲಾರಿಯ ಡ್ರೈವರ್ ಸಿ. ಚಾಕಣ ಎಂಬುವನು ಶೇಷಾದ್ರಿ ರಸ್ತೆಯಲ್ಲಿ ಲಾರಿಯನ್ನು ಜೋರಾಗಿ ಬಿಟ್ಟುಕೊಂಡು ಶ್ರೀ ಎ. ಸಾಂಬಮೂರ್ತಿಯವರ ಕಾರಿಗೆ ಡಿಕ್ಕಿ ಹೊಡೆದು ಜಖಂ ಮಾಡಿದುದಕ್ಕಾಗಿ ಅವನಿಗೆ ೫೦ ರೂ. ದಂಡ, ತಪ್ಪಿದರೆ ೧ ತಿಂಗಳ ಸಾದಾ ಸಜಾ.

ಆಯುರ್ವೇದ ಪದವೀಧರರ ಸಮ್ಮೇಳನಾಧ್ಯಕ್ಷತೆಗೆ ಸ್ಪರ್ಧಿಗಳು

ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪದವೀಧರರ ಸಂಘದ ಅಧ್ಯಕ್ಷತೆಗೆ ಸ್ಪರ್ಧಿಸಿದ್ದ ಶ್ರೀಗಳಾದ ಟಿ. ಕೆ. ರಾಮಶಾಸ್ತ್ರಿ, ಟಿ. ಸಿ. ಕಸ್ತೂರಿ ಮತ್ತು ಸಿ. ಆರ್. ಸೀತಾರಾಮ್‌ರವರು ತಮ್ಮ ಉಮೇದುವಾರಿಕೆಗಳನ್ನು ವಾಪಸು ಪಡೆದಿರುತ್ತಾರೆ. ಶ್ರೀಗಳಾದ ಎ. ಗುಂಡಪ್ಪ, ಬಿ. ಜಿ. ದಾಸ್ ಮತ್ತು ಎಸ್. ಆರ್. ನಾರಾಯಣಶಾಸ್ತ್ರಿಯವರ ನಡುವೆ ಸ್ಪರ್ಧೆ ನಡೆಯುತ್ತದೆ.

ಉ ಪ ನ ಯ ನ

ರಾಜಧಾನಿಯ 'ನೇಸರ' ಪತ್ರಿಕೆಯ ಸಂಪಾದಕರಾದ ಶ್ರೀ ಕೆ. ಅನಂತಸುಬ್ಬರಾಯರು ತಮ್ಮ ದ್ವಿತೀಯ ಕುಮಾರ ಚಿ॥ ನ॥ ಕೇಶವಮೂರ್ತಿಗೆ ನೆನ್ನೆ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ಹೊರಕ್ಕೆ ಎತ್ತಿಹಾಕಿಸುವುದಾಗಿ ಲೋಕಸಭಾಧ್ಯಕ್ಷರ ಎಚ್ಚರಿಕೆ

ಲೋಕಸಭಾಧ್ಯಕ್ಷ ಎಂ. ಅನಂತಶಯನಂ ಅಯ್ಯಂಗಾರ್‌ರವರು ಮೊನ್ನೆ ಪಿಚ್. ವಿ. ಕಾಮತ್‌ರವರಿಗೆ ಎಚ್ಚರಿಕೆಯಿತ್ತು, ಅವರನ್ನು ಅನಾಮತ್ತು ಹೊರಕ್ಕೆ ಎತ್ತಿಹಾಕಿಸುವುದಾಗಿ ಸೂಚಿಸಿದರು. ಅದಕ್ಕೆ ತಾವು ಸಿದ್ಧವಾಗಿರುವುದಾಗಿ ಕಾಮತ್‌ರವರು ಉತ್ತರವಿತ್ತರು. ಸಭಾ ನಡವಳಿಕೆ ಬಗ್ಗೆ ಪರಸ್ಪರ ಅಭಿಪ್ರಾಯವನ್ನು ತಿಳಿಸುತ್ತಿದ್ದಾಗ ಅವರಿಬ್ಬರಿಗೂ ಬಿಸಿ ಮಾತುಗಳು ಬೆಳೆದುವು.

ವಿವಾಹ ಮಹೋತ್ಸವಗಳು

ರಾಜಧಾನಿಯ ಸೀತಾವಿಲಾಸ ಅಗ್ರಹಾರದಲ್ಲಿರುವ ಗುರುಮೂರ್ತಿ ವೈದ್ಯಶಾಲೆಯ ಧನ್ವಂತ್ರಿ ಎಂ. ಸೂರ್ಯನಾರಾಯಣಪಂಡಿತರು ತಮ್ಮ ಕುಮಾರ ಚಿ॥ ರಾ॥ ಜಿ. ಎಸ್. ವಿಶ್ವೇಶ್ವರಯ್ಯನವರಿಗೆ ಲಷ್ಕರ್ ಮೊಹಲ್ಲಾ ಶ್ರೀ ಎಸ್. ವೆಂಕಟಸುಬ್ಬಯ್ಯನವರ ಹಿರಿಯ ಕುಮಾರಿ ಸೌ॥ ಶಾರದಮ್ಮನವರನ್ನು ತಂದುಕೊಂಡು ನೆನ್ನೆ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು.

ಲೋಕಸೇವಾನಿರತ ಡಿ. ಎ. ಕೃಷ್ಣಯ್ಯಶೆಟ್ಟರು ಶ್ರೀ ಡಿ. ಎ. ನರಸಿಂಹಯ್ಯ ಶೆಟ್ಟರ ಮಗಳು ಸೌ॥ ಕೃಷ್ಣವೇಣಿಯನ್ನು ಗುಬ್ಬಿ ಜವಳಿ ವರ್ತಕರಾದ ಶ್ರೀ ಕಾಶಿಪತಿ ಪುಟ್ಟಯ್ಯಶೆಟ್ಟರ ದತ್ತು ಪುತ್ರ ಶ್ರೀ ಗೋಪಾಲಕೃಷ್ಣಶೆಟ್ಟರಿಗೆ ಕೊಟ್ಟು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಮೈಸೂರು ಪೇಟೆ ಧಾರಣೆ

	ರೂ ರಿಂದ			ರೂ ವರೆಗೆ		
ಕಡಲೇಬೇಳೆ	೯೯	೦	೦	೨೨	೦	೦
ಹುಚ್ಚೆಳ್ಳು	೪೪	೦	೦			
ಹೊಂಗೆಬೀಜ	೨೫	೪	೦	೨೬	೦	೦
ಹುಣಸೇಬೀಜ	೫	೪	೦			
ಹುರುಳಿ	೨೬	೨	೦	೨೮	೬	೦
ಕಡಲೆ	೪೨	೨	೦			
ಹುಣಸೇಹಣ್ಣು	೩	೦	೦	೬	೧	೦
ಮೆಣಸಿನಕಾಯಿ	೭	೦	೦	೧೬	೦	೦
ತೆಂಗಿನಕಾಯಿ ೧೧೦೦	೧೩೧	೮	೦	೨೩೩	೮	೦

ರಾಮೋತ್ಸವ ಕಾರ್ಯಕ್ರಮಗಳು

ಮೈಸೂರು ೨೮

ರಾಜಧಾನಿಯ ಸಂತೆಪೇಟೆ ಕುಂಬಾರಗರಡಿ ಶ್ರೀರಾಮ ಮಂದಿರದವರು ನಾಳೆ ಸಂಜೆ ೬॥ ಗಂಟೆಗೆ ಹೂವಿನ ಅಡ್ಡಪಲ್ಲಕ್ಕಿ ಉತ್ಸವವನ್ನೂ, ನಾಳಿದ್ದು ಸಂಜೆ ೬॥ಗೆ ಹನುಮಂತೋತ್ಸವವನ್ನೂ ರಾಜಮರ್ಯಾದೆಯೊಡನೆ ಏರ್ಪಡಿಸಿರುತ್ತಾರೆ.

ರಾಜಾರಾಂ ಅಗ್ರಹಾರದ ಶ್ರೀ ರಾಮ ಸೇವಾ ಸಮಿತಿಯವರು ನಾಳೆ ಸಂಜೆ ಪಟ್ಟಾಭಿಷೇಕೋತ್ಸವದ ಅಂಗವಾಗಿ ವಿ॥ ಲಕ್ಷ್ಮೀಪತಿಯವರಿಂದ ಭದ್ರಾಚಲ ರಾಮದಾಸ್ ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತಾರೆ.

ಕ್ರಿಸ್ತ ದೇವಾಲಯಗಳಲ್ಲಿ ಚುನಾವಣೆಗಾಗಿ ಒತ್ತಾಯ

ನಗರದಲ್ಲಿರುವ ವೆಸ್ಲಿ, ಈದಿಗ ಮತ್ತು ಹಾರ್ಡ್‌ವಿಕ್ ಕ್ರಿಸ್ತ ದೇವಾಲಯಗಳಲ್ಲಿ ನಡೆಯಬೇಕಾಗಿದ್ದ ಸಭಾ ನಾಯಕರ ಚುನಾವಣೆಗಳು ಕೋರಂ ಇಲ್ಲದೆ ನಿಂತುಹೋಯಿತೆಂದೂ, ದೇವಾಲಯಗಳ ಅಧ್ಯಕ್ಷರ ಕರ್ತವ್ಯ ಲೋಪವೇ ಇದಕ್ಕೆ ಕಾರಣನೆಂದೂ ಶ್ರೀ ಜೆ. ಸ್ವಾಮಿದಾಸ್‌ರವರು ಪತ್ರ ಬರೆದು ತಿಳಿಸಿರುತ್ತಾರೆ. ಹಣ ಕೊಟ್ಟವನೂ, ರಾತ್ರಿ ಭೋಜನದವನೂ ಮಾತ್ರ ಓಟು ಮಾಡಬೇಕೆನ್ನುವುದು ಅವಿವೇಕ ನಿಯಮವೆಂದು ಅವರು ಹೇಳುತ್ತಾರೆ. ಒಬ್ಬ ನಾಯಕರನ್ನು ಹಾರ್ಡ್‌ವಿಕ್ ಮೈಸೂರಿಗೆ ನೇಮಿಸಿದ್ದರೂ ಇನ್ನೂ ತಿಂಗಳನ್ನು ಆ ಸ್ಥಾನದಿಂದ ತಪ್ಪಿಸದೇ ಇರುವುದನ್ನು ಅವರು ತೀವ್ರವಾಗಿ ಟೀಕಿಸಿರುತ್ತಾರೆ.

ಭಾರತದ ಧ್ವಜದ ವಿಶ್ವ ಸಂಕೇತ

ಭಾರತದ ಧ್ವಜವು ವಿಶ್ವದ ಅಭ್ಯುದಯದ ಎಲ್ಲಾ ಚಿಹ್ನೆಗಳನ್ನೂ ಹೊಂದಿರುವುದೆಂದು ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ತಿಳಿಸಿರುತ್ತಾರೆ. ರಾಷ್ಟ್ರೀಯ ತತ್ವವನ್ನು ಸೂಚಿಸುವ ಪ್ರತ್ಯೇಕ ವಿಶೇಷಣಗಳೇನೂ ಧ್ವಜದಲ್ಲಿಲ್ಲವೆಂದೂ, ಅದು ಜಗತ್ತಿನ ಶಾಶ್ವತಿಯ ಸಂಕೇತವಾಗಿರುವುದೆಂದೂ ಅವರು ಸೂಚಿಸಿರುತ್ತಾರೆ. ಮಹಾತ್ಮಾ ಗಾಂಧಿಯವರಿಗೆ ತಾವು ಈ ವಿಷಯವನ್ನು ತಿಳಿಸಿದುದಾಗಿಯೂ, ಗಾಂಧೀಜಿಯವರು ಆ ಅಭಿಪ್ರಾಯವನ್ನು ಒಪ್ಪಿ ಉದ್ದೇಶಪೂರ್ವಕವಾಗಿ ಹಾಗೆ ನಿರ್ಮಿಸಲ್ಪಟ್ಟಿದ್ದರೂ, ಅದು ವಿಶ್ವದ ಚಾವಡಿಯಾಗಿರುವುದಾಗಿ ಅಭಿಪ್ರಾಯಪಟ್ಟರೆಂದೂ ಡಾ॥ ರಾಧಾಕೃಷ್ಣನ್‌ರವರು ಹೇಳುವರು.

ರೈಲಿಗೆ ಸಿಕ್ಕಿ ಯುವಕನ ಆತ್ಮಹತ್ಯ

ಬೆಂಗಳೂರು ಸಿಟಿ ರೈಲ್ವೆ ನಿಲ್ದಾಣದಲ್ಲಿ ಮದ್ರಾಸ್ ರಸ್ತೆ ಕಡೆ ನೆನ್ನೆ ಷಂಟಿಂಗ್ ರೈಲಿಗೆ ಸಿಕ್ಕಿ ಶ್ರೀಧರಶೆಟ್ಟಿ ಎಂಬ ೨೫ ವರ್ಷದ, ಮಿಲ್ಲಿನ ಮಾಜಿ ನೌಕರನು ಮೃತಪಟ್ಟನೆಂದು ವರದಿಯಾಗಿದೆ. ಅವನಿಗೆ ಆಗಿಂದಾಗ್ಗೆ ಮೂರ್ಛೆ ರೋಗ ಬರುತ್ತಿದ್ದು ಆ ಕಾರಣದಿಂದ ಅವನನ್ನು ಕೆಲಸದಿಂದ ತೆಗೆದುಹಾಕಲಾಗಿತ್ತು. ತನಗೆ ಬಂದ ರೋಗ ಮತ್ತು ಉಂಟಾದ ನಿರುದ್ಯೋಗಕ್ಕಾಗಿ ಜಿಗುಪ್ಸೆಗೊಂಡು ಆತನು ರೈಲಿಗೆ ಸಿಕ್ಕಿ ಆತ್ಮಹತ್ಯ ಮಾಡಿಕೊಂಡುದಾಗಿ ಹೇಳಲಾಗಿದೆ.

ನಂಜನಗೂಡಿನಲ್ಲಿ ರಾಮೋತ್ಸವ

ನಂಜನಗೂಡಿನ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಹಿಂಭಾಗದಲ್ಲಿರುವ ಶ್ರೀ ಪ್ರಸನ್ನ ರಾಮ ಮಂದಿರದಲ್ಲಿ ಶ್ರೀ ರಾಮನವಮಿ ಆಗಾಯ್ತು ಪ್ರತಿದಿನವೂ ಪೂಜೆ, ಪಾರಾಯಣ, ಭಜನೆ ಮತ್ತು ಸಂಗೀತಗಳು ನಡೆದುಬಂದಿವೆ. ಶ್ರೀ ರಾಮನವಮಿಯ ದಿನ ಅಖಿಲ ಮಾಧ್ವ ಸಂಘದ ಅಧ್ಯಕ್ಷರಾದ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಉಪನ್ಯಾಸವಾಯಿತು. ಸಂಗೀತಗಾರರಿಂದ ದಿನವೂ ಸಂಗೀತವು ನಡೆದು ಮೊನ್ನೆ ಮೈಸೂರಿನ ವಿದ್ವಾಂಸರಾದ ಶ್ರೀ ನಂಜುಂಡಸ್ವಾಮಿಯವರಿಂದ ಸಂಗೀತವೂ, ಪಿಟೀಲು ವೆಂಕಟಾಚಾರ್ಯರ ಪಿಟೀಲು ಮತ್ತು ವಿ॥ ಮಹದ್ದೇಲಿಂಗಪ್ಪನವರ ಮೃದಂಗದೊಡನೆ ನಡೆಯಿತು. ನಾಗಾ ಮಂಗಳವಾರ, ಕಮೀಷನರ್ ಶ್ರೀ ಎಸ್. ಕೆ. ವೆಂಕಟರಮಣಾಚಾರ್ಯರಿಂದ ವಂದನಾರ್ಪಣೆ ಮತ್ತು ಪ್ರಸಾದ ವಿನಿಯೋಗವಾದನಂತರ ಸಮಾರಂಭವು ಮುಕ್ತಾಯವಾಯಿತು.

ಮಹಿಳೆಯಿಂದ ಹಿಮಾಲಯದ ಶಿಖರಾರೋಹಣ

ಹಿಮಾಲಯದ ಮುಕ್ತಿನಾಥ ಪರ್ವತ ಶ್ರೇಣಿಯಲ್ಲಿರುವ ಪಿಟುಂಗ್ ಕಾಂಗ್ ಶಿಖರವನ್ನು ಸ್ವಿಟ್ಸರ್ಲೆಂಡಿನ ಮಹಿಳೆ ಮಾರ್ಗರೆಟ್ ಡೇರಿಯಜ್ ಎಂಬಾಕೆಯು ಆರೋಹಣ ಮಾಡಿರುತ್ತಾಳೆ. ಶಿಖರವು ೨೦ ಸಾವಿರ ಅಡಿ ಎತ್ತರವಿದೆ. ಆಕೆಯೊಡನೆ ಗಂಡನೂ ಇದ್ದನು. ಅವರು ಮಾರ್ಚಿ ೨೮ನೇ ತಾರೀಕು ಖಟ್ಮಂಡುವಿನಿಂದ ಹೊರಟು ಏಪ್ರಿಲ್ ೫ನೇ ತಾರೀಕು ಶಿಖರದ ತಪ್ಪಲನ್ನು ಮುಟ್ಟಿದರು. ೧೨ನೇ ತಾರೀಕು ಅದನ್ನು ಹತ್ತಿದರು.

ಹಿನಕಲ್ ಪೊಲೀಸ್ ಠಾಣೆಯನ್ನು ವರ್ಗಾಯಿಸಬಾರದು

ಅನೇಕ ದಿನಗಳಿಂದಲೂ ಸಾರ್ವಜನಿಕರು ಕೋರುತ್ತಿದ್ದ ಮೇರೆಗೆ, ಇತ್ತೀಚೆಗೆ ಸರ್ಕಾರದವರು ಹಿನಕಲ್ ಗ್ರಾಮದಲ್ಲಿ ಒಂದು ಪೊಲೀಸ್ ಠಾಣೆಯನ್ನು ಸ್ಥಾಪಿಸಿರುವುದು ಸರಿಯಷ್ಟೇ. ಇದರಿಂದ ಇಲ್ಲಿನ ಮತ್ತು ಸುತ್ತಮುತ್ತಲಿನ ಪ್ರಜೆಗಳಿಗೆ ಬಹಳ ಮಟ್ಟಿನ ನೆಮ್ಮದಿ ಉಂಟಾಗಿರುವುದಲ್ಲದೆ ಈ ಪ್ರದೇಶಗಳಲ್ಲಿ ನಡೆಯುತ್ತಿದ್ದ ಪುಂಡುತನಗಳು ಸಹಾ ಕಡಿಮೆಯಾಗಿರುತ್ತವೆ. ಇದಕ್ಕಾಗಿ ಇಲಾಖೆಯವರು ಇಲ್ಲಿನ ನಿವಾಸಿಗಳ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ.

ಮೈಸೂರಿನಿಂದ ಮಡಕೇರಿಗೆ ಹೋಗುವ ಮಾರ್ಗದಲ್ಲಿರುವ ಈ ಗ್ರಾಮದಲ್ಲಿ ಮೋಟಾರು, ಬಸ್ಸು, ಲಾರಿ, ಗಾಡಿ ಮುಂತಾದುವುಗಳ ಸಂಚಾರವು ಬಹಳವಾಗಿರುವುದರಿಂದ ಪೊಲೀಸ್ ಠಾಣೆಯು ಇಲ್ಲಿ ತುಂಬಾ ಉಪಯೋಗಕರವಾಗಿರುತ್ತದೆ. ಆದರೆ ಇತ್ತೀಚಿಗೆ ಹಲವರು ಈ ಠಾಣೆಯನ್ನು ಪುನಃ ಬೇರೆ ಕಡೆಗೆ ವರ್ಗಾಯಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿದುಬಂದು, ಈ ಪ್ರದೇಶದ ಜನರಿಗೆ ತುಂಬಾ ಕಳವಳವುಂಟಾಗಿರುತ್ತದೆ. ಕೇವಲ ೩ ತಿಂಗಳ ಹಿಂದೆ ಸ್ಥಾಪಿಸಿರುವ ಈ ಠಾಣೆಯನ್ನು ಪುನಃ ಬದಲಾಯಿಸುವುದು ಸರ್ವಥಾ ಸೂಕ್ತವಲ್ಲ. ಹಾಗೆ ಮಾಡಿದರೆ ಸರ್ಕಾರದ ದಕ್ಷತೆ ಮತ್ತು ವಿಚಕ್ಷಣೆಗೂ ಅಪೋಹವುಂಟಾಗುತ್ತದೆ. ಬೇರೆ ಕಡೆಗಳಲ್ಲಿ ಅಗತ್ಯವಿದ್ದರೆ ಹೊಸ ಠಾಣೆಗಳನ್ನು ಅಲ್ಲಿಯೂ ಏರ್ಪಡಿಸಲಿ. ಬಹಳ ದಿನಗಳಿಂದ ಮಹಾಜನರು ಸಲ್ಲಿಸುತ್ತಿದ್ದ ಕೋರಿಕೆಯ ಮೇರೆ ಏರ್ಪಾಡಾಗಿರುವ ಈ ಠಾಣೆಯನ್ನು ಖಂಡಿತವಾಗಿಯೂ ತವಲಿಸಲಾಗದು.

— ಗ್ರಾಮ ಹಿತೈಷಿ

ನಮ್ಮ ಇತ್ತೀಚಿನ ಪ್ರಕಟಣೆ

ಸರಳ ಸುಂದರ ಸಾಮಾಜಿಕ ಕಾದಂಬರಿ

ಶ್ರೀಮತಿ ಎಸ್. ಕಮಲಮ್ಮನವರ

" ಮಂ ಗ ಳಾ "

ತ್ರಿವರ್ಣ ರಕ್ಷಾಕವಚ : ಬೆಲೆ 1 ರೂ

★

ಶೀಘ್ರದಲ್ಲಿಯೇ :

ಶ್ರೀ ವಿ. ಆರ್. ಅನ್ನಗಿರಿಯವರ

ಉಯಲಿನ ಅಪಹಾರವೆ

ಪತ್ತೇದಾರಿ ಕಾದಂಬರಿ : ಬೆಲೆ 10 ಆಣೆ

★

ಶ್ರೀ ನಿರಂಜನರವರ ಸಾಮಾಜಿಕ ಕಾದಂಬರಿ

ತಾವರೆ ಅರಳಲಿಲ್ಲ

ತ್ರಿವರ್ಣ ರಕ್ಷಾಕವಚ : ಬೆಲೆ 1 ರೂ. 8 ಆಣೆ

ನಿಮ್ಮ ಪ್ರತಿಗಳನ್ನು ಕಾದಿರಿಸಿಕೊಳ್ಳಿ

ವಿವರಗಳಿಗೆ :–

ಗಾಯತ್ರಿ ಪ್ರಕಾಶನ,

ಚಾಮುಂಡಿಪುರಂ, ಮೈಸೂರು

ಆಯುರ್ವೇದದೊಡನೆ ವಿದೇಶೀ ಪದ್ಧತಿ ಸಂಯೋಜನೆ ಕೂಡದು

ಪಾರ್ಥನಾರಾಯಣ ಪಂಡಿತರ ಹೇಳಿಕೆ

ವಿಜಯವಾಡದ ಸಭೆಯೊಂದರಲ್ಲಿ ಅಖಿಲ ಭಾರತ ಆಯುರ್ವೇದ ಮಹಾ ಮಂಡಲದ ಅಧ್ಯಕ್ಷರಾದ ಬೆಂಗಳೂರಿನ ಡಾ॥ ವೈ. ಪಾರ್ಥನಾರಾಯಣ ಪಂಡಿತರು ಭಾಷಣ ಮಾಡಿ, ಇತರ ವೈದ್ಯ ಪದ್ಧತಿಗಳಿಗಿಂತಲೂ ಆಯುರ್ವೇದವು ಉತ್ತಮವೆಂದು ತೋರ್ಪಡಿಸಲು ಆಯುರ್ವೇದ ವಿದ್ವಾಂಸರು ಬದ್ಧಕಂಕಣರಾಗಬೇಕೆಂದು ಸೂಚಿಸಿದರು. ಆಯುರ್ವೇದದ ಬಗ್ಗೆ ಅಪಪ್ರಚಾರವೂ ನಡೆಯುತ್ತಿರುವುದೆಂದೂ, ಅದನ್ನು ತಡೆಗಟ್ಟಬೇಕೆಂದೂ ಅವರು ಕೋರಿದರು. ಆಯುರ್ವೇದಾಭಿವೃದ್ಧಿಗೆ ಪಂಚವಾರ್ಷಿಕ ಯೋಜನೆಯಲ್ಲಿ ಹಣವನ್ನು ಒದಗಿಸಬೇಕೆಂದು ಹೇಳಿದರು.

ಆಯುರ್ವೇದವು ವಿಶ್ವದಲ್ಲೇ ಅಮೂಲ್ಯವಾದ ವೈದ್ಯ ಪದ್ಧತಿಯೆಂದೂ, ಇತರ ವಿದೇಶೀ ಪದ್ಧತಿಗಳನ್ನು ಅದರೊಳಗೆ ಸಂಯೋಜಿಸಿ ಅದನ್ನು ಕೆಡಿಸಬಾರದೆಂದೂ ಅವರು ಹೇಳಿದರು. ಅನರ್ಹರಾದ ವೈದ್ಯರುಗಳನ್ನು ತೆಗೆದುಹಾಕಬೇಕೆಂದು ಸೂಚಿಸಿದರು.

ಬೊಂಬಾಯಿ ಸರ್ಕಾರದವರು ಶುದ್ಧಾಯುರ್ವೇದಕ್ಕೆ ಇತ್ತಿರುವ ಪ್ರೋತ್ಸಾಹವನ್ನು ಅವರು ಪ್ರಶಂಸಿಸಿ, ಮದ್ರಾಸ್ ಸರ್ಕಾರದವರು ಆಯುರ್ವೇದವನ್ನು ಕೊನೆಗಾಣಿಸಲು ಪ್ರಯತ್ನಿಸುತ್ತಿರುವುದಕ್ಕಾಗಿ ವಿಷಾದಿಸಿದರು.

" ನಿಶೆಯಿಂದ ಉಷೆಗೆ "

ರಾಜಧಾನಿಯ ಮಂಡಿ ಮೊಹಲ್ಲೆಯಲ್ಲಿರುವ ತಾಂಡವಮೂರ್ತಿ ಪ್ರಕಾಶನದವರು ಪ್ರಕಟಿಸಿರುವ ಶ್ರೀ ಎ. ಸಿ. ನರಸಪ್ಪನವರ " ನಿಶೆಯಿಂದ ಉಷೆಗೆ " ಎಂಬ ಕಾದಂಬರಿಯನ್ನು ಆದರದಿಂದ ಸ್ವೀಕರಿಸಿದ್ದೇವೆ. ತಂದೆತಾಯಿಗಳ ಪ್ರೀತ್ಯರ್ಥವಾಗಿ ತಾನೊಲಿದ ಗಂಡನ್ನು ಬಿಟ್ಟು ಬೇರೆಯವನನ್ನು ವಿವಾಹವಾಗಿ ಎಷ್ಟು ಕಷ್ಟಗಳು ಬಂದರೂ ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಂಡ ಒಬ್ಬ ತರುಣಿಯ ಮತ್ತು ಒಲಿದ ಹೆಣ್ಣನ್ನು ತನ್ನವಳನ್ನಾಗಿ ಪಡಿಸಿಕೊಳ್ಳಬೇಕೆಂದು ಕಥಾನಾಯಕನೆನಿಸಿಕೊಳ್ಳುವ ಗೋವಿಂದನು ಎಷ್ಟು ಅಲ್ಪ ಮಾರ್ಗಗಳಿಗೆ ಇಳಿಯುವನೆಂಬುವನ್ನೂ ಲೇಖಕರು ಸ್ವಾರಸ್ಯವಾಗಿ ವರ್ಣಿಸಿದ್ದಾರೆ. ೨೮೮ ಪುಟಗಳ ಈ ಕಾದಂಬರಿಯ ಬೆಲೆ ರೂ. ೧-೮-೦

SREE GANESH TALKIES

From 28-4-56 : For 3 days

THE FAR HORIZON

(In Vistavision-Technicolor)

Starring:- Charlton Heston and Fred Macmurray

From 1-5-56 : For 2 days

ROAD TO RIO

(Re-issue)

With:- Bing Crossby & Bob Hope

From 3-5-56 : For 2 days

THE ELEPHANT WALK

(Technicolor)

Actually filmed in Ceylon

Edited, Printed and Published by A. R. Nagarajan at Sadhvi Press, D. Subbiah Road, Mysore

ಪ್ರಭುದೇವಾ ಥಿಯೇಟರ್

(ಶಬ್ದಾ ಟಾಕೀಸ್)

28-4-56ರಿಂದ : ಅಮೋಘ 6ನೇ ವಾರ : ಪ್ರತಿ ದಿನ 3 ಆಟಗಳು

ಶ್ರೀ ರೇಣುಕಾ ಮಹಾತ್ಮೆ

(ಎಲ್ಲಮ್ಮನ ಕಥಾ)

ಮುಂದಿನ ಬದಲಾವಣೆ ★ ಸಿ. ಐ. ಡಿ. ★ ಶಕ್ತರ ಚಿತ್ರ

ರಿಜಿಸ್ಟರ್ಡ್ ನಂ. ೧೨೩

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ ೬ ಕಾಸು

ಲಗ್ನದ ಜವಳಿ
ಗೌಹಿ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ,
ಆರ್ಣಿ, ಬಿಂಡಿಗಲ್
ರೇಷ್ಮೆ ಮತ್ತು ನೂಲಿನ ಸೀರೆಗಳು
ಇಂದಿನ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : SUNDAY 29-4-1956 ಮೈಸೂರು ಭಾನುವಾರ : ೨೯-೪-೧೯೫೬ [ಸಂಚಿಕೆ : ೨೪೮

ಬ್ರಿಟನ್ನಿನಲ್ಲಿ ರಷ್ಯಾ ನಾಯಕರ ಕೊಲೆಗೆ ಒಳಸಂಚು ಪತ್ತೆ

ನಗರಕ್ಕೆ ರಾಜಾಜಿಯವರ ಆಗಮನ

ಮೈಸೂರು ೨೮

ಭಾರತದ ಮಾಜಿ ಗವರ್ನರ್ ಜನರಲ್ ಸಿ. ರಾಜಗೋಪಾಲಾಚಾರಿಯವರು ಶ್ರೀ ನವರತ್ನ ರಾಮರಾಯರೊಡನೆ ಈ ಬೆಳಿಗ್ಗೆ ೧೧ ಗಂಟೆಗೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. ಅವರನ್ನು ಗವರ್ನಮೆಂಟ್ ಹೌಸಿನಲ್ಲಿ, ಜಿಲ್ಲಾಧಿಕಾರಿಗಳಾದ ಶ್ರೀ ನಂಜುಂಡೇಗೌಡರು ಮತ್ತು ಡಿ. ಎಸ್. ಪಿ. ಶ್ರೀ ಎಸ್. ಸಿ. ಮಲ್ಲಪ್ಪ ಮುಂತಾದವರು ಸ್ವಾಗತಿಸಿದರು. ರಾಜಾಜಿಯವರು ನಾಳೆ ನೀಲಗಿರಿಗೆ ತೆರಳುವರು.

ನಗರದಲ್ಲಿ ಧಾನ್ಯದ ಮಾರಾಟದ ನಿಯಮಗಳು

ಸಂಸ್ಥಾನದ ವ್ಯವಸಾಯೋತ್ಪನ್ನ ಮಾರ್ಕೆಟ್ ಶಾಸನದ ೪ನೇ ವಿಧಿ ಪ್ರಕಾರ, ರಾಗಿ, ಜೋಳ, ಕಂಬು, ನವಣೆ, ಸಜ್ಜೆ, ಅಕ್ಕಿ ಮತ್ತು ಭತ್ತ ಇವುಗಳ ಮಾರಾಟವನ್ನು ಮೇಲ್ಕಂಡ ಶಾಸನದ ಪ್ರಕಾರ ಮೈಸೂರು ನಗರದಲ್ಲಿ ಮಾಡಬಹುದೆಂದು ಮೈಸೂರು ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ.

ಸಟ್ಟಾ ಜೂಜಿಗಾಗಿ ದಂಡ

ಮಂಡಿ ಮೊಹಲ್ಲೆಯ ಹನೀಫ್ ಎಂಬುವನಿಗೆ ಸಟ್ಟಾ ಜೂಜಿಗಾಗಿ ನೆನ್ನೆ ೧೨ ರೂ. ದಂಡ ವಿಧಿಸಲಾಯಿತು

ಹಳೇ ನೋಟುಗಳ ರದ್ದಿಗೆ ಕ್ರಮ

ಅಶೋಕ ಸ್ತಂಭದ ಚಿಹ್ನೆಗಳು ಹೊರಗಡೆ ಮತ್ತು ಕಾಗದದ ಒಳಗೆ (ವಾಟರ್ ಮಾರ್ಕ್) ಇರುವ ಸರ್ಕಾರದ ಕರೆನ್ಸಿ ಮತ್ತು ಬ್ಯಾಂಕು ನೋಟುಗಳನ್ನು ನೆನ್ನೆಯಿಂದ ೬ ತಿಂಗಳ ಅವಧಿ ಪರ್ಯಂತರ ಚಲಾವಣೆಗೆ ಅನರ್ಹಪಡಿಸಲಾಗುವುದೆಂದು ಗೊತ್ತಾಗಿದೆ. ಅವಧಿಯು ಮುಗಿದನಂತರ ಬ್ಯಾಂಕುಗಳಲ್ಲೂ, ಸರ್ಕಾರಿ ಖಜಾನೆಗಳಲ್ಲಿ ಅವನ್ನು ಸ್ವೀಕರಿಸಲಾಗುವುದಿಲ್ಲ. ಈ ನೋಟುಗಳನ್ನು ಹೊರಕ್ಕೆ ಕೊಡುವುದನ್ನು ಈಗ ರಲ್ಲೇ ನಿಲ್ಲಿಸಲಾಗಿತ್ತು. ಹಳೇ ನೋಟುಗಳನ್ನು ವಾಪಸು ಕೊಟ್ಟು ಅಶೋಕ ಸ್ತಂಭವಿರುವ ನೋಟುಗಳನ್ನು ಇಟ್ಟುಕೊಳ್ಳಬೇಕೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಬರ್ಮಾ ಮಹಾಚುನಾವಣೆಯಲ್ಲಿ ಸರ್ಕಾರಿ ಪಕ್ಷಕ್ಕೆ ಪ್ರಚಂಡ ಜಯ

ಬರ್ಮಾ ಪಾರ್ಲಿಮೆಂಟಿನ ೨೫೦ ಸದಸ್ಯರ ಸ್ಥಾನಗಳಿಗೆ ಮೊನ್ನೆ ಚುನಾವಣೆಗಳು ನಡೆದು ಪ್ರಧಾನಿ ಉ ನೂರವರ ಪಕ್ಷಕ್ಕೆ ಪ್ರಚಂಡ ಜಯ ಲಭಿಸಿದೆ. ರಾಷ್ಟ್ರೀಯ ಐಕ್ಯತಾ ರಂಗ ಮತ್ತು ಬರ್ಮಾ ರಾಷ್ಟ್ರೀಯ ಬ್ಲಾಕ್ ಪಕ್ಷಗಳ ಪ್ರತಿನಿಧಿಗಳಿಗೆ ಎಲ್ಲ ಕಡೆಯೂ ಸೋಲಾಗಿದೆ. ರಂಗೂನ್ ನಗರದ ೯ ಸ್ಥಾನಗಳಿಗೂ ನೂ ಪಕ್ಷದವರೇ ಬಂದಿರುವರು. ನೂರವರೂ, ಇತರ ೪ ಸಚಿವರೂ ಬಹುಮತದಿಂದ ಚುನಾಯಿತರಾಗಿರುವರು. ಅವರ ಪಕ್ಷದವರ ಪೈಕಿ ಈಗಾಗಲೇ ೩೩ ಮಂದಿ ಅವಿರೋಧವಾಗಿ ಆರಿಸಲ್ಪಟ್ಟು, ಇದುವರೆಗೆ ಪಕ್ಷಕ್ಕೆ ಒಟ್ಟು ೧೫ ಸ್ಥಾನಗಳು ಲಭಿಸಿವೆ.

ರಾಮಾಯಣದ ಅವಹೇಳನ ನಾಟಕಕ್ಕೆ ತಡೆ

ಬೆಂಗಳೂರು ೨೮

ಮದ್ರಾಸಿನ ಎಂ. ಆರ್. ರಾಧಾ ಮತ್ತು ಕಂಪೆನಿಯವರು ಇಲ್ಲಿನ ಬಿ. ಆರ್. ವಿ. ರಂಗಮಂದಿರದಲ್ಲಿ ಕಳೆದ ಒಂದು ವಾರದಿಂದ ಅಭಿನಯಿಸುತ್ತಿದ್ದ "ದೇವಾಸುರ ಹೋರಾಟ" ಎಂಬ ನಾಟಕವನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಪ್ರತಿಬಂಧಿಸಿರುತ್ತಾರೆ. ನಾಟಕವು ರಾಮಾಯಣದ ಅವಹೇಳನ ಮಾಡುವ ರೀತಿಯಲ್ಲಿದ್ದು, ಅದಕ್ಕೆ ಹೊಸ ಹೆಸರನ್ನು ಕೊಡಲಾಗಿದೆ. ಇದರಲ್ಲಿ ಶ್ರೀ ರಾಮನು ಬ್ರಾಹ್ಮಣನೆಂದೂ, ರಾವಣನು ಬ್ರಾಹ್ಮಣೇತರನೆಂದೂ ತೋರಿಸಿ ರಾಮನನ್ನು ಅವಹೇಳನ ಮಾಡಲಾಗಿದೆ

೩ ದಿನಗಳ ಹಿಂದೆ ನಾಟಕವು ನಡೆಯುತ್ತಿದ್ದಾಗ ಸ್ವಲ್ಪ ಗಲಾಟೆಯಾಗಿದ್ದಿತೆಂದು ಹೇಳಲಾಗಿದೆ. ಜಿಲ್ಲಾಧಿಕಾರಿಗಳ ಆಜ್ಞೆಯನ್ನು ಜಾರಿ ಮಾಡಲು ಹೋದಾಗ ನಾಟಕದ ಕಂಪೆನಿಯವರು ಅದರಂತೆ ನಡೆದುಕೊಳ್ಳಲು ಹಿಂತೆಗೆದರೆಂದೂ, ಆವರೆ ನಾಟಕವನ್ನು ಪೊಲೀಸರು ಮಧ್ಯದಲ್ಲೇ ನಿಲ್ಲಿಸಿದರೆಂದೂ ತಿಳಿದುಬಂದಿದೆ. ರಂಗಮಂದಿರದಲ್ಲಿ ಪೊಲೀಸ ಕಾವಲನ್ನು ಹಾಕಲಾಗಿದೆ.

ಹೆಚ್. ಸುಂದರಂ ಅಯ್ಯರ್‌ರವರ ನಿಧನ

ಶಿವಮೊಗ್ಗದ ಸುಪ್ರಸಿದ್ಧ ವಾಣಿಜ್ಯೋದ್ಯಮಿಗಳೂ, ಶೃಂಗೇರಿ ಮಠದ ಮುಖ್ಯ ಶಿಷ್ಯರೂ, ಆಸ್ತಿಕ ಶಿರೋಮಣಿಗಳೂ ಆಗಿದ್ದ ಶ್ರೀ ಹೆಚ್. ಸುಂದರಂ ಅಯ್ಯರ್‌ರವರು ಮೊನ್ನೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಕೆಲವು ದಿನಗಳಿಂದಲೂ ಇವರು ವ್ಯಾಧಿಗ್ರಸ್ತರಾಗಿ ಚಿಕಿತ್ಸೆ ಹೊಂದುತ್ತಿದ್ದರು. ಶೃಂಗೇರಿಯಲ್ಲಿ ನಡೆದ ಮಹಾ ರುದ್ರಯಾಗದ ವ್ಯವಸ್ಥೆಯನ್ನು ಇವರು ಬಹಳ ಯಶಸ್ವಿಯಾಗಿ ನಿರ್ವಹಿಸಿದ್ದರು. ಅನೇಕ ದಾನ ಧರ್ಮಗಳನ್ನೂ ಮಾಡಿ ಧರ್ಮಾಭಿಮಾನಿಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಇವರ ನಿಧನದಿಂದ ಆಸ್ತಿಕ ಮಹಾಜನಗಳಿಗೆ ಅಪಾರ ನಷ್ಟವುಂಟಾಗಿರುತ್ತದೆ. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸಿ, ಬಂಧುವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಸಂತಾಪವನ್ನು ಸೂಚಿಸುತ್ತೇವೆ.

ಮೂರು ಭಾಷಾ ಪ್ರದೇಶಗಳಾಗಿ ಹೈದರಾಬಾದಿನ ವಿಂಗಡನೆ

ಹೈದರಾಬಾದು ಸಂಸ್ಥಾನವನ್ನು ಬರುವ ಅಕ್ಟೋಬರ್ ತಿಂಗಳೊಳಗೆ ವಿಭಜಿಸುವ ಮುಂಚಿತವಾಗಿ ಮರಾಠವಾಡ, ತೆಲಂಗಾಣ ಮತ್ತು ಕರ್ನಾಟಕ ಪ್ರದೇಶಗಳ ಅಭಿವೃದ್ಧಿ ಮತ್ತು ಯೋಜನಾ ಮಂಡಲಗಳನ್ನು ರಚಿಸಲು ಆಲೋಚಿಸಲಾಗಿರುವುದೆಂದು ಹೈದರಾಬಾದಿನ ಮುಖ್ಯ ಮಂತ್ರಿ ಬಿ. ರಾಮಕೃಷ್ಣರಾಯರು ತಿಳಿಸಿರುತ್ತಾರೆ. ಮೂರು ಪ್ರದೇಶಗಳಲ್ಲೂ ಜಿಲ್ಲಾ, ತಾಲ್ಲೂಕು ಮತ್ತು ಹಳ್ಳಿವಾರಾಗಿ ಅಭಿವೃದ್ಧಿಗೆ ತರಲು ಯೋಜನೆಗಳನ್ನು ಸಿದ್ಧಗೊಳಿಸಲಾಗುತ್ತಿದೆ.

ಬ್ರಿಟನ್ನಿನಲ್ಲಿ ರಷ್ಯಾ ನಾಯಕರ ಕೊಲೆಯ ಸಿತೂರಿ ಪತ್ತೆ

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕಾಯಕ ಕ್ರುಶ್ಚೇವರು ಬ್ರಿಟನ್ನಿನಲ್ಲಿ ಪ್ರವಾಸ ಮಾಡುತ್ತಿದ್ದಾಗ, ಅವರನ್ನು ಕೊಲೆ ಮಾಡಬೇಕೆಂದು ಹಲವರು ಒಳಸಂಚು ನಡೆಸಿದ್ದರೆಂಬುದು ಇಂಗ್ಲೆಂಡಿನ ಸ್ಕಾಟ್ಲೆಂಡ್ ಯಾರ್ಡ್ ಪೊಲೀಸರಿಗೆ ತಿಳಿದು ಬಂದಿತ್ತೆಂದು ಲಂಡನ್ನಿನ ಡೈಲಿ ಎಕ್ಸ್‌ಪ್ರೆಸ್ ಪತ್ರಿಕೆಯು ಪ್ರಕಟಿಸಿದೆ. ಯೂರೋಪಿನಲ್ಲಿ ಈ ಸಂಚು ನಡೆಯಿತೆಂದೂ, ಪತ್ತೇದಾರರುಗಳ ವೇಷ ತಾಳಿ ಕೆಲವರ ಸಾಧಿಸಲು ಯೋಚಿಸಲಾಗಿತ್ತೆಂದೂ ತಿಳಿದುಬಂದಿದೆ

ಕೊಲೆಯ ಬಗ್ಗೆ ವಿವರಗಳನ್ನು ನಿರ್ಧರಿಸಲಾದ ನಂತರ ಸ್ಕಾಟ್ಲೆಂಡ್ ಯಾರ್ಡಿಗೆ ಯೂರೋಪಿನಿಂದ ಸುದ್ದಿ ಬಂದಿತೆಂದೂ, ರಷ್ಯಾ ನಾಯಕರಿಬ್ಬರೂ ತಮ್ಮ ದೇಶವನ್ನು ಬಿಟ್ಟಮೇಲೆ ಸಂಚು ನಡೆಯುತ್ತದೆಂದೂ ವರದಿಯಾಗಿದೆ. ಬ್ರಿಟನ್ನಿನ ಅಧಿಕಾರಿಗಳು ತಲುಪಿದ ಕೂಡಲೇ ನಾಯಕರಿಬ್ಬರ ರಕ್ಷಣೆ ಬಗ್ಗೆ ಕ್ರಮವನ್ನು ತುರಾತ್ವರೆ ಜಗಿಗೊಳಿಸಲಾಯಿತೆಂದು ಹೇಳಲಾಗಿದೆ.

ಹೈದರಾಬಾದಿನಲ್ಲಿ ೪ ಸರ್ಕಾರಗಳ ಶ್ರೇಷ್ಠ ಕಾರ್ಯದರ್ಶಿಗಳ ಸಭೆ

ಸಂಸ್ಥಾನಗಳ ಪುನರ್ರಚನೆಗೆ ಸಂಬಂಧಪಟ್ಟಂತೆ ಹಲವು ಸಮಸ್ಯೆಗಳನ್ನು ಕುರಿತು ಪರ್ಯಾಲೋಚನೆ ನಡೆಸಲು ಸಂಸ್ಥಾನದ ಶ್ರೇಷ್ಠ ಕಾರ್ಯದರ್ಶಿ ಶ್ರೀ ಎನ್. ಪುಟ್ಟರಂಗಸ್ವಾಮಿಯವರು ಸಂಸ್ಥಾನ ಪುನರ್ವಿಂಗಡಣಾ ಇಲಾಖಾ ಕಾರ್ಯದರ್ಶಿ ಶ್ರೀ ಎಸ್. ಮುನಿಸಂಜಪ್ಪನವರೊಡನೆ ನಾಳೆ ಹೈದರಾಬಾದಿಗೆ ಪ್ರಯಾಣ ಮಾಡುವರು. ಅಲ್ಲಿ ಹೈದರಾಬಾದು, ಆಂಧ್ರ ಮತ್ತು ಬೊಂಬಾಯಿ ಸರ್ಕಾರಗಳ ಶ್ರೇಷ್ಠ ಕಾರ್ಯದರ್ಶಿಗಳೊಡನೆ ಇವರು ಸರ್ಕಾರಿ ನೌಕರರ ಸಂಬಳದ ಮಟ್ಟವನ್ನು ಕುರಿತು ಚರ್ಚಿಸುವರು. ಮದ್ರಾಸು, ಬೊಂಬಾಯಿ, ಮೈಸೂರು ಮತ್ತು ಹೈದರಾಬಾದುಗಳ ನಾನ್‌ಗೆಜೆಟೆಡ್ ನೌಕರರ ಸಂಬಳಗಳಲ್ಲಿ ಅಂತರವಿದೆ.

ಬೊಂಬಾಯಿ ಬಳಿ ಅಣು ಪ್ರತಿಕ್ರಿಯಾ ಕೇಂದ್ರದ ಸ್ಥಾಪನೆ

ಕೆನಡವು ಭಾರತಕ್ಕೆ ಕೊಡಲಿರುವ ಅಣು ಪ್ರತಿಕ್ರಿಯಾ ಕೇಂದ್ರವನ್ನು ಬೊಂಬಾಯಿ ಬಳಿ ಟ್ರಾಂಬೆಯಲ್ಲಿ ನಿರ್ಮಿಸಲಾಗುವುದು. ಹೊಸದಾಗಿ ತೋಡಲು ಮಾಡಿದ ೧೬೫ ಅಡಿ ಎತ್ತರ ಮತ್ತು ೧೨೦ ಅಡಿ ವ್ಯಾಸವುಳ್ಳ ಉಕ್ಕಿನ ಮನೆಯಲ್ಲಿ ಅದನ್ನು ಸ್ಥಾಪಿಸಲಾಗುವುದು.

ಬೆಂಗಳೂರು ರೇಡಿಯೋ ಸಲಹಾ ಸಮಿತಿ ಸದಸ್ಯರು

ಬೆಂಗಳೂರಿನಲ್ಲಿರುವ ಆಲ್ ಇಂಡಿಯಾ ರೇಡಿಯೋದ ಸಲಹಾ ಸಮಿತಿ ಸದಸ್ಯರಾಗಿ ಶ್ರೀಗಳಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಆರ್. ಕೆ. ನಾರಾಯಣ್, ಎಂ. ವಿ. ರಾಮರಾವ್, ಜಿ. ವೆಂಕಟಾಚಲಂ, ಹೆಚ್. ಸಿ. ದಾಸಪ್ಪ ಮತ್ತು ಸಂಗೀತ ರತ್ನ ಟಿ. ಚೌಡಯ್ಯನವರನ್ನು ನೇಮಿಸಲಾಗಿದೆ.

ಅಕ್ಟ್ರಾಯ್ ತೆರಿಗೆ ತಪ್ಪಿಸಿಕೊಳ್ಳುವ ಯತ್ನಕ್ಕಾಗಿ ದಂಡ

ಮೈಸೂರು ೨೮

ನಗರದ ಚಿಕ್ಕ ಗಡಿಯಾರದ ಬೀದಿಯ ಲಾಲ್ ಸ್ಟೋರ್ಸ್ ಎಂಬ ಜವಳಿ ಅಂಗಡಿಯ ಮಾಲೀಕರಾದ ಶ್ರೀ ಲೀಲಾರಾಂ ಎಂಬುವರಿಗೆ ಬೊಂಬಾಯಿನಿಂದ ಎರಡು ಪಿಂಡಿ ರೇಷ್ಮೆ ಜವಳಿಗಳು ಬಂದಿದ್ದವೆಂದೂ, ಅವುಗಳ ಬಾಬ್ತು ಆಕ್ಟ್ರಾಯ್ ಸುಂಕ ಕೊಡಲು ಎರಡು ಸಾವಿರ ರೂ. ಗಳ ಒಂದು ಇನ್‌ವಾಯ್ಸನ್ನು ಮಾತ್ರ ಹಾಜರ್ಪಡಿಸಿದಾಗ ಆಕ್ಟ್ರಾಯ್ ಸೂಪರಿಂಟೆಂಡೆಂಟರಿಗೆ ಅನುಮಾನ ಬಂದು ಅವರು ಪಿಂಡಿಗಳನ್ನು ಒಡೆಸಲಾಗಿ ಅದರಲ್ಲಿ ೬,೦೦೦ ರೂ. ಗಳ ಸರಕು ಇದ್ದುದು ಪತ್ತೆಯಾಯಿತೆಂದೂ, ಅದುದರಿಂದ ಅವರಿಗೆ ಸುಂಕದ ೧೦ರಷ್ಟು ದಂಡವನ್ನು ವಿಧಿಸಿ ರೂ ೮೩೩-೧೩-೦ ಗಳನ್ನು ವಸೂಲ್ಮಾಡಿದರೆಂದೂ ತಿಳಿದುಬಂದಿದೆ. ಆ ಸರಕುಗಳ ಮೇಲೆ ಆಕ್ಟ್ರಾಯ್ ಸುಂಕವು ರೂ. ೮೩-೧೩-೦ ಗಳಾಗುತ್ತಿತ್ತು.

ಇವನ್ನೆಲ್ಲ ನಗರ ವರ್ತಕರು ಆಕ್ಟ್ರಾಯ್ ಸೂಪರಿಂಟೆಂಡೆಂಟರು ಮತ್ತು ಗುಮಾಸ್ತರ ಮೇಲೆ ಪ್ರಭಾವವನ್ನುಂಟುಮಾಡಲೆತ್ನಿಸುವುದಕ್ಕಾಗಿ ಅವರ ಮೇಲೆ ಕ್ರಮ ಜರುಗಿಸುವ ಏರ್ಪಾಡು ನಡೆಯುತ್ತಿದೆಯೆಂದೂ ಹೇಳಲಾಗಿದೆ.

ರಾಮೋತ್ಸವ ಸಂಗೀತ

ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಆರ್ಯವೈಶ್ಯ ಬಾಲಕ ಭಕ್ತ ಮಂಡಲಿಯ ಶ್ರೀ ರಾಮಮಂದಿರದಲ್ಲಿ ಈ ಸಂಜೆ ೭ ಗಂಟೆಗೆ ಕುಮಾರಿ ರಾಜಲಕ್ಷ್ಮಮ್ಮನವರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ನಡೆಯುವುದು.

ಕಾಳಿಯ ರಸ್ತೆಯಲ್ಲಿರುವ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ಈ ರಾತ್ರಿ ೭-೩೦ಕ್ಕೆ ವಿ|| ಆರ್. ವಸಂತರವರ ಗಾಯನವೂ, ನಾಳೆ ವಿ|| ಎನ್. ನಂಜುಂಡಸ್ವಾಮಿಯವರ ಗಾಯನವೂ ವಿ|| ಕೃಷ್ಣಮೂರ್ತಿಯವರ ಪಿಟೀಲು ಮತ್ತು ವಿ|| ಹೆಚ್. ಟಿ. ನಾಗಣ್ಣನವರ ಮೃದಂಗದೊಡನೆ ಏರ್ಪಾಡಾಗಿವೆ.

ದ್ವಿತೀಯ ಯೋಜನೆಗೆ ಒಟ್ಟು ೪,೧೦೦ ಕೋಟಿ ರೂ.

ರಕ್ಷಣೆ, ಸಂಚಾರ ಮುಂತಾದುವುಗಳಿಗೆ ೩೦೦ ಕೋಟಿ ರೂ. ಹೆಚ್ಚು ವಿನಿಯೋಗ

ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಒದಗಿಸಬೇಕೆಂದು ಗೊತ್ತುಪಡಿಸಲಾಗಿದ್ದ ೪,೮೦೦ ಕೋಟಿ ರೂ. ಮೊತ್ತವನ್ನು ಇನ್ನೂ ೩೦೦ ಕೋಟಿಗಳಷ್ಟು ಹೆಚ್ಚಿಸಿ, ಸಾರ್ವಜನಿಕ ಕ್ಷೇತ್ರದಲ್ಲಿ ಒಟ್ಟು ೪,೧೦೦ ಕೋಟಿ ರೂ. ವಿನಿಯೋಗಿಸಲು ಭಾರತ ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ. ನೂತನ ಬದಲಾವಣೆ ಪ್ರಕಾರ ರಕ್ಷಣೆ ಮತ್ತು ಸಂಚಾರ ಬಾಬುಗಳಿಗೆ ತಲಾ ೧೦೦ ಕೋಟಿ ರೂ. ಗಳಷ್ಟು ಹೆಚ್ಚಾಗಿ ಒದಗಿಸಲಾಗುವುದೆಂದೂ, ಉಳಿದ ೧೦೦ ಕೋಟಿ ರೂ. ಗಳನ್ನು ಇತರ ಕಾರ್ಯಗಳಿಗೆ ವಿನಿಯೋಗಿಸಲಾಗುವುದೆಂದೂ ಗೊತ್ತಾಗಿದೆ.

ವಾ ರ ಭ ವಿ ಷ್ಯ

ತಾ॥ ೨೯-೪-೫೬ರಿಂದ ೬-೫-೫೬ರ ವರೆಗೆ

ಮೇಷ :—ಆರೋಗ್ಯ ಉತ್ತಮ. ಆರ್ಥಿಕ ಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಸಾಮಾನ್ಯ ಫಲಗಳು. ಅಪ್ತರಿಂದ ನೆರವು.

ವೃಷಭ :—ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ನಿರುತ್ಸಾಹ. ಹೊಸ ಉದ್ಯಮಗಳಿಗೆ ಕೈಹಾಕಬೇಡಿ. ಶುಭ ಕಾರ್ಯಗಳು ಜರುಗುವುವು.

ಮಿಥುನ :—ಆರೋಗ್ಯ ಉತ್ತಮ. ಆರ್ಥಿಕ ಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ಮಂಗಳ ಕಾರ್ಯಗಳು ಜರುಗುವುವು. ನೌಕರಿಯಲ್ಲಿ ಪ್ರೋತ್ಸಾಹ. ಆಪ್ತರಿಂದ ಸಹಾಯ.

ಕರ್ಕ :— ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ಉದ್ಯೋಗದಲ್ಲಿ ಪ್ರಶಂಸೆ. ವಿದ್ವಜ್ಜನರ ಪರಿಚಯ.

ಸಿಂಹ:— ಆರೋಗ್ಯ ಉತ್ತಮವಾಗಿರುವುದು. ಆರ್ಥಿಕ ಪರಿಸ್ಥಿತಿ ತೃಪ್ತಿದಾಯಕ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ.

ಕನ್ಯಾ :—ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ಕಿರುಕುಳ. ಪ್ರಯಾಣದಲ್ಲಿ ತೊಂದರೆ.

ತುಲಾ :—ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಶುಭ ಕಾರ್ಯಗಳು ಜರುಗುವುವು. ವ್ಯಾಪಾರ ವ್ಯವಹಾರಗಳಲ್ಲಿ ಅಪೇಕ್ಷಿತ ಫಲಗಳು. ಉದ್ಯೋಗದಲ್ಲಿ ಉತ್ಸಾಹ.

ವೃಶ್ಚಿಕ :—ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಉತ್ತಮವಾಗಿರುವುದು. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರ ವ್ಯವಹಾರಗಳಲ್ಲಿ ಅಲ್ಪ ಪ್ರಗತಿ. ಉದ್ಯೋಗದಲ್ಲಿ ಪ್ರೋತ್ಸಾಹ.

ಧನು :—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ. ಶುಭ ಕಾರ್ಯಗಳು ಜರುಗುವುವು.

ಮಕರ :—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಅಪೇಕ್ಷಿತ ಫಲಗಳು. ಉದ್ಯೋಗದಲ್ಲಿ ಯಶಸ್ಸು. ಆಪ್ತರಿಂದ ವಂಚನೆ.

ಕುಂಭ :—ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ. ಆಪ್ತರಿಂದ ನೆರವು.

ಮೀನ:—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ನೌಕರಿಯಲ್ಲಿ ಪ್ರಶಂಸೆ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಆಪ್ತರ ಭೇಟಿ

ತಿರುವಾಂಕೂರಿನಲ್ಲಿ ಜಂಟಿ ಸಲಹೆಗಾರರ ನೇಮಕ

ತಿರುವಾಂಕೂರು-ಕೊಚ್ಚಿಯ ಆಡಳಿತ ನಿರ್ವಹಿಸುವುದರಲ್ಲಿ ರಾಜಪ್ರಮುಖರಿಗೆ ಸಲಹೆಗಾರರಾಗಿರುವ ಪಿ. ಎಸ್. ರಾಯರ ಕೆಲಸವು ಹೆಚ್ಚಾಗಿರುವುದರಿಂದ ಅವರಿಗೆ ಸಹಾಯ ನೀಡಲು ಜಂಟಿ ಸಲಹೆಗಾರರನ್ನಾಗಿ ಯೋಜನಾ ಮಂಡಲಿಯ ಅಧಿಕಾರಿಗಳಲ್ಲೊಬ್ಬರಾದ ಕೆ. ಎಸ್. ಸುಬ್ರಹ್ಮಣ್ಯಂರವರನ್ನು ನೇಮಿಸಲಾಗಿದೆ.

ಸಿಂಹಳದಲ್ಲಿ ೬೦೦ ಖೈದಿಗಳ ಸಾಮೂಹಿಕ ಬಿಡುಗಡೆ

ಸಿಂಹಳದ ಸರ್ಕಾರದವರು ಬರುವ ತಿಂಗಳು ಬುದ್ಧ ಜಯಂತಿಯ ಅಂಗಮಹೋತ್ಸವದ ಸಮಯದಲ್ಲಿ ೬೦೦ ಖೈದಿಗಳಿಗೆ ರಾಜಕ್ಷಮೆಯಿತ್ತು ಅವರನ್ನು ಬಿಡುಗಡೆ ಮಾಡಲಿರುವರೆಂದೂ, ಈ ಬಗ್ಗೆ ಬರುವ ವಾರ ಅಸ್ಥೆರು ನಿರ್ಧಾರವಾಗಲಿರುವುದಾಗಿಯೂ ವರದಿಯಾಗಿದೆ.

ರಾಮೋತ್ಸವ ಕಾರ್ಯಕ್ರಮಗಳು

ಮೈಸೂರು ೨೮

ರಾಜಾರಾಂ ಒಗ್ಗರಣೆ ಬೀದಿ ಶ್ರೀ ರಾಮಸೇವಾ ಸಮಿತಿಯವರು ನಾಳೆ ಸಂಜೆ ಹನುಮಂತೋತ್ಸವ ಮತ್ತು ರಾಮೋತ್ಸವದ ಅಂಗವಾಗಿ ಶ್ರೀ ಜಿ. ಆರ್. ಮಾಸಪ್ಪನವರ ಸಂಗೀತವನ್ನು ವಿ॥ ಬಿ. ಎಸ್. ಶಿವರಾಮಯ್ಯನವರ ಪಿಟೀಲು ಮತ್ತು ವಿ॥ ಡಿ. ರಾಜಪ್ಪನವರ ಮೃದಂಗದೊಡನೆ ಏರ್ಪಡಿಸಿರುವರು.

ಪೋಲೀಸರ ಮೇಲೆ ಕೈ ಮಾಡಿದವರಿಗೆ ಶಿಕ್ಷೆ

ಮೈಸೂರು ತಾಲ್ಲೂಕು ಜಯಪುರದ ಸಿದ್ದ ಉರುಫ್ ಕರಿಕೆ, ಕೆಂಪ, ಪುಟ್ಟಸಿದ್ದ ಮತ್ತು ಸಣ್ಣ ಎಂಬುವರು ಕಳೆದ ಬುಧವಾರ ಅಲ್ಲಿ ಕರ್ತವ್ಯದ ಕೆಲಸ ನಡೆಸುತ್ತಿದ್ದ ಪೋಲೀಸರ ಮೇಲೆ ಕೈ ಮಾಡಿದರೆಂದು ತಾಲ್ಲೂಕು ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಸಿದ್ದನಿಗೆ ೫೦ ರೂ., ಕೆಂಪ ಮತ್ತು ಸಣ್ಣನಿಗೆ ತಲಾ ೧೫ ರೂ ಮತ್ತು ಪುಟ್ಟಸಿದ್ದನಿಗೆ ೧೦ ರೂ. ಜುಲ್ಮಾನೆಯನ್ನು ನಗರದ ದ್ವಿತೀಯ ನ್ಯಾಯಾಧೀಶರು ನಿನ್ನೆ ವಿಧಿಸಿದರು.

ನ್ಯಾಯಾಧೀಶರುಗಳ ವರ್ಗಾವಣೆ

ನಂಜನಗೂಡು ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿರುವ ಶ್ರೀ ಎಲ್. ಲಿಂಗೇಗೌಡರ ಸ್ಥಾನಕ್ಕೆ ಹೊಸದಾಗಿ ನೇಮಕಗೊಂಡಿರುವ ಶ್ರೀ ಕೆ. ಎಂ. ಶಿವಪ್ಪನವರನ್ನು ಮತ್ತು ಮಂಡ್ಯದ ಮುನ್ಸೀಫ್ ಆಗಿರುವ ಶ್ರೀ ಎಂ. ಎನ್. ರಾಮಸ್ವಾಮಯ್ಯನವರ ಸ್ಥಾನದಲ್ಲಿ ತರೀಕೆರೆಯ ಮುನ್ಸೀಫ್ ಮ್ಯಾಜಿಸ್ಟ್ರೇಟ್ ಶ್ರೀ ಕೆ. ಎಸ್. ವೀರಭದ್ರಪ್ಪನವರನ್ನು ನೇಮಿಸಲಾಗಿದೆ ಎಂದು ತಿಳಿದು ಬಂದಿದೆ.

ಬಳ್ಳಾರಿ ಬಗ್ಗೆ ಪಾರ್ಲಿಮೆಂಟಿಗೆ ಆಂಧ್ರರ ಅರ್ಜಿ

ಬಳ್ಳಾರಿ ತಾಲ್ಲೂಕಿನ ಭಾಗವನ್ನು ಆಂಧ್ರಕ್ಕೆ ಸೇರಿಸಬೇಕೆಂದು ಪಾರ್ಲಿಮೆಂಟಿಗೆ ಆಂಧ್ರ ಶಾಸನ ಸಭೆಯ ೬೦ ಸದಸ್ಯರು ರುಜು ಮಾಡಿರುವ ಅರ್ಜಿಯನ್ನು ಕಳುಹಿಸಲಾಗಿದೆ. ಆಂಧ್ರದ ಪ್ರತಿನಿಧಿ ಎಂ. ಗಂಗಪ್ಪ ನವರು ಮೈಸೂರು ಶಾಸನ ಸಭೆಗೆ ರಾಜೀನಾಮೆ ಕೊಟ್ಟು ಹೋಗಿದ್ದರಿಂದ ಪಾರ್ಲಿಮೆಂಟು ಅವರ ನಿರ್ಧಾರ ಪರಿಶೀಲಿಸುವ ಮುಂಚೆ ಬಳ್ಳಾರಿ ತಾಲ್ಲೂಕಿನಲ್ಲಿ ಜನಾಭಿಪ್ರಾಯ ಸಂಗ್ರಹಿಸಬೇಕೆಂದು ಅರ್ಜಿಯಲ್ಲಿ ಒತ್ತಾಯಪಡಿಸಲಾಗಿದೆ. ಮೈಸೂರು ಶಾಸನ ಸಭೆಯ ಕೆಲವು ಸದಸ್ಯರು ಸಹ ಅರ್ಜಿಯನ್ನು ಕಳುಹಿಸಿ, ಕೋಲಾರ, ತಾಲ್ಲೂಕು ಮತ್ತು ಅಕ್ಕಲಕೋಟೆಗಳನ್ನು ಕರ್ನಾಟಕದಲ್ಲಿ ಸೇರಿಸಬೇಕೆಂದು ಒತ್ತಾಯಪಡಿಸಿರುತ್ತಾರೆ

ಹಾಸಗೀ ಜೀವನದಲ್ಲಿ ಪಂಚಶೀಲ

ಅಹಮದಾಬಾದಿನ ಬಳಿ ಸೋಲಾ ಎಂಬ ಹಳ್ಳಿಯಲ್ಲಿ ಮಾತಾಧಿಕಾರಿಗಳೆಂಬ ಪ್ರಾಯಃ ನಿವಾಸಿಸ್ಥಳದ ಜನರು ಸಮ್ಮೇಳನ ನಡೆಸಿ ತಮ್ಮ ನಿತ್ಯ ಜೀವನದಲ್ಲಿ ಪಂಚಶೀಲಗಳನ್ನು ಅನುಸರಿಸಲು ಪ್ರತಿಜ್ಞೆ ಮಾಡಿರುತ್ತಾರೆ. ಹಿಂಸೆ ಮಾಡದಿರುವುದು, ಕದಿಯದಿರುವುದು, ವ್ಯಭಿಚಾರ ನಡೆಸದಿರುವುದು, ಕುಡಿಯದಿರುವುದು ಮತ್ತು ಚಿಕ್ಕ ಜೇಡರದಿರುವುದು—ಈ ಐದು ಕಾರ್ಯಗಳ ಬಗ್ಗೆ ಅವರು ಪ್ರತಿಜ್ಞೆ ತೆಗೆದುಕೊಂಡಿರುತ್ತಾರೆ. ಸಮ್ಮೇಳನದಲ್ಲಿ ೬೦೦ ಜನರು ಸೇರಿದ್ದರು. ಅಲ್ಲಿ ಅವರುಗಳ ಗುರುಗಳಾದವರು ಮೇಲ್ಕಂಡ ತತ್ವಗಳನ್ನು ಪ್ರತಿಪಾದಿಸಿದರು.

ಮೈಸೂರು ಪೇಟೆ ಧಾರಣೆ

	ರೂ ದಿಂದ	ರೂ ವರೆಗೆ
ಕಡಲೆಕಾಯಿ	೧೭ ೨ ೦	
ಹುಚ್ಚೆಳ್ಳು	೪೬ ೦ ೦	
ಅರಳು	೩೦ ೧೨ ೦	೪೦ ೦ ೦
ಹೊಂಗೆಬೀಜ	೨೬ ೨ ೦	೨೬ ೧೪ ೦
ಹರಳುಬೀಜ	೪ ೦ ೦	೪ ೫ ೦
ಹುರುಳಿ	೨೬ ೧೨ ೦	೨೮ ೨ ೦
ಕಡಲೆ	೩೫ ೧೨ ೦	
ಸೀಗೆಕಾಯಿ	೮ ೨ ೦	
ರಾಗಿಹಿಟ್ಟು	೫ ೨ ೦	೫ ೧೫ ೦
ಮೆಣಸಿನಕಾಯಿ	೧೧ ೦ ೦	೨೧ ೮ ೦
ತೆಂಗಿನಕಾಯಿ ೧೧೦೦	೧೧೫ ೦ ೦	೧೪೦ ೦ ೦

"ಪ್ರ ಜಾ ಸ ರ್ಕಾ ರ"

ಡಾ॥ ಎಂ. ವಿ. ಕೃಷ್ಣರಾಯರ ನೂತನ ಗ್ರಂಥ

ಮಹಾರಾಜಾ ಕಾಲೇಜಿನ ಇತಿಹಾಸ ಶಾಖಾ ಪ್ರಾಧ್ಯಾಪಕರಾದ ಡಾ॥ ಎಂ. ವಿ. ಕೃಷ್ಣರಾಯರಿಂದ ರಚಿಸಲ್ಪಟ್ಟ ಮೇಲ್ಕಂಡ ಗ್ರಂಥ ಕನ್ನಡ ಲೋಕವನ್ನು ಕೃತಜ್ಞತೆಯಿಂದ ಪ್ರಕಾಶಿಸಿದೆ. ರಾಜಕೀಯ ವಿಜ್ಞಾನವನ್ನು ಶಾಸ್ತ್ರೀಯವಾದ ರೀತಿಯಲ್ಲಿ ವಿವೇಚಿಸಿರುವ ಈ ಪುಸ್ತಕವು ಕನ್ನಡ ಭಾಷೆಯ ಸಂಪತ್ತನ್ನು ಹೆಚ್ಚಿಸುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಮುನ್ನುಡಿಯಲ್ಲಿ ಶ್ರೀ ಕುವೆಂಪುರವರು ಸೂಚಿಸಿರುವಂತೆ ಕಾಲೇಜುಗಳಲ್ಲಿ ಮಾಧ್ಯಮವನ್ನು ಜಾರಿಗೆ ತಂದಾಗ ಬೇಕಾಗಬಹುದಾದ ಕನ್ನಡ ಪಠ್ಯ ಪುಸ್ತಕಗಳ ಅವಶ್ಯಕತೆಯನ್ನು ಈ ಪುಸ್ತಕವು ಪೂರೈಸುವುದು.

ಲೇಖಕರು ಪ್ರಥಮವಾಗಿ ಪ್ರಜಾಪ್ರಭುತ್ವದ ತತ್ವ, ಸರ್ಕಾರ ಮತ್ತು ರಾಷ್ಟ್ರಗಳ ಭಾವನೆಯ ಇತಿಹಾಸವನ್ನೂ ಮತ್ತು ಅವುಗಳ ಸ್ವರೂಪವನ್ನೂ ನಿರೂಪಿಸಿದ್ದಾರೆ. ಅನಂತರ ವಿಶ್ವದ ನಾನಾ ರಾಷ್ಟ್ರಗಳ ಕಾರ್ಯರೂಪವನ್ನೂ ಸೂಕ್ಷ್ಮ ಹಿನ್ನೆಲೆಗಳೊಡನೆ ಚರ್ಚಿಸಿದ್ದಾರೆ. ಕೊನೆಯದಾಗಿ ರಾಷ್ಟ್ರದ ಶಾಸನಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳೇ ಅಲ್ಲದೆ ಮತದಾರರಿಗೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಸ್ಥೂಲವಾಗಿ ವಿವರಿಸಿದ್ದಾರೆ.

ಸರಳವಾದ ಶೈಲಿಯಿಂದ ಕೂಡಿದ ಈ ಪುಸ್ತಕವು ಕೇವಲ ಕಾಲೇಜು ವಿದ್ಯಾರ್ಥಿಗಳೇ ಅಲ್ಲದೆ ಸಾಮಾನ್ಯ ಓದುಗರಿಗೂ ಬಹಳ ಉಪಯುಕ್ತವಾಗಿದೆ. ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ ೪೦೦ ಪುಟಗಳ ಈ ಪುಸ್ತಕಕ್ಕೆ ೧॥ ರೂ. ಬೆಲೆ. ಇದರ ಪ್ರಯೋಜನವನ್ನು ಕನ್ನಡಿಗರೆಲ್ಲರೂ ಪಡೆಯುವರೆಂದು ಹಾರೈಸುತ್ತೇವೆ

ಸಿಂಹಳದ ರೇಡಿಯೊವಿನಲ್ಲಿ ಇಂಗ್ಲಿಷ್ ಪ್ರಸಾರಕ್ಕೆ ನಿಷೇಧ

ಸಿಂಹಳದ ಸರ್ಕಾರದವರು ಕೊಲಂಬೊ ರೇಡಿಯೋವಿನಲ್ಲಿ ಇಂಗ್ಲಿಷ್ ಭಾಷಾ ಪ್ರಸಾರವನ್ನು ಬರುವ ವರ್ಷದಿಂದ ನಿಲ್ಲಿಸುವರೆಂದು ವರದಿಯಾಗಿದೆ. ಬರುವ ತಿಂಗಳಿಂದ ಈ ಪ್ರಸಾರದ ಕಾಲವನ್ನು ೪ ಗಂಟೆಯಿಂದ ೨ ಗಂಟೆಗೆ ಇಳಿಸಲಾಗುವುದು

ಬ್ಯಾಂಕುಗಳ ರಾಷ್ಟ್ರೀಕರಣವಿಲ್ಲ

ದೇಶದಲ್ಲಿರುವ ಬ್ಯಾಂಕುಗಳನ್ನು ತಾತ್ವಿಕ ದೃಷ್ಟಿಯಿಂದ ರಾಷ್ಟ್ರೀಕರಣ ಮಾಡುವುದಿಲ್ಲವೆಂದು ನಿನ್ನೆ ಲೋಕ ಸಭೆಯಲ್ಲಿ ರೆವಿನ್ಯೂ ಮಂತ್ರಿ ಅರುಣಚಂದ್ರ ಗುಹಾರವರು ತಿಳಿಸಿದರು. ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಈ ಬಗ್ಗೆ ತಂದ ನಿರ್ಣಯಕ್ಕೆ ಮೇಲ್ಕಂಡ ಉತ್ತರವಿತ್ತ ಮೇಲೆ ನಿರ್ಣಯವು ಬಹುಮತದಿಂದ ಬಿದ್ದು ಹೋಯಿತು.

ನಂಜನಗೂಡು ಹಿಂದಿ ಪ್ರಚಾರ ಸಭೆಯ ಫಲಿತಾಂಶ

ನಂಜನಗೂಡಿನ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ಹಿಂದಿ ಪರೀಕ್ಷೆಗಳಿಗೆ ಕಳೆದ ಫೆಬ್ರವರಿಯಲ್ಲಿ ಕುಳಿತ ವಿದ್ಯಾರ್ಥಿಗಳ ಫಲಿತಾಂಶಗಳು ಈ ರೀತಿ ಇವೆ:— ಪ್ರಾರಂಭ ೪ ವಿದ್ಯಾರ್ಥಿಗಳ ಪೈಕಿ ಇಬ್ಬರು, ಪ್ರವೇಶಿಕ ೪ ರಲ್ಲಿ ೩, ರಾಷ್ಟ್ರಭಾಷೆಯಲ್ಲಿ ೧೩ ಕ್ಕೆ ೧೦, ಮಾಧ್ಯಮದಲ್ಲಿ ೧೩ ಕ್ಕೆ ೬, ಪ್ರಥಮಾದಲ್ಲಿ ೧೧ ಕ್ಕೆ ೯ (ಆ ಪೈಕಿ ಇಬ್ಬರು ಪ್ರಥಮ ದರ್ಜೆ) ಉತ್ತೀರ್ಣರಾಗಿರುವರು. ಶೇಕಡ ೭೦ರಷ್ಟು ಫಲಿತಾಂಶಗಳು ಬಂದಿವೆ.

SREE GAYATHRI
TALKIES
Daily 3 Shows
TO-DAY ONLY
20th Century Fox's
MARTIN LUTHER
From TO-MORROW
RIDING SHOT GUN
(In Technicolor)
A Picture full of fighting and adventure

ರಷ್ಯದ ಹಿರಿಯ ಅಧಿಕಾರಿಗಳ ಸಂಬಳದಲ್ಲಿ ಖೋತಾ

ರಷ್ಯದ ಔದ್ಯೋಗಿಕ ಮತ್ತು ಆಡಳಿತ ಸಂಸ್ಥೆಗಳಲ್ಲಿರುವ ಉನ್ನತಾಧಿಕಾರಿಗಳ ಸಂಬಳದಲ್ಲಿ ಶೇಕಡ ೨೫ ರೂ. ವನ್ನು ಖೋತಾ ಮಾಡಲಾಗುವುದೆಂದು ವರದಿಯಾಗಿದೆ. ಕಮ್ಯೂನಿಸ್ಟ್ ಕಾಂಗ್ರೆಸ್ಸಿನಲ್ಲಿ ಕ್ರುಶ್ಚೇವರು ಭಾಷಣ ಮಾಡಿ, ಅಲ್ಪ ಸಂಖ್ಯೆಯ ಜನರಿಗೆ ಕೊಡುತ್ತಿರುವ ಎಲ್ಲ ಹೆಚ್ಚಿನ ಸಂಬಳವನ್ನು ಸಹಿಸುವುದಕ್ಕಾಗುವುದಿಲ್ಲವೆಂದು ಎಚ್ಚರಿಸಿದ್ದರು.

ಎ. ಐ. ಸಿ. ಸಿ. ಆಶ್ರಯದಲ್ಲಿ ಯುವಕರ ಸಮ್ಮೇಳನ

ದೇಶದಲ್ಲಿ ಯುವಕರ ಚಳುವಳಿಗೆ ಹೆಚ್ಚು ಪ್ರೋತ್ಸಾಹ ನೀಡಲು ಜೂನ್ ತಿಂಗಳು ಕರೆದು ಹೈದರಾಬಾದಿನಲ್ಲಿ ಯುವಕರ ಸಮ್ಮೇಳನವನ್ನು ಕರೆಯಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ನಿರ್ಧರಿಸಿರುತ್ತದೆ. ಕಾಂಗ್ರೆಸ್ ಅಧ್ಯಕ್ಷ ಯು. ಎನ್. ಧೇಬರ್‌ರವರು ಇದರ ಆರಂಭೋತ್ಸವವನ್ನು ನೆರವೇರಿಸುವರು.

ಹೈದರಾಬಾದು ಕನ್ನಡ ಸಾಹಿತ್ಯ ಸಮ್ಮೇಳನ

ಇದೇ ತಿಂಗಳು ೨೯ನೇ ತಾರೀಖು ಬಸವ ಕಲ್ಯಾಣ ತಾಲ್ಲೂಕಿನ ಭಾಟಂಬ್ರ ಎಂಬ ಊರಿನಲ್ಲಿ ಹೈದರಾಬಾದಿನ ಕನ್ನಡ ಸಾಹಿತ್ಯ ಸಮ್ಮೇಳನವು ಸೇರುವುದು. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮಾಜಿ ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರು ಇದರ ಆರಂಭೋತ್ಸವವನ್ನು ನೆರವೇರಿಸುವರು. ಸಮ್ಮೇಳನದಲ್ಲಿ ಸುಪ್ರಸಿದ್ಧ ಕನ್ನಡ ಸಾಹಿತಿಗಳೂ, ಕವಿಗಳೂ ಮತ್ತು ಸಂಸ್ಥಾನದ ಮಂತ್ರಿಗಳೂ ಭಾಗವಹಿಸುವರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೫ ವಾರ್ತೆ. ೬-೧೫ ರತ್ನಮ್ಮ ಅವರ ಭಕ್ತಿ ಗೀತೆ. ... ಸಂಗೀತ. ... ವಿ. ನಾಗೇಂದ್ರಪ್ಪ-ಕ್ಲಾರಿಯೊನೆಟ್ ... ಗಾನ ಮಂಜರಿ. ೧-೩೦ ವಾರ್ತೆ. ... ೩-೩೦ ಸಂಗೀತೋತ್ಸವ ... ೭-೩೦ ಕ್ರೀಡಾ ವಿಮರ್ಶೆ. ... ಸಂಗೀತ ... ವಿಜ್ಞಾನ ವಿಮರ್ಶೆ. ೯-೩೦ ಸಂಗೀತೋತ್ಸವ.

ನರಗಳು ನಾಶವಾದರೆ

ಎಲ್ಲವೂ ನಾಶವೇ !

★ ಮರವು
★ ಮಾನಸಿಕ ಚಿಂತೆ
★ ಕೊರಗು
★ ಜಡ್ಡು ಕಟ್ಟಿದ ಅಜೀರ್ಣ

ಇವೆಲ್ಲ ನರ ದೌರ್ಬಲ್ಯಕ್ಕೆ

: ಸಾಧಾರಣ ಕಾರಣಗಳು :

★

★ ಮರವು
★ ಭ್ರಾಂತಿ ಕಲ್ಪನೆಗಳು
★ ಭೀತಿ ಮನೋಭಾವ
★ ಆತ್ಮಹತ್ಯೆ ಭಾವನೆಗಳು
★ ಮನೋವೈಚಿತ್ರ್ಯಗಳು

ಇವು ಅದರ ಭೀಕರ ಪರಿಣಾಮಗಳು

ನರ ದೌರ್ಬಲ್ಯವನ್ನು ನಿವಾರಿಸಲು

ವಿ ಶ್ವ ವಿ ಖ್ಯಾ ತ ಔ ಷ ಧ

ನವರತ್ನ ಕಲ್ಪ

ಸೇವಿಸಿರಿ

ಇದು ಒಂಭತ್ತು ಅಮೂಲ್ಯ ರತ್ನಗಳ ಸಂಯೋಗ ವಸ್ತು ವಜ್ರ, ಕೆಂಪು, ಮುತ್ತು, ಪಚ್ಚೆ, ಪುಷ್ಯರಾಗ, ಪಚ್ಚೆ, ನೀಲ, ಗೋಮೇಧಿಕ, ಬೈಡೂರ್ಯ—ಇವೆಲ್ಲ ಇವೆ.

—: ಇದನ್ನು ಕಂಡುಹಿಡಿದವರು :—

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮಾ,

ವೈದ್ಯ ವಾಚಸ್ಪತಿ.

ಇವರ ಪುಸ್ತಕ ಎವರ ಸಾಹಿತ್ಯಕ್ಕೆ ಬರೆಯಿರಿ

NAVRATNA KALPA PHARMACY,

Jullundur City (India)

Grams : NAVRATNA

Edited, Printed and Published by A. R. Nagarajan at Sadhvi Press, D. Subbiah Road, Mysore

ರಿಜಿಸ್ಟರ್ಡ್ ನಂ. 792

ಕೂರ್ಗ್ ಮ್ಯಾರ್ಕೆಟ್
ಸ್ಥಾಪನೆ 1932 : ಫೋನ್ 811
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾರಾದ ನೆಕ್ಲೇಸ್‌ಗಳು, ಬಳೆ, ಸರ, ಮತ್ತು ಹವಳ ರತ್ನದ ಒಡವೆಗಳು ಸಿಗುತ್ತವೆ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರಣಿ, ದಿಂಡಿಗಲ್
ರೇಶ್ಮೆ ಮತ್ತು ನೂಲಿನ ಸೀರೆಗಳು
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೦೪] SADHVI : MONDAY 30-4-1956 ಮೈಸೂರು ಸೋಮವಾರ : ೩೦-೪-೧೯೫೬ [ಸಂಚಿಕೆ : ೨೪೯

ಇಟಲಿಯ ಮೋಟಾರು ಜೂಜಿನಲ್ಲಿ ೫ ಜನರ ಮರಣ

ನೆಹರೂರವರೊಡನೆ ಪಾಕಿಸ್ತಾನ ವಿದೇಶಾಂಗ ಮಂತ್ರಿ ಭೇಟಿ

ನೇಪಾಳದ ದೊರೆಯ ಕಿರೀಟ ಧಾರಣೋತ್ಸವದಲ್ಲಿ ಭಾಗವಹಿಸಲು ಖಟ್ಮಂಡುವಿಗೆ ಹೊರಟಿದ್ದ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಹಮಿದುಲ್ ಹಕ್ ಚೌಧುರಿಯವರು ನೆನ್ನೆ ದೆಹಲಿಗೆ ಆಗಮಿಸಿ ಪ್ರಧಾನಿ ನೆಹರೂರವರೊಡನೆ ಖಾಸಗಿ ಸಂಭಾಷಣೆ ನಡೆಸಿದರೆಂದು ವರದಿಯಾಗಿದೆ. ಪಾಕಿಸ್ತಾನ ಮಂತ್ರಿಯ ಗೌರವಾರ್ಥವಾಗಿ ಏರ್ಪಡಿಸಿದ್ದ ಭೋಜನ ಕೂಟಕ್ಕೆ ಹೋಗಲು ನೆಹರೂರವರು ನಿರಾಕರಿಸಿದರು. ಅವರು ದೆಹಲಿಗೆ ಬರುವ ಮುಂಚೆ ಕಲ್ಕತ್ತಾದಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಕಾಶ್ಮೀರದ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳ ನಡುವೆ ನೇರ ಸಂಧಾನ ನಡೆಸುವ ಪರಿಸ್ಥಿತಿಯಿಲ್ಲವೆಂದು ತಿಳಿಸಿದರು. ಪ್ರಧಾನಿ ನೆಹರೂರವರು, ಮಾತುಕತೆಯು ಆಧಾರ ಬಯಸುವುದಾದರೆ, ಕಾಶ್ಮೀರ ಜನರ ಸ್ವಯಂನಿರ್ಣಯಾಧಿಕಾರದ ಹಕ್ಕನ್ನು ಮನ್ನಿಸದಿರುವುದೇ ಅದಕ್ಕೆ ಕಾರಣವೆಂದು ಅವರು ಸೂಚಿಸಿದರು.

ಮಗುವನ್ನು ರಕ್ಷಿಸಿ ಕಾನ್‌ಸ್ಟೇಬಲ್ ಪ್ರಾಣ ತೆತ್ತ

ಇಂದೂರು ಬಳಿ ಮಹೂನಗರ ರೈಲ್ವೆ ಸ್ಟೇಷನ್ನಿನಲ್ಲಿ ಕಳೆದ ೨೫ನೇ ತಾರೀಖು ಕರ್ತವ್ಯ ಪಾಲನೆಯಲ್ಲಿ ತೊಡಗಿದ್ದ ಜಮಾಲ್‌ದೀನ್ ಎಂಬ ಪೋಲೀಸ್ ಹೆಡ್ ಕಾನ್‌ಸ್ಟೇಬಲ್ ಒಬ್ಬನು ರೈಲು ಕಂಬಿಗಳ ನಡುವೆ ಆಟವಾಡುತ್ತಿದ್ದ ಒಂದು ಮಗುವಿನ ಮೇಲೆ ಗೂಡ್ಸ್ ರೈಲು ಹರಿಯುವುದನ್ನು ತಪ್ಪಿಸಲು ಓಡಿಹೋಗಿ ಮಗುವನ್ನು ಕಂಬಿಯಾಚೆಗೆ ಎತ್ತಿ ಹಾಕಿದನೆಂದೂ, ಆದರೆ ಅವನ ದೇಹವು ರೈಲಿನ ಚಕ್ರಕ್ಕೆ ಸಿಕ್ಕಿ ಚೂರುಚೂರಾಯಿತೆಂದೂ ವರದಿಯಾಗಿದೆ.

ಪ್ರಸನ್ನ ಸೀತಾರಾಮ ಮಂದಿರದಲ್ಲಿ ಶಯನೋತ್ಸವ

ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರದಲ್ಲಿ ರಾಮೋತ್ಸವದ ಅಂಗವಾಗಿ ಈ ರಾತ್ರಿ ೮ ಗಂಟೆಗೆ ಶಯನೋತ್ಸವವನ್ನು ಏರ್ಪಡಿಸಲಾಗಿದೆ. ಸ್ತ್ರೀಯರಿಗೆ ಮಾತ್ರ ಪ್ರವೇಶ

ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ನೂತನ ಡೈರೆಕ್ಟರುಗಳು

ರಾಜಧಾನಿಯ ಸಿಟಿ ಕೋ—ಆಪರೇಟಿವ್ ಬ್ಯಾಂಕಿನ ಡೈರೆಕ್ಟರುಗಳ ಚುನಾವಣೆಯು ನೆನ್ನೆ ನಡೆದು ಕೆಳಗೆ ಕಂಡವರು ಬಹುಮತಗಳಿಂದ ಆರಿಸಲ್ಪಟ್ಟಿರುತ್ತಾರೆ:— ಡಾ|| ಬಿ. ಜಿ. ದಾಸ್, ಶ್ರೀ ಗೋವಿಂದ ಜಿ. ಜನಾರ್ಧನನಾಯ್ಡು, ಅರಸ್ಸ ಉಪ್ಪಾ ಚೌಡಯ್ಯ, ಟಿ. ಗುಂಡಪ್ಪ, ಜಿ. ಆರ್. ರಂಗಸ್ವಾಮಯ್ಯ, ಡಾ|| ಎ. ವಿ. ರಂಗರಾವ್, ಸಿ. ಸಿ. ಕೃಷ್ಣಸ್ವಾಮಿ, ಡಿ. ಬಿ. ರಾಮಪ್ಪ, ಸಿಚ್. ಕೃಷ್ಣಮೂರ್ತಿರಾವ್, ಹೆಚ್. ರಾಮಣ್ಣ, ಆ|| ವಿ|| ನಂಜನಗೂಡು ಶ್ರೀಕಂಠಶಾಸ್ತ್ರಿ, ಎಸ್. ಪುಟ್ಟಣ್ಣಯ್ಯ, ಎಂ. ಬಿ. ಮಹದೇವಸ್ವಾಮಿ, ಎಂ. ಎಸ್. ಕೃಷ್ಣಾಜಿರಾವ್ ಮತ್ತು ಕೆ. ಪುಟ್ಟೋರಾವ್.

೪೬ ಸಾವಿರ ಡಿಗ್ರಿ ಶಾಖದ ಉತ್ಪತ್ತಿ

ಅಮೇರಿಕದ ಭೌತಿಕ ವಿಜ್ಞಾನಿಗಳಾದ ಡಾ|| ಜೆ. ಡಿ. ಸಿಯೆ ಮತ್ತು ಡಾ|| ಎಚ್. ಬಿ. ಗ್ರೇವಿಯವರು ೪೬ ಸಾವಿರ ಡಿಗ್ರಿ ಶಾಖವನ್ನು ಉತ್ಪತ್ತಿ ಮಾಡುತ್ತಿರುವರೆಂದು ವರದಿಯಾಗಿದೆ. ಈ ಶಾಖವು ಸೂರ್ಯ ಬಿಂಬದ ಮೇಲ್ಭಾಗದ ೮ ಪಟ್ಟು ಹೆಚ್ಚೆಂದು ಹೇಳಲಾಗಿದೆ. ಜಲಜನಕ ಬಾಂಬಿನ ಶಕ್ತಿಯನ್ನು ಶಾಂತಿ ಕಾರ್ಯಗಳಿಗೆ ಕೈಗೊಳ್ಳಲಾಗಿರುವ ಪ್ರಯೋಗಗಳಿಗೆ ಇದು ಸಾರ್ಥಕವಾಗಿದೆ. ಆ ಗುರಿಯನ್ನು ಸಾಧಿಸಲು ೫೦ ಲಕ್ಷ ಡಿಗ್ರಿಯಿಂದ ಹಿಡಿದು ಕೋಟಿ ಡಿಗ್ರಿಗಳವರೆಗಿನ ಶಾಖವನ್ನು ಉತ್ಪತ್ತಿ ಮಾಡಬೇಕಾಗಿರುವುದೆಂದು ಗೊತ್ತಾಗಿದೆ. ರಷ್ಯದಲ್ಲಿ ಈಗಾಗಲೇ ಒಂದು ದಶ ಲಕ್ಷ ಡಿಗ್ರಿಗಳ ಶಾಖಾಂಶವನ್ನು ಉತ್ಪತ್ತಿ ಮಾಡುವನ್ನು ಪ್ರಗತಿ ಹೊಂದಿರುವುದಾಗಿ ರಷ್ಯನ್ ವಿಜ್ಞಾನಿ ಕುರ್ಚಟೋವರವರು ಈ ಹಿಂದೆ ತಿಳಿಸಿದ್ದು ಅದೇ ಪ್ರಗತಿಯನ್ನು ತಾವೂ ಪಡೆದಿರುವುದಾಗಿ ಅಮೇರಿಕದ ವಿಜ್ಞಾನಿಗಳು ತಿಳಿಸಿದ್ದಾರೆ.

ನೇಪಾಳದ ದೊರೆಗೆ ರಾಷ್ಟ್ರಾಧ್ಯಕ್ಷರ ಬಹುಮಾನ

ನೇಪಾಳದ ದೊರೆ ಮಹೇಂದ್ರ ವಿಕ್ರಮ ಷಾ ರವರಿಗೆ ಭಾರತದ ರಾಷ್ಟ್ರಾಧ್ಯಕ್ಷರು ಒಂದು ಖಡ್ಗ ಮತ್ತು ಒಂದು ನಡುಕಟ್ಟನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ. ಅವನ್ನು ಪಶ್ಚಿಮ ಕಮಾಂಡಿನ ಸೇನಾನಿ ಜನರಲ್ ಕಲ್ವಂತಸಿಂಗ್‌ರವರು ನೆನ್ನೆ ಖಟ್ಮಂಡುವಿನಲ್ಲಿ ನಡೆದ ದರ್ಬಾರಿನಲ್ಲಿ ದೊರೆ ಮಹೇಂದ್ರರಿಗೆ ಒಪ್ಪಿಸಿದರು. ದೊರೆಗಳು ಭಾರತ ಸೈನ್ಯದ ಗೌರವ ಮೇಜರ್ ಜನರಲ್ಲರಾಗಿರುವರಲ್ಲದೆ, ಗೂರ್ಖಾ ಪಡೆಯ ಕರ್ನಲ್-ಇನ್-ಚೀಫ್ ಆಗಿರುವರು.

ಗಿರಣಿಗೆ ಸಿಡಿಲು ಬಡಿದು ಮೂವರ ಮರಣ

ಕೊಲಂಬೊ ಸಮೀಪದಲ್ಲಿರುವ ಚಿಲಾ ದಲ್ಲಿ ಒಂದು ನೂಲಿನ ಗಿರಣಿಗೆ ಕಳೆದ ಶುಕ್ರವಾರ ಸಿಡಿಲು ಬಡಿದು, ಅಲ್ಲಿ ಕೆಲಸ ಮಾಡುತ್ತಿದ್ದ ಮೂವರು ಮಡಿದರೆಂದೂ, ೭ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಅಣು ಸಿಡಿತ ಸ್ಥಳದ ಬಳಿ ಹೋಗಲು ನಾವಿಕರ ನಿರಾಕರಣೆ

ಪಶ್ಚಿಮ ಆಸ್ಟ್ರೇಲಿಯದ ಮಾಂಟಿಬೆಲ್ಲೊ ದ್ವೀಪಗಳಲ್ಲಿ ಬ್ರಿಟನ್ನು ಅಣು ಬಾಂಬು ಪ್ರಯೋಗ ಪರೀಕ್ಷೆ ನಡೆಸುವ ಸ್ಥಳದಿಂದ ಕಡೆಯ ಪಕ್ಷ ೫೦೦ ಮೈಲಿಗಳಾಚೆ ತಮ್ಮ ಹಡಗು ಸಂಚರಿಸುವುದೆಂಬ ಭರವಸೆ ಬಂದಹೊರತು ತಾವು ಹಡಗನ್ನು ನಡೆಸುವುದಿಲ್ಲವೆಂದು ಆಸ್ಟ್ರೇಲಿಯಾ ತೀರ ಪ್ರದೇಶದಲ್ಲಿ ಸಂಚರಿಸುವ ಕ್ರೈಬ ಎಂಬ ನೌಕೆಯ ಚಾಲಕರು ತಿಳಿಸಿರುತ್ತಾರೆ. ಹಡಗು ಮಾಂಟಿಬೆಲ್ಲೊ ದ್ವೀಪಗಳಿಗೆ ಉತ್ತರದಲ್ಲಿರುವ ಹೆಡ್ಲೆಂಡಿಗೆ ಹೊರಟಿತ್ತು. ದ್ವೀಪದಿಂದ ೧೫೦ ಮೈಲಿಯಾಚೆ ಹಡಗು ಯಾನ ಮಾಡಿದರೆ ಅಪಾಯವೇನೂ ಆಗದೆಂಬ ಭರವಸೆ ಬಂದನಂತರ ಚಾಲಕರು ಯಾನ ಮಾಡಿದರು.

ಮೋಟಾರು ರೇಸಿನಲ್ಲಿ ಐವರ ಮರಣ

ಉತ್ತರ ಇಟಲಿಯಲ್ಲಿ ನೆನ್ನೆ ನಡೆದ ೧,೦೦೦ ಮೈಲಿಯ ಮೋಟಾರು ರೇಸಿನಲ್ಲಿ ಐದು ಕಾರುಗಳು ದಿಕ್ಕು ತಪ್ಪಿ ಉರುಳಿದಪರಿಣಾಮವಾಗಿ ಇಬ್ಬರು ಡ್ರೈವರುಗಳು ಮತ್ತು ಮೂವರು ಪ್ರೇಕ್ಷಕರು ಮಡಿದರೆಂದು ವರದಿಯಾಗಿದೆ. ೪ ಜನ ಡ್ರೈವರುಗಳೂ, ೫ ಮಂದಿ ಪ್ರೇಕ್ಷಕರೂ ಪೆಟ್ಟು ಬಿದ್ದಿದೆ. ೪೦೦ ಮೋಟಾರುಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದುವು. ಮಳೆ ಬಂದು ಬಹಳ ತೊಂದರೆಯಾಯಿತು. ಹಲವು ಮೊದಲ ಕಾರುಗಳು ಗಂಟೆಗೆ ನೂರು ಮೈಲಿ ವೇಗದಲ್ಲಿ ಹೋದುವು. ಇಟಲಿಯ ಯೂಜೆನಿಯೊ ಕ್ಯಾಸ್ಟೆಲೋಟಿ ಎಂಬುವನು ಪ್ರಥಮ ಸ್ಥಾನ ಗಳಿಸಿದನು. ಪೀಟರ್ ಕಾಲಿನ್ಸ್ ಎಂಬ ಬ್ರಿಟಿಷನಿಗೆ ದ್ವಿತೀಯ ಸ್ಥಾನ ಸಿಕ್ಕಿತು.

ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ಚುನಾವಣೆ

ಪಾಲ್ಘಾಟಿನಲ್ಲಿ ನಡೆಯುವ ೪ನೇ ಕಮ್ಯೂನಿಸ್ಟ್ ಕಾಂಗ್ರೆಸ್ ಅಧಿವೇಶನದಲ್ಲಿ ಬಂಗಾಳದ ಅಜಯಕುಮಾರ ಘೋಷ್‌ರವರನ್ನು ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿ ಪುನಃ ಆರಿಸಲಾಗಿದೆ. ೩೯ ಜನ ಸದಸ್ಯರಿರುವ ಕೇಂದ್ರ ಸಮಿತಿಗೆ ಮಾಜಿ ಪ್ರಧಾನ ಕಾರ್ಯದರ್ಶಿ ಪಿ. ಸಿ. ಜೋಷಿಯವರೂ, ಅವರ ಮೂವರು ಬೆಂಬಲಿಗರೂ ಆರಿಸಿಬಂದಿರುವರು. ಸರ್ಕಾರಕ್ಕೆ ಪಕ್ಷವು ಇನ್ನೂ ಹೆಚ್ಚು ಬೆಂಬಲ ನೀಡಬೇಕೆಂದು ಜೋಷಿಯವರು ಪ್ರತಿಪಾದಿಸುತ್ತಿರುವರು. ಬಿ. ಟಿ. ರಣದಿವೆಯವರೂ ಆರಿಸಿ ಬಂದಿರುತ್ತಾರೆ. ಪಿ. ರಾಮಮೂರ್ತಿ, ಎ. ಕೆ. ಗೋಪಾಲನ್, ಮುಜಫರ್ ಅಹಮದ್, ರವಿನಾರಾಯಣರೆಡ್ಡಿ ಮತ್ತು ಕರ್ನಾಟಕದ ಎನ್. ಎಲ್. ಉಪಾಧ್ಯಾಯರೂ ಕೇಂದ್ರ ಸಮಿತಿ ಸದಸ್ಯರಾಗಿರುವರು

ಬಳ್ಯಾರಿ ತಾಲ್ಲೂಕಿನ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಸ್ಪರ್ಧೆ

ಸಂಸ್ಥಾನ ವಿಧಾನ ಸಭೆಗೆ ಬಳ್ಯಾರಿ ಕ್ಷೇತ್ರದಿಂದ ನಡೆಯಲಿರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ಸು ಸ್ಪರ್ಧಿಸಲಿದೆ. ಪಿರಿಯಾಪಟ್ಟಣ ಕ್ಷೇತ್ರದಿಂದ ನಡೆಯುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಭಾಗವಹಿಸಬೇಕೇ ಅಥವಾ ಕೂಡದೇ ಎಂಬ ವಿಷಯವಾಗಿ ಮೈಸೂರು ಜಿಲ್ಲಾ ಮತ್ತು ಪಿರಿಯಾಪಟ್ಟಣ ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಅಭಿಪ್ರಾಯವನ್ನು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕೇಳಲಿದೆ.

ಉಡಿಗಾಲದಲ್ಲಿ ಇರಿತದ ಪ್ರಸಂಗ

ಸ್ವಂ. ವ] ಚಾಮರಾಜನಗರ ೨೮

ಇದೇ ತಾಲ್ಲೂಕು ಉಡಿಗಾಲ ಗ್ರಾಮದಲ್ಲಿ ಇರಿತದ ಪ್ರಸಂಗವೊಂದು ನಡೆದಿರುವುದಾಗಿ ವರದಿಯಾಗಿದೆ. ಲಿಂಗಾಯಿತ ಕೋಮಿಗೆ ಸೇರಿದ ವೀರಪ್ಪ ಎಂಬಾತನಿಗೆ ಇರಿತದ ಪೆಟ್ಟು ಬಿದ್ದಿದೆ. ಆತನನ್ನು ಇಲ್ಲಿನ ಆಸ್ಪತ್ರೆಗೆ ಸೇರಿಸಲಾಗಿದೆ. ಆತನಿಗೆ ಪ್ರಾಣಭಯವೇನೂ ಇಲ್ಲವೆಂದು ಹೇಳಲಾಗಿದೆ. ಇರಿದವನ ಪತ್ತೆಯಾಗಿಲ್ಲ.

ಜರ್ಮನ್ ರಾಷ್ಟ್ರೀಯರ ವಾಪಸಾತಿಗೆ ರಷ್ಯಾ ನೆರವು

ರಷ್ಯದಲ್ಲಿ ಇನ್ನೂ ಇರುವರೆಂದು ಹೇಳಲಾದ ಜರ್ಮನ್ ರಾಷ್ಟ್ರೀಯರನ್ನು ಸ್ವದೇಶಕ್ಕೆ ಕರೆದುಕೊಂಡುಹೋಗುವುದಕ್ಕೆ ಪಶ್ಚಿಮ ಜರ್ಮನಿಗೆ ನೆರವು ನೀಡಲು ಸಿದ್ಧವಿರುವುದಾಗಿ ರಷ್ಯವು ಸೂಚಿಸಿದೆ. ಪಶ್ಚಿಮ ಜರ್ಮನಿಯ ರಾಯಭಾರಿಯ ಹೇಳಿಕೆಯಂತೆ ರಷ್ಯದಲ್ಲಿ ೧,೦೦೦ ಜನರು ಇರುವರೆಂದು ಗೊತ್ತಾಗಿದೆ. ಈ ಬಗ್ಗೆ ರಷ್ಯಕ್ಕೆ ಕಳುಹಿಸಲಾಗಿರುವ ಪಟ್ಟಿಯಲ್ಲಿರುವ ಜನರನ್ನು ಅವರು ಅಪೇಕ್ಷೆಪಟ್ಟರೆ ಹಿಂದಕ್ಕೆ ಕಳುಹಿಸಲಾಗುವುದೆಂದು ಹೇಳಲಾಗಿದೆ.

ಪಶ್ಚಿಮ ಏಷ್ಯದಲ್ಲಿ ಶಾಂತಿ ಬಯಕೆ

ಪಶ್ಚಿಮ ಏಷ್ಯ (ಮಧ್ಯ ಪೂರ್ವ) ರಾಷ್ಟ್ರಗಳು ಶಾಂತಿಯನ್ನೇ ಬಯಸುವುವೆಂದೂ, ತಮ್ಮ ದೇಶಗಳ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಸಾಧಿಸಲು ಅವು ಹಾತೊರೆಯುತ್ತಿರುವುವೆಂದೂ ಆ ದೇಶಗಳಲ್ಲಿ ಪ್ರವಾಸ ಮಾಡಿ ಹಿಂದಿರುಗಿದ್ದ ಭಾರತದ ವಿದೇಶಾಂಗ ಮಂತ್ರಿ ಡಾ|| ಸೈಯದ್ ಮಹಮೂದ್‌ರವರು ತಿಳಿಸಿರುತ್ತಾರೆ.

ನೀಲಗಿರಿ ಕುದುರೆ ಜೂಜಿನಲ್ಲಿ ಅಪಘಾತ

ನೆನ್ನೆ ನೀಲಗಿರಿಯಲ್ಲಿ ಆರಂಭವಾದ ಕುದುರೆ ಜೂಜಿನಲ್ಲಿ ಪ್ರಸಿದ್ಧ ಜಾಕಿ ಶಂಕರನು ತೀವ್ರ ಗಾಯಗೊಂಡು ಆಸ್ಪತ್ರೆಗೆ ಸೇರಿಸಲ್ಪಟ್ಟನು. ಟಾಜ್‌ಮಹಲ್ ಎಂಬ ಕುದುರೆಯು ಮೃತಪಟ್ಟಿತು. ಶಂಕರ್ ಮತ್ತು ಅವನು ಹತ್ತಿದ್ದ ದಿಲ್‌ಲಗಿ ಕುದುರೆ ಬೀಳಲಾಗಿ, ಹಿಂದೆ ಬಂದ ನಾರ್ ವಯೊಲೆಟ್ ಮತ್ತು ಟಾಜ್‌ಮಹಲ್‌ಗಳೂ ಮುಗ್ಗರಿಸಿಬಿದ್ದುವು. ದಿಲ್‌ಲಗಿ ಮತ್ತು ನಾರ್ ವಯೊಲೆಟ್‌ಗಳು ಜಾಕಿಗಳಿಲ್ಲದಿದ್ದರೂ ಮುಂದೆ ಓಡಿದುವು. ಮತ್ತೊಂದು ಅಲ್ಲೇ ಸತ್ತಿತು.

ರಾಮೋತ್ಸವ ಕಾರ್ಯಕ್ರಮ

ಸಿವಿಲ್ ಪೋಲೀಸ್ ಹೆಡ್‌ಕ್ವಾರ್ಟರ್ಸಿನಲ್ಲಿ ರಾಮೋತ್ಸವದ ಪ್ರಯುಕ್ತ ಈ ಸಂಜೆ ೬ ಗಂಟೆಗೆ ವಿ|| ವಿ. ಎಂ. ಬಸವಣ್ಣನವರಿಂದ "ಧರ್ಮಗುಪ್ತ" ಎಂಬ ಹರಿಕಥೆ, ನಾಳೆ ಸಂಜೆ ೬ಕ್ಕೆ ವಿ|| ಎಂ. ವಿ. ಕೃಷ್ಣಮೂರ್ತಿಯವರಿಂದ ವೇಣುವಾದನ ಮತ್ತು ರಾತ್ರಿ ೮ಕ್ಕೆ ವಿ|| ಹೆಚ್. ಎಸ್. ಸುಬ್ಬರಾಮಯ್ಯನವರಿಂದ "ಶ್ರೀ ಕೃಷ್ಣ ಗಾರುಡಿ" ಎಂಬ ಹರಿಕಥೆ ಮತ್ತು ನಾಳಿದ್ದು ಸಂಜೆ ವೇ|| ಬ್ರ|| ಶ್ರೀ|| ತಗಡೂರು ಶ್ರೀನಿವಾಸಮೂರ್ತಿಯವರಿಂದ "ಭಕ್ತ ರಾಮದಾಸ್" ಎಂಬ ಹರಿಕಥೆಯು ಏರ್ಪಾಡಾಗಿವೆ.

ಸ್ಕೌಟ್ ಜಾಂಬೂರಿಯಲ್ಲಿ ಭಾಗವಹಿಸುವವರ ವೆಚ್ಚ

ಬರುವ ತಿಂಗಳು ೯ ರಿಂದ ೧೧ ರವರೆಗೆ ತುಮಕೂರಿನಲ್ಲಿ ನಡೆಯುವ ಸ್ಕೌಟು ಜಾಂಬೂರಿಯಲ್ಲಿ ಭಾಗವಹಿಸುವ ಬಗ್ಗೆ ಪ್ರೌಢ ಮತ್ತು ಮಾಧ್ಯಮಿಕ ಶಾಲಾ ಕ್ರೀಡಾ ನಿಧಿಯಲ್ಲಿ ಬೇಕಾದ ಹಣವನ್ನು ಉಪಯೋಗಿಸಬಹುದೆಂದು ವಿದ್ಯಾ ಇಲಾಖಾಧಿಕಾರಿಗಳು ಸೂಚನೆಯಿತ್ತಿರುವರು.

ಪೋಲಿ ದನಗಳ ಕಾಟ ತಪ್ಪಿಸಲು ಮಾಲೀಕರ ಮೇಲೆ ಕ್ರಮ

ಪೌರಸಭಾಧಿವೇಶನದಲ್ಲಿ ಅಧ್ಯಕ್ಷರ ಸೂಚನೆ

ಮೈಸೂರು ೧

ಪುರಸಭೆಯ ಸಾಮಾನ್ಯ ಅಧಿವೇಶನವು ನೆನ್ನೆ ಸಂಜೆ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದಿತು

ನಗರದಲ್ಲಿ ಪೋಲಿ ದನಗಳನ್ನು ಹಿಡಿಯುವ ಕಾರ್ಯವು ಸಮರ್ಪಕವಾಗಿ ನಡೆಯುತ್ತಿಲ್ಲವೆಂದೂ, ಈ ಬಗ್ಗೆ ಅಧಿಕಾರಿಗಳು ಕ್ರಮವನ್ನೇನೂ ಕೈಗೊಂಡಿಲ್ಲವೆಂದೂ ಶ್ರೀ ಶ್ರೀನಿವಾಸರವರು ಆಕ್ಷೇಪಿಸಿದರು ಅದಕ್ಕೆ ಅಧ್ಯಕ್ಷರು ಉತ್ತರವಿತ್ತು ಅಧಿಕಾರಿಗಳು ಕ್ರಮ ಜರುಗಿಸಿಲ್ಲವೆಂಬುದು ನಿಜವಲ್ಲವೆಂದೂ, ಆದರೆ ಪೋಲಿ ದನಗಳು ದೊಡ್ಡಿಗೆ ಹೋಗಲು "ಅಸಹಕಾರ" ತೋರಿಸುತ್ತಿವೆಯೆಂದೂ ಹೇಳಿ ಅವುಗಳನ್ನು ಹಿಡಿಯಲು ಹೋದಾಗ ತಪ್ಪಿಸಿಕೊಳ್ಳುವುದು ಹಾಗೂ ಸಿಕ್ಕಿದರೆ ಮಾಲೀಕರು ಅಡ್ಡಿಪಡಿಸುವುದು ಮುಂತಾದ ಸಮಸ್ಯೆಗಳನ್ನು ವಿವರಿಸಿದರು ಈ ಘಟನೆಗಳು ನಡೆಯದಂತೆ ತಪ್ಪಿಸಲು ಆ ದನಗಳ ಮಾಲೀಕರ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆಯನ್ನು ಪರಿಶೀಲಿಸಲಾಗುತ್ತಿದೆಯೆಂದೂ ತಿಳಿಸಿದರು

ಈ ಸಂದರ್ಭದಲ್ಲಿ ಡಾ। ವಿ ಜಿ ದಸರು ಗೋಹತ್ಯೆಯನ್ನು ನಗರದಲ್ಲಿ ಬಹಿರಂಗವಾಗಿ ತಡೆಗಟ್ಟಲಾಗದಿರುವ ವಿಷಯವನ್ನು ಪ್ರಸ್ತಾಪಿಸಿದರು ಈ ವಿಷಯದಲ್ಲಿ ಪೋಲಿಸರು ಗಮನವಹಿಸುವುದು ಅಗತ್ಯವೆಂದೂ ಹಾಗೆ ಮಾಡಿಸಲು ಪೋಲಿಸ್ ಮಂತ್ರಿಗಳಿಗೆ ಪತ್ರ ಬರೆಯುವುದಾಗಿಯೂ ಅಧ್ಯಕ್ಷರು ತಿಳಿಸಿದರು

ಅನಂತರ ಪ್ರಶ್ನೋತ್ತರ ಕಾಲದಲ್ಲಿ ಶ್ರೀ ಶ್ರೀನಿವಾಸರವರ ಪ್ರಶ್ನೆಯೊಂದಕ್ಕೆ ಅಧ್ಯಕ್ಷರು ಉತ್ತರವಿತ್ತು ೬೦೦ ರೂ ಸಂಗೀತ ಪೆಟ್ಟಿಗೆ ಬಾಡಿಗೆ ... ಸ್ಥಳಗಳಲ್ಲಿ ... ವರ್ಷಗಳಲ್ಲಿ ... ತಿಳಿಸಿದರು ನಗರದಲ್ಲಿ ... ವರ್ಷಗಳಲ್ಲಿ ... ಬಾಡಿಗೆಗಳನ್ನು ... ಸಹ ತಿಳಿಸಿದರು

ನಗರದಲ್ಲಿ ತೋರಿದ ಕಡೆ ಮತ್ತು ಪುರಸಭೆಯು ಮಾಡಿಸಿರುವ ಬೋರ್ಡುಗಳ ಮೇಲೆ ಅಕ್ರಮವಾಗಿ ಜಾಹಿರಾತು ಚೀಟಿಗಳನ್ನು ಅಂಟಿಸುತ್ತಿರುವವರ ಬಗ್ಗೆ ಶ್ರೀ ಸಿ ಎಸ್ ನಾರಾಯಣರಾಯರು ಹಾಕಿದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರವಿತ್ತು, ಆ ರೀತಿ ಚೀಟಿ ಅಂಟಿಸುವವರಿಗೆ ಸೂಕ್ತ ಎಚ್ಚರಿಕೆ ಕೊಡಲಾಗುವುದೆಂದೂ ಮತ್ತು ಹಾಗೆ ಅಂಟಿಸುವವರ ಮೇಲೆ ದಂಡ ವಿಧಿಸಲು ಆಲೋಚಿಸಲಾಗುತ್ತಿದೆಯೆಂದೂ ತಿಳಿಸಿದರು

ಅನಂತರ ನಿರ್ಣಯಗಳ ಪರಿಶೀಲನೆಯಾಯಿತು ಮೈಸೂರು ನಗರದಲ್ಲಿ ವೇಶ್ಯಾವೃತ್ತಿಯನ್ನು ನಿರ್ಮೂಲ ಮಾಡಿ ಅದರಲ್ಲಿ ತೊಡಗಿರುವ ಸ್ತ್ರೀಯರು ಸನ್ಮಾರ್ಗ ಪ್ರವರ್ತಕರಾಗಿ ಸಮಾಜದಲ್ಲಿ ಗೌರವದಿಂದ ಜೀವನ ನಡೆಸುವಂತೆ ಮಾಡಲು ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುವ ಡಾ॥ ಬಿ ಜಿ ದಾಸರ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು

ಎಸ್ ಎಸ್ ಎಲ್ ಸಿ ತರಗತಿಯವರೆಗೂ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಒದಗಿಸಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ಶ್ರೀ ಸಿ ಎಸ್ ನಾರಾಯಣರಾಯರ ನಿರ್ಣಯವನ್ನು ಆಡಳಿತ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಯಿತು

ಉತ್ತರ ಪ್ರದೇಶದಲ್ಲಿ ಇದೇ ತಿಂಗಳು ೧೭ ಮತ್ತು ೧೮ನೇ ತಾರೀಕು ನಡೆಯಲಿರುವ ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ಶ್ರೀಗಳಾದ ಸಿ ಎಸ್ ನಾರಾಯಣರಾವ್, ಎಂ.ಎಸ್ ತಿಮ್ಮಪ್ಪ, ಎ ಕೃಷ್ಣಮೂರ್ತಿರಾವ್ (ಅಧ್ಯಕ್ಷರು) ಎಸ್ ಸಂಜೀವಪ್ಪ, ಬಿ ಎಸ್. ಕೆಂಗೀಗೌಡ ಮತ್ತು ಕೆಂಪೇಗೌಡರನ್ನು ಪ್ರತಿನಿಧಿಗಳನ್ನಾಗಿ ಕಳುಹಿಸಲು ಸಭೆಯು ಒಪ್ಪಿತು ಸಭೆಯು ೭ನೇ ತಾರೀಕಿಗೆ ಮುಂದುವರಿಯಿತು

ಗೃಹಕೃತ್ಯದ ನಿರ್ವಹಣೆಯೇ ಮಹಿಳೆಯರ ಕರ್ತವ್ಯ

ಮಹಿಳೆಯರು ಅಧಿಕಾರ ಚಲಾಯಿಸುವ ಸ್ಥಾನಗಳಲ್ಲಾಗಲೀ ಅಥವಾ ಶಾಸನ ಸಭೆಗಳಲ್ಲಾಗಲೀ ಇರಕೂಡದೆಂದು ಕೈರೋವಿನಲ್ಲಿರುವ ಮುಸ್ಲಿಮರ ಅಲ್ ಅಜರ್ ವಿಶ್ವವಿದ್ಯಾಲಯದ ಉಲೇಮಾಗಳು ತಿಳಿಸಿರುತ್ತಾರೆ ಅವರು ಮುಸ್ಲಿಮರ ನ್ಯಾಯ ಶಾಸ್ತ್ರದ ಬಗ್ಗೆ ವ್ಯಾಖ್ಯಾನ ಮಾಡಿ ಮಹಿಳೆಯರು ಗೃಹಕೃತ್ಯದ ನಿರ್ವಹಣೆಯಲ್ಲೇ ನಿರತರಾಗಬೇಕೆಂದೂ, ಅದೇ ಅವರ ಪ್ರಕೃತಿವೃತ್ತಿಯೆಂದೂ ಹೇಳಿರುವರು ಪಾಠ ಹೇಳಿಕೊಡುವುದು, ವೈದ್ಯ ಮತ್ತು ದಾದಿ ಕೆಲಸ ನಡೆಸುವುದು ಈ ಕರ್ತವ್ಯಗಳನ್ನು ಮಹಿಳೆಯರು ತಮ್ಮ ಗೃಹಕೃತ್ಯದ ಕೆಲಸಗಳಿಗೆ ಅಡ್ಡಿ ಬರದ ರೀತಿಯಲ್ಲಿ ಮಾಡಬಹುದೆಂದೂ ತಿಳಿಸಲಾಗಿದೆ

ಸಬ್ ಮೆರೀನಿನಿಂದ ವಿಮಾನಗಳ ನಾಶ ಸಾಧ್ಯ

೩೦೦ ಅಡಿ ನೀರಿನೊಳಗಿದ್ದು ಅಲ್ಲಿಂದ ೧೫೦ ಮೈಲಿ ದೂರದ ವರೆಗೆ ಹಾರಿಸಬಲ್ಲ ಅಸ್ತ್ರವನ್ನು ರಷ್ಯವು ಕಂಡುಹಿಡಿದಿರುವುದಾಗಿ ಅಮೆರಿಕದ ನೌಕಾ ಪತ್ರಿಕೆಯೊಂದು ತಿಳಿಸಿದೆ ಈ ಅಸ್ತ್ರವು ಶಾನಿಗಳ ಸಬ್ ಮೆರೀನುಗಳನ್ನೂ, ಹಡಗುಗಳನ್ನೂ ಹಾಗೂ ಆಕಾಶದಲ್ಲಿ ವಿಮಾನಗಳನ್ನೂ ಹೊಡೆದುರುಳಿಸುವುದೆಂದು ಹೇಳಲಾಗಿದೆ ಅಮೆರಿಕವು ಸಹ ಇಂತಹ ಅಸ್ತ್ರ ತಯಾರಿಕೆಯಲ್ಲಿ ತೊಡಗಿರುವುದೆಂದು ಹೇಳಲಾಗಿದೆ

ಕಲ್ಕತ್ತದಲ್ಲಿ ಚುನಾವಣಾ ಘರ್ಷಣೆ

ಲೋಕಸಭೆಗೆ ಕಲ್ಕತ್ತೆಯ ವಾಯುವ್ಯ ಕ್ಷೇತ್ರದಿಂದ ನಡೆದ ಉಪ ಚುನಾವಣೆ ಸಂಬಂಧದಲ್ಲಿ ಮೊನ್ನೆ ವಿರುದ್ಧ ಪಕ್ಷಗಳ ಬೆಂಬಲಿಗರಿಗೆ ಘರ್ಷಣೆ ನಡೆಯಿತೆಂದೂ ಸೋಡಾ ನೀರು ಮತ್ತು ಪ್ಯಾಕ್ ತುಂಬಿದ ಬಲ್ಬುಗಳ ಪೆಟ್ಟಿನಿಂದ ೧೨ ಜನರು ಗಾಯಗೊಂಡರೆಂದೂ ವರದಿಯಾಗಿದೆ

ಬರೋಡಾ ಕಾಲೇಜಿನಲ್ಲಿ ಇಂಗ್ಲಿಷ್ ಬದಲು ಹಿಂದಿ ಶಿಕ್ಷಣ

ಬರೋಡಾ ವಿಶ್ವವಿದ್ಯಾಲಯದ ಸೆನೆಟ್ಟು ಮೊನ್ನೆ ಕಾಲೇಜು ವ್ಯಾಸಂಗವನ್ನು ಇಂಗ್ಲಿಷಿನ ಬದಲು ಹಿಂದಿ ಮಾಧ್ಯಮದ ಮೂಲಕ ನಡೆಸಬೇಕೆಂದು ನಿರ್ಧರಿಸಿತು ಈ ನಿರ್ಧಾರವನ್ನು ಕ್ರಮಕ್ರಮವಾಗಿ ಜಾರಿಗೆ ತರಬೇಕೆಂದು ಗೊತ್ತು ಮಾಡಲಾಯಿತು

ವಿವಾಹ ಮಹೋತ್ಸವ

ಬೆಂಗಳೂರಿನ ಶ್ರೀ ಎ. ಆರ್ ಸಂಪತ್ತಯ್ಯಂಗಾರ್ಯರು ತಮ್ಮ ಕುಮಾರಿ ಸೌ॥ ಕೋಮಲವಲ್ಲಿಯನ್ನು ಶ್ರೀ ಬಿ ಸಿ ವರದರಾಜಯ್ಯಂಗಾರ್ಯರ ಮಗ ಶ್ರೀ ವಿ ಸಿ ಕೃಷ್ಣಯ್ಯಂಗಾರ್ಯರಿಗೆ ಕೊಟ್ಟು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬–೫ ಮಂಗಳವಾದ್ಯ ೭ ೧೫ ಮತ್ತು ೮ ೧೫ ಎಂ ವಿ. ರಾಘವೇಂದ್ರ ಕನ್ನಡ ಗೀತೆಗಳು ೭ ೩೦ ಹಿಂದಿ ವಾರ್ತೆ ಮಧ್ಯಾಹ್ನ ೧೨ ಮತ್ತು ೧ ಎಸ್ ಲಕ್ಷ್ಮಣಶಾಸ್ತ್ರಿ ಸಂಗೀತ ೧೨ ೩೦ ರಿಂದ ... ರವರೆಗೆ ... ದಕ್ಷಿಣಾಮೂರ್ತಿ ಕೃಷ್ಣಮೂರ್ತಿ ಸಂಗೀತ ಸಂಜೆ ೫–೩೦ ಮತ್ತು ... ನಾಟಕ ... ೬ ೧೫ ಪ್ರಸಿದ್ಧ ಬೌದ್ಧ ಪ್ರವಾಸಿಗಳು ಸಂಘಮಿತ್ರ ಮತ್ತು ಮಹೇಂದ್ರ ಕನ್ನಡ ಚಿತ್ರ ... ಬುದ್ಧ ಮತ್ತು ಬೌದ್ಧ ಮತದ ಉಪದೇಶ ಮತ್ತು ಸಿದ್ಧಾಂತ ದಿವಲಿ ಪುನಃಪ್ರಸಾರ ೮ ೩೦ ರಿಂದ ... ೯–೧೫ ರಾಮೋತ್ಸವ ಸಂಗೀತ.

ರಷ್ಯಕ್ಕೆ ಮಾರ್ಷಲ್ ಟಿಟೊ ಭೇಟಿ

ಯುಗೋಸ್ಲೇವಿಯದ ಅಧ್ಯಕ್ಷ ಮಾರ್ಷಲ್ ಟಿಟೋರವರು ಇದೇ ಜೂನ್ ತಿಂಗಳಲ್ಲಿ ರಷ್ಯಕ್ಕೆ ಭೇಟಿ ಕೊಡಲಿರುವರೆಂದು ವರದಿಯಾಗಿದೆ ಅದಕ್ಕೆ ಮುಂಚೆ ಅವರು ಫ್ರಾನ್ಸಿಗೂ ಭೇಟಿಯಾಗುವರು

ಸಿಂಹಳಕ್ಕೆ ಅಮೆರಿಕದಿಂದ ೫೦ ಲಕ್ಷ ಡಾಲರ್ ಸಹಾಯ

ಸಿಂಹಳ ದ್ವೀಪಕ್ಕೆ ಅಮೆರಿಕವು ೫೦ ಲಕ್ಷ ಡಾಲರ್ ಸಹಾಯ ನೀಡುವ ಬಗ್ಗೆ ಉಭಯ ರಾಷ್ಟ್ರಗಳೂ ಪತ್ರ ವಿನಿಮಯ ಮಾಡಿಕೊಂಡಿವೆ ಅಮೆರಿಕದವರ ಸಹಾಯವನ್ನು ಸಿಂಹಳದ ಪ್ರಧಾನಿ ಭಂಡಾರನಾಯಕೆಯವರು ಪ್ರಶಂಸಿಸಿರುತ್ತಾರೆ

ಬೊಂಬಾಯಿ ಪೌರಸಭಾ ನೌಕರರ ದ್ವಿತೀಯ ವಿವಾಹಕ್ಕೆ ನಿಷೇಧ

ಬೊಂಬಾಯಿ ಪೌರಸಭೆಯ ನೌಕರರು ತಮ್ಮ ಪತ್ನಿಯಿರುವಾಗಲೇ ದ್ವಿತೀಯ ವಿವಾಹವಾಗುವುದಕ್ಕೆ ನಿಷೇಧ ಹಾಕಲಾಗಿದೆ ಈ ಬಗ್ಗೆ ಸೂಕ್ತ ನಿಬಂಧನೆಗಳನ್ನು ರಚಿಸಲಾಗಿದೆ

ಕೃಷ್ಣಾಪುರದಲ್ಲಿ ರಥೋತ್ಸವ

ಟಿ ನರಸೀಪುರದ ತಾಲ್ಲೂಕು ಕೃಷ್ಣಾಪುರದ ಶ್ರೀ ಸಂತಾನ ಗೋಪಾಲಕೃಷ್ಣಸ್ವಾಮಿಯವರಿಗೆ ವಾಡಿಕೆಯಿನ ಪ್ರಕಾರ ಇದೇ ೩ನೇ ತಾರೀಕು ಗುರುವಾರದಿಂದ ೧೩ನೇ ಭಾನುವಾರದವರೆಗೂ ಬ್ರಹ್ಮೋತ್ಸವವು ಜರುಗುತ್ತೆ ೧೦ನೇ ತಾರೀಕು ಗುರುವಾರ ದಿವ್ಯ ರಥೋತ್ಸವವು ನಡೆಯುತ್ತೆ

ನಂಜನಗೂಡಿನಲ್ಲಿ ಅಮೋಘ ಸಂಗೀತ ಕಛೇರಿ

ನಂಜನಗೂಡಿನ ಭಿಷಗ್ರತ್ನ ವಿ ಪಿ ಪಂಡಿತರ ಲಕ್ಷ್ಮೀ ನಿಲಯದಲ್ಲಿ ರಾಮೋತ್ಸವದ ಅಂಗವಾಗಿ ಕಳೆದ ೨೬ನೇ ತಾರೀಕು ಆಸ್ಥಾನ ವಿದ್ವಾನ್ ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ಯರ ಮಕ್ಕಳಾದ ವಿ॥ ಎನ್ ರಾಮರತ್ನಂರವರ ಸಂಗೀತವು ವಿ॥ ಹೆಚ್ ವಿ ರಾಮರಾಯರ ಪಿಟೀಲು ಮತ್ತು ವಿ॥ ರಾಮಾಚಾರ್ಯರವರ ಮೃದಂಗದೊಡನೆ ಅತ್ಯಮೋಘವಾಗಿ ನಡೆಯಿತು ಪಂಡಿತರು ಸಂಗೀತಗಾರರ ಪ್ರೌಢಿಮೆಯನ್ನು ಪ್ರಶಂಸಿಸಿ ಅವರಿಗೆ ಸೂಕ್ತ ಸನ್ಮಾನ ಮಾಡಿದರು

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಹೊಂಗೆಬೀಜ	೨೬ ೨ ೦	
ಹುಚ್ಚೆಳ್ಳುಬೀಜ	೪ ೧೨ ೦	
ಜೀರಿಗೆ	೨೭ ೪ ೦	೨೨ ೨ ೦
ಹಲಸಂದೆ	೪೯ ೮ ೦	೪೯ ೩ ೦
ತೊಗರಿ	೨೫ ೬ ೦	
ಅವರೆ	೪೧ ೦ ೦	
ಸೀಗೆಕಾಯಿ	೭ ೮ ೦	೮ ೧ ೦
ಹುಣಸೇಹಣ್ಣು	೨ ೮ ೦	೩ ೧೪ ೦
ಮೆಣಸಿನಕಾಯಿ	೭ ೦ ೦	೧೫ ೦ ೦
ತೆಂಗಿನಕಾಯಿ ೧೧೧೦೦	೧೩೦ ೦ ೦	೨೦೯ ೬ ೦

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ

ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ, ಮೈಸೂರು [Estd 1911]

ಇನ್ನಿಬ್ಬರು ಕೇಂದ್ರ ಮಂತ್ರಿಗಳು

ರಾಜ್ಯಸಭೆಯ ಸದಸ್ಯರಾದ ಮತ ಸುಬಲ್ ಸಹಾ ಮತ್ತು ಲೋಕಸಭಾ ಸದಸ್ಯರಾದ ಡಾ॥ ಮನಮೋಹನದಾಸ್‌ರವರನ್ನು ಕೇಂದ್ರ ಸರ್ಕಾರದ ಮಂತ್ರಿ ಮತ್ತು ಉಪ ಮಂತ್ರಿಗಳಾಗಿ ನೇಮಿಸಲಾಗಿದೆ ಸಹಾರವರು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಕೈಗಾರಿಕಾ ಮಂತ್ರಿಯಾಗಿಯೂ, ಡಾ॥ ದಾಸ್‌ರವರು ವಿದ್ಯಾ ಶಾಖಾ ಉಪ ಮಂತ್ರಿಯಾಗಿಯೂ ಕೆಲಸ ನಿರ್ವಹಿಸುವರು

ಸ್ವಾತಂತ್ರ್ಯ ಹೋರಾಟದಲ್ಲಿ ನೊಂದವರಿಗೆ ಅಂಬರ್ ಚರಖಾ

ಸ್ವಾತಂತ್ರ್ಯ ಹೋರಾಟದಲ್ಲಿ ನೊಂದವರಿಗೆ ... ಅಂಬರ್ ಚರಖಾ ಯೋಜನೆಗೆ ಸೇರಿಸಿಕೊಳ್ಳಲಾಗುವುದೆಂದು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ತಿಳಿಸಿರುತ್ತಾರೆ ದ್ವಿತೀಯ ಯೋಜನೆ ಅವಧಿಯಲ್ಲಿ ೨೫ ಲಕ್ಷ ... ಚರಖಾಗಳಲ್ಲಿ ಕೆಲಸ ನಡೆಸಲಾಗುವುದೆಂದೂ ಅವರು ಸೂಚಿಸಿರುತ್ತಾರೆ

ವಿಶ್ವದ ಜನಸಂಖ್ಯೆ ೨೬೫ ಕೋಟಿ

೧೯೫೪ರ ಮಧ್ಯ ಭಾಗದಲ್ಲಿ ವಿಶ್ವದ ಜನಸಂಖ್ಯೆಯು ೨೬೫ ಕೋಟಿ ೨೦ ಲಕ್ಷವಿದ್ದಿತೆಂದೂ, ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಜನರು ಏಷ್ಯದಲ್ಲಿರುವರೆಂದೂ ಗೊತ್ತಾಗಿದೆ ಚೀನದಲ್ಲಿ ೫೮ ಕೋಟಿ, ಭಾರತದಲ್ಲಿ ೩೮ ಕೋಟಿ, ರಷ್ಯದಲ್ಲಿ ೨೧ ಕೋಟಿ ಮತ್ತು ಅಮೆರಿಕದಲ್ಲಿ ೧೬ ಕೋಟಿ ಜನರು ಇರುವರು ಜಪಾನ್, ಇಂಡೋನೇಷ್ಯ ಮತ್ತು ಪಾಕಿಸ್ತಾನಗಳಲ್ಲಿ ತಲಾ ೮ ಕೋಟಿ ಜನರು ಇರುವರು

ರಾಜಕೋಟೆ ಬಳಿ ಲಾಠಿ ಪ್ರಹಾರ

ಮಧ್ಯ ಸೌರಾಷ್ಟ್ರ ಜಿಲ್ಲೆಯ ಉಪ್ಲೇಟಾ ಎಂಬಲ್ಲಿ ಅಭಿವೃದ್ಧಿ ತೆರಿಗೆ ವಿರೋಧವಾದ ಚಳುವಳಿ ಸಂಬಂಧದಲ್ಲಿ ಮೆರವಣಿಗೆ ನಡೆಸಿದ ಜನರನ್ನು ಚದುರಿಸಲು ಪೋಲೀಸರು ಅಶ್ರುವಾಯು ಮತ್ತು ಲಾಠಿ ಪ್ರಯೋಗ ಮಾಡಿದರೆಂದು ವರದಿಯಾಗಿದೆ ಅನೇಕರಿಗೆ ಗಾಯವಾಗಿದೆ ಮೆರವಣಿಗೆಯವರು ಕಲ್ಲುಬೀರಿದ ಪರಿಣಾಮವಾಗಿ ಪೋಲೀಸರಿಗೂ ಪೆಟ್ಟು ಬಿದ್ದಿದೆ

ಶಕ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು!!

ಆದರೆ ಡಾ॥ ರಾಜಾರವರ ನೂತನ ಮತ್ತು ಆಶ್ಚರ್ಯಕರವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ನಿರಾಶೆಯನ್ನು ತೊಲಗಿಸಿ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ

ಆದುದರಿಂದ ನವಯೌವನವನ್ನೂ, ಅಪ್ರತಿಮ ಶಕ್ತಿಯನ್ನೂ, ಆರೋಗ್ಯವನ್ನೂ ಹೊಂದಲು ಶ್ರೇಷ್ಠ ವೈದ್ಯದಲ್ಲಿ ಹೆಸರಾಂತ ಡಾ॥ ಎ ಡಿ. ರಾಜಾರವರ ಸಲಹೆಯನ್ನು ಪಡೆಯಿರಿ.

ಭಾರತದ ಹೆಮ್ಮೆಯಾದ ಡಾ॥ ರಾಜಾರವರು ... ಚಿಕಿತ್ಸೆಗಳಿಗಿಂತಲೂ ಅದ್ಭುತ ... ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ... ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ... ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನ ... ಉಂಟುಮಾಡಿರುವರು. ... ಜಹಗೀರ್ದಾರರುಗಳೂ, ನವಾಬರುಗಳೂ, ... ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ... ಶಕ್ತಿಯನ್ನು ಮೆಚ್ಚಿದ್ದಾರೆ

ಆದ್ದರಿಂದ ಡಾ॥ ರಾಜಾರವರನ್ನು ಭೇಟಿ ಮಾಡಿ ನವಯೌವನ, ದೇಹ ಶಕ್ತಿ ಮತ್ತು ಚೈತನ್ಯ ... ಸಂಪಾದಿಸಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ... ದಾಂಪತ್ಯದಿಂದ ... ಸುಖ ಪಡೆಯುವರು

ಕಾಲ – ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4 ರಿಂದ ರಾತ್ರಿ 9 ಘಂಟೆವರೆಗೆ

ರಾಜಾ ಮೆಡಿಕಲ್ ಹಾಲ್,

ಎಲ್ ನಂ 1–745 ಅಶೋಕಾ ರಸ್ತೆ, ಮೈಸೂರು

(ಮೈಸೂರು ಬ್ಯಾಂಕ್ ಬಳಿ ... 3ನೇ ಕಟ್ಟಡ)

ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೂ, ನಮ್ಮ ಗಿರಾಕಿಗಳಿಗೂ ತಿಳಿಯಪಡಿಸುವುದೇನೆಂದರೆ ಕಳೆದ ತಿಂಗಳು ೧೯ನೇ ತಾರೀಖು ರಾತ್ರಿ ನಮ್ಮ ಅಂಗಡಿಯಿಂದ ಸಾವಿರಾರು ರೂಪಾಯಿಗಳ ಬಂಗಾರದ ಒಡವೆವಸ್ತುಗಳು ಕಳುವಾಗಿರುವುದು ಎಲ್ಲರಿಗೂ ತಿಳಿದಿರುವುದಷ್ಟೆ ಅವುಗಳು ಪತ್ತೆಯಾಗಿವೆಯೆಂದು ಅನೇಕರ ಬಾಯಿಮಾತಾಗಿ ಕೆಲವರು ನಮ್ಮನ್ನು ವಂದಿಸಿ, ಜೇಗ ಪತ್ತೆಯಾಯಿತು ಎಂದು ... ಪ್ರಶ್ನಿಸಲು ಅವಕಾಶವಾಗಿದೆ ನಮ್ಮ ಅಂಗಡಿಯಲ್ಲಿ ಕಳುವಾಗಿರುವ ಯಾವ ಪದಾರ್ಥವೂ ಇದುವರೆವಿಗೂ ಪತ್ತೆಯಾಗಿಲ್ಲ ಹಾಗೇನಾದರೂ ಅವುಗಳು ಪತ್ತೆಯಾದಲ್ಲಿ ನಾವೇ ಸಾರ್ವಜನಿಕರ ಗಮನಕ್ಕೆ ಅದನ್ನು ತರಲು ಸಂತೋಷಿಸುತ್ತೇವೆ.

ಎ. ಶಂಕರಶೆಟ್ಟಿ ಅಂಡ್ ಸನ್ಸ್,

ನ್ಯೂ ಸ್ವಾಮಿ ಸರ್ಕಲ್, ಮೈಸೂರು

Edited, Printed and Published by A R. Nagarajan at Sadhvi Press D Subbiah Road, Mysore

ರಿಜಿಸ್ಟರ್ಡ್ ನಂ. 793

ಸಂಪಾದಕ

ವರ್ಷದ ಚಂದಾ ...

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಸಂಪುಟ : ೦೪] SADHVI : WEDNESDAY 2-5-1956 ಮೈಸೂರು ಬುಧವಾರ : ೨-೫-೧೯೫೬ [ಸಂಚಿಕೆ : ...

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌರಿ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೆಗಾಲ, ...
ರೇಷ್ಮೆ ಮತ್ತು ನೂಲಿನ ಸೀರೆಗಳು
M.V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಇನ್ನೈದು ವರ್ಷದಲ್ಲಿ ಸಾಲಿಯಾನ ೫೦ ಕೋಟಿ ಹೆಚ್ಚು ತೆರಿಗೆ

ದ್ವಿತೀಯ ಯೋಜನೆಗೆ ವರ್ಷಂಪ್ರತಿ ೫೦ ಕೋಟಿ ರೂ. ಹೆಚ್ಚು ತೆರಿಗೆ

ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆಯಲ್ಲಿ ಸಂಸ್ಥಾನಗಳ ಮುಖ್ಯಮಂತ್ರಿಗಳ ಘೋಷಣೆ

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯು ನೆನ್ನೆ ದೆಹಲಿಯಲ್ಲಿ ಸೇರಿ ದ್ವಿತೀಯ ಪಂಚವಾರ್ಷಿಕ ಯೋಜನೆ ಬಗ್ಗೆ ಪರಿಶೀಲನೆ ನಡೆಸಿತು. ಯೋಜನೆ ಅವಧಿಯಲ್ಲಿ ಸಾರ್ವಜನಿಕ ಕ್ಷೇತ್ರಕ್ಕಾಗಿ ವೆಚ್ಚ ಮಾಡಲು ಆಲೋಚಿಸಿರುವ ೪೮೦೦ ಕೋಟಿ ರೂ ಪಲ್ಲಿ ... ಅದಕ್ಕಾಗಿ ಕನಿಷ್ಠ ಬೇಕಾಗುವ ೪೫೦ ಕೋಟಿ ರೂ ಗಳನ್ನು ಹೊಸ ತೆರಿಗೆ, ಸಣ್ಣ ಉಳಿತಾಯ ಮತ್ತು ಸಾಲಗಳಿಂದ ಭರ್ತಿ ಮಾಡಬೇಕೆಂದೂ ಸದಸ್ಯರು ಒಮ್ಮತಾಭಿಪ್ರಾಯವನ್ನು ವ್ಯಕ್ತಪಡಿಸಿದರೆಂದು ಹೇಳಲಾಗಿದೆ. ಆಹಾರ ಧಾನ್ಯ ... ಮೊದಲಾದ ಅವಶ್ಯ ವಸ್ತುಗಳ ಬೆಲೆಯು ಏರದಂತೆ ತಡೆಗಟ್ಟಬೇಕೆಂದೂ ಮಂಡಲಿಯು ನಿರ್ಧರಿಸಿತು.

ದ್ವಿತೀಯ ಯೋಜನೆ ಅವಧಿಯಲ್ಲಿ ಆಹಾರ ಧಾನ್ಯವನ್ನು ಈಗ ಇರುವುದಕ್ಕಿಂತ ಒಂದು ಕೋಟಿ ಟನ್ನಿನಷ್ಟು ಹೆಚ್ಚಾಗಿ ಬೆಳೆಯಬೇಕೆಂದೂ, ಅದಕ್ಕೆ ಯೋಗ್ಯ ಬೆಲೆಯು ಇರಬೇಕೆಂದೂ, ವ್ಯವಸಾಯೋತ್ಪನ್ನ ಕಾರ್ಯದಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಯವರು ವಿಶೇಷ ಗಮನ ಕೊಡಬೇಕೆಂದೂ ಅಭಿಪ್ರಾಯಪಡಲಾಯಿತು.

ದ್ವಿತೀಯ ಪಂಚವಾರ್ಷಿಕ ಅವಧಿಯಲ್ಲಿ ಸಾಲಿಯಾನಾ ೫೦ ಕೋಟಿ ರೂ ಗಳ ಹೊಸ ತೆರಿಗೆಗಳನ್ನು ವಿಧಿಸುವ ಬಗ್ಗೆ ಸಂಸ್ಥಾನಗಳ ಮುಖ್ಯಮಂತ್ರಿಗಳು ಒಪ್ಪಿರುವರೆಂದೂ ಹೇಳಲಾಗಿದೆ.

ಜಮೀನಿನಲ್ಲಿ ಮೇಯುತ್ತಿದ್ದ ದನವನ್ನು ದೊಡ್ಡಿಗೆ ಕೂಡಿದ್ದಕ್ಕೆ ಜಗಳ

ಗುಡಿಬಂಡೆ ಘರ್ಷಣೆಯಲ್ಲಿ ಒಬ್ಬನ ಕೊಲೆ

ಒಂದು ಹಸುವು ಮತ್ತೊಬ್ಬರ ಭೂಮಿಯಲ್ಲಿ ಮೇಯುತ್ತಿದ್ದುದೇ ಕಾರಣವಾಗಿ ಗುಡಿಬಂಡೆ ... ಮುಸ್ಲಿಮರೊಡನೆ ವೆಂಕಟಪ್ಪ ... ಮತ್ತು ಅವನ ಇಬ್ಬರು ಮಕ್ಕಳಿಗೆ ಕಳೆದ ಮಂಗಳವಾರ ವಿಪರೀತ ಜಗಳವಾಗಿ, ವೆಂಕಟಪ್ಪನು ಮೃತಪಟ್ಟು ಅವನ ಮಕ್ಕಳು ತೀವ್ರವಾಗಿ ಗಾಯಗೊಂಡರುದಾಗಿ ವರದಿಯಾಗಿದೆ. ವೆಂಕಟಪ್ಪನ ಜಮೀನಿನಲ್ಲಿ ಅಬ್ದುಲ್ ... ಎಂಬುವನ ದನವು ಮೇಯುತ್ತಿದ್ದಾಗ ಅದನ್ನು ಅವರು ಹಿಡಿದು ದೊಡ್ಡಿಗೆ ಕೂಡಿದರೆಂದೂ, ಆ ರಾತ್ರಿ ಅವರುಗಳು ಜಮೀನಿಗೆ ನೀರು ಹಾಯಿಸಲು ಹೋಗಿದ್ದಾಗ ಆಪಾದಿತರು ಅವರನ್ನು ... ಮತ್ತು ಕೊಡಲಿಯಿಂದ ಹೊಡೆದರೆಂದೂ ಹೇಳಲಾಗಿದೆ.

ನಿಕೋಬಾರ್ ಘಟನೆ ಬಗ್ಗೆ ಪರಿಹಾರಕ್ಕಾಗಿ ಪಾಕಿಸ್ಥಾನಕ್ಕೆ ಒತ್ತಾಯ

ನಿಕೋಬಾರ್ ಬಳಿ ನಡೆದ ದಾಳಿಯಿಂದ ... ಭಾರತಕ್ಕೆ ... ಪರಿಹಾರ ಕೊಡಬೇಕೆಂದು ಒತ್ತಾಯಿಸಿ ಭಾರತ ಸರ್ಕಾರವು ಪಾಕಿಸ್ಥಾನಕ್ಕೆ ಪತ್ರ ಬರೆದಿರುವುದಾಗಿ ಗೊತ್ತಾಗಿದೆ.

ಧಾನ್ಯದ ಬೆಲೆ ಏರುವುದನ್ನು ತಡೆಗಟ್ಟಲಾಗುವುದು

ಗೃಹ ಸಚಿವರ ಭರವಸೆ

ಬೆಂಗಳೂರು ೨

ಗೃಹ ಸಚಿವ ಶ್ರೀ ಸಿದ್ದವೀರಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಈ ಸಂಸ್ಥಾನದಲ್ಲಿ ಆಹಾರ ಧಾನ್ಯದ ಅಭಾವ ತಪ್ಪಿಸಲು ಕೇಂದ್ರ ಸರ್ಕಾರದವರು ಭರವಸೆ ನೀಡಿರುವರೆಂದೂ, ಬೆಂಗಳೂರಿನಲ್ಲಿ ಕೇಂದ್ರದವರು ೫೦ ಸಾವಿರ ಟನ್ ಅಕ್ಕಿಯನ್ನು ದಾಸ್ತಾನು ಮಾಡಿರುವರೆಂದೂ, ಧಾನ್ಯದ ಬೆಲೆ ಏರದಂತೆ ತಡೆಯಲು ಸರ್ಕಾರದವರು ಕಾಲದಲ್ಲಿ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳುವರೆಂದೂ ತಿಳಿಸಿದರು.

ಪ್ರಥಮ ವರ್ಷದಲ್ಲಿ ಅಕ್ಕಿ ಬೆಲೆಯು ಈಗ ... ದ್ವಿತೀಯ ... ಬೆಲೆಯು ... ಪರಿಶೀಲಿಸಲಾಗುತ್ತಿದೆಯೆಂದು ... ಸಂಸ್ಥಾನದ ಪ್ರಜೆಗಳ ಮುಖ್ಯ ಆಹಾರವಾದ ರಾಗಿಯ ಬೆಲೆಯು ... ಅಕ್ಕಿಯ ಬೆಲೆಯೂ ಇಳಿಯುತ್ತಿರುವುದೆಂದೂ ಅವರು ಹೇಳಿದರು.

ವಿವಿಧ ರಾಷ್ಟ್ರಗಳಲ್ಲಿ ವೈಭವದ ಮೇ ದಿನಾಚರಣೆ

ಪ್ರಪಂಚದ ನಾನಾ ರಾಷ್ಟ್ರಗಳಲ್ಲಿ ನೆನ್ನೆ ಮೇ ದಿನಾಚರಣೆಯು ನಡೆದು ಲಕ್ಷಾಂತರ ಮಂದಿ ಕಾರ್ಮಿಕರು ವೈಭವದ ಸಮಾರಂಭದಲ್ಲಿ ಭಾಗವಹಿಸಿದ್ದರು.

ರಷ್ಯದ ರಾಜಧಾನಿ ಮಾಸ್ಕೋದಲ್ಲಿ ಮಾರ್ಷಲ್ ಬುಲ್ಗಾನಿನ್‌ರವರು ಸಲ್ಯೂಟ್ ಸ್ವೀಕರಿಸಿದರು. ಅಲ್ಲಿನ ಪ್ರದರ್ಶನಗಳಲ್ಲಿ ಸೈನಿಕರು ಭಾಗವಹಿಸಿದ್ದರು. ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪ್ರದರ್ಶನವೂ ನಡೆಯಿತು. ಆದರೆ ಸ್ಟಾಲಿನರ ಚಿತ್ರಗಳು ಎಲ್ಲೂ ಕಂಡುಬರಲಿಲ್ಲ. ಅವರ ಹೆಸರೂ ಯಾರ ಭಾಷಣದಲ್ಲೂ ಬರಲಿಲ್ಲ.

ಪೀಕಿಂಗ್ ಮತ್ತು ಉತ್ತರ ವಿಯಟ್ನಾಮಿನಲ್ಲಿ ನಡೆದ ಸಮಾರಂಭದಲ್ಲಿ ಸ್ಟಾಲಿನರ ಚಿತ್ರಗಳ ಪ್ರದರ್ಶನವಿತ್ತು. ಪೂರ್ವ ಜರ್ಮನಿ, ಪೋಲೆಂಡ್, ಯುಗೊಸ್ಲೇವಿಯಾ, ಫ್ರಾನ್ಸ್, ಜಪಾನ್, ಮುಂತಾದ ರಾಷ್ಟ್ರಗಳ ರಾಜಧಾನಿಗಳಲ್ಲೂ ಮತ್ತು ಪೋಪ್ ಜಗದ್ಗುರುಗಳಿರುವ ವ್ಯಾಟಿಕನ್ ನಗರದಲ್ಲೂ ವೈಭವದ ಸಮಾರಂಭಗಳು ಜರುಗಿದುವು.

ಸಂಸ್ಥಾನದಲ್ಲಿ ನೂರು ನೂಲಿನ ಕಾರ್ಖಾನೆಗಳ ಸ್ಥಾಪನೆ

ಏಳು ಲಕ್ಷ ... ನೂಲಿನ ಕಾರ್ಖಾನೆಗಳನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸಲಾಗುವುದೆಂದೂ, ಅವುಗಳ ಪೈಕಿ ನೂರರಷ್ಟು ಮೈಸೂರಿನಲ್ಲಿ ಸ್ಥಾಪಿಸಲಾಗುವುದೆಂದೂ ತಿಳಿದುಬಂದಿದೆ. ಈ ಕಾರ್ಖಾನೆಗಳಿಂದ ... ಜನರಿಗೆ ಉದ್ಯೋಗವು ದೊರೆಯುವುದು.

ಚಿಕ್ಕನಾಯಕನಹಳ್ಳಿಯಲ್ಲಿ ಹೊಸ ಸಿಮೆಂಟ್ ಕಾರ್ಖಾನೆ

ಬೆಂಗಳೂರು ೨

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ... ಕೋಟಿ ರೂ ವೆಚ್ಚದಿಂದ ಹೊಸ ಸಿಮೆಂಟ್ ಕಾರ್ಖಾನೆಯೊಂದನ್ನು ಸ್ಥಾಪಿಸುವ ಬಗ್ಗೆ ಸಂಸ್ಥಾನ ಸರ್ಕಾರದ ಯೋಜನೆಯನ್ನು ಕೈಗಾರಿಕಾ ಸಮಿತಿಯವರು ಮಂಜೂರು ಮಾಡಿರುವರು. ಕಾರ್ಖಾನೆಯಲ್ಲಿ ಕಾರ್ಯ ನಡೆಯುವ ಬಗ್ಗೆ ... ಸರ್ಕಾರದವರೇ ಹೊಗದ ... ಈ ವರ್ಷಕ್ಕೆ ... ಲಕ್ಷ ಟನ್ನು ಸಿಮೆಂಟನ್ನು ಉತ್ಪನ್ನ ಮಾಡಲಾಗುವುದೆಂದೂ ಗೃಹ ಸಚಿವ ಸಿದ್ದವೀರಪ್ಪನವರು ತಿಳಿಸಿರುವರು.

ತ್ವರಿತ ಕೈಗಾರಿಕಾಭಿವೃದ್ಧಿಯೇ ದ್ವಿತೀಯ ಯೋಜನೆಯ ಗುರಿ

ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆಯಲ್ಲಿ ನೆಹರೂರವರ ಭಾಷಣ

ಪ್ರಧಾನಿ ನೆಹರೂರವರು ನೆನ್ನೆ ದೆಹಲಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯಲ್ಲಿ ಮಾತನಾಡುತ್ತಾ ರಾಷ್ಟ್ರದಲ್ಲಿ ಕೈಗಾರಿಕೆಯನ್ನು ಆದಷ್ಟು ಬೇಗ ಅಭಿವೃದ್ಧಿಗೊಳಿಸುವುದೇ ದ್ವಿತೀಯ ಪಂಚವಾರ್ಷಿಕ ಯೋಜನೆಯ ಗುರಿಯೆಂದೂ, ಕೈಗಾರಿಕೆಯು ಅಭಿವೃದ್ಧಿಗೊಳ್ಳದ ರಾಷ್ಟ್ರ ... ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲೂ ಅದು ಅತ್ಯವಶ್ಯಕವೆಂದು ನುಡಿದರು. ಈ ಅವಧಿಯಲ್ಲಿ ಹೆಚ್ಚಿಗೆ ಆಹಾರ ಧಾನ್ಯದ ಉತ್ಪನ್ನಕ್ಕೆ ಗಮನ ಕೊಡುವುದು ಮತ್ತು ಧಾನ್ಯದ ಬೆಲೆ ಏರದಂತೆ ನೋಡಿಕೊಳ್ಳುವುದು ಆವಶ್ಯವೆಂದೂ ಅವರು ತಿಳಿಸಿ ಈ ದೃಷ್ಟಿಯಿಂದ ವಿದೇಶಗಳಿಂದ ಧಾನ್ಯವನ್ನು ಆಮದು ಮಾಡಿ, ಸಂಗ್ರಹಿಸಲಾಗುವುದೆಂದೂ ಹೇಳಿದರು.

ನೇಪಾಳದ ದೊರೆಯ ಪಟ್ಟಾಭಿಷೇಕದ ಸಂಭ್ರಮ

ಇಂದು ನಡೆಯುವ ನೇಪಾಳದ ದೊರೆ ಮಹೇಂದ್ರ ವೀರವಿಕ್ರಮರವರ ಪಟ್ಟಾಭಿಷೇಕಕ್ಕಾಗಿ ರಾಜಧಾನಿ ಖಟ್ಮಂಡುವಿನಲ್ಲಿ ವಿಶೇಷ ಸಿದ್ಧತೆಗಳನ್ನು ಮಾಡಲಾಗಿದೆ. ಸಮಾರಂಭಕ್ಕೆ ಸಂಬಂಧಪಟ್ಟ ವೇದೋಕ್ತ ಕಾರ್ಯಗಳು ಮೊನ್ನೆಯಿಂದ ಆರಂಭವಾಗಿವೆ.

ಪಟ್ಟಾಭಿಷೇಕಕ್ಕಾಗಿ ವಿದೇಶಗಳಿಂದ ನಿಯೋಗಗಳು ಆಗಮಿಸಿವೆ. ಭಾರತ, ಇಂಗ್ಲೆಂಡ್, ಸಿಕ್ಕಿಂ, ಅಮೆರಿಕ, ಫ್ರಾನ್ಸ್, ಜಪಾನ್, ಬರ್ಮಾ, ಚೀಣಾ ಮತ್ತು ಇತರ ದೇಶಗಳ ನಿಯೋಗಗಳು ಮೊನ್ನೆ ಖಟ್ಮಂಡುವನ್ನು ತಲುಪಿದುವು. ... ರಾಷ್ಟ್ರಪತಿ ಡಾ. ರಾಜೇಂದ್ರಪ್ರಸಾದರವರ ನಾಯಕತ್ವದಲ್ಲಿ ಬಂದ ಭಾರತದ ನಿಯೋಗ ಮತ್ತು ಚೀಣಾ ... ನಿಯೋಗಗಳಿಗೆ ನೇಪಾಳದ ಜನತೆಯು ಅತ್ಯುತ್ಸಾಹದ ಸ್ವಾಗತವನ್ನು ನೀಡಿತು.

ಪುರಸಭಾಧಿವೇಶನ

ಮೈಸೂರು ೨

ಮೊನ್ನೆ ನಡೆದ ಪುರಸಭಾಧಿವೇಶನದಲ್ಲಿ ... ಕೃಷ್ಣರಾಜ ... ರಸ್ತೆಯ ... "ಡೀ ರೋಡ್" ಎಂದಿರುವುದನ್ನು "ಗೀತಾ ಮಂದಿರದ ರಸ್ತೆ" ಎಂದು ಬದಲಾಯಿಸಲು ... ನಿರ್ಣಯವನ್ನು ... ಮಂಡಿಸಿದ್ದರು.

ಸದ್ಯಾಜಿರಾವ್ ರಸ್ತೆಯ ... ಮುಂದೆ ... ನಿಲ್ಲಿಸುವುದನ್ನು ತಪ್ಪಿಸಬೇಕೆಂದು ಕೋರುವ ಶ್ರೀ ... ನಿರ್ಣಯವನ್ನೂ, ಪುರಸಭೆಯೇ ಸ್ವಂತ ... ಸ್ಥಾಪಿಸಬೇಕೆಂದು ಕೋರುವ ಶ್ರೀ ಸಿ ಎನ್ ನಾರಾಯಣರಾಯರ ನಿರ್ಣಯವನ್ನೂ ಆಡಳಿತ ... ಪರಿಶೀಲನೆಗೆ ಬಿಡಲಾಯಿತು.

ನಗರದ ವಿದ್ಯಾರ್ಥಿಗಳಿಗೆ ಎಸ್ ಎಸ್ ಎಲ್ ಸಿ ತರಗತಿಯವರೆಗೆ ಉಚಿತ ವಿದ್ಯಾಭ್ಯಾಸವನ್ನು ಕೊಡಬೇಕೆಂದು ಕೋರುವ ನಾರಾಯಣರಾಯರ ಮತ್ತೊಂದು ನಿರ್ಣಯವು ... ಮತಗಳಿಂದ ತಿರಸ್ಕೃತವಾಯಿತು. ಅದು ಆಡಳಿತ ಸಮಿತಿಯ ಪರಿಶೀಲನೆಗೆ ಕಳುಹಲ್ಪಟ್ಟಿತೆಂದು ನೆನ್ನೆ ತಪ್ಪಾಗಿ ಪ್ರಕಟವಾಗಿತ್ತು.

ಮೇ ದಿನಾಚರಣೆ

ನಗರದ ಹೋಟೆಲ್ ಕೆಲಸಗಾರರ ಸಂಘದ ಕಛೇರಿಯಲ್ಲಿ ನೆನ್ನೆ ರಾತ್ರಿ ಮೇ ದಿನವನ್ನು ಆಚರಿಸಲಾಯಿತು. ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಸೋಮಸುಂದರಮೂರ್ತಿರವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎಂ ಎ ... ಪಿ ಎಸ್ ... ಕೆ ಪಿ ನಾರಾಯಣ್ ... ಭಾಷಣ ಮಾಡಿ ಮೇ ದಿನದ ಚರಿತ್ರೆಯನ್ನೂ ಮತ್ತು ಕಾರ್ಮಿಕರ ಸಂಘಗಳನ್ನು ಬಲಪಡಿಸಿ ತಮ್ಮೊಳಗೆ ತಮ್ಮ ಕುಂದುಕೊರತೆಗಳನ್ನು ನಿವಾರಣೆ ಮಾಡಿಕೊಳ್ಳುವ ಬಗೆಯನ್ನೂ ವಿವರಿಸಿದರು.

ಅಪೀಲು ನ್ಯಾಯಾಲಯಕ್ಕೆ ಕಳುಹುವುದಕ್ಕಾಗಿ ದಸ್ತು

ಲಷ್ಕರ್ ಮೊಹಲ್ಲಾದ ಲಕ್ಷ್ಮಿ ಎಂಬುವಳು ದೊಡ್ಡಮ್ಮ ಎಂಬಾಕೆಯನ್ನು ... ಮಾಡಿದ ಬಗ್ಗೆ ಲಷ್ಕರ್ ಪೊಲೀಸರು ಆಕೆಯ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ಆಕೆಗೆ ಆ ದಿನ ... ದಂಡ ವಿಧಿಸಿರುವರು.

ವಿಪರೀತ ಮಳೆಯಿಂದ ರೈಲು ಸಂಚಾರಕ್ಕೆ ಅಡ್ಡಿ

ಆಂಧ್ರದ ಕೆಲ ಪ್ರದೇಶದಲ್ಲಿ ಕಳೆದ ... ದಿವಸದಿಂದ ವಿಪರೀತ ಮಳೆ ಬಂದುದರಿಂದ ತಂತಿ ಮತ್ತು ಟೆಲಿಫೋನ್ ಸಂಪರ್ಕವು ಕಡಿದುಹೋಗಿತ್ತು. ಮತ್ತು ಮದರಾಸು-ದೆಹಲಿ ನಡುವೆ ಓಡಾಡುವ "ಗ್ರಾಂಡ್ ಟ್ರಂಕ್ ಎಕ್ಸ್‌ಪ್ರೆಸ್" ಮತ್ತು ಕಲ್ಕತ್ತಾ ಮದ್ರಾಸ್ ಮೇಲ್ ರೈಲುಗಳ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು.

ಶಾಲಾ ಶುಲ್ಕದ ಮೇಲೆ ದಂಡ ವಸೂಲ್ಮಾಡಲಾಗದು

ಮುಖ್ಯೋಪಾಧ್ಯಾಯರ ವಿಚಾರ ಗೋಷ್ಠಿಯ ಶಿಫಾರಸು

ಮೈಸೂರು ೨

ನಗರದಲ್ಲಿ ಕಳೆದ ತಿಂಗಳು ೧೬ರಿಂದ ೨೧ನೇ ತಾರೀಖಿನವರೆಗೆ ಸಮಾವೇಶಗೊಂಡಿದ್ದ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರುಗಳ ವಿಚಾರ ಗೋಷ್ಠಿಯು ಕೆಳಗೆ ಕಂಡ ಶಿಫಾರಸುಗಳನ್ನು ಮಾಡಿದೆ:—

ಮುಖ್ಯೋಪಾಧ್ಯಾಯರುಗಳು ಮತ್ತು ಸಹಾಧ್ಯೋಪಾಧ್ಯಾಯರುಗಳಲ್ಲಿ ಮಧುರ ಬಾಂಧವ್ಯವು ಏರ್ಪಟ್ಟು ಪರಸ್ಪರ ಸಹಕಾರದಿಂದ ಶಾಲಾ ಕಾರ್ಯಕಲಾಪಗಳು ಸುಗಮವಾಗಿ ನಡೆಯುವಂತಾಗಲು ಉಪಾಧ್ಯಾಯರುಗಳ ಸಮಿತಿಯೊಂದನ್ನು ರಚಿಸಬೇಕು,

ಶಾಲಾ ಕಾರ್ಯಗಳು ಶಿಸ್ತಿನಿಂದ ನಡೆಯುವುದಕ್ಕಾಗಿ ಉಪಾಧ್ಯಾಯರುಗಳು ವಾರಕ್ಕೆ ೧೮ ಗಂಟೆ ಪಾಠ ಮತ್ತು ೬ ವಿದ್ಯಾರ್ಥಿಗಳಿಗಿಂತ ಹೆಚ್ಚಾಗಿ ಪ್ರೈವೇಟ್ ಪಾಠ ಹೇಳದಂತೆ ನಿಗದಿ ಮಾಡಬೇಕು,

ತರಗತಿ ಶುಲ್ಕಕ್ಕೆ ದಂಡ ವಿಧಿಸುವ ಪದ್ಧತಿಯನ್ನು ವಜಾ ಮಾಡಬೇಕು,

ವಿದ್ಯಾರ್ಥಿಗಳಲ್ಲಿ ಶಿಸ್ತಿನ ಮನೋಭಾವ ಮತ್ತು ಜವಾಬ್ದಾರಿಯನ್ನುಂಟುಮಾಡಲು ಶಾಲಾ ಸಂಘಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಅಧಿಕಾರವನ್ನು ವಹಿಸಬೇಕು,

ಪುಸ್ತಕ ಭಂಡಾರವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುವ ಅಭ್ಯಾಸವನ್ನುಂಟುಮಾಡಲು ತರಗತಿಗಳಲ್ಲಿ ಪುಸ್ತಕ ಭಂಡಾರಗಳನ್ನು ಏರ್ಪಡಿಸಿ ಅವುಗಳ ಜವಾಬ್ದಾರಿಯನ್ನು ವಿದ್ಯಾರ್ಥಿಗಳಿಗೆ ವಹಿಸಬೇಕು,

ವಿದ್ಯಾರ್ಥಿಗಳಲ್ಲಿ ಪತ್ರಿಕೆಗಳನ್ನು ಓದುವ ಅಭ್ಯಾಸವನ್ನು ಬೆಳೆಸಲು ವೃತ್ತ ಪತ್ರಿಕಾ ಕ್ಲಬ್ಬುಗಳನ್ನು ಏರ್ಪಡಿಸಿ ಆಯಾ ದಿನದ ಪ್ರಮುಖ ಸುದ್ದಿಗಳನ್ನು ಬೋರ್ಡಿನ ಮೇಲೆ ಬರೆಯುವ ಪದ್ಧತಿಯನ್ನು ಜಾರಿಗೆ ತರಬೇಕು ಮತ್ತು ವಾಚನಾಲಯದ ಉಪಯೋಗವನ್ನು ಚೆನ್ನಾಗಿ ಪಡೆಯುವ ವಿದ್ಯಾರ್ಥಿಗೆ ಬಹುಮಾನವನ್ನು ಕೊಡುವ ವ್ಯವಸ್ಥೆ ಮಾಡಬೇಕು

ಪುರಾಣ ಶ್ರವಣ

ನಗರದ ದೇವರಾಜ ಮೊಹಲ್ಲಾ ಕೊತ್ವಾಲ್ ರಾಮಯ್ಯನವರ ಬೀದಿಯ ೧೯೪೦ನೇ ನಂಬರು ಎಂ ಶೇಷಗಿರಿರಾಯರ ಮನೆಯಲ್ಲಿ ಇಂದಿನಿಂದ ಪ್ರತಿ ದಿನ ಬೆಳಗ್ಗೆ ೭.೩೦ ರಿಂದ ೯.೦೦ರ ವರೆವಿಗೆ ಉಪನ್ಯಾಸ ರತ್ನಾಕರ ವೇ|| ಜಯತೀರ್ಥಾಚಾರ್ಯರಿಂದ ವೈಶಾಖ ಮಾಸ ಮಹಾತ್ಮ್ಯೆ ಪುರಾಣವನ್ನು ಏರ್ಪಡಿಸಿದೆ

ಶ್ರೀರಾಮ ಪಟ್ಟಾಭಿಷೇಕ

ರಾಜಧಾನಿಯ ಹನುಮಾನ್ ಸಂಘದ ಆಶ್ರಯದಲ್ಲಿ ನೂರಡಿ ರಸ್ತೆ ಆಸ್ಪತ್ರೆ ಎದುರಿನಲ್ಲಿರುವ ಶ್ರೀ ರಾಮನರಸಿಂಹಯ್ಯನವರ ಮನೆಯಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ರಾಮ ಪಟ್ಟಾಭಿಷೇಕವನ್ನು ಏರ್ಪಡಿಸಲಾಗಿದೆ. ವಿ|| ಎಗ್ ನಂಜುಂಡಸ್ವಾಮಿಯವರ ಗಾಯನವು, ವಿ|| ಎ ಕೃಷ್ಣಮೂರ್ತಿಯವರ ಪಿಟೀಲು ಮತ್ತು ವಿ|| ಎಚ್ ಟಿ. ನಾಗಣ್ಣನವರ ಮೃದಂಗದೊಡನೆ ನಡೆಯುವುದು

ದೊಣ್ಣೆಯಿಂದ ಹೊಡೆದು ಸಿಂಹವನ್ನು ಕೊಂದ ಮಹಿಳೆ

ಆಫ್ರಿಕಾ ಖಂಡದ ಉತ್ತರ ರೊಡೇಶಿಯಾದ ಲುಂಡಾಜಿ ಎಂಬಲ್ಲಿ ಆನಿ ನೆಗ್ಯಾಂಬೋ ಎಂಬ ಹೆಂಗಸು ಕೇವಲ ದೊಣ್ಣೆಯೊಂದರಿಂದ ಸಿಂಹವನ್ನು ಹೊಡೆದು ಕೊಂದು ತನ್ನ ಗಂಡನನ್ನು ಉಳಿಸಿಕೊಂಡ ಪ್ರಸಂಗವು ವರದಿಯಾಗಿದೆ. ತನ್ನ ಮನೆಯ ಆಸನ್ನು ಕದ್ದುಕೊಂಡು ಹೋದ ಹೆಣ್ಣು ಸಿಂಹವನ್ನು ಆಕೆಯ ಪತಿಯು ಬೆನ್ನಟ್ಟಿದಾಗ ಅದು ಹಿಂದಿರುಗಿ ಅವನ ಮೇಲೆ ಬಿದ್ದು ವಿಪರೀತ ಗಾಯಗೊಳಿಸಿತೆಂದೂ, ನೋವಿನಿಂದ ಅವನು ಕೂಗಿಕೊಂಡದ್ದನ್ನು ಕೇಳಿ ಆಕೆಯು ಆ ಸ್ಥಳಕ್ಕೆ ಧಾವಿಸಿ ಆ ಮೃಗದ ತಲೆಗೆ ದೊಣ್ಣೆಯಿಂದ ಬಲವಾಗಿ ಹೊಡೆದು ಕೊಂದಳೆಂದೂ ವರದಿಯಾಗಿದೆ

ಸಂಸ್ಥಾನದ ದ್ವಿತೀಯ ಪಂಚ ವಾರ್ಷಿಕ ಯೋಜನೆ

ಅಂದಾಜಿನಲ್ಲಿ ೨ ಕೋಟಿ ರೂ. ಗಳಷ್ಟು ಹೆಚ್ಚುವರಿ

ಬೆಂಗಳೂರು ೨

ಕೇಂದ್ರ ಆಯೋಜನಾ ಮಂಡಲಿಯವರು ಅಂತಿಮವಾಗಿ ಸಿದ್ಧಗೊಳಿಸಿರುವ ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಪ್ರಕಾರ ಸಂಸ್ಥಾನದ ಯೋಜನೆಯ ಅಂದಾಜು ೬೮ ಕೋಟಿಯಿಂದ ೭೦.೬ ಕೋಟಿ ರೂ ಗಳಿಗೆ ಏರಿಸಲ್ಪಟ್ಟಿದೆಯೆಂದು ವರದಿಯಾಗಿದೆ ಭಾರತದ ಎಲ್ಲಾ ಪ್ರಾಂತಗಳ ಯೋಜನೆಗಳ ಒಟ್ಟು ಮೊತ್ತವನ್ನು ೨,೨೧೪ ರಿಂದ ೨,೩೪೦ ಕೋಟಿ ರೂ ಗಳಿಗೆ ಏರಿಸಿದೆ ಯೋಜನೆಯ ಒಟ್ಟು ಅಂದಾಜಿನಲ್ಲಿ ಬರಬಹುದಾದ ೪೦೦ ಕೋಟಿ ರೂ ಕೊರತೆಯನ್ನು ತುಂಬಲು ೪೫೦ ಕೋಟಿ ರೂ ನಷ್ಟು ಹಣವನ್ನು ಹೊಸ ಕಂದಾಯ ಮತ್ತು ತೆರಿಗೆಗಳಿಂದ ಎತ್ತಬೇಕೆಂದೂ, ಅವರಲ್ಲಿ ಪ್ರಾಂತ ಸರ್ಕಾರಗಳು ಒಟ್ಟು ೨೫೦ ಕೋಟಿ ರೂ ಗಳನ್ನು ಸಂಗ್ರಹಿಸಬೇಕೆಂದೂ ಮಂಡಲಿಯವರು ತಮ್ಮ ವರದಿಯಲ್ಲಿ ಸೂಚಿಸಿದ್ದಾರೆ ಅದರಲ್ಲಿ ಮೈಸೂರು ಸಂಸ್ಥಾನವು, ಮಾರಾಟ, ಕೃಷಿ ಆದಾಯ, ಅಭಿವೃದ್ಧಿ, ವಿದ್ಯುಚ್ಛಕ್ತಿ ದರ ಮುಂತಾದುವುಗಳ ಮೇಲಿನ ತೆರಿಗೆಯಿಂದ ಸುಮಾರು ೫ ಕೋಟಿ ರೂ.ಗಳನ್ನು ಎತ್ತಲು ಸೂಚಿಸಲಾಗಿದೆ

೧೦ ವರ್ಷಗಳಲ್ಲಿ ಸಕಲ ಕೈಗಾರಿಕೆಗಳ ಮೇಲೂ ಸರ್ಕಾರದ ಹತೋಟಿ

ಕೇಂದ್ರ ಸರ್ಕಾರದ ನೂತನ ಕೈಗಾರಿಕಾ ನೀತಿಯ ನಿರ್ಣಯವನ್ನು ವಿವರಿಸುತ್ತಾ ಕೇಂದ್ರ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಲೋಕಸಭೆಯಲ್ಲಿ ಮಾತನಾಡಿ, ೨ನೇ ವಿಭಾಗದ ಕೈಗಾರಿಕೆಗಳಲ್ಲೂ ಸರ್ಕಾರದವರು ಮುಖ್ಯ ಸ್ಥಾನ ಪಡೆದುಕೊಳ್ಳಲಿರುವರೆಂದೂ, ೫ ಅಥವಾ ೧೦ ವರ್ಷಗಳಲ್ಲಿ ಇದನ್ನು ಸಾಧಿಸಲಾಗುವುದೆಂದೂ ತಿಳಿಸಿರುತ್ತಾರೆ ಎಲ್ಲಾ ವಿಧವಾದ ಪ್ರಮುಖ ಕೈಗಾರಿಕೆಗಳ ಮೇಲೂ ಸರ್ಕಾರದವರು ಹತೋಟಿ ಹೊಂದುವ ಉದ್ದೇಶವಿದೆಯೆಂದೂ ಅವರು ನುಡಿದಿರುವರು

ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ

ಕಮ್ಯೂನಿಸ್ಟ್ ಪಕ್ಷದ ನೂತನ ಕೇಂದ್ರ ಸಮಿತಿಯು ೯ ಜನ ಸದಸ್ಯರುಳ್ಳ ಪಾಲಿಟ್‌ಬ್ಯೂರೊ ಎಂಬ ನಿರ್ವಾಹಕ ಸಮಿತಿಯನ್ನು ಚುನಾಯಿಸಿದೆ ಅದರಲ್ಲಿ ಪ್ರಧಾನ ಕಾರ್ಯದರ್ಶಿ ಅಜಯ ಘೋಷ್, ಇ ಎಂ ಎಸ್ ನಂಬೂದರಿಪಾಡ್, ಎಸ್ ಎ ಡಾಂಗೆ, ಪಿ ರಾಮಮೂರ್ತಿ, ಹರಿಕೃಷ್ಣಸಿಂಗ್ ಸುರಜಿತ್, ಭೂಪೇಶಗುಪ್ತ, ಪಿ ಸುಂದರಯ್ಯ, ಸಿ ರಾಜೇಶ್ವರರಾವ್ ಮತ್ತು ಜಡ್ ಎ. ಅಹಮದ್‌ರವರು ಇರುವರು

"ರಸಾಯನ ಶಾಸ್ತ್ರ"

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಶ್ರೀ ಎಗ್. ಸುಬ್ರಹ್ಮಣ್ಯರವರಿಂದ ವಿರಚಿತವಾಗಿ, ರಾಮಚಂದ್ರ ಅಗ್ರಹಾರದ ಶ್ರೀಕಾಂತ ಬಿಸಿನೆಸ್ ಸಿಂಡಿಕೇಟಿನವರಿಂದ ಪ್ರಕಟಿಸಲ್ಪಟ್ಟಿರುವ "ರಸಾಯನ ಶಾಸ್ತ್ರ"ದ ಕಿರು ಹೊತ್ತಿಗೆಯ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸಿದ್ದೇವೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸರಳ ಮತ್ತು ಐಚ್ಛಿಕ ಭಾಗಗಳೆರಡಕ್ಕೂ ಅವಶ್ಯಕವಾದ ವಿಷಯಗಳನ್ನು ಲೇಖಕರು ಸುಲಭ ಶೈಲಿಯಲ್ಲಿ ವಿವರಿಸಿದ್ದಾರೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಇದು ಬಹಳ ಉಪಯುಕ್ತವಾಗಿದೆ ೬೮ ಪುಟಗಳ ಈ ಪುಸ್ತಕದ ಬೆಲೆ ಎಂಟಾಣೆ

ಮೈಸೂರು ಪೇಟೆ ಧಾರಣೆ

	ರೂ ಆ. ಪ	ರೂ ಪರಿಗೆ
ಕಡಲೆಕಾಯಿ	೧೯ ೦ ೦	೨೨ ೧೦ ೦
ಹುಚ್ಚೆಳ್ಳು	೪೧ ೦ ೦	
ಹೊಂಗೆಬೀಜ	೨೫ ೩ ೦	
ಹುಣಸೇಬೀಜ	೫ ೦ ೦	೯ ೪ ೦
ಹುರುಳಿ	೨೭ ೮ ೦	೨೯ ೪ ೦
ಸೀಗೆಕಾಯಿ	೬ ೧೦ ೦	೪ ೦ ೦
ಹುಣಸೇಹಣ್ಣು	೪ ೮ ೦	೬ ೦ ೦
ಕೊಬ್ಬರಿ	೪ ೦ ೦	೧೪ ೪ ೦
ತೆಂಗಿನಕಾಯಿ ೧೦೦೦	೧೧೯ ೦ ೦	೧೧೪ ೦ ೦

೧೬ ಮಂದಿ ಜೂಜುಗಾರರಿಗೆ ೪೨೫ ರೂ. ದಂಡ

ಶ್ರೀರಂಗಪಟ್ಟಣ ೨

ಈ ತಾಲ್ಲೂಕಿನ ಸೋಮವಾರಪೇಟೆಯ ಈರೇಗೌಡ ಎಂಬುವರ ಮನೆಯಲ್ಲಿ ಕಳೆದ ಶನಿವಾರ ರಾತ್ರಿ ೧೬ ಜನರು ಪರೇಲಾ ಜೂಜಾಟವಾಡುತ್ತಿದ್ದುದನ್ನು ಇಲ್ಲಿನ ಪೋಲೀಸರು ಪತ್ತೆ ಹಚ್ಚಿ ೧೨೨-೧೪-೨ ಅನ್ನು ವಶಪಡಿಸಿಕೊಂಡು ಸ್ಥಳೀಯ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ೧೬ ಮಂದಿ ಅಪರಾಧಿಗಳಿಗೂ ತಲಾ ೨೫ ರೂ. ಮತ್ತು ಮನೆ ಮಾಲೀಕನಿಗೆ ೫೦ ರೂ ಜುಲ್ಮಾನೆ ವಿಧಿಸಲಾಯಿತೆಂದು ವರದಿಯಾಗಿದೆ

ಪೌರಸಭೆಗೆ ನೂತನ ಅಧ್ಯಕ್ಷರು

ಇಲ್ಲಿನ ಪೌರಸಭೆಯ ಅಧ್ಯಕ್ಷ ಚುನಾವಣೆಯಲ್ಲಿ ಶ್ರೀ ಬಿ. ಬೋರೇಗೌಡರು ಬಹುಮತ ಪಡೆದು ಆರಿಸಲ್ಪಟ್ಟಿರುವರು

ಅಜಂತಾದಲ್ಲಿ ಹೊಸ ಗುಹೆ ಪತ್ತೆ

ಅಜಂತಾದಲ್ಲಿ ವಿಹಾರವೆಂಬ ಹೊಸ ಗುಹೆಯೊಂದು ಪತ್ತೆಯಾಗಿದೆಯೆಂದು ವರದಿಯಾಗಿದೆ ಅದು ಕ್ರಿಸ್ತಶಕ ೨ನೇ ಶತಮಾನದ್ದೆಂದು ಹೇಳಲಾಗಿದೆ. ಅಲ್ಲಿ ರಸ್ತೆಯನ್ನು ನಿರ್ಮಿಸುವ ಸಮಯದಲ್ಲಿ ಗುಹೆಯು ಪತ್ತೆಯಾಯಿತು.

ಅಂಡಮಾನ್ ರಾಜಧಾನಿಯಲ್ಲಿ ಚಲಿಸುವ ಆಸ್ಪತ್ರೆ

ಅಂಡಮಾನಿನ ರಾಜಧಾನಿ ಪೋರ್ಟ್‌ಬ್ಲೇರಿಗೆ ಶಸ್ತ್ರ ಚಿಕಿತ್ಸೆ ಮತ್ತು ಇತರ ಸಾಧನಗಳುಳ್ಳ "ಚಲಿಸುವ ಆಸ್ಪತ್ರೆ" ಯನ್ನು ಕಳುಹಲಾಗಿದೆ ಆಸ್ಟ್ರೇಲಿಯಾ ಸರ್ಕಾರದವರು ಒಂದು ಮೋಟಾರು ಹಡಗಿನಲ್ಲಿ ಆಸ್ಪತ್ರೆಯನ್ನು ನಿರ್ಮಿಸಿ ಭಾರತದ ಸರ್ಕಾರಕ್ಕೆ ಒಪ್ಪಿಸಿದ್ದರು ಅದನ್ನು ಈಗ ಅಂಡಮಾನಿಗೆ ಕಳುಹಲಾಗಿದೆ

ಸಿಮೆಂಟಿನ ಹಂಚಿಕೆಗೆ ನೂತನ ವ್ಯವಸ್ಥೆ

ಸಿಮೆಂಟಿನ ಆಮದು ಮತ್ತು ಹಂಚಿಕೆಯನ್ನು ಸರ್ಕಾರದ ವ್ಯಾಪಾರ ಸಂಸ್ಥೆಯು ನಿರ್ವಹಿಸುವ ಬಗ್ಗೆ ಸಧ್ಯದಲ್ಲೇ ವ್ಯವಸ್ಥೆ ಮಾಡಲಾಗುತ್ತಿದೆಯೆಂದು ವರದಿಯಾಗಿದೆ.

ಓವರ್‌ಲೋಡಿಗಾಗಿ ಸರ್ಕಾರಿ ಬಸ್ ಕಂಡಕ್ಟರಿಗೆ ಶಿಕ್ಷೆ

ಕಳೆದ ಮಾರ್ಚಿ ತಿಂಗಳು ೫ ನೇ ತಾರೀಖು ಎಂ ವೈ ಸಿ ೪೪೯೩ ನೇ ನಂಬರಿನ ಸರ್ಕಾರೀ ಬಸ್ಸಿನಲ್ಲಿ ಕಂಡಕ್ಟರ್ ಮುನಿಸ್ವಾಮಿ ಎಂಬಾತನು ಒಂಭತ್ತು ಜನ ಪ್ರಯಾಣಿಕರನ್ನು ಹೆಚ್ಚಾಗಿ ಕೂರಿಸಿದ್ದುದಕ್ಕಾಗಿ ಅವನ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ಮೊನ್ನೆ ಅವನಿಗೆ ೨೦ ರೂ ದಂಡ, ಅಥವಾ ೧೫ ದಿನ ಸಾದಾ ಸಜಾ ವಿಧಿಸಿದರು.

1956 EDITIONS
Qns & Ans. 1950-55
Ac Hr & Lr. Exams
★
Sri Ramachandra Book Depot,
MYSORE

ಗಾಯತ್ರೀ ಟಾಕೀಸ್
2-5-56 ರಿಂದ 2 ದಿನಗಳು
ದಿನವಹಿ ಮೂರು ಪ್ರದರ್ಶನ
ವಾರ್ನರ್ ರವರ ಅಮೋಘ ಚಿತ್ರರಾಜ,
ಹಾಗೂ ಭಯಾನಕ ಚಿತ್ರ
ಅನ್‌ಚೇಯ್ನ್ಡ್
(UNCHAINED)
4—5—56 ರಿಂದ
ಸ್ಟೂಡೆಂಟ್ ಪ್ರಿನ್ಸ್
ಎಂ ಜಿ ಎಂ ರವರ ಟೆಕ್ನಿಕಲರ್ ವರ್ಣರಂಜಿತ ಚಿತ್ರ
ಬೆಳಗಿನ ಪ್ರದರ್ಶನ 5 ಮತ್ತು 6ನೇ ತಾರೀಖು
ಷಾದಿಯಾ

ಅಪೀಲು ಹೂಡಲು ಸುಚೇತಾರವರಿಗೆ ಅವಕಾಶವಿಲ್ಲ

ಶ್ರೀಮತಿ ಸುಚೇತಾ ಕೃಪಲಾನಿಯವರ ಲೋಕಸಭಾ ಸದಸ್ಯತ್ವವನ್ನು ಚುನಾವಣಾ ನ್ಯಾಯ ಮಂಡಲದವರು ರದ್ದುಗೊಳಿಸಿ ತೀರ್ಪಿತ್ತ ಸಂಬಂಧದಲ್ಲಿ ಅಪೀಲು ಹೂಡಲು ಅವರಿಗೆ ಸುಪ್ರೀಂ ಕೋರ್ಟಿನವರು ಅನುಮತಿಯನ್ನು ನಿರಾಕರಿಸಿದರೆಂದು ತಿಳಿದುಬಂದಿದೆ

ಗಾಜಾ ಗಡಿ ಪ್ರದೇಶದಲ್ಲಿ ವಿಶ್ವಸಂಸ್ಥೆಯ ವೀಕ್ಷಕ ಪಡೆ

ಇಸ್ರೇಲ್ ಮತ್ತು ಈಜಿಪ್ಟ್‌ಗಳ ನಡುವೆ ಕಲಹವನ್ನು ನಿವಾರಿಸುವ ಸಂಬಂಧವಾಗಿ ಗಾಜಾ ಗಡಿ ಪ್ರದೇಶದಲ್ಲಿ ವಿಶ್ವಸಂಸ್ಥೆಯ ವೀಕ್ಷಕ ಠಾಣ್ಯವೊಂದನ್ನು ನಿರ್ಮಿಸಲು ಉಭಯ ಪಕ್ಷದವರೂ ಒಪ್ಪಿರುವರೆಂದು ವರದಿಯಾಗಿದೆ

ಶಾಸನಸಭೆಗೆ ತರೀಕೆರೆಯಿಂದ ಟಿ. ಸಿ. ಶಾಂತಪ್ಪನವರ ಆಯ್ಕೆ

ತರೀಕೆರೆಯ ಶ್ರೀ ಟಿ. ಸಿ ಬಸಪ್ಪನವರ ನಿಧನದಿಂದ ಸಂಸ್ಥಾನದ ಶಾಸನಸಭೆಯಲ್ಲಿ ಖಾಲಿಯಾದ ಸ್ಥಾನಕ್ಕೆ ಕಳೆದ ಭಾನುವಾರ ಉಪ ಚುನಾವಣೆ ನಡೆದು ಕಾಂಗ್ರೆಸ್ ಉಮೇದುವಾರರಾದ ಶ್ರೀ ಟಿ. ಸಿ. ಶಾಂತಪ್ಪನವರು ಆರಿಸಲ್ಪಟ್ಟರು. ಶ್ರೀ ಜಿ. ಮರುಳಪ್ಪನವರು ಅವರ ವಿರೋಧವಾಗಿ ಸ್ಪರ್ಧಿಸಿ ಪರಾಜಿತರಾದರು

ಹನುಮಂತೋತ್ಸವ

ತಗಡೂರಿನಲ್ಲಿ ಕಳೆದ ೧೯ ನೇ ತಾರೀಖು ಗುರುವಾರದಿಂದ ಆರಂಭವಾಗಿ ೨೮ರವರೆಗೆ ಪ್ರಾತಃಕಾಲ ಪೂಜೆ, ದೀಪಾರಾಧನೆ, ಭಜನೆ, ಹರಿಕಥೆ ನಡೆದು, ಕೊನೆಯ ದಿವಸ ರಾತ್ರಿ ಶ್ರೀ ಮಾರುತಿ ಸ್ವಾಮಿಯವರ ಪುಷ್ಪಾಂಮೋಲಿಕಾರೋಹಣವು ನಡೆಯಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬.೫ ಪಿಟೀಲು. ೭ ೧೫ ಹೆಚ್ [illegible] ದೇವರನಾಮ ೭ ೪೦ ಮತ್ತು [illegible] ಪಾಂಡುರಂಗರಾವ್ [illegible] ಮಧ್ಯಾಹ್ನ ೧೨ ಎಸ್. ಬಿ ಲಕ್ಷ್ಮೀದೇವಮ್ಮ [illegible] ಸಂಗೀತ. ೧೨ ೪೦ ಮತ್ತು ೨ ೧೫ [illegible] ಸಂಗೀತ. ೧ ೪೦ ಮತ್ತು ಸಂಜೆ [illegible] ವಯಲಿನ್. ೬-೧೫ ಜನಪದ ಗೀತೆಗಳು [illegible] ಮಕ್ಕಳ ಗೀತೆಗಳು. ೮ ೪೦ [illegible] ಚಿತ್ರ [illegible] ಸಂಗೀತದ ಬಗ್ಗೆ [illegible] ಭಾಷಣ ೯.೪೦ ಬುದ್ಧ ಮತ್ತು ಬೌದ್ಧಗಳ ಸಂಬಂಧಿಸಿದ ಸ್ಥಳಗಳ ಬಗ್ಗೆ ವಿಶೇಷ ಕಾರ್ಯಕ್ರಮ [illegible] ಬುದ್ಧ ಮತ್ತು ವೈಶಾಖ

○ ಕಡಿಮೆ ವರಮಾನದ ಜನರ ಗೃಹ ನಿರ್ಮಾಣ ಯೋಜನೆ ಸಂಬಂಧದಲ್ಲಿ ಕೇಂದ್ರ ಸರ್ಕಾರದವರು ಮೈಸೂರು ಸಂಸ್ಥಾನಕ್ಕೆ ಕಳೆದ ಫೆಬ್ರವರಿಯಲ್ಲಿ ೨೦ ಲಕ್ಷ ರೂ. ಸಹಾಯ ದ್ರವ್ಯ ನೀಡಿರುವರೆಂದು ಗೊತ್ತಾಗಿದೆ.

ಒಲಂಪಿಯಾ ಟಾಕೀಸ್
4—5—56 ರಿಂದ . ಅಮೋಘ [illegible]
ಪ್ರತಿದಿನ 3 ಪ್ರದರ್ಶನಗಳು
ಬಾಗ್ದಾದ್-ಕ-ಚೋರ್
(ಹಿಂದಿ)
[illegible]
ಸಾರ್ಕೆಸ್ . ಎ. ವಿ. ಎಂ. ರವರ ಹಿಂದಿ ಚಿತ್ರ
ಭಾಯ್ ಭಾಯ್

ಮನೆ ಬಾಡಿಗೆಗೆ ಇದೆ
ನಂಜನಗೂಡು ಟೌನ್ ತಾಲ್ಲೂಕು ಆಫೀಸಿ ಎದುರಿನಲ್ಲಿ ಕುಂಚಿಟಿಗರ ಸಂಘಕ್ಕೆ ಸೇರಿದ [illegible] ೨ ಮನೆ-ದೊಡ್ಡ ಸಂಸಾರ, ಹೋಟೆಲು ಮತ್ತು ಬ್ಯಾಂಕ್ ಇಡಲು ಎಲ್ಲಾ ಸೌಕರ್ಯವುಳ್ಳ ವಿಶಾಲವಾದ ಮನೆ ಮೈಸೂರು ಸಿಟಿ ಇಲವಾಲ [illegible] ಸ್ಟ್ರೀಟ್‌ನಲ್ಲಿರುವ ಸಂಘದ ಆಫೀಸಿನಲ್ಲಿ ವಿವರಗಳನ್ನು ತಿಳಿಯಬಹುದು.

Edited, Printed and Published b[y]
A. R. Nagarajan at Sadhvi Pre[ss]
D. Subbiah Road, Mysore

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೧೯] SADHVI : THURSDAY 3-5-1956 ಮೈಸೂರು ಗುರುವಾರ : ೩-೫-೧೯೫೬ [ಸಂಚಿಕೆ : ೨೫೩

- ರೈಲನ್ನು ತಡೆಯಲು ಹೋಗಿ ೪ ಜನರ ಪ್ರಾಣಹಾನಿ -

ನೇಪಾಳದ ಮಹಾರಾಜರ ಕಿರೀಟಧಾರಣೆ

ಪ್ರಾಚೀನ ಪದ್ಧತಿಯಂತೆ ವೈಭವದ ಸಮಾರಂಭ

ನೇಪಾಳದ ದೊರೆ ವೀರವಿಕ್ರಮ ಷಹಾ ದೇವರವರು ನೆನ್ನೆ ಬೆಳಿಗ್ಗೆ ೮ ಘಂಟೆ ೫ ನಿಮಿಷಕ್ಕೆ ಹನುಮಾನ್‌ಧೋಕ ಅರಮನೆಯಲ್ಲಿ ಗತ ರಾಜರುಗಳ ಪರಂಪರೆಯಂತೆ ಪ್ರಾಚೀನ ಪದ್ಧತಿ ಪ್ರಕಾರ ತಮ್ಮ ಕಿರೀಟಧಾರಣ ಮಹೋತ್ಸವವನ್ನು ನೆರವೇರಿಸಿದರು. ಅವರ ಪಕ್ಕದಲ್ಲಿ ಪತ್ನಿ ರಾಜ್ಯಲಕ್ಷ್ಮಿದೇವಿಯವರು ಕುಳಿತಿದ್ದರು. ಅರಮನೆ ಪುರೋಹಿತರು ದೊರೆಗಳ ತಲೆಯ ಮೇಲೆ ಕಿರೀಟವನ್ನು ತೊಡಿಸಿದರು. ವೈದಿಕರಿಂದ ವೇದ ಮಂತ್ರ ಘೋಷಣೆ, ... ಬ್ಯಾಂಡುಗಳಿಂದ ರಾಷ್ಟ್ರ ಗೀತೆ ಮತ್ತು ... ಅಮವು

ಕಿರೀಟಧಾರಣೆಗಾಗಿ ... ನಡೆಸಲು ೨ ಘಂಟೆ ಕಾಲ ಹಿಡಿಯಿತು ... ಪುರೋಹಿತರಾದ ... ಗಣ್ಯ ಅಧಿಕಾರಿಗಳು ಮತ್ತು ಅತಿಥಿ ... ಉದ್ದೇಶಿಸಿ ಘೋಷಣೆ ಮಾಡಿ, ... ಪ್ರತಿನಿಧಿ, ಈತನು ನಿಮ್ಮ ದೊರೆ ಅವನೇ ... ಮೊರೆಯಾದ ಸೋಮನು ” ಎಂದು ಹೇಳಿದರು. ಹೊರಗಡೆ ನಿಂತಿದ್ದ ಸಹಸ್ರಾರು ಜನರು ಹರ್ಷಧ್ವನಿ ಮಾಡಿದರು

ದೊರೆಯು ಭಾಷಣ ಮಾಡಿ, ತಮ್ಮ ದೇಶದ ... ಮತ್ತು ಯಾವಾಗಲೂ ದೇವರಿಂದ ... ಅವರ ಅಭ್ಯುದಯವನ್ನು ಸಾಧಿಸುವುದಾಗಿ ತಿಳಿಸಿದರು. ಪುರೋಹಿತರ ಸಮ್ಮುಖದಲ್ಲಿ ಅವರು ಸಂಸ್ಕೃತದಲ್ಲಿ ಪ್ರತಿಜ್ಞೆ ಮಾಡಿ “ ಈ ದೇಶದಲ್ಲಿರುವ ಯಾವ ಶಾಸನವನ್ನೇ ಆಗಲೀ, ಮತ್ತು ರಾಜಕೀಯ ವಿರೋಧವಿಲ್ಲದ ಯಾವ ಶಾಸನವನ್ನೇ ಆಗಲಿ ಸ್ವಲ್ಪವೂ ಹಿಂಮುಮುಂದು ... ನಡೆಸಿಕೊಡಲು ಸದಾ ಸಿದ್ಧವಾಗಿರುವುದಾಗಿಯೂ, ತಾವು ಯಾವಾಗಲೂ ಸ್ವೇಚ್ಛೆಯಾಗಿ ವರ್ತಿಸುವುದಿಲ್ಲವೆಂದೂ ” ತಿಳಿಸಿದರು.

ಈ ಸಮಾರಂಭಕ್ಕೆ ಮುಂಚೆ ದೊರೆಯ ಅಭಿಷೇಕೋತ್ಸವವೂ ನಡೆಯಿತು. ಪೂರ್ವ ದಿಕ್ಕಿನಿಂದ ಬನ್ನದ ಪಾತ್ರೆಯಲ್ಲಿ ತುಪ್ಪವನ್ನು ವಿಪ್ರರೊಬ್ಬರು ರಾಜರ ಮೇಲೆ ಅಭಿಷೇಕ ಮಾಡಿದರು. ... ದಕ್ಷಿಣ ದಿಕ್ಕಿನಿಂದ ಕ್ಷತ್ರಿಯರೊಬ್ಬರು ಬೆಳ್ಳಿಯ ಪಾತ್ರೆಯಲ್ಲಿ ಹಾಲನ್ನೂ, ಪಶ್ಚಿಮದಿಂದ ವೈಶ್ಯರೊಬ್ಬರು ತಾಮ್ರದ ಪಾತ್ರೆಯಲ್ಲಿ ಮೊಸರನ್ನೂ ಮತ್ತು ಉತ್ತರದಿಂದ ಹಿತ್ತಾಳೆ ಪಾತ್ರೆಯಲ್ಲಿ ... ಶೂದ್ರರೊಬ್ಬರು ಜೇನುತುಪ್ಪವನ್ನೂ ಅಭಿಷೇಕ ಮಾಡಿದರು

ಬಳಿಕ ನೇಪಾಳದ ಮಹಾರಾಜರು ... ತಂದ ಪುಣ್ಯಕ್ಷೇತ್ರ ... ಪವಿತ್ರ ನದಿ ಮತ್ತು ಸಮುದ್ರದ ನೀರಿನಲ್ಲಿ ಸ್ನಾನ ಮಾಡಿದರು

ಅದಾದ ಮೇಲೆ ಪುರಾತನವಾದ ಪಾತ್ರೆಯ ... ಮೂಲಿಕೆ ಮತ್ತು ಹೂಗಳಿಂದ ಅಭಿಷೇಕವಾಯಿತು. ಅರಮನೆ ಜ್ಯೋತಿಶ್ಶಾಸ್ತ್ರಜ್ಞರು ... ಚಿನ್ನದ ಪಾತ್ರೆಯಲ್ಲಿ ನೀರನ್ನು ರಾಜ

... ಮೇಲೆ ಚಿಮುಕಿಸಿದರು. ಸಿಂಹಾಸನದ ... ಯಲ್ಲಿ ... ಬೆಳ್ಳಿ ... ಕಮಲಗಳನ್ನು ... ಇತ್ತು

ಈ ಉತ್ಸವದಲ್ಲಿ ಭಾರತ, ಚೀನಾ, ಬ್ರಿಟನ್, ಅಮೆರಿಕ, ಫ್ರಾನ್ಸ್ ಮತ್ತು ಇತರ ... ಮತ್ತು ... ರಾಷ್ಟ್ರ ಪ್ರತಿನಿಧಿಗಳು ಭಾಗವಹಿಸಿದ್ದರು

ಸಮಾರಂಭಕ್ಕೆ ಅರಸರು ಆನೆಯ ಮೇಲೆ ಮೆರವಣಿಗೆಯಲ್ಲಿ ಬಿಜಯ ಮಾಡಿದರು

ಕಾರ್ಪೊರೇಷನ್ನಿನ ತೀರ್ಮಾನದಂತೆ ಬೊಂಬಾಯಿನ ಭವಿಷ್ಯದ ನಿರ್ಧಾರ

ನೆಹರೂರವರ ಹೊಸ ಸೂತ್ರ

ಬೊಂಬಾಯಿ ನಗರದ ಭವಿಷ್ಯವನ್ನು ನಿರ್ಧರಿಸಲು ಅಲ್ಲಿನ ಕಾರ್ಪೊರೇಷನ್ನಿಗೆ ಅವಕಾಶವೀಯುವ ಸೂತ್ರವನ್ನು ಪ್ರಧಾನಿ ನೆಹರೂರವರು ಬೊಂಬಾಯಿ ಮುಖ್ಯ ಮಂತ್ರಿ ... ರವರಿಗೆ ... ನವದೆಹಲಿಯ ... ಸಂಬಂಧದಲ್ಲಿ ತಿಳಿಸಿದರೆಂದು ವರದಿಯಾಗಿದೆ ... ಬಗ್ಗೆ ... ಬರುವ ವರ್ಷ ನಿರ್ಧಾರ ಮಾಡುವುದು ... ತಾತ್ಕಾಲಿಕ ... ವಿರೋಧ ... ಹೇಳಲಾಗಿದೆ

ಮೈಸೂರಿಗೆ ಮಡಕಸಿರಾವನ್ನು ಸೇರಿಸಲು ಮನವಿ

ಮಡಕಸಿರಾ ತಾಲ್ಲೂಕನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಬೇಕೆಂದು ... ತಾಲ್ಲೂಕ ... ಒಪ್ಪಿಸಬೇಕೆಂದೂ ಕೋರಿ ... ಕಾಂಗ್ರೆಸ್ ಸಮಿತಿಯು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಮನವಿ ಮಾಡಿಕೊಂಡಿದೆಯೆಂದು ವರದಿಯಾಗಿದೆ

ಕಿಹಪಾರಿಯಲ್ಲಿನ ಲೌಡ್ ಸ್ಪೀಕರ್ ಉಪಯೋಗಿಸಿದ್ದಕ್ಕೆ ದಂಡ

ಮಂಡಿ ಮೊಹಲ್ಲಾದ ಹೋಟೆಲೊಂದರ ಮಾಲೀಕ ... ಎಂಬಾತನು ... ಲೌಡ್ ಸ್ಪೀಕರ್ ಯಂತ್ರವನ್ನು ಉಪಯೋಗಿಸಿದನೆಂದು ... ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಪಾದಿತನಿಗೆ ನಗರದ ದ್ವಿತೀಯ ನ್ಯಾಯಾಧೀಶರು ನೆನ್ನೆ ... ರೂ. ದಂಡವನ್ನು ವಿಧಿಸಿದರು

ರೈಲ್ವೆ ಅಧಿಕಾರಿಯು ಸೆಷನ್ಸ್ ವಿಚಾರಣೆಗೆ ಗುರಿ

ಫೋರ್ಜರಿ ಮಾಡಿ ... ರೂ. ಗಳನ್ನು ದುರುಪಯೋಗಪಡಿಸಿಕೊಂಡ ಆಪಾದನೆ ಮೇಲೆ ರೈಲ್ವೆಯ ಅಸಿಸ್ಟೆಂಟ್ ಪರ್ಮನೆಂಟ್ ವೇ ಇನ್ಸ್‌ಪೆಕ್ಟರ್ ಸೀತಾರಾಮಯ್ಯರನ್ನು ಬೆಂಗಳೂರು ನಗರದ ನ್ಯಾಯಾಧೀಶರು ಮೈಸೂರು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿರುತ್ತಾರೆ. ಅಪಾದಿತರ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು ಅಲ್ಲಿ ಅಪರಾಧವು ನಡೆಯಿತೆಂದು ಹೇಳಲಾಗಿದೆ

ರೈಲನ್ನು ನಿಲ್ಲಿಸಲು ಹೋಗಿ ನಾಲ್ಕು ಜನರ ಪ್ರಾಣಹಾನಿ

ಬಿಹಾರಿನ ದರ್ಭಾಂಗ್ ಜಿಲ್ಲೆಯ ... ನಿಲ್ದಾಣದಲ್ಲಿ ನೆನ್ನೆ ರೈಲನ್ನು ನಿಲ್ಲಿಸುವ ಉದ್ದೇಶದಿಂದ ... ರೈಲಿನ ... ನಾಲ್ವರು ಮೃತಪಟ್ಟರೆಂದು ವರದಿಯಾಗಿದೆ. ಒಬ್ಬನು ... ಆಸ್ಪತ್ರೆಯಲ್ಲಿ ಮಡಿದನು ... ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕೆಲವು ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ಒತ್ತಾಯಪಡಿಸಲು ... ಈ ಬಗ್ಗೆ ... ರೈಲ್ವೆ ಅಧಿಕಾರಿಗಳು ತಿಳಿಸಿದ್ದು ... ನೆನ್ನೆ ... ಎಕ್ಸ್‌ಪ್ರೆಸ್ ಗಾಡಿಯು ನಿಲ್ದಾಣದ ಮೂಲಕ ... ಹೋಗುತ್ತಿದ್ದಾಗ ... ಮುಂದೆ ... ದುರಂತ ಸಂಭವಿಸಿತು

ಶ್ರವಣಬೆಳಗೊಳದಲ್ಲಿ ನಾಲ್ವರು ಬಾಲಕರಿಗೆ ಸಿಡಿಲು ಬಡಿತ

ಕಳೆದ ... ಶ್ರವಣಬೆಳಗೊಳದ ಶ್ರೀ ಗೋಮಟೇಶ್ವರ ಸ್ವಾಮಿಯವರ ರಥೋತ್ಸವವು ನಡೆಯಿತು. ಅದರ ಅಂಗವಾಗಿ ಬೆಟ್ಟದ ಮೇಲೆ ಪೂಜೆ ನಡೆಸಲು ನೂರಾರು ಜನರು ಹೋಗಿದ್ದಾಗ ಜೋರಾಗಿ ಮಳೆ ಮಿಂಚು, ಸಿಡಿಲು ಮತ್ತು ಗುಡುಗುಗಳಿಂದ ನಾಲ್ಕು ಬಾಲಕರಿಗೆ ಸಿಡಿಲು ಬಡಿಯಿತು. ... ಪ್ರಾಣಾಪಾಯವಾಗಲಿಲ್ಲ ... ದಲ್ಲಿ ... ಗಾಳಿಯ ... ವಿಗ್ರಹದ ಮೇಲೆ ಬಿತ್ತು ... ಜಖಂ ಆಗಲಿಲ್ಲ ... ಭಾಗದಲ್ಲಿ ಸಿಡಿಲು ಬಡಿದು ಕಲ್ಲು ಸ್ವಲ್ಪ ಹೊಡೆಯಿತು

ಗೋ ವಧೆ ಮಾಡಿದವರ ಬಂಧನ

ನಗರದ ಕಸಾಯಿಗೇರಿಯಲ್ಲಿ ಬಡಾ ಹುಸೇನ್ ಎಂಬಾತನು ... ಎಂಬುವನೊಡನೆ ತನ್ನ ಮನೆಯಲ್ಲಿ ದನ ಕೊಯ್ಯುತ್ತಿದ್ದಾಗ ... ಪೋಲೀಸರು ಇಬ್ಬರನ್ನೂ ಬಂಧಿಸಿದರು

ಕಳ್ಳರ ಬಂಧನ

ನಗರದ ಚಲುವಾಂಬಾ ಭವನದ ಆವರಣದಲ್ಲಿರುವ ಶ್ರೀ ಆಂಜನೇಯನ ದೇವಸ್ಥಾನದಲ್ಲಿ ಕೆಲವು ದಿನಗಳ ಹಿಂದೆ ಕಳ್ಳತನ ಮಾಡಿದ್ದ ... ಎಂಬುವರನ್ನು ನೆನ್ನೆ ನಗರದ ಪೋಲೀಸರು ಬಂಧಿಸಿ ... ಗಳನ್ನು ಪತ್ತೆ ಹಚ್ಚಿರುವರು

ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧಿವೇಶನಕ್ಕೆ ನಗರದ ಪ್ರತಿನಿಧಿ

... ನಡೆಯುವ ಅಖಿಲ ಭಾರತ ... ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧಿವೇಶನಕ್ಕೆ ನಗರದ ... ಪ್ರತಿನಿಧಿಯಾಗಿ ಶ್ರೀ ... ರವರು ಹೋಗಿರುವರು

ಟಿ. ಸುಬ್ರಹ್ಮಣ್ಯರವರಿಗೆ ನಿಧಿ ಸಮರ್ಪಿಸಲು ನಿರ್ಧಾರ

ಸಂಸ್ಥಾನದ ಮಾಜಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯರವರಿಗೆ ಬರುವ ಜುಲೈ ... ೬೦ ವರ್ಷ ತುಂಬಲಿದೆ. ಅವರು ದೇಶಕ್ಕೆ ಸಲ್ಲಿಸಿರುವ ಸೇವೆಗಾಗಿ ಷಷ್ಟ್ಯಬ್ದಿ ... ಯನ್ನು ನೆರವೇರಿಸಲು ಕಳೆದ ... ನೇ ತಾರೀಕು ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿಗರ ಮತ್ತು ಸಾರ್ವಜನಿಕರ ಸಭೆಯು ತುಮಕೂರಿನಲ್ಲಿ ಸೇರಿ ಶ್ರೀ ಸುಬ್ರಹ್ಮಣ್ಯರವರಿಗೆ ಕರ್ನಾಟಕದ ಪರವಾಗಿ ... ಸಾವಿರ ರೂ. ಕಾಣಿಕೆಯನ್ನು ಅರ್ಪಿಸಲು ತೀರ್ಮಾನವಾಯಿತು. ಈ ಸಂಬಂಧವಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ಶ್ರೀಗಳಾದ ಎ. ಜಿ. ರಾಮಚಂದ್ರರಾವ್, ಎಂ. ಸಿ. ನಾಣಯ್ಯರೆಡ್ಡಿ, ಧಾರವಾಡದ ಎ. ವಿ. ಪಾಟೀಲ್ ಮತ್ತು ಹಳ್ಳಿಕೇರಿ ಗುದ್ಲೆಪ್ಪ ಮುಂತಾದವರನ್ನು ಉಪಾಧ್ಯಕ್ಷರಾಗಿ ಆರಿಸಲಾಗಿದೆ. ಶ್ರೀ ಎಂ. ಕೆ. ನರಸಿಂಹಯ್ಯ ಮತ್ತು ... ಎಸ್. ... ರವರು ಕಾರ್ಯದರ್ಶಿಗಳಾಗಿರುವರು. ಸಮಿತಿಯಲ್ಲಿ ಹೈದರಾಬಾದಿನ ಮಂತ್ರಿ ಡಾ|| ಮೇಲ್ಕೋಟೆ, ಎಸ್. ನಿಜಲಿಂಗಪ್ಪ ಮುಂತಾದವರು ಇರುವರು

ಪದವೀಧರ ರೈತರಿಗೆ ಸೌರಾಷ್ಟ್ರದಲ್ಲಿ ಉಚಿತವಾಗಿ ಜಮೀನು

ವ್ಯವಸಾಯ ಶಿಕ್ಷಣದಲ್ಲಿ ಪದವಿ ಪಡೆದಿರುವ ಭಾರತದ ವಿವಿಧ ವಿಶ್ವವಿದ್ಯಾಲಯಗಳ ಮತ್ತು ಸರ್ವೋದಯದ ಅಖಿಲ ಭಾರತ ಗ್ರಾಮ ವಿದ್ಯಾಲಯದ ... ಜನ ಚುನಾಯಿತ ಪದವೀಧರರಿಗೆ ಸೌರಾಷ್ಟ್ರ ಸರ್ಕಾರದವರು ... ರಿಂದ ... ಎಕರೆವರೆಗೆ ಬಂಜರು ಭೂಮಿಯನ್ನು, ಅವರುಗಳು ಅಲ್ಲೇ ನೆಲೆಸಿ ಹತ್ತು ವರ್ಷ ನೆಲೆಸುವ ಷರತ್ತಿನ ಮೇಲೆ ಕೊಡಲು ನಿರ್ಧರಿಸಿದ್ದಾರೆ. ಮೊದಲ ವರ್ಷ ೫೦೦, ಅನಂತರ ಪ್ರತಿ ವರ್ಷ ... ರೂ. ಗಳಂತೆ ಸಹಾಯ ಧನವನ್ನೂ ಕೊಡಲಾಗುವುದು. ... ವರ್ಷಗಳಾದನಂತರ ಭೂಮಿಯನ್ನು ಅವರಿಗೇ ಕೊಡಲಾಗುವುದು.

ಬರುವ ವರ್ಷ ಏಪ್ರಿಲ್ಲಿನಿಂದ ಹೊಸ ನಾಣ್ಯ ಪದ್ಧತಿಯ ಜಾರಿ

ದಶಮಾಂಶ ನಾಣ್ಯ ಪದ್ಧತಿಯನ್ನು ಬರುವ ವರ್ಷ ಏಪ್ರಿಲ್ ೧ನೇ ತಾರೀಕಿನಿಂದ ಜಾರಿಗೆ ತರಲಾಗುವುದೆಂದು ಹೇಳಲಾಗಿದೆ. ಆರಂಭದಲ್ಲಿ ಒಂದು, ಎರಡು, ಐದು ಮತ್ತು ಹತ್ತು ನಯಾ ಪೈಸಾ ನಾಣ್ಯಗಳನ್ನು ಮೊದಲು ಚಲಾವಣೆಗೆ ಕೊಡಲಾಗುವುದು. ಸ್ವಲ್ಪ ಕಾಲಾನಂತರ ೨೫, ೫೦ ಮತ್ತಿತರ ಬೆಲೆಯ ... ನಯಾ ಪೈಸಾ ನಾಣ್ಯಗಳು ಚಲಾವಣೆಗೆ ಬರುವುವು. ಈ ನಾಣ್ಯಗಳೊಡನೆ ಸ್ವಲ್ಪ ಕಾಲದವರೆಗೂ ಈಗಿನ ... ಆಣೆ ಮತ್ತು ... ಆಣೆ ... ನಾಣ್ಯಗಳೂ ಸಹ ಚಲಾವಣೆಯಲ್ಲಿರುತ್ತವೆ

ಬಿರುಗಾಳಿಯಿಂದ ದೋಣಿಗಳು ಮುಳುಗಿ ೨॥ ಲಕ್ಷ ರೂ. ನಷ್ಟ

ಪಶ್ಚಿಮ ತೀರ ಪ್ರದೇಶದಲ್ಲಿ ಬಿರುಗಾಳಿಯು ಎದ್ದುದರಿಂದ ಮಂಗಳೂರು ಬಂದರಿನಲ್ಲಿ ಸಾಮಾನುಗಳನ್ನು ಸಾಗಿಸುತ್ತಿದ್ದ ೭ ನಾಡು ದೋಣಿಗಳು ನೀರಿನಲ್ಲಿ ಮುಳುಗಿ, ಅವುಗಳಲ್ಲಿದ್ದ ೧ ಲಕ್ಷ ರೂ. ನಷ್ಟ ಸಾಮಾನುಗಳು ಸಮುದ್ರ ಪಾಲಾದುವೆಂದು ವರದಿಯಾಗಿದೆ. ಕಲ್ಲಿಕೋಟೆಯ ಬಂದರಿನಲ್ಲಿ ೩ ದೋಣಿಗಳು ಒಡೆದುಹೋದುವು. ಸುಮಾರು ೧॥ ಲಕ್ಷ ರೂ. ಬೆಲೆಯ ಸಕ್ಕರೆ ಮೂಟೆಗಳನ್ನು ತುಂಬಿದ್ದ ಇತರ ೪ ದೋಣಿಗಳು ಸಮುದ್ರದಲ್ಲಿ ಮುಳುಗಿದುವೆಂದು ತಿಳಿದು ಬಂದಿದೆ.

ತಮ್ಮ ಸೌಕರ್ಯಗಳ ರಕ್ಷಣೆ ಬಗ್ಗೆ ಹೈದ್ರಾಬಾದ್ ನೌಕರರ ಒತ್ತಾಯ

ಕಳೆದ ವಾರ ರಾಯಚೂರು ನಗರದಲ್ಲಿ ಸೇರಿದ್ದ ಹೈದರಾಬಾದ್ ಸಂಸ್ಥಾನದ ಕನ್ನಡಿಗ ಕೆಳ ದರ್ಜೆ ನೌಕರರ ಸಂಘದವರು ಒಂದು ನಿರ್ಣಯ ಮಾಡಿ ಹೊಸ ಕನ್ನಡ ಪ್ರಾಂತವಾದಾಗ ತಮ್ಮ ಸೌಲಭ್ಯಗಳಿಗೆ ಕುಂದುಂಟಾಗದ ರೀತಿ ಸೂಕ್ತ ರಕ್ಷಣೆ ಕೊಡಿಸಲು [illegible] ಪುನರ್ವಿಂಗಡಣಾ ಮಸೂದೆಯಲ್ಲಿ ಕೆಳದರ್ಜೆ ನೌಕರರ [illegible] ಯ ಅಂಶವನ್ನೂ ಸೇರಿಸಬೇಕೆಂದು ಭಾರತ ಸರ್ಕಾರದವರನ್ನು ಪ್ರಾರ್ಥಿಸಿದ್ದಾರೆ.

ಹಳ್ಳದಕೇರಿ ಶಾಖಾ ಮಂದಿರದ ನೂತನ ಕಾರ್ಯಸಮಿತಿ

ಹಳ್ಳದಕೇರಿಯಲ್ಲಿರುವ ಶ್ರೀ ಕೃಷ್ಣ [illegible] ಮಂದಿರದ ನೂತನ ಕಾರ್ಯ[illegible]ಯ ಚುನಾವಣೆಯು [illegible] ಅಧ್ಯಕ್ಷರಾಗಿಯೂ ಶ್ರೀ ಎಸ್. [illegible] ಉಪಾಧ್ಯಕ್ಷರಾಗಿಯೂ ಶ್ರೀ ಎಸ್. ಶ್ರೀನಿವಾಸ [illegible] ಮತ್ತು ಶ್ರೀ ಸಿ. ಎಸ್. [illegible] ಶ್ರೀನಿವಾಸ ಮೂರ್ತಿ, ಎ. ಆರ್. ನರಸಿಂಹಮೂರ್ತಿ, ಆರ್. ಶ್ರೀನಿವಾಸಮೂರ್ತಿ, [illegible] ಗೋಪಾಲಕೃಷ್ಣ, [illegible] ಎಸ್. [illegible] ಕೋಶಾಧ್ಯಕ್ಷರಾಗಿ [illegible] ವೆಂಕಟೇಶ್ ಮತ್ತು ಕೆ. ಪಿ. ನಾಗರಾಜ ಶ್ರೇಷ್ಠಿಯವರು ಸರ್ವಾನುಮತದಿಂದ ಚುನಾಯಿತರಾದರು.

ಲಕ್ಷ್ಮಿ ★ ೧—೫—56 ರಿಂದ ಯಶಸ್ವಿ 4ನೇ ವಾರ

ಮಧುರೈ ವೀರನ್

(ತಮಿಳು)

ಪಾತ್ರ —ಎಂ. ಜಿ. ರಾಮಚಂದ್ರನ್, ಟಿ. ಎಸ್. ಬಾಲಯ್ಯ ಭಾನುಮತಿ, ಲಲಿತ ಪದ್ಮಿನಿ ರಾಗಿಣಿ ಎನ್. ಎಸ್. ಕೃಷ್ಣನ್—ಟಿ. ಎ. ಮಧುರಂ

ಮುಂತಾದವರು

ಬಿಜಾಪುರದ ಉಪ್ಲೀಸ್ ಮಸೀದಿ ಕುಸಿತ

[illegible] ರಲ್ಲಿ [illegible] ಬಿಜಾಪುರದಲ್ಲಿ ಕಟ್ಟಿಸಿದ [illegible] ಮಸೀದಿಯು [illegible] ರಾತ್ರಿ [illegible] ಕುಸಿದು [illegible] ೧೦ ಅಡಿ ಎತ್ತರದ [illegible] ಅಡಿ ಅಗಲದ ಒಂದು ಸಭಾಂಗಣವು ಇದ್ದಿತು.

ಫುಟ್‌ಬಾಲ್ ಪಂದ್ಯ

ರಾಜಧಾನಿಯ ನರಸಿಂಹರಾಜ ಮೊಹಲ್ಲೆಯಲ್ಲಿ ನೆನ್ನೆ ನಡೆದ ಫುಟ್‌ಬಾಲ್ ಪಂದ್ಯದಲ್ಲಿ [illegible] ಸ್ಪೋರ್ಟ್ಸ್ [illegible] ಯಂಗ್ ಇಂಡಿಯಾ ಟೀಮನ್ನು ೪–೨ ಗೋಲುಗಳಿಂದ ಸೋಲಿಸಿದರು. [illegible] ಎರಡು ಗೋಲು, [illegible] ಸಿಂಗ್ ೧ ಗೋಲು ಮತ್ತು [illegible] ಒಂದು ಗೋಲುಗಳನ್ನೂ [illegible] ಗೋವಿಂದರಾಜ್ ಮತ್ತು [illegible]

ಬೆಂಗಳೂರು [illegible] ಕಾರ್ಯಕ್ರಮ

[illegible]

TENDERS are invited for running the College Canteen St. Philomena's College Mysore from 2nd May 1956. Spacious building all kitchen facilities. Please contact the Principal on or before 10th May at the College premises.

Herbal Curosities!

ವಿಲ್ ಮುಕ್ ಬಾಂ

[illegible] (Dark Complexion) [illegible]

[illegible] (Grey Hair) [illegible]

S. SHAMANNA [illegible]

830 [illegible]

[illegible], ಮೈಸೂರು

ವಿದ್ಯುತ್ ಶಾಕ್ ಕೊಡುವುದರಿಂದ ಬುದ್ಧಿ ಬದಲಾವಣೆ

[illegible] (ಮನಸ್ಸಿನ ಸ್ಥಿತಿ) ಅವುಗಳ [illegible] ವಿದ್ಯುತ್ [illegible] ಬದಲಾಯಿಸಬಹುದೆಂದು [illegible] ಮನೋವಿಜ್ಞಾನದ [illegible] ಕೇಂದ್ರದ ಡೈರೆಕ್ಟರ್ [illegible] ತಿಳಿಸಿದ್ದಾರೆ.

ಈ ಬಗ್ಗೆ ಮಾಡಿದ ಪ್ರಯೋಗಗಳನ್ನು ವಿವರಿಸುತ್ತಾ [illegible] ಒಂದು ಸಣ್ಣ ವಿದ್ಯುತ್ಪ್ರವಾಹಕವನ್ನು ಒಂದು ಇಲಿಯ ಮೆದುಳಿನ [illegible] ಭಾಗದಲ್ಲಿಟ್ಟು ಅದನ್ನು ಒಂದು ಒತ್ತುವ ಹಿಡಿಕೆ (ಪೆಡಲ್) ಗೆ ಸೇರಿಸಿದ್ದರಿಂದ, ಅದನ್ನು ಒತ್ತಿದಾಗ [illegible] ಬರುತ್ತಿತ್ತೆಂದೂ ತಿಳಿಸಿದರು. ಇಲಿಯು ಆ ರೀತಿ [illegible] ಪಡೆದು ಪ್ರಫುಲ್ಲಿತವಾಗಿ ಅದನ್ನು ಒತ್ತಲು ಆರಂಭಿಸಿ ಅನೇಕ ದಿನಗಳು ಎಡೆಬಿಡದೆ ಒತ್ತಿ ಕೊನೆಗೆ ಮೃತಿ ಹೊಂದಿತೆಂದೂ ಹೇಳಿದರು.

[illegible]

ಜುಲೈನಿಂದ ರೈತ್ರಿ ಎರಡನೇ ತರಗತಿ ರದ್ದಿನ ಆರಂಭ

[illegible]

ನಮ್ಮ ಇತ್ತೀಚಿನ ಪ್ರಕಟಣೆ

[illegible]

ಶ್ರೀಮತಿ ಎಸ್. ಕಮಲಮ್ಮನವರ

"ಮಂಗಳಾ"

[illegible] ಬೆಲೆ ೧ ರೂ.

[illegible]

ಉಯ್ಯಾಲೆಯ ಆಹಾರದ

[illegible] ಬೆಲೆ 10 ಆಣೆ

[illegible]

ತಾವರೆ ಅರಳಲಿಲ್ಲ

[illegible] ಬೆಲೆ ೧ ರೂ. [illegible]

[illegible]

"ಕೊಡಗಿನ ಬಲಿ"

[illegible]

ವಿವರಗಳಿಗೆ - ಗಾಯತ್ರಿ ಪ್ರಕಾಶನ, [illegible] ಮೈಸೂರು

Edited Printed and Published by [illegible] Sadhvi Press [illegible] Road [illegible]

ಮದ್ರಾಸಿನಲ್ಲಿ ಮೋಸಜ್ಜೈಟ್ [illegible]

ಮದ್ರಾಸ್ ನಗರದ ಸಮುದ್ರ ತೀರ [illegible] ಮೋನಜೈಟ್ [illegible] ಗೊತ್ತಾಗಿದೆ.

ಶಾಲಾ ಮುಖ್ಯೋಪಾಧ್ಯಾಯರ ಚರ್ಚಾಗೋಷ್ಠಿ

ಮೈಸೂರು [illegible] ತ್ತುಕೊಡಗಿನ ಶಾಲಾ ಮುಖ್ಯೋಪಾಧ್ಯಾಯರ ಚರ್ಚಾಗೋಷ್ಠಿಯು ನೆನ್ನೆ ಮಹಾರಾಜಾ ಕಾಲೇಜು ಹಾಸ್ಟೆಲಿನಲ್ಲಿ ಆರಂಭವಾಯಿತು. ಪ್ರಾರಂಭದಲ್ಲಿ ಪ್ರೊ॥ ಸಿ. ರಂಗಾಚಾರ್ಯ [illegible] ಸ್ವಾಗತ ಭಾಷಣ ಮಾಡಿದರು. ಅಖಿಲ ಭಾರತ ಸೆಕೆಂಡರಿ ಎಜುಕೇಷನ್ ಸಮಿತಿಯ [illegible] ಶ್ರೀ ಸೇನಾಪತಿಯವರು ಗೋಷ್ಠಿಯು [illegible] ನಡಸುವ ಉದ್ದೇಶಗಳನ್ನು ವಿವರಿಸಿದರು. [illegible] ಈ ಸಂಘಟನೆ ಬಗ್ಗೆ ಕೇಂದ್ರ ಸೆಕೆಂಡರಿ ಎಜುಕೇಷನ್ ಸಲಹಾ ಸಮಿತಿಯವರು ಕೊಟ್ಟಿದ್ದ [illegible] ಮತ್ತು ಇಂದು ಬೇಕಾದ [illegible] ವಿಷಯವನ್ನೂ ಚರ್ಚಿಸಿ [illegible] ಅನಂತರ ಚಲನಚಿತ್ರ ಪ್ರದರ್ಶನ ನಡೆಯಿತು.

ಮೈಸೂರು ಪೇಟೆ ಧಾರಣೆ

	ರೂ. ಆಣೆ	ರೂ. [illegible]
ಕಡಲೇಕಾಯಿ	೧೧ ೪ ೦	೨೨ [illegible]
ಹೊಂಗೆಬೀಜ	೨೩ ೧೪ ೦	
ಹರಳುಬೀಜ	೫ ೪ ೦	
ಹುರುಳಿ	೨೮ ೪ ೦	೨೮ [illegible]
ರಾಗಿ	೨೦ ೧೪ ೦	
ಹುಣಸೇಹಣ್ಣು	೨ ೧೦ ೦	[illegible]
ಕೊಬ್ಬರಿಕಾಯಿ	೧೪ ೪ ೦	೧೫ [illegible]
[illegible]	೧೩೪ ೦ ೦	೨೦೨

[illegible] ಮಂದಿರ, ಮೈಸೂರು [illegible] ಸೋಬೋ [illegible]

6-5-56ನೇ ಭಾನುವಾರ ಸಂಜೆ 6[illegible] ಸಂಗೀತ ಕಚೇರಿ

ದ್ವಾರಂ ವೆಂಕಟಸ್ವಾಮಿ ನಾಯ್ಡು

ರವರ ಪಿಟೀಲು

ಕುಮಾರಿ ದ್ವಾರಂ ಮಂಗತಾಯಾರ್

ರವರ ಪಿಟೀಲು

ವಿ. ಟಿ. ವಿ. ಗೋಪಾಲಕೃಷ್ಣರವರ ಮೃದಂಗ

ಮೆಂಬರಲ್ಲದವರಿಗೆ ಟಿಕೆಟ್ ದರ ರೂ 2-0 0

SREE GANESH TALKIES

From 3-5-56 1 or 2 days

ELEPHANT WALK

(In Technicolor)

[illegible] adventure picture actually filmed in Ceylon with Ceylonese dancers

From 5-5-56

THIS ISLAND EARTH

(In Technicolor)

For the first time on the screen [illegible] flying saucers in action'

To make the picture more attractive it will be filmed in wide angle

6 ಜೊತೆ ಭಾರಿ ಕುಸ್ತಿಗಳು

ಕಳೆದ ಭಾನುವಾರ (ಏಪ್ರಿಲ್ 29) 6 [illegible] ಬಂದ ಶನಿವಾರ 5-5-56ನೇ ಶನಿವಾರ 4 [illegible]

ಪೈ॥ ಪೂರಣ್‌ಸಿಂಗ್	Vs	ಪೈ॥ [illegible]
ಅಗ್ರಾಲ್‌ವಾಲಾ ಪೈ॥ ಅಮಿನಾರ್	Vs	ಪೈ॥ [illegible]
ದಿಲ್‌ದಾರ್ ಪಟ್ಟಿ ಪೈ॥ ಬಸವರಾಜು	Vs	ಪೈ॥ [illegible]
ಪೈ॥ ಪುಟ್ಟಸ್ವಾಮಿ ಉ॥ ಜಂಬ	Vs	ಬೆಂಗಳೂರು ಪೈ॥ [illegible]
ಪೈ॥ ಗೋಪಾಲ್ ಉ॥ [illegible]	Vs	ಪೈ॥ [illegible]
ಪೈ॥ ತಿಮ್ಮಯ್ಯ ಉ॥ [illegible]	Vs	ಪೈ॥ [illegible] ಉ॥ ಬಿಜಲಿ

[illegible]

ಪೇಪರ್ ಸೀರ್ ಲಂಚ್ ಸನ್ [illegible]

ಚಾಮುಂಡೇಶ್ವರಿ ಟಾಕೀಸ್

[illegible] 56ರಿಂದ ಜಯೋತ್ಸವ ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು

ಮೆಹಬೂಬ್ ರವರ ಹಿಂದಿ ಚಿತ್ರ ★ ಆವಾಜ್ ★

ಭೂಮಿಕೆ —ನಳಿನಿ ಜಯವಂತ್, ಉಷಾ ಕಿರಣ್, ಲೀಲಾ ಚಿಟ್ನಿಸ್, ರಾಜೇಂದ್ರ ಕುಮಾರ್ ಮತ್ತು [illegible]

ರಾಜಕಮಲ್ ಟಾಕೀಸ್ ★ 4-5-56 ರಿಂದ ಅಪೂರ್ವ ಪ್ರಾರಂಭ • ಪ್ರತಿ ದಿನ ಮೂರು ಪ್ರದರ್ಶನಗಳು

ಎನ್. ಟಿ. ರಾಮರಾವ್ ಅಂಜಲಿದೇವಿ ಪಾತ್ರವಹಿಸಿರುವ,

— ಮಾ ದಿನ ವಿಶೇಷ — [illegible] ತೆಲುಗು ಚಿತ್ರ ★ ಜಯಿಂ ಮನದೆ — ★ ರೇಚುಕ್ಕ ★ ತೆಲುಗು ಚಿತ್ರ

ಪಾತ್ರ — ಎನ್. [illegible], [illegible] ಜಲಿ, [illegible], ರೇಲಂಗಿ

ಬೆಳಗಿನ ಪ್ರದರ್ಶನ — [illegible]—56 ರಿಂದ 3 ದಿನಗಳು ಮಾತ್ರ ★ ಸ್ಲೇವ್ ಆಫ್ ಬಾಗ್ದಾದ್ ★

ಲಗ್ನದ ಜವಳಿ
ಗಾ|| ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರ್ಣಿ, [illegible]
ರೇಷ್ಮೆ ಮತ್ತು ಜರಿಯ ಸೀರೆಗಳು
[illegible]
M.V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 445

[illegible]
ಕೃಷ್ಣ [illegible]
ಮೈಸೂರು
[illegible]

ಸಂಪುಟ : ೧೮] SADHVI : FRIDAY 4-5-1956 ಮೈಸೂರು ಶುಕ್ರವಾರ : [illegible]

ಫ್ರೆಂಚ್ ಫಕೀರನೊಬ್ಬನ ೨೮೭ ಗಂಟೆ ಸಮಾಧಿ ರಿಕಾರ್ಡು

ವಿಧಾನ ಪರಿಷತ್ತಿಗೆ ಎಂ. ಎಲ್. ಶ್ರೀಕಂಠಯ್ಯನವರ ಆಯ್ಕೆ

ಮೈಸೂರು ೪

ವಿಧಾನ ಪರಿಷತ್ತಿಗೆ ವಿಶ್ವವಿದ್ಯಾಲಯದ ಪದವೀಧರರ ಕ್ಷೇತ್ರದಿಂದ ನಡೆದ ಚುನಾವಣೆಯಲ್ಲಿ ಮತಗಳ ಎಣಿಕೆಯು ನೆನ್ನೆ ಆಗಿ ಬೆಂಗಳೂರಿನ ಶ್ರೀ ಎಂ. ಎಲ್. ಶ್ರೀಕಂಠಯ್ಯನವರು ಚುನಾಯಿತರಾದರು. ಅವರಿಗೆ [illegible] ಮತ್ತು ಪ್ರತಿಸ್ಪರ್ಧಿ ಮೈಸೂರಿನ ಶ್ರೀ ಎನ್. ಶ್ರೀನಿವಾಸಮೂರ್ತಿಯವರಿಗೆ [illegible] ಓಟುಗಳು ಬಂದುವು. ಒಟ್ಟು [illegible] ಮತದಾರರ ಪೈಕಿ [illegible] ಜನರು ಓಟು ಕೊಟ್ಟರು. [illegible] ಮತಗಳು ಕುಲಗೆಟ್ಟುವು. [illegible] ಮಹಿಳೆಯರು ಓಟು ಕೊಟ್ಟರೆಂದು ತಿಳಿದುಬಂದಿದೆ. ಉಭಯರೂ ಸ್ವತಂತ್ರರಾಗಿ ಸ್ಪರ್ಧಿಸಿದ್ದರು.

ಸರ್ಕಾರಿ ಬಸ್ಸು ಮತ್ತು ಟಾಂಗಾ ಡಿಕ್ಕಿ

ನೆನ್ನೆ ಸಂಜೆ ೬ ಗಂಟೆ ಹೊತ್ತಿನಲ್ಲಿ ಮಾಧವ [illegible] ಸರ್ಕಲ್ಲಿನ ಜಟಕಾ ಗಾಡಿ ಸ್ಟ್ಯಾಂಡ್ ಬಳಿ ಟಾಂಗಾ ಗಾಡಿಯೊಂದಕ್ಕೂ, ಸರ್ಕಾರಿ ಸಿಟಿ ಬಸ್ಸಿಗೂ ಡಿಕ್ಕಿಯಾಗಿ ಗಾಡಿಯು ಉರುಳಿ ಅದಕ್ಕೆ ಜಖಂ ಆಯಿತು. ಒಳಗಿದ್ದವರು ಕೆಳಗೆ ಬಿದ್ದು [illegible] ಕೈ ಕಾಲುಗಳಿಗೆ ಪೆಟ್ಟು ತಗಲಿತು. ಅವರಿಗೆ ಒಬ್ಬ ವೈದ್ಯರು ಪ್ರಥಮ ಚಿಕಿತ್ಸೆ ನಡೆಸಿ ಕೃಷ್ಣರಾಜ ಆಸ್ಪತ್ರೆಗೆ ಕಳುಹಿಸಿದರು.

ರಾಮ ಪಟ್ಟಾಭಿಷೇಕ

ಮೈಸೂರು ಸಿವಿಲ್ ಪೊಲೀಸ್ ಹೆಡ್ ಕ್ವಾರ್ಟರ್ಸ್ [illegible]ನೇ ನಂಬರ್ ಮನೆ ಬಳಿ ಇರುವ ಚಪ್ಪರದಲ್ಲಿ ನಾಳೆ ಶ್ರೀ ರಾಮ ಪಟ್ಟಾಭಿಷೇಕವು ನೆರವೇರುವುದು. ರಾತ್ರಿ ಕಥಾಕಾಲಕ್ಷೇಪವೂ, ಮಂಗಳಾರತಿಯೂ ಇವೆ. ಈ ಸಂಜೆ ೬ ಗಂಟೆಗೆ [illegible] ಲಕ್ಷ್ಮೀಪತಿ [illegible]ರಿಂದ "[illegible]ಧ್ವಜ" ಎಂಬ ಹರಿಕಥೆಯು ನಡೆಯುತ್ತದೆ.

ನಗರದ [illegible] ರಾಮಯ್ಯನವರ ಬೀದಿಯ ಅನಂತಪ್ಪನವರ ಅಗ್ರಹಾರದ [illegible] ಸೇವಾ ಸಮಾಜದವರು ನಾಳೆ ರಾಮ ಪಟ್ಟಾಭಿಷೇಕವನ್ನು ಏರ್ಪಡಿಸಿರುವರು.

ಮೋಟಾರು ಸೈಕಲ್ ಮತ್ತು ಕಾರಿನ ಡಿಕ್ಕಿ

[illegible] ಪೇಟೆಯಲ್ಲಿ ನೆನ್ನೆ ಸಂಜೆ ಸುಮಾರು ೭ ಗಂಟೆ ಸಮಯದಲ್ಲಿ ಗಣೇಶ ಬೀಡಿ ಕಾರ್ಖಾನೆಯ ಮೋಟಾರೊಂದಕ್ಕೂ ಒಂದು ಮೋಟಾರು ಸೈಕಲ್ಲಿಗೂ ಡಿಕ್ಕಿಯಾಗಿ ಸೈಕಲ್ ಸವಾರರಾದ ವಿದ್ಯುಚ್ಛಕ್ತಿ ಇಲಾಖಾ ಇನ್ಸ್‌ಪೆಕ್ಟರ್ ಶ್ರೀ ದೇವರಾಜ ಅರಸಿನವರ ತಲೆಗೆ ಪೆಟ್ಟು ಬಿದ್ದಿತು. ಅವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆ.

ನೇಪಾಳಾ ರಾಜರ ಬಿರುದಾವಳಿ

ನೇಪಾಳದ ರಾಜರ ಬಿರುದಾವಳಿಯು [illegible] ಪದಗಳಿಂದ ಕೂಡಿ ಈ ರೀತಿ ಇರುತ್ತದೆ — ಸ್ವಸ್ತಿ ಶ್ರೀ ಗಿರಿರಾಜ ಚಕ್ರಚೂಡಾಮಣಿ ನಾರಾಯಣೇತ್ಯಾದಿ ವಿವಿಧ ವಿರುದಾವಳಿ ವಿರಾಜಮಾನ ಮಾನೋನ್ನತ ಪ್ರಜ್ವಲ ನೇಪಾಳತಾರ ಮಹಾಧಿ[illegible] ಶ್ರೀಮಾನ್ ಮಹಾರಾಜಾಧಿರಾಜ ಶ್ರೀ ಶ್ರೀ ಶ್ರೀ [illegible] ಮಹಾರಾಜ ಮಹೇಂದ್ರ ವೀರವಿಕ್ರಮ ಷಂಷೇರ್ ಜಂಗ್ ಬಹದ್ದೂರ್ ಷಂಷೇರ್ ಜಂಗ್ ದೇವಾನಾಮ್ [illegible] ವಿಜಯಿನಾಂ

ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್ತಿಗೆ ಚುನಾವಣೆ

ಬೆಂಗಳೂರು ೪

ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ತುಮಕೂರು ಜಿಲ್ಲೆಯಿಂದ ಕಾಂಗ್ರೆಸ್ ಉಮೇದುವಾರರಾದ ಶ್ರೀ ಕೆ. ಎ. ನರಸಯ್ಯನವರು ಸಮಾಜವಾದಿಗಳಾದ ಶ್ರೀ ಜಿ. ಸದಾಶಿವರಾಯರನ್ನು ಸೋಲಿಸಿ ಚುನಾಯಿತರಾದರು. ಚಿತ್ರದುರ್ಗ-ಬಳ್ಳಾರಿ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಶ್ರೀ ಕೆ. ರಂಗಪ್ಪನವರು ಆರಿಸಿಬಂದರು. ಪಿ. ಎಸ್. ಪಿ. ಉಮೇದುವಾರರಾದ ಶ್ರೀ ಬಿ. ಎಸ್. ಶಂಕರಪ್ಪನವರು ಪರಾಜಿತರಾದರು.

ಬೆಂಗಳೂರಿನಲ್ಲಿ ಕಾಂಗ್ರೆಸ್ಸಿನ ಶ್ರೀ ಎಸ್. ಆರ್. ಗುಪ (ಪ. ಲಿ. ಸದಸ್ಯರು) ಮತ್ತು ಪ್ರಜಾ ಸಮಾಜವಾದಿ ಪಕ್ಷದ ಶ್ರೀ ಬಿ. ಎಂ. ಕೃಷ್ಣಮೂರ್ತಿಯವರು ಚುನಾಯಿತರಾಗಿರುವರು. ಮತ್ತೊಬ್ಬ ಕಾಂಗ್ರೆಸ್ ಉಮೇದುವಾರ ಶ್ರೀ ಆರ್. ಸುಬ್ಬಣ್ಣನವರು ಪರಾಜಿತರಾದರು.

ಕೋಲಾರದ ಜಿಲ್ಲೆಯಿಂದ ಸ್ವತಂತ್ರ ಉಮೇದುವಾರರಾದ ಶ್ರೀ ಸಿ. ಹೆಚ್. ವೆಂಕಟರಮಣಪ್ಪನವರು ಆರಿಸಲ್ಪಟ್ಟಿರುವರು. ಕಾಂಗ್ರೆಸ್ ಉಮೇದುವಾರರಾದ ಶ್ರೀ ಎ. ಸೀತಪ್ಪನವರು ಪರಾಜಿತರಾಗಿರುವರು.

ಕಾರು ಅಪಘಾತದಲ್ಲಿ ಪಶ್ಚಿಮ ಬಂಗಾಳಾ ಮಂತ್ರಿಯ ನಿಧನ

ಪಶ್ಚಿಮ ಬಂಗಾಳದ ನ್ಯಾಯಾಂಗ ಮಂತ್ರಿ ಎ. ಕೆ. ಬಸುರವರು ಮುರ್ಷಿದಾಬಾದ್ ಜಿಲ್ಲೆಯ [illegible] ಬಳಿ ನೆನ್ನೆ ಕಾರು ಅಪಘಾತಕ್ಕೆ ಸಿಕ್ಕಿ ಅವರ ತಲೆಗೆ ಗಾಯವಾಗಿ ಶಸ್ತ್ರ ಚಿಕಿತ್ಸೆ [illegible] ಕೂಡಲೇ ಆಸ್ಪತ್ರೆಗೆ ಸೇರಿಸಲ್ಪಟ್ಟರು. ಕಾರಿನಲ್ಲಿದ್ದ ಅವರ ಪತ್ನಿ, [illegible] ಮತ್ತು ಶ್ರೀ[illegible]ವರುಗಳಿಗೂ ಗಾಯವಾಗಿದೆ. ಶ್ರೀ ಬಸುರವರು ನೆನ್ನೆ ನಿಧನರಾದರು.

ಶಸ್ತ್ರ ಚಿಕಿತ್ಸೆ ಮಾಡುವಾಗ ಹೊಟ್ಟೆಯಲ್ಲಿ ಟವಲ್

ಹೊಟ್ಟೆಗೆ ಶಸ್ತ್ರ ಚಿಕಿತ್ಸೆ ಮಾಡಿದ ನಂತರ [illegible] ಅಂಗುಲ ಉದ್ದದ ಟವಲನ್ನು ಬಿಟ್ಟ ಸಂಬಂಧದಲ್ಲಿ ಉಂಟಾದ ತೊಂದರೆಗಾಗಿ ಒಬ್ಬ ಸಿಪಾಯಿಗೆ [illegible] ಡಾಲರ್ ಪರಿಹಾರ ಕೊಡುವಂತೆ ಅಮೆರಿಕದ ಸೆನೆಟ್ಟು ಸೂಚಿಸಿದೆ. [illegible] ಶಸ್ತ್ರ ಚಿಕಿತ್ಸೆ [illegible] ಮತ್ತೊಂದು ಬಾರಿ ಅದು ನಡೆದಾಗ ಹೊಟ್ಟೆಯಲ್ಲಿ ಟವಲ್ ಇದ್ದುದು ಪತ್ತೆಯಾಯಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಸಂಸ್ಥಾನದ ಅಭಿವೃದ್ಧಿ ಯೋಜನೆ [illegible] [illegible]

ಹಣದ ಉಬ್ಬರ ಕಡೆಯು ಎರಡರಷ್ಟು ಕರಿಗೆ

ಕೇಂದ್ರ ಯೋಜನಾ ಮಂಡಲಿಯ ಸೂಚನೆ

ದೇಶದಲ್ಲಿ ತೀವ್ರವಾದ ಹಣದುಬ್ಬರ ಪರಿಸ್ಥಿತಿಯನ್ನು ತಡೆಯಲು ದ್ವಿತೀಯ ಯೋಜನೆ ಅವಧಿಯಲ್ಲಿ ಈಗ ವಿಧಿಸಬೇಕೆಂದಿರುವ [illegible] ಕೋಟಿ ರೂ. ತೆರಿಗೆಗಳ ಎರಡು ಪಾಲು [illegible] ಕೋಟಿ ರೂ. ಕಂದಾಯ ಹಾಕಬೇಕೆಂದು ಕೇಂದ್ರ ಯೋಜನಾ ಮಂಡಲಿಯು ಸಲಹೆ ಮಾಡಿದೆ. [illegible] ತೆರಿಗೆಯಲ್ಲದೆ, ಸರ್ಕಾರದಿಂದ ಪದಾರ್ಥಗಳ ಮಾರಾಟ, ಹಲವು ಆರ್ಥಿಕ ಕ್ಷೇತ್ರಗಳಲ್ಲಿ ಸರ್ಕಾರದ ವಹಿವಾಟು ಮತ್ತು ಸರ್ಕಾರಿ ಉದ್ಯಮಗಳಲ್ಲಿ ಬರುವ ಲಾಭ-ನಷ್ಟಗಳಿಂದ ಬರುವ ವರಮಾನವನ್ನು ಆಯವ್ಯಯಗಳ ಕೊರತೆಯನ್ನು ಪರಿಹರಿಸಲೂ ಅಥವಾ ಯೋಜನೆ ವೆಚ್ಚಗಳನ್ನು ಕಡಿಮೆ ಮಾಡದಿರಲೂ ಉಪಯೋಗಿಸಬಹುದೆಂದು ಮಂಡಲಿಯು ತಿಳಿಸಿದೆ.

ಅಂಬೇಡ್ಕರರಿಗೆ ದೇವರಿಲ್ಲ; "ಆತ್ಮನೂ" ಇಲ್ಲ

ರಾಜ್ಯ ಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣಾ ಮಸೂದೆಯ ಬಗ್ಗೆ ಚರ್ಚೆ ನಡೆಯುತ್ತಿದ್ದಾಗ ಡಾ|| ಅಂಬೇಡ್ಕರರು ಮಾತನಾಡುತ್ತಾ, ಉತ್ತರ ಪ್ರದೇಶವನ್ನು ತ್ರಿಭಾಗವಾಗಿ ವಿಂಗಡಿಸಬೇಕೆಂದು ಒತ್ತಾಯ ಮಾಡಿದಾಗ, ಆ ಸಂಸ್ಥಾನದ ಪ್ರತಿನಿಧಿಯೊಬ್ಬರು ಮಧ್ಯೆ ಪ್ರವೇಶಿಸಿ "ದೇವರೇ ನಿಮ್ಮ ಆತ್ಮವನ್ನು ಉದ್ಧರಿಸಲಿ" ಎಂದು ಹೇಳಿದರು. ಅದಕ್ಕೆ ಅಂಬೇಡ್ಕರರು ಉತ್ತರವಾಗಿ "ನನಗೆ ಆತ್ಮ ಎಂಬುದೇ ಇಲ್ಲ. ನಾನು ಬೌದ್ಧ. ನನ್ನ ಆತ್ಮದ ಬಗ್ಗೆ [illegible] ತಿಳಿದುಕೊಳ್ಳುವುದು ಬೇಡ. [illegible] ದಯೆಯಿಂದ ನಿಮ್ಮನ್ನು ಉಳಿಸಿಕೊಳ್ಳಿ" ಎಂದು ತಿಳಿಸಿದರು.

[illegible]

ದಕ್ಷಿಣ ಕೃಷ್ಣ [illegible] ಸಂಘದ [illegible] ವಾರ್ಷಿಕೋತ್ಸವ [illegible] ನಾದ ವರ್ಲ್ಡ್ [illegible] ಸಭೆ ನಡೆಯಿತು. ಶ್ರೀ ವಿ. [illegible]ರವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ [illegible] ರಾಮಸ್ವಾಮಿ, ಮತ್ತು ಸಹಾಯ ಕಾರ್ಯದರ್ಶಿ ಶ್ರೀ ಜಿ. ಯಸ್ [illegible]ಯವರು ವರದಿ ಓದಿದರು. [illegible] ಸಂಘವು [illegible] ಸಾಧಿಸಿ ತನ್ನ [illegible] ಬೇಕೆಂದೂ, ಮತ್ತು ಸ್ವತಂತ್ರ ಭಾರತದ ಪ್ರಗತಿಗಾಗಿ ಶ್ರಮವಹಿಸಬೇಕೆಂದೂ ತಿಳಿಸಿದರು.

ವಯಸ್ಕರ ಶಿಕ್ಷಣ ತರಗತಿಯ ಆರಂಭ

ನಾಳೆ ಸಂಜೆ ೭ ಗಂಟೆಗೆ ನಗರದ [illegible] ವಯಸ್ಕರ ಶಿಕ್ಷಣ ತರಗತಿಯ ಆರಂಭೋತ್ಸವವನ್ನು ಶ್ರೀ ಸ. ಭದ್ರಯ್ಯನವರು ನೆರವೇರಿಸುವರು. [illegible] ಕೃಷ್ಣರವರು ಅಧ್ಯಕ್ಷತೆ ವಹಿಸುವರು.

ಫ್ರೆಂಚ್ ಫಕೀರನಿಂದ ೨೮೭ ಗಂಟೆ ಸಮಾಧಿ ರಿಕಾರ್ಡು

[illegible] ವರ್ಷದ ತರುಣ ಫಕೀರನೊಬ್ಬನು ೨೮೭ ಗಂಟೆ ಕಾಲ ಸಮಾಧಿಸ್ಥನಾಗಿ ವಿಶ್ವದ ರಿಕಾರ್ಡು [illegible]. [illegible] ಕಟ್ಟಿ [illegible] ಸಮಾಧಿಯನ್ನು ಪ್ರವೇಶಿಸಿದ್ದನು. [illegible] ಅವನನ್ನು ತೆಗೆದಾಗ [illegible] ನಾಗಿ [illegible]. [illegible] ಸಂತಸದ [illegible]. ತಾನು ಮುಂಚೆ [illegible] ದಾಗಿಯೂ, [illegible] ರಿಕಾರ್ಡನ್ನು [illegible] ತನಗೆ [illegible] ಯಿಂದಲೂ ಅವನು ಹೇಳಿದ್ದಾನೆ. [illegible] ಸಮಾಧಿಯನ್ನು ಪ್ರವೇಶಿಸಿ, [illegible] ತನ್ನ ಬಳಿ ಎರಡು ಸೀಸೆ [illegible] ಮತ್ತು [illegible] ಇಟ್ಟುಕೊಂಡಿದ್ದನು. ಅವನಿಗೆ ವಿವಾಹವಾಗಿ ೩ ಮಕ್ಕಳಿದ್ದಾರೆ.

ಬಂಗಾಳಾ-ಬಿಹಾರ್ ಒಕ್ಕೂಟ ಮತ್ತು ಕ್ಕೆ ಬಿಡಲಾಗಿದೆ

ಪಶ್ಚಿಮ ಬಂಗಾಳಾ ಮುಖ್ಯ ಮಂತ್ರಿ ಡಾ. ಬಿ. ಸಿ. ರಾಯರ ಹೇಳಿಕೆ

ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ|| ಬಿ. ಸಿ. ರಾಯರು [illegible] ಬಂಗಾಳಾ ಮತ್ತು ಬಿಹಾರ್ [illegible] ಒಕ್ಕೂಟದ [illegible] [illegible] ಸರ್ಕಾರಕ್ಕೆ ವರದಿ ಮಾಡಲಿದ್ದೇವೆ. [illegible] ತಮ್ಮ ಯೋಜನೆಯನ್ನು [illegible] ಗಾಳದ ಭಾಷಾವಾರು [illegible] [illegible]

[illegible]

[illegible] ಶ್ರೀ ಹೆಚ್. ವಿ. [illegible] [illegible]

ಸ್ಕೌಟುಗಳ ಪ್ರಥಮ ಚಿಕಿತ್ಸೆ ಮತ್ತು ಸಿಗ್ನಲಿಂಗ್ ಸ್ಪರ್ಧೆ

ಸಂಸ್ಥಾನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಆಶ್ರಯದಲ್ಲಿ ಏರ್ಪಾಡಾಗಿರುವ ಅಖಿಲ ಭಾರತ ಪ್ರಥಮ ಚಿಕಿತ್ಸಾ ಸ್ಪರ್ಧೆ, ಯಸ್. [illegible] ಜನರ ಪ್ರಥಮ ಚಿಕಿತ್ಸಾ ತಯಾರಿಯ [illegible] ಕೋಶ ಮತ್ತು ವಿಸ್ಲ ಆರ್ಡರ್ ಸಿಗ್ನಲಿಂಗ್ ಪರೀಕ್ಷೆ ಸ್ಪರ್ಧೆಗಳಿಗೆ ಪ್ರವೇಶಗಳನ್ನು ಸ್ವೀಕರಿಸುವ ತಾರೀಖನ್ನು [illegible] ರವರೆಗೆ ಮುಂದೂಡಲಾಗಿದೆ.

ಮತಾಂತರಗೊಳಿಸುವುದಕ್ಕೆ ರಾಜಾಜಿಯವರ ವಿರೋಧ

ನಾನಾ ಮತಗಳವರು ತಮ್ಮ ಮತವೇ ಉಳಿದ ಮತಗಳಿಗಿಂತ ಸತ್ಯಕ್ಕೆ ಹತ್ತಿರವಾದುದೆಂದು ಹೇಳಿಕೊಳ್ಳುವುದನ್ನು ಅನ್ಯರನ್ನು ಮತಾಂತರಗೊಳಿಸಲು ಯತ್ನಿಸುವುದನ್ನೂ ತಾವು ತೀವ್ರವಾಗಿ ವಿರೋಧಿಸುವುದಾಗಿ ರಾಜಾಜಿಯವರು ತಿಳಿಸಿದ್ದಾರೆ

ಒಂದು ಮತ ಧರ್ಮದಲ್ಲಿ ಹುಟ್ಟಿ ಬೆಳೆದು ಅದರಲ್ಲೇ ನಂಬಿಕೆಯಿಟ್ಟು ಸಮಾಜದಲ್ಲಿ ನಿರತರಾಗಿರುವ ಜನರನ್ನು ಮತಾಂತರಗೊಳಿಸಲು ಯತ್ನಿಸುವುದು ಬಹಳ ಕೆಟ್ಟದ್ದೆಂದೂ ಇದರಿಂದ ಕೌಟುಂಬಿಕ ಮತ್ತು ಸಾಮಾಜಿಕ ಶಾಂತಿ ಮತ್ತು ಭದ್ರತೆಗಳು ಕೆಡುವುವೆಂದೂ ಅವರು ಹೇಳಿ ಕ್ರೈಸ್ತ ಪಾದ್ರಿಗಳ ಕೆಲಸವು ಕೇವಲ ಮತಾಂತರಗೊಳಿಸುವುದೇ ಆಗಿದೆಯೆಂದು ಅಭಿಪ್ರಾಯಪಟ್ಟರು

ಈ ಕೆಲಸವನ್ನು ಯಾರೇ ಆಗಲಿ ಜನಸೇವೆಗೆ ಮುಂದೆ ಕೈಗೊಳ್ಳಲೇಬಾರದೆಂದೂ ಅನಂತರ ವೂ ಆರೋಗ್ಯರವಾದರೂ ಮತ್ತು ಹಣದಾಸೆಗೂ ಇದರಲ್ಲಿ ತೊಡಗಬಾರದೆಂದೂ ಹೇಳಿದರು

ವಿಜಯನಗರದ ರಾಜಕುಮಾರರಿಂದ ೩೦೦ನೇ ಹುಲಿ ಶಿಕಾರಿ

ವಿಜಯನಗರದ ಮಹಾರಾಜ ಕುಮಾರರು ಕಳೆದ ತಿಂಗಳಲ್ಲಿ ೩೦೦ನೇ ಹುಲಿ ಶಿಕಾರಿಯನ್ನು ನಡೆಸಿರುತ್ತಾರೆ ೧೯೩೦ರಲ್ಲಿ ಅವರು ಮೊದಲನೇ ಹುಲಿಯನ್ನು ಶಿಕಾರಿ ಮಾಡಿದ್ದರು

ಕನ್ನಡ ನಾಟಕಗಳಿಗೆ ಬಹುಮಾನ

ಶ್ರೀ ಪಿ ಕೆ ಗೋಪಿ ಮಂಡ್ಯರ ಕೈಗೆ ಬಂದ ತುತ್ತು ಶ್ರೀ ಕೆ ಎಸ್ ಅಯ್ಯರ ನಿರ್ಮಲ ಮತು ... [illegible] ... ಕನ್ನಡ ಸಾಹಿತ್ಯ ಪರಿಷತ್ತಿನವರ ... ದ್ವಿತೀಯ ಮತ್ತು ತೃತೀಯ ಬಹುಮಾನ ... [illegible] ... ಸ್ಪರ್ಧೆಯಲ್ಲಿ ... [illegible] ...

ಸಂಸ್ಥಾನದಲ್ಲಿ ಈ ವರ್ಷ ೧೩ ವಿವಿಧೋದ್ದೇಶ ಪ್ರೌಢ ಶಾಲೆಗಳ ಸ್ಥಾಪನೆ

ಸಂಸ್ಥಾನದಲ್ಲಿ ಈ ವರ್ಷ ೧೩ ವಿವಿಧೋದ್ದೇಶ ಪ್ರೌಢ ಶಾಲೆಗಳನ್ನು ಸ್ಥಾಪಿಸುವುದೆಂದು ತೀರ್ಮಾನಿಸಿದೆ ಅವುಗಳ ಒಂದು ಹೈಯರ್ ಸೆಕೆಂಡರಿ ಶಾಲೆಗಳನ್ನು ಶಿವಮೊಗ್ಗ ಭದ್ರಾವತಿ ... ಹಾಸನ ಚಿತ್ರದುರ್ಗ ಮತ್ತು ಮಧುಗಿರಿಗಳಲ್ಲಿ ತೆರೆಯಲಾಗುವುದು ವಿವಿಧೋದ್ದೇಶ ಪ್ರೌಢ ಶಾಲೆಗಳಲ್ಲಿ ವಿಭಿನ್ನ ಶಿಕ್ಷಣವನ್ನು ಕೊಡಲಾಗುವುದು

ಗುಂಡ್ಲುಪೇಟೆ ಪೌರಸಭಾಧ್ಯಕ್ಷರು

ಜೆ ಎ ರಹಮತುಲ್ಲಾಖಾನರ ಅವಿರೋಧ ಆಯ್ಕೆ

ಸ್ವಂ ಪು] ಗುಂಡ್ಲುಪೇಟೆ ೪

ಇಲ್ಲಿನ ಪುರಸಭಾಧ್ಯಕ್ಷ ಸ್ಥಾನಕ್ಕೆ ಉಮೇದುವಾರರಾಗಿರುವ ಶ್ರೀ ಜೆ ಎ ರಹಮತುಲ್ಲಾಖಾನರವರಿಗೆ ಯಾರೂ ಪ್ರತಿಸ್ಪರ್ಧಿಗಳಿಲ್ಲದಿರುವುದರಿಂದ ಅವರು ಚುನಾಯಿತರಾಗಿದ್ದಾರೆ ಶ್ರೀಯುತರು ಹಿಂದೆ ಪುರಸಭಾಧ್ಯಕ್ಷರಾಗಿದ್ದ ಶ್ರೀ ಜೆ ಎ ... ಗಫೂರ್‌ರವರ ಸಹೋದರರು ... ವಯಸ್ಸಿನಲ್ಲಿ ತುಂಬಾ ಚಿಕ್ಕವರಾದ ... ಮೇಧಾವಿಗಳೂ ಮತ್ತು ಬಹಳ ಜನಪ್ರಿಯರೂ ಆಗಿದ್ದಾರೆ

ಆಲ್ಜೀರಿಯದಲ್ಲಿ ೨೦೭ ಜನರ ಸಂಹಾರ

ಆಲ್ಜೀರಿಯದಲ್ಲಿ ಫ್ರೆಂಚ್ ಸೈನಿಕರು ಕಳೆದ ೨ ದಿನಗಳಲ್ಲಿ ೨೦೭ ಜನರನ್ನು ಸಂಹಾರ ಮಾಡಿದ್ದಾರೆ ... ಮಂದಿ ಫ್ರೆಂಚ್ ಸೈನಿಕರು ಮಡಿದಿದ್ದಾರೆ ಬಾಲ್ಕ ಬೆಟ್ಟ ಪ್ರದೇಶದಲ್ಲಿ ರಾತ್ರಿಯಾಗಿಯೂ, ಹಗಲಿನಲ್ಲಿಯೂ ಭೀಕರ ಕಾಳಗಗಳು ನಡೆದುವು

ಭದ್ರಾವತಿ ಕಬ್ಬಿಣದ ಕಾರ್ಖಾನೆ ಹೊಸ ಜನರಲ್ ಮ್ಯಾನೇಜರ್

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ ಹೆಚ್ ಕೆ ... ನಿವೃತ್ತರಾದ ಪ್ರಯುಕ್ತ ಅವರ ಸ್ಥಾನದಲ್ಲಿ ವರ್ಕ್ಸ್ ಮ್ಯಾನೇಜರ್ ಶ್ರೀ ಟಿ ಕೃಷ್ಣಪ್ಪನವರನ್ನು ನೇಮಿಸಲಾಗಿದೆ

ನಿಧನ

ನಗರದ ಗಂಧದೆಣ್ಣೆ ಕಾರ್ಖಾನೆಯಲ್ಲಿ ಅಸಿಸ್ಟೆಂಟ್ ಮ್ಯಾನೇಜರ್ ಆಗಿದ್ದ ಶ್ರೀ ಡಿ ವೆಂಕಟರಮಣಪ್ಪನವರು ಈ ದಿನ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಬಂಧುಮಿತ್ರರಿಗೆ ಹೃತ್ಪೂರ್ವಕ ಸಂತಾಪವನ್ನು ಸೂಚಿಸುತ್ತೇವೆ

ಶಂಕರ ಜಯಂತಿ ಧಾರಾ ಭಜನೆ

ಇದೇ ತಿಂಗಳು ೧೫ನೇ ತಾರೀಖು ಶಂಕರ ಜಯಂತಿ ಉತ್ಸವದ ಸಂಬಂಧವಾಗಿ ಎಲ್ಲ ಕಡೆ ... ಮತ್ತು ಶ್ರೀ ... ಯವರ ಭಕ್ತರ ಮನೆಗಳಲ್ಲಿ ... ಗಂಟೆ ವರೆಗೆ ಜಯಜಯ ಶಂಕರ ಮತ್ತು ಹರಹರ ಶಂಕರ ಎಂಬ ಧಾರಾ ಭಜನೆಯನ್ನು ಮಾಡಬೇಕೆಂದು ... ಸೂಚಿಸಿದ್ದಾರೆ ಧಾರಾ ಭಜನೆ ಮಾಡುವವರು ಎರಡು ತಂಡಗಳಾಗಿ ವಿಂಗಡಿಸಿಕೊಂಡು ಒಂದೊಂದು ಗುಂಪಿನವರೂ ಜಯಜಯ ಶಂಕರ ಹರಹರ ಶಂಕರ ಎಂದು ಭಜನೆ ಮಾಡಬೇಕೆಂದು ಸೂಚಿಸಲಾಗಿದೆ ಕಾಲದಲ್ಲಿ ತಿಳಿಸುವವರಿಗೆ ಮಠದಿಂದ ಮಂತ್ರಾಕ್ಷತೆಯನ್ನು ಕಳುಹಿಸಲಾಗುವುದೆಂದು ತಿಳಿಸಲಾಗಿದೆ

ಮೊರಾಕೋವಿನಲ್ಲಿ ಟ್ಯಾಂಜೀರ್ ಪ್ರದೇಶದ ಐಕ್ಯಕ್ಕೆ ಪ್ರಯತ್ನ

ಜಿಬ್ರಾಲ್ಟರ್ ಜಲಸಂಧಿಯ ಆಯಕಟ್ಟಿನ ಸ್ಥಾನದಲ್ಲಿರುವ ಟ್ಯಾಂಜಿಯರ್ ಪ್ರದೇಶವನ್ನು ಮೊರಾಕೋವಿನಲ್ಲಿ ಸೇರಿಸಿಕೊಳ್ಳುವ ಸಲುವಾಗಿ ಅಲ್ಲಿನ ಸುಲ್ತಾನರಾದ ಸಿಡಿ ಮಹಮದ್ ಯೂಸುಫ್‌ರವರು ತಮ್ಮ ವಿದೇಶಾಂಗ ಸಚಿವರನ್ನು ಟ್ಯಾಂಜಿಯರ್ ನಗರಕ್ಕೆ ಕಳುಹಿಸಿದ್ದಾರೆಂದು ವರದಿಯಾಗಿದೆ ಈಗ ಅದು ಬ್ರಿಟನ್ ಅಮೇರಿಕಾ ಮತ್ತಿತರ ಏಳು ರಾಷ್ಟ್ರಗಳ ಸಂಯುಕ್ತ ಆಡಳಿತದಲ್ಲಿದೆ

ಬೆಲೆ ಏರಿಕೆ ತಪ್ಪಿಸಲು ಕೇಂದ್ರ ಸರ್ಕಾರದ ನೆರವು

ಬೆಲೆಯ ಏರಿಕೆಯನ್ನು ತಡೆಗಟ್ಟಲು ಸಂಸ್ಥಾನ ಸರ್ಕಾರಗಳಿಗೆ ಎಷ್ಟು ಬೇಕಾದರೂ ಅಕ್ಕಿಯನ್ನು ಒದಗಿಸಲು ಕೇಂದ್ರದವರು ಸಿದ್ಧವಾಗಿರುವುದಾಗಿ ಕೇಂದ್ರ ಆಹಾರ ಉಪ ಮಂತ್ರಿ ಎಂ ವಿ ಕೃಷ್ಣಪ್ಪನವರು ತಿಳಿಸಿರುತ್ತಾರೆ

ಜೇನು ಸಾಕುವವರ ಸಮ್ಮೇಳನ

ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಬೋರ್ಡಿನ ಆಶ್ರಯದಲ್ಲಿ ಇದೇ ತಿಂಗಳು ೭ನೇ ತಾರೀಖು ಭಾರತದ ಜೇನು ಸಾಕುವವರ ಸಮ್ಮೇಳನವು ಬೆಂಗಳೂರಿನಲ್ಲಿ ಸೇರುವುದು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಅದರ ಆರಂಭೋತ್ಸವವನ್ನು ನೆರವೇರಿಸುವರು ಬೋರ್ಡಿನ ಅಧ್ಯಕ್ಷ ವೈಕುಂಠಲಾಲ್ ಮೆಹತಾರವರು ಅಧ್ಯಕ್ಷತೆ ವಹಿಸುವರು ಈ ಸಂದರ್ಭದಲ್ಲಿ ಏರ್ಪಡಿಸುವ ಪ್ರದರ್ಶನವನ್ನು ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ತೆರೆಯುವರು

ಬೆಂಗಳೂರಿನಲ್ಲಿ ರಾಷ್ಟ್ರೀಯ ರಂಗಮಂದಿರಕ್ಕಾಗಿ ೨೫ ಸಾವಿರ ರೂ

ಸಂಸ್ಥಾನದ ನೃತ್ಯ ನಾಟಕ ಮತ್ತು ಸಂಗೀತ ಅಕೆಡೆಮಿಯ ಜನರಲ್ ಕೌನ್ಸಿಲ್ಲಿನ ಅಧಿವೇಶನವು ವಿದ್ಯಾ ಇಲಾಖೆಯ ಮಂತ್ರಿಗಳಾದ ಶ್ರೀ ಎ ಜಿ ರಾಮಚಂದ್ರರಾವ್ ... ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆ ನಡೆದು ರಾಷ್ಟ್ರೀಯ ರಂಗಮಂದಿರವನ್ನು ಏರ್ಪಡಿಸಲು ವೆಚ್ಚವಾಗುವ ೧ ಲಕ್ಷ ರೂ ಪೈಕಿ ಈಗ ೨೫೦೦೦ ರೂ ಅನ್ನು ಒದಗಿಸಬೇಕೆಂದು ನಿರ್ಧರಿಸಲಾಯಿತು ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಬಯಲು ನಾಟಕ ಮಂದಿರಗಳನ್ನು ಉತ್ತಮಪಡಿಸಲು ೫೦೦೦ ರೂ ಮಂಜೂರಾಯಿತು ನೃತ್ಯ ನಾಟಕ ಮತ್ತು ಸಂಗೀತದ ಬೆಳವಣಿಗೆಗೆ ೧೧೦ ೦೦೦ ರೂ ಅನ್ನು ತೆಗೆದಿಡಲಾಯಿತು ಹಳೆಯ ಕಲಾವಿದರಿಗೆ ಆರ್ಥಿಕ ಸಹಾಯ ನೀಡುವ ಮತ್ತು ನಾಟಕ ಕಲೆಯ ಶಿಕ್ಷಣ ಕೊಡಲು ಯುವಕಯುವತಿಯರ ತರಬೇತಿಗಾಗಿ ಶಾಲೆಯೊಂದನ್ನು ಸ್ಥಾಪಿಸುವ ವಿಷಯಗಳನ್ನು ಎರಡು ಉಪ ಸಮಿತಿಗಳಿಗೆ ಒಪ್ಪಿಸಲಾಯಿತು

ಬಳ್ಳಾರಿ ಬಳಿ ಗೂಡ್ಸ್ ರೈಲುಗಳಿಗೆ ಡಿಕ್ಕಿ

ಬಳ್ಳಾರಿ ಬಳಿ ... ಹಳ್ಳಿಯ ಹತ್ತಿರ ಮೊನ್ನೆ ಎದುರುಬದುರಾಗಿ ಬರುತ್ತಿದ್ದ ೨ ಗೂಡ್ಸ್ ರೈಲುಗಳಿಗೆ ಡಿಕ್ಕಿಯಾಗಿ ೨ ಇಂಜನ್ನುಗಳಿಗೆ ಸ್ವಲ್ಪ ಜಖಂ ಆಗಿದೆ ಒಂದು ವ್ಯಾಗನ್ನು ಕೆಟ್ಟು ಬಿದ್ದಿದೆ

ಮೈಸೂರು ಪೇಟೆ ಧಾರಣೆ

	ರೂ	ಆಣೆ	ಪೈ	ರೂ ಹರೇ
ಕಡಲೆಕಾಯಿ	೨೪	೧೦	೦	
ಹುಚ್ಚೆಳ್ಳು	೪೬	೦	೦	
ಹೊಂಗೆಬೀಜ	೨೨	೧೦	೦	೨೬ ೧೦ ೦
ಹುಣಸೇಬೀಜ	೯	೧೨	೦	೯ ೬ ೦
ಹುರುಳಿ	೨೬	೦	೦	೨೮ ೦ ೦
ಹಲಸಂದೆ	೩೦	೮	೦	
ಧನಿಯಾ	೩೬	೮	೦	
ಸೀಗೆಕಾಯಿ	೬	೮	೦	
ಹುಣಸೇಹಣ್ಣು	೨	೧೨	೦	೩ ೧೪ ೦
ಮೆಣಸಿನಕಾಯಿ	೧೯	೧೨	೦	
ತೆಂಗಿನಕಾಯಿ ೧೦೦೦	೧೨೦	೮	೦	೨೨೦ ೦ ೦

SREE GANESH

TALKIES

From 5 56

For the first time on the screen the Flying Saucers in action!
To make the picture more attractive it will be filmed in wide angle

ಕತ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು!!

ಆದರೆ ಡಾ ರಾಜಾರವರ ನೂತನ ಮತ್ತು ಆಶ್ಚರ್ಯಕರವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ನಿರಾಶೆಯನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ

ಆದುದರಿಂದ ನವಯೌವನವನ್ನೂ ಅದ್ಭುತ ಶಕ್ತಿಯನ್ನೂ ಆರೋಗ್ಯವನ್ನೂ ಹೊಂದಲು ಕ್ಲಿನಿಕ್ ನ್ಯೂಸ್‌ನಲ್ಲಿ ಹೆಸರಾಂತ ಡಾ ಎ ವಿ ರಾಜಾರವರ ಸಲಹೆಯನ್ನು ಪಡೆಯಿರಿ

ಭಾರತದ ಹೆಮ್ಮೆಯಾದ ಡಾ ರಾಜಾರವರು ೧೫ರ ವಿಧಾನದ ಚಿಕಿತ್ಸೆಗಳಿಂದಲೂ ಅಮೃತವಾಗಿ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನಗಳಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನೂ ಹುರುಪನ್ನೂ ಉಂಟುಮಾಡಿರುವರು ದೊಡ್ಡ ಜಹಗೀರ್ದಾರರುಗಳೂ ನವಾಬರುಗಳೂ, ರಾಜರುಗಳೂ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ

ಅದ್ದರಿಂದ ಡಾ ರಾಜಾರವರನ್ನು ಭೇಟಿ ಮಾಡಿ ನವಯೌವನ ದೇಹ ಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿರಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ದಾಂಪತ್ಯದಿಂದ ಜಾರಿಗಲು ಇದು ಸುವರ್ಣ ಸುಸಮಯ

ಕಾಲ — ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ4 ರಿಂದ ರಾತ್ರಿ 9 ಘಂಟೆವರೆಗೆ

ರಾಜಾ ಮೆಡಿಕಲ್ ಹಾಲ್,

ನಂ 1 745 ಅಶೋಕಾ ರಸ್ತೆ ಮೈಸೂರು
(ಮೈಸೂರು ಬ್ಯಾಂಕ್ ಬಳಿ ... 3ನೇ ಕಟ್ಟಡ)

6 ಜೊತೆ ಭಾರಿ ಕುಸ್ತಿಗಳು

ಕಳೆದ ಭಾನುವಾರ (... ೨೯ 4 56) ನಡೆಯಬೇಕಾದ ಕುಸ್ತಿಯನ್ನು ಮಳೆಯು ಬಂದ ಕಾರಣ 5 ... ಭಾನುವಾರ ... ಗಂಟೆಗೆ ... ಅವರಣದಲ್ಲಿ ನಡೆಸಲಾಗುತ್ತೆ

ಪೈ॥ ಪೂರಣ್‌ಸಿಂಗ್	Vs	ಪೈ॥ ನೂರ್ ಅಹಮದ್
ಅಗ್ರಹಾರ್‌ಪಾಳ್ಯ ಪೈ॥ ಅಮೀರ್	Vs	ಪೈ॥ ಬೆಳಗಾಂ ಸಿದ್ದಪ್ಪ
ದಿಲ್‌ದಾರ್ ಪಟ್ಟೆ ಪೈ॥ ಬಸವರಾಜು	Vs	ಪೈ॥ ಜಾವಗಿಗೂ
ಪೈ॥ ಪುಟ್ಟಸ್ವಾಮಿ ಉ॥ ಚಂಚಂ	Vs	ಬೆಂಗಳೂರು ಪೈ॥ ಫಯಾಜ್
ಪೈ॥ ಗೋಪಾಲ್ ಉ॥ ಚಟಪಟ್	Vs	ಪೈ॥ ಶಿವನಿಗೂ
ಪೈ॥ ತಿಪ್ಪಯ್ಯ ಉ॥ ಅಭಿಮನ್ಯು	Vs	ಪೈ। ಮಹಮದ್‌ಹುಸೇನ್ ಉ॥ ಬಿಜಲಿ

ಟಿಕೆಟ್‌ಗಳು ದೊರೆಯುವ ಸ್ಥಳ

ಪೇಜ್ ಪೀರ್ ಅಂಡ್ ಸನ್ ... ಟಾಕೀಸ್ ಎದುರು ಭಾಗ

ಪ್ರಭಾ ★

ಇಂದಿನಿಂದ ಆರೋಗ್ಯ ಪ್ರಾರಂಭ
ದಿನವೂ ಮೂರು ಪ್ರದರ್ಶನಗಳು
3 6 30 ಮತ್ತು ರಾತ್ರಿ 10 ಘಂಟೆಗೆ
... ಫಿಲ್ಮ್ಸ್ ... ಹಾಸ್ಯಮಯ ... ಚಿತ್ರ

★ ಕಾಲಂ ಮಾರಿಪ್ಪೋಚು ★

... ಪಿ ಎ ... ದಿಲ್ಲಿ ...
... ಮುಂತಾದವರು

... 6 ರಿಂದ — 3 ದಿನಗಳು ಮಾತ್ರ
... ಮತ್ತು ... ಫಿಲ್ಮಿಸ್ತಾನ್‌ರವರ ★ ಶಾಮ್ಲಾ ★

Pulv

BRONKOI

For ASTHMA
&
BRONCHITIS

Sole Distributors for Mysore State and Coorg

SATHYA & CO

Chemists & Druggists

71/1 A S Street
BANGALORE 2

Edited Printed and Published by A R Nagarajan at Sadhvi Press D Subbaiah Road Mysore

ಚಾಮುಂಡೇಶ್ವರಿ ಟಾಕೀಸ್

4—5—56ರಿಂದ ... ಪ್ರಾರಂಭ ಪ್ರತಿ ದಿನ 3 ಪ್ರದರ್ಶನಗಳು

ಮೆಹಬೂಬ್ ರವರ ಹಿಂದಿ ಚಿತ್ರ ★ **ಆವಾಜ್** ★

ಭೂಮಿಕೆ — ನಳಿನಿ ಜಯವಂತ್, ಉಷಾ ಕಿರಣ್, ಲೀಲಾ ಚಿಟ್ನಿಸ್, ರಾಜೇಂದ್ರ ಕುಮಾರ್ ಮತ್ತು ಝುಲ್ಲಿ

ಟೆಲಿಫೋನ್ ನಂ 792

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
[illegible] ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಕೆ ಮೂರು ಕಾಸು

ಸಂಪುಟ : ೧೯] SADHVI : SATURDAY 5-5-1956 ಮೈಸೂರು ಶನಿವಾರ : ೫-೫-೧೯೫೬ [ಸಂಚಿಕೆ : [illegible]

ಶಸ್ತ್ರ ಸನ್ಯಾಸದ ಬಗ್ಗೆ ಪಂಚ ರಾಷ್ಟ್ರಗಳ ಮಾತುಕತೆ ವಿಫಲ

ಶಿಸ್ತಿನ ಕ್ರಮದ ವಿರುದ್ಧವಾಗಿ ಎ ರಾಮಣ್ಣನವರ ಅಪೀಲು

ಮೈಸೂರು ೫

[illegible]ನಗರದ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎ ರಾಮಣ್ಣನವರು ತಮ್ಮ ಮೇಲೆ ನಗರ ಕಾಂಗ್ರೆಸ್ ಸಮಿತಿಯು ಕೈಗೊಂಡಿರುವ ಶಿಸ್ತಿನ ಕ್ರಮದ ವಿರುದ್ಧವಾಗಿ ಪ್ರದೇಶ ಕಾಂಗ್ರೆಸ್ಸಿಗೆ ಅಪೀಲು ಮಾಡಿ ಅದು ಇತ್ಯರ್ಥವಾಗುವವರೆಗೆ ತಡೆ[illegible]ಯನ್ನು ಹೊರಡಿಸುವಂತೆ ಕೋರಿರುತ್ತಾರೆ

ಸಂಗೀತ

[illegible] ಮೊಹಲ್ಲಾ ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ [illegible] ಸಂಜೆ ೭॥ ಗಂಟೆಗೆ ಹನುಮಂತೋತ್ಸವ [illegible]ಅಂಗವಾಗಿ ವಿ॥ ಕೃಷ್ಣಮೂರ್ತಿಯವರ [illegible] ವಿ ಮಹದೇವಪ್ಪನವರ ಪಿಟೀಲು ಮತ್ತು ವಿ॥ ಪರಿಪೂರ್ಣಚಂದ್ರರವರ ಮೃದಂಗದೊಡನೆ [illegible]ಯುವುದು

ಹರಿಕಥೆ

[illegible] ಅಗ್ರಹಾರದಲ್ಲಿರುವ ಶ್ರೀ ಕ್ರಿ[illegible]ರಾಮ ದೇವಸ್ಥಾನದಲ್ಲಿ ನಾಳೆ ೦ ಶ್ರೀ [illegible] ಏಕಾದಶಿ ಪ್ರಯುಕ್ತ ವಿ ಹೆಚ್ ಟಿ [illegible]ಣ್ಣನವರು ಭಕ್ತ ಕುಚೇಲ ಎಂಬ ಹರಿಕಥೆಯನ್ನು ನಡೆಸುವರು

ಜಯತೀರ್ಥಾಚಾರ್ಯರ ಉಪನ್ಯಾಸ

ಪದ್ಮನಾಭ ರಾಜಾರಾಮ ಅಗ್ರಹಾರದಲ್ಲಿ [illegible]ದಿಂದ ೧ ವಾರ ಪ್ರತಿನಿತ್ಯವೂ ೦ ಶ್ರೀ [illegible]ಯಿಂದ ೧ ಗಂಟೆ ಕಾಲ ವೇ ಬ್ರಹ್ಮಶ್ರೀ [illegible]ತೀರ್ಥಾಚಾರ್ಯರು ಉಪನ್ಯಾಸ ಮಾಡುವರು ಸರ್ವರಿಗೂ ಆಹ್ವಾನವಿದೆ

ಗೋಹತ್ಯೆ ಪತ್ತೆ

ಲಷ್ಕರ್ ಪೊಲೀಸರು ಕಸಾಬಗೇರಿಯಲ್ಲಿ ಈ ಬೆಳಗಿನಝಾವ ೫ ಗಂಟೆ ಸಮಯದಲ್ಲಿ [illegible]ನೆ ನಡೆಸಿ [illegible] ಎಂಬುವನ ಮನೆಯಲ್ಲಿ ಗೋವಧೆಯಾಗಿದ್ದುದನ್ನು ಪತ್ತೆ ಮಾಡಿದ್ದಾರೆ

ಎ ವಿ ವರದಾಚಾರ್ಯರ ಸ್ಮಾರಕ ಚಿತ್ರಾನಾವರಣ

ನಗರದ ಮಾತಾ ಅಸೋಸಿಯೇಷನ್ನಿನ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಕ್ಕೆ ನೂರಡಿ ರಸ್ತೆಯಲ್ಲಿರುವ ಸಹಕಾರ ಭವನದಲ್ಲಿ ನಾಟಕ ಶಿರೋಮಣಿ ಶ್ರೀ ಎ ವಿ ವರದಾಚಾರ್ಯರ ಸ್ಮಾರಕ [illegible]ವನ್ನು " ಅರುಣ " ಸಂಪಾದಕರಾದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು ನಿವೃತ್ತ ಜಿಲ್ಲಾ ನ್ಯಾಯಾಧೀಶರುಗಳಾದ ಶ್ರೀ ಕೆ ಕೃಷ್ಣಸ್ವಾಮಿ ಅಯ್ಯಂಗಾರ್ಯರು ಶ್ರೀ ವರದಾಚಾರ್ಯರ [illegible] [illegible] ಮಾಡುವರು

ರಾಮ ಸೇವಾ ಸಂಘಕ್ಕೆ ಸಹಾಯ

ಕಾಲೇಜು ರಸ್ತೆಯಲ್ಲಿರುವ ಶ್ರೀ ರಾಮ ಸೇವಾ ಸಂಘಕ್ಕೆ, ಅದೇ ರಸ್ತೆಯಲ್ಲಿರುವ [illegible] ಮುನಿಸಿಪಲ್ ಕೌನ್ಸಿಲರಾದ ಶ್ರೀ ಎನ್ ಪ [illegible]ರವರು ತಮ್ಮ ಪುತ್ರನ ಚೌಲ ಕರ್ಮ [illegible]ಸಂದರ್ಭದಲ್ಲಿ ಐದು ರೂಪಾಯಿಗಳನ್ನು [illegible]ವಾಗಿ ದಾನ ಮಾಡಿರುತ್ತಾರೆ

೧೫ರಿಂದ ರೇಷ್ಮೆ ಕಾರ್ಖಾನೆಗಳು ಬಂದ್

ಬೆಂಗಳೂರು ೫

ಇಲ್ಲಿನ ರೇಷ್ಮೆ ಗೃಹ ಕೈಗಾರಿಕೆ ಸಂಘದ [illegible] ಸಭೆಯು ಕಳೆದ ಸೋಮವಾರ [illegible] ವಿದ್ಯುಚ್ಛಕ್ತಿ ದರ [illegible] ಮತ್ತು [illegible] ಸಂಘದವರು [illegible] [illegible] ಬರವಿಸುವುದಾಗಿ [illegible] [illegible] ಕೆಲಸವನ್ನು ನಿಲ್ಲಿಸುವುದೆಂದು [illegible] [illegible] ಮಂತ್ರಿಗಳು [illegible] ಪ್ರತಿನಿಧಿ [illegible] [illegible] ಮುಂದೆ ಹಾಕಿದ್ದರು

ಮಾರಾಟ ತೆರಿಗೆ ದರ ಹೆಚ್ಚಲಿದೆ

[illegible] ವಿಧಿಸಿರುವ [illegible] ತೆರಿಗೆಗಳನ್ನು ಹೆಚ್ಚಿಸಲೂ ಮತ್ತು ಹೊಸ [illegible] [illegible] ಯೋಜನೆ ಅವಧಿಯಲ್ಲಿ [illegible] ಎಲ್ಲಾ ಸಂಸ್ಥಾನ [illegible] ಹೆಚ್ಚು [illegible] ಭೂ ಕಂದಾಯದ [illegible] ವ್ಯವಸಾಯ ವರಮಾನ ತೆರಿಗೆ ಅಭಿವೃದ್ಧಿ ತೆರಿಗೆ ಮತ್ತು [illegible] ತೆರಿಗೆ [illegible] ಸಂಸ್ಥಾನ[illegible] ವರಮಾನಗಳು ಹೆಚ್ಚಲಿವೆ

ಸಂಸ್ಥಾನದಲ್ಲಿ ಮಾರಾಟ ಧಾನ್ಯಗಳಿಗೆ ಡಿ ಡಿ ಟಿ ಬೆರಕೆ

ಮೈಸೂರಿನ ಮಾರುಕಟ್ಟೆಗಳಲ್ಲಿ ಮಾರಾಟಕ್ಕಾಗಿ ಇರುವ ಹಲವು ಆಹಾರ ಧಾನ್ಯಗಳು ಡಿ ಡಿ ಟಿ ಬೆರಕೆಯಿಂದ ಕೆಟ್ಟಿರುವುದಾಗಿ ಕೇಂದ್ರ ಆಹಾರ ಸಂಶೋಧನಾಲಯದವರು ತಿಳಿಸಿರುವರೆಂದು ಲೋಕ ಸಭೆಯಲ್ಲಿ ಕೇಂದ್ರ ಮಂತ್ರಿ ಮಾ[illegible] ನುಡಿದಿದ್ದಾರೆ ಧಾನ್ಯಗಳ ಮೇಲೆ ಕೀಟನಾಶಕವನ್ನು ಚಿಮುಕಿಸಬಹುದೇ ಹೊರತು ಅವನ್ನು ಬೆರೆಸಬಾರದೆಂದು ಕೇಂದ್ರ ಸರ್ಕಾರದವರು ಸೂಚನೆಯಿತ್ತಿರುವುದಾಗಿ ಅವರು ತಿಳಿಸಿದರು

ಸಕಾಲಕ್ಕೆ ವರನು ಬಾರದೆ ಬೇರೊಬ್ಬನಿಗೆ ಕನ್ಯಾದಾನ

ಉತ್ತರ ತಿರುವಾಂಕೂರಿನ ಕೋತಮಂಗಲ ಎಂಬಲ್ಲಿ ಮೊನ್ನೆ ವಿವಾಹವೊಂದು ನಡೆದು [illegible] [illegible] ವರನನ್ನು ಬಿಟ್ಟು ಬೇರೊಬ್ಬನಿಗೆ ವಧುವನ್ನು ಕೊಟ್ಟು ಮದುವೆಯಾದ ಸಮಾಚಾರವು ವರದಿಯಾಗಿದೆ ಸಕಾಲದಲ್ಲಿ ವರನು ವಧುವಿನ ಮನೆಗೆ ಬಾರದಿರಲು ವಿವಾಹದ ಮುಹೂರ್ತಕ್ಕೆ ಒಂದಿದ್ದ ನೆರೆಯ ಯುವಕನೊಬ್ಬನಿಗೆ ಹುಡುಗಿಯನ್ನು ಕೊಡಲಾಯಿತು ಮೊದಲು ಗೊತ್ತಾಗಿದ್ದ ವರನು ಅರ್ಧ ಗಂಟೆ ತಡವಾಗಿ ತನ್ನ ಪರಿವಾರದೊಡನೆ ಆಗಮಿಸುವಷ್ಟರಲ್ಲಿ ನೂತನ ದಂಪತಿಗಳು ಸ್ಥಳವನ್ನು ಬಿಟ್ಟುಹೊರಟಿದ್ದರು

ಈರೋಡಿನಲ್ಲಿ ಸೈಕಲ್ ತೆರಿಗೆ ವರ್ಷಕ್ಕೆ ೮ ಆಣೆ ಮಾತ್ರ

ಕೈ ಗಾಡಿಗಳ ಮೇಲೆ ತೆರಿಗೆ ರದ್ದು

ಈರೋಡಿನ ಪೌರಸಭೆಯು ಕಳೆದ [illegible] [illegible] ವಿಧಿಸುವ ಸೈಕಲ್ ತೆರಿಗೆಯನ್ನು ಆರು ತಿಂಗಳಿಗೆ ೧ ರೂಪಾಯಿಯಿಂದ ಕೇವಲ ೮ ಆಣೆಗೆ ಇಳಿಸಲು ನಿರ್ಧರಿಸಿರುತ್ತದೆ ಕೈ ಗಾಡಿಗಳ ಮೇಲೆ ಯಾವ ತೆರಿಗೆಯನ್ನೂ ವಿಧಿಸಬಾರದೆಂದು ಸಭೆಯು ತೀರ್ಮಾನಿಸಿದೆ

ಬಳ್ಳಾರಿ ಉಪ ಚುನಾವಣೆಗೆ ಕಾಂಗ್ರೆಸ್ಸಿನ ಸ್ಪರ್ಧೆ ಇಲ್ಲ

ಬಳ್ಳಾರಿ [illegible] ಕ್ಷೇತ್ರದಿಂದ ಸಂಸ್ಥಾನದ ವಿಧಾನ ಸಭೆಗೆ ನಡೆಯಲಿರುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಉಮೇದುವಾರರನ್ನು ನಿಲ್ಲಿಸಲು ಇಷ್ಟವಿಲ್ಲವೆಂದು ಕಾಂಗ್ರೆಸ್ [illegible] ಸಮಿತಿಯು ಪ್ರದೇಶ ಕಾಂಗ್ರೆಸ್ ಸಮಿತಿಗೆ ತಿಳಿಸಿರುತ್ತದೆ ಬಳ್ಳಾರಿ ಜಿಲ್ಲಾ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಗಳು ಶ್ರೀ ಹೆಚ್ ರಂಗಣ್ಣ[illegible]ದರ ಹೆಸರನ್ನು ಶಿಫಾರಸು ಮಾಡಿದ್ದವು [illegible] ಆಧಾರದ ಮೇಲೆ ನಡೆಯುವ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ [illegible] [illegible] ಸಮಿತಿಯು ಮೇಲ್ಕಂಡಂತೆ ನಿರ್ಧಾರ ಕೈಗೊಂಡಿದೆ ಉಪ ಚುನಾವಣೆಯಲ್ಲಿ ಆಂಧ್ರರ ಪರವಿರುವ ಮುಂಡ್ಲೂರು ಗಂಗಪ್ಪ ಮತ್ತು ಬಿ ಎ ಗಫಾರ್ ಕನ್ನಡಿಗರ ಪರವಾಗಿ ಹೆಚ್ ಸಣ್ಣಬಸವನಗೌಡ ಎ ಕರಿಬಸಪ್ಪ ಮತ್ತು ಎಸ್ ಅಬ್ದುಲ್ [illegible] ಸಾಹೇಬ್ [illegible]ವರು ಸ್ಪರ್ಧಿಸಿರುತ್ತಾರೆ

ಮದ್ರಾಸಿನ ಯುವತಿಯ ಪ್ರಥಮ ವಿಮಾನ ಹಾರಾಟ

ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿನಿ ೧೮ ವರ್ಷದ ಉಷಾ ರಾಮಚಂದ್ರನ್ ಎಂಬಾಕೆಯು ಮೊನ್ನೆ ಮಧ್ಯಾಹ್ನ ಅಲ್ಲಿನ ಫ್ಲೈಯಿಂಗ್ ಕ್ಲಬ್ಬಿನ ವಿಮಾನದಲ್ಲಿ ಒಬ್ಬಳೇ ಕುಳಿತು ಹಾರಾಟ ನಡೆಸಿದಳು ಮದ್ರಾಸಿನಲ್ಲಿ ವಿಮಾನ ಹಾರಾಟ ಶಿಕ್ಷಣ ಪಡೆಯುತ್ತಿರುವ ೨೦ ಮಂದಿ ಸ್ತ್ರೀಯರ ಪೈಕಿ ಆಕೆಯು ಏಕಮಾತ್ರ ಸ್ತ್ರೀ ಮದ್ರಾಸ್ ಸಂಸ್ಥಾನದಲ್ಲಿ ವಿಮಾನ ಹಾರಾಟ ಕಲಿತಿರುವವರಲ್ಲಿ [illegible] [illegible] ಮೊದಲಿನ ಮಹಿಳೆ ಹಾರಾಟವು ಬಹು ರೋಮಾಂಚಕರವಾಗಿತ್ತೆಂದು ಆಕೆಯು ತಿಳಿಸಿರುವಳು ಆಕೆಯ ತಂದೆಯೂ ವಿಮಾನ [illegible]

೩೦೦ ಮಂದಿ ಮಹಾರಾಷ್ಟ್ರರ ಬಂಧನ

ಸಭೆ ಮೆರವಣಿಗೆ ಮತ್ತು ಪ್ರದರ್ಶನಗಳ [illegible] ನಿಷೇಧದ ಆಜ್ಞೋಲ್ಲಂಘನೆಗಾಗಿ ನಾಸಿಕದ [illegible] ಸಿಫಾವ್ ಎಂಬಲ್ಲಿ ೨೪೫ ಮಹಿಳೆಯರೂ [illegible] ಜನ ಗಂಡಸರೂ ನೆನ್ನೆ ಬಂಧಿಸಲ್ಪಟ್ಟರು ಮಹಿಳೆಯರಲ್ಲಿ ಅನೇಕರು ಮಕ್ಕಳನ್ನು ಎತ್ತಿಕೊಂಡಿದ್ದರು ಮಹಾರಾಷ್ಟ್ರಕ್ಕೆ ಬೊಂಬಾಯಿ ನಗರವನ್ನು ಸೇರಿಸದೇ ಇರುವುದಕ್ಕಾಗಿ ಅಲ್ಲಿನ ಅಮಲ್ದಾರರ ಕಛೇರಿ ಮುಂದೆ ಅವರುಗಳು ಪ್ರದರ್ಶನ ನಡೆಸಿದರು

ಪಂಚ ರಾಷ್ಟ್ರಗಳ ನಡುವೆ ಶಸ್ತ್ರ ಸನ್ಯಾಸದ ಮಾತುಕತೆ ವಿಫಲ

ಶಸ್ತ್ರ ಸನ್ಯಾಸದ ವಿಷಯವಾಗಿ ಲಂಡನ್ನಿನಲ್ಲಿ ನಡೆಯುತ್ತಿರುವ ಸಮ್ಮೇಳನದಲ್ಲಿ ಪಶ್ಚಿಮ ರಾಷ್ಟ್ರಗಳ ಪ್ರತಿನಿಧಿಗಳಿಗೂ ರಷ್ಯದ ಪ್ರತಿನಿಧಿಗೂ [illegible] ಒಪ್ಪಂದವಾಗದೆ ಮಾತುಕತೆ ವಿಫಲಗೊಂಡಿರುವುದೆಂದು ವರದಿಯಾಗಿದೆ

ಮೊರಾಕೋ ನಗರದ ಗಲಭೆಗಳಲ್ಲಿ ೭೫ ಜನರ ಮರಣ

ರಾಷ್ಟ್ರೀಯ ವಾದಿಯಾಗಿದ್ದ ಒಬ್ಬ ವ್ಯಾಪಾರಿಯನ್ನು ಎರಡು ದಿವಸಗಳ ಹಿಂದೆ ಮೊರಾಕೋ ದೇಶದ ಮರ್‍ರಾಕೇಶ್ ನಗರದಲ್ಲಿ ಅಲ್ಲಿನ ಪಾಷಾ [illegible] ಹಿಂಬಾಲಕರು ಕೊಂದಿರುವ ಕಾರಣದಿಂದ ಮೊನ್ನೆ ಅಲ್ಲಿ ಗಲಭೆಗಳಾಗಿ ಉದ್ರಿಕ್ತರಾದ ಜನರು ಸುಮಾರು ೭೫ ಮಂದಿ ಪಾಷಾ ಬೆಂಬಲಿಗರನ್ನು ಕೊಂದುಹಾಕಿದರೆಂದು ವರದಿಯಾಗಿದೆ ಜನರ ಗುಂಪು ಆ ಪಟ್ಟಣದ ಬೀದಿ ಬೀದಿಗಳಲ್ಲಿ ಸಂಚರಿಸಿ ಒಬ್ಬ ಪಾಷಾ ಬೆಂಬಲಿಗನನ್ನು ಚೂರಿಯಿಂದ ತಿವಿದು ಶವದ ತುಂಡುಗಳ ವೇಲೆ ನಗರದಲ್ಲೆಲ್ಲಾ ಎಳೆದಾಡಿ ಅನಂತರ ಸುಟ್ಟುಹಾಕಿದರು ಪಾಷಾ ಪೊಲೀಸನೊಬ್ಬನನ್ನು [illegible]ಡಿಯೊಂದರಲ್ಲಿ ಮೆರವಣಿಗೆ ಮಾಡಿ, ಅನಂತರ [illegible] ಜೀವಂತವಾಗಿ ಸುಟ್ಟರು ಹಾಗೆಯೇ ಮತ್ತೊಬ್ಬನನ್ನೂ ಹಿಡಿದು ಕೊಂದು ಸುಟ್ಟುಹಾಕಿದರು ಪಾಷಾ ಗ್ಲಾವಿ ಯುದ್ಧದ ಹಿಂದೆ ಮೊರಾಕೋ ಸುಲ್ತಾನರ ವಿರುದ್ಧವಾಗಿ [illegible] ನಡೆಸಿದ್ದರು

ಬೆಂಗಳೂರಿನಲ್ಲಿ ಬರುವ ತಿಂಗಳು ಕುದುರೆ ಜೂಜು

ಸಂಸ್ಥಾನದ ಗೃಹ ಮಂತ್ರಿ ಶ್ರೀ ಹೆಚ್ ಸಿದ್ಧವೀರಪ್ಪನವರೊಡನೆ ಬೆಂಗಳೂರು ರೇಸ್ ಕ್ಲಬ್ಬಿನ ಸೀನಿಯರ್ ಸ್ಟೀವರ್ಡರಾದ ಬೊಬ್ಬಿಲಿ ರಾಜರು ಕುದುರೆ ಜೂಜು ನಡೆಸುವ ಬಗ್ಗೆ ಒಪ್ಪಂದ ಮಾಡಿಕೊಂಡಿರುತ್ತಾರೆ ಸರ್ಕಾರವು [illegible] ವಿಧಿಸಿರುವ ಷರತ್ತುಗಳ ಮೇಲೆ ಕ್ಲಬ್ಬು ಬರುವ ತಿಂಗಳು ಎರಡನೇ ವಾರದಿಂದ ೧೫ ದಿವಸಗಳ ಜೂಜನ್ನು ನಡೆಸಲು ವ್ಯವಸ್ಥೆ ಮಾಡುತ್ತಿದೆ ಸರ್ಕಾರದವರು ಸೂಚಿಸಿದ್ದ ಹಲವು ತಿದ್ದುಪಡಿಗಳನ್ನು ಕ್ಲಬ್ಬಿನವರು ಜಾರಿಗೆ ತರದೇ ಇದ್ದ ಸಂಬಂಧವಾಗಿ ಕ್ಲಬ್ಬಿಗೆ [illegible] ವರ್ಷ ರಹದಾರಿಯನ್ನು ಕೊಟ್ಟಿರಲಿಲ್ಲ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಪ್ರೌಢಶಾಲೆಗಳಲ್ಲಿ ೪ ವರ್ಷಗಳ ವಿ ದ್ಯಾ ಭ್ಯಾ ಸ

ಮುಖ್ಯೋಪಾಧ್ಯಾಯರ ಗೋಷ್ಠಿಯ ಅ ಭಿ ಪ್ರಾ ಯ

ಮೈಸೂರು ೫

ಮುಖ್ಯೋಪಾಧ್ಯಾಯರ ಮತ್ತ ವಿದ್ಯಾಭ್ಯಾಸ ಅಧಿಕಾರಿಗಳ ಪ್ರಾದೇಶಿಕ ಗೋಷ್ಠಿಯು ಒಂದು ಉಪಸಮಿತಿಯಲ್ಲಿ ಮೊನ್ನೆ ಶಾಲಾ ಪ್ರವೇಶವಯಸ್ಸು ಮತ್ತು ತರಗತಿಗಳ ಅವಧಿಯನ್ನು ಕುರಿತು ಎರಡು ಮುಖ್ಯ ನಿರ್ಣಯಗಳನ್ನು ಅಂಗೀಕರಿಸಲಾಯಿತು

ಕೇಂದ್ರ ಸಲಹಾ ಸಮಿತಿಯ ಶಿಫಾರಸಿನ ಅಭಿಪ್ರಾಯವನ್ನು ಉಪ ಸಮಿತಿಯು ಒಪ್ಪದೆ ಪ್ರಾಥಮಿಕ ಶಾಲೆಯ ಪ್ರಥಮ ತರಗತಿಗೆ ಪ್ರವೇಶ ಮಾಡುವಾಗ ವಿದ್ಯಾರ್ಥಿಗಳಿಗೆ ೫ ವರ್ಷವಾಗಿರಬೇಕೆಂದು ಸೂಚಿಸಿದೆ ಅದು ವಿದ್ಯೆಯು ಬರುವ ವಯಸ್ಸೆಂದು ಉಪ ಸಮಿತಿಯು ಭಾವಿಸಿರುವುದಲ್ಲದೆ, ಭಾರತದಂತಹ ಉಷ್ಣ ದೇಶದಲ್ಲಿ ಆಯುಃ ಪ್ರಮಾಣವು ಹೆಚ್ಚಿಲ್ಲದಿರುವುದನ್ನು ಗಮನಿಸಿದೆ

ಪ್ರಾಥಮಿಕ ವಿದ್ಯಾಭ್ಯಾಸವು ೬ ವರ್ಷ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಣವು ೬ ವರ್ಷಗಳದ್ದಾಗಿರಬೇಕೆಂದು ಗೋಷ್ಠಿಯು ಸೂಚಿಸಿದೆ ಅಖಿಲ ಭಾರತದ ಮಾದರಿಯಲ್ಲಿ ಒಟ್ಟು ೧೧ ವರ್ಷ ಗ ಳ ವಿದ್ಯಾಭ್ಯಾಸವಿರಬೇಕೆಂದು ಗೊತ್ತುಮಾಡಿದರೂ, ಪ್ರೌಢಶಾಲೆಯ ಶಿಕ್ಷಣದ ಅವಧಿಯು ೪ ವರ್ಷಕ್ಕೆ ಕಡಿಮೆಯಿರಬಾರದೆಂದೂ ಆ ವ್ಯವಸ್ಥೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಅವಧಿಯಲ್ಲಿ ೧ ವರ್ಷದ ತರಗತಿಯನ್ನು ತೆಗೆದುಹಾಕಬಹುದೆಂದೂ ಉಪ ಸಮಿತಿಯು ತಿಳಿಸಿದೆ

ಅರಮನೆ ಕೋಟೆಯಲ್ಲಿ ರಥೋತ್ಸವ

ರಾಜಧಾನಿಯ ಅರಮನೆ ಕೋಟೆಯಲ್ಲಿರುವ ಶ್ರೀ ಶ್ವೇತ ವರಾಹಸ್ವಾಮಿಯವರಿಗೆ ನಾಳೆ ಬೆಳಿಗ್ಗೆ ೯—೩೦ರ ನಂತರ ರಥೋತ್ಸವವು ನಡೆಯುವುದು

ತಿ ದ್ದು ಪ ಡಿ

ಪಿರಿಯಾಪಟ್ಟಣದ ಶ್ರೀ ಪ್ರಸನ್ನ [illegible] ರವರಿಗೆ [illegible] ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದ್ದಿತು ಅದನ್ನು ಪ್ರಸನ್ನ [illegible] ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿ

ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಮೈಸೂರು

ಘನವಾದ ಪಿಟೀಲು ಸೋಲೋ ಕಚೇರಿ

6—5—56ನೇ ಭಾನುವಾರ ಸಂಜೆ 6ಕ್ಕೆ

ಸಂಗೀತ ಕಲಾನಿಧಿ

ದ್ವಾರಂ ವೆಂಕಟಸ್ವಾಮಿ ನಾಯುಡು ರವರ ಪಿಟೀಲು

ಕುಮಾರಿ ದ್ವಾರಂ ಮಂಗತಾಯಾರ್ ರವರ ಪಿಟೀಲು

ವಿ ಟಿ ವಿ ಗೋಪಾಲಕೃಷ್ಣರವರ ಮೃದಂಗ

ಮೊದಲನೆಯವರಿಗೆ ಟಿಕೆಟ್ ದರ ರೂ 2—0 0

Edited, Printed and Published b
A R Nagarajan a Sadhv P e
D Subbiah Road Mysore

ವಿವಾಹ ಮಹೋತ್ಸವಗಳು

ನಿವೃತ್ತ ಜಿಲ್ಲಾ ವಿದ್ಯಾಧಿಕಾರಿಗಳೂ ಮತ್ತು ದಳವಾಯಿ ಪ್ರೌಢಶಾಲಾ ಮುಖ್ಯೋಪಾಧ್ಯಾಯರೂ ಆದ ಶ್ರೀ ಎಂ ಆರ್ ವೆಂಕಟಸುಬ್ಬಶಾಸ್ತ್ರಿಯವರು ತಮ್ಮ ಪುತ್ರಿ ಸೌ॥ ಲೀಲಾವತಿಯನ್ನು ಬೆಂಗಳೂರು ಶ್ರೀ ಬಿ ವೆಂಕಟರಾಯರ ಪುತ್ರ ಶ್ರೀ ಬಿ ವಿ ಗೋವಿಂದರಾಯರಿಗೆ ಕೊಟ್ಟು ಕಳೆದ ಬುಧವಾರ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ಚಾಮುಂಡಿ ಒಸ್ತ್ರಾಲಯದ ಶ್ರೀ ಸಿ ಕೃಷ್ಣಮೂರ್ತಿಯವರು ತಮ್ಮ ಸಹೋದರ ಶ್ರೀ ಸಿ ದಶರಥರಾಮ ಮೊದಲಿಯಾರ್‌ರವರ ಪ್ರಥಮ ಪುತ್ರಿ ಸೌ॥ ಪಾರ್ವತಿಯನ್ನು ಕುಂಡಲಹಳ್ಳಿಯ ಶ್ರೀ ರಂಗಸ್ವಾಮಿ ಮೊದಲಿಯಾರ್‌ರವರ ಪುತ್ರ ಶ್ರೀ ಆರ್ ವೆಂಕಟೇಶ್‌ರವರಿಗೆ ಕೊಟ್ಟು ವಿವಾಹವನ್ನು ಕಳೆದ ಬುಧವಾರವೂ, ದ್ವಿತೀಯ ಪುತ್ರಿ ಸೌ॥ ಶಾಂತಕುಮಾರಿಯನ್ನು ವಾಣಿಯಂಬಾಡಿಯ ಶ್ರೀ ಧನಕೋಟಿ ಮೊದಲಿಯಾರ್‌ರವರ ಪುತ್ರ ಶ್ರೀ ಡಿ ಬಾಲಸುಬ್ರಹ್ಮಣ್ಯಂರವರಿಗೆ ಕೊಟ್ಟು ವಿವಾಹವನ್ನು ನೆನ್ನೆಯೂ ರಾಜಧಾನಿಯಲ್ಲಿ ನೆರವೇರಿಸಿದರು

ಡಾ ಎಂ ಶಿವಲಿಂಗಯ್ಯನವರು ತಮ್ಮ ಕುಮಾರ ಶ್ರೀ ಎಸ್ ಕುಮಾರಸ್ವಾಮಿಗೆ ಕೃಷ್ಣರಾಜನಗರದ ಶ್ರೀ ಯಡಿಯೂರ ಶೆಟ್ಟರ ಮಗಳು ಸೌ॥ ಗೌರಮ್ಮನನ್ನು ತಂದುಕೊಂಡು ನೆನ್ನೆ ಕೃಷ್ಣರಾಜನಗರದಲ್ಲಿ ವಿವಾಹವನ್ನು ಜರುಗಿಸಿದರು

ನಿವೃತ್ತ ಶಾಲಾ ಉಪಾಧ್ಯಾಯರಾದ ಶ್ರೀ ವೈ ನಾಗಪ್ಪನವರು ತಮ್ಮ ಕುಮಾರ ಶ್ರೀ ಎನ್ ರಂಗನಾಥರಾವ್ ರಿಗೆ ಮೇಲ್ಕೋಟೆಯ ಶ್ರೀ ಎಂ ಎನ್ ರಾಮರಾಯರ ಪುತ್ರಿ ಸೌ॥ ಇಂದಿರಳನ್ನು ತಂದುಕೊಂಡು ಮೇಲ್ಕೋಟೆಯಲ್ಲಿ ನೆನ್ನೆ ವಿವಾಹವನ್ನು ನಡೆಸಿದರು

ಚಾಮರಾಜ ಜೋಡಿಹಳ್ಳಿ ಕುಂಬಾರಗೇರಿಯಲ್ಲಿರುವ ಶ್ರೀ ವಾಸಪ್ಪನವರು ತಮ್ಮ ಮಗ ಶ್ರೀ ನಾರಾಯಣನಿಗೆ ಚೆನ್ನಪಟ್ಟಣ ತಾಲ್ಲೂಕು ಆ[illegible]ಯ ವೆಂಕಟಶೆಟ್ಟರ ಪುತ್ರಿ ಸೌ॥ ಚಿಕ್ಕಮ್ಮಣ್ಣಿಯನ್ನು ತಂದುಕೊಂಡು ನಗರದಲ್ಲಿ ನೆನ್ನೆ ವಿವಾಹವನ್ನು ಜರುಗಿಸಿದರು

ಶ್ರೀ ಎಂ ಎಸ್ ಶ್ರೀನಿವಾಸರಾಯರು ತಮ್ಮ ಸಹೋದರಿ ಸೌ॥ ಕಮಲಳನ್ನು ಭದ್ರಾವತಿಯ ನಿವೃತ್ತ [illegible] ಶ್ರೀ ಇ ನಂಜುಂಡಯ್ಯನವರ ಮಕ್ಕಳು ಶ್ರೀ ಇ ಎನ್ ಕೃಷ್ಣಮೂರ್ತಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ರಾಜಧಾನಿ[illegible]ಯಲ್ಲಿ ನೆರವೇರಿಸಿದರು

ಮನೆ ಬಾಡಿಗೆಗೆ ಇದೆ

ಸಂಜನಗೂಡು ಟವರ್ ತಾಲ್ಲೂಕು ಆಫೀಸಿನ ಎದುರಿನಲ್ಲಿ ಕುಂಟಿಟಿಗರ ಸಂಘಕ್ಕೆ ಸೇರಿದ ಮಹಡಿ ಮನೆ—ದೊಡ್ಡ ಸಂಸಾರ, ಹೋಟೇಲು ಮತ್ತು ಬ್ಯಾಂಕ್ ಇಡಲು ಎಲ್ಲಾ ಸೌಕರ್ಯವುಳ್ಳ ವಿಶಾಲವಾದ ಮನೆ ಮೈಸೂರು ಸಿಟಿ ಇಲವ ಲದರ[illegible]ಯಲ್ಲಿರುವ ಸಂಘದ ಆಫೀಸಿನಲ್ಲಿ ವಿವರಗಳನ್ನು ತಿಳಿಯಬಹುದು

" ಬ್ರಹ್ಮ ಸೂತ್ರ ವೃತ್ತಿ

ರಾಜಧಾನಿಯ ಆಯುರ್ವೇದ ವಿದ್ವಾನ್ ಡಾ॥ ವೆಂಕಟರಾಮಸಾವಂಧಿಕರಿಂದ ಕನ್ನಡದಲ್ಲಿ ರಚಿಸಲ್ಪಟ್ಟು, ಅರಸೀಕೆರೆ ಫಾರ್ಮಸಿಯ ಶ್ರೀ ಕೆ ಪಿ ಪುರಾಣಿಕ್ ಅಂಡ್ ಸನ್ಸ್‌ರವರಿಂದ ಪ್ರಕಟಿಸಲ್ಪಟ್ಟಿರುವ ಬ್ರಹ್ಮಸೂತ್ರ ವೃತ್ತಿ ಎಂಬ ಸಕ್ಕೆಯ ಪ್ರತಿಯನ್ನು ಆದರದಿಂದ ಸ್ವೀಕರಿಸಿದ್ದೇವೆ ಬ್ರಹ್ಮ ಸೂತ್ರಗಳ ವಿವಿಧ ಭಾಗಗಳಾದ ಸಮನ್ವಯಾಧ್ಯಾಯ, ಅವಿರೋಧಾಧ್ಯಾಯ, ಸಾಧನಾಧ್ಯಾಯ ಮತ್ತು ಫಲಾಧ್ಯಾಯಗಳ ಸೂಕ್ಷ್ಮ ಪರಿಚಯವನ್ನು ಇದರಲ್ಲಿ ಸುಲಭವಾಗಿ ವಿವರಿಸಲಾಗಿದೆ ಬ್ರಹ್ಮಸೂತ್ರಾಧ್ಯಯನ ಮಾಡುವವರಿಗೆ ಇದು ಬಹಳ ಉಪಯುಕ್ತವಾಗಿದೆ ಇದರ ಬೆಲೆ ನಾಲ್ಕಾಣೆ ಮಾತ್ರ

ಉ ಪ ನ ಯ ನ

ಶ್ರೀ ರಾಮಪೇಟೆಯಲ್ಲಿರುವ ವಿಶ್ವ ಭವನದ ಮಾಲೀಕರಾದ ಶ್ರೀ ಎ ರಾಮಕೃಷ್ಣಭಟ್ಟರು ತಮ್ಮ ಸಹೋದರ ಶ್ರೀ ವಿಠ್ಠಲಭಟ್ಟರ ಕುಮಾರ ಚಿ॥ ಟಿ॥ ವಿ ಮುರಳೀಧರನಿಗೆ ನೆನ್ನೆ ಬ್ರಹ್ಮೋಪದೇಶವನ್ನು ನೆರವೇರಿಸಿದರು

ನೆಲ್ಲೂರಿನಲ್ಲಿ ಡಾ॥ ಮೋದಿಯವರ ಶಸ್ತ್ರ ಚಿಕಿತ್ಸಾ ಶಿಬಿರಾರಂಭ

ಡಾ॥ ಎಂ ಸಿ ಮೋದಿಯವರು ಆಂಧ್ರ ದೇಶದ ನೆಲ್ಲೂರಿನಲ್ಲಿ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಆರಂಭಿಸಿದ್ದಾರೆ ಆಂಧ್ರ, ಮದ್ರಾಸ್, ಮೈಸೂರು ಬೊಂಬಾಯಿ, ಹೈದರಾಬಾದು, ಒರಿಸ್ಸಾ ಮತ್ತು ತಿರುವಾಂಕೂರುಗಳಿಂದ ಸುಮಾರು ೨೦ ಸಾವಿರ ಜನರು ಚಿಕಿತ್ಸೆಗಾಗಿ ಬಂದಿರುವರು ೭೦೦ ಜನರಿಗೆ ಶಸ್ತ್ರ ಚಿಕಿತ್ಸೆ ಮಾಡಲಾಗುತ್ತದೆ ಸಕಲರಿಗೂ ಉಚಿತ ಕನ್ನಡಕ ಭೋಜನ ಮತ್ತು ವಸತಿ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ

ಅವನನ್ನು ನೋಡಿರಿ

ಅವನ ಮುಂಗೋಪ ಜಾಸ್ತಿಯಾಗುತ್ತಿದೆ ಅಥವಾ ಅವನ ನೆಂಟರಲ್ಲಿ ಶೀತವಾಗಿದೆ

★ ಅವನು ಹೆಂಗಸಿಯಿಂದ ಬಿಟ್ಟುಕೊಡುವವನು ಅಥವಾ [illegible] ಬಳಿಗೆ ಓಡುವನು

★ ಅವನು ವಿಗ್ರಹಾಂತನಾಗುವನು ಮತ್ತು [illegible]

★ ಅವನ ಉತ್ಸಾಹವು ಕುಂದಿ ಕಡಿಮೆಯಾಗು ಮತ್ತು ಅತಿ ಶೀಘ್ರವಾಗುವನು

★ ಅವನ [illegible]

★ ಅವನು ಕೆಮ್ಮುತ್ತ [illegible]

★ ಅವನ ಸುಟಿಗಳು [illegible]

★ ಅವನ ಮುಖವೇ ಅದು ಕಥೆಯನ್ನು ಹೇಳುವುದು

ಇದೇ ಆಸ್ತನು

ವಾದಾಟ ಮತ್ತು ಕಾತುರತೆಯ ಒಂದು ಚಿತ್ರ ಕಣ್ಣೀರಿನ ಅರ್ಥ ಅಳವಾದ ಚಿತ್ರ

ಆಸೆ ಮತ್ತು ಹರ್ಷತೆಗೆ ಬದಲಿಸುವುದು

ಕವಿರಾಜ ಪಂಡಿತ

ದು ರ್ಗಾ ದ ತ್ತ ಶರ್ಮ

ವೈದ್ಯ ವಾಚಸ್ಪತಿ ಜಗದ್ವಿಖ್ಯಾತ

ನ ವ ರ ತ್ನ ಕ ಲ್ಪ

ಕಂಡುಹಿಡಿದವರು

ವಜ್ರ, ವೈಢೂರ್ಯ ಮತ್ತು ಹವಳ ಇತ್ಯಾದಿ ಅಮೂಲ್ಯ ನವರತ್ನಗಳಿಂದ ತಯಾರಿಸುವುದು ಉಚಿತ ಸಾಹಿತ್ಯಕ್ಕೆ ಬರೆಯಿರಿ

NAVRATNA KALPA PHARMACY,

Jullundur City (India)

Telegram NAVRATNA

ಮೈಸೂರು ಪೇಟೆ ಧಾರಣೆ

	ರೂ	ಆಣೆ	ಪೈ	ರೂ	ಆ
ಕಡಲೆಕಾಯಿ	೧೯	೪	೦	೩	[illegible]
ಹೊಂಗೆಬೀಜ	೨೩	೮	೦	೨೭	[illegible]
ಹುಣಸೇಬೀಜ	೩	೨	೦	[illegible]	[illegible]
ಹುರುಳಿ	೨೭	೩	೦	೩೦	[illegible]
ಹಲಸಂದೆ	೩೩	೦	೦		
ಹುಣಸೇಹಣ್ಣು	೪	೬	೦	[illegible]	[illegible]
ಮೆಣಸಿನಕಾಯಿ	೯೦	೦೦	೦	೨೦	[illegible]
ತೆಂಗಿನಕಾಯಿ ೧೦೦೦	೧೩೩	೦	೦	೩೪	[illegible]

SREE GAYATRI TALKIES

From 6-5-56 For 2 h[illegible]

M G M's

Dr. JEKYLL & Mr. HYDE

With — Spencer Tracy Ingrid Bergman and Lana Turner

Morning Show On Sunday

SAADIA

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ಸಮಾನುಗಳು

ಗಡಿಯಾರಗಳು ಮತ್ತು ಕನ್ನಡಕಗಳ ರಿಪೇರಿ [illegible] ಅತ್ಯಂತ ಸುಲಭ ಬೆಲೆಗೆ ಮಾಡಲ್ಪಡುವುದು

ಕೆ ಎಸ್. ಲಕ್ಷ್ಮಣ ಅಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ ಮೈಸೂರು [Estd 1911]

ಬೇ ಕಾ ಗಿ ದ್ದಾ ರೆ

ಬಟ್ಟೆ ಹೊಲಿಗೆಯಲ್ಲಿ ನುರಿತ ಮಹಿಳೆಯರು ಕೆಲಸಕ್ಕೆ ಕೂಡಲೇ ಬೇಕಾಗಿದ್ದಾರೆ ವಿ[illegible]

ಶ್ರೀ ವೆಂಕಟೇಶ ಟೈಲರಿಂಗ್ ಹೌಸ್,

[illegible] ಚಾಮುಂಡೇಶ್ವರಿ ರೋಡ್, ಮೈಸೂರು

SREE GANESH TALKIES

From 5-[illegible]-56 Daily 3 Shows

For the first time on the screen

Flying Saucers in action!

To make the picture more attractive it will be filmed in wide angle

ಪ್ರಭುದೇವಾ ಥಿಯೇಟರ್

(ಪ ದ್ಮಾ ಟಾ ಕೀ ಸ್)

5-5-56ರಿಂದ : ಅನೋಖ 7ನೇ ವಾರ : ಪ್ರತಿ ದಿನ 3 ಆಟಗಳು

ಶ್ರೀ ರೇಣುಕಾ ಮಹಾತ್ಮೆ

(ಎಲ್ಲಮ್ಮನ ಕಥಾ)

ಮುಂದಿನ ಬದಲಾವಣೆ ★ ಸಿ. ಐ. ಡಿ. ಕನ್ನಡ ಚಿತ್ರ ★

ಹರಾಜು ನೋಟೀಸು

ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಅವುಗಳ ಎದುರಿಗೆ ನಮೂದಿಸಿರುವ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾರಾಟ ಮಾಡಲಾಗುತ್ತದೆ

1) ಸುಮಾರು 30 ಟನ್ ಮಿಶ್ರವಾದ ತೇಗದ ಮರ ಮತ್ತು ಇತರ ಮರದ ಹಲಗೆ ತುಂಡುಗಳನ್ನು 2) ಸುಮಾರು 30 ಟನ್ ಮಿಶ್ರವಾದ ಗರಗಸ ಮತ್ತು ಹತ್ತರಿ ಹೊಟ್ಟುಗಳನ್ನು	10-5-56ನೇ ಗುರುವಾರ ಬೆಳಿಗ್ಗೆ 10 ಘಂಟೆಗೆ ಮೈಸೂರು ಸೌತ್ ಸದರ್ನ್ ರೈಲ್ವೆ [illegible] ಆವರಣದಲ್ಲಿ
3) ಸುಮಾರು 6 ಟನ್ ಜಾತಾಯಿ ಮರದ [illegible] ಮತ್ತು ಹಲಗೆಗಳನ್ನು	10-5-56ನೇ ಗುರುವಾರ ಬೆಳಿಗ್ಗೆ 11 ಘಂಟೆಗೆ ಮೈಸೂರು ಸೌತ್ ಸದರ್ನ್ ರೈಲ್ವೆ [illegible] ಸ್ಟೋರ್ಸ್ ಆವರಣದಲ್ಲಿ

ಈ ಮಾರಾಟಕ್ಕೆ ಅನ್ವಯಿಸುವ ನಿಬಂಧನೆಗಳ ವಿವರಗಳನ್ನು ಕೆಳಗೆ ನಮೂದಿಸಿರುವ ಆಫೀಸಿನಲ್ಲಿ ಪಡೆಯಬಹುದು

ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋರ್ಸ್,
ಸದರ್ನ್ ರೈಲ್ವೆ, ಮೈಸೂರು ಸೌತ್

Registered No. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಾಚೀನವಾದ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕಳುಹಿಸಿ, ಪ್ರಯೋಜನ ಪಡೆಯಿರಿ.
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿ ೬ ಕಾಸು

ಸಂಪಾದಕರ
ಏಜೆಂಟರುಗಳ ಮೂಲಕ
ಕೊಳ್ಳುವವರಿಗೆ ತಿಂಗಳಿಗೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿ ೬ ಕಾಸು

ಸಂಪುಟ : ೮೪] SADHVI : SUNDAY 6-5-1956 ಮೈಸೂರು ಭಾನುವಾರ : ೬-೫-೧೯೫೬ [ಸಂಚಿಕೆ : ೨೫೨

ಟಿಬೆಟ್ಟಿನಲ್ಲಿ ೯೦೦ ಜನ ಚೀಣಾ ಸೈನಿಕರ ಕೊಲೆಯೇ?

ಟಿಬೆಟ್ಟಿನಲ್ಲಿ ೯೦೦ ಜನ ಚೀಣಾ ಸೈನಿಕರ ಸಂಹಾರ ?

ಈಶಾನ್ಯ ಜಿಲ್ಲೆಯಲ್ಲಿ ದಂಗೆ

ಈಶಾನ್ಯ ಟಿಬೆಟ್ಟಿನ ಗೊಲೊಕ್ ಜಿಲ್ಲೆಯಲ್ಲಿ ಇತ್ತೀಚೆಗೆ ದಂಗೆ ನಡೆದು, ೯೦೦ ಜನ ಚೀಣಾ ಸೈನಿಕರನ್ನು ಸಂಹಾರ ಮಾಡಲಾಗಿರುವುದೆಂದು ವರದಿಯಾಗಿದೆ. ನೇಪಾಳದ ಅರಸರ ಕಿರೀಟಧಾರಣೆಗಾಗಿ ಖಟ್ಮಂಡುವಿಗೆ ಆಗಮಿಸಿದ್ದ ವಿದೇಶಿ ಸುದ್ದಿಗಾರರು ಈ ವಿಷಯವನ್ನು ಪ್ರಕಟಿಸಿದರೆಂದು ಹೇಳಲಾಗಿದೆ. ಚೀಣಾ ವಲಯಗಳು ಈ ಸುದ್ದಿಯು ಕೃತಕವಾದುದೆಂದು ಅಲ್ಲಗಳೆದಿವೆ.

ಟಿಬೆಟ್ಟಿನಲ್ಲಿರುವ ಸುಧಾರಣಾ ವಿರೋಧಿ ಗುಂಪಿನವರು ಎರಡು ತಿಂಗಳ ಹಿಂದೆ ಚೀಣಾದ ವಿರುದ್ಧವಾಗಿ ಚಳುವಳಿಯನ್ನು ಆರಂಭಿಸಿದುದಾಗಿಯೂ, ಗೊಲೊಕ್ ಜನರ ಮುಖಂಡ ಜನರಲ್ ಮೊಫಾಂಗ್‌ರವರು ಚೀಣದ ಪಡೆಗಳ ಮೇಲೆ ದಾಳಿ ಮಾಡಿ, ಅವರನ್ನು ಸಂಹರಿಸಿದರೆಂದೂ, ಆ ಬಳಿಕ ಚೀಣಾ ಸೈನ್ಯಗಳು ಬರಲಾಗಿ, ಅವರು ಮಂಗೋಲಿಯಕ್ಕೆ ಪರಾರಿಯಾದರೆಂದೂ ಹೇಳಲಾಗಿದೆ : ಟಿಬೆಟ್ಟಿನಿಂದ ಚೀಣಾ ಸೈನಿಕರನ್ನು ವಾಪಸು ಕರೆಸುವಂತೆ ಅಧ್ಯಕ್ಷ ಮಾವೋತ್ಸೆಟುಂಗ್‌ರವರಿಗೆ ಒತ್ತಾಯಪಡಿಸಲು ದಲೈ ಲಾಮಾರ ಬಳಿ ಒಂದು ನಿಯೋಗವೂ ಹೋಗಿತ್ತೆಂದು ಹೇಳಲಾಗಿದೆ. ಚೀಣರು ಟಿಬೆಟ್ಟಿನಲ್ಲಿ ಕೆಲವು ಆಲಯಗಳನ್ನು ವಹಿಸಿಕೊಳ್ಳಬಾರದೆಂದು ನಿಯೋಗದವರು ಅಭಿಪ್ರಾಯಪಟ್ಟುದಾಗಿಯೂ ತಿಳಿದುಬಂದಿದೆ.

ಮದ್ರಾಸಿನಲ್ಲಿ ಉಪಾಧ್ಯಾಯರ ಮಕ್ಕಳಿಗೆ ವಿದ್ಯಾಶುಲ್ಕವಿಲ್ಲ

ಈ ವರ್ಷದಿಂದ 'ಮದ್ರಾಸಿನ ಮಾಧ್ಯಮಿಕ ಶಾಲೆಗಳ ಆರನೇ ಫಾರಮ್ಮಿನಿಂದ ೮ರ ವರೆಗೆ ಎಲ್ಲಾ ತರಗತಿಗಳಲ್ಲೂ ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳ ಮಕ್ಕಳಿಗೆ ಇದುವರೆಗೆ ಇದ್ದ ಅರ್ಧ ವಿದ್ಯಾಶುಲ್ಕದ' ವಿನಾಯಿತಿಯನ್ನು 'ಕೊಟ್ಟು ವಿಸ್ತರಿಸ' ಪೊಲೀಸ್ ಕಾನ್ಸ್‌ಟೇಬಲ್ಲುಗಳು ಮತ್ತು ಕಡೇ ದರ್ಜೆಯ ಸರ್ಕಾರಿ ನೌಕರರ ಮಕ್ಕಳಿಗೂ ಈ ವಿನಾಯಿತಿಯು ಅನ್ವಯಿಸುವುದು.

ಬಿಸಿಲು ತಾಪದಿಂದ ಹಲ್ವರ ಮರಣ

ನಾಗಪುರದಲ್ಲಿ ಹೊತ್ತ ಅತ್ಯುಷ್ಣತೆಯೇ ಕಳೆದ ಕೆಲವು ದಿನಗಳನ್ನು ವಿರಿಸಿದೂ, ಬಿಸಿಲಿನ ತಾಪವನ್ನು ತಾಳಲಾರದೆ ೮ ಜನರು ಮೃತಪಟ್ಟಿರೆಂದೂ ವರದಿಯಾಗಿದೆ. ಅಲ್ಲಿ ಉಷ್ಣಾಂಶವು ೧೧೭ ಡಿಗ್ರಿಯಿಂದ ಏಳಾವಿ ೧೧೨ ಡಿಗ್ರಿಗೆ ಹತ್ತಿದೆ.

ತಿರುಪತಿ ದೇವಾಲಯದ ಗೋಲಕದಲ್ಲಿ ಕಳುವಿನ ನೋಟು

ತಿರುಮಲೆಯ ಶ್ರೀ ವೇಂಕಟೇಶ್ವರ ಗುಡಿಯಲ್ಲಿಡಲಾಗಿರುವ ಗೋಲಕದಲ್ಲಿ, ಗುಂಟೂರಿನಲ್ಲಿ ಕಳುವಾಯಿತೆಂದು ಹೇಳಲಾದ ನೋಟುಗಳಲ್ಲಿ ೧೦೦ ರೂಪಾಯಿ ನೋಟೊಂದು ಇದ್ದುದು ಪತ್ತೆಯಾಗಿದೆ.

ಶಾಂತಿಸಾಗರದಲ್ಲಿ-ಪುನಃ ಅಮೆರಿಕದ ಅಣುಬಾಂಬು ಸಿಡಿತ

ಶಾಂತಿ ಸಾಗರದ ಎನಿವಿಟೊಕ್ ದ್ವೀಪಗಳಲ್ಲಿ ಅಮೇರಿಕವು ಪುನಃ ನಡೆಸಲಿರುವ ಅಣು ಸಿಡಿತಗಳ ಪ್ರಯೋಗದ ಅಂಗವಾಗಿ ಈ ಬಾರಿಯ ಮೊದಲನೆ ಅಣು ಬಾಂಬಿನ ಪರೀಕ್ಷೆಯನ್ನು ನಡೆಸಿ, ಕಳೆದ ಶನಿವಾರ ಸಣ್ಣ ಆಕಾರದ ಅಸ್ತ್ರವನ್ನು ಸ್ಫೋಟಿಸಲಾಯಿತು. ಈ ಪ್ರಯೋಗಗಳಲ್ಲಿ ಜಲಜನಕದ ಅಸ್ತ್ರದ ಸಿಡಿತವೂ ಸೇರಿರುವುದಾಗಿ ಹೇಳಲಾಗಿದೆ. ಶನಿವಾರ ನಡೆದ ಸಿಡಿತವು ಹಳದಿ ಬಣ್ಣದ ಬೆಂಕಿಯ ಉಂಡೆಯಾಗಿ ಕಾಣಿಸಿತು. ಅದರಿಂದ ಉಂಟಾದ ಮೋಡವು ೧ ಮೈಲಿ ಎತ್ತರಕ್ಕೆ ಪ್ರಸರಿಸಿತ್ತು.

ಪೂರ್ವ ಪಾಕಿಸ್ತಾನದ ಹಿಂದೂಗಳ ವಲಸೆ ನಾಟಕತೆ

ಪೂರ್ವ ಪಾಕಿಸ್ತಾನದಿಂದ ಅಲ್ಪಸಂಖ್ಯಾತರು ಭಾರತಕ್ಕೆ ವಲಸೆ ಬರುತ್ತಿರುವುದರ ಕಾರಣಗಳನ್ನು ವಿವರವಾಗಿ ತಿಳಿದುಕೊಳ್ಳಲೂ ಮತ್ತು ಈ ಬಗ್ಗೆ ಸೂಕ್ತ ಪರಿಹಾರ ಕಂಡು ಹಿಡಿಯಲೂ ನೆನ್ನೆ ಢಾಕಾದಲ್ಲಿ ಮಂತ್ರಿಗಳ ದರ್ಜೆಯಲ್ಲಿ ಭಾರತ-ಪಾಕಿಸ್ತಾನಗಳ ನಡುವೆ ಮಾತುಕತೆಗಳು ಆರಂಭವಾದುವು. ಮುಸ್ಲಿಮೇತರರು ಭಾರತಕ್ಕೆ ಬರದೇ ಇರಲು ಹಲವಾರು ಪರಿಹಾರ ಮಾರ್ಗಗಳನ್ನು ಭಾರತದ ಪ್ರತಿನಿಧಿಗಳು ಸೂಚಿಸಿದರೆಂದು ಹೇಳಲಾಗಿದೆ. ವಲಸೆ ಬರಲು ಭಾರತವು ಕೊಡುತ್ತಿರುವ ರಹದಾರಿ ವಿಷಯವನ್ನು ಪಾಕಿಸ್ತಾನವು ಪ್ರಸ್ತಾಪಿಸಿದುದಾಗಿ ಹೇಳಲಾಗಿದೆ. ಇಂತಹ ರಹದಾರಿಯು ದೊರಕಿದರೆ ವಲಸೆಯು ಹೆಚ್ಚಾಗಲು ಅವಕಾಶವಾಗುವುದೆಂಬುದು ಪಾಕಿಸ್ತಾನದ ಅಭಿಮತವಾಗಿದೆ.

ಆರು ವರ್ಷದ ಬಾಲಕನಿಂದ ಗೀತೋಪನ್ಯಾಸ

ರಾಜಮಹೇಂದ್ರಿಯಲ್ಲಿ ವಿಶ್ವನಾಥ ಗಾಂಧಿ ಎಂಬ ಆರು ವರ್ಷದ ಬಾಲಕನು ಬಹಿರಂಗ ಸಭೆಯಲ್ಲಿ ಭಗವದ್ಗೀತೆಯನ್ನು ಪಠಿಸಿ, ಅದರ ಬಗ್ಗೆ ಉಪನ್ಯಾಸ ಮಾಡಿದನೆಂದು ವರದಿಯಾಗಿದೆ. ಆತನು ವಿಶಾಖಪಟ್ಟಣದವನು. ಆತನ ಅಜ್ಜ ಲಕ್ಷ್ಮೀಪತಿ ಶಾಸ್ತ್ರಿ ಎಂಬುವರು ಬಾಲಕನಿಗೆ ಗೀತೆಯನ್ನು ಹೇಳಿಕೊಟ್ಟರು. ಅವನು ಟೌನ್ ಹಾಲಿನಲ್ಲಿ ತನ್ನ ಪ್ರತಿಭೆಯನ್ನು ಲೋಕಸಭಾಧ್ಯಕ್ಷ ಅನಂತಶಯನಂ ಅಯ್ಯಂಗಾರ್ ಮತ್ತು ಹೈದರಾಬಾದಿನ ಮುಖ್ಯಮಂತ್ರಿ ಬಿ. ರಾಮಕೃಷ್ಣರಾಯರ ಸಮ್ಮುಖದಲ್ಲಿ ಪ್ರದರ್ಶಿಸಿದನೆಂದು ಹೇಳಲಾಗಿದೆ.

ಮುಖ್ಯೋಪಾಧ್ಯಾಯರ ಪ್ರಾದೇಶಿಕ ಗೋಷ್ಠಿಯ ಆರಂಭೋತ್ಸವ

ಮಾಧ್ಯಮಿಕ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅಖಿಲ ಭಾರತ ಮಂಡಲಿಯವರು ವ್ಯವಸ್ಥೆ ಮಾಡಿರುವ ಪ್ರಾದೇಶಿಕ ಮುಖ್ಯೋಪಾಧ್ಯಾಯರು ಮತ್ತು ವಿದ್ಯಾ ಇಲಾಖಾಧಿಕಾರಿಗಳ ಗೋಷ್ಠಿಯ ಆರಂಭೋತ್ಸವವನ್ನು ನಾಳೆ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜು ಹಾಲಿನಲ್ಲಿ ವೈಸ್ ಛಾನ್ಸೆಲರ್ ಶ್ರೀ ಬಿ. ಎಲ್. ಮಂಜುನಾಥರವರು ನೆರವೇರಿಸುವರು.

ಮುಂಬಯಿನಲ್ಲಿ ಸಂಸ್ಥಾನ ಪುನರ್ವಿಂಗಡಣೆ ಮಸೂದೆ ಪರಿಶೀಲನೆ

ಲೋಕಸಭೆಯ ಪ್ರಸ್ತುತ ಅಧಿವೇಶನವು ಈ ತಿಂಗಳು ೮ನೆಯ ತಾರೀಖಿಗೆ ಮುಕ್ತಾಯವಾಗಿ ಮುಂದಿನ ವಿಸರ್ಜಿಸುವುದೆಂದೂ, ಅಷ್ಟರಲ್ಲಿ ಸಂಸ್ಥಾನ ಪುನರ್ವಿಂಗಡಣಾ ಮಸೂದೆಯನ್ನು ಅಂಗೀಕರಿಸಲು ಸಾಧ್ಯವಾಗುವುದಿಲ್ಲವೆಂದೂ ವರದಿಯಾಗಿದೆ. ಜುಲೈ ತಿಂಗಳಲ್ಲಿ ಹೊಸ ಅಧಿವೇಶನವನ್ನು ಕರೆದು ಅದರಲ್ಲಿ ಮಸೂದೆಯನ್ನು ಪರಿಶೀಲಿಸಲಾಗುವುದು. ಆದರೆ ಹೊಸ ಸಂಸ್ಥಾನಗಳು ಅಕ್ಟೋಬರ್ ೧ನೇ ತಾರೀಖಿಗೆ ಸ್ಥಾಪಿಸಲ್ಪಡುವುದಕ್ಕೆ ಇದು ಅಡ್ಡಿಯಾಗದೆಂದು ಹೇಳಲಾಗಿದೆ.

ಬ್ರಹ್ಮಪುತ್ರಾ ನದಿಯಲ್ಲಿ ಪ್ರವಾಹ

ಅಸ್ಸಾಮಿನ ನಾನಾ ಭಾಗಗಳಲ್ಲಿ ೩ ದಿನಗಳು ಮಳೆಯು ಧಾರಾಕಾರವಾಗಿ ಸುರಿದ ಪರಿಣಾಮವಾಗಿ ಬ್ರಹ್ಮಪುತ್ರ ಮತ್ತು ಇತರ ನದಿಗಳಲ್ಲಿ ಪ್ರವಾಹವುಂಟಾಗಿದೆ. ತೇಜಪುರ-ರಂಗೀಯಾ, ಮತ್ತು ಅಮಿನ್‌ಗಾವ್-ದುಬ್ರಿಗಳ ನಡುವೆ ರೈಲು ಸಂಚಾರವನ್ನು ನಿಲ್ಲಿಸಲಾಗಿದೆ. ಬೇರೆ ಕಡೆ ರಸ್ತೆ ಸಂಚಾರಕ್ಕೂ ಅಡಚಣೆಯಾಗಿದೆ. ಕಲ್ಕತ್ತಾ-ಗೌಹಾತಿ ವಿಮಾನ ಸಂಚಾರಕ್ಕೆ ಅಡ್ಡಿ ಬಂದಿದೆ.

ಅವಾಮಿ ಲೀಗ್ ಮುಖಂಡರ ಉಪವಾಸ

ಪೂರ್ವ ಪಾಕಿಸ್ತಾನದ ಅವಾಮಿ ಲೀಗ್ ಪಕ್ಷದ ಮುಖಂಡರಾದ ಮೌಲಾನಾ ಭಾಷಾನಿಯವರು ಕಳೆದ ೨ನೇ ತಾರೀಖಿನಿಂದ ತಮ್ಮ ಹಳ್ಳಿಯಲ್ಲಿ ಉಪವಾಸವನ್ನು ಕೈಗೊಂಡಿದ್ದಾರೆ. ಅವರ ಸ್ಥಿತಿಯು ಕೆಡುತ್ತಿರುವುದೆಂದು ಹೇಳಲಾಗಿದೆ. ಆ ಪ್ರದೇಶದಲ್ಲಿರುವ ತೀವ್ರ ಆಹಾರ ಪರಿಸ್ಥಿತಿ ಬಗ್ಗೆ ನೊಂದು ಅವರು ಉಪವಾಸ ನಡೆಸುತ್ತಿರುವರು. ಅವರಿಗೆ ಈಗ ೭೪ ವರ್ಷ ವಯಸ್ಸು, ಮಿತ್ರ ರಾಷ್ಟ್ರಗಳು ನೋವು ಅವರ ನೆರವಿಗೆ ಬರಬೇಕೆಂದು ಅವರು ಕೋರಿದ್ದಾರೆ.

ಮೋಸದ ಲಾಟರಿಗಾಗಿ ನಾಲ್ವರ ವಿಚಾರಣೆ

ಲಾಟರಿ ಮೂಲಕ ಜನರಿಗೆ ಸುಮಾರು ೩೨,೦೦೦ ರೂ. ನಷ್ಟ ಮೋಸ ಮಾಡಿದರೆಂದು ಹೈದರಾಬಾದಿನ ಕೋರ್ಟಿನಲ್ಲಿ ಬೆಂಗಳೂರಿನ ಹೆಚ್. ಪಿ. ಪ್ರಭು, ಬರೋಡದ ಎಂ. ಹೊನ್ನಯ್ಯ ಮತ್ತು ಶಾಗನದಾಸ್ ಮತ್ತು ನಾಗಪುರದ ರಾಮಚಂದ್ರ ಎಂಬುವರ ಮೇಲೆ ಮೊಕದ್ದಮೆಯನ್ನು ಹೂಡಲಾಗಿದೆ. ಆಪಾದಿತರು 'ನವಜ್ಯೋತಿ ಹಂಚಿಕೆ ಕಂಪೆನಿ ಎಂಬುದನ್ನು ಸ್ಥಾಪಿಸಿ ಲಾಟರಿ ಬಹುಮಾನಗಳನ್ನು ಪ್ರಕಟಿಸುತ್ತಿದ್ದರು. ರೂಪಾಯಿಗೆ ೧ ರಂತೆ ಟಿಕೆಟ್ಟನ್ನು ಮಾರಲಾಗುತ್ತಿತ್ತೆಂದೂ ವರದಿಯಾಗಿದೆ. ಬೆಂಗಳೂರು, ಮೈಸೂರು, ಆಗ್ರಾ, ತಿರುಚಿ ಮತ್ತು ಇತರ ಕಡೆಗಳವರ ಹೆಸರುಗಳನ್ನು ಗೆದ್ದವರೆಂದು ಪ್ರಕಟಿಸಲಾಗಿತ್ತು. ಈ ಬಗ್ಗೆ ತನಿಖೆಯನ್ನು ಆರಂಭಿಸಿದಾಗ ಕಂಪೆನಿಯನ್ನು ಮುಚ್ಚಲಾಯಿತು.

ವಿಧಾನ ಸೌಧದ ಶೃಂಗಾರ

ಬೆಂಗಳೂರು, ೫

ಸಂಸ್ಥಾನದ ಶಾಸನಸಭೆಗಳ ಭವನವೆಂದು ನಿರ್ಮಿತವಾಗುತ್ತಲಿರುವ ವಿಧಾನಸೌಧ ಕಟ್ಟಡದ ಕೆಲಸವು ಪೂರ್ಣವಾಗುತ್ತಿದೆ. ಈಗ ಭವನವನ್ನು ಶೃಂಗರಿಸುವ ಕೆಲಸವನ್ನು ಕೈಗೊಳ್ಳಲಾಗಿದೆ. ಅದಕ್ಕಾಗಿ ಪ್ರತ್ಯೇಕ ಸಮಿತಿಯನ್ನು ನಿರ್ಮಿಸಿದೆ. ಮೈಸೂರು ಟೆಕ್ನಿಕಲ್ ಇನ್ಸ್‌ಟಿಟ್ಯೂಟಿನ ಸೂಪರಿಂಟೆಂಡೆಂಟರಾದ ಶ್ರೀ ಕೆ. ವಿಜಯರಂಗರವರನ್ನು ಅದರ ಮೇಲ್ವಿಚಾರಣೆಗೆ ನೇಮಿಸಲಾಗಿದೆ. ಸಮಿತಿಯಲ್ಲಿ ಪ್ರವೀಣ ಕಲಾವಿದರು ಇರುವರು.

ಭವನದ ಗೋಡೆಗಳ ಮೇಲೆ, ಬಣ್ಣ ಚಿತ್ರಗಳನ್ನು ಅಳವಡಿಸಲಾಗುವುದು. ಬರೋಡೆಯ ಕಲಾವಿದ ಪಿ. ಪಿ. ರಾಯರು ತಮ್ಮ ಚಿತ್ರಗಳನ್ನು ಕಳುಹಿಸಿರುತ್ತಾರೆ. ಅವರು ಕಳುಹಿಸಿರುವ ೮೦ ಚಿತ್ರಗಳಲ್ಲಿ ಅನೇಕವು ಪ್ರಕೃತಿ ಸೌಂದರ್ಯವನ್ನೊಳಗೊಂಡಿವೆ. ಸೌಧದ ಔತಣ ಸಮಾರಂಭದ ಭವನವು ಬೃಂದಾವನ, ಚಾಮುಂಡಿ ಬೆಟ್ಟದ ಬಸವ, ಶೃಂಗೇರಿಯ ಸ್ನಾನ ಘಟ್ಟ ಮತ್ತು ಚಾಮುಂಡಿಬೆಟ್ಟದ ದೃಶ್ಯಗಳಿಂದ ಅಲಂಕೃತವಾಗುವುದು. ಮುಖ್ಯ ಮಂತ್ರಿಯವರ ಕೊಠಡಿಯಲ್ಲಿ ಜೋಗ್ ಜಲಪಾತದ ದೃಶ್ಯವನ್ನು ಅಳವಡಿಸಲಾಗುವುದು. ವಿಧಾನ ಸಭಾ ಮಂದಿರದ ಪ್ರವೇಶ ದ್ವಾರದ ಉಭಯ ಪಾರ್ಶ್ವಗಳಲ್ಲಿ ಮೋಂಬತ್ತಿ ಹಿಡಿದಿರುವ ೬ ಅಡಿ ಎತ್ತರದ "ದೀಪದ ಮಲ್ಲಿ" ಎಂಬ ಹೆಸರಿನ ಸ್ತ್ರೀ ವಿಗ್ರಹಗಳನ್ನು ನಿಲ್ಲಿಸಲಾಗುವುದು. ಮುಂಭಾಗದ ಪೋರ್ಟಿಕೋವಿನಲ್ಲಿ ೩೦ ಅಡಿ ವ್ಯಾಸದ ಪ್ಲಾಸ್ಟಿಕ್ಕಿನ ಸೂರ್ಯಕಾಂತಿ ಹೂವನ್ನು ಇಡಲಾಗುವುದು. ರಾತ್ರಿ ಹೊತ್ತು ಅದು ಬೆಳಗುವಂತೆ ಮಾಡಲಾಗುವುದು.

ಹುಚ್ಚನಿಂದ ಸಿಂಹಗಳ ವಿಮೋಚನೆಯ ದುರಂತ

ಜುನಾಘಡದ ಮೃಗಾಲಯದಲ್ಲಿದ್ದ ಒಂದು ಗಂಡು ಮತ್ತು ಒಂದು ಹೆಣ್ಣು ಸಿಂಹವನ್ನು ಒಬ್ಬ ಹುಚ್ಚನು ಪಂಜರದಿಂದ ನೆನ್ನೆ ಹೊರಕ್ಕೆ ಬಿಟ್ಟನೆಂದೂ, ಅವು ಕೂಡಲೇ ಹುಚ್ಚನನ್ನೂ, ಮೃಗಾಲಯದ ಪಾಲಕನನ್ನೂ ಕೊಂದುಹಾಕಿದುವೆಂದೂ ವರದಿಯಾಗಿದೆ. ಹೆಣ್ಣು ಸಿಂಹವನ್ನು ಗುಂಡಿನಿಂದ ಹೊಡೆದು ಕೊಲ್ಲಲಾಯಿತು. ಆದರೆ ಗಂಡು ಸಿಂಹವು ಒಂದು ಮರಿಯೊಡನೆ ಕಾಡಿಗೆ ಪರಾರಿಯಾಯಿತು. ಇತರ ಮೂರು ಮರಿಗಳನ್ನು ಪಂಜರದೊಳಗೆ ಸೇರಿಸಲಾಯಿತು. ಓಡಿಹೋದ ಸಿಂಹವನ್ನು ಶಿಕಾರಿ ಮಾಡಲಾಗುತ್ತಿದೆ. ಹುಚ್ಚನು ಆಗಾಗ್ಗೆ ಮೃಗಾಲಯಕ್ಕೆ ಬರುತ್ತಿದ್ದನೆಂದೂ, ನೆನ್ನೆ ಅವನು ಹಠಾತ್ತನೆ ಪಂಜರದ ಬೀಗವನ್ನು ಒಡೆದು ಬಾಗಿಲನ್ನು ತೆರೆದನೆಂದು ಹೇಳಲಾಗಿದೆ.

ಮೈಸೂರು ಪೌರಸಭಾ ಎಲ್ಲೆಯೊಳಗೆ ಸಂಚರಿಸುವ ಎಲ್ಲಾ ಸ್ಟೇಜ್ ಕ್ಯಾರಿಯರ್‌ಗಳ ದರವನ್ನು ಸರ್ಕಾರದವರು ನಿಗದಿ ಮಾಡಿ, ಪ್ರಥಮ ಮೈಲಿಗೆ ೧ ಆಣೆ, ಎರಡನೆಯದಕ್ಕೆ ೯ ಕಾಸು ಮತ್ತು ಹೆಚ್ಚಿನ ಮೈಲಿಗೆ ೬ ಕಾಸಿನಂತೆ ಗೊತ್ತುಪಡಿಸಿರುತ್ತಾರೆ. ದರದ ಕನಿಷ್ಠಾಂಶವನ್ನು ೧ ಆಣೆಯೆಂದು ಗೊತ್ತುಮಾಡಲಾಗಿದೆ.

ವಾರ ಭವಿಷ್ಯ

ತಾ॥ ೬-೫-೫೬ರಿಂದ ೧೨-೫-೫೬ರ ವರೆಗೆ

ಮೇಷ —ಈ ವಾರ ಉತ್ತಮ ಫಲ ಸಂತೋಷ ಸಮಾರಂಭ ಧನಲಾಭ ಆರ್ಥಿಕ ಸ್ಥಿತಿ ತೃಪ್ತಿಕರ ನೌಕರರಿಗೆ ಪ್ರಶಂಸೆ ವ್ಯಾಪಾರಸ್ಥರಿಗೆ ಸಾಮಾನ್ಯ ಫಲ ಪ್ರವಾಸ ಯೋಗ.

ವೃಷಭ :—ಮನಶ್ಶಾಂತಿ ಕಡಿಮೆ ಆರ್ಥಿಕ ಸಮಸ್ಯೆ ಕಡಿಮೆ. ಕುಟುಂಬದಲ್ಲಿ ವೈಮನಸ್ಯ ವ್ಯಾಪಾರದಲ್ಲಿ ಹೆಚ್ಚು ಪ್ರಗತಿ ಇರದು ಪ್ರಯಾಣ, ಉದ್ಯೋಗ, ನೌಕರಿಗಳಲ್ಲಿ ಅಡಚಣೆ ಹೊಸ ಉದ್ಯಮ ಸದ್ಯಕ್ಕೆ ಬೇಡ

ಮಿಥುನ —ಆರೋಗ್ಯ ಉತ್ತಮ ವಿವಾಹ ಯೋಗ ಧನಲಾಭ ಸ್ತ್ರೀಯರ ಸಹಕಾರ ಸಂತೋಷ ಸಮಾರಂಭ ನೌಕರರಿಗೆ ಪ್ರಗತಿ ವ್ಯಾಪಾರಿಗಳಿಗೆ ಸಾಮಾನ್ಯ ಫಲ ಅನಿರೀಕ್ಷಿತ ಧನ ವ್ಯಯ

ಕರ್ಕ — ಆರ್ಥಿಕ ಕ್ಷೇತ್ರದಲ್ಲಿ ಉತ್ತಮ ಫಲ ಸಮಾಜದಲ್ಲಿ ಹೆಚ್ಚು ಸ್ಥಾನಮಾನ ಶುಭ ಕಾರ್ಯಕ್ಕೆ ಧನವ್ಯಯ ನೌಕರರಿಗೆ ಪ್ರಶಂಸೆ ಹೊಸ ಉದ್ಯಮ ಬೇಡ

ಸಿಂಹ :— ಪರಿಸ್ಥಿತಿ ಉತ್ತಮಗೊಳ್ಳುವುದು ಆದಾಯ ಹೆಚ್ಚಲಿದೆ ಉತ್ತಮ ಸ್ಥಾನಮಾನ ಸ್ತ್ರೀಯರ ಸಹಕಾರ ವ್ಯಾಪಾರ ಲಾಭದಾಯಕ ನೌಕರಿಯಲ್ಲಿ ಉತ್ತೇಜನ

ಕನ್ಯಾ — ಹೆಚ್ಚು ಪ್ರಗತಿ ಇಲ್ಲ ಭಾವನೆಗಳು ಕಾರ್ಯಗತವಾಗುವುದು ಕಷ್ಟ ನೌಕರರ ಪ್ರಗತಿಗೆ ಅಡ್ಡಿ ಸ್ನೇಹಿತರ ವಿಚಿತ್ರ ವರ್ತನೆ

ತುಲಾ —ಆರೋಗ್ಯದ ಕಡೆ ಗಮನವಿರಲಿ. ಆರ್ಥಿಕ ಸ್ಥಿತಿ ಉತ್ತಮ ಶುಭ ಕಾರ್ಯ ಪ್ರವಾಸ ಫಲಪ್ರದ ವ್ಯಾಪಾರದಲ್ಲಿ ಅಭಿವೃದ್ಧಿ ನೌಕರಿಯಲ್ಲಿ ಉತ್ತೇಜನ.

ವೃಶ್ಚಿಕ —ಮನಶ್ಶಾಂತಿ ಇಲ್ಲ ವ್ಯಾಪಾರದಲ್ಲಿ ಪ್ರಗತಿ ಇರದು ನೌಕರರಿಗೆ ಉತ್ತಮ ಆರ್ಥಿಕ ಸಮಸ್ಯೆಗಳು ಹೆಚ್ಚು ಇರುವುದಿಲ್ಲ

ಧನು —ಉತ್ತಮ ಫಲ ಕುಟುಂಬದಲ್ಲಿ ಹಿತಕರ ಸ್ಥಿತಿ ಆರ್ಥಿಕ ಪರಿಸ್ಥಿತಿ ಲಾಭದಾಯಕ ಸಂತೋಷ ಸಮಾರಂಭ ನೌಕರರಿಗೆ ಪ್ರಗತಿ ವ್ಯಾಪಾರ ಸ್ಥಿತಿಗೆ ಅನುಕೂಲ

ಮಕರ :—ಕಾರ್ಯ ಜಯವಿಲ್ಲ ಹಿತಶತ್ರುಗಳ ಕಾಟ ಕುಟುಂಬದಲ್ಲಿ ಅಶಾಂತಿ, ಆರ್ಥಿಕ ಪ್ರಗತಿ ಇರದು ನೌಕರರಿಗೆ ಸಮಸ್ಯೆ ಪ್ರಗತಿಗೆ ಅಡಚಣೆ ಹೊಸ ಉದ್ಯಮ ಬೇಡ

ಕುಂಭ —ಆರೋಗ್ಯ ಉತ್ತಮ ಅಧಿಕ ಧನ ಲಾಭ ವಿದ್ಯಾಪ್ರಗತಿ ವಿವಾಹ ಯೋಗ ಕಲಾವಿದರಿಗೆ ಸನ್ಮಾನ ವ್ಯಾಪಾರದಲ್ಲಿ ಅಭಿವೃದ್ಧಿ ನೌಕರರಿಗೆ ಪ್ರಗತಿ ಕಡಿಮೆ

ಮೀನ —ಆರೋಗ್ಯ ಉತ್ತಮ ಅಧಿಕ ಲಾಭ ನೂತನ ವಸ್ತು ವಿಕ್ರಯ ನೌಕರರಿಗೆ ಉತ್ತೇಜನ ವ್ಯಾಪಾರಸ್ಥರಿಗೆ ಸಾಮಾನ್ಯ ಜಾಗರೂಕತೆ ಬೇಕು

ಖಾನ್ ಸಾಹೇಬರ ಪಕ್ಷಕ್ಕೆ ಪಾಕಿಸ್ತಾನದ ಪ್ರಧಾನಿ ?

ಪಶ್ಚಿಮ ಪಾಕಿಸ್ತಾನದ ಮುಖ್ಯ ಮಂತ್ರಿ ಡಾ॥ ಖಾನ್‌ಸಾಹೇಬರು ರಿಪಬ್ಲಿಕ್ ಪಾರ್ಟಿ ಎಂಬ ಪಕ್ಷವನ್ನು ಸ್ಥಾಪಿಸಿರುತ್ತಾರೆ ಅದಕ್ಕೆ ಮುಸ್ಲಿಂ ಲೀಗಿನ ಅನೇಕರು ಸೇರಿರುವರು ಪಕ್ಷಕ್ಕೆ ಪಾಕಿಸ್ತಾನದ ಪ್ರಧಾನಿ ಚೌಧುರಿ ಮಹಮದ್ ಅಲಿಯವರೂ ಸಹ ಸೇರಬಹುದೆಂದು ಪಾಕಿಸ್ತಾನದ ಕೈಗಾರಿಕೆ ಮಂತ್ರಿ ಖಾಜ ಫಜಲುಲ್ಲಾರವರು ತಿಳಿಸಿರುತ್ತಾರೆ ಬಹಾವಲ್ಪುರದಲ್ಲಿ ಅನೇಕ ಲೀಗ್ ಸದಸ್ಯರು ಹೊಸ ಪಕ್ಷಕ್ಕೆ ಸೇರಿರುವರು

ಬೆಂಗಳೂರು ರೇಡಿಯೋ ಸಂಗೀತ ಕಾರ್ಯಕ್ರಮ

[illegible] ೬-೩೦ ಗಾನವಿಹಾರ ೭-೩೦ [illegible] ಸಂಗೀತ ಮಧ್ಯಾಹ್ನ ೧೨ ಎಂ. ಎಸ್. ಬಾಲಸುಬ್ರಹ್ಮಣ್ಯ—ಸಂಗೀತ ೧೨-೩೦ ಎಸ್. [illegible] [illegible] ೧೨-೩೦ [illegible] ಸಂಗೀತ ಸಂಜೆ ೫-೩೦ ವೀಣಾವಾದನ. ೬ ಗಂ ಸಂಗೀತ ೮-೩೦ ಅಬ್ದುಲ್ ಗಫೂರ್—ಗೀತೆ ೯ ಅಬ್ದುಲ್ ಗಫೂರ್ ಕರೀಮ್ ಭಜನೆ ೯-೧೫ ಶ್ರೀರಂಗದ ಸಮ್ಮೇಳನ ೯ ಗಂ ನಮ್ಮ ಕೋರಿಕೆ ೯-೩೦ ಧರ್ಮವ್ಯಾಖ್ಯಾನ [illegible]

ಮೋಕ್ಷ ಸ್ವರೂಪ

ಪರಕಾಲ ಸ್ವಾಮಿಗಳವರ ಉಪದೇಶ

ಮೈಸೂರು ೬

ಭಗವದ್ರಾಮಾನುಜಾಚಾರ್ಯರ ತಿರುನಕ್ಷತ್ರದ ಅಂಗವಾಗಿ ಮೊನ್ನೆ ಶ್ರೀ ಪರಕಾಲ ಮಠದಲ್ಲಿ ನಡೆದ ವೇದಾಂತ ದೇಶಿಕ ವಿಹಾರ ಸಭೆಯ ೧೯ನೆಯ ವಾರ್ಷಿಕೋತ್ಸವದಲ್ಲಿ ಶ್ರೀ ಶ್ರೀಗಳು ಈ ರೀತಿ ಉಪದೇಶ ಭಾಷಣ ಮಾಡಿದರು —

ಭರತ ಖಂಡದ ಆರ್ಯಸಂಸ್ಕೃತಿಗೆ ಆಧಾರವಾದುದು ಸಂಸ್ಕೃತ ಅದಕ್ಕೆ ಮೂಲ ವೇದ ಅದರಲ್ಲಿ ಕರ್ಮಕಾಂಡ ಮತ್ತು ಜ್ಞಾನಕಾಂಡ ಎಂಬ ಒಳಭೇದಗಳಿರುತ್ತವೆ

ದರ್ಶನಗಳು ನಿರೀಶ್ವರ ಮತ್ತು ಸೇಶ್ವರ ಎಂಬ ಎರಡು ವಿಭಾಗವಾಗಿರುತ್ತವೆ ಜೈನ, ಬೌದ್ಧ ದರ್ಶನಗಳು ಮೊದಲನೆಯ ವಿಭಾಗಕ್ಕೆ ಸೇರುತ್ತವೆ ಅವು ಸಂಸ್ಕೃತಕ್ಕಿಂತ ದೇಶಭಾಷೆಯಲ್ಲಿ ಮತಪ್ರಚಾರವನ್ನು ಮಾಡಿದುವು ಯೋಗ ಮತ್ತು ಸಾಂಖ್ಯ ದರ್ಶನಗಳು ಈಶ್ವರನನ್ನು ಹೆಸರಿಗೆ ಮಾತ್ರ ಒಪ್ಪಿಕೊಂಡು ಜೀವಾತ್ಮನ ಸ್ವಸ್ವರೂಪದ ಅರಿವಿನಲ್ಲಿಯೇ ಮುಕ್ತಿಯುವಾಗುತ್ತವೆ ವೇದಾಂತವು ಶ್ರುತಿ ಪ್ರಸಿದ್ಧನಾದ ಈಶ್ವರನನ್ನು ಪ್ರತಿಪಾದಿಸುತ್ತದೆ

ನಿರ್ಗುಣವೇ ನಿಗಿಲಾದುದು ಎಂದು ಒಂದು ಮತ ಸಗುಣವೇ ಪ್ರಾಪ್ಯ ಎಂಬುದು ಇನ್ನೊಂದು ಮತ ಕರ್ಮಕಾಂಡದ ಸೂತ್ರಗಳನ್ನು ಶಿಷ್ಯರಾದ ಜೈಮಿನಿಗಳು ಮಾಡಿದರು ಗುರುಗಳಾದ ವೇದವ್ಯಾಸರು ಬ್ರಹ್ಮಸೂತ್ರಗಳನ್ನು ರಚಿಸಿದರು ಈ ಎರಡು ಶಾಸ್ತ್ರಗಳೂ ಒಂದು ಎಂದು ಸಂಪ್ರದಾಯಸ್ಥರಾದ ದ್ರವಿಡಾಚಾರ್ಯರ ಮತ ಇದನ್ನು ಭಗವಾನ್ ಶಂಕರರು ಉಲ್ಲೇಖಿಸಿದ್ದಾರೆ ಆ ಮತವನ್ನೇ ಭಗವದ್ರಾಮಾನುಜರೂ ತಮ್ಮ ಭಾಷ್ಯಕ್ಕೆ ಆಧಾರವಾಗಿಟ್ಟುಕೊಂಡರು ಆಳ್ವಾರುಗಳೂ ಆ ಮತಕ್ಕೆ ಸೇರಿದವರೇ

ಪರಮಾತ್ಮನು ಕರುಣಾಮಯ ಅವನು ಚೇತನರ ಉಪಕಾರಕ್ಕಾಗಿ ಸೃಷ್ಟಿಯ ಕಾಲದಲ್ಲಿ ಕರಣೇಂದ್ರಿಯಗಳನ್ನು ಕೊಟ್ಟು ಕಳುಹಿಸುತ್ತಾನೆ ಸೃಷ್ಟಿ, ಸ್ಥಿತಿ, ಸಂಹಾರವನ್ನು ಮಾಡುವವನು ಅವನೇ ಸುಷುಪ್ತಿಯಲ್ಲಿ ಪರಮಾತ್ಮನ ಅರಿವು ಜೀವನಿಗೆ ಉಂಟಾಗುತ್ತದೆ ಎಲ್ಲಾ ಇಂದ್ರಿಯ ವ್ಯಾಪಾರಗಳೂ ಆಗ ನಿಂತುಹೋಗಿರುತ್ತವೆ ಅತಿಶಯವಾದ ಆನಂದದ ಅನುಭವ ಉಂಟಾಗುತ್ತದೆ ಇದು ಪರಮಾತ್ಮನ ಕೃಪೆ ಹಾಗೆಯೇ ಮೋಕ್ಷವೂ ಆನಂದಮಯವಾಗಿರುತ್ತದೆ ಜೀವದ ಪರಿಪೂರ್ಣತೆಯು ಆಗ ಆಗುತ್ತದೆ ಕರ್ಮಬಂಧವು ನೀಗುತ್ತದೆ

ಆದುದರಿಂದ ಜೀವನು ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕು ಬಹಳ ಕಾಲ ಅಗಲಿದ ಮಗನನ್ನು ಸಂಧಿಸಿದ ತಂದೆಯು ಹೇಗೆ ಆನಂದಪಡುವನೋ ಹಾಗೆಯೇ ಭಗವಂತನು ಜೀವಾತ್ಮನನ್ನು ಹೊಂದಿ ಆನಂದಿಸುತ್ತಾನೆ ಇದೇ ಪುನರ್ಜನ್ಮವಿಲ್ಲದ ಮೋಕ್ಷ

ಗಂಟೆಗೆ ೧೦ ಸಹಸ್ರ ಮೈಲಿ ವೇಗದ ವಾಯು ಅಸ್ತ್ರ

ಗಂಟೆಗೆ ೧೦ ಸಾವಿರ ಮೈಲಿ ವೇಗದಲ್ಲಿ ಹೋಗಬಲ್ಲ ವಾಯು ಅಸ್ತ್ರವನ್ನು ತಯಾರಿಸಲು ಅಮೆರಿಕದಲ್ಲಿ ಯೋಜನೆ ಸಿದ್ಧವಾಗುತ್ತಿದೆಯೆಂದು ವರದಿಯಾಗಿದೆ ಅದಕ್ಕಾಗಿ ಹೊಸ ಕಾರ್ಖಾನೆಯನ್ನು ನಿರ್ಮಿಸಲಾಗುವುದು

ಜನವರಿಯಿಂದ ತಾತ್ಕಾಲಿಕ ಪರಿಹಾರ ಕೊಡುವಂತೆ ಎನ್. ಜಿ. ಓಗಳ ಕರೆ

ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರ ಸಂಘದ ಸಾಧಾರಣ ಸಭೆಯು ಇತ್ತೀಚೆಗೆ ನಡೆದು ನೌಕರರುಗಳಿಗೆ ಕೂಡಲೆ ತಾತ್ಕಾಲಿಕ ಪರಿಹಾರವನ್ನು ಕಳೆದ ಜನವರಿಯಿಂದ ಕೊಡುವಂತೆ ಒತ್ತಾಯ ಪಡಿಸಿ ನಿರ್ಣಯವನ್ನು ಅಂಗೀಕರಿಸಲಾಯಿತು ಸಂಬಳದ ಮಟ್ಟದ ಪುನರ್ವಿಮರ್ಶೆಯಾಗುವವರೆಗೆ ತಾತ್ಕಾಲಿಕ ಪರಿಹಾರವು ಅಗತ್ಯವೆಂದು ಸೂಚಿಸಲಾಗಿದೆ

ಸಟ್ಟಾ ಜೂಜಿಗಾಗಿ ದಂಡ

ನಾರಾಯಣಾಚಾರ್ ಮತ್ತು ವಿಶ್ವಯ್ಯ ಎಂಬುವರು ಸಟ್ಟಾ ಜೂಜಾಟವಾಡುತ್ತಿದ್ದುದಕ್ಕಾಗಿ ನೆನ್ನೆ ಅವರಿಗೆ ತಲಾ ೧೦ ರೂ ದಂಡ ಬಿದ್ದಿತು.

ಶಿಸ್ತಿನ ಕ್ರಮದ ವಿರುದ್ಧವಾಗಿ ಎ. ರಾಮಣ್ಣನವರ ಅಪೀಲು

ಮೈಸೂರು ೫

ನಗರದ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎ ರಾಮಣ್ಣನವರು ತಮ್ಮ ಮೇಲೆ ನಗರ ಕಾಂಗ್ರೆಸ್ ಸಮಿತಿಯು ಕೈಗೊಂಡ ಶಿಸ್ತಿನ ಕ್ರಮದ ವಿರುದ್ಧವಾಗಿ ಪ್ರದೇಶ ಕಾಂಗ್ರೆಸ್ಸಿಗೆ ಅಪೀಲು ಮಾಡಿರುತ್ತಾರೆ ಅವರು ಪ್ರದೇಶ ಸಮಿತಿ ಕಾರ್ಯದರ್ಶಿಯವರಿಗೆ ಪತ್ರಬರೆದು, ನಗರ ಕಾಂಗ್ರೆಸ್ ಸಮಿತಿಯವರ ನಿರ್ಧಾರವನ್ನು ರದ್ದುಪಡಿಸುವಂತೆ ಕೋರಿರುತ್ತಾರೆ ತಾವು ಹಳೆಯ ಕಾಂಗ್ರೆಸ್ಸಿನವರೆಂದೂ, ಸಂಸ್ಥಾನದಲ್ಲಿ ಕಾಂಗ್ರೆಸ್ ಇರುವಾಗಿನಿಂದಲೂ ತಾವು ಅದರ ಸದಸ್ಯರಾಗಿರುವುದಾಗಿಯೂ, ತಾವು ಸಂಸ್ಥೆಯ ಸದಸ್ಯರಾಗಿ ಮುಂದುವರಿಯಲು ಅವಕಾಶ ತಪ್ಪಿಸುವುದು ತಮಗೆ ಅನ್ಯಾಯ ಮಾಡಿದಂತಾಗುವುದೆಂದೂ ಅವರು ಸೂಚಿಸಿರುತ್ತಾರೆ

ತಮ್ಮ ಅಪೀಲನ್ನು ಸಾಧಿಸಲು ಬೇಕಾದಷ್ಟು ಬೆಂಬಲವಿರುವುದೆಂದು ಅವರು ತಿಳಿಸಿ, ನಗರ ಕಾಂಗ್ರೆಸ್ ಸಮಿತಿಯ ನಿರ್ಧಾರದ ಬಗ್ಗೆ ಅಪೀಲನ್ನು ಇತ್ಯರ್ಥ ಮಾಡುವವರೆಗೆ ಶಿಸ್ತಿನ ಕ್ರಮಕ್ಕೆ ತಡೆಯನ್ನು ಹಾಕಬೇಕೆಂದು ಪ್ರಾರ್ಥಿಸಿರುವರು ತಮ್ಮ ಮೇಲೆ ಮಾಡಿರುವ ಆಪಾದನೆಗಳು ನ್ಯಾಯ ಮತ್ತು ಸತ್ಯಗಳಿಗೆ ವಿರೋಧವಾಗಿರುವುವೆಂದು ಅವರು ಹೇಳಿರುವರು

ನಗರದ ಪೌರಸಭೆಯ ವಿರುದ್ಧವಾಗಿ ಮಾರ್ಕೆಟ್ ವರ್ತಕರು ನಡೆಸಿದ ಪ್ರದರ್ಶನದಲ್ಲಿ ತಾವು ಭಾಗವಹಿಸಿದ್ದು ನಿಜವಾದರೂ, ಅದಕ್ಕೂ ಕಾಂಗ್ರೆಸ್ಸಿಗೂ ಸಂಬಂಧವಿಲ್ಲವೆಂದು ಅವರು ಸೂಚಿಸಿರುವರು ತಮ್ಮ ಪತ್ರಿಕೆ 'ವಿಜಯ'ದಲ್ಲಿ ಆಗಾಗ್ಗೆ ಬರುತ್ತಿರುವ ಲೇಖನಗಳು ಶ್ರೀ ಎಸ್ ಚನ್ನಯ್ಯನವರ ನೀತಿಯನ್ನು ಟೀಕಿಸುವುದೇ ಆಗಿದೆಯೆಂದೂ, ಅದನ್ನು ತಾವೊಬ್ಬ ಸಂಪಾದಕರಾಗಿ ಮಾಡುತ್ತಿರುವುದಾಗಿಯೂ ಶ್ರೀ ರಾಮಣ್ಣನವರು ಹೇಳಿರುತ್ತಾರೆ ವೈಯಕ್ತಿಕ ಅಪಪ್ರಚಾರದಲ್ಲಿ ತೊಡಗಿದ್ದುದಾಗಿ ಆಪಾದನೆ ಹೊರಿಸಿರುವುದು ನಿಜವಲ್ಲವೆಂದೂ, ಆಪಾದನೆಗಳನ್ನು ಸಮರ್ಥಿಸಲು ಆರೋಪಣೆ ಮಾಡುವವರನ್ನು ಬಿಟ್ಟು ಬೇರಾವ ಸ್ವತಂತ್ರ ಸಾಕ್ಷ್ಯವೂ ಇಲ್ಲವೆಂದೂ ಅವರು ತಿಳಿಸಿರುವರು

" ಮಂಗಳಾ "

ರಾಜಧಾನಿಯ ಚಾಮುಂಡಿಪುರದ ಗಾಯತ್ರೀ ಸಾಹಿತ್ಯ ಮಾಲೆಯವರು ಪ್ರಕಟಿಸಿರುವ, ಶ್ರೀ ಎಸ್ ಕಮಲಮ್ಮನವರ 'ಮಂಗಳಾ' ಎಂಬ ಕಾದಂಬರಿಯ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸಿದ್ದೇವೆ ಬಾಲ ವಿವಾಹ ಮತ್ತು ಅದರಿಂದುಂಟಾಗುವ ದುಷ್ಪರಿಣಾಮಗಳನ್ನು ಲೇಖಕರು ಹೃದಯಂಗಮವಾಗಿ ವಿವರಿಸಿದ್ದಾರೆ ಬಾಲ ವಿಧವೆಯಾದ ಮಂಗಳಳಿಗೆ ರೂಪ ಮತ್ತು ಸದ್ಗುಣಗಳಿದ್ದರೂ ಸಮಾಜದ ದೃಷ್ಟಿಯಿಂದ ಅಲಕ್ಷ್ಯಳಾಗುವಳು ಶಾರೀರಕ ಸೌಖ್ಯಕ್ಕಾಗಿ ಅವಳು ಬೇರೊಬ್ಬನನ್ನು ಪ್ರೀತಿಸಲು ಹೋಗಿ ತೊಂದರೆಗೊಳಗಾಗುತ್ತಾಳೆ ಆದರಿಂದ ಅವಳು ಚೇತರಿಸಿಕೊಂಡು ಸಮಾಜ ಸೇವಾ ಕಾರ್ಯ ಕೈಗೊಂಡು ತನ್ನಂತಹ ಅನೇಕ ಸ್ತ್ರೀಯರಿಗೆ ಮಾರ್ಗದರ್ಶಕಳಾಗುತ್ತಾಳೆ. ಈ ಕೃತಿಯನ್ನು ಲೇಖಕರು ತಮ್ಮ ಪತಿಗೆ ಅರ್ಪಿಸಿದ್ದಾರೆ ೧೬೭ ಪುಟಗಳ ಈ ಪುಸ್ತಕದ ಬೆಲೆ ಒಂದು ರೂಪಾಯಿ

Edited, Printed and Published by A R Nagarajan at Sadhvi Press D Subbiah Road, Mysore

ಹಿನಕಲ್ ಗ್ರಾಮದ ಹೀನ[illegible]

ಹಿನಕಲ್ ಗ್ರಾಮದ ನಿವಾಸಿಯೊಬ್ಬರು ರೀತಿ ಪತ್ರ ಬರೆದು ತಿಳಿಸಿರುತ್ತಾರೆ.—

ಹಿನಕಲ್ ಗ್ರಾಮವು ಮೈಸೂರು ನಗರಕ್ಕೆ [illegible] ಮೈಲಿ ದೂರದಲ್ಲಿರುವ ಸಣ್ಣ ಊರು ನಗ[illegible] ಇಷ್ಟು ಹತ್ತಿರವಿದ್ದರೂ ಗ್ರಾಮದಲ್ಲಿ ನಾಗ[illegible]ಕತೆಯ ಲಕ್ಷಣವು ಕಾಣಬರುತ್ತಿಲ್ಲ ಹೊಲ[illegible] ಬೆಳೆಗಳನ್ನು ಕದ್ದು ಕುಯ್ಯುವುದು, ತೋಟಗ[illegible] ಬಾಳೆ, ತೆಂಗು ಮುಂತಾದ ಫಸಲನ್ನು [illegible] ಮಾಡುವುದು, ಸರ್ಕಾರದ ಬಡ ನೌಕರ[illegible]ಲೆ ಸುಳ್ಳು ಅರ್ಜಿ ಬರೆಯುವುದು, ಮನೆಗಳ[illegible]ಲ್ಲು ಬೀರುವುದು, ಬಾಗಿಲುಗಳಿಗೆ ಪಾದರಕ್ಷೆ[illegible]ನ್ನು ಕಟ್ಟುವುದು, ಮನೆಗಳಿಗೆ ಬೆಂಕಿ ಹಾಕು[illegible]ದು, ಸರ್ಕಾರಿ ಮರಗಳನ್ನು ಕಡಿಯುವುದು, [illegible] ಜಾಡುವುದು, ಬಡಜನರಿಗೆ ಭಯೋತ್ಪಾ[illegible] ಮಾಡುವುದು—ಇವುಗಳು ಗ್ರಾಮದಲ್ಲಿ ನಡೆ[illegible]ತ್ತಿವೆ

ಹಳ್ಳಿಗೆ ಪೋಲೀಸು ಠಾಣೆಯನ್ನು [illegible] ನಗರದ ಬಸ್ ಸೌಕರ್ಯವನ್ನು ಒದಗಿಸಿ[illegible]ದು ಈ ಗ್ರಾಮದ ಮತ್ತು ಸುತ್ತಮುತ್ತಲ[illegible] ಉಪಕಾರವಾಗಿದೆ ಜನರು ಅದಕ್ಕಾಗಿ ಸ[illegible]ರಕ್ಕೆ ಕೃತಜ್ಞರಾಗಿರುತ್ತಾರೆ.

ಗ್ರಾಮಪಂಚಾಯಿತಿಯಲ್ಲಿ ಅನೇಕ ಅನಕ್ಷ[illegible]ರು ಇರುವರು ಪಂಚಾಯಿತಿ ಲೆಕ್ಕಗಳನ್ನು [illegible] ಕಾರದವರು ಆಡಿಟ್ ಮಾಡಿಸಿ ತಲವ[illegible]ಕ ಕ್ರಮ ಜರುಗಿಸಿರುವುದಾಗಿಯೂ ಸಮಾ[illegible]ವಿದೆ ಇಲ್ಲಿನ ಸಹಕಾರ ಸಂಘದ ಲೆಕ್ಕಗಳ[illegible] ಚಾರವೂ ಸಹ ಇದೇ ರೀತಿಯಲ್ಲಿದೆ ಹ[illegible] ತಮ್ಮ ಸ್ವಾರ್ಥಕ್ಕೆ ಅಡ್ಡಿಯಾಗದಂತೆ ಮಾಡಿ[illegible]ಳ್ಳಲು ಪೋಲೀಸು ಠಾಣೆಯನ್ನು ಬೇರೆ ಕಡೆಗೆ [illegible]ಗರ್ಾಯಿಸಲು ಪ್ರಯತ್ನ ನಡೆಸುತ್ತಿರುವ[illegible] ಹಾಗೆ ಮಾಡಿದರೆ ಗ್ರಾಮದ ಸಭ್ಯ ಜನರು [illegible]ತ್ತು ಬಡವರಿಗೆ ತೊಂದರೆಯಾಗುತ್ತದೆ ಅ[illegible]ದ ಪೋಲೀಸು ಠಾಣೆಯನ್ನು ವರ್ಗಾಯಿಸುವ[illegible] ಯುಕ್ತವಲ್ಲ ಅದನ್ನು ಗ್ರಾಮದ[illegible] ಖಾಯಂ ಆಗಿ ಉಳಿಸುವುದು ಅಗತ್ಯ

ಅನೀತಿ ವ್ಯಾಪಾರಕ್ಕಾಗಿ ಜುಲ್ಮಾ[illegible]

ಕೊಡಗಿನ ಪೊನ್ನಂಪೇಟೆಯ ಮಧು[illegible] ಎಂಬಾತನು ಗಂಗಿ ಎಂಬ ಹುಡುಗಿಯನ್ನು [illegible]ತಂದು ಅನೀತಿ ವ್ಯಾಪಾರಕ್ಕಾಗಿ ರಾಜಧಾನಿ[illegible] ಗಾರ್ಡನ್ ಹೋಟೇಲಿನಲ್ಲಿ ಇಟ್ಟುಕೊಂಡಿ[illegible]ದು ಲಷ್ಕರ್ ಪೋಲೀಸರು ಹೂಡಿದ್ದ ಮೊಕ[illegible]ಯಲ್ಲಿ ನೆನ್ನೆ ಆಪಾದಿತನಿಗೆ ೫೦ ರೂ ದಂ[illegible]ಧಿಸಲಾಯಿತು

ನಂಜನಗೂಡು ಪೌರಸಭಾಧ್ಯಕ್ಷ ಚುನಾವಣೆ ಸ್ಪರ್ಧಿಗಳು

ಇದೇ ತಿಂಗಳು ೧೫ನೇ ತಾರೀಖು ನಡೆ[illegible]ರುವ ನಂಜನಗೂಡು ಪೌರಸಭೆಯ ಅಧ್ಯಕ್ಷ[illegible] ನಾವಣೆಯಲ್ಲಿ ಶ್ರೀಗಳಾದ ಮಾದೇಗೌಡ, [illegible] ಟಸುಬ್ಬ ಮತ್ತು ಬಿ ಎ ಎಸ್. ಆರಾಧ್ಯ[illegible]ರು ಸ್ಪರ್ಧಿಸಿರುತ್ತಾರೆ

Pulv
BRONKOL
For ASTHMA
&
BRONCHITIS
Sole Distributors for Mysore St[illegible]
and Coorg
SATHYA & CO,
Chemists & Druggists
71/1 A S Street,
BANGALORE 2

ಒಲಿಂಪಿಯಾ ★ ಅಮೋಘ ಪ್ರಾರಂಭ : 11-5-56 ರಿಂದ
ದಿನವೂ 3 ಪ್ರದರ್ಶನಗಳು
"ಸಂಸಾರ" ಮಾಡು ಮತ್ತು ಹುಡುಕುಟು ನಾಗರದಲ್ಲಿದನ್ನು ನಿರ್ಮಿಸಿದ,
ಎ ವಿ ಎಂ ರವರ ಉನ್ನತ ಮಟ್ಟದ ಸಾಮಾಜಿಕ ಹಿಂದಿ ಚಿತ್ರ • ಭಾಯ್ ಭಾಯ್
ಪಾತ್ರ: ಅಶೋಕ್ ಕುಮಾರ್, ಕಿಶೋರ್ ಕುಮಾರ್, ರೂಪ್ ಕುಮಾರ್, [illegible], [illegible] ಶ್ಯಾಮಾ, ಓಂ ಪ್ರಕಾಶ್ ಮತ್ತು ರೇಣು
ನಿರ್ದೇಶನ: ಎಂ. ವಿ. ರಾಮನ್ • ನಿರ್ಮಾಪಕರು ಎ. ವಿ. ಎಂ • ಸಂಗೀತ • ಮದನ್‌ಮೋಹನ್

ಟೆಲಿಫೋನ್ ನಂ. 792

ಲಗ್ನದ ಜವಳಿ
ಗೌ॥ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ,
ಆರ್ಣಿ, ದಿಂಡಿಗಲ್
ರೇಷ್ಮೆ ಮತ್ತು ನೂಲಿನ ಸೀರೆಗಳು
ಬಂದಿವೆ ಅಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಅವಿಚ್ಛಿನ್ನ ಪತ್ರಿಕೆ 3 ಆಣೆ

ಕೊರ್ಗ್ ಮರ್ಚೆಂಟ್
ಸ್ಥಾಪನೆ 1932 ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ
ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾ
ರಾದ ನೆಕ್ಲೇಸ್‌ಗಳೂ, ಬಳೆ
ಗಳೂ ಮತ್ತು ನವೀನ ರೀತಿಯ
ಚಿನ್ನದ ಒಡವೆಗಳೂ ಸಹ
ದೊರೆಯುತ್ತವೆ

ಸಂಪುಟ : ೧೪] SADHVI : MONDAY 7-5-1956 ಮೈಸೂರು ಸೋಮವಾರ : ೭-೫-೧೯೫೬ [ಸಂಚಿಕೆ : ೨೫೬

- ದಕ್ಷಿಣ ಕೊರಿಯಾ ರಾಜಧಾನಿಯಲ್ಲಿ ಉಗ್ರ ಪರಿಸ್ಥಿತಿ -

ಬಂಗಾಳ ಹಿಂದೂಗಳ ವಲಸೆಗೆ ಪಾಕಿಸ್ತಾನವೇ ಹೊಣೆ

ಭಾರತ ಮತ್ತು ಪಾಕಿಸ್ತಾನಗಳ ಜಂಟಿ ಹೇಳಿಕೆ

ಪೂರ್ವ ಪಾಕಿಸ್ತಾನದಿಂದ ಅಲ್ಪ ಸಂಖ್ಯಾತರ ವಲಸೆ ಬಗ್ಗೆ ಢಾಕಾದಲ್ಲಿ ಆದ ಭಾರತ-ಪಾಕಿಸ್ತಾನ ಸಮ್ಮೇಳನವು ನೆನ್ನೆ ಮುಕ್ತಾಯವಾಯಿತು ಅಲ್ಪ ಸಂಖ್ಯಾತರ ವಲಸೆಯು ಯಾವ ಕಾರಣದಿಂದ ನಡೆಯುತ್ತಿದೆ ಈ ಬಗ್ಗೆ ಯಾರು ಹೊಣೆ ಹೊತ್ತುಕೊಳ್ಳಬೇಕೆಂದು ಸಮ್ಮೇಳನದ ನಂತರ ಹೊರಡಿಸಿದ ಪ್ರಕಟಣೆಯು ತಿಳಿಸಿದೆ ಅಲ್ಪ ಸಂಖ್ಯಾತರು ತಮ್ಮ ರಕ್ಷಣೆಗೆ ಸ್ವದೇಶವನ್ನು ಅವಲಂಬಿಸಬೇಕಾದದ್ದೇ ಧರ್ಮವೆಂದೂ, ತಾವು ವಾಸಿಸುವ ರಾಷ್ಟ್ರಕ್ಕೆ ನಿಷ್ಠೆಯುಳ್ಳವರಾಗಿರಬೇಕೆಂದೂ ಸೂಚಿಸಲಾಗಿದೆ ಪಶ್ಚಿಮ ಬಂಗಾಳದ ನಿರಾಶ್ರಿತರ ಪುನರ್ವ್ಯವಸ್ಥೆಗಾಗಿ ಕೈಗೊಂಡ ಏರ್ಪಾಟು ಅಲ್ಪ ಸಂಖ್ಯಾತರ ವಲಸೆ ಪ್ರೇರಕವಾಗಿತ್ತೆಂಬುದನ್ನು ಭಾರತದ ಪ್ರತಿನಿಧಿಗಳು ಅಂಗೀಕರಿಸಲಿಲ್ಲವೆಂದು ಹೇಳಲಾಗಿದೆ ಹೊರಗಿನಿಂದ ಆಗಮಿಸುವವರಿಗೆ ಪ್ರವಾಸಿ ಕೊಡುತ್ತಿದ್ದನ್ನು ನಿಂತಗೊಳಿಸಲು ಭಾರತದ ಪ್ರತಿನಿಧಿಗಳು ಅಂಗೀಕರಿಸಿರುತ್ತಾರೆ

ಜಲಜನಕ ಬಾಂಬು ಪ್ರಯೋಗಕ್ಕೆ ಹವಾದ ಅಡ್ಡಿ

ಅಮೆರಿಕದವರು ಎನಿವಿಟಾಕ್ ದ್ವೀಪಗಳಲ್ಲಿ ನಡೆಸುತ್ತಿರುವ ಅಣು ಬಾಂಬುಗಳ ಪರೀಕ್ಷಾ ನಿರತದ ಸಂಬಂಧವಾಗಿ ನಾಳೆ ಜಲಜನಕ ಬಾಂಬಿನ ಆಸ್ಫೋಟನೆಯು ಆಗಬೇಕಾಗಿದ್ದುದನ್ನು ಹವಾಗುಣವು ಪ್ರತಿಕೂಲವಾಗಿದ್ದುದರಿಂದ ಮುಂದಿಡಲಾಗಿದೆ ಸಿಡಿತದ ದುಷ್ಪರಿಣಾಮವು ಬಹಳ ದೂರ ಹರಡದಂತೆ ಮಾಡಲು ಎಚ್ಚರಿಕೆಯನ್ನು ವಹಿಸಲಾಗಿದೆ

ಮಧ್ಯ ಪೂರ್ವಕ್ಕೆ ಶಸ್ತ್ರಾಸ್ತ್ರ ರವಾನೆ ನಿಷೇಧಕ್ಕೆ ಫ್ರಾನ್ಸಿನ ಬೆಂಬಲ

ಇಸ್ರೇಲ್ ಮತ್ತು ಅರಬ್ ರಾಜ್ಯಗಳಿಗೆ ಶಸ್ತ್ರಗಳನ್ನು ಒದಗಿಸಬಾರದೆಂದು ರಷ್ಯ ಮಾಡಿರುವ ಸಲಹೆಗೆ ಫ್ರಾನ್ಸು ಬೆಂಬಲನಿತ್ತಿದೆ ಈಜಿಪ್ಟ್‌ಗೆ ಮತ್ತು ಇರಾಕುಗಳಿಗೆ ಶಸ್ತ್ರಾಸ್ತ್ರ ಸರಬರಾಜು ಮಾಡಲು ಬ್ರಿಟನ್ನು ಒಪ್ಪಂದ ಮಾಡಿಕೊಂಡಿರುವುದರಿಂದ ಫ್ರಾನ್ಸಿನ ಸಲಹೆಗೂ ಬ್ರಿಟನ್ನಿನ ನಿಲುವಿಗೂ ಅಂತರವುಂಟಾಗಿದೆ. ಶಸ್ತ್ರ ಸರಬರಾಜಿಗೆ ವಿಶ್ವಸಂಸ್ಥೆಯು ನಿಷೇಧ ಮಾಡಬೇಕೆಂದು ರಷ್ಯಾ ತಿಳಿಸಿದ್ದಿತು

ಹೆಂಡತಿ ತಲೆ ಕಡಿದು ಕತ್ತರಿಸಿದ್ದಕ್ಕಾಗಿ ಮೊಕದ್ದಮೆ

ಮುಳಬಾಗಿಲಿನ ಪಲ್ಲಿಗರಪಾಳ್ಯ ಮುನಿವೆಂಕಟರೆಡ್ಡಿ ಎಂಬಾತನು ತನ್ನ ಪತ್ನಿ ಮುನಿವೆಂಕಟಮ್ಮ ಎಂಬಾಕೆಯ ತಲೆ ಕುರುಬನ್ನು ಬಲಾತ್ಕಾರವಾಗಿ ಕತ್ತರಿಸಿದನೆಂದು ಆಕೆಯು ಪೊಲೀಸರಿಗೆ ಕೊಟ್ಟ ದೂರಿನ ಮೇಲೆ ಪೊಲೀಸರು ರೆಡ್ಡಿಯ ಮೇಲೆ ಕೋಲಾರದ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುವರು

ದಕ್ಷಿಣ ಕೊರಿಯಾ ರಾಜಧಾನಿ ಸಿಯೋಲಿನಲ್ಲಿ ಗುಂಡಿನೇಟು

ದಕ್ಷಿಣ ಕೊರಿಯದ ರಾಜಧಾನಿ ಸಿಯೋಲಿನಲ್ಲಿ ನೆನ್ನೆ ಗಲಭೆಗಳಾಗಿ ಅಧ್ಯಕ್ಷ ರ್ಹೀಯವರ ೭ ಜನ ವಿರೋಧಿಗಳನ್ನು ಕೊಲ್ಲಲಾಯಿತೆಂದು ವರದಿಯಾಗಿದೆ ಪರಿಸ್ಥಿತಿಯು ಉಲ್ಬಣಿಸಿ ಗಲಭೆಗಳು ಪುನಃ ನಡೆಯದಂತೆ ಮಾಡಲು ನೆನ್ನೆ ಸಹಸ್ರಾರು ಪೊಲೀಸರು ಬೀದಿಗಳಲ್ಲಿ ಗಸ್ತು ತಿರುಗಿದರು ನೆನ್ನೆ ೧೦ ಸಾವಿರ ವಿದ್ಯಾರ್ಥಿ ಪ್ರದರ್ಶಕರು ಪೊಲೀಸರ ಮೇಲೆ ಕಲ್ಲು ಬೀರಿ ಘರ್ಷಣೆ ನಡೆಸಿದರು ಅವರು ಅಧ್ಯಕ್ಷ ರ್ಹೀಯವರ ಭವನಕ್ಕೆ ನುಗ್ಗಲು ಯತ್ನಿಸಿದಾಗ ಗಲಭೆಯಾಯಿತು ಪೊಲೀಸರು ಗುಂಡು ಹಾರಿಸಿದರು ೪ ಜನರು ಮಡಿದರು ಮೂವರು ಪೊಲೀಸರೂ, ೧೦ ಮಂದಿ ನಾಗರಿಕರು ಗಾಯಗೊಂಡರು ಮತ್ತು ವಿರೋಧ ಪಕ್ಷದ ನಾಯಕನೊಬ್ಬನ ಮರಣದ ಸಂಬಂಧದಲ್ಲಿ ಗಲಭೆ ಆಯಿತು ಗಲಭೆ ಪ್ರೇರಕರನ್ನು ವಿಚಾರಣೆಗೆ ಗುರಿಪಡಿಸಲಾಗುವುದು

ಟಿಬೆಟ್ ಕೊಲೆ ಸುದ್ದಿ ನಿರಾಧಾರ

ಟಿಬೆಟ್ ದೇಶದಲ್ಲಿ ಇತ್ತೀಚೆಗೆ ದಂಗೆ ನಡೆದು ೬೦೦ ಜನ ಚೀನಾ ಸೈನಿಕರನ್ನು ಕೊಲೆ ಮಾಡಲಾಯಿತೆಂದು ಬಂದ ಸಮಾಚಾರವು ವಿಶ್ವಾಸಾರ್ಹ ಮೂಲಗಳಿಂದ ಕೂಡಿರುವುದಾಗಿ ವಿದೇಶೀ ವಲಯಗಳಿಂದ ತಿಳಿದುಬಂದಿದೆ ಈ ಸುದ್ದಿಯನ್ನು ಚೀಣಾ ನಿರಾಕರಿಸಿದ್ದರು

ಬಂಗಾಳದ ಕ್ರಾಂತಿಕಾರಿ ನಾಯಕನ ಕೊಲೆ

ದಕ್ಷಿಣ ಕಲ್ಕತ್ತದಲ್ಲಿ ಕಳೆದ ಆರನೇ ತಾರೀಖು ಹೊರಗಡೆ ವಿಹಾರಾರ್ಥವಾಗಿ ಹೋಗುತ್ತಿದ್ದ ಬಂಗಾಳದ ಹಳೆಯ ಕ್ರಾಂತಿಕಾರಿ ಮುಖಂಡ ಪೂರ್ಣ ಚಂದ್ರ ದಾಸ್ ಎಂಬುವರನ್ನು ಇರಿದು ಕೊಲೆ ಮಾಡಲಾಯಿತೆಂದು ವರದಿಯಾಗಿದೆ ದಾಸರೊಡನೆ ಇದ್ದ ಅನಿಲ ಕುಮಾರ ಗುಹ ಎಂಬ ಸಹಪಾಠಿಯು ದಾಸರನ್ನು ಉಳಿಸಲು ಹೋಗಿ ತಾವೂ ಪೆಟ್ಟು ತಿಂದರು ಹಂತಕನು ಪರಾರಿಯಾಗಿರುತ್ತಾನೆ ದಾಸರಿಗೆ ಈಗ ೭೨ ವರ್ಷ ವಯಸ್ಸು ದಾಸರು ಬಂಗಾಳದ ಯುಗಾಂತರ ಪಕ್ಷಕ್ಕೆ ೧೯೦೬ರಲ್ಲಿ ಸೇರಿದ್ದರು

ಅನೀತಿ ವ್ಯಾಪಾರಕ್ಕಾಗಿ ೧೩ ಮಂದಿಗೆ ದಂಡ

ಅನ್ವರ್ ಪಾಷ ಎಂಬುವನು ಅಲನಹಳ್ಳಿಯ ಸಣ್ಣಮ್ಮ ಎಂಬಾಕೆಯನ್ನು ಮೈಸೂರು ಆನಂದ ಭವನ ಹೋಟೆಲಿಗೆ ಕರೆತಂದು ಅನೀತಿ ವ್ಯಾಪಾರ ನಡೆಸಿದನೆಂದು ಅವನಿಗೆ ಈ ದಿನ ಪ್ರಥಮ ನಗರ ನ್ಯಾಯಾಧೀಶರು ೨೦ ರೂ ದಂಡವನ್ನು ವಿಧಿಸಿದರು

ಲಕ್ಷ್ಮೀದೇವಿ, ಅರಸಿ, ಚಿನ್ನತಾಯಿ, ಪಾಪಾ, ರಾಜೀ, ಗಂಗೆ, ಲಕ್ಷ್ಮಿ, ಕಮಲ, ಸಕ್ಕೂಬಾಯಿ ಕಮಲಮ್ಮ, ಸಣ್ಣಮ್ಮ ಇತರರುಗಳಿಗೆ ಇದೇ ಕಾರಣಕ್ಕಾಗಿ ತಲಾ ೧೦ ರೂ ದಂಡ ವಿಧಿಸಲಾಗಿದೆ ಅವರುಗಳು ಮದೀನಾ ಹೋಟೇಲು ಹಿಂಭಾಗ, ಚಿಲ್ಲರೆಪೇಟೆಗೆ ಏರಿಸಲು, ರಂಜಕಮಲ್ ಟಾಕೀಸ್ ಹಿಂಭಾಗದಲ್ಲಿ ದುರ್ವ್ಯಾಪಾರ ನಡೆಸಿದರೆಂದು ಹೇಳಲಾಗಿದೆ.

ನಾಳೆದ್ದು ವಿಶ್ವವಿದ್ಯಾನಿಲಯ ಪರೀಕ್ಷೆ ಫಲಿತಾಂಶಗಳ ಪ್ರಕಟಣೆ

ಮೈಸೂರು ೭

ಈ ಸಾಲಿನ ವಿಶ್ವವಿದ್ಯಾಲಯದ ಕೆಳಕಂಡ ಪರೀಕ್ಷಾ ಫಲಿತಾಂಶಗಳು ನಾಳಿದ್ದು ಬೆಳಿಗ್ಗೆ ೯॥ ಗಂಟೆಗೆ ಪ್ರಕಟವಾಗುವುವು —

ಇಂಟರ್ ಆರ್ಟ್ಸ್ ಮತ್ತು ಸೈನ್ಸ್ ಬಿ ಎ ಬಿ ಎಸ್‌ಸಿ, ಎ ಎ ಆನರ್ಸ್ ಮತ್ತು ಬಿ ಎಸ್ ಸಿ ಆನರ್ಸ್ ಪ್ರಿಲಿಮಿನರಿ, ಎಲ್ ಎಂ ಪಿ, ಬಿ ಇಡಿ, ಟೀಚರ್ಸ್‌ ಗ್ರಾಜುಯೇಟ್ ಕೋರ್ಸ್, ಬಿ ಕಾಮ್, ಫಸ್ಟ್ ಬಿ ಎ ಎಲ್ ಮತ್ತು ಪೋಸ್ಟ್ ಸೆಕೆಂಡರಿ ಡಿಪ್ಲೋಮಾ ಇನ್ ಜರ್ನಲಿಸ್. ಇಂಜಿನಿಯರಿಂಗ್ ಪರೀಕ್ಷಾ ಫಲಿತಾಂಶಗಳು ಇದೇ ೧೯ನೇ ತಾರೀಖು ಪ್ರಕಟವಾಗುವುವೆಂದು ತಿಳಿದುಬಂದಿದೆ

ಎಂ. ಬಿ ಬಿ. ಎಸ್. ಪರೀಕ್ಷಾ ಫಲಿತಾಂಶ ಹೊರಬಿತ್ತು

ಎಂ ಬಿ ಬಿ ಎಸ್. ಪರೀಕ್ಷಾ ಫಲಿತಾಂಶವು ಈ ಬೆಳಗ್ಗೆ ಪ್ರಕಟವಾಯಿತು ಎಂ ಬಿ ಬಿ ಎಸ್ ಪಾರ್ಟ್ ೧ರ ಪ್ರಥಮ ಪರೀಕ್ಷೆಯಲ್ಲಿ ೩೧ ಜನರು ಪ್ಯಾಸ್ ಆಗಿರುವರು ಎರಡನೇ ಪಾರ್ಟಿನಲ್ಲಿ ೧೧೨ನೇ ನಂಬರಿಗೆ ಪ್ರಥಮ ದರ್ಜೆ ಬಂದಿದೆ ೩೩ ಜನ ಸೆಕೆಂಡ್ ಕ್ಲಾಸಿನಲ್ಲಿ ಉತ್ತೀರ್ಣರಾಗಿರುವರು. ೧೬ ಮಂದಿ ಪಾಸ್ ಆಗಿರುತ್ತಾರೆ ಎಂ ಬಿ ಬಿ ಎಸ್ ಪಾರ್ಟ್ ೧ ದ್ವಿತೀಯ ಪರೀಕ್ಷೆಯಲ್ಲಿ ೧೯೪ ನಂಬರಿಗೆ ಫಸ್ಟ್ ಕ್ಲಾಸ್ ದೊರೆತಿದೆ. ೪೩ ಮಂದಿ ಸೆಕೆಂಡ್ ಕ್ಲಾಸಿನಲ್ಲಿ ಪಾಸಾಗಿದ್ದಾರೆ ಪಾರ್ಟ್ ೨ರಲ್ಲಿ ೩೦ ಜನರಿಗೆ ಸೆಕೆಂಡ್ ಕ್ಲಾಸ್ ದೊರೆತಿದೆ ೯ ಮಂದಿ ಪಾಸ್ ಆಗಿರುವರು. ಪಾರ್ಟ್ ೩ರ ದ್ವಿತೀಯ ಪರೀಕ್ಷೆಯಲ್ಲಿ ೧೯ ಮಂದಿಗೆ ಸೆಕೆಂಡ್ ಕ್ಲಾಸ್ ಸಿಕ್ಕಿದೆ, ೧೬ ಜನರು ಪಾಸ್ ಆಗಿದ್ದಾರೆ ಅಷ್ಟೆರು ಪರೀಕ್ಷೆಯಲ್ಲಿ ೩೧ ಜನರಿಗೆ ಸೆಕೆಂಡ್ ಕ್ಲಾಸ್ ಬಂದಿದೆ ೩೨ ಜನರು ಪಾಸ್ ಆಗಿದ್ದಾರೆ

ಸಿ. ಡಿ. ನರಸಿಂಹಯ್ಯನವರು ಮಹಾರಾಜಾ ಕಾಲೇಜ್ ಪ್ರಿನ್ಸಿಪಾಲ್

ಬರುವ ತಿಂಗಳು ಯುನಿವರ್ಸಿಟಿ ವೈಸ್ ಚಾನ್ಸಲರ್ ಶ್ರೀ ಪಿ. ಎಲ್. ಎಸ್. ರಾಜಾರವರು ನಿವೃತ್ತರಾಗುವರೆಂದೂ, ಅವರ ಸ್ಥಾನಕ್ಕೆ ಪ್ರೊ॥ ಕೆ ಎ ಪುಟ್ಟಪ್ಪನವರನ್ನು ನೇಮಿಸಲಾಗುವುದೆಂದೂ, ಶ್ರೀ ಸಿ ಡಿ ನರಸಿಂಹಯ್ಯನವರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿ ನೇಮಕರಾಗಲಿರುವರೆಂದೂ ತಿಳಿದುಬಂದಿದೆ

ಕೋ ಆಪರೇಟಿವ್ ಬ್ಯಾಂಕಿನ ಅಧಿಕಾರ ವರ್ಗ

ನಗರದ ಕೋ ಆಪರೇಟಿವ್ ಬ್ಯಾಂಕಿನ ಷೇರುದಾರರುಗಳ ಸಭೆಯು ಮೊನ್ನೆ ನಡೆದು ಅಧಿಕಾರ ವರ್ಗದ ಚುನಾವಣೆಯು ಆಯಿತು ಡಾ॥ ಎ ವಿ. ರಂಗರಾಜು ಅಧ್ಯಕ್ಷರಾಗಿಯೂ, ಆ॥ ಮ॥ ವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು ಉಪಾಧ್ಯಕ್ಷರಾಗಿಯೂ ಮತ್ತು ಶ್ರೀ ಜಿ ಜನಾರ್ಧನನಾಯ್ಡುರವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು

ಶಾಲೆಗಳಲ್ಲೂ ಜೇನು ಸಾಕುವ ಶಿಕ್ಷಣ ವಿರಬೇಕು

ಜೇನು ಸಾಕುವವರ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಗಳ ಸಲಹೆ

ಸ್ವಂ ವ ಪ್ರೋ॥] ಬೆಂಗಳೂರು ೭

ಅಖಿಲ ಭಾರತ ಜೇನು ಸಾಕುವವರ ಆರನೇ ಸಮ್ಮೇಳನವು ಇಂದು ಬೆಳಿಗ್ಗೆ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಂದ ಆರಂಭಗೊಳಿಸಲ್ಪಟ್ಟಿತು ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗಗಳ ಬೋರ್ಡಿನ ಶ್ರೀ ವೈಕುಂಠಲಾಲ್ ಮೆಹ್ತಾರವರು ಅಧ್ಯಕ್ಷತೆ ವಹಿಸಿದ್ದರು

ಪ್ರಾರಂಭದಲ್ಲಿ ಸಚಿವ ಶ್ರೀ ಹೆಚ್. ಸಿದ್ಧವೀರಪ್ಪನವರು ಸ್ವಾಗತ ಭಾಷಣ ಮಾಡಿ ಸಂಸ್ಥಾನದಲ್ಲಿನ ನಾನಾ ಸಣ್ಣ ಕೈಗಾರಿಕೆಗಳ ಪೈಕಿ ಜೇನು ಸಾಕುವ ಉದ್ಯಮವು ಪ್ರಗತಿ ಪಡೆದಿದೆಯೆಂದು ಹೇಳಿ ಅದರ ಅಭಿವೃದ್ಧಿಗೆ ಕ್ರಮಗಳನ್ನು ವಿವರಿಸಿದರು

ಮುಖ್ಯ ಮಂತ್ರಿಗಳು ಭಾಷಣ ಮಾಡಿ ಜೇನು ಸಾಕುವ ಕಸುಬನ್ನು ಶಾಲೆಗಳಲ್ಲಿ ಕಲಿಸಬೇಕೆಂದು ಅಭಿಪ್ರಾಯಪಟ್ಟರು

ಕೈ ಕಸುಬುಗಳು ಅಪ್ರಯೋಜಕ ಶಾಲೆಗಳನ್ನು ತುಂಬುವ ಬದಲು ಶಾಲೆಗಳಲ್ಲೇ ಅವನ್ನು ಕಲಿಸಬೇಕೆಂದು ಅವರು ಹೇಳಿ ಈ ಅಂಶವನ್ನು ಸಂಸ್ಥಾನದ ವಿದ್ಯಾ ಸುಧಾರಣೆಗಳಲ್ಲಿ ಜಾರಿಗೆ ತರಲಾಗುತ್ತಿದೆಯೆಂದು ತಿಳಿಸಿದರು

ಶ್ರೀ ವೈಕುಂಠಲಾಲ್ ಮೆಹ್ತಾರವರು ಭಾಷಣ ಮಾಡಿ ಈ ಉದ್ಯಮದಲ್ಲಿ ಇದುವರೆಗೆ ೭೮೩ ಗ್ರಾಮಗಳಲ್ಲಿ ೫೭ ಶಾಲೆಗಳ ಮುಖಾಂತರ ಶಿಕ್ಷಣ ನೀಡಲಾಗುತ್ತಿದೆಯೆಂದು ಹೇಳಿದರು.

ಸಹಸ್ರಮುಖಿ ರಾಮಕುಮಾರರ ನಿಧನ

ಸುಪ್ರಸಿದ್ಧ ಹಾಸ್ಯಗಾರರೂ ಮತ್ತು ಮಿಮಿಕ್ರಿ ಪ್ರವೀಣರೂ ಆದ ಶ್ರೀ ಸಹಸ್ರಮುಖಿ ರಾಮಕುಮಾರರು ಇಂದು ಬೆಳಗಿನ ಜಾವ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಿಧನ ಹೊಂದಿದರು

ವ್ಯವಸಾಯ ವ್ಯಾಸಂಗ ಗೋಷ್ಠಿ

ಬೆಂಗಳೂರಿನ ಹೆಬ್ಬಾಳು ವ್ಯವಸಾಯ ಕಾಲೇಜಿನಲ್ಲಿ ಇದೇ ತಿಂಗಳು ೧೨ನೇ ತಾರೀಖು ಶನಿವಾರ ಬೆಳಿಗ್ಗೆ ೮॥ ಗಂಟೆಗೆ ವ್ಯವಸಾಯ ವ್ಯಾಸಂಗ ಗೋಷ್ಠಿಯ ಆರಂಭೋತ್ಸವವನ್ನು ಕೇಂದ್ರ ಸರ್ಕಾರದ ವ್ಯವಸಾಯ ಮಂತ್ರಿ ಡಾ॥ ಪಂಜಾಬರಾವ್ ದೇಶಮುಖರವರು ನೆರವೇರಿಸುವರು. ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು.

ಜಲಜನಕ ಬಾಂಬು ಪ್ರಯೋಗದ ವಿರುದ್ಧ ಉಪವಾಸ

ಶಾಂತಿ ಸಾಗರದಲ್ಲಿ ಅಮೆರಿಕವು ಕೈಗೊಂಡಿರುವ ಜಲಜನಕ ಬಾಂಬ್ ಸಿಡಿತ ಪ್ರಯೋಗಗಳ ಬಗ್ಗೆ ಪ್ರತಿಭಟಿಸಲು ಅಮೆರಿಕದ ಮ್ಯಾಡಿಸನ್ ನಗರದ ೬ ಜನರು ೩ ದಿನಗಳ ಉಪವಾಸವನ್ನು ಕೈಗೊಂಡಿದ್ದಾರೆ ಅವರು ವಿಶ್ವಶಾಂತಿಗೆ ಶಾಂತಿ ಕಸರತ್ತು, ತಮ್ಮ ಪ್ರತಿಭಟನಾ ಉಪವಾಸದ ಸಮಾಚಾರವನ್ನು ತಿಳಿಸುತ್ತಾರೆ.

ಚರಿತ್ರೆ, ಭೂಗೋಳ ಮತ್ತು ಪೌರ ನೀತಿಗಳ ಗೋಷ್ಠಿಯ ಆರಂಭ

ಮೈಸೂರು ೬

ಇಲ್ಲಿನ ಉಪಾಧ್ಯಾಯರ ಕಾಲೇಜಿನ ವಿಸ್ತರಣಾ ಸೇವಾ ವಿಭಾಗದವರು ಚರಿತ್ರೆ, ಭೂಗೋಳ ಮತ್ತು ಪೌರ ನೀತಿಗಳ ವ್ಯಾಸಂಗದ ಹೊಸ ಗೋಷ್ಠಿಯೊಂದನ್ನು ಮೊನ್ನೆ ಆರಂಭಿಸಿದರು ಅದು ೧೦ ದಿನಗಳವರೆಗೆ ನಡೆಯುವುದು ಅದರಲ್ಲಿ ಸಂಸ್ಥಾನದ ಪ್ರೌಢಶಾಲೆಗಳ ೪೦ ಮಂದಿ ನುರಿತ ಉಪಾಧ್ಯಾಯರು ಭಾಗವಹಿಸಿರುವರು ಶಾಲಾ ಪಠ್ಯ ಕ್ರಮದಲ್ಲಿರುವ ಈ ಮುಖ್ಯ ವಿಷಯಗಳ ಬೋಧನೆಯನ್ನು ಉತ್ತಮಗೊಳಿಸಲು ಅವರು ಸೂಕ್ತವಾದ ಸೂತ್ರಗಳನ್ನು ತಯಾರಿಸಲಿರುವರು

ಗೋಷ್ಠಿಯ ಆರಂಭೋತ್ಸವವನ್ನು ಕೇಂದ್ರದ ಮಾಧ್ಯಮಿಕ ವಿದ್ಯಾಭ್ಯಾಸ ಮಂಡಲಿಯ ಸಲಹೆಗಾರರಾದ ಶ್ರೀ ಆರ್. ಎಸ್. ಸೇತುಪತಿಯವರು ಮೊನ್ನೆ ನೆರವೇರಿಸಿದರು ಅವರು ಭಾಷಣ ಮಾಡಿ, ಈ ವಿಷಯಗಳನ್ನು ಒಂದುಗೂಡಿಸಿ ಪಾಠ ಹೇಳಬೇಕಾದ ಅಗತ್ಯವನ್ನು ಒತ್ತಿ ಹೇಳಿ, ಭಾರತ ಸರ್ಕಾರದವರು ಮಾಧ್ಯಮಿಕ ವಿದ್ಯಾಭ್ಯಾಸದಲ್ಲಿ ಸಾಮಾಜಿಕ ಪಾಠಗಳಿಗೆ ಸಂಬಂಧಿಸಿದಂತೆ ಸೂಚಿಸಿರುವ ಪಠ್ಯ ಕ್ರಮವನ್ನು ಈಗಿನಂತೆ ಇರುವಂತೆ ಸಲಹೆ ಮಾಡಿದರು ಕೇಂದ್ರ ಸರ್ಕಾರದ ಸಲಹೆಯನ್ನು ವಿದ್ಯಾರ್ಥಿಗಳಿಗೆ ಈಗಿನ ಅವಶ್ಯಕತೆಗಳ ದೃಷ್ಟಿಯಿಂದ ಪರಿಶೀಲಿಸಬೇಕೆಂದೂ ಅವರು ಸೂಚಿಸಿದರು ಈಗಿನ ಕಾಲಕ್ಕೆ ತಕ್ಕಂತಹ ವಿದ್ಯಾಭ್ಯಾಸಕ್ಕೆ ಪ್ರಾಮುಖ್ಯತೆ ಕೊಡುವುದಿಲ್ಲವೆಂದೂ ಅವರು ನುಡಿದರು

ಅಧ್ಯಕ್ಷತೆ ವಹಿಸಿದ್ದ ಪ್ರೊ|| ಸಿ ರಂಗಾಚಾರ್ಯರು ಪಾಠ ಹೇಳುವುದರಲ್ಲಿ ಹೆಚ್ಚಿನ ಆಸಕ್ತಿ ಬೇಕೆಂದು ಸೂಚಿಸಿದರು

ಭಾರತ ವಾಚನ

ಜಯನಗರದ ಶ್ರೀ ಶಂಕರವಿಜಯ ವಿಲಾಸದಲ್ಲಿ ದ್ವಾದಶಿ ಪ್ರಯುಕ್ತ ಈ ರಾತ್ರಿ ೮ ಘಂಟೆಗೆ ಬಿ ಎಸ್. ಎಸ್ ಕೌಶಿಕ್‌ರವರಿಂದ ಭಾರತ ವಾಚನವೂ ಮತ್ತು ಸೂರ್ಯನಾರಾಯಣರವರ ವ್ಯಾಖ್ಯಾನವೂ ನಡೆಯಲೇರ್ಪಡಿಸಿದೆ ಸರ್ವರಿಗೂ ಸ್ವಾಗತವಿದೆ.

ಸಂಗೀತ ಕಛೇರಿ

ಶ್ರೀ ಚಾಮುಂಡೇಶ್ವರಿ ಅಮ್ಮನವರ ಸಪ್ತಾಹದ ಪ್ರಯುಕ್ತ ಮಂಡಿ ಮೊಹಲ್ಲಾ ಒಲೆ ಕುಯ್ಯುವ ಬೀದಿಯಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ವಿ|| ಅಂಜನಪ್ಪನವರ ಗೋಷ್ಠಿಯಿಂದ ಸಂಗೀತ ಕಛೇರಿಯು ನಡೆಯುವುದು ಸರ್ವರಿಗೂ ಆಹ್ವಾನವುಂಟು

ವಿವಾಹ ಮಹೋತ್ಸವ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಹಾಲ್ ಜವಳಿ ಅಂಗಡಿಯ ಶ್ರೀ ಎ. ಎಸ್. ರಾಮರಾಯರು ತಮ್ಮ ಕುಮಾರಿ ಸೌ|| ಸುಶೀಲಾಬಾಯಿಯನ್ನು ಶ್ರೀ ಆರ್. ರಾಮರಾಯರ ಕುಮಾರ ಶ್ರೀ ಆರ್ ಎಸ್ ರಾಜಗೋಪಾಲರಾಯರಿಗೆ ಕೊಟ್ಟು ಮೊನ್ನೆ ವಿವಾಹವನ್ನು ನೆರವೇರಿಸಿದರು

“ದ್ವಿಭಾಷಾ ಪ್ರಾಂತಗಳು”

ಮುಖ್ಯ ಮಂತ್ರಿ ಹನುಮಂತಯ್ಯನವರ ಭಾಷಣಗಳ ಸಂಗ್ರಹ

ಕಳೆದ ೧ ವರ್ಷದಲ್ಲಿ ಸಂಸ್ಥಾನಗಳ ಪುನರ್ವಿಂಗಡಣೆಯ ಅಂಗವಾಗಿ ಉದ್ಭವವಾದ ದ್ವಿಭಾಷಾ, ವಿವಿಧ ಭಾಷಾ ಪ್ರಾಂತಗಳು ಮತ್ತು ದಕ್ಷಿಣ ಪ್ರದೇಶ ಸಂಸ್ಥಾನದ ಸ್ಥಾಪನೆ ವಿಷಯವಾಗಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನಾನಾ ಕಡೆ ಮಾಡಿರುವ ಭಾಷಣಗಳ ಭಾಗಗಳನ್ನು ಸಂಗ್ರಹಿಸಿ ಒಂದು ಪುಸ್ತಕವನ್ನು ಮೈಸೂರು ವಿಶ್ವವಿದ್ಯಾಲಯದ ಶ್ರೀ ಹೆಚ್ ಹೆಚ್ ಅಣ್ಣಯ್ಯಗೌಡರು ಇಂಗ್ಲಿಷ್ ಭಾಷೆಯಲ್ಲಿ ಪ್ರಕಟಿಸಿರುತ್ತಾರೆ ಈಗ ದೇಶದ ನಾನಾ ಭಾಗಗಳಲ್ಲಿ ಮಥನವಾಗುತ್ತಿರುವ ಪ್ರಾಂತ ಪುನರ್ವಿಂಗಡಣಾ ಸಮಸ್ಯೆಯಲ್ಲಿ ಒಂದು ಭಾಗವಾದ ಈ ವಿಚಾರವನ್ನು ಅರಿಯಲು ಗ್ರಂಥವು ಅವಕಾಶ ಮಾಡಿಕೊಡುವುದು ಮುಖ್ಯಮಂತ್ರಿಯವರ ಭಾಷಣಗಳು ಅಮೃತಸರ ಕಾಂಗ್ರೆಸ್ಸಿನಲ್ಲಿ ಅಂಗೀಕರಿಸಲ್ಪಟ್ಟ ದ್ವಿಭಾಷಾ ಪ್ರಾಂತಗಳ ರಚನೆ ನಿಲುವಿಗೆ ಸರಿಹೊಂದಿ, ರಾಷ್ಟ್ರೀಯ ನೀತಿಯನ್ನು ಎತ್ತಿಹಿಡಿದು, ಭಾಷಾ ಮೋಹವನ್ನು ಟೀಕಿಸಿರುವುದೆಂದು ಸಂಪಾದಕರು ತಿಳಿಸಿರುತ್ತಾರೆ ಮೈಸೂರಿನ ಮಿತ್ರ ಸ್ವಭಾವವನ್ನು ಶ್ರೀ ಹನುಮಂತಯ್ಯನವರು ಭಾಷಣಗಳಲ್ಲಿ ಪ್ರತಿಪಾದಿಸಿರುವರು ಈ ಪುಸ್ತಕವು ಪ್ರಸಕ್ತ ರಾಜಕೀಯಕ್ಕೆ ಸಹಾಯಕವಾಗಿದೆ

ಆಲಿಕಲ್ಲಿನೇಟಿಗೆ ಸಿಕ್ಕಿ ಮರಣ

ಹಿರಿಸಾವೆ ಒಳ ಮತಘಟ್ಟದಿಂದ ಬೊಮ್ಮೇನಹಳ್ಳಿಗೆ ಕೆಲವು ದಿನಗಳ ಹಿಂದೆ ಹೋಗುತ್ತಿದ್ದ ರೈತನೊಬ್ಬನು ಭಾರಿ ಆಲಿಕಲ್ಲು ಮಳೆಗೆ ಸಿಕ್ಕಿ ತುಂಬಾ ಪೆಟ್ಟು ತಿಂದು ಮರಣ ಹೊಂದಿದುದಾಗಿ ವರದಿಯಾಗಿದೆ

ವರದಾಚಾರ್ಯರ ಸ್ಮಾರಕ ದಿನಾಚರಣೆ

ನಗರದ ನಾಟಕ ಅಸೋಸಿಯೇಷನ್ನಿನ ಆಶ್ರಯದಲ್ಲಿ ನಿನ್ನೆ ಸಹಕಾರ ಭವನದಲ್ಲಿ ದಿವಂಗತ ಎ ವಿ ವರದಾಚಾರ್ಯರ ಸ್ಮಾರಕ ದಿನಾಚರಣೆಯು, ಅರುಣ ಪತ್ರಿಕಾ ಸಂಪಾದಕರಾದ ಶ್ರೀ ಎಚ್ ಕೆ ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಎ ಎಂ ಬಸವರಾಜ್‌ರವರು ಸ್ವಾಗತ ಬಯಸಿದನಂತರ, ನಿವೃತ್ತ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ ಕೃಷ್ಣಸ್ವಾಮಿ ಅಯ್ಯಂಗಾರ್ಯರು ಭಾಷಣ ಮಾಡಿ ಶ್ರೀ ಎ ವಿ ವರದಾಚಾರ್ಯರು ತಮ್ಮ ಜೀವಮಾನವನ್ನೆಲ್ಲಾ ನಾಟಕ ಕಲೆಗೆ ಮುಡುಪಾಗಿಟ್ಟು ಉನ್ನತ ಮಟ್ಟದಲ್ಲಿ ನಾಟಕಗಳನ್ನು ಅಭಿನಯಿಸಿ ಸಂಸ್ಥಾನಕ್ಕೆ ಕೀರ್ತಿ ತಂದ ವಿಷಯವನ್ನು ವಿವರಿಸಿದರು ಅಧ್ಯಕ್ಷ ಶ್ರೀ ಕುಮಾರಸ್ವಾಮಿಯವರು ಮಾತನಾಡಿ ಈಗಿನ ನಾಟಕ ಸಂಸ್ಥೆಗಳವರು ಶ್ರೀ ವರದಾಚಾರ್ಯರ ಆದರ್ಶಗಳನ್ನು ಅನುಸರಿಸಬೇಕೆಂದು ಹೇಳಿದರು. ಸಂಘದ ಕಾರ್ಯದರ್ಶಿ ಶ್ರೀ ಕೆ ರಾಮಣ್ಣನವರು ವಂದನಾರ್ಪಣೆ ಮಾಡಿದರು ಸೌಭಾಗ್ಯ ಎಂಬ ನಾಟಕದ ಅಭಿನಯವಾದನಂತರ ಸಮಾರಂಭವು ಮುಕ್ತಾಯವಾಯಿತು

ಕಾಶ್ಮೀರದಲ್ಲಿ ಜನಮತಗಣನೆ ಸಲಹೆ ಕೈಬಿಟ್ಟಿಲ್ಲ

ಕಾಶ್ಮೀರದಲ್ಲಿ ಜನಮತಗಣನೆ ನಡೆಸುವ ವಿಷಯವನ್ನು ಸ್ಥಿರವಾಗಿ ಕೈಬಿಟ್ಟಿಲ್ಲವೆಂದೂ, ಜನಮತಗಣನೆಗೆ ಮುಂಚಿತವಾಗಿ ಆಗಬೇಕಾಗಿರುವ ಅಗತ್ಯ ಕಾರ್ಯಗಳನ್ನು ನಡೆಸಿದನಂತರ ಪ್ರಜಾಭಿಮತವನ್ನು ಪಡೆಯಬಹುದೆಂದೂ, ಪಾಕಿಸ್ತಾನಕ್ಕೆ ಅಮೆರಿಕದ ಸೇನಾ ನೆರವು ಮತ್ತು ಒಪ್ಪಂದಗಳ ದೃಷ್ಟಿಯಲ್ಲಿ ತಾವು ಹಿಂದೆ ಹೇಳಿಕೆಗಳನ್ನು ಇತ್ತುದಾಗಿಯೂ ಪ್ರಧಾನಿ ನೆಹರೂರವರು ತಿಳಿಸಿರುವರು.

ವಿಷ ಮಿಶ್ರಿತ ತಾಂಬೂಲ ಸೇವನೆಯಿಂದ ಮರಣ

ವಿವಾಹ ಮಹೋತ್ಸವವೊಂದರಲ್ಲಿ ಭೋಜನಾನಂತರ ಬೀಡಾಗಳನ್ನು ಸೇವಿಸಿದವರ ಪೈಕಿ ೧೦ ಜನರನ್ನು ನಿಡುದ್ರೋಲು ಆಸ್ಪತ್ರೆಗೆ ಸೇರಿಸಲಾಗಿದೆ ಆ ಪೈಕಿ ಒಬ್ಬ ಹೆಂಗಸು ಮೃತಪಟ್ಟಿರುತ್ತಾಳೆ ಮೂವರ ಸ್ಥಿತಿ ಚಿಂತಾಜನಕವಾಗಿದೆ ಸೋಡಾ ಬೈಕಾರ್ಬೊನೇಟ್ ಬದಲು ವಿಷದ ಪುಡಿಯನ್ನು ಬೆರೆಸಿ ಬೀಡಾಗಳನ್ನು ಕಟ್ಟಲಾಗಿದ್ದುದೇ ಈ ಘಟನೆಗೆ ಕಾರಣವೆಂದು ಹೇಳಲಾಗಿದೆ

ತಿರುವಾಂಕೂರಿನಲ್ಲಿ ಬಹುಪತ್ನೀಕರಿಗೆ ನೌಕರಿ ಇಲ್ಲ

ಒಬ್ಬಳಿಗಿಂತಲೂ ಹೆಚ್ಚು ಮಂದಿ ಹೆಂಡಿರನ್ನು ಹೊಂದಿರುವವನು ಸರ್ಕಾರಿ ನೌಕರಿಗೆ ಅರ್ಹನಲ್ಲವೆಂದು ತಿರುವಾಂಕೂರು ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ವಿಶೇಷ ಕಾರಣಗಳಿದ್ದರೆ ಅಂತಹವನಿಗೆ ವಿನಾಯಿತಿ ಕೊಡಲಾಗುವುದೆಂದು ಸೂಚಿಸಲಾಗಿದೆ

ಟಿ. ನರಸೀಪುರ ಪೌರಸಭೆಯ ನೂತನ ಅಧ್ಯಕ್ಷರು

ಟಿ ನರಸೀಪುರದ ಪುರಸಭೆಯ ಅಧ್ಯಕ್ಷರಾಗಿ ಎ ಆರ್ ಶ್ರೀನಿವಾಸಯ್ಯಂಗಾರ್ಯರು ಆರಿಸಲ್ಪಟ್ಟಿರುವರು. ಅವರಿಗೆ ೮ ಮತ್ತು ಪ್ರತಿಸ್ಪರ್ಧಿ ಡಾ|| ವಿಜಯರಂಗಾಚಾರ್ಯರಿಗೆ ೬ ಓಟುಗಳು ಬಂದುವು

೩ ಮಕ್ಕಳ ಜನನ

ಟಿ ನರಸೀಪುರದ ಶ್ರೀ ಪುಟ್ಟಸ್ವಾಮಾಚಾರ್ಯರ ಪತ್ನಿ ಶ್ರೀಮತಿ ಲಕ್ಷ್ಮೀದೇವಮ್ಮನವರು ೩ ಹೆಣ್ಣು ಮಕ್ಕಳನ್ನು ಪ್ರಸವಿಸಿದುದಾಗಿಯೂ, ಆ ಪೈಕಿ ಒಂದು ಮೃತಪಟ್ಟಿತೆಂದೂ, ಉಳಿದ ಮಕ್ಕಳು ಮತ್ತು ತಾಯಿಯು ಆರೋಗ್ಯವಾಗಿರುವರೆಂದೂ ವರದಿ ಬಂದಿದೆ

ಪ್ರಖ್ಯಾತಿ ಹೊಂದಿರುವ

ಕನ್ನಾನೂರ್ ಬನೀನುಗಳನ್ನು

ದಯವಿಟ್ಟು ಉಪಯೋಗಿಸಿ

ದಿ ಚಿರೋಲಿ ಹೊಸೈರಿ ಫ್ಯಾಕ್ಟರಿ,

ಕನ್ನಾನೂರು

ಸೂಚನೆ - 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಬನೀನುಗಳ ಮೇಲೆ ನೀಲಿ ಬಣ್ಣದ ಲೇಬಲ್‌ಗಳನ್ನು ಮಹಾಜನರು ಗಮನಿಸಬೇಕಾಗಿ ವಿನಂತಿ

Edited, Printed and Published by A. R. Nagarajan at Sadhvi Press D. Subbiah Road Mysore

೯ ಆಣೆಗಾಗಿ ಜಗಳದಲ್ಲಿ ಒಬ್ಬನ ಮರಣ

ಮದರಾಸಿನ ತ್ಯಾಗರಾಜ ನಗರದಲ್ಲಿ ಕಳೆದ ಮಂಗಳವಾರ ೯ ಆಣೆ ಸಾಲದ ಬಗ್ಗೆ ಸಲವರ ಜಗಳವಾಗಿ ವಡಿಯಾರ್ ಚಿನ್ನಯ್ಯ ಎಂಬುವನು ಮೃತಪಟ್ಟಿರುತ್ತಾನೆ. ... ಅಯ್ಯ ಮತ್ತು ಮಂಗಲಿ ಎಂ ನಾಯ್ಡು ವಡಿಯಾರ್ ಚಿನ್ನಯ್ಯ ಮತ್ತು ಇನ್ನೊಬ್ಬರೊಡನೆ ಜಗಳವಾಡಿ ಇಬ್ಬರನ್ನೂ ತಿವಿದರೆಂದು ವರದಿಯಾಗಿದೆ ಇಬ್ಬರನ್ನೂ ಆಸ್ಪತ್ರೆಗೆ ಸಾಗಿಸಲಾಗಿ ಅಲ್ಲಿ ಚಿನ್ನಯ್ಯನು ಮಡಿದನು ಪೋಲೀಸರು ಮಂಗಲಿ ನಾಯ್ಡುವನ್ನು ಬಂಧಿಸಿದ್ದಾರೆ ಇನ್ನೊಬ್ಬರು ಗಾಯಗೊಂಡಿದ್ದಾರೆ.

ಅಕ್ಕಿ ಬೆಲೆ ಇಳಿಮುಖ

ಇನ್ನು ಹದಿನೈದು ದಿನ ಅಥವಾ ೧ ತಿಂಗಳಲ್ಲಿ ಅಕ್ಕಿಯ ಬೆಲೆಯು ನ್ಯಾಯವಾದ ಮಟ್ಟಕ್ಕೆ ಬರುವುದೆಂದು ಕೇಂದ್ರ ಆಹಾರ ಉಪ ಮಂತ್ರಿ ಎಂ ವಿ ಕೃಷ್ಣಪ್ಪನವರು ತಿಳಿಸಿರುತ್ತಾರೆ ಭಾರತ ಸರ್ಕಾರದವರು ಮಣಕ್ಕೆ ೧೩ ರೂ ನಂತೆ ಅಕ್ಕಿಯನ್ನು ಒದಗಿಸುವರೆಂದೂ, ಇದರಿಂದ ಬೆಲೆಯು ಇಳಿಮುಖವಾಗಿದೆಯೆಂದೂ ಅವರು ಸೂಚಿಸಿರುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬ ೩ ಗೋಟುವಾದ್ಯ ೬-೧೫ ಹೆಚ್ ಎ ಸ್ವಾಮಿ ಗೀತಾವಳಿ ೬-೪೫ ಗಾನ ವಿಹಾರ ೮ ೧೫ ರವೀಂದ್ರ ಸಂಗೀತ ಮಧ್ಯಾಹ್ನ ೧೨ ಹೆಚ್ ವಿ ಕೃಷ್ಣಮೂರ್ತಿ ಮತ್ತು ಎ ವೀರಭದ್ರಯ್ಯ ಪಿಟೀಲು ೧೨-೪೦ ಗಾನ ಮಂಜರಿ ೧ ಕ್ಷೇತ್ರ ವಿಹಾರ-ಮಹಿಳೆಯರ ಕಾರ್ಯಕ್ರಮ ೧ ೩೦ ಗೋಟುವಾದ್ಯ ೨ ೧೫ ಸಂಗೀತ ಸಂಜೆ ೫.೪೦ ಮತ್ತು ೯-೧೫ ಎನ್ ಚೊಕ್ಕಮ್ಮ ವೀಣೆ. ೬-೧೫ ಎನ್ ಸುಶೀಲ ಕಾವ್ಯ ವಾಚನ ೬-೪೫ ಭಾರತೀಯ ದರ್ಶನ ಭಾಷಣ ೮ ಧೀಮಂತಶರ್ಮ ಹಿಂದೂಸ್ಥಾನಿ ಸಂಗೀತ ೯ ೪೫ ವಾರ್ತೆ ಬಳಿಕ ೧೦-೧೦ ಗುರುದೇವ ರವೀಂದ್ರರು ಸಾಂಸ್ಕೃತಿಕ ಕಾರ್ಯಕ್ರಮ

ಗ್ರಾಮಾಂತರ ಕೈಗಾರಿಕಾ ಡೈರೆಕ್ಟರ ಕಛೇರಿ ಬೆಂಗಳೂರು, ತಾ|| 1—5—1956

ನೋಟಿಫಿಕೇಷನ್

ಕೈಗಾರಿಕಾ ಎಸ್ಟೇಟ್, ಮೈಸೂರು

ಮೈಸೂರು ಯಾದವಗಿರಿ ಬಡಾವಣೆಯ ಕೈಗಾರಿಕಾ ಎಸ್ಟೇಟಿನಲ್ಲಿ ತಕ್ಷಣವೇ ಸಾಮಗ್ರಿಗಳನ್ನು ... ಗಿಸಬಲ್ಲ ಮತ್ತು ಸಣ್ಣ ಪ್ರಮಾಣದ ಪದಾರ್ಥಗಳನ್ನು ತಯಾರಿಸಬಲ್ಲ ಮತ್ತು ನೀರಿನ ಸರಬರಾಜು, ದೀಪ ಮತ್ತು ಇತರ ಸೌಕರ್ಯಗಳುಳ್ಳ ಯೂನಿಟ್ಟುಗಳು ಮತ್ತು ಭವನಗಳನ್ನು ಪೂರ್ಣಗೊಳಿಸಲಾಗುತ್ತಿದೆ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಆರಂಭಿಸಲಿಚ್ಛಿಸುವವರು ಅಥವಾ ಅಂತಹವನ್ನು ಮೈಸೂರು ನಗರದ ಇಕ್ಕಟ್ಟಾದ ಪ್ರದೇಶದಲ್ಲಿ ಇಟ್ಟುಕೊಂಡು ಎಸ್ಟೇಟಿಗೆ ವರ್ಗಾಯಿಸಬೇಕೆಂದಿರುವವರು ಗ್ರಾಮಾಂತರ ಕೈಗಾರಿಕೆಗಳ ಡೈರೆಕ್ಟರ ಟೆಕ್ನಿಕಲ್ ಅಸಿಸ್ಟೆಂಟ್ ರವರಿಗಾಗಲೀ ಅಥವಾ ಎಕ್ಸಿಕ್ಯುಟಿವ್ ಇಂಜಿನಿಯರ್ ಇಂಡಸ್ಟ್ರೀಸ್ ಡಿವಿಜನ್, ಸರ್ಕಾರಿ ಸೋಪ್ ಫ್ಯಾಕ್ಟರಿ ಭವನ, ಬೆಂಗಳೂರು-3 ಈ ವಿಳಾಸದವರಿಗಾಗಲೀ ಹೆಚ್ಚಿನ ವಿವರಗಳಿಗೆ ಬರೆದುಕೊಳ್ಳಬಹುದು

ಬಿ. ಜಿ ರಂಗಪ್ಪ,
ಗ್ರಾಮಾಂತರ ಕೈಗಾರಿಕಾ ಡೈರೆಕ್ಟರ್
ಬೆಂಗಳೂರು

SREE GANESH TALKIES

From 9-5-56 For 3 Days

THIS ISLAND EARTH

TO-MORROW LAST DAY

ಹರಾಜು ನೋಟೀಸು

ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಅವುಗಳ ಮುಂದೆ ನಮೂದಿಸಿರುವ ಸ್ಥಳ ಮತ್ತು ತಾರೀಕುಗಳಲ್ಲಿ ಬಹಿರಂಗವಾಗಿ ಹರಾಜು ಮಾರಾಟ ಮಾಡಲಾಗುತ್ತದೆ.

1) ಸುಮಾರು 50 ಟನ್ ಮಿಶ್ರವಾದ ತೇಗದ ಮರ ಮತ್ತು ಕಾಡು ಮರದ ತರೋಟು ತುಂಡುಗಳನ್ನೂ 2) ಸುಮಾರು 50 ಟನ್ ಮಿಶ್ರವಾದ ಗರಗಸದ ಮತ್ತು ಹತ್ತಾರಿ ಹೊಟ್ಟುಗಳನ್ನೂ	10 5.56ನೇ ಗುರುವಾರ ಬೆಳಿಗ್ಗೆ 1... ಘಂಟೆಗೆ ಮೈಸೂರು ಸೌತ್ ಸದರ್ ... ಕೈಲ್ಲಿ ವರ್ಕ್‌ಷಾಪ್ ಆವರಣದಲ್ಲಿ
3) ಸುಮಾರು 6 ಟನ್ ಹಾಳಾಯಿ ಮರದ ಪೆಟ್ಟಿಗೆ ಮತ್ತು ಹಲಗೆಗಳನ್ನೂ	10 5 56ನೇ ಗುರುವಾರ ಬೆಳಿಗ್ಗೆ 1... ಘಂಟೆಗೆ ಮೈಸೂರು ಸೌತ್ ಸದರ್ ... ಕ್ಸ್ ಸೆಂಟ್ರಲ್ ಸ್ಟೋರ್ಸ್ ಆವರಣದಲ್ಲಿ

ಈ ಮಾರಾಟಕ್ಕೆ ಅನ್ವಯಿಸುವ ನಿಬಂಧನೆಗಳ ನಮೂನೆಯನ್ನು ಕೆಳಗೆ ನಮೂದಿಸಿರುವ ಆಫೀಸಿನಲ್ಲಿ ಪಡೆಯಬಹುದು

ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋರ್ಸ್,
ಸದರ್ ಕೈಲ್ಲಿ, ಮೈಸೂರು ಸೌತ್

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿ ಪತ್ರಿಕೆ ೩ ಕಾಸು

ಚಂದಾದರ

ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೮೪] SADHVI : TUESDAY 8-5-1956 ಮೈಸೂರು ಮಂಗಳವಾರ : ೮-೫-೧೯೫೬ [ಸಂಚಿಕೆ : ೨೦೭

- ಕಲ್ಕತ್ತದಲ್ಲಿ ೯೫೦ ಜನ ಪ್ರದರ್ಶನಕಾರರ ಬಂಧನ -

ನ್ಯೂಸ್ ಪ್ರಿಂಟ್ ಕಾಗದದ ಮೇಲೆ ಆಕ್ಟ್ರಾಯ್ ತೆರಿಗೆ ರದ್ದು

ಪೌರಸಭೆಯ ನಿರ್ಣಯ

ಮೈಸೂರು ೮

ನಗರಕ್ಕೆ ತರಿಸಲಾಗುವ ನ್ಯೂಸ್ ಪ್ರಿಂಟ್ ಕಾಗದದ ಮೇಲೆ ಆಕ್ಟ್ರಾಯ್ ಸುಂಕವನ್ನು ರದ್ದು ಮಾಡಲು ನೆನ್ನೆ ಪುರಸಭೆಯ ಮುಂದುವರಿದ ಅಧಿವೇಶನದಲ್ಲಿ ಸರ್ವಾನುಮತದಿಂದ ಒಪ್ಪಲಾಯಿತು. ಶ್ರೀ ವಿನಾಡ್ ನರಸಿಂಹುಲುರವರು ಕಾನೂನು ಅಂಶಗಳ ದೃಷ್ಟಿಯಿಂದ ಕೇವಲ "ನ್ಯೂಸ್ ಪ್ರಿಂಟ್ ಪೇಪರ್" ಎನ್ನುವ ಬದಲು "ಜ್ಞಾನ ಪ್ರಸಾರಕ್ಕಾಗಿ ಉಪಯೋಗಿಸಲಾಗುವ ಕಾಗದ" ಎಂದು ತಿದ್ದುಪಡಿ ಮಾಡಬೇಕೆಂದು ಸೂಚಿಸಿದಾಗ ಅಧ್ಯಕ್ಷರು ಉತ್ತರವಿತ್ತು ನ್ಯೂಸ್ ಪ್ರಿಂಟ್ ಕಾಗದವನ್ನು ಈಗಾಗಲೇ ಆ ಕಾರ್ಯಕ್ಕೆ ಬಳಸಲಾಗುತ್ತಿದೆಯೆಂದೂ, ತಿದ್ದುಪಡಿಯ ಅವಶ್ಯಕವಿಲ್ಲವೆಂದೂ ಸೂಚಿಸಿದರು. ಅನಂತರ ಶ್ರೀ ಮುಸೀನರು ಅದನ್ನು ವಾಪಸು ಪಡೆದರು.

ಶಂಕರ ಜಯಂತಿ ಉತ್ಸವ

ರಾಜಧಾನಿಯ ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ಇದೇ ತಿಂಗಳು ೧೬ ರಿಂದ ಮೊದಲ್ಗೊಂಡು ದ್ವಾದಶಿ ಸೋಮವಾರ ಪೂರ್ತಿ ಶ್ರೀ ಶಂಕರ ಜಯಂತಿ ಮಹೋತ್ಸವವನ್ನು ಶ್ರೀ ನಯನೇಶ್ವರಸ್ವಾಮಿ ದೇವಾಲಯ ಮತ್ತು ಸಂಸ್ಕೃತ ಮಹಾ ಪಾಠಶಾಲೆಗಳಲ್ಲಿ ನೆರವೇರಿಸಲಾಗುವುದು. ಅಭಿಷೇಕ, ಪಾರಾಯಣ, ಉತ್ಸವ, ಪಾನಕಪೂಜೆ, ಉಪನ್ಯಾಸ, ಹರಿಕಥೆ, ಆದ್ವೈತ ಪ್ರಕರಣ ಗ್ರಂಥಗಳ ಪರೀಕ್ಷೆ ಮುಂತಾದುವು ನಡೆಯುತ್ತವೆ. ಆಸ್ತಿಕ ಮಹಾಶಯರು ಧಾರಾಳವಾಗಿ ಸಹಾಯ ಮಾಡಬೇಕೆಂದು ಕೋರಲಾಗಿದೆ.

ರಾಮ ಪಟ್ಟಾಭಿಷೇಕ

ರಾಜಧಾನಿಯ ಶ್ರೀರಾಂಪೇಟೆ ಎಂ. ಕೆ. ಹಾಸ್ಟೆಲಿನಲ್ಲಿರುವ ಶ್ರೀ ಸೀತಾರಾಮ ಮಂದಿರದಲ್ಲಿ ನಾಳೆ ಶ್ರೀ ರಾಮ ಪಟ್ಟಾಭಿಷೇಕವು ನೆರವೇರುವುದು. ನಾಳಿದ್ದು ಸಂಜೆ ೬ ಗಂಟೆಗೆ ಹನುಮಂತೋತ್ಸವವೂ ನಡೆಯುವುದು.

ಅಟ್ಲಾಂಟಿಕ್ ರಾಷ್ಟ್ರಗಳಿಗೆ ಅಮೆರಿಕದ ಅಣು ಶಸ್ತ್ರಾಸ್ತ್ರ

ಉತ್ತರ ಅಟ್ಲಾಂಟಿಕ್ ರಾಷ್ಟ್ರಗಳಿಗೆ ಅಮೆರಿಕವು ಅಣು ಶಸ್ತ್ರಾಸ್ತ್ರಗಳನ್ನು ಒದಗಿಸುವ ವಿಷಯವು ಆಲೋಚನೆಯಲ್ಲಿರುವುದಾಗಿ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರು ತಿಳಿಸಿರುತ್ತಾರೆ. ಯೂರೋಪಿನಲ್ಲಿರುವ ಅಮೆರಿಕಾ ಸೈನ್ಯಗಳಿಗೆ ಅಣು ಶಕ್ತಿಯ ವಾಯು ಅಸ್ತ್ರಗಳನ್ನು ಒದಗಿಸಲಾಗುವುದೆಂದು ಹೇಳಲಾಗಿದೆ.

ಭಿಕ್ಷುಕರ ದರೋಡೆಗಾಗಿ ಪೋಲೀಸರಿಗೆ ಸಜಾ

ಬೆಂಗಳೂರಿನಲ್ಲಿ ಶಿವಸಿಂಗ್ ಮತ್ತು ಚನ್ನಯ್ಯ ಎಂಬ ಇಬ್ಬರು ಪೋಲೀಸರು ಮೂರು ಜನ ಭಿಕ್ಷುಕರನ್ನು ನಾಯಗೊಳಿಸಿ ಅವರ ಬಳಿ ಇದ್ದ ರೂ ೨೫-೧೦-೬ ಗಳನ್ನು ಕಿತ್ತುಕೊಂಡುದು. ಅವರಿಬ್ಬರಿಗೂ ತಲಾ ೧ ತಿಂಗಳು ಕಠಿಣ ಸಜಾ ಮತ್ತು ೫೦ ರೂ ದಂಡ, ತಪ್ಪಿದರೆ ಮತ್ತೊಂದು ತಿಂಗಳ ಸಜಾವನ್ನು ವಿಧಿಸಲಾಗಿದೆ.

ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಪ್ರಾದೇಶಿಕ ಗೋಷ್ಠಿ

ವೈಸ್ ಚಾನ್ಸೆಲರ್ ದಿಸೌಜಾರವರ ಆರಂಭ ಭಾಷಣ

ಮೈಸೂರು ೮

ಮೈಸೂರು, ತಿರುವಾಂಕೂರು ಮತ್ತು ಕೊಡಗು ಸಂಸ್ಥಾನಗಳ ಮುಖ್ಯೋಪಾಧ್ಯಾಯರು ಮತ್ತು ವಿದ್ಯಾಧಿಕಾರಿಗಳ ಪ್ರಾದೇಶಿಕ ಗೋಷ್ಠಿಯ ಆರಂಭೋತ್ಸವವನ್ನು ನೆನ್ನೆ ವೈಸ್ ಚಾನ್ಸೆಲರ್ ಶ್ರೀ ಪಿ. ಎಲ್. ದಿಸೌಜಾರವರು ನೆರವೇರಿಸಿದರು. ಅವರು ಭಾಷಣ ಮಾಡಿ, ಉಪಾಧ್ಯಾಯರು ನೂತನ ಸನ್ನಿವೇಶ ಮತ್ತು ಹೊಸ ವಿದ್ಯಾಭ್ಯಾಸ ಪದ್ಧತಿಗೆ ಹೊಂದಿಕೊಳ್ಳಬೇಕೆಂದು ತಿಳಿಸಿದರು. ಇದುವರೆಗೆ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಲಕ್ಷ್ಯ ಮಾಡಲಾಗುತ್ತಿತ್ತೆಂದೂ, ಈಗ ಆ ವಿದ್ಯಾಭ್ಯಾಸವನ್ನು ಉಪಯುಕ್ತ ವೃತ್ತಿಗಳಿಗೆ ಕಲಿಸಬೇಕಾಗಿರುವುದರಿಂದ ಪ್ರೌಢಶಾಲಾ ಉಪಾಧ್ಯಾಯರ ಜವಾಬ್ದಾರಿ ಹೆಚ್ಚಿದೆಯೆಂದೂ, ಅವರುಗಳು ದೇಶದ ವಿದ್ಯಾಭ್ಯಾಸದ ತಳಹದಿಯನ್ನು ಹಾಕುತ್ತಿದ್ದಾರೆ. ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ಶಿಕ್ಷಣವನ್ನು ಒದಗಿಸುವುದೇ ಅಲ್ಲದೆ, ವಿದ್ಯಾರ್ಥಿಗಳ ಎಳೆಯ ವಯಸ್ಸಿನಲ್ಲಿ ವಿದ್ಯಾರ್ಥಿಗಳ ಅನುಭವಗಳನ್ನು ಬೆಳೆಸಬೇಕೆಂದು ಗೋಷ್ಠಿಯ ಸಮಿತಿಯ ವರದಿಯ ಶಿಫಾರಸು ಸರಿಯಾಗಿದೆಯೆಂದೂ, ಒನ್ನೆ ವಯಸ್ಸೇ ಸರಿಯಾದ ಕಾಲವೆಂದೂ ಅವರು ಅಭಿಪ್ರಾಯಪಟ್ಟರು.

ಮೊದಲು ಗೋಷ್ಠಿಯ ಡೈರೆಕ್ಟರ್ ಶ್ರೀ ಸಿ. ರಂಗಾಚಾರ್ಯರು ಪ್ರಾದೇಶಿಕ ಗೋಷ್ಠಿಗಳ ಮಹತ್ವವನ್ನು ವಿವರಿಸಿದರು. ಮೈಸೂರು, ತಿರುವಾಂಕೂರು ಮತ್ತು ಕೊಡಗಿನ ಪ್ರತಿನಿಧಿಗಳೂ ಭಾಷಣ ಮಾಡಿದರು.

ಸಂಸ್ಥಾನದಲ್ಲಿ ಆಹಾರದ ಬೆಲೆ ಶೇಕಡ ೩೦ರಷ್ಟು ಹೆಚ್ಚು

ಲೋಕಸಭೆಯಲ್ಲಿ ಕೇಂದ್ರ ಉಪ ಮಂತ್ರಿ ಕೃಷ್ಣಪ್ಪನವರ ಹೇಳಿಕೆ

ಲೋಕಸಭೆಯಲ್ಲಿ ನೆನ್ನೆ ಹರೀಂದ್ರನಾಥ ಚಟ್ಟೋಪಾಧ್ಯಾಯರು ಮೈಸೂರು ಸಂಸ್ಥಾನದಲ್ಲಿ ಶೇಕಡ ೧೨೦ರಷ್ಟು ಆಹಾರದ ಬೆಲೆ ಏರುತ್ತಿದೆಯೇ ಎಂದು ಕೇಳಲಾಗಿ, ಕೇಂದ್ರ ಆಹಾರ ಮಂತ್ರಿ ಎಂ. ವಿ. ಕೃಷ್ಣಪ್ಪನವರು ಉತ್ತರವಿತ್ತು ಶೇಕಡ ೩೦ರಷ್ಟು ಹೆಚ್ಚಿರುವುದೆಂದು ಹೇಳುವುದು ಉತ್ಪ್ರೇಕ್ಷೆಯೆಂದೂ, ಒರಟು ಧಾನ್ಯಗಳ ಬೆಲೆಯು ಅಷ್ಟೊಂದು ಹೆಚ್ಚಿಲ್ಲವೆಂದೂ, ಒಳ್ಳೆಯ ರಾಗಿ ಅಕ್ಕಿ ಬೆಲೆಯು ೫೦ ರಷ್ಟು ಹೆಚ್ಚಿರಬಹುದೆಂದೂ ತಿಳಿಸಿದರು. ಫಿರೋಜ್ ಗಾಂಧಿಯವರು ಮಾತನಾಡಿ, ಬ್ಯಾಂಕುಗಳ ವಶದಲ್ಲಿರುವ ಆಹಾರ ಧಾನ್ಯವನ್ನು ಸರ್ಕಾರದವರು ಕಿತ್ತುಕೊಳ್ಳಬಾರದೇ, ಎಂದು ಕೇಳಲಾಗಿ ಕೇಂದ್ರ ಆಹಾರ ಮಂತ್ರಿ ಜೈನರು ಆಹಾರದ ಪರಿಸ್ಥಿತಿಯು ಹತೋಟಿಯಲ್ಲಿರುವುದೆಂದೂ, ಸರ್ಕಾರದವರು ಶಾಸ್ತ್ರ ಕ್ರಮ ಕೈಗೊಂಡಿರುವರೆಂದೂ, ಎಲ್ಲಾ ಕಾಲಗಳಲ್ಲೂ ಎಲ್ಲಾ ಕ್ರಮ ಕೈಗೊಳ್ಳುವುದು ಅವಶ್ಯಕವಲ್ಲವೆಂದೂ ಹೇಳಿದರು.

ವಿ॥ ಎ. ರಾಮರತ್ನಂರವರು

ಸಂಗೀತ ಕಛೇರಿ

ಮೈಸೂರು ೮

ನಾಳೆ ಸಂಜೆ ೬॥ ಗಂಟೆಗೆ ಬಿ. ದಮ್ಮಯ್ಯಾ ಅವರ ಪತ್ರಿಕಾ ಶಾಖೆಯ "ಸಾಧ್ವಿ" ಪತ್ರಿಕಾಲಯದಲ್ಲಿ ಆ॥ ವಿ। ಗೋಟುವಾದ್ಯಂ ಎಸ್. ನಾರಾಯಣ ಅಯ್ಯಂಗಾರ್ಯರ ಮಕ್ಕಳು ವಿ॥ ಎ. ರಾಮರತ್ನಂರವರ ಗಾಯನವು ವಿ॥ ವೆಂಕಟಾಚಾರ್ಯರ ಪಿಟೀಲು ಮತ್ತು ವಿ॥ ಎ. ರಾಮರಾಯರ ಮೃದಂಗದೊಡನೆ ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ.

ಕಲ್ಕತ್ತದ ೯೫೦ ಜನ ಪ್ರದರ್ಶನಕಾರರ ಬಂಧನ

ಕಲ್ಕತ್ತದಲ್ಲಿ ಸಭೆ ಮತ್ತು ಮೆರವಣಿಗೆಗಳ ನಿಷೇಧಾಜ್ಞೆಯನ್ನು ನೆನ್ನೆ ಉಲ್ಲಂಘಿಸಿದ ಮಹಾಭಾರತ ಲೋಕ ಸೇವಕ ಸಂಘದ ೯೫೦ ಮಂದಿ ಸ್ವಯಂಸೇವಕರನ್ನು ಪೋಲೀಸರು ಬಂಧಿಸಿದರು. ೭೫ ವರ್ಷದ ಅತುಲ್ಯಘೋಷ್ ಎಂಬುವರ ನೇತೃತ್ವದಲ್ಲಿ ಅವರುಗಳು ೧೭೫ ಮೈಲಿ ದೂರದಿಂದ ಕಲ್ಕತ್ತಕ್ಕೆ ನಡೆದುಬಂದಿದ್ದರು. ಪಶ್ಚಿಮ ಬಂಗಾಳಕ್ಕೆ ಬಿಹಾರಿನ ಹಲವು ಗಡಿ ಭಾಗಗಳನ್ನು ಸೇರಿಸಬೇಕೆಂದು ಪ್ರದರ್ಶನಕಾರರು ಒತ್ತಾಯ ಪಡಿಸಿದರು.

ಬೆಂಗಳೂರು ಕುದುರೆ ಜೂಜಿಗೆ ರಹದಾರಿ

ಬೆಂಗಳೂರು ಕುದುರೆ ಜೂಜು ನಡೆಸಲು ಸರ್ಕಾರದವರು ಕ್ಲಬ್ಬಿಗೆ ರಹದಾರಿ ಕೊಟ್ಟಿರುತ್ತಾರೆ. ಜೂನ್ ತಿಂಗಳು ೧೬, ೧೭, ೨೩, ೨೪, ೩೦, ಜುಲೈ ೧, ೭, ೮, ೧೫, ೧೪, ೨೨, ೨೯, ಮತ್ತು ಆಗಸ್ಟ್ ೧, ೪ ಮತ್ತು ೫ನೇ ತಾರೀಖುಗಳಲ್ಲಿ ಜೂಜನ್ನು ನಡೆಸಲಾಗುವುದು.

ಮೊಲಗಳ ಶಿಕಾರಿಗಾಗಿ ೯ ಜನರಿಗೆ ದಂಡ

ಗುಂಡ್ಲುಪೇಟೆ ತಾಲ್ಲೂಕು ಬಂಡೀಪುರದ ವನ್ಯಮೃಗ ರಕ್ಷಣಾ ಪ್ರದೇಶದಲ್ಲಿ ಕಾಡು ಮೊಲಗಳನ್ನು ಶಿಕಾರಿ ಮಾಡಿದರೆಂದು ಕೆಡುಗಾರರ ಮತ್ತು ಇತರ ೮ ಜನರಿಗೆ ನಂಜನಗೂಡು ನ್ಯಾಯಾಧೀಶರು ತಲಾ ೨೫ ರೂ ದಂಡವನ್ನು ವಿಧಿಸಿರುತ್ತಾರೆ.

ಪಿರಿಯಾಪಟ್ಟಣ ಕ್ಷೇತ್ರದಿಂದ ಚುನಾವಣೆ

ಕಾಂಗ್ರೆಸ್ ಸಮಿತಿಗಳ ಸಭೆಯಲ್ಲಿ ಚನ್ನಬಸಪ್ಪನವರ ಹೆಸರಿನ ಸೂಚನೆ

ಮೈಸೂರು ೮

ಮೈಸೂರು ಜಿಲ್ಲಾ ಮತ್ತು ಪಿರಿಯಾಪಟ್ಟಣ ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಜಂಟಿ ಸಭೆಯು ನೆನ್ನೆ ಪಿರಿಯಾಪಟ್ಟಣದಲ್ಲಿ ಸೇರಿ, ಆ ತಾಲ್ಲೂಕು ಕ್ಷೇತ್ರದಿಂದ ಸಂಸ್ಥಾನದ ವಿಧಾನ ಸಭೆಗೆ ನಡೆಯುವ ಉಪ ಚುನಾವಣೆಯಲ್ಲಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರನ್ನು ಕಾಂಗ್ರೆಸ್ ಉಮೇದವಾರರಾಗಿ ಆರಿಸಬೇಕೆಂದು ಶಿಫಾರಸು ಮಾಡಿತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರೂ ಸಭೆಯಲ್ಲಿ ಭಾಗವಹಿಸಿದ್ದರು.

ಕ್ರೈಸ್ತರ ಸಭೆಗಳಲ್ಲಿ ದೇಶೀಯ ಕ್ರೈಸ್ತರ ಓಟಿನ ಹಕ್ಕು

ಶ್ರೀ ಜೆ. ಸ್ವಾಮಿದಾಸರು ಪತ್ರ ಬರೆದು ಈ ರೀತಿ ತಿಳಿಸಿರುತ್ತಾರೆ:—

ದಕ್ಷಿಣ ಇಂಡಿಯಾ ಕ್ರಿಸ್ತ ಸಭೆಗೆ ಸೇರಿರುವ ಮೈಸೂರು ನಗರದ ಉದಿಗರ ವೆಸ್ಲಿ ದೇವಾಲಯ ಮತ್ತು ಹಾರ್ಡ್ವಿಕ್ ದೇವಾಲಯಗಳಲ್ಲಿ ಸಭಾ ನಾಯಕರ ಚುನಾವಣೆಗಳು ಮೂರು ವಾರಗಳ ಹಿಂದೆ ಆಗಬೇಕಾಗಿದ್ದು ಮೂರನೇ ಒಂದು ಭಾಗದವರು ಬರದಿದ್ದ ಪ್ರಯುಕ್ತ ಮುಂದುವರಿಸಲ್ಪಟ್ಟವು. ಈ ತಿಂಗಳು ೧೩ರಲ್ಲಿ ವೆಸ್ಲಿ ದೇವಾಲಯದಲ್ಲೂ, ೨೦ರ ತರುವಾಯ ಹಾರ್ಡ್ವಿಕ್ ದೇವಾಲಯದಲ್ಲೂ ಚುನಾವಣೆಗಳು ನಡೆಸಲ್ಪಡುವುವು. ಅವುಗಳಿಗೆ ಬರುವ ಓಟರುಗಳಿಗೆ ಸಭಾ ಕಂದಾಯ (ಕ್ಲಾಸ್‌ಮನಿ) ಹಾಕುವುದು ಸರಿಯಲ್ಲ. ರಾತ್ರಿ ಭೋಜನದವರಲ್ಲವೆಂದು ಕಾರಣ ಓಟು ಹಾಕುವ ಹಕ್ಕನ್ನು ಕಿತ್ತುಕೊಳ್ಳಬಾರದು.

ಹಾರ್ಡ್ವಿಕ್ ಸ್ಕೂಲಿನಲ್ಲಿ ಅನ್ಯಾಯಕ್ಕೆ ಗುರಿಯಾದುದರಿಂದ ಹಂಗಾಮಿಯಾಗಿ ಬಂದಿರುವ ಮುಖ್ಯೋಪಾಧ್ಯಾಯ ಶ್ರೀ ಜೆ. ಜೆ. ಜಾರ್ಜ್‌ರವರನ್ನು ಹಿಂದಿನ ಸ್ಥಾನಕ್ಕೆ ಕಳುಹಿಸಬೇಕು.

ಆಂಗ್ಲೇಯರು ಈ ದೇಶವನ್ನು ಬಿಟ್ಟುಹೋಗಿರುತ್ತಾರೆ. ಇಂದು ನಮ್ಮ ದೇಶವು ಸ್ವತಂತ್ರವಾಗಿದೆ. ಆದರೆ ಧರ್ಮ ಪ್ರಚಾರಕ್ಕೆಂದು ಆಂಗ್ಲ ಮಿಷನರಿಗಳು ಈ ದೇಶದ ಸಭೆಗಳಲ್ಲಿ ತಮ್ಮ ವಿಧಿ ನಿಯಮಗಳನ್ನೇ ಒತ್ತಾಯ ಮಾಡಬಾರದು. ದೇಶೀಯ ಕ್ರೈಸ್ತರು ಇಲ್ಲಿನ ಆಚಾರ ಸಂಪ್ರದಾಯಗಳಿಗೆ ಹೊಂದಿ ತಮ್ಮ ಇಷ್ಟಾನುಸಾರ ಸಮಾಜವನ್ನು ನಿರ್ವಹಿಸಲು ಅವಕಾಶ ವಿರಬೇಕು.

ನಗರದಲ್ಲಿರುವ ೩ ಕ್ರೈಸ್ತ ದೇವಾಲಯಗಳ ಒಟ್ಟು ೩,೦೦೦ ಜನ ಓಟರುಗಳಲ್ಲಿ ಕೇವಲ ೬೧೦ ಮಂದಿ ಅರ್ಹರಾದವರೆಂದು ಪರಿಗಣಿಸಿರುವುದೂ, ಹಾರ್ಡ್ವಿಕ್ ಶಾಲೆಯ ಸಮಸ್ಯೆಯನ್ನು ಬಗೆಹರಿಸುವುದೂ ಮಿಷನರಿಗಳಿಗೆ ಸೇರಿರುತ್ತದೆ.

○ ಜೇನು ಕಪ್ಪದಲ್ಲೇ ಮೋಟಾರು ಕಾರು, ವಿಮಾನ, ಟ್ರಾಕ್ಟರು ಮುಂತಾದುವನ್ನು ತಯಾರಿಸುವುದಾಗಿ ವರದಿಯಾಗಿದೆ.

ಆಸ್ಪತ್ರೆಯ ಕೊಪಡಿ ಕಳ್ಳ ಸಾಗಾಣಿಕೆ ಪತ್ತೆಗಾಗಿ ಬಹುಮಾನ

ಮೈಸೂರು ೮

ಪೌರಸಭೆಯ ಮುಂದುವರಿದ ಅಧಿವೇಶನವು ನೆನ್ನೆ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಪುರಸಭೆಯ ಆಸ್ಪತ್ರೆಯ ಇಲಾಖೆಯಲ್ಲಿ ಪತ್ತೆ ಮುಚ್ಚುವರ್ಜ ವಹಿಸಿ ಕಳ್ಳ ಸಾಗಾಣಿಕೆ ಪತ್ತೆ ಮಾಡಿದ ಅಧಿಕಾರಿಗಳು ಮತ್ತು ನೌಕರರಿಗೆ ಸಂಭಾವನೆ ಕೊಡಲು ೧,೫೦೦ ರೂ ಗಳ ಬೇಡಿಕೆಯೊಂದು ಸಭೆಯ ಪರಿಶೀಲನೆಗೆ ಬಂದಿತು ನೂರಾರು ರೂ. ಸಂಬಳ ಪಡೆಯುವ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಿದಾಗ ಅವರಿಗೆ ಪ್ರತ್ಯೇಕ ಸಂಭಾವನೆ ಕೊಡುವುದನ್ನು ಶ್ರೀ ಮಾರ್ ನೂರ್ ಹುಸೇನರು ಆಕ್ಷೇಪಿಸಿದರು ಮತ್ತು ಕಳ್ಳ ಸಾಗಾಣಿಕೆಯ ಬಗ್ಗೆ ಸುದ್ದಿ ಕೊಡುವವರಿಗೆ ಬಹುಮಾನವನ್ನು ಏಕೆ ಕೊಡಬಾರದೆಂದೂ ಪ್ರಶ್ನಿಸಿದರು.

ಅಧ್ಯಕ್ಷರು ಉತ್ತರವಿತ್ತು, ಆ ರೀತಿ ಸುದ್ದಿ ಕೊಡುವವರಿಗೆ ಆಡಳಿತದಿಂದ ಸಮೂಲಾವ ಪುಲ್ಯಾನೆಯಲ್ಲಿ ಅರ್ಧವಷ್ಟನ್ನು ಕೊಡುವ ಪದ್ಧತಿಯಿದೆಯೆಂದೂ, ಅವರುಗಳು ಎಮರಿಸಬಹುದಾದ ಅಪಾಯವನ್ನು ಗಮನಿಸಿದರೆ ಈಗ ಕೊಡಬೇಕೆಂದಿರುವ ಮೊಬಲಗು ಸ್ವಲ್ಪವೂ ಸಾಲದೆಂದೂ, ದಂಡದ ಹಣದಿಂದಲೇ ಬಹುಮಾನ ಕೊಡಲಾಗುತ್ತಿದೆಯೆಂದೂ ಹೇಳಿದರು ಅಧಿಕಾರಿಗಳನ್ನುಳಿದು ಇತರ ನೌಕರರಿಗೆ ಏಕೆ ಸಂಭಾವನೆ ಕೊಡಬಾರದೆಂದು ಶ್ರೀ ಎಂ ಎನ್ ತಿಮ್ಮಯ್ಯನವರು ಪ್ರಶ್ನಿಸಿದಾಗ ೩ ಜನ ನೌಕರರಿಗೆ ಸಂಭಾವನೆ ಕೊಡಲಾಗುವುದೆಂದು ಅಧ್ಯಕ್ಷರು ಉತ್ತರವಿತ್ತರು

ಮಿಷನ್ ಆಸ್ಪತ್ರೆಗೆ ಕೊಡುತ್ತಿರುವ ಗ್ರಾಂಟನ್ನು ನಿಲ್ಲಿಸಬೇಕೆಂಬ ಆಡಳಿತ ಸಮಿತಿಯ ತೀರ್ಮಾನವು ಸಭೆಯ ಪರಿಶೀಲನೆಗೆ ಬಂದಾಗ ಅದನ್ನು ಹಲವು ಸದಸ್ಯರು ಟೀಕಿಸಿದರು ಒಂದೆಡೆ ಗ್ರಾಂಟುಗಳನ್ನೇ ನಿಲ್ಲಿಸಬೇಕೆಂದು ಹೇಳುತ್ತಾ, ಕೆಲವಕ್ಕೆ ನಿಲ್ಲಿಸಿ ಕೆಲವಕ್ಕೆ ಕೊಡಲಾಗುತ್ತಿದೆಯೆಂದು ಆಕ್ಷೇಪಿಸಲಾಯಿತು ಈ ಸಂಸ್ಥೆಗೆ ಮಾತ್ರವೇ ಗ್ರಾಂಟ್ ನಿಲ್ಲಿಸುವ ತೀರ್ಮಾನವನ್ನು ಶ್ರೀ ಕುಟ್ಟಿನೋರವರು ಪ್ರತಿಭಟಿಸಿದರು ಶ್ರೀ ಕೆ ಪುಟ್ಟಸ್ವಾಮಿಯವರು ಆ ಸಂಸ್ಥೆಯ ಸೇವೆಯನ್ನು ಕೊಂಡಾಡಿ, ಅದಕ್ಕೆ ಗ್ರಾಂಟ್ ನಿಲ್ಲಿಸುವುದನ್ನು ವಿರೋಧಿಸಿದರು

ಶ್ರೀ ಎಂ ಕೆ ಲಿಂಗಯ್ಯ ಮತ್ತು ಶ್ರೀ ಬಿ ಕೆ ಪುಟ್ಟಯ್ಯನವರು ಮಾತನಾಡಿ, ಈಗ ಆ ಆಸ್ಪತ್ರೆಯಲ್ಲಿ ಪ್ರತಿಯೊಂದಕ್ಕೂ ಹಣವನ್ನು ವಸೂಲ್ ಮಾಡುತ್ತಿದ್ದಾರೆಂದೂ, ಅದನ್ನು ಬಿಟ್ಟು ಅವರು ಹಿಂದೆ ನಡೆಸುತ್ತಿದ್ದ ಸೇವಾ ಕಾರ್ಯವನ್ನು ಈಗಲೂ ಮುಂದುವರಿಸಿದರೆ ಗ್ರಾಂಟ್ ಕೊಡಬಹುದೆಂದೂ ನುಡಿದರು ಆ ವಿಷಯವನ್ನು ಗ್ರಾಂಟ್ಸ್ ಪರಿಶೀಲನಾ ಸಮಿತಿಯ ವಿಚಾರಣೆಗೆ ಒಪ್ಪಿಸಲಾಯಿತು

ನೂತನ ಶಾಸನ ಸಭೆಗಳ ಅಧ್ಯಕ್ಷರ ಚುನಾವಣೆ

ಅಕ್ಟೋಬರ್ ೧ರೊಳಗೆ ಸ್ಥಾಪಿಸಲ್ಪಡುವ ನೂತನ ಪ್ರಾಂತ ಶಾಸನ ಸಭೆಗಳು ತಮ್ಮ ಅಧ್ಯಕ್ಷರು, ಉಪಾಧ್ಯಕ್ಷರುಗಳನ್ನು ಆರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗುವುದೆಂದೂ, ಈ ಬಗ್ಗೆ ದೆಹಲಿಯಲ್ಲಿ ಸೇರಿದ್ದ ಮುಖ್ಯ ಮಂತ್ರಿಗಳು ಮತ್ತು ಕೇಂದ್ರ ಗೃಹ ಮಂತ್ರಿಯವರ ಸಭೆಯಲ್ಲಿ ಒಪ್ಪಿಗೆಯಾಗಿರುವುದೆಂದೂ ತಿಳಿದುಬಂದಿದೆ

Pulv
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71/1 A S Street,
BANGALORE-2

ಪಶ್ಚಿಮ ರಾಷ್ಟ್ರಗಳ ರಾಜಕೀಯ ಚಾಕಚಕ್ಯತೆಗಾಗಿ ಸಮಿತಿ

ಪಶ್ಚಿಮ ರಾಷ್ಟ್ರಗಳ ರಾಜಕೀಯ ಮತ್ತು ಆರ್ಥಿಕ ಚಾಕಚಕ್ಯತೆಯನ್ನು ಅರಿತು ಯೋಜನೆಯೊಂದನ್ನು ಸಿದ್ಧಗೊಳಿಸಲು ಅಟ್ಲಾಂಟಿಕ್ ಕೌಲು ರಾಷ್ಟ್ರ ಮಂಡಲಿಯು ೩ ಜನ ಬುದ್ಧಿಶಾಲಿಗಳ ಸಮಿತಿಯೊಂದನ್ನು ನೇಮಿಸಿದೆ ಈ ಮೂವರು ವೈಯಕ್ತಿಕವಾಗಿ ಕೆಲಸ ಮಾಡಬೇಕೆಂದೂ, ತಮ್ಮ ದೇಶಗಳ ಪ್ರತಿನಿಧಿಗಳಾಗಿ ಕೆಲಸ ನಡೆಸಬಾರದೆಂದೂ ತಿಳಿಸಲಾಗಿದೆ ಕೆನಡದ ಲೆಸ್ಟರ್ ಪಿಯರ್ಸನ್, ನಾರ್ವೆಯ ಹಾಲ್ವರ್ಡ್ ಲಾಂಗ್ ಮತ್ತು ಇಟಲಿಯ ಗೇಟ್ಯಾನೋ ಮಾರ್ಟಿನೋ ಎಂಬ ಮೂವರು ವಿದೇಶಾಂಗ ಮಂತ್ರಿಗಳನ್ನು ಇದಕ್ಕೆ ನೇಮಿಸಲಾಗಿದೆ

ಹಾವುಗಳು ಕಡಿದು ಎರಡು ಮಕ್ಕಳ ಮರಣ

ಪುಜುಕ್ಕುಲ ಎಂಬಲ್ಲಿ ಕಳೆದ ೩ನೇ ತಾರೀಕು ರಾತ್ರಿ ಒಂದು ಮನೆಯಲ್ಲಿ ೧೦ ವರ್ಷದ ಬಾಲಕ ಮತ್ತು ೧೨ ವರ್ಷದ ಬಾಲಕಿಯು ಮಲಗಿದ್ದಾಗ ಮನೆ ಮೇಲ್ಛಾವಣಿಯಿಂದ ಎರಡು ನಾಗರ ಹಾವುಗಳು ಕೆಳಗೆ ಬಿದ್ದು ಮಕ್ಕಳನ್ನು ಕಚ್ಚಿದುವೆಂದೂ ಇಬ್ಬರೂ ಮೃತಪಟ್ಟರೆಂದೂ ವರದಿಯಾಗಿದೆ

ಗೋಲ್ಡ್ ಕೋಸ್ಟಿಗೆ ಪೂರ್ಣ ಸ್ವಾತಂತ್ರ್ಯ

ಆಫ್ರಿಕದ ಗೋಲ್ಡ್ ಕೋಸ್ಟ್ ದೇಶವು ಬರುವ ವರ್ಷ ಮಾರ್ಚಿ ೬ನೇ ತಾರೀಕು ವಿಧಿವತ್ತಾದ ಸ್ವಾತಂತ್ರ್ಯ ಪಡೆದಿರುವುದಾಗಿ ಘೋಷಣೆ ಮಾಡಲಿರುವ ನಿರೀಕ್ಷೆಯಿದೆ ಈ ಬಗ್ಗೆ ಬ್ರಿಟನ್ನಿಗೂ, ಆ ದೇಶಕ್ಕೂ ಸಂಧಾನಗಳು ನಡೆಯುತ್ತಿವೆ ಅದು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗುವುದಲ್ಲದೆ, ಅಂತರ ರಾಷ್ಟ್ರೀಯ ಹಣಕಾಸಿನ ನಿಧಿಯ ಸದಸ್ಯ ರಾಷ್ಟ್ರವೂ ಆಗಲಿದೆ

ಈಜಿಪ್ಟ್ ಮತ್ತು ಜೋರ್ಡಾನ್ ಸೈನ್ಯಗಳ ಸಮ್ಮಿಳನಕ್ಕೆ ಒಪ್ಪಿಗೆ

ಈಜಿಪ್ಟ್ ಮತ್ತು ಜೋರ್ಡಾನ್ ದೇಶಗಳ ಸೈನ್ಯಗಳನ್ನು ಒಂದುಗೂಡಿಸುವ ಬಗ್ಗೆ ಉಭಯ ರಾಷ್ಟ್ರಗಳೂ ಒಪ್ಪಂದವಾಗಿರುವುದೆಂದು ಆ ರಾಷ್ಟ್ರಗಳ ಜಂಟಿ ಪ್ರಕಟಣೆಯೊಂದು ತಿಳಿಸಿದೆ ಅರಬ್ ರಾಷ್ಟ್ರಗಳ ಒಟ್ಟು ರಕ್ಷಣೆಗೆ ಈ ಕ್ರಮವು ಅಗತ್ಯವೆಂದು ಪರಿಗಣಿಸಲಾಗಿದೆ

ಮೈಸೂರು ನಗರದಲ್ಲಿ ಸಹಕಾರ ಶಿಕ್ಷಣ ಶಾಲೆ

ಸಹಕಾರ ಸಂಘಗಳ ಮತ್ತು ಇಲಾಖೆಯ ನೌಕರರುಗಳನ್ನು ತರಬೇತು ಮಾಡಲು ಮೈಸೂರು ನಗರದಲ್ಲಿ ಸಹಕಾರ ಶಿಕ್ಷಣ ಶಾಲೆಯನ್ನು ಈ ತಿಂಗಳಲ್ಲೇ ಆರಂಭಿಸಲು ಸರ್ಕಾರದವರು ನಿರ್ಧರಿಸಿದ್ದಾರೆ. ಇಲ್ಲಿ ತರಬೇತು ಪಡೆಯಲು ಅಪೇಕ್ಷಿಸುವ ಸಹಕಾರ ಸಂಘಗಳ ನೌಕರರುಗಳ ಹೆಸರನ್ನು ಮೈಸೂರು ಅಸಿಸ್ಟೆಂಟ್ ರಿಜಿಸ್ಟ್ರಾರಿಗಾಗಲಿ, ಬೆಂಗಳೂರಿನ ತಮ್ಮ ಆಫೀಸಿಗಾಗಲೀ ಕೂಡಲೇ ತಿಳಿಸಬೇಕಾಗಿ ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಕೆ ಆರ್ ಮರುದೇವೇಗೌಡರು ಪ್ರಕಟಿಸಿದ್ದಾರೆ

ಮೈಸೂರು ಸರ್ಕಾರ ಉದ್ಯಾನವನಗಳ ಸೂಪರಿಂಟೆಂಡೆಂಟರ ಕಛೇರಿ, ಲಾಲ್‌ಬಾಗ್ ಬೆಂಗಳೂರು-೪

ನೋಟಿಫಿಕೇಷನ್

ಬೆಂಗಳೂರು ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕುಗಳಲ್ಲಿರುವ ಹೂವಿನ ಫಲಗಳನ್ನು ಇದೇ 1956ನೇ ಮೇ 12ರಂದು ಬೆಳಿಗ್ಗೆ 10 ಘಂಟೆಗೆ ಲಾಲ್‌ಬಾಗಿನಲ್ಲಿ ಬಹಿರಂಗ ಹರಾಜಿನಲ್ಲಿ ಮಾರಲಾಗುವುದು ಮತ್ತು ಗಾರ್ಡನ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಮೊದಲು ತಿಳಿಸುವ ನಿಬಂಧನೆಗಳಿಗೆ ಒಳಪಟ್ಟು ಹರಾಜು ನಡೆಯುವುದು ... ಲಾಲ್‌ಬಾಗ್ ಉದ್ಯಾನವನದ ಆಫೀಸಿನಲ್ಲಿ ನೋಡಬಹುದು

ಎಂ. ಹೆಚ್ ಮರಿಗೌಡ,
ಸೂಪರಿಂಟೆಂಡೆಂಟ್

Edited, Printed and Published by A. R Nagarajan at Sadhvi Press D Subbiah Road, Mysore

ಕಾರ್ಮಿಕರಿಗೆ ನ್ಯಾಯವಾದ ಸಂಬಳಕ್ಕಾಗಿ ಐ ಎನ್.ಟಿ.ಯು.ಸಿ. ಕರೆ

ಪ್ರಮುಖ ಕೈಗಾರಿಕೆಗಳಲ್ಲಿ ಸಂಬಳ ಸಮಿತಿಗಳನ್ನೂ, ಸಾರ್ವಜನಿಕ ಕ್ಷೇತ್ರದಲ್ಲಿ ವೇತನ ಆಯೋಗವನ್ನೂ ರಚಿಸುವಂತೆ ಒತ್ತಾಯಪಡಿಸಿ ಭಾರತದ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ೮ನೇ ಅಧಿವೇಶನದ ವಿಷಯ ನಿಯಾಮಕ ಸಮಿತಿಯು ನಿರ್ಣಯವನ್ನು ಅಂಗೀಕರಿಸಿದೆ ವರಮಾನಗಳಲ್ಲಿ ಅಂತರ ಹೆಚ್ಚಿರಬಾರದೆಂಬ ಮುಖ್ಯ ತತ್ವವನ್ನು ಅರಿಯಬೇಕೆಂದು ಅಧಿವೇಶನವು ತಿಳಿಸಿದೆ ಸಂಬಳದ ನೀತಿಯನ್ನು ಸರ್ಕಾರದವರು ಪುನರ್ವಿಮರ್ಶಿಸಬೇಕೆಂದು ಕೋರಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಮುಖ್ಯ ವಿಷಯ. ೭ ೧೫ ಮತ್ತು ೮ ೧೫ ದೇವರ ನಾಮಗಳು ೭ ೪೦ ಹಿಂದಿ ಶಿಕ್ಷಣ ಮಧ್ಯಾಹ್ನ ೧೨ ಮತ್ತು ೧ ವಸುಮತಿ ರಾಮಚಂದ್ರ-ಸಂಗೀತ ೧೨ ೪೦ ರಿಕಾರ್ಡು ೧ ೩೦ ಮುಖ್ಯ ವಿಷಯ ೩-೫೫ ಬಿ ಎಂ ಶಿವಪ್ಪ ಸಂಗೀತ. ಸಂಜೆ ೫ ೪೦ ಮತ್ತು ೮ ಎಚ್ ಎಸ್. ಸಣ್ಣಪ್ಪ ನಾಗಸ್ವರ, ೬ ೧೫ ಪ್ರಸಿದ್ಧ ಬೌದ್ಧ ಯಾತ್ರಿಕರು ಫಾಹಿಯಾನ್ ಕನ್ನಡ ಕಾರ್ಯಕ್ರಮ ೭-೪೦ ಗೋಪಾಲಕೃಷ್ಣ ಗೋಷ್ಠಿ-ಡಿ ವಿ ಗುಂಡಪ್ಪನವರಿಂದ ಕನ್ನಡ ಭಾಷಣ ೮ ೩೦ ಕೊಳಲು ೯ ೧೫ ಮತ್ತು ೧೦ ಬಿ ಎಸ್ ರಾಜಯ್ಯಂಗಾರ್ ಸಂಗೀತ ೯ ೪೦ ಜವಳಿಯಂತೆ ೯ ೪೫ ಗೋಪಾಲಕೃಷ್ಣ ಗೋಷ್ಠಿ-ಕನ್ನಡ ಕಾರ್ಯಕ್ರಮ

ಸಂಸ್ಕೃತಿ ಪ್ರಸಾರಕ್ಕಾಗಿ ನಗರದ ಪೌರಸಭೆಗೆ ೫೦೦ ರೂ.

ಸಂಸ್ಕೃತಿ ಪ್ರಸಾರ ಕಾರ್ಯಕ್ಕಾಗಿ ಸರ್ಕಾರದವರು ಬೆಂಗಳೂರು, ಮೈಸೂರು, ದಾವಣಗೆರೆ ಮತ್ತು ಕೆ ಜಿ ಎಫ್ ಗಳಿಗೆ ತಲಾ ೫೦೦ ರೂ ಮತ್ತು ಎಲ್ಲಾ ಟೌನ್ ಪೌರಸಭೆಗಳಿಗೂ ತಲಾ ೨೫೦ ರೂ ಗಳನ್ನು ಗ್ರಾಂಟ್ ಕೊಟ್ಟಿರುತ್ತಾರೆ ಪ್ರತಿ ತಾಲ್ಲೂಕು ಅಭಿವೃದ್ಧಿ ಬೋರ್ಡಿಗೂ ತಲಾ ೨,೦೦೦ ರೂ ಗಳನ್ನು ಕೊಡಲಾಗುವುದು ತಾಲ್ಲೂಕು ಬೋರ್ಡುಗಳು ಸಂಸ್ಕೃತಿ ಪ್ರಚಾರದ ಯೋಜನೆಯ ಧ್ಯೇಯದಂತೆ ಸೂಕ್ತ ತೋರಿದ ರೀತಿಯಲ್ಲಿ ಹಣವನ್ನು ವಿನಿಯೋಗಿಸಬಹುದೆಂದು ಸೂಚಿಸಲಾಗಿದೆ ಪೌರಸಭೆಗಳೂ ತಾಲ್ಲೂಕು ಸಮಿತಿಗಳಂತೆ ಹಣವನ್ನು ವೆಚ್ಚ ಮಾಡಬಹುದು

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಕಡಲೆಕಾಯಿ	೩೩ ೦ ೦	೩೫ ೧೦ ೦
ಕಡಲೆಕಾಯಿ ಬೀಜ	[illegible]	
ಹುಣಿಸೆಹಣ್ಣು	[illegible]	
ಹೊಂಗೆಬೀಜ	[illegible]	[illegible]
ಹುಣಸೇಬೀಜ	[illegible]	[illegible]
ಹುರುಳಿ	[illegible]	[illegible]
ಹುಲಸಂದೆ	[illegible]	[illegible]
ಅವರೆ	[illegible]	[illegible]
ಸಿಗೇಕಾಯಿ	[illegible]	[illegible]
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧೦೦೦ ಕ್ಕೆ	[illegible]	[illegible]

ಪ್ರಕಟಣೆ

ಮೈಸೂರಿನಲ್ಲಿರುವ ಸೆಂಟ್ರಲ್ ಫುಡ್ ಟೆಕ್ನಾಲಜಿಕಲ್ ರಿಸರ್ಚ್ ಇನ್ಸ್ಟಿಟ್ಯೂಟಿಗೆ ಸುಮಾರು 600 ಪೌಂಡು ಹೊಸದಾಗಿ ಕಿತ್ತ ಗೇರು ಹಣ್ಣುಗಳನ್ನು ಸರಬರಾಜು ಮಾಡುವ ಬಗ್ಗೆ ಟೆಂಡರುಗಳನ್ನು ಕರೆಯಲಾಗಿದೆ ಸರಬರಾಜು ಮಾಡುವವರು ಕೂಡಲೇ ಇನ್ಸ್ಟಿಟ್ಯೂಟಿನೊಡನೆ ವ್ಯವಹರಿಸಬಹುದು

ಶ್ರೀ ಗಾಯತ್ರೀ ಟಾಕೀಸ್

ದಿನಕ್ಕೆ 3 ಆಟಗಳು
ಕಡೇ ದಿನ
ಡಾ|| ಜೆಕಿಲ್ ಅಂಡ್ ಮಿ|| ಹೈಡ್

9-5-56ನೇ ಬುಧವಾರ
ಆಗ ಎನ್ ಐಲೆಂಡ್ ವಿತ್ ಯು
(ವರ್ಣರಂಜಿತ ಚಿತ್ರ)
ಪಾತ್ರ :- ಎಸ್ತರ್ ವಿಲಿಯಂಸ್

10-5-56ನೇ ಗುರುವಾರ
ಬಿಸ್ಸಿ ಕೋಲ್ಸ್

ಮೋಡದ ಮೇಲೆ ಉಪ್ಪನ್ನು ಚಿಮುಕಿಸಿ ಮಳೆಗರೆದ ಪ್ರಸಂ

ಆಫ್ರಿಕದ ಮಧ್ಯ ಟ್ಯಾಂಗನೀಕಾದ ... ಎಂಬಲ್ಲಿ ಕಳೆದ ವಾರ ಮೋಡಗಳ ಮೇಲೆ ... ನ್ನು ಚಿಮುಕಿಸಿದ ಪರಿಣಾಮವಾಗಿ ಮಳೆ ... ಬಂದಿ ... ಯಾಗಿದೆ ಈ ಸಾರಿ ... ಸಾಕಷ್ಟು ಬರದೆ ಅಣೆಕಟ್ಟಿನಲ್ಲಿ ನೀರಿನ ಮಟ್ಟವು ಕಡಿಮೆಯಾಗಿತ್ತೆಂದೂ, ಉಪ್ಪನ್ನು ಚಿಮುಕಿಸಿದ ದಿನಗಳಲ್ಲೆಲ್ಲಾ ಮಳೆಯಾಗಿ, ... ರು ಹೆಚ್ಚಾಗಿ ಬಂದಿತೆಂದೂ ಹೇಳಲಾಗಿದೆ

ಬೆಂಕಿ ಅನಾಹುತದಲ್ಲಿ ನಾಲ್ವರ ಭಸ್ಮ

ದೆಹಲಿ ಪ್ರಾಂತದಲ್ಲಿರುವ ಎಟಾವಾ ಜಿಲ್ಲೆಯ ಮಾನಾಪುರ ಎಂಬಲ್ಲಿ ಮೊನ್ನೆ ರಾತ್ರಿ ಆದ ಬೆಂಕಿ ಅನಾಹುತದಲ್ಲಿ ಒಬ್ಬ ಗಂಡಸು ಮತ್ತು ಮೂವರು ಹುಡುಗಿಯರು ಜೀವಸಹಿತ ಸುಟ್ಟುಹೋದರು ಮತ್ತೊಬ್ಬ ಗಂಡಸು ಮತ್ತು ಹೆಂಗಸಿಗೆ ಗಾಯವಾಯಿತು ಮನೆಯ ಬಳಿ ಹಾಕಿದ್ದ ಒಣಗಿದ ಗುಡ್ಡೆಗೆ ಬೆಂಕಿಯು ತಗುಲಿ ಮನೆ ಹತ್ತಿಕೊಂಡಿತು

ಬೆಂಗಳೂರಿಗೊಂದು ಮೃಗಾಲಯ

ಬೆಂಗಳೂರಿನಲ್ಲಿ ಮೃಗಾಲಯವೊಂದನ್ನು ಸ್ಥಾಪಿಸುವ ವಿಷಯವನ್ನು ಇದೇ ೧೫ ನೇ ತಾರೀಕಿನಿಂದ ರಾಜಧಾನಿಯಲ್ಲಿ ಸೇರಲಿರುವ ... ದೇಶಿಕ ವನ ಮೃಗ ರಕ್ಷಣಾ ಸಮಿತಿ ಸಭೆಯು ಪರಿಶೀಲಿಸಲಾಗುವುದು ಭಾರತದಲ್ಲಿ ಈಗ ... ಮೃಗಾಲಯಗಳಿವೆ. ಹೊಸದಾಗಿ ದೆಹಲಿ ... ತ್ತು ಗೌಹಾತಿಯಲ್ಲೂ ಮೃಗಾಲಯಗಳನ್ನು ... ಯುವ ಸಂಭವವಿದೆ

ಮನೆ ಬಾಡಿಗೆಗೆ ಇದೆ

ನಂಜನಗೂಡು ಟವರ್ ತಾಲ್ಲೋಕು ಆಫೀಸ್ ಎದುರಿನಲ್ಲಿ ಕುಂಚಿಟಿಗರ ಸಂಘಕ್ಕೆ ಸೇರಿದ ಮಹಡಿ ಮನೆ-ದೊಡ್ಡ ಸಂಸಾರ, ಹೋಟೇಲು ಮತ್ತು ಬ್ಯಾಂಕ್ ಇಡಲು ಎಲ್ಲಾ ಸೌಕರ್ಯವುಳ್ಳ ವಿಸ್ತಾರವಾದ ಮನೆ ಮೈಸೂರು ಸಿಟಿ ಇಲವಾಲದ ರಸ್ತೆಯಲ್ಲಿರುವ ಸಂಘದ ಆಫೀಸಿನಲ್ಲಿ ವಿವರಗಳನ್ನು ತಿಳಿಯಬಹುದು.

ಕತ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು ! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು !!

ಆದರೆ ಡಾ|| ರಾಜಾರವರ ನೂತನ ಮತ್ತು ಆಶ್ಚರ್ಯಕರವಾದ ಚಿಕಿತ್ಸೆಯು ಮಾತ್ರ ಒಂದೇ ... ದ ಅವಧಿಯಲ್ಲಿ ನಿರಾಶೆಯನ್ನು ಹೋಗಲಾಡಿಸಿ ... ಕೋಪವನ್ನುಂಟುಮಾಡಲು ತಪ್ಪುವುದಿಲ್ಲ

ಆದುದರಿಂದ ನವಯೌವನವನ್ನೂ, ಅದ್ಭುತ ಶಕ್ತಿಯನ್ನೂ, ಆರೋಗ್ಯವನ್ನೂ ಹೊಂದಲು ... ಕ ವೃದ್ಧದಲ್ಲಿ ಹೆಸರಾಂತ ಡಾ|| ಎ ಪಿ. ರಾಜಾರ ಸಲಹೆಯನ್ನು ಪಡೆಯಿರಿ

ಭಾರತದ ಹೆಮ್ಮೆಯಾದ ಡಾ|| ರಾಜಾರವರು ... ತರ ವಿಧಾನದ ಚಿಕಿತ್ಸೆಗಳಿಗಿಂತಲೂ ಅದ್ಭುತ ... ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನರ ... ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಗಳಿಗೆ ಹೊಸ ... ನ್ನು, ಗುರುತನ್ನು ಉಂಟುಮಾಡಿರುವರು. ... ಜಹಗೀರ್ದಾರರುಗಳೂ, ನವಾಬರುಗಳೂ, ರಾಜ ... ರೂ, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ... ಶಕ್ತಿಯನ್ನು ಮೆಚ್ಚಿದ್ದಾರೆ

ಆದ್ದರಿಂದ ಡಾ|| ರಾಜಾರವರನ್ನು ಭೇಟಿ ಮಾಡಿ ನವಯೌವನ, ದೇಹ ಶಕ್ತಿ ಮತ್ತು ವೈಭವ ... ಸಂಪಾದಿಸಿರಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ... ಕಾರ್ಯಕ್ಷೇತ್ರದಿಂದ ಹಾರಾಗಲು ಇದು ಸುವರ್ಣ ... ಸಮಯ

ಕಾಲ-ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4 ರಿಂದ ರಾತ್ರಿ 9 ಘಂಟೆವರೆಗೆ

ರಾಜಾ ಮೆಡಿಕಲ್ ಹಾಲ್,
ಎಲ್. ನಂ. 1-745 ಅಶೋಕಾ ರಸ್ತೆ, ಮೈಸೂರು
(ಮೈಸೂರು ಬ್ಯಾಂಕ್ ಬಳಿ ... ಬಾಗಿಲು 3ನೇ ಕಟ್ಟಡ)

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

ಲಗ್ನದ ಜವಳಿ
ಗೌಸ್ ಸಿಲ್ಕ್ ಸೀರೆಗಳು
ಧರ್ಮಾವರಂ, ..., ಪೇಟ್, ಬಿನ್ನಿಸಿಲ್ಕ್
ರೇಷ್ಮೆ ಮತ್ತು ಜರಿಯ ಸೀರೆಗಳು
ಬಂದಿವೆ ಅಂಗಡಿಗೆ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., ಬಿ ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : WEDNESDAY 9-5-1956 ಮೈಸೂರು ಬುಧವಾರ : ೯-೫-೧೯೫೬ [ಸಂಚಿಕೆ : ...

ಕಾಶ್ಮೀರಕ್ಕೆ ಪಾಕಿಸ್ತಾನದಿಂದ ಅನೇಕ ಮುಸ್ಲಿಮರ ವಲಸೆ

ಇಂಟರ್ ಪರೀಕ್ಷೆಯ ಪ್ರಥಮ ೧೦ ರ್‍ಯಾಂಕುಗಳು

ಯುವರಾಜಾ ಕಾಲೇಜಿಗೆ ೬ ಸ್ಥಾನಗಳು

ಮೈಸೂರು ೯

ಈದಿನ ವಿಶ್ವವಿದ್ಯಾನಿಲಯದ ನಾನಾ ಪರೀಕ್ಷಾ ಫಲಿತಾಂಶಗಳು ಪ್ರಕಟವಾದುವು. ಇಂಟರ್ ಪರೀಕ್ಷೆಯ ಫಲಿತಾಂಶದಲ್ಲಿ ಕೆಳಗೆ ಕಂಡ ೧೦ ಮಂದಿ ಪ್ರಥಮ ರ್‍ಯಾಂಕುಗಳನ್ನು ಪಡೆದಿರುತ್ತಾರೆ:

ವಿಜ್ಞಾನ ಭಾಗ

೧ ಮೈಸೂರು ಯುವರಾಜಾ ಕಾಲೇಜು ಶ್ರೀ ... ವಿಶ್ವೇಶ್ವರಯ್ಯ, ೨ ಅದೇ ಕಾಲೇಜಿನ ... ಕೆ ರಘುನಾಥ್, ೩ ಶಾರದಾವಿಲಾಸ ಕಾಲೇಜಿನ ಕೃಷ್ಣಪ್ರಸಾದ್, ೪ ಬೆಂಗಳೂರು ಇಂಟರ್ ಕಾಲೇಜಿನ ಎಸ್ ಎ. ಪ್ರಸಾದ್, ೫ ನ್ಯಾಷನಲ್ ಕಾಲೇಜಿನ ಎಸ್ ಶ್ರೀನಿವಾಸ ಪ್ರಭು, ೬. ಅದೇ ಕಾಲೇಜಿನ ಎಂ ವಿ ವೇದವ್ಯಾಸ ಮೂರ್ತಿ ಮತ್ತು ವಿಜಯ ಕಾಲೇಜಿನ ಶ್ರೀಮತಿ ಡಿ ಸರೋಜ ೭ ದಾವಣಗೆರೆಯ ಡಿ. ಆರ್. ಎಂ. ಕಾಲೇಜಿನ ಎಸ್ ಹೆಚ್ ರಾಮಚಂದ್ರ ೮ ಮೈಸೂರು ಯುವರಾಜಾ ಕಾಲೇಜಿನ ಸಿ ಡಿ ಶ್ರೀನಿವಾಸಮೂರ್ತಿ ಮತ್ತು ೯ ಎಂ ಜಿ ಚಂದ್ರಶೇಖರ ಮತ್ತು ೧೦ ಬೆಂಗಳೂರು ಸೇಂಟ್ ಜೋಸೆಫ್ ಕಾಲೇಜಿನ ಎಂ ಜೆ ಡಾಮಿನಿಕ್

ಇಂಟರ್ ಆರ್ಟ್ಸ್

೧ ಬೆಂಗಳೂರು ಇಂಟರ್ ಕಾಲೇಜಿನ ಡಿಸ್ಯೈಸ್ಟೂಸ್ ಮ್ಯುಂಡಾ. ೨ ಅದೇ ಕಾಲೇಜಿನ ಪಿ ವಾಸುದೇವ ಮೈಯ್ಯ ೩ ಅದೇ ಕಾಲೇಜಿನ ಎ. ಕೆ ಗುರುತತ್ವಣ್ಣ. ೪ ಮೈಸೂರು ಯುವರಾಜ ಕಾಲೇಜಿನ ಬಿ ಹೆಚ್ ನಾಯಕ್. ೫ ಮೈಸೂರು ಮಹಾರಾಣಿ ಕಾಲೇಜಿನ ಶ್ರೀಮತಿ ಎ ಜಿ ಪ್ರೇಮಲತ. ೬ ಯುವರಾಜ ಕಾಲೇಜಿನ ಎ. ಶ್ರೀನಿವಾಸ್. ೭ ಚಿಕ್ಕಮಗಳೂರು ಕಾಲೇಜಿನ ಶ್ರೀಮತಿ ಎಸ್. ವತ್ಸಲ. ೮ ಅದೇ ಕಾಲೇಜಿನ ಶ್ರೀಮತಿ ಮಾಟಿಲ್ಡಾ ಟೌರಾ ೯ ಮೈಸೂರು ಸೇಂಟ್ ಫಿಲೋಮಿನಾ ಕಾಲೇಜಿನ ಬಿ ಎಂ ಸಿಸ್ವರ್ಸ್ ಮತ್ತು ೧೦ ಕೋಲಾರ ಕಾಲೇಜಿನ ಅಬ್ದುಲ್ ಅಜೀಜ್.

ದೋಣಿ ಮುಳುಗಿ ೧೩ ಜನರ ಮರಣ

ಬ್ರಹ್ಮಪುತ್ರಾ ನದಿಯಲ್ಲಿ ಸಣ್ಣ ದೋಣಿಯೊಂದು ಮೊನ್ನೆ ಸುಳಿಯಲ್ಲಿ ಸಿಕ್ಕಿ ಕೆಳಕೆಳಗಾಗಿ ಅದರಲ್ಲಿದ್ದ ೧೩ ಜನರು ಮುಳುಗಿ ಪ್ರಾಣ ಬಿಟ್ಟರು ಎಂದು ವರದಿಯಾಗಿದೆ. ಹಿಂದಿನ ಸೋಮವಾರ ೩ ದೋಣಿಗಳು ಮುಳುಗಿದುವೆಂದೂ, ಅದರ ಎಲ್ಲರೂ ಪಾರಾದರೆಂದೂ ಗೊತ್ತಾಗಿದೆ.

ಹರಿಕಥೆ

ನಂದಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ನಾಳೆ ಸಂಜೆ ೬ ಗಂಟೆಗೆ ಶ್ರೀ ಪಾಲಹಳ್ಳಿ ಕೆ ಗುಂಡೂರಾಯರಿಂದ ಕಚ ದೇವಯಾನಿ ಎಂಬ ಹರಿಕಥೆ ನಡೆಯುತ್ತದೆ ಸರ್ವರೂ ದಯಮಾಡಿಸಬೇಕಾಗಿ ಕೋರಲಾಗಿದೆ.

ಪದವಿ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಗಳಿಸಿದವರು

ಒಟ್ಟು ಸ್ಥಾನಗಳಲ್ಲಿ ಅರ್ಧ ಮಹಿಳೆಯರಿಗೆ

ಮೈಸೂರು ೯

ಈ ಸಾರಿ ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗಳಲ್ಲಿ ಕೆಳಗೆ ಕಂಡವರು ಪ್ರಥಮ ಸ್ಥಾನಗಳನ್ನು ಗಳಿಸಿರುತ್ತಾರೆ:—ಬಿ ಎ ಪರೀಕ್ಷೆ ಒಂದನೇ ಭಾಗ—ಮೌಂಟ್ ಕಾರ್ಮೆಲ್ ಕಾಲೇಜಿನ ಮೇರಿ ಗೊನ್ಸಾಲ್ವೆಸ್; ಎರಡನೇ ಭಾಗ—ಅದೇ ಕಾಲೇಜಿನ ಜೋನ್ ಜನೆಟ್, ಮೂರನೇ ಭಾಗ—ಮಹಾರಾಜಾ ಕಾಲೇಜಿನ ಎಂ ಆರ್ ಜನಾರ್ಧನ.

ಬಿ ಎಸ್‌ಸಿ -ಒಂದನೇ ಭಾಗ—ಯುವರಾಜಾ ಕಾಲೇಜಿನ ಡಿ ಬ್ಯಾಟಿಸ್ಟ ಎರಡನೇ ಭಾಗ—ಸೆಂಟ್ರಲ್ ಕಾಲೇಜಿನ ಮಹಮದ್ ಒಬೆದೂರ್ ರಹಮಾನ್, ಮೂರನೇ ಭಾಗ—ಬೆಂಗಳೂರು ನ್ಯಾಷನಲ್ ಕಾಲೇಜಿನ ಕೆ ಪಾರ್ಥಸಾರಥಿ

೬೦ ಮಂದಿ ಅಗ್ರಸ್ಥಾನ ಗಳಿಸಿದ್ದಾರೆ ಒಟ್ಟು ೬೦ ಅಗ್ರಸ್ಥಾನಗಳ ಪೈಕಿ ೧೬ ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿಗೆ ದೊರೆತಿವೆ ಇವರೆಲ್ಲರೂ ಮಹಿಳೆಯರು ಇತರ ೧೬ ಸ್ಥಾನಗಳೂ ಸಹ ಮಹಿಳೆಯರಿಗೆ ದೊರೆತಿವೆ ಮೌಂಟ್ ಕಾರ್ಮೆಲ್ಲಿನ ಮೇರಿ ಗೊನ್ಸಾಲ್ವೆಸರವರಿಗೆ ಬಿ ಎ ಮೂರು ಭಾಗಗಳಲ್ಲಿಯೂ ಬೆಂಗಳೂರು ಮಹಾರಾಣಿ ಕಾಲೇಜಿನ ಸಿ ಎಸ್ ತ್ರಿವೇಣಿಯವರಿಗೆ ಬಿ ಎಸ್ ಸಿ ಎರಡು ಭಾಗಗಳಲ್ಲೂ ಉನ್ನತ ಸ್ಥಾನಗಳು ಸಿಕ್ಕಿವೆ

೧೯೫೮ರಲ್ಲಿ ಮಹಾ ಚುನಾವಣೆಗಳು

ಭಾರತದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ಮುಂದಿನ ವರ್ಷದಲ್ಲಿ ನಡೆಸದೆ ೧೯೫೮ರ ಆದಿ ಭಾಗದಲ್ಲಿ ಏರ್ಪಡಿಸಲಾಗುವುದೆಂದು ತಿಳಿದುಬಂದಿದೆ. ಭಾರತ ಸರ್ಕಾರದವರು ಈ ಬಗ್ಗೆ ಇನ್ನೂ ನಿರ್ಧಾರವನ್ನು ಕೈಗೊಂಡಿರುವುದಿಲ್ಲವೆಂದು ಹೇಳಲಾಗಿದೆ ನೂತನ ಪ್ರಾಂತಗಳ ಉದಯವು ಅಕ್ಟೋಬರ್ ೧ರ ಹೊತ್ತಿಗೆ ಆಗುವ ಸಂಭವವಿಲ್ಲವೆಂದೂ, ಪಾರ್ಲಿಮೆಂಟಿನಲ್ಲಿ ಸಂಸ್ಥಾನ ಪುನರ್ವಿಂಗಡಣಾ ಮಸೂದೆಯ ಅಂಗೀಕಾರವು ತಡವಾಗುವುದೆಂದೂ ತಿಳಿದುಬಂದಿದೆ. ಪರಿಣಾಮವಾಗಿ ನೂತನ ಪ್ರಾಂತಗಳ ಗಡಿ ವಿಂಗಡಣೆ ಕೆಲಸವು ಇನ್ನೂ ನಿಧಾನವಾಗಲಿದೆ ಪಾರ್ಲಿಮೆಂಟಿನ ಬಹುಮಂದಿ ಸದಸ್ಯರು ಹೊಸ ಲೋಕಸಭಾಧಿವೇಶನವನ್ನು ಇದೇ ಮೇ ತಿಂಗಳ ನಂತರ ಮುಂದೆ ಹಾಕಬೇಕೆಂದು ಒತ್ತಾಯ ಪಡಿಸಿದ್ದರ ಪರಿಣಾಮವಾಗಿ ಈ ಕಾರ್ಯಕ್ರಮದಲ್ಲಿ ಬದಲಾವಣೆಗಳಾಗಲಿವೆ

ರಂಜಾನ್ ಹಬ್ಬದ ಸಂದರ್ಭದಲ್ಲಿ ೩ ಜನರ ಮರಣ

ಬೆಂಗಳೂರಿನಲ್ಲಿ ನೆನ್ನೆ ರಂಜಾನ್ ಹಬ್ಬದ ಸಂಬಂಧದಲ್ಲಿ ಶ್ರೀ ಅಬ್ದುಲ್ ಖಾದರ್ ಎಂಬುವರು ಬಡವರಿಗೆ ಉಚಿತವಾಗಿ ಬಟ್ಟೆಯನ್ನು ಹಂಚುವ ಏರ್ಪಾಡು ಮಾಡಿದ್ದಾಗ, ವಿಪರೀತ ನೂಕುನುಗ್ಗಲಾಗಿ,ಮೂವರು ವಯಸ್ಸಾದ ಮಹಿಳೆಯರು ತುಳಿಯಲ್ಪಟ್ಟು ಮೃತಪಟ್ಟರೆಂದು ವರದಿಯಾಗಿದೆ

ಸಂಗೀತ ಕಛೇರಿ

ಮೈಸೂರು ೯

ಈ ದಿನ ಸಂಜೆ ೬॥ ಗಂಟೆಗೆ ಶ್ರೀ ಸುಬ್ಬಯ್ಯಾ ರಸ್ತೆಯಲ್ಲಿರುವ "ಸಾಧ್ವಿ" ಪತ್ರಿಕಾಲಯದಲ್ಲಿ ಅ॥ ವಿ॥ ಗೋಪಾಲಸ್ವಾಮಿ ಎಸ್. ನಾರಾಯಣಯ್ಯಂಗಾರ್ಯರ ಮಕ್ಕಳು ವಿ॥ ಎ. ರಾಮಕೃಷ್ಣರವರ ಗಾಯನವು ವಿ॥ ವೆಂಕಟಾಚಾರ್ಯರ ಪಿಟೀಲು ಮತ್ತು ವಿ॥ ಎ. ರಾಮರಾಯರ ಮೃದಂಗದೊಡನೆ ನಡೆಯುತ್ತದೆ. ಸರ್ವರಿಗೂ ಸ್ವಾಗತವಿದೆ

ಕಾಶ್ಮೀರಕ್ಕೆ ಪಾಕಿಸ್ತಾನದ ಪ್ರದೇಶದಿಂದ ಮುಸ್ಲಿಮರು

ಪಾರ್ಲಿಮೆಂಟಿನಲ್ಲಿ ನೆನ್ನೆ ಕೇಂದ್ರ ಗೃಹ ಖಾತಾ ಮಂತ್ರಿ ಬಿ ಎ. ದಾತಾರರವರು ಮಾತನಾಡಿ, ಕಾಶ್ಮೀರಕ್ಕೆ ಅನೇಕ ಮುಸ್ಲಿಮರು ಸೀಸ್‌ಫೈರ್ ರೇಖೆಯನ್ನು ದಾಟಿ ಪ್ರತಿ ತಿಂಗಳೂ ಬರುತ್ತಿರುವರೆಂದು ತಿಳಿಸಿದರು. ಅಂತಹ ೬೬೭ ಜನರು ಜಮ್ಮು ಮತ್ತು ಕಾಶ್ಮೀರದೊಳಗೆ ಬಂದು ನೆಲೆಸಲು ಅವಕಾಶವೀಯಲಾಯಿತೆಂದೂ ಅವರು ಹೇಳಿದರು. ಆಜಾದ್ ಕಾಶ್ಮೀರ ಪ್ರದೇಶದಿಂದ ಬರುತ್ತಿದ್ದ ಮುಸ್ಲಿಮರನ್ನಾದರೂ ಪಾಕಿಸ್ತಾನ ಸರ್ಕಾರದವರು ತಡೆದರೇ, ಅಥವಾ ಅವರ ಮೇಲೆ ಗುಂಡು ಹಾರಿಸಿದರೆ?—ಎಂದು ಕೇಳಲಾಗಿ, ಮಂತ್ರಿಗಳು ಉತ್ತರವೀಯಲಿಲ್ಲ ಕಾಶ್ಮೀರದಲ್ಲಿ ಮುಸ್ಲಿಮೇತರರು ಹೆಚ್ಚು ಹೆಚ್ಚಾಗಿ ನೆಲೆಸುವಂತೆ ಮಾಡಿ, ಮುಸ್ಲಿಮರನ್ನು ಅಲ್ಲಿಂದ ಓಡಿಸಿ ಅವರನ್ನು ಅಲ್ಪಸಂಖ್ಯಾತನ್ನಾಗಿ ಮಾಡಬೇಕೆಂದು ಭಾರತವು ಆಲೋಚಿಸುತ್ತಿರುವುದೆಂದು ಪಾಕಿಸ್ತಾನದ ಪ್ರಧಾನಿಯು ಹೇಳಿದ್ದುದನ್ನು ಸಚಿವರು ನಿರಾಕರಿಸಿರುತ್ತಾರೆ

ಕರ್ನಾಟಕದಲ್ಲಿ ಮೈಸೂರು ಹೈಕೋರ್ಟಿಗಾಗಿ ಒತ್ತಾಯ

ಉತ್ತರ ಕರ್ನಾಟಕದಲ್ಲಿ ನೂತನ ಮೈಸೂರಿನ ಹೈಕೋರ್ಟನ್ನು ಸ್ಥಾಪಿಸಬೇಕೆಂದು ಧಾರವಾಡದ ವಕೀಲರ ಸಂಘದವರು ಒತ್ತಾಯಪಡಿಸುವ ನಿರ್ಣಯವನ್ನು ಮಾಡಿರುತ್ತಾರೆ. ನೀರಾವರಿ, ಭೂಗರ್ಭ, ಸರ್ವೆ, ಕೈಗಾರಿಕೆ ಮತ್ತು ಅರಣ್ಯ ಇಲಾಖೆಗಳನ್ನು ಉತ್ತರ ಕರ್ನಾಟಕದ ನಗರಗಳಲ್ಲಿ ಏರ್ಪಡಿಸಿ, ಆ ಮೂಲಕ ನೂತನ ಸಂಸ್ಥಾನದಲ್ಲಿ ಕರ್ನಾಟಕದ ಪ್ರಜೆಗಳು ಭಾಗ ಹೊಂದಬಹುದೆಂಬುದನ್ನು ತೋರ್ಪಡಿಸಬೇಕೆಂದು ಸಂಘದವರು ಸೂಚಿಸಿರುತ್ತಾರೆ

ಪಿರಿಯಾಪಟ್ಟಣದಲ್ಲಿ ಜೂನ್ ೨೪ರಂದು ಚುನಾವಣೆ

ಸಂಸ್ಥಾನದ ವಿಧಾನ ಸಭೆಗೆ ಪಿರಿಯಾಪಟ್ಟಣ ಕ್ಷೇತ್ರದಿಂದ ಜೂನ್ ೨೪ರಂದು ಉಪ ಚುನಾವಣೆ ನಡೆಯುವುದು ಇದೇ ತಿಂಗಳು ೧೮ಕ್ಕೆ ನಾಮಪತ್ರ ಸಲ್ಲಿಸಲು ಕಡೇ ದಿನ.

ಕರ್ನಾಟಕದಲ್ಲಿ ಮುಖ್ಯ ಮಂತ್ರಿಗಳ ಪ್ರವಾಸ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಬರುವ ತಿಂಗಳು ೨ರಿಂದ ೪ ದಿನಗಳ ಕಾಲ ಉತ್ತರ ಕರ್ನಾಟಕದಲ್ಲಿ ಪ್ರವಾಸ ಕೈಗೊಂಡು, ಹಲವಾರು ಸಮಾರಂಭಗಳಲ್ಲಿ ಭಾಗವಹಿಸುವರು

ಸಿಂಗಪುರದಿಂದ ಕರೆತಂದ ಮಹಿಳೆಗೆ ೧೦ ಸಾವಿರ ರೂ.ಬಗ್ಗೆ ಮೋಸ

ಅಪಾದಿತ ಬಿ. ಎಸ್. ಶಾಸ್ತ್ರಿಗೆ ೧ ವರ್ಷ ಕಠಿಣ ಸಜಾ

ಮೈಸೂರು ೯

ಸಿಂಗಪುರದಿಂದ ಕೆಲವು ವರ್ಷಗಳ ಹಿಂದೆ ಶ್ರೀಮತಿ ಆರ್. ಕೆ ದೇವಿ ಎಂಬಾಕೆಯನ್ನು ಕರೆತಂದು, ಆಕೆಗೆ ಸೇರಿದ ಸುಮಾರು ೧೦ ಸಾವಿರ ರೂಪಾಯಿ ಬೆಲೆಯ ವಸ್ತುಗಳನ್ನು ಗಿರವಿಯಿಟ್ಟು ಮೋಸ ಮಾಡಿದನೆಂದು ಬಿ ಎಸ್. ಶಾಸ್ತ್ರಿ ಎಂಬ ಹಳೆ ಅಗ್ರಹಾರದ ನಿವಾಸಿಗೆ ನೆನ್ನೆ ನಗರದ ದ್ವಿತೀಯ ನ್ಯಾಯಾಧೀಶರು ೧ ವರ್ಷ ಕಠಿಣ ಸಜಾ ವಿಧಿಸಿದರು ಆಕೆಯು ವಸ್ತುಗಳನ್ನು ಆತನ ಕೈಗೆ ಕೊಟ್ಟು ಯಾತ್ರೆ ಹೊರಟಿದ್ದಳೆಂದೂ ವಾಪಸು ಬಂದನಂತರ ವಸ್ತುಗಳ ಗೈರುವಿಲೆ ಬಗ್ಗೆ ಆಕೆಯು ಕೃಷ್ಣರಾಜ ಪೊಲೀಸರಿಗೆ ದೂರು ಕೊಟ್ಟಿದ್ದರೆಂದೂ ವರದಿಯಾಗಿದೆ. ತನಿಖೆಯಲ್ಲಿ ಅವು ಗಿರವಿ ಇಡಲ್ಪಟ್ಟಿದ್ದುವೆಂದು ವ್ಯಕ್ತಪಟ್ಟಿತು

ಮನೆಗೆ ನುಗ್ಗಿದ ಕರಡಿ ಕೊಲೆ

ಹೊಸನಗರ ತಾಲ್ಲೂಕು ಆರಸಾಳು ಗ್ರಾಮದ ಬಳಿ ಗುಂಡಿಬೈಲು ಎಂಬಲ್ಲಿ ಕಳೆದ ೫ನೇ ತಾರೀಖು ರೈತನೊಬ್ಬನ ಮನೆಗೆ ಪ್ರವೇಶಿಸಿದ ಒಂದು ಕರಡಿಯನ್ನು ಗುಂಡಿನಿಂದ ಹೊಡೆದು ಸಾಯಿಸಲಾಯಿತೆಂದು ವರದಿಯಾಗಿದೆ. ಕರಡಿಯು ಆ ರಾತ್ರಿ ಮನೆಗೆ ನುಗ್ಗಲಾಗಿ ರೈತನ ಹೆಂಡತಿಯು ಗಾಬರಿಯಿಂದ ಆರು ತಿಂಗಳ ಕೂಸನ್ನು ಅಲ್ಲಿಯೇ ಬಿಟ್ಟು ಗಂಡನಿದ್ದ ಕೊಟಡಿಗೆ ಓಡಿದಳೆಂದೂ, ಆತನೂ ಗಾಬರಿಗೊಂಡು ಬಂದು ನೋಡಲಾಗಿ, ಕರಡಿಯು ಎರಡು ಹಾಸಿಗೆಗಳನ್ನು ಹಾಸಿ ಒಂದರ ಮೇಲೆ ಮಗುವನ್ನು ಮಲಗಿಸಿ ತಾನು ಪಕ್ಕದ ಹಾಸಿಗೆಯಲ್ಲಿ ಮಲಗಿ ಮಗುವಿನ ಮೈಮೇಲೆ ಕೈಯಿಟ್ಟುಕೊಂಡಿತ್ತೆಂದೂ, ಮಗುವಿನ ತಂದೆ ಒಳಗೆ ನುಗ್ಗಿದಾಗ ಕರಡಿಯು ಅವನ ಮೇಲೆ ಬರಲು ಆತನು ಅದರ ಮುಖಕ್ಕೆ ಕಂಬಳಿಯನ್ನು ಎಸೆದು ಮಗುವನ್ನು ಎತ್ತಿಕೊಂಡು ಹೊರಕ್ಕೆ ಓಡಿಬಂದು ಬಾಗಿಲನ್ನು ಹಾಕಿಕೊಂಡನೆಂದೂ ಹೇಳಲಾಗಿದೆ ಅದನ್ನು ಕೊಲ್ಲಲು ಕಿಟಕಿಯಿಂದ ಗುಂಡು ಹಾರಿಸಲಾಗಿ ಕರಡಿಗೆ ದಿಕ್ಕು ತೋಚದೆ, ಕಿಟಕಿಗಳನ್ನು ಮುಚ್ಚಿ ಅರ್ಧಗಟ್ಟುತ್ತಾ ಮನೆಯೊಳಗೆ ಇದ್ದ ರೊಟ್ಟಿ, ಹಾಲು, ಮೊಸರನ್ನು ತಿಂದುಹಾಕಿತೆಂದೂ ಕಡೆಗೆ ಮನೆಯ ಹೆಂಚು ತೆಗೆದು ಅದನ್ನು ಗುಂಡಿನಿಂದ ಹೊಡೆದು ಸಾಯಿಸಲಾಯಿತೆಂದೂ ವರದಿಯಾಗಿದೆ.

ಕೆ. ವಿ. ಪುಟ್ಟಪ್ಪನವರು ವೈಸ್ ಚಾನ್ಸಲರ್

ಸರ್ಕಾರದವರ ನಿರ್ಧಾರ

ಸ್ವಂ.ಪ್ರ. ತಂತಿ] ಬೆಂಗಳೂರು ೯

ಮೈಸೂರು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಕೆ. ವಿ ಪುಟ್ಟಪ್ಪನವರನ್ನು ಶ್ರೀ ವಿ. ಎಲ್. ಡಿಸೋಜಾರವರ ಸ್ಥಾನದಲ್ಲಿ ವಿಶ್ವವಿದ್ಯಾನಿಲಯದ ವೈಸ್‌ಚಾನ್ಸಲರಾಗಿ ನೇಮಿಸಲು ಮಂತ್ರಿಮಂಡಲವು ನಿರ್ಧರಿಸಿರುವುದೆಂದು ತಿಳಿದುಬಂದಿದೆ.

ದನಗಳ ದೊಡ್ಡ ರೋಗದ ನಿವಾರಣೆ

೩·೮ ಕೋಟಿ ರೂ ಯೋಜನೆ

ಭಾರತದಲ್ಲಿ ದೊಡ್ಡ ರೋಗವನ್ನು ನಿರ್ಮೂಲಗೊಳಿಸುವ ಬಗ್ಗೆ ಭಾರಿ ಪ್ರಮಾಣದ ಕಾರ್ಯಕ್ರಮವನ್ನು ೩,೮೩,೩೪,೦೦೦ ರೂ ವೆಚ್ಚದಿಂದ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲಾಗುವುದು ಕೇಂದ್ರ ಸರ್ಕಾರದವರು ಈ ಹಣದಲ್ಲಿ ೧,೫೭,೬೪,೦೦೦ ರೂ ವೆಚ್ಚವನ್ನು ವಹಿಸುವರು. ಜಾನುವಾರುಗಳಿಗೆ ಬರುವ ಅಂಟು ಜಾಡ್ಯಗಳಲ್ಲೆಲ್ಲಾ ಈ ರೋಗವು ಉಗ್ರವಾದದ್ದು ವರ್ಷಕ್ಕೆ ೪ ಲಕ್ಷಕ್ಕೂ ಮೀರಿದ ಜಾನುವಾರುಗಳು ಇದಕ್ಕೆ ಬಲಿಯಾಗುತ್ತಿವೆ ರಾಷ್ಟ್ರಕ್ಕೆ ಈ ರೋಗದಿಂದಲೇ ವರ್ಷದಲ್ಲಿ ೩೦ ಕೋಟಿ ರೂ ಗಳ ನಷ್ಟ ಸಂಭವಿಸುತ್ತಿರೆಯೆಂದು ಅಂದಾಜು ಮಾಡಲಾಗಿದೆ

ಭಾರತೀಯ ಪಶು ವೈದ್ಯ ಸಂಶೋಧನಾ ಸಂಸ್ಥೆ ಮತ್ತಿತರ ಕೇಂದ್ರಗಳ ಸಂಶೋಧನೆಗಳ ಫಲವಾಗಿ ದನಕರುಗಳನ್ನು ಈ ರೋಗದಿಂದ ಪಾರು ಮಾಡುವ ಗೋ ವೈರಿ (ವ್ಯಾಕ್ಸೀನ್) ಔಷಧಗಳನ್ನು ಕಂಡುಹಿಡಿಯಲಾಗಿದೆ ಮೈಸೂರು, ಆಂಧ್ರ, ಮದರಾಸು, ಹೈದರಾಬಾದು, ಮುಂಬೈ ಮತ್ತು ತಿರುವಾಂಕೂರು-ಕೊಚ್ಚಿನ್ ರಾಜ್ಯಗಳಲ್ಲಿ ಮಾಡಿದ ಪ್ರಯೋಗಗಳನ್ನು ಪ್ರಾರಂಭಿಸಿದ ಫಲವಾಗಿ ೫೦ ಲಕ್ಷ ಜಾನುವಾರುಗಳನ್ನು ಈ ರೋಗದಿಂದ ರಕ್ಷಿಸಲಾಗಿದೆ ಈ ಪ್ರದೇಶಗಳಲ್ಲಿ ಈ ರೋಗವೇ ಇಲ್ಲ

ಇದೇ ಅಕ್ಟೋಬರ್ ೧ರಿಂದ ಹೊಸದಾಗಿ ಒರಿಸ್ಸಾ, ಬಿಹಾರ್, ಪಶ್ಚಿಮ ಬಂಗಾಳ ಉತ್ತರ ಪ್ರದೇಶ, ಪಂಜಾಬ್, ಜಮ್ಮು ಪ್ರಾಂತ್ಯಗಳಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತರಲಾಗುವುದು ಭಾರತೀಯ ಪಶುವೈದ್ಯ ಸಂಶೋಧನಾ ಸಂಸ್ಥೆಯ ಜೊತೆಗೆ ಬೆಂಗಳೂರು, ಕಲ್ಕತ್ತ, ಮದರಾಸು, ಲಖನೌ ಮತ್ತು ಹಿಸ್ಸಾರ್ ಕೇಂದ್ರಗಳಲ್ಲಿ ಆವಶ್ಯಕ ಪ್ರಮಾಣ ಗೋ ವೈರಿ ಔಷಧವನ್ನು ತಯಾರಿಸಲಾಗುವುದು

"ದಿವಿಜ ಸಾಮ್ರಾಜ್ಯ" ನಾಟಕ

ನಗರದಲ್ಲಿರುವ ಶ್ರೀ ನಟರಾಜ ಲಲಿತ ಕಲಾ ನಾಟಕ ಸಭೆಯವರು ವಿ ಲಕ್ಷ್ಮೀಪತಿಯವರಿಂದ ವಿರಚಿತವಾದ ದಿವಿಜ ಸಾಮ್ರಾಜ್ಯ ಎಂಬ ಪೌರಾಣಿಕ ನಾಟಕವನ್ನು ಸದ್ಯದಲ್ಲೇ ಪ್ರದರ್ಶಿಸುವರು ಅವರಲ್ಲಿ ನುರಿತ ನಟನಟಿಯರು ಪಾತ್ರ ವಹಿಸಲಿರುವರು

ಸಂಗೀತ

ದೇವೀರಮ್ಮಣ್ಣಿ ಅಗ್ರಹಾರದ ರಾಮ ಮಂದಿರದಲ್ಲಿ ಶಯನೋತ್ಸವದ ಪ್ರಯುಕ್ತ ಈ ರಾತ್ರಿ ೮ ಗಂಟೆಗೆ ಶ್ರೀ ರಾಮಯ್ಯ ಮತ್ತು ಪಾರ್ಟಿಯವರ ಸಂಗೀತವು ಏರ್ಪಾಡಾಗಿದೆ

ಅಹೋಬಿಲ ಮಠದಲ್ಲಿ ⓘ ಚೋಳ ಪರಿಪಾಲನೆ

ಶ್ರೀ ಶ್ರೀ ಶಿಲ್ಲಸ್ಥಾನಂ ಪಟಗೋಪ ರಾಮಾನುಜ ಯತೀಂದ್ರ ಸ್ವಾಮಿಗಳು ಕಳೆದ ಏನೇ ತಾ॥ ಶ್ರೀರಂಗದಲ್ಲಿ ಪರಮ ಪದವನ್ನು ಹೊಂದಿರುವುದು. ಗ ಇಲ್ಲಿಗೆ ವಾರ್ತೆ ಬಂದಿದೆ ಅವರ ಉತ್ತರ ಕೈಂಕರ್ಯಗಳು ಶ್ರೀರಂಗದಲ್ಲಿ ಯಥಾ ವಿಧಿಯಾಗಿ ನಡೆಯುವುವು ಈ ಸಂಬಂಧವಾಗಿ ನಗರದಲ್ಲಿರುವ ಶ್ರೀ ಅಹೋಬಿಲ ಮಠದಲ್ಲಿ ನಾಳೆ ಬೆಳಗ್ಗೆ ೯ ಗಂಟೆಗೆ ಶ್ರೀ ಚೋಳ ಪರಿಪಾಲನೆ ನಡೆಯುತ್ತದೆ ಶ್ರೀ ಸ್ವಾಮಿಗಳ ಶಿಷ್ಯರೂ, ಭಕ್ತರೂ ಸಕಾಲಕ್ಕೆ ಬಂದು ಕೈಂಕರ್ಯದಲ್ಲಿ ಭಾಗವಹಿಸುವಂತೆ ಕೋರಲಾಗಿದೆ

ಹಿಂದುಗಳ ವಲಸೆ ಬಗ್ಗೆ ಒಪ್ಪಂದದಿಂದ ಗೊಂದಲ

ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ಅಲ್ಪಸಂಖ್ಯಾತರ ವಲಸೆ ಬಗ್ಗೆ ಭಾರತ ಮತ್ತು ಪಾಕಿಸ್ತಾನ ಮಂತ್ರಿಗಳಿಗೆ ಆದ ಸಂಭಾಷಣೆ ನಂತರ ಹೊರಟ ಜಂಟಿ ಪ್ರಕಟಣೆಯು ಗೊಂದಲವನ್ನುಂಟುಮಾಡಿರುವುದಾಗಿ ವರದಿಯಾಗಿದೆ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಚೌಧುರಿಯವರೂ, ಭಾರತದ ಮಂತ್ರಿಗಳಾದ ಸಿ ಸಿ ಬಿಸ್ವಾಸ್ ಮತ್ತು ಮೆಹರ್‌ಚಂದ್ ಖನ್ನಾರವರೂ ಪ್ರಕಟಣೆ ಬಗ್ಗೆ ಪರಸ್ಪರ ವಿರೋಧದ ವ್ಯಾಖ್ಯಾನ ಮಾಡಿರುವುದೇ ಇದಕ್ಕೆ ಕಾರಣ ಸಂಭಾಷಣೆ ಬಗ್ಗೆ ಎರಡು ಪ್ರಕಟಣೆಗಳನ್ನು ಹೊರಡಿಸಲಾಯಿತೆಂದೂ, ಎರಡನೆಯದಕ್ಕೆ ತಮ್ಮ ಒಪ್ಪಿಗೆ ಇರಲಿಲ್ಲವೆಂದೂ ಪಾಕಿಸ್ತಾನದ ಮಂತ್ರಿ ಹೇಳಿರುವುದಾಗಿ ವರದಿಯಾಗಿದೆ ಮೊದಲನೇ ಪ್ರಕಟಣೆಯನ್ನು ತಮ್ಮ ತಿಳುವಳಿಕೆಗ ಕಾರಣ ಪ್ರಚುರಪಡಿಸಲಾಯಿತೆಂದು ಭಾರತದ ಮಂತ್ರಿಗಳು ಹೇಳಿರುವರು

ಫ್ರಾನ್ಸಿಗೆ ಟಿಟೊ

ಯುಗೋಸ್ಲಾವಿಯದ ಅಧ್ಯಕ್ಷ ಮಾರ್ಷಲ್ ಟಿಟೋರವರು ಪತ್ನಿ ಸಮೇತರಾಗಿ ಫ್ರಾನ್ಸಿಗೆ ಭೇಟಿ ಕೊಡಲು ಬೆಲ್ಗ್ರೇಡಿನಿಂದ ಕಳೆದ ಬಾನುವಾರ ಪ್ರಯಾಣ ಬೆಳೆಸಿದರು ಫ್ರಾನ್ಸಿನಲ್ಲಿ ಅವರು ಆರು ದಿನವಿರುವರು

ಬೆಂಗಳೂರಿನಲ್ಲಿ ಸೈನಿಕರಿಂದ ಜನರಿಗೆ ನೀರು ಸರಬರಾಜು

ಬೆಂಗಳೂರು ದಂಡಿನಲ್ಲಿ ಜನರಿಗೆ ಮಿಲಿಟರಿ ಟ್ಯಾಂಕರ್‌ಗಳಲ್ಲಿ ನೀರನ್ನು ಸರಬರಾಜು ಮಾಡುವ ಬಗ್ಗೆ ಸೈನ್ಯಾಧಿಕಾರಿಗಳೊಡನೆ ಪೌರಸಭೆಯ ಅಧಿಕಾರಿಗಳು ನೆನ್ನೆ ದಿನ ಚರ್ಚೆ ನಡೆಸಿದರು ಮೋಟಾರು ಮತ್ತು ಡ್ಯುಯಲ್ ಫಿಲ್ಟರ್ ಕೆಟ್ಟು ಹೋಗಿ ನೀರಿನ ಸರಬರಾಜು ನಿಂತಿದೆ

ಆಯುರ್ವೇದ ಕಾಲೇಜಿಗಾಗಿ ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣವೇ ?

ಮೈಸೂರಿನ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ಸದ್ಯದಲ್ಲಿ ವರ್ಗಾಯಿಸುವುದಿಲ್ಲವೆಂದೂ, ನಿಷ್ಪಕ್ಷಪಾತ ಅಧಿಕಾರಿಯನ್ನಾಗಲೀ ಸಮಿತಿಯನ್ನಾಗಲೀ ನೇಮಿಸಿ ವಿಚಾರಣೆ ನಡೆಸಿ ಅವರ ಸಲಹೆ ಮೇರೆ ವರ್ಗಾವಣೆ ವಿಷಯವನ್ನು ನಿರ್ಧರಿಸುವುದಾಗಿಯೂ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ವಿಧಾನ ಸಭೆಯಲ್ಲಿ ಹೇಳಿದ್ದರು ಅವರ ಪ್ರಕಾರ ಸದರಿ ಅಧಿಕಾರಿ ಅಥವಾ ಸಮಿತಿಯು ನೇಮಕವಾಗುವುದು ಇನ್ನೂ ಬಾಕಿ ಇದೆ ಆದರೆ ಬೆಂಗಳೂರು ಸುಬೇದಾರ್ ಛತ್ರದ ಕಾಂಪೌಂಡಿನಲ್ಲಿ ಆಯುರ್ವೇದ ಕಾಲೇಜಿನ ತರಗತಿಗಳನ್ನು ನಡೆಸಲು ಕಟ್ಟಡಗಳನ್ನು ಕಟ್ಟಲಾಗುತ್ತಿದೆಯೆಂದೂ, ತರಾತುರಿಯಿಂದಲೇ ಕೆಲಸಗಳು ನಡೆಯುತ್ತಾ ಇವೆಯೆಂದೂ ತಿಳಿದು ಬಂದಿದೆ ಮುಖ್ಯ ಮಂತ್ರಿಗಳು ವಿಧಾನ ಸಭೆಯಲ್ಲಿ ಹೇಳಿದಂತೆ ಅಧಿಕಾರಿಯನ್ನಾಗಲಿ, ಸಮಿತಿಯನ್ನಾಗಲಿ ನೇಮಿಸಿ ವಿಚಾರಣೆ ನಡೆಯುವುದಕ್ಕೆ ಮುನ್ನವೇ ಕಾಲೇಜಿಗಾಗಿ ಬೆಂಗಳೂರಿನಲ್ಲಿ ಕಟ್ಟಡ ಕಟ್ಟಲಾಗುತ್ತಿರುವುದು ಆಶ್ಚರ್ಯಕರವಾಗಿದೆ ಅಲ್ಲಿ ಕಟ್ಟಡವನ್ನು ಕಟ್ಟುತ್ತಿರುವ ವಿಷಯವು ಮುಖ್ಯ ಮಂತ್ರಿಗಳ ಗಮನಕ್ಕೆ ಬರಲಿಲ್ಲವೆಂದು ತಿಳಿಯೋಣವೇ ? ಅಥವಾ ಮುಖ್ಯ ಮಂತ್ರಿಗಳು, ತಾವು ಹೇಳಿದಂತೆ ನಿಷ್ಪಕ್ಷಪಾತ ಅಧಿಕಾರಿ ಅಥವಾ ಸಮಿತಿಯ ನೇಮಕವೇ ಬೇಡವೆಂದು ನಿರ್ಧರಿಸಿದ್ದಾರೆಂದು ತಿಳಿಯೋಣವೇ?

—ನಗರವಾಸಿ

ಕುಟುಂಬ ಯೋಜನೆ ಬದಲು ಬ್ರಹ್ಮಚರ್ಯ ಆಶ್ರಮ

ಲೋಕ ಸಭೆಯಲ್ಲಿ ಕುಟುಂಬ ಯೋಜನೆ ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೋತ್ತರಗಳಾಗುತ್ತಿದ್ದಾಗ ಮೊನ್ನೆ ಸಿ. ಡಿ ಪಾಂಡೆಯವರು ಮಾತನಾಡಿ, ಕುಟುಂಬ ಯೋಜನೆಯ ಚಿಕಿತ್ಸೆ ವಿಷಯವು ಭಾರತೀಯರಿಗೆ ತಿಳಿಯದೆಂದೂ, ಅದರ ಬದಲು ದೇಶಾದ್ಯಂತ ಬ್ರಹ್ಮಚರ್ಯ ಆಶ್ರಮವನ್ನು ನಡೆಸುವುದು ಉತ್ತಮವೆಂದೂ ತಿಳಿಸಲಾಗಿ, ಅದಕ್ಕೆ ಆರೋಗ್ಯ ಮಂತ್ರಿ ಅಮೃತ ಕೌರ್‌ರವರು ತಾವೂ ಆತ್ಮ ಸಂಯಮವೇ ಅತ್ಯುತ್ತಮವೆಂದು ಭಾವಿಸುವುದಾಗಿ ತಿಳಿಸಿದರು

ಜಾರ್ಜಿಯದಲ್ಲಿ ಮಿಲಿಟರಿ ಕವಾತಿನ ದುರಂತ

ಅಮೇರಿಕದಲ್ಲಿ ನಾವಿಕರ ವ್ಯಾಯಾಮ ಶಿಕ್ಷಕ ಸಾರ್ಜೆಂಟ್ ಮಾಥ್ಯು ಮೆಕಿಯಾನ್ ಎಂಬಾತನು ೭೬ ಜನ ಸೈನಿಕ ರಿಕ್ರೂಟುಗಳಿಗೆ ನಡಿಗೆಯನ್ನು ಹೇಳಿಕೊಡುವುದಾಗಿ ಕರೆದುಕೊಂಡು ಜೌಗು ಪ್ರದೇಶಕ್ಕೆ ಹೋದಾಗ ೬ ಮಂದಿ ಮುಳುಗಿ ಹೋಗಿ ಮೃತಪಟ್ಟರೆಂದು ವರದಿಯಾಗಿದೆ ಸಾರ್ಜೆಂಟನನ್ನು ವಿಚಾರಣೆಗೆ ಗುರಿಪಡಿಸಲಾಗಿದೆ

ಭದ್ರಾಚಲದಲ್ಲಿ ೧೨೦ ಡಿಗ್ರಿ ಉಷ್ಣಾಂಶ

ಭದ್ರಾಚಲದಲ್ಲಿ ಮೊನ್ನೆ ೧೨೦·೫ ಡಿಗ್ರಿಯಷ್ಟು ಉಷ್ಣಾಂಶವು ನೆರಳಿನ ಪ್ರದೇಶದಲ್ಲಿ ಇತ್ತು. ಬಿಸಿಲಿನ ಬೇಗೆಗಾಗಿ ಅಲ್ಲಿ ಇಬ್ಬರು ಮೃತಪಟ್ಟರು ಊರಿನಲ್ಲಿ ಜನ ಸಂಚಾರವೇ ಇರಲಿಲ್ಲ

ಯಾದವ ಸಂಘದ ವಿದ್ಯಾರ್ಥಿ ನಿಲಯ

ಗೊಲ್ಲಗೇರಿಯ ಯಾದವ ಸಂಘದವರು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿರುವ ವಿದ್ಯಾರ್ಥಿ ನಿಲಯದಲ್ಲಿ ಉಚಿತ ವಸತಿಯ ಸೌಲಭ್ಯವನ್ನು ಹೈಸ್ಕೂಲ್ ಮತ್ತು ಕಾಲೇಜುಗಳ ಬಡ ಯಾದವ ವಿದ್ಯಾರ್ಥಿಗಳು ಉಪಯೋಗಿಸಿಕೊಳ್ಳಬಹುದೆಂದೂ, ಸಾಧ್ಯವಿದ್ದರೆ ಯಾದವರಲ್ಲದ ವಿದ್ಯಾರ್ಥಿಗಳಿಗೂ ಅವಕಾಶ ಕಲ್ಪಿಸಲಾಗುವುದೆಂದೂ, ಈ ಬಗ್ಗೆ ಅರ್ಜಿ ಫಾರಂಗಳನ್ನು ಹಾಸ್ಟೆಲಿನ ವಾರ್ಡನ್ನರಿಂದ ಪಡೆದು ಇದೇ ೧೫ನೇ ತಾ॥ ಒಳಗೆ ೬ರಲ್ಲಿ ಹಾಕಿಕೊಳ್ಳಬೇಕೆಂದೂ ಕೋರಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೬ ೫ ಸಿತಾರ್ ೬ ೧೫ ಕೆ ಟಿ ಪ್ರಭುಪ್ರಸಾದ್ ಗೀತಾವಳಿ ೬-೪೦ ಮತ್ತು ೬-೧೫ ಆರ್ ಚಂದ್ರ ಕಾವ್ಯವಾಚನ ಮಧ್ಯಾಹ್ನ ೧೨ ಎಸ್ ಆರ್ ಪದ್ಮ ಸಂಗೀತ ೧೨ ೪೦ ಹೆಚ್ ಟಿ ಪೊನ್ನುಸ್ವಾಮಿ-ಪಿಟೀಲು ೧ ಆರ್ ಲೀಲಾಬಾಯಿ ಹಿಂದೂಸ್ತಾನಿ ಸಂಗೀತ ೧-೩೦ ಸಿತಾರ್ ೫ ೧೫ ಟಿ ಆರ್ ಶ್ರೀನಿವಾಸ-ಸಂಗೀತ ಸಂಜೆ ೫ ೪೦ ಆರ್ ಲೀಲಾ ಬಾಯಿ ಹಿಂದೂಸ್ತಾನಿ ಸಂಗೀತ ೬ ೧೫ ಜಾನಪದ ಗೀತೆ ೬-೪೦ ಭಕ್ತಿ ಗೀತೆ ಅ ನಮ್ಮ ಮನೆಯ ಗೀತೆ ೮ ೪೦ ಟಿ ಆರ್ ಶ್ರೀನಿವಾಸ ಸಂಗೀತ ೯ ೧೫ ಗಾಂಧಿ ಸಾಹಿತ್ಯ-ಭಾಷಣ ೯-೪೦ ಬೌದ್ಧ ಯಾತ್ರಾ ಸ್ಥಳಗಳು ೧೦ ವಾಕ್ಯಾಂತರ

ಸಿಂಹಳದಲ್ಲಿ ಶಾಲಾ ಮಕ್ಕಳಿಗೆ ಉಚಿತ ಹಾಲು

ಬರುವ ಸೆಪ್ಟೆಂಬರ್ ತಿಂಗಳಿಂದ ಸಿಂಹಳದಲ್ಲಿ ಪ್ರತಿ ಶಾಲಾ ಮಕ್ಕಳಿಗೂ ೧ ಗ್ಲಾಸಿನಷ್ಟು ಹಾಲನ್ನು ಉಚಿತವಾಗಿ ಕೊಡಲಾಗುವುದು [illegible] ದಲ್ಲಿದೆ ನೂತನ ಮಂತ್ರಿಮಂಡಲವು [illegible] ಘೋಷಣೆಯಲ್ಲಿ ತಿಳಿಸಿದ್ದಂತೆ ಉಚಿತ [illegible] ವನ್ನೂ ಸಹ ಪುನಃ ಏರ್ಪಡಿಸಲಿದೆ ಅಮೇರಿಕ [illegible] ಸಂಸ್ಥೆಯೊಂದು ಉಚಿತವಾಗಿ ಒದಗಿಸುವ [illegible] ಕೋಟಿ ಪೌಂಡು ಹಾಲಿನ ಪುಡಿಯಿಂದ ಹಾಲನ್ನು ತಯಾರಿಸಿ ಕೊಡಲಾಗುವುದು

ಮಹದೇವಸ್ವಾಮಿಯವರಿಗೆ ಸನ್ಮಾನ

ಮುಡುಕತೊರೆ ಬೆಟ್ಟದ ಮೆಟ್ಟಲು ನಿರ್ಮಾಣ ನಿಧಿಯ ಸಹಾಯಾರ್ಥವಾಗಿ ಶ್ರೀ ಸಂಗನಾಥ ಕೃಪಾಪೋಷಿತ ನಾಟಕ ಸಭೆಯವರು [illegible] ಭಾನುವಾರ ಟೌನ್‌ಹಾಲಿನಲ್ಲಿ " ಬೇಡರ ಕಣ್ಣಪ್ಪ " ಎಂಬ ನಾಟಕವನ್ನು ಅಭಿನಯಿಸಿದರು ಪುರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಅಗ್ರಾಸನ ವಹಿಸಿದ್ದರು ಇದೇ ಸಂದರ್ಭದಲ್ಲಿ ನಾಟಕ ಸಭೆಯ ಮಾಲೀಕ ಶ್ರೀ ಕೆ ಎಸ್ [illegible] ರುದ್ರಸ್ವಾಮಿಯವರು ನಾಟ್ಯ ಕಲಾ ವಿಶಾರದ ಶ್ರೀ ಎಂ ಸಿ ಮಹದೇವಸ್ವಾಮಿಯವರಿಗೆ ಸನ್ಮಾನ ಪತ್ರವೊಂದನ್ನು ಅರ್ಪಿಸಿದರು. ಶ್ರೀ ಹೆಚ್ ಗಂಗಾಧರ್‌ರವರು ಭಾಷಣ ಮಾಡಿ, ಮುಖ್ಯ [illegible] ತಿಥಿಗಳನ್ನು ಪ್ರಶಂಸಿಸಿದರು ಶ್ರೀ ಮಹದೇವಸ್ವಾಮಿಯವರು ಸನ್ಮಾನಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಪಡಿಸಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಾಟಕ ಕಲೆಗೆ ಪ್ರೋತ್ಸಾಹ ನೀಡಬೇಕಾದ ಮತ್ತು ಜನತೆಯ ಅಭಿರುಚಿಗೆ ತಕ್ಕಂತೆ ನಾಟಕಗಳು ಹೊಂದಿಕೊಳ್ಳಬೇಕಾದುದರ ಆವಶ್ಯಕತೆಯನ್ನು ಒತ್ತಿ ಹೇಳಿದರು

ಮೈಸೂರು ಪೇಟೆ ಧಾರಣೆ

	ರೂ	ಆಣೆ	ಪೈ	ರೂ	ಆಣೆ	ಪೈ
ಕಡಲೆಕಾಯಿ	೨೦	೪	೦	೨೭	೬	[illegible]
ಎಳ್ಳೆಣ್ಣೆ	೪೬	೨	೦			
ಹೊಂಗೆಬೀಜ	೨೨	೦	೦	೨೫	೧೨	[illegible]
ಹುಣಸೇಬೀಜ	೯	೩	೦	೫	೫	[illegible]
ಹುರುಳಿ	೨೭	೧೨	೦	೨೮	೮	[illegible]
ಹಲಸಂದೆ	೩೦	೦	೦			
ತೊಗರಿ	೨೯	೧೪	೦	೪೦	೧೦	[illegible]
ಸಿಗೇಕಾಯಿ	೭	೮	೦			
ಹುಣಸೇಹಣ್ಣು	೪	೪	೦	೫	೧೧	[illegible]
ಮೆಣಸಿನಕಾಯಿ	೧೨	೦	೦	೧೫	೮	[illegible]
ಬೆಲ್ಲ	೯	೭	೮			
ತೆಂಗಿನಕಾಯಿ ೧೦೦೦	೧೦೭	೦	೦	೨೦೪	೮	[illegible]

SARADAVILAS COLLEGE,
MYSORE
Inter Tutorial Section
Students coached
for September Exams
In
ENGLISH, KANNADA and P C M
BY
Highly experienced staff
Hon Secretary

CITY TUTORIAL COLLEGE,
V V Market, Mysore
Admissions received to the
Coaching Classes for the
Intermediate Exams.
OF SEPTEMBER 1956
Subjects *English, Kannada, Samskrita P C M, P E M, H E L, H E G & C B Z*
Please enquire for other particulars

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
[illegible]
ಗಡಿಯಾರಗಳು ಮತ್ತು ಕನ್ನಡಕಗಳು
[illegible]
ಕೆ. ಎಸ್. ಲಕ್ಷ್ಮಣ ಐಯ್ಯರ್
[illegible]
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd. 1911)

VIDYA TUTORIAL COLLEGE
(Dalvoy High School Buildings, Mysore)
Supplementary Examinations 1956 (University of Mysore)
CLASSES WILL COMMENCE ON 16 5-1956
INTER- | Arts, Science, Commerce | All Parts,
B A , B Sc | | All Subjects
LADIES ALSO ADMITTED
Regular Coaching will be given to
Junior Inter Junior B A , B Sc , Students
ADMISSIONS ON
Enquire, 9 to 10 A M & 5-30 to 8.30 P M
Boarding & Lodging arranged

Edited, Printed and Published by A. R. Nagarajan at Sadhvi Press D Subbiah Road Mysore

CHAMPION METROPOLITAN COLLEGE OF COMMERCE
APPLICATIONS FOR ADMISSION to classes leading to Diplomas in Commerce, Shorthand and Typewriting are now being received in the mornings & evenings on all working days
(Sd) M S PUTTANNA — Vice Principal
P SUBBARAYA SASTRY, — Principal

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಒಂದು ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೯] SADHVI : THURSDAY 10-5-1956 ಮೈಸೂರು ಗುರುವಾರ : ೧೦-೫-೧೯೫೬ [ಸಂಚಿಕೆ : ೩೫೪

ಬರುವ ನವೆಂಬರ್ ೧ರಲ್ಲಿ ಹೊಸ ಸಂಸ್ಥಾನಗಳ ರಚನೆ

ಪಿರಿಯಾಪಟ್ಟಣದ ಉಪ ಚುನಾವಣೆ

ಕಾಂಗ್ರೆಸ್ ಸ್ಪರ್ಧೆ ಬಗ್ಗೆ ನಿರ್ಧರಿಸಲು ಅಧ್ಯಕ್ಷರಿಗೆ ಅಧಿಕಾರ

ಬೆಂಗಳೂರು ೧೦

ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ನಡೆದು ಪಿರಿಯಾಪಟ್ಟಣದ ಕ್ಷೇತ್ರದಿಂದ ವಿಧಾನ ಸಭೆಗೆ ಕಾಂಗ್ರೆಸ್ ಉಮೇದುವಾರರನ್ನು ನಿಲ್ಲಿಸುವ ವಿಷಯವನ್ನು ಪರಿಶೀಲಿಸಿ, ಚುನಾವಣೆಯಲ್ಲಿ ಕಾಂಗ್ರೆಸ್ಸು ಭಾಗವಹಿಸುವುದರ ಅಗತ್ಯ ಮತ್ತು ಕಾಂಗ್ರೆಸ್ ಉಮೇದುವಾರರನ್ನು ಬಗ್ಗೆ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳಲು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಅಧಿಕಾರವನ್ನಿತ್ತಿತು. ಮೈಸೂರು ಜಿಲ್ಲಾ ಮತ್ತು ಪಿರಿಯಾಪಟ್ಟಣ ತಾಲ್ಲೂಕು ಕಾಂಗ್ರೆಸ್ ಸಮಿತಿಗಳ ಸದಸ್ಯರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಪಿರಿಯಾಪಟ್ಟಣದಲ್ಲಿ ಕಳೆದ ೭ನೇ ತಾರೀಕು ಸೇರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಹೆಸರನ್ನು ಶಿಫಾರಸು ಮಾಡಿದ್ದರು.

ನೂತನ ಜಿಲ್ಲಾ ನ್ಯಾಯಾಧೀಶರು

ಬೆಂಗಳೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಕೆ. ಪೊನ್ನಯ್ಯ ಮತ್ತು ತುಮಕೂರಿನ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಕೆ. ಭೀಮಯ್ಯನವರುಗಳನ್ನು ಇದೇ ೧೪ನೇ ತಾರೀಕಿನಿಂದ ಅಫಿಷಿಯೇಟಿಂಗ್ ಜಿಲ್ಲಾ ನ್ಯಾಯಾಧೀಶರಾಗಿ ನೇಮಕ ಮಾಡಲಾಗಿದೆ.

ಐ. ಎನ್. ಟಿ. ಯು. ಸಿಗೆ ವಾಸವದ ಅಧ್ಯಕ್ಷರು

ಸೂತ್ರಧಿಲ್ಲಿ ಸೇರಿದ್ದ ಭಾರತದ ರಾಷ್ಟ್ರೀಯ ಟ್ರೇಡ್ [illegible] ಕಾಂಗ್ರೆಸ್ಸಿಗೆ ಬರುವ ವರ್ಷಕ್ಕೆ [illegible]. [illegible]ರವರನ್ನು ಅಧ್ಯಕ್ಷರಾಗಿ [illegible]. [illegible] ಪ್ರಧಾನ ಕಾರ್ಯದರ್ಶಿಯಾಗಿ [illegible] ಕಾರ್ಯಕಾರಿ ಸಮಿತಿಗೆ ಬೆಂಗಳೂರಿನ ಶ್ರೀ [illegible]ರವರನ್ನು ಸದಸ್ಯರಾಗಿ ಅಧ್ಯಕ್ಷರು [illegible] ಮಾಡಿದ್ದಾರೆ.

ಬಿಹಾರ್ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚನೆ ಯತ್ನ

ಬಿಹಾರ್ ಮಂತ್ರಿಮಂಡಲದಲ್ಲಿ ಅವಿಶ್ವಾಸದ ಸೂಚನೆ, ಅಲ್ಲಿನ ಶಾಸನ ಸಭೆಗೆ ಪ್ರಜಾ ಸೋಷಲಿಸ್ಟ್ ಪಕ್ಷದ [illegible] [illegible] ಸಲ್ಲಿಸಿದ್ದಾರೆ. ಅದನ್ನು ಸಭೆಯು ಇದೇ ತಿಂಗಳು ೧೫ನೇ ತಾರೀಕು ಚರ್ಚಿಸಲಿದೆ.

ಮೈಸೂರು ತಾಲ್ಲೂಕು ಗ್ರಾಮ ಪಂಚಾಯಿತಿಗಳ ಸಮ್ಮೇಳನ

ಮೈಸೂರು ತಾಲ್ಲೂಕು ಗ್ರಾಮ ಪಂಚಾಯಿತಿಗಳ ಸಮ್ಮೇಳನವು ಇದೇ ೧೩ನೇ ತಾರೀಕು ಭಾನುವಾರ ಬೆಳಗ್ಗೆ ೧೦ ಗಂಟೆಗೆ ಟೌನ್‌ಹಾಲಿನಲ್ಲಿ ನೆರೆಯುವುದು. ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅದರ ಆರಂಭೋತ್ಸವವನ್ನು ನೆರವೇರಿಸುವರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ನೂತನ ಕನ್ನಡ ಪ್ರಾಂತದ ಸಮಸ್ಯೆಗಳ ಪರಿಶೀಲನೆಗಾಗಿ ಸಮಿತಿ

ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ನೆನ್ನೆ ಹುಬ್ಬಳ್ಳಿಯಲ್ಲಿ ಸೇರಿ, ನೂತನ ಮೈಸೂರು ಸಂಸ್ಥಾನದ ರಚನೆಯ ಪರಿಣಾಮವಾಗಿ ಉದ್ಭವವಾಗುವ ಸಮಸ್ಯೆಗಳನ್ನು ಪರಿಶೀಲಿಸಲು ೨೭ ಜನರುಳ್ಳ ಸಮಿತಿಯೊಂದನ್ನು ಘಟಿಸಿತು. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಅದರ ಅಧ್ಯಕ್ಷರಾಗಿರುವರು. ಕೆ. ಪಿ. ಸಿ. ಸಿ. ಯ ಅಧ್ಯಕ್ಷ ಶ್ರೀ ಚನ್ನಬಸಪ್ಪ ಕಂಬಳಿಯವರು ಉಪಾಧ್ಯಕ್ಷರಾಗಿಯೂ ಬೊಂಬಾಯಿ ಮಂತ್ರಿ ಶ್ರೀ ಎಂ. ಪಿ. [illegible] ಕಾರ್ಯದರ್ಶಿಯಾಗಿಯೂ ನೇಮಿತರಾಗಿರುವರು.

ಮೈಸೂರನ್ನು ಕರ್ನಾಟಕವೆಂದು ಕರೆಯಲು ಕೆ. ಪಿ. ಸಿ. ಸಿ. ಕರೆ

ನೂತನ ಕನ್ನಡ ಸಂಸ್ಥಾನವನ್ನು ಮೈಸೂರು ಸಂಸ್ಥಾನ ಎಂಬುದರ ಬದಲು ಕರ್ನಾಟಕವೆಂದು ಕರೆಯಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಶಿಫಾರಸು ಮಾಡಿದೆ.

ಶಂಕರ ಜಯಂತಿ ಮಹೋತ್ಸವ

ರಾಜಧಾನಿಯ ಶಂಕರ ಜಯಂತಿ ಮಹೋತ್ಸವ ಸಭೆಯವರು ಏರ್ಪಡಿಸುವ ಜಯಂತಿ ಅಂಗವಾದ ಉತ್ಸವವು ನಾಳೆ ಬೆಳಗ್ಗೆ ೬ ಗಂಟೆಗೆ ತ್ರಿನಯನೇಶ್ವರ ದೇವಸ್ಥಾನ ಮತ್ತು ಸಂಸ್ಕೃತ ಮಹಾಪಾಠಶಾಲೆಗಳಲ್ಲಿ ಆರಂಭವಾಗುವುದು. ಬೆಳಗ್ಗೆ ಏಕಾದಶ ವಾರ ರುದ್ರಾಭಿಷೇಕ, ವೇದ ಪ್ರಸ್ಥಾನತ್ರಯ ಭಾಷ್ಯ ಮತ್ತು ಶಂಕರ ವಿಜಯಗಳ ಪಾರಾಯಣಗಳು ನಡೆಯುವುವು. ನಾಳೆ ಸಂಜೆ ೭ ಗಂಟೆಗೆ ಪಾಠಶಾಲೆಯಲ್ಲಿ ಆರ್. ಪಿ. ಎಸ್. ವಿಶ್ವಲಿಶಾಸ್ತ್ರಿಯವರು "ಶಂಕರ ಮತದ ಪೂ ಮತ್ತು ವಿವರ್ತ ವಾದವೂ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಶ್ರೀಮದ್ ಸಂ[illegible] ಬ್ರ|| ಶ್ರೀ ಟಿ. ಕೆ. ವೇಣುಗೋಪಾಲದಾಸರಿಂದ ಗಜಗೌರಿ ಎಂಬ ಹರಿಕಥೆ ಇದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೮ ನಾಗಸ್ವರ ೭ ೧೫ ಆರ್. [illegible] ವೇಷರ ನಾಯು ೭-೪೦ ಹಿಂದಿ [illegible] [illegible] ರಯ ಸಂಗೀತ ಮಧ್ಯಾಹ್ನ ೧೨ ವಿಜಯಲಕ್ಷ್ಮಿ ವಾಸುದೇವನ್-ಸಂಗೀತ ೧೨-೪೦ ವಾದ್ಯವೃಂದ ೧ [illegible] ವಿಚಾರ-ಮಹಿಳೆಯರ ಕಾರ್ಯಕ್ರಮ ೧ ೩೦ ನಾಗಸ್ವರ [illegible] ಹೆಚ್. ಎಸ್. ಅನಸೂಯ ಸಂಗೀತ ಸಂಜೆ ೫ ೪೦ ಸಂಗೀತ [illegible] ಮಾರ್ ಗೀತೆ [illegible] ೪೦ ಸಾವನ ನಾಗರಿಕರು [illegible] ರಾಜನಾಥ ಟಿ. ಎಂ. ತ್ಯಾಗರಾಜನ್ ಸಂಗೀತ [illegible] ರಸಮಂಜರಿ. ೧೦ ಹೆಚ್. ಎಸ್. ಅನಸೂಯ ಗಾಯನ

ಮೈಸೂರು ಕೊ-ಆಪರೇಟಿವ್ ಸೊಸೈಟಿ ರಜತ ಮಹೋತ್ಸವ

ನಗರದಲ್ಲಿರುವ ಮೈಸೂರು ಕೊ ಆಪರೇಟಿವ್ ಸೊಸೈಟಿಯ ಸುವರ್ಣ ಮಹೋತ್ಸವವು ಬರುವ ತಿಂಗಳು ನೆರವೇರಲಿದೆ. ಕೇಂದ್ರ ಮಂತ್ರಿ ಅಜಿತಪ್ರಸಾದ್ ಜೈನ್, ಮೈಸೂರಿನ ರಾಜಪ್ರಮುಖರು ಮತ್ತು ಇತರ ಗಣ್ಯ ಮಹನೀಯರು ಭಾಗವಹಿಸುವ ನಿರೀಕ್ಷೆಯಿದೆ.

ಮಹಾ ಚುನಾವಣೆಗಳು ಬರುವ ಮಾರ್ಚಿಯಲ್ಲಿ

ಬರುವ ವರ್ಷ ಮಾರ್ಚಿಯಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಬೇಕೆಂದು ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷವು ನಿರ್ಧರಿಸಿರುವುದಾಗಿ ವರದಿಯಾಗಿದೆ. ಸಂಸ್ಥಾನ ಪುನರ್ವಿಂಗಡಣಾ ಮಸೂದೆಯು ಅಂಗೀಕಾರ ಮತ್ತು ನೂತನ ಸಂಸ್ಥಾನಗಳ ಉದಯವು ತಡವಾದರೂ ಚುನಾವಣೆಗಳನ್ನು ಮುಂದುವರಿಸಲು ಪಕ್ಷವು ಇಚ್ಛಿಸದಿರುವುದೆಂದು ಹೇಳಲಾಗಿದೆ.

ಪಾಕಿಸ್ತಾನದೊಡನೆ ೧೦ ಲ. ವ್ಯಾಪಾರದಲ್ಲಿ ೧,೩೯೦ ರೂ ನಷ್ಟ.

೧೦ ಲಕ್ಷ ಗಳು ಗಿಪ ಕಿಸ್ತಾನ ಪತ್ತು ಭಾರತದ ಮೈತ್ರಿಗಳಿಗೆ ವ್ಯಾಪಾರದ ಗಿ ಅದರಿಂದ ಭಾರತಕ್ಕೆ ೧,೩೯೦ ರೂ ನಷ್ಟವಾಯಿತೆಂದು ಗೊತ್ತಾಗಿದೆ. ಒಂದು ವ್ಯಾಪಾರಗಾಗಿ ಪಾಕಿಸ್ತಾನವು ೧೦ ರೂ ಬಾಕಿ ಕೊಡಬೇಕೆಂದು ಕೋರಿಕೆಯಾಗಿತ್ತು. ಪರಸ್ಪರ ಬದಲಾವಣೆ ಸ್ಥಳದಲ್ಲಿ ಈ ಒಪ್ಪಂದವನ್ನು ಪಾಕಿಸ್ತಾನದವರು ಒಪ್ಪದೆ ನಾಣ್ಯವ್ಯವಹಾರಗಳನ್ನು ವಿನಿಮಯ ಮಾಡುವುದಕ್ಕೆ ನಿರಾಕರಿಸಿದರೆಂದೂ, ಅದರಿಂದ ಭಾರತಕ್ಕೆ [illegible] ೧,೩೯೦ ರೂ ನಷ್ಟವಾಯಿತೆಂದೂ ಹೇಳಲಾಗಿದೆ.

ಬಿ. ಎಸ್. ಶಾಸ್ತ್ರಿಯ ಮೇಲೆ ದೆಹಲಿಯವರ ದೂರು

ದೆಹಲಿಯ ಶ್ರೀ ಗಣಪತ್ ಪುರಿಯವರಿಗೆ ಸಿಂಗಪುರದಿಂದ ಬಂದ ಒಟ್ಟೆಗಳನ್ನು ಮೈಸೂರು ಹಳೆ ಅಗ್ರಹಾರದ ಬಿ. ಎಸ್. ಶಾಸ್ತ್ರಿ ಎಂಬುವರು ಬೊಂಬಾಯಿಯಲ್ಲಿ ತೆಗೆದುಕೊಂಡು ಸವರಿಯವರಿಗೆ ೧ ಸಾವಿರ ರೂ ಪರಿಗೆ ಮೋಸ ಮಾಡಿದ್ದುದಾಗಿ ಮೈಸೂರು ಪೋಲೀಸರಿಗೆ ದೂರು ಕೊಡಲಾಗಿದೆ. ಬಿ. ಎಸ್. ಶಾಸ್ತ್ರಿ ಬೇರೆಯೊಂದು ಮೊಕದ್ದಮೆಯಲ್ಲಿ ೧ ವರ್ಷ ಸಜಾ ವಿಧಿಸಲಾಗಿದೆ.

ನೌಕರಿ ಕೊಡಿಸುವುದಾಗಿ ತಿಳಿಸಿ ಮೋಸ ಮಾಡಿದ್ದಕ್ಕೆ ೧೫ ದಿನ ಸಜಾ

ತಾನು ಹಾಲಿವುಡ್ ಚಿತ್ರ ಸಂಸ್ಥೆಯ ಪ್ರತಿನಿಧಿಯೆಂದು ಹೇಳಿಕೊಂಡು, ಮಂಗಳೂರಿನ ಫ್ರಾನ್ಸಿಸ್ ಎಂಬುವರ ಮಗ ಲಾರೆನ್ಸ್ ಉರುಫ್ ಮಹಾಬಲಶೆಟ್ಟಿ ಎಂಬುವನು ಕಳೆದ ೨೭ನೆ ತಾರೀಕು ಇಲ್ಲಿನ ಚಿತ್ರಮಂದಿರದ ನೌಕರರೊಬ್ಬರಾದ ದಕ್ಷಿಣಾಮೂರ್ತಿಯವರಿಗೆ ಹುದ್ದೆಯನ್ನು ಕೊಡಿಸುವುದಾಗಿ ಹೇಳಿ ನಂಬಿಸಿ ಅವರಿಂದ ೬ ರೂ ಪಡೆದು ಮೋಸ ಮಾಡಿದನೆಂದು ಅವನಿಗೆ ನೆನ್ನೆ ೧೫ ದಿನ ಕಠಿಣ ಸಜಾ ವಿಧಿಸಲಾಯಿತು.

ಕಳುವಿಗಾಗಿ ೬ ತಿಂಗಳ ಸಜಾ

ಸಾಲುಹುಂಡಿಯ ಬಸವ ಉರುಫ್ ಅಂಡೆ ಬಸವ ಎಂಬುವನು ಧನ್ವಂತರಿ ರಸ್ತೆಯಲ್ಲಿ ಕೆಲವು ದಿನಗಳ ಹಿಂದೆ ಬಿ ಜಿ ಪಿ ಸರ್ವಿಸ್ಸಿನ ಲಾರಿಯೊಂದರ ೩ ಸ್ಟೆಪ್ನಿಗಳನ್ನೂ, ಸಂತೆಪೇಟೆಯ ಶ್ರೀ ಹೇಮನ್ನನವರ ಗೋಡೌನಿನಲ್ಲಿ ಕಡಲೆ ಮೂಟೆಗಳನ್ನೂ ಕಳುವು ಮಾಡಿದ್ದಕ್ಕಾಗಿ ಅವನಿಗೆ ೬ ತಿಂಗಳ ಕಠಿಣ ಸಜಾ ವಿಧಿಸಲಾಯಿತು. ಅವನಿಗೆ ಹಿಂದೆಯೂ ಶಿಕ್ಷೆಯಾಗಿತ್ತು.

ನವೆಂಬರ್ ೧ರಂದು ನೂತನ ಸಂಸ್ಥಾನಗಳ ರಚನೆ

ನೂತನ ಸಂಸ್ಥಾನಗಳು ಬರುವ ನವೆಂಬರ್ ೧ರಂದು ರೂಪುಗೊಳ್ಳುವಂತೆ ನಿರ್ಧರಿಸಲಾಗಿರುವುದೆಂದು ವರದಿಯಾಗಿದೆ. ಅಕ್ಟೋಬರ್ ೧ಕ್ಕೆ ಅವುಗಳ ಸ್ಥಾಪನೆಯಾಗುವುದಿಲ್ಲವೆಂದೂ ಹೇಳಲಾಗಿದೆ.

ಸಂಸ್ಥಾನದ ಸ್ಕೌಟುಗಳ ಜಾಂಬೂರಿ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಂದ ಆರಂಭೋತ್ಸವ

ಸಂಸ್ಥಾನದ ಸ್ಕೌಟುಗಳು ಮತ್ತು ಗರ್ಲ್ ಗೈಡುಗಳ ಜಾಂಬೂರಿಯು ತುಮಕೂರಿನಲ್ಲಿ ನೆನ್ನೆ ಸೇರಿತು. ಅದರ ಆರಂಭೋತ್ಸವವನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚನ್ನಯ್ಯನವರು ನೆರವೇರಿಸಿದರು.

ಜಾಂಬೂರಿ ಶಿಬಿರದ ಮುಖ್ಯಾಧಿಕಾರಿಗಳಾದ ಶ್ರೀ ಎಂ. ರಹೀಮುಲ್ಲಾರವರಿಂದ ಸ್ವಾಗತ ಭಾಷಣವಾದನಂತರ ಸಂಸ್ಥಾನದ ಚೀಫ್ ಸ್ಕೌಟ್ ಕಮಿಷನರ್ ಶ್ರೀ ಡಿ. ಬಿ. ಮಲ್ಲಾರಾಧ್ಯರು ಭಾಷಣ ಮಾಡಿ ಸ್ಕೌಟುಗಳು ರಾಷ್ಟ್ರ ಸೇವೆಯನ್ನು ಗ್ರಾಮಾಭಿವೃದ್ಧಿಯ ಮೂಲಕ ಸಲ್ಲಿಸಬೇಕೆಂದು ಸೂಚಿಸಿದರು. ೨,೮೦೦ ಜನ ಸ್ಕೌಟುಗಳು ಇದರಲ್ಲಿ ಭಾಗವಹಿಸುತ್ತಿದ್ದಾರೆ.

ರಾಜಪ್ರಮುಖರು ಸಂದೇಶ ಕಳುಹಿಸಿ, ಮೈಸೂರಿನಲ್ಲಿ ೪೫ ವರ್ಷಗಳಿಂದ ಸ್ಕೌಟು ಚಳುವಳಿಯು ಉತ್ಸಾಹಯುತ ವ್ಯಕ್ತಿಗಳ ನೇತೃತ್ವದಲ್ಲಿ ನಡೆದುಕೊಂಡು ಬಂದಿರುವುದೆಂತಲೂ, ಅದರ ತತ್ವಗಳು ಸ್ಕೌಟುಗಳಲ್ಲಿ ಬೇರೂರಬೇಕೆಂದೂ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಏರ್ಪಡಿಸಲಾದ ಪ್ರದರ್ಶನವನ್ನು ಶ್ರೀ ಮಲ್ಲಾರಾಧ್ಯರು ಆರಂಭಗೊಳಿಸಿದರು. ಸ್ಕೌಟುಗಳು ರಚನಾ ಕೆಲಸದಲ್ಲಿ ಕೈ ಹಾಕುವುದರ ಅವಶ್ಯಕತೆಯನ್ನು ಅವರು ಒತ್ತಿ ಹೇಳಿ, ಅದರಿಂದ ನಿರುದ್ಯೋಗ ಸಮಸ್ಯೆಯು ಕಡಿಮೆಯಾಗುತ್ತದೆಂದು ಸೂಚಿಸಿದರು.

ಮೈಸೂರು ಮತ್ತು ಬೆಂಗಳೂರು ಲಾ ಪರೀಕ್ಷೆ ಫಲಿತಾಂಶ

ಮೈಸೂರು ಲಾ ಕಾಲೇಜಿನ ಬಿ ಎಲ್ ಪರೀಕ್ಷೆಯಲ್ಲಿ ಈ ವರ್ಷ ಕುಳಿತ ೩೪ ವಿದ್ಯಾರ್ಥಿಗಳ ಪೈಕಿ ೨೩ ಜನರು ತೇರ್ಗಡೆಯಾಗಿ ಅವರಲ್ಲಿ ೬ ಮಂದಿ ಸೆಕೆಂಡ್ ಕ್ಲಾಸ್ ಪಡೆದಿದ್ದಾರೆ. ತೇಕಡ ಒಂದನ್ನು ಮಂದಿ ಉತ್ತೀರ್ಣರಾಗಿರುವರು. ಎಫ್ ಎಲ್ ನಲ್ಲಿ ೮೩ ಜನ ಕುಳಿತವರ ಪೈಕಿ ೩೮ ಪಾಸಾಗಿದ್ದಾರೆ. ೯ ಮಂದಿಗೆ ಸೆಕೆಂಡ್ ಕ್ಲಾಸ್ ದೊರೆಯಿತು. ಶೇಕಡ ೪೫ರಷ್ಟು ಫಲಿತಾಂಶವು ಬಂದಿದೆ. ಬೆಂಗಳೂರು ಲಾ ಕಾಲೇಜಿನ ಬಿ ಎಲ್ ಪರೀಕ್ಷೆಯಲ್ಲಿ ೧೪೯ ಜನರ ಪೈಕಿ ೮೦ ಮಂದಿ ಪಾಸಾಗಿರುವರು. ೮ ಜನರು ಸೆಕೆಂಡ್ ಕ್ಲಾಸಿನಲ್ಲಿ ತೇರ್ಗಡೆಯಾಗಿರುವರು. ಶೇಕಡ ೫೪ರಷ್ಟು ಆಗಿದೆ. ಎಫ್ ಎಲ್ ನಲ್ಲಿ ೨೩೩ ಮಂದಿ ಪೈಕಿ ೦೬ ಜನರು ಪಾಸಾಗಿರುವರು. ಶೇಕಡ ೬೭ರ ಪಾಸು ಆಗಿದೆ.

ಟೌನ್ ಪೌರಸಭೆಗಳು ಸ್ವಾವಲಂಬಿಗಳಾಗಬೇಕು

ಸರ್ಕಾರದವರ ಸೂಚನೆ

ಬೆಂಗಳೂರು ೯

ಸಂಸ್ಥಾನದ ಟೌನ್ ಮುನಿಸಿಪಲ್ ಟಿಗಳ ಆದಾಯದ ಪರಿಸ್ಥಿತಿ ಬಗ್ಗೆ ಸರ್ಕಾರದವರು ವಿಮರ್ಶೆ ಮಾಡಿ, ಹಲವು ಪೌರಸಭೆಗಳು ತಮಗೆ ಹಣ ಸಹಾಯಕ್ಕಾಗಿ ಸರ್ಕಾರದವರನ್ನೇ ಮುಖ್ಯವಾಗಿ ಅವಲಂಬಿಸುವ ವಾಡಿಕೆಯಿದೆಯೆಂದೂ ಅವುಗಳು ಸ್ವಾವಲಂಬಿಗಳಾಗಬೇಕೆಂಬುದೇ ಸರ್ಕಾರದವರ ಅಭಿಲಾಷೆಯೆಂದೂ, ಈ ಬಗ್ಗೆ ಸಭೆಗಳು ಹಳೆಯ ಬಾಕಿಗಳನ್ನು ಪೂರ್ತಿ ವಸೂಲು ಮಾಡುವುದಲ್ಲದೆ ಹೊಸ ತೆರಿಗೆಗಳನ್ನು ವಿಧಿಸಬೇಕೆಂದೂ ತಿಳಿಸಿರುತ್ತಾರೆ

ಹಲವು ಪೌರಸಭೆಗಳ ಎಲ್ಲೆ ವಿಸ್ತರಣೆ

ರಾಮನಗರ, ಯಳಂದೂರು, ಟಿ ನರಸೀಪುರ, ಮಿರ್ಲೆ, ಆಗರ-ಮಾಂಬಳ್ಳಿ ಚಳ್ಳಕೆರೆ ಮತ್ತು ಮಂಡ್ಯ ಪೌರಸಭೆಗಳ ಎಲ್ಲೆಯನ್ನು ವಿಸ್ತರಿಸುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿದೆ ಮಲಿಯೂರು ಗ್ರಾಮ ಪಂಚಾಯಿತಿಯನ್ನು ಟೌನ್ ಪೌರಸಭೆಗೆ ಪರಿವರ್ತಿಸಲೂ ಆಲೋಚಿಸಲಾಗುತ್ತಿದೆ

ಪಶ್ಚಿಮ ಪಾಕಿಸ್ತಾನದಲ್ಲಿ ಅಧ್ಯಕ್ಷರ ಆಡಳಿತ?

ಪಶ್ಚಿಮ ಪಾಕಿಸ್ತಾನದಲ್ಲಿ ರಾಜಕೀಯ ಬಿಕ್ಕಟ್ಟು ಬೆಳೆದಿರುವುದರಿಂದಾಗಿ, ಗೌರ್ನರ್ ಗುರ್ಮಾನಿ ಮುಖ್ಯಮಂತ್ರಿ ಡಾ|| ಖಾನ್ ಸಾಹೇಬ್, ಮುಸ್ಲಿಂ ಲೀಗಿನ ಮುಖಂಡರಾದ ಸರ್ದಾರ್ ಬಹದೂರ್ ಖಾನ್ ಮತ್ತು ಮಮ್ದೂಟ್ ದೌಲತಾನ ಅವರನ್ನು ಸ್ಥಿತಿ ಸಂಭಾಷಣೆಗಾಗಿ ಕ್ರಮವಾಗಿ ಮಸಮುದ್ ಅಲಿ ಯವರು ಕರೆದಿರುತ್ತಾರೆ ಅಲಿಯವರು ಬೇಗನೆ ಭೇಟಿ ಕೊಡುವ ಮುಂಚೆ ಪಾಕಿಸ್ತಾನದಲ್ಲಿ ರಾಜಕೀಯ ನೆಮ್ಮದಿಯನ್ನು ಏರ್ಪಡಿಸಲು ಆತುರರಾಗಿದ್ದಾರೆ ಪಶ್ಚಿಮ ಪಾಕಿಸ್ತಾನದಲ್ಲಿ ಅಧ್ಯಕ್ಷರ ಆಡಳಿತವನ್ನು ಜಾರಿಗೆ ತರಬಹುದೆಂದು ಕರಾಚಿ ಪತ್ರಿಕೆಗಳು ತಿಳಿಸುತ್ತವೆ

ಎಸ್. ರಾಮರತ್ನಂರವರ ಅಮೋಘ ಸಂಗೀತ ಕಛೇರಿ

ಮೈಸೂರು ೧೦

ಆಕಾಶವಾಣಿ ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ಯರ ಪುತ್ರರಾದ ಶ್ರೀ ಎಸ್ ರಾಮರತ್ನಂರವರ ಅಮೋಘವಾದ ಸಂಗೀತ ಕಛೇರಿಯು ನೆನ್ನೆ ಸಂಜೆ ಶಾಸ್ತ್ರಿ ಪತ್ರಿಕಾಲಯದಲ್ಲಿ ವೆಂಕಟಾಚಾರ್ಯರ ಪಿಟೀಲು ಮತ್ತು ವಿ ಎಸ್ ರಾಮರಾಯರ ಮೃದಂಗದೊಡನೆ ಏರ್ಪಾಡಾಗಿತ್ತು

ಅವರು ಪೂರ್ವ ಕಲ್ಯಾಣಿ ರಾಗದಲ್ಲಿ ಪರಮಪಾವನ, ಸಾಮಜವರ ಗಮನವನ್ನೂ, ತೋಡಿಯಲ್ಲಿ ರಾಗ, ತಾನ, ಪಲ್ಲವಿಯನ್ನು ರಾಗಮಾಲಿಕೆ ರೂಪದಲ್ಲೂ ಹಾಡಿದರು ಬಾಪೂಜಿಯವರ ಮೆಚ್ಚಿನ ವೈಷ್ಣವ ಜನತೋ ಗೀತೆಯು ಅನೇಕರಿಗೆ ಸಂತೋಷವನ್ನುಂಟುಮಾಡಿತು ಕಛೇರಿಯು ಬಹಳ ಸ್ವಾರಸ್ಯವಾಗಿತ್ತು ಶ್ರೀ ಅಗರಂ ರಂಗಯ್ಯನವರು ಸಂಗೀತಗಾರರನ್ನೂ, ಪಕ್ಕ ವಾದ್ಯಗಾರರನ್ನೂ ಅಭಿನಂದಿಸಿ ಅವರ ಪ್ರೌಢಿಮೆಗಾಗಿ ಪ್ರಶಂಸಿ ಅವರಿಗೆ ಹಣವನ್ನು ಅರ್ಪಿಸಿದರು

ಕೆ ಎಲ್ ಸಂಜಪ್ಪನವರು ಅಖಿಲ ಭಾರತ ಕೈ ಕಸಬಿನ ಮಂಡಳಿಯ ಡೈರೆಕ್ಟರ್

ಕೇಂದ್ರ ಸರ್ಕಾರಕ್ಕೆ ಎರವಲು ಕೊಡಲ್ಪಟ್ಟಿರುವ ಮೈಸೂರಿನ ಅಧಿಕಾರಿಗಳಾದ ಶ್ರೀ ಕೆ ಎಲ್ ಸಂಜಪ್ಪನವರನ್ನು ಕಳೆದ ತಾರೀಕಿನಿಂದ ಅಖಿಲ ಭಾರತ ಕೈ ಕಸಬು ಬೋರ್ಡಿನ ಡೈರೆಕ್ಟರಾಗಿ ಭಾರತ ಸರ್ಕಾರದವರು ನೇಮಿಸಿರುತ್ತಾರೆ

Puly
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
711 A S Street
BANGALORE 2

ನಾಡು ಬಾಂಬು ತಯಾರಿಗಾಗಿ ಬಂಧನ

ಕೋಯಿಲ್ಪಟ್ಟಿ ಬಳಿ ಪಾಸ್ತ್ರಾಂಬಲ್ಲಿ ಲಕ್ಷ್ಮಣ ಸ್ವಾಮಿ ಮತ್ತು ಸುಬ್ರಹ್ಮಣ್ಯ ಎಂಬುವವರು ನಾಡು ಬಾಂಬುಗಳನ್ನು ತಯಾರಿಸುತ್ತಿದ್ದರೆಂಬ ಕಾರಣಕ್ಕಾಗಿ ಅವರನ್ನು ದಸ್ತಗಿರಿ ಮಾಡಲಾಗಿದೆ ಕಳೆದ ೩ನೇ ತಾರೀಕು ಬಾಂಬು ಸಿಡಿದ ಪರಿಣಾಮವಾಗಿ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಹುಡುಗಿಗೆ ಗಾಯವಾಗಿ ತನಿಖೆ ನಡೆದು, ಶಿವುಕ್ಕನ ಕುಡುಂಬನ್ ಎಂಬುವನನ್ನು ದಸ್ತಗಿರಿ ಮಾಡಲಾಗಿತ್ತು ಆತನ ಮನೆಯಲ್ಲಿ ೩ ಬಾಂಬುಗಳು ಸಿಕ್ಕಿವೆ

ಚಾಮುಂಡೇಶ್ವರಿ
ಟಾಕೀಸ್
11 5 56 ರಿಂದ ಜನಭರಿತ 2ನೇ ವಾರ
ಮೆಹಬೂಬ್‌ರವರ ಹಿಂದಿ ಚಿತ್ರ
★ ಆವಾಜ್ ★
ಭೂಮಿಕೆ - ನಳಿನಿ ಜಯವಂತ್ ಉಷಾಕಿರಣ್ ಲೀಲಾಚಿಟ್ನಿಸ್ ರಾಜೇಂದ್ರ ಕುಮಾರ್ ಮತ್ತು ಇತರರು

ನಿಮ್ಮ ಭವಿಷ್ಯ ಅರಿಯಲು
ಸುಸಮಯ
ನಾಡಿ ರೀತ್ಯಾ ನಿಮ್ಮ ಭವಿಷ್ಯಕ್ಕೆ ಮತ್ತು ನಿಮ್ಮ ಸಕಲ ಕಷ್ಟಗಳ ನಿವಾರಣೆಗೆ
ಪ್ರೊ|| ಜಗಸ್ಟಿನ್‌ರವರನ್ನು
ಕೂಡಲೇ ಭೇಟಿ ಮಾಡಿ
ಸ್ಟರ್ಲಿಂಗ್ ರೀತ್ಯಾ ಭವಿಷ್ಯ ಹೇಳುವವರು
ಫೀಜು ರೂ
ಸೆಂಟ್ರಲ್ ಕೆಫೆ,
ಗಾಂಧಿ ಚೌಕ   ಮೈಸೂರು

Edited, Printed and Published by A R Nagarajan at Sadhvi Press D Subbiah Road Mysore

ಕೈಯುಳ್ಳ ಮೀನು

ವಿಶ್ವದಲ್ಲೇ ಅತ್ಯಂತ ಅಪೂರ್ವವಾದ ಒಂದು ಮಡಗಾಸ್ಕರ್ ದ್ವೀಪದ ಬಳಿ ಸಮುದ್ರದಲ್ಲಿ ಸಿಕ್ಕಿದೆ ಅದಕ್ಕೆ ಕೈ ಇರುವುದಾಗಿ ಹೇಳಲಾಗಿದೆ

ಶಕ್ತಿಯೂ ಕೋವಿಯೂ
ತಮ್ಮ ಗುರಿಯನ್ನು ತಪ್ಪಬಹುದು!
ರವಿಯೂ ಪಶ್ಚಿಮದಲ್ಲಿ
ಉದಯಿಸಬಹುದು!!

ಆದರೆ ಡಾ|| ರಾಜಾರವರ ನೂತನ ಮತ್ತು ಆಶ್ಚರ್ಯಕರವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ನಿರಾಶೆಯನ್ನು ಹೋಗಲಾಡಿಸಿ ತೃಪ್ತಿಯನ್ನುಂಟುಮಾಡಲು ತಪ್ಪುವುದಿಲ್ಲ

ಅದುದರಿಂದ ನವಯೌವನವನ್ನೂ, ಅಪ್ರತಿಮ ಶಕ್ತಿಯನ್ನೂ ಆರೋಗ್ಯವನ್ನೂ ಹೊಂದಲು ವೈದ್ಯಕೀಯ ಸೃಷ್ಟಿಯಲ್ಲಿ ಹೆಸರಾಂತ ಡಾ|| ಎ ವಿ ರಾಜಾರವರ ಸಲಹೆಯನ್ನು ಪಡೆಯಿರಿ

ಭಾರತದ ಪೆನ್ಸಿಲಿಯಾದ ಡಾ|| ರಾಜಾರವರು ಇತರೆ ವಿಧಾನದ ಚಿಕಿತ್ಸೆಗಳಿಗಿಂತಲೂ ಅನ್ಯತಾ ಭಾರತದಲ್ಲಿ ಪ್ರಪ್ರಥಮವಾಗಿ ಶತಶ್ಯಾರು ವರ್ಷ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಚೈತನ್ಯ ಉಂಟುಮಾಡಿರುವರು ...

ಅಪ್ಪಾಯಿಂಟ್‌ಮೆಂಟ್ ಪಡೆದು ಭೇಟಿ ಮಾಡಿ ...

ಕಾಲ - ಬೆಳಗ್ಗೆ 9 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4 ರಿಂದ ರಾತ್ರಿ 9 ಘಂಟೆವರೆಗೆ
ರಾಜಾ ಮೆಡಿಕಲ್ ಹಾಲ್,
ಎಲ್ ನಂ 1-745 ಅಶೋಕಾ ರಸ್ತೆ ಮೈಸೂರು
(ಮೈಸೂರು ಬ್ಯಾಂಕ್ ಬಳಿ ... 3ನೇ ಕಟ್ಟಡ)

ಲಕ್ಷ್ಮಿ ★ 10-5-56ರಿಂದ ಜನಭರಿತವಾದ 5ನೆಯ ವಾರ
ಪ್ರತಿದಿನ ಮೂರು ಪ್ರದರ್ಶನಗಳು
★ ಮದುರೈ ವೀರನ್ ★
(ತಮಿಳು)
ಪಾತ್ರ - ಎಂ ಜಿ ರಾಮಚಂದ್ರನ್ ಟಿ ಎಸ್ ಬಾಲಯ್ಯ ಭಾನುಮತಿ ಲಲಿತ ಪದ್ಮಿನಿ ರಾಗಿಣಿ, ಎನ್ ಎಸ್ ಕೃಷ್ಣನ್-ಟಿ ಎ ಮಧುರಂ
ಮುಂತಾದವರು

ಒಲಿಂಪಿಯಾ ★ ಅಮೋಘ ಪ್ರಾರಂಭ 11-5-56ರಿಂದ
ದಿನವೂ 4 ಪ್ರದರ್ಶನಗಳು
"ಸಂಸಾರ" "ವಿಜಯ" ಮತ್ತು ಮುಂತಾದ ಚಿತ್ರಗಳನ್ನು ನಿರ್ಮಿಸಿದ ಎ ವಿ ಎಂ ರವರ ಪ್ರಖ್ಯಾತ ಹಿಂದಿ ಚಿತ್ರ
ಭಾಯಿ ಭಾಯಿ
ಪಾತ್ರ - ಅಶೋಕ ಕುಮಾರ್ ಕಿಶೋರ್ ಕುಮಾರ್ ... ನಿಮ್ಮಿ ... ಓಂಪ್ರಕಾಶ್ ಮತ್ತು ಇತರರು

Efficient Coaching by Brilliant Honours Men
Inter, B A, B Sc, B Com I Com, S S L C,
Regular Classes and Matric
Important ... NO PASS—NO FEES GUARANTEED SCHEME
LADIES ALSO ADMITTED
NALANDA TUTORIAL COLLEGE
L... B ...zar   ... ramrcs   Mysore

AT GAYATHRI TALKIES
FROM 11—5—56 : Daily 3 Shows
Glittering Spectacle Lovely Girls and Pulse Pounding Drama in the Year's most Amazing Picture
ABDULLA THE GREAT
(Color by Technicolor)

To-day — GIPSY COLT —

ರಾಜಕಮಲ್ ★ 11-5-56 ರಿಂದ . ಅಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನಗಳು
ನಾಗೈಯ್ಯ ... ಪಿ ಎ ... ಎಸ್ ವಿ ರಂಗರಾವ್, ... ನಟಿಸಿರುವ, ಎ ವಿ ಎಂ ನಿರ್ಮಿಸಿದ
✽ ಪೆಣ್ಣರಸಿ ✽
ಬೆಳಗಿನ ಪ್ರದರ್ಶನ 11-5-56 ರಿಂದ ಮೂರು ದಿನಗಳು
THE WORLD IN HIS ARMS
(Technicolor)
★
— ಮುಂದಿನ ಬಿಡುಗಡೆ —
ಜಯಿಂ ಮನದೆ
ರಾಷ್ಟ್ರಪತಿಯವರ ಬೆಳ್ಳಿ ಚಿತ್ರ

ರಿಜಿಸ್ಟರ್ಡ್ ನಂ. 792

ಕೂರ್ಗ್ ಮ್ಯಾಗ್ನೆಟ್
ಸ್ಥಾಪಿತ 1932 · ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾರಾದ ಸೊಗಸಾಗಿರುವ ಬಳೆಗಳೂ, ಮುತ್ತು, ಹವಳ ರತ್ನಯುಕ್ತವಾದ ಒಡವೆಗಳೂ ಸದಾ ದೊರೆಯುತ್ತವೆ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌರಿ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರ್ಣಿ, ದಿಂಡಿಗಲ್
ರೇಷ್ಮೆ ಮತ್ತು ಸಾದಾ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : FRIDAY 11-5-1956 ಮೈಸೂರು ಶುಕ್ರವಾರ : ೧೧-೫-೧೯೫೬ [ಸಂಚಿಕೆ : ೨೩೦

ಸಂಸ್ಥಾನಾದ್ಯಂತ ಬುದ್ಧ ಜಯಂತಿಗಾಗಿ ಸರ್ಕಾರದ ಕ್ರಮ

ಸಿನಿಮಾ ನೋಡಲು ಸೇವಕನೊಡನೆ ಹೊರಟ ತರುಣಿ ನಾಪತ್ತೆ

ಮೈಸೂರು ೧೧

ನಗರದ ಕೃಷ್ಣ ಸ್ಟ್ರೀಟ್‌ನಲ್ಲಿರುವ, ರಿಟೈರ್ಡ್ ಅಕೌಂಟೆಂಟ್ ಶ್ರೀ ರಾಮಸ್ವಾಮಿ ಅಯ್ಯಂಗಾರ್ಯರ, ೧೮ ವರ್ಷದ ಮಗಳು ಆರ್. ಭೂಮಾ ಎಂಬಂಕೆಯು ಮೊನ್ನೆ ಮಧ್ಯಾಹ್ನ ಮನೆಯ ಆಳು ಸ್ವಾಮಿನಾಥ್ ಮತ್ತು ಆತನ ಹೆಂಡತಿ ವಾಸಮ್ಮ ಎಂಬುವರ ಜೊತೆಯಲ್ಲಿ ಸಿನಿಮಾ ನೋಡಲು ಹೋಗಿ ಇದುವರೆಗೂ ಪತ್ತೆಯಿಲ್ಲವೆಂದು ಪತ್ತೆಹಚ್ಚಿಕೊಡಲು ಪೊಲೀಸರಿಗೆ ದೂರು ಕೊಡಲಾಗಿದೆ. ಆಕೆಯು ಒಂದು ಜೈನು ಮತ್ತು ನಾನಾ ವಿಧಗಳ ಸರ, ಮೂಗುತ್ತಿ, ಓಲೆ ವೊದಲಾದ ಸುಮಾರು ಎರಡು ಸಾವಿರ ರೂ. ಬೆಲೆ ಬಾಳುವ ಒಡವೆಗಳನ್ನು ಧರಿಸಿ, ಮೈಸೂರು ಗೌರ್ನಮೆಂಟ್ ಸಿಲ್ಕ್ ಸೀರೆಯನ್ನು ಉಟ್ಟಿದ್ದುದಾಗಿ ಗೊತ್ತಾಗಿದೆ. ಆಕೆಯನ್ನು ಯಾರಾದರೂ ಕಂಡಲ್ಲಿ ಹಿಡಿದುಕೊಟ್ಟು ಪೊಲೀಸ್ ಠಾಣೆಗೆ ಸುದ್ದಿ ಕೊಡಬೇಕೆಂದು ಕೋರಲಾಗಿದೆ.

ಸ್ವಾಮಿನಾಥನು ತನ್ನ ಪತ್ನಿ ಮತ್ತು ಮಕ್ಕಳೊಡನೆ ಮದರಾಸಿನಿಂದ ಇಲ್ಲಿಗೆ ಬಂದು ಮೇಲ್ಕಂಡ ರಾಮಸ್ವಾಮಿ ಅಯ್ಯಂಗಾರ್ಯರ ಮನೆಯಲ್ಲಿ ಕೆಲವು ತಿಂಗಳ ಹಿಂದೆ ಕೆಲಸಕ್ಕೆ ಸೇರಿ ಅವರ ಮನೆಯಲ್ಲೇ ವಾಸಮಾಡಿಕೊಂಡಿದ್ದನೆಂದೂ, ಈಗ ಅವರುಗಳೂ ಪತ್ತೆಯಿಲ್ಲವೆಂದೂ ಹೇಳಲಾಗಿದೆ.

ಉಪನ್ಯಾಸ

ವೇದಮೂರ್ತಿ ಜಯತೀರ್ಥಾಚಾರ್ಯರು ಕೊತ್ವಾಲ ರಾಮಯ್ಯನವರ ಬೀದಿಯಲ್ಲಿರುವ ಶ್ರೀ ಎಂ. ಶೇಷಗಿರಿರಾಯರ ಮನೆಯಲ್ಲಿ ಈ ದಿನದಿಂದ ೧೫ ದಿವಸಗಳವರೆಗೆ ಪ್ರತಿನಿತ್ಯ ರಾತ್ರಿ ೯ ಗಂಟೆಯಿಂದ ೧೦ರ ವರೆಗೆ ಮಹಾಭಾರತದ ವಿರಾಟ ಪರ್ವದ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಸ್ವಾಗತವಿದೆ. ಲೌಡ್‌ಸ್ಪೀಕರ್ ವ್ಯವಸ್ಥೆಯೂ ಇದೆ.

ನಾಳೆ ಬಿ. ಇ. ಪರೀಕ್ಷೆ ಫಲಿತಾಂಶದ ಪ್ರಕಟಣೆ

ಇಂಜನಿಯರಿಂಗ್ ಡಿಗ್ರಿ, ಬಿ.ಎಸ್‌ಸಿ ವ್ಯವಸಾಯ ಮತ್ತು ಬಿ.ಎಸ್‌ಸಿ ಟೆಕ್ಸ್‌ಟೈಲ್ಸ್ ಪರೀಕ್ಷಾ ಫಲಿತಾಂಶಗಳು ನಾಳೆ ಬೆಳಗ್ಗೆ ೧೧ ಗಂಟೆಗೆ ಪ್ರಕಟವಾಗುವುವೆಂದು ವಿಶ್ವವಿದ್ಯಾಲಯದ ರಿಜಿಸ್ಟ್ರಾರರು ತಿಳಿಸಿರುತ್ತಾರೆ.

ರಷ್ಯದಲ್ಲಿ ಕಾರ್ಮಿಕರಿಗೆ ದ್ವಿಗುಣ ವಿರಾಮ ವೇತನ

ರಷ್ಯದಲ್ಲಿ ಅತ್ಯಂತ ಕಡಿಮೆ ಸಂಬಳ ಪಡೆಯುತ್ತಿರುವ ಕಾರ್ಮಿಕರಿಗೆ ನಿವೃತ್ತರಾದ ಮೇಲೆ ದ್ವಿಗುಣ ವಿರಾಮ ವೇತನ ದೊರೆಯುವಂತೆ ಮಾಡಿ ಅಲ್ಲಿನ ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ. ಬಾಗಿಲು ಕಾಯುವವರು, ಸೇವಕರು, ಚೊಕ್ಕಟ ಮಾಡುವವರು ಮುಂತಾದವರಿಗೆ ಇದು ಅನ್ವಯಿಸುವುದು. ಬರುವ ಅಕ್ಟೋಬರ್ ೧ನೇ ತಾರೀಖಿನಿಂದ ಜಾರಿಗೆ ಬರಲಿದೆ. ಅವರುಗಳಿಗೆ ಕನಿಷ್ಠವಾಗಿ ೩೦೦ ರೂ. ದೊರೆಯುವುದು.

ಸರ್ಕಾರದ ಕೈಗಾರಿಕೆಗಳಲ್ಲಿ ಕಾರ್ಮಿಕರ ಆಡಳಿತ

ತ್ರಿಪಕ್ಷ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಯವರ ಆರಂಭ ಭಾಷಣ

ಬೆಂಗಳೂರು ೧೧

ಸಂಸ್ಥಾನ ಸರ್ಕಾರದ ಕೈಗಾರಿಕೆಗಳಲ್ಲಿ ಕಾರ್ಮಿಕರು ಆಡಳಿತ ನಿರ್ವಹಿಸುವ ಬಗ್ಗೆ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ನೆನ್ನೆ ಸರ್ಕಾರ, ಸರ್ಕಾರಿ ಕೈಗಾರಿಕೆ ಮತ್ತು ಕಾರ್ಮಿಕ ಪ್ರತಿನಿಧಿಗಳ ಸಮ್ಮೇಳನವು ಇಲ್ಲಿ ಸೇರಿತ್ತು. ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಅದರ ಆರಂಭೋತ್ಸವವನ್ನು ನೆರವೇರಿಸಿ ಭಾಷಣ ಮಾಡಿ, ಕಾರ್ಖಾನೆಗಳ ಸಂಘಟನೆಯನ್ನು ನಡೆಸುತ್ತಿರುವ ಕೈಗಾರಿಕೆಗಳ ಆಡಳಿತ ನಿರ್ವಹಿಸಲು ಕಾರ್ಮಿಕರಿಗೆ ಅವಕಾಶ ಕಲ್ಪಿಸಲಿರುವುದಾಗಿಯೂ, ಕಾರ್ಮಿಕರು ಮತ್ತು ಆಡಳಿತವರ್ಗದವರು ಈ ಪ್ರಯೋಗವು ಯಶಸ್ವಿಯಾಗುವಂತೆ ಮಾಡಬೇಕೆಂದೂ ಸೂಚಿಸಿದರು. ಇದರಿಂದ ಸಮಾಜವಾದಿ ಸಮಾಜದ ವ್ಯವಸ್ಥೆಗೆ ನೆರವಾದಂತಾಗುವುದೆಂದೂ ಒಬ್ಬರು ನುಡಿದರು. ಈ ಅಭಿಪ್ರಾಯಕ್ಕೆ ಪ್ರಥಮ ಪರ್ಯಾಯ ಈ ಸಮ್ಮೇಳನದ ಪ್ರೋತ್ಸಾಹ ದೊರೆಯುತ್ತಿರುವುದೆಂದೂ ಅವರು ಸೂಚಿಸಿದರು.

ಅವರು ಸಾರ್ವಜನಿಕ ಕೈಗಾರಿಕಾ ವ್ಯವಹಾರಗಳನ್ನು ಕುರಿತು ಮಾತನಾಡಿ ಕಾರ್ಮಿಕರ ಹಿತರಕ್ಷಣೆಗಾಗಿ ನಾನಾ ಶಾಸನಗಳನ್ನು ಮಾಡಲಾಯಿತೆಂದೂ, ಹೊಸ ನೀತಿಯ ಅನುಸಾರವಾಗಿ ಅನೇಕ ಶಾಸನಗಳು ಅನವಶ್ಯಕವಾಗಬಹುದೆಂದೂ, ಕಾರ್ಮಿಕರು ಕೈಗಾರಿಕೆಯ ಆಡಳಿತದಲ್ಲಿ ಭಾಗವಹಿಸಿದ ಮೇಲೆ ಚಳುವಳಿ ನಡೆಸುವ ಹಕ್ಕನ್ನು ಕಳೆದುಕೊಳ್ಳಬೇಕಾಗುವುದೆಂದೂ ಅವರು ಸೂಚಿಸಿದರು. ರಾಷ್ಟ್ರೀಯ ಐಶ್ವರ್ಯ ಮತ್ತು ಉತ್ಪನ್ನ ಇವುಗಳು ಪರಸ್ಪರ ಹೊಂದಿಕೊಂಡಿವೆಯೆಂದೂ, ಸಮ್ಮೇಳನವು ಈ ಎಲ್ಲ ವಿಚಾರಗಳನ್ನೂ ಪರಿಶೀಲಿಸಿ ಸರ್ಕಾರದ ಅಭಿಲಾಷೆಯನ್ನು ಕಾರ್ಯಗತ ಮಾಡಬೇಕೆಂದೂ ಅವರು ಹೇಳಿದರು. ಒಂದೇ ದಿನದಲ್ಲಿ ಈ ನೀತಿಯನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದೂ, ಮೈಸೂರು ಸಂಸ್ಥಾನದಲ್ಲಿ ಇದು ಫಲಕಾರಿಯಾದರೆ ಇತರ ಕಡೆಗಳಲ್ಲೂ ಸಮಾಜವಾದಿ ಸಮಾಜದ ಸ್ಥಾಪನೆಗೆ ಸುಭದ್ರವಾದ ಅಡಿಪಾಯ ಹಾಕಿದಂತಾಗುವುದೆಂದೂ ಅವರು ಸೂಚಿಸಿದರು.

ಸಮ್ಮೇಳನದಲ್ಲಿ ಸರ್ಕಾರದ ಪ್ರತಿನಿಧಿಗಳು, ಸರ್ಕಾರಿ ಕೈಗಾರಿಕೆ ಪ್ರತಿನಿಧಿಗಳು ಮತ್ತು ಐ.ಎನ್.ಟಿ.ಯು.ಸಿ. ಅಧ್ಯಕ್ಷರು ಭಾಗವಹಿಸಿದ್ದರು.

ದ್ವಿತೀಯ ಯೋಜನೆಯಲ್ಲಿ ೧೦,೦೦೦ ಗ್ರಾಮ ಸಹಕಾರಸಂಘ

ದ್ವಿತೀಯ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ೧೦,೦೦೦ ಸಹಕಾರ ಸಂಘಗಳನ್ನು ಗ್ರಾಮಾಂತರದಲ್ಲಿ ಸ್ಥಾಪಿಸಲಾಗುವುದೆಂದು ಗೊತ್ತಾಗಿದೆ. ಒಟ್ಟು ಮೂರನೇ ಒಂದು ಭಾಗದಲ್ಲಿ ಸಂಘಗಳನ್ನು ಇನ್ನು ೫ ವರ್ಷಗಳಲ್ಲಿ ಸ್ಥಾಪಿಸಲೇಬೇಕಾಗಿದೆ.

ಸಂಸ್ಥಾನಾದ್ಯಂತ ಬುದ್ಧ ಜಯಂತಿಗಾಗಿ ೪,೦೦೦ ರೂ.

ಸರ್ಕಾರದವರ ಆಜ್ಞೆ

ಸ್ವಂತ ವರದಿಗಾರರಿಂದ] ಬೆಂಗಳೂರು ೧೧

ಇದೇ ತಿಂಗಳ ೨೪ನೇ ತಾರೀಖು ಸಂಸ್ಥಾನದ ಆದ್ಯಂತ ಬುದ್ಧ ಜಯಂತಿ ಉತ್ಸವವನ್ನು ಆಚರಿಸುವ ಸಲುವಾಗಿ ಸರ್ಕಾರದವರು ೪ ಸಾವಿರ ರೂಗಳನ್ನು ಮಂಜೂರು ಮಾಡಿರುವರು. ಈ ಉತ್ಸವವನ್ನು ಜಿಲ್ಲಾ ಕೇಂದ್ರಗಳಲ್ಲಿ ಆಯಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆಸಲಾಗುವುದು. ಆಚರಣೆಯ ಅಂಗವಾಗಿ ಬೆಳಗ್ಗೆ ಎಲ್ಲ ರಾಷ್ಟ್ರೀಯ ಕಟ್ಟಡಗಳನ್ನು ಅಲಂಕರಿಸುವುದು. ಬುದ್ಧನ ಚರಿತ್ರೆ ಬಗ್ಗೆ ಉಪನ್ಯಾಸಗಳನ್ನು ಏರ್ಪಡಿಸುವುದು. ಬುದ್ಧನ ಜೀವನ ಮತ್ತು ತತ್ವಗಳ ಸಂಬಂಧವಾದ ಗ್ರಂಥಗಳ ಪ್ರದರ್ಶನವನ್ನು ಏರ್ಪಡಿಸಲಾಗುವುದು.

ಪಂಜಾಬ್‌ರಾವ್ ದೇಶಮುಖ್‌ರವರ ಆಗಮನ

ಹೆಬ್ಬಾಳದಲ್ಲಿ ನಡೆಯುವ ವ್ಯವಸಾಯ ಸಂಸ್ಥೆಯ ಅರ್ಧಶತಕ ಮಹೋತ್ಸವದ ಸಲುವಾಗಿ ಕೇಂದ್ರ ಆಹಾರ ಸಚಿವ ಶ್ರೀ ಪಂಜಾಬ್‌ರಾವ್ ದೇಶಮುಖ್‌ರವರು ಈ ದಿನ ಇಲ್ಲಿಗೆ ಆಗಮಿಸಿದರು.

ಸಿಂಹಳದ ಭಾರತೀಯರ ಬಗ್ಗೆ ಇತರರ ಪಂಚಾಯಿತಿ ಬೇಡ

ಸಿಂಹಳದ ಪ್ರಧಾನಿಯವರ ಹೇಳಿಕೆ

ಸಿಂಹಳದ ನಾಗರಿಕತ್ವದ ವಿಷಯವಾಗಿ ಭಾರತ ಮತ್ತು ಸಿಂಹಳಗಳು ಮಾಡಿಕೊಂಡಿರುವ ಒಪ್ಪಂದದ ಬಗ್ಗೆ ಉಂಟಾಗಿರುವ ಭಿನ್ನತೆಯನ್ನು ಪರಿಹರಿಸಲು ಮೂರನೇ ಪಕ್ಷದ ಪಂಚಾಯಿತಿಯ ಆವಶ್ಯಕತೆಯಿಲ್ಲವೆಂದು ಸಿಂಹಳದ ಪ್ರಧಾನಿ ಭಂಡಾರನಾಯಕೆಯವರು ತಿಳಿಸಿರುತ್ತಾರೆ. ಕಾಶ್ಮೀರದ ಬಗ್ಗೆ ನೆಹರೂರವರು ಹೊಂದಿರುವ ನಿಲುವಿಗೆ ತಮ್ಮ ನೀತಿಯೂ ಹೋಲುತ್ತದೆಂದು ಅವರು ಹೇಳುವರು. ಅಲ್ಲಿನ ಭಾರತೀಯರ ಸಮಸ್ಯೆಯನ್ನು ಹೊಸದಾಗಿ ಪರಿಶೀಲಿಸಬೇಕಾಗಿರುವುದೆಂದೂ ಅವರು ಅಭಿಪ್ರಾಯಪಟ್ಟಿರುವರು.

ಮಿತ್ರ ರಾಷ್ಟ್ರಗಳಿಂದ ಚೀಣಾ ಸಲಹೆಯ ತಿರಸ್ಕಾರ

ವಿಶ್ವಸಂಸ್ಥೆಯ ಪರವಾಗಿ ಕೊರಿಯಾ ಯುದ್ಧದಲ್ಲಿ ಹೋರಾಡಿದ ೧೬ ರಾಷ್ಟ್ರಗಳು ಉತ್ತರ ಮತ್ತು ದಕ್ಷಿಣ ಕೊರಿಯಗಳ ಐಕ್ಯದ ಬಗ್ಗೆ ಸಮ್ಮೇಳನ ನಡೆಸುವಂತೆ ಕಮ್ಯೂನಿಸ್ಟ್ ಚೀಣಾ ಮಾಡಿರುವ ಸಲಹೆಯನ್ನು ಸರ್ವಾನುಮತದಿಂದ ನಿರಾಕರಿಸಿರುವುದಾಗಿ ವರದಿಯಾಗಿದೆ. ಕೊರಿಯದಲ್ಲಿರುವ ಎಲ್ಲಾ ವಿದೇಶೀ ಸೈನ್ಯಗಳನ್ನೂ ವಾಪಸು ಕರೆಸುವಂತೆಯೂ ಚೀಣಾ ಸಲಹೆ ಮಾಡಿತ್ತು.

ನೀರಾವರಿ ಭಾವಿ ತೋಡಲು ಸರ್ಕಾರದಿಂದ ದ್ರವ್ಯ ಸಹಾಯ

ಗ್ರಾಮಾಂತರಗಳಲ್ಲಿ ನೀರಾವರಿ ಭಾವಿಗಳನ್ನು ತೋಡಲು ಸರ್ಕಾರದವರು ತಲಾ ೩೦೦ ರೂ. ಗಳ ಗ್ರಾಂಟು ಕೊಡಲು ನಿರ್ಧರಿಸಿರುತ್ತಾರೆ. ಎಲ್ಲಾ ಜಿಲ್ಲೆಗಳಿಗೂ ಈ ಆಜ್ಞೆಯು ಅನ್ವಯವಾಗುವುದು.

ಶಿಕ್ಷೆ ವಿರುದ್ಧವಾಗಿ ಬಿ. ಎಸ್. ಶಾಸ್ತ್ರಿಯವರ ಅಪೀಲು

ಜಾಮೀನು ಮೇಲೆ ಅಪರಾಧಿಯ ಬಿಡುಗಡೆಗೆ ಆಜ್ಞೆ

ಮೈಸೂರು ೧೧

ಸಿಂಗಪುರದ ಶ್ರೀಮತಿ ಆರ್. ಕೆ. ದೇವಿ ಎಂಬುವರ ಮೋಸ ಮಾಡಿ, ಆಕೆಯ ನಗಗಳನ್ನು ಗಿರವಿಯಿಟ್ಟಿದ್ದರೆಂಬ ಅಪಾದನೆ ಮೇಲೆ ಒಂದು ವರ್ಷ ಕಠಿಣ ಸಜಾ ಶಿಕ್ಷೆಗೆ ಗುರಿಯಾಗಿರುವ, ನಗರದ ಹಳೇ ಅಗ್ರಹಾರದ ಶ್ರೀ ಬಿ. ಎಸ್. ಶಾಸ್ತ್ರಿಯವರು ಸಬ್ ಜಡ್ಜ್ ಸೆಷನ್ಸ್ ನ್ಯಾಯಾಧೀಶರಾಗಿರುವ, ಜಿಲ್ಲಾಧಿಕಾರಿಗಳ ಕೋರ್ಟಿನಲ್ಲಿ ಈ ದಿನ ತಮ್ಮ ಶಿಕ್ಷೆಯ ವಿರುದ್ಧವಾಗಿ ಅಪೀಲು ಅರ್ಜಿ ಸಲ್ಲಿಸಿದರು. ಅಪಾದಿತರು ಮೂರು ಸಾವಿರ ರೂ. ಗಳ ಸ್ವಂತ ಜಾಮೀನು ಮುಚ್ಚಳಿಕೆ ಮತ್ತು ಅದೇ ಮೊತ್ತಕ್ಕೆ ಇನ್ನಿಬ್ಬರ ಜಾಮೀನು ಕೊಟ್ಟಲ್ಲಿ ಅವರನ್ನು ಬಿಡುಗಡೆ ಮಾಡಬಹುದೆಂದು ಸಬ್ ಜಡ್ಜ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ. ಎಸ್. ರಂಗರಾಜಯ್ಯರು ಆಜ್ಞೆ ಮಾಡಿದರು.

ಅಸ್ಲೀಲ ವ್ಯಾಪಾರಕ್ಕಾಗಿ ದಂಡ

ನಗರದ ಲಷ್ಕರ್ ಮೊಹಲ್ಲಾ ಕುಂಬಾರಗೇರಿಯ ನರಸಿ, ಕಮಲಿ ಮತ್ತು ಚನ್ನಮ್ಮ ಎಂಬುವರು ಅಸ್ಲೀಲ ವ್ಯಾಪಾರ ನಡೆಸಿದರೆಂಬ ಅಪಾದನೆಗಾಗಿ ಪ್ರಥಮ ನಗರ ನ್ಯಾಯಾಧೀಶರು ಅವರುಗಳಿಗೆ ಈ ದಿನ ತಲಾ ೧೦ ರೂ. ದಂಡ ವಿಧಿಸಿದರು.

ಬಸವೇಶ್ವರ ಜಯಂತಿ

ರಾಜಧಾನಿಯ ತ್ಯಾಗರಾಜಾ ರಸ್ತೆಯಲ್ಲಿರುವ ಶರಣ ಮಹಲಿನವರು ಶ್ರೀ ಬಸವೇಶ್ವರ ಜಯಂತಿ ಮಹೋತ್ಸವವನ್ನು ತುಮ್ಮೇರಳ ಸ್ಟ್ರೀಟ್ ಸಿದ್ದಪ್ಪನವರ ವಿದ್ಯಾರ್ಥಿನಿಲಯದಲ್ಲಿ ನಾಳೆ, ನಾಳಿದ್ದು ಮತ್ತು ೧೪ನೇ ತಾರೀಖು ನೆರವೇರಿಸುವರು. ಅದರ ಅಂಗವಾಗಿ ನಾಳೆ ಬೆಳಗ್ಗೆ ಉಪನ್ಯಾಸಗಳು, ಭಜನೆ ಮುಂತಾದುವೂ, ರಾತ್ರಿ ೯ ಗಂಟೆಗೆ ಶ್ರೀ ಕೆ. ಗುಂಡೂರಾಯರಿಂದ ಭಕ್ತ ಮಾರ್ಕಂಡೇಯ ಎಂಬ ಹರಿಕಥೆಯೂ ನಡೆಯುವುವು.

ಇಬ್ಬರು ಸೈಪ್ರಸ್ ರಾಷ್ಟ್ರೀಯರಿಗೆ ಗಲ್ಲು

ಸೈಪ್ರಸ್ ದ್ವೀಪದ ಮೈಕೇಲ್ ಕರೌಲಿಸ್ ಮತ್ತು ಆಂಡ್ರಿಯಾಸ್ ಡಿಮಿಟ್ರಿಯೂ ಎಂಬ ಇಬ್ಬರು ತರುಣರನ್ನು ನೆನ್ನೆ ಅಲ್ಲಿನ ರಾಜಧಾನಿ ನಿಕೋಸಿಯದಲ್ಲಿ ಗಲ್ಲಿಗೇರಿಸಲಾಯಿತು. ಆ ದ್ವೀಪದಲ್ಲಿ ಬ್ರಿಟಿಷರ ಆಡಳಿತದ ವಿರುದ್ಧವಾಗಿ ನಡೆಯುತ್ತಿರುವ ಚಳುವಳಿಯಲ್ಲಿ ಗಲ್ಲಾಗಿರುವುದು ಇದೇ ಮೊದಲನೇ ಬಾರಿ. ಕರೌಲಿಸ್ ಎಂಬುವನು ಒಬ್ಬ ಪೊಲೀಸನನ್ನೂ, ಮತ್ತೊಬ್ಬನು ಬ್ರಿಟಿಷ್ ವ್ಯಾಪಾರಿಯೊಬ್ಬನನ್ನೂ ಗುಂಡಿನಿಂದ ಹೊಡೆದು ಕೊಂದಿದ್ದರು. ಅವರನ್ನು ಗಲ್ಲಿಗೇರಿಸಿದ ಸಮಾಚಾರವನ್ನು ಪೊಲೀಸ ಅಧಿಕಾರಿಯೊಬ್ಬನು ಅನಧಿಕೃತವಾಗಿ ಪ್ರಕಟಿಸಲಾಗಿ, ಜನರು ಪ್ರದರ್ಶನ ನಡೆಸಲು ಪ್ರಯತ್ನಿಸಿದರೆಂದೂ, ಅವರನ್ನು ತಡೆಯಲು ಸೈನ್ಯಗಳನ್ನು ಕರೆತರಬೇಕಾಯಿತೆಂದೂ ಹೇಳಲಾಗಿದೆ.

ವಿವಿಧೋದ್ದೇಶ ಶಾಲೆಗಳ ಅಗತ್ಯ

ಉಪಾಧ್ಯಾಯರ ಗೋಷ್ಠಿಯಲ್ಲಿ ಸಿ. ರಂಗಾಚಾರ್ಯರ ಭಾಷಣ

ಮೈಸೂರು ೧೦

ನಗರದಲ್ಲಿ ನಡೆಯುತ್ತಿರುವ ಮಾಧ್ಯಮೋಪಾಧ್ಯಾಯರು ಮತ್ತು ವಿದ್ಯಾಧಿಕಾರಿಗಳ ಗೋಷ್ಠಿಯನ್ನು ಉದ್ದೇಶಿಸಿ ಪ್ರೊ|| ಬಿ ಕುಪ್ಪುಸ್ವಾಮಿ. ಡಾ|| ಎಂ. ಸಿದ್ದಲಿಂಗಯ್ಯ ಮತ್ತು ಗೋಷ್ಠಿಯ ಡೈರೆಕ್ಟರ್ ಶ್ರೀ ಸಿ ರಂಗಾಚಾರ್ಯರು ಭಾಷಣ ಮಾಡಿದರು. ಎಲ್ಲ ವಿಧವಾದ ಮನೋಭಾವನೆಯಿರುವ ಜನರಿಗೂ ತಕ್ಕ ವಿದ್ಯಾಭ್ಯಾಸವನ್ನು ಕಲಿಸಬೇಕೆಂದು ಶ್ರೀ ಬಿ. ಕುಪ್ಪುಸ್ವಾಮಿಯವರು ತಿಳಿಸಿದರು ಪ್ರಜಾಪ್ರಭುತ್ವ ಯುಗದಲ್ಲಿ, ಬದಲಾವಣೆ ಹೊಂದುತ್ತಿರುವ ಸಮಾಜದ ಅಭಿವೃದ್ಧಿಯಕ್ಕೆ ತಕ್ಕಂತೆ ವಿದ್ಯಾಭ್ಯಾಸ ಕ್ರಮವೂ ಮಾರ್ಪಾಟಾಗಬೇಕೆಂದು ಡಾ|| ಸಿದ್ದಲಿಂಗಯ್ಯನವರು ಸೂಚಿಸಿದರು.

ಡಾ|| ರಂಗಾಚಾರ್ಯರು ತಮ್ಮ ಭಾಷಣದಲ್ಲಿ, ವಿವಿಧೋದ್ದೇಶ ಶಾಲೆಗಳ ಮಹತ್ವವನ್ನು ವಿವರಿಸಿ, ಈಗ ಮುಖ್ಯವಾಗಿ ವ್ಯಾಕರಣ ಮತ್ತು ಆಧುನಿಕ ಮತ್ತು ಶಾಸ್ತ್ರೀಯ ಎಂಬ ಎರಡು ವಿಧದ ತರಗತಿಗಳುಳ್ಳ ಸಮಗ್ರ ಶಾಲೆಗಳ ಆವಶ್ಯಕತೆಯಿರುವುದೆಂದು ತಿಳಿಸಿದರು.

ಉಪಾಧ್ಯಾಯರ ಸೆಲ್ಫ್ ರೇಟಿಂಗ್ ಕಾರ್ಡ್ ಎಂಬುವನ್ನು ಗೋಷ್ಠಿಯು ಸಿದ್ಧಗೊಳಿಸಿದೆ ಇದರಿಂದ ಉಪಾಧ್ಯಾಯರು ತಾವು ಹೇಳಿಕೊಟ್ಟ ಪಾಠದ ದರ್ಜೆಯನ್ನು ತಾವೇ ನಿರ್ಧರಿಸಿ ಉತ್ತಮಗೊಳಿಸಿಕೊಳ್ಳಲು ಸಾಧ್ಯವಾಗಿರುವುದೆಂದು ಹೇಳಲಾಗಿದೆ.

ಸ್ಥಳೀಯ ಸಂಸ್ಥೆಗಳ ಸಮ್ಮೇಳನದ ಪ್ರತಿನಿಧಿಗಳು

ಉತ್ತರ ಪ್ರದೇಶದ [illegible] ನಗರದಲ್ಲಿ ಇದೇ ೧೭ ಮತ್ತು ೧೮ ನೇ ತಾರೀಖು ಸೇರುವ ಸ್ಥಳೀಯ ಸಂಸ್ಥೆಗಳ ಸಮ್ಮೇಳನದಲ್ಲಿ ಭಾಗವಹಿಸಲು ನಗರದ ಪೌರಸಭೆಯ ಪರವಾಗಿ ಸದಸ್ಯರಾಗಿರುವ ಶ್ರೀಗಳು ಎ ಕೃಷ್ಣಮೂರ್ತಿರಾವ್, ಸಿ ಎಸ್ ನಾರಾಯಣರಾವ್, ಎಂ ಎಸ್ ತಿಮ್ಮಯ್ಯ, ಬಿ ಎಸ್ ರಂಗೇಗೌಡ, ಎಸ್ ಸಂಜೀವಯ್ಯ ಮತ್ತು [illegible] ಕೆಂಪೇಗೌಡರವರು ನೆನ್ನೆ ರಾತ್ರಿ ತೆರಳಿದರು

ಕಾಮಕೋಟಿ ಶಂಕರಾಚಾರ್ಯರ ಸುವರ್ಣ ಮಹೋತ್ಸವ

ಕಂಚಿಯ ಕಾಮಕೋಟಿ ಪೀಠಾಧಿಪತಿಗಳಾದ ಶ್ರೀ ಜಗದ್ಗುರು ಶ್ರೀ ಶಂಕರಾಚಾರ್ಯರು ಪೀಠಕ್ಕೆ ಬಂದು ಬರುವ ಮಾರ್ಚಿಗೆ ೫೦ ವರ್ಷ ತುಂಬುವುದರಿಂದ ಆಗ ಸುವರ್ಣ ಮಹೋತ್ಸವವನ್ನು ನಡೆಸಲು ಏರ್ಪಾಡಾಗುತ್ತಿದೆ.

ಸಕ್ಕರೆ ಬೆಲೆಯಲ್ಲಿ ಇಳಿತಾಯ

ಉತ್ತರ ದೇಶದ ಸಕ್ಕರೆಯು ಬೆಂಗಳೂರಿಗೆ ಬರಲಾಗಿ ೧೧೨ ರೂ ಇದ್ದ ಸಕ್ಕರೆ ಮೂಟೆಯ ಬೆಲೆಯು ಈಗ ೯೭ ರೂ ಗೆ ಇಳಿದಿದೆ

ಚಾಮರಾಜನಗರದ ಹಿಂದಿ ಪುಸ್ತಕಾಲಯಕ್ಕೆ ಕೇಂದ್ರದ ಸಹಾಯ

ಹಿಂದಿ ಭಾಷೆಗೆ ಉತ್ತೇಜನವೀಯಲು ಕೇಂದ್ರ ಸರ್ಕಾರದವರು ಚಾಮರಾಜನಗರದಲ್ಲಿ ಸಾರ್ವಜನಿಕ ಹಿಂದಿ ಪುಸ್ತಕಾಲಯವನ್ನು ತೆರೆಯುವ ಸಲುವಾಗಿ ರೂ ೮೦೦-೦-೦ ಗಳನ್ನು ಕೊಟ್ಟಿರುತ್ತಾರೆ ಇಲ್ಲಿನ [illegible] ಹಿಂದಿ ಮಂದಿರದ ಆಶ್ರಯದಲ್ಲಿ ಪ್ರಥಮಾ, ಮಧ್ಯಮ, ರಾಷ್ಟ್ರಭಾಷಾ ಮತ್ತು ಪ್ರವೇಶಿಕಾ ಪರೀಕ್ಷೆಗಳಿಗೆ ಕೂಡುವ ವಿದ್ಯಾರ್ಥಿಗಳಿಗಾಗಿ ಶಿಕ್ಷಣವೀಯುವ ಏರ್ಪಾಡಾಗಿದೆ ಸೇರಬಯಸುವವರು ಮಂದಿರದ ಕಾರ್ಯದರ್ಶಿ ಶ್ರೀ ಬಿ ಎಸ್ ನಾಗಪ್ಪನವರಿಂದ ವಿವರಗಳನ್ನು ಪಡೆಯಬಹುದು

ಸೇನಾ ದಳದ ಶಿಬಿರದ ಮುಕ್ತಾಯ ಸಮಾರಂಭ

ಭಾರತ ಸೇನಾ ದಳದ ಪ್ರಾಥಮಿಕ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭವು ನಂಜನಗೂಡಿನಲ್ಲಿ ಸಾಯಂಕಾಲ ೬ ಗಂಟೆಗೆ ನೆರವೇರಿತು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಪ್ರವರ್ತಿಸಿದರು [illegible] ಜಿಲ್ಲಾ [illegible] ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದರು

ಹೈಕೋರ್ಟಿನಲ್ಲಿ ರಾಜ್ಯಾಂಗಕ್ಕೆ ಸಂಬಂಧಪಟ್ಟ ದಾವೆಗಳು

ಮೈಸೂರು ೧೦

ಶ್ರೀ ತಗಡೂರು ರಾಮಚಂದ್ರರಾವ್ ಮತ್ತು ಶ್ರೀ ಎ. ಎಸ್. ರಾಮಯ್ಯನವರು ಹೈಕೋರ್ಟಿನಲ್ಲಿ ಕಳೆದ ಸೋಮವಾರ ಅರ್ಜಿಯೊಂದನ್ನು ಸಲ್ಲಿಸಿ, ರಾಜ್ಯಾಧ್ಯಕ್ಷರು ವಿಶೇಷಾಜ್ಞೆ ಮೂಲಕ ರಾಜ್ಯಾಂಗ ಬಾಹಿರವಾದ ಮಾರಾಟ ತೆರಿಗೆ ಶಾಸನಗಳನ್ನು ಸಿಂಧುವೆಂದು ಘೋಷಿಸಿರುವುದನ್ನು ಅಕ್ರಮವೆಂಬುದಾಗಿ ಸಾರುವಂತೆ ಕೋರಿರುತ್ತಾರೆ ಅಲ್ಲದೆ ಸದರಿ ವಿಶೇಷಾಜ್ಞೆಯು ಕಳೆದ ಸೆಪ್ಟೆಂಬರ್ ೬ ರಿಂದ ಈಚೆಗೆ ಯಾವ ಮಾರಾಟ ತೆರಿಗೆ ಕಾನೂನನ್ನೂ ಸಿಂಧುಗೊಳಿಸತಕ್ಕದ್ದಲ್ಲವೆಂದು ಸೂಚಿಸಬೇಕೆಂದೂ ಕೋರಿ, ಈ ಬಗ್ಗೆ ಮೈಸೂರು ಮುನ್ಸೀಫ್ ಕೋರ್ಟಿನಲ್ಲಿ ನಡೆಯುತ್ತಿರುವ ಪೆಟ್ರೋಲ್ ತೆರಿಗೆ ದಾವೆಯಲ್ಲಿ ರಾಜ್ಯಾಂಗದ ವಿಷಯವಾಗಿ ಕೆಳ ಕೋರ್ಟಿಗೆ ನಿರ್ದೇಶನ ಕೊಡಬೇಕೆಂದೂ ಬೇಡಿರುತ್ತಾರೆ

ಇದಲ್ಲದೆ ನಗರದ ನೀರಿನ ಕಂದಾಯದ ಬಗ್ಗೆ ಮುನ್ಸೀಫ್ ಕೋರ್ಟಿನಲ್ಲಿ ಹೂಡಲ್ಪಟ್ಟ ದಾವೆ ಮತ್ತು ಸಬ್ ಕೋರ್ಟಿನಲ್ಲಿ ನಡೆಯುತ್ತಿರುವ ಮನೆ ಕಂದಾಯದ ಅಪೀಲು ಇವುಗಳಿಗೆ ಸಂಬಂಧಪಟ್ಟ ರಿಕಾರ್ಡನ್ನು ತರಿಸಿಕೊಂಡು ಅವುಗಳಲ್ಲಿ ಅಡಕವಾಗಿರುವ ರಾಜ್ಯಾಂಗದ ಪ್ರಶ್ನೆಗಳನ್ನು ಇತ್ಯರ್ಥ ಮಾಡಬೇಕೆಂದೂ ನಗರಸಭೆಯವರು ಬೇರೆ ಎರಡು ಅರ್ಜಿಗಳನ್ನು ಸಲ್ಲಿಸಿರುವರು.

ಅಂತರ ಸಂಸ್ಥಾನ ಸಮಿತಿ ಸದಸ್ಯರಾಗಿ ಡಾ|| ಮೇಲ್ಕೋಟೆಯವರ ನೇಮಕ

ನೂತನ ಮೈಸೂರು ಸಂಸ್ಥಾನದ ರಚನೆ ಸಂಬಂಧವಾಗಿ ಉದ್ಭವವಾಗುವ ಶಾಸನ ಸಭಾ, ಆಡಳಿತ, ಹಣಕಾಸು, ಮುಂತಾದ ಸಮಸ್ಯೆಗಳ ಬಗ್ಗೆ ಮೈಸೂರು ಸರ್ಕಾರದವರು ಏರ್ಪಡಿಸಿರುವ ಅಂತರ ಸಂಸ್ಥಾನ ಸಮಿತಿಗೆ ಹೈದರಾಬಾದಿನ ಪರವಾಗಿ ಅಲ್ಲಿನ [illegible] ಮತ್ತು ಮಂತ್ರಿ ಡಾ|| ಜಿ. ಎಸ್ ಮೇಲ್ಕೋಟೆಯವರನ್ನು ಸದಸ್ಯರಾಗಿ ನೇಮಿಸಲಾಗಿದೆ ಸಂಸ್ಥಾನ ಪುನರ್ವಿಂಗಡಣಾ ಇಲಾಖೆ ಕಾರ್ಯದರ್ಶಿಯವರಾದ ಶ್ರೀ ಎಸ್ ಮುನಿಸಂಜಪ್ಪನವರನ್ನು ಈ ಸಮಿತಿಯ ಕಾರ್ಯದರ್ಶಿಯಾಗಿಯೂ ನೇಮಿಸಲಾಗಿದೆ

ಹಾವುಗಳ ಭೀತಿಗಾಗಿ ಇಡೀ ಗ್ರಾಮ ಖಾಲಿ

[illegible] ಬಳಿ ನ್ಯಾಯಪೋವಾಡಿ ಎಂಬ ಗ್ರಾಮದಲ್ಲಿ ಹಾವುಗಳ ಭೀತಿಗಾಗಿ ಜನರು ಊರನ್ನೇ ಬಿಟ್ಟು ಓಡಿರುತ್ತಾರೆ ಹಾವು ಹುತ್ತ ಪೊದೆಗಳು ಮತ್ತು ಕಾಡು ಮೃಗಗಳು ಅಲ್ಲಿ ವಿಪರೀತವಾಗಿ ಹೆಚ್ಚಿವೆ. ಗ್ರಾಮಸ್ಥರು ಪಕ್ಕದ ನಗರ ಎಂಬ ಬೇರೊಂದು ಹಳ್ಳಿಯನ್ನು ಕಟ್ಟಿಕೊಂಡಿರುವರು ಸರ್ಪಗಳನ್ನು ನಾಶಪಡಿಸುವಂತೆ ಅವರು ಸರ್ಕಾರವನ್ನು ಕೋರಿರುವರು.

ಸತ್ಕಾರ ಕೂಟ

ನಂಜನಗೂಡಿನ ಮ್ಯಾಜಿಸ್ಟ್ರೇಟರಾಗಿದ್ದ ಶ್ರೀ ಎಲ್ ಲಿಂಗೇಗೌಡರಿಗೆ ತುಮಕೂರಿಗೆ ವರ್ಗವಾದ ಪ್ರಯುಕ್ತ ಅವರ ಗೌರವಾರ್ಥವಾಗಿ, ಅಲ್ಲಿನ ವಕೀಲ ಸಂಘದವರು ಪ್ರವಾಸಿ ಮಂದಿರದಲ್ಲಿ ನೆನ್ನೆ ರಾತ್ರಿ ಸತ್ಕಾರ ಕೂಟವನ್ನೇರ್ಪಡಿಸಿದ್ದರು ಶ್ರೀ ಲಿಂಗಪ್ಪನವರು ಶ್ರೀ ಲಿಂಗೇಗೌಡರ ಸೇವೆಯನ್ನು ಪ್ರಶಂಸಿಸಿದರು. ಶ್ರೀ ಲಿಂಗೇಗೌಡರು ವಕೀಲರ ಸಂಘದವರ ಮತ್ತು ನೌಕರರ ಸಹಕಾರಕ್ಕಾಗಿ ವಂದನೆಗಳನ್ನರ್ಪಿಸಿದರು

CITY TUTORIAL COLLEGE,
V V Market, Mysore
Admissions received to the Coaching Classes for the
Intermediate Examn.
Of SEPTEMBER 1956
Subjects *English, Kannada, Sanskrit, P C M P.E.M. H L L. H E G & C B Z.*
Please enquire for other particulars

Edited, Printed and Published by A. R. Nagarajan at Sadhvi Press D. Subbaiah Road, Mysore.

ರಷ್ಯಾ ನಾಯಕರ ನೌಕೆಯಲ್ಲಿ ಗೂಢಚರ್ಯೆ ನಡೆಸಿದವನ ಮರಣ

ರಷ್ಯದ ನಾಯಕರಾದ ಬುಲ್ಗಾನಿನ್ ಮತ್ತು ಕ್ರುಶ್ಚೇವರು ಬ್ರಿಟನ್ನಿಗೆ ಭೇಟಿ ಕೊಡಲು ಬಂದಿದ್ದ ರಷ್ಯಾ ಯುದ್ಧ ನೌಕೆಯಲ್ಲಿ ಗೂಢಚರ್ಯೆ ನಡೆಸಲು ಹೋಗಿದ್ದ ಬ್ರಿಟಿಷ್ ಕಮಾಂಡರ್ ಲಯೊನಲ್ ಕ್ರಾಬ್ ಎಂಬುವನು ಸಮುದ್ರದಲ್ಲಿ ಮುಳುಗಿ ಮೃತಪಟ್ಟನೆಂದು ವರದಿಯಾಗಿದೆ ಅವನನ್ನು "ಕಪ್ಪೆ ಮನುಷ್ಯ" ನೆಂದು ಕರೆಯಲಾಗುತ್ತಿತ್ತು ಆತನ ಮರಣದ ರಹಸ್ಯವನ್ನು ಬಹಿರಂಗಪಡಿಸುವುದಿಲ್ಲವೆಂದು ಬ್ರಿಟಿಷ್ ಪ್ರಧಾನಿ ಈಡನ್ನರು ತಿಳಿಸಿರುತ್ತಾರೆ. ಬ್ರಿಟಿಷ್ ಮಂತ್ರಿಗಳ ತಿಳುವಳಿಕೆಗೆ ಬರದೆ ಗೂಢಚರ್ಯೆ ನಡೆಸಲಾಗಿತ್ತೆಂದು ಈಡನ್ನರು ಹೇಳಿರುತ್ತಾರೆ ಈ ಬಗ್ಗೆ ಕ್ರಮವನ್ನು ಕೈಗೊಳ್ಳಲಾಗುತ್ತಿರುವುದೆಂದೂ ಅವರು ತಿಳಿಸಿರುವರು

ನುರಿತ ಪ್ರವೀಣರ ಅಭಾವ

ಭಾರತದ ಎಲ್ಲ ಕಡೆಗಳಲ್ಲೂ ಕಳೆದ ಮೂರು ತಿಂಗಳಿನಲ್ಲಿ ಓವರ್‌ಸೀಯರು, ಸ್ಟೆನೋಗ್ರಾಫರ್, ಫಾಸ್ಟ್ ಟೈಪಿಸ್ಟ್‌ರು, ಡ್ರಾಫ್ಟ್‌ಮನ್‌ಗಳು, ಫಾರ್ಮಸಿಸ್ಟ್‌ರು, ಮಿಡ್‌ವೈಫ್‌ಗಳು ಮತ್ತು ನುರಿತ ಶಿಕ್ಷಕರ ಅಭಾವವಿದ್ದುದಾಗಿ ಕೇಂದ್ರ ಸರ್ಕಾರದ ಪ್ರಕಟನೆಯೊಂದು ತಿಳಿಸಿದೆ ಇಂಜನಿಯರು, ವೈದ್ಯರು, ಅಕೌಂಟೆಂಟರು, ಟ್ರ್ಯಾಕ್ಟರ್ ಮತ್ತು ರೋಡ್ ರೋಲರ್ ಚಾಲಕರುಗಳು ವ್ಯಾಯಾಮ ಶಿಕ್ಷಕರು ಮತ್ತು ಪೋಲೀಸು ಕಾನ್‌ಸ್ಟೇಬಲ್ಲುಗಳ ಅಭಾವವೂ ಕಂಡುಬಂದುದಾಗಿ ಹೇಳಲಾಗಿದೆ

ಜೋಡಿ ತುಂಬಲ ಗ್ರಾಮದಲ್ಲಿ ಸೋಸಲೆ ಮಠಾಧೀಶರು

ಟಿ ನರಸೀಪುರ ತಾಲ್ಲೂಕು ಸೋಸಲೆಯ ಶ್ರೀ ವ್ಯಾಸರಾಯ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದಂಗಳವರು ಕಳೆದ ಮಂಗಳವಾರ ಇದೇ ತಾಲ್ಲೂಕಿನ ಜೋಡಿ ತುಂಬಲ ಗ್ರಾಮಕ್ಕೆ ಭೇಟಿಯಿತ್ತರು ಅಲ್ಲಿನ ಜೋಡಿದಾರರು ಮತ್ತು ಇತರ ನಿವಾಸಿಗಳಿಗೆ ಗೋಪಾಲಕೃಷ್ಣದೇವರ ಸಂದರ್ಶನ ಮಾಡಿಸಿ ತೀರ್ಥ ಪ್ರಸಾದಗಳನ್ನು ಅನುಗ್ರಹಿಸಿ, ಸಂಜೆ ಸೋಸಲೆಗೆ ಹಿಂದಿರುಗಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ದಿಲ್ರುಬಾ ಮತ್ತು ಕೊಳಲು ೭-೧೫ ಬಸವೇಶ್ವರ ವಚನ ೮-೧೫ ಉದಯ ಸಂಗೀತ. ಮಧ್ಯಾಹ್ನ ೧೨ ಸಂಗೀತ ೧೨ ೪೦ ರೈತರುಗಳು ೧೨-೪೫ ಬಾಲಜಗತ್ ಮಕ್ಕಳ ಕಾರ್ಯಕ್ರಮ ೧ ೩೦ ದಿಲ್ರುಬಾ ಮತ್ತು ಕೊಳಲು ಸಂಜೆ ೫ ೪೦ ಜನಪದ ಸಂಗೀತ ೬-೧೫ ಗೌತಮ ಬುದ್ಧನ ಹಬ್ಬದ ಕನ್ನಡ ಕಾರ್ಯಕ್ರಮ ೭ ೪೦ ಬಸವೇಶ್ವರರ ಸಮಾಜ ಸುಧಾರಣೆ ಬಿ ಶಿವಮೂರ್ತಿ ಶಾಸ್ತ್ರಿಯವರ ಭಾಷಣ ೮ ಬಸವ ಜಯಂತಿ-ಆರ್. ನ ಕೃಷ್ಣರಾಯರ ಭಾಷಣ ೮-೪೦ ರೇಡಿಯೊ ನ್ಯೂಸ್ ರೀಲ್ ೯ ೪೦ ಪ್ರಸಾರ ಗೀತೆ. ೯ ೧೫ [illegible] ಕನ್ನಡ ಕಾರ್ಯಕ್ರಮ. ೯-೪೦ ರಾಷ್ಟ್ರೀಯ ಕಾರ್ಯಕ್ರಮ ನಾಗಸ್ವರ. ಚಲಪತಿ ಪಿಳ್ಳೈ.

SARADAVILAS COLLEGE,
MYSORE
Inter Tutorial Section
Students coached for September Exams
In
ENGLISH, KANNADA and P.C.M
BY
Highly experienced staff
Hon Secretary

ಹೆಚ್. ಎಂ. ಚನ್ನಬಸಪ್ಪನವರನ್ನು ಚುನಾಯಿಸಬೇಕು

ರಾಜಧಾನಿಯ ಶ್ರೀ ಎಂ ಸಿ ನರಸಿಂಹಯ್ಯನವರು ಪತ್ರ ಬರೆದು ಈ ರೀತಿ ತಿಳಿಸಿರುತ್ತಾರೆ. ಪಿರಿಯಾಪಟ್ಟಣ ಕ್ಷೇತ್ರದಿಂದ ಶಾಸನ ಸ[illegible] ನಡೆಯಬೇಕಾದ ಉಪ ಚುನಾವಣೆಯ [illegible] ದುವಾರಿಕೆ ವಿಚಾರದಲ್ಲಿ ಕಾಂಗ್ರೆಸ್ ಪರವಾಗಿ [illegible] ಲ್ಲಿಸುವ ಬಗ್ಗೆ ಪ್ರದೇಶ ಕಾಂಗ್ರೆಸ್ ಕಾರ್ಯ[illegible]ರಿ ಸಮಿತಿಯವರು ಮಾಡಿರುವ ನಿರ್ಧಾರವು [illegible] ಕ್ಷೆಯ ಏಕಮುಖ್ಯ ಮತ್ತು ಭದ್ರತೆಗೆ ಕುಂದು[illegible] ವುದೆಂದು ಹೇಳದೆ ವಿಧಿಯಿಲ್ಲ. ಈ ರೀತಿ ಆಗ[illegible] ಅವಕಾಶವೀಯದೇ ಕಾಂಗ್ರೆಸ್ ಪರವಾಗಿ ಹೆಚ್. ಎಂ. ಚನ್ನಬಸಪ್ಪನವರನ್ನು ಉಮೇ[illegible]ವಾರರನ್ನಾಗಿ ನಿಲ್ಲಿಸಿ ಸಂಸ್ಥೆಯ ಹಿರಿಮೆಯ[illegible] ಕಾಪಾಡಬೇಕೆಂದು ಪ್ರದೇಶ ಕಾಂಗ್ರೆಸ್ ಅಧ್ಯ[illegible]ರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಸೈಪ್ರಸ್ ಗೌರ್ನರರ ತಲೆಗಾಗಿ ವರ್ತಕನ ೪ ಲಕ್ಷ ರೂ. ಬಹುಮಾ[illegible]

ಸೈಪ್ರಸ್ ದ್ವೀಪದ ಭಯೋತ್ಪಾದಕರ ಗುಂ[illegible]ನ ಮುಖಂಡ ಜನರಲ್ ಜಾರ್ಜ್ ಗ್ರಿವಾಸ್ ಎ[illegible]ಬುವರ ಬಗ್ಗೆ ಸಮಾಚಾರ ಕೊಟ್ಟವರಿಗೆ ಒಂ[illegible] ಕಾಲು ಲಕ್ಷ ರೂ ಬಹುಮಾನವೀಯಲಾಗು[illegible]ದೆಂದು ಅಲ್ಲಿನ ಬ್ರಿಟಿಷ್ ಗೌರ್ನರರು ಪ್ರಕ[illegible]ದುದರ ಪ್ರತಿಯಾಗಿ ಕ್ರೀಟ್ ದ್ವೀಪದ ವರ್ತ[illegible] ಚಾರಲಾಂಬಾಸ್ ಮಾರ್ಕಕಿಸ್ ಎಂಬುವನು ಸೈಪ್ರಸ್ ಗೌರ್ನರರ ತಲೆಗೆ ತಾನು ೪ ಲಕ್ಷ ರೂ ಕೊಡುವುದಾಗಿ ತಿಳಿಸಿದ್ದಾನೆ ಗ್ರೀಕರು ಬ್ರಿಟಿ[illegible]ದ ಹಣಕ್ಕೆ ಬಲಿಪಡಬಾರದೆಂದೂ, ದೇಶದ್ರೋ[illegible]ಗಳಾಗಬಾರದೆಂದೂ ಸದರಿ ವರ್ತಕನು ಸೂಚಿ[illegible]ರುತ್ತಾನೆ

ಕೋರ್ಟಿನ ಆವರಣದಲ್ಲಿ ಹೆರಿಗೆ

ಕಂಠಿಮಾಲೆ ಕಳುವಿನ ಸಂಬಂಧವಾಗಿ ವ[illegible]ಗಿರಿಯಾದ ಮಹಿಳೆಯೊಬ್ಬಳು ಕೋರ್ಟಿನ ಆ[illegible]ರಣದಲ್ಲೇ ಶಿಶುವೊಂದನ್ನು ಹಡೆದ ಪರಿಣಾಮ[illegible]ಗಿ ಆಕೆಯನ್ನು ಜೈಲಿಗೆ ಸೇರಿಸುವ ಬದಲು ಆ[illegible]ತ್ರೆಗೆ ಕಳುಹಬೇಕಾಯಿತು. ಆಕೆಯು ಪೂ[illegible]ಣ ಗರ್ಭಿಣಿಯೆಂಬುದನ್ನು ಅರಿಯದ ಪೋಲೀ[illegible]ರು ರಿಮಾಂಡಿಗಾಗಿ ಕೋರ್ಟಿನ ಮುಂದೆ ಹಾಜ[illegible] ಪಡಿಸಲು ಆಕೆಯನ್ನು ಕರೆದುಕೊಂಡುಹೋದಾ[illegible] ಪ್ರಸವ ವೇದನೆಯುಂಟಾಗಿ ಪಕ್ಕದ ಕೊಠ[illegible]ಯಲ್ಲಿ ಹೆರಿಗೆಯಾಯಿತು

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆ[illegible]
ಕಡಲೆಕಾಯಿ	೩೧ ೦ ೦	೩೩ ೨ [illegible]
ಹುಚ್ಚೆಳ್ಳು	೪೫ ೧೪ ೦	
ಹುಣಸೆಬೀಜ	೫ ೬ ೦	೫ ೧೨ [illegible]
ಹುರುಳಿ	೨೭ ೧೨ ೦	೨೮ ೪ [illegible]
ಕಡಲೆ	೪೦ ೨ ೦	
ಹಲಸಂದೆ	೪೯ ೯ ೦	
ಹುಣಸೆಹಣ್ಣು	೬ ೧೪ ೦	೭ ೪ [illegible]
ಮೆಣಸಿನಕಾಯಿ	೧೩ ೦ ೦	೧೪ ೧೫ [illegible]
ತೆಂಗಿನಕಾಯಿ ೧೦೦೦	೧೦೬ ೦ ೦	೧೧೪ ೬ [illegible]

SREE GANESHA
TALKIES
Gala Release on 12-5-56
Columbia's Technicolor Picture
PIRATES OF TRIPOLI
With Paul Henreid and Patrici[illegible]
Medina of "THIEF OF DAMASCUS" fame
This Picture shall be shown in Wide Angle Along with this Stooges Comedy in 2 reels will al[illegible] be shown

SARADA VILAS LAW COLLEGE
MYSORE
(Affiliated to the University of Mysore)
The College reopens on 25th May 1956 The last date for receipt of application for Admission to the College is 23rd May 1956
Application forms with prospectus can be had from the College on payment of Re 1 only (Exclusive of postage)
T. S. RAJAGOPAL IYENGAR
Principal

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿಪ್ರತಿ 3 ಕಾಸು

ಚಂದಾ ದರ

ಮೈಸೂರು ಸಂಸ್ಥಾನದ ಒಳಗೆ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ ಮೂರು ಕಾಸು

ಸಂಪುಟ : ೮೯] SADHVI • SATURDAY 12-5-1956 ಮೈಸೂರು ಶನಿವಾರ • ೧೨-೫-೧೯೫೬ [ಸಂಚಿಕೆ : ೨೬೦

ಢಾಕಾ ಮುಖ್ಯಮಂತ್ರಿ ಮನೆ ಬಳಿ ಹಸಿದವರ ಪ್ರದರ್ಶನ

ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿ

ಬೆಂಗಳೂರು ೧೧

ಕೆಳಗೆ ಕಂಡ ಅಸಿಸ್ಟೆಂಟ್ ಕಮಿಷನರುಗಳ ವರ್ಗಾವರ್ಗಿಯು ಈ ರೀತಿ ಆಗಿದೆ :—

ಮೈಸೂರು ಜಿಲ್ಲಾ ಸರ್ವೆ ಅಧಿಕಾರಿ ಶ್ರೀ ಟಿ. ಎಸ್. ನಂಜುಂಡೇಗೌಡರು ಮೈಸೂರು ಜಿಲ್ಲಾ ಬೋರ್ಡಿನ ಚೀಫ್ ಎಕ್ಸಿಕ್ಯೂಟಿವ್ ಅಧಿಕಾರಿಗಳಾಗಿ, ರಜದ ಮೇಲಿರುವ ಶ್ರೀ ಎ. ಮುನಿಸ್ವಾಮಿಗೌಡರು ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಯದರ್ಶಿಯಾಗಿ, ಆ ಸ್ಥಾನದಲ್ಲಿರುವ ಶ್ರೀ ಸಿ. ಎಂ. ಕೆಂಪಣ್ಣನವರು ಮೈಸೂರು ಜಿಲ್ಲಾ ಸರ್ವೆ ಅಧಿಕಾರಿಗಳಾಗಿ, ತುಮಕೂರು ಜಿಲ್ಲಾ ಬೋರ್ಡ್ ಚೀಫ್ ಎಕ್ಸಿಕ್ಯೂಟಿವ್ ಅಧಿಕಾರಿಗಳಾದ ಶ್ರೀ ಎಲ್. ಕರಿಯಪ್ಪನವರು ಮೈಸೂರು ಸಬ್ ಡಿವಿಜನ್ ಅಧಿಕಾರಿಗಳಾಗಿ

ಪಿರಿಯಾಪಟ್ಟಣ ಚುನಾವಣೆ ಬಗ್ಗೆ ಕಾಂಗ್ರೆಸ್ ಉಮೇದುವಾರಿಕೆ

ಪಿರಿಯಾಪಟ್ಟಣ ತಾಲ್ಲೂಕು ಕ್ಷೇತ್ರದಿಂದ ಸಂಸ್ಥಾನ ಶಾಸನ ಸಭೆಯ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಾಗಲು ಇಚ್ಛಿಸಿ, ಶ್ರೀ ಕೆ. ಎಂ. ಚನ್ನಬಸಪ್ಪ, ಪಿರಿಯಾಪಟ್ಟಣದ ಮಾಜಿ ಶಾಸನಸಭಾ ಸದಸ್ಯ ಶ್ರೀ ಕೆ. ಸಿ. ಕೃಷ್ಣ ಮತ್ತು ಮೈಸೂರಿನ ಶ್ರೀ ಎ. ಶಿವಣ್ಣನವರು ಅರ್ಜಿ ಹಾಕಿಕೊಂಡಿರುತ್ತಾರೆ. ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಪಿರಿಯಾಪಟ್ಟಣ ಕ್ಷೇತ್ರದ ಮತದಾರರ ಅಭಿಪ್ರಾಯವನ್ನು ತಿಳಿಯಲು ಸ್ಥಳಕ್ಕೆ ಭೇಟಿಯಿತ್ತು, ಸೂಕ್ತವೆಂದು ಕಂಡುಬಂದರೆ ಶ್ರೀ ಚನ್ನಬಸಪ್ಪನವರನ್ನು ನಾಮಕರಣ ಮಾಡುವಂತೆ ಅವರಿಗೆ ಪ್ರದೇಶ ಕಾರ್ಯ ಸಮಿತಿಯು ಸೂಚಿಸಿದೆ. ಇಲ್ಲದಿದ್ದರೆ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯನ್ನು ಕರೆಯುವಂತೆ ಸೂಚಿಸಲಾಗಿದೆ

ಸಿಂಹಳದಲ್ಲಿ ಜಾತಿ ಪದ್ಧತಿ ರದ್ದು

ಸಿಂಹಳದಲ್ಲಿ ಜಾತಿ ಪದ್ಧತಿಗಳ ಅನುಸರಣೆಯನ್ನು ಶಿಕ್ಷಾರ್ಹವೆಂದು ಸಾರಿ ಸರ್ಕಾರದವರು ಶಾಸನ ಮಾಡಲಿರುವರು. ಬುದ್ಧ ಜಯಂತಿ ದಿನದ ಕುರುಹಾಗಿ ಈ ಸುಧಾರಣೆಯನ್ನು ತರಲಾಗುವುದು. ಅಲ್ಲಿನ ಕ್ರಿಸ್ತ ಮತ್ತು ಬೌದ್ಧರಲ್ಲಿ ಜಾತೀಯ ಪದ್ಧತಿಗಳು ದಕ್ಷಿಣ ಭಾರತದಲ್ಲಿರುವಂತೆಯೇ ಇವೆ. ಅಸ್ಪೃಶ್ಯತೆಯೂ ಸಹ ಅಲ್ಲಲ್ಲಿ ಆಚರಿಸಲ್ಪಡುತ್ತಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೩ ಕಾರ್ಯಕ್ರಮದ ವಿವರಣೆ. ೭-೧೫ ಆಧುನಿಕ ಕನ್ನಡ ಪದಗಳು ೭-೪೦ ಉದಯ ಸಂಗೀತ ೮-೧೫ ನಾಳೆಯ ಹೊರೆಯ ಅರಿಯದ ಪೀಠ. ೮-೪೦ ಎ. ಕೆ. ಸುಬ್ಬರಾವ್ ಕೊಳಲು ೯-೪೫ ಬಾಲವಿಹಾರ—ಮಕ್ಕಳ ಕಾರ್ಯಕ್ರಮ ಮಧ್ಯಾಹ್ನ ೧೨ ಮತ್ತು ೩-೧೫ ಎಂ ಸುಬ್ರಹ್ಮಣ್ಯಂ ಸಂಗೀತ. ೬೩-೪೦ ವಾದ್ಯವೃಂದ. ೧ ಸಮ್ಮೇಳನ ಗೀತೆಗಳು ೯ ೫೦ ಕೊಳಲು. ಸಂಜೆ ೬ ವಾಣಿಜ್ಯ ಸಂಗೀತ. ೩.೪೦ ಮತ್ತು ೧೧ ಕೆ. ಎಸ್. ಚಂದ್ರಶೇಖರಯ್ಯ—ಸಂಗೀತ. ೬.೧೫ ಸಾಲು ದೀಪ ವ್ಯವಸಾಯ, ೭.೪೦ ನೃತ್ಯ ಗೀತೆ. ೮ ಮತ್ತು ೯.೪೦ ಶಿಲ್ಪಿಗಳ ಕಲ್ಯಾಣ ಸುಂದರಂ—ಸಂಗೀತ. ೯-೧೫ ವಾರದ ವರ್ತಮಾನ

ನಾಗಾ ಗುಡ್ಡ ಪ್ರದೇಶದಲ್ಲಿ ಮುಖಂಡನ "ಮಾರ್ಷಲ್ ಲಾ"

ಸ್ವತಂತ್ರ ನಾಗಾ ರಾಜ್ಯ ಚಳುವಳಿಯ ಸ್ವರೂಪದ ಬಗ್ಗೆ ನಾಗಾ ಮುಖಂಡರಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯದ ಪರಿಣಾಮವಾಗಿ ನಾಗಾ ರಾಷ್ಟ್ರೀಯ ಸಭೆಯನ್ನು ಅವರ ಅಧ್ಯಕ್ಷ ಎ. ಜೆಡ್. ಫಿಜೋರವರು ವಿಸರ್ಜಿಸಿರುವರಾಗಿಯೂ, ಅವರ ಸಂಗಡದವರು ಆ ಪ್ರದೇಶದಲ್ಲಿ "ಮಾರ್ಷಲ್ ಲಾ" ವನ್ನು ಜಾರಿ ಮಾಡಿರುವುದಾಗಿಯೂ ವರದಿಯಾಗಿದೆ. ಅಧ್ಯಕ್ಷರಿಗೂ, ವಿಸರ್ಜಿತ ಸಭೆಯ ಉಪಾಧ್ಯಕ್ಷ ಇಂಕೊಂಗ್ಲಿರರವರಿಗೂ ನೀತಿ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಬಂದು ಅಧಿಕಾರ ವ್ಯಾಜ್ಯ ಹುಟ್ಟಿ ಉಪಾಧ್ಯಕ್ಷರನ್ನು ಸ್ವತಃ ಬಂಧನದಲ್ಲಿಡಲಾಗಿರುವನೆಂದು ಹೇಳಲಾಗಿದೆ. ಅವರು ಅಧ್ಯಕ್ಷರ ಅಸ್ತಿತ್ವವನ್ನು ಒಪ್ಪುತ್ತಿಲ್ಲ.

ಕಮ್ಯೂನಿಸ್ಟ್ ರಾಷ್ಟ್ರಗಳಿಗೆ ಭಾರತದ ಕಬ್ಬಿಣ ಮತ್ತು ಕಾಫಿ

ಸೋವಿಯಟ್ ಮತ್ತು ಇತರ ಕಮ್ಯೂನಿಸ್ಟ್ ರಾಷ್ಟ್ರಗಳಿಗೆ ಭಾರತವು ೩॥ ಕೋಟಿ ರೂ ನಷ್ಟು ಕಬ್ಬಿಣದ ಅದಿರು ಮತ್ತು ಕಾಫಿಯನ್ನು ರಫ್ತು ಮಾಡಿ ಅಲ್ಲಿಂದ ಸಿಮೆಂಟ್, ಉಕ್ಕು ಮೊದಲಾದುವನ್ನು ಆಮದು ಮಾಡಿಕೊಳ್ಳಲಿದೆ

ಆರು ಜನರ ಇಡೀ ಸಂಸಾರದ ಮರಣ

ಕೊಯಮತ್ತೂರಿನ ಟ್ಯುಟೋರಿಯಲ್ ಇನ್‌ಸ್ಟಿಟ್ಯೂಟಿನ ಮುಖ್ಯಸ್ಥರಾದ ಕರುಣಾಕರ ಮೆನನ್, ಅವನ ಪತ್ನಿ ಮತ್ತು ೪ ಜನ ಮಕ್ಕಳು ಕಳೆದ ೭ನೇ ತಾರೀಖು ರಾತ್ರಿ ಇನ್‌ಸ್ಟಿಟ್ಯೂಟಿನಲ್ಲಿ ಮೃತಪಟ್ಟದ್ದನ್ನು ಪೋಲೀಸರು ಪತ್ತೆ ಮಾಡಿರುತ್ತಾರೆ. ಮೆನನ್ನರ ಶರೀರವು ನೇಣುಹಾಕಲ್ಪಟ್ಟಿತ್ತು. ಉಳಿದವರ ಶರೀರಗಳು ನೆಲದ ಮೇಲೆ ಬಿದ್ದಿದ್ದುವು.

ಕೆ. ವೆಂಕಟಸುಬ್ಬೈರವರು ನಂಜನಗೂಡು ಪುರಸಭಾಧ್ಯಕ್ಷರು

ಸ್ವಂ. ವ. ಫೋ.] ನಂಜನಗೂಡು ೧೧

ಇಲ್ಲಿನ ಪುರಸಭಾಧ್ಯಕ್ಷತೆಗೆ ಇಂದು ನಡೆದ ಚುನಾವಣೆಯಲ್ಲಿ ಶ್ರೀ ಕೆ. ವೆಂಕಟಸುಬ್ಬೈರವರು ೧೧ ಓಟುಗಳನ್ನು ಪಡೆದು ಜಯಶೀಲರಾದರು. ಅವರ ಪ್ರತಿಸ್ಪರ್ಧಿ ಶ್ರೀ ಮಾದೇಗೌಡರಿಗೆ ೭ ಓಟುಗಳು ಬಂದುವು. ಚುನಾವಣೆಗೆ ಮೊದಲು ಇವರಿಬ್ಬರೂ ಮತ್ತು ಶ್ರೀ ಬಿ. ಎಸ್. ಎಸ್. ಆರಾಧ್ಯರೂ ಉಮೇದುವಾರಿಕೆ ಅರ್ಜಿ ಸಲ್ಲಿಸಿ ಶ್ರೀ ಆರಾಧ್ಯರು ತಮ್ಮ ಉಮೇದುವಾರಿಕೆಯನ್ನು ಕೊನೆ ಗಳಿಗೆಯಲ್ಲಿ ವಾಪಸ್ ಪಡೆದರು.

ಶ್ರೀ ವೆಂಕಟಸುಬ್ಬೈರವರು ಇಲ್ಲಿನ ಸುಪ್ರಸಿದ್ಧ ವಕೀಲರಾಗಿದ್ದ ದಿ॥ ಕಲಿಯೂರು ವೆಂಕಟಸ್ವಾಮಯ್ಯಂಗಾರರವರ ಪುತ್ರರು ೮೬ ವರ್ಷ ವಯಸ್ಸಿನ ಇವರು ೩೦ ರಿ ಪ ಸಾ ನಾ ಸಾರ್ವಜನಿಕ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಜನಪ್ರಿಯರಾಗಿರುವವರು ಇವರಿಗೆ ನಮ್ಮ ಅಭಿನಂದನೆಗಳು.

ಪೂರ್ವ ಪಾಕಿಸ್ತಾನ ಮುಖ್ಯಮಂತ್ರಿ ಮನೆ ಮುಂದೆ ಪ್ರದರ್ಶನ

ಪೂರ್ವ ಪಾಕಿಸ್ತಾನದಲ್ಲಿ ಆಹಾರದ ಬಿಕ್ಕಟ್ಟನ್ನು ಬಗೆಹರಿಸಲು ತಕ್ಷಣವೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಪಡಿಸಲು ನೆನ್ನೆ ರಾತ್ರಿ ಜನರು ಢಾಕಾದಲ್ಲಿ ಪೂರ್ವ ಪಾಕಿಸ್ತಾನದ ಮುಖ್ಯಮಂತ್ರಿ ಅಬುಹುಸೇನ್ ಸರ್ಕಾರರ ಮನೆ ಎದುರಿನಲ್ಲಿ ಪ್ರದರ್ಶನ ನಡೆಸಿದರು. ತಮಗೆ ಅನ್ನ ಕೊಡಬೇಕೆಂದು ಅವರು ಕೂಗಿದರು.

ಪ್ರಾಥಮಿಕ ಉಪಾಧ್ಯಾಯರ ವೇತನ ಹೆಚ್ಚಿಸಲು ೧೦ ಪ್ರಾಂತಗಳ ಸಮ್ಮತಿ

ಪ್ರಾಥಮಿಕ ಉಪಾಧ್ಯಾಯರ ಸಂಬಳವನ್ನು ಹೆಚ್ಚಿಸಲು ಅಸ್ಸಾಂ, ಬಿಹಾರ್, ಬೊಂಬಾಯಿ, ಹೈದರಾಬಾದು, ಮದ್ರಾಸ್, ಮಧ್ಯಪ್ರದೇಶ, ಮಧ್ಯ ಭಾರತ, ರಾಜಸ್ಥಾನ, ತಿರುವಾಂಕೂರು ಮತ್ತು ವಿಂಧ್ಯ ಪ್ರದೇಶ ಸರ್ಕಾರಗಳು ಒಪ್ಪಿವೆ. ಅಜ್ಮೀರ್, ಕೊಡಗು, ದೆಹಲಿ, ಹಿಮಾಚಲ ಪ್ರದೇಶ, ಕಚ್, ಪೆಪ್ಸು, ಪುದುಚೇರಿ, ತ್ರಿಪುರ ಮತ್ತು ಮಣಿಪುರ ಸಂಸ್ಥಾನಗಳು ಈಗಿನ ಸಂಬಳವೇ ನ್ಯಾಯವೆಂದು ತಿಳಿಸಿವೆ. ಉಳಿದವು ಅಭಿಪ್ರಾಯವನ್ನು ಕೇಂದ್ರಕ್ಕೆ ತಿಳಿಸಿಲ್ಲ.

ಭಾರತಕ್ಕೆ ೫ ಲಕ್ಷ ಟನ್ ಅಕ್ಕಿಯ ಆಮದು

ದೇಶದ ಹಲವು ಭಾಗಗಳಲ್ಲಿ ಅಕ್ಕಿಯ ಬೆಲೆಯು ಹೆಚ್ಚುತ್ತಿರುವುದನ್ನು ತಡೆಯಲು ಸಾಕಾದಷ್ಟು ದಾಸ್ತಾನು ಮಾಡುವ ಉದ್ದೇಶದಿಂದ ಭಾರತ ಸರ್ಕಾರದವರು ೫ ಲಕ್ಷ ಟನ್ ಅಕ್ಕಿಯನ್ನು ಆಮದು ಮಾಡಿಕೊಳ್ಳಲಿರುವುದಾಗಿ ಕೇಂದ್ರ ವ್ಯವಸಾಯ ಮಂತ್ರಿ ಪಂಜಾಬರಾವ್ ದೇಶಮುಖ್‌ರವರು ತಿಳಿಸಿರುತ್ತಾರೆ.

ಗ್ರೀಕರ ಗಲ್ಲಿನ ಪ್ರತೀಕಾರಕ್ಕಾಗಿ ಇಬ್ಬರು ಬ್ರಿಟಿಷರ ಕೊಲೆ

ಸೈಪ್ರಸ್ಸಿನಲ್ಲಿ ಮೊನ್ನೆ ಇಬ್ಬರು ಗ್ರೀಕರನ್ನು ಗಲ್ಲಿಗೇರಿಸಿದ ಪ್ರತೀಕಾರಕ್ಕಾಗಿ ಇಬ್ಬರು ಬ್ರಿಟಿಷ್ ಸೈನಿಕರನ್ನು ರಹಸ್ಯವಾಗಿ ಗಲ್ಲಿಗೇರಿಸಲಾಯಿತೆಂದು ತಿಳಿದು ಬಂದಿದೆ. ಗ್ರೀಸಿನೊಡನೆ ಸೈಪ್ರಸ್ ದ್ವೀಪವನ್ನು ಐಕ್ಯಗೊಳಿಸಬೇಕೆಂದು ಚಳುವಳಿಯನ್ನು ನಡೆಸುತ್ತಿರುವ ಸಂಘವು ಮೇಲ್ಕಂಡ ವಿಷಯವನ್ನು ಪತ್ರ ಪತ್ರಿಕೆಗಳ ಮೂಲಕ ತಿಳಿಸಿದ್ದು, ಅವರ ದೈಹಿಕಬ್ಬನನ್ನು ದ್ವೀಪದ ನಿವಾಸಿಗಳು ಸೆರೆಹಿಡಿದು ಇಟ್ಟುಕೊಂಡಿದ್ದರು

ಪೆಟ್ರೋಲ್ ಲಾರಿಗೆ ಬೆಂಕಿ ಬಿದ್ದು ಆರು ಜನರು ಭಸ್ಮ

ಮಧ್ಯ ಪ್ರದೇಶದ ರಾಯಪುರದ ಬಳಿ ೩೦ ಟಿನ್ ಪೆಟ್ರೋಲ್ ಮತ್ತು ಛತ್ರದ ಹಲವು ಮೂಟೆಗಳಿದ್ದ ಲಾರಿಯೊಂದಕ್ಕೆ ಬೆಂಕಿ ಹತ್ತಿಕೊಳ್ಳಲಾಗಿ ಅದರಲ್ಲಿದ್ದ ೬ ಜನರು ಸುಟ್ಟು ಮೃತರಾದರೆಂದು ವರದಿಯಾಗಿದೆ. ಒಂದು ನವದು ಮೇಲಿನ ಸೇತುವೆಯನ್ನು ಲಾರಿಯು ದಾಟುತ್ತಿದ್ದಾಗ ನೇತುವೆಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿತೆಂದು ಹೇಳಲಾಗಿದೆ

ದ್ವಿತೀಯ ಯೋಜನೆಯಲ್ಲಿ ವ್ಯವಸಾಯಕ್ಕೆ ಹಳ್ಳಿಗಿನ ಮಹತ್ವ

ಕೇಂದ್ರ ಮಂತ್ರಿ ಪಂಜಾಬರಾವ್ ದೇಶಮುಖ್‌ರವರ ಭಾಷಣ

ಸ್ವಂ ವ ಫೋ.] ಬೆಂಗಳೂರು ೧೧

ಕೇಂದ್ರ ವ್ಯವಸಾಯ ಮಂತ್ರಿ ಪಂಜಾಬರಾವ್ ದೇಶಮುಖ್‌ರವರು ಈ ದಿನ ಪತ್ರಿಕೆಯವರಲ್ಲಿ ಸೇರಿದ್ದ ವ್ಯವಸಾಯ ಗೋಷ್ಠಿಯ ಆರಂಭೋತ್ಸವವನ್ನು ನೆರವೇರಿಸಿ, ದ್ವಿತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಕೈಗಾರಿಕೆಗಳಿಗೆ ಮಾತ್ರವಲ್ಲದೆ, ವ್ಯವಸಾಯಕ್ಕೂ ಮಹತ್ವ ಕೊಡಲಾಗಿದೆಯೆಂದೂ, ಅದಕ್ಕಾಗಿ ೫೬೮ ಕೋಟಿ ರೂ. ಕಾದಿಟ್ಟಿರಾಗಿರುವುದೆಂದೂ ತಿಳಿಸಿದರು. ಭಾರತ ಸರ್ಕಾರದವರು ಸ್ಥಾಪಿಸಿರುವ ಮುಖದ ಬೇಸಾಯಗಾರರ ಸಂಸ್ಥೆಗೆ ಸಕಲರ ಬೆಂಬಲವು ಅಗತ್ಯವೆಂದು ಸೂಚಿಸಿದರು.

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಅಧ್ಯಕ್ಷ ಭಾಷಣ ಮಾಡಿ, ಕೈಗಾರಿಕಾ ಕಾರ್ಮಿಕರಂತೆಯೇ ವ್ಯವಸಾಯ ಕಾರ್ಮಿಕರಿಗೂ ಪುರಸ್ಕಾರವಿರಬೇಕೆಂದೂ, ಇಲ್ಲದಿದ್ದರೆ ಅವರ ಬಗ್ಗೆ ಪಕ್ಷಪಾತ ಮಾಡಿದಂತಾಗುವುದೆಂದೂ ಸೂಚಿಸಿದರು

ಕೇಂದ್ರ ಸರ್ಕಾರಕ್ಕೆ ಆರ್. ಅನಂತಕೃಷ್ಣರವರು

ಸರ್ಕಾರದ ಅಂಡರ್ ಸೆಕ್ರೆಟರಿ ಶ್ರೀ ಆರ್. ಅನಂತಕೃಷ್ಣರವರನ್ನು ಕೇಂದ್ರದ ಸಂಸಾರ ಇಲಾಖೆಯ ಅಂಡರ್ ಸೆಕ್ರೆಟರಿಯಾಗಿ ನೇಮಿಸಲಾಗಿದೆ.

ಸರ್ಕಾರಿ ವಿದ್ಯಾ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಸಿ. ಬಿ. ಶಂಕರ ಅಯ್ಯರ್‌ರವರನ್ನು ಮೂರು ತಿಂಗಳ ಡೆಪ್ಯುಟಿ ಆಡಿಟರ್ ಜನರಲ್‌ರಾಗಿಯೂ, ಮೂರು ತಿಂಗಳ ಸಮಿತಿಯ ಸರ್ಕಾರಿ ಸದಸ್ಯರಾಗಿಯೂ ನೇಮಕ ಮಾಡಲಾಗಿದೆ.

ಮಾರ್ಚಿಯಲ್ಲಿ ಮಹಾ ಚುನಾವಣೆ ನಡೆಸಲು ಸರ್ಕಾರದ ಅಭಿಮತ

ಬರುವ ಮಾರ್ಚಿ ತಿಂಗಳಲ್ಲಿ ಮಹಾ ಚುನಾವಣೆಗಳನ್ನು ನಡೆಸಬೇಕೆಂದು ಸರ್ಕಾರದವರು ಆತುರರಾಗಿರುವುದಾಗಿ ಪ್ರಧಾನಿ ನೆಹರೂರವರು ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ.

ಮಾಧ್ವ ಮಹಾ ಮಂಡಲ ಕಾರ್ಯಕಾರಿ ಸಮಿತಿಯ ಚುನಾವಣೆ

ಅಖಿಲ ಭಾರತ ಮಾಧ್ವ ಮಹಾ ಮಂಡಲದ ನಗರ ಶಾಖೆಯ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಮತ್ತು ಖಜಾಂಚಿಯವರೂ ಸೇರಿ ಒಟ್ಟು ೧೫ ಜನ ಸದಸ್ಯರುಳ್ಳ ಕಾರ್ಯ ನಿರ್ವಾಹಕ ಸಮಿತಿಯ ಚುನಾವಣೆಗಾಗಿ ಕೃಷ್ಣಮೂರ್ತಿ ಪುರದಲ್ಲಿರುವ ಶ್ರೀ ವ್ಯಾಸರಾಜ ಸ್ವಾಮಿಗಳವರ ವಿದ್ಯಾಪ್ರಸನ್ನ ಮಂದಿರದಲ್ಲಿ ಇದೇ ೨೦ನೇ ತಾರೀಖು ಸಂಜೆ ೪ ಗಂಟೆಗೆ, ೫ನೇ ಸಾಲಿನ ಚೆಂದಾ ಕೊಟ್ಟ ಸರ್ವ ಸದಸ್ಯರ ಸಭೆಯು ನಡೆಯಲಿದೆ.

ಲಾಗ್ ಬುಕ್ ಕಳೆದುಹೋಗಿದೆ

ಕೇಶಾದ್ರಿಪುರಂನಿಂದ ಶೇಷಾದ್ರಿ ರಸ್ತೆಗೆ ಹೋಗುವ ರಸ್ತೆಯಲ್ಲಿ ಲಾರಿ ಲಾಗ್ ಬುಕ್ ಕಳೆದು ಹೋಗಿದೆ. ಸಿಕ್ಕಿದವರು ದಯವಿಟ್ಟು ಸಾಧ್ವಿ ಕಛೇರಿಗೆ ತಲುಪಿಸಬೇಕಾಗಿ ವಿನಂತಿ.

ಭಾರತದ ಬಂಡವಾಳಗಾರರಿಗೆ ಕೇಂದ್ರ ಮಂತ್ರಿಯ ಎಚ್ಚರಿಕೆ

ಕಲ್ಕತ್ತದಲ್ಲಿ ನೆನ್ನೆ ಇಂಡಿಯಾ ಎಕ್ಸ್‌ಚೇಂಜ್ ಕಟ್ಟಡದ ಆರಂಭೋತ್ಸವದ ಸಭೆಯಲ್ಲಿ ಕೇಂದ್ರ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಮಾತನಾಡಿ, ದೇಶಾಭ್ಯುದಯಕ್ಕಾಗಿ ಭಾರತೀಯ ಕೈಗಾರಿಕೋದ್ಯಮಿಗಳು ಬಂಡವಾಳವನ್ನು ಒದಗಿಸದಿದ್ದರೆ ವಿದೇಶೀ ಬಂಡವಾಳವನ್ನು ಆಹ್ವಾನಿಸಲಾಗುವುದೆಂದು ಎಚ್ಚರಿಸಿದರು ಪ್ರಗತಿಯ ಬೇಡಿಕೆಗಳು ಅಪಾರವಾಗಿರುವುವೆಂದೂ, ಅವನ್ನು ಪೂರೈಸಲೇಬೇಕಾಗಿರುವುದೆಂದೂ ಅವರು ಹೇಳಿದರು ದೇಶದಲ್ಲಿ ಬಂಡವಾಳವಿರುವುದೆಂದು ನಮಗೆ ಗೊತ್ತಿರುವುದಾದರೂ, ಎಲ್ಲಿ ಇದೆ ಎಂಬುದು ತಿಳಿಯದೆಂದು ಅವರು ಸೂಚಿಸಿ, ದ್ವಿತೀಯ ಯೋಜನೆಯಲ್ಲಿ ಖಾಸಗಿಯವರು ಪಾತ್ರವಹಿಸಬಹುದಾದಷ್ಟು ಅವಕಾಶವಿರುವುದೆಂದು ಅಭಿಪ್ರಾಯಪಟ್ಟರು

ಬಿಸಿಲು ಬೇಗೆಯಿಂದ ಮರಣ

ನಾಗಪುರದಲ್ಲಿ ವಿಪರೀತ ಬಿಸಿಲಿನಿಂದ ಕಳೆದ ಬುಧವಾರ ಇಬ್ಬರು ಮೃತಪಟ್ಟರು ಅಲ್ಲಿ ೧೧೩ [illegible] ಡಿಗ್ರಿ ಉಷ್ಣಾಂಶವಿದೆ ದೆಹಲಿಯಲ್ಲಿ ೧೧೬ ಡಿಗ್ರಿಯಿದೆ ಅಲ್ಲೂ ಒಬ್ಬನು ಮೃತಪಟ್ಟಿರುತ್ತಾನೆ

ಕುರುಡರ ಕೈ ಗಡಿಯಾರ

ಕುರುಡರು ಉಪಯೋಗಿಸಬಹುದಾದ ಕೈ ಗಡಿಯಾರಗಳನ್ನು ಲಕ್ಷ್ಮವರ ಕಾರ್ಖಾನೆಯೊಂದು ತಯಾರಿಸುತ್ತಿರುವುದಾಗಿಯೂ ಅವು ಬ್ರೈಲ್ ಎಂಬ ವಿಶೇಷ ಲಿಪಿಯುಳ್ಳ ಡಯಲನ್ನೂ ಮತ್ತು ಮುಳ್ಳುಗಳನ್ನೂ ಹೊಂದಿರುವುದಾಗಿಯೂ ವರದಿಯಾಗಿದೆ

ಗಮಕ ತರಗತಿ

ಮೈಸೂರು ಸೀತಾವಿಲಾಸ ಅಗ್ರಹಾರದಲ್ಲಿ ಮರಿಮಲ್ಲಪ್ಪನವರ ಪ್ರೌಢಶಾಲೆಯ ಎದುರಿಗಿರುವ ೪ನೇ ನಂಬರು ಮನೆಯ ಮಹಡಿ ಮೇಲೆ ಗ| ವಿ| ಬಿ ಎಸ್ ಎಸ್ ಕೌಶಿಕ್‌ರವರಿಂದ ಗಮಕ ತರಗತಿ ನಡೆಸಲ್ಪಡುತ್ತಿದೆ ಸೇರ ಇಚ್ಛಿಸುವ ಗಮಕ ಪ್ರವೇಶ ಪರೀಕ್ಷೆಗೆ ಕುಳಿತುಕೊಳ್ಳಲಿಚ್ಛಿಸುವವರು ಅರ್ಜಿಗಳನ್ನು ಅವರಿಗೆ ಕಳುಹಬಹುದಾಗಿದೆ

ಹರಿಕಥೆ

ರಾಜಧಾನಿಯ ಶಂಕರಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೭ ಗಂಟೆಗೆ ಜಯಂತಿ ಉತ್ಸವದ ಅಂಗವಾಗಿ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ವಿ| ವಿ ನಾರಾಯಣಶಾಸ್ತ್ರಿ ಗಮಕಿಯವರಿಂದ ಉತ್ತಮ ಚರಿತ್ರೆ ಎಂಬ ಹರಿಕಥೆಯೂ, ನಾಳಿದ್ದು ಸಂಜೆ ೬ಕ್ಕೆ ವಿ| ಜೆಟ್ ಟಿ ರಾಮಸ್ವಾಮಿಯವರ ಸಂಗೀತವೂ ಏರ್ಪಾಡಾಗಿವೆ

ಛತ್ರಪತಿ ಶಿವಾಜಿ ಜಯಂತಿ

ರಾಜಧಾನಿಯ ಶಿವ ಛತ್ರಪತಿ ಸತ್ಕಾರ ಸಂಘದವರು ನಾಳೆ ಸಂಜೆ ೫ ಗಂಟೆಗೆ [illegible] ಭವನದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಉತ್ಸವವನ್ನು ನೆರವೇರಿಸುವರು ಮಹಾರಾಜಾ ಕಾಲೇಜಿನ ಪ್ರೊ|| ಶ್ರೀ ನಾರಾಯಣರಾವ್ ಎ [illegible]ರವರು ಅಧ್ಯಕ್ಷತೆ ವಹಿಸುವರು ಕಾಲೇಜಿನ ಮನಶ್ಶಾಸ್ತ್ರ ಅಧ್ಯಾಪಕಿ ಶ್ರೀಮತಿ ಎಂ ಸರೋಜಾ [illegible]ಯವರು ಶಿವಾಜಿಯ ಬಗ್ಗೆ ಭಾಷಣ ಮಾಡುವರು ವಿ| ಎಲ್ ಚೆನ್ನಮ್ಮ ಮತ್ತು ಪಾರ್ಟಿಯ [illegible] ಸಂಗೀತವು ನಡೆಯುವುದು

Puli
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO,
Chemists & Druggists
[illegible]
BANGALORE

ವಿಯಟ್ನಾಮಿನಲ್ಲಿ ಸ್ವತಂತ್ರ ಚುನಾವಣೆಗೆ ಬ್ರಿಟನ್-ರಷ್ಯಾ ಕರೆ

ಉತ್ತರ ಮತ್ತು ದಕ್ಷಿಣ ವಿಯಟ್ನಾಮುಗಳನ್ನು ಒಂದುಗೂಡಿಸುವ ಸಂಬಂಧದಲ್ಲಿ ಎರಡು ಪ್ರದೇಶಗಳಲ್ಲೂ ಸ್ವತಂತ್ರ ಚುನಾವಣೆಗಳನ್ನು ನಡೆಸುವ ಬಗ್ಗೆ ಎರಡು ಸರ್ಕಾರಗಳೂ ಕ್ರಮ ಕೈಗೊಳ್ಳುವಂತೆ ಬ್ರಿಟನ್ ಮತ್ತು ರಷ್ಯಾಗಳು ಸೂಚಿಸಿವೆ

ಟೈಂ ಬಾಂಬ್ ಹಾಕಿ ತಾಯಿಯ ಕೊಲೆ

ಅಮೆರಿಕದ ಕೊಲರೇಡೊ ಪ್ರಾಂತದ ಡೆನ್ವರ್ ಜಾನ್ ಗಿಲ್ಬರ್ಟ್ ಗ್ರಹಾಂ ಎಂಬುವನು ತನ್ನ ತಾಯಿಯನ್ನು ಕೊಲ್ಲಲು ವಿಮಾನದಲ್ಲಿ ಟೈಂ ಬಾಂಬ್ ಇಟ್ಟು ಅದು ಸಿಡಿದು ೪೪ ಜನ ಪ್ರಯಾಣಿಕರು ಮೃತಪಟ್ಟ ಸಂಬಂಧದಲ್ಲಿ ಅವನಿಗೆ ಮರಣ ದಂಡನೆಯನ್ನು ವಿಧಿಸಲಾಗಿದೆ ಅವನು [illegible] ತಾಯಿಯ ಜೀವವಿಮೆ ಮಾಡಿದ್ದನು

ಶಂಕರ ಜಯಂತಿ

ರಾಜಧಾನಿಯ ಮಾರ್ಕೆಟ್ ಬಳಿ ಇರುವ ಶ್ರೀ ಶ್ರೀ ಜಗದ್ಗುರು ಶಂಕರಾಚಾರ್ಯರ ನಿಜಗುರು ಪರಂಪರೆಯ ಗುರುಗಳೂ [illegible] ವರ್ಷಗಳ ವಯೋವೃದ್ಧರೂ ಜ್ಞಾನವೃದ್ಧರೂ ಆದ ಶ್ರೀ ಶ್ರೀ ಬ್ರಹ್ಮವಿದ್ಯಾನಂದ ಭಾರತೀ ಸ್ವಾಮಿಗಳ ನೇತೃತ್ವದಲ್ಲಿ ಶಂಕರ ಜಯಂತ್ಯುತ್ಸವವು ಇದೇ [illegible]ದಿಂದ ಜರುಗಲಿರುತ್ತದೆ ಭಕ್ತಾದಿಗಳು ಬಂದು ಸೇವಾ ಕೈಂಕರ್ಯಗಳನ್ನು ನೆರವೇರಿಸಿ ಗುರುಗಳ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಕೋರಲಾಗಿದೆ

ಸಂಸ್ಥಾನದಲ್ಲಿ ೩ ಹೊಸ ಹತ್ತಿ ಗಿರಣಿಗಳ ಸ್ಥಾಪನೆ

ಮೈಸೂರು ಸಂಸ್ಥಾನದಲ್ಲಿ ೩ ಹೊಸ ಹತ್ತಿ ಗಿರಣಿಗಳನ್ನು ಸ್ಥಾಪಿಸಲು ಲೈಸೆನ್ಸುಗಳನ್ನು ಕೊಡಲಾಗಿರುವುದೆಂದು ಕೇಂದ್ರ ಮಂತ್ರಿ ಕೃಷ್ಣಮಾಚಾರಿಯವರು ತಿಳಿಸಿರುವರು ಅವುಗಳು ಒಟ್ಟು [illegible] ಸಾವಿರ ಕದಿರು [illegible] ಹೊಂದಿರುವುವು [illegible] ಮಗ್ಗಗಳಲ್ಲಿ ೩೫೦ ಮತ್ತು [illegible] ಗಿರಣಿಗಳಿಗೂ ರಹದಾರಿ ಕೊಡಲಾಗಿರುವುದೆಂದು ಅವರು ಸೂಚಿಸಿರುವರು

ಸಂಸ್ಥಾನದಲ್ಲಿ ಆಹಾರ ಧಾನ್ಯದ ಬೆಲೆ ಇಳಿತಾಯ

ಸಂಸ್ಥಾನದ ಪ್ರಮುಖ ಪಟ್ಟಣಗಳಲ್ಲಿ ಆಹಾರ ಧಾನ್ಯದ ಬೆಲೆಯು ಇಳಿಯುತ್ತಿದೆಯೆಂದು ವರದಿಯಾಗಿದೆ ಮುಂದೆಯೂ [illegible] ಇಳಿಮುಖವಾಗಿರುವುದೆಂದೂ ಹೇಳಲಾಗಿದೆ ಎಷ್ಟು ಬೇಕಾದರೂ ಅಕ್ಕಿಯನ್ನು ಒದಗಿಸುವುದಾಗಿ ಕೇಂದ್ರ ಸರ್ಕಾರದವರು ತಿಳಿಸಿರುವುದರಿಂದಲೂ, ಸಂಸ್ಥಾನಕ್ಕೆ ಕೊಯಮುತ್ತೂರು ಕಡೆಯಿಂದ ಅಕ್ಕಿಯು ಬರುತ್ತಿರುವುದರಿಂದಲೂ ಬೆಲೆಯು ಇಳಿದಿದೆ ರಾಗಿ ಬೆಲೆಯು ಒಂದೇ ಮಟ್ಟದಲ್ಲಿರುವುದು

Standard Milk Dairy,
Anathalaya Buildings
MYSORE
Pure Cow's milk available at the above Premises at 0 3 6 per lb Home delivery orders also executed promptly

ಬಸವ ಜಯಂತಿ ಉತ್ಸವ ಕಾರ್ಯಕ್ರಮಗಳು

ಮೈಸೂರು ೧೧

ರಾಜಧಾನಿಯ ತ್ಯಾಗರಾಜಾ ರಸ್ತೆಯಲ್ಲಿರುವ ಶರಣ ಮಂಡಲಿಯವರು ತುಮ್ಮೇರಳೆ ಸಾಹುಕಾರ್ ಸಿದ್ದಪ್ಪನವರ ವಿದ್ಯಾರ್ಥಿ ನಿಲಯದಲ್ಲಿ ಏರ್ಪಡಿಸಿರುವ ಬಸವ ಜಯಂತಿ ಅಂಗವಾಗಿ ನಾಳೆ ರಾತ್ರಿ ೮ ಗಂಟೆಗೆ ಶ್ರೀಮತಿ ಎಂ ಎ ಕನಕಮ್ಮನವರ ಸಂಗೀತವು ವಿ|| ಎಂ ಎಸ್ ವೆಂಕಟರಾಮಯ್ಯನವರ ಹಾರ್ಮೋನಿಯಂ ಮತ್ತು ವಿ|| ಎಂ ಎಸ್ ರಾಮರಾಯರ ಮೃದಂಗದೊಡನೆ ನಡೆಯುವುದು ಯುವರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಲ್ ಬಸವರಾಜುರವರು ಉಪನ್ಯಾಸ ಮಾಡುವರು

ರಾಜಧಾನಿಯ ವೀರಶೈವ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ಕ್ಕೆ ವಾಣಿವಿಲಾಸ ರಸ್ತೆಯಲ್ಲಿರುವ ಕ್ಯಾತನಹಳ್ಳಿ ಸಂಸ್ಕೃತ ಪಾಠಶಾಲೆಯಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಬಸವೇಶ್ವರ ಜಯಂತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ವಿ|| ಕೋಣನೂರು ಸೀತಾರಾಮ ಶಾಸ್ತ್ರಿಗಳಿಂದ ಕಿರಾತಾರ್ಜುನ ಎಂಬ ಶಿವಕಥೆಯೂ, ಪತ್ರಿಕಾ ಸಂಶೋಧನಾಲಯದ ಡೈರೆಕ್ಟರ್ ಶ್ರೀ ದೇವೀರಪ್ಪನವರಿಂದ ಕಲ್ಯಾಣದಲ್ಲಿ ಸರ್ವೋದಯ ಎಂಬ ವಿಷಯವಾಗಿ ಉಪನ್ಯಾಸವೂ ನಡೆಯುವುವು ಸುಗಂಧರಾಜ ಅಗರಬತ್ತಿ ಮಾಲೀಕರಾದ ಶ್ರೀ ಎಂ ಯೂಸುಫ್ ಸಾಹೇಬರು ಸೇವಾರ್ಥ ನಡೆಸುವರು

ಕೃಷ್ಣರಾಜನಗರದ ವೀರಶೈವ ಸಂಘದವರು ಉತ್ಸವವನ್ನು ಇಂದಿನಿಂದ ೯ರ ಪೂರ್ತ ನಡೆಸುವರು ನಿತ್ಯವೂ ಸಂಜೆ ಉಪನ್ಯಾಸಗಳು ನಡೆಯುವುವು ಇಂದಿನಿಂದ ಅಲ್ಲಿ ದಿನವೂ ರಾತ್ರಿ ೯ ಗಂಟೆಗೆ ಗೋಕಾಕಿನ ಶ್ರೀ ಶಾರದಾ ಸಂಗೀತ ನಾಟಕ ಮಂಡಲಿಯವರು ಜಗಜ್ಯೋತಿ ಬಸವೇಶ್ವರ ಅಥವಾ ಕಲ್ಯಾಣದ ಕ್ರಾಂತಿ ಎಂಬ ನಾಟಕವನ್ನು ಅಭಿನಯಿಸುವರು ಶ್ರೀ ಎಂ ಸಿ ಮಹದೇವಸ್ವಾಮಿಯವರು ಈ ದಿನ ಅಧ್ಯಕ್ಷತೆ ವಹಿಸುವರು

ಪಿಲ್ಲೆ ಮೊಹಲ್ಲಾ ಸೇವಾ ಮಂಡಲಿಯವರು ಶ್ರೀನಿವಾಸ ಅಗ್ರಹಾರದಲ್ಲಿ ಇಂದಿನಿಂದ ಉತ್ಸವವನ್ನು ನೆರವೇರಿಸುವರು ಅದರ ಅಂಗವಾಗಿ ಗೋವುಗಳಿಗೆ ಮೇವು, ಮಕ್ಕಳಿಗೆ ಹಾಲು, ಬಡಬಗ್ಗರಿಗೆ ಅನ್ನದಾನ ಮತ್ತು ಧರ್ಮ ಕಲ್ಯಾಣ ಮಾಡಲು ಉದ್ದೇಶಿಸಲಾಗಿದೆ ಇಂದು ರಾತ್ರಿ ೮ ಗಂಟೆಗೆ ವಿದ್ಯುಚ್ಛಾಖಾ ಅಧಿಕಾರಿಗಳಾದ ಶ್ರೀ ಬಿ ಎಸ್ ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಕುಮಾರಿ ನಾಗವೇಣಿ ಮತ್ತು ಯಶೋದಾ ಸಹೋದರಿಯರಿಂದ ಸತಿ ಅನಸೂಯ ಎಂಬ ಕಥೆಯೂ ಶ್ರೀ ಪಿ ಮಹದೇವಪ್ಪನವರಿಂದ ಜನಪದ ಗೀತೆಯೂ ಏರ್ಪಾಡಾಗಿವೆ ಮಹಾಜನರು ಉದಾರವಾಗಿ ಸಹಾಯ ಮಾಡುವಂತೆ ಕೋರಲಾಗಿದೆ.

SREE GANESHA
TALKIES
Gala Release on 12-5-56
Columbia's Technicolor Picture
PIRATES OF TRIPOLI
With Paul Henreid and Patricia Medina of "THIEF OF DAMASCUS" fame
This Picture shall be shown in wide Angle Along with this 3 Stooges Comedy in 2 reels will also be shown

ಹಾರ್ಡ್ವಿಕ್ ಶಾಲೆ ಬಗ್ಗೆ ಟೀಕೆ ಸರಿಯಲ್ಲ

ರಾಜಧಾನಿಯ ಹಾರ್ಡ್ವಿಕ್ ಪ್ರೌಢಶಾಲಾ ಉಪಾಧ್ಯಾಯರಾದ ಶ್ರೀ ಡಿ. ಸುಂದರರಾಜ್‌ವರು ಈ ರೀತಿ ಬರೆದಿರುತ್ತಾರೆ:-

ಕಳೆದ ೭ನೇ ತಾರೀಖಿನ ಸಾಧ್ವಿ ಪತ್ರಿಕೆಯಲ್ಲಿ ಶ್ರೀ ಕೆ ಸ್ವಾಮಿದಾಸರು ಬರೆದಿರುವ ಲೇಖನ [illegible] ಈ ಪತ್ರವನ್ನು ಬರೆಯಲು ಕಾರಣವಾಯಿತು [illegible] ಶ್ರೀಯುತರು ಕ್ರೈಸ್ತ ಸಭಾ ನಾಯಕರನ್ನು [illegible] ಸುವ ವಿಷಯದಿಂದ ಆರಂಭಿಸಿ, ಮಧ್ಯೆ ಹಾರ್ಡ್ವಿಕ್ ಶಾಲೆಯಲ್ಲಿ ಅನ್ಯಾಯ ನಡೆಯುತ್ತಿದೆಯೆಂದೂ, ಹೆಡ್ ಮಾಸ್ಟರ್ ಶ್ರೀ ಜಾರ್ಜ್‌ರವರನ್ನು ಹಿಂದಕ್ಕೆ ಕಳುಹಿಸಬೇಕೆಂದೂ ಬರೆದಿರುವುದು ಸರಿಯಷ್ಟೆ [illegible]ವನ್ನು ಪರಿಶೀಲಿಸಿದರೆ ಕೇವಲ ಈ ವಿಷಯವನ್ನು ಹೇಳುವುದಕ್ಕೇ ಶ್ರೀಯುತರು ಪ್ರಾರಂಭಿಸಿದ್ದಾರೆಂ[illegible] ತೋರುತ್ತದೆ ಇದು ಶುದ್ಧ ಸುಳ್ಳು [illegible] ನಾನು ಆ ಶಾಲೆಯಲ್ಲಿ ಉಪಾಧ್ಯಾಯನಾಗಿರುತ್ತೇನೆ [illegible]ಲ್ಲಿಂದ ಶಾಲೆಯಲ್ಲಿ ಯಾವ ವಿಧವಾದ ಅನ್ಯಾಯವೂ ಇಲ್ಲ, ಬದಲಾಗಿ ಹೊಂದಿಕೊಂಡಿರುವ [illegible] ಶಿಸ್ತು ಮತ್ತು ಆಸಕ್ತಿಗಳು ವಿದ್ಯಾರ್ಥಿಗಳಲ್ಲಿಯೂ, ಹಾಗೂ ಉಪಾಧ್ಯಾಯರುಗಳಲ್ಲಿಯೂ ಇದೆ ವಿದ್ಯಾ ಇಲಾಖೆಯ ಮೇಲಧಿಕಾರಿಗಳೂ [illegible] ಮಹನೀಯರೂ ಶಾಲೆಯ ಬಗ್ಗೆ [illegible]ಚ್ಚಿರುತ್ತಾರೆ. ಆದುದರಿಂದ ಶ್ರೀ ಸ್ವಾಮಿದಾಸ[illegible] ಯಾರೋ ಸುಳ್ಳು ವರ್ತಮಾನ ಕೊಟ್ಟಿರಬೇಕು [illegible] ಇನ್ನಾದರೂ ಅವರು ತಪ್ಪಾಗಿ ತಿಳಿದುಕೊಂಡಿರು[illegible] ಈ ಇನ್ನು ಮುಂದಾದರೂ ಕೂಡ ಅವರು [illegible] ತಪ್ಪಾದ ಕಲ್ಪನೆಯನ್ನು ಹುಟ್ಟಿಸಬಾರದೆಂ[illegible] ತಿಳಿಸಬಯಸುತ್ತೇನೆ

○ ಸಂಸ್ಥಾನದ ಭೂಗರ್ಭ ಇಲಾಖಾ ಡೈರೆಕ್ಟರ್ [illegible] ರಾಗಿ ಶ್ರೀ ಟಿ ಪಿ ಕೃಷ್ಣಾಚಾರ್ಯರನ್ನು [illegible] ಪೂರ್ತಿಗಾಗಿ? [illegible] ಖಾಯಂಗೊಳಿಸಲಾಗಿದೆ

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ—ಕಲ್ಪ
[illegible]
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 590
— ಭೇಟಿಯ ಕಾಲ —
ಬೆಳಿಗ್ಗೆ 7 30 ರಿಂದ 12 30 ಮತ್ತು
ಮಧ್ಯಾಹ್ನ 4 ರಿಂದ 7-30
[illegible]
[illegible]
ನವರತ್ನ — ಕಲ್ಪ
[illegible]
[illegible]
NAVRATNA KALPA PHARMACY,
Jullundur City (India)
Grams : NAVRATNA

ಪ್ರಭುದೇವಾ ಥಿಯೇಟರ್
(ಸದ್ಯ ಟಾಕೀಸ್)
ಅನೋಘವಾದ 50ನೇ ದಿನ
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ಮೊನ್ನೆ ಹುಬ್ಬಳ್ಳಿಯಲ್ಲಿ ಶ್ರೀ ಚನ್ನಬಸಪ್ಪ ... ಅವರ ಅಧ್ಯಕ್ಷತೆಯಲ್ಲಿ ನಡೆದು ನೂತನ ವಿಸ್ತೃತ ಸಂಸ್ಥಾನವನ್ನು ಮೈಸೂರೆಂಬುದಕ್ಕೆ ಬದಲು ಕರ್ನಾಟಕ ಎಂದು ಕರೆಯುವಂತೆ ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಿತು ಕರ್ನಾಟಕ ಎಂಬುದೇ ಸರಿಯಾದ ಹೆಸರೆಂದು ಸಮಿತಿ ಅಭಿಪ್ರಾಯಪಟ್ಟು, ಭಾರತ ಸರ್ಕಾರ ಮತ್ತು ಪಾರ್ಲಿಮೆಂಟುಗಳು ಈ ಹೆಸರನ್ನು ಅಂಗೀಕರಿಸಬೇಕೆಂದೂ ಕೋರಿತು

ಕರ್ನಾಟಕವನ್ನು ದ್ವಿಭಾಷಾ ಅಥವಾ ವಿವಿಧ ಭಾಷಾ ಸಂಸ್ಥಾನಗಳಲ್ಲಿ ಸೇರಿಸುವುದನ್ನು ಸಮಿತಿಯು ಖಂಡಿಸಿ ಕರ್ನಾಟಕದ ಜನರು ಅದಕ್ಕೆ ವಿರೋಧವಾಗಿರುವರೆಂದು ಸೂಚಿಸಿತು.

ಬಿದರೆ ಜಿಲ್ಲೆಯ ೬ ಕನ್ನಡ ತಾಲ್ಲೂಕುಗಳನ್ನು ಪ್ರತ್ಯೇಕ ಜಿಲ್ಲೆಯಾಗಿ ಮಾಡಬೇಕು, ಕರ್ನಾಟಕದ ಹೈಕೋರ್ಟ್ ನ್ಯಾಯಾಧೀಶರ ಸಂಬಳವು ಇತರ ಸಂಸ್ಥಾನಗಳಲ್ಲಿರುವವರಷ್ಟಿರಬೇಕು ಮತ್ತು ಉತ್ತರ ಕರ್ನಾಟಕದಲ್ಲಿ ಹೈಕೋರ್ಟಿನ ಒಂದು ಬೆಂಚು ಸ್ಥಾಪಿಸಲ್ಪಡಬೇಕು—ಎಂಬ ನಿರ್ಣಯಗಳನ್ನೂ ಮಾಡಲಾಯಿತು ತಾತ್ಕಾಲಿಕ ಶಾಸನ ಸಭೆಯಲ್ಲಿ ಕೊಡಗಿನ ಪ್ರಾತಿನಿಧ್ಯವನ್ನು ಕಡಿಮೆ ಮಾಡುವುದಕ್ಕೆ ಸಮಿತಿಯು ವಿರೋಧವನ್ನು ವ್ಯಕ್ತಪಡಿಸಿತು ಅಲ್ಲದೆ ಕನ್ನಡ ಸಂಸ್ಥಾನಕ್ಕೆಲ್ಲಾ ಒಂದೇ ಪ್ರದೇಶ ಕಾಂಗ್ರೆಸ್ ಸಮಿತಿ ಇರಬೇಕೆಂದೂ, ಹೆಚ್ಚು ಸಮಿತಿಗಳಿದ್ದರೆ ಪ್ರತ್ಯೇಕತಾ ಭಾವನೆ ಬೆಳೆಯುವುದೆಂದೂ ಸೂಚಿಸಿ ನಿರ್ಣಯ ಮಾಡಲಾಯಿತು

○ ಭಾರತದ ನಗರಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ನೌಕರರಿಗಾಗಿ ಹಾಸ್ಟೆಲುಗಳನ್ನು ನಿರ್ಮಿಸುವ ಯೋಜನೆಯನ್ನು ಕೇಂದ್ರ ಸಮಾಜ ಯೋಗಕ್ಷೇಮ ಸಮಿತಿಯು ಮಂಜೂರು ಮಾಡಿದೆ

ಅಲ್ಜೀರಿಯಾ ದಂಗೆಕೋರರಿಂದ ಊರಿನ ಮುತ್ತಿಗೆ

ಅಲ್ಜೀರಿಯದ ಟ್ಲೆಂಸೆನ್ ಎಂಬ [illegible] ಜನರಿರುವ ಊರನ್ನು ದಂಗೆಕೋರರು ಸುತ್ತುವರಿದಿರುವುದರಿಂದ, ಊರಿನ ರಕ್ಷಣೆಗಾಗಿ ಫರೆಂಗಿ, ಮಿಷಿನ್ ಗನ್ ಮತ್ತು ಸಶಸ್ತ್ರ ಮೋಟಾರುಗಳನ್ನು ಇಟ್ಟು, ತಂತಿ ಬೇಲಿಯನ್ನು ಹಾಕಲಾಗಿದೆಯೆಂದೂ ವರದಿಯಾಗಿದೆ. ಅಲ್ಜೀರಿಯದ [illegible] ದಂಗೆಕೋರರ ಸಹಾಯಕ್ಕಾಗಿ ಮೊರಾಕೊವಿನಿಂದ ಗುತ್ತಿಗಾರಿಗಳು ಬರುವರೆಂಬ ಭೀತಿಯಿದೆ. ಅವರನ್ನು ತಡೆಯಲು ಫ್ರೆಂಚ್ ಸೈನಿಕರು ಕಾಡು ಮೇಡುಗಳ ಮೇಲೆ ಮಿಷಿನ್ ಗನ್ ಅನ್ನು ಪ್ರಯೋಗಿಸಿದ್ದಾರೆ.

ಛಾವಣಾಕ ಕ್ಷತ್ರಿಯ ವಿದ್ಯಾರ್ಥಿ ನಿಲಯ

ಮೈಸೂರಿನಲ್ಲಿರುವ [illegible] ರಾಮರಾವ್ [illegible] ವಿದ್ಯಾರ್ಥಿ ನಿಲಯವು ಇದೇ ಜೂನ್ ತಿಂಗಳಿನಲ್ಲಿ ತೆರೆಯಲ್ಪಡುವುದು. ಕಾಲೇಜುಗಳಲ್ಲಿ ಓದುವ ಬಡವರೂ ಯೋಗ್ಯರೂ ಆದ ಛಾವಣಾಕ ಕ್ಷತ್ರಿಯ ವಿದ್ಯಾರ್ಥಿಗಳಿಗೆ ಪ್ರವೇಶ ಕೊಡಲಾಗುವುದು. ಅಪೇಕ್ಷಿಸುವವರಿಗೆ ಅರ್ಜಿ [illegible] ಅರ್ಜಿಗಳನ್ನು ಇದೇ ಮಾಹೆ [illegible] ತಾರೀಖಿನೊಳಗಾಗಿ ಶ್ರೀಯುತ ಎಸ್ [illegible] ಟ್ರಸ್ಟಿ, ಶ್ರೀ [illegible] ರಾವ್, ಮೈಸೂರು ಇವರಿಗೆ ಕಳುಹಿಸಬೇಕೆಂದು ಸೂಚಿಸಲಾಗಿದೆ.

[illegible]

ಅಲ್ಲಿ ಮೊಹಲ್ಲಾ ಸೀತಾ ಮಂಡಲಿಯ ಆಶ್ರಯದಲ್ಲಿ ಬಸವ ಜಯಂತಿ ಅಂಗವಾಗಿ ಶ್ರೀವಾಸ [illegible] ದಲ್ಲಿ ಈ ರಾತ್ರಿ [illegible] ಘಂಟೆಗೆ ವಿ॥ [illegible] ರವರಿಂದ [illegible] ಎಂಬ ಹರಿಕಥೆಯು ನಡೆಯುತ್ತದೆ.

ಉಪನಯನ

[illegible] ಕೊಪ್ಪಲಿನ ಶ್ರೀ ಎ ಎಸ್ [illegible] ಯವರು ತಮ್ಮ ತೃತೀಯ ಕುಮಾರ ಚಿ॥ ಸ॥ ಸುರೇಶನಿಗೆ ನೆನ್ನೆ ನಗರದಲ್ಲಿ ಬ್ರಹ್ಮೋಪದೇಶವನ್ನು ನೆರವೇರಿಸಿದರು.

ಫುಟ್‌ಬಾಲ್ ಸಮಿತಿಯವರಿಂದ ಪಕ್ಷಪಾತವೇ ?

ಮೈಸೂರು ಮುಸ್ಲಿಂ ಫುಟ್‌ಬಾಲ್ ಕ್ಲಬ್ಬನ್ನು ಸಂಸ್ಥಾನದ ಫುಟ್‌ಬಾಲ್ ಸಮಿತಿಯ ನಗರ ಶಾಖೆಯವರು ಡಿಬಾರ್ ಮಾಡಿರುವುದು ಸರಿಯಿಲ್ಲ. ಅವರ ಟೀಮಿನಲ್ಲಿ ಹೆಸರು ಬದಲಾಯಿಸಿಕೊಂಡು ಆಡಿದ ನೀಲಾವ ಟೀಮಿನ ಆಟ್ಯ [illegible] ಮೇಲೆ ಕ್ರಮ ಜರುಗಿಸದಿರುವುದು ಪಕ್ಷಪಾತ ಮಾಡಿದಂತಾಗುವುದು – ಎಂಬುದಾಗಿ [illegible] ಪತ್ರ ಬರೆದಿದ್ದಾರೆ.

ದೇಶೀಯ ಕ್ರೈಸ್ತರ ಹಕ್ಕುಬಾಧ್ಯತೆಗಳು

ಶ್ರೀಗಳಾದ ವಿ ಸುಂದರರಾಜು ಮತ್ತು ಎಸ್ ಸತ್ಯರಾಜು ಎಂಬುವರು ನಮ್ಮ ಪತ್ರಿಕೆಯಲ್ಲಿ ಬರೆದಿರುವ ಪತ್ರಗಳಿಗೆ ಶ್ರೀ ಜೆ ಸ್ವಾಮಿದಾಸ್‌ರವರು ಉತ್ತರವಿತ್ತು, ಹಾರ್ವಿನ್ ಪ್ರ್ಯಸ್ಬಿಟಿರಿಯನ್ ಮಿಶನ್‌ನವರು ಪರಮಾಧಿಯನ್ನು ಮುಟ್ಟಿರುವುದರಿಂದ ಇದಕ್ಕೆ ಸಂಬಂಧಪಟ್ಟ ವಿಷಯಗಳನ್ನು ಆಂಗ್ಲೇಯ ಮಿಷನರಿಗಳಾದ ಬಿಷಪ್ ಎ ಸಿ ಸಾರ್ಜೆಂಟ್ ಮತ್ತು ರೆವರೆಂಡ್ ಡಿ ಪೆಟ್ ವೇಸ್ಲೇ ಅವರಿಗೂ ವಿವರಿಸಿರುವುದಾಗಿ ತಿಳಿಸಿದ್ದಾರೆ. ಏನೂ ಅರಿಯದೆ ಅನನುಭವಸ್ಥರಾದವರು ಈ ವಿಚಾರದಲ್ಲಿ ಮಾಡುವ ಆಕ್ಷೇಪಣೆಗಳಿಗೆ ಬೆಲೆಯಿಲ್ಲವೆಂದು ಅವರು ಟೀಕಿಸಿದ್ದಾರೆ.

ದೇಶೀಯ ಕ್ರೈಸ್ತರ ಹಕ್ಕು ಬಾಧ್ಯತೆಗಳ ಬಗ್ಗೆ ಮಾಡಲಾಗಿರುವ ನಿಯಮಾವಳಿಗಳನ್ನು ಪರಕೀಯ ಮಿಷನರಿಗಳು ರಚಿಸಿರುವರೇ ವಿನಹ ದೇಶೀಯರಿಗೆ ಅವುಗಳ ಅರಿವೂ ಸಹ ಇರುವುದಿಲ್ಲ. ಈ ಎಲ್ಲಾ ವಿಷಯಗಳನ್ನೂ ಬಹಿರಂಗವಾಗಿ ಸವಾಲು ಮಾಡಲು ನಾನು ಸಿದ್ಧನಾಗಿದ್ದೇನೆ. ಮೇಲ್ಕಂಡ ಸತ್ಯರಾಜು ಅಥವಾ ಸುಂದರರಾಜು ಅವರಾಗಲೀ, ಅಥವಾ ಅವರ ಕಡೆಯವರಾರೇ ಆಗಲೀ, ತಮ್ಮ ವಾದವನ್ನು ಸಮರ್ಥಿಸಲು ಸಿದ್ಧರಾಗಿದ್ದರೆ ಮುಂದೆ ಬರಬಹುದು—ಎಂಬುದಾಗಿ ಶ್ರೀ ಸ್ವಾಮಿದಾಸರು ಸೂಚಿಸಿದ್ದಾರೆ.

[ಈ ವಿಷಯವು ಬಿಷಪ್‌ರವರ ಮತ್ತು ಇತರ ಅಧಿಕಾರಿಗಳ ವಿಚಾರಣೆಯಲ್ಲಿರುವುದರಿಂದ ಈ ಬಗ್ಗೆ ಪತ್ರವ್ಯವಹಾರಗಳನ್ನು ಇಲ್ಲಿಗೇ ಮುಕ್ತಾಯ ಮಾಡಲಾಗಿದೆ ಸಂ]

ತಾನು ಹೊತ್ತಿಸಿದ ಬೆಂಕಿಯಿಂದ ತನಗೇ ಮೃತ್ಯು

ಸೋಲಿಂಘರ್ ಎ ಕೆ ಕೊಂಡಪಾಳ್ಯ ಎಂಬಲ್ಲಿ [illegible] ವರ್ಷದ ಬಾಲಕನೊಬ್ಬನು ತನ್ನ ಮನೆಗೆ ಬೆಂಕಿ ಹತ್ತಿಸಿದ ಪರಿಣಾಮವಾಗಿ ಅಗ್ನಿಸ್ಪರ್ಶದಿಂದ ಮೃತಪಟ್ಟನು. ಮನೆಯವರು [illegible] ಹೋಗಿದ್ದಾಗ ತನ್ನ ಮನೆಯು ಹತ್ತಿ ಉರಿಯುವುದನ್ನು ಕಂಡು ಭಯಗೊಂಡ ಬಾಲಕನು ಮನೆಯೊಳಗೆ ಅವಿತುಕೊಳ್ಳಲಾಗಿ, ಬೆಂಕಿ ಮೈಗೆ ಸುತ್ತಿಕೊಂಡವನು ಮತ್ತೊಂದು ಮನೆಯಲ್ಲಿ [illegible] ಮಲಗಿದ್ದ ಒಬ್ಬ ಬಾಲಕನೂ ಸುಟ್ಟು ಸತ್ತನು.

ವಿವಾಹ ಮಹೋತ್ಸವಗಳು

ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯೇಟ್‌ನ ನಿವೃತ್ತ ರಿಜಿಸ್ಟ್ರಾರ್ ಶ್ರೀ ಬಿ ವಿ ನರಸಿಂಹಯ್ಯನವರು ತಮ್ಮ ಅಣ್ಣಂದಿರು ರಾಜಶಿಲ್ಪ ವಿಶಾರದ ರಾವ್ ಬಹದ್ದೂರ್ ಬಿ ಸುಬ್ಬರಾಯರ ಮೊಮ್ಮಕ್ಕಳು ಬಿ ಎಸ್ ದತ್ತಾತ್ರಿಯವರ ಪುತ್ರ ಶ್ರೀ ಸ್ವಾಮಿಕುಮಾರ್‌ರವರಿಗೆ ನಿವೃತ್ತ ಸೂಪರಿಂಟೆಂಡಿಂಗ್ ಇಂಜನಿಯರ್ ಬಿ ಕೃಷ್ಣರಾಯರ ಮೊಮ್ಮಕ್ಕಳು ಶ್ರೀ ಪಿ ಶಾಮರಾಯ ಪುತ್ರಿ ಸೌ॥ ಇಂದುಮತಿಯನ್ನು ತಂದುಕೊಂಡು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಮೈಸೂರು ಕೃಷ್ಣಮಂಜವನದಲ್ಲಿರುವ ಶ್ರೀ ಎಸ್ ರಾಘವಯ್ಯಂಗಾರ್ಯರು ತಮ್ಮ ಅಣ್ಣಂದಿರ ಮಕ್ಕಳು ಬೊಂಬಾಯಿಯ ಶ್ರೀ ಎಸ್ ಎಸ್ ಅಯ್ಯಂಗಾರ್ಯರ ಪುತ್ರಿ ಸೌ। ಮಹಾಲಕ್ಷ್ಮಿಯನ್ನು ಕೃಷ್ಣರಾಜನಗರದಲ್ಲಿರುವ ಸಬ್ ಇಂಜನಿಯರ್ ಶ್ರೀ ಎಸ್ ರಾಮಾನುಜಯ್ಯಂಗಾರ್ಯರ ಜ್ಯೇಷ್ಠ ಪುತ್ರ ಶ್ರೀ ಎಸ್ ಆರ್ ಅಳಸಿಂಗ್ರಾಚಾರ್ಯರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ರಾಜಧಾನಿಯ ಹಳೇ ಬ್ಯಾಂಕ್ ರಸ್ತೆಯಲ್ಲಿರುವ ಬೆಂಗಳೂರು ಟೇಲರಿಂಗ್ ಹಾಲಿನ ಶ್ರೀ ಎಂ ಗೋವಿಂದ್‌ರವರು ತಮ್ಮ ಪುತ್ರಿ ಸೌ॥ ಯಶೋದಮ್ಮನನ್ನು ಬೆಂಗಳೂರು ಶ್ರೀ ಮಲ್ಲಯ್ಯನವರ ಪುತ್ರ ಶ್ರೀ ಎಂ ಪ್ರಕಾಶ್‌ರವರಿಗೂ, ದ್ವಿತೀಯ ಪುತ್ರಿ ಸೌ। [illegible] ಮ್ಮನನ್ನು ಚಿಕ್ಕನಾಯಕನಹಳ್ಳಿ ಪಠೇಲಯ್ಯನವರ ಪುತ್ರ ಶ್ರೀ ಸಿ ನಾಗೇಂದ್ರಪ್ಪನವರಿಗೂ ಕೊಟ್ಟು ವಿವಾಹವನ್ನು ನೆನ್ನೆ ರಾಜಧಾನಿಯಲ್ಲಿ ನೆರವೇರಿಸಿದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible] ನಾಗಸ್ವರ [illegible] ಪುರಂದರದಾಸರ ದೇವರನಾಮ [illegible] ಉಷಯ ಸಂಗೀತ ಮಧ್ಯಾಹ್ನ [illegible] ರಾಮಸ್ವಾಮಿ ಸಂಗೀತ [illegible] ನಮ್ಮ ಪುಸ್ತಕ ಭಂಡಾರ [illegible] ಭಾಷಣ [illegible] ಎಂ ಎಸ್ ಸುಬ್ಬಲಕ್ಷ್ಮಿ [illegible] ಕನ್ನಡ ಪದ್ಯ ನಾಟಕ

SREE GAYATHRI
TALKIES
From 18-5-56 For 3 days
MANY RIVERS TO CROSS
Starring Robert Taylor & Eleanor Parker
Morning Shows — Saturday & Sunday
Give a Girl a Break

ಹೆಗಲ ಮೇಲೆ ಹೊತ್ತು ಮಾತಾಪಿತೃಗಳಿಗೆ ತೀರ್ಥಯಾತ್ರೆ

ತ್ರೇತಾ ಯುಗದಲ್ಲಿ ಶ್ರವಣಕುಮಾರ [illegible] ವನು ತನ್ನ ಮಾತಾಪಿತೃಗಳನ್ನು ಹೆಗಲ ಮೇಲೆ ಹೊತ್ತು ತೀರ್ಥಯಾತ್ರೆ ಮಾಡಿಸಿದಂತೆ [illegible] ಲಾಲ್ ಎಂಬ ಯುವಕನೊಬ್ಬನು ತನ್ನ [illegible] ಮಾತಾಪಿತೃಗಳನ್ನು ಎರಡು ಬುಟ್ಟಿಗಳಲ್ಲಿ [illegible] ಡಿಸಿ ಒಂದು ಅಡ್ಡೆಯ ಮೇಲೆ ಹೊತ್ತು [illegible] ಊರುಗಳಿಗೆ ಯಾತ್ರೆ ಹೊರಟು ಈಗ [illegible] ಬಾದಿಗೆ ಬಂದಿದ್ದಾನೆ. ತನ್ನ ತಂದೆತಾಯಿ[illegible]ಗೆ ಕ್ಷೇತ್ರಗಳ ದರ್ಶನ ಮಾಡಿಸುವಂತೆ ಶಿವನು [illegible] ನಗೆ ಸ್ವಪ್ನದಲ್ಲಿ ತಿಳಿಸಿದ್ದುದಾಗಿ ಅವನು ಹೇಳುತ್ತಾನೆ.

ಮರುಗಾಮೇವಿ ಮತ್ತು ಚಾಮುಂಡೇಶ್ವರಿ ಅಮ್ಮನವರ ಜಾತ್ರೆ

ನಜರ್‌ಬಾದ್ ಮೊಹಲ್ಲಾ ಮಹಾರಾ[illegible] ಬೀದಿಯಲ್ಲಿರುವ ಶ್ರೀ ಮರುಗಾಮೇವಿ ದೇವಸ್ಥಾನದಲ್ಲಿ ಪ್ರತಿ ವರ್ಷದಂತೆ ಶ್ರೀ ಮರುಗಾಮೇವಿ [illegible] ಶ್ರೀ ಚಾಮುಂಡೇಶ್ವರಿ ಅಮ್ಮನವರ ಜಾತ್ರೆಯು ನಾಳೆ ನಡೆಯುವುದು. ಬೆಳಿಗ್ಗೆ ಅಭಿಷೇಕ ಮಂಗಳಾರತಿಗಳನಂತರ ದೇವಿಯವರನ್ನು [illegible]ಗೆ ಬಿಜ ಮಾಡಿಸಿ ಅಲ್ಲಿ ಪೂಜೆ, ದೀವಟಿಗೆ [illegible] ನಡೆಸಿದಮೇಲೆ ಕಲಶದ ಸಮೇತ ವಾದ್ಯ[illegible]ಯಿಂದ ದೇವಸ್ಥಾನಕ್ಕೆ ವಾಪಸು ಕರೆತರಲಾಗುವುದು. ನಾಳಿದ್ದು ಸಂಜೆ ಉಯ್ಯಾಲೋತ್ಸವದ ನಂತರ ೭ ಗಂಟೆಗೆ ಶ್ರೀ ಪಿ ರಾಮಸ್ವಾಮಿಯವರಿಂದ ವೀರಮತಿ ಎಂಬ ಕಥೆಯೂ [illegible]ಗುವುದು.

ಮೈಸೂರು ಪೇಟೆ ಧಾರಣೆ

	ರೂ	ಆ	ರೂ
ಕಡಲೆಕಾಯಿ	[illegible]	0 0	[illegible]
ಕೊಂಗಿದೀಜ	[illegible]	[illegible]	[illegible]
ಎಳ್ಳು	[illegible]	[illegible]	
ಹುರುಳಿ	[illegible]	[illegible]	[illegible]
ಹುಣಿಸೇಬೀಜ	[illegible]	[illegible]	
ಹಲಸಂದೆ	[illegible]	[illegible]	
ಉಪ್ಪು	[illegible]	[illegible]	
ಹುಣಿಸೇಹಣ್ಣು	[illegible]	0 0	
ತೆಂಗಿನಕಾಯಿ [illegible]	[illegible]	0 0	[illegible]

SARADAVILAS COLLEGE,
Inter Tutorial Section
Students coached
for September Exams
In
English, Kannada and P C M
BY
Highly experienced staff
Hon Secretary

FOR IMMEDIATE SALE
* MURPHY "Station Master" Radio
* RALEIGH English lady's cycle
* LATHE Machine english make
* CIRCULAR SAW with shaft
* 100R PULLY-4" dia
* H M V portable gramophone
* PFAFF sewing machine
* TAN-SAD perambulator
* & FURNITURE
Apply -
A B I D S
Statue Square, Mysore

ಲಕ್ಷ್ಮಿ ★ 17-5-56 ರಿಂದ ಜನಭರಿತ 6ನೇ ವಾರ ದಿನವೂ 3 ಪ್ರದರ್ಶನಗಳು
ಮಧುರೈ ವೀರನ್ (ತಮಿಳು)
ಪಾತ್ರ - ಎಂ ಜಿ ರಾಮಚಂದ್ರ, ಟಿ ಎಸ್ ಬಾಲಯ್ಯ, ಭಾನುಮತಿ ಲಲಿತ ಪದ್ಮಿನಿ ರಾಗಿಣಿ, ಎನ್ ಎಸ್ ಕೃಷ್ಣನ್-ಟಿ ಎ ಮಧುರಂ ಮುಂತಾದವರು

ಲಗ್ನ ಕಾಲಕ್ಕೆ
ಅನುಕೂಲವಾಗಿ, ನಾನಾ ತರಹ
ರವೆ ಬಂದಿವೆ
ಬೆಲೆ ಬಹಳ ಸುಲಭ
ಮುಹೂರ್ತ 7 80 8 00
9 00 10 00
ಕೆ ಮಾದೂರ್, ಪ್ರೊಪ್ರೈಟರ್
ಕೃಷ್ಣ ಸ್ಟೋರ್ಸ್ ಡಿಪೋ,
ಸಂತೇಪೇಟೆ, ಮೈಸೂರು

SRI TUTORIAL COLLEGE
MYSORE
Hurry up ! *Good Opportunity !!*
Expert Tuition in English for the Intermediate students preparing for the August Examinations
★
Ladies also admitted
Enquire at -
MADARI SHALA,
Near Jaganmohan Palace
Working hours 9 to 10 A M and 5 to 7 P M.
Classes work from Monday 21st

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
[illegible]
ನವರತ್ನ—ಕಲ್ಪ
[illegible]
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ [illegible]
ಪ್ರತಿ ತಿಂಗಳು 17 ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ರೂಂ ನಂ 59
— ಭೇಟಿಯ ಕಾಲ —
ಬೆಳಿಗ್ಗೆ 7 30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
[illegible]
ನವರತ್ನ—ಕಲ್ಪ
[illegible]
[illegible] 9 [illegible]
[illegible]

NAVRATNA KALPA PHARMACY,
Jullundur City (India)
Grams NAVRATNA

MISS NOT THIS !
ABIDS GRAND AUCTION SALE
on SUNDAY 20th at SHOWROOM at 10 A M
Very good selection of FURNITURE IRON SAFE, RADIOS MACHINERY and FANCY articles
INSPECTION Sat 19th between 3 & 6 P M
Terms SPOT CASH
★
Authorised Dealers MURPHY RADIOS
Phone 473 Statue Square Mysore

Edited, Printed and Published by A R. Nagarajan at Sadhvi Press D Subbiah Road Mysore

ಟೆಲಿಫೋನ್ ನಂ. 792

ಲಗ್ನದ ಜವಳಿ
ನೌಗಿ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೆಗಾಲ,
ಆರ್ಣಿ, ಬಿಂದಿಗಲ್
ರೇಷ್ಮೆ ಮತ್ತು ಜರಿಗೆ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M. V. ಭೋಜಯ್ಯ
ಅ. ಸ. & ಬ್ರದರ್ಸ್,
ಇಂಡಿಯಾ ಬ್ಯಾಂಕ್ ಎದುರು,
ಮೈಸೂರು . ಫೋನ್ 446

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಕಾರ್ಗೋ ಮಾರ್ಕೆಟ್
ಸ್ಥಾಪನೆ 1932 ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ
ಮಾರ್ಟ್,
ನ್ಯೂ ಸ್ಟಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾ
ರಾದ ನೆಕ್ಲೇಸ್‌ಗಳು, ಬಳೆ
ಗಳು ಮತ್ತು ಹರಳಿನ ಒಡವೆಗಳು
ಸಿದ್ಧವಾಗಿ ದೊರೆಯುತ್ತವೆ

ಸಂಪುಟ : ೦೪] SADHVI : FRIDAY 18-5-1956 ಮೈಸೂರು ಶುಕ್ರವಾರ : ೧೮-೫-೧೯೫೬ [ಸಂಚಿಕೆ : ೨೬೭

ಭತ್ತಕ್ಕೆ ಮುಂಗಡ ಕೊಡದಂತೆ ಬ್ಯಾಂಕುಗಳಿಗೆ ಆದೇಶ

ಎ.ಐ.ಸಿ.ಸಿ. ಸಭೆ ಮುಂದೆ ಮಹಾರಾಷ್ಟ್ರರ ಸತ್ಯಾಗ್ರಹ

ಬೊಂಬಾಯಿಯಲ್ಲಿ ಬರುವ ತಿಂಗಳು ೨ನೇ ತಾರೀಖು ನಡೆಯಲಿರುವ ಎ ಐ ಸಿ ಸಿ ಅಧಿವೇಶನದ ಸಂದರ್ಭದಲ್ಲಿ ಮಹಾರಾಷ್ಟ್ರದ ಕಾಂಗ್ರೆಸ್ಸಿನವರ ಸಮ್ಮೇಳನದವರು ಸತ್ಯಾಗ್ರಹ ನಡೆಸಿ ಬೊಂಬಾಯಿ ನಗರವನ್ನು ಮಹಾರಾಷ್ಟ್ರ ಸಂಸ್ಥಾನದಲ್ಲಿ ಸೇರಿಸಬೇಕೆಂದು ಒತ್ತಾಯಪಡಿಸಲಿರುವರೆಂದು ವರದಿಯಾಗಿದೆ

ಫೈರ್ ಇಂಜನ್ ಹರಿದು ಇಬ್ಬರ ಮರಣ

ಮದ್ರಾಸಿನಲ್ಲಿ ನೆನ್ನೆ ರಾತ್ರಿ ಟೊಂಡಿಯಾರ್ ಪೇಟೆಯಲ್ಲಿ ಬೆಂಕಿಯನ್ನು ಆರಿಸಲು ಒಂದು ಫೈರ್ ಇಂಜನ್ನು ಹೋಗುತ್ತಿದ್ದಾಗ ಒಂದು ಕಡೆ ತಿರುಗಿ ಹರಿದು ೪೩ ವರ್ಷದ ಗರ್ಭಿಣಿ ಹೆಂಗಸು ಸರಾಬಿ ಎಂಬಾಕೆ ಮತ್ತು ಆಕೆಯ ಚಿಕ್ಕವಯಸ್ಸಿನ ಮೊಮ್ಮಗಳು, ಹಮೀತ್ ಭಾಷಾ ಮತ್ತು ಸುಬ್ರಹ್ಮಣ್ಯಂ ಎಂಬುವರ ಮೇಲೆ ಹರಿದು, ಹೆಣ್ಣು ಮಗುಗಿ ಮತ್ತು ಸುಬ್ರಹ್ಮಣ್ಯಂ ಇವರಿಬ್ಬರು ಮೃತಪಟ್ಟರು ಗರ್ಭಿಣಿ ಸ್ತ್ರೀಯು ಬಲಗಾಲನ್ನು ಆಸ್ಪತ್ರೆಯಲ್ಲಿ ಕತ್ತರಿಸಲಾಯಿತು ಹಮೀತ್ ಭಾಷಾ ಎಂಬುವನ ಸ್ಥಿತಿ ತೀವ್ರವಾಗಿದೆ ಎರಡು ಸೈಕಲ್ ರಿಕ್ಷಾಗಳೊಡನೆ ಡಿಕ್ಕಿಯಾಗುವುದನ್ನು ತಪ್ಪಿಸಲು ಹೋಗಿ ಅಪಘಾತವು ಸಂಭವಿಸಿದುದಾಗಿ ಗೊತ್ತಾಗಿದೆ

ಸಂಗೀತ

ಕಿಲ್ಲೆ ಮೊಹಲ್ಲಾ ಉತ್ತರಾದಿ ಮಠದ ಬೀದಿಯಲ್ಲಿರುವ ಶ್ರೀ ಸಿದ್ಧಪ್ಪಾಜಿ ಗದ್ದಿಗೆ ಆವರಣದಲ್ಲಿ ಈ ರಾತ್ರಿ ೮॥ ಗಂಟೆಗೆ ಬಸವ ಜಯಂತಿ ಪ್ರಯುಕ್ತ ವಿ॥ ಶಾರದಮ್ಮನವರ ಸಂಗೀತವು, ವಿ॥ ಎಂ ಎಸ್ ತೇಜಪ್ಪನವರ ಮೃದಂಗ, ವಿ॥ ಮುತ್ತಣ್ಣನವರ ಪಿಟೀಲು, ವಿ॥ ಸುಬ್ಬಣ್ಣನವರ ಢೋಲಕ್ ಮತ್ತು ವಿ॥ ನಾಗಣ್ಣನವರ ಕರಂಡಕ ವಾದ್ಯದೊಡನೆ ನಡೆಯುವುದು

ಸರ್ಕಾರಿ ಆರ್ಕೆಸ್ಟ್ರಾ ಪರಿಶೀಲನೆಗಾಗಿ ಸಮಿತಿ

ಸರ್ಕಾರದ ಆರ್ಕೆಸ್ಟ್ರಾವಿನ ಪುನರ್ವ್ಯವಸ್ಥೆಗಾಗಿ ಸಂಸ್ಥಾನದ ಪೋಲೀಸು ಇಲಾಖಾ ಮುಖ್ಯಾಧಿಕಾರಿಯ ಅಧ್ಯಕ್ಷತೆಯಲ್ಲಿ ೩ ತಿಂಗಳ ಅವಧಿಯ ಸಮಿತಿಯೊಂದನ್ನು ರಚಿಸಲಾಗಿದೆ ಇದರಲ್ಲಿ ಶ್ರೀಗಳಾದ ಸಂಗೀತರತ್ನ ಟಿ ಚೌಡಯ್ಯ, ಶಲ್ವಿ ಕೃಷ್ಣ ಅಯ್ಯಂಗಾರ್, ಎಂ ಎ ಆರ್ ಪಿ ಯು ಡಿ ಎಸ್ ಪಿ ಯುವರಾಜ ಕೆ ಆರ್ ಕೃಷ್ಣ ಮತ್ತು ಸರ್ಕಾರಿ ಆರ್ಕೆಸ್ಟ್ರಾವಿನ-ಡೆಪ್ಯುಟಿ ಕನ್ನಂಡಕ್ಟರ್‌ರವರು ಸದಸ್ಯರಾಗಿರುವರು

ವಾಸವಾಂಬ ಜಯಂತಿ ಕಾರ್ಯಕ್ರಮ

ದೊಡ್ಡಪೇಟೆ ಶ್ರೀ ಕನ್ಯಕಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ವಾಸವಾಂಬ ಜಯಂತಿ ಪ್ರಯುಕ್ತ, ನಾಳೆ ಬೆಳಿಗ್ಗೆ ಅಮ್ಮನವರ ಉತ್ಸವವೂ, ರಾತ್ರಿ ರಾಜರಾಜೇಶ್ವರಿ ಅಲಂಕಾರವೂ ಮತ್ತು ಗಮಕಿ ನಾರಾಯಣ ಶಾಸ್ತ್ರಿಗಳಿಂದ ವಾಸವಾಂಬ ಚರಿತ್ರೆ ಎಂಬ ಹರಿಕಥೆಯೂ ನಡೆಯುವುವು

ಪೂರ್ವ ಪಾಕಿಸ್ತಾನದ ಮುಖಂಡರ ಉಪವಾಸ ಮುಕ್ತಾಯ

ಪಾಕಿಸ್ತಾನದ ಅವಾಮಿ ಲೀಗಿನ ಮುಖಂಡರಾದ ಮೌಲಾನಾ ಭಾಷಾನಿಯವರು ೧೭ ದಿನಗಳಿಂದ ನಡೆಸುತ್ತಿದ್ದ ಉಪವಾಸ ವ್ರತವನ್ನು ನೆನ್ನೆ ಮುಕ್ತಾಯ ಮಾಡಿದರು ಅವರಿಗೆ ಲಿಂಗಸ ಆ ಕೃಷ್ಣ ಹೆಚ್ ಎಸ್ ಸುಹ್ರಾವರ್ದಿಯವರು ಆಹಾರವನ್ನು ಕೊಟ್ಟರು ಪೂರ್ವ ಬಂಗಾಳದಲ್ಲಿ ಉಂಟಾದ ಪರಿಸ್ಥಿತಿಯು ತೀವ್ರವಾದ ಬಗ್ಗೆ ಅವರು ಉಪವಾಸವನ್ನು ಕೈಗೊಂಡಿದ್ದರು ಆ ಪ್ರಾಂತಕ್ಕೆ ೩೦ ಕೋಟಿ ರೂ ಗಿಂತಲೂ ಹೆಚ್ಚು ಹಣವನ್ನು ಒದಗಿಸಿ ಕ್ಷಾಮದ ಪರಿಸ್ಥಿತಿಯನ್ನು ಪರಿಹರಿಸುವುದಾಗಿ ಪಾಕಿಸ್ತಾನ ಸರ್ಕಾರದವರು ಅವರಿಗೆ ಭರವಸೆ ಕೊಟ್ಟಮೇಲೆ ಉಪವಾಸವನ್ನು ಮುಕ್ತಾಯ ಮಾಡಲಾಯಿತು ಅಲ್ಲಿನ ಆಹಾರ ಸ್ಥಿತಿಯನ್ನು ಪರಿಶೀಲಿಸಲು ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾ ಢಾಕಾಗೆ ಹೋಗಲಿರುವರು

೭ ವಾರಗಳಲ್ಲಿ ಅಣುಪ್ರತಿಕ್ರಿಯಾ ಯಂತ್ರದ ಕಾರ್ಯಾರಂಭ

ಬೊಂಬಾಯಿಯಲ್ಲಿ ನಿರ್ಮಿಸಲಾಗುತ್ತಿರುವ ಅಣು ಪ್ರತಿಕ್ರಿಯಾ ಯಂತ್ರವು ಇನ್ನೆರಡು ಅಥವಾ ಎಂಟು ವಾರಗಳಲ್ಲಿ ಕೆಲಸವನ್ನು ಆರಂಭಿಸುವುದೆಂದು ನೆನ್ನೆ ಲೋಕಸಭೆಯಲ್ಲಿ ಪ್ರಧಾನಿ ನೆಹರೂರವರು ತಿಳಿಸಿದರು ಕೆನಡದಿಂದ ಬರುವ ಅಣು ಪ್ರತಿಕ್ರಿಯಾ ಯಂತ್ರವು ಕೆಲಸ ಮಾಡಲು ಇನ್ನೂ ಎರಡು ವರ್ಷ ಕಾಲ ಬೇಕಾಗುವುದೆಂದೂ ಅವರು ನುಡಿದರು ಭಾರತವು ಇನ್ನೂ ಇತರ ಅನೇಕ ಯಂತ್ರಗಳನ್ನು ಹೊಂದುವುದೆಂದೂ ಸೂಚಿಸಿದರು

ಕಾಜಿಪೇಟೆ ಫೈರ್ಮನ್ನುಗಳ ಮೇಲೆ ಅಶ್ರುವಾಯು

ಹೈದರಾಬಾದಿನ ಕಾಜಿಪೇಟೆಯ ರೈಲ್ವೆ ಸ್ಟೇಷನ್ನಿನಲ್ಲಿ ಮುಷ್ಕರ ಹೂಡಿರುವ ಫೈರ್ಮನ್ನುಗಳು ನೆನ್ನೆ ರೈಲಿನ ಇಂಜನ್ನನ್ನು ಕೆಡಿಸಿ ಅದು ಓಡದಂತೆ ಮಾಡಲು ಪ್ರಯತ್ನಿಸುತ್ತಿದ್ದುದನ್ನು ತಡೆಯಲು ಪೋಲೀಸರು ಅಶ್ರುವಾಯು ಪ್ರಯೋಗ ಮಾಡಿದರೆಂದು ವರದಿಯಾಗಿದೆ ಮುಷ್ಕರದವರು ನಂತರ ಲೋಕೊ ಶೆಡ್ಡಿಗೆ ನುಗ್ಗಿ ಅಲ್ಲಿ ಮರ ಮುಟ್ಟು ಮತ್ತು ಕಿಟಕಿ ಗಾಜುಗಳನ್ನು ಮುರಿದ ಟೆಲಿಫೋನ್ ತಂತಿಗಳನ್ನು ಕತ್ತರಿಸಿದರು

ಕೊಳದಲ್ಲಿ ಬಿದ್ದು ಕಂಟ್ರಾಕ್ಟರ್ ಕೃಷ್ಣಯ್ಯನವರ ಆತ್ಮಹತ್ಯೆ

ಕೃಷ್ಣರಾಜ ಮೊಹಲ್ಲಾ ತೊಗರಿ ಬೀದಿಯಲ್ಲಿ ವಾಸವಿದ್ದ ಅರಮನೆ ಕಂಟ್ರಾಕ್ಟರ್ ಶ್ರೀ ಕೃಷ್ಣಯ್ಯ ಎಂಬುವರು ನೆನ್ನೆ ಮುಂಜಾನೆ ಕುಪ್ಪಣ್ಣನ ತೋಟದ ಕೊಳದಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡರು ಅವರಿಗೆ ಬಹಳ ದಿನಗಳಿಂದಲೂ ಶರೀರ ವ್ಯಾಧಿಯು ಬರುತ್ತಿತ್ತು ಅವರಿಗೆ ೫೫ ವರ್ಷ ವಯಸ್ಸಾಗಿತ್ತು ನಜರ್‌ಬಾದ್ ಪೋಲೀಸರು ಅವರ ಶವವನ್ನು ಮೇಲಕ್ಕೆ ತೆಗೆದು ಮಹಜರು ಕ್ರಮ ನಡೆಸಿದರು ಪೋಸ್ಟ್‌ಮಾರ್ಟಂ ಆದನಂತರ ಸಂಜೆ ಶವದ ಅಂತ್ಯಸಂಸ್ಕಾರವು ನಡೆಯಿತು ಅವರಿಗೆ ಪತ್ನಿಯೂ ೨ ಮಂದಿ ಮಕ್ಕಳೂ ಇರುವರು

ಓರಿಯೂರ್ ಪಟ್ಟಣದ ಉಪ ಚುನಾವಣೆ

ಐದು ಜನ ಉಮೇದುವಾರರ ಸ್ಪರ್ಧೆ

ಮೈಸೂರು ೧೭

ಹಿರಿಯೂರು ಪಟ್ಟಣದಿಂದ ವಿಧಾನ ಸಭೆಗೆ ನಡೆಯಲಿರುವ ಉಪ ಚುನಾವಣೆಯ ಸಂಬಂಧವಾಗಿ ಈ ಮಧ್ಯಾಹ್ನ ಕಾಂಗ್ರೆಸ್ ಉಮೇದುವಾರರಿಂದ ಹೆಚ್ ಎಂ ಚನ್ನಬಸಪ್ಪನವರು ನಾಮಪತ್ರವನ್ನು ಸಲ್ಲಿಸಿದರು ಪಿ ಎಸ್ ಪಿ ಪಕ್ಷದ ಶ್ರೀ ಗೌಡ ಈರಣ್ಣ, ಹಿರಿಯೂರು ಪಟ್ಟಣದ ಮಾಜಿ ಸದಸ್ಯ ಶ್ರೀ ರಂಗಪ್ಪ, ಕಮ್ಯೂನಿಸ್ಟ್ ಪಕ್ಷದ ಶ್ರೀ ಎ ಬೆಳ್ಳಿಯಪ್ಪ ಮತ್ತು ಕಾಂಗ್ರೆಸ್ಸಿನ ಶ್ರೀ ಪಟೇಲ್ ರಂಗೇಗೌಡರೂ ಸಹ ಉಮೇದುವಾರಿಕೆ ಪತ್ರಗಳನ್ನು ಸಲ್ಲಿಸಿದರು

ವಾದ್ಯಗೋಷ್ಠಿ

ಚಾಮುಂಡಿಪುರಂ ಶ್ರೀ ಶಂಕರನಾರಾಯಣ ಸ್ವಾಮಿ ಮತ್ತು ಶ್ರೀ ಪಾಂಡುರಂಗಸ್ವಾಮಿ ದೇವಸ್ಥಾನದಲ್ಲಿ ನಡೆಯುವ ಉತ್ಸವದಲ್ಲಿ ಶ್ರೀ ರಾಮನವಮಿ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮೈಸೂರ್ ಅಕ್ಕ ಸ್ವಾಮಿಗಳಿಂದ ವಾದ್ಯಗೋಷ್ಠಿಯನ್ನು ಏರ್ಪಡಿಸಿದ್ದಾರೆ

ಸಟ್ಟಾ ಜೂಜು ಪತ್ತೆ

ಮಂಡಿ ಮೊಹಲ್ಲೆಯ ನಜೀರ್ ಅಹಮದ್ ಮತ್ತು ಅಹಮದ್ ಸಾಬ್, ಕೃಷ್ಣರಾಜ ಮೊಹಲ್ಲೆಯ ಬಸವರಾಜು ಮತ್ತು ಸಿದ್ದಯ್ಯ ಮತ್ತು ದೇವರಾಜ ಮೊಹಲ್ಲೆಯ ಪುಟ್ಟಸ್ವಾಮಿ, ಅಹಮದ್ ರಹಮಾನ್ ಮತ್ತು ಮೂವರು ಸಟ್ಟಾ ಜೂಜಾಟದಲ್ಲಿದ್ದುದನ್ನು ಪತ್ತೆ ಹಚ್ಚಿ ಮೊಕದ್ದಮೆ ಹೂಡಲಾಗಿದೆ

ಅನುಮಾನದ ಮೇಲೆ ಬಂಧನ

ಅಕ್ಬರ್ ಮೊಹಲ್ಲೆಯ ಚನ್ನಬಸವ ಎಂಬುವನು ನೆನ್ನೆ ರಾತ್ರಿ ಮಂಡಿ ಮೊಹಲ್ಲೆಯಲ್ಲಿ ಅನುಮಾನಾಸ್ಪದವಾಗಿ ತಿರುಗುತ್ತಿದ್ದಾಗ ಅವನನ್ನು ಬಂಧಿಸಿ ೨೦೦ ಕಳುವಿನ ಪದಾರ್ಥಗಳನ್ನು ಪತ್ತೆ ಹಚ್ಚಲಾಗಿದೆ ಮತ್ತು ಮಾನಂದವಾಡಿ ರಸ್ತೆಯಲ್ಲಿ ಮಂಗಳೂರಿನ ವೀರಪ್ಪ ಎಂಬುವನ ೫೦೦ ರೂ ಬೆಲೆಯ ಬೈಸಿಕಲ್ ಒಂದನ್ನು ತೆಗೆದುಕೊಂಡು ಹೋಗುತ್ತಿದ್ದಾಗ ಬಂಧಿಸಲ್ಪಟ್ಟನು

ಹುಣಸೂರಿನಲ್ಲಿ ಸಾಮೂಹಿಕ ಯೋಜನಾ ಶುದ್ಧಿ ಕೇಂದ್ರದ ಸಮಿತಿ

ಸಾಮೂಹಿಕ ಯೋಜನೆಗಳ ಆಡಳಿತ ಸಮಿತಿಯ ಸಲಹೆಯಂತೆ ಸರ್ಕಾರದವರು ಹುಣಸೂರಿನಲ್ಲಿ ಮಾದರಿ ಶುದ್ಧಿ ಕೇಂದ್ರವನ್ನು ನಡೆಸಲು ಸಮಿತಿಯೊಂದನ್ನು ನೇಮಿಸಿರುತ್ತಾರೆ ಸಂಸ್ಥಾನದ ಸಾಮೂಹಿಕ ಯೋಜನಾ ಡೈರೆಕ್ಟರು ಅದರ ಅಧ್ಯಕ್ಷರು ಕೊಡಗಿನ ಅವರ ಪ್ರಾಪ್ತಿಯು

ಮಹಿಳಾ ಸದನದಲ್ಲಿ ರಾಮೋತ್ಸವ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ಶನಿವಾರ ಶ್ರೀ ರಾಮೋತ್ಸವ ಸಮಾರಂಭವು ಮಹಿಳಾ ಸದನದ ಕಾರ್ಯದರ್ಶಿನಿ ಶ್ರೀಮತಿ ಸುಶೀಲಾಬಾಯಿ ನಾಗೇಶರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀಮತಿಯರಾದ ಜಯಲಕ್ಷ್ಮಮ್ಮ ಮತ್ತು ಶಕ್ರಪಿನ್ನಮ್ಮನವರಿಂದ ಸಂಗೀತವಾದನಂತರ, ಅಧ್ಯಕ್ಷಿಣಿಯವರು ಭಾಷಣ ಮಾಡಿ, ರಾಮಾಯಣದ ಆದರ್ಶ ನಾರೀರತ್ನರ ಹಾದಿಯಲ್ಲೇ ಇಂದಿನ ಮಹಿಳೆಯರೂ ನಡೆಯಬೇಕೆಂದು ತಿಳಿಸಿದರು.

ಭತ್ತ ಮತ್ತು ಅಕ್ಕಿ ಮೇಲೆ ಮುಂಗಡ ಹಣ ಕೊಡಲು ನಿರ್ಬಂಧ

ನಾನಾ ಬ್ಯಾಂಕುಗಳಿಗೆ ರಿಜರ್ವ್ ಬ್ಯಾಂಕಿನ ಸೂಚನೆ

ಭಾರತದ ರಿಜರ್ವ್ ಬ್ಯಾಂಕಿನವರು ದೇಶದಲ್ಲಿರುವ ನಾನಾ ಷೆಡ್ಯೂಲ್ಡ್ ಬ್ಯಾಂಕುಗಳಿಗೆ ಆದೇಶವನ್ನಿತ್ತು, ಭತ್ತ ಮತ್ತು ಅಕ್ಕಿಯ ಮೇಲೆ ಮುಂಗಡ ಕೊಡುವುದನ್ನು ನಿರ್ಬಂಧಿಸಿರುತ್ತಾರೆ ವಿಪರೀತವಾಗಿ ಹಣವನ್ನು ಮುಂಗಡ ಕೊಡುವುದು ತಪ್ಪಬೇಕೆಂದೂ, ಅದರಿಂದ ಧಾನ್ಯ ಸಂಗ್ರಹ ಮಾಡಿ ಬೆಲೆ ಏರಿಕೆಗೆ ಅವಕಾಶ ಮಾಡಬಾರದೆಂದೂ ನಿರ್ದೇಶನವು ತಿಳಿಸಿದೆ ಭತ್ತ ಮತ್ತು ಅಕ್ಕಿಯ ಬೆಲೆಯು "ಅಸಾಧಾರಣವಾಗಿ ಹೆಚ್ಚಿರುವುದನ್ನು ತಡೆಯಲು ಈ ಸೂಚನೆಯನ್ನೀಯಲಾಗಿದೆ

ಕಳೆದ ವರ್ಷ ಮಾರ್ಚಿಯಲ್ಲಿ ಭತ್ತ ಮತ್ತು ಅಕ್ಕಿಗಾಗಿ ಕೊಟ್ಟ ೧೧.೬೪ ಕೋಟಿ ಮುಂಗಡದ ಹಣವು ಈ ವರ್ಷ ಅದೇ ತಿಂಗಳಲ್ಲಿ ೨೪.೬೨ ಕೋಟಿಗೆ ಏರುವುದೆಂದು ಗೊತ್ತಾಗಿದೆ

ಪುದುಚೇರಿ ಶಾಸನಸಭಾ ಕಾರ್ಯಕ್ರಮ ಅಕ್ರಮ

ಪುದುಚೇರಿ ಶಾಸನ ಸಭೆಯು ಕಳೆದ ೨೨ನೇ ತಾರೀಖು ನಡೆಸಿದ ಕಾರ್ಯಕ್ರಮವೆಲ್ಲಾ ಅಕ್ರಮವೆಂದು ತಿಳಿಸಿ ಅಲ್ಲಿನ ಚೀಫ್ ಕಮಿಷನರಾದ ಕೇವಲ್‌ಸಿಂಗ್‌ರವರು ಅದನ್ನು ರದ್ದುಗೊಳಿಸಿರುತ್ತಾರೆ ಸಭಾಧ್ಯಕ್ಷ ಪುರುಷೋತ್ತಮ ರೆಡ್ಡಿಯಾರರು ಸಭೆಯನ್ನು ಮುಂದೆ ಹಾಕಿದಾಗ, ಅದನ್ನು ಆಕ್ಷೇಪಿಸಿ ಅಧ್ಯಕ್ಷರಲ್ಲಿ ಅವಿಶ್ವಾಸ ಸೂಚಿಸಿ, ಬೇರೊಬ್ಬರನ್ನು ಅಧ್ಯಕ್ಷರನ್ನಾಗಿ ಆರಿಸಲಾಗಿತ್ತು ಈ ಎಲ್ಲ ವಿಚಾರವನ್ನೂ ಭಾರತ ಸರ್ಕಾರದ ಕಾನೂನು ಇಲಾಖೆಗೆ ವರದಿ ಮಾಡಲಾಗಿತ್ತು ಕಾರ್ಯಕ್ರಮವು ರದ್ದಾದುದರ ಪರಿಣಾಮವಾಗಿ ಹಿಂದಿನ ಅಧ್ಯಕ್ಷರೇ ಮುಂದೆ ಆಗಸ್ಟ್ ವರೆಗೆ ಅಧ್ಯಕ್ಷರಾಗಿರುವರು

ಪೆನಿಸಿಲಿನ್ನಿನಿಂದ ಜಪಾನಿನಲ್ಲಿ ಅನೇಕರ ಮರಣ

ಪೆನಿಸಿಲಿನ್ ಅಷ್ಟು ವಿಷೇಶವಿಯಲ್ಲವೆ ಉಪಯೋಗಿಸುವ ಬಗ್ಗೆ ಜಪಾನಿನ ವೈದ್ಯ ಅಧಿಕಾರಿಗಳು ಎಚ್ಚರಿಕೆಯಿತ್ತಿರುವರೆಂದು ಗೊತ್ತಾಗಿದೆ ದಂತ ಚಿಕಿತ್ಸೆಗೆ ಒಳಗಾದ ಒಬ್ಬ ಟೋಕಿಯೊ ಪ್ರೊಫೆಸರರಿಗೆ ಪೆನಿಸಿಲಿನ್ ಇಂಜಕ್ಷನ್ ಕೊಟ್ಟು ಅವರು ಮೃತಿಹೊಂದಿದರು ಇಂತಹ ಮರಣಗಳನೇಕವು ಅಲ್ಲಿ ೩ ವರ್ಷಗಳಿಂದ ಸಂಭವಿಸಿರುವುದಾಗಿ ಹೇಳಲಾಗಿದೆ

ಹಿಮಾಲಯದ ಮೂರನೇ ಭಾರಿ ಶಿಖರಾರೋಹಣ

ಹಿಮಾಲಯದ ೩ನೇ ಭಾರಿ ಶಿಖರವಾದ ಮನಾಸ್ಲುವನ್ನು ಜಪಾನ್ ಪರ್ವತಾರೋಹಿಗಳು ಹತ್ತಿರುತ್ತಾರೆ ಇದು ೨೬,೬೫೮ ಅಡಿ ಎತ್ತರವಿದೆ ಇದುವರೆಗೆ ೬ ಶಿಖರಗಳನ್ನು ಮಾನವ ಹತ್ತಿದ್ದಾನೆ ಲಿಷ್ಟ

ವಸಲಿಯಲ್ಲಿ ೨೫೦೦ನೇ ವರ್ಷದ ಬುದ್ಧ ಜಯಂತಿ ಕಾರ್ಯಕ್ರಮ

ಇದೇ ತಿಂಗಳು ... ಬುದ್ಧದೇವನ ೨೫೦೦ನೇ ಜಯಂತಿ ... ರಾಷ್ಟ್ರ ... ಆಚರಿಸಲ್ಪಡುತ್ತದೆ ... ದೆಹಲಿಯಲ್ಲಿ ಸ್ಮಾರಕವೊಂದರ ಅಸ್ತಿ ... [illegible] ... ಮತ್ತು ಪ್ರಧಾನಿಯವರು ಭಾಷಣ ಮಾಡು ... ಅವರಲ್ಲದೆ ... [illegible] ... ಸಿಂಹಳದ ... ಕವಿತಾವಸರರು ... ಸುವರು

ಸಮಾರಂಭದಲ್ಲಿ ರಾಷ್ಟ್ರಾಧ್ಯಕ್ಷರು ಅಧ್ಯಕ್ಷತೆ ವಹಿಸುವರು. ಬುದ್ಧದೇವರ ... ಮೇಲೆ ರಚಿಸಿರುವ ... ಕವಿಯ ಕೃತಿ ... [illegible]

ಭಾರತ ಸರ್ಕಾರದ ... ಬೌದ್ಧ ಧರ್ಮದ ... ಗ್ರಂಥವನ್ನು ... ಪ್ರಕಟಿಸಲಿರುವರು ... [illegible]

ಸಾಧುಗಳಿಂದ ಪಾನನಿರೋಧ ಪ್ರಚಾರ

ಅಖಿಲ ಭಾರತ ... ಸಮಾಜದ ಅಧಿವೇಶನವು ... ಸಂತ ... ಮಹಾ ... [illegible] ... ಪಾನನಿರೋಧವನ್ನು ಪ್ರಚಾರ ಮಾಡಬೇಕೆಂದು ... [illegible] ... ಮನುಷ್ಯನಲ್ಲಿ ಶಕ್ತಿ ... [illegible]

ಪ್ರತಿ ಜಿಲ್ಲೆಗೂ ಲೋಕ ಸಹಾಯಕ ಸೈನ್ಯ

[illegible] ... ಪ್ರತಿ ... ಗುರುತು ... [illegible] ... ವಿಧದ ... ಶಿಕ್ಷಣ ... ವೀಯಲು ... [illegible]

ಶ್ರೀರಂಗರಾಜಪುರದಲ್ಲಿ ರಥೋತ್ಸವ

... ಶ್ರೀರಂಗರಾಜಪುರದ ಶ್ರೀ ... ರಥೋತ್ಸವವು ಇದೇ ತಿಂಗಳು ... ನೆರವೇರುವುದು ... ವಿವಿಧ ಉತ್ಸವಗಳು ಜರುಗುವವು

ಉಪನ್ಯಾಸ

... ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯು ... ಸಂಸ್ಕೃತ ... ಮಹಾರಾಜಾ ಕಾಲೇಜಿನ ... ಎಂಬ ವಿಷಯ ... ಮಾಡುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ವ್ಯವಸಾಯ ಹಿಡುವಳಿಯ ಪರಮಾವಧಿ

ವ್ಯವಸಾಯ ಯೋಗ್ಯವಾದ ಹಿಡುವಳಿಗಳಲ್ಲಿ ಪರಮಾವಧಿಯನ್ನು ಪ್ರತಿಷ್ಠಾನದವರೂ ಗೊತ್ತುಪಡಿಸುವ ... ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೂಚಿಸಲಾಗಿದೆ. ಈ ಪರಮಾವಧಿಯು ... ಮತ್ತು ... ಹಕ್ಕುಗಳ ಮೂಲಕ ದೊರೆತ ... ಅವು ಸ್ವಂತ ಉಳುಮೆಗೆ ಒಳಪಟ್ಟಿದ್ದರೂ ಸಹ ಅನ್ವಯವಾಗುವುದೆಂದು ಹೇಳಲಾಗಿದೆ. ಪರಮಾವಧಿಯನ್ನು ... ತಕ್ಕಷ್ಟಿರುವ ... ಗೊತ್ತುಪಡಿಸುವಂತೆ ಯೋಜನೆಯಲ್ಲಿ ಸಲಹೆ ಮಾಡಲಾಗಿದೆ ... [illegible] ... ವ್ಯವಸಾಯದ ... ಪರಿಗಣಿಸಬಹುದೆಂದು ಹೇಳಲಾಗಿದೆ

ಫೈರ್‌ಮನ್‌ಗಳ ಮುಷ್ಕರದಿಂದ ರೈಲು ಸಂಚಾರದ ಬದಲಾವಣೆ

ಮಧ್ಯ ರೈಲ್ವೆಯ ... ಮಂದಿ ಇಂಜನ್ ಫೈರ್‌ಮನ್ನುಗಳು ಮುಷ್ಕರ ಹೂಡಿರುವುದರಿಂದ ... ರೈಲು ಸಂಚಾರವನ್ನು ರದ್ದುಗೊಳಿಸಿದೆ ... ಎಕ್ಸ್‌ಪ್ರೆಸ್ ಮತ್ತು ಮದ್ರಾಸ್ ದೆಹಲಿ ಜನತಾ ಎಕ್ಸ್‌ಪ್ರೆಸ್ ... [illegible] ... ಫೈರ್‌ಮನ್ ... ಕೆಲಸಕ್ಕೆ ನೇರವಾಗಿ ... ಮುಷ್ಕರಕಾರರು ... [illegible]

೧ ಎಕರೆಯಲ್ಲಿ ೭,೦೦೦ ಪೌಂಡು ಮುಸುಕಿನ ಜೋಳ

ಸ್ವದಿ ... ರಾಜೇಂದ್ರನಗರ ... ವ್ಯವಸಾಯ ಪ್ರಯೋಗ ಕ್ಷೇತ್ರ ... ಮುಸುಕಿನ ಜೋಳ ... ೦೦ ಪೌಂಡು ... ಉತ್ಪತ್ತಿ ... [illegible] ... ಪೌಂಡು ಮುಸುಕಿನ ... [illegible]

ಭಾರತ ವಾಚನ

ಶ್ರೀ ... ಜಯಂತ್ಯುತ್ಸವದ ಅಂಗವಾಗಿ ... ಮಹಾಭಾರತ ... ದಿನ ಸಂಜೆ ... ಗಂಟೆಗೆ ... ಸುಬ್ರಹ್ಮಣ್ಯ ... ವೆಂಕಟ ಸುಬ್ಬಯ್ಯ ... ನಡೆಯುತ್ತದೆ

ರಾಮ ಪಟ್ಟಾಭಿಷೇಕ

... ಶ್ರೀರಾಮ ... ಶ್ರೀ ... ಪಟ್ಟಾಭಿಷೇಕವನ್ನು ... ಜರುಗಿಸಲಾಗುವುದು

ಚಾಮರಾಜನಗರದಲ್ಲಿ ಬಸವ ಜಯಂತಿ

ಚಾಮರಾಜನಗರದ ಶ್ರೀ ... ಬಸವೇಶ್ವರ ಜಯಂತಿ ಉತ್ಸವವನ್ನು ನಡೆಸಲು ... ಭಜನೆ ಮತ್ತು ಉಪನ್ಯಾಸಗಳನ್ನು ಏರ್ಪಡಿಸಲಾಗಿರುವುದೆಂದೂ ... [illegible] ... ತಿಳಿಸಿರುತ್ತಾರೆ

ಹಾಸಿಗೆ-ದಿಂಬು

... ಬಾಬುಸಾಬ್ ಕಂಪನಿ, ... ಮೈಸೂರು

Edited, Printed and Published by A R Nagarajan at Sadhvi Press [illegible] Mysore

ಬೊಂಬಾಯಿಯಲ್ಲಿ ಜೋಳಕ್ಕೆ ಶೇಕಡ ೪೦ರಷ್ಟು ಹೆಚ್ಚು ಬೆಲೆ

ಬೊಂಬಾಯಿ ಸಂಸ್ಥಾನದಲ್ಲಿ ಜೋಳದ ಬೆಲೆಯು ಕಳೆದ ವರ್ಷದಲ್ಲಿದ್ದುದಕ್ಕಿಂತ ಶೇಕಡ ೩೦ರಿಂದ ೪೦ರಷ್ಟು ಹೆಚ್ಚಿರುವುದೆಂದು ರಾಜ್ಯ ಸಭೆಯಲ್ಲಿ ವ್ಯವಸಾಯ ಮಂತ್ರಿ ಡಾ|| ಪಿ ಆರ್ ದೇಶಮುಖ್‌ರವರು ತಿಳಿಸಿರುತ್ತಾರೆ. ತೊಂದರೆಗೆ ಒಳಗಾದ ಪ್ರದೇಶಗಳಲ್ಲಿ ಗೋಧಿ ಮತ್ತು ಅಕ್ಕಿಯನ್ನು ಮಣಕ್ಕೆ ೧೪ ಮತ್ತು ೧೬ ರೂ ನಂತೆ ಒದಗಿಸಲಾಗುವುದೆಂದೂ ಸಂಸ್ಥಾನ ಸರ್ಕಾರಗಳು ಇನ್ನೂ ಕಡಿಮೆ ಬೆಲೆಗೆ ಧಾನ್ಯವನ್ನು ಒದಗಿಸಲು ಇಚ್ಛೆಪಟ್ಟರೆ ಕೇಂದ್ರದವರು ಅದರಲ್ಲಿ ಶೇಕಡ ೫೦ ರಷ್ಟು ನಷ್ಟವನ್ನು ವಹಿಸಿಕೊಳ್ಳುವುದಾಗಿಯೂ ಅವರು ತಿಳಿಸಿರುವರು

ಗೋಲ್ಕೊಂಡ ಬಳೇಯಿಂದ ಹಿತ್ತಾಳೆ ಫಿರಂಗಿಯ ಕಳುವು

ಭಾರತ ಸೈನ್ಯದ ಒಬ್ಬ ಮಾಜಿ ಸುಬೇದಾರ್ ಮತ್ತು ಇತರ ೪ ಜನರನ್ನು ಹೈದರಾಬಾದು ಸಂಸ್ಥಾನದ ಗೋಲ್ಕೊಂಡದಲ್ಲಿರುವ ಕೋಟೆಯ ಇತಿಹಾಸ ಪ್ರಸಿದ್ಧವಾದ ಫಿರಂಗಿಯ ಕಳುವಿನ ಸಂಬಂಧದಲ್ಲಿ ದಸ್ತಗಿರಿ ಮಾಡಲಾಗಿದೆ. ಅವರುಗಳು ಕಳೆದ ಮಂಗಳವಾರ ರಾತ್ರಿ ಎತ್ತಿನ ಗಾಡಿಯನ್ನು ತಂದು ಹಿತ್ತಾಳೆ ಫಿರಂಗಿಯನ್ನು ಚೂರಾಗಿ ಒಡೆದು ಅದನ್ನು ಸಾಗಿಸಿ ಹತ್ತಿರದ ಹಿತ್ತಾಳೆ ವರ್ತಕರಿಗೆ ಮಾರಾಟ ಮಾಡುತ್ತಿದ್ದಾಗ ಪೊಲೀಸರು ಅವರನ್ನು ಹಿಡಿದರು

ನೀಲಗಿರಿಯಲ್ಲಿ ಕೃತಕ ಮಳೆ

ನೀಲಗಿರಿಯ ಬಳಿ ಮುಕುರ್ತಿ ಎಂಬಲ್ಲಿ ಕೃತಕ ಮಳೆಗರೆಸುವ ಪ್ರಯತ್ನವನ್ನು ೪ ಜನ ವಿಜ್ಞಾನಿಗಳು ಮತ್ತು ಇಂಜನಿಯರುಗಳ ತಂಡದವರು ಯಶಸ್ವಿಯಾಗಿ ನಡೆಸಿರುತ್ತಾರೆ. ಕ್ಯಾಲ್ಸಿಯಂ ಕ್ಲೋರೈಡ್ ಮತ್ತು ಸೋಡಿಯಂ ಕ್ಲೋರೈಡ್‌ಗಳನ್ನು ಬೆರಸಿ ಅವನ್ನು ಹಬೆಯ ರೂಪದಲ್ಲಿ ಒಂದು ಕೊಳವೆಯ ಮೂಲಕ ಮೋಡ ಮಂಡಲಕ್ಕೆ ಹಾರಿಸಿ ಮಳೆ ಬರಿಸಲಾಗಿದೆ

ಚಿಕ್ಕಮಗಳೂರು ಮತ್ತು ಶಿವಮೊಗ್ಗೆಯಲ್ಲಿ ಡಾ|| ಮೋದಿಯವರ ಕಾರ್ಯಕ್ರಮ

ಡಾ. ಎಂ ಸಿ ಮೋದಿಯವರು ಚಿಕ್ಕಮಗಳೂರು ಮತ್ತು ಶಿವಮೊಗ್ಗಾ ಜಿಲ್ಲೆಗಳಲ್ಲಿ ... ಬರುವ ತಿಂಗಳು ... ರವರೆಗೆ ಪ್ರವಾಸ ಕೈಗೊಂಡು ... ನೇತ್ರ ಚಿಕಿತ್ಸೆ ನಡೆಸುವರು. ಆ ಜಿಲ್ಲೆಗಳಲ್ಲಿ ... ಶಿಬಿರವನ್ನು ಏರ್ಪಡಿಸಲಿರುವರು

ಶಿವಕಥೆ

ಕಲ್ಲಿ ಮೊಹಲ್ಲಾ ಸೇವಾ ಮಂಡಲಿಯ ಆಶ್ರಯದಲ್ಲಿ ಬಸವ ಜಯಂತಿ ಅಂಗವಾಗಿ ಈ ರಾತ್ರಿ ... ಗಂಟೆಗೆ ಶ್ರೀನಿವಾಸ ಅಗ್ರಹಾರದಲ್ಲಿ ಕೀರ್ತನ ... ಪಿ ರಾಮಸ್ವಾಮಿ ನಾಯ್ಡುರವರಿಂದ ಗಜಗೌರಿ ಎಂಬ ಶಿವಕಥೆಯು ನಡೆಯುತ್ತದೆ

ಮೈಸೂರು ಪೇಟೆ ಧಾರಣೆ

	ರೂ ಮುಂದ			ರೂ ವರೆಗೆ		
ಕಡಲೇಕಾಯಿ	೯೮	೪	೦	೫೦	೧೦	೦
ಹೊಂಗೆಬೀಜ	೩೩	೦	೦			
ಎಳ್ಳು	೪೩	೧೪	೦			
ಕುಸುಬೆ	೨೫	೦	೦	೨೬	೪	೦
ಹುಣಸೇಬೀಜ	೮	೪	೦	೫	೧೦	೦
ಹೆಸರು	೪೩	೧೨	೦	೪೩	೨	೦
ಹುಣಸೇಹಣ್ಣು	೪	೧೨	೦	೫	೧	೦
ಮೆಣಸಿನ ಕಾಯಿ	೯	೧೦	೦	೨೦	೪	೦
ತೆಂಗಿನಕಾಯಿ ೧೦೦೦	೧೧೦	೦	೦	೨೦೭	೮	೦

VANI TUTORIAL COLLEGE
V V Mohalla Mysore
Separate classes will commence from 30th May 56 both for S S L C and Intermediate. Join immediately. For further particulars —
VANI TUTORIAL COLLEGE
6th Cross V V Mohalla

ಬಿ. ವಿ. ಪಂಡಿತರಿಂದ ನಾನಾ ಸಂಸ್ಥೆಗಳಿಗೆ ಉದಾರ ದಾನ

ಸ್ವಂ ಸು] ನಂಜನಗೂಡು ...

ಧರ್ಮಗ್ರಸ್ತ ಬಿ ವಿ ಪಂಡಿತರ ೭೦ನೇ ವರ್ಧಂತಿ ಪ್ರಯುಕ್ತ ಕೆನ್ನೆ ... ಶ್ರೀ ... ಸ್ವರಾಜ್ಯ ... ಸಭೆಯ ಆಶ್ರಯದಲ್ಲಿ ಸೇರಿದ್ದ ... ಸಭೆಯಲ್ಲಿ, ಶ್ರೀ ಬಿ ವಿ ಪಂಡಿತರು ... ಪಾಠಶಾಲೆಗಾಗಿ ೧,೦೦೦ ರೂ, ಬ್ರಾಹ್ಮಣ ಧರ್ಮ ಸಹಾಯ ಸಭೆಗೆ ೩೦೦ ರೂ, ... ಸಭೆಗೆ ೧೫೦ ರೂ ಮತ್ತು ... ಕ್ಲಬ್ಬಿಗೆ ... ರೂಗಳನ್ನು ದಾನ ಮಾಡಿದರು

ಮದ್ರಾಸಿನಲ್ಲಿ ೧೬ ಕದರಿನ ಚರಖಾ ಪ್ರಯೋಗ ಪರೀಕ್ಷೆ

ಕೊಯಮುತ್ತೂರಿನ ಟೆಕ್ಸ್‌ಟೂಲ್ ಕಂಪೆನಿಯೊಂದು ತಯಾರಿಸಿರುವ ೧೬ ಕದರಿನ ಚರಖಾ ಪ್ರಯೋಗ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಯೋಜನೆ ಪ್ರಕಾರ ... ಲಕ್ಷ ರೂ ... ವಾರದಲ್ಲಿ ೧೦೦ ಯೂನಿಟ್ಟುಗಳನ್ನು ... ಗ್ಗಗಳಿರುವ ಪ್ರದೇಶಗಳಲ್ಲಿ ... ದೆಂದೂ ಗೊತ್ತಾಗಿದೆ ... ವಿದ್ಯುಚ್ಛಕ್ತಿ ಸಹಾಯದಿಂದ ನಡೆಸಲ್ಪಡುವುದು ... ಕೆಲಸಗಾರರು ... ಕಾಲ ಒಂದು ಚರಖದಲ್ಲಿ ಕೆಲಸ ಮಾಡಿ, ದಿನಕ್ಕೆ ... ಸಂಪಾದನೆ ಮಾಡಬಹುದೆಂದು ಹೇಳಲಾಗಿದೆ ... ಉತ್ಪತ್ತಿಯಾಗುವ ನೂಲು ... ಇಂತಹ ಚರಖ ಒಂದಕ್ಕೆ ೧,೦೦೦ ರೂ ಆಗುವುದೆಂದು ಹೇಳಲಾಗಿದೆ ... ಚರಖಗಳನ್ನು ... ಪ್ರದೇಶಗಳಲ್ಲಿ ನಡೆಸಲಾಗುವುದು

ರಾಜಪರಿವಾರ ನಾಯಕರ ಸಂಘದಲ್ಲಿ ಸ್ವಾರ್ಥಿಗಳು

ಲಕ್ಷ್ಮರ್ ತೊಷಕಲ್ಲಾ ... ಶ್ರೀ ರಾಜಪರಿವಾರ ನಾಯಕರ ಸಂಘವು ... ದಾನದಿಂದಲೂ ಅದರ ಲೆಕ್ಕಪತ್ರಗಳು ... [illegible] ... ಬಂದ ಶ್ರೀ ... ನವರಿಂದ ಸಂಘಕ್ಕೆ ... ಲೆಕ್ಕದ ಪುಸ್ತಕ ... ಪೊಲೀಸರಿಗೆ ದೂರು ಕೊಡಲಾಗಿದೆ ... ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸಿ ನ್ಯಾಯ ದೊರಕಿಸುವಂತೆ ಪ್ರಾರ್ಥಿಸಿದ್ದಾರೆ

ಮಲಯದಲ್ಲಿ ... ಶಾಸನದ ... ಒಳಗೆ ... ಮರಣದಂಡನೆ ... ಪ್ರಕಾರ ಸುಬ್ರಹ್ಮಣ್ಯಂ ಎಂಬಾತನಿಗೆ ವಿಧಿಸಲಾಗಿದ್ದ ಗಲ್ಲು ಶಿಕ್ಷೆಯನ್ನು ಪ್ರಿವಿ ಕೌನ್ಸಿಲ್ಲು ರದ್ದುಗೊಳಿಸಿದೆ

Pulv
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
71|1 A S Street
BANGALORE 2

ಶ್ರೀ ಜಗದಂಬಾ ಶಿಶುವಿಹಾರ
ದಿವಾನರ ರಸ್ತೆ, ಮೈಸೂರು
ಬೇಸಿಗೆ ರಜಾಕ್ಕಾಗಿ ಕಳೆದ ಒಂದು ತಿಂಗಳಿಂದ ಮುಚ್ಚಲಾಗಿದ್ದ ಮೇಲ್ಕಂಡ ಶಿಶುವಿಹಾರವನ್ನು ಮತ್ತೆ ತೆರೆಯಲಾಗಿದೆ ಮತ್ತು ಶಿಶುವಿಹಾರದ ಅಧ್ಯಾಪಕಿಯರ ಶಿಕ್ಷಣ ತರಗತಿಗಳೂ ಆರಂಭವಾಗಲಿವೆ. ಸೇರಲಪೇಕ್ಷಿಸುವವರು ತ್ವರೆಗೊಳ್ಳಬೇಕಾಗಿ ಕೋರಲಾಗಿದೆ

ರಿಜಿಸ್ಟರ್ ನಂ. 792

ಚಂದಾ ದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಸಂಪುಟ : ೦೪] SADHVI : SATURDAY 19-5-1956 ಮೈಸೂರು : ಶನಿವಾರ ೧೯-೫-೧೯೫೬ [ಸಂಚಿಕೆ : ೩೬೬

ಅಮೆರಿಕದಲ್ಲೂ ಈ ವರ್ಷ ಶೇ|| ೫ ರಷ್ಟು ಸೈನ್ಯದ ಖೋತಾ

೨೧ನೇ ತಾ|| ವರೆಗೆ ಮಾತ್ರ ರೇಷ್ಮೆ ಕಾರ್ಖಾನೆಗಳು ಬಂದ್

ಎಂ. ಪಿ. ಸಿ. ಸಿ. ಅಧ್ಯಕ್ಷರ ಸಲಹೆ ಪಡೆಯಲು ಮಾಲೀಕರ ನಿರ್ಧಾರ

ಬೆಂಗಳೂರು ೧

ಇಲ್ಲಿನ ರೇಷ್ಮೆ ಕಾರ್ಖಾನೆಗಳ ಮಾಲೀಕರ ... ಸರ್ವ ಸದಸ್ಯರ ಸಭೆಯು ನೆನ್ನೆ ಶ್ರೀ ... ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅವರು ಭಾಷಣ ಮಾಡಿ ಹೆಚ್ಚು ತಿಂಗಳ ... ಕಾರ್ಮಿಕರ ಹೆಚ್ಚಿನ ಸಂಬಳ ... ಕಾಲಿ ಕರಿಗೆ ... [illegible] ... ಸಭೆಗೆ ಆಗಮಿಸಿದ ... ಮಂತ್ರಿ ಶ್ರೀ ಟಿ. ಮರಿಯಪ್ಪನವರು ... ನೂತನ ಪರಿಸ್ಥಿತಿಗೆ ಅನುಗುಣವಾಗಿ ... ಕಾರ್ಮಿಕರನ್ನು ಗೌರವದಿಂದ ... ಹೆಚ್ಚು ತಿಂಗಳನ್ನು ... ಕಾರ್ಯವನ್ನು ನಡೆಸುವಂತೆಯೂ ... [illegible]

ಅಧ್ಯಕ್ಷರು ಮತ್ತು ... ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೊಡನೆ ಕಾರ್ಖಾನೆ ಪರಿಸ್ಥಿತಿಯನ್ನು ಕುರಿತು ಚರ್ಚಿಸುವುದು ... ಇದೇ ೨೧ನೇ ತಾರೀಕಿನವರೆಗೆ ಮಾತ್ರ ಕಾರ್ಖಾನೆಗಳನ್ನು ಮುಚ್ಚಬೇಕೆಂದೂ ... ಮಾಡಲಾಗಿ ... ಇತರ ಸದಸ್ಯರು ... [illegible]

ಗೂಡ್ಸ್ ಟ್ರೈನಿನಲ್ಲಿ ಬೆಂಕಿ

ಬೆಂಗಳೂರಿನಿಂದ ಮೊನ್ನೆ ಸಂಜೆ ... ಹೊರಟಿದ್ದ ಗೂಡ್ಸ್ ಟ್ರೈನಿನ ಒಂದು ಹತ್ತಿ ತುಂಬಿದ ... ಬೆಂಕಿ ಬಿದ್ದುದು ... ಬೆಂಗಳೂರು ಫೈರ್ ಬ್ರಿಗೇಡಿನವರು ... [illegible] ... ಸುಮಾರು ೫೦೦ ರೂ. ಬೆಲೆ [illegible]

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

... ಬೆಂಗಳೂರು ಬಳಿ ಸುಬ್ರಹ್ಮಣ್ಯಪುರದ ... ಶಿಕ್ಷಣ ಶಾಲೆ ... ಸುಮಾರು ... ಮಂದಿ ... ಪಾಧ್ಯಾಯ ವಿದ್ಯಾರ್ಥಿಗಳು ನೆನ್ನೆ ಬೆಳಗ್ಗೆ ... ಮುಷ್ಕರವನ್ನು ಆರಂಭಿಸಿದರು ... ಸಂಸಾರ ಭತ್ಯ ... ಸೌಲಭ್ಯ ... [illegible] ... ಸನಾಸದ ಕಾರಣ

೪೫೦ ರೂ. ಪದಾರ್ಥಗಳ ಕಳುವು

ಮೈಸೂರು ೧

ಒಂಟಿಕೊಪ್ಪಲಿನ ... ಅಸ್ಪತ್ರೆಯ ... ಶ್ರೀ ... [illegible]

ಬುದ್ಧಿಮಾಂದ್ಯ ಮಕ್ಕಳ ಕೇಂದ್ರದಲ್ಲಿ

[illegible]

ರಸ್ತೆಯಲ್ಲಿ ಅಸಭ್ಯ ವರ್ತನೆ

[illegible]

ಡಬ್ಬಲ್ ಡ್ರೈವಿಂಗ್ ಗಾಗಿ ಜುಲ್ಮಾನೆ

[illegible]

ಬಂಡಿಗೆ ಮತ್ತು ಟೆನಲ್ ಕದ್ದುದಕ್ಕಾಗಿ ಶಿಕ್ಷೆ

ದಿವಾನರ ರಸ್ತೆಯಲ್ಲಿರುವ ... ಒಂದು ಬಂಡಿ ಮತ್ತು ಟೆನಲನ್ನು ಕದ್ದುದಕ್ಕಾಗಿ ನಗರದ ಪ್ರಥಮ ನ್ಯಾಯಾಧೀಶರು ... [illegible]

ಗಮಕ ಪಾಠಶಾಲಾ ಪ್ರಾರಂಭೋತ್ಸವ

[illegible] ... ಶ್ರೀ ಬಿ. ಎಸ್. ಎಸ್. ... ಸ್ವಾಗಿಸಿರುತ್ತಾರೆ

ಕಾರ್ಖಾನೆಗಳ ಆಡಳಿತದ ಬಗ್ಗೆ ತ್ರಿಪಕ್ಷಗಳ ಸಮಿತಿ

ಬೆಂಗಳೂರು ೧

[illegible]

ಬಿರಾರಿನ ರಾಜಕುಮಾರರಿಗೆ ನಿಜಾಮರ ಆಸ್ತಿ ಹಕ್ಕು ತಪ್ಪಿತು

ಹೈದರಾಬಾದಿನ ... ನಿಜಾಮರು ... ಬಿರಾರಿನ ರಾಜಕುಮಾರರ ... [illegible]

ಮಹಿಳಾ ವೃತ್ತಿ ಶಿಕ್ಷಣಾಲಯಕ್ಕೆ ೧ ಲಕ್ಷ ರೂ

ರಾಮನಾರಾಯಣ ಚೆಲ್ಲಾರಾಂರವರಿಂದ ಉದಾರ ದಾನ

ಬೆಂಗಳೂರು ೧೮

ಮಹಿಳೆಯರಿಗಾಗಿ ವೃತ್ತಿ ಶಿಕ್ಷಣಾಲಯವೊಂದನ್ನು ತಮ್ಮ ಪತ್ನಿ ಶ್ರೀಮತಿ ... ಬಾಯಿಯವರ ಹೆಸರಿನಲ್ಲಿ ಏರ್ಪಡಿಸಲು ಇಲ್ಲಿನ ಸುಪ್ರಸಿದ್ಧ ಬಟ್ಟೆ ವ್ಯಾಪಾರಿಗಳಾದ ಶ್ರೀ ರಾಮನಾರಾಯಣ ಚೆಲ್ಲಾರಾಂರವರು ಸರ್ಕಾರಕ್ಕೆ ೧ ಲಕ್ಷ ರೂ ಹಣ ಕೊಡುವುದಾಗಿ ತಿಳಿಸಿದ್ದಾರೆ

ಅಮೆರಿಕದಲ್ಲಿ ಶೇಕಡ ಐದರಷ್ಟು ಸೈನ್ಯದ ಖೋತಾ

ಬರುವ ಜುಲೈ ೧ರಿಂದ ಆರಂಭವಾಗುವ ವರ್ಷದಲ್ಲಿ ಅಮೆರಿಕವು ತನ್ನ ಸೈನ್ಯ ಬಲದಲ್ಲಿ ಶೇಕಡ ೫ರಷ್ಟು ಖೋತಾ ಮಾಡಿಕೊಳ್ಳಲಿರುವುದಾಗಿ ವರದಿಯಾಗಿದೆ. ರಷ್ಯವು ಈ ಮೊದಲೇ ತನ್ನ ... ಲಕ್ಷ ಸೈನಿಕರನ್ನು ಖೋತಾ ಮಾಡುವುದಾಗಿ ಸೂಚಿಸಿತ್ತು. ಅಮೆರಿಕದ ಸೈನ್ಯ ಬಲದಲ್ಲಿ ... ಜನರು ಇರುವರು ... ಲಕ್ಷ ಸೈನಿಕರಿರುವರು

ಈಜಿಪ್ಟ್-ರಾಷ್ಟ್ರೀಯ ಚೀಣಾ ರಾಜತಾಂತ್ರಿಕ ಸಂಬಂಧ ತ್ಯಾಗ

ಕಮ್ಯೂನಿಸ್ಟ್ ಚೀಣಾಕ್ಕೆ ಈಜಿಪ್ಟು ಮನ್ನಣೆ ... ರಾಷ್ಟ್ರೀಯ ಚೀಣಾದ ... ರಾಜತಾಂತ್ರಿಕ ಸಂಬಂಧವನ್ನು ... [illegible]

ಪರಿಕ್ಷೆ ಮತ್ತು ಉಪನ್ಯಾಸ

[illegible]

ಸಂಗೀತ ಕಛೇರಿ

[illegible] ... ಶ್ರೀ ತಿಮ್ಮಯ್ಯಾಚಾರ್ಯರ ... ಶ್ರೀ ಸೀತಾರಾಮು ... [illegible]

ನಗರ ಭಿವೃದ್ಧಿ ಸಮಿತಿ ಅಧ್ಯಕ್ಷರಿಗೆ ಸನ್ಮಾನ

ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಲಿಂಗಣ್ಣನವರಿಗೆ ಸನ್ಮಾನ ಮಾಡಲು ... [illegible]

ದ್ವಿತೀಯ ಯೋಜನೆಯಲ್ಲಿ ಅಭಿವೃದ್ಧಿ ಕಾರ್ಯಗಳು

ದ್ವಿತೀಯ ಯೋಜನೆಯಲ್ಲಿ ಪ್ರತಿಯೊಬ್ಬ ಪ್ರಜೆಗೂ ದೊರೆಯುವ ಆಹಾರ ಪ್ರಮಾಣವನ್ನು ಹೆಚ್ಚಿಸಿ ೧೮-೨ ಔನ್ಸಿನಂತೆ ಒದಗಿಸಲಾಗುವುದೆಂದು ಗೊತ್ತಾಗಿದೆ

೩೦-೪೦ ಲಕ್ಷ ಟನ್ ಅಕ್ಕಿ, ೨೦ ೩೦ ಲಕ್ಷ ಟನ್ ಗೋಧಿ, ೨೦—೩೦ ಲಕ್ಷ ಟನ್ ಇತರ ಧಾನ್ಯ ಮತ್ತು ೧೫ ಅಥವಾ ೨೦ ಲಕ್ಷ ಟನ್ ದ್ವಿದಳ ಧಾನ್ಯದ ಬೆಳೆ ಹೆಚ್ಚಿಸಲಾಗುವುದು. ಈ ಅವಧಿಯಲ್ಲಿ ೩ ಕೋಟಿ ೧೦ ಲಕ್ಷ ಎಕರೆ ಜಮೀನನ್ನು ನೀರಾವರಿಗೆ ಒಳಪಡಿಸಲಾಗುವುದು ಆ ಪೈಕಿ ೧೨೦ ಲಕ್ಷ ಎಕರೆಯನ್ನು ಭಾರಿ ಮತ್ತು ೯೦ ಲಕ್ಷ ಎಕರೆಯನ್ನು ಸಣ್ಣ ನೀರಾವರಿ ಕಾಲುಗಾರಿಯೊಳಗೆ ಸೇರಿಸಲಾಗುವುದು ಈಗ ಇರುವ ೫ ಲಕ್ಷ ಎಕರೆ ಪ್ರದೇಶದ ಹಣ್ಣು ತೋಟಗಳನ್ನು ಪುನರುಜ್ಜೀವನಗೊಳಿಸಿ ಹೊಸದಾಗಿ ೨ ಲಕ್ಷ ಎಕರೆಯಲ್ಲಿ ತೋಟಗಳನ್ನು ಬೆಳೆಸಲಾಗುವುದು

೧೯೫೫—೫೬ ರಲ್ಲಿ ೬೧ ಕೋಟಿ ಟನ್ ಆಹಾರದ ಉತ್ಪತ್ತಿಯು ೬೦-೬೧ ರಲ್ಲಿ ೭॥ ಕೋಟಿಯಷ್ಟು ಆಗುವುದೆಂದು ನಿರೀಕ್ಷಿಸಲಾಗಿದೆ ಹಾಗೆಯೇ ಎಣ್ಣೆ ೫೦.೫ ಲಕ್ಷ ಟನ್ನಿನಿಂದ ೭೦ ಲಕ್ಷ ಟನ್, ಸಕ್ಕರೆ ೫೮ ಲಕ್ಷ ಟನ್ನಿನಿಂದ ೧೫೫ ಲಕ್ಷ ಟನ್ ಆಗುವ ನಿರೀಕ್ಷೆಯಿದೆ

ಪ್ರಥಮ ಯೋಜನೆಯಲ್ಲಿ ೧.೩ ಲಕ್ಷ ಗೃಹಗಳ ನಿರ್ಮಾಣದ ಕೆಲಸವು ದ್ವಿತೀಯ ಯೋಜನೆಯಲ್ಲಿ ೧೯ ಲಕ್ಷಗಳಿಗೆ ಹೆಚ್ಚಲಿದೆ ಅದಕ್ಕಾಗಿ ೧೨೦ ಕೋಟಿ ರೂ ಅನ್ನು ತೆಗೆದಿಡಲಾಗಿದೆ

ಪಟ್ಟಣಗಳಲ್ಲಿ ಕೊಳಕು ಪ್ರದೇಶಗಳನ್ನು ತೆಗೆಯುವ ಕಡೆ ಸಂಸ್ಥಾನ ಸರ್ಕಾರಗಳು ಹೆಚ್ಚಿನ ಗಮನವೀಯುವಂತೆ ಸೂಚಿಸಲಾಗಿದೆ ಅಲ್ಲಿನ ನಿವಾಸಿಗಳ ಉದ್ಯೋಗಗಳಿಗೆ ತೊಂದರೆಯಾಗದಂತೆ ಅವರುಗಳಿಗೆ ಹತ್ತಿರದಲ್ಲೇ ಬೇರೆ ನಿವೇಶನಗಳನ್ನು ಕೊಡುವಂತೆ ತಿಳಿಸಲಾಗಿದೆ.

೨೦ ಸಾವಿರ ಅಂಚೆ ಕಛೇರಿ ೧೪೦೦ ತಂತಿ ಕಛೇರಿ ಮತ್ತು ೧೨೦೦ ಸಾರ್ವಜನಿಕ ಟೆಲಿಫೋನುಗಳನ್ನು ತೆರೆಯಲಾಗುವುದು ೧೦೦ ಸಾವಿರ ಟೆಲಿಫೋನುಗಳನ್ನು ಹೊಸದಾಗಿ ಕೊಡಲಾಗುವುದು ಅದಕ್ಕಾಗಿ ೭೬ ಕೋಟಿ ರೂ ಗಳನ್ನು ಒದಗಿಸಲಾಗುವುದು ಈ ಅವಧಿಯಲ್ಲಿ ೬೦೦೦ ಪಟ್ಟಣಗಳನ್ನು ವಿಸರ್ಜಿಸಿ ೧೦೦೦ ಮತ್ತು ಹೆಚ್ಚು ಜನಸಂಖ್ಯೆಯುಳ್ಳ ಹಳ್ಳಿಗಳಿಗೆ ಸಾರ್ವಜನಿಕ ರೇಡಿಯೋ ರಿಸೀವರುಗಳನ್ನು ಒದಗಿಸಲಾಗುವುದು

ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಡಾ॥ ಎಂ. ಸಿ. ಮೋದಿಯವರ ಪ್ರವಾಸ

ನೇತ್ರದಾನಿ ಡಾ॥ ಮೋದಿಯವರು ಬರುವ ಜೂನ್ ೫ರಿಂದ ೧೬ನೇ ತಾರೀಕಿನ ವರೆಗೆ ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಿಗೂ ಭೇಟಿಯಿತ್ತು ನೇತ್ರರೋಗಿಗಳ ಪರೀಕ್ಷೆ ನಡೆಸುವರು ಆ ಜಿಲ್ಲೆಗಳಲ್ಲಿ ಒಂದು ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು ನಡೆಸುವರು.

ಇಟಲಿಯ ಗ್ರಾಮದಲ್ಲಿ ಮಹಿಳೆಯರ ಪ್ರಭುತ್ವದ ಸಂಭವ

ಇಟಲಿಯ ರಾಜಧಾನಿ ರೋಮ್ ನಗರದ ಬಳಿ ರಾಂಕೋ ಕಾನವೆಸೆ ಎಂಬ ಸಣ್ಣ ಊರಿನಲ್ಲಿ ಮಹಿಳೆಯರೇ ಆಡಳಿತ ನಡೆಸುವ ಸನ್ನಿವೇಶವು ಪ್ರಾಪ್ತವಾಗಿದೆ. ಊರಿನ ಪೌರಸಭಾ ಆಯುಕ್ತಿಯನ್ನು ಸಂಘಟಿಸಲು ಗಂಡಸರಿಗೆ ಸಾಧ್ಯವಾಗಿಲ್ಲ ಊರಿನಲ್ಲಿರುವ ೩,೦೦೦ ಜನರ ಪೈಕಿ ಮಹಿಳೆಯರ ಸಂಖ್ಯೆಯೇ ಹೆಚ್ಚಾಗಿದ್ದು ಅವರು ಚುನಾವಣೆಗಳಲ್ಲಿ ಸ್ಪರ್ಧಿಸಲು ಮುಂದೆ ಬಂದಿರುತ್ತಾರೆ ಗೃಹಕೃತ್ಯವನ್ನು ನಡೆಸುತ್ತಿರುವಷ್ಟೇ ಯಶಸ್ವಿಯಾಗಿ ಊರಿನ ಆಡಳಿತವನ್ನೂ ತಾವು ನಡೆಸುವುದಾಗಿ ಮಹಿಳೆಯರು ಹೇಳುತ್ತಿದ್ದಾರೆ

ಸಂಗೀತ ಕಛೇರಿ

ರಾಜಧಾನಿಯ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಕುಮಾರಿ ಗಾಯತ್ರಿಯವರ ಸಂಗೀತವು ಪಿ॥ ಬಿ ಎಸ್ ಶಿವರಾಮಯ್ಯನವರ ಪಿಟೀಲು ಮತ್ತು ಪಿ॥ ವಿ ಎಸ್. ರಾಜಗೋಪಾಲ್‌ರವರ ಮೃದಂಗದೊಡನೆ ನಡೆಯುವುದು ಪ್ರಾರಂಭದಲ್ಲಿ ಕುಮಾರಿ ಗಾಯತ್ರಿಯವರು ಗೋಟು ವಾದ್ಯವನ್ನು ನುಡಿಸುವರು. ಕುಮಾರಿ ಗಾಯತ್ರಿಯವರು ನಂಜನಗೂಡಿನಲ್ಲಿರುವ ಓವರ್‌ಸಿಯರ್ ಶ್ರೀ ಆರ್ ಕೃಷ್ಣಮೂರ್ತಿಯವರ ಮಗಳು ಇವರು ಮದರಾಸಿನ ಸಂಗೀತ ಕಾಲೇಜಿನಲ್ಲಿ ಅಭ್ಯಾಸ ಮಾಡಿದ್ದಾರೆ ಅವರಿಗೆ ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನವೂ ದೊರೆತಿದೆ

ವಚನ ಗಾನ ಮತ್ತು ಕಾವ್ಯ ವಾಚನ

ಬಿಳ್ಳಿ ಮೊಹಲ್ಲೆಯ ಸೇವಾ ಮಂಡಲಿ ಆಶ್ರಯದಲ್ಲಿ ಬಸವ ಜಯಂತಿ ಅಂಗವಾಗಿ ಈ ರಾತ್ರಿ ೭॥ ಘಂಟೆಗೆ ಶ್ರೀನಿವಾಸ ಅಗ್ರಹಾರದಲ್ಲಿ ಶ್ರೀಮತಿ ಶಾಂತಾಬಾಯಮ್ಮಣ್ಣಿಯವರಿಂದ ವಚನ ಗಾನವೂ, ಶ್ರೀ ಮಹೇಶ್ವರಪ್ಪನವರಿಂದ ರಾಜಶೇಖರ ವಿಲಾಸ ಕಾವ್ಯ ವಾಚನ ಮತ್ತು ಶ್ರೀ ಹೆಚ್ ಗಂಗಾಧರನ್‌ರವರಿಂದ ವ್ಯಾಖ್ಯಾನವೂ ನಡೆಯುವುವು ನೆನ್ನೆ ಕೀರ್ತನ ಚಿಂತಾಮಣಿ ಸಿ. ರಾಮಸ್ವಾಮಿನಾಯ್ಡುರವರಿಂದ ಗಜಗೌರಿ ವ್ರತ ಕೀರ್ತನೆಯು ಅಮೋಘವಾಗಿ ನಡೆಯಿತು ಶ್ರೀ ಹೆಚ್. ಗಂಗಾಧರ್‌ರವರು ಸ್ವಾಗತ ಭಾಷಣ ಮಾಡಿ, ಸಂಘದ ಕಾರ್ಯಕಲಾಪಗಳನ್ನು ವಿವರಿಸಿದರು ಮತ್ತು ಕೀರ್ತನಕಾರರ ಪ್ರೌಢಿಮೆಯನ್ನು ಪ್ರಶಂಸಿಸಿ, ಅವರಿಗೆ ಉತ್ತರೋತ್ತರಾಭಿವೃದ್ಧಿಯನ್ನು ಯಶಸ್ಸನ್ನು ಕೋರಿದರು ಅಧ್ಯಕ್ಷತೆ ವಹಿಸಿದ್ದ ಶ್ರೀ ನಗರಂ ರಂಗಣ್ಣನವರು ಶ್ರೀ ಬಸವೇಶ್ವರರ ಉದಾತ್ತವಾದ ಆದರ್ಶಗಳು ಎಲ್ಲರಿಗೂ ಸ್ಫೂರ್ತಿಯುಂಟುಮಾಡಲೆಂದು ಹಾರೈಸಿದರು

ಸಮಾಜವಾದಿ" ಪತ್ರಿಕೆ

ದಾವಣಗೆರೆಯ ಶ್ರೀ ಎ. ಹೆಚ್. ಸಿದ್ದಲಿಂಗಸ್ವಾಮಿಯವರು ನಾಳಿದ್ದಿನಿಂದ ಸಮಾಜವಾದಿ" ಎಂಬ ದಿನ ಪತ್ರಿಕೆಯನ್ನು ಆರಂಭಿಸಲಿದ್ದಾರೆ ನಾಳಿದ್ದು ದಾವಣಗೆರೆಯಲ್ಲಿ ನಡೆಯುವ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು 'ಕಿಡಿ' ಪತ್ರಿಕೆಯ ಸಂಪಾದಕರಾದ ಶ್ರೀ ಶೇಷಣ್ಣನವರು ವಹಿಸುವರು

ನೂರು ಹುದ್ದೆಗಳಿಗೆ ೬೫೦ ಅರ್ಜಿಗಳು

ಪ್ರೈವೇಟ್ ಸಂಸ್ಥಾನದ ಸ್ಥಳೀಯ ಸಂಸ್ಥೆಗಳ ಇಲಾಖೆಯ ೭ ಸಹಾಯಕ ಕಾರ್ಯದರ್ಶಿಗಳ ಹುದ್ದೆಗೆ ನೇಮಕ ಮಾಡಿಕೊಳ್ಳುವ ಬಗ್ಗೆ ಅಲ್ಲಿನ ಸರ್ಕಾರದವರು ಪ್ರಕಟಿಸಿದ ಜಾಹಿರಾತಿಗೆ ೬೫೦ ಜನರು ಅರ್ಜಿಗಳನ್ನು ಸಲ್ಲಿಸಿದರೆಂದೂ, ಭೇಟಿ ಮೂಲಕ ಅಭ್ಯರ್ಥಿಗಳನ್ನು ಆರಿಸುವುದು ಸಾಧ್ಯವಿಲ್ಲವೆಂದು ಸರ್ಕಾರದವರು ಮನಗಂಡು, ಪರೀಕ್ಷೆ ನಡೆಸಿ ಅವರನ್ನು ಆರಿಸುವಂತೆ ಪಬ್ಲಿಕ್ ಸರ್ವಿಸ್ ಕಮೀಷನ್ನಿಗೆ ಸೂಚಿಸಿರುತ್ತಾರೆಂದೂ ಗೊತ್ತಾಗಿದೆ ೭ ಹುದ್ದೆಗಳ ಪೈಕಿ ಒಂದು ನಿಮ್ನ ವರ್ಗದವರಿಗಾಗಿ ಮೀಸಲಾಗಿದೆ.

ಮಾಧ್ವ ಮಹಾ ಮಂಡಲಕ್ಕೆ ಕಾಣಿಕೆ

ದಾಸಪ್ರಕಾಶ ಹೋಟೇಲಿನ ವ್ಯವಸ್ಥಾಪಕರಾದ ಶ್ರೀ ಬಿ. ಎನ್ ಸುಬ್ರಾಯ ತಂತ್ರಿಯವರು ತಮ್ಮ ಕುಮಾರ ಚಿ॥ ರಾ॥ ಸುರೇಶನ ಉಪನಯನ ಮಹೋತ್ಸವದ ಸಂದರ್ಭದಲ್ಲಿ ಮಾಧ್ವ ಮಹಾ ಮಂಡಲ ಸಭೆಗೆ ೨೫ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ.

ಅಹೋಬಿಲ ಕ್ಷೇತ್ರಕ್ಕೆ ಶ್ರೀ ಸ್ವಾಮಿಗಳವರ ಭೇಟಿ

ಶ್ರೀ ಶ್ರೀ ಅಹೋಬಿಲ ಸ್ವಾಮಿಗಳವರು ಇದೇ ತಿಂಗಳು ೨೩ನೇ ತಾರೀಖು, ನಂದ್ಯಾಲಗೆ ೧೫ ಮೈಲಿ ದೂರದಲ್ಲಿರುವ ನರಸಿಂಹಾವತಾರ ಸ್ಥಳವಾದ ಅಹೋಬಿಲ ಕ್ಷೇತ್ರಕ್ಕೆ ದಯಮಾಡಿಸಿ ಅಲ್ಲಿ ೧ ವಾರ ತಂಗುವರು ಅಂದು ಅಲ್ಲಿ ನರಸಿಂಹ ಜಯಂತಿ ಉತ್ಸವವು ವೈಭವದಿಂದ ನೆರವೇರಿಸಲ್ಪಡುವುದು. ಶ್ರೀ ಸ್ವಾಮಿಗಳವರ ಸಂಚಾರ ಕಾಲದಲ್ಲಿ ನಿತ್ಯವೂ ಅಹೋಬಿಲ ಕ್ಷೇತ್ರದ ಮಾಲೋಲ ನರಸಿಂಹಸ್ವಾಮಿಯ ಉತ್ಸವ ವಿಗ್ರಹಕ್ಕೆ ಪೂಜೆ ಜರೆಯುವುದು ಆ ಕ್ಷೇತ್ರದಲ್ಲಿ ಮೂಲ ವಿಗ್ರಹಕ್ಕೂ ಉತ್ಸವ ವಿಗ್ರಹದೊಡನೆ ಪೂಜಾದಿಗಳು ಜರುಗುವುವು ಶ್ರೀ ಮಠವು ಸ್ಥಾಪಿತವಾಗಿ ೫೦೦ ವರ್ಷಗಳಾಯಿತು ನೂರಾರು ವರ್ಷಗಳಿಂದ ಈಚೆಗೆ ಇದೇ ಮೊದಲಾಗಿ ಆ ಕ್ಷೇತ್ರದಲ್ಲಿ ಶ್ರೀ ಸ್ವಾಮಿಗಳವರಿಂದ ಪೂಜೆಯು ನೆರವೇರಲಿದೆ ಈ ಉತ್ಸವಕ್ಕೆ ಬಹು ಸಂಖ್ಯೆಯಲ್ಲಿ ಭಕ್ತಾದಿಗಳು ಹೋಗಲಿರುವರು

ಕತ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು !
ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು !!

ಆದರೆ ಡಾ॥ ರಾಜಾರಾವರ ನೂತನ ಮತ್ತು ಅತ್ಯಂತ ಸರಳವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ನರದೌರ್ಬಲ್ಯವನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ.

ಅಮರರಂತೆ ನವಯೌವನವನ್ನೂ, ಅಪ್ರತಿಮ ಶಕ್ತಿಯನ್ನೂ, ಆರೋಗ್ಯವನ್ನೂ ಹೊಂದಲು ಶೀಘ್ರದಲ್ಲಿ ಪ್ರಸಿದ್ಧ ಡಾ॥ ಎ. ವಿ ರಾಜಾರಾವರ ಸಲಹೆಯನ್ನು ಪಡೆಯಿರಿ

ಭಾರತದ ಹೆಮ್ಮೆಯಾದ ಡಾ॥ ರಾಜಾರಾವರು ನರ ವಿಧಾನದ ಚಿಕಿತ್ಸೆಗಳಿಂದಲೂ ಅದ್ಭುತವಾಗಿ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನಗಳಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನೂ, ಹುರುಪನ್ನೂ ಉಂಟುಮಾಡಿರುವರು. ಕೋಟ್ಯಧೀಶರುಗಳೂ, ನವಾಬರುಗಳೂ, ರಾಜರುಗಳೂ, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ

ಅದ್ದರಿಂದ ಡಾ॥ ರಾಜಾರಾವರನ್ನು ಭೇಟಿ ಮಾಡಿ ನವಯೌವನ, ದೇಹ ಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿರಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ಮರಾಪ್ರಕೃತಿಯಿಂದ ಬಾಳಲು ಇದು ಸುವರ್ಣ ಸುಸಮಯ

ಕಾಲ್-ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4 ರಿಂದ ರಾತ್ರಿ 9 ಘಂಟೆವರೆಗೆ

ರಾಜಾ ಮೆಡಿಕಲ್ ಹಾಲ್,

ಎಲ್. ನಂ 1-745 ಅಶೋಕಾ ರಸ್ತೆ, ಮೈಸೂರು
(ಮೈಸೂರು ಬ್ಯಾಂಕ್ ಬಳಿ ಹಾದಿ ಹಾಗೆ 3ನೇ ಕಟ್ಟಡ)

ರೈಲಿಗೆ ಎತ್ತಿನ ಗಾಡಿಗಳ ಡಿಕ್ಕಿಯಿಂದ ೮ ಜನರ ಮರಣ

ಹುಬ್ಬಳ್ಳಿ ರೈಲ್ವೆಯ ಬುರ್ಹಾನ್‌ಪುರ್-ಸೂರತ್ ವಿಭಾಗದಲ್ಲಿ ಕಳೆದ ೧೫ನೇ ತಾರೀಖು ಎರಡು ಎತ್ತಿನ ಗಾಡಿಗಳಿಗೂ, ರೈಲಿಗೂ ಡಿಕ್ಕಿಯಾಗಿ ಗಾಡಿಯಲ್ಲಿದ್ದ ೮ ಜನರು ಮೃತಪಟ್ಟು, ಇತರರಿಗೆ ಗಾಯಗಳಾದುವು.

ಕನ್ಯಕಾಪರಮೇಶ್ವರಿ ಉತ್ಸವ

ರಾಜಧಾನಿಯ ಅಶೋಕಾ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರಿ ವರ್ಧಂತಿ ಉತ್ಸವವು ಇಂದಿನಿಂದ ೨೭ರ ವರೆಗೆ ನಡೆಯುವುದು. ಅದರ ಅಂಗವಾಗಿ ಈ ರಾತ್ರಿ ೧೦ ಗಂಟೆಗೆ ರಾಜರಾಜೇಶ್ವರಿ ಅಲಂಕಾರವೂ, ಹರಿಕಥೆಯೂ ಇದೆ ನಾಳೆ ರಾತ್ರಿ ಲಕ್ಷ್ಮಿ ಅಲಂಕಾರ ಮತ್ತು ೧೦ ಗಂಟೆಗೆ ಶ್ರೀ ಸಿ. ರಾಮಸ್ವಾಮಿನಾಯ್ಡು ರವರಿಂದ ಹರಿಕಥೆಯು ನಡೆಯುವುದು.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ತರಗತಿಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಕೋ.

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಸ್ಥರು ಅಶೋಕ ರಸ್ತೆ, ಮೈಸೂರು [Estd. 1911]

Vidya Tutorial College

(Dalvoy High School Buildings)
MYSORE

Record Results — Classes Commenced

INTER, Eng, Kan, Sans, Hindi
P. C. M , P E M , H. E. L
H. E G. Etc.
B A · Eng, Kan, Sans Hindi ,
H E P , H. E. H. Etc.,
B.Sc. Eng, Kan, Sans, Hindi.
P C. M , C. B Z.

The best Institute for Efficient Coaching
Classes Commenced

INTER, B. A. & B. Sc.

Ladies also Admitted

JOIN IMMEDIATELY

Enquiries 9 to 10 A M . 5.30 to 8.30 P.M.

Sri Tutorial College

MYSORE

Hurry up ! *Good opportunity*

Expert tuition in English for the Intermediate Students preparing for the August Examination

★

Ladies also admitted

Enquire at :—

MADARI SHALA,
Near Jaganmohana Palace,

Working hours :— 9 to 10 A M. and 5 to 7 P.M.

Classes work from Monday 21st

SREE GANESHA
TALKIES

From 19—5—56

Columbia's latest Musical Comedy hit of the Year

THREE FOR THE SHOW

(In Cinemascope-Technicolor)
Starring- Betty Grable and Jack Lemmon of "Marge and Gower Champion"

Estd. 1917

CHAMPION METROPOLITAN COLLEGE OF COMMERCE

(Co-operators Home, 100' Road Mysore)

APPLICATIONS FOR ADMISSION to classes leading to DIPLOMAS in Commerce Shorthand and Typewriting are now being received in the mornings & evenings

(Sd) M S PUTTANNA, Vice-Principal (Sd) P. SUBBARAYA SASTRY, Principal

ಪ್ರಭುದೇವಾ ಥಿಯೇಟರ್

(ಸದ್ವಾ ಟಾಕೀಸ್)

19—5—56ರಿಂದ : ಅಮೋಘ 9ನೇ ವಾರ : ಪ್ರತಿ ದಿನ 3 ಪ್ರದರ್ಶನಗಳು

ಶ್ರೀ ರೇಣುಕಾ ಮಹಾತ್ಮೆ

(ಎಲ್ಲಮ್ಮನ ಕಥಾ)

25—5—56ರಿಂದ ಅಮೋಘ ಪ್ರಾರಂಭ ★ ಸಿ. ಐ. ಡಿ. ★ ಕನ್ನಡ ಚಿತ್ರ

Edited, Printed and Published by A. R. Nagarajan at Sadhvi Press, D. Subbiah Road, Mysore

ರಿಜಿಸ್ಟರ್ಡ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು



ಅಂದಿನ ಪತ್ರಿಕೆ ಅಂದೇ

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೮೪] SADHVI : SUNDAY 20-5-1956 ಮೈಸೂರು : ಭಾನುವಾರ ೨೦-೫-೧೯೫೬ [ಸಂಚಿಕೆ : ೧೩೭

ರಾಜಕೋಟೆ ರೈಲು ಅನಾಹುತದಲ್ಲಿ ೧೨ ಜನರ ಮರಣ

ವಿದ್ಯಾರ್ಥಿಗಳಲ್ಲಿ ಶಿಸ್ತು ಉಂಟುಮಾಡಲು ಕ್ರಮ

ಮುಖ್ಯೋಪಾಧ್ಯಾಯರ ಗೋಷ್ಠಿಯ ಸಲಹೆಗಳು

ಮೈಸೂರು ೨೦

ಇಲ್ಲಿ ನಡೆಯುತ್ತಿರುವ ಪ್ರಾದೇಶಿಕ ಮುಖ್ಯೋಪಾಧ್ಯಾಯರು ಮತ್ತು ವಿದ್ಯಾಧಿಕಾರಿಗಳ ಗೋಷ್ಠಿಯ ಬಹಿರಂಗ ಅಧಿವೇಶನವು ನೆನ್ನೆ ಶಾಲೆಗಳಲ್ಲಿ ಶಿಸ್ತಿನ ವಿಷಯವನ್ನು ಪರಿಶೀಲಿಸಿತು. ಅಶಿಸ್ತು ಉಂಟಾಗಲು ಕಾರಣಗಳ ಬಗ್ಗೆ ಚರ್ಚೆ ನಡೆದು ಹಲವು ಪರಿಹಾರ ಮಾರ್ಗಗಳನ್ನು ಸೂಚಿಸಲಾಯಿತು

ರಾಜಕೀಯ ಪಕ್ಷಗಳ ಅಹಿತ ಪ್ರಭಾವ, ಈಗಿನ ಇಡೀ ವಿದ್ಯಾಭ್ಯಾಸ ಪದ್ಧತಿಯನ್ನೇ ಖಂಡಿಸುತ್ತಿರುವುದರಿಂದ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ವಿದ್ಯಾಭ್ಯಾಸದ ಬಗ್ಗೆ ಉಂಟಾಗಿರುವ ಅವಿಶ್ವಾಸ, ಖಾಸಗಿ ಪಾಠ ಮತ್ತು ಪಾಠದ ಪಟ್ಟಿಗಳು, ಅಧ್ಯಾಪಕರ ಸಿಬ್ಬಂದಿಯಲ್ಲಿ ಪದೇ ಪದೇ ಬದಲಾವಣೆ, ಶಾಲಾ ವ್ಯವಹಾರಗಳಲ್ಲಿ ಇತರರ ಪ್ರವೇಶ—ಇವೇ ಅಶಿಸ್ತಿಗೆ ಕಾರಣಗಳೆಂದು ಅಭಿಪ್ರಾಯಪಡಲಾಯಿತು

ರಾಜಕೀಯ ಪ್ರಭಾವವು ಶಾಲೆಯ ಮೇಲೆ ಬೀಳದಂತೆ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸದಂತೆ ಮಾಡುವುದು, ತರಗತಿಯಲ್ಲಿ ಇಂತಿಷ್ಟಕ್ಕಿಂತ ಹೆಚ್ಚು ವಿದ್ಯಾರ್ಥಿಗಳನ್ನು ಸೇರಿಸದಿರುವುದು, ಶಾಲಾ ಪಾಠದ ಜೊತೆಗೆ ಸ್ಕೌಟಿಂಗ್, ಗರ್ಲ್ ಗೈಡಿಂಗ್, ಎ. ಸಿ. ಸಿ., ಎನ್. ಸಿ. ಸಿ., ಸಮಾಜಸೇವೆ, ಶ್ರಮದಾನ ಮುಂತಾದ ಕೆಲಸಗಳನ್ನು ಏರ್ಪಡಿಸುವುದು, ಉಪಾಧ್ಯಾಯರು ತಮ್ಮ ಆದರ್ಶದಿಂದ ವಿದ್ಯಾರ್ಥಿಗಳ ಮೇಲೆ ನೈತಿಕ ಪ್ರಭಾವ ಬೀರುವುದು; ಅಶಿಸ್ತಿನ ಬಗ್ಗೆ ಕ್ರಮ ಜರುಗಿಸಲು ಉಪಾಧ್ಯಾಯರ ಸಮಿತಿ ರಚಿಸುವುದು, ವಿದ್ಯಾರ್ಥಿ ಮಂಡಲಗಳನ್ನು ರಚಿಸಿ, ಅವರಲ್ಲಿ ಆತ್ಮ ಸಂಯಮವನ್ನುಂಟುಮಾಡುವುದು; ಮತ್ತು ಪೋಷಕ-ಉಪಾಧ್ಯಾಯ ಸಂಘಗಳನ್ನು ಸ್ಥಾಪಿಸುವುದು—ಇವೇ ಮುಂತಾದ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ಮಾಡಲಾಯಿತು

ಕಾಂಗ್ರೆಸ್ಸಿಗೆ ಕಾಣಿಕೆ

ಸುಂಡ್ಲುಪೇಟೆಯ ಶ್ರೀ ಅಂದಾನಯ್ಯನವರು ತಮ್ಮ ಪುತ್ರರ ವಿವಾಹದ ಸಂದರ್ಭದಲ್ಲಿ ಕಾಂಗ್ರೆಸ್ಸಿಗೆ ೨೫ ರೂ ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ

ಪಂಚಾಯಿತಿ ಚುನಾವಣೆಗೆ ಇಡೀ ಗ್ರಾಮದ ಬಹಿಷ್ಕಾರ

ಮದನಪಲ್ಲಿ ತಾಲ್ಲೂಕಿನ ಕಮಕೂರು ಎಂಬ ಹಳ್ಳಿಯಲ್ಲಿ ಗ್ರಾಮ ಪಂಚಾಯಿತಿ ಚುನಾವಣೆಯನ್ನು ಇಡೀ ಗ್ರಾಮಸ್ಥರು ಒಂದಾಗಿ ಸೇರಿ ಬಹಿಷ್ಕರಿಸಿದರೆಂದು ವರದಿಯಾಗಿದೆ ತಮಗೆ ಬೇಕಾದವರೊಬ್ಬರನ್ನು ಪಂಚಾಯಿತಿ ಅಧ್ಯಕ್ಷರಾಗಿ ಮಾಡಿಕೊಳ್ಳಬೇಕೆಂದಿದ್ದ ಹಳ್ಳಿಗರಿಗೆ, ಆ ಸದಸ್ಯರ ಹೆಸರೇ ಓಟರು ಪಟ್ಟಿಯಲ್ಲಿಲ್ಲದೆ ಇದ್ದುದು ಗೊತ್ತಾಯಿತು. ಚುನಾವಣಾ ಅಧಿಕಾರಿ ಮುಂದೆ ಯಾರೂ ನಾಮಪತ್ರಗಳನ್ನೇ ಸಲ್ಲಿಸಲಿಲ್ಲ.

ಯೂರೋಪಿನ ಸಮಸ್ಯೆಗಳ ಬಗ್ಗೆ ರಷ್ಯಾ-ಫ್ರಾನ್ಸ್ ಒಪ್ಪಂದವಿಲ್ಲ

ರಷ್ಯದ ನಾಯಕರಿಗೂ ಮತ್ತು ಫ್ರೆಂಚ್ ಪ್ರಧಾನಿ ಮೋಲೆ ಮತ್ತು ವಿದೇಶಾಂಗ ಮಂತ್ರಿ ಪೀನೋರವರಿಗೂ ನಡೆಯುತ್ತಿದ್ದ ಮಾತುಕತೆಗಳಲ್ಲಿ ಯೂರೋಪಿನ ಸಮಸ್ಯೆಗಳ ಇತ್ಯರ್ಥದ ಮಾರ್ಗಗಳ ಬಗ್ಗೆ ಒಡಂಬಡಿಕೆಯಾಗಲಿಲ್ಲವೆಂದು ವರದಿಯಾಗಿದೆ ಯೂರೋಪಿನಲ್ಲಿ ಶಾಂತಿಯ ಅವಶ್ಯಕತೆ ಬಗ್ಗೆ ಎರಡೂ ಒಪ್ಪಿರುತ್ತಾರೆ ಒಪ್ಪಂದವು ಸಾಧ್ಯವಾಗದಿರುವ ಕಡೆ ಪರಸ್ಪರ ತಿಳುವಳಿಕೆಯು ಹೆಚ್ಚಿರುವುದೆಂದು ಜಂಟಿ ಪ್ರಕಟಣೆಯೊಂದು ಸೂಚಿಸಿದೆ

೩ ವರ್ಷಗಳ ಅವಧಿಯ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಉಭಯರೂ ಸಮ್ಮತಿಸಿರುವರು ಈ ಬಗ್ಗೆ ಬರುವ ಸೆಪ್ಟೆಂಬರ್ ತಿಂಗಳಲ್ಲಿ ಪ್ಯಾರಿಸ್ ನಗರದಲ್ಲಿ ಮಾತುಕತೆಗಳು ನಡೆದು, ಮುಂದಿನ ಜನವರಿ ತಿಂಗಳಿಂದ ಒಪ್ಪಂದವು ಜಾರಿಗೆ ಬರಲಿದೆ ಫ್ರಾನ್ಸ್ ಮತ್ತು ರಷ್ಯದ ಪಾರ್ಲಿಮೆಂಟ್ ನಿಯೋಗಗಳ ಸಮುಚಿತ ಪ್ರವಾಸಗಳು ಸಂಚಾರ ವಿನಿಮಯದ ಉಭಯರಿಗೂ ಸಾಂಸ್ಕೃತಿಕ ಒಪ್ಪಂದವಾಗಿರುವುದೆಂದೂ ಗೊತ್ತಾಗಿದೆ.

ಸಾಂಚಿಯಲ್ಲಿ ಬುದ್ಧ ಜಯಂತಿಗಾಗಿ ೨ ಲಕ್ಷ ರೂ.

ಬುದ್ಧ ದೇವನ ೨೫೦೦ನೇ ಜಯಂತಿಯನ್ನು ಭೂಪಾಲ್ ಪ್ರಾಂತದ ಸಾಂಚಿಯಲ್ಲಿ ನೆರವೇರಿಸುವುದಕ್ಕಾಗಿ ಕೇಂದ್ರ ಸರ್ಕಾರದವರು ೨ ಲಕ್ಷ ರೂ. ಗಳನ್ನು ಮಂಜೂರು ಮಾಡಿರುವರು. ಸಾಂಚಿಯು ಪುರಾತನವಾದ ಬೌದ್ಧರ ಯಾತ್ರಾಸ್ಥಳ ಇತ್ತೀಚೆಗೆ ಅಲ್ಲಿ ಬುದ್ಧನ ಪ್ರಮುಖ ಶಿಷ್ಯರಾದ ಸಾರಿಪುತ್ರ ಮತ್ತು ಮೊಗ್ಗಲಾನರವರ ಅವಶೇಷಗಳನ್ನು ಇಡುವುದಕ್ಕಾಗಿ ನೂತನ ಮಂದಿರವೊಂದನ್ನು ನಿರ್ಮಿಸಲಾಗಿದೆ.

ಬುದ್ಧ ಜಯಂತಿ ದಿನ ಮದ್ರಾಸಿನಲ್ಲಿ ಮಾಂಸದ ಮಾರಾಟವಿಲ್ಲ

ಇದೇ ತಿಂಗಳು ೨೪ನೇ ತಾರೀಖು ವೈಶಾಖ ಪೂರ್ಣಿಮೆಯಂದು ಬುದ್ಧ ಜಯಂತಿ ಪ್ರಯುಕ್ತ ಮದರಾಸಿನಲ್ಲಿ ಕಸಾಯಿ ಖಾನೆಗಳನ್ನು ಮುಚ್ಚಲು ಅಲ್ಲಿನ ಕಂಟ್ರಾಕ್ಟರುಗಳು ಒಪ್ಪಿರುತ್ತಾರೆ.

ವಚನಗಾನ ಮತ್ತು ಉಪನ್ಯಾಸ

ರಾಜಧಾನಿಯ ವೀರಶೈವ ಸಂಘದ ಆಶ್ರಯದಲ್ಲಿ ಈ ಸಂಜೆ ೬॥ ಗಂಟೆಗೆ ಕ್ಯಾತನಹಳ್ಳಿ ಸಿದ್ಧಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಬಸವ ಜಯಂತಿ ಅಂಗವಾಗಿ ಶ್ರೀ ಬಿ. ಎಂ. ಶಿವಪ್ಪನವರಿಂದ ವಚನಗಾನ ಮತ್ತು ಡಾ॥ ಪಿ॥ ಎ. ಜಿ ನಂಜುಂಡಾರಾಧ್ಯರಿಂದ ಬಸವಣ್ಣನವರ ಸಂದೇಶದ ಬಗ್ಗೆ ಭಾಷಣಗಳು ನಡೆಯುವುವು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ಭಾರತದ ವಿಮಾನ ಸಂಸ್ಥೆಯ ಪ್ರಯಾಣಿಕರ ವಿಮಾನವೊಂದು ನೆನ್ನೆ ಅಹಮದಾಬಾದು ನಿಲ್ದಾಣದಲ್ಲಿ ಇಳಿಯುತ್ತಿದ್ದಾಗ ಮುರಿದುಬಿದ್ದುದರಿಂದ ಅದರಲ್ಲಿದ್ದ ೧೬ ಜನರಿಗೆ ಗಾಯಗಳಾದುವು. ಯಾರಿಗೂ ಪ್ರಾಣಾಪಾಯವಾಗಲಿಲ್ಲ.

ಪಶ್ಚಿಮ ಪಾಕಿಸ್ತಾನದ ಶಾಸನ ಸಭೆಯಲ್ಲಿ ಗೊಂದಲ

ಪಶ್ಚಿಮ ಪಾಕಿಸ್ತಾನದ ಶಾಸನ ಸಭೆಯ ಆಯವ್ಯಯ ಅಧಿವೇಶನವು ನೆನ್ನೆ ಆರಂಭವಾದಾಗ ರಿಪಬ್ಲಿಕ್ ಮತ್ತು ಮುಸ್ಲಿಂ ಲೀಗ್ ಪಕ್ಷಗಳ ಸದಸ್ಯರು ಮಂತ್ರಿ ಸ್ಥಾನಗಳನ್ನು ತುಂಬಿಕೊಳ್ಳುವ ನ್ಯಾಯಾನ್ಯಾಯದ ಬಗ್ಗೆ ಹಣ್ಣು ಕಾದಾಟಗಳಾಗಿ ಗೊಂದಲವಾಯಿತು ಸರ್ಕಾರಿ ಪಕ್ಷದ ಸ್ಥಳಗಳಲ್ಲಿ ಮುಖ್ಯಮಂತ್ರಿ ಡಾ॥ ಖಾನ್ ಸಾಹೇಬ್ ಮತ್ತು ಅವರ ಪಕ್ಷದವರು ಕುಳಿತದ್ದೇ ಗಲಭೆಗೆ ಕಾರಣವಾಯಿತು. ಸಭೆಯ ಅಧ್ಯಕ್ಷರ ಚುನಾವಣಾ ವರೆಗೆ ಪಾಕಿಸ್ತಾನ್ ಗವರ್ನರ್ ಜನರಲ್ ಅವರನ್ನು ಅಧ್ಯಕ್ಷರಾಗಿ ಗವರ್ನರ್‌ರವರು ನೇಮಿಸಿದ ಬಗ್ಗೆಯೂ, ಸಭಾಸದರಲ್ಲದ ಮಂತ್ರಿಯೊಬ್ಬರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಬಗ್ಗೆ ಕ್ರಿಯಾಲೋಪಗಳನ್ನು ಎತ್ತಿದಾಗಲೂ ಗೊಂದಲಗಳಾದುವು

ಕಲ್ಕತ್ತದಲ್ಲಿ ಕಪ್ಪೆಗಳಿಗೆ ಹೆಚ್ಚು ಬೆಲೆ

ಕಲ್ಕತ್ತದಲ್ಲಿ ಶರೀರ ಶಾಸ್ತ್ರ ಮತ್ತು ಪ್ರಾಣಿ ಶಾಸ್ತ್ರವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿರುವ ಕಾಲೇಜುಗಳಿಗೆ ಪ್ರತಿ ವಾರವೂ ೮,೦೦೦ ಕಪ್ಪೆಗಳನ್ನು ತರಿಸಿಕೊಳ್ಳಬೇಕಾಗುವುದು. ಈ ವರ್ಷ ಬೇಸಿಗೆಕಾಲವು ದೀರ್ಘವಾಗುತ್ತಿರುವುದರಿಂದ ಕಪ್ಪೆಗಳ ಅಭಾವವುಂಟಾಗಿ ಬೆಲೆಯು ವಿಪರೀತವಾಗಿ ಏರುತ್ತಿದೆ. ಬೇಸಿಗೆಕಾಲದಲ್ಲಿ ಅವು ಭೂಮಿಯೊಳಗೆ ಇರುತ್ತವೆ ಅವುಗಳ ಬೆಲೆಯು ಈಗ ಸರಾಸರಿಗಿಂತ ಶೇಕಡ ೩೦೦ ರಷ್ಟು ಹೆಚ್ಚಿದೆ

ಆಯುರ್ವೇದಕ್ಕೆ ಉತ್ತೇಜನ ನೀಡಲು ಪ್ರವೀಣರ ಶಿಫಾರಸು

ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ವೈದ್ಯ ಪದ್ಧತಿ ಬಗ್ಗೆ ಸಾಮಾನ್ಯ ನೀತಿಗೆ ಸಂಬಂಧಪಟ್ಟ ವಿಚಾರಗಳನ್ನು ದೆಹಲಿಯಲ್ಲಿ ಸೇರಿದ್ದ ಪ್ರವೀಣರ ಸಮ್ಮೇಳನದಲ್ಲಿ ಪರಿಶೀಲಿಸಲಾಯಿತು. ಯೋಜನಾ ಮಂಡಲಿಯವರು ಈ ಸಮ್ಮೇಳನವನ್ನು ಕರೆದಿದ್ದರು ಪ್ರತಿಯೊಂದು ವೈದ್ಯ ಪದ್ಧತಿಯನ್ನೂ ಭಾರತ ಮತ್ತು ಸಂಸ್ಥಾನ ಸರ್ಕಾರಗಳು ಪ್ರೋತ್ಸಾಹಿಸಬೇಕೆಂದು ಸಭೆಯು ಅಭಿಪ್ರಾಯಪಟ್ಟಿತು ಈ ಬಗ್ಗೆ ಮೂರು ಪದ್ಧತಿಗಳನ್ನು ಕೇಂದ್ರ ಮತ್ತು ಪ್ರಾಂತ ಮಟ್ಟಗಳಲ್ಲಿ ಪ್ರೋತ್ಸಾಹಿಸಲು ಪ್ರತ್ಯೇಕ ಸಲಹೆಗಾರರನ್ನು ನೇಮಿಸುವ ವಿಷಯವೂ ಪರಿಶೀಲಿಸಲ್ಪಟ್ಟಿತು. ಸದರಿ ವೈದ್ಯ ಪದ್ಧತಿಗಳ ಬಗ್ಗೆ ತರಪೇತು, ತರಪೇತಾದವರ ವೇತನ, ಸಂಶೋಧನ, ಔಷಧಿಗಳ ತಯಾರಿಕೆ ಮತ್ತು ಅವುಗಳ ಮಟ್ಟ ಮುಂತಾದುವೂ ಪರಿಶೀಲಿಸಲ್ಪಟ್ಟುವು

ವಿಶ್ವಸಂಸ್ಥೆಗೆ ಆಲ್ಜೀರಿಯಾ ಪ್ರಶ್ನೆ

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಗೆ ಆಲ್ಜೀರಿಯಾ ಪ್ರಶ್ನೆಯನ್ನು ಕೊಂಡೊಯ್ಯಲು ಸಂಸ್ಥೆಯ ಅರಬ್ ರಾಷ್ಟ್ರಗಳ ಪ್ರತಿನಿಧಿಗಳು ನಿರ್ಧರಿಸಿದ್ದಾರೆ. ಅಲ್ಲಿ ಆಲ್ಜೀರಿಯದ ಸ್ವಾತಂತ್ರ್ಯಕ್ಕೆ ಮನ್ನಣೆಯಾಯಲು ಒತ್ತಾಯಪಡಿಸಲಾಗುವುದು.

ರಾಜಕೋಟೆ ಮೇಲ್ ರೈಲು ಕಂಬಿ ತಪ್ಪಿ ೧೨ ಜನರ ಮರಣ

ರಾಜಕೋಟೆ-ಜಾಂನಗರ ಮೇಲ್ ರೈಲುಗಾಡಿಯು ನೆನ್ನೆ ಸಂಜೆ ಪರಿಯಾದೇಶದ ಎಂಬ ಫ್ಲಾಗ್ ಸ್ಟೇಷನ್ ಬಳಿ ಕಂಬಿ ತಪ್ಪಿದ ಪರಿಣಾಮವಾಗಿ ೧೨ ಜನರು ಮೃತಪಟ್ಟು ೩೫ ಜನರಿಗೆ ಗಾಯವಾಯಿತೆಂದು ವರದಿಯಾಗಿದೆ. ೬ ಜನರಿಗೆ ತೀವ್ರ ಗಾಯಗಳಾಗಿ ಅವರನ್ನು ಆಸ್ಪತ್ರೆಗೆ ಸೇರಿಸಲಾಗಿದೆ ೯ ಗಾಡಿಗಳು ಕಂಬಿ ತಪ್ಪಿದುವು.

ವೈಯಕ್ತಿಕ ಆದಾಯದ ಪರಮಾವಧಿ ನಿಗದಿ ಯುಕ್ತವಲ್ಲ

ಪ್ರಧಾನಿ ನೆಹರೂರವರ ಹೇಳಿಕೆ

ಪ್ರಧಾನಿ ನೆಹರೂರವರು ಮೊನ್ನೆ ಲೋಕಸಭೆಯಲ್ಲಿ ಮಾತನಾಡಿ, ವೈಯಕ್ತಿಕ ವರಮಾನಗಳ ಪರಮಾವಧಿಯನ್ನು ನಿಗದಿ ಮಾಡುವ ಸಲಹೆಯನ್ನು ನಿರಾಕರಿಸಿದರು. ಸಮಾಜವಾದವೆಂದರೆ ಬಡತನದ ಮಟ್ಟದಲ್ಲೇ ಇರಬೇಕೆಂಬ ಅರ್ಥವಲ್ಲವೆಂದೂ, ವರಮಾನದ ಪರಮಾವಧಿಯನ್ನು ನಿಶ್ಚಯಿಸುವುದು ಸರಿಯಾದ ಮಾರ್ಗವಲ್ಲವೆಂದೂ, ಅದನ್ನು ಆಚರಣೆಗೆ ತರುವಂತಿಲ್ಲವೆಂದೂ ಅವರು ಹೇಳಿದರು ಉನ್ನತ ವರಮಾನದವರನ್ನು ತಗ್ಗಿಸುವ ಬದಲು ಕಡಿಮೆ ಆದಾಯದವರ ವರಮಾನವನ್ನು ಮೇಲ್ಮಟ್ಟಕ್ಕೆ ತರುವುದರ ಕಡೆಗೆ ಗಮನಕೊಡುವುದು ಅವಶ್ಯಕವೆಂದು ಅವರು ನುಡಿದರು ಕನಿಷ್ಠ ವರಮಾನದ ಪರಮಾವಧಿಯನ್ನು ಗೊತ್ತುಪಡಿಸಿ ಮಾಡುವುದಕ್ಕಿಂತ ಪ್ರಗತಿಪರವಾಗಿ ತೆರಿಗೆ ವಿಧಿಸುವುದು ಉತ್ತಮವೆಂದೂ ಅವರು ಸೂಚಿಸಿದರು

ಸರ್ಕಾರಿ ನೌಕರರ ಸಂಬಳವನ್ನು ಹೆಚ್ಚು ಮಾಡಬೇಕೆಂದು ಕೇಳುವುದು ಅಸಾಧ್ಯವೆಂದು ಸೂಚಿಸಿಯೂ, ನೌಕರರಲ್ಲಿ ಅನೇಕರಿಗೆ ಹೆಚ್ಚು ವೇತನವನ್ನೇನೂ ಕೊಡುತ್ತಿಲ್ಲವೆಂದೂ ಅವರು ತಿಳಿಸಿದರು

ಸಭೆಯಲ್ಲಿ ಬಿ. ಕೆ. ಮುಖರ್ಜಿಯವರು ನಿರ್ಣಯವೊಂದನ್ನು ಸೂಚಿಸಿ ಒಬ್ಬ ವ್ಯಕ್ತಿಗೆ ೨೫ ಸಾವಿರ ರೂ. ಅನ್ನು ವಾರ್ಷಿಕ ವರಮಾನದ ಪರಮಾವಧಿಯೆಂದು ಗೊತ್ತುಮಾಡಬೇಕೆಂದೂ, ಸರ್ಕಾರಿ ನೌಕರರಿಗೆ ಮಾಹೆಯಾನ ೧,೫೦೦ ರೂ.ಗಿಂತ ಹೆಚ್ಚು ಸಂಬಳ ಕೊಡಬಾರದೆಂದೂ ಸೂಚಿಸಿದ್ದರು ನಿರ್ಣಯವನ್ನು ವಾಪಸು ಪಡೆಯಲಾಯಿತು.

ಬುದ್ಧನ ಬಗ್ಗೆ ಪುಸ್ತಕಗಳ ಪ್ರದರ್ಶನ

ರಾಜಧಾನಿಯ ಪಬ್ಲಿಕ್ ಲೈಬ್ರರಿಯವರು ಇದೇ ತಿಂಗಳು ೨೪ನೇ ತಾರೀಖು ಬುದ್ಧ ಜಯಂತಿಯನ್ನು ನೆರವೇರಿಸುವರು ಅದರ ಅಂಗವಾಗಿ ಬುದ್ಧ ದೇವನ ಜೀವನ ಮತ್ತು ಉಪದೇಶಗಳು ಳ, ಪುಸ್ತಕಗಳ ಪ್ರದರ್ಶನವನ್ನು ೧ ವಾರ ನಡೆಸಲಾಗುವುದು. ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಎಂ. ಯಾಮುನಾಚಾರ್ಯರು ಅದರ ಆರಂಭೋತ್ಸವವನ್ನು ನೆರವೇರಿಸುವರು ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಅಧ್ಯಕ್ಷತೆ ವಹಿಸುವರು. ಸಕಲರೂ ಅದರಲ್ಲಿ ಭಾಗವಹಿಸುವಂತೆ ಕೋರಲಾಗಿದೆ

ವಾ ರ ಭ ವಿ ಷ್ಯ

ತಾ|| ೨೦-೫-೫೬ರಿಂದ ೨೬-೫-೫೬ರ ವರೆಗೆ

ಮೇಷ :—ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ ಶುಭ ಕಾರ್ಯಗಳು ಜರುಗುವುವು.

ವೃಷಭ :—ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಅಪ್ತರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ನೌಕರಿಯಲ್ಲಿ ನಿರುತ್ಸಾಹ.

ಮಿಥುನ :—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವೃಥಾ ವಿವಾದ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ನೌಕರಿಯಲ್ಲಿ ಕಿರುಕುಳ. ಸ್ಥಳ ಪಲ್ಲಟ.

ಕರ್ಕ :—ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ಕಿರುಕುಳ. ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ.

ಸಿಂಹ :—ಆರೋಗ್ಯದ ಬಗ್ಗೆ ಎಚ್ಚರಿಕೆ ಇರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ಉದ್ಯೋಗದಲ್ಲಿ ಪ್ರೋತ್ಸಾಹ.

ಕನ್ಯಾ :—ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಆಪ್ತರಿಂದ ವಂಚನೆ ವೃಥಾ ವೈಮನಸ್ಯ. ಉದ್ಯೋಗದಲ್ಲಿ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ಏಳ್ಗೆ

ತುಲಾ :—ಆರೋಗ್ಯ ಸಮರ್ಪಕ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ. ನೌಕರಿಯಲ್ಲಿ ಅನಿರೀಕ್ಷಿತ ಪರಿಸ್ಥಿತಿ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ.

ವೃಶ್ಚಿಕ :—ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಬಿಕ್ಕಟ್ಟು ಹೆಚ್ಚುವುವು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ ಕೈಗೊಂಡ ಕಾರ್ಯಕ್ಕೆ ವಿಘ್ನ

ಧನು :—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ನೌಕರಿಯಲ್ಲಿ ಪ್ರಶಂಸೆ ಶುಭ ಕಾರ್ಯಗಳು ಜರುಗುವುವು

ಮಕರ :—ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ ವ್ಯಾಪಾರವ್ಯವಹಾರಗಳಲ್ಲಿ ನಿರಾಶೆ ಉದ್ಯೋಗದಲ್ಲಿ ಕಿರುಕುಳ.

ಕುಂಭ :—ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ನೌಕರಿಯಲ್ಲಿ ಸಮಸ್ಯೆ. ಶುಭ ಕಾರ್ಯಗಳು ನಡೆಯುವುವು

ಮೀನ :—ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಮಿತ್ರರಿಂದ ವಂಚನೆ. ಪ್ರವಾಸ ಸಂಭವ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ. ನೌಕರಿಯಲ್ಲಿ ಅನಿರೀಕ್ಷಿತ ಪರಿಸ್ಥಿತಿ

ಬಿ. ಟಿ. ನಾರಾಯಣ್‌ರವರಿಗೆ ನಿವೃತ್ತಿ ಪೂರ್ವ ರಜಾ

ಭಾರತ ಕಾಫಿ ಬೋರ್ಡಿನ ಸಂಶೋಧನಾ ಶೈಕ್ಷಣಿಕ ಕೆಲಸ ನೋಡುತ್ತಿರುವ ಸಂಸ್ಥಾನದ ವ್ಯವಸಾಯ ಇಲಾಖಾ ಅಫಿಸಿಯೇಟಿಂಗ್ ಡೈರೆಕ್ಟರಾದ ಡಾ|| ಬಿ ಟಿ ನಾರಾಯಣ್‌ರವರಿಗೆ ಇದೇ ಆಗಸ್ಟ್ ೧೦ ರವರೆಗೆ ರಜಾ ಕೊಡಲಾಗಿದೆ ನಂತರ ಅವರು ನಿವೃತ್ತರಾಗುವರು.

An Excellent Guide to the

S. S. L. C. English Text

(Realms of gold) Price 1-2-0

C. T. C. PUBLICATIONS,

Old Agrahar Mysore

★

Evening S. S. L. C. Classes

In Full Swing

C. T. C., Old Agrahar, Mysore

Edited, Printed and Published by A. P. Nagarajan at Sadhvi Press D. Subbaiah Road, Mysore

ಆಚಾರ್ಯ ವಿನೋಬಾರವರಿಂದ ರಾತ್ರಿ ವೇಳೆ ಮೌನ

ಆಚಾರ್ಯ ವಿನೋಬಾ ಭಾವೆಯವರು ಇನ್ನು ಮುಂದೆ ರಾತ್ರಿ ೮ ಗಂಟೆಯಿಂದ ಬೆಳಗಿನ ಪೂರ್ವದ ಪ್ರಾರ್ಥನೆ ವರೆಗೆ ಮೌನವನ್ನು ಆಚರಿಸಲು ನಿರ್ಧರಿಸಿದ್ದಾರೆ ಭೂದಾನ ಚಳುವಳಿ ಆರಂಭಿಸುವುದಕ್ಕೆ ಮುಂಚಿತವಾಗಿ ಅವರು ಈ ರೀತಿ ಮೌನವನ್ನು ಆಚರಿಸುತ್ತಿದ್ದರು.

ತಿರುವಾಂಕೂರು ಆಡಳಿತದ ಬಗ್ಗೆ ಮಸೂದೆ

ತಿರುವಾಂಕೂರಿನಲ್ಲಿ ಶಾಸನ ಮಾಡುವ ಅಧಿಕಾರವು ರಾಷ್ಟ್ರಾಧ್ಯಕ್ಷರಲ್ಲಿರಬೇಕೆಂದು ಸೂಚಿಸುವ ಮಸೂದೆಯನ್ನು ಲೋಕ ಸಭೆಯಲ್ಲಿ ಮೊನ್ನೆ ಕೇಂದ್ರ ಗೃಹ ಶಾಖಾ ಮಂತ್ರಿ ಬಿ ಎನ್. ದಾತಾರರವರು ಮಂಡಿಸಿದರು ಅದನ್ನು ಮಂಡಿಸದಂತೆ ಕಮ್ಯೂನಿಸ್ಟ್ ಸದಸ್ಯರು ವಿರೋಧ ಸೂಚಿಸಿ, ವಿಫಲರಾದರು

ವಿವಾಹ ಮಹೋತ್ಸವಗಳು

ಪ್ರೊಫೆಸರ್ ಡಾ|| ಎಂ. ಬಸವರಾಜ ಅರಸ್‌ರವರು ತಮ್ಮ ಸಹೋದರ ಶ್ರೀ ಯು ಎಂ. ಮಲ್ಲರಾಜ ಅರಸ್‌ರವರಿಗೆ ರಾಜಸೇವಾ ಪ್ರಸಕ್ತ ಶ್ರೀ ಎಂ ವೀರರಾಜ ಅರಸರ ಸಹೋದರರಾದ ಶ್ರೀ ಎಂ ಚನ್ನರಾಜ ಅರಸ್‌ರವರ ಕುಮಾರಿ ಸೌ|| ಪದ್ಮಾರವರನ್ನು ತಂದುಕೊಂಡು ಮೊನ್ನೆ ಲಕ್ಷ್ಮೀಪುರದಲ್ಲಿ ವಿವಾಹವನ್ನು ನೆರವೇರಿಸಿದರು

ಬ್ರಹ್ಮಶ್ರೀ ಕೂಡ್ಲಿ ನಾರಾಯಣಶಾಸ್ತ್ರಿಗಳವರು ತಮ್ಮ ದ್ವಿತೀಯ ಕುಮಾರ ಶ್ರೀ ಜಗನ್ನಾಥ ಶಾಸ್ತ್ರಿಯವರಿಗೆ ಪಿರಿಯಾಪಟ್ಟಣದ ಶ್ರೀ ನಾರಾಯಣ ಅಯ್ಯರ್‌ರವರ ಪುತ್ರ ಶ್ರೀಕಂಠಯ್ಯರ್‌ರವರ ಕುಮಾರಿ ಸೌ|| ಕಾಮಾಕ್ಷಿಯನ್ನು ತಂದುಕೊಂಡು ಬೆಂಗಳೂರಿನಲ್ಲಿ ನೆನ್ನೆ ವಿವಾಹವನ್ನು ಜರುಗಿಸಿದರು

ಅಮೆರಿಕಾ ರೇಡಿಯೋವಿನಲ್ಲಿ ಹಿಂದಿ ಸುದ್ದಿ

ವಾಯ್ಸ್ ಆಫ್ ಅಮೆರಿಕಾ ರೇಡಿಯೋವಿನಲ್ಲಿ ನಾಳೆಯಿಂದ ದಿನವೂ ಬೆಳಗ್ಗೆ ೭ ಘಂಟೆಗೆ ಹಿಂದಿ ಸುದ್ದಿಗಳ ಪ್ರಸಾರ ಮಾಡಲಾಗುವುದು ಅದನ್ನು ೧೬.೮೭ ಮತ್ತು ೧೯ ೬೫ ಮೀಟರಿನಲ್ಲಿ ಕೇಳಬಹುದು

ಹ ರಿ ಕ ಥೆ

ಸೀತಾವಿಲಾಸ ಅಗ್ರಹಾರದ ಶ್ರೀ ರಾಮದೇವರ ದೇವಸ್ಥಾನದಲ್ಲಿ ಈ ರಾತ್ರಿ ೮ ಘಂಟೆಗೆ ಏಕಾದಶಿ ಪ್ರಯುಕ್ತ ಹರಿಕಥಾ ವಿದ್ವಾನ್ ವೇ|| ಬ್ರಂ|| ಶ್ರೀ ಸೋಸಲೆ ವೆಂಕಟಸುಬ್ಬಾಚಾರ್ಯರಿಂದ "ಭಕ್ತ ಧ್ರುವ" ಎಂಬ ಹರಿಕಥೆಯನ್ನು ಏರ್ಪಡಿಸಿರುತ್ತೆ.

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಕಡಲೆಕಾಯಿ	೨೧ ೧೪ ೦	೨೨ ೧೪ ೦
ಎಳ್ಳು	೪೮ ೦ ೦	
ಹೊಂಗೆಬೀಜ	೨೩ ೧೦ ೦	೨೫ ೦ ೦
ಹುಚ್ಚೆಳ್ಳು	೪೪ ೧೪ ೦	
ಹುಣಸೆಬೀಜ	೫ ೬ ೦	
ಹುರುಳಿ	೨೭ ೧೨ ೦	೨೮ ೪ ೦
ಹೆಸರುಕಾಳು	೫೨ ೨ ೦	
ಹುಣಸೇಹಣ್ಣು	೧ ೮ ೦	೫ ೧೩ ೦
ಮೆಣಸಿನಕಾಯಿ	೧೯ ೪ ೦	
ತೆಂಗಿನಕಾಯಿ ೧೦೦೦	೧೭೦ ೮ ೦	೨೦೪ ೮ ೦

Herbal Curiosities!

ಘ ನ ಹೇ ಮ ರ ಸಂ

ಅತಿಕ್ಷಿಣಿಸಿ, ರಕ್ತಕೊರತೆಯಿಂದ ಪೀಡಾವು ಪಡೆದರು, ಧಮನ್ಯಾಧಿಗಳೂ

ಚಿ ಕಿ ತ್ಸಾ ಧಾ ಮ

Gastric Ulcer (ಹೊಟ್ಟೆ ಬಾಧೆ),

ಪಿತ್ತ ಕಾಮಾಲೆ (Jaundice), ಲಿವರ್

ಎಂಡ್ ಸ್ಪ್ಲೀನ್, Rheumatism ರೋಗ

ಶ್ರೇಷ್ಠ ಪ್ರಯೋಗ

ಸ್ಪೆಷಲ್ ಚಿಕಿತ್ಸೆಗಳು ನಾಡು ಕಮ್ಮಿ (೩ ದಿನಗಳಲ್ಲಿ ಗುಣ), ಹೊಸ, ಹಳೆಯ ವ್ಯಾಧಿಗಳಿಗೆ

N B — "ಫಾರ್ಮುಲ ಬುಕ್" ಹೆಸರಿನ ಕಳೆಯನ್ನೂ, ವಿಶಿಷ್ಟ ಹೊಲಸಾದ ಚರ್ಮ ರೋಗಗಳನ್ನು ತೊಡೆದು ಹಾಕುತ್ತದೆ.

S. SHAMANNA, Specialist,

2830 ಚಾಮುಂಡೇಶ್ವರಿ ರೋಡ್,

ಗಾಯತ್ರೀಪುರಂ, ಮೈಸೂರು

ಆಂಧ್ರಕ್ಕೆ ರಾಯಚೂರು ಹಳ್ಳಿಗಳ ವರ್ಗದ ಪ್ರಯತ್ನ?

ರಾಯಚೂರು ಜಿಲ್ಲೆಯಲ್ಲಿರುವ ರಾಜೋಲಬಂಡಾ ಡೈವರ್ಷನ್ ಪ್ರದೇಶ ಮತ್ತು ಇತರ ೫೦ ಕನ್ನಡ ಹಳ್ಳಿಗಳನ್ನು ಆಂಧ್ರ ಸಂಸ್ಥಾನಕ್ಕೆ ವರ್ಗಾಯಿಸುವಂತೆ ಹೈದರಾಬಾದಿನ ಮುಖ್ಯ ಮಂತ್ರಿ ಬಿ ರಾಮಕೃಷ್ಣರಾಯರು ಪ್ರಯತ್ನಿಸುತ್ತಿರುವರೆಂದು ಹೈದರಾಬಾದಿನ ೧೪ ಮಂದಿ ಕನ್ನಡ ಕಾಂಗ್ರೆಸ್ ಪ್ರಮುಖರು ಸೂಚಿಸಿ, ಈ ಬಗ್ಗೆ ಪ್ರತಿಭಟಿಸಿರುತ್ತಾರೆ

ಸಂಸ್ಥಾನ ಶಾಸನ ಸಭಾಸದರಿಗೆ ಉಚಿತ ರೈಲು ಪ್ರಯಾಣ

ಸಂಸ್ಥಾನಗಳ ಶಾಸನ ಸಭಾ ಸದಸ್ಯರುಗಳು ತಮ್ಮ ಪ್ರಾಂತಗಳಲ್ಲಿ ಉಚಿತವಾಗಿ ರೈಲು ಪ್ರಯಾಣ ಮಾಡುವುದಕ್ಕೆ ರೈಲ್ವೆ ಇಲಾಖೆಯ ಅಭ್ಯಂತರವೇನೂ ಇಲ್ಲವೆಂದೂ, ಆದರೆ ಅವರ ಪ್ರಯಾಣದ ವೆಚ್ಚವನ್ನು ಆಯಾ ಪ್ರಾಂತ ಸರ್ಕಾರಗಳು ವಹಿಸಿಕೊಳ್ಳಬೇಕೆಂದೂ ರೈಲ್ವೆ ಉಪ ಮಂತ್ರಿ ಓ ವಿ ಅಳಗೇಶನ್‌ರವರು ತಿಳಿಸಿರುತ್ತಾರೆ

ಸರ್ಕಾರದಿಂದ ವ್ಯಾಪಾರ ಸಂಸ್ಥೆಯ ಸ್ಥಾಪನೆ

ಭಾರತ ಸರ್ಕಾರದವರು ವ್ಯಾಪಾರಿ ಸಂಸ್ಥೆಯೊಂದನ್ನು ಸ್ಥಾಪಿಸಿರುತ್ತಾರೆ. ಅದು ಖಾಸಗಿ ಲಿಮಿಟೆಡ್ ಸಂಸ್ಥೆಯಾಗಿರುವುದು ಅದಕ್ಕೆ ೧ ಕೋಟಿ ರೂ ಅಧಿಕೃತ ಬಂಡವಾಳವನ್ನು ಹಾಕಲಾಗುವುದು ೧೦೦ ರೂ ಗಳ ಲಕ್ಷ ಷೇರುಗಳು ಇರುವುವು ೫ ಲಕ್ಷ ರೂ ಸಬ್‌ಸ್ಕ್ರೈಬ್ಡ್ ಬಂಡವಾಳವಿರುವುದು ಎಲ್ಲಾ ಷೇರುಗಳನ್ನೂ ಸರ್ಕಾರದವರೇ ಇಟ್ಟುಕೊಳ್ಳುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಸಿತಾರ್ ೭ ೧೫ ಎ ಎಂ ಶಾರದಮ್ಮ ರಾಮಾರಾವ್ ಕನ್ನಡ ಗೀತೆ ೮ ೦೫ ರಿಕಾರ್ಡ್. ಮಧ್ಯಾಹ್ನ ೧೨ ಎನ್ ನಾಗರತ್ನಮ್ಮ-ಸಂಗೀತ ೧೨-೪೦ ಎ ಎಸ್ ಶಾಸ್ತ್ರಿ ವೀಣೆ. ೧ ರಿಕಾರ್ಡ್ ೧ ೫೦ ಸಿತಾರ್ ೨ ಪ್ರೋಗ್ರಾಂ-ಬೆಳಗಿನಿಂದ ಸಂಜೆ ೬.೪೦ ವೀಣೆ, ೬ ೧೫ ಜನಪದ ಗೀತೆ. ೭ ೪೦ ಮತ್ತು ೮ ಶಿವಪ್ರಸಾದ್-ತುಳಸಿದಾಸ್ ರಾಮಾಯಣ ಪಾಠನ ೮-೧೫ ಶ್ರೀಮತಿ ವಿಮಲ ಸಿ ಡಬ್ಲ್ಯು ಸುಭಾನ್ ಸಿಂಗರಿಂದ, ೮ ೪೦ ಸಂಗೀತ ೯-೪೦ ವಿಜಯಲಕ್ಷ್ಮಿ ನೃತ್ಯ ದರ್ಶನ ೧೧ ಗೋಪೀನಾಥ್-ಕಥಾ ಕಾಲಕ್ಷೇಪ.

Poly

BRONKOL

For ASTHMA

&

BRONCHITIS

Sole Distributors for Mysore State and Coorg

SATHYA & CO,

Chemists & Druggists

7/11 A. S Street

BANGALORE-2

೨೧ ವರ್ಷದ ತರುಣಿಯೊಡನೆ ಜಫರುಲ್ಲಾರವರ ವಿವಾಹ

ಪಾಕಿಸ್ತಾನದ ಮಾಜಿ ವಿದೇಶಾಂಗ ಮಂತ್ರಿಯೂ, ಅಂತರ ರಾಷ್ಟ್ರೀಯ ನ್ಯಾಯಾಲಯದ ಜಡ್ಜರೂ ಆದ ಚೌಧುರಿ ಜಫರುಲ್ಲಾರವರು ಬುಷ್ರಾ ರಬ್ಬಾನಿ ಎಂಬ ೨೧ ವರ್ಷದ ಪ್ಯಾಲಸ್ಟೈನಿನ ತರುಣಿಯನ್ನು ವಿವಾಹವಾಗಿರುತ್ತಾರೆ. ಜಫರುಲ್ಲಾರವರಿಗೆ ಈಗ ೬೩ ವರ್ಷ ವಯಸ್ಸು. ಅವರು ಇದಕ್ಕೆ ಹಿಂದೆ ಪಾಕಿಸ್ತಾನದ ಮಹಿಳೆಯೊಬ್ಬಳನ್ನು ವಿವಾಹವಾಗಿ ಅನೇಕ ಮಕ್ಕಳನ್ನು ಪಡೆದಿರುವರು

ಕೈ ಗಾಡಿ ಎಳೆಯುವವನಿಗೆ ವಿನೋಬಾರವರ ಸಹಾಯ

ಮದರಾಸಿನಲ್ಲಿ ಮೊನ್ನೆ ವಿನೋಬಾ ಭಾವೆಯವರು ತಮ್ಮ ಶಿಷ್ಯರೊಡನೆ ಹೋಗುತ್ತಿದ್ದಾಗ ಒಬ್ಬ ಕೈಗಾಡಿಯವನು ಭರ್ತಿ ತುಂಬಿದ್ದ ಗಾಡಿಯನ್ನು ಕಷ್ಟಪಟ್ಟು ಎಳೆದುಕೊಂಡುಹೋಗುತ್ತಿದ್ದುದನ್ನು ನೋಡಿ ಮರುಕಗೊಂಡು ತಾವೂ ಸ್ವಲ್ಪ ದೂರ ಅದನ್ನು ಎಳೆದರು ಗಾಡಿಯ ಮೇಲೆ ಸಾಮಾನುಗಳು ಇದ್ದುದಲ್ಲದೆ ಹಲವು ಜನರೂ ಕುಳಿತಿದ್ದರು.

ಆನಂದಕ್ಕೆ

ಆರೋಗ್ಯವೇ ಕೀಲಿ ಕೈ

ಒಂಭತ್ತು ಅಮೂಲ್ಯ ಹರಳುಗಳಲ್ಲಿನ ಸ್ವಭಾವಜನ್ಯ ಗುಣವನ್ನು ಪ್ರಯೋಗ ಮಾಡುವುದರಿಂದ ಉತ್ಪತ್ತಿಯಾದ ಮಹಾಶಕ್ತಿಯು ತತ್ವಗಳನ್ನೊಳಗೊಂಡು ವ್ಯಾಧಿ ನಿವಾರಿಸಬಲ್ಲ ಬಲಯುತ ಶಕ್ತಿ ಧಾತುಗಳಿಂದ ಇದು ಕೂಡಿದೆಯೆಂಬುದನ್ನು ಕಂಡುಹಿಡಿದಿರುವುದೇ ಆಯುರ್ವೇದ ಶಾಸ್ತ್ರದಮತ ಸಾಧನೆ

ಪಂಡಿತ ದುರ್ಗಾದತ್ತ ಶರ್ಮಾ

ವೈದ್ಯ ವಾಚಸ್ಪತಿ

ಹೊಸ ಔಷಧಿ ಕಂಡುಹಿಡಿಯುವುದರಲ್ಲಿ

ಜಗದ್ವಿಖ್ಯಾತರಾಗಿರುವ ಇವರು

ವಿಶ್ವಕ್ಕೆ ನೀಡಿರುವ

ನವರತ್ನಕಲ್ಪ

ಒಂಭತ್ತು ಅಮೂಲ್ಯ ಹರಳುಗಳ ಸಂಯೋಗ, ವಜ್ರ, ಕೆಂಪು ಮುತ್ತು ಹವಳ, ಪಚ್ಚೆ, ಗೋಮೇಧಿಕ, ಕಂಪುಹನ್ನ, ನೀಲ ಮತ್ತು ಪ್ರಶಸ್ತಿಕರ ಸಂಪೂರ್ಣವಾಗಿ ವಿಷದಿಂದ ದೂರವಾದ ಮತ್ತು ಶೀಘ್ರ ಪರಿಣಾಮಕಾರಿ ಔಷಧ. ಎಲ್ಲ ವಯಸ್ಸಿನವರಿಗೂ ಯಾವ ಋತುಮಾನದಲ್ಲೂ ಉಪಯೋಗಿಸಲು ಯೋಗ್ಯ.

ಈ ವ್ಯಾಧಿಗಳ ಚಿಕಿತ್ಸೆ ಗುಣಕಾರಿ :—

★ ನರಗಳ ದೌರ್ಬಲ್ಯ ★ ನಾಳವ್ರಣ

★ ಅಜೀರ್ಣ ರೋಗಗಳು ★ ಭಗಂಧರವ್ಯಾಧಿ

★ ಕೆಮ್ಮು ★ ಮೂಲವ್ಯಾಧಿ

★ ಎಲಿಫೆಂಟಿಯಾಸಿಸ್ ★ ಮತ್ತು ಅಸ್ತಮಾ

ಹೆಚ್ಚಿನ ಸಾಹಿತ್ಯ ಬೇಕಾದರೆ ಇವರಿಗೆ ಬರೆಯಿರಿ

NAVRATNA KALPA PHARMACY,

JULLUNDUR CITY (India)

Grams NAVRATNA Phone 401

ಒಲಂಪಿಯಾ ★

18-5-56 ರಿಂದ ಜನಭರಿತ ೩ನೇ ವಾರ

ಪ್ರತಿ ದಿನ 3 ಪ್ರದರ್ಶನಗಳು

ಸಹಸ್ರಾರು ಮಂದಿ ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿರುವ

ಎ.ವಿ.ಎಂ.ರವರ ಹಿಂದಿ ಚಿತ್ರ ★ **ಭಾಯಿ ಭಾಯಿ** ★

ಪಾತ್ರ:- ಅಶೋಕ್ ಕುಮಾರ್, ಕಿಶೋರ್ ಕುಮಾರ್, ನಿಮ್ಮಿ, ನಿರೂಪಾರಾಯ್, ಓಂಪ್ರಕಾಶ್ ಮತ್ತು ರೂಪ್ ಕುಮಾರ್

VIDYA TUTORIAL COLLEGE

Dalvoy High School Buildings, MYSORE

Record Results — **Classes Commenced**

INTER Eng, Kan, Sans, Hindi, P. C. M., P. E. M., H. E. L., H. E. G. Etc.

B A. : Eng, Kan, Sans Hindi, H. E. P., H. E. P., Etc.,

B. Sc. : Eng, Kan, Sans, Hindi, P. C. M., C. B. Z.

The best Institute for Efficient Coaching : Classes Commenced

INTER, B. A. & B. Sc.,

Ladies also Admitted . JOIN IMMEDIATELY

ಬರುವ ಭಾನುವಾರ ಮತ್ತು ಸೋಮವಾರ ಕೋಯಮುತ್ತೂರಿನಲ್ಲಿ ಅಖಿಲ ಭಾರತ ಮಾಧ್ವ ಮಹಾ ಸಮ್ಮೇಳನದ ಎರಡನೇ ಅಧಿವೇಶನ, ಮಾಧ್ವ ಮಹಾಮಂಡಲಿಯ ಸರ್ವ ಸದಸ್ಯರ ಸಭೆ ಮತ್ತು ಮಾಧ್ವ ಯುವಕ ಸಮ್ಮೇಳನಗಳು ನಡೆಯುವುವು. ೨೭ನೇ ತಾರೀಖು ಬೆಳಗ್ಗೆ ೯-೩೦ಕ್ಕೆ ಸಮ್ಮೇಳನದ ಉದ್ಘಾಟನೆಯು ಸೋಸಲೆ ಶ್ರೀ ವ್ಯಾಸರಾಜ ಮಠದ ಶ್ರೀ ಶ್ರೀ ವಿದ್ಯಾ ಪ್ರಸನ್ನ ತೀರ್ಥ ಶ್ರೀಪಾದಂಗಳವರಿಂದ ನೆರವೇರುವುದು. ಶ್ರೀ ಎನ್. ಎಸ್ ಲೋಕೂರ್‌ರವರು ಅಧ್ಯಕ್ಷತೆ ವಹಿಸುವರು. ಉಡುಪಿ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀ ಪಾದಂಗಳವರ ಭಾವಚಿತ್ರದ ಅನಾವರಣವೂ ನಡೆಯುವುದು. ಮಧ್ಯಾಹ್ನ ೩ ಘಂಟೆಗೆ ಅಖಿಲ ಭಾರತ ಮಾಧ್ವ ಮಹಾ ಮಂಡಲಿಯ ಸರ್ವ ಸದಸ್ಯರ ಸಭೆಯು ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ನಡೆವುದು. ಗೋಕರ್ಣ ಮಠಾಧೀಶರು ಸಭೆಯ ಆರಂಭೋತ್ಸವವನ್ನು ನೆರವೇರಿಸುವರು. ಸಂಜೆ ೬ ಗಂಟೆಗೆ ಮಾಧ್ವ ಯುವಕ ಸಮ್ಮೇಳನವು ಪಲಿಮಾರು ಮಠದ ಶ್ರೀ ಸ್ವಾಮಿಗಳಿಂದ ಆರಂಭಿಸಲ್ಪಡುವುದು. ರಾತ್ರಿ ೯-೩೦ಕ್ಕೆ ವೇಣುಗಾನ ಕೇಸರಿ ಪಲ್ಲಡಂ ವಿ. ಎನ್. ರಾವ್ ಮತ್ತು ವೃಂದದವರಿಂದ ವೇಣುವಾದನವು ನಡೆಯುವುದು.

೨೮ನೇ ತಾರೀಖು ಬೆಳಿಗ್ಗೆ ೯ ಗಂಟೆಗೆ ಬಹಿರಂಗ ಅಧಿವೇಶನವು ಸಮಾವೇಶವಾಗುವುದು. ಮಠಾಧೀಶರುಗಳು ಭಾಷಣ ಮಾಡುವರು. ಸಂಜೆ ೫-೧೫ಕ್ಕೆ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಶ್ರೀ ಸುಯಮೀಂದ್ರ ತೀರ್ಥ ಶ್ರೀಪಾದಂಗಳವರಿಂದ ಮುಕ್ತಾಯ ಭಾಷಣವು ನೆರವೇರುವುದು. ರಾತ್ರಿ ೯-೩೦ಕ್ಕೆ ವಿ. ವಿ. ವೇದವ್ಯಾಸರಾಯರು ಮತ್ತು ವೃಂದದವರಿಂದ ಸಂಗೀತವು ನಡೆಯುವುದು.

ಕಳ್ಳತನಕ್ಕಾಗಿ ಕೇಡಿಗೆ ೩ ವರ್ಷ ಕಠಿಣ ಸಜಾ

[illegible] ಆನಂದ ನೀಲು ಉರುಫ್ ಮೊರಿಸ್ವಾಮಿ ಎಂಬ ಕೇಡಿಯು [illegible] ಮತ್ತು ಮಂಡಿಮೊಹಲ್ಲೆಯ [illegible] ಅವರ ಮನೆಯ [illegible] ಸಾಮಾನುಗಳ ಕಳವು ಮಾಡಿದನೆಂದು [illegible] ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ನಿನ್ನೆ ಅವನಿಗೆ ಎರಡು ಅಪರಾಧಗಳಲ್ಲಿ ತಲಾ ೩ ವರ್ಷ ಕಠಿಣ ಸಜವನ್ನು ವಿಧಿಸಿ, ಎರಡು ಶಿಕ್ಷೆಗಳನ್ನೂ ಒಂದೇ ಕಾಲದಲ್ಲಿ ಅನುಭವಿಸುವಂತೆ ಆಜ್ಞೆ ಮಾಡಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮುಸ್ಲಿಂ ಸ್ತ್ರೀಯರು ಹಸ್ತಲಾಘವ ಕೊಡುವುದು ಧರ್ಮ ವಿರುದ್ಧ

ಪಾಕಿಸ್ತಾನ ಶಾಸನಸಭೆಯಲ್ಲಿ ಆಕ್ಷೇಪಣೆ

ಪಶ್ಚಿಮ ಪಾಕಿಸ್ತಾನದ ತಾತ್ಕಾಲಿಕ ಶಾಸನ ಸಭೆಯ ಮಹಿಳಾ ಸದಸ್ಯರು ಸಭಾಧ್ಯಕ್ಷರಿಗೆ ಹಸ್ತಲಾಘವ ಕೊಡುವುದು ಇಸ್ಲಾಂ ತತ್ವಕ್ಕೂ ಮತ್ತು ಪಾಕಿಸ್ತಾನದ ರಾಜ್ಯಾಂಗದ ಧ್ಯೇಯಕ್ಕೂ ವಿರೋಧವಾಗಿದೆಯೆಂದು ಪುರುಷ ಸದಸ್ಯರೊಬ್ಬರು ಎತ್ತಿದ ಆಕ್ಷೇಪಣೆಯನ್ನು ಸಭಾಧ್ಯಕ್ಷರು ತಳ್ಳಿಹಾಕಿ ಹಸ್ತಲಾಘವ ಕೊಡುವುದು ಸದಸ್ಯರ ಐಚ್ಛಿಕ ವಿಷಯವೆಂದು ತಿಳಿಸಿದರು. ನಂತರ ಅಲ್ಲಿನ ೧೦ ಜನ ಮಹಿಳಾ ಸದಸ್ಯರೂ ಸಭಾಧ್ಯಕ್ಷರಿಗೆ ಹಸ್ತಲಾಘವ ಕೊಟ್ಟರು. ಒಬ್ಬ ಸದಸ್ಯೆಯು ಉದ್ದೇಶಪೂರ್ವಕವಾಗಿಯೇ ಎರಡು ಸಾರಿ ಹಾಗೆ ಮಾಡಿದಳು. ಮಹಿಳೆಯರು ಪರದೆ ಹಾಕಿಕೊಳ್ಳದಿರುವುದು ಇಸ್ಲಾಂ ತತ್ವಕ್ಕೆ ವಿರೋಧವೆಂದು ಇನ್ನೊಬ್ಬ ಸದಸ್ಯರು ಎತ್ತಿದ ಆಕ್ಷೇಪಣೆಯನ್ನು ಸ್ತ್ರೀ ಸದಸ್ಯರು ತೀವ್ರವಾಗಿ ಪ್ರತಿಭಟಿಸಿದರು.

ರೈಲಿಗೆ ಸಿಕ್ಕಿ ಮರಣ

ನೆನ್ನೆ ಸಂಜೆ ಪರ್ಸಿಪಾಸಿನಿಂದ ಮೈಸೂರು ರೈಲ್ವೆ ನಿಲ್ದಾಣಕ್ಕೆ ಬರುತ್ತಿದ್ದ ಒಂದು ರೈಲಿಗೆ ಇಲವಾಲ ರಸ್ತೆಯ ಓವರ್ ಬ್ರಿಡ್ಜ್ ಬಳಿ ತಿರುವಿನಲ್ಲಿ ಒಬ್ಬ ಭಿಕ್ಷುಕನು ಸಿಕ್ಕಿ ಮೃತಪಟ್ಟನೆಂದು ವರದಿಯಾಗಿದೆ.

ಸಂಗೀತ

ಚಾಮುಂಡಿಪುರದ ಶ್ರೀ ಶಂಕರನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಈ ರಾತ್ರಿ ೭॥ ಗಂಟೆಗೆ ಸಂ॥ ವಿ॥ ಮಾಗಳ್ ಕಮಲಮ್ಮನವರ ಸಂಗೀತವು ಸೂಕ್ತ ಪಕ್ಕ ವಾದ್ಯಗಳೊಡನೆ ಏರ್ಪಾಡಾಗಿದೆ.

ಶನಿ ಮಹಾತ್ಮೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ನಾಳೆ ಮಧ್ಯಾಹ್ನ ೪ ಗಂಟೆಗೆ ಶ್ರೀ ಮಾಯಿಗೌಡರು ಮತ್ತು ಹಿರಣ್ಣಯ್ಯನವರಿಂದ ಶನಿಮಹಾತ್ಮೆ ಪುರಾಣವು ಯಕ್ಷಗಾನ ರೂಪದಲ್ಲಿ ನಡೆಯುತ್ತದೆ.

ನೂತನ ಸಂಸ್ಥಾನಕ್ಕೆ ಒಂದೇ ಪ್ರದೇಶ ಕಾಂಗ್ರೆಸ್ ಸಮಿತಿ

ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಸಿ. ಜಿ. ಅಂಬಲಿಯವರ ಹೇಳಿಕೆ

ಮೈಸೂರು ೨೫

ಸ್ಥಳೀಯ ವೀರಶೈವ ಸಂಘದವರು ತಮ್ಮ ಗೌರವಾರ್ಥವಾಗಿ ಮೊನ್ನೆ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಸಿ.ಜಿ. ಅಂಬಲಿಯವರು ಭಾಷಣ ಮಾಡಿ, ಕರ್ನಾಟಕ ಪ್ರಾಂತ ರಚನೆಯ ಪೂರ್ವಭಾವಿಯಾಗಿ ಕನ್ನಡಿಗರು ಹೆಚ್ಚಿನ ಜವಾಬ್ದಾರಿಯನ್ನು ನಿರ್ವಹಿಸಬೇಕಾಗಿರುವುದೆಂದು ಹೇಳಿದರು. ಮೈಸೂರಿಗೆ ಸೇರುವ ಇತರ ಕನ್ನಡ ಪ್ರದೇಶಗಳ ಸಂಪತ್ತಿನ ಬಗ್ಗೆ ಮಾತನಾಡಿ, ಅಲ್ಲಿ ಚಿನ್ನ ಮುಂತಾದ ಖನಿಜ ಸಂಪತ್ತು ಹೇರಳವಾಗಿ ದೊರಕುವುದೆಂದೂ, ಹೆಚ್ಚು ಅರಣ್ಯ ಸಂಪತ್ತು ಇರುವುದೆಂದೂ ಸಹ ಅವರು ಸೂಚಿಸಿದರು.

ಹೊಸ ಸಂಸ್ಥಾನದ ಹೆಸರಿನ ವಿಷಯವನ್ನು ಪ್ರಸ್ತಾಪಿಸಿ ಕರ್ನಾಟಕವೆಂದು ಕರೆಯುವುದೇ ಉಚಿತವೆಂದು ಅವರು ಹೇಳಿದರು. ಮೈಸೂರಿನ ಮಹಾರಾಜರನ್ನು ಕರ್ನಾಟಕ ರತ್ನ ಸಿಂಹಾಸನಾಧೀಶ್ವರರೆಂದು ಕರೆಯಲಾಗುತ್ತಿರುವುದನ್ನು ಒತ್ತಿ ಹೇಳಿದರು.

ಕರ್ನಾಟಕಕ್ಕೆಲ್ಲಾ ಒಂದೇ ಕಾಂಗ್ರೆಸ್ ಸಮಿತಿಯು ಇರಬೇಕೆಂದು ಅವರು ಸಲಹೆ ಮಾಡಿದರು. ದಕ್ಷಿಣ ಪ್ರದೇಶ ಪ್ರಾಂತದ ರಚನೆಯನ್ನು ಪ್ರಸ್ತಾಪಿಸಿ, ಕರ್ನಾಟಕದಲ್ಲಿ ಮೈಸೂರಿನ ಐಕ್ಯಕ್ಕೆ ವಿರೋಧ ಸೂಚಿಸಿದವರು ದಕ್ಷಿಣ ಪ್ರದೇಶದ ರಚನೆಯನ್ನು ಸ್ವಾಗತಿಸುತ್ತಿರುವುದರ ಬಗ್ಗೆ ಆಶ್ಚರ್ಯವನ್ನು ವ್ಯಕ್ತಪಡಿಸಿದರು.

ಸಭೆಗೆ ಆಗಮಿಸಿದ್ದ ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರು ಮಾತನಾಡಿ, ನೂತನ ಸಂಸ್ಥಾನದ ನಾನಾ ಸಮಸ್ಯೆಗಳನ್ನು ಕನ್ನಡಿಗರು ಬಗೆಹರಿಸಬೇಕಾಗಿರುವುದೆಂದೂ, ಪ್ರಜೆಗಳು ಮುಖಂಡರಿಂದ ಸರಿಯಾದ ಮಾರ್ಗದರ್ಶನವನ್ನು ನಿರೀಕ್ಷಿಸುತ್ತಿರುವರೆಂದೂ ತಿಳಿಸಿದರು.

ಸಂಘದ ಅಧ್ಯಕ್ಷ ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು.

ಸತ್ತುಹೋದನೆಂದು ಭಾವಿಸಲಾದ ಮಗ ಮನೆಗೆ ವಾಪಸು

ಸತ್ತುಹೋದನೆಂದು ಭಾವಿಸಲ್ಪಟ್ಟಿದ್ದ ಹುಡುಗನೊಬ್ಬನು ಜೀವಂತನಾಗಿ ತನ್ನ ಮನೆಗೆ ಹಿಂದಿರುಗಿದ ಸುದ್ದಿಯೊಂದು ತಿರುಪತಿಯಲ್ಲಿ ವರದಿಯಾಗಿದೆ. ಕೆಲವು ದಿನಗಳ ಹಿಂದೆ ಹುಡುಗನು ಪತ್ತೆಯಿಲ್ಲವಾಗಿದ್ದನೆಂದೂ, ಸ್ಥಳೀಯ ಕೆರೆಯೊಂದರಲ್ಲಿ ತೇಲುತ್ತಿದ್ದ ಶವವನ್ನು ನೋಡಿ ಹುಡುಗನ ತಂದೆಯು ತನ್ನ ಮಗನೇ ಸತ್ತಿರಬಹುದೆಂದು ಊಹಿಸಿ ಅಂತ್ಯಕ್ರಿಯೆ ನಡೆಸಿದನೆಂದೂ, ನಂತರ ಮಗನು ವಾಪಸು ಬಂದು ಅವರೆಲ್ಲರನ್ನೂ ಬೆರಗುಗೊಳಿಸಿದನೆಂದೂ ಹೇಳಲಾಗಿದೆ.

SREE GANESHA TALKIES

From 26—5-56

A picture which has attracted un-precedented crowds and run for several weeks

(Along with this programme "Bharata Natyam" a Documentary by the Govt. of India with Kumari Kamala's Dance will also be shown)

Grama Vidyodaya Sangha,
T. NARASIPUR

TENDER NOTIFICATION

Sealed tenders are invited from recognised contractors for the construction of the proposed General Hostel Building at an estimated cost of about Rs 1,50,000

The earnest money fixed for the above work is Rs. 1,500, which should be paid to the Secretary, Grama Vidyodaya Sangha, T. Narasipur, and the receipt obtained therefor should accompany the tender. No cheques or postal orders will be accepted for earnest money. 2 sets of tender papers consisting of bill of quantities, specifications, general conditions of contract etc. and 1 set of plan can be obtained from the undersigned on payment of Rs 50. Last date for receipt of tenders by the undersigned is Monday the 4th June 1956 at 5.00 P.M. in the Vidyodaya High School, T. Narasipur, Mysore District.

The tenders will be opened at the same place at 5-15 P.M. in the presence of the tenderers present

M. C. SIVANANDA SARMA,
Secretary.

ಚಾಮುಂಡೇಶ್ವರಿ
ಟಾಕೀಸ್

25-5-56 ರಿಂದ: ಪ್ರತಿದಿನ 3 ಪ್ರದರ್ಶನಗಳು

ಗುಲೇಬಕಾವಲಿ
(ತಮಿಳು)

ಪಾತ್ರ:— ಎಂ. ಜಿ. ರಾಮಚಂದ್ರ, ಟಿ ಆರ್. ರಾಜಕುಮಾರಿ, ಜಿ. ವರಲಕ್ಷ್ಮಿ, ರಾಜಾ ಸುಲೋಚನ, ತಂಗವೇಲು ಮುಂತಾದವರು.

ಶ್ರೀ ಚಾಮುಂಡೇಶ್ವರಿ ಕಾರ್ಪೊರೇಷನ್

D. No. 611. II ರಾಮಾನುಜ ಅಗ್ರಹಾರ, ಚಿಕ್ಕ ಮೊಹಲ್ಲಾ, ಮೈಸೂರು

ಮೇಲ್ಕಂಡ ಕಾರ್ಪೊರೇಷನ್ನಲ್ಲಿ ಪ್ರತಿ ದಿನ 300 ರೂ. ಮತ್ತು 150 ರೂ.ಗಳ ಚೀಟಿಗಳು ಹರಾಜು ಹಾಕಲ್ಪಡುತ್ತವೆ. ಚೀಟಿ ಒಂದಕ್ಕೆ 1 ರೂಪಾಯಿ ಮತ್ತು 8 ಆಣೆ. ಇಷ್ಟವುಳ್ಳವರು ಕೂಡಲೆ ಮೆಂಬರಾಗಬೇಕು. ಹೆಚ್ಚಿನ ವಿಷಯಗಳಿಗೆ ಆಫೀಸಿನೊಡನೆ ವ್ಯವಹರಿಸಿ

ಸೂಚನೆ:— ಮೇಲ್ಕಂಡ ಕಾರ್ಪೊರೇಷನ್ನಿಗೆ ಕಮಿಷನ್ ಮತ್ತು ಸಂಬಳದ ಮೇಲೆ ಏಜೆಂಟರುಗಳು ಬೇಕಾಗಿದ್ದಾರೆ.

ಮ್ಯಾನೇಜರ್

ಲಕ್ಷ್ಮಿ ★ 24-5-56 ರಿಂದ ಜನಭರಿತ 7ನೇ ವಾರ ದಿನವೂ 3 ಪ್ರದರ್ಶನಗಳು

ಮಧುರೈ ವೀರನ್
(ತಮಿಳು)

ಪಾತ್ರ :- ಎಂ. ಜಿ. ರಾಮಚಂದ್ರ, ಟಿ. ಎಸ್ ಬಾಲಯ್ಯ, ಭಾನುಮತಿ, ಲಲಿತ-ಪದ್ಮಿನಿ-ರಾಗಿಣಿ, ಎನ್. ಎಸ್. ಕೃಷ್ಣನ್-ಟಿ. ಎ. ಮಧುರಂ ಮುಂತಾದವರು

Edited, Printed and Published by A. R. Nagarajan at Sadhvi Press D. Subbiah Road, Mysore

SARADA VILAS COLLEGE
Inter Tutorial Section
Classes in full swing
JOIN AT ONCE

ಹಾಸಿಗೆ-ದಿಂಬು

[illegible]

ಬಾಪೂಸಾಹೇಬ್ ಕಂಪನಿ,

[illegible], ಮೈಸೂರು

ಪ್ರಭುದೇವಾ ಥಿಯೇಟರ್
(ಸದ್ವಾ ಟಾಕೀಸ್)

25—5—56ನೇ : ಶುಕ್ರವಾರದಿಂದ : ಅನೋಖ ಪ್ರಾರಂಭ

ಸಿ. ಐ. ಡಿ. ★ C. I. D.

ಕನ್ನಡ ಚಿತ್ರ ಪಾತ್ರ:- ಪ್ರೇಂ ನಜೀರ್, ಕುಮಾರಿ, ಎಸ್.ಪಿ. ಪಿಳ್ಳೈ, ಟಿ. ಎಸ್. ಮುತ್ತಯ್ಯ ಮುಂತಾದವರು

SRI GAYATHRI TALKIES Grand Gala Opening : From To-day : For 4 Days

THE BAREFOOT **CONTESSA** ★ Starring :- Ava Gardner & Humphrey Bogart (Color by Technicolor)

Morning Shows : On Saturday and Sunday ★ **RHAPSODY** ★ Starring :- Elizabeth Taylor

ರಿಜಿಸ್ಟರ್ ನಂ. 792

ಚಂದಾ ದರ

ವಿದೇಶಗಳಿಗೆ ತಿಂಗಳಿಗೆ ಎಂಟಾಣೆ

ಒಂದೆ ಮೂರು ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಕೃತಿಯ ಪ್ರತಿನಿಧಿಯಾಗಿ ಪ್ರಕಾಶವಾಗುವ

ಸಾಧ್ವಿ ದಿನ ಪತ್ರಿಕೆಗೆ

ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಸಾಧ್ವಿ

ಪುಟ: ೧೪] SADHVI : SATURDAY 26-5-1956 ಮೈಸೂರು : ಶನಿವಾರ ೨೬-೫-೧೯೫೬ [ಸಂಚಿಕೆ: ೨೪೪

ಆಗ್ನೇಯ ಏಷ್ಯಾ ಕೂಟಕ್ಕೆ ಜಪಾನ್ ರಾಷ್ಟ್ರ ಸೇರುವುದಿಲ್ಲ

ಕೆ.ವಿ. ಪುಟ್ಟಪ್ಪ ಮತ್ತು ಠಾಕೂರ್‌ರವರಿಗೆ ಗೌರವ ಡಾ|| ಪ್ರಶಸ್ತಿ

ವಿಶ್ವವಿದ್ಯಾಲಯದ ವಿಶೇಷ ಘಟಿಕೋತ್ಸವ

ಮೈಸೂರು ೨೫.

ಕೇಂದ್ರ ಸರ್ಕಾರದ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಲಿಯ ಅಧ್ಯಕ್ಷರಾದ ಪ್ರೊಫೆಸರ್ ಎಂ. ಎಸ್. ಠಾಕೂರ್‌ರವರಿಗೆ ಡಾಕ್ಟರ್ ಆಫ್ ಸೈನ್ಸ್ ಮತ್ತು ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ವಿ. ಪುಟ್ಟಪ್ಪನವರಿಗೆ ಡಾಕ್ಟರ್ ಆಫ್ ಲೆಟರ್ಸ್ ಎಂಬ ಗೌರವ ಪ್ರಶಸ್ತಿಗಳನ್ನು ನೆನ್ನೆ ಕ್ರಾಫರ್ಡ್ ಭವನದಲ್ಲಿ ನಡೆದ ವಿಶ್ವವಿದ್ಯಾಲಯದ ವಿಶೇಷ ಘಟಿಕೋತ್ಸವದಲ್ಲಿ ಕೊಡಲಾಯಿತು. ಛಾನ್ಸಲರಾದ ಮೈಸೂರಿನ ರಾಜಪ್ರಮುಖರು ಅಧ್ಯಕ್ಷತೆ ವಹಿಸಿದ್ದರು.

ಉಪ ಛಾನ್ಸಲರ ಪರಿಚಯ ಭಾಷಣ

ವೈಸ್ ಛಾನ್ಸಲರ್ ಶ್ರೀ ವಿ. ಎಲ್. ಡಿಸೌಜಾರವರು ಪ್ರೊ|| ಠಾಕೂರ್‌ರವರ ಪರಿಚಯ ಮಾಡಿಕೊಡುತ್ತಾ, ಅವರು ಶ್ರೇಷ್ಠ ವರ್ಗದ ವಿಜ್ಞಾನಿಗಳಲ್ಲದೆ ಉತ್ತಮ ಆಡಳಿತಗಾರರೂ ಮತ್ತು ದೇಶಾಭಿಮಾನಿಗಳೂ ಆಗಿರುವರೆಂದು ನುಡಿದರು. ಪ್ರೊ|| ಪುಟ್ಟಪ್ಪನವರು ೩೦ ವರ್ಷಗಳಿಂದಲೂ ಕನ್ನಡ ಸಾಹಿತ್ಯಕ್ಕಾಗಿ ಸೇವೆ ಸಲ್ಲಿಸುತ್ತಿರುವರೆಂದೂ ಕವಿ, ವಿಮರ್ಶಕ ಮತ್ತು ಅಧ್ಯಾಪಕರಾಗಿ ಅವರು ತಮ್ಮ ಪ್ರತಿಭೆಯನ್ನು ಪ್ರಕಾಶಪಡಿಸಿರುವರೆಂದು ಶ್ರೀ ಡಿಸೌಜಾರವರು ಹೇಳಿದರು. ರಾಮಾಯಣ ದರ್ಶನಕ್ಕೆ ಸಾಹಿತ್ಯ ಅಕೆಡೆಮಿಯವರು ಬಹುಮಾನವಿತ್ತಿರುವರೆಂದೂ, ಆ ಗ್ರಂಥವು ಕರ್ನಾಟಕದ ಜನರಲ್ಲಿ ಚಿರಸ್ಮರಣೀಯವಾಗಿರುವುದೆಂದೂ ಹೇಳಿದರು.

ಪ್ರೊ|| ಠಾಕೂರ್‌ರವರ ಉತ್ತರ

ಪ್ರೊಫೆಸರ್ ಠಾಕೂರ್‌ರವರು ಮಾತನಾಡಿ, ವಿಜ್ಞಾನ ಮತ್ತು ತಾಂತ್ರಿಕ ವಿದ್ಯೆಯನ್ನು ಸಮಾಜದ ಉಪಯೋಗಕ್ಕಾಗಿ ಕಾರ್ಯಗತ ಮಾಡುವವರು ಅನೇಕ ವಿಷಯಗಳನ್ನು ಗಮನಿಸಬೇಕಾಗಿರುವುದಲ್ಲದೆ, ನೈತಿಕ ಮತ್ತು ಉತ್ತಮ ಜೀವನದ ದೃಷ್ಟಿಯನ್ನು ಇಟ್ಟುಕೊಳ್ಳಬೇಕಾಗುವುದೆಂದೂ ತಿಳಿಸಿದರು. ಇಂದಿನ ಸಂದಿಗ್ಧ ಪರಿಸ್ಥಿತಿಯ ಕಾಲದಲ್ಲಿ ಬುದ್ಧನ ಉಪದೇಶದ ಪ್ರಯೋಜನ ಪಡೆಯಬೇಕೆಂದೂ ಸೂಚಿಸಿದರು.

ಕು. ವೆಂ. ಪು.ರವರ ಕೃತಜ್ಞತೆ

ಪ್ರೊಫೆಸರ್ ಪುಟ್ಟಪ್ಪನವರು ಕನ್ನಡದಲ್ಲಿ ಭಾಷಣ ಮಾಡಿ ಗೌರವ ಪ್ರಶಸ್ತಿಗಾಗಿ ಕೃತಜ್ಞತೆಯನ್ನು ಸೂಚಿಸಿದರು. ಘಟಿಕೋತ್ಸವದ ವೇಳೆ ಕನ್ನಡ ಭಾಷೆಯನ್ನು ಉಪಯೋಗಿಸುತ್ತಿರುವುದು ಇದೇ ಮೊದಲು. ಅವರ ಭಾಷಣವು ಈ ರೀತಿ ಇದೆ:—

ಸ್ವಾತಂತ್ರ್ಯಾನಂತರ ಭರತಖಂಡವು ಸ್ವಾಧಿಸಿರುವ ಮತ್ತು ಸಾಧಿಸುತ್ತಿರುವ ಹಲವಾರು ಪ್ರಮುಖ ವಿಷಯಗಳಲ್ಲಿ ಸಂಸ್ಕೃತಿಯ ಪುನರುದ್ಧಾರವೂ ಒಂದು. ಅನ್ನ ಕ್ಷೇಮ, ವಸನ ಕ್ಷೇಮಗಳಷ್ಟೇ – ಒಂದು ರೀತಿಯಾಗಿ ಅನ್ನ ಕ್ಷೇಮ ರಕ್ಷಣೆ ಅತ್ಯಂತಾವಶ್ಯಕ. ನಮ್ಮ ಜೀವನವು ಬಹಿರ್ಮುಖವಾಗಿ, ಕರ್ಮಮಯವಾಗಿ, ಪರಿಪೂರ್ಣವಾಗಿ ಮುಂದುವರಿಯಬೇಕಾದರೆ ಅನ್ನಮಯ ಪ್ರಾಣಮಯ ಕೋಶಗಳಿಂದ ಮನೋಮಯ ವಿಜ್ಞಾನಮಯ ಕೋಶಗಳ ವರೆಗಿನ ಎಲ್ಲ ಸಾಧನೆಯೂ ಅತ್ಯವಶ್ಯ.

ಸಂಸ್ಕೃತಿಯ ವಿಕಾಸ ಪ್ರಕಾರಗಳಿಗೆ ಪ್ರಚಾರ ಪ್ರಕಾರಗಳಿಗೆ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳೆರಡೂ ಜೊತೆಯಾಗಿ ಶ್ರದ್ಧಾಪೂರ್ವಕವಾಗಿ ದುಡಿಯುತ್ತಿವೆ. ಸಂಸ್ಕೃತಿಯ ಅಸ್ತಿತ್ವಕ್ಕೂ ಅದರ ವಿಕಾಸಕ್ಕೂ ವಿದ್ಯೆಯೇ ಮೂಲ ಮತ್ತು ಅನಿವಾರ್ಯವಾದ ಸಾಧನ. ಶಾಲಾ ಕಾಲೇಜುಗಳನ್ನು ಅಧಿಕಗೊಳಿಸುವುದು ಮಾತ್ರವಲ್ಲ. ವಯಸ್ಕರ ಶಿಕ್ಷಣವನ್ನು ವಿಸ್ತರಗೊಳಿಸುವುದು ಮಾತ್ರವಲ್ಲ, ಶಿಕ್ಷಣ ಪದ್ಧತಿಯಲ್ಲಿ ಕಾಣುವ ಅಸಮರ್ಪಕತೆಯನ್ನು ಹೋಗಲಾಡಿಸಿ ಸಮಗ್ರವೂ, ಸಮರ್ಪಕವೂ, ಪ್ರಯೋಜನಕಾರಿಯೂ ಆದ ಶಿಕ್ಷಣ ಸರ್ವರಿಗೂ ಒದಗುವಂತೆ ಅದನ್ನು ಸರ್ಕಾರದವರು ಪುನರ್ವ್ಯವಸ್ಥೆಗೊಳಿಸುತ್ತಿದ್ದಾರೆ.

ಶಿಕ್ಷಣ ವ್ಯವಸ್ಥೆಯೊಂದಕ್ಕೊಡನೆ ಶಿಕ್ಷಣ ಮಾಧ್ಯಮದ ಸಮಸ್ಯೆಯು ಪ್ರಧಾನವಾಗಿ ಎದ್ದು ಕಾಣುತ್ತದೆ. ನಮ್ಮ ಶಿಕ್ಷಣ ಪದ್ಧತಿಯು ಸಮರ್ಪಕವಾಗಲು ಆಯಾಯ ದೇಶ ಭಾಷೆಗಳು ಶಿಕ್ಷಣ ಮಾಧ್ಯಮವಾಗಬೇಕು. ಅನೇಕ ಪ್ರಾಂತಗಳಲ್ಲಿ ಸೆಕೆಂಡರಿ ವರ್ಗದ ವರೆಗೆ ದೇಶ ಭಾಷೆಗಳೇ ಶಿಕ್ಷಣ ಮಾಧ್ಯಮವಾಗಿವೆ. ನಾಡು ಮತ್ತು ಜನಹಿತಕ್ಕಾಗಿ ಇದು ಅವಶ್ಯಕ. ಇದರಿಂದ ವಿಶ್ವವಿದ್ಯಾಲಯದ ಜ್ಞಾನ ಜನಸಾಮಾನ್ಯರಿಗೆ ಸುಲಭವಾಗಲೂ, ಜನತಾ ಶಕ್ತಿ ವಿಶ್ವವಿದ್ಯಾಲಯದೊಳಗೆ ಪ್ರವಹಿಸಲೂ ಆ ಮೂಲಕ ಜನತೆಗೂ ವಿಶ್ವವಿದ್ಯಾಲಯಕ್ಕೂ ಗಾಢವಾದ ಸಂಪರ್ಕ ಏರ್ಪಟ್ಟು ಅಖಂಡ ಸಂಪೂರ್ಣತೆಯನ್ನು ಸಾಧಿಸಲೂ ಅನುಕೂಲವಾಗುತ್ತದೆ. ಇಲ್ಲವಾದರೆ ಈ ಎರಡು ಶಕ್ತಿಗಳೂ ಖಂಡಖಂಡವಾಗಿ ಉಳಿದು ಅನೇಕ ಅಪಾಯಗಳಿಗೆ ಕಾರಣವಾಗಬಹುದು. ಈ ಭಿನ್ನತೆಯನ್ನಳಿಸುವುದು ಸರ್ಕಾರದ ಧ್ಯೇಯವಾಗಿರಬೇಕು. ಭಾಷೆಯು ಈ ಧ್ಯೇಯವನ್ನು ಸಾಧಿಸುತ್ತದೆ.

ದೇಶಭಾಷಾ ಮಾಧ್ಯಮದಿಂದ ಶಿಕ್ಷಣವು ಸುಲಭವೂ, ಸರಳವೂ ಮತ್ತು ಪೂರ್ಣಫಲದಾಯಕವೂ ಆಗುತ್ತದೆ; ವಿದ್ಯಾರ್ಥಿಯ ಶ್ರಮ ಕಡಿಮೆಯಾಗುತ್ತದೆ, ಜ್ಞಾನ ಹೆಚ್ಚುತ್ತದೆ, ಖರ್ಚು ಮಿತವಾಗುತ್ತದೆ. ವಿದೇಶಗಳಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುವುದೇ ಕಡಿಮೆಯೆಂದು ಹೇಳುತ್ತಾರೆ. ಇದರಿಂದ ಅವರು ಮಾತ್ರ ಮೇಧಾವಿಗಳು, ನಮ್ಮವರು ಬುದ್ಧಿಹೀನರೆಂದು ಭಾವಿಸಲಾಗದು. ಅವರಲ್ಲಿ ಶಿಕ್ಷಣಾನುಕೂಲಗಳು ತುಂಬ ಇವೆ. ನಮ್ಮಲ್ಲಿಲ್ಲ. ಆ ಶಿಕ್ಷಣಾನುಕೂಲಗಳಲ್ಲಿ ದೇಶಭಾಷಾ ಮಾಧ್ಯಮವೂ ಒಂದೆಂಬುದನ್ನು ಮರೆಯಲಾಗದು.

ಇದರಿಂದ ಬೇರೆ ಭಾಷೆಗಳ ಉಪಯುಕ್ತತೆಯನ್ನಾಗಲೀ ಅವಶ್ಯಕತೆಯನ್ನಾಗಲಿ ನಿರ್ಲಕ್ಷಿಸಿದಂತಾಗುವುದಿಲ್ಲ. ನಮಗೆ ಪ್ರಪಂಚದ ಸಂಪರ್ಕ ಮತ್ತು ಪ್ರಪಂಚದ ಜ್ಞಾನ ಬೇಕೇಬೇಕು. ಅದಕ್ಕಾಗಿ ಪ್ರಪಂಚ ಸಾಧಾರಣವಾದೊಂದು ಭಾಷೆ ಬೇಕಾಗುತ್ತದೆ. ಭರತಖಂಡದ ಬೇರೆಬೇರೆ ಪ್ರಾಂತಗಳ ಅಂತರಾಷ್ಟ್ರೀಯ ವ್ಯವಹಾರ ಮತ್ತು ಪರಸ್ಪರ ಸಂಬಂಧ ಸಂಪರ್ಕಗಳಿಗಾಗಿ ಒಂದು ಸರ್ವಸಾಧಾರಣವಾದ ಭಾರತೀಯ ಭಾಷೆ ಬೇಕಾಗುತ್ತದೆ. ಇವೆರಡರ ಜೊತೆಯಲ್ಲಿ, ಸಾಮಾನ್ಯ ಜನತೆಯಲ್ಲಿ ವಿದ್ಯೆ ಬುದ್ಧಿ ಪ್ರಬುದ್ಧವಾಗಬೇಕಾದರೆ ಪ್ರಾದೇಶಿಕ ಭಾಷೆಗಳೇ ಬೇಕು.

ಭರತಖಂಡದ ಕೆಲವು ವಿಶ್ವವಿದ್ಯಾನಿಲಯಗಳಲ್ಲಿ ಈಗಾಗಲೇ ದೇಶಭಾಷಾ ಮಾಧ್ಯಮ ಕಾರ್ಯಗತವಾಗಿದೆ. ಮೈಸೂರು ವಿಶ್ವವಿದ್ಯಾನಿಲಯವೂ ಆ ದಿಕ್ಕಿಗೆ ಮೊದಲ ಹೆಜ್ಜೆ ಇಟ್ಟಿದೆ.

ಪ್ರಾದೇಶಿಕತೆ ಎಂಬುದು ಸಂಕುಚಿತ ಭಾವನೆಯಾಗದೆ ವಿಶ್ವ ವೈಶಾಲ್ಯತೆಗೆ ಅವಿರುದ್ಧವಾಗಿ ಇರಬೇಕು. ಪ್ರಪಂಚ ಜೀವನ ಅನೇಕತೆಯಿಂದ ಏಕತೆಯ ಕಡೆಗೆ ಚಲಿಸುತ್ತಿದೆ–ಅನೇಕತೆಯನ್ನು ನಾಶಗೊಳಿಸುವ ಏಕತೆಯ ಕಡೆಗಲ್ಲ; ಅನೇಕತೆಯನ್ನು ಸಮನ್ವಯಗೊಳಿಸುವ ಏಕತೆಯ ಕಡೆಗೆ. ಉಗ್ರ ಪ್ರಾಂತೀಯತೆಯ ಸ್ವಾರ್ಥತೆ ಪ್ರಪ್ರತಿಕ್ರಿಯೆಗಳು ರಾಷ್ಟ್ರೀಯತೆಯ ಪ್ರಜ್ಞಾತೀತ ಸ್ತರದಲ್ಲಿ, ಉಗ್ರ ರಾಷ್ಟ್ರೀಯತೆಯ ಸಂಕುಚಿತ ಭಾವನೆಗಳು ಅಂತರರಾಷ್ಟ್ರೀಯತೆಯ ವಿಶಾಲಭಾವನೆಯಲ್ಲಿ ಲೀನವಾದ ಹೊರತು ಕ್ಷೇಮವಿಲ್ಲ.

ದೇಶಭಾಷಾ ಮಾಧ್ಯಮದ ಅನುಕೂಲ ಪ್ರಾಯೋಗದಿಂದ ರಾಷ್ಟ್ರದ ಕಲ್ಯಾಣಕ್ಕೆ ಭಂಗಬರದಾಗದು. ಹಾಗೆಯೆ ರಾಷ್ಟ್ರಕಲ್ಯಾಣವೆಂಬ ವಿಶಾಲತರಭಾವನೆಯ ನೆಪದಲ್ಲಿ ನಮ್ಮ ಸ್ವತಂತ್ರ ದೇಶದ ಮಕ್ಕಳ ಜನತೆಯ ಅಭ್ಯುದಯದ ವಿಷಯದಲ್ಲಿ ನಾವು ಉದಾಸೀನರಾಗಲೂ ಬಾರದು. ಯಾವ ವಿಭಾಗವಲ್ಲೂ ದೇಶನ್ನದ ಎಲ್ಲೆಯನ್ನು ಮೀರದೆ ಸಹಕರಿಸ ದೃಷ್ಟಿಯನ್ನು ಸಾಧಿಸಿಕೊಂಡು ಇಡೀ ಪ್ರದೇಶದ, ಅಖಿಲ ಭರತಖಂಡದ ಮತ್ತು ಪ್ರಪಂಚದ ಶ್ರೇಯಸ್ಸಿಗೆ ಅನುಕೂಲವಾಗುವಂತೆ ಮುಂಬರಿಯುತ್ತೇವೆಂದು ಹಾರೈಸುತ್ತೇನೆ.

ವೈದ್ಯ ವಿಭಾಗದ ಪದವೀಧರೋತ್ತರ ತರಗತಿಗೆ ನಿರ್ಧಾರ

ಮೈಸೂರು ೨೫.

ನೆನ್ನೆ ನಡೆದ ವಿಶ್ವವಿದ್ಯಾಲಯದ ಸೆನೆಟ್ ಸಭೆಯಲ್ಲಿ ವೈದ್ಯ ವಿಭಾಗದಲ್ಲಿ ಡಾಕ್ಟರ್ ಆಫ್ ಮೆಡಿಸಿನ್ ಮತ್ತು ಡಾಕ್ಟರ್ ಆಫ್ ಸರ್ಜರಿ ವಿಭಾಗವನ್ನು ಆರಂಭಿಸಲು ಅಕೆಡೆಮಿಕ್ ಕೌನ್ಸಿಲು ಮಾಡಿದ್ದ ಶಿಫಾರಸಿಗೆ ಒಪ್ಪಿಗೆ ನೀಡಲಾಯಿತು. ಆರೋಗ್ಯ ಶಾಸ್ತ್ರ ಮತ್ತು ಸಾರ್ವಜನಿಕ ಆರೋಗ್ಯ ವಿಭಾಗವನ್ನು ನಿವಾರಣಾ ಮತ್ತು ಸಾಮಾಜಿಕ ವೈದ್ಯ ಇಲಾಖೆಯೆಂದು ಕರೆಯಲೂ, ಈ ಬಗ್ಗೆ ಪಠ್ಯ ವಿಷಯವನ್ನು "ಪ್ರಿವೆಂಟಿವ್ ಅಂಡ್ ಸೋಷಿಯಲ್ ಮೆಡಿಸಿನ್" ಎಂದು ನಾಮಭೇದ ಮಾಡಲೂ ಸಭೆಯು ನಿರ್ಧರಿಸಿತು.

ಶ್ರೀಮನ್ಮಹಾರಾಜರಿಂದ ಪಾಂಥನಿವಾಸ ನಿಲಯದ ಆರಂಭೋತ್ಸವ

ಬೆಂಗಳೂರಿನ ಸುಗಂಧಕಾರಿಗಳಾದ ಶ್ರೀ ಎಸ್. ಕೆ. ಸುಬ್ಬಯ್ಯಶೆಟ್ಟಿ ಅಂಡ್ ಸನ್ಸ್‌ರವರು ನಗರದ ಶ್ರೀರಾಂಪೇಟೆಯಲ್ಲಿ ಕಟ್ಟಿಸಿರುವ ಶ್ರೀ ವಾಸವೀನಿಲಯ ಧರ್ಮಶಾಲೆಯ ಆರಂಭೋತ್ಸವವನ್ನು ನಾಳೆ ಸಂಜೆ ೬–೧೫ಕ್ಕೆ ಶ್ರೀಮನ್ಮಹಾರಾಜರು ನೆರವೇರಿಸುವರು.

ಒಂದು ವೀಸೆ ಸಕ್ಕರೆಯನ್ನು ರೂ. ೧–೨–೬ ಅಥವಾ ರೂ. ೧–೩–೦ ನಂತೆ ಮಾರಲು ಮುಂದ್ಯ ಸಕ್ಕರೆ ಕಂಪೆನಿಯವರು ಕ್ರಮ ಕೈಗೊಂಡಿದ್ದಾರೆ. ೧ ಚೀಲ ಸಕ್ಕರೆಗೆ ೮೫ ರೂ.ನಂತೆ ಬೆಲೆಯನ್ನು ನಿಗದಿ ಮಾಡಲಾಗಿದೆ. ಇನ್ನೂ ಇಳಿಸಲು ಸಕಾಲದಲ್ಲಿ ಪರಿಶೀಲಿಸಲಾಗುವುದು.

ಆಗ್ನೇಯ ಏಷ್ಯಾ ರಕ್ಷಣಾ ಕೂಟಕ್ಕೆ ಜಪಾನು ಸೇರುವುದಿಲ್ಲ

ಆಗ್ನೇಯ ಏಷ್ಯಾ ರಕ್ಷಣಾ ಕೂಟಕ್ಕೆ ಜಪಾನು ಸೇರುವ ಅಭಿಲಾಷೆ ಹೊಂದಿಲ್ಲವೆಂದು ಅಲ್ಲಿನ ಪ್ರಧಾನಿ ಇಚಿರೊ ಹಟೋಯಾಮಾರವರು ತಿಳಿಸಿರುತ್ತಾರೆ. ತಮ್ಮ ದೇಶವು ರಷ್ಯದೊಡನೆ ಶಾಂತಿಯನ್ನು ಬಯಸುವುದಾಗಿಯೂ, ಚೀನದೊಡನೆ ಸಾಮಾನ್ಯ ಸಂಬಂಧವನ್ನು ಕ್ರಮಕ್ರಮವಾಗಿ ಇಟ್ಟುಕೊಳ್ಳಲು ಆ ರಾಷ್ಟ್ರದೊಡನೆ ಆರ್ಥಿಕ ಸಹಕಾರವನ್ನು ಬೆಳಸುವುದೆಂದೂ ಅವರು ತಿಳಿಸಿರುವರು. ಏಷ್ಯಾಖಂಡದಲ್ಲಿ ಪ್ರಬಲ ರಾಷ್ಟ್ರವಾಗಿರುವ ಕಮ್ಯೂನಿಸ್ಟ್ ಚೀನಾದ ಅಸ್ತಿತ್ವವನ್ನು ಅಲ್ಲಗಳೆಯುವುದರಲ್ಲಿ ಉಪಯೋಗವಿಲ್ಲವೆಂದು ವಿದೇಶಾಂಗ ಮಂತ್ರಿ ಷಿಗೆಮಿಟ್ಸುರವರು ಹೇಳಿರುವರು.

ಮೆಂಡೆಸ್ ಫ್ರಾನ್ಸರ ರಾಜೀನಾಮೆ

ಅಲ್ಜೀರಿಯದ ಪ್ರಶ್ನೆ ಬಗ್ಗೆ ಫ್ರೆಂಚ್ ಸಮಾಜವಾದಿ ಸರ್ಕಾರವು ಹೊಂದಿರುವ ನೀತಿಯನ್ನು ವಿರೋಧಿಸುತ್ತಿರುವ ಮಂತ್ರಿ ಎಂ. ಪಿಯರಿ ಮೆಂಡೆಸ್ ಫ್ರಾನ್ಸ್‌ರವರು ತಮ್ಮ ಪದವಿಗೆ ರಾಜೀನಾಮೆ ಕೊಟ್ಟಿರುತ್ತಾರೆ. ಅಲ್ಜೀರಿಯದ ೮೦ ಲಕ್ಷ ಮುಸ್ಲಿಮರು ಫ್ರಾನ್ಸಿನಲ್ಲಿ ಪುನಃ ವಿಶ್ವಾಸ ಹೊಂದಲು ಧೈರ್ಯವಾದ ಕ್ರಮವನ್ನು ಸರ್ಕಾರವು ಅನುಸರಿಸಬೇಕೆಂದು ಅವರು ಹೇಳಿರುತ್ತಾರೆ. ಅವರ ರಾಜೀನಾಮೆಯಿಂದ ಸರ್ಕಾರವು ಉಳಿದಿದ್ದರೂ, ತುಂಬಾ ಬಿಕ್ಕಟ್ಟಿಗೆ ಸಿಕ್ಕುವುದೆಂದು ಹೇಳಲಾಗಿದೆ.

ಸಂತಾಪ ಸೂಚಕ ಸಭೆ

ಮೈಸೂರು ವಿಧಾನ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂರವರು ಮೊನ್ನೆ ಮೃತಿಹೊಂದಿದ ಬಗ್ಗೆ ಸಂತಾಪ ಸೂಚಿಸಲು ಈ ಸಾಯಂಕಾಲ ೬–೩೦ ಗಂಟೆಗೆ ಪುರಭವನದಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿದೆ. ಮಹಾ ಜನರು ದಯಮಾಡಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಪ್ರಾರ್ಥಿಸಿದ್ದಾರೆ.

ಕಾಂಚೀಪುರಕ್ಕೆ ವಿನೋಬಾ ಭಾವೆಯವರ ಆಗಮನ

ವರದರಾಜಸ್ವಾಮಿ ದೇವಾಲಯದ ಸಂದರ್ಶನ

ವಿ.ಸು. ಸಂ] ಸರ್ವೋದಯಪುರ ೨೫.

ಆಚಾರ್ಯ ವಿನೋಬಾ ಭಾವೆಯವರು ಇಲ್ಲಿ ನಡೆಯಲಿರುವ ಸರ್ವೋದಯ ಸಮ್ಮೇಳನಕ್ಕಾಗಿ ಈ ಬೆಳಿಗ್ಗೆ ಆಗಮಿಸಿದರು. ಶ್ರೀ ವರದರಾಜಸ್ವಾಮಿ ದೇವಾಲಯಕ್ಕೆ ಅವರು ಭೇಟಿಯಿತ್ತರು. ನಗರವು ಉತ್ಸಾಹದಿಂದ ತುಂಬಿ ತುಳುಕುತ್ತಿದೆ. ಭೂದಾನ, ಮೂಲ ಶಿಕ್ಷಣ, ಗ್ರಾಮ ಕೈಗಾರಿಕೆಗಳಿಂದ ಕೂಡಿದ ಸರ್ವೋದಯ ಪ್ರದರ್ಶನವು ಅನೇಕರನ್ನು ಆಕರ್ಷಿಸುತ್ತಿದೆ.

ನಾಳೆ ಮಧ್ಯಾಹ್ನ ವಿನೋಬಾರವರು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವರು. ಭೂದಾನ ಚಳುವಳಿಗೆ ವಿನೋಬಾರವರು ಹೊಸ ಸ್ವರೂಪವನ್ನು ಕೊಡುವ ನಿರೀಕ್ಷೆಯಿದೆ. ರಾಷ್ಟ್ರಾಧ್ಯಕ್ಷರೂ, ಇತರ ನಾಯಕರೂ ಭಾಗವಹಿಸಲಿರುವರು.

ವ್ಯವಸಾಯೋತ್ಪನ್ನಗಳ ಮೇಲೆ ಮರಮಾರಾಟ ತೆರಿಗೆ ಅಗತ್ಯ

ಸಂಸ್ಥಾನ ಹಣಕಾಸಿನ ತನಿಖೆ ಸಮಿತಿಯ ಶಿಫಾರಸು

ಬೆಂಗಳೂರು ೨೬

ಸಂಸ್ಥಾನ ಸರ್ಕಾರದ ಹಣಕಾಸಿನ ಸ್ಥಿತಿಯ ಬಗ್ಗೆ ತನಿಖೆ ಮಾಡುವುದಕ್ಕಾಗಿ ನೇಮಿಸಲಾಗಿರುವ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿರುವುದೆಂದು ವರದಿಯಾಗಿದೆ. ಸ್ವಾತಂತ್ರ್ಯ ಬೆಳೆಗಳಿಗೆ ಮಾತ್ರವಲ್ಲದೆ ಎಲ್ಲ ವಿಧವ ವ್ಯವಸಾಯೋತ್ಪನ್ನಗಳಿಗೂ ಮರಮಾರಾಟ ತೆರಿಗೆಯನ್ನು ವಿಧಿಸಬೇಕೆಂದೂ ಬೆಳೆಯ ಆಧಾರದ ಮೇಲೆ [illegible] ಪದ್ಧತಿಯನ್ನು ರದ್ದು ಮಾಡಬೇಕೆಂದೂ ಸಮಿತಿಯು ಸಲಹೆ ಮಾಡಿರುವುದಾಗಿ ಗೊತ್ತಾಗಿದೆ.

[illegible] ಕೈಗಾರಿಕೆಗಳ ಪ್ರದೇಶದಲ್ಲಿ ಅಭಿವೃದ್ಧಿ ತೆರಿಗೆ [illegible] ಸಲಹೆ ಮಾಡಲಾಗಿದೆ.

ಮೋಟಾರು ತೆರಿಗೆಯನ್ನು ವಿಧಿಸುವ [illegible] ವ್ಯಾಪಾರದ ಬದಲು [illegible] ರೂ ಗೆ ಅದರ ಮಟ್ಟವನ್ನು ಇಳಿಸುವಂತೆ ಸೂಚಿಸಲಾಗಿದೆ. ಕೇಂದ್ರ ತೆರಿಗೆ ತನಿಖೆ ಸಮಿತಿಯವರು ಶಿಫಾರಸು ಮಾಡಿರುವಂತೆ ಜೂಜು ತೆರಿಗೆ ವಿಧಾಯಕಕ್ಕೆ ಸಲಹೆ ಮಾಡಲಾಗಿದೆ.

ಲಂಡನ್ನಿನಲ್ಲಿರುವ ಮೈಸೂರು [illegible] ಸೆಂಟರ ಹುದ್ದೆಯಿಂದ ಪ್ರಯೋಜನವೇನೂ ಇಲ್ಲವೆಂದು ತಿಳಿಸಿ ಅದರ ರದ್ದಿಯಾತಿಗೆ ಸಲಹೆ ಮಾಡಲಾಗಿದೆ.

ಸಂಸ್ಥಾನದ ಮಂತ್ರಿಗಳ ಪ್ರವಾಸವನ್ನು [illegible] ಸಾರ್ವಜನಿಕ ಕಾರ್ಯಕ್ಕೆ ಉಪಯೋಗವಾಗಿರುವಂತೆ ಮಾಡಬೇಕೆಂದು ಸಮಿತಿಯು ಸೂಚಿಸಿದೆ. ಅಧಿಕಾರಿಗಳ ಪ್ರವಾಸ ದಿನಗಳನ್ನು [illegible] ಇಷ್ಟೆಂದು ಗೊತ್ತುಪಡಿಸಲೂ ಸಲಹೆ ಮಾಡಲಾಗಿದೆ.

ಸಂಸ್ಥಾನದ ಆಯವ್ಯಯವು ಸಮತೂಕವಾಗಿರಬೇಕಾದರೆ ಸಿಬ್ಬಂದಿಯ ಮೇಲಿನ ವೆಚ್ಚವು ಸ್ವಲ್ಪ ಮಟ್ಟಿಗೆ [illegible] ಸಮಿತಿಯು [illegible] ಆಡಳಿತ ಮತ್ತು ಅಭಿವೃದ್ಧಿ ಇಲಾಖೆಗಳು [illegible] ಮಾಡಬಹುದೆಂದೂ ಸೂಚಿಸಲಾಗಿದೆ.

ಹೊಸ ಕಟ್ಟಡಗಳ ನಿರ್ಮಾಣದ ಸಂಬಂಧದಲ್ಲಿ ವೆಚ್ಚವನ್ನು ಈಗ ಮಾಡುತ್ತಿರುವ [illegible] ಕಡಿಮೆ ಮಾಡಬೇಕೆಂದು ಸಮಿತಿಯು ತಿಳಿಸಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಮುಕ್ತಾಯ ಕಾಲದಲ್ಲಿ [illegible] ಪರಿಸ್ಥಿತಿಯನ್ನು ಸಮಿತಿಯು [illegible] ಕೋಟಿ ರೂ [illegible] ಸಂಸ್ಥಾನದ ಸ್ಥಿತಿಗೆ ಒಳ್ಳೆಯದಲ್ಲವೆಂದೂ ಸಮಿತಿಯವರು ಹೇಳಿರುತ್ತಾರೆ. ಇನ್ನುಮುಂದೆ ಒಂದೇ ಶಾಸನ ಸಭೆಯು ಇರಬೇಕೆಂದೂ ಸಲಹೆ ಮಾಡಲಾಗಿದೆ.

ಪೂರ್ವ ಪಾಕಿಸ್ತಾನದಲ್ಲಿ ಗವರ್ನರ್ ಆಡಳಿತ

ಪೂರ್ವ ಪಾಕಿಸ್ತಾನದಲ್ಲಿ ಗವರ್ನರ್ ಆಡಳಿತವನ್ನು ಕೊನೆಗೆ ತರಲು ಪಾಕಿಸ್ತಾನ ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ. ಅಲ್ಲಿನ ಗವರ್ನರ್ ಫಜಲೂಲ್ ಹಕ್‌ರವರು ಪ್ರಾಂತೀಯ ಶಾಸನಸಭೆ ಅಧಿವೇಶನವನ್ನು ಮುಂದುವರಿಸಿದ್ದಾರೆ. ಗವರ್ನರ್ ಆಡಳಿತದ ಬಗ್ಗೆ ಒಂದೆರಡು ದಿನಗಳಲ್ಲಿ ಪ್ರಕಟಣೆ ಹೊರಬೀಳಲಿವೆ.

[illegible] ನಕ್ಷತ್ರ

ಮಂಡಿ ಮೊಹಲ್ಲಾ ಈಡಿಗ ಬಡಾವಣೆಯಲ್ಲಿರುವ ಶ್ರೀ ವೆಂಕಟರಮಣಯ್ಯನವರ ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ನಾಳೆಯಿಂದ [illegible] [illegible] ಸಭೆಯುವುದು [illegible] ಮತ್ತು [illegible] [illegible] ತಿರುಮಂಜನ, [illegible] ದಿವ್ಯಪ್ರಬಂಧ ಪಾರಾಯಣ, [illegible]

ಸರ್ಕಾರಿ ವಿಮೆ ತನಿಖೆಗೆ ಆಡಿಟರ್ ಜನರಲ್ ಅಧಿಕಾರವಿಲ್ಲ

ಭಾರತ ಸರ್ಕಾರದವರು ಸ್ಥಾಪಿಸಿರುವ ವಿಮಾ ಸಂಸ್ಥೆಯ ಲೆಕ್ಕಪತ್ರಗಳನ್ನು ಆಡಿಟ್ ಮಾಡಲು ಭಾರತದ ಆಡಿಟರ್ ಜನರಲ್ಲರಿಗೆ ಅಧಿಕಾರವೀಯಬೇಕಾಗಿಲ್ಲವೆಂದು ಲೋಕಸಭೆಯು ನಿರ್ಧರಿಸಿತು. ಈ ಬಗ್ಗೆ ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರಿಗೂ, ಆಡಿಟರ್ ಜನರಲ್ ಎ ಕೆ ಚಂದರವರಿಗೂ [illegible] [illegible] ಸರ್ಕಾರಿ ಲೆಕ್ಕಪತ್ರಗಳನ್ನು [illegible] ತಪ್ಪು [illegible] ತನಿಖೆ ಮಾಡುವ [illegible] ಆಡಿಟರ್ ಜನರಲ್ಲರು [illegible] ಅವನ್ನು ಅವರಿಗೆ ಒಪ್ಪಿಸಬಾರದೆಂದು ಕೇಂದ್ರ ಮಂತ್ರಿಗಳು ತಿಳಿಸಿದರು. ಸಭೆಯು [illegible] ವಾದವನ್ನೇ ಎತ್ತಿಹಿಡಿಯಿತು.

ಎಣ್ಣೆಯ ಉತ್ಪತ್ತಿಗಾಗಿ ೩೦ ಕೋಟಿ ರೂ ಯೋಜನೆ

ಬರುವ ಐದು ವರ್ಷಗಳಲ್ಲಿ ಎಣ್ಣೆಯ ಉತ್ಪಾದನೆಗಾಗಿ ೩೦ ಕೋಟಿ ರೂ ವೆಚ್ಚವಾಗಬಹುದೆಂದು ಕೇಂದ್ರ ಪ್ರಕೃತಿ ಸಂಪತ್ತು ಇಲಾಖಾ ಮಂತ್ರಿ ಕೆ ಡಿ ಮಾಳವೀಯರು ತಿಳಿಸಿರುತ್ತಾರೆ. ಈ ಬಗ್ಗೆ [illegible] ಯೋಜನೆಯನ್ನು ವಿಸ್ತಾರ ಪ್ರಮಾಣದಲ್ಲಿ ಪರಿಶೀಲಿಸಿರುವರು.

ಪ್ರಣಯ ಭಂಗಕ್ಕಾಗಿ ಯುವಕ ಮತ್ತು ಯುವತಿಯ ಆತ್ಮಹತ್ಯೆ

ತಿರುಚಿರಪಳ್ಳಿ [illegible] ಎಂಬ ೨೦ ವರ್ಷದ ತರುಣಿ ಮತ್ತು ಎ ಎಸ್ ಪಳನಿವೇಲು ಎಂಬ ೨೦ ವರ್ಷದ ಯುವಕ ಇವರಿಬ್ಬರು ದಕ್ಷಿಣ [illegible]ದಲ್ಲಿ ಒಂದು ಮರಕ್ಕೆ ನೇಣುಹಾಕಿಕೊಂಡು ಪ್ರಾಣ ಬಿಟ್ಟಿರುತ್ತಾರೆಂದು ವರದಿಯಾಗಿದೆ. ಸ್ಕೂಲ್ ಫೈನಲ್ ಪಾಸಾದ ಪಳನಿವೇಲುವು ನಿರುದ್ಯೋಗಿಯಾಗಿದ್ದನೆಂದೂ ಅವನಿಗೂ ಬೇರೆಯ ಜಾತಿಯ [illegible] ಪರಸ್ಪರ ಅನುರಾಗವು ಬೆಳೆಯಿತೆಂದೂ ಆಕೆಯ ತಂದೆಯು ಮಗಳನ್ನು ಬೇರೊಬ್ಬ ಯುವಕನಿಗೆ ಕೊಟ್ಟು ವಿವಾಹ ಮಾಡಲು [illegible] ಇವರಿಬ್ಬರೂ ಆತ್ಮಹತ್ಯೆಗೆ ನಿರ್ಧರಿಸಿದರೆಂದೂ ಹೇಳಲಾಗಿದೆ.

ಅಮೆರಿಕದ ವಿದೇಶೀ ಸಹಾಯದ ಹಣದಲ್ಲಿ ಭಾರಿ ಖೋತಾ

[illegible] ವಿದೇಶೀ ಸಹಾಯಕ್ಕಾಗಿ [illegible] ಕೋಟಿ ಡಾಲರ್ ಹಣವನ್ನು ಕೊಡಬೇಕೆಂದು ಅಧ್ಯಕ್ಷ ಐಸನ್‌ಹೋವರರು ಸಿದ್ಧಗೊಳಿಸಿದ ಯೋಜನೆಯನ್ನು [illegible] ಪ್ರತಿನಿಧಿ ಸಭೆಯ ವಿದೇಶಾಂಗ ಸಮಿತಿಯು ೧೦೦ ಕೋಟಿಗಿಂತಲೂ ಹೆಚ್ಚಾಗಿ ಖೋತಾ ಮಾಡಬೇಕೆಂದು ಸೂಚಿಸಿದೆ.

ಹತ್ತಿನ ಗಿರಣಿ ಮಾಲೀಕರ ಸಭೆ

[illegible] ಹತ್ತಿನ ಗಿರಣಿ ಮಾಲೀಕರ ಸಂಘದ ಸರ್ವ ಸದಸ್ಯರ ಜರೂರು ಸಭೆಯು ನಾಳೆ ಮಧ್ಯಾಹ್ನ ೩ ಗಂಟೆಗೆ ಸಂಘದ ಕಛೇರಿಯಲ್ಲಿ ಸೇರುವುದು. ವಿದ್ಯುಚ್ಛಕ್ತಿ ದರ ಹೆಚ್ಚಿಸಿರುವುದರಿಂದ ಗಿರಣಿಗಳನ್ನು ಮುಚ್ಚಬೇಕಾದ ಪರಿಸ್ಥಿತಿ [illegible] ಪರಿಶೀಲಿಸಲಾಗುವುದು.

ಎಸ್ ಲಕ್ಷ್ಮೀನಾರಾಯಣರಾಯರು ಯಳಂದೂರು ಪೌರಸಭಾಧ್ಯಕ್ಷರು

ಯಳಂದೂರಿನ ಪೌರಸಭಾಧ್ಯಕ್ಷ ಸ್ಥಾನಕ್ಕೆ ಅಲ್ಲಿನ ವಕೀಲರಾದ ಶ್ರೀ ಎಸ್ ಲಕ್ಷ್ಮೀನಾರಾಯಣರಾಯರು ಸರ್ವಾನುಮತದಿಂದ ಆರಿಸಲ್ಪಟ್ಟಿರುವರು.

ನಗರದಲ್ಲಿ ಬುದ್ಧ ಜಯಂತಿ ಉತ್ಸವ

ಮೈಸೂರು ೨೬

ಇಟ್ಟಿಗೆಗೂಡಿನಲ್ಲಿರುವ ಪ್ರೊ॥ ಎ ಡಿ ಎಸ್ ನಾಯ್ಡು ಸ್ಮಾರಕ ವ್ಯಾಯಾಮ ಶಾಲೆಯಲ್ಲಿ ಮೊನ್ನೆ ಬುದ್ಧ ಜಯಂತಿಯನ್ನು ಆಚರಿಸಲಾಯಿತು. ಪ್ರಾರ್ಥನೆ, ಶ್ರೀ ಜಿ [illegible]ರಾಯರಿಂದ ಸ್ವಾಗತ ಭಾಷಣ, ಎ ಡಿ ಬಾಬುನಾಯ್ಡುರವರಿಂದ ಅಧ್ಯಕ್ಷ ಭಾಷಣ ಮತ್ತು ಸಂಗೀತಗಳಾದುವು. ಶ್ರೀ ಎ [illegible] ಸ್ವಾಮಿಯವರು ವಂದನಾರ್ಪಣೆ ಮಾಡಿದರು.

ಮಹಾರಾಜಾ ಹೈಸ್ಕೂಲಿನ ಯೂನಿಯನ್ ಆಶ್ರಯದಲ್ಲಿ ಮೊನ್ನೆ ಬುದ್ಧ ಜಯಂತಿಯನ್ನು ನೆರವೇರಿಸಲಾಯಿತು. ಅತಿಥಿ ಬೋರ್ಡಿಂಗ್ ಶಾಲೆಯ ಸೂಪರಿಂಟೆಂಡೆಂಟರಾದ ಶ್ರೀ ಡಿ ರಾಮಯ್ಯನವರು ಅಗ್ರಾಸನ ವಹಿಸಿದ್ದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ರಾಜಯ್ಯಂಗಾರ್‌ರವರಿಂದ ಸ್ವಾಗತ ಭಾಷಣ, ಶ್ರೀಗಳು ನಾಗರಾಜಶಾಸ್ತ್ರಿ ಮತ್ತು ಚಿಕ್ಕನರಸಿಂಹಯ್ಯನವರಿಂದ ಬುದ್ಧದೇವನ ಪ್ರಾರ್ಥನೆ, ಶ್ರೀಗಳಾದ ಗುರುರಾಜಾಚಾರ್, ಸಿ ಕೃಷ್ಣಮೂರ್ತಿ, ಶ್ರೀನಾಥ್, ಜನಾಬ್ ಜವಹಾರ್ ಸಾಹೇಬರವರಿಂದ ಬುದ್ಧ ದೇವನ ಚರಿತ್ರೆ ಬಗ್ಗೆ ಭಾಷಣಗಳಾದುವು. ಅಧ್ಯಕ್ಷರ ಭಾಷಣದ ನಂತರ ಯೂನಿಯನ್ ಕಾರ್ಯದರ್ಶಿಗಳಾದ ಶ್ರೀ ಎಂ ಆರ್ ಸೀತಾರಾಮರಾಯರು ಬುದ್ಧನ ಮಂಗಳ ಶ್ಲೋಕ ಹೇಳಿ ವಂದನಾರ್ಪಣೆ ಮಾಡಿದರು.

ಮಹಾರಾಣಿ ನ್ಯೂ ಟೈಪ್ ಮಿಡಲ್ ಸ್ಕೂಲಿನಲ್ಲಿ ಮೊನ್ನೆ ಜಯಂತಿಯನ್ನು ನಡೆಸಲಾಯಿತು. ಮೈಸೂರು ಜಿಲ್ಲಾ ಆರೋಗ್ಯ ಅಧಿಕಾರಿಗಳಾದ ಕೆ ಎಸ್ ನಂಜುಂಡಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಶ್ರೀಮತಿ ಎಂ ಎಸ್ [illegible]ರವರಿಂದ ಪ್ರಾರ್ಥನೆ, ಎಂ ಇಂದಿರಾಬಾಯಿಯವರಿಂದ ವಚನ ಗಾನ, ಬಿ ಸರಸಮ್ಮನವರಿಂದ ಮಾಯೆಯ ಸೋಲು ಎಂಬ ಬುದ್ಧನಿಗೂ ಮಾಯೆಗೂ ನಡೆದ ಸಂವಾದ ಪಠಣ ಮತ್ತು ಎಂ [illegible]ಮ್ಮನವರಿಂದ ಗಾನ ಇವುಗಳು ಆದುವು. ಕೆ ಸುಶೀಲಮ್ಮನವರು ಬುದ್ಧನ ಚರಿತ್ರೆಯನ್ನು ವಿವರಿಸಿದರು. ಅಧ್ಯಕ್ಷರು ಮಾತನಾಡಿ ಬುದ್ಧನ ಸಂದೇಶವನ್ನು ಪಾಲಿಸಿಕೊಂಡು ಜಗತ್ತು ಉದ್ಧಾರವಾಗಬೇಕೆಂದು ತಿಳಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರವಂದನೆಯೊಡನೆ ಸಭೆಯು ಮುಕ್ತಾಯವಾಯಿತು.

ಸಾರ್ವಜನಿಕ ವಿದ್ಯಾರ್ಥಿ ನಿಲಯದ ಆಶ್ರಯದಲ್ಲಿ ಮೊನ್ನೆ ಶ್ರೀ ಟಿ ಸಿ ಶಾಂತರಾಜ್‌ರವರ ಅಧ್ಯಕ್ಷತೆಯಲ್ಲಿ ಜಯಂತಿಯನ್ನು ಆಚರಿಸಲಾಯಿತು. ನಿಲಯದಲ್ಲಿರುವ ಬುದ್ಧನ ಪ್ರತಿಮೆಯನ್ನು ಫಲ ಪುಷ್ಪಗಳಿಂದ ಅಲಂಕರಿಸಿ, ಸಾಮೂಹಿಕ ಪ್ರಾರ್ಥನೆಯೊಡನೆ ಬುದ್ಧನ ಜೀವನ ಮತ್ತು ತತ್ವಗಳ ಬಗ್ಗೆ ನಿಲಯದ ವಿದ್ಯಾರ್ಥಿಗಳಾದ ಶ್ರೀ ಜಿ [illegible] ಮತ್ತು [illegible] ಮಾತನಾಡಿದರು. ಅಧ್ಯಕ್ಷರ ಭಾಷಣ ಮತ್ತು ವಂದನಾರ್ಪಣೆ, ಪ್ರಸಾದ ವಿನಿಯೋಗದಿಂದ ಸಭೆಯು ಮುಕ್ತಾಯವಾಯಿತು.

SARADA VILAS COLLEGE

Inter Tutorial Section

Classes in full swing

JOIN AT ONCE

Edited, Printed and Published by R N [illegible]garajan at Sadhvi Press, D Subbiah Road, Mysore

Estd 1917

CHAMPION METROPOLITAN COLLEGE OF COMMERCE

([illegible] Road Mysore)

APPLICATIONS FOR ADMISSION to classes leading to DIPLOMAS in Commerce, Shorthand and Typewriting are now being received [illegible] mornings & evenings

Training for COSTS & WORKS ACCOUNTANTS is also given

(Sd) M S PUTTANNA — Vice Principal *(Sd) P SUBBARAYA SASTRY,* — Principal

ರೈಲ್ವೆ ಫೈರ್ಮನ್ನುಗಳ ಮುಷ್ಕರ ಮುಕ್ತಾಯ

ಮಧ್ಯ ರೈಲ್ವೆಯ [illegible] ವಿಭಾಗದ ಫೈರ್ಮನ್ನುಗಳು [illegible] ದಿನಗಳಿಂದ ನಡೆಸುತ್ತಿದ್ದ ಮುಷ್ಕರವು ಮುಕ್ತಾಯವಾಗಿದೆ. ನಿನ್ನೆ ಅವರುಗಳು ಕೆಲಸಕ್ಕೆ ಹಿಂದಿರುಗಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮೈಸೂರು ಪೇಟೆ ಧಾರಣೆ

	[illegible]	[illegible]
ಹುಚ್ಚೆಳ್ಳು	[illegible]	[illegible]
ಹೊಂಗೆಬೀಜ	[illegible]	[illegible]
ಹುಣಸೇಬೀಜ	[illegible]	[illegible]
ಹುರುಳಿ	[illegible]	[illegible]
ತೆಂಗಿನಕಾಯಿ	[illegible]	[illegible]
ಉಪ್ಪು	[illegible]	[illegible]
ಸೀಗೇಕಾಯಿ	[illegible]	
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

ಬೇಕಾಗಿದ್ದಾರೆ

ಅನುಭವಸ್ಥರಾದ ಕಂಪಾಸಿಟರ್ ಮತ್ತು [illegible] ಟ್ರೆಡಲ್ ಪ್ರಿಂಟರ್ ಬೇಕಾಗಿದ್ದಾರೆ. ಸಂಬಳ ಯೋಗ್ಯತಾನುಸಾರ

Apply to

ಶ್ರೀ ಸೀತಾರಾಘವ ಪ್ರೆಸ್,
ರಾಮಸ್ವಾಮಿ ಸರ್ಕಲ್, ಮೈಸೂರು

SREE GANESHA TALKIES

From 26-5-56

THE FABULOUS SENORITA

A picture which has attracted unprecedented crowds and run for several weeks

(Along with this programme "Bharath Natyam" a Documentary by the Govt of India with Kumari Kamala's Dance will also be shown)

Take BRONKOL

For ASTHMA & BRONCHITIS

Sole Distributors for Mysore State and Coorg

SATHYA & CO.

Chemists & Druggists

71/1 A S Street,

BANGALORE 2

VIDYA TUTORIAL COLLEGE

(Dalvoy High School Buildings)

MYSORE

Classes formed for B A, B Sc, English & III Part

Classes will Commence from 4 6 56

Take admissions immediately

Ladies also Admitted

Inter classes in full Swing

Enquiries 9 to 10 A M, 5.30 to 8.30 P M

ರಿಜಿಸ್ಟರ್ಡ್ ನಂ. 792

ಸಾಧ್ವಿ

ಸಂಚಿಕೆ : ೧೪] SADHVI : SUNDAY 27-5-1956 ಮೈಸೂರು : ಭಾನುವಾರ [ಸಂಚಿಕೆ : [illegible]

ಪೂರ್ವ ಪಾಕಿಸ್ತಾನದಲ್ಲಿ ಅಧ್ಯಕ್ಷರ ಆಡಳಿತದ ಆರಂಭ

ಭಾಷ್ಯಂರವರ ನಿಧನದ ಬಗ್ಗೆ ಪೌರ ಜನರ ಸಂತಾಪ

ಮೈಸೂರು ೨೭

[illegible]

ಹಗಲುಗಳ್ಳನ ಬಂಧನ

ಮೈಸೂರು ೨೭

[illegible]

ವೀರಶೈವ ಸಜ್ಜನ ಸಂಘದ ವಿದ್ಯಾರ್ಥಿ ನಿಲಯ

[illegible]

ಉಡುಪಿ ಸ್ವಾಮಿಗಳ ಭೇಟಿ

[illegible]

ಎಂ. ಎ. ಭರತರಾಜಸಿಂಗ್‌ರವರ ವರ್ಗ

[illegible]

ರೈಲು ಮತ್ತು ಬಸ್ಸು ಡಿಕ್ಕಿಯಿಂದ ೧೧ ಜನರ ಮರಣ

[illegible]

ಭಾಷ್ಯಂರವರ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರ ಸಂತಾಪ

ಕಾವೇರಿಯಲ್ಲಿ ಅಸ್ಥಿ ವಿಸರ್ಜನೆ

ಬೆಂಗಳೂರು ೨೭

ಕಾಂಗ್ರೆಸ್ ಅಧ್ಯಕ್ಷ ಯು. ಎನ್. ಧೇಬರ್‌ರವರು ಭಾಷ್ಯಂರವರ ಪತ್ನಿ ಶ್ರೀಮತಿ ಕಲ್ಯಾಣಿ ಭಾಷ್ಯಂರವರಿಗೆ ಸಂತಾಪ ಸೂಚಕ ಸಂದೇಶವನ್ನು ಕಳುಹಿಸಿ, ಅವರ ಮರಣದ ಬಗ್ಗೆ ತಮಗೆ ಅತ್ಯಂತ ದುಃಖವಾಗಿರುವುದೆಂದು ತಿಳಿಸಿದ್ದಾರೆ. [illegible]

ಶ್ರೀ ಭಾಷ್ಯಂರವರ ಅಸ್ಥಿ [illegible] ಕಾವೇರಿ ನದಿಯಲ್ಲಿ ವಿಸರ್ಜನೆ ಮಾಡಲಾಯಿತು.

ಪೂರ್ವ ಪಾಕಿಸ್ತಾನದಲ್ಲಿ ಅಧ್ಯಕ್ಷರ ಆಡಳಿತದ ಜಾರಿ

[illegible]

ನ್ಯಾಯಾಂಗ ಕಾರ್ಯದರ್ಶಿಯವರ ನಿವೃತ್ತಿ

[illegible]

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಡ್ರೈವರಿಲ್ಲದೆ ಓಡಿದ ಎಂಜಿನ್ನಿನಿಂದ ಭಾರಿ ರೈಲು ಅಪಘಾತ

ಮುಷ್ಕರಗಾರರು ರೈಲನ್ನು [illegible] ೬೬ ಜನರಿಗೆ ಗಾಯ

ಮದ್ರಾಸಿನಿಂದ [illegible] ರೈಲಿನ ಅಪಘಾತದ ಪರಿಣಾಮವಾಗಿ ೬೬ ಜನರಿಗೆ ಗಾಯಗಳಾದುವೆಂದೂ, [illegible] ಆಸ್ಪತ್ರೆಗೆ ಸೇರಿಸಲ್ಪಟ್ಟಿರೆಂದೂ ವರದಿಯಾಗಿದೆ. [illegible]

[illegible]

ಮೋಟಾರು ಅಪಘಾತದಲ್ಲಿ ತಮಿಳು ನಟಿಯ ಮರಣ

[illegible]

[illegible] ವಿದ್ಯಾರ್ಥಿಗಳ ಸಂಘದ ವಿಚಾರಣೆ

[illegible]

ವಾರ ಭವಿಷ್ಯ

ತಾ॥ ೨೭-೫-೫೬ರಿಂದ ೨-೬ ವರೆಗೆ ವರೆಗೆ

ಮೇಷ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ವೃಷಭ ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ವಿಗಡಾಯಿಸುವುದು ಆಪ್ತರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ತೊಂದರೆ

ಮಿಥುನ ಆರೋಗ್ಯ ಸಾಧಾರಣ ಆರ್ಥಿಕ ಸಮಸ್ಯೆಗಳು ಹೆಚ್ಚುವುವು ವ್ಯಾಪಾರವ್ಯವಹಾರಗಳಲ್ಲಿ ನಿರಾಶೆ ನೌಕರಿಯಲ್ಲಿ ನಿರುತ್ಸಾಹ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಕರ್ಕ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ನೌಕರಿಯಲ್ಲಿ ತೊಂದರೆ ಶುಭಕಾರ್ಯಗಳು ಜರುಗುವುವು

ಸಿಂಹ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಆಪ್ತರ ನೆರವು

ಕನ್ಯಾ ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಆಪ್ತರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ತಿರುಗು[illegible]

ತುಲಾ —ಆರೋಗ್ಯ ಕ್ರಮವಾಗಿ ಸುಧಾರಿಸುವುದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ಶುಭಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಪ್ರಗತಿ ನೌಕರಿಯಲ್ಲಿ ಯಶಸ್ಸು

ವೃಶ್ಚಿಕ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ವಿಗಡಾಯಿಸುವುದು ವ್ಯಾಪಾರವ್ಯವಹಾರಗಳಲ್ಲಿ ಅಪಯಶಸ್ಸು ಆಪ್ತರಿಂದ ವಂಚನೆ ನೌಕರಿಯಲ್ಲಿ ತೊಂದರೆ

ಧನು ಆರೋಗ್ಯ ಕ್ರಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಂತೋಷ ಸಮಾರಂಭಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಕಾರ್ಯಸಾಧನೆಯಲ್ಲಿ ಉತ್ಸಾಹ

ಮಕರ ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ಶತ್ರುಗಳಿಂದ ತೊಂದರೆ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ತಿರುಗುಮುರುಗು ಜಿಗುಪ್ಸೆ

ಕುಂಭ ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಅಸಮರ್ಪಕ ಉದ್ಯೋಗದಲ್ಲಿ ಸ್ಥಳ ಬದಲಾವಣೆ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ

ಮೀನ ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಸಮಸ್ಯೆ ಮಿತ್ರರಿಂದ ದ್ರೋಹ

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಎಳ್ಳು	[illegible]	
ಹೊಂಗೆಬೀಜ	[illegible]	
ಹುರುಳಿ	[illegible]	[illegible]
ಹಲಸಂದೆ	[illegible]	
ಹುಣಿಸೇಹಣ್ಣು	[illegible]	[illegible]
ಹೊಂಗೆಎಣ್ಣೆ	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]

VIDYA TOTORIAL COLLEGE
(Dalvoy High School Buildings)
MYSORE
Classes formed for B A B Sc, English & III Part
Classes will Commence from 4 6 56
[illegible] immediately
Ladies also Admitted
Inter classes in full Swing
Enquiries 9 to 10 A M
5.30 to 8 30 P M

ಕಾಲೇಜು ತರಗತಿಗಳ ಆರಂಭ

ಸೆನೆಟ್ ಸಭೆಯಲ್ಲಿ ಟೀಕೆ

ಮೈಸೂರು ೨೬

ಈ ವರ್ಷಕ್ಕೇ ವಿಶ್ವವಿದ್ಯಾನಿಲಯ ಶಿಕ್ಷಣದ ಅವಧಿಯನ್ನು ಒಂದು ತಿಂಗಳು ಮುಂಚಿತವಾಗಿ ಅಂದರೆ ಜೂನ್ ೧ನೇ ತಾರೀಖಿನಿಂದ ಆರಂಭಗೊಳಿಸುವುದನ್ನು ನೆನ್ನೆ ನಡೆದ ಸೆನೆಟ್ ಸಭೆಯ ವಿಶೇಷ ಅಧಿವೇಶನದಲ್ಲಿ ಸದಸ್ಯರು ಟೀಕಿಸಿದರು

[illegible] ಜೋಂದಾಳೆಯವರು ಮಂಡಿಸಿದ ಸೂಚನೆಯ ಪ್ರಕಾರ ಮೆಡಿಕಲ್ ಸ್ಕೂಲು, [illegible] ಮತ್ತು ಸೈನ್ಸ್ ಕಾಲೇಜುಗಳು ಈ ವರ್ಷ ಮೇ ತಿಂಗಳಿಂದ [illegible] ನೇ ಜನವರಿ ೩೧ರವರೆಗೂ ಪ್ರಿಮೆಡಿಕಲ್ ತರಗತಿಗಳು ಅಕ್ಟೋಬರ್ ೩೧ರವರೆಗೆ ಎಂ ಬಿ ಬಿ ಎಸ್ ತರಗತಿಗಳು ಈ ವರ್ಷ ಡಿಸೆಂಬರ್‌ನಿಂದ ಬರುವ ವರ್ಷ ಅಕ್ಟೋಬರ್ ಕೊನೆಯವರೆಗೂ ಎಂಜನಿಯರಿಂಗ್ ತರಗತಿಗಳು ಮೇ ೨೫ ಅಥವಾ ನವೆಂಬರ್ [illegible] ನಡೆಯುತಕ್ಕದ್ದೆಂದೂ [illegible] ಮತ್ತು ವಿಶ್ವವಿದ್ಯಾನಿಲಯವು ಬೇಸಿಗೆ ರಜ ಹೊಂದತಕ್ಕದ್ದೆಂದೂ ಸೂಚಿಸಲಾಗಿತ್ತು

ಪರೀಕ್ಷಾ ಫಲಿತಾಂಶಗಳೇ ಸರಿಯಾಗಿ ಪ್ರಕಟವಾಗದೇ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಲ್ಲಿ ಯಾವ ತರಗತಿಗೂ ಪ್ರವೇಶ ಸಿಕ್ಕಿರುವುದಿಲ್ಲವೆಂಬುದನ್ನೂ [illegible] ಮೈಸೂರು ವಿಶ್ವವಿದ್ಯಾನಿಲಯದ ತರಗತಿಗಳನ್ನು ಪ್ರಾರಂಭಿಸುವುದು ವಿದ್ಯಾರ್ಥಿಗಳ ತೊಂದರೆಗೆ ಕಾರಣವೆಂದೂ ಶ್ರೀ [illegible] ವೀರಪ್ಪನವರು [illegible] ಪರೀಕ್ಷಾ ಫಲಿತಾಂಶ [illegible] ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳ ಪಾಡನ್ನು ವಿವರಿಸಿದರು

ಸೂಚನೆಯ ಪ್ರಕಾರ ಎಡೆಬಿಡದೆ ಕೆಲಸ ಮಾಡುವುದು ವಿಶ್ವವಿದ್ಯಾಲಯದ ಕೆಲಸವನ್ನು ತಗ್ಗಿಸುವುದೆಂದು ಶ್ರೀ ಕೆ ಎಸ್ ರಾಜಗೋಪಾಲಯ್ಯಂಗಾರ್‌ರವರು ಪ್ರಾರಂಭಿಸಿದರು. [illegible] ಕಾಲೇಜುಗಳವರು ಈ ವರ್ಷವನ್ನು ಮುಗಿಸಲು ಆಗುವುದೇ [illegible] ಎಂದು ಅವರು ಹೇಳಿದರು [illegible] ಸದಸ್ಯರ ಪ್ರಶ್ನೆಗಳಿಗೆ ಉತ್ತರವಿತ್ತು [illegible] ವಿವರಿಸಿದರು ತತಕ್ಷಣ ಫಲಿತಾಂಶ ಪ್ರಕಟವಾಗುವ ವಿದ್ಯಾರ್ಥಿಗಳಿಗೆ [illegible] ಒಂದು ವಾರ ಕಾಲ ಕಾಲೇಜು ಪ್ರವೇಶಕ್ಕೆ ಅವಕಾಶ ಕಲ್ಪಿಸಿಕೊಡಲಾಗುವುದೆಂದು ಹೇಳಿದನಂತರ ಸೂಚನೆಗೆ ಸಭೆಯು ಅಂಗೀಕಾರ ನೀಡಿತು

[illegible] ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆದ ಇಂಜನಿಯರಿಂಗ್ ವಿದ್ಯಾರ್ಥಿಯು ಪಾಸಾದರೂ ಒಂದು ವಿಷಯದಲ್ಲಿ ಫೇಲಾಗಿ ಅವರಲ್ಲಿ ಮತ್ತೊಮ್ಮೆ ಕುಳಿತುಕೊಂಡು ತೇರ್ಗಡೆಯಾಗಲು ಮತ್ತು ಹಾಗೆ ತೇರ್ಗಡೆಯಾದರೆ ಫಲಿತಾಂಶದ ಮಟ್ಟವನ್ನು ಅವನ ಒಟ್ಟು [illegible] ನಿರ್ಧರಿಸಲು ಸೂಚಿಸುವ ಮತ್ತೊಂದು ತಿದ್ದುಪಡಿ ನಿಯಮಕ್ಕೆ ಸಭೆಯು ಅಂಗೀಕಾರವಿತ್ತಿತು ಈಗ ಈ ರೀತಿಯ ವಿದ್ಯಾರ್ಥಿಗಳು ಎಷ್ಟೇ ಹೆಚ್ಚಿನ ಅಂಕಗಳನ್ನು ಪಡೆದಿದ್ದರೂ ಅವರನ್ನು ಸಾಮಾನ್ಯ ಮಟ್ಟದಲ್ಲಿ ಪರಿಗಣಿಸಲಾಗುತ್ತದೆ ಇಂಜನಿಯರಿಂಗ್ ಪರೀಕ್ಷೆಗಳ ವಿಷಯದಲ್ಲಿ ಈಗಾಗಲೇ ವಿಶೇಷ ಬದಲಾವಣೆಗಳಾಗಿರುವಾಗ ಈ ರೀತಿ ಮಾಡುವುದು ಸರಿಯಲ್ಲವೆಂದು ಹಲವು ಸದಸ್ಯರು ನಿರ್ಣಯವನ್ನು ವಿರೋಧಿಸಿದ್ದರು

CITY TOTORIAL COLLEGE,
MYSORE
Coaching Classes in full swing
INTERMEDIATE
ENGLISH-KANNADA SAMSKRITA
P C M C B Z-P C B
★
Await Release of a guide to
ಕನ್ನಡ ಕುಮಾರಸಂಭವ–ಬಿರುಗಾಳಿ
ಬೆಳುವಲದ ಮಡಿಲಲ್ಲಿ-ತೊರವೆಯರಾಮಾಯಣ
C T. C, Old Agrahar, MYSORE

ಬಿಹಾರ್ ಶಾಸನ ಸಭೆಗೆ ಪ್ರಪ್ರಥಮ ಕಮ್ಯೂನಿಸ್ಟನ ಆಯ್ಕೆ

ಬಿಹಾರಿನ ಶಾಸನ ಸಭೆಗೆ ಉತ್ತರ ಬೆಗುಸರಾಯ್ ಕ್ಷೇತ್ರದಿಂದ ನಡೆದ ಉಪ ಚುನಾವಣೆಯಲ್ಲಿ ಚಂದ್ರಶೇಖರಸಿಂಗ್ ಎಂಬ ಕಮ್ಯೂನಿಸ್ಟ್ ಪಕ್ಷದ ಉಮೇದುವಾರರು ಆರಿಸಿಬಂದಿರುತ್ತಾರೆ ಅಲ್ಲಿನ ಶಾಸನ ಸಭೆಯಲ್ಲಿ ಅವರೊಬ್ಬರೇ ಆ ಪಕ್ಷದ ಸದಸ್ಯರಾಗುವರು ಅವರು ಅಲ್ಲಿನ ವ್ಯವಸಾಯ ಮಂತ್ರಿ ರಾಮಚರಿತರ್‌ಸಿಂಗ್‌ರವರ ಮಕ್ಕಳು

ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿಗಳ ಪ್ರವಾಸ

ರಾಜಧಾನಿಯ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ [illegible] ಮಂದಿ ವಿದ್ಯಾರ್ಥಿಗಳು ಕಳೆದ [illegible]ನೇ ತಾರೀಕು ಪ್ರವಾಸ ಹೊರಟು ತಿರುಮಕೂಡಲು ನರಸೀಪುರ, ಶಿಂಷಾ ವಿದ್ಯುತ್ ಕೇಂದ್ರ, ಶಿವನಸಮುದ್ರಗಳಿಗೆ ಭೇಟಿ ಕೊಟ್ಟರು ನಂತರ ಕಾಲುನಡಗೆಯಲ್ಲಿ ಹೊಳೆಯನ್ನು ದಾಟಿ, ಮಧ್ಯ ರಂಗನೆಂದು ಖ್ಯಾತಿ ಪಡೆದ ಶ್ರೀ ರಂಗನಾಥ ಸ್ವಾಮಿಯ ದರ್ಶನ ಮಾಡಿ, ರಾತ್ರಿ ನಿಲಯಕ್ಕೆ ಹಿಂದಿರುಗಿದರು ಉಪಾಧ್ಯಾಯರೂ, ಶ್ರೀ ಸ್ವಾಮಿಜಿಯವರೂ ಸಹ ವಿದ್ಯಾರ್ಥಿಗಳೊಡನೆ ಹೋಗಿದ್ದರು

ಪಿರಿಯಾಪಟ್ಟಣದ ಉಪ ಚುನಾವಣೆ ಸ್ಪರ್ಧೆ

ಪಿರಿಯಾಪಟ್ಟಣ ಕ್ಷೇತ್ರದಿಂದ ವಿಧಾನ ಸಭೆಗೆ ಏರ್ಪಟ್ಟಿದ್ದ ಉಪ ಚುನಾವಣೆಯಲ್ಲಿ ಶ್ರೀ ಷೆಚ್ ಎಂ ಚನ್ನಬಸಪ್ಪನವರು ಅವಿರೋಧವಾಗಿ ಚುನಾಯಿತರಾದ ಸಂಬಂಧವಾಗಿ ನಗರದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎಸ್ ಸೋಮಸುಂದರಶರ್ಮರವರು ಹೇಳಿಕೆಯಿತ್ತು, ಕಾಂಗ್ರೆಸ್ಸಿನ ನೀತಿಯನ್ನು ವಿರೋಧಿಸಲು ಕಮ್ಯೂನಿಸ್ಟ್ ಪಕ್ಷವು ಶ್ರೀ ಬೆಳ್ಳಿಯಪ್ಪನವರನ್ನು ಉಮೇದುವಾರರನ್ನಾಗಿ ನಿಲ್ಲಿಸಿದ್ದುದಾಗಿಯೂ, ಕಾಂಗ್ರೆಸ್ಸಿನೊಡನೆ ನೇರ ಹೋರಾಟ ನಡೆಸಬೇಕೆಂದು ಪಿ ಎಸ್ ಪಿ ಮುಖಂಡರು ತಿಳಿಸಿದರಲ್ಲದೆ ಅವರ ಪಕ್ಷದ ಉಮೇದುವಾರರಾದ ಶ್ರೀ ಅಣ್ಣಯ್ಯನವರು ಕೇಳಿಕೊಂಡುದರಿಂದ ಶ್ರೀ ಬೆಳ್ಳಿಯಪ್ಪನವರ ಉಮೇದುವಾರಿಕೆಯನ್ನು ವಾಪಸು ಪಡೆಯಲಾಯಿತೆಂದೂ ತಿಳಿಸಿದ್ದಾರೆ ಆದರೆ ಕಡೇ ಘಳಿಗೆಯಲ್ಲಿ ಶ್ರೀ ಅಣ್ಣಯ್ಯನವರು ತಮ್ಮ ಉಮೇದುವಾರಿಕೆಯನ್ನು ಕಾಂಗ್ರೆಸ್ಸಿನವರ ಒತ್ತಾಯದಿಂದ ವಾಪಸು ಪಡೆದಿರುವುದು [illegible] ಶೋಚನೀಯವೆಂದು, ತಿಳಿಸಿ ಕಾಂಗ್ರೆಸ್ಸಿನ 'ಜನವಿರೋಧ' ನೀತಿಯ ವಿರುದ್ಧವಾಗಿ ಹೋರಾಟ ನಡೆಸಲು ಅವಕಾಶವಾಗದಿರುವುದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸಿದ್ದಾರೆ

ಒಮಾಸೆಯೊಳಗಾ ೩೦೦ ರೂ ಸಂಬಳ ಬರುವವರು ಅರ್ಜಿದಾರರಾಗಲು ಅರ್ಹರೆಂದು ಸೂಚಿಸಿದ್ದ ಜರೂರಾತಿ ಐ ಎ ಎಸ್ ಹುದ್ದೆಗಳಿಗೆ ೩೦,೦೦೦ ಅರ್ಜಿಗಳು ಬಂದಿರುವುದಾಗಿ ಕೇಂದ್ರ ಗೃಹ ಮಂತ್ರಿ ಬಿ ಎನ್ ದಾತಾರ್‌ರವರು ತಿಳಿಸಿರುತ್ತಾರೆ

SREE GAYATHRI
TALKIES
Today and tomorrow only
The Barefoot CONTESSA
From 29 5-56
WITNESS TO MURDER
Starring —Barbara Stanwyck

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು [Estd 1911]

ಕೋರ್ಟಿನ ಕಟ್ಟಡದಲ್ಲಿ ಕಕ್ಷಿ[illegible]

ರಾಜಧಾನಿಯ ಆ ಕೋರ್ಟುಗಳ ಆ[illegible] ನಲ್ಲಿ ಪ್ರತಿದಿನವೂ ಸಂಗ್ರಹವಾಗುವ ಕಕ್ಷಿ[illegible] ರಾಶಿಗಳು ಬಹಳ ಅಸಹ್ಯಕರವಾಗಿದೆ ಕೋ[illegible] ಆವರಣದಲ್ಲಿ ಮಾತ್ರವಲ್ಲದೆ ಕಟ್ಟಡದ ಎ[illegible] ಭಾಗಗಳಲ್ಲಿಯೂ ಬೀಡಿ,ಸಿಗರೇಟು, ಬಾಳೆ[illegible] ಕಡಲೆಕಾಯಿ ಸಿಪ್ಪೆ ಮುಂತಾದುವುಗಳು [illegible] ರಾಶಿಯಾಗಿ ಬಿದ್ದಿರುತ್ತವೆ ಇದನ್ನು ಅಧಿ[illegible] ವಗೆದವರೂ, ವಕೀಲರುಗಳೂ, ಇತರ ಸಾ[illegible] ಜನಿಕರೂ ಹೇಗೆ ಸಹಿಸಿಕೊಂಡಿರುವರೆಂಬು[illegible] ಅರ್ಥವಾಗುವುದಿಲ್ಲ ಮಾದರಿ ನಗರವಾದ [illegible] ಸೂರಿಗೆ ಇದು ನಿಜವಾಗಿಯೂ ಕಳಂಕಪ್ರಾ[illegible] ವಾಗಿದೆ

ಅವಶ್ಯಕವಾದ ಸೌಲಭ್ಯಗಳನ್ನು ಕಲ್ಪಿಸ[illegible] ಇರುವುದರಿಂದ ಕೋರ್ಟುಗಳಿಗೆ ಬರುವ ಜನ[illegible] ಮಾಡಕಳ್ಳ ಜಲಮಲ ವಿಸರ್ಜನಾದಿ ಅಪರಾ[illegible] ಗಳಿಗಾಗಿ ಶಿಕ್ಷೆ ಮಾಡುವ ನ್ಯಾಯಸ್ಥಾನದ ಆವರಣದಲ್ಲಿ ಇಂತಹ ಕಕ್ಕಸುಗಳಿಗೆ ಅವಕಾಶ[illegible] ರುವುದು ಸೋಜಿಗವೇ ಸರಿ ಇನ್ನಾದರೂ [illegible] ಬಂಧಪಟ್ಟ ಅಧಿಕಾರಿಗಳು ಈ ಕಟ್ಟಡದ ಸ್ವ[illegible] ತೆಯನ್ನು ಅವಶ್ಯವಾಯವಾದ ರೀತಿಯಲ್ಲಿ [illegible] ಡಲು ಗಮನ ಕೊಡುವರೆಂದು ನಂಬಲಾಗಿದೆ

— ಒಬ್ಬ ಕಕ್ಷಿಗ[illegible]

ಬೇಕಾಗಿದ್ದಾರೆ
ಅನುಭವಸ್ಥರಾದ ಕಂಪಾಸಿಟರ್ ಮತ್ತು ಟ್ರೆಡಲ್ ಪ್ರಿಂಟರ್ ಬೇಕಾಗಿದ್ದಾರೆ. ಸಂ[illegible] ಳ ಯೋಗ್ಯತಾನುಸಾರ
Apply to
ಸೀತಾರಾಘವ ಪ್ರೆಸ್,
ರಾಮಸ್ವಾಮಿ ಸರ್ಕಲ್, ಮೈಸೂರು

ಟಾನಿಕ್ಕಿನ ಅವಶ್ಯಕತೆ ಯಾರಿಗಿದೆ?
★ ಯಾರು ಆರೋಗ್ಯವಂತರಾಗಿದ್ದು ಅವನ್ನು [illegible] ಕಾಲದಲ್ಲಿಯೂ ಹೊಂದಿ ಸಂತೋಷ[illegible] ವೇಳೆ ಮು ಧರಿಸಿರುವರೋ ಅವರಿಗೆ
★ ಯಾರು ಸ್ವಾಭಾವಿಕವಾಗಿ ಆರೋಗ್ಯ, [illegible] ದಾರ್ಢ್ಯ ಮತ್ತು ವೀರ್ಯಬಲಗಳನ್ನು [illegible] ಪೂರ್ಣವಾಗಿ ಹೊಂದಲು ಬೇಕಾದ ಶಕ್ತಿ[illegible] ಕೊರತೆಯನ್ನು ಹೊಂದಿರುವರೋ ಅವರಿಗೆ
ಇವುಗಳಿಗೆಲ್ಲಾ ಮಾನವ ಶರೀರವು ಕೇವಲ ಯಂ[illegible] ಪಟಿ, ಕಾಲ ಮತ್ತು ಶಕ್ತಿ ಇವು ಯಂತ್ರವ[illegible] ಯಾಗಿ ಕೆಲಸ ಮಾಡಲು ಅಗತ್ಯ ಸಾಮ[illegible] ಗಳು ಹಾಗೆಯೇ ಮಾನವ ಶರೀರವು [illegible] ಯಾಗಿರಬೇಕಾದರೆ ವಾತ, ಪಿತ್ತ ಕಫಗ[illegible] ಅವಶ್ಯಕವಾದುವು
ಇವುಗಳಲ್ಲದರ ಸಮತೋಲನವೇ ಜೀವನ. ಇವು[illegible] ಕೊರತೆಯೇ ಅಸ್ವಾಸ್ಥ್ಯ-ರೋಗ
ಅಸ್ವಸ್ಥ ಮತ್ತು ರೋಗಗಳಿಂದ ಉಂಟಾಗುವ [illegible] ಹಾನಿಗಳನ್ನು ಯಾವ ಶಾಸ ಉಪಶಮನ[illegible]
ನವರತ್ನ-ಕಲ್ಪ
ರಕ್ತ, ಮಾಂಸ, ಮೂಳೆ, ಮಜ್ಜೆ, ಶುಕ್ಲ, [illegible] ಮೇಧಸ್, ರಂಭನ್ಯ, ವೀರ್ಯ ಮತ್ತು ಪ್ರಕಾಶ[illegible] ತನೇ ಮುಂತಾದ ಒಂಭತ್ತು ಧಾತುಗಳ [illegible] ಜೋಡಿ
★ ಧೃಢವಾಗಿರುವ ದೇಹಾರೋಗ್ಯದ ಪುನಶ್ಚ[illegible]
★ ಕಳೆದುಹೋದ ಶಕ್ತಿಯ ಪುನರುಜ್ಜೀವನ ಮ[illegible]
★ ಯೌವನ ಮತ್ತು ಅದರ ಎಲ್ಲ ಪರಿಣಾ[illegible] ಪುನರುತ್ಪಾದನೆ
ಇದು ಅದ್ವಿತೀಯವಾದ ಟಾನಿಕ್[illegible]
—: ತಯಾರಿಸುವವರು —
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿ.
ಉಚಿತ ಸಾಹಿತ್ಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆ[illegible]
NAVRATNA KALPA PHARMACY,
Jullundur City (India)
Grams : NAVRATNA

Edited, Printed and Published [illegible] A R Nagarajan at Sadhvi Pre[illegible] D Subbiah Road Mysore

ಟೆಲಿಫೋನ್ ನಂ. 792

ಕೋರ್ಟ್ ಸ್ಕ್ವೇರ್

ಸ್ಥಾಪಿತ 1932 ಫೋನ್ 811

ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,

ನ್ಯೂ ಸ್ಟ್ಯಾಚ್ಯು ಸರ್ಕಲ್,

ಮೈಸೂರು

ನಮ್ಮಲ್ಲಿ ಚಿನ್ನದ ಶಿಷ್ಟದಿಂದ ತಯಾರಾದ ಡೆಕೋರೇಷನ್‌ಗಳೂ, ಬಳೆಗಳೂ, ಮತ್ತು ನವೀನ ರೀತಿಯ ಕಲ್ಲಿನ ಒಡವೆಗಳೂ ಸಹ ದೊರೆಯುತ್ತವೆ

ಬಂದಿದೆ ಹೊಸ 3 ಬಾರು

ಉಗ್ಗದ ಜವಳಿ

ಗೌನ್ ಸಿಲ್ಕ್ ಸೀರೆಗಳು

ಧರ್ಮಾವರಂ, ಪೂನಾ, ಅರ್ಗ, ಬೆಂಗಳೂರ್

ರೇಷ್ಮೆ ಮತ್ತು ಜರಿಗಳ ಸೀರೆಗಳು

ಬಂದಿವೆ ಅಂಗಡಿ ಭೇಟಿ ಕೊಡಿ

M.V. ಭೋಜಯ್ಯ

ಸ.ಎ., ಶಿ ಫ್ರೆಂಡ್ಸ್,

ಇಂಡಿಯನ್ ಬ್ಯಾಂಕ್ ಎದುರು,

ಮೈಸೂರು : ಫೋನ್ 446

ಪುಸ್ತಕ : ೧೪] SADHVI : MONDAY 28-5 1956 ಮೈಸೂರು : ಸೋಮವಾರ ೨೮-೫-೧೯೫೬ [ಸಂಚಿಕೆ : ೨೪೬

ಸೈನ್ಯದ ಖೋತಾಕ್ಕೆ ವಿನೋಬಾ ಮತ್ತು ರಾಜಾಜಿ ಕರೆ

"ಶ್ರೀ ವಾಸವೀ ನಿಲಯ" ಧರ್ಮಶಾಲೆಯ ಪ್ರಾರಂಭೋತ್ಸವ

ಶ್ರೀಮನ್ಮಹಾರಾಜರ ಭಾಷಣ

ಮೈಸೂರು ೨೭

ರಾಜಧಾನಿಯ ಶ್ರೀರಾಮಪೇಟೆಯಲ್ಲಿ ಬೆಂಗಳೂರಿನ ಶ್ರೀ ಎನ್. ಕೆ. ಸುಬ್ಬಯ್ಯಶೆಟ್ಟಿ ಅಂಡ್ ಸನ್ಸ್‌ರವರು ೧ ಲಕ್ಷ ರೂ ವೆಚ್ಚದಿಂದ ನಿರ್ಮಿಸಿದ ಶ್ರೀ ವಾಸವೀ ನಿಲಯ ಎಂಬ ಧರ್ಮಶಾಲೆಯ ಆರಂಭೋತ್ಸವವನ್ನು ನೆನ್ನೆ ಶ್ರೀಮನ್ಮಹಾರಾಜರು ನೆರವೇರಿಸಿದರು. ಇದಕ್ಕಾಗಿ ಅಲ್ಲಿ ಹಾಕಲಾಗಿದ್ದ ಭವ್ಯವಾದ ಚಪ್ಪರದಲ್ಲಿ ಭಾರಿ ಸಮಾರಂಭವು ನಡೆಯಿತು. ಶ್ರೀಮನ್ಮಹಾರಾಜರೊಡನೆ ಅವರ ಭಾವಂದಿರಾದ ಭ[illegible]ಪುರದ ಮಹಾರಾಜರೂ ದಯಮಾಡಿಸಿದ್ದರು.

ಶ್ರೀಮತಿ ಇಂದಿರಮ್ಮನವರಿಂದ ಮಂಗಳಾಚರಣೆ, ಶ್ರೀಮತಿ ಜಲಜಾಕ್ಷಮ್ಮ ಮತ್ತು ವೃಂದದವರಿಂದ ಗಾಯನವೂ ಆದನಂತರ ಶ್ರೀ ಎನ್. ಸುಬ್ಬಯ್ಯಶೆಟ್ಟರು ಬಿನ್ನವತ್ತಳೆಯನ್ನು ಓದಿ [illegible] ಕರಂಡದೊಡನೆ ಶ್ರೀಮನ್ಮಹಾರಾಜರಿಗೆ ಸಮರ್ಪಿಸಿದರು. ಪ್ರಭುಗಳು ತಮ್ಮ ಭಾಷಣದಲ್ಲಿ ಈ ರೀತಿ ನುಡಿದರು —

ಮಹಾರಾಜರ ಭಾಷಣ

"[illegible] ಹಿಂದಿನಿಂದಲೂ ದಾನಶೀಲರನ್ನು [illegible] "ನೂರು ಜನರಲ್ಲಿ ಒಬ್ಬ ಶೂರ ಹುಟ್ಟುತ್ತಾನೆ, ಸಾವಿರದಲ್ಲಿ ಒಬ್ಬ ಪಂಡಿತ, ಹತ್ತು ಸಾವಿರದಲ್ಲಿ ಒಬ್ಬ ವಾಗ್ಮಿ, ಆದರೆ "ದಾತ" ಹುಟ್ಟುವನೋ ಇಲ್ಲವೋ ! –

"ಶತೇಷು ಜಾಯತೇ ಶೂರಃ ಸಹಸ್ರೇಷು ಚ ಪಂಡಿತಃ ।

ವಕ್ತಾ ದಶಸಹಸ್ರೇಷು ದಾತಾ ಭವತಿ ವಾ ನ ವಾ ॥

[illegible] ಬ ಶ್ಲೋಕವು ಪ್ರಸಿದ್ಧವೇ ಆಗಿದೆ. ಧರ್ಮಕ್ಕಿಂತಲೂ ಧನತ್ಯಾಗವು ಅಧಿಕವೆಂಬುದೂ ನಮ್ಮ ಪ್ರಾಚೀನರ "ದರ್ಶನ" ವಾಗಿದ್ದಿತು. "ತ್ಯಾಗೇನೈಕೇ ಅಮೃತತ್ವಮಾನಶುಃ" – [illegible] ತ್ಯಾಗದಿಂದ ತ್ಯಾಗದ ಮಹಿಮೆಯನ್ನು ಸಾರಿದರಲ್ಲವೆ ನಮ್ಮ ಹಿಂದಿನವರು ? [illegible] ಈ ಧ್ಯೇಯಗಳನ್ನು ಮನಸ್ಸಿನಲ್ಲಿಟ್ಟು, ಅಧಿಕ [illegible]ದಿಂದ ಈ ಧರ್ಮಶಾಲೆಯನ್ನು ಕಟ್ಟಿರುವುದು ಮೆಚ್ಚಿಗೆಯ ವಿಷಯವಾಗಿದೆ.

ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ಧರ್ಮಶಾಲೆಗಳನ್ನು ಸ್ಥಾಪಿಸುವುದು ಒಂದು ಪದ್ಧತಿ[illegible] ಅನ್ಯ ಗ್ರಾಮದವರೂ, ಅನ್ಯ ದೇಶದವರು ಇವುಗಳಿಗೆ ಬಂದು, ಒಂದೆರಡು ದಿನ ನಿಲ್ಲಲು ಅನುಕೂಲ ಪಡೆವರು. ಮುಂದೆ ಕಿರಿಯುತ್ತಿದ್ದ[illegible] ಇಲ್ಲವೆ, ಹಿಂದೂ ಧರ್ಮದ ಮುಖ್ಯಾಂಗವಾದ [illegible] ಗಳ ನಿರ್ವಹಣೆಯಲ್ಲಿ ಇವು ನೆರವಾಗಿ[illegible] ಅವುಗಳಲ್ಲೂ ಮುಖ್ಯವಾದ ಉಪನಯನ [illegible] ಮೊದಲಾದ ಸಮಾರಂಭಗಳನ್ನು ಮಾಡುವುದಕ್ಕೆ [illegible] ಸ್ಥಳವೇ ಮೊದಲಾದ ಸೌಕರ್ಯಗಳು ಅವಶ್ಯಕ[illegible] ಈ ಸೌಕರ್ಯಗಳು ಧರ್ಮಶಾಲೆಗಳಲ್ಲಿ [illegible] ಈಗಿನ ದಿನಗಳಲ್ಲಾದರೋ ಈ ಕಾರಣಗಳ ನಿರ್ವಹಣೆ ಇನ್ನೂ ಹೆಚ್ಚಾಗಿ ಅವಶ್ಯಕವೆಂದೇ [illegible] ಹೇಳಬಹುದು. ದೊಡ್ಡದೊಡ್ಡ ನಗರಗಳಲ್ಲಿ ಗೃಹ [illegible] ಗಳ ಸೌಕರ್ಯ ಕಡಿಮೆಯಾಗಿ, ಉಪನಯನ ವಿವಾಹಾದಿಗಳ ನಿರ್ವಹಣೆಗೆ ಅಡ್ಡಿಯು ಅಧಿಕವೇ [illegible] ಆದುದರಿಂದ ಹಾಸನೀಯರ ವಿಚಾರ[illegible] ದ ಈ ಧರ್ಮಶಾಲೆಗಳು ಬೇಕಾದ ಅನುಕೂಲಗಳನ್ನು ಕಲ್ಪಿಸಿ, ಜನರಿಗೆ ಉಪಯುಕ್ತವಾಗುತ್ತಿರುವುದುಗಳಾಗಿವೆ.

ಫ್ರೆಂಚ್ ಸ್ಥಾನ್ಯಗಳ ವರ್ಗ

ಭಾರತದಲ್ಲಿ ಫ್ರೆಂಚರು ೨೫೦ ವರ್ಷಗಳಿಂದ ಹೊಂದಿದ್ದ ಪುದುಚೇರಿ, ಕಾರೈಕಲ್, ಮಾಹೆ ಮತ್ತು ಯಾನಾಂ ಈ ನಾಲ್ಕು ವ್ಯಾಪಾರಿ ಕೋಠಿಗಳನ್ನು ಭಾರತಕ್ಕೆ ವರ್ಗಾಯಿಸಿರುವುದನ್ನು ದೃಢಪಡಿಸಲು ಭಾರತ ಮತ್ತು ಫ್ರಾನ್ಸುಗಳಿಗೆ ಒಪ್ಪಂದವಾಗಿ ಈ ದಿನ ಅದಕ್ಕೆ ರುಜು ಮಾಡಲಿದೆ. ನೆಹರೂರವರು ಭಾರತದ ಪರವಾಗಿಯೂ ಭಾರತದಲ್ಲಿರುವ ಫ್ರೆಂಚ್ ರಾಯಭಾರಿ ಕೌಂಟ್ ಆಸ್ಟ್ರೋರ್ಗ್‌ರವರು ತಮ್ಮ ದೇಶದ ಪರವಾಗಿಯೂ ರುಜು ಮಾಡುವರು.

ಜೂನ್ ೧ರಿಂದ ಬೆಂಗಳೂರು ರೇಷ್ಮೆ ಕೆಲಸಗಾರರ ಸತ್ಯಾಗ್ರಹ

ಬೆಂಗಳೂರು ರೇಷ್ಮೆ ಕೆಲಸಗಾರರ ಸಂಘದ ಆಶ್ರಯದಲ್ಲಿ ನೆನ್ನೆ ಬಹಿರಂಗ ಸಭೆಯು ನಡೆದು, ಕಳೆದ ೩೦ ರಂದು ಜರುಗಿದಂತೆ ದೊಡ್ಡದೊಡ್ಡ ಕಾರ್ಖಾನೆ ಮಾಲೀಕರು ನಡೆದುಕೊಂಡಿರುವುದರಿಂದ ೧,೫೦೦ ಮಂದಿ ಕಾರ್ಮಿಕರಿಗೆ ಕಷ್ಟನಷ್ಟಗಳಾಗಿರುವುದಾಗಿ ಆಕ್ಷೇಪಿಸಲಾಯಿತು. ಸರ್ಕಾರದವರು ಪರಿಸ್ಥಿತಿಯನ್ನು ಕೂಡಲೇ ಸರಿಪಡಿಸದಿದ್ದರೆ ಬರುವ ೧ನೇ ತಾರೀಖಿನಿಂದ ಆ ದಾರಾ ಕಛೇರಿ ಮುಂದೆ ಸಾಮೂಹಿಕ ಸತ್ಯಾಗ್ರಹವನ್ನು ಹೂಡಬೇಕೆಂದೂ ತೀರ್ಮಾನಿಸಲಾಯಿತು.

ಈ ನೂತನ ಧರ್ಮಶಾಲೆಯು ಈಗಿನ ಕಾಲಕ್ಕೆ ತಕ್ಕಂತೆ ಎಲ್ಲ ಅನುಕೂಲಗಳನ್ನು ಮತ್ತು ಸೌಕರ್ಯಗಳನ್ನು ಹೊಂದಿರುವ ಸುಂದರವಾದ ಕಟ್ಟಡ. ಈ ಧರ್ಮಶಾಲೆಗೆ ಮುಂಭಾಗದಲ್ಲಿ ನಿರ್ಮಿಸಿರುವ ಆಂಗಡಿಗಳಿಂದ ಬರತಕ್ಕ ವರಮಾನವನ್ನು ಈ ಅವರಣದಲ್ಲಿ ಪ್ರತಿಷ್ಠಿಸಿರುವ ದೇವರುಗಳಿಗೆ ನಿತ್ಯಪೂಜಾದಿಗಳೂ, ವಿಶೇಷ ದಿನಗಳ ಉತ್ಸವಗಳೂ ಮತ್ತು ಉತ್ಸವಗಳೂ "ಮಾತೃದೇವೋ ಭವ, ಎಂಬ ಹಿರಿಯರ ವಾಕ್ಯವನ್ನು ಮನಗಂಡು, ತಮ್ಮ ಮಾತಾಪಿತೃಗಳ ಹೆಸರಿನಲ್ಲಿ ಸಾರ್ವಜನಿಕವಾಗಿ ನಡೆಯುವಂತೆ ವ್ಯವಸ್ಥೆ ಮಾಡಿರುವುದು ಸಂತೋಷಕರವಾದ ಮತ್ತು ಸ್ತೋತ್ರಾರ್ಹವಾದ ಸಂಗತಿ. ಈ "ಶ್ರೀ ವಾಸವೀ ನಿಲಯ" ಎಂಬ ಧರ್ಮಶಾಲೆಯು ಇಂದು ನೂರಾರು ಜನರ ಸೌಕರ್ಯ, ಸಂತೋಷಗಳಿಗೆ ಸಾಧನವಾಗಲೆಂದು ಹಾರೈಸುತ್ತೇನೆ.

ಬೊಂಬಾಯಿ ಬಾಲಕಿಯ ದಿಟ್ಟತನ

ಸಮಾರಂಭದ ಮಧ್ಯೆ ಸುಮಾರು ೧೦ ವರ್ಷದ ಕನ್ಯೆಯೊಬ್ಬಳು ಯಾರಿಗೂ ತಿಳಿಯದಂತೆ ದಿಟ್ಟತನದಿಂದ ವೇದಿಕೆಯ ಮೇಲಕ್ಕೆ ಹತ್ತಿ ಶ್ರೀಮನ್ಮಹಾರಾಜರಿಗೆ ಕೆಲವು ಚಿತ್ರಗಳ ಸಂಗ್ರಹವೊಂದನ್ನು ಸಮರ್ಪಿಸಿ, ಅವರ ಹಸ್ತಾಕ್ಷರಕ್ಕಾಗಿ ಪುಟ್ಟ ಪುಸ್ತಕವನ್ನು ನೀಡಿ ಅವರ ಫೋಟೋವನ್ನು ತೆಗೆದುಕೊಂಡ ದೃಶ್ಯವು ಎಲ್ಲರನ್ನೂ ವಿಸ್ಮಯಗೊಳಿಸಿತು. ಯಾರಿಗೂ ಪರಿಚಯವಿಲ್ಲದ ಆ ಬಾಲಕಿಯು ಬೊಂಬಾಯಿನಿಂದ ಪರ್ಯಟನೆಗಾಗಿ ನಗರಕ್ಕೆ ಬಂದಿದ್ದ ವಿದ್ಯಾರ್ಥಿನಿಯರ ತಂಡದ ಒಂದು ವ್ಯಕ್ತಿಯೆಂದು ಅನಂತರಗೊತ್ತಾಯಿತು. ಆಕೆಯ ಹೆಸರು ಹಂಸಾ ಕರ್ಡಾಸ್. ಮಹಾರಾಜರು ಆಕೆಯ ಉತ್ಸಾಹವನ್ನು ಕಂಡು ಪ್ರಶಂಸೆತರಾಗಿ ಹಸ್ತಾಕ್ಷರವನ್ನು ಬರೆದುಕೊಟ್ಟರು.

ಭಾರತ ಸೈನ್ಯದ ಸಂಖ್ಯೆಯಲ್ಲಿ ಖೋತಾ ಆಗಬೇಕು

ವಿನೋಬಾ ಭಾವೆ ಮತ್ತು ರಾಜಾಜಿಯವರ ಕರೆ

ಕಾಂಚೀಪುರದಲ್ಲಿ ನೆನ್ನೆ ಆರಂಭವಾದ ಅಖಿಲ ಭಾರತ ಸರ್ವೋದಯ ಸಮ್ಮೇಳನದಲ್ಲಿ ಸಿ. ರಾಜಗೋಪಾಲಾಚಾರಿಯವರು ಭಾರತ ಸರ್ಕಾರಕ್ಕೆ ಮನವಿ ಮಾಡಿ, ಇದೀ ವಿಶ್ವಕ್ಕೆ ಮಾದರಿಯಾಗಲು ಭಾರತದ ಸೈನ್ಯ ಬಲವನ್ನು ಖೋತಾ ಮಾಡಬೇಕೆಂದು ಸೂಚಿಸಿದ್ದರು. ಭಾರತವು ಧೈರ್ಯ ಮತ್ತು ಆತ್ಮವಿಶ್ವಾಸವುಳ್ಳದ್ದೆಂದೂ ಮತ್ತು ಗಾಂಧಿಯವರ ಸರ್ವೋದಯ ಧ್ಯೇಯಗಳಲ್ಲಿ ದೃಢ ನಂಬಿಕೆಯನ್ನು ಹೊಂದಿರುವುದಾಗಿಯೂ ಈ ಮೂಲಕ ಜಗತ್ತಿಗೆ ಸಾರಬೇಕೆಂದು ಅವರು ತಿಳಿಸಿದರು.

ಸಂಜೆ ಪ್ರಾರ್ಥನಾ ಸಭೆಯಲ್ಲಿ ಆಚಾರ್ಯ ವಿನೋಬಾ ಭಾವೆಯವರು ಮಾತನಾಡಿ, ಭಾರತವು ತನ್ನ ಸೈನ್ಯ ಶಕ್ತಿಯನ್ನು ಅರ್ಧದಷ್ಟು ಕಡಿಮೆ ಮಾಡಿಕೊಳ್ಳಬೇಕೆಂದು ನುಡಿದರು. ಭಾರತವು ತೋರುವ ಮಾರ್ಗದಲ್ಲಿ ವಿಶ್ವವು ನಡೆಯುವ ಸ್ಥಿತಿಯು ಈಗ ಬಂದಿರುವುದೆಂದು ಅವರು ಸೂಚಿಸಿದರು. ರಾಜಾಜಿಯವರ ಕರೆಯನ್ನು ಅವರು ಸಮರ್ಥಿಸಿದರು. ಮಿಲಿಟರಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರುವ ಪಾಕಿಸ್ತಾನಕ್ಕೆ ಭಾರತವು ಹೆದರಬೇಕಾಗಿಲ್ಲವೆಂದೂ, ಮಿಲಿಟರಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ರಾಷ್ಟ್ರವು ತನ್ನ ವಿನಾಶಕ್ಕೆ ದಾರಿ ಮಾಡಿಕೊಳ್ಳುವುದೆಂದೂ, ಭಾರತವು ತನ್ನ ಸೈನ್ಯ ಶಕ್ತಿಯನ್ನು ಕಡಿಮೆ ಮಾಡಿಕೊಂಡು ತನ್ಮೂಲಕ ಪಾಕಿಸ್ತಾನವು ನಾಚಿಕೆಪಡುವಂತೆ ಮಾಡಬೇಕೆಂದೂ ವಿನೋಬಾಜಿಯವರು ಹೇಳಿದರು.

ರಾಜಾಜಿಯವರು ತಮ್ಮ ಭಾಷಣದಲ್ಲಿ ಪಾಕಿಸ್ತಾನಕ್ಕೆ ದೊರೆಯುವ ಅಮೆರಿಕದ ಮಿಲಿಟರಿ ಸಹಾಯದಿಂದ ಭಾರತವು ಅಧೀರ ಮನೋಭಾವವನ್ನು ಹೊಂದಬಾರದೆಂದೂ, ಅಮೆರಿಕವು ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯವಿತ್ತರೂ, ಭಾರತವು ಏಕೈಕವಾಗಿ ವಿಶ್ವಶಾಂತಿಯ ಹಿತ ಸಾಧನೆ ದೃಷ್ಟಿಯಿಂದ ತನ್ನ ಸೈನ್ಯ ಬಲವನ್ನು ಗಣನೀಯವಾಗಿ ಕಡಿಮೆ ಮಾಡಿಕೊಳ್ಳಬೇಕೆಂದೂ ತಿಳಿಸಿದರು. ಭಾರತೀಯರು ತಮ್ಮ ರಕ್ಷಣಾ ವೆಚ್ಚವನ್ನು ಖೋತಾ ಮಾಡಿಕೊಳ್ಳುವ ಧೈರ್ಯ ತೋರದಿದ್ದರೆ ಮಹಾತ್ಮಾ ಗಾಂಧಿ ಮತ್ತು ಅವರ ಧ್ಯೇಯಗಳ ಬಗ್ಗೆ ಮಾತನಾಡಲು ಅವರಿಗೆ ತಕ್ಕುದಿಲ್ಲವೆಂದೂ ಅವರು ನುಡಿದರು.

ಪಾಕಿಸ್ತಾನದಲ್ಲಿ ಸಧ್ಯದಲ್ಲೇ ಮುಸ್ಲಿಂ ಲೀಗಿನ ಅವನತಿ

ಪಾಕಿಸ್ತಾನದ ರಾಜಕೀಯ ಜೀವನದಲ್ಲಿ ಮುಸ್ಲಿಂ ಲೀಗು ಒಂದು ಸಂಸ್ಥೆಯಾಗಿ ಹೆಚ್ಚು ಕಾಲ ಉಳಿಯುವುದಿಲ್ಲವೆಂದು ಪಶ್ಚಿಮ ಪಾಕಿಸ್ತಾನದ ಮುಖ್ಯ ಮಂತ್ರಿ ಡಾ॥ ಖಾನ್ ಸಾಹೇಬರು ತಿಳಿಸಿರುತ್ತಾರೆ. ತಾವು ಮುಖ್ಯ ಮಂತ್ರಿಯಾಗಿರುವವರೆಗೆ ನೈತಿಕ ಮಟ್ಟವನ್ನು ಹೆಚ್ಚಿಸುವುದಕ್ಕೂ ಮತ್ತು ಲಂಚ ರುಷುವತ್ತುಗಳನ್ನು ದಮನ ಮಾಡುವುದಕ್ಕೂ ಎಂದು ಅವರು ಹೇಳಿರುವರು.

ರೇಷ್ಮೆ ಆಮದನ್ನು ಕೇಂದ್ರ ಸರ್ಕಾರದವರು ನಿರ್ಬಂಧಿಸಬೇಕು

ಕೇಂದ್ರ ರೇಷ್ಮೆ ಸಮಿತಿ [illegible] ಮುಂಕಯ್ಯ ಮತ್ತು ಕೆ. ಸಿ. [illegible] ಭಾಷಣ

ಸ್ವಂ ವ ಪ್ರೋ] ಬೆಂಗಳೂರು ೨೭

ಕೇಂದ್ರ ರೇಷ್ಮೆ ಸಮಿತಿಯ [illegible] ಸಭೆಯು ಈ ದಿನ ಇಲ್ಲಿ ರೇಷ್ಮೆ [illegible] ಅಧ್ಯಕ್ಷರಾದ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತು.

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಆರಂಭೋತ್ಸವವನ್ನು ನೆರವೇರಿಸಿ, ಕೇಂದ್ರ ಸರ್ಕಾರದವರು ರೇಷ್ಮೆಯ ಆಮದನ್ನು ಆದಷ್ಟು ಹೆಚ್ಚಾಗಿ ನಿರ್ಬಂಧಿಸಬೇಕೆಂದು ಹೇಳಿದರು. ಭಾರತದಲ್ಲಿ ಉತ್ಪತ್ತಿಯಾಗುತ್ತಿರುವ ರೇಷ್ಮೆ ಶೇಕಡ ೮೦ ರಷ್ಟು ಸಂಸ್ಥಾನದಲ್ಲೇ ಉತ್ಪತ್ತಿಯಾಗುವುದರಿಂದ ಸಂಸ್ಥಾನದಲ್ಲಿ ರೇಷ್ಮೆ [illegible] ಕೇಂದ್ರ ಕಛೇರಿ ಇರುವುದು ಅಗತ್ಯವೆಂದೂ, ಇಲ್ಲಿನ ವಿವಿಧೋದ್ದೇಶ ಶಾಲೆಗಳಲ್ಲಿ ರೇಷ್ಮೆ ವ್ಯವಸಾಯದ ಬಗ್ಗೆ ಪಾಠಗಳನ್ನು ಹೇಳಿಕೊಡುವ [illegible]ದಾಗಿಯೂ ಅವರು ನುಡಿದರು.

ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮಾತನಾಡಿ, ಭಾರತ ಸರ್ಕಾರವು ರೇಷ್ಮೆ ಆಮದನ್ನು ಕ್ರಮಿಯಾಗಿ ನಿರ್ಬಂಧಿಸಲು ಆಲೋಚಿಸಿದ್ದಾರೆಂದೂ, ಆದರೆ ಈ ಬಗ್ಗೆ ಪರಿಸ್ಥಿತಿಯನ್ನು ಅರಿತು [illegible] ಕಾಲ ಆಗುವರೆಗೆ ಅವಕಾಶವಿತ್ತುದುದಾಗಿಯೂ ನುಡಿದರು. ಕೇಂದ್ರ ಸರ್ಕಾರದವರು ರೇಷ್ಮೆ ಅಭಿವೃದ್ಧಿಗಾಗಿ [illegible] ಲಕ್ಷ ರೂ [illegible] ಹಣವನ್ನು ವೆಚ್ಚವಾಗಿಲ್ಲವೆಂದೂ, ಕೇಂದ್ರದವರಲ್ಲಿ ಹಣದ ಕೊರತೆಯೇನೂ ಇಲ್ಲವೆಂದೂ, ಸರಿಯಾದ ವ್ಯವಸ್ಥೆ ಇಲ್ಲದಿರುವುದೇ ರೇಷ್ಮೆ [illegible] ಅನುಕೂಲವಾಗದಿರಲು ಕಾರಣವೆಂದೂ ತಿಳಿಸಿದರು.

ಆಯುರ್ವೇದದ ಸಂಶೋಧನೆಗಾಗಿ ಕೇಂದ್ರದಿಂದ ಧನ ಸಹಾಯ

ಸಂಸ್ಥಾನಗಳಲ್ಲಿ ಆಯುರ್ವೇದ ಸಂಶೋಧನಾ ಶಾಲೆಗಳನ್ನು [illegible] ವೆಚ್ಚವನ್ನು ಭಾರತ ಸರ್ಕಾರದವರು ವಹಿಸಿಕೊಳ್ಳಲಿರುವುದಾಗಿ ವರದಿಯಾಗಿದೆ.

ವಿನೋಬಾ ಭಾವೆಯವರಿಂದ ೩ ದಿನಗಳ ಉಪವಾಸ

ಆತ್ಮಶುದ್ಧಿಯ ಸಂಕಲ್ಪ

ವಿ ಪ ತಂ] ಕಾಂಚೀಪುರ ೨೮

ಇಲ್ಲಿ ಸೇರಿರುವ ಭಾರತ ಸರ್ವೋದಯ ಸಮ್ಮೇಳನದಲ್ಲಿ ಆಚಾರ್ಯ ವಿನೋಬಾ ಭಾವೆಯವರು ಮಾತನಾಡಿ, ಬರುವ ತಿಂಗಳು ೧೯ ರಿಂದ ೩ ದಿನಗಳ ಕಾಲ ಆತ್ಮಶುದ್ಧಿಗಾಗಿ ತಾವು ಉಪವಾಸ ಮಾಡುವುದಾಗಿ ತಿಳಿಸಿದರು.

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ, ಶ್ರೀ ಟಿ. ಮರಿಯಪ್ಪ ಮತ್ತು ಶ್ರೀ ಎ. ಜಿ. ಬಂದೀಗೌಡರು ವಿನೋಬಾಜಿಯವರನ್ನು ಸಂದರ್ಶಿಸಿ, ಮೈಸೂರು ಸಂಸ್ಥಾನದಲ್ಲಿ ಭೂದಾನ ಚಳುವಳಿಯನ್ನು ನಡೆಸಲು ಒಪ್ಪಿಗೆಯನ್ನು ಸೂಚಿಸಿದರು.

ಬುದ್ಧ ಜಯಂತಿ ಉತ್ಸವ

ಮೈಸೂರು ೨೬

ರಾಜಾರಾಂ ಅಗ್ರಹಾರದಲ್ಲಿ ಕಳೆದ ೨೪ನೇ ತಾರೀಖು ಬುದ್ಧ ಜಯಂತಿಯನ್ನು ಶಾರದಾ ವಿಲಾಸ ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಎಂ ಎಸ್ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಶ್ರೀ ತ ರಾ ಸುಬ್ಬರಾಯರು ಭಾಷಣ ಮಾಡಿ ಬುದ್ಧನ ಉಪದೇಶಾಮೃತವನ್ನು ಮನನ ಮಾಡಿ ಸಕಲರೂ ತಮ್ಮ ಜೀವಿತವನ್ನು ಉತ್ತಮಪಡಿಸಿಕೊಳ್ಳಬೇಕೆಂದು ತಿಳಿಸಿದರು ಮಹಾರಾಣಿ ಕಾಲೇಜಿನ ಅಧ್ಯಾಪಕಿ ಶ್ರೀಮತಿ ಪಾರ್ವತಮ್ಮನವರು ಭಾಷಣ ಮಾಡಿದರು ಶ್ರೀ ವೇದಾಂತಂ ಹೆಮ್ಮಿಗೆಯವರು ವಂದನಾರ್ಪಣೆ ಮಾಡಿದರು ಶ್ರೀಮತಿ ಮೈಥಿಲಿಯವರಿಂದ ಸಂಗೀತವು ಏರ್ಪಾಡಾಗಿತ್ತು

ರಾಜಧಾನಿಯ ದಳವಾಯಿ ಪ್ರೌಢಶಾಲೆಯಲ್ಲಿ ಕಳೆದ ಗುರುವಾರ ಬುದ್ಧ ಜಯಂತಿ ಉತ್ಸವವು ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಬುದ್ಧ ಗೀತೆಯಾದನಂತರ ಮುಖ್ಯೋಪಾಧ್ಯಾಯರಾದ ಶ್ರೀ ಎಂ ಆರ್ ವೆಂಕಟಸುಬ್ಬಶಾಸ್ತ್ರಿಯವರು ಸ್ವಾಗತ ಭಾಷಣ ಮಾಡಿದರು ಉಪಾಧ್ಯಾಯರಾದ ಶ್ರೀಗಳು ಹೆಚ್ ಎಸ್ ಅನಂತಾಚಾರ್ ವಿ ವೆಂಕಟರಾಮು ಮತ್ತು ಪಿ ಎ. ರಾಮಚಂದ್ರರವರು ಬುದ್ಧನ ತತ್ವವನ್ನು ವಿವರಿಸಿದರು

ಒಂಟಿಕೊಪ್ಪಲಿನ ಸರ್ಕಾರಿ ನೂತನ ಮಿಕ್ಸೆಡ್ ಪ್ರಾಥಮಿಕ ಶಾಲೆಯಲ್ಲಿ ಜಯಂತಿ ಉತ್ಸವವು ಶ್ರೀ ಎಂ ವೀರಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಬಾಲಕಬಾಲಕಿಯರಿಗೆ ಹಣ್ಣುಗಳನ್ನು ಹಂಚಲಾಯಿತು

ನರಸಿಂಹರಾಜ ಮೊಹಲ್ಲಾ ವನಿತ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಶುಕ್ರವಾರ ಉತ್ಸವವು ಶ್ರೀ ಟಿ ಎ ನರಸಿಂಹಮೂರ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಬಸವರಾಜುರವರಿಂದ ಪ್ರಾರ್ಥನೆ ಮತ್ತು ಶ್ರೀ ಆರ್. ರಂಗಸ್ವಾಮಿಯವರಿಂದ ಸ್ವಾಗತಗಳಾದುವು ಅಧ್ಯಕ್ಷರ ಭಾಷಣಾನಂತರ ಶ್ರೀ ಎಸ್ ಪಾಪಯ್ಯನವರು ವಂದನಾರ್ಪಣೆ ಮಾಡಿದರು

ಹೊಟೇಲು ಕೆಲಸಗಾರರ ಸಂಘದ ವಾರ್ಷಿಕೋತ್ಸವ

ನಗರದ ಹೊಟೇಲು ಕೆಲಸಗಾರರ ಸಂಘದ ವಾರ್ಷಿಕೋತ್ಸವವು ಬರುವ ತಿಂಗಳು ೩೧ನೇ ತಾರೀಖು ನೆರವೇರುತ್ತದೆ ಅದರಲ್ಲಿ ಪ್ರತಿಯೊಬ್ಬ ಸದಸ್ಯರೂ ಭಾಗವಹಿಸುವಂತೆ ಕೋರಲಾಗಿದೆ

ತಾಲ್ಲೂಕು ರೇಂಜ್ ಉಪಾಧ್ಯಾಯರ ಸಭೆ

ಮೈಸೂರು ತಾಲ್ಲೂಕು ರೇಂಜಿನ ಉಪಾಧ್ಯಾಯರುಗಳ ಸಭೆಯು ಮೊನ್ನೆ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೆಚ್ ವಿ ಶ್ರೀರಂಗರಾಜುರವರ ಅಧ್ಯಕ್ಷತೆಯಲ್ಲಿ ನಡೆಯಿತು ಅಧ್ಯಕ್ಷರು ಭಾಷಣ ಮಾಡಿ ಭೂ ದಾನ ವಿದ್ಯಾ ದಾನ ಚಳುವಳಿಯನ್ನು ಉಪಾಧ್ಯಾಯರಿಗೆ ಪರಿಚಯ ಮಾಡಿಕೊಟ್ಟು ಅವರು ಶ್ರಮವಹಿಸಿ ಕೆಲಸ ಮಾಡಬೇಕೆಂದು ಸೂಚಿಸಿದರು

ಜಲಜನಕ ಬಾಂಬ್ ಸಿಡಿತದಿಂದ ಭೂಕಂಪ ; ಸಮುದ್ರದ ಉಬ್ಬರ

ಇತ್ತೀಚೆಗೆ ಅಮೆರಿಕದವರು ಬಿಕಿನಿ ದ್ವೀಪದಲ್ಲಿ ನಡೆಸಿದ ಜಲಜನಕ ಬಾಂಬಿನ ಸಿಡಿತದ ಪರಿಣಾಮವಾಗಿ ಜಪಾನಿನಲ್ಲಿ ಸಣ್ಣ ಪ್ರಮಾಣದ ಭೂಕಂಪ ಮತ್ತು ಸಮುದ್ರದ ಉಬ್ಬರಗಳಾಗಿರುವುದಾಗಿ ಅಲ್ಲಿನ ಸರ್ಕಾರದ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ ಅಣು ಸಿಡಿತವಾದನಂತರ ಭೂಕಂಪವಾದುದು ಇದೇ ಮೊದಲೆಂದು ಹೇಳಲಾಗಿದೆ ಮತ್ತು ಜಪಾನಿನಲ್ಲಿ ಹಣ್ಣು ಮತ್ತು ತರಕಾರಿಗಳಲ್ಲೂ ರೇಡಿಯೊ ಚಲನ ಕಣಗಳು ಸೇರಿರುವುವೆಂದು ಅಲ್ಲಿನ ಸರ್ಕಾರದವರು ತಿಳಿಸಿರುತ್ತಾರೆ

ಜಾಗೃತಿ–ವಿಶೇಷ ಸಂಚಿಕೆ

ಶಿವಮೊಗ್ಗೆಯ ಶ್ರೀ ಎ ಕೆ ಸೀತಾರಾಮ ಅಯ್ಯಂಗಾರ್ಯರು ಪ್ರಕಟಿಸುತ್ತಿರುವ ಜಾಗೃತಿ ಎಂಬ ಕನ್ನಡ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಬುದ್ಧದೇವನ ೨,೫೦೦ನೇ ಜಯಂತಿಗಾಗಿ ವಿಶೇಷ ಸಂಚಿಕೆಯನ್ನು ಹೊರಡಿಸಲಾಗಿದೆ

ಗೃಹ ಕೈಗಾರಿಕೆ ಅಭಿವೃದ್ಧಿಗಾಗಿ ನೂತನ ಯೋಜನೆ

ಬೆಂಗಳೂರು ೨೭

ಸಾಮೂಹಿಕ ಯೋಜನೆ ಆಡಳಿತದವರು ಸಿದ್ಧಗೊಳಿಸಿರುವ ಗೃಹ ಮತ್ತು ಸಣ್ಣ ಕೈಗಾರಿಕೆಗಳ ನೂತನ ಯೋಜನೆಯನ್ನು ಕಾರ್ಯಗತ ಮಾಡಲು ಸಂಸ್ಥಾನ ಸರ್ಕಾರದವರು ನಿರ್ಧರಿಸಿ ರಾಮನಗರದಲ್ಲಿ ಅದನ್ನು ಜಾರಿಗೆ ಕೊಡಲು ಸೂಚಿಸಿದ್ದಾರೆ ಅದರ ಬಗ್ಗೆ ಅರಿವನ್ನು ಪಡೆಯಲು ಮದ್ರಾಸಿಗೆ ಒಬ್ಬ ಅಧಿಕಾರಿಯನ್ನು ಕಳುಹಲಾಗಿದೆ ಸಾಮೂಹಿಕ ಯೋಜನಾ ಅಭಿವೃದ್ಧಿ ಕಮಿಷನರರ ನೇತೃತ್ವದಲ್ಲಿ ಒಂದು ಸಮಿತಿಯನ್ನೂ ರಚಿಸಲಾಗಿದೆ ಅದರಲ್ಲಿ ಅಧಿಕಾರಿ ಸದಸ್ಯರಲ್ಲದೆ ಅಖಿಲ ಭಾರತ ಖಾದಿ ಮತ್ತು ಕೈಗಾರಿಕಾ ಬೋರ್ಡಿನ ಪ್ರಾದೇಶಿಕ ಡೈರೆಕ್ಟರ್ ಶ್ರೀ ಕ ವಿ ವೆಂಕಟರಾಮಯ್ಯ ಮತ್ತು ಮೈಸೂರಿನ ಶ್ರೀ ಎಂ ಶಂಕರಯ್ಯನವರು ಸದಸ್ಯರಾಗಿರುವರು.

ತಿಲಕರ ಸ್ಮಾರಕ ಸ್ಟಾಂಪು

ಲೋಕಮಾನ್ಯ ಬಾಲಗಂಗಾಧರ ತಿಲಕರ ಶತಮಾನೋತ್ಸವದ ನೆನಪಿಗಾಗಿ ಕೇಂದ್ರ ಸರ್ಕಾರದವರು ೨ ಆಣೆಯ ಸ್ಮಾರಕ ಅಂಚೆ ಸ್ಟಾಂಪನ್ನು ಮುದ್ರಿಸಿ ಸಾರ್ವಜನಿಕಕ್ಕೆ ಒದಗಿಸುವರು ತಿಲಕರು ಜನ್ಮವೆತ್ತಿದ ರತ್ನಾಗಿರಿಯಲ್ಲಿ [illegible] ಸ್ಟಾಂಪನ್ನು ಮಾರುವ ವ್ಯವಸ್ಥೆ ಮಾಡಿದೆ

ಕೋಲಾರದಲ್ಲಿ ಕತ್ತೆಗಳ "ಬಂಧನ"

ಕೋಲಾರದಲ್ಲಿ [illegible] ಬಿಡಾಡಿ ಕತ್ತೆಗಳನ್ನೆಲ್ಲಾ ಪೋಲೀಸು ಠಾಣೆ ಆವರಣಕ್ಕೆ ತೆಗೆದುಕೊಂಡು ಹೋಗಿ ಬಂಧಿಸಿಡಲು ಅಲ್ಲಿನ ಪೊಲೀಸು ಅಧಿಕಾರಿಯು ಆಜ್ಞೆ ಮಾಡಿರುತ್ತಾರೆ ಸಾರ್ವಜನಿಕ ಸ್ಥಳಗಳಲ್ಲಿ ಕತ್ತೆಗಳನ್ನು ಮನಸ್ಸೋ ಬಿಡಕೂಡದೆಂದು ಮಾಲೀಕರಿಗೆ ಎಚ್ಚರಿಕೆ ಕೊಡಲಾಗಿದೆ ಅಲ್ಲಿ ಕತ್ತೆಗಳ ಒದೆತದಿಂದ ಹೆಂಗಸರು, ಮಕ್ಕಳು ಮತ್ತು ಗಂಡಸರು ತುಂಬಾ ಪೆಟ್ಟು ತಿಂದು, ಇನ್ನೂ ಕೆಲವರು ಮೂಳೆ ಮುರಿದುಕೊಂಡು ಆಸ್ಪತ್ರೆ ಸೇರಿರುವ ನಿದರ್ಶನಗಳು ಸಾಮಾನ್ಯವಾಗಿರುವುವೆಂದು ಹೇಳಲಾಗಿದೆ ಅಧಿಕಾರಿಯು ತಮ್ಮ ಮಕ್ಕಳೊಡನೆ ಮನೆ ಮುಂದೆ ನಿಂತಿದ್ದಾಗ ಅವರಿಗೂ ಕತ್ತೆಗಳ ಕಾಟದ ಅನುಭವವಾಯಿತೆಂದು ಹೇಳಲಾಗಿದೆ

ಕೆ. ಸಿ. ರೆಡ್ಡಿಯವರಿಂದ ಬಸಮಯ್ಯ ಪ್ರೌಢಶಾಲೆ ವಿಜ್ಞಾನ ಶಾಖೆಯ ಆರಂಭೋತ್ಸವ

ಡಿ ಬಸಮಯ್ಯನವರ ಪ್ರೌಢಶಾಲೆಯ ಹೊರ ಜಂಗಲದಲ್ಲಿ ಶ್ರೀಗಳಾದ ಎನ್ ನಾರಾಯಣ್ ಮತ್ತು ನಾಗಪ್ಪನವರು ಕಟ್ಟಿಕೊಟ್ಟಿರುವ ಡಿ ಸುಬ್ಬಣ್ಣನವರ ವಿಜ್ಞಾನ ಶಾಖಾ ಭವನದ ಆರಂಭೋತ್ಸವವನ್ನು ಕೇಂದ್ರ ಸರ್ಕಾರದ ಉತ್ಪಾದನಾ ಸಚಿವರಾದ ಶ್ರೀ ಕೆ ಸಿ ರೆಡ್ಡಿಯವರು ನಾಳೆ ಮಧ್ಯಾಹ್ನ ೪|| ಗಂಟೆಗೆ ನೆರವೇರಿಸುವರು ಶಾಲಾ ಸ್ಥಾಪಕರ ದಿನಾಚರಣೆಯು ೫|| ಗಂಟೆಗೆ ನಡೆಯುವುದು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮಂಗಳ ವಾದ್ಯ ೭ ಗಂ ೬ ಎಸ್ [illegible] ೭-೪೦ ಗಾನವಿಹಾರ [illegible] ಮಧ್ಯಾಹ್ನ [illegible] ಎಸ್ [illegible] ಗಾನವಿಹಾರ [illegible] ಕಾರ್ಯಕ್ರಮ [illegible] ಸಂಜೆ ೫-೪೦ ಮತ್ತು [illegible] ವಿಶ್ವನಾಥಶಾಸ್ತ್ರಿ-ಸಂಗೀತ [illegible] ಜಯಲಕ್ಷ್ಮಿ [illegible] ೭-೪೦ [illegible] ಸಂಗೀತ ನಾಟಕ, ೮ ೪೦ [illegible]

Poly
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO,
Chemists & Druggists
71/1 A. S Street,
BANGALORE 2

ಮಾರಾಟ ತೆರಿಗೆ ನ್ಯಾಯಮಂಡಲದ ರಚನೆ

ಬೆಂಗಳೂರು ೨೮

ಮಾರಾಟ ತೆರಿಗೆ ಕಮಿಷನರರು ಸಲಹೆ ಮಾಡಿದಂತೆ ಸಂಸ್ಥಾನ ಸರ್ಕಾರದವರು ೩ ಜನ ಸದಸ್ಯರುಳ್ಳ ಮಾರಾಟ ತೆರಿಗೆ ನ್ಯಾಯ ಮಂಡಲವನ್ನು ರಚಿಸಿರುತ್ತಾರೆ. ಜಿಲ್ಲಾ ನ್ಯಾಯಾಧೀಶರೊಬ್ಬರು ಅದರ ಅಧ್ಯಕ್ಷರಾಗುವರು ಅವರನ್ನು ಹೈಕೋರ್ಟಿನ ಸಲಹೆ ಪಡೆದು ನೇಮಿಸಲಾಗುವುದು ಜಿಲ್ಲಾ ನ್ಯಾಯಾಧೀಶರ ದರ್ಜೆಯಲ್ಲಿ ಅಧ್ಯಕ್ಷರ ಮಟ್ಟವಿರುವುದು ನ್ಯಾಯ ಮಂಡಲದ ಹುದ್ದೆಗಳು ಪೂರ್ಣಕಾಲದ್ದು

ಜಿಲ್ಲಾ ನ್ಯಾಯಾಧೀಶರಾದ ಶ್ರೀ ಆರ್ ಪಿ ವಾಸುದೇವ್‌ರವರು ಅದರ ಅಧ್ಯಕ್ಷರಾಗಿರುವರು ಸರ್ಕಾರದ ವಿಮಾ ಇಲಾಖಾ ಜಂಟಿ ಕಾರ್ಯದರ್ಶಿ ಶ್ರೀ ಸಿ ವಿ ಶಂಕರಯ್ಯರ್‌ರವರು ಸದಸ್ಯರಾಗಿ ನೇಮಕವಾಗಿದ್ದಾರೆ

ನ್ಯಾಯ ಮಂಡಲದ ಖಾಸಗಿ ಸದಸ್ಯರಾಗಿ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಎಸ್ ಸುಬ್ಬರಾಮುರವರನ್ನು ೧೦೦೦ ರೂ ಸಂಬಳದ ಮೇಲೆ ಮೊದಲು ೨ ವರ್ಷದ ಅವಧಿಗಾಗಿ ನೇಮಿಸಲಾಗಿದೆ ಅವರು ಮಾರಾಟ ತೆರಿಗೆಗೆ ಸಂಬಂಧಪಟ್ಟ ವ್ಯವಹಾರದಲ್ಲಿ ಬ್ಯಾಂಕುಗಳ ಲೆಕ್ಕವನ್ನು ಆಡಿಟ್ ಮಾಡಲು ಅವಕಾಶವಿರುತ್ತದೆ ಮಾರಾಟ ತೆರಿಗೆ ನ್ಯಾಯ ಮಂಡಲಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ಒದಗಿಸಿರುವ ೬೯,೦೦೦ ರೂ [illegible] ಈ ವೆಚ್ಚವನ್ನು ನಿರ್ವಹಿಸಲಾಗುವುದು

ಕಮರಿಗೆ ಮೋಟಾರು ಗಾಡಿ ಬಿದ್ದು ೧೨ ಜನರ ಮರಣ

ಉತ್ತರ ಇಟಲಿಯ ಬೊಲ್ಜಾನೊ ನಗರದ ಬಳಿ ಆಲ್ಪ್ಸ್ ಪರ್ವತ ಶ್ರೇಣಿಯ ಮಧ್ಯೆ ಇರುವ ಕಮರಿಗೆ ಮೋಟಾರು ಗಾಡಿಯೊಂದು ಬಿದ್ದು ಅದರಲ್ಲಿದ್ದ ೧೨ ಜನ ಪ್ರವಾಸಿಗರು ಮೃತಪಟ್ಟಿರುತ್ತಾರೆ ೨೩ ಜನರಿಗೆ ಗಾಯವಾಗಿದೆ

ಎ.ಐ ಸಿ ಸಿ. ಅಧಿವೇಶನದ ಸ್ಥಳಕ್ಕೆ ಗೌತಮ ಬುದ್ಧನ ಹೆಸರು

ಬೊಂಬಾಯಿಯಲ್ಲಿ ಬರುವ ತಿಂಗಳು ಅದಿಭಾಗದಲ್ಲಿ ಸೇರಲಿರುವ ಎ ಐ ಸಿ ಸಿ ಅಧಿವೇಶನದ ಸ್ಥಳಕ್ಕೆ ಸಿದ್ಧಾರ್ಥ ನಗರವೆಂದು ಹೆಸರಿಟ್ಟು ಆ ಮೂಲಕ ಗೌತಮ ಬುದ್ಧನ ಜಯಂತಿಯ ನೆನಪನ್ನು ತಂದುಕೊಳ್ಳಲು ನಿರ್ಧರಿಸಲಾಗಿದೆ

ರೈಲ್ವೆಯವರಿಂದ ಯಾತ್ರಿಕರ ತೆರಿಗೆ ವಸೂಲಿ

ಯಾತ್ರಿಕರ ಮೇಲೆ ತೆರಿಗೆಯನ್ನು ವಿಧಿಸುವ ಅಧಿಕಾರವನ್ನು ರೈಲ್ವೆಯವರಿಗೆ ಕೊಡಲು ಕೇಂದ್ರ ಸರ್ಕಾರದವರು ನಿರ್ಧರಿಸಿರುತ್ತಾರೆ ಈ ಬಗ್ಗೆ ಶಾಸನವನ್ನೂ ಸಹ ತರಲಾಗುವುದು ಯಾತ್ರಾಸ್ಥಳಗಳ ಸ್ಥಳೀಯ ಸಂಸ್ಥೆಗಳಿಗೆ ಈ ಹಣವನ್ನು ಕೊಡಲಾಗುವುದು

ಸಧ್ಯದಲ್ಲೇ ಪೂರ್ವಪಾಕಿಸ್ತಾನದಲ್ಲಿ ಅಧ್ಯಕ್ಷರ ಆಡಳಿತ ಮುಕ್ತಾಯ

ಮೊನ್ನೆಯಿಂದ ಪೂರ್ವ ಪಾಕಿಸ್ತಾನದಲ್ಲಿ ಜಾರಿಗೆ ಬಂದ ಅಧ್ಯಕ್ಷರ ಆಡಳಿತವು ಈ ವಾರದಲ್ಲಿ ರದ್ದಾಗಬಹುದೆಂದು ವರದಿಯಾಗಿದೆ

ಹಾಸಿಗೆ-ದಿಂಬು
[illegible] ಹತ್ತಿ ಅರಳಿ ತಯಾರು ಮಾಡುತ್ತೇವೆ
ಬಾಹುಸಾರ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

ಖ್ಯಾತಿ ಹೊಂದಿರುವ
ಕನ್ನಾನೂರ್ ಬನೀನುಗಳನ್ನು
ದಯವಿಟ್ಟು ಉಪಯೋಗಿಸಿ
ದಿ [illegible] ಹೊಸೈರಿ ಫ್ಯಾಕ್ಟರಿ,
ಕನ್ನಾನೂರು
ಸೂಚನೆ - 27 ವರ್ಷಗಳಿಂದ ಕೀರ್ತಿ ಪಡೆದಿರುವ ಈ ಬನೀನುಗಳ ಮೇಲೆ [illegible] ಲೇಬಲ್‌ಗಳನ್ನು ಮರೆಯದೆ ಗಮನಿಸಬೇಕಾಗಿ ವಿನಂತಿ

ಹರಿಜನ ದಿನಾಚರಣೆಯ ವೆಚ್ಚ ಉಪಯುಕ್ತವಲ್ಲ

ಶ್ರೀ ಚೆನ್ನಿಗರಾಮಯ್ಯನವರ ಟೀಕೆ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಹರಿಜನರ ಸಮ್ಮೇಳನವನ್ನು ಆರಂಭಿಸುತ್ತಾ, ಮೈಸೂರು ವಿಧಾನ ಸಭಾ ಉಪಾಧ್ಯಕ್ಷರಾದ ಶ್ರೀ ಆರ್ ಚೆನ್ನಿಗರಾಮಯ್ಯನವರು ಮಾತನಾಡಿ ಹರಿಜನ ದಿನಾಚರಣೆ, ಅಂತರ್ಜಾತೀಯ ಭೋಜನ ಮತ್ತು ದೇವಾಲಯ ಪ್ರವೇಶ ಕಾರ್ಯಕ್ರಮಗಳಿಗಾಗಿ ವೆಚ್ಚ ಮಾಡುವ ಹಣವು ವೃಥಾ ವ್ಯಯವಾಗುವುದೆಂದೂ, ಅದರಿಂದ ಅಸ್ಪೃಶ್ಯತಾ ನಿವಾರಣೆಯಾಗುವುದಿಲ್ಲವೆಂದೂ ತಿಳಿಸಿರುತ್ತಾರೆ ಹರಿಜನರೂ, ಹರಿಜನಾಭಿವೃದ್ಧಿಯಲ್ಲಿ ಈಗಾಗಲೆ ಆಸಕ್ತಿ ಇರುವ ಇತರರೂ ಅವುಗಳಲ್ಲಿ ಭಾಗವಹಿಸುವರೆಂದೂ ಇತರ ಸವರ್ಣೀಯರು ಸೇರುವುದಿಲ್ಲವೆಂದೂ ಅವರು ಸೂಚಿಸಿರುತ್ತಾರೆ. ಹರಿಜನ ದಿನಾಚರಣೆಗಾಗಿ ತಗಲುವ ವೆಚ್ಚವನ್ನು ಹರಿಜನರಿಗೆ ಮನೆ ಕಟ್ಟಲು ಕೊಟ್ಟರೆ ಹೆಚ್ಚಿನ ಪ್ರಯೋಜನವಾಗುವುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ

ಅಜಾದ್ ಕಾಶ್ಮೀರ ಸರ್ಕಾರದ ರಾಜೀನಾಮೆಗೆ ಒತ್ತಾಯ

ಕರ್ನಲ್ ಷೇರ್ ಮಹಮದ್‌ರವರ ಮುಖಂಡತ್ವದಲ್ಲಿ ಸ್ಥಾಪಿತವಾಗಿರುವ ಅಜಾದ್ ಕಾಶ್ಮೀರ ಸರ್ಕಾರವು ರಾಜೀನಾಮೆ ಕೊಡಬೇಕೆಂದು ಕಾಶ್ಮೀರ ಮುಸ್ಲಿಂ ಸಮ್ಮೇಳನದ ಮುಖಂಡರು ಒತ್ತಾಯಪಡಿಸಿರುತ್ತಾರೆ ಅಜಾದ್ ಕಾಶ್ಮೀರದ ಮಾಜಿ ಅಧ್ಯಕ್ಷರೊಬ್ಬರು ಅಲ್ಲಿನ ಆಡಳಿತವನ್ನು ೨ ತಿಂಗಳ ಕಾಲ ವಹಿಸಿಕೊಳ್ಳಬೇಕೆಂದೂ ನಂತರ ಮುಸ್ಲಿಂ ಸಮ್ಮೇಳನದ ನಾನಾವರ್ಗಗಳ ಪ್ರತಿನಿಧಿಗಳುಳ್ಳ ಸರ್ಕಾರವನ್ನು ರಚಿಸಬೇಕೆಂದೂ ಅವರು ಸೂಚಿಸಿರುತ್ತಾರೆ

೧೯೫ ಕೋಟಿ ರೂ. ಅಂಬರ್ ಚರಖಾ ಯೋಜನೆ

ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಅವಧಿಯೊಳಗೆ ೪೦ ಕೋಟಿ ಪೌಂಡು ಹತ್ತಿ ಬಟ್ಟೆ ತಯಾರಿಕೆಗಾಗಿ ೨೫ ಲಕ್ಷ ಅಂಬರ್ ಚರಖಗಳನ್ನು ಒದಗಿಸುವ ಯೋಜನೆಯೊಂದನ್ನು ಕೇಂದ್ರ ಸರ್ಕಾರಕ್ಕೆ ಭಾರತದ ಖಾದಿ ಮತ್ತು ಗ್ರಾಮ ಕೈಗಾರಿಕಾ ಬೋರ್ಡಿನವರು ಒಪ್ಪಿಸಿರುತ್ತಾರೆ ಮುಂದಿನ ೫ ವರ್ಷಗಳಲ್ಲಿ ಬೇಕಾಗುವ ಹೆಚ್ಚುವರಿ ಬಟ್ಟೆಯನ್ನು ಆ ಮೂಲಕ ಪಡೆಯುವ ವ್ಯವಸ್ಥೆ ಮಾಡಲು ಆಲೋಚಿಸಲಾಗಿದೆ ಇದಕ್ಕಾಗಿ ೧೯೫ ಕೋಟಿ ರೂ ಗಳ ಕಾರ್ಯಕ್ರಮವನ್ನು ಹಾಕಲಾಗಿದೆ ನಿವ್ವಳ ಬಂಡವಾಳವೆ [illegible] ೪೦ ಕೋಟಿ ರೂ. ನಷ್ಟ ಆಗುವುದು [illegible] ಕೋಟಿ ಪೌಂಡ್ ದಾರವನ್ನು ಕೈ ಮಗ್ಗದವರು ಉಪಯೋಗಿಸಿ [illegible] ಕೋಟಿ ಗಜದಷ್ಟು ಬಟ್ಟೆಯನ್ನು ತಯಾರಿಸಬಹುದೆಂದೂ, [illegible] ಲಕ್ಷ ನೂಲುವವರು, [illegible] ಲಕ್ಷ ಮಗ್ಗದವರು ಮತ್ತು ೩೦,೦೦೦ ಬಡಗಿಗಳು ಮತ್ತು ಇತರ ಕುಶಲ ಕಲೆಗಾರರಿಗೆ ಉದ್ಯೋಗ ಲಭಿಸಿದಂತಾಗುವುದೆಂದೂ ಹೇಳಲಾಗಿದೆ

ಮನೆ ಭೋಗ್ಯಕ್ಕೆ ಬೇಕು

ಚಾಮರಾಜಪುರಂ, ಸರಸ್ವತಿಪುರಂ, ಕೃಷ್ಣಮೂರ್ತಿಪುರಂ, ಜಯನಗರ ಮತ್ತು ಸುಬ್ಬರಾಯನಕೆರೆ ಬಳಿ ಮತ್ತು ಕಾಲೇಜಿಗೆ ಸಮೀಪದ ಸುಮಾರು ೬ ಸಾವಿರ ರೂ ಗಳೊಳಗೆ ಒಂದು ಮನೆಯು ಭೋಗ್ಯಕ್ಕೆ ಬೇಕಾಗಿದೆ ಈ ಕೆಳಕಂಡ ವಿಳಾಸದಲ್ಲಿ ವಿಚಾರಿಸಬಹುದು —
ವಿ. ಆರ್. ಚೆಲ್ಲಪ್ಪ, ಎಂ ಎ
ತಮಿಳು ಅಧ್ಯಾಪಕರು,
ಮಹಾರಾಜಾ ಕಾಲೇಜು,
ಮೈಸೂರು

Edited, Printed and Published by A. R. Nagarajan at Sadhvi Press D Subbiah Road, Mysore

ಟೆಲಿಫೋನ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕಳುಹಿಸಿ ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಸತ್ಯಕ್ಕೆ ಎಲ್ಲಾ ಕಡೆ
ಖ್ಯಾತಿಯುಳ್ಳ
ಕನ್ನಡಕಗಳು
[illegible]
ವಿಷನ್ ಹೌಸ್
ವಿಳಾಸ :—
S. V. [illegible],
[illegible]
[illegible]
[illegible]
ಒಮ್ಮೆ ಪರೀಕ್ಷಿಸಿ ತೃಪ್ತಿಹೊಂದಿರಿ.

ಸಂಪುಟ : ೧೪] SADHVI : TUESDAY 29-5 1956 ಮೈಸೂರು : ಮಂಗಳವಾರ ೨೯-೫-೧೯೫೬ [ಸಂಚಿಕೆ : [illegible]

ಬೊಂಬಾಯಲ್ಲಿ ಪ್ರದರ್ಶನಕಾರರ ಮೇಲೆ ಲಾಠಿ ಪ್ರಹಾರ

ಮಂತ್ರಿಗಳ ಬಳಿಗೆ ಹಿಟ್ಟಿನ ಗಿರಣಿಗಳವರ ನಿಯೋಗ.

ವಿಶೇಷ ಸಭೆಯಲ್ಲಿ ತೀರ್ಮಾನ

ಮೈಸೂರು ೨೮

ಸರ್ಕಾರದವರು ಇತ್ತೀಚೆಗೆ ವಿದ್ಯುಚ್ಛಕ್ತಿ ದರಗಳನ್ನು ಹೆಚ್ಚಿಸಿರುವುದರಿಂದ ಉಂಟಾಗಿರುವ ತೊಂದರೆಗಳನ್ನು ಮನವಿ ಮಾಡಿ ಸೂಕ್ತವಾದ ಪರಿಹಾರವನ್ನು ಪಡೆಯಲು ಮುಖ್ಯ ಮಂತ್ರಿಗಳು ಮತ್ತು ವಿದ್ಯುಚ್ಛಕ್ತಿ ಇಲಾಖಾ ಮಂತ್ರಿಗಳ ಬಳಿಗೆ ಒಂದು ನಿಯೋಗವನ್ನು ಕಳುಹಿಸುವಂತೆ ಮೊನ್ನೆ ಸತ್ಕಾರಭವನದಲ್ಲಿ ನಡೆದ ಹಿಟ್ಟಿನ ಗಿರಣಿ ಮಾಲೀಕರುಗಳ ಸಂಘದ ವಿಶೇಷ ಅಧಿವೇಶನದಲ್ಲಿ ನಿರ್ಣಯ ಮಾಡಲಾಯಿತು. ನಿಯೋಗದ ಸದಸ್ಯರುಗಳಾದ ಬಿ. ನಾರಾಯಣಸ್ವಾಮಿ, ಟಿ. [illegible]ಯಪ್ಪ, ಡಿ. ಜನಾರ್ಧನ ನಾಯ್ಡು, ಹೆಚ್. [illegible] ಕೃಷ್ಣಮೂರ್ತಿ ಮತ್ತು ಎಂ. ಜಿ. ರಂಗಯ್ಯ [illegible]ವರುಗಳು ಇರುವರು.

ಶಾಸನಸಭಾ ಸದಸ್ಯರಾದ ಶ್ರೀ ಬಿ. ನಾರಾಯಣಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಜನಾರ್ಧನ ನಾಯ್ಡುರವರು ಇದುವರೆಗೆ ಸರ್ಕಾರದವರೊಡನೆ ತಾವು ನಡೆಸಿರುವ ವ್ಯವಹಾರಗಳನ್ನು ವಿವರಿಸಿದರು.

ಶ್ರೀ ಅಗರಂ ರಂಗಯ್ಯನವರು ಮಾತನಾಡಿ ಈ ಹಿ ಮಂತ್ರಿಗಳೊಡನೆಯೂ, ಇಲಾಖಾ ಕಾರ್ಯದರ್ಶಿಯೊಡನೆಯೂ ನಡೆಸಿದ ಮಾತುಕತೆಗಳ ವಿವರವನ್ನು ತಿಳಿಸಿ, ವಿದ್ಯುಚ್ಛಕ್ತಿ ಬಳಸುವವರೆಲ್ಲರೂ ಒಗ್ಗಟ್ಟಿನಿಂದಲೂ, ಸುಸಂಘಟಿತ ರೀತಿಯಲ್ಲೂ ತಮಗೆ ಇರುವ ತೊಂದರೆಗಳನ್ನು ಸರ್ಕಾರದವರಿಗೆ ಮನಮುಟ್ಟುವಂತೆ ತಿಳಿಸಿ ಸೂಕ್ತವಾದ ಪರಿಹಾರವನ್ನು ಪಡೆಯಬೇಕೆಂದು ತಿಳಿಸಿದರು.

ಅಧ್ಯಕ್ಷರು ಈ ಬಗ್ಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಕುರಿತು ಹಲವು ಸಲಹೆಗಳನ್ನಿತ್ತರು.

ಈಗ ವಿಧಾಯಕವಾಗಿರುವ ವಿದ್ಯುಚ್ಛಕ್ತಿ ದರಗಳ ಬಗ್ಗೆ ಸಭೆಯು ತೀವ್ರವಾದ ಕಳವಳವನ್ನು ವ್ಯಕ್ತಪಡಿಸುವುದಲ್ಲದೆ, ಪಟ್ಟಣಗಳ ಪ್ರಮಾಣದ ಬದಲು ರೀಟಾಗಿರುವ ಪ್ರಮಾಣದಂತೆ ದರವನ್ನು ಹಾಕಬೇಕೆಂದೂ, ಗ್ರಾಮಾಂತರಗಳಿಗೂ ನಗರಗಳಿಗೂ ತಾರತಮ್ಯವನ್ನು ಮಾಡಬಾರದೆಂದೂ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯಗಳನ್ನು ಮಾಡಲಾಯಿತು.

ಬೊಂಬಾಯಿನಲ್ಲಿ ಮಹಾರಾಷ್ಟ್ರವಾದಿಗಳ ಮೇಲೆ ಲಾಠಿ ಪ್ರಹಾರ

ಬೊಂಬಾಯಿಯ ಠಾಕೂರ್‌ದ್ವಾರದಲ್ಲಿ ನೆನ್ನೆ ಕಟ್ಟಡಗಳನ್ನು ಬೆಂಕಿ ಸಂಹಾರಕ್ಕೆ ಆಹುತಿಪಡಿಸುತ್ತಿದ್ದ ಸಂಯುಕ್ತ ಮಹಾರಾಷ್ಟ್ರದ ಗುಂಪೊಂದರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಸಂಯುಕ್ತ ಮಹಾರಾಷ್ಟ್ರಕ್ಕಾಗಿ ಹೋರಾಟಕ್ಕೆ ಬೆಂಬಲ ಸೂಚಿಸಿ ನಗರದ ನಾನಾ ಭಾಗಗಳಲ್ಲಿ ಸತ್ಯಾಗ್ರಹ ನಡೆಸಿದರೆಂದು ೨೦೦ ಜನರನ್ನು ದಸ್ತಗಿರಿ ಮಾಡಲಾಗಿದೆ. ಅವರಲ್ಲಿ ೪೩ ಮಂದಿ ಸ್ತ್ರೀಯರೂ ಇರುವರು.

ರಾಜಧಾನಿಯ ಶಿವರಾಂಪೇಟೆಯಲ್ಲಿ "ಶ್ರೀ ವಾಸವೀ ನಿಲಯ"ದ ಆರಂಭೋತ್ಸವವನ್ನು ಮೊನ್ನೆ ಶ್ರೀ ಮುಖ್ಯ ನ್ಯಾಯಾಧೀಶರು ನೆರವೇರಿಸಿದಾಗ ತೆಗೆದ ಚಿತ್ರ

ಪ್ರಭುಗಳಿಗೆ ಶ್ರೀ ಎಂ. ಕೆ. ಸುಬ್ಬಯ್ಯಶೆಟ್ಟರು ಬಿನ್ನವತ್ತಳೆಯನ್ನು ಅರ್ಪಿಸುತ್ತಿರುವುದು [ಪಡಿಯಚ್ಚು ಶಾರದಾ ಪ್ರೆಸ್

ಅಖಿಲ ಭಾರತ ಮಾಧ್ವ ಸಮ್ಮೇಳನ

ಸೋಸಲೆ ಸ್ವಾಮಿಗಳವರಿಂದ ಆರಂಭೋತ್ಸವ

ದ್ವಿತೀಯ ಅಖಿಲ ಭಾರತ ಮಾಧ್ವ ಸಮ್ಮೇಳನವು ಕೊಳ್ಳೇಗಾಲದಲ್ಲಿ ಮೊನ್ನೆ ಸೇರಿತು. ಬೊಂಬಾಯಿಯ ನಿವೃತ್ತ ನ್ಯಾಯಾಧೀಶರಾದ ಶ್ರೀ ಎಂ. ಎಸ್. ಲೋಕೂರ್‌ರವರು ಅಗ್ರಾಸನವನ್ನು ವಹಿಸಿದ್ದರು. ಧಾರವಾಡ, ಮಂಗಳೂರು, ಮೈಸೂರು ಮತ್ತು ಇತರ ಅನೇಕ ಪ್ರದೇಶಗಳ ಪ್ರತಿನಿಧಿಗಳು ಆಗಮಿಸಿದ್ದರು. ವಿವಿಧ ಮಾಧ್ವ ಮಠಾಧೀಶರುಗಳು ಸಮ್ಮೇಳನದಲ್ಲಿ ಭಾಗವಹಿಸಿ, ಆಶೀರ್ವದಿಸಿದರು.

ಸೋಸಲೆ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದಂಗಳು ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ, ಸಂಕುಚಿತ ಗುಂಪಿನ ಮನೋಭಾವ ಅಥವಾ ಕೋಮು ಭಾವನೆಯು ಸಮ್ಮೇಳನದಲ್ಲಿ ವ್ಯಾಪಿಸದಿರಲೆಂದು ಸೂಚಿಸಿದರು. ಮಾಧ್ವರು ಅಧಿಕವಾಗಿ ಬಡವರಾಗಿರಬಹುದಾದರೂ ಅವರ ಪರಂಪರಾನುಗತ ಸಂಸ್ಕೃತಿಯು ಉತ್ಕೃಷ್ಟವಾದುದೆಂದು ಅವರು ಹೇಳಿ, ಸಾಮಾನ್ಯವಾಗಿ ಬ್ರಾಹ್ಮಣರಲ್ಲಿ ಐಕ್ಯಮತ್ಯವಿರುವುದೆಂದೂ, ಅವರೆಲ್ಲರೂ ಮಾಧ್ವರಲ್ಲಿ ಅದು ವಿಶೇಷವಾಗಿ ಕಂಡುಬರುವುದೆಂದೂ ಹೇಳಲಾಗುತ್ತಿರುವ ಮಾತು ಸತ್ಯವಲ್ಲವೆಂದು ಅಭಿಪ್ರಾಯಪಟ್ಟರು.

ಸರ್ಕಾರದ ದೃಷ್ಟಿಯಲ್ಲಿ ಬ್ರಾಹ್ಮಣರು "ತಿರಸ್ಕೃತ ವರ್ಗ"ದವರಾಗಿರುವ ಬಗ್ಗೆ ಅವರು ವಿಷಾದಿಸಿ, ದಮ ಶಾಲಾ ಕಾಲೇಜುಗಳಲ್ಲಿ ಪ್ರವೇಶದ ಬಗ್ಗೆ ವಿಶೇಷ ತೊಂದರೆಗಳಿರುವುದನ್ನು ಅವರು ಉಲ್ಲೇಖಿಸಿದರು.

ಶ್ರೀ ಲೋಕೂರ್‌ರವರು ಅಧ್ಯಕ್ಷ ಭಾಷಣ ಮಾಡಿ, ಈಗಿನ ವಿದ್ಯಾಭ್ಯಾಸವು ಮತೀಯ ಹಿನ್ನೆಲೆಯನ್ನು ಹೊಂದಿಲ್ಲವೆಂದು ಹೇಳಿದರು. ಸ್ವಧರ್ಮವನ್ನು ತಿಳಿಸದ ಯಾವ ವಿದ್ಯಾಭ್ಯಾಸವೂ ಪ್ರಯೋಜನಕ್ಕೆ ಬರುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು. ಮಾಧ್ವ ಮಹಾಮಂಡಲದ ಧ್ಯೇಯವು ಆಧುನಿಕ ವಿದ್ಯಾಭ್ಯಾಸದೊಡನೆ ವಾತಧರ್ಮದ ತತ್ವಗಳನ್ನು ಪಾಠಶಾಲೆಗಳ ಮೂಲಕ ಹೇಳಿಕೊಡುವುದೇ ಆಗಿರುವುದೆಂದು ಅಧ್ಯಕ್ಷರು ನುಡಿದರು.

ಹಾಸ್ಟೆಲುಗಳನ್ನು ನಿರ್ಮಿಸುವುದು, ವಿದ್ಯಾಭ್ಯಾಸ ಸೌಕರ್ಯವನ್ನೊದಗಿಸುವುದು, ಆರ್ಥಿಕ ತೊಂದರೆಗಳನ್ನು ಪರಿಹರಿಸುವುದು, ಇವು ಮಾಧ್ವರಲ್ಲಿ ಈಗ ಮುಖ್ಯ ಅವಶ್ಯಕತೆಗಳಾಗಿರುವುವೆಂದು ಅವರು ನುಡಿದರು. ಚಿಕ್ಕ ವಯಸ್ಸಿನವರಿಗಾಗಿ ಆಶ್ರಮ ಮತ್ತು ಪಾಠಶಾಲೆಗಳನ್ನು ಏರ್ಪಡಿಸಿ, ಆ ಮೂಲಕ ನಿಜವಾದ ಮಾಧ್ವಮತ ತತ್ವವನ್ನು ಹೇಳಿಕೊಡುವುದೂ ಅಗತ್ಯವೆಂದು ಅವರು ಸೂಚಿಸಿದರು.

ಶ್ರೀ ಜಿ. ಕೃಷ್ಣಮೂರ್ತಿಯವರು ಸ್ವಾಗತ ಭಾಷಣ ಮಾಡಿದರು.

ರೆವಿನ್ಯೂ ಇನ್ಸ್‌ಪೆಕ್ಟರನ್ನು ಹೊಡೆದ ಆಪಾದನೆ

ಕಡಕೊಳದಲ್ಲಿ ನಡೆದ ಪ್ರಸಂಗ

ಮೈಸೂರು ೨೮

ಇದೇ ತಾಲ್ಲೂಕು ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ರಂಗಯ್ಯ ಎಂಬುವರು ಕಂದಾಯದ ಬಾಕಿ ವಸೂಲಿಗಾಗಿ ನೆನ್ನೆ ಕಡಕೊಳಕ್ಕೆ ಹೋಗಿದ್ದಾಗ ಅಲ್ಲಿನ ಹಲವರು ಅವರನ್ನು ಹೊಡೆದರೆಂದೂ ಈ ಸಂಬಂಧವಾಗಿ ಅಮಲ್ದಾರರು ಕೊಟ್ಟ ದೂರಿನ ಮೇಲೆ ತಾಲ್ಲೂಕು ಪೋಲೀಸರು ಮೊಕದ್ದಮೆಯನ್ನು ದಾಖಲು ಮಾಡಿಕೊಂಡು ಮುಂದಿನ ಕ್ರಮ ಜರುಗಿಸುತ್ತಿರುವರೆಂದೂ ವರದಿಯಾಗಿದೆ.

ಹೋಟೇಲಿನಲ್ಲಿ ಲಾಕ್‌ಔಟ್

ಮೈಸೂರು ೨೮

ರಾಜಧಾನಿಯ ಉಡುಪಿ ಆನಂದ ಭವನ ಹೋಟೇಲನ್ನು ಈ ದಿನ ಮುಚ್ಚಿ ಮಾಲೀಕರು ಲಾಕ್‌ಔಟ್ ಮಾಡಿರುವರೆಂದೂ, ಈ ವಿಷಯವನ್ನು ಹೋಟೇಲು ಕೆಲಸಗಾರರ ಸಂಘದವರು ಇಲ್ಲಿನ ಅಸಿಸ್ಟೆಂಟ್ ಲೇಬರ್ ಕಮೀಷನರರ ಗಮನಕ್ಕೆ ತಂದಿರುವರೆಂದೂ ಸಂಘದ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಹೋಟೇಲಿನ ಮ್ಯಾನೇಜರಾದ ಶ್ರೀ ಎಂ. ವೆಂಕಟರಮಣ ಭಟ್ಟರು ಹೇಳಿಕೆಯೊಂದನ್ನಿತ್ತು, ನೆನ್ನೆ ಸಂಜೆ ೬ ಗಂಟೆಗೆ ಕೆಲಸಗಾರರು ಮುನ್ನೆಚ್ಚರಿಕೆ ಕೊಡದೆ ಮುಷ್ಕರ ಹೂಡಿದರೆಂದೂ, ಅದಕ್ಕೆ ಕಾರಣವನ್ನೇನೂ ಕೊಟ್ಟಿಲ್ಲವೆಂದೂ, ಈ ದಿನವೂ ಕೆಲಸಗಾರರು ಬಾರದಿರುವ ಪ್ರಯುಕ್ತ ಹೋಟೇಲು ಬಾಗಿಲನ್ನು ತಾತ್ಕಾಲಿಕವಾಗಿ ಮುಚ್ಚಿರುವುದಾಗಿಯೂ ತಿಳಿಸುತ್ತಾರೆ.

ಅಕ್ಷನ ನೌಕರ ಓಬಯ್ಯ ಎಂಬುವನು ಮ್ಯಾನೇಜರರನ್ನು ಹೊಡೆದು ಅವಾಚ್ಯ ಶಬ್ದಗಳಿಂದ ಬೈದುದಕ್ಕಾಗಿ ದ್ವಿತೀಯ ನಗರ ನ್ಯಾಯಾಧೀಶರು ಅವನಿಗೆ ನೆನ್ನೆ ೫ ರೂ. ಜುಲ್ಮಾನೆಯನ್ನು ವಿಧಿಸಿದರು.

ಸರಸ್ವತಿಪುರದಲ್ಲಿ ಸಾರ್ವಜನಿಕ ಟೆಲಿಫೋನ್

ಸರಸ್ವತಿಪುರದ ಅಂಚೆ ಕಛೇರಿಯಲ್ಲಿ ಸಾರ್ವಜನಿಕ ಟೆಲಿಫೋನನ್ನು ಈ ದಿನದಿಂದ ವ್ಯವಸ್ಥೆ ಮಾಡಲಾಗಿದೆ.

ಎರಡು ವರ್ಷಗಳನಂತರ ಬೊಂಬಾಯಿ ಮಹಾರಾಷ್ಟ್ರಕ್ಕೆ

ನೆಹರೂರವರಿಗೆ ಮುಖಂಡರಿಂದ ಹೊಸ ಸೂತ್ರದ ಅರ್ಪಣೆ

ಬೊಂಬಾಯಿ ನಗರದ ಭವಿಷ್ಯದ ಬಗ್ಗೆ ಉಂಟಾಗಿರುವ ಸಮಸ್ಯೆಯನ್ನು ಪರಿಹರಿಸಲು ಮಹಾರಾಷ್ಟ್ರದ ಮುಖಂಡರು ಹೊಸ ಸೂತ್ರವನ್ನು ರಚಿಸಿ ನೆಹರೂರವರಿಗೆ ಒಪ್ಪಿಸಿರುತ್ತಾರೆ. ಕೇಂದ್ರ ಸರ್ಕಾರದ ಆಡಳಿತದಲ್ಲಿ ನಗರವು ಎರಡು ವರ್ಷಗಳ ವರೆಗೆ ಇದ್ದು ತಂಡ ಕಾರ್ಯ[illegible] ಸ್ವತಂತ್ರವಾಗಿ, ತೀರ್ಮಾನಿಸಿದ್ದರೆ ಮಹಾರಾಷ್ಟ್ರದಲ್ಲಿ ಅದು ವಿಲೀನಗೊಳ್ಳಬೇಕೆಂದು ಅದರಲ್ಲಿ ಕಾಣಿಸಲಾಗಿದೆ. ನೆಹರೂರವರು ಈ ಬಗ್ಗೆ ಒಂದೆರಡು ದಿನಗಳಲ್ಲಿ ಉತ್ತರವೀಯಲಿರುವರು.

ಸಿಗರೆಟ್ಟು ಸೇದುವುದನ್ನು ಬಿಟ್ಟುಬಿಡೆಂದ ವೃದ್ಧರೊಬ್ಬರಿಗೆ ಹೊಡೆತ

ಕಳೆದ ಜುಲೈ ನವೆಂಬರ್ ೧೧ನೇ ತಾರೀಕು ಸಿಗರೆಟ್ಟು ಸೇದುತ್ತಾ ಕಾಲನ್ನು ಚಾಚಿದ್ದ ಶ್ರೀ ಬಿ. ಎ. ಸದಾನಂದರಾವ್ ಅವರಿಗೆ ಡಿಕ್ಕಿ ಹೊಡೆದುದಕ್ಕಾಗಿ ಡಾ|| ಮಿರ್ಜಿ ಪುಟ್ಟಯ್ಯನವರಿಗೆ ಪ್ರಥಮ ದರ್ಜೆ ನಗರ ನ್ಯಾಯಾಧೀಶರು ೧೦೦ ರೂ. ದಂಡ, ತಪ್ಪಿದರೆ ೧ ತಿಂಗಳ ಸಜವನ್ನು ವಿಧಿಸಿದರು. ಶ್ರೀ ರಾಮರಾವ್ ಅವರು ಆ ಸಮಯದಲ್ಲಿ ಮೋಟಾರು ಸೈಕಲ್ ಮೇಲೆ ಹೋಗುತ್ತಿದ್ದರು. ಈ ಸಂಬಂಧವಾಗಿ ೨ ಏಲ್ ದಾವೆಯೊಂದೂ ನಡೆಯುತ್ತಿರುವುದರಿಂದ ನ್ಯಾಯಾಧೀಶರು ಪರಿಹಾರ ಕೊಡುವಂತೆ ಆಜ್ಞೆ ಮಾಡಲಿಲ್ಲ.

ಭಾಷ್ಯಂರವರ ನಿಧನಕ್ಕಾಗಿ ಪುರಸಭೆಯ ಸಂತಾಪ

ಮೈಸೂರು ೨೮

ಸಂಸ್ಥಾನದ ವಿಧಾನ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಕೆ ಟಿ ಭಾಷ್ಯಂರವರು ನಿಧನರಾದುದಕ್ಕಾಗಿ ನೆನ್ನೆ ಪುರಸಭೆಯ ವಿಶೇಷ ಅಧಿವೇಶನದಲ್ಲಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಮಾಡಿ ಎರಡು ನಿಮಿಷ ಮೌನವನ್ನಾಚರಿಸಲಾಯಿತು ಶ್ರೀಗಳಾದ ಎಸ್ ಲಿಂಗಣ್ಣ ಮತ್ತು ನಿಜಾಂ ಸೂರ್ ಹುಸೇನರು ಮಾಜಿ ದಿವಂಗತರ ಗುಣಗಾನ ಮಾಡಿದರು

ಅಶೋಕಪುರದಲ್ಲಿ ಬುದ್ಧ ಜಯಂತಿ

ರಾಜಧಾನಿಯ ಅಶೋಕಪುರದ ಗಾಂಧಿ ಸ್ಮಾರಕ ವಾಚನಾಲಯದ ಆಶ್ರಯದಲ್ಲಿ ಕಳೆದ ಗುರುವಾರ ಬುದ್ಧ ಜಯಂತಿಯು ನೆರವೇರಿಸಲ್ಪಟ್ಟಿತು ರೈಲ್ವೆ ವರ್ಕ್‌ಷಾಪಿನ ಅಸಿಸ್ಟೆಂಟ್ ಪರ್ಸನಲ್ ಆಫೀಸರಾದ ಶ್ರೀ ಜಿ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು ಇವರು ಭಾಷಣ ಮಾಡಿ ಬುದ್ಧ ದೇವನು ತಾನು ಸಾಧಿಸಿದ ತತ್ವವನ್ನು ಜನ ಸಾಮಾನ್ಯರಿಗೆ ಸರಳವಾಗಿ ಬೋಧಿಸಿ ಮಹಾಶಯೋದಯ ಮುಕ್ತಿ ಮಾರ್ಗವೆಂದು ತಿಳಿಸಿದುದನ್ನು ವಿವರಿಸಿದರು ಶ್ರೀ ಎಂ ಬುದ್ಧಯ್ಯನವರು ವಂದನಾರ್ಪಣೆ ಮಾಡಿದನಂತರ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು

ಬಸವ ಜಯಂತಿ ಅನ್ನದಾನ

ಎಂ ತೊಡಿಲ್ಲಾ ಸೇವಾ ಮಂಡಲಿಯವರು ಏರ್ಪಡಿಸಿದ್ದ ಬಸವ ಜಯಂತಿ ಉತ್ಸವದ ಅಂಗವಾಗಿ ಕಳೆದ ಗುರುವಾರ ಮೂರು ಸಹಸ್ರ ಜನ ಬಡವರಿಗೆ ಅನ್ನದಾನವನ್ನು ಮಾಡಲಾಯಿತು ಶ್ರೀ ನಂಗಭೂಷಣಾರಾಧ್ಯರು ಶಿವಪೂಜೆಯನ್ನು ನಡೆಸಿದರು

ಹೊಲಿಗೆ ತರಗತಿಗಳು

ವಸನಿಲಾಸ ಮೊಹಲ್ಲೆಯಲ್ಲಿರುವ ಮಾತೃ ಮಂಡಲಿಯ ಆಶ್ರಯದಲ್ಲಿ ನಾಳಿದ್ದಿನಿಂದ ಹೊಲಿಗೆ ತರಗತಿಗಳನ್ನು ಮಹಿಳೆಯರಿಗೋಸ್ಕರ ಹೊಸದಾಗಿ ಏರ್ಪಡಿಸಲಾಗುವುದು ನುರಿತ ಅಧ್ಯಾಪಕರು ನವೀನ ರೀತಿಯ ಉಡುಪುಗಳನ್ನು ಹೊಲಿಯುವುದು ಮತ್ತು ವಿವಿಧ ಎಂಬ್ರಾಯಿಡರಿ ಕೆಲಸಗಳನ್ನು ಕಲಿಸುವರು ಇತರ ವಿವರಗಳಿಗೆ ಮಂಡಲಿಯಲ್ಲಿ ವಿಚಾರಿಸಬಹುದು

ವಿದ್ಯಾಶಾಲಾ ಪಂಡಿತ ಮಂಡಲದ ಸಮ್ಮೇಳನ

ವಿದ್ಯಾಶಾಲಾ ಪಂಡಿತ ಮಂಡಲದ ೧೭ ನೇ ಮಹಾ ಸಮ್ಮೇಳನವು ಜೂನ್ ಮೂರನೆ ವಾರದಲ್ಲಿ ಬೆಂಗಳೂರಿನಲ್ಲಿ ಸೇರಲಿದೆ ಇದಕ್ಕೆ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿರುವ ಕನ್ನಡ ಸಂಸ್ಕೃತ ಹಿಂದಿ ತಮಿಳು ತೆಲುಗು ಮತ್ತು ಉರ್ದು ಪಂಡಿತರುಗಳೂ ಪಂಡಿತಾಭಿಮಾನಿಗಳೂ ಸದಸ್ಯರಾಗಿ ಸಮ್ಮೇಳನದಲ್ಲಿ ಭಾಗವಹಿಸಬೇಕು ಮತ್ತು ಸದಸ್ಯತ್ವದ ಚಂದಾ ಒಂದು ರೂಪಾಯನ್ನು ಜೂನ್ ೧೦ ನೇ ತಾರೀಖಿನೊಳಗೆ ಕಾರ್ಯದರ್ಶಿಗಳಿಗೆ ತಲುಪಿಸಬೇಕು ಎಂದು ಮಂಡಲಿಯ ಮೈಸೂರು ಶಾಖೆಯ ಕಾರ್ಯದರ್ಶಿಗಳು ಕೋರಿರುತ್ತಾರೆ

ಕೈಯಿಲ್ಲದ ಹುಡುಗಿಯಿಂದ ಕಾಲಿನಲ್ಲಿ ಊಟ

ಅಮೆರಿಕದ ಸಿರಾಕ್ಯೂಸ್ ಪ್ರಾಂತದ ಹಳ್ಳಿಯೊಂದರಲ್ಲಿ ಎಲಿಜಬೆತ್ ಎಂಬ ೩ ವರ್ಷದ ಹುಡುಗಿಯು ತನ್ನ ಪಾದಗಳ ಸಹಾಯದಿಂದ ಊಟ ಮಾಡುವುದನ್ನು ಅಭ್ಯಾಸ ಮಾಡಿದ್ದಾಳೆ ಹುಟ್ಟಿದಾಗಿನಿಂದಲೂ ಅವಳಿಗೆ ಕೈಯಿಲ್ಲ ಅನೇಕ ಸಣ್ಣ ಕೆಲಸಗಳನ್ನು ತಾನೇ ಮಾಡುತ್ತಾಳೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩ ರಿಂದ ೭-೧೫ ಮತ್ತು ೮-೧೫ ಯಿಂದ [illegible] ಮತ್ತು ೫ ರಿಂದ [illegible] ೭ ೪೦ ಹಿಂದಿ [illegible] ಮಧ್ಯಾಹ್ನ ೧೨ ಮತ್ತು ೧ [illegible] ರೀಜನಲ್ ಸಂಗೀತ ೧೨-೪೦ ಗಾನ ಮಂಜರಿ ೧ ೩೦ ಪಾಠ ೨ ೦೫ [illegible] ೫ ೪೦ ಮತ್ತು [illegible] ಪುರಂದರದಾಸರ ಕೀರ್ತನೆ [illegible] ಭಾಷಣ ೭ ೪೦ ವಾದ್ಯ ವೃಂದ ೮ ೪೦ ಬೌದ್ಧ ಜಾತಕ ಕಥೆ ಸಂಸ್ಕೃತ ನಾಟಕ [illegible] ೯ ೧೫ ಶಿಷ್ಟಿ ಭುವನೇಶ್ವರಯ್ಯ ವೀಣೆ ಮತ್ತು ಎಂ ಎಲ್ ವೀರಭದ್ರಯ್ಯ ಮೃದಂಗ

ಬುದ್ಧ ಜಯಂತಿ

ಸ್ವಂ ಸು] ನಂಜನಗೂಡು ೨೮

ಇಲ್ಲಿನ ತಾಲ್ಲೂಕು ಅಭಿವೃದ್ಧಿ ಸಮಿತಿ ಮತ್ತು ಪೌರಸಭೆಯವರು ಕಳೆದ ಗುರುವಾರ ಪೌರಸಭಾ ಭವನದಲ್ಲಿ ಬುದ್ಧ ಜಯಂತಿಯನ್ನು ನೆರವೇರಿಸಿದರು ಶ್ರೀ ಹೆಜ್ಜಿಗೆ ಲಿಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಸುಬ್ರಹ್ಮಣ್ಯರವರಿಂದ ಬುದ್ಧನ ಮೇಲಿನ ಕವನ ಪಠಣ ಮತ್ತು ಮೈಸೂರು ಮಹಾರಾಜಾ ಕಾಲೇಜಿನ ಶ್ರೀ ಎನ್ ಬಲಸುಬ್ರಹ್ಮಣ್ಯರವರಿಂದ ಭಾಷಣಗಳಾದುವು ಪೌರಸಭಾಧ್ಯಕ್ಷ ಶ್ರೀ ಕೆ ವೆಂಕಟಸುಬ್ಬರಾಯರು ವಂದನಾರ್ಪಣೆ ಮಾಡಿದರು

ಇದೇ ಗರಿಷ್ಠ ಸ್ಕೂಲ್ ಪ್ರೈಮರಿ ಬಾಲಕರ ಶಾಲೆಯಲ್ಲೂ ಜಯಂತಿ ಉತ್ಸವವು ಮುಖ್ಯೋಪಾಧ್ಯಾಯರಾದ ಶ್ರೀ [illegible] ಲಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀಮತಿ [illegible]ರಮ್ಮನವರಿಂದ ಪ್ರಾರ್ಥನೆಯಾದನಂತರ ಶ್ರೀಗಳಾದ [illegible] ಮಾದಯ್ಯ, ಜಿ ಎಂ ಮೂರ್ತಯ್ಯ ಮತ್ತು ಎನ್ ಶಿವಯ್ಯನವರಿಂದ ಭಾಷಣಗಳಾದುವು

ನೀಲಗಿರಿಯಲ್ಲಿ ಮಕ್ಕಳ ಕೂಟ

ಶ್ರೀ ಕೆ ಎಸ್ [illegible]ತಾರಾಮಯ್ಯನವರು ಕಳೆದ ಸೋಮವಾರ ನೀಲಗಿರಿಯಲ್ಲಿನ ತಮ್ಮ ಎಸ್ಟೇಟಿನ ಬಂಗಲೆಯಲ್ಲಿ ಮಕ್ಕಳ ಕೂಟವನ್ನು ಬಹಳ ವೈಭವದಿಂದ ನೆರವೇರಿಸಿದರು ಸಮಾರಂಭದ ಅಧ್ಯಕ್ಷತೆಯನ್ನು ಮದ್ರಾಸ್ ಸರ್ಕಾರದ ಹಣಕಾಸಿನ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂರವರು ವಹಿಸಿದ್ದರು ಶ್ರೀ ಸೀತಾರಾಮಯ್ಯನವರು ಅತಿಥಿಗಳನ್ನು ಸ್ವಾಗತಿಸಿ ಈ ಕೂಟವನ್ನು ಏರ್ಪಡಿಸಿರುವ ಉದ್ದೇಶವನ್ನು ವಿವರಿಸಿದರು ಶ್ರೀ ಸುಬ್ರಹ್ಮಣ್ಯಂರವರು ತಮ್ಮ ಭಾಷಣದಲ್ಲಿ ಮಕ್ಕಳಿಗೆ ಚಿಕ್ಕಂದಿನಿಂದಲೇ ಪ್ರಜಾಪ್ರಭುತ್ವ ತತ್ವಗಳನ್ನು ಕಲಿಸಬೇಕೆಂದು ಸೂಚಿಸಿ ಶ್ರೀ ಸೀತಾರಾಮಯ್ಯನವರ ಪ್ರಯತ್ನವನ್ನು ಪ್ರಶಂಸಿಸಿದರು ಕೂಟದ ಅಂಗವಾಗಿ ಏರ್ಪಡಿಸಿದ ಸ್ಪರ್ಧೆಗಳಲ್ಲಿ ಜಯಶೀಲರಾದ ಮಕ್ಕಳಿಗೆ ಬಹುಮಾನಗಳನ್ನು ಸಚಿವರು ಹಂಚಿದರು

ಪಾಕಿಸ್ತಾನದ ಸಾಲದ ಬಾಕಿ ಒಂದು ಕಾಸೂ ಬಂದಿಲ್ಲ

ವಿಭಜನೆಯ ಪರಿಣಾಮವಾಗಿ ಪಾಕಿಸ್ತಾನವು ಭಾರತಕ್ಕೆ ಕೊಡಬೇಕಾಗಿರುವ ೩೦೦ ಕೋಟಿ ರೂ [illegible] ಒಂದು ಕಾಸೂ ಸಹ ಬಂದಿಲ್ಲವೆಂದು ಕೇಂದ್ರ ಸರ್ಕಾರದ ರೆವಿನ್ಯೂ ಮಂತ್ರಿ ಎಂ ಸಿ ಷಾರವರು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

	ರೂ	ರೂ	ರೂ ವರೆಗೆ
ಕಡಲೆ ಬೇಳೆ	೧೮	೦ ೦	
ಕಾಳುಮೆಣಸು	೪೪	೦ ೦	
ಎಳ್ಳು	೪೨ ೨ ೦		೪೬ ೦ ೦
ಹೊಂಗೆಬೀಜ	೨೬ ೦ ೦		
ಹುಣಸೆಬೀಜ	೩ ೮ ೦		
ಹುರುಳಿ	೨೮ ೨ ೦		೨೮ ೬ ೦
ಕಡಲೆ	೪೨ ೮ ೦		೪೬ ೦ ೦
ಜೋಳ	೪೬ ೧೦ ೧		೫೦ ೦ ೦
ಹರಳು	೪೯ ೦ ೦		೫೪ ೨ ೦
ಉಪ್ಪು	೫೭ ೮ ೦		
ಹುಣಸೆಹಣ್ಣು	೪ ೧೫ ೦		
ಕೊಬ್ಬರಿ	೧೨ ೧೪ ೦		೧೬ ೮ ೦
ತೆಂಗಿನಕಾಯಿ ೧೦೦೦	೧೯೨ ೮ ೦		೨೦೨ ೦ ೦

CITY TUTORIAL COLLEGE,

MYSORE

Coaching Classes in full swing

INTERMEDIATE

ENGLISH KANNADA-SAMSKRITA

P C M C B Z P C B

★

Await Release of a guide to

ಕನ್ನಡ ಕುಮಾರಸಂಭವ-ಬಡಗಾಳ

ಬೆಲೆ ಹಲವು ಮಾಡಿದಲ್ಲಿ ತೊಂದರೆಯಾಗುವದಿಲ್ಲ

C T C Old Agrahar MYSORE

Edited, Printed and Published by A R Nagarajan at Sadhvi Press D Subbiah Road Mysore

ಸ್ವದೇಶೀ ಭಾವನೆಯು ರಾಷ್ಟ್ರದಲ್ಲೆಲ್ಲಾ ಬೆಳೆಯಬೇಕು

ಸರ್ವೋದಯ ಸಮ್ಮೇಳನದಲ್ಲಿ ಅಪ್ಪಾ ಸಾಹೇಬ್ ಪಟವರ್ಧನ್‌ರವರ ಅಧ್ಯಕ್ಷ ಭಾಷಣ

ವಿ ಸು] ಕಾಂಚೀಪುರ ೨೮

ಅಖಿಲ ಭಾರತ ಸರ್ವೋದಯ ಸಮ್ಮೇಳನದ ಎಂಟನೆ ಅಧಿವೇಶನವು ನೆನ್ನೆ ಇಲ್ಲಿ ಮಹಾರಾಷ್ಟ್ರದ ಅಪ್ಪಾ ಸಾಹೇಬ್ ಪಟವರ್ಧನ್‌ರವರ ಅಧ್ಯಕ್ಷತೆಯಲ್ಲಿ ಸೇರಿತು ೬ ಸಹಸ್ರ ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಭಾಗವಹಿಸಿದ್ದರು ಕಾರ್ಯಕ್ರಮವು ಆಚಾರ್ಯ ವಿನೋಬಾ ಭಾವೆಯವರ ನೇತೃತ್ವದಲ್ಲಿ ಸಾಮೂಹಿಕ ಸೂತ್ರ ಯಜ್ಞದೊಡನೆ ಆರಂಭವಾಯಿತು ವೇದಿಕೆಯ ಮೇಲೆ ಮುಖಂಡರುಗಳು ಆಸನಾರೂಢರಾಗಿ ಚರಖದಿಂದ ನೂಲನ್ನು ತೆಗೆದರು

ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಜಗನ್ನಾಥನ್‌ರವರು ಸುಖಾಗಮನವನ್ನು ಬಯಸಿದರು ಆಚಾರ್ಯ ವಿನೋಬಾಜಿಯವರು ತಮಿಳುನಾಡಿನಲ್ಲಿ ಕೈಗೊಳ್ಳಲಿರುವ ಭೂದಾನ ಯಾತ್ರೆ ಬಗ್ಗೆ ಜನರು ವಿಶೇಷ ಆಸಕ್ತಿ ಹೊಂದಿರುವುದಾಗಿ ಅವರು ನುಡಿದರು

ಅಚ್ಯುತ ಪಟವರ್ಧನ್‌ರವರು ತಮ್ಮ ಭಾಷಣದಲ್ಲಿ ಭೂದಾನ ಕಲಸಗಾರರು ದೇಶದ ತುಂಬ ಸ್ವದೇಶೀ ಭಾವನೆಯು ಸ್ಫೂರ್ತಿ ಯನ್ನುಂಟುಮಾಡಬೇಕೆಂದು ಸೂಚಿಸಿದರು ಅಲ್ಲದೆ ಭಾರತವು ಒಂದೇ ರಾಷ್ಟ್ರವೆಂದು ಸಾರಬೇಕೆಂಬುದಾಗಿಯೂ ಅವರು ನುಡಿದರು ಸ್ವದೇಶೀ ಭಾವನೆಯು ಬೆಳೆದಹೊರತು ಗಾಂಧೀಜಿಯವರ ಧ್ಯೇಯವು ಸಾಧನೆಯಾಗುವುದಿಲ್ಲವೆಂದು ತಿಳಿಸಿದರು

ವಿನೋಬಾ ಭಾವೆಯವರ ಭಾಷಣ

ಆಚಾರ್ಯ ವಿನೋಬಾಜಿಯವರು ನೂರು ನಿಮಿಷ ಮಾತನಾಡಿ ರಷ್ಯವು ತನ್ನ ಸೈನ್ಯಬಲವನ್ನು ತಗ್ಗಿಸುವುದು ಬುದ್ಧನ ತತ್ವದ ವಿಜಯವೆಂದು ತಿಳಿಸಿದರು ಭೂದಾನವು ಯಶಸ್ವಿಯಾಗುತ್ತಿರುವುದು ಅಹಿಂಸೆಗೆ ದೊರೆತ ಪ್ರಶಸ್ತಿ ಎಂದೂ ಹೇಳಿದರು

ಗಾಂಧೀಜಿಯವರ ಕಾಲದಲ್ಲಿ ಪರಿಸ್ಥಿತಿಯು ಬೇರೆಯಾಗಿದ್ದಿತೆಂದೂ, ವಿದೇಶೀ ಪ್ರಭುತ್ವವನ್ನು ಹೋಗಲಾಡಿಸಲು ಆಗ ಸತ್ಯಾಗ್ರಹವನ್ನು ನಡೆಸಲಾಯಿತೆಂದೂ, ಈಗ ಆರ್ಥಿಕ ಮತ್ತು ಸಾಮಾಜಿಕ ಕ್ರಾಂತಿಗಾಗಿ ಜನರ ಮನಸ್ಸನ್ನು ಬದಲಾಯಿಸಬೇಕಾಗಿದೆಯೆಂದೂ ಜಮೀನುದಾರರನ್ನೂ ಧನಿಕರನ್ನೂ ದ್ವೇಷದಿಂದ ದೂರಕ್ಕೆ ತಳ್ಳುವಂತಿಲ್ಲವೆಂದೂ, ಆದರೆ ಅವರುಗಳನ್ನು ಸರಿಯಾದ ಮಾರ್ಗಕ್ಕೆ ತರಲು ಪ್ರಯತ್ನ ಪಡಬೇಕೆಂದೂ ತಿಳಿಸಿದರು ಭೂದಾನದ ಬಗ್ಗೆ ತಮಿಳುನಾಡು ವಿಶೇಷ ಉತ್ಸಾಹ ತೋರಲೆಂದು ಹಾರೈಸಿದರು

ಲೋಕಸಭೆಯ ಅಂದಾಜು ಸಮಿತಿಗೆ ಎನ್ ರಾಚಯ್ಯನವರ ಆಯ್ಕೆ

ಲೋಕಸಭೆಯ ಅಂದಾಜು ಸಮಿತಿಗೆ ಮೈಸೂರಿನ ಸದಸ್ಯರಾದ ಶ್ರೀ ಎನ್ ರಾಚಯ್ಯನವರು ಅವಿರೋಧವಾಗಿ ಚುನಾಯಿಸಲ್ಪಟ್ಟಿದ್ದಾರೆ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಸಂಬಂಧಿಸಿದಂತೆ ರಚಿಸಲಾಗಿರುವ ಭೂ ಸುಧಾರಣೆ ಮತ್ತು ವ್ಯವಸಾಯ ಸಮಿತಿಯಲ್ಲೂ ಅವರು ಸದಸ್ಯರಾಗಿರುವರು

ಚಾಯಿಕಾಯಿ ಹಲಗೆಗಳು

ಉತ್ತಮವಾದ ಚಾಯಿಕಾಯಿ ಹಲಗೆಗಳು ದೊರೆಯುತ್ತವೆ ಕೂಡಲೇ ವಿಚಾರಿಸಿ

ಸಾಧ್ವಿ ಆಫೀಸ್, ಮೈಸೂರು

SREE GAYATHRI

TALKIES

From 29 5 56 For 2 Days

WITNESS TO MURDER

Starring Barbara Stanwyck

On 31—5—56 one day only

SABRE JET

ಪಶ್ಚಿಮ ಪಾಕಿಸ್ತಾನ ಶಾಸನ ಸಭೆಯಲ್ಲಿ ಪುನಃ ಗೊಂದ[ಲ]

ಪಶ್ಚಿಮ ಪಾಕಿಸ್ತಾನ ಶಾಸನ ಸಭೆಯಲ್ಲಿ ನೆನ್ನೆ ಗ್ರಾಂಟುಗಳ ಬಗ್ಗೆ ಸರ್ಕಾರ ಬೇಡಿಕೆ[ಯ] ಪರಿಶೀಲನೆ ಸಮಯದಲ್ಲಿ ೨ ಗಂಟೆ ಕಾಲ ವಿ[...] ಗೊಂದಲವಾಯಿತೆಂದು ವರದಿಯಾಗಿದೆ [...] ಒಂದು ಸಲ ಅಧ್ಯಕ್ಷರು ಸಭೆಯನ್ನು [...] ಕಾಲ ಮುಂದುವರಿಸಬೇಕಾಯಿತು [...] ಪಟ್ಟಿ ಬಗ್ಗೆ ಚರ್ಚೆ ಮುಕ್ತಾಯವಾದರೂ [...] ಅದನ್ನು ಚರ್ಚಿಸುವ ಬಗ್ಗೆ ಲೀಗ್ ಸದಸ್ಯರು [...] ಡಿದ ಒತ್ತಾಯವನ್ನು ಅಧ್ಯಕ್ಷರು ತಳ್ಳಿಹಾ[ಕಿ]ದಕ್ಕಾಗಿ ಗೊಂದಲವಾಯಿತು ಲೀಗಿನ [...] ಗಾಮವಾಗಿ ಹಣಕಾಸಿನ ಸಚಿವರು ಉತ್ತ[ರ...] ಯಲೂ ಸಾಧ್ಯವಾಗಲಿಲ್ಲ

ವಿಧಾನ ಪರಿಷತ್ತು ಚುನಾವಣೆ[...] ಅಂಚೆ ಓಟಿಂಗ್ ಇಲ್ಲ

ದೇಶದ ಎಲ್ಲಾ ವಿಧಾನ ಪರಿಷತ್ತುಗ[ಳಿಗೆ] ಉಪಾಧ್ಯಾಯರು, ಪದವೀಧರರು ಮತ್ತು [...] ಗೀಯ ಸಂಸ್ಥೆಗಳ ಕ್ಷೇತ್ರಗಳಿಂದ ನಡೆಯುವ [ಚು]ನಾವಣೆಗಳಲ್ಲಿ ಇನ್ನು ಮುಂದೆ ಅಂಚೆ ಮು[ಖಾಂತರ] ಓಟು ಕೊಡುವ ಪದ್ಧತಿಯನ್ನು ತಪ್ಪಿಸಲು [ಕೇಂ]ದ್ರ ಚುನಾವಣಾ ಸಮಿತಿಯು ನಿರ್ಧರಿಸಿದೆ [...]ರ ಬದಲು ವ್ಯಕ್ತಿ ಓಟನ್ನು ಎಣಿಸಲಾಗ[...]ದು ಅಂಚೆ ಮೂಲಕ ಓಟಿಂಗಿನಲ್ಲಿ ಅ[...]ನ್ಯಾಸತೆ ಮತ್ತು ಅಕ್ರಮಗಳು ನಡೆಯುವ [...] ತಿಯಾಗಿ ಗಮನಕ್ಕೆ ಬಂದಿದೆ

ಕೆ ಸಿ ರೆಡ್ಡಿಯವರಿಗೆ ಬಿನ್ನವತ್ತಳೆ

ಕೇಂದ್ರ ಸರ್ಕಾರದ ಉತ್ಪನ್ನ ಶಾಖಾ ಮಂ[ತ್ರಿ] ಶ್ರೀ ಕೆ ಸಿ ರೆಡ್ಡಿಯವರಿಗೆ ಕೋಲಾರ ಜಿಲ್ಲೆ [...]ಡ್ಲಘಟ್ಟ ತಾಲ್ಲೂಕಿನ ಮೇಲೂರಿನಲ್ಲಿ ಅಲ್ಲಿನ [...] ಸರ್ ರೇಷ್ಮೆ ಕೈಗಾರಿಕೆಯವರು ನಾಳೆ ಮ[ಧ್ಯಾಹ್ನ] ೩ ಗಂಟೆಗೆ ಬಿನ್ನವತ್ತಳೆಯನ್ನು ಅರ್ಪಿ[ಸುವ]ರು [...] ಕರರಿಗೆ ಎಟ್ಟಿಗಳನ್ನೂ ಹಂಚಲಾ[ಗು]ವುದು

ನೊಹಲ್ಲಾ ದಿನಾಚರಣೆ

ಅಜೀಜ್ ಸೇಠ್ ನಗರದಲ್ಲಿರುವ ಸರ್ಕಾರಿ ಜ[...] ನಾ ಪ್ರಾಥಮಿಕ ಶಾಲೆಯಲ್ಲಿ ನಾಳೆ ಸಂಜೆ [...] ಗಂಟೆಗೆ ಪೌರಸಭೆಯ ಆರೋಗ್ಯ ಇಲಾಖೆಯ[ವ]ರು ಲಷ್ಕರ್ ಮೊಹಲ್ಲಾ ದಿನಾಚರಣೆಯನ್ನು [ಏ]ರ್ಪಡಿಸುತ್ತಾರೆ ಪೌರಸಭಾ ಸದಸ್ಯರಾದ [...]ಗಳು ಬಿ ಜಿ ದಾಸ್ ಮತ್ತು ಹೆಚ್ ಎನ್ [...]ದ್ದಯ್ಯನವರು ಭಾಷಣ ಮಾಡುವರು ಮಾ[...] ಸಂಘದವರಿಂದ ನಾಟಕವೂ ನಡೆಯುವುದು

City Municipal Offices,
Mysore, Dated 23-5-1956

NOTIFICATION

No C2 P R. 88-C/25|56-57

Notice is hereby given to th[e] inhabitants of the Municipalit[y] of Mysore that the Municipa[l] Council desire to amend th[e] Bye law relating to the regis[-]tration and the levy of tax [on] dogs and for preventing sprea[d] of infectious diseases amon[g] them, so as to levy a licens[e] fee of 8 annas exclusive of th[e] cost of the label as against th[e] present rate of 6 annas inclu[-]sive of 2 annas towards the co[st] of label

Any inhabitant of the Muni[-]cipality objecting to the pro[-]posed tax may within on[e] month from the date of thi[s] notice send his objections i[n] writing to the Municipa[l] Council

A VISWANATH,
Municipal Commissioner

ರಿಜಿಸ್ಟರ್ ನಂ. 792

ಲಗ್ನದ ಜವಳಿ
ಗೌಡ್ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಅರಣಿ, ಮಿಂಡಿಗಲ್
ರೇಷ್ಮೆ ಮತ್ತು ಜರಿ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ. ಎ., ಡ್ರೇಪರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು · ಫೋನ್ 446



ಇಂದಿನ ಪತ್ರಿಕೆ 3 ಕಾಸು
ಎಲ್ಲಾ ತರಹ ಉತ್ತಮವಾದ
ಕನ್ನಡಕಗಳು
ಸುಲಭ ಬೆಲೆಗೆ ದೊರೆಯುತ್ತವೆ
ವಿಷನ್ ಹೌಸ್
— ಮಾಲೀಕರು —
S V ಗೋಪಾಲ್ ಅಂಡ್ ಕೋ,
ಧನ್ವಂತರಿ ರಸ್ತೆಯಲ್ಲಿರುವ ನ್ಯೂ ಮುನಿಸಿಪಲ್ ಕಟ್ಟಡದ ಮಹಡಿ ಮೇಲೆ 4 ನೇ ನಂಬರು ರೂಮು
ಒಮ್ಮೆ ಪರೀಕ್ಷಿಸಿ ತೃಪ್ತಿಹೊಂದಿರಿ!

[ಪುಟ : ೦೪] SADHVI : WEDNESDAY 30-5 1956 ಮೈಸೂರು : ಬುಧವಾರ ೩೦-೫-೧೯೫೬ [ಸಂಚಿಕೆ : ೨೬೬

ಈಜಿಪ್ಟಿನ ಮಾಜಿ ಅಧ್ಯಕ್ಷ ಜ॥ ನಗೀಬರಿಗೆ ೧೦ ವರ್ಷ ಸಜಾ

ವೃತ್ತಿ ಶಿಕ್ಷಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು

ಬಸುಮಯ್ಯನವರ ವಿದ್ಯಾ ಸಂಸ್ಥೆಯಲ್ಲಿ ಕೆ. ಸಿ. ರೆಡ್ಡಿಯವರ ಭಾಷಣ

ಮೈಸೂರು ೩೦

ರಾಜಧಾನಿಯ ಡಿ. ಬಸುಮಯ್ಯನವರ ಶಾಲೆ ಹೊರ ಅಂಗಣದಲ್ಲಿ ಶ್ರೀಯುತರಾದ ಎಸ್ ನಾರಾಯಣ್ ಮತ್ತು ನಾಗಪ್ಪನವರು ಕಟ್ಟಿಸಿರುವ ಡಿ. ಸುಬ್ಬಣ್ಣನವರ ವಿಜ್ಞಾನ ಶಾಲಾ ಭವನದ ಆರಂಭೋತ್ಸವವನ್ನು ಕೇಂದ್ರ ಸರ್ಕಾರದ ಸಚಿವರಾದ ಶ್ರೀ ಕೆ. ಸಿ. ರೆಡ್ಡಿಯವರು ನೆನ್ನೆ ಸಂಜೆ ನೆರವೇರಿಸಿದರು ಮತ್ತು ಶಾಲೆಯ ಸ್ನಾತಕರ ... ಅಧ್ಯಕ್ಷತೆಯನ್ನು ವಹಿಸಿದ್ದರು.

ಶಾಲಾ ಬಾಲಕರಿಂದ ಸ್ವಾಗತ ಗೀತೆಯಾದ ನಂತರ, ಶ್ರೀ ರಾಮಚಂದ್ರ ಮತ್ತು ಪುರಂದರರಿಂದ ವೇಣುವಾದನವು ನಡೆಯಿತು. ವಿಜ್ಞಾನ ಭವನದ ಕಟ್ಟಡವನ್ನು ಕಟ್ಟಿಸಿಕೊಟ್ಟ ಶ್ರೀ ನಾರಾಯಣ್ ಮತ್ತು ಶ್ರೀ ನಾಗಪ್ಪನವರಿಗೂ ಮತ್ತು ಶ್ರೀ ಕೆ. ಸಿ. ರೆಡ್ಡಿಯವರಿಗೂ ಬಿನ್ನವತ್ತಳೆಗಳನ್ನು ಸಮರ್ಪಿಸಲಾಯಿತು.

ಸಂತಸಪೇಟೆ ವರ್ತಕರಾಗಿದ್ದು ಅನೇಕ ಸಾರ್ವಜನಿಕ ಕಾರ್ಯ ಚಟುವಟಿಕೆಗಳಲ್ಲಿ ಪಾತ್ರವಹಿಸುತ್ತಿದ್ದ ಶ್ರೀ ಡಿ. ಸುಬ್ಬಣ್ಣನವರ ಭಾವಚಿತ್ರದ ಅನಾವರಣವನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ನೆರವೇರಿಸಿದರು.

ಶ್ರೀ ಕೆ. ಸಿ. ರೆಡ್ಡಿಯವರು ತಮ್ಮ ಭಾಷಣದ ಆರಂಭದಲ್ಲಿ ಪ್ರಕಾಶ ಡಿ. ಬಸುಮಯ್ಯನವರ ಗುಣಾತಿಶಯಗಳನ್ನು ಕೊಂಡಾಡಿ, ಅವರ ದೇಶಭಕ್ತಿಯು ಇತರರಿಗೂ ಸ್ಫೂರ್ತಿಯುಂಟು ಮಾಡಲೆಂದು ಹಾರೈಸಿದರು.

ಈಗಿನ ವಿದ್ಯಾಭ್ಯಾಸ ಕ್ರಮದಂತೆ ಪ್ರತಿ ವರ್ಷ ಸಾವಿರಾರು ಜನ ಪದವೀಧರರು ತಯಾರಾಗುತ್ತಿರುವುದರಿಂದ ಅವರುಗಳೆಲ್ಲರಿಗೂ ಉದ್ಯೋಗ ದೊರೆಯದೆ ಅವರು ಕಲಿತ ವಿದ್ಯೆಯು ಜೀವನ ಸಾಧಕವಾಗುತ್ತಿಲ್ಲವೆಂದು ಅವರು ಹೇಳಿ ವೃತ್ತಿ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕೆಂದು ತಿಳಿಸಿದರು. ಪ್ರೌಢಶಾಲೆಯನ್ನು ಬಿಟ್ಟುಹೋಗುವುದರೊಳಗೆ ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜೀವನವನ್ನು ಸಾಧಿಸಿಕೊಳ್ಳಲು ಶಕ್ತನಾಗಬೇಕೆಂದು ಅವರು ಸೂಚಿಸಿ ಎಲ್ಲಾ ಪ್ರೌಢಶಾಲೆಗಳಲ್ಲೂ ವೃತ್ತಿ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡಬೇಕೆಂಬ ಅಭಿಪ್ರಾಯಪಟ್ಟರು. ಇತರ ರಾಜ್ಯಗಳಲ್ಲಿ ... ದೇಶದ ಅವಶ್ಯಕತೆಗೆ ಅನುಗುಣವಾಗಿ ... ನಿರೀಕ್ಷ್ಯವಾದ ಯೋಜನೆಯ ಪ್ರಕಾರ ಶಿಕ್ಷಣವನ್ನು ಕೊಡುವಂತಾಗಬೇಕೆಂದು ಅವರು ಹೇಳಿದರು.

ಶ್ರೀಮನ್ಮಹಾರಾಜರು ಸಮಾರಂಭಕ್ಕೆ ಯಶಸ್ಸು ಕೋರಿ ಶುಭ ಸಂದೇಶ ಕಳುಹಿಸಿದ್ದರು.

ಶ್ರೀ ಎಸ್ ವೆಂಕಟನಾರಾಯಣ ಶಾಸ್ತ್ರಿಯವರ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಬೆಂಗಳೂರು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಆರ್ ಕೆ. ಅಂತರ್‌ಸೇಠರವರು ಮೈಸೂರಿಗೆ ವರ್ಗಾಯಿಸಲಾಗಿದೆ.

ಕೆ. ಕಣ್ಣಾರವರ ನಾಯಕತ್ವಕ್ಕೆ ಪುರಸ್ಕಾರವಿಲ್ಲ

ನಗರದ ವಿದ್ಯುಚ್ಛಕ್ತಿ ನೌಕರರ ಸಭೆಯಲ್ಲಿ ನಿರ್ಣಯ

ಮೈಸೂರು ೩೦

ನಗರದ ವಿದ್ಯುಚ್ಛಕ್ತಿ ಇಲಾಖಾ ನೌಕರರ ಸಭೆಯು ಕಳೆದ ಭಾನುವಾರ ಶ್ರೀ ಎಂ. ಪಿ. ಜಿಪ್ಸ ... ಅಧ್ಯಕ್ಷತೆಯಲ್ಲಿ ಸೇರಿತ್ತು. ಸರ್ಕಾರದವರೊಡನೆ ನೇರ ಸಂಧಾನ ನಡೆಸದೆ ವಿದ್ಯುಚ್ಛಕ್ತಿ ನೌಕರರ ಮುಷ್ಕರವನ್ನು ವಾಪಸು ತೆಗೆದುಕೊಂಡ ಪರಿಣಾಮವಾಗಿ ನೌಕರರುಗಳು ವಿಶೇಷ ಕಷ್ಟನಷ್ಟಗಳಿಗೆ ಗುರಿಯಾದರೆಂದೂ ... ಸರ್ಕಾರ ... ನೌಕರರ ... ಬಂಧನಕ್ಕೆ ... ಬಂದಿರುವುದೆಂದೂ ಸಭೆಯು ಅಭಿಪ್ರಾಯಪಟ್ಟಿತು. ... ಸಂಘದ ... ಇವುಗಳಿಗೆಲ್ಲಾ ... ಉತ್ತರ ... ಕೆಂದೂ, ಇದುವರೆಗೆ ಶ್ರೀ ಕೆ. ಕಣ್ಣಾರವರ ಮುಂದಾಳತ್ವದಲ್ಲಿ ಇನ್ನು ಮುಂದೆ ಯಾವ ಚಟುವಟಿಕೆಯಲ್ಲೂ ಕೆಲಸಗಾರರಾರೂ ಭಾಗವಹಿಸಬಾರದೆಂದೂ ಸರ್ವಾನುಮತದ ನಿರ್ಣಯವನ್ನು ಅಂಗೀಕರಿಸಲಾಯಿತು.

ಶ್ರೀಗಳಾದ ಕೆ. ಟಿ. ಭಾಷ್ಯಂ ಮತ್ತು ಜಾರ್ಜ್ ... ಯವರ ನಿಧನಕ್ಕಾಗಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.

ಮಕ್ಕಳ ಕೂಟದಲ್ಲಿ ಬುದ್ಧ ಜಯಂತಿ

ಲಕ್ಷ್ಮೀಪುರದ ೧೧೫ ನೇ ನಂಬರ್ ಮನೆಯಲ್ಲಿರುವ ಮೈಸೂರು ಮಕ್ಕಳಕೂಟದಲ್ಲಿ ನಾಳೆ ಸಂಜೆ ೫ ಗಂಟೆಗೆ ಬುದ್ಧ ಜಯಂತಿಯನ್ನು ನೆರವೇರಿಸಲಾಗುವುದು. ಮಹಾರಾಜಾ ಕಾಲೇಜಿನ ಶ್ರೀ ಎಂ. ಯಾಮುನಾಚಾರ್ಯರು ಅಧ್ಯಕ್ಷತೆ ವಹಿಸುವರು.

ಹಾವು ಕಡಿದು ಮರಣ

ಹೊಳೆನರಸೀಪುರದಲ್ಲಿ ಕಳೆದ ೨೨ನೇ ತಾರೀಕು ರಾಮಯ್ಯ ಎಂಬುವರು ತಮ್ಮ ಮನೆ ಹಿಂಭಾಗ ... ಯಾಡುತ್ತಿದ್ದಾಗ ಹುಲ್ಲಿನಲ್ಲಿದ್ದ ಹಾವೊಂದು ಕಚ್ಚಿದ ಪರಿಣಾಮವಾಗಿ ಅವರು ಮೃತಪಟ್ಟರೆಂದು ವರದಿಯಾಗಿದೆ. ಅವರು ಮೊದಲು ಸರ್ಪದ ಬಾಲವನ್ನು ಹಿಡಿಯಲು ಹೋದಾಗ ಅದು ರಭಸದಿಂದ ತಿರುಗಿ ಕಚ್ಚಿ ಕೈಗೆ ಸುತ್ತಿಕೊಂಡಿತೆಂದೂ ಮತ್ತೊಮ್ಮೆ ಕೈ ಕೊಡವಿದಾಗ ಎಲ್ಲಿಯೋ ಓಡಿ ಅವಿತುಕೊಂಡಿತೆಂದೂ ಹೇಳಲಾಗಿದೆ. ಅವರಿಗೆ ಮಂತ್ರ, ಇಂಜಕ್ಷನ್ ಮುಂತಾದ ಚಿಕಿತ್ಸೆಗಳಾವುದೂ ಪ್ರಯೋಜನವಾಗಲಿಲ್ಲ.

ಬೆರಿಯಾ ಅನುವರ್ತಿಗಳಿಗೆ ಗಲ್ಲು

ರಷ್ಯದ ಗಲ್ಲಿಗೇರಿಸಲ್ಪಟ್ಟ ಮಾಜಿ ಒಳಾಡಳಿತ ಮಂತ್ರಿ ಲಾವ್ರೆಂಟಿ ಬೆರಿಯಾರವರ ನಾಲ್ವರು ಅನುಯಾಯಿಗಳನ್ನು ಅಜರ್‌ಬೈಜಾನಿನಲ್ಲಿ ದೇಶದ್ರೋಹಕ್ಕಾಗಿಯೂ, ಭಯೋತ್ಪಾದನಾ ಕೆಲಸಗಳಿಗಾಗಿಯೂ ಗಲ್ಲಿಗೇರಿಸಲಾಯಿತೆಂದು ಮಾಸ್ಕೋ ಪತ್ರಿಕೆಯೊಂದು ತಿಳಿಸಿದೆ. ಆ ವ್ಯಕ್ತಿಗಳಲ್ಲೊಬ್ಬನು ಅಜರ್‌ಬೈಜಾನಿನ ಕಮ್ಯೂನಿಸ್ಟ್ ಪಕ್ಷದ ಮಾಜಿ ನಾಯಕ. ಆತನ ಹೆಸರು ಮಿರ್ ಬಾಗ್ಗಿರಾವ್.

ಜನರಲ್ ನಗೀಬರಿಗೆ ೧೦ ವರ್ಷ ಸಜಾ !

ಈಜಿಪ್ಟಿನ ಮಾಜಿ ಅಧ್ಯಕ್ಷ ಜನರಲ್ ನಗೀಬರನ್ನು ಅಲ್ಲಿನ ರಹಸ್ಯ ಮಿಲಿಟರಿ ನ್ಯಾಯಮಂಡಲದ ಮುಂದೆ ವಿಚಾರಣೆಗೆ ಒಳಪಡಿಸಲಾಗಿತ್ತೆಂದೂ ಅವರಿಗೆ ೧೦ ವರ್ಷ ಸಜಾವನ್ನು ಕೊಡಲಾಗಿದೆಯೆಂದೂ ಲಂಡನ್ನಿನ ಡೈಲಿ ಟೆಲಿಗ್ರಾಫ್ ಪತ್ರಿಕೆ ತಿಳಿಸಿದೆ.

ಕಾಲ್ಕಾ ರೈಲ್ವೆ ಕೆಲಸಗಾರರ ಮೇಲೆ ಗುಂಡಿಸೇಟು : ೪ ಮರಣ

ಅಂಬಾಲಾ ನಗರಕ್ಕೆ ಸಮೀಪದ ಕಾಲ್ಕಾ ... ರೈಲ್ವೆ ... ದಲ್ಲಿ ಪ್ರಾರಂಭವಾದ ... ನಡೆಸಿದ ವರ್ಕ್‌ಷಾಪ್ ಕೆಲಸಗಾರರ ಮೇಲೆ ನೆನ್ನೆ ಪೋಲೀಸರು ಗುಂಡು ಹಾರಿಸಲಾಗಿ ೪ ಜನರು ಮೃತಪಟ್ಟರು. ರೈಲ್ವೆ ಬೋರ್ಡಿನ ಅಧ್ಯಕ್ಷ ... ರವರು ಅಲ್ಲಿಗೆ ರೈಲು ಕಾರಿನಲ್ಲಿ ಬಂದಾಗ ಅವರ ... ಕೆಲಸಗಾರರು ... ತಮ್ಮ ಬೇಡಿಕೆಗಳ ಪಟ್ಟಿಯನ್ನು ಕೊಟ್ಟು ಕೂಡಲೇ ಅವನ್ನು ಈಡೇರಿಸುವಂತೆ ಒತ್ತಾಯಪಡಿಸಿದರೆಂದೂ ... ಅವನ್ನು ಜಾಗ್ರತೆ ಮಾಡಿಕೊಡುವುದಾಗಿ ಭರವಸೆಯಿತ್ತರೆಂದೂ ಹೇಳಲಾಗಿದೆ. ಎನ್ನ ... ಹಲವರು ರೈಲು ... ಕಲ್ಲು ತೂರಿ ... ಮಾಡಿದರು. ಗುಂಡೇಟಿನಲ್ಲಿ ೬ ಮಂದಿಗೆ ಗಾಯವಾಗಿದೆ.

ಪಾಕಿಸ್ತಾನದೊಡನೆ ಕಾಶ್ಮೀರದ ಮಾತುಕತೆಗೆ ಭಾರತದ ಅಡ್ಡಿಯಿಲ್ಲ

ಕಾಶ್ಮೀರದ ಬಗ್ಗೆ ಇತ್ತೀಚೆಗೆ ತಾವು ಕೊಟ್ಟಿರುವ ಹೇಳಿಕೆಗಳಿಂದ ಪಾಕಿಸ್ತಾನದ ಮುಖಂಡರೊಡನೆ ಆ ಬಗ್ಗೆ ಮಾತುಕತೆಗೆ ಅವಕಾಶವೇ ಇಲ್ಲವೆಂದು ಭಾವಿಸಬಾರದೆಂಬುದಾಗಿ ಪ್ರಧಾನಿ ನೆಹರೂರವರು ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ಮುಂದೆ ತಿಳಿಸಿರುವುದಾಗಿ ವರದಿಯಾಗಿದೆ. ಮಾತುಕತೆಗಳಲ್ಲಿ ಹಳೆಯ ವಿಚಾರಗಳನ್ನೇ ಪುನಃ ಪ್ರಸ್ತಾಪಿಸುವುದರಿಂದ ಪ್ರಯೋಜನವಿಲ್ಲವೆಂದೂ ಅವರು ಅಭಿಪ್ರಾಯಪಟ್ಟಿರುವರು.

ವೈದ್ಯರ ವರ್ಗ

ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಶ್ರೀ ಪಿ. ವಿಶ್ವಚಂದ್ರಕುಮಾರ್‌ರವರನ್ನು ಡಾ॥ ಕೆ. ಜಿ. ಪಟ್ಲಿಕರ್‌ರವರ ಸ್ಥಾನದಲ್ಲಿ ಮೈಸೂರು ಮೆಡಿಕಲ್ ಕಾಲೇಜಿಗೆ ವರ್ಗಾಯಿಸಲಾಗಿದೆ. ಹಿಂದೆ ಆ ಸ್ಥಾನಕ್ಕೆ ದೊಡ್ಡಬಳ್ಳಾಪುರದ ಶ್ರೀ ನಸರುಲ್ಲಾ ಖಾನ್ ಘೋರಿಯವರು ವರ್ಗವಾದದ್ದು ಈಗ ರದ್ದಾಗಿದೆ. ಕಲ್ಯಾ... ದಿಂದ ಹಿಂದಿರುಗಲಿರುವ ಶ್ರೀ ಬಿ. ರಾಮರಾಯರನ್ನು ಶ್ರೀರಂಗಪಟ್ಟಣದ ಆರೋಗ್ಯಾಧಿಕಾರಿಗಳಾಗಿ ನೇಮಕ ಮಾಡಿದೆ.

ಬೃಂದಾವನದ ದೀಪೋತ್ಸವದಲ್ಲಿ ಕಡಿತ

ಕೃಷ್ಣರಾಜಸಾಗರದ ... ನೀರಿನ ಮಟ್ಟವು ೮೦ ಅಡಿಗಿಂತ ಕಡಿಮೆಯಾಗಿರುವುದರಿಂದ ಇದು ಹೆಚ್ಚುವವರೆಗೂ ಬೃಂದಾವನದಲ್ಲಿ ಶನಿವಾರ ಮತ್ತು ಭಾನುವಾರ ಸ್ವಲ್ಪ ಭಾಗಗಳಲ್ಲಿ ಮಾತ್ರ ದೀಪೋತ್ಸವವು ನಡೆಯುವುದೆಂದು ಸೂಚಿಸಲಾಗಿದೆ.

ಜಿಲ್ಲೆಗಳಿಗೆ ಸಿವಿಲ್ ನ್ಯಾಯಾಧೀಶರುಗಳು

(ಸ್ವಂತ ವರದಿ) ಬೆಂಗಳೂರು ೩೦

ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸುವ ಸಂಬಂಧವಾಗಿ ಸರ್ಕಾರದವರು ನಾನಾ ಜಿಲ್ಲೆಗಳಿಗೆ ಸಿವಿಲ್ ಜಡ್ಜಿಗಳನ್ನು ಈ ರೀತಿ ನೇಮಕಗಳು ಮಾಡಿರುತ್ತಾರೆ —

ತುಮಕೂರಿಗೆ ಶ್ರೀ ಕೃಷ್ಣಶೆಟ್ಟರು, ಮೈಸೂರಿಗೆ ಶ್ರೀ ಚನ್ನಯ್ಯ, ಕೋಲಾರಕ್ಕೆ ಶ್ರೀ ಜಿ. ರುದ್ರಪ್ಪ, ಬಳ್ಳಾರಿ ಶ್ರೀ ಕೃಷ್ಣಮೂರ್ತಿ, ಚಿತ್ರದುರ್ಗ ಶ್ರೀ ರಾಮಚಂದ್ರ, ಚಿಕ್ಕಮಗಳೂರು ಶ್ರೀ ... ಮಹಾವ್, ಶಿವಮೊಗ್ಗ ಶ್ರೀ ಚನ್ನರಾಮರೆಡ್ಡಿ, ಮಂಡ್ಯ ಗೋವಿಂದಶರ್ಮ, ಬೆಂಗಳೂರು ನರಸಿಂಹಮೂರ್ತಿ, ಹಾಸನ ಶ್ರೀ ಸಂಜೀವಲು.

ಶ್ರೀ ಲಿಂಗಣ್ಣನವರನ್ನು ಮೈಸೂರಿನ ಸಬಾರ್ಡಿನೇಟ್ ನ್ಯಾಯಾಧೀಶರಾಗಿ ನೇಮಿಸಲಾಗಿದೆ.

ನಗರ ನ್ಯಾಯಾಧೀಶರ ವರ್ಗ

ಮೈಸೂರು ನಗರದ ಪ್ರಥಮ ನ್ಯಾಯಾಧೀಶರಾಗಿರುವ ಶ್ರೀ ಪಂಚಾಕ್ಷರಯ್ಯನವರನ್ನು ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟರಾಗಿ ವರ್ಗಾಯಿಸಿದೆ. ಶ್ರೀ ಅಬ್ದುಲ್ ಬಾಸಿತ್‌ರವರು ಬೆಂಗಳೂರು ಸಬ್ ಜಡ್ಜರಾಗುವರು. ಮೈಸೂರು ನಗರದ ಪ್ರಥಮ ನ್ಯಾಯಾಧೀಶರಾಗಿ ಶ್ರೀ ಮಹಾಂತಯ್ಯನವರನ್ನು ನೇಮಕ ಮಾಡಲಾಗಿದೆ.

ಅಹಿಂಸೆಯ ಮೂಲಕ ಪ್ರಪಂಚದ ಶಾಂತಿ ಸಾಧನೆ

ವಿಶ್ವದ ರಾಷ್ಟ್ರಗಳಿಗೆ ಸರ್ವೋದಯ ಸಮ್ಮೇಳನದ ಮನವಿ

ಕಾಂಚೀಪುರದಲ್ಲಿ ೩ ದಿನಗಳಿಂದ ಸೇರಿದ್ದ ಅಖಿಲ ಭಾರತ ಸರ್ವೋದಯ ಸಮ್ಮೇಳನವು ನೆನ್ನೆ ಮುಕ್ತಾಯವಾಯಿತು. ಅಹಿಂಸೆಯ ಮೂಲಕ ವಿಶ್ವಶಾಂತಿಯನ್ನು ಸ್ಥಾಪಿಸಬೇಕೆಂದು ಜಗತ್ತಿನ ಸರ್ಕಾರಗಳಿಗೆ ಮನವಿ ಮಾಡಲಾಯಿತು. ಈ ಬಗ್ಗೆ ನಿರ್ಣಯವನ್ನು ಧೀರೇಂದ್ರ ಮಜುಮ್‌ದಾರರು ಮಂಡಿಸಿ, ಹಿರಿಯ ರಾಷ್ಟ್ರಗಳು ಯುದ್ಧಕ್ಕಾಗಿ ನಡೆಸುತ್ತಿರುವ ಸಿದ್ಧತೆಗಳನ್ನು ಪ್ರಸ್ತಾಪಿಸಿದರು. ಆ ರಾಷ್ಟ್ರಗಳವರು ಅಹಿಂಸೆಯಲ್ಲಿ ನಂಬಿಕೆಯನ್ನು ಹೊಂದಿಲ್ಲದಿರುವುದೇ ಇದಕ್ಕೆ ಕಾರಣವೆಂದು ಸೂಚಿಸಿದರು. ಭಾರತ ಸರ್ಕಾರವು ಶಾಂತಿ ನೀತಿಯನ್ನು ಅನುಸರಿಸಿ ಇತರ ರಾಷ್ಟ್ರಗಳಿಗೆ ದಾರಿ ತೋರಬೇಕೆಂದು ತಿಳಿಸಿದರು. ಭಾರತ ಸರ್ಕಾರವು ಸಣ್ಣಪುಟ್ಟ ಸಮಸ್ಯೆಗಳನ್ನು ಬಗೆಹರಿಸಲು ಹಿಂಸಾ ಪ್ರಯೋಗ ಮಾಡಬಾರದೆಂದೂ ಅವರು ಹೇಳಿದರು. ನಿರ್ಣಯವು ಅಂಗೀಕೃತವಾಯಿತು.

ಬರುವ ವರ್ಷ ಅಕ್ಟೋಬರಿನೊಳಗೆ ಭೂದಾನ ಯಜ್ಞವು ಪರಿಸಮಾಪ್ತಿಯಾಗಬೇಕೆಂದೂ ಹಳ್ಳಿಗಳಲ್ಲಿ ಗ್ರಾಮ ರಾಜ್ಯವು ಸ್ಥಾಪಿತವಾಗಬೇಕೆಂದೂ ಸೂಚಿಸಲಾಯಿತು.

ಶ್ರೀ ಜಯಪ್ರಕಾಶರು ಸಮ್ಮೇಳನದಲ್ಲಿ ಮಾತನಾಡಿ ಭೂದಾನ ಯಜ್ಞವು ಅದ್ವಿತೀಯ ಕ್ರಾಂತಿಯೆಂದು ಹೇಳಿ ಅದನ್ನು ಜಗತ್ತಿನ ಇತರ ರಾಷ್ಟ್ರಗಳು ಅನುಸರಿಸದೆ ಗತ್ಯಂತರವಿಲ್ಲವೆಂದು ನುಡಿದರು.

ಅಖಿಲ ಭಾರತ ಮಾಧ್ವ ಮಹಾ ಮಂಡಲದ ಸಭೆ

ಗೋಕರ್ಣ ಸಂಸ್ಥಾನದ ಸ್ವಾಮಿಗಳವರ ಆರಂಭ ಭಾಷಣ

ಕೆಲಯಮತ್ತೂರಿನಲ್ಲಿ ಕಳೆದ ಭಾನುವಾರ ಅಖಿಲ ಭಾರತ ಮಾಧ್ವ ಮಹಾ ಮಂಡಲದ ಸರ್ವ ಸದಸ್ಯರ ಸಭೆಯು ಉಡುಪಿಯ ಶ್ರೀ ಪೇಜಾವರ ಮಠಾಧೀಶರ ಅಧ್ಯಕ್ಷತೆಯಲ್ಲಿ ಸೇರಿತು. ಶ್ರೀ ಸಂಸ್ಥಾನ ಗೋಕರ್ಣ ಮಠಾಧೀಶರಾದ ಶ್ರೀ ಶ್ರೀ ದ್ವಾರಕಾನಾಥ ತೀರ್ಥ ಶ್ರೀಪಾದ ವಡೇರ್ ಸ್ವಾಮಿಗಳವರು ಅದರ ಆರಂಭೋತ್ಸವನ್ನು ನೆರವೇರಿಸಿದರು.

ಶ್ರೀ ಸ್ವಾಮಿಗಳವರು ತಮ್ಮ ಭಾಷಣದಲ್ಲಿ, ಭಾರತೀಯರಲ್ಲಿ ಈಗ ಧರ್ಮ ಭಾವನೆಯು ಬಹು ಮಟ್ಟಿಗೆ ಕಳೆಗುಂದಿ, ಧರ್ಮ ಗ್ಲಾನಿಯು ಗೋಚರಿಸುತ್ತಿರುವುದೆಂದೂ, ಹಿಂದೂಸ್ಥಾನದಲ್ಲಿ ಹಿಂದುಗಳೆಂದು ಹೇಳಿಕೊಳ್ಳುವುದೂ ಸಹ ಕಠಿಣವಾಗಿರುವುದೆಂದೂ ತಿಳಿಸಿದರು. ಎಳೆಯ ಪೀಳಿಗೆಯಲ್ಲಿ ಸ್ವಧರ್ಮದ ಅಭಿಮಾನವು ಕಾಣಿಸಿ ಬರುತ್ತಿಲ್ಲವೆಂದೂ, ಆಧುನಿಕ ಸುಧಾರಣೆ, ತತ್ಫಲವಾದ ಭೌತಿಕ ಉನ್ನತಿ—ಇವುಗಳಿಗೆ ಸ್ವಧರ್ಮ ವಿಚಾರವು ವಿಘಾತಕವೆಂಬ ಭಾವನೆಯು ಮೂಡಿ, ಜನಾಂಗವು ಅಧೋಗತಿಗೆ ಇಳಿದಿರುವುದಾಗಿಯೂ ಅವರು ನುಡಿದರು. ಧರ್ಮವನ್ನು ತಿರಸ್ಕರಿಸಿ, ಪೂರ್ವಾಚಾರಕ್ಕೆ ವಿಮುಖವಾಗಿ ವರ್ತಿಸಿದ್ದರೆ ದೇಶವು ಅಳಿಗಾಲ ಹೊಂದುವುದೆಂಬ ಕಳಕಳಿಯು ಬಹು ಜನರಲ್ಲಿ ಹುಟ್ಟಿರುವುದೆಂದೂ, ಅದು ಆತ್ಮ ಘಾತಕವೆಂದೂ, ಅದನ್ನು ತ್ಯಾಗ ಮಾಡಿದರೆ ಮಾತ್ರ ಜನರ ಐಹಿಕ ಮತ್ತು ಪಾರಮಾರ್ಥಿಕ ಉದ್ಧಾರವಾದೀತೆಂದೂ ಹೇಳಿದರು.

ಬ್ರಿಟಿಷರ ಕಾಲದಲ್ಲಿ ಮೃತ ಭಾಷೆಯೆಂದು ತಿರಸ್ಕೃತವಾಗಿದ್ದ ಸಂಸ್ಕೃತಕ್ಕೆ ಈಗ ಪೂಜ್ಯ ಸ್ಥಾನವು ಪ್ರಾಪ್ತವಾಗುತ್ತಿದೆಯೆಂದೂ, ಅದನ್ನು ಹೆಚ್ಚು ಪ್ರಚುರಗೊಳಿಸಲು ಗಾಪ್ಯಾಧ್ಯಕ್ಷರೇ ಮುಂತಾದ ನಾಯಕರು ಕಾರ್ಯ ಪ್ರವರ್ತರಾಗಿರುವರೆಂದೂ ಅವರು ತಿಳಿಸಿ, ಭಾರತೀಯ ತತ್ವಜ್ಞಾನಗಳಲ್ಲಿ ಶ್ರೀಮನ್ಮಧ್ವಾಚಾರ್ಯರು ಪ್ರತಿಪಾದಿಸಿರುವ ಸಿದ್ಧಾಂತವು ಶ್ರೇಷ್ಠವಾದದೆಂದು ಹೇಳಿದರು.

ಜನರಲ್ಲಿ ಸದಾಚಾರದ ಅವಶ್ಯಕತೆಯನ್ನು ಶ್ರೀ ಸ್ವಾಮಿಜಿಯವರು ಒತ್ತಿ ಹೇಳಿದರು. ಅದರಿಂದ ಮತ್ಸರಾಸೂಯೆಗಳು ಹೋಗುವುವೆಂದು ಅಭಿಪ್ರಾಯಪಟ್ಟರು.

ಭಾರತದಲ್ಲಿ ಈಗ ಸ್ವರಾಜ್ಯವು ನಡೆಯುತ್ತಿದರೂ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯಿಂದ ಕೂಡಿದ ರಾಜ್ಯ ಪದ್ಧತಿಯಲ್ಲಿ ಸನಾತನ ವರ್ಣಾಶ್ರಮ ಧರ್ಮಗಳಿಗೆ ಜಾಗವಿಲ್ಲವಾಗಿದೆಯೆಂದೂ, ಅದಕ್ಕೆ ಬದಲಾಗಿ ಧರ್ಮಗಳಿಗೆ ಪ್ರತೀಕಾರವಾಗುತ್ತಿರುವುದೆಂದೂ ಹೇಳಿದರು. ಇಂತಹ ವಿಷಮ ಸನ್ನಿವೇಶದಲ್ಲಿ ಬ್ರಾಹ್ಮಣರೆಲ್ಲರೂ ಭೇದಭಾವವನ್ನು ಮರೆತು ಧರ್ಮ ರಕ್ಷಣೆಗೆ ಹೋರಾಡಬೇಕೆಂದು ಸೂಚಿಸಿದರು.

ಆಲ್ಜೀರಿಯದಲ್ಲಿ ೫೦೦ ಜನರ ಬಂಧನ

ಆಲ್ಜೀರಿಯದ ಕ್ಯಾಸ್ಬಾ ನಗರದಲ್ಲಿ ಮೊನ್ನೆ ೭,೦೦೦ ಫ್ರೆಂಚ್ ಸೈನಿಕರು ಕಾರ್ಯಾಚರಣೆ ನಡೆಸಿ ೫೦೦ ಮಂದಿ ರಾಷ್ಟ್ರೀಯರನ್ನು ಬಂಧಿಸಿದ್ದಾರೆ. ಅದರಿಂದ ಹೇರಳವಾಗಿ ಮದ್ದುಗುಂಡು ಮುಂತಾದುವನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲಿ ೫೦,೦೦೦ ಮುಸಲ್ಮಾನರೂ, ೭,೦೦೦ ಫ್ರೆಂಚ್ ವಲಸೆಗಾರರೂ ನೆಲೆಸಿರುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಗೋಟುವಾದ್ಯ. ೭-೧೫ ವಿ. ಗೋಪಿನಾಥ್. ಕನ್ನಡ ಗೀತೆಗಳು. ೭.೪೦ ಮತ್ತು ೮ ಗಂಟೆ. ರಾಮಶಾಸ್ತ್ರಿ ಕಾವ್ಯ ವಾಚನ. ಮಧ್ಯಾಹ್ನ ೧೨ ಮತ್ತು ೧೨ ೪೦ ಆರ್. ಮಧ್ಯಾಹ್ನ ಪಿಟೀಲು ೧೨ ೪೦ ರಿಂದ ೧ ಮಧುರೆ ಭಾಗವತರ್-ಸಂಗೀತ. ೧ ಅಬ್ದುಲ್ ರಹೀಂ ಸಿತಾರ್. ೨-೩೦ ಸಂಗೀತ ... ಪ್ರೌಢಶಾಲೆಗಳಿಗಾಗಿ. ಸಂಜೆ ೫ ೪೦ ಸಿತಾರ್ ವಾದನ. ೬-೧೫ ಜನಪದ ಗೀತೆಗಳು. ೭-೪೦ ಗಾನಸಭಾ ಜೋಷಿ ರೆಕಾರ್ಡ್. ೭-೫೦ ಶ್ರೀ ... ವಿಮರ್ಶೆ-ವಿಜಯ ಕಾದಂಬರಿ. ೮ರಿಂದ ೯-೪೦ ಕುರಿತಂತೆ ಕನ್ನಡ ಭಾಷಣ. ೯.೫೦ ನಾಗೀತ ನಾಟಕ ಮುಗಿಯಿತು.

ಮದ್ರಾಸಿನಲ್ಲಿ ಅಕ್ಕಿ ಬೆಲೆ ಏರಲು ವಿದ್ಯುಚ್ಛಕ್ತಿ ಪೋತಾವೇ ಕಾರಣ

ಮದ್ರಾಸ್ ಪ್ರಾಂತದಲ್ಲಿ ೭೫೦೦ಗಿ ವಿದ್ಯುಚ್ಛಕ್ತಿ ಪೋತಾ ಮಾಡಿರುವುದರಿಂದ ಅನೇಕ ಅಕ್ಕಿ ಗಿರಣಿಗಳಲ್ಲಿನ ಕೆಲಸವು ಅಸ್ತವ್ಯಸ್ತವಾಗಿ ಅದರಿಂದ ಅಕ್ಕಿ ಬೆಲೆಯು ಹೆಚ್ಚಲು ಕಾರಣವಾಯಿತೆಂದು ವರದಿಯಾಗಿದೆ. ೧,೦೦೦ ಮೂಟೆ ಅಕ್ಕಿಯನ್ನು ಒದಗಿಸುತ್ತಿದ್ದ ಮಿಲ್ಲುಗಳು ಈಗ ೨೦೦ ಮೂಟೆ ಅಕ್ಕಿಯನ್ನು ತಯಾರಿಸುತ್ತಿವೆ.

ಅಮೆರಿಕದವರಿಂದ ಮತ್ತೊಂದು ಜಲಜನಕ ಬಾಂಬಿನ ಸಿಡಿತ

ದಕ್ಷಿಣ ಶಾಂತ ಸಾಗರದಲ್ಲಿರುವ ಬಿಕಿನಿ ದ್ವೀಪ ಶ್ರೇಣಿಯಲ್ಲಿ ಒಂದು ಕಡೆ ಅಮೆರಿಕದವರು ಮತ್ತೊಂದು ಜಲಜನಕ ಬಾಂಬನ್ನು ಸಿಡಿಸಿರುವುದಾಗಿ ಜಪಾನಿನ ಹವಾಮಾನದ ವೀಕ್ಷಣಾಲಯದವರು ತಿಳಿಸುತ್ತಾರೆ. ಇದನ್ನು ಅಮೆರಿಕದ ಅಣು ಶಕ್ತಿ ಸಮಿತಿಯವರು ಸಮರ್ಥಿಸಿಲ್ಲ.

ಭಾರತಕ್ಕೆ ಫ್ರೆಂಚ್ ಸ್ವಾಸ್ಥ್ಯಗಳ ಆಸ್ತಿರು ವರ್ಗಾವಣೆ

ಭಾರತದಲ್ಲಿ ಫ್ರೆಂಚರ ವಸಾಹತು ಪ್ರದೇಶಗಳ ಮೇಲೆ ಫ್ರಾನ್ಸ್ ತನ್ನ ಸಾರ್ವಭೌಮತ್ವವನ್ನು ಮೊನ್ನೆ ವಿಧಿವತ್ತಾಗಿ ಬಿಟ್ಟುಕೊಟ್ಟು ಭಾರತ ಸರ್ಕಾರಕ್ಕೆ ಅವನ್ನು ವರ್ಗಾಯಿಸಿತು. ನೆಹರೂರವರು ಈ ವಿಚಾರವನ್ನು ಲೋಕ ಸಭೆಯಲ್ಲಿ ತಿಳಿಸುತ್ತಾ, ಭಾರತಕ್ಕೆ ಪೋರ್ಚುಗೀಸರ ವಸಾಹತುಗಳು ವರ್ಗಾಯಿಸಲ್ಪಡುವ ಕಾಲವು ಬೇಗನೆ ಬರುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು.

ಶ್ರೀಮನ್ಮಧ್ವಾಚಾರ್ಯರು

ಉಡುಪಿಯ ಸಾಹಿತ್ಯಾಲಂಕಾರ ಪಿ. ಪಿ. ಕೆ. ಆಚಾರ್ಯರು ರಚಿಸಿರುವ ಮೇಲ್ಕಂಡ ಶಿರೋನಾಮೆಯ ಕನ್ನಡ ಗ್ರಂಥವನ್ನು ಅವರಿಂದ ಪುರಸ್ಕಾರವಾಗಿ ಸ್ವೀಕರಿಸಿರುತ್ತೇವೆ. ದ್ವೈತ ಮತವನ್ನು ಸ್ಥಾಪಿಸಿದ ಶ್ರೀಮದಾನಂದತೀರ್ಥಾಚಾರ್ಯರ ಜೀವನಚರಿತ್ರೆಯನ್ನು ಗ್ರಂಥಕರ್ತರು ನಿರೂಪಿಸಿದ್ದಾರೆ. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಶ್ರೀ ಪೇಜಾವರ ಸೀತಾರಾಮಾಚಾರ್ಯರು ಮುನ್ನುಡಿಯನ್ನು ಬರೆದಿದ್ದಾರೆ. ದ್ವೈತಮತಾನುಯಾಯಿಗಳಿಗೆ, ದರ್ಶನ ಶಾಸ್ತ್ರದಲ್ಲಿ ಅಭಿರುಚಿಯುಳ್ಳ ಜಿಜ್ಞಾಸುಗಳಿಗೂ ಅಗತ್ಯವಾಗಿ ಪಠಿಸಬೇಕಾದ ಗ್ರಂಥವಿದು ಬೆಲೆ ೧ ರೂ ಮಾತ್ರ.

ಟೆಲಿಗ್ರಾಫ್ ಇನ್ಸ್ಟಿಟ್ಯೂಟಿನ ವಿದ್ಯಾರ್ಥಿ ಸಂಘ

ರಾಜಧಾನಿಯ ಪಿಜಯಾ ಟೆಲಿಗ್ರಾಫ್ ಇನ್ಸ್ಟಿಟ್ಯೂಟಿನ ವಿದ್ಯಾರ್ಥಿಗಳ ಸಭೆಯು ಕಳೆದ ೨೪ ನೇ ತಾರೀಕು ಪ್ರಿನ್ಸಿಪಾಲ್ ಶ್ರೀ ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆದು ವಿದ್ಯಾರ್ಥಿ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಲಾಯಿತು. ಪ್ರಿನ್ಸಿಪಾಲ್ ಸುಬ್ಬರಾಯರು ಇದರ ಅಧ್ಯಕ್ಷರಾಗಿ ಆರಿಸಲ್ಪಟ್ಟರುವರು. ಶ್ರೀ ಎ. ಸಿ. ಮುನಿ ಜೀವಪ್ಪನವರು ಉಪಾಧ್ಯಕ್ಷರಾಗಿಯೂ, ಶ್ರೀ ಎ. ಧನರಾಜ್‌ರವರು ಕಾರ್ಯದರ್ಶಿಯಾಗಿಯೂ, ಶ್ರೀ ಹೆಚ್. ಸಿ. ಕುಪ್ಪಣ್ಣನವರು ಖಜಾಂಚಿಯಾಗಿಯೂ, ಶ್ರೀಗಳಾದ ಕೆ. ಎಸ್. ಶಂಕರ್, ಜಿ ಹನುಮಂತಪ್ಪ, ಗುಲಾಂ ಮಹಮದ್ ಇಕ್ಬಾಲ್ ಮತ್ತು ಎಚ್. ಎಸ್. ದಕ್ಷಿಣಾಮೂರ್ತಿಯವರು ಸದಸ್ಯರಾಗಿಯೂ ಚುನಾಯಿತರಾಗಿರುವರು.

ಮೈಸೂರು ಪೇಟೆ ಧಾರಣೆ

	ರೂ. ಮೂಟೆ	ರೂ ಪಲ್ಲ
ಕಡಲೆಕಾಯಿ	೨೦ ೪ ೦	
ಹುಚ್ಚೆಳ್ಳು	೪೩ ೬ ೦	
ಬೊಬ್ಬರಿಬೀಜ	೨೫ ೧೩ ೦	೨೬ ೧೪ ೦
ಎಳ್ಳು	೬೭ ೦ ೦	
ಹುಣಸೆಬೀಜ	೯ ೮ ೦	
ಹುರುಳಿ	೨೮ ೧೨ ೦	೨೮ ೧೪ ೦
ಹೆಸರು	೪೦ ೨ ೧	೪೯ ೮ ೦
ಕಡಲೆ	೪೩ ೮ ೦	
ಹಲಸಂದೆ	೩೮ ೨ ೦	೩೪ ೮ ೦
ಉದ್ದು	೬೨ ೨ ೬	೬೫ ೬ ೦
ತೊಗರಿಬೇಳೆ	೬ ೬ ೮	೬ ೧೪ ೦
ಹುಣಸೆಹಣ್ಣು	೯ ೧೨ ೦	೫ ೪ ೦
ಬೆಲ್ಲ	೭೬ ೫ ೦	೨೧೫ ೦ ೦

ಬಿ. ಎ. ಪಂಡಿತರಿಗೆ ಬಿನ್ನವತ್ತಳೆ

ನಂಜನಗೂಡು ೨೮

ಇಲ್ಲಿನ ವಿಕ್ಟೋರಿಯ ಕ್ಲಬ್ಬಿನ ೨೦ನೇ ವಾರ್ಷಿಕೋತ್ಸವವನ್ನು ಮೊನ್ನೆ ನೆರವೇರಿಸಲಾಯಿತು ಮೈಸೂರು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಎಂ. ಬಾಲಸುಬ್ರಹ್ಮಣ್ಯರವರು ಅಧ್ಯಕ್ಷತೆ ವಹಿಸಿದ್ದರು. ಪಿಪಗ್ರತ್ನ ಬಿ. ಎ. ಪಂಡಿತರಿಗೆ ಕ್ಲಬ್ಬಿನ ಪರವಾಗಿ ಕಾರ್ಯದರ್ಶಿ ಶ್ರೀ ವಿಶ್ವನಾಥ್‌ರವರು ಬಿನ್ನವತ್ತಳೆಯನ್ನು ಅರ್ಪಿಸಿದರು ಶ್ರೀ ಪಂಡಿತರು ಉತ್ತರವಿತ್ತು ಯುವಕರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದಲ್ಲದೆ, ಪೂರ್ವಾಚಾರ ಪದ್ಧತಿಯನ್ನು ಅನುಸರಿಸಬೇಕೆಂದು ಸೂಚಿಸಿದರು ಕ್ಲಬ್ಬಿನ ಕಟ್ಟಡಕ್ಕೆ ಧನ ಸಹಾಯ ಮಾಡುವುದಾಗಿಯೂ ತಿಳಿಸಿದರು. ಉತ್ಸವದ ಅಂಗವಾಗಿ ನಾನಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಗಿರಿಜಾಕಲ್ಯಾಣದಲ್ಲಿ ಸಂಗೀತ ಕಛೇರಿಗಳು

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಗಿರಿಜಾಕಲ್ಯಾಣ ಮಹೋತ್ಸವವು ಬರುವ ತಿಂಗಳು ೨೭ನೇ ತಾರೀಕಿನಿಂದ ನಡೆಯುವುದು. ಆಗ ದೇವರ ಸನ್ನಿಧಿಯಲ್ಲಿ ಸಂಗೀತದ ಸೇವೆ ಮಾಡಲಿಚ್ಛಿಸುವವರು ಬರುವ ೫ನೇ ತಾರೀಕಿನೊಳಗೆ ತಾಲ್ಲೂಕು ಅಮಲ್ದಾರರಿಗೆ ತಿಳಿಸುವಂತೆ ಕೋರಲಾಗಿದೆ.

ಅಷ್ಟಬಂಧನ ಪ್ರತಿಷ್ಠಾ ಮಹೋತ್ಸವ

ಮೂಡಿಗೆರೆ ತಾಲ್ಲೂಕು ಕಳಸದಲ್ಲಿ ಮುಜರಾಯಿ ಕಮಿಷನರರ ಕಛೇರಿಯ ಸೀನಿಯರ್ ಆಗಮ ಪಂಡಿತರಾದ ಶ್ರೀ ಕೃಷ್ಣದೀಕ್ಷಿತರ ಮೇಲ್ವಿಚಾರಣೆಯಲ್ಲಿ ಕಳೆದ ೧೯ನೇ ತಾರೀಕಿನಿಂದ ೨೫ರ ವರೆಗೆ ವಾತುಲಾಗಮ ಪ್ರಕಾರ ಶ್ರೀ ಕಳಸೇಶ್ವರ ದೇವರ ಅಷ್ಟಬಂಧನ ಮಹೋತ್ಸವವು ನೆರವೇರಿತು. ಶೃಂಗೇರಿಯ ಸಾಂಬಶಿವಭಟ್ಟರು ಮತ್ತು ತಾ|| ಭೂ|| ಶ್ರೀ ಶೇಷ ರಾಮಭಟ್ಟರು ಆಚಾರ್ಯರಾಗಿದ್ದರು. ಮೈಸೂರು ಚಾಮುಂಡಿ ಬೆಟ್ಟದ ಆಗಮಾಚಾರ್ಯ ಶ್ರೀ ನಾರಾಯಣ ದೀಕ್ಷಿತರು ಸಿದ್ಧಗೊಳಿಸಿದ್ದ ಅಷ್ಟಬಂಧನವನ್ನು ಎಲ್ಲ ದೇವರುಗಳಿಗೂ ಸಮರ್ಪಿಸಲಾಯಿತು ಕಡೆಯ ದಿನ ಡಾ|| ಮಹಾಬಲಭಟ್ಟರ ಅಧ್ಯಕ್ಷತೆಯಲ್ಲಿ ಅಭಿನಂದನಾ ಸಭೆ ನಡೆಯಿತು.

"ಕೊಲೆಗೆ ಬಲಿ"

ಶ್ರೀ ಸಿ. ಆರ್. ಶ್ರೀಪಾದರಾಯರಿಂದ ವಿರಚಿತವಾಗಿ ನಂಜನಗೂಡಿನ ಪರಿಮಳ ಪ್ರಕಾಶನದವರಿಂದ ಪ್ರಕಟಿಸಲ್ಪಟ್ಟಿರುವ "ಕೊಲೆಗೆ ಬಲಿ" ಎಂಬ ರಹಸ್ಯಮಯ ಕಾದಂಬರಿಯ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸಿದ್ದೇವೆ. ಸಮಾಜ ಘಾತಕ ಚಟುವಟಿಕೆಗಳಲ್ಲಿ ತೊಡಗಿದ್ದ ಜನರನ್ನು ನಿರ್ಮೂಲ ಮಾಡುವುದಕ್ಕಾಗಿ ಧರ್ಮಸಿಂಗ್ ಎಂಬ ನ್ಯಾಯಾಧೀಶರು ಶೀಲದ್ವೀಪವೆಂಬ ಪ್ರದೇಶದಲ್ಲಿ ಭವನವೊಂದನ್ನು ಕೊಂಡು ಆ ಎಂಟು ಜನರೂ ತಪ್ಪಿಸಿಕೊಳ್ಳದಂತೆ ಅಲ್ಲಿ ಸೇರಿಸಿ, ತಾವೂ ಅವರೊಡನೆ ಒಬ್ಬ ಅಜ್ಞಾನಿಯಂತೆ ನಟಿಸಿ ಅವರುಗಳನ್ನು ಕೊಂದು ತಾವೂ ಆತ್ಮಹತ್ಯೆ ಮಾಡಿಕೊಂಡ ಬಗೆಯನ್ನು ಲೇಖಕರು ಬಹಳ ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ೧೩೭ ಪುಟಗಳ ಈ ಪುಸ್ತಕದ ಬೆಲೆ ಹತ್ತಾಣೆ. ಪುಸ್ತಕದ ಅಧಿಕೃತ ಮಾರಾಟಗಾರರು ರಾಜಧಾನಿಯ ಚಾಮುಂಡಿಪುರದಲ್ಲಿರುವ ಗಾಯತ್ರಿ ಪ್ರಕಾಶನದವರು.

ಮನೆ ಭೋಗ್ಯಕ್ಕೆ ಬೇಕು

ಚಾಮರಾಜಪುರಂ, ಸರಸ್ವತಿಪುರಂ, ಕೃಷ್ಣಮೂರ್ತಿಪುರಂ, ಜಯನಗರ ಮತ್ತು ಸುಬ್ಬರಾಯನಕೆರೆ ಬಳಿ ಮತ್ತು ಕಾಲೇಜಿಗೆ ಸಮೀಪದಲ್ಲಿ ಸುಮಾರು ೮ ಸಾವಿರ ರೂ. ಗಳೊಳಗೆ ಒಂದು ಮನೆಯು ಭೋಗ್ಯಕ್ಕೆ ಬೇಕಾಗಿದೆ ಈ ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಬಹುದು:—

ವಿ.ಆರ್. ಚೆಲ್ಲಪ್ಪ, ಎಂ.ಎ.

(ಮಹಾರಾಜಾ ಕಾಲೇಜು, ತಮಿಳು ಅಧ್ಯಾಪಕರು)

೬೧೩. ಕುಂಬಾರಗೇರಿ, ಚಾಮರಾಜ ಮೊಹಲ್ಲಾ, ಮೈಸೂರು

ಹೆಂಡತಿಯ ಕೊಲೆ

ನಂಜನಗೂಡಿನ ಪೌರ್ಯದಾರಿಯ ... ಪುಟ್ಟಮಾದನಾಯಕ ಎಂಬುವನು ತನ್ನ ಪತ್ನಿಯ ನಡತೆ ಬಗ್ಗೆ ಸಂಶಯಪಟ್ಟು ಅಳಿಯನ್ನ ನೆನ್ನೆ ನಡು ಹಗಲಲ್ಲೇ ಕೊಲೆ ಮಾಡಿದನೆಂದು ವರದಿಯಾಗಿದೆ. ಆತನಿಗೆ ಮೂರು ಚಿಕ್ಕ ಮಕ್ಕಳು ಇರುವುದೆಂದು ಹೇಳಲಾಗಿದೆ.

ಸಿಂಹಳದಲ್ಲಿ ಭಾಷೆ ಬಗ್ಗೆ ಸತ್ಯಾಗ್ರಹ

ಸಿಂಹಳೀಯೊಂದನ್ನೇ ರಾಜ ಭಾಷೆಯಾಗಿ ಮಾಡುವ ಬಗ್ಗೆ ಸರ್ಕಾರದ ನಿರ್ಧಾರವನ್ನು ಪ್ರತಿಭಟಿಸುವುದಕ್ಕಾಗಿ ಸಿಂಹಳದ ಫೆಡರಲ್ ಪಕ್ಷದವರು ಸತ್ಯಾಗ್ರಹ ಹೂಡಲು ನಿರ್ಧರಿಸಿದ್ದಾರೆ. ೫ನೇ ತಾರೀಕು ಸತ್ಯಾಗ್ರಹ ನಡೆಯುವುದು. ಅಂದು ಅಲ್ಲಿನ ಪಾರ್ಲಿಮೆಂಟಿನಲ್ಲಿ ಭಾಷೆ ಬಗ್ಗೆ ಮಸೂದೆಯನ್ನು ಮಂಡಿಸಲಾಗುವುದು. ತಮಿಳು ಭಾಷೆಯನ್ನು ಅಲ್ಲಿನ ತಮಿಳರಾರೂ ಬಿಡಬಾರದೆಂದೂ, ಸ್ಥಳೀಯ ಸಂಸ್ಥೆಗಳು ಆ ಭಾಷೆಯಲ್ಲಿ ಪತ್ರ ವ್ಯವಹಾರ ನಡೆಸಬಾರದೆಂದೂ ಪ್ರತಿಭಟಿಸುವಂತೆ ನಿರ್ಧರಿಸಲಾಗಿದೆ.

ಸ್ವಿಟ್ಜರ್ಲೆಂಡಿನ ಪರ್ವತಾರೋಹಿಗಳಿಂದ ಎವರೆಸ್ಟ್ ಶಿಖರಾರೋಹಣ

ಸ್ವಿಟ್ಜರ್ಲೆಂಡಿನ ಪರ್ವತಾರೋಹಿ ತಂಡವು ಪ್ರಪಂಚದ ಅತ್ಯುನ್ನತ ಶಿಖರವಾದ ಎವರೆಸ್ಟ್ ಪರ್ವತವನ್ನು ಎರಡು ಬಾರಿಯೂ, ಅದರ ಪಕ್ಕದಲ್ಲಿರುವ ಲ್ಹೋತ್ಸೆ ಶಿಖರವನ್ನು ಒಂದು ಬಾರಿಯೂ ಹತ್ತುವುದರಲ್ಲಿ ಜಯಶಾಲಿಗಳಾಗಿರುತ್ತಾರೆ. ಕಳೆದ ೧೮ನೇ ತಾರೀಕು ಲ್ಹೋತ್ಸೆಯನ್ನು ಹತ್ತಲಾಯಿತು. ಅದು ೨೭,೯೭೦ ಅಡಿ ಎತ್ತರವಿದೆ. ಇದುವರೆಗೆ ಯಾರೂ ಅದನ್ನು ಹತ್ತಿರಲಿಲ್ಲ. ಎವರೆಸ್ಟ್ ಶಿಖರವನ್ನು ೧೯೫೩ರಲ್ಲಿ ಬ್ರಿಟನ್ನಿನ ತಂಡದ ಎಡ್ಮಂಡ್ ಹಿಲ್ಲಾರಿ ಮತ್ತು ಶೆರ್ಪಾ ಟೆನ್ಸಿಂಗ್‌ರು ಹತ್ತಿದ್ದರು.

ಪಾಕಿಸ್ತಾನದ ಪ್ರಧಾನಿಯ ಚೀಣಾ ಭೇಟಿ ಪುನಃ ಮುಂದಕ್ಕೆ!

ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟಿನ ಕಾರಣವಾಗಿ ಪಾಕಿಸ್ತಾನದ ಪ್ರಧಾನಿ ಮಹಮದ್ ಅಲಿಯವರು ಚೀಣಕ್ಕೆ ಭೇಟಿ ಕೊಡುವುದು ಪುನಃ ಮುಂದೆ ಹಾಕಲ್ಪಡುವುದೆಂದು ವರದಿಯಾಗಿದೆ. ಪೂರ್ವ ಪಾಕಿಸ್ತಾನದಂತೆ ಪಶ್ಚಿಮ ಪಾಕಿಸ್ತಾನದಲ್ಲೂ ಅಧ್ಯಕ್ಷರ ಆಡಳಿತವನ್ನು ಜಾರಿ ತರುವ ಬಗ್ಗೆ ಆಲೋಚಿಸಲಾಗುತ್ತಿರುವುದೆಂದೂ, ಈ ಸಂಬಂಧವಾಗಿ ಪಾಕಿಸ್ತಾನದ ಮಂತ್ರಿಮಂಡಲದ ಸಭೆಯು ಅಧಿವೇಶನವು ನಡೆಯುವುದೆಂದೂ ಗೊತ್ತಾಗಿದೆ.

Studio S.V.R.
(Next to Gayathri talkies Mysore)
Amateur Roll films
developed free
Four full Postcard Rs. 1

ಹಾಸಿಗೆ-ದಿಂಬು
ಮಿತವ್ಯಯದಲ್ಲಿ ಹತ್ತಿ ದಿಂಬು ತಯಾರು ಮಾಡುತ್ತೇವೆ
ಬಾಡುಸಾಬ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

Pal's
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71/1 A. S. Street,
BANGALORE-2

Edited, Printed and Published by A. R. Nagarajan at Sadhvi Press D. Subbiah Road, Mysore

ಟೆಲಿಫೋನ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ ಪ್ರಾಮುಖ್ಯವುಳ್ಳ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ನಮ್ಮಲ್ಲಿ ಎಲ್ಲಾ ತರಹ ಉತ್ತಮವಾದ
ಕನ್ನಡಕಗಳು
ಸುಲಭ ಬೆಲೆಗೆ ದೊರೆಯುತ್ತವೆ
ವಿಷನ್ ಹೌಸ್
— : ಮಾಲೀಕರು : —
S. V. ಗೋಕುಲ್ B.Sc.,
ಧನ್ವಂತರಿ ರಸ್ತೆಯಲ್ಲಿರುವ ಮ್ಯುನಿಸಿಪಲ್ ಕಟ್ಟಡದ ಹಿಂದೆ ಮೇಲೆ 4ನೇ ನಂಬರು ರೂಮು.
[illegible]

ಸಂಪುಟ : ೮೪] SADHVI : THURSDAY 31-5-1956 ಮೈಸೂರು : ಗುರುವಾರ ೩೧-೫-೧೯೫೬ [ಸಂಚಿಕೆ : ೨೬೯

ದೆಹಲಿ ಕಾರ್ಮಿಕರ ಮುಷ್ಕರದಿಂದ ರೈಲು ಸಂಚಾರ ಬಂದ್

ನ್ಯಾಯಾಂಗ ಮತ್ತು ಕಾರ್ಯಾಂಗಗಳ ಬೇರ್ಪಡೆ

ಕರ್ತವ್ಯಗಳ ಹಂಚಿಕೆ ವಿವರಗಳು

ಬೆಂಗಳೂರು ೩೦

ಸಂಸ್ಥಾನದಲ್ಲಿ ಕಾರ್ಯಾಂಗದಿಂದ ನ್ಯಾಯಾಂಗವನ್ನು ಬೇರ್ಪಡಿಸುವ ಸಂಬಂಧವಾಗಿ ಸರ್ಕಾರದವರು ಹೊರಡಿಸಿರುವ ಆಜ್ಞೆಯ ವಿವರಗಳು ಈ ರೀತಿ ಇವೆ :—

ಮ್ಯಾಜಿಸ್ಟ್ರೇಟರ ಕರ್ತವ್ಯಗಳು ಮೂರು ವಿಧವಾಗಿರುವುವು. ಒಂದನೆಯದು-ಆಕ್ರಮ ಕೂಟಗಳೇ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಪೋಲೀಸ್ ರೀತಿಯದು, ಎರಡನೆಯದು-ಬಂದೂಕಗಳಿಗೆ ಲೈಸೆನ್ಸ್ ಕೊಡುವುದು, ಇತ್ಯಾದಿಗಳಿಗೆ ಸಂಬಂಧಪಟ್ಟ ಆಡಳಿತ ರೀತಿಯದು ಮತ್ತು ಮೂರನೆಯದು-ಕ್ರಿಮಿನಲ್ ಮೊಕದ್ದಮೆ ವಿಚಾರಣೆ, ಮುಂತಾದ ನ್ಯಾಯಾಂಗ ರೀತಿಯವು ಮ್ಯಾಜಿಸ್ಟ್ರೇಟರ ಕರ್ತವ್ಯಗಳೆಲ್ಲವನ್ನೂ ನ್ಯಾಯಾಂಗ ಮತ್ತು ಕಾರ್ಯಾಂಗವೆಂಬ ಎರಡು ವಿಧದ ಮ್ಯಾಜಿಸ್ಟ್ರೇಟರುಗಳ ನಡುವೆ ಹಂಚಲಾಗಿದೆ.

ಜಿಲ್ಲಾಧಿಕಾರಿಗಳು ಮತ್ತು ಅವರ ಕೈಕೆಳಗಿನ ಮ್ಯಾಜಿಸ್ಟ್ರೇಟರುಗಳಿಗೆ ಇರುವ ಕೇವಲ ನ್ಯಾಯಾಂಗದ ಕರ್ತವ್ಯವನ್ನು ಜಿಲ್ಲಾಧಿಕಾರಿಗಳ ಕೈಕೆಳಗೆ ಇರದ ನ್ಯಾಯಾಂಗ ಅಧಿಕಾರಿಗಳಿಗೆ ವರ್ಗಾಯಿಸಲಾಗುವುದು. ಪೋಲೀಸ್ ಮತ್ತು ಆಡಳಿತ ರೀತಿಯ ಕರ್ತವ್ಯಗಳನ್ನು ಇನ್ನುಮುಂದೆಯೂ ಜಿಲ್ಲಾಧಿಕಾರಿಗಳು ಮತ್ತು ಅವರ ಕೈ ಕೆಳಗಿನ ಕೆಲವು ಅಧಿಕಾರಿಗಳು ನಿರ್ವಹಿಸುವರು.

ನ್ಯಾಯಾಂಗ ಮತ್ತು ಕಾರ್ಯಾಂಗ ಎಂಬ ಪ್ರತ್ಯೇಕ ಅಧಿದಾನದಿಂದ ಮ್ಯಾಜಿಸ್ಟ್ರೇಟರುಗಳನ್ನು ಕರೆಯಲಾಗುವುದು. ಕೆಲವು ಇಲಾಖೆಗೆ ಸಂಬಂಧಿಸಿದ ಕಾರ್ಯಾಂಗದ ಮ್ಯಾಜಿಸ್ಟ್ರೇಟರಾದ ಜಿಲ್ಲಾಧಿಕಾರಿಗಳು, ಸಬ್ ಡಿವಿಷನ್ ಅಧಿಕಾರಿಗಳು ಮತ್ತು ಅಮಲ್ದಾರರುಗಳು ನ್ಯಾಯ ಮತ್ತು ಶಿಸ್ತು ಪಾಲನೆಯ ಅಧಿಕಾರವನ್ನು ಮುಂದೆಯೂ ಹೊಂದಿರುವರು. ಜಿಲ್ಲಾಧಿಕಾರಿಗಳು ಜಿಲ್ಲಾ ಮ್ಯಾಜಿಸ್ಟ್ರೇಟರ ಹಲವು ಅಧಿಕಾರವನ್ನು ಚಲಾಯಿಸಲು ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರಾಗುವರು. ಹಾಗೆಯೇ ಸಬ್ ಡಿವಿಜನ್ ಅಧಿಕಾರಿಗಳು ಮತ್ತು ಅಮಲ್ದಾರರು ಎಕ್ಸ್ ಅಫಿಷಿಯೊ ನ್ಯಾಯಾಧೀಶರುಗಳಾಗುವರು.

ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟರಲ್ಲಿ ಜಿಲ್ಲಾ, ಸಬ್ ಡಿವಿಜನ್, ಪ್ರಥಮ ಮತ್ತು ದ್ವಿತೀಯ ದರ್ಜೆ ಮ್ಯಾಜಿಸ್ಟ್ರೇಟರುಗಳು ಇರುವರು. ಇವರೆಲ್ಲರೂ ಸಿವಿಲ್ ಕೋರ್ಟುಗಳಲ್ಲಿ ಮೊಕದ್ದಮೆ ನಡೆಸುವಂತೆ ಗೊತ್ತಾದ ಅವಧಿಯಲ್ಲಿ ತಮ್ಮ ಕಛೇರಿಗಳಲ್ಲಿ ಕೆಲಸವನ್ನು ನಿರ್ವಹಿಸುವರು. ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಜಿಲ್ಲೆಯ ಎಲ್ಲಾ ನ್ಯಾಯಾಂಗ (ಜುಡಿಷಿಯಲ್) ಅಧಿಕಾರಿಗಳ ಮೇಲೆ ಹತೋಟಿ ಇರುವುದು. ಅವರೂ, ಜಿಲ್ಲಾಧಿಕಾರಿ ಮತ್ತು ಅಡಿಷನಲ್ ಜಿಲ್ಲಾ ಮ್ಯಾಜಿಸ್ಟ್ರೇಟರೂ ಸ್ವತಂತ್ರವಾಗಿ ಕೆಲಸ ನಿರ್ವಹಿಸುವರು.

ಹೊಸ ವಿದ್ಯುಚ್ಛಕ್ತಿ ದರದ ವೈಖರಿ

೩ ರೂ. ಇದ್ದುದು ೨೪ ರೂ. ಆಗಿದೆ

ಮೈಸೂರು ೩೦

ಹೊಸದಾಗಿ ವಿಧಾಯಕವಾಗಿರುವ ವಿದ್ಯುಚ್ಛಕ್ತಿ ದರಗಳ ವೈಖರಿಯ ಒಂದು ನಿದರ್ಶನವು ಈ ಕೆಳಗೆ ಕೊಡಲ್ಪಟ್ಟಿದೆ

ಇದು ಸಾಧ್ವಿ ಪತ್ರಿಕಾಲಯಕ್ಕೆ ಸಂಬಂಧಪಟ್ಟದ್ದು. ಇದುವರೆಗೆ ತಿಂಗಳಿಗೆ ೩ ರೂ.ಗೆ ವಿಸಾದ ಚಾರ್ಜು ಬೀಳುತ್ತಿತ್ತು. ಹೊಸ ಆಜ್ಞೆಯ ಪ್ರಕಾರ ೨೪ ರೂ. ಆಗಿದೆ. ಅಂದರೆ ಶೇಕಡಾ ೭೦೦ ರಷ್ಟು ಏರಿತು. ಸುಮಾರು ೨೩ ಯೂನಿಟ್ಟುಗಳು ಪ್ರತಿ ತಿಂಗಳೂ ಉಪಯೋಗಿಸುವುದಕ್ಕೆ ಈಗ ೭೫ ಯೂನಿಟ್ಟುಗಳ ಕನಿಷ್ಠ ಪ್ರಮಾಣವನ್ನು ಗೊತ್ತುಪಡಿಸಲಾಗಿದೆ. ಇದು ಶೇಕಡ ೬೦೦ ಕ್ಕಿಂತ ಹೆಚ್ಚಾಗುತ್ತದೆ.

ಸಣ್ಣ ಮುದ್ರಣಾಲಯವೊಂದಕ್ಕೇ ಇಷ್ಟು ಹೆಚ್ಚಿನ ದರವು ಬೀಳುವುದಾದರೆ ಬೇರೆ ಕೈಗಾರಿಕೆಗಳ ಮೇಲಿನ ಭಾರವು ಎಷ್ಟಾಗಬಹುದೆಂಬುದನ್ನು ವಾಚಕರೇ ಊಹಿಸಿಕೊಳ್ಳಬಹುದು.

ಮೈಸೂರು ನಗರದಲ್ಲಿ ಇಬ್ಬರು ಜಿಲ್ಲಾ ನ್ಯಾಯಾಧೀಶರು

ಮೈಸೂರು ನಗರದಲ್ಲಿ ನಾಳೆಯಿಂದ ಇಬ್ಬರು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರುಗಳ ಕೋರ್ಟುಗಳು ಇರುವುವು. ಸಬಾರ್ಡಿನೇಟ್ ನ್ಯಾಯಾಧೀಶರಾದ ಶ್ರೀ ಎ. ಎ. ಮುಜೀದ್‌ರವರಿಗೆ ಬಡ್ತಿಯಿತ್ತು, ಅವರನ್ನು ನಾಳೆಯಿಂದ ಮೈಸೂರಿನ ಅಡಿಷನಲ್ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ನೇಮಕ ಮಾಡಲಾಗಿದೆ

ಭಾನುವಾರ ನೀರು ಸರಬರಾಜು ಇಲ್ಲ

ಇದೇ ಜೂನ್ ಮಾಹೆ ೩ನೇ ತಾರೀಖು ಭಾನುವಾರ ಬೆಳಿಗ್ಗೆ ೮ ಘಂಟೆಯಿಂದ ಸಾಯಂಕಾಲ ೫ ಘಂಟೆವರೆಗೆ ನಗರದಲ್ಲಿ ನೀರು ಸರಬರಾಜು ಇರುವುದಿಲ್ಲವೆಂದು ಪೌರಸಭಾ ಕಮಿಷನರು ತಿಳಿಸಿರುತ್ತಾರೆ

ಮೈಸೂರು ಮತ್ತು ತುಮಕೂರು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರುಗಳು

ಅಸಿಸ್ಟೆಂಟ್ ಅಡಿಷನಲ್ ಅಡ್ವೊಕೇಟ್ ಜನರಲ್ಲರಾಗಿ ನೇಮಕವಾಗಿರುವ ಶ್ರೀ ಜಿ. ಶಂಕರಶೆಟ್ಟರ ಸ್ಥಾನದಲ್ಲಿ ಮೈಸೂರಿನ ವಕೀಲರಾದ ಶ್ರೀ ಟಿ. ತಿಮ್ಮೇಗೌಡರನ್ನು ಮೈಸೂರು ಜಿಲ್ಲೆಯ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೇಮಿಸಲಾಗಿದೆ ತುಮಕೂರು ಜಿಲ್ಲಾ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಅಲ್ಲಿನ ವಕೀಲರಾದ ಶ್ರೀ ಜಿ. ಮುದ್ದಪ್ಪನವರನ್ನು ನೇಮಕ ಮಾಡಲಾಗಿದೆ.

ಅಧಿಕ ಅಳತೆ ಸಾಧನಗಳನ್ನು ಇಟ್ಟಿದ್ದುದಕ್ಕಾಗಿ ದಂಡ

ನಗರದ ಶಿವರಾಂಪೇಟೆಯಲ್ಲಿರುವ ಅಕ್ಕಿ ವ್ಯಾಪಾರಿಗಳಾದ ಶ್ರೀ ಕೆ. ಆರ್. ವೆಂಕಟಾಚಲಶೆಟ್ಟರು ಅಧಿಕ ಇರುವ ಮತ್ತು ಸರ್ಟಿಫೈ ಆಗದ ಅಳತೆಯ ಸಾಧನಗಳನ್ನು ಇಟ್ಟುಕೊಂಡಿದ್ದ ಬಗ್ಗೆಯೂ ಮತ್ತು ಅವುಗಳನ್ನು ಹಾಜರು ಪಡಿಸದೆ ನಷ್ಟ ಮಾಡಿಸದಿದ್ದುದಕ್ಕಾಗಿಯೂ ಅವರನ್ನು ಈ ದಿನ ದಸ್ತಗಿರಿ ಮಾಡಿ ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯಲ್ಲಿ ಮೇಲ್ಕಂಡ ಎರಡು ಅಪರಾಧಗಳಿಗೂ ತಲಾ ೫೦ ರೂ. ದಂಡ ವಿಧಿಸಿತು.

ದೆಹಲಿಯಲ್ಲಿ ರೈಲು ಸಂಚಾರ ಬಂದ್

ಕಾರ್ಯಾ ಕೆಲಸಗಾರರ ಮೇಲೆ ಗುಂಡಿಕೇಟು ಪ್ರಕರಣದ ಪ್ರತಿಧ್ವನಿ

ಅಂಬಾಲಾ ನಗರದ ಬಳಿ ಕಾರ್ಯಾ ರೈಲು ನಿಲ್ದಾಣದಲ್ಲಿ ಮೊನ್ನೆ ಪೋಲೀಸರು ರೈಲು ನೌಕರರ ಮೇಲೆ ಗುಂಡು ಹಾರಿಸಿದುದಕ್ಕಾಗಿ ಪ್ರತಿಭಟಿಸಲು ನಿನ್ನೆ ದೆಹಲಿಯ ರೈಲ್ವೆ ನೌಕರರು ಮುಷ್ಕರ ಹೂಡಿದುದರಿಂದ, ಮಧ್ಯಾಹ್ನ ೩ ಗಂಟೆಯಿಂದ ಇಲ್ಲಿನ ಮುಖ್ಯ ನಿಲ್ದಾಣದಲ್ಲಿ ರೈಲು ಸಂಚಾರವೆಲ್ಲಾ ನಿಂತುಹೋಗಿದೆ. ಕಾರ್ಯಾ ಗುಂಡಿನ ಪ್ರಕರಣದಲ್ಲಿ ಒಟ್ಟು ಐವರು ಮಡಿದು ೬ ಮಂದಿಗೆ ಗಾಯವಾಗಿದೆ. ಮುಷ್ಕರಗಾರರಲ್ಲಿ ಹಲವರು ಮುಖ್ಯ ನಿಲ್ದಾಣದ ರೈಲು ಕಂಬಿಯ ಮೇಲೆ ಕುಳಿತುಬಿಟ್ಟರು. ನಗರಕ್ಕೆ ಬರಬೇಕಾಗಿದ್ದ ರೈಲುಗಳು ಹೊರಗಡೆ ಹತ್ತಿರದ ಸ್ಟೇಷನ್ನುಗಳಲ್ಲಿ ನಿಂತವು.

ನಗರಾಭಿವೃದ್ಧಿ ಸಮಿತಿಯ ಸುವರ್ಣ ಮಹೋತ್ಸವ

ಮೈಸೂರು ೩೦

ರಾಜಧಾನಿಯ ನಗರಾಭಿವೃದ್ಧಿ ಸಮಿತಿಯ ಸುವರ್ಣ ಮಹೋತ್ಸವವು ಬರುವ ತಿಂಗಳು ೯ನೇ ತಾರೀಖು ನೆರವೇರುವುದು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅದರ ಅಧ್ಯಕ್ಷತೆಯನ್ನು ವಹಿಸುವರು.

ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಿಗೆ ನಿವೃತ್ತಿ ಪೂರ್ವ ರಜಾ

ಮೈಸೂರು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಎಸ್. ಸಿ. ಮಲ್ಲಪ್ಪನವರಿಗೆ ಜೂನ್ ೫ ಅಥವಾ ಅವರು ಉಪಯೋಗಿಸಿಕೊಳ್ಳುವ ದಿನದಿಂದ ನಿವೃತ್ತಿ ಪೂರ್ವ ರಜವನ್ನು ಕೊಡಲಾಗಿದೆ. ಶ್ರೀ ಮಲ್ಲಪ್ಪನವರು ಅಕ್ಟೋಬರ್ ೩ರಿಂದ ನಿವೃತ್ತಿ ಹೊಂದುವರು.

ಈ ತಿಂಗಳಲ್ಲಿ ಮುಷ್ಕರದಿಂದ ರೈಲ್ವೆಗೆ ೨ ಕೋಟಿ ರೂ. ನಷ್ಟ

ಭಾರತದ ರೈಲ್ವೆಯ ನೌಕರರುಗಳು ಈ ತಿಂಗಳಲ್ಲಿ ನಡೆಸಿದ ಮುಷ್ಕರದ ಪರಿಣಾಮವಾಗಿ ಇಲಾಖೆಗೆ ೨ ಕೋಟಿ ರೂ. ನಷ್ಟವಾಗಿರುವುದೆಂದು ಅಂದಾಜು ಮಾಡಲಾಗಿದೆ. ಸರಮಾನದಲ್ಲಿ ಮೋಟಾ ಮತ್ತು ಆಸ್ತಿಗಳ ನಾಶದಿಂದ ಈ ನಷ್ಟವುಂಟಾಗಿದೆ.

ಬರುವ ವರ್ಷದ ಆಖೈರುವರೆಗೂ ಸ್ಥಾನಬದ್ಧತಾ ಶಾಸನದ ಅವಧಿ

ಸ್ಥಾನಬದ್ಧತಾ ಶಾಸನವನ್ನು ಬರುವ ವರ್ಷ ಆಖೈರು ವರೆಗೂ ಮುಂದುವರಿಸಲು ಲೋಕಸಭೆಯು ಅನುಮತಿಯನ್ನಿತ್ತಿತು. ಈ ಶಾಸನದ ಪ್ರಕಾರ ಪುಂಡರ ಮೇಲೆ ಮಾತ್ರ ಕ್ರಮ ಕೈಗೊಳ್ಳಲಾಗುವುದೆಂದು ಕೇಂದ್ರ ಗೃಹ ಮಂತ್ರಿ ಪಂಡಿತ ಪಂತ್‌ರವರು ತಿಳಿಸಿರುವರು.

ತಿರುಮಕೂಡಲಿನಲ್ಲಿ ಗಿರಿಜಾ ಕಲ್ಯಾಣ

ತಿರುಮಕೂಡಲಿನ ಶ್ರೀ ಅಗಸ್ತ್ಯೇಶ್ವರಸ್ವಾಮಿಯವರ ಗಿರಿಜಾ ಕಲ್ಯಾಣೋತ್ಸವವು ೪ ರ ಸೋಮವಾರ ನೆರವೇರಿತು.

ಜಾಲಹಳ್ಳಿಯಲ್ಲಿ ವರ್ಷಕ್ಕೆ ಸಹಸ್ರ ಲೇತುಗಳ ತಯಾರಿ

ಬೆಂಗಳೂರು ೩೦

ಈ ಊರಿನ ಬಳಿ ಜಾಲಹಳ್ಳಿಯಲ್ಲಿರುವ ಯಂತ್ರೋಪಕರಣಗಳ ಕಾರ್ಖಾನೆಯಲ್ಲಿ ಪ್ರಪ್ರಥಮವಾಗಿ ಐದು ಲೇತ್‌ಗಳನ್ನು ತಯಾರಿಸಲಾದ ಸಂಬಂಧದಲ್ಲಿ ನಿನ್ನೆ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು. ಕೇಂದ್ರ ಸರ್ಕಾರದ ಉತ್ಪನ್ನ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು, ಆ ಸಂದರ್ಭದಲ್ಲಿ ಭಾಷಣ ಮಾಡಿ, ನಾಲ್ಕು ಕೋಟಿ ರೂ. ವೆಚ್ಚದಿಂದ ನಿರ್ಮಿಸಲಾಗಿರುವ ಮೇಲ್ಕಂಡ ಕಾರ್ಖಾನೆಯಲ್ಲಿ ಈಗ ಕೇವಲ ನಾಲ್ಕು ನೂರು ಲೇತ್‌ಗಳು ಮಾತ್ರ ತಯಾರಾಗುತ್ತಿರುವುವೆಂದೂ, ಇನ್ನೂ ಐದು ಲಕ್ಷ ರೂ. ಹೆಚ್ಚಿನ ಬಂಡವಾಳ ಹಾಕಿ, ವರ್ಷಕ್ಕೆ ಸಹಸ್ರ ಲೇತುಗಳನ್ನು ತಯಾರಿಸಲಾಗುವುದೆಂದೂ ನುಡಿದರು.

ಅಖಿಲ ಭಾರತ ಮೂಲ ಶಿಕ್ಷಣ ಸಮ್ಮೇಳನ

ಆಚಾರ್ಯ ವಿನೋಬಾ ಭಾವೆಯವರ ಆರಂಭ ಭಾಷಣ

ಕಾಂಚೀಪುರದಲ್ಲಿ ನಿನ್ನೆ ಅಖಿಲ ಭಾರತ ಮೂಲ ಶಿಕ್ಷಣ ಸಮ್ಮೇಳನವು ಸೇರಿತ್ತು. ಆಚಾರ್ಯ ವಿನೋಬಾಭಾವೆಯವರು ಅದರ ಆರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ, ಮೂಲ ಶಿಕ್ಷಣ ಪದ್ಧತಿಯು ಕ್ರಾಂತಿಕಾರರನ್ನು ಸಿದ್ಧಗೊಳಿಸುವುದೆಂದು ಅಭಿಪ್ರಾಯಪಟ್ಟರು. ಈ ಪದ್ಧತಿಯು ದೇಶಕ್ಕೆ ಮಹಾತ್ಮಾ ಗಾಂಧಿಯವರು ಕೊಟ್ಟಿರುವ ಅತ್ಯಂತ ಮಹತ್ತರ ದಾನವೆಂದೂ ಅವರು ಹೇಳಿದರು. ಅದರ ವಿದ್ಯಾ ಪದ್ಧತಿಯು ಮಾನವರಲ್ಲಿ ಸಹಕಾರದ ಮನೋಭಾವವನ್ನುಂಟುಮಾಡುವುದೆಂದೂ, ಅದರ ಸಹಾಯದಿಂದ ಮೂಢ ನಂಬಿಕೆಯೊಡನೆ ಹೋರಾಡಲು ಸಾಧ್ಯವಾಗುವುದೆಂದೂ, ಆತ್ಮೀಯತೆ ಮತ್ತು ವಿಜ್ಞಾನದಲ್ಲಿ ವಿದ್ಯಾಭ್ಯಾಸದಿಂದ ಜ್ಞಾನವು ಪ್ರಗತಿ ಹೊಂದುವುದಿಲ್ಲವೆಂದೂ ವಿನೋಬಾಜಿಯವರು ತಿಳಿಸಿದರು.

ಅಧ್ಯಕ್ಷ ರಾಜೇಂದ್ರ ಪ್ರಸಾದರು ಭಾಷಣ ಮಾಡಿ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಗೊತ್ತುಮಾಡಿರುವ ಮೂಲ ಶಿಕ್ಷಣ ವಿಧಾನವು ಯಶಸ್ವಿಯಾಗುವಂತೆ ಎಲ್ಲಾ ಪ್ರಾಂತ ಸರ್ಕಾರಗಳೂ ಪ್ರಯತ್ನ ಮಾಡಬೇಕೆಂದು ಸೂಚಿಸಿದರು. ವಿಶ್ವವಿದ್ಯಾನಿಲಯದವರೆಗೂ ಸಹಾ ಮೂಲ ಶಿಕ್ಷಣ ಪದ್ಧತಿಯಂತೆ ವ್ಯಾಸಂಗಗಳು ನಡೆಯುವವರೆಗೆ ದೇಶದಲ್ಲಿ ಸಾಕಾದಷ್ಟು ಪ್ರಗತಿ ಆಗುವುದಿಲ್ಲವೆಂದು ಅವರು ಹೇಳಿದರು.

ಒಲಂಪಿಕ್ ಕ್ರೀಡೆ ನೋಡಲು ೧೨ ಸಾವಿರ ಮೈಲಿ ಕಾಲ್ನಡಿಗೆ

ಆಸ್ಟ್ರೇಲಿಯದ ರಾಜಧಾನಿ ಮೆಲ್ಬೋರ್ನ್ ನಗರದಲ್ಲಿ ನಡೆಯಲಿರುವ ಒಲಿಂಪಿಕ್ ಪಂದ್ಯವನ್ನು ನೋಡುವುದಕ್ಕಾಗಿ ಪಶ್ಚಿಮ ಜರ್ಮನಿಯ ೩೦ ವರ್ಷದ ಓಟಗಾರ ಛಾಂಪಿಯನ್ ಲುಡ್ವಿಗ್ ಪಕ್ಷೆ ಮುಂತಾದವರು ೧೮ ದೇಶಗಳ ಮೂಲಕ ನಡೆದುಹೋಗುವರು. ಅವರು ಒಟ್ಟು ೧೨ ಸಾವಿರ ಮೈಲಿಯನ್ನು ನಡೆಯುವರು.

ವಾಧ್ವ ಜನಾಂಗದ ಪುರೋಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆ

ಮಾಧ್ವ ಮಹಾ ಸಮ್ಮೇಳನದ ತೀರ್ಮಾನ

[illegible]

ಚಿನ್ನದ ಗಣಿ ರಾಷ್ಟ್ರೀಕರಣ ಪ್ರಶ್ನೆ ಇನ್ನೂ ಪರಿಶೀಲನೆಯಲ್ಲಿದೆ

[illegible]

ಗಮಕ ಪರೀಕ್ಷೆಗಳು

[illegible]

ಹಿಂದೀ ಪರೀಕ್ಷೆಗಳಿಗೆ ಅರ್ಜಿ ಪತ್ರ

[illegible]

ಮೈಸೂರು ಮತ್ತು ನಂಜನಗೂಡು

[illegible]

ಭಾರತ ಉಚಿತ ವಿದ್ಯಾರ್ಥಿನಿಲಯ

[illegible]

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ಗೋವಾದಲ್ಲಿ ಘರ್ಷಣೆಯಿಂದ ಪೋರ್ಚುಗೀಸ್ ಸೈನಿಕರಿಬ್ಬರ ಮರಣ

ಗೋವೆಯ ಪೌಕ್ತ್ರಿ ಎಂಬಲ್ಲಿ ಕಾವಲುಗಾರಿಕೆ ಕೆಲಸದಲ್ಲಿದ್ದ ಪೋರ್ಚುಗೀಸ್ ಸೈನಿಕರೊಡನೆ ಶಸ್ತ್ರ ಸಜ್ಜಿತ ರಾಷ್ಟ್ರೀಯ ತಂಡದವರು ಕಳೆದ ಶುಕ್ರವಾರ ಘರ್ಷಣೆ ನಡೆಸಿ ಇಬ್ಬರು ಪೋರ್ಚುಗೀಸ್ ಸೈನಿಕರನ್ನು ಕೊಂದುದಾಗಿ ವರದಿಯಾಗಿದೆ

ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸ

ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸಗಳ ಅಂಗವಾಗಿ ಈ ಸಂಜೆ ೫-೩೦ಕ್ಕೆ ಮಹಾರಾಜಾ ಕಾಲೇಜಿನ ಸೀನಿಯರ್ ಬಿ ಎ ಸಭಾಂಗಣದಲ್ಲಿ ಬೇಲೂರಿ ರಾಮಕೃಷ್ಣ ಮಿಷನ್ನಿನ ಸ್ವಾಮಿ ರಂಗನಾಥಾನಂದರವರು "ಬುದ್ಧ ಮತ್ತು ಭವಿಷ್ಯ ಜಗತ್ತು" ಎಂಬ ವಿಷಯವಾಗಿ ಭಾಷಣ ಮಾಡುವರು ಡಾ|| ಎಂ ವಿ ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು

ಕ್ರೀಡಾ ಸ್ಪರ್ಧೆಗಳ ಪ್ರಾರಂಭೋತ್ಸವ

ನಂಜನಗೂಡು ಪ್ರೌಢಶಾಲಾ ಕ್ರೀಡಾ ಸ್ಪರ್ಧೆಗಳ ಆರಂಭೋತ್ಸವವನ್ನು ಕಳೆದ [illegible] ತಾರೀಖು, ಪುರಸಭಾಧ್ಯಕ್ಷರಾದ ಶ್ರೀ ಕೆ ವೆಂಕಟಸುಬ್ಬರಾಯರು ನೆರವೇರಿಸಿದರು ಮುಖ್ಯೋಪಾಧ್ಯಾಯರಾದ ಶ್ರೀ ಲಕ್ಷ್ಮೀನಾರಾಯಣರವರು ಶಾಲೆಯನ್ನು ವಿವಿಧೋದ್ದೇಶ ಶಾಲೆಯನ್ನಾಗಿ ಮಾಡಲು ಪ್ರಯತ್ನ [illegible] ವರು ಕಾರ್ಯದರ್ಶಿ ಶ್ರೀ ನಾರಾಯಣರಾಯರು ಶಾಲೆಯ ಕ್ರೀಡಾ ವ್ಯವಸ್ಥೆಗಳನ್ನು ವಿವರಿಸಿದರು ಶ್ರೀಗಳಾದ ವಿಜಯೇಂದ್ರಾಚಾರ್ ಮತ್ತು ರಾಮಕೃಷ್ಣರು ಕ್ರೀಡೆಗಳಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ತಿಳಿಸಿದರು

ಉಪನಯನ ಮತ್ತು ಚೂಡಾಕರ್ಮ

ಜಗದ ಶ್ರೀ ಎಂ ಎಸ್ ರಾಮರಾಯರ ಕುಮಾರ ಶ್ರೀ ನರಸಿಂಹಮೂರ್ತಿಯವರು ತಮ್ಮ ಕಿರಿಯ ಪುತ್ರ ಚಿ|| ವೆಂಕಟೇಶನಿಗೆ ನೆನ್ನೆ ಚೂಡಾಕರ್ಮವನ್ನೂ, ಹಿರಿಯ ಮಗ ಚಿ|| ರಾಘವೇಂದ್ರನಿಗೆ ಈ ದಿನ ಉಪನಯನವನ್ನೂ ಮೂಗೂರಿನಲ್ಲಿ ನೆರವೇರಿಸಿದರು

ತಪ್ಪಿಸಿಕೊಂಡಿದ್ದಾರೆ

ತಾರೀಖು 29-5-56ರ ಬೆಳಿಗ್ಗೆ 9 ಘಂಟೆಗೆ ಮನೆ ಬಿಟ್ಟುಹೋದ ನಾಗು, ಸರೋಜ ಎಂಬ ಇಬ್ಬರು ಹುಡುಗಿಯರು ಇದುವರೆಗೂ ಪತ್ತೆಯಿಲ್ಲ ಸರೋಜಳು ಚೌಕಳ ಕೆಂಪು ಬಣ್ಣದ ಥಾವಣಿ ಧರಿಸಿದ್ದಾಳೆ ಹುಡುಗಿಯರ ವಯಸ್ಸು 13 ಮತ್ತು 10 ಈ ಹುಡುಗಿಯರನ್ನು ಕೆಳಗೆ ಕಂಡ ಅಡ್ರಸ್ಸಿಗೆ ಕರೆದುಕೊಂಡು ಬಂದು ಬಿಟ್ಟವರಿಗೆ ಸೂಕ್ತ ಬಹುಮಾನವನ್ನು ಕೊಡಲಾಗುತ್ತದೆ

ಕೆ ಚಂದ್ರಶೇಖರ ರಾವ್,
D 299 ರಾಮಾನುಜಾ ರೋಡ್,
ಮೈಸೂರು

Edited, Printed and Published by A R Nagarajan at Sadhvi Press D Subbiah Road Mysore

ವಿವಾಹ ಮಹೋತ್ಸವಗಳು

ಎಕ್ಸಿಕ್ಯೂಟಿವ್ ಇಂಜನಿಯರಾದ ಶ್ರೀ ಎ [illegible] ವಿಜಯಾಧ್ಯಕ್ಷರಾಯರು ತಮ್ಮ ಪುತ್ರಿ ಕುಮಾರಿ [illegible] ಸ್ಥಾನದ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಎಂ ವಿ ನಾಗರಾಜರಾಯರಿಗೆ ಶ್ರೀ ಎಂ. ಶ್ರೀನಿವಾಸರಾಯರ ಪುತ್ರಿ ಸೌ|| ಎಂ ಎಸ್. ಇಂದಿರ[illegible]ನ್ನು ಕೊಡುತ್ತಿದ್ದು ನೆನ್ನೆ ಮದ್ರಾಸಿನಲ್ಲಿ ವಿವಾಹವನ್ನು ನೆರವೇರಿಸಿದರು.

ಶಿಕ್ಷಕರು ಕ್ವಾರ್ಟರ್ಸ್ ಮೇಲೂರಿನ ಶ್ರೀ [illegible] ಎಂ ತೊಂಬುಂತಪ್ಪನವರು ತಮ್ಮ ಕುಮಾರಿ [illegible] ನಾಕ್ಷಮ್ಮನನ್ನು ಅದೇ ಊರಿನ ಶ್ರೀ ಕೆ [illegible] ಅನ್ನರಾಯಪ್ಪನವರ ಪುತ್ರ ಶ್ರೀ ಎಂ ಕೆ ವೆಂಕಟರಾಮೇಗೌಡರಿಗೆ ಕೊಟ್ಟು ನೆನ್ನೆ ಮೇಲೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಮೈಸೂರು ಪೇಟೆ ಧಾರಣೆ

[illegible]

ಕಡಲೆಕಾಯಿ
ಎಳ್ಳು
[illegible]

ಬೀಗದ ಕೈ ಸಿಕ್ಕಿದೆ

ದೇವರಾಜ ಮಾರ್ಕೆಟ್ ಬಳಿ ಇಲವಾಲ ರಸ್ತೆಯಲ್ಲಿ ಮೊನ್ನೆ ಸಂಜೆ ಬೀಗದಕೈ ಗೊಂಚಲೊಂದು ಸಿಕ್ಕಿರುತ್ತೆ ಮಾಲೀಕರು ಗುರುತು ಕೊಟ್ಟು ಸಾಧ್ವಿ ಪತ್ರಿಕಾ ಕಛೇರಿಯಲ್ಲಿ ಪಡೆಯಬಹುದು

ಮೋಟಾರು ಸೈಕಲ್ ಬಿಕರಿಗಿದೆ

ಕಾಲೇಜು ವಿದ್ಯಾರ್ಥಿಗಳಿಗೂ, ಡಾಕ್ಟರುಗಳಿಗೂ, ಮತ್ತು ಇತರರಿಗೂ ಅನುಕೂಲವಾಗಿದೆ. ವಿಚಾರಿಸಿ —

ಆರ್. ಬಸವಣ್ಣ,
ಚಾಮರಾಜನಗರ

ಬೈಸಿಕಲ್ ಕಳೆದುಹೋಗಿದೆ

[illegible]

ಪಾಟ್ಟೂರ್ ಮುರುಗೇಶ್,
ದಂತ ಮತ್ತು ನೇತ್ರ ವೈದ್ಯರು,
ಹಳೇ ಸ್ಟೇಷನ್ ಬ್ಯಾಂಕ್ ಬಳಿ,
ಮೈಸೂರು

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ ಗಡಿಯಾರಗಳು ಮತ್ತು ಕನ್ನಡಕಗಳು ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಕೋ
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು [Estd 1911]

Estd 1917
CHAMPION METROPOLITAN COLLEGE OF COMMERCE
(C... ... Hem... 101 Road Mysore)
APPLICATIONS FOR ADMISSION to classes leading to DIPLOMA ... Shorthand and Typewriting are now being ...
Training for COSTS & WORKS ACCOUNTANTS is also given
(Sd) M S PUTTANNA Vice-Principal (Sd) P SUBBARAYA SASTRY, Principal